ವಾರ್ಷಿಕ ಚಂದಾ: ೩ ರೂಪಾಯಿ.
Registered No. M. 498
ವಿದ್ಯಾರ್ಥಿಗಳು ಶಾಲೆಗಳು ಸೇರಿ ರೂ. 2-13-0.
ಬಿಡಿ ಸಂಚಿಕೆ 1 ಆಣೆ.

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:—
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay, Calcutta

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ, ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ, ತಿರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೯. ಮಂಗಳೂರು ತಾ. ೨೯ನೇ ಶುಕ್ರವಾರ ನವಂಬರ ೧೯೩೫. (29—11—'35) ಸಂಚಿಕೆ ೪೭

ಪಡವಲ ರೇವು

ಸುಂದರವಾದ ಮುಖವು ಜೀವನದ ಒಂದು ವರವಾಗಿದೆ.

ಸ್ತ್ರೀಯರು ತಮ್ಮ ಮುಖದ ಸೌಂದರ್ಯಕ್ಕಾಗಿ ಅತೀ ಪುರಾತನ ಕಾಲದಿಂದ ತರತರದ ಸಾಬೂನುಗಳನ್ನೂ, ಪೌಡರುಗಳನ್ನೂ ಉಪಯೋಗಿಸುತ್ತಿದ್ದರು. ಆದರೆ ಇಷ್ಟರ ತನಕ ಸೌಂದರ್ಯಗೋಸ್ಕರ ಕ್ರೀಮನ್ನು ಯಾರೂ ಕಂಡುಹಿಡಿದಿದ್ದಿಲ್ಲ.

BY APPOINTMENT TO
H.H. THE MAHARAJA OF JHALAWAR STATE

ಲಾಸ್ ಬರ್ನಾರ್ಡನೆಂಬ ಅನುಭವಸಿದ್ಧವಾದ ರಸಾಯನಶಾಸ್ತ್ರಜ್ಞನಾದ ನಾನು ಈ ಮೂಲಕ ವ್ಯಕ್ತಪಡಿಸುವುದೇನೆಂದರೆ, ಅಫ್ಘಾನ ಸ್ನೊ ಎಂಬ ಕ್ರೀಮನ್ನು ಪರಿಗಡಿಸಿ ಅದರಲ್ಲಿ ಯಾವುದೇ ತರದ ವಿಷಕರ ಪದಾರ್ಥವಾಗಲಿ, ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿದ್ದಿಲ್ಲ. ಈ ಕ್ರೀಮನ್ನು ಸರ್ವರೂ ತಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಪಾಟನ್ ವಾಲಾ— ಎಂಬವರು ಗುಲಾಬಿಯ ಸತ್ವವನ್ನೂ ಮತ್ತು ಇನ್ನೂ ಕೆಲವು ವನಸ್ಪತಿಗಳನ್ನೂ ಒಟ್ಟುಗೂಡಿಸಿ ಒಂದು ಮಿಶ್ರಣವನ್ನು ವಿಜ್ಞಾನಿಕ ರೀತಿ ತಯಾರಿಸಿದ್ದಾರೆ. ಈ ಕ್ರೀಮು ನಿಮ್ಮ ಚರ್ಮವನ್ನು ಮೃದುವಾಗಿರುವಂತೆಯೂ, ನುಣುಪಾಗುವಂತೆಯೂ ಮಾಡುವುದು. ಈ ಅಫ್ಘಾನ ಸ್ನೊವು ಬೆಣ್ಣೆಯಂತೆ ಇದ್ದು, ಚರ್ಮಕ್ಕೆ ತೃಪ್ತಿಯನ್ನು ಕೊಡುವ ದಿವ್ಯ ಔಷಧಿಯಾಗಿದೆ. ಅದು ಚರ್ಮದ ಒಡಕುಗಳನ್ನೂ ಕಪ್ಪು ಚುಕ್ಕೆಗಳನ್ನೂ ಉರಿಯುವಿಕೆ, ಮುಡಿಮೆ ಮೊದಲಾದ ಚರ್ಮವ್ಯಾಧಿಗಳನ್ನು ನಾಶಮಾಡುವುದು. ಮುಖಕ್ಕೆ ಗುಲಾಬಿವರ್ಣದ ಕಾಂತಿಯನ್ನು ಒದಗಿಸುವುದು.

AFGHAN
Snow

ಇ. ಎಸ್. ಪಾಟನವಾಲಾ,
182-84, ಎ. ಅಬ್ದುಲ್ ರಹಿಮಾನ್ ಸ್ಟ್ರೀಟ್, ಬೊಂಬೈ, 3.

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,
PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,
ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು. ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretary.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd.
Head Office:-43, Byragimatam Street,
Post Box No. 203, Madras.

ವಿಲಾಯತಿಯಲ್ಲಿ ತಯಾರಾದವುಗಳು



ಇದರಿಂದ ಒಬ್ಬರ ಸಹಾಯವಿಲ್ಲದೆ ಫೊಟೋ ತೆಗೆಯಬಹುದು. ಬೇಕಾದವರಿಗೆ ಫೋಟೊ ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೊಟೊಗಳನ್ನು ತೆಗೆಯಬಹುದು. ಕ್ಯಾಮರದ ಜೊತೆಯಲ್ಲಿಯೇ ಫೋಟೊ ತೆಗೆಯುವ ವಿಧಾನವನ್ನು ಕಳುಹಿಸುವೆವು. ಇದನ್ನು ಕರಿಸಿಕೊಳ್ಳುವವರಿಗೆ ಮೂರು ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು.

ಬೆಲೆ ಒಕ್ಕೆ ರೂ. ೪-೮-೦.

K. N. Fernandes & Co.,
16ಬ. China Bazaar, MADRAS.

ಸಂದರ್ಶಿಸುವರಂತೆ. ಇದು ರೈತರಿಗೆ ಫಾರೆಸ್ಟಿನ ರಿಯಾಯಿತಿ ಕೊಡಲು.

\+ + + +

ಕಳೆದ ಬಾರಿ ಜಿ ಕಲೆಕ್ಟರರು ವಂಡ್ಸೆ ಇತ್ಯಾದಿ ಸ್ಥಳಗಳನ್ನು ಸಂದರ್ಶಿಸಿದಾಗ ಯಾವ ರೈತರೂ ಮುಂದೆ ಬರಲಿಲ್ಲ. ರೈತರಿಗೆ ಕಾಡುಗಳ ರಿಯಾಯಿತಿಯು ಅಗತ್ಯವಿಲ್ಲವೆಂದು ಸಾಹೇಬರ ಶಿಫಾರಸು ಹೋಗಿತ್ತು. ಇದು ಸಾಕಾಗದೆ, ಹೋಂ ಮೆಂಬರರೇ ಬಂದುಬಿಟ್ಟರು. ರೈತರ ಪುಣ್ಯ! ಒಳಗೆ ಇದ್ದ ರೈತರೆಲ್ಲರೂ ಒಮ್ಮೆ ಹೊರಬರಲಿ. ತಮ್ಮ ಕಷ್ಟಗಳನ್ನು ಚೆನ್ನಾಗಿ ವಿವರಿಸಲಿ. ಮತ್ತೆ ಸಂದರ್ಭ ಒದಗಲಿಕ್ಕಿಲ್ಲ. ಇದೇ ಫ್ಯಾನಲ್.

ಇಷ್ಟರ ವರೆಗೆ ಯಾರೂ ಹೇಳಿ ಕೇಳದ ಸಂಗತಿಯಿದು.



ನಮ್ಮ ಅಟ್ಟೋ ಗುಲಾಬು ತನ್ನ ಶಿಥಿಲವೂ ಪರಿಮಳಯುಕ್ತವೂ ಆದ ವಾಸನೆಯಿಂದ ಹೃದಯವನ್ನು ಆನಂದಗೊಳಿಸುವುದು. ಇದನ್ನು ಜನರೆಲ್ಲರ ಅರಿವಿಗೆ ತರಲಿಕ್ಕಾಗಿ ರೂ. ೧-೦೫-೦ ಕ್ರಯಬಾಳುವ ೧೨ ಮಾಕ್ರಿಗೇರುವ ಸೀಸೆಯೊಂದನ್ನು ಕೊಂಡುಕೊಳ್ಳುವವರಿಗೆ ಒಂದು ರಿಸ್ಟ್ ವಾಚು, (ಪಟ್ಟಿ ಸಹಿತ) ಒಂದು ಇನ್‌ಫೆಂಟ್ ಪೋಕೆಟ್ ವಾಚ್ ಚೈನ್ ಸಮೇತ, ಸರಿಯಾದ ಸಮಯವನ್ನು ಕೊಡುವ ಟೈಂ ಪೀಸು ಒಂದು, 10 ವರ್ಷಗಳ ಗೆರಂಟಿ ಕೊಡಲ್ಪಡುವುದು. ಒಂದು ಇಮಿಟೇಶನ್ ಮುತ್ತುಗಳ ಕಂಠಾಭರಣ, ಇಷ್ಟೆಲ್ಲವನ್ನೂ ಬಹುಮಾನವಾಗಿ ಕೊಡುವೆವು. ಪೆಕಿಂಗ್ ಮತ್ತು ಟಪ್ಪಾಲು ಹಾಸಲು ಪ್ರತ್ಯೇಕ. ಮ್ಯಾಲಿನ ಕೃಪೆಯು ಬೇಡವೆಂದು ಕಂಡುಬಂದರೆ ಹಣ ಪರತ್.

International Trading Co., Post Box No. 6714. (4W. SW.) CALCUTTA.

ಸ್ತ್ರೀಪುರುಷರ ಪ್ರಿಯ ರಹಸ್ಯ. (ಶರೀರ ಮರ್ಮಶಾಸ್ತ್ರ)

ಮಹನೀಯರುಗಳೇ, ಇದು ವರೆಗೆ ಸೀಲಂಕದ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ:—ಅನೇಕ ಜಾತಿಯ ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಸುಖನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಚಿಹ್ನೆ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತ ರಹಸ್ಯಗಳನ್ನೆಲ್ಲಾ ೩೦ ಚಿತ್ರಪಟಗಳೊಡನೆ ೧೭೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿದ್ದಿಲ್ಲ. ಬೆಲೆ ರೂ. ೧, ಟಿ. ಪಿ. ಬೇರೆ.

ವಿಳಾಸ:—ಕರ್ನಾಟಕ ಏಜನ್ಸಿ, ಕೃಷ್ಣಪ್ಪ ನಾಯಕನ ಟೇಂಕ್ ಬೀದಿ, ಮದರಾಸು.
ಬೇಗನೇ ಪುಸ್ತಕವನ್ನು ತರಿಸುವವರಿಗೆ ೧೧೭ನೇ ಇನಾಮು ಕ್ಯಾಲೆಂಡರು ಇನಾಮು.

ನೋಟಿಗಳು.
NOTE...S.

ಸೆಂಟ್ರಲ್ ಡಿಲಿಮಿಟೇಶನ್ ಕಮಿಟಿಯು ಈಗ ಹತ್ತಿರ ಬಂದೇ ಬಿಟ್ಟಿತು. ಕಮಿಟಿಯು ಮದ್ರಾಸಿನಲ್ಲಿದೆ. ಕೆಲಸಮಯದ ಹಿಂದೆ ಕ್ರಿಶ್ಚನ್ ಮಹಿಳೆಯರಿಗೆ ಹೆಚ್ಚಿನ ಸೀಟುಗಳನ್ನು ರಿಜರ್ವ್ ಮಾಡಬೇಕೆಂದು ಠರಾವು ಮಾಡಿದ್ದರು. ಆದರೆ ಕಮಿಟಿಯವರು ಠರಾವಿಗೆ ಸೊನ್ನೆ ಹಾಕಿಬಿಟ್ಟರು. ಸಾಧ್ಯವಿಲ್ಲವಂತೆ!

× × × × × ×

ಕಮಿಟಿಯವರು ಇಂಡಿಯನ್ ಕ್ರಿಶ್ಚನರ ಪರವಾಗಿ ಅಪ್ಪಾದುರಪಿಳ್ಳೆಯವರ ಕೂಡೆ ಎಲೆಕ್ಟೋರೇಟನ್ನು ಗ್ರೂಪ್‌ಗಳನ್ನಾಗಿ ಮಾಡುವುದರ ಅಭಿಪ್ರಾಯವನ್ನು ಕೇಳಿದರು. ಇದಕ್ಕೆ ಸರಕಾರದ ಅಭಿಪ್ರಾಯಕ್ಕೆ ನಾನು ತಯಾರು ಎಂದೇ ಬಿಟ್ಟರು. ಆದರೆ, ಜನರಲ್ ಎಲೆಕ್ಟೊರೇಟಿನ ಸಂಗತಿಗೆ ಪಿಳ್ಳೆಯವರ ಸೂತ್ರವೇ ಬೇರೆ. ಜನರಲ್ ಎಲೆಕ್ಟೊರೇಟ್ ಮಾಡಿದರೆ, ಇಂಡಿಯನ್ ಕ್ರಿಶ್ಚನರಿಗೆ ಸೀಟು ಸಿಕ್ಕುವುದೇ ದುರ್ಲಭವಂತೆ.

\+ × × × × ×

ಆದರೆ, ಕಮಿಟಿಯ ಚೆಯರ್ಮೇನ್ ಸಾಹೇಬರು ಒಂದು ರೀಯಾಯತನ್ನು ಕೊಟ್ಟೆಬಿಟ್ಟರು. ನಿಮಗೆ ಜನರಲ್ ಆಗಿಯೂ ಅಥವಾ ಪ್ರತ್ಯೇಕವಾಗಿ ಎಲೆಕ್ಟೊರೇಟ್ ಆಗಲು ಸಮ್ಮತಿಯನ್ನು ಬರೆಯುತ್ತೇನೆಂದು ಪಿಳ್ಳೆಯವರಿಗೆ ತಿಳಿಸಿದರು. ನಾನು ನಮ್ಮ ಮುಕಸ್ಥರ ಪಲ್ಸ ನೋಡಿದ್ದೇನೆ. ರಾಜೇಶ್ರೀಯವರು ಆಗಬಹುದೆಂದರು. ಇರಲಿ ಒಂದಲ್ಲದಿದ್ದರೆ ಇನ್ನೊಂದು ಸಿಕ್ಕಿತಲ್ಲ.

\+ + + +

ನಂತರ ಪ್ರಾರಂಭವಾಗಿದೆ—ಇನ್ ಕಂಟೀಕ್ಸ್, ಸೆನೇಟ್ ಸೀಟ್, ಚೆಂಬರ್ ಆಫ್ ಕೊಮರ್ಸ್ ಇವರ ಕಡೆಯವರ ಸಾಕ್ಷಿ ತೆಗೆದುಕೊಳ್ಳುತ್ತಿದ್ದಾರೆ. ಹೇಳಿದ್ದೆಲ್ಲಾ ಬರೆಕೊಳ್ಳುತ್ತಾರೆ. ಇದರ ಇತ್ಯರ್ಥ ರಿಪೋರ್ಟಿನಲ್ಲಿ.

\+ + + +

ಕಮಿಟಿಯವರು ಮದ್ರಾಸಿಗೆ ಬಂದಾಗ ಫೊಟೋ ತೆಗೆಯಲ್ಪಟ್ಟಿದೆ. ಕಮಿಟಿ ಮುಗಿಸಿ ಕೊನೆವಾಗ ಇನ್ನೊಂದು ಫೊಟೋ ತೆಗೆದರಾಯಿತು.

\+ + + +

ಕಮಿಟಿಯವರಿಗೆ ನಾರ್ದರ್ನ್ ಪಾರ್ಟಿಗಳ ಸುರಿಮಳೆ. ಇದರ ಹಿಂದೆ ಇನ್ನೊಂದು ಹೊಸತಿದೆ—ಇನ್ ಕಂಟೀಕ್ಸ್ ಎಕ್ಸ್‌ಪರ್ಟ್ ಕಮಿಟಿ. ಇವರ ಚಿತ್ರ ಮುಂದಕ್ಕೆ.

\+ + + +

ಜಿಲ್ಲಾ ಬೋರ್ಡಿನ ಚುನಾವಣೆಯು ತಾ. ೨೫ಕ್ಕೆ ನಡೆಯಿತು. ಓಟರರಿಗೆ ಒಂದು ಹಬ್ಬದ ದಿನವಾಯಿತು. ಆದರೆ, ಪೋಲೀಸರಿಗೆ ಒಂದು ಕೆಲಸವನ್ನು ಕೊಟ್ಟುಬಿಟ್ಟರು. ಮಂಗಳೂರಿನಿಂದ ಸ್ಪೆಶ್ಯಲ್ ಬಸ್ಸುಗಳಲ್ಲಿ ಹೋಗಿ ಇಲೆಕ್ಷನ್ ಆಫೀಸು ಕಾಯುವುದು.

\+ + + +

ಕಾಂಗ್ರೆಸ್ ಕಡೆಯಿಂದ ಬಹಳ ಸಾಹಸವಿತ್ತು, ಮದ್ರಾಸಿನ ಕಾಂಗ್ರೆಸ್ ಮುಖಂಡರಾದ ಶ್ರೀ: ಸತ್ಯಮೂರ್ತಿಯವರು ಮಂಗಳೂರಿಗೆ ಬಂದಿದ್ದರು. ಭಾಷಣವೇ-ಭಾಷಣ! ನಮ್ಮ ಜಿಲ್ಲೆಯನ್ನು ಸಂದರ್ಶಿಸಿ, ಇಲೆಕ್ಷನ್ ಭೂತವು ಕುಣಿದಾಡುವ ಸ್ಥಳಗಳಿಗೆ ಹೋಗಿ, ಕಾಂಗ್ರೆಸ್ ಕಡೆಯವರಿಗೇ ಓಟು ಕೊಡಬೇಕೆಂದರು. ಇಲೆಕ್ಷನ್‌ನಲ್ಲಿ ಕಾಂಗ್ರೆಸ್‌ವಾಲರೇ ಇರುವಾಗ್ಯೆ ಕಾಂಗ್ರೆಸ್ಸಿಗೆ ಓಟು ಸಿಕ್ಕದೆ ಇರುವುದೇ? ಆದರೆ ಕಮಿಶನ್ ರಾಯರು ಬಂದರೆ, ಸ್ವಲ್ಪ ಸಂಶಯ.

\+ + + +

ಒಂದು ಹೊಸ ಸಂಗ್ತಿ—ಇಲೆಕ್ಷನ್ ಆಫೀಸ್ಸರರು ಬೆಲೊಟ್ ಪೆಟ್ಟಿಗೆ ಹೊಡೆಯಲು; ಇಲೆಕ್ಷನಿಗೆ ನಿಂತ ಉಮೇದ್ವಾರರ ಭಾವಚಿತ್ರಗಳನ್ನು ಕೇಳಿದರಂತೆ. ಆದರೆ ಕೊಟ್ಟ ವರ್ತಮಾನವು ಸಿಕ್ಕಲಿಲ್ಲ.

\+ + + +

ಮಂಗಳೂರಿಗೆ ಬಂದಿದ್ದಾರೆ, ಹೋಂ ಮೆಂಬರರು. ಇವರು ಜಿಲ್ಲೆಯ ಅನೇಕ ಕಾಡುಗಳನ್ನು

ವಿಚಿತ್ರ ಪ್ರಪಂಚ

ಮನುಷ್ಯಹಾರಿ ಮತ್ಸ್ಯದ ಹೊಟ್ಟೆಯಿಂದ ಜೀವಿತನಾಗಿ ರಕ್ಷಣೆ ಹೊಂದಿದ ಮಾನವನು

ಆಸ್ಟ್ರೇಲಿಯಾದಲ್ಲಿ 'ಶಾರ್ಕ' ಎಂಬ ಮನುಷ್ಯಹಾರಿ ಮತ್ಸ್ಯವು ಓರ್ವ ತರುಣನನ್ನು ನುಂಗಿಬಿಟ್ಟಿತು. ತರುಣನ ತಂದೆಯು ಅಧ್ಯಾತ್ಮಿಕ ಶಾಸ್ತ್ರಜ್ಞನಾದುದರಿಂದ, ತನ್ನ ಮಗನು ಮೀನಿನ ಹೊಟ್ಟೆಯನ್ನು ಸೇರಿದುದನ್ನು ಅಂಜನಮೂಲಕ ತಿಳಿದುಕೊಂಡನು. ಆದರೆ, ಆತನನ್ನು ಕೂಡಲೆ ರಕ್ಷಿಸಲು ಇವನಿಂದ ಸಾಧ್ಯವಾಗಲಿಲ್ಲ. ಹೀಗೆ ಎರಡುಮೂರು ವಾರಗಳು ಸರಿದುಹೋದುವು. ಆಸ್ಟ್ರೇಲಿಯದ ಇನ್ನೊಂದು ಪಟ್ಟಣದಲ್ಲಿ ಒಂದು ಭಯಂಕರ 'ಶಾರ್ಕ' ಮತ್ಸ್ಯವನ್ನು ಹಿಡಿದು ಅದರ ಹೊಟ್ಟೆಯನ್ನು ಸೀಳಲಾಗಿ, ಈ ಶಾಸ್ತ್ರಜ್ಞನ ಮಗನು ಜೀವಸಮೇತನಾಗಿ ಹೊರಗ ಬಂದಿರುವನು

ವೈಜ್ಞಾನಿಗಳನ್ನು ದಿಗಿಲುಗೊಳಿಸುವ ಕೆಲವು ವಿಶಿಷ್ಟಗಳು.

ಕರುಳು ಕತ್ತಿನ ಅಡಿಯಲ್ಲಿರುವ ಹುಡುಗ

ನಮ್ಮ ದೇಹದ ಅಂಗಾಂಗಗಳು ನಿಯಮಿತ ಸ್ಥಳಗಳಲ್ಲಿ ಇರದಿದ್ದರೆ, ಮರಣವುಂಟಾಗುವುದೆಂದು ತಿಳಿದವರ ಮಾತು. ಆದರೆ ಕೆಲಿಫೋರ್ನಿಯಾದಲ್ಲಿ ಯಾವ ಅಂಗಗಳೂ ಅವುಗಳ ಸ್ಥಳದಲ್ಲಿರದ ವಿಶೇಷ ಹುಡುಗನೊಬ್ಬನ ಅರಿವು ವೈದ್ಯರಿಗೆ ಆಗಿರುತ್ತದೆ. ಇವನಿಗೆ ಕೆಲವು ವರ್ಷಗಳ ಹಿಂದೆ ಒಂದು ವಿಶೇಷ ರೋಗವು ಬಾಧಿಸಿತು. ರೋಗ ಪರೀಕ್ಷೆಯಲ್ಲಿ ಎಕ್ಸ್‌ರೇ ಉಪಯೋಗ ಮಾಡಬೇಕಾಯಿತು. ಈ ಎಕ್ಸ್‌ರೇ ಫೋಟೋಗ್ರಾಫಿನಲ್ಲಿ, ಹುಡುಗನ ಹೃದಯಕಮಲವು ತಪ್ಪು ಸ್ಥಾನದಲ್ಲಿರುವುದೆಂದೂ ಆತನಿಗೆ ಒಂದೆ ಶ್ವಾಸಕೋಶವಿರುವುದೆಂದೂ, ಆತನ ಕರುಳುಗಳ ಸಮೂಹವು ಕುತ್ತಿಗೆಯ ಅಡಿಯಲ್ಲಿರುವುದೆಂದೂ ತಿಳಿದು ಬಂದಿದೆ. ಇದರಲ್ಲಿ ವಿಶೇಷವೇನೆಂದರೆ, ಆತನ ಅಂಗಗಳು ಸೃಷ್ಟಿಯ ಕ್ರಮಕ್ಕೆ ವಿರುದ್ಧವಾಗಿ, ತಪ್ಪು ಸ್ಥಳಗಳಲ್ಲಿದ್ದರೂ, ಹುಡುಗನು ಈಗ ಆರೋಗ್ಯವಂತನಾಗಿ ಸಂತೋಷದಿಂದ ಓಡಾಡುತ್ತಿದ್ದಾನೆ.

ಹೃದಯ ಬಡಿಯದ ಮನುಷ್ಯನು

ದೇಹಶಾಸ್ತ್ರದ ಪ್ರಕಾರ ಮನುಷ್ಯನು ಜೀವಿತನಾಗಿ ಬಾಳಬೇಕಾದರೆ ಅವನ ಹೃದಯಕಮಲವು ರಕ್ತವನ್ನು ದೇಹದ ಎಲ್ಲಾ ಭಾಗಗಳಲ್ಲಿ ಚಲಿಸುವಂತೆ ಮಾಡಲು ಒಂದ ಪಂಪಿನಂತೆ ನಡೆಯತಕ್ಕದು. ಆದರೆ, ಆಂಗ್ಲೇಯ ಡಾಕ್ಟರರೊಬ್ಬನ ಹೃದಯಚಲನವು ನಿಂತು ಇಂದಿಗೆ ೯ ವರ್ಷಗಳಾದುವು. ಆದರೂ ಆತನು ಜೀವಿತನಾಗಿರುವನು. ಇವನ ರಕ್ತಚಲನೆಯು ಬೇರೆ ಯಾವ ರೀತಿಯಲ್ಲಿ ನಡೆಯುತ್ತದೆಂದು ಶಾಸ್ತ್ರಜ್ಞರು ತಿಳಿಯದವರಾಗಿದ್ದಾರೆ. ಇದಕ್ಕೆ ಹಿಂದು ಕಾರಣ ಹುಡುಕಲು ವೈದ್ಯರಿಗೆ ಸಾಧ್ಯವಾಗಲಿಲ್ಲ.

ಜನರು ದಿನೆ ದಿನೆ ಕುಳ್ಳರಾಗುವುದು.

ಲಿಂಗಬದಲಾವಣೆಯಾಗುವುದು ಪ್ರಕೃತಿ ಸಂಬಂಧ ಕ್ರಿಯೆ ಎಂದು ಹೇಳುತ್ತಿದ್ದಾರೆ. ಆದರೆ ಉದ್ದವಾಗುವ ಬದಲಾಗಿ ದಿನೆ ದಿನೆ ಗಿಡ್ಡವಾಗುವ ಮನುಷ್ಯರನ್ನು ಕಾಣ ಬಂದಿದ್ದಾರೆ. ಜೋರ್ಜ್ ಬ್ಲೆಕೇಟನೆಂಬವನೊಬ್ಬನು, (೪೯ ವರ್ಷ ಪ್ರಾಯ) ಇವತ್ತಿಗೆ ೭ ವರ್ಷದ ಮೊದಲು, ಸರಿಯಾಗಿ ಬಾಳುತ್ತಿದ್ದವನು ಈಗ ವರ್ಷಂಪ್ರತಿ, ಮುಕ್ಕಾಲು ಇಂಚು ಗಿಡ್ಡವಾಗುತ್ತಿದ್ದಾನೆ. ಇದು ಯಾವ ರೋಗದಿಂದವೆಂದು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ೩೨ ವರ್ಷ ಈ ರೋಗವನ್ನು ಅನುಭವಿಸಿದ ಮತ್ತೊಬ್ಬನು, ಈಗ ಮುಂಚಿನಿಗಿಂತ ೨ ಫೀಟ್ ಕುಳ್ಳನಾಗಿ ಮೃತನಾದನು.

ಸೌಂದರ್ಯವತಿ ಬಾಲಿಕೆಯು ಭೀಕರ ರೂಪಕ್ಕೆ ಬದಲಾವಣೆ ಹೊಂದುತ್ತಿದ್ದಾಳೆ.

ಮೇರಿ ಕೇಟ ವೆರ್ ಎಂಬ ೧೨ ವರ್ಷದ ಬಾಲಿಕೆಯು, ಭಯಂಕರ ರೂಪದ ಪಿಶಾಚಿನಿಯ ರೂಪವನ್ನು ಹೊಂದುತ್ತಿದ್ದಾಳೆ. ಚರ್ಮದ ಬಣ್ಣವು ಬದಲಾಗಿ, ಮುದಿರೂಪವನ್ನು ತಾಳುತ್ತಿದೆ. ಇವಳು ಈಗ ಬರಿಮಿಂಗಹೇಮಿನ ಆಸ್ಪತ್ರೆಯಲ್ಲಿರುತ್ತಾಳೆ. ಇವಳ ಮೇಲೆ ಯಾವ ಚಿಕಿತ್ಸೆಯನ್ನು ಮಾಡಲು ಸಾಧ್ಯವಿಲ್ಲ. ಬೆನ್ನು ಡೊಂಕಾಗಿ ಬರುತ್ತದೆ. ಕೈಕಾಲುಗಳು ಮೃಗಗಳ ಕೈಕಾಲುಗಳಂತೆ ಬದಲಾವಣೆ ಹೊಂದುತ್ತಿವೆ. ವೈದ್ಯರು ಹುಡುಗಿಯನ್ನು ರಕ್ಷಿಸಲು ಅಶಕ್ತರಾಗಿರುತ್ತಾರೆ.

ಕಲ್ಲಾಗುವ ಜನರು

ಕೆಲವು ದೇಶಗಳಲ್ಲಿ ಕೆಲವರ ಕೈಕಾಲುಗಳು ಕಲ್ಲಾದ ಹಲವು ಸಂಗತಿಗಳು ತಿಳಿದುಬಂದಿವೆ. ಹಡಸನ್ ದೇಶದಲ್ಲಿ ಆರ್ಥರ್ ನೆಂಬವನ ಹೃದಯಕಮಲವು ಕಲ್ಲಾಗಿ, ಆತನು ಮೃತನಾದನು. ಆತನು ತನ್ನ ಕಲ್ಲು ಹೃದಯದಿಂದ ಕೂಡಿದವನಾಗಿ ಅನೇಕ ಸಮಯ ಬಾಳಿದ್ದುದ ಆಶ್ಚರ್ಯಕರವಾದ ಸಂಗತಿ. ಇಂಡಿಯಾನಾ ಎಂಬಲ್ಲಿ ೧೬ ವ ೩೩ ೯ ವರ್ಷ ಪ್ರಾಯದ ಇಬ್ಬರ ಅಣ್ಣತಮ್ಮಂದಿಯರ ಕೈಕಾಲುಗಳು ಕಲ್ಲಾಗುತ್ತಿವೆ.

ಜಾಪಾನಿನ ದೊಡ್ಡ ಸುರಂಗ

ಜಾಪಾನಿನ ಹೊನಶ್ಯು ಮತ್ತು ಕ್ಯೂಶೂ ಎಂಬ ದ್ವೀಪಗಳನ್ನು ಒಟ್ಟುಗೂಡಿಸಲು ರೈಲ್ವೆ ಮಾರ್ಗದಿಂದ ಕೂಡಿದ ಒಂದು ಸುರಂಗವನ್ನು ಕೋರಬೇಕೆಂದು ಸಿಫಾರಸುಗಳಾಗಿವೆ. ಇದರ ಉದ್ದ ಒಂದೂಮುಕ್ಕಾಲು ಮೈಲು, ಹೊನಶ್ಯು ದ್ವೀಪದಲ್ಲಿ ಶಿಮೊನಸೇಕಿ ಎಂಬಲ್ಲಿ, ಕ್ಯೂಶೂ ದ್ವೀಪದಲ್ಲಿ ಮೋಜಿ ಎಂಬಲ್ಲಿ ಈ ಸುರಂಗದ ಎರಡು ಬಾಯಿಗಳು. ಎರಡು ಈ ಸುರಂಗದ ವ್ಯಾಸವು ೨೬ ಅಡಿ. ಈ ಸುರಂಗ ರಚನೆಗೆ ೨೦ ಮಿಲ್ಯ ರೂಪಾಯಿ ವೆಚ್ಚ ತಗಲಬಹುದೆಂದ ಅಂದಾಜ ಮಾಡಲಾಗಿದೆ. ಇದನ್ನು ಎರಡು ದ್ವೀಪಗಳ ನಡುವೆ ಇರುವ ಸಮುದ್ರ ೧೦೦ ಅಡಿ ಆಳದಲ್ಲಿ ತೋಡುವರು. ಈ ಸುರಂಗ ಸಾಧಾರಣ ಒಂದು ಮೈಲು ಉದ್ದದ ಭಾಗವು ಸಮುದ್ರದ ಅಡಿಯಲ್ಲಿರುವುದು. ಬಾಕಿ ಉಳಿದ ಭಾಗಗಳು, ಎರಡು ದಿಕ್ಕುಗಳಲ್ಲಿ ಇಳಿಜಾರಾಗಿ ಬಂದು, ಸಮತಟ್ಟಾದ ಸುರಂಗವನ್ನು ಸೇರುವವು

ಯಾವಾಗಲೂ ಕದಲುತ್ತಿರುವುದು.

ಗಾಳಿ ಮತ್ತು ಸಮುದ್ರವು ಶಾಂತಹೊಂದುವುದು ಯಾರಾದರೂ ಇಷ್ಟರವರೆಗೆ ಹೇಳುವಿರಾ? ಅದೇ ಪ್ರಕಾರ ಭೂಮಿಯು ಕೂಡ ಸಮಾಧಾನಕರವಾಗಿಲ್ಲ ಎಂದು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಇದೇ ಭೂಮಿಯು ತನ್ನ ಪ್ರಸ್ಥಕ್ಕೆ ತಿರುಗುತ್ತಿದೆ. ಈ ಸಮಯದಲ್ಲಿ ಭೂಪ್ರದೇಶದ ಕೆಲವು ಭಾಗಗಳು ನಡುಗದೆ ಇರಲಿಕ್ಕಿಲ್ಲ. ಭೂಮಿಯು ಯಾವಾಗಲೂ ಕದಲುತ್ತಿದೆ. ಅದು ನಮ್ಮ ಗೋಚರಕ್ಕೆ ಬರುವುದಿಲ್ಲ. ಈ ಕದಲುವಿಕೆ ಪ್ರಮಾಣವು ಹೆಚ್ಚಿ, ಭೂಕಂಪಗಳು ನಡೆದರೆ ಮಾತ್ರ ಭೂಮಿಯ ಈ ಸ್ಥಿತಿಯು ನಮಗೆ ಸರಿಯಾಗಿ ತಿಳಿಯುತ್ತದೆ. ಭೂಮಿಯು ಒಂದು ವರ್ಷದಲ್ಲಿ ೪೧೦೦ ಸರ್ತಿ ಕಂಪಿಸುತ್ತದೆ. ಆದರೆ ಇವುಗಳನ್ನು ತಿಳಿಯಲು ಈಗ ರೂಢಿಯಲ್ಲಿರುವ ಯಂತ್ರಗಳಿಂದ ಸಾಧ್ಯವಾಗುವುದಿಲ್ಲ.

೭೦ ಟನ್ ತೂಕದ

೫ ಅಡಿ ೬ ಇಂಚು ದಪ್ಪ, ೧೪ ಅಡಿ ೬ ಇಂಚು ಅಗಲ, ೨೦ ಅಡಿ ೬ ಇಂಚು ಉದ್ದ ಪ್ರಮಾಣದ ಒಂದು ಕಲ್ಲನ್ನು, ಹಿಂಡನ್ ಬರ್ಗ್ ಎಂಬಲ್ಲಿ ಅವರ ಪ್ರೆಸಿಡೆಂಟರ ಸ್ಮಾರಕವನ್ನು ನಿರ್ಮಿಸಲು ಸಾವಿರಕಾಲಿಂದ ಒಂದಾಗಿ ತರಲಾಗುವುದು. ಇದನ್ನು ಹೋರಲು ೨೪ ಚಕ್ರಗಳುಳ್ಳ ವಿಚಿತ್ರ ವಾಹನವನ್ನು ರಚಿಸಿದ್ದಾರಂತೆ

ಒಂದು ವಿಚಿತ್ರ ಹುಡುಗಿ

ತನ್ನ ಪೂರ್ವಜನ್ಮವನ್ನು ಸರಿಯಾಗಿ ವಿವರಿಸಬಲ್ಲ ಹುಡುಗಿಯು ನವದಿಲ್ಲಿಯಲ್ಲಿ ಜನರ ಆಶ್ಚರ್ಯ ಉಂಟುಮಾಡಿರುವಳು. ಇವಳ ಪ್ರಾಯ ೮ ವರ್ಷ. ತನ್ನ ಮುಂಚಿನ ಜನ್ಮದ ಜೀವಮಾನವನ್ನು ಸರಿಯಾಗಿ ಜ್ಞಾಪಕಕ್ಕೆ ತರಬಲ್ಲಳು. ಹುಡುಗಿಯ ಹೆಸರು ಶಾಂತ. ಇವಳು ಓರ್ವ ಶ್ರೀಮಂತನ ಮಗಳು. ತನ್ನ ಮುಂಚಿನ ಜನ್ಮದಲ್ಲಿ ಮಥುರಾದಲ್ಲಿರುವ ಒಬ್ಬನ ಪತ್ನಿಯಾಗಿದ್ದಳೆಂದೂ, ಮತ್ತು ಆತನ ವಿಳಾಸವನ್ನು ತಿಳಿಸಿದಳು. ಹುಡುಗಿಯ ತಂದೆ ಮಥುರಾ ನಗರದಲ್ಲಿ ವಿಚಾರಿಸಲು, ಅವಳು ಕೊಟ್ಟ ವಿಳಾಸದ ಪ್ರಕಾರ ಗಂಡನ ಪತ್ತೆಯಾಯಿತು. ಆತನು ತನ್ನ ತಮ್ಮನನ್ನು ದಿಲ್ಲಿಗೆ ಕಳುಹಿಸಲು, ಶಾಂತಳು ಅವನನ್ನು ಗುರುತಿಸಿದಳು. ಮಥುರಾದಿಂದ ಗಂಡನನ್ನು ಕರೆಕರಲು, ಈಕೆಯು ತನ್ನ ಪೂರ್ವಜನ್ಮದ ಪತಿಯನ್ನು ಗುರುತಿಸಿದಲ್ಲದೆ, ಅವರಲ್ಲಿದ್ದ ಕೆಲವು ಗುಪ್ತ ಸಂಗತಿಗಳನ್ನು ಸರಿಯಾಗಿ ಹೇಳಿದಳು. ತನ್ನ ಮರಣಕಾಲದಲ್ಲಿ ಜನಿಸಿದ ಮಗುವನ್ನು ಸುರಕ್ಷಿತವಾಗಿಡಲು, ದೇವರಿಗೆ ಅರ್ಪಿಸಿದ ೧೦೦ ರೂಪಾಯಿಯನ್ನು ಒಂದೆಡೆಯಲ್ಲಿ ಹೂಣಿಟ್ಟಿದ್ದಾಳೆ ಎಂದು ತಿಳಿಸಿದಳು. ಆ ಮಗುವಿಗೆ ಈಗ ೧೧ ವರ್ಷ ಪ್ರಾಯವಾಗಿರುತ್ತದೆ. ದಿಲ್ಲಿಯಲ್ಲಿ ಜನಿಸುವ ಮೊದಲು, ಬೇರೊಂದು ಸ್ಥಳದಲ್ಲಿ ಜನಿಸಿ, ೨ ವರ್ಷ ಬಾಳಿ ಮಡಿದಳೆಂದು ತಿಳಿಸಿದಳು. ಇವಳ ಮಾತಿನ ಮೇರೆಗೆ, ಮಥುರೆ ಕೀಕೆಯ ಗಂಡನಿಗೆ ಇವಳು ನಮೂದಿಸಿದ ಸ್ಥಳದಲ್ಲಿ ಆ ನೂರು ರೂಪಾಯಿಗಳು ಸಿಕ್ಕಿವೆ.

ಬಾಲಕ ಸರ್ಪ ಮಾಂತ್ರಿಕನು.

ಬಂಗಾಳದ ಮುರ್ನಾ ಎಂಬಲ್ಲಿ ಹತ್ತು ವರ್ಷ ಪ್ರಾಯದ ಸರ್ಪ ಮಾಂತ್ರಿಕನಿದ್ದಾನೆ. ಇವನು ಮುಸ್ಲಿಮನಾಗಿ ಜನಿಸಿದ್ದರೂ ಯಾವದೋ ಕಾರಣದಿಂದ ಸರ್ಪದ ದೇವತೆಗೆ ಅರ್ಪಿಸಲ್ಪಟ್ಟಿದ್ದನು. ಸರ್ಪಗಳನ್ನು ಬೊಂಬೆಗಳೋಪಾದಿಯಲ್ಲಿ ಆಡಿಸಬಲ್ಲನು. ಇವನು ಯಾವತಕ್ಕ ಮಂತ್ರಗಳನ್ನು ಉಪಯೋಗಿಸುವುದಿಲ್ಲವಂತೆ. ಆದರೆ ಸರ್ಪವು ಕಚ್ಚಿದ ಭಾಗಗಳಿಗೆ ತನ್ನ ಎಂಜಲನ್ನು ತಾಗಿಸಿ, ಉಪಶಮನ ಮಾಡುವನು. ಇವನ ಮೈತುಂಬಾ ಸರ್ಪ ಕಚ್ಚಿದ ಕಲೆಗಳಿವೆ. ಸರ್ಪಗಳೊಡನೆ ಈತನು ತಮಾಷೆಯ ಆಟಗಳನ್ನು ಆಡುತ್ತಿದ್ದಾನೆ. ಒಂದಾನೊಂದು ದಿವಸ ಒಂದು ಭಯಂಕರ ಕೃಷ್ಣಸರ್ಪವು ಇವನನ್ನು ಕಚ್ಚಿಯಲ್ಲು, ಇವನು ಮೂರ್ಛೆಹೊಂದಿ ಸಾಯುತ್ತಿದ್ದನು. ಆದರೆ ಇವನ ಕುಟುಂಬಿಕರು ಬಳಿಯಲ್ಲಿದ್ದುದರಿಂದ ಈತನ ಹೊಡಬನ್ನ ತೆಗೆದು ಆ ಗಾಯಕ್ಕೆ ತಾಗಿಸಿ, ಆತನನ್ನು ಬದುಕಿಸಿದರು.

ಬಾಹ್ಯಪ್ರಪಂಚ.

ಜಾಪಾನಿನ ಪ್ರೌಢ ವಿದ್ಯಾಭ್ಯಾಸ

ಜಾಪಾನಿನ ವಿಶ್ವವಿದ್ಯಾಲಯದ ಪದವೀಧರರಲ್ಲಿ ನಿರುದ್ಯೋಗಿಗಳು ಅತಿ ಕಡಿಮೆ. ವಿಶ್ವವಿದ್ಯಾಲಯಗಳ ಯೋಗ್ಯ ರೀತಿಯ ವಿದ್ಯಾಕ್ರಮದ ಫಲಿತಾಂಶವಿದು. ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕಿಸುವ ಸಂಸ್ಥೆಗಳು ವಿಶ್ವವಿದ್ಯಾಲಯದ ಅಡಿಯಲ್ಲಿ ಕಾರ್ಯಗೈಯುತ್ತಿವೆ, ಈ ಎಲ್ಲಾ ಸಂಸ್ಥೆಗಳಿಗೆ ಒಂದು ಮೂಲಸ್ಥಾನವಿದೆ. ಇದರ ವರದಿಯ ಪ್ರಕಾರ ೧೯೩೪ರಲ್ಲಿ ಶೇಕಡಾ ೬೭.೬ ಮಂದಿಯವರಿಗೆ ಉದ್ಯೋಗ ದೊರಕಿರುತ್ತದೆ. ೧೯೩೧ರಲ್ಲಿ ಇದು, ೪೪.೯ಕ್ಕೆ ಇಳಿಯಿತು. ೧೯೩೪-೩೫ಕ್ಕೆ ಇಳಿದು ಈಗ ಕ್ರಮಶಃ ವೃದ್ಧಿಹೊಂದುತ್ತಿದೆ. ಈ ಅಂಕೆಗಳನ್ನು ನೋಡಿದರೆ, ಜಪಾನಿನ ಹೆಚ್ಚಿನ ವಿದ್ಯಾರ್ಥಿಗಳು ನಿರುದ್ಯೋಗಿಗಳಾಗಿ ಬಾಳುತ್ತಿದ್ದಾರೆ ಎಂದು ಭಾಸವಾಗಬಹುದು. ಆದರೆ ಈ ವಿಚಾರದ ನಿಜಸ್ಥಿತಿಯು ಹಾಗಲ್ಲ. ಕೆಲವು ಪದವೀಧರರು ವ್ಯಾಪಾರರಂಗವನ್ನು ಸೇರಿರುವರು. ಕೆಲವರು ಪ್ರೌಢ ವಿದ್ಯಾಭ್ಯಾಸವನ್ನು ಹೊಂದುತ್ತಿದ್ದಾರೆ. ನಿರುದ್ಯೋಗಿಗಳ ಸಂಖ್ಯೆಯು ಅತಿ ಕಡಿಮೆಯಾಗಿರುತ್ತದೆ. ಇವರ ವಿದ್ಯಾಭ್ಯಾಸವು ಈ ರೀತಿ ಪರಿಣಮಿಸಲು ಕಾರಣವೇನು, ವಿದ್ಯಾರ್ಥಿಗಳು ದೇಶದ ಮುಂದಿನ ಅಭಿವೃದ್ಧಿಗೆ ಹಿತಕರವಾಗುವಂತೆ, ವಿಜ್ಞಾನ, ಸಾಗುವಳಿ ಮತ್ತು ಚಿಕಿತ್ಸಕ್ರಿಯೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿಜ್ಞಾನ ಪದವೀಧರರಲ್ಲಿ ಶೇಕಡಾ ೭೫ ಮಂದಿಗೆ ಉದ್ಯೋಗವು ದೊರಕಿರುತ್ತದೆ. ಶೇಕಡಾ ೫೦ ಮಂದಿಗೆ ವೈದ್ಯಕ ಪದವೀಧರರಲ್ಲಿ ಉದ್ಯೋಗವು ದೊರಕಿರುತ್ತದೆ. ವಿದ್ಯಾರ್ಥಿಗಳು ತಮ್ಮ ದೇಶದ ನಿಯಮಿತ ಉದ್ಯೋಗಗಳನ್ನೆ ತರಪೇತು ಹೊಂದುತ್ತಿದ್ದಾರೆ. ವರ್ತಕರು ಪದವೀಧರ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಗಳಲ್ಲಿ ಉಪಯೋಗಿಸುತ್ತಿದ್ದಾರೆ. ವ್ಯಾಪಾರಲೋಕವು ವಿಶ್ವವಿದ್ಯಾಲಯದ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಡುತ್ತದೆ. ಒಂದಾನೊಂದು ಕಾಲದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ಯೋಗಿಸುವ ಸಂಸ್ಥೆಗಳು ೪೬ ಇದ್ದುವು. ಈಗ ೩೬೦ಕ್ಕೆ ಏರಿರುತ್ತದೆ. ಹಿಂದೂದೇಶದ ವಿದ್ಯಾಭ್ಯಾಸವು ಈ ರೀತಿ ನಡೆದು, ನಮ್ಮ ಪದವೀಧರರು ನಮ್ಮ ವರ್ತಕರ ಪಾಗಿಲನ್ನು ಏಕೆ ಸೇರಬಾರದು?

ಜಾಪಾನು–ಚೀನಾ ಸಂಬಂಧ.

ಜಾಪಾನು ಮಂಚೂರಿಯಾವನ್ನು ಪಡೆದಂದಿನಿಂದ ಇಡೀ ಚೀನಾವನ್ನು ತನ್ನ ಸ್ವಾರ್ಥತ್ಯಾಗಿ ನುಂಗಬೇಕಾಗಿ ಸಾಧಿಸುತ್ತದೆ. ಇವರು ಚೀನಾದಲ್ಲಿ ಇಷ್ಟರ ತನಕ ವಶಮಾಡಿಕೊಂಡಿದ್ದ ಪ್ರಾಂತ್ಯಗಳಿಂದ ಅನ್ಯರನ್ನು ವ್ಯಾಪಾರ ಪ್ರಪಂಚದಿಂದ ಹೊರಗಟ್ಟಿ, ಆ ವಾತಾವರಣದಲ್ಲಿ ತಾವೆ ವೈಭವಗೊಳ್ಳುತ್ತಿದ್ದಾರೆ. ಇದು ಪಾಶ್ಚಾತ್ಯರಲ್ಲಿ ಹೊಟ್ಟೆ ಉರಿಉಂಟುಮಾಡಿರುತ್ತದೆ. ಈಗ ತನ್ನ ಮಹತ್ವದ ಸೇನಾಶಕ್ತಿಯಿಂದ ಭ್ರಮೆಗೊಂಡಿದ್ದ ಜಾಪಾನು, ಇಡೀ ಉತ್ತರ ಚೀನಾವನ್ನು ಬದಿಗೆ ಹಾಕಲು ನಿರ್ಧರಿಸಿದೆ. ಉತ್ತರ ಚೀನಾದ ಪ್ರಾಂತ್ಯಗಳಿಗೆ ಜಾಪಾನಿನ ಅಡಿಯಲ್ಲಿ ಸ್ವಯಂಪ್ರಭುತ್ವದ ಜನಾಂಗಗಳಿಗೆ ಬಾಳಬೇಕು, ಇಲ್ಲವಾದರೆ ಯುದ್ಧ ಮಾಡಬೇಕು ಎಂಬ ಕಡೆ ತೀರ್ಮಾನಕೊಟ್ಟಿರುತ್ತದೆ. ಉತ್ತರ ಚೀನಾದ ಈ ಪ್ರಾಂತ್ಯಗಳು, ತಾವು ಸ್ವಯಂಪ್ರಭುತ್ವದ ಜನಾಂಗಗಳಾಗದೆ ಸ್ವತಂತ್ರರಾಗಿ ಜೀವಿಸುವ ಇಚ್ಛೆಯನ್ನು ಜಾಪಾನಿನ ಅಧಿಕಾರಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಇದರ ಪರಿಣಾಮವು ಜಾಪಾನು ಈ ನೆವದಿಂದ ಚೀನಾದ ಮೇಲೆ ಮತ್ತೊಮ್ಮೆ ಭಾರಿ ಬೀಳುವುದು. ಸಂಗ್ರಾಮಾಧಿಕಾರಿಗಳು ಎಲ್ಲಾ ಸಿದ್ಧತೆಗಳನ್ನು ಮಾಡಿರುತ್ತಾರೆ ಎಂದು ಕೇಳಿಬರುತ್ತದೆ. ತಮ್ಮ ಉದ್ದೇಶವನ್ನು ಸಾಧಿಸಲು ಇವರು, ಈ ಪ್ರಾಂತ್ಯ ಸರಕಾರದ ದೋರಣದಲ್ಲಿ ಹಲವು ಗುಪ್ತವಾದ ರೀತಿಯಲ್ಲಿ ಕೈಹಾಕುತ್ತಿದ್ದಾರೆ. ಆದರೆ ಈ ಭಾರಿ ಜಾಪಾನು ತನ್ನ ಉದ್ದೇಶವನ್ನು ಪಲಿಸಬಲ್ಲುದೊ? ಪಾಶ್ಚಾತ್ಯರ ದೃಷ್ಟಿಯು ಬೇರೊಂದು ಕಡೆಗೆ ಸರಿದಿರುವ ವೇಳೆಯೆ ಯುಕ್ತಸಮಯವೆಂದು ಭಾವಿಸಿ ಜಾಪಾನು ಮುಂದುವರಿದು ಬಂದಿರುತ್ತದೆ. ಆದರೆ ಪಾಶ್ಚಾತ್ಯರು ಮುಖ್ಯ ಸಂಯುಕ್ತ ಅಮೇರಿಕಾದವರು ಜಾಪಾನಿನ ತಮಗಾಗುವ ಹಾನಿಯನ್ನು, ಜಾಪಾನು ವಶೀಕರಿಸಿ ಪ್ರಾಂತ್ಯಗಳಲ್ಲಿ ಅವರ ಮೇಲಿನ ವರ್ತನೆಯನ್ನು ಎಂದಿಗೂ ಮರೆಯಲಾರರು. ಅಮೇರಿಕಾವು ಸಮಯವನ್ನು ಕಾಯುತ್ತಿದೆ. ಆದ್ದರಿಂದ ಈ ಭಾರಿಯು ಜಾಪಾನಿನ ಕೆಲಸವು ಅಷ್ಟು ಸುಲಭವಾದುದಲ್ಲ

(ಈಸ್ ಪಟಿಕೆ ಮುಂದುವರಿಯುವು)

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಸಿದ್ದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಿನ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಜ್ವರ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಬಿಗಿದ ಕಂಠಸ್ವರ, ದೇಹಪಾತ, ಗುಂಡಿಗೆಯ ನೋವು ಕುಂದಿದ ಕಣ್ಣು, ಇಳಿದ ಮುಖ, ಮುಖ ದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನಸ್ಖಲನ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆತಿರುಕ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುತ್ತಿರುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲಾ, ಮುಟ್ಟುಗುಣ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನೀವು ಮನಸ್ಸು ಯಾರಲ್ಲಿ ಇಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ನೊಬ್ಬರಿಗೆ ವಾಸೆರರಾಗ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ ಬೆಲೆ ರೂ ೨ ಮಾತ್ರ.

O1 P 8 Bengali Mesmerism House
5-7 Panchpota, Bengal (s.s.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ	3— 0	3— 4
ಮುಸ್ಕಿ	4— 0	4— 8
ಗುಡ್ಡ	3— 0	3—14
ಊರ ಅವ್ವಲ್ ಬೆಲ್ಲ	4—10	5— 0
ರಂಗೂನು ಬೆ. ಗೋ. ಗಳ್ಳಿ	6— 8	7— 0
ಎಲ್ಲೂರು ಬೆ. ಮ. ಗಳ್ಳಿ	4 - 4	4— 8
ಗೋದಿ ಗೋಣಿ ಗಳ್ಳಿ	10— 0	12— 8
ಹೊಗರ ಗೋಣಿ ಗಳ್ಳಿ	10 —8	11— 0
ಹುರುಳಿ ಗೋಣಿ ಗಳ್ಳಿ	5— 4	6 — 4
ಕಡಲೆ ಗೋಣಿ ಗಳ್ಳಿ	7 — 8	10— 8
ತೊಗರಿಬೇಳೆ ಗೋಣಿ ಗಳ್ಳಿ	10— 0	17— 0
ಉದ್ದು ಗೋಣಿ ಗಳ್ಳಿ	9— 8	10 — 0
ಹೆಸರು ಗೋಣಿ ಗಳ್ಳಿ	9— 4	9—12
ಅಡಕೆ ಚೊಲ್ಲ ಖಂಡಿ ಗಳ್ಳಿ	30—	35— 0
ಉಪ್ಪು ಗೋಣಿ ಗಳ್ಳಿ	4— 6	5— 0
ಕೊಬ್ರಿ ಖಂಡಿ ಗಳ್ಳಿ	65— 0	68— 0
ಕೊಬ್ರಿ ಹಿಂಡಿ ಖಂಡಿ ಗಳ್ಳಿ	27— 8	28— 0
[illegible] ಗಳ್ಳಿ	32 — 8	32— 8
ಕೊಬ್ರಿ ಎಣ್ಣೆ ಮಣ ಗಳ್ಳಿ	4—11	5— 10
ಎಳ್ಳೆಣ್ಣೆ ಮಣ ಗಳ್ಳಿ	5— 2	6— 0
ಹರಳೆಣ್ಣೆ ಪಟ್ಟಿಗೆ ಗಳ್ಳಿ	5— 8	5—12
ಮೋರಿಸ ಸಕ್ಕರೆ ಮ. ಗಳ್ಳಿ	3—7	3—10
ಮೆಣಸು	2— 8	4— 4
ಸಾಸಿವೆ ಮುಡಿ ಗಳ್ಳಿ	6 — 8	6—12
ಕಾಳುಮೆಣಸು ಖ. ಗಳ್ಳಿ	105— 0	110—
ಯೇಲಕ್ಕಿ ಬೀಜ ಮಣ ಗಳ್ಳಿ	35— 8	36— 8
ಗೇರುಬೀಜ ಮು. ಗಳ್ಳಿ	4—14	5 — 0
ಕಲ್ಪೂರ ಖಂಡಿ ಗಳ್ಳಿ	40— 0	40— 8
ಕಾಂಪ್ಯುಕ[illegible] ಮ. ಗಳ್ಳಿ	10— 0	10— 8
ಕಾಂಪ್ಯು[illegible] ಮ. ಗಳ್ಳಿ	14— 0	14— 8
ಅರಶಿನ ಸೇರು ಗಳ್ಳಿ	16— 4	16— 8
ಹಿತ್ತಾಳೆ ತಗಡು ಮ. ಗಳ್ಳಿ	9— 0	9— 8
ಹವಳು ಗಳ್ಳಿ	22— 4	22— 6
ಹುಣಸೆ ಹುಳಿ ಖಂಡಿ ಗಳ್ಳಿ	20— 0	25— 8
ನೇಟಿವ್ ಕಾಫಿ ಖಂಡಿ ಗಳ್ಳಿ	150— 0	162— 8
ಫಟೇಲ ಕಾಫಿ ಖಂಡಿ ಗಳ್ಳಿ	100— 0	195— 0
ಮಡಿಕೇರಿ ಏಲಕ್ಕಿ	26— 0	27 — 0
ಸಕಲೇಶಪುರ ಏಲಕ್ಕಿ	28— 0	33 — 0
ಹೊಸ ಅಡಕೆ	110—0	115—0

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೋ-ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಚಿಂದಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co.,
Sole representatives for above medicine.

The National Kanara News Agency,
Sir Phirozsha Metha Road,
Fort Bombay.

Shiromani Narayanacharya & Co.,
Silk Lace & Cloth Manufacturers
Choukhamba Benares City



THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಅನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಅನಂದರಾಯರು: ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — ಅದರ ಕ್ರಯವೆಷ್ಟು?"

ಅನಂದರಾಯರು—ಎಲ್ಲಾ ಕಡೆಗಳಿಗಿಂತ ಶೇಕಡಾ 35 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ಹೋದಲಾದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2¼ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ದಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ದಡಲು ಸದ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟೆದಾರಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸರಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ 8 ಮೊಳದ ಪಮುಡಿ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಟುಂ 1ಕ್ಕೆ ರೂ 6ರಿಂದ 35ರ ವರೆಗೆ, ಬೇರೆಯೆಲ್ಲಾ ತರದ ಮಾಲುಗಳ ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L C's and also for those who have not passed any University examination

Coaches students for the Specialised Banking Courses (C A I B. & C A I I B) and also for Accountancy, Secretarial, and Insurance Courses (L A A, A C R A, F C R A, F I S A, A C I I, etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to —

D R Murdeshwar,
Dip Econ; F R Econ, S (Lond.)
Principal
Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಕಾರ್ತಿಕ ಬ ೧೩ ಶನಿವಾರದಿಂದ ಮಾರ್ಗಶಿರ ಶು ೩ ಶುಕ್ರವಾರದ ವರೆಗಿನ ಪಂಚಾಂಗ (೧೮೩೫ನೇಯ ವೃಶ್ಚಿಕ ಚಾರ್ಟ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
30	ಶನಿ	೮	೧	ಉ. ಷಾಢ	೩೬	೧೪	ಶ್ರೀ ಕಾರ್ತಿಕ ಅಮಾವಾಸ್ಯೆ
1	ರವಿ*	೩	೫೨	ಶ್ರವಣಾ	೩೪	೧೫	
2	ಸೋಮ	೩	೪೬	ಧನಿಷ್ಠಾ	೩೦	೧೬	
3	ಮಂಗಳ	೪	೪೧	ಶತಭಿಷಾ	೨೬	೧೭	
4	ಬುಧ	೯	೩೫	ಪೂ. ಭಾ.	೨೨	೧೮	
5	ಗುರು	೧೦	೩೦	ಉ. ಭಾದ್ರ	೧೮	೧೯	
6	ಶುಕ್ರ	೧೧	೨೪	ರೇವತಿ	೧೪	೨೦	

ಇಟೆಲಿಯಾನರು ಆಹಾರಕ್ಕಾಗಿ ನರಳಬೇಕಾಗುವುದೆ?

ಚಕ್ರವರ್ತಿಯವರು ಸಂಪೂರ್ಣ ತೃಪ್ತಿಗೊಂಡಿದ್ದಾರೆ!

ಹಬಸಿಗಳು ಜಯಶಾಲಿಗಳಾಗುತ್ತಿದ್ದಾರೆ!

"ಇಟೆಲಿಯಾನರ ಪಲಾಯನ"

ಇಟೇಲಿಯ ಎಚ್ಚರಿಕೆಗೆ ಹಬಸಿಗಳ ಉತ್ತರ— "ನಮ್ಮ ರಾಜ್ಯವನ್ನು ಕಸಗೊಳ್ಳಲು ಇವರು ಅಲ್ಲಸಲ್ಲದ ಸುಳ್ಳು ಕಥೆಗಳನ್ನು ಪ್ರಸರಿಸಿರುತ್ತಿದ್ದಾರೆ. ನಾವೇನು ಹೀಗೆ ವರ್ತಿಸುವವರಲ್ಲ. ಇಟೇಲಿಯ ಎಚ್ಚರಿಕೆಯು ನಮಗೆ ಅವಮಾನಗೊಳಿಸುವಂತಾಗಿದೆ. ನಮ್ಮ ಹಿತವನ್ನು ಸಾಧಿಸುತ್ತೇವೆಂದೂ ಬರೆ ಮಾತಿನಲ್ಲಿ ಹೇಳಿ, ನಮ್ಮನ್ನು ಕೊಲೆಮಾಡುತ್ತಿದ್ದಾರೆ. ಅಲ್ಲದೆ ನಮ್ಮನ್ನು ವಂಚಿಸುತ್ತಿದ್ದಾರೆ. ಇವರು ನಮ್ಮ ಹಲವು ನಾಯಕರನ್ನು ಹಣದ ಆಶೆಯನ್ನು ತೋರಿಸಿ, ತಮ್ಮ ವಶಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ, ರಾಸ್ ಗುಗ್ಸಾ ಅಲ್ಲದೆ, ಎಲ್ಲರೂ ದೇಶಪ್ರೇಮಿಗಳಾಗಿ ಅವರ ಕಡೆಗೆ ಸೇರಲಿಲ್ಲವೆಂದು ತಿಳಿಸಲು ನಾವು ಗೌರವ ಪಡುತ್ತಿದ್ದೇವೆ" ಎಂದು ಹಬಸಿಯವರ ಪ್ರತ್ಯುತ್ತರ ಬಂದಿರುತ್ತದೆ.

ಹಬಸಿಗಳ ಕುಯುಕ್ತಿ

ಹಬಸಿಯವರು ಇಷ್ಟರವರೆಗೆ, ಮುಂದುವರಿಯುತ್ತಿದ್ದ ಇಟೇಲಿಯಾನರಿಗೆ ತಡೆಮಾಡದಿದ್ದುದಕ್ಕೆ ಒಂದು ಮುಖ್ಯ ಕಾರಣವಿದೆ. ಇಲಿಯನ್ನು ಗೂಡಿಗೆ ಸೆಳೆದಂತೆ, ತಮ್ಮ ಜಯದ ಭ್ರಮೆಯಿಂದ ಕೂಡಿದ ಇಟೇಲಿಯಾನರು ಮುಂದುವರಿದು, ಅರಣ್ಯಗಳಲ್ಲಿಯೂ, ಬೆಟ್ಟ ಅರಣ್ಯಪ್ರದೇಶಗಳಲ್ಲಿಯೂ ಸಿಲುಕಿ ಬಿದ್ದಿರುತ್ತಾರೆ. ಹಬಸಿಗಳೊಡನೆ ಕೈಕೈ ಯುದ್ಧಮಾಡುವ ಸಂದರ್ಭವು ಇವರಿಗೆ ಒದಗಿದೆ. ಮಾತ್ರವಲ್ಲ ಈ ದೇಶದ ಅರಿವು ಇಟೇಲಿಯಾನರಿಗೆ ಕಡಿಮೆ. ಆದ್ದರಿಂದ ಇವರು ಹಬಸಿಯವರ ಕೈಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇಷ್ಟರವರೆಗೆ ಹಬಸಿಯವರ ಸೋಲು ನಷ್ಟ, ಇತ್ಯಾದಿಗಳ ವಿಚಾರವಾಗಿ ಬರುವ ವರ್ತಮಾನಗಳಲ್ಲಿ ಸತ್ಯಾಂಶವು ಕಡಿಮೆಯೆಂದು ಕೇಳಿಬರುತ್ತದೆ. ಹಬಸಿಯವರು ಬಹಳ ಪರಾಕ್ರಮ ಮತ್ತು ಯುಕ್ತಿಯಿಂದ ಇಟೆಲಿಯವರ ಮೇಲೆ ಅಧಿಕ್ರಮಿಸುತ್ತಿದ್ದಾರೆಂದೂ, ಇಟೆಲಿಯಾನ ಬೊಂಬುಗಳು ಅಷ್ಟು ಫಲದಾಯಕವಾಗಲಿಲ್ಲವೆಂದೂ ವಾರ್ತೆ ಇದೆ.

ಹಬಸಿಯವರ ಚಕ್ರವರ್ತಿಯವರು

ಗುಪ್ತವಾದ ರೀತಿಯಲ್ಲಿ ವಿಮಾನದಲ್ಲಿ ಯುದ್ಧರಂಗಗಳನ್ನು ನೋಡಲು ಪ್ರಯಾಣ ಮಾಡಿದರು. ಆದರೆ ಕೆಲವು ಗೂಢಾಚಾರರಿಂದ ಇಟೇಲಿಯಾನರು ಇದನ್ನು ತಿಳಿದು ಓಗಡನ್ ಪ್ರಾಂತ್ಯದಲ್ಲಿ ತನ್ನ ಕಾರ್ಯ ಮುಗಿಸಿ,ಹಿಂತಿರುಗುವ ಸಮಯ ಅವರ ಎರಡು ವಿಮಾನಗಳು ಚಕ್ರವರ್ತಿಯವರನ್ನು ಹಿಂಬಾಲಿಸಿ ಬಂದುವು. ಆದರೆ ದೈವವಶಾತ್ ಚಕ್ರವರ್ತಿಯವರು ವಿನಹ ಅಪಾಯಕ್ಕೆ ತುತ್ತಾಗದೆ ತನ್ನ ರಾಜಧಾನಿಯನ್ನು ಸೇರಿದರು. ಸಂಚಾರದಲ್ಲಿ ಇವರನ್ನು ರಕ್ಷಿಸಲು ಆರು ವಿಮಾನಗಳಿದ್ದುವು. ಹರಾರದಲ್ಲಿಳಿದು ಗಾಯಗೊಂಡವರನ್ನು ನೋಡಿ ಅವರಿಗೆ ಸಮಾಧಾನ ಪಡಿಸಿದರು. ಯುದ್ಧದಲ್ಲಿ ದಣಿದ ಹಲವರಿಗೆ ಗೌರವದ ಕುರುಹುಗಳನ್ನು ಬಹುಮಾನವಾಗಿ ಕೊಟ್ಟರು. ಅನಂತರ ಜಿಜಿಗಾ ಎಂಬಲ್ಲಿಗೆ ಬಂದು, ಯುದ್ಧದ ವಿಷಯ ಸಮಾಲೋಚಿಸಲು, ನಾಯಕರ ಸಭೆಯನ್ನು ಜರಗಿಸಿ,ಅವರಿಗೆ ಯೋಗ್ಯ ಆಲೋಚನೆಗಳನ್ನು ಕೊಟ್ಟರು.

ಮಕಾಲೆಯ ಹತ್ತಿರ

೫೦,೦೦೦ ಹಬಸಿಗಳು, ಒಂದು ಮಹಾ ಅಧಿಕ್ರಮಕ್ಕೆ ಸಿದ್ಧರಾಗಿದ್ದಾರೆ. ಆದರೆ ಇಟೆಲಿಯವರ ಭದ್ರಕಾಕ್ರಮವು ನವೀನ ಯುದ್ಧೋಪಕರಣಗಳಿಂದ ಸಹಕರಿಸಲ್ಪಟ್ಟಿದ್ದರಿಂದ, ಹಬಸಿಯವರ ಜಯದ ಕುರಿತು ಸಂಶಯಪಡಬೇಕಾಗಿದೆ. ಹಬಸಿಗಳು ಹಗಲು ಸಮಯ ಸುಮ್ಮನಿದ್ದು ಕಠಿಣ ಪ್ರದೇಶಗಳಲ್ಲಿ ಬಳಲುತ್ತಿದ್ದ ಇಟೇಲಿಯವರ ಮೇಲೆ ರಾತ್ರಿಸಮಯ ಅಧಿಕ್ರಮಿಸಿ, ಅವರನ್ನು ದಿಗಿಲುಗೊಳಿಸುತ್ತಿದ್ದಾರೆ. ಮಕಾಲೆಯಿಂದ ಸ್ವಲ್ಪ ದೂರಕ್ಕೆ ಹೋಗುವ ಒಂದು ಇಟೆಲಿಯಾನ ದಂಡಿನ ಮೇಲೆ ಗುಡ್ಡಗಳಲ್ಲಿ, ಮರಗಳಲ್ಲಿ,ಮತ್ತು ಗಿಡಗಳ ಗುಂಪಿನಲ್ಲಿ ಅವಿತಿದ್ದ ಹಬಸಿಯವರು ಮೇಲೆ ಬಿದ್ದರು. ಅನೇಕ ಇಟೇಲಿಯಾನರು ಗಾಯಗೊಂಡಿರುವರು. ಇಟೇಲಿಯಾನ ನಾಯಕನೂ, ಕೆಲವು ಸೈನಿಕರೂ ಮಡಿದಿರುವರು. ಈ ಸೈನ್ಯದಳವು ಹಿಂದಕ್ಕೆ ಪಲಾಯನಮಾಡಿರುತ್ತದೆ ಎಂದು ವಾರ್ತೆ.

ಯುದ್ಧವು ಮುಂದಕ್ಕೆ ಸಾಗುತ್ತಿದೆ

ಹಬಸಿಗಳ ಕೆಲವು ಕಡೆ ಜಯಶಾಲಿಗಳಾಗಿ ಯುದ್ಧ ಮಾಡಿರುವರು. ಇಟೆಲಿಯಾನರ ದೇಶೀಯ ಸೈನ್ಯದಳದಲ್ಲಿ ಅಸಮಾಧಾನವುಂಟಾಗಿ, ದಂಗೆ ಎಬ್ಬಿಸಿ, ೩೦ ಮಂದಿ ಇಟಲಿಯಾನರನ್ನು ಕೊಲೆಮಾಡಿರುತ್ತಾರೆ. ದಕ್ಷಿಣ ದಿಕ್ಕಿನಲ್ಲಿ ಹಬಸಿಯವರು ಗೋರಾಹಿಯನ್ನು ಪುನಃ ವಶೀಕರಿಸಿದ್ದಾರೆ. ಅಲ್ಲದೆ ಅಲ್ಲಲ್ಲಿ ಅವರ ಕೈಬಿಟ್ಟ ಕೆಲವು ಪಟ್ಟಣಗಳನ್ನು ವಶೀಕರಿಸಿದ್ದಾರೆ ಎಂದು ವಾರ್ತೆ ಬಂದಿದೆ. ೨೫ ೦೦೦ ಮಂದಿ ಸೈನಿಕರಿರುವ ಒಂದು ಮಹಾ ತಂಡವು ವಾಲ್ ವಾಲ್‌ದಿಂದ ಮುಂದುವರಿಯುತ್ತದೆ. ಹಬಸಿಯವರು ದೇಶಗಳನ್ನು ಪುನಃ ವಶೀಕರಿಸಿದ ವಾರ್ತೆಯು ಲಂಡನಿನಿಂದಲೂ ಬಂದಿರುತ್ತದೆ. ಇಟೆಲಿಯಾನರು ಹೊಸ ನಾಯಕರ ಅಡಿಯಲ್ಲಿ ಇಷ್ಟರವರೆಗೆ ಯಾವತ್ತೂ ಮಹಾ ಸಮರಗಳನ್ನು ಮಾಡಲಿಲ್ಲ. ವಶೀಕರಿಸಿದ ಪಟ್ಟಣಗಳಲ್ಲಿ ಸರಕಾರ ರಚಿಸುವುದರಲ್ಲಿಯೂ, ಯೋಗ್ಯ ಮಾರ್ಗೋಪಾಯ, ನೀರಿನ ಸರಬರಾಯಿ ರಚಿಸುವುದರಲ್ಲಿ ಮಗ್ನರಾಗಿದ್ದಾರೆ. ಹಬಸಿಯವರ ಯುವರಾಜರು ಮಡಿದರೆಂಬ ವಾರ್ತೆ ಬಂದಿತ್ತು. ಆದರೆ ಆ ವರ್ತಮಾನದಲ್ಲಿ ಸತ್ಯಾಂಶವಿಲ್ಲವೆಂದು ನಾವು ಕೇಳುತ್ತೇವೆ. ಕೆಲವು ಬಾರಿ ಪೂರ್ಣ ಓಗಡನ್ ಪ್ರಾಂತ್ಯವು ಇಟೆಲಿಯಾನರ ಕೈಸೇರಿದೆ ಎಂದೂ, ಮತ್ತು ಕೆಲವು ಬಾರಿ ಓಗಡನ್ ಪ್ರಾಂತ್ಯದಲ್ಲಿ ಕೆಲವು ಭಾಗಗಳು ಮಾತ್ರ ಸಿಕ್ಕಿವೆ ಎಂದೂ ತರತರದ ವರ್ತಮಾನವು ರೋಮಿನಿಂದ ಹೊರಡುತ್ತವೆ. ಮಕಾಲೆ ಪ್ರಾಂತ್ಯದಲ್ಲಿ ಹಬಸಿ ಸೈನಿಕರು ಒಂದೆಡೆಯಲ್ಲಿ ಸಿಕ್ಕಿಬಿದ್ದುದರಿಂದ ನೀರಿನ ಕ್ಷಾಮದಿಂದಲೂ, ಆಹಾರವಿಲ್ಲದೆಯೂ ನರಳುತ್ತಿದ್ದಾರಂತೆ. ಆದರೆ ಹಬಸಿ ಚಕ್ರವರ್ತಿಯವರಿಗೆ, ಈ ಮಹಾಯುದ್ಧದಲ್ಲಿ ಜಯ ಹೊಂದುವ ನಂಬುಗೆಗಳಿವೆ. ಯುದ್ಧರಂಗದಲ್ಲಿ ಧಾರಾಳ ತಿಂಡಿ ಜಿನಸುಗಳನ್ನು ಶೇಖರಿಸುವ ಏರ್ಪಾಡುಗಳನ್ನು ಮಾಡಿರುತ್ತಾರೆ. ಇಟೆಲಿಯಾನರ ಸಿಂಕ್ಷನುಗಳ ಪರಿಣಾಮವು ಬಾಧಿಸದಂತೆ, ಮೆಸೋರ್ಸೆಲ್ ಬೊಡೊಗ್ಲಿಯೊರವರು ತುಂಬಾ ಸಿಡಿಮದ್ದನ್ನೂ ಯುದ್ಧೋಪಕರಣಗಳನ್ನೂ ಅಲ್ಲಲ್ಲಿ ಶೇಖರಿಸಲು ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಇಟೆಲಿಯಾನ ವಿಮಾನಗಳು ಬಹಳ ಸಂಚಾರ ಮಾಡಿದರೂ, ಹಬಸಿಯವರ ಸೈನ್ಯ ಸಮೂಹ ಚಲಾವಣೆಯನ್ನು ತಿಳಿಯದವರಾಗಿದ್ದಾರೆ. ಅಡಿಸ್ ಅಬಾಬಕ್ಕೆ ಈಗ ಶುಭವಾರ್ತೆಗಳೆ ಬರುತ್ತಿವೆ. ಚಕ್ರವರ್ತಿಯವರು ತನ್ನ ಸೈನ್ಯಬಲದ ಮೇಲೆ ಸಂಪೂರ್ಣ ತೃಪ್ತಿಹೊಂದಿರುತ್ತಾರೆ. ಕಾಲವಿಳಂಬರವಾದರೆ, ಇಟೆಲಿಯಾನರು ಸೋಲುವ ಸಂಭವ ಉಂಟಾಗುವುದೆಂದು, ಮಹನೀಯರೊಬ್ಬರ ಮಾತು. ಇಟೆಲಿಯಾನರ ಆಹಾರವು ಕಡಿಮೆಯಾಗುತ್ತಿದೆ. ಈಗಾಗಲೆ ಇಟೆಲಿಯ ಕೆಲವು ಸೈನ್ಯಗಳಲ್ಲಿ ಕ್ಷಾಮವು ಕಲಿದೋರಿದೆ ಎಂದು ವಾರ್ತೆ ಬಂದಿರುತ್ತದೆ.

ಈಗ ಬಂದ ಯುದ್ಧ ವಾರ್ತೆ.

ಇಟೆಲಿಯಾನರ ಭಯಾವೇಶ—ಇಟೆಲಿಯಾನ ನಾಯಕರು ಮಡಿದರು— ಇಟೆಲಿಯಾನರು ಪಲಾಯನ ಮಾಡುತ್ತಿದ್ದಾರೆ.

ಮಕಾಲೆಯ ಉತ್ತರದಲ್ಲಿ ರಾಸ್ ಸೆಯೊಮನ ಪಾಳೆಯ ವಿಶ್ರಾಂತಿಪಡೆಯುತ್ತಿದ್ದ ಒಂದು ಇಟೆಲಿಯಾನ ಸೇನಾಸಮೂಹ ಮೇಲೆ ಬಿದ್ದು, ಅವರ ನಾಯಕರನ್ನು ಕೆಲವು ಸೈನಿಕರನ್ನು ಕೊಲೆಮಾಡಿದರು. ಭಯಾವೇಶದಿಂದ ಕುಂದಿದ ಇಟೆಲಿಯಾನರು ಪಲಾಯನ ಮಾಡಬೇಕಾಯಿತು. ಓಗಡನ್ ಪ್ರಾಂತ್ಯದಲ್ಲಿ ಮಳೆಯ ದೆಸೆಯಿಂದ ಇಟೆಲಿಯಾನರು ಎಲ್ಲಾ ಯುದ್ಧ ಕಾರ್ಯ ಚಟುವಟಿಕೆಗಳನ್ನು ನಿಲ್ಲಿಸಬೇಕಾಗಿದೆ. ಇಲ್ಲಿನ ಡೆಸ್ಸಿ ಎಂಬಲ್ಲಿ ಈ ಮೊದಲೆ ನಿಯಮಿಸಿದಂತೆ ಹಬಸಿಯವರ ಮಹಾ ದಂಡೊಂದು ವಿಶೇಷ ಯುದ್ಧೋಪಕರಣಗಳಿಂದ ಇಟೆಲಿಯಾನರನ್ನು ಖಂಡಿಸಲು ಸಿದ್ಧವಿದೆ. ಚಕ್ರವರ್ತಿಯವರು ತಮ್ಮ ಮೊನ್ನಿನ ವಿಮಾನ ಸಂಚಾರದಲ್ಲಿ ಈ ಸಿದ್ಧತೆಗಳನ್ನೆಲ್ಲಾ ನೋಡಿ ಸಮಾಧಾನಪಟ್ಟಿದ್ದಾರಂತೆ. ಮಕಾಲೆ ಪ್ರಾಂತ್ಯದಲ್ಲಿ ಇಟೆಲಿಯಾನರು ರಾಸ್ ಸೆಯೊಮನನ್ನು ಪ್ರತಿಬಂಧಿಸಲು ಬಹಳವಾಗಿ ಸೂರೆಗೊಳ್ಳುತ್ತಿದ್ದಾರೆ. ಪ್ರಪಂಚದ ಎಲ್ಲಾ ರೆಡ್ ಕ್ರೊಸ್ ಸಂಸ್ಥೆಗಳು ಹಬಸಿಯವರ ಮೇಲೆ ಕನಿಕರಪಟ್ಟು, ಯುದ್ಧದಲ್ಲಿ ಗಾಯಗೊಂಡವರ ಉಪಶಮನಕ್ಕಾಗಿ ಧಾರಾಳ ವೈದ್ಯಕೀಯ ಸಾಮಾಗ್ರಿಗಳನ್ನೂ, ಕೆಲಸಗಾರರನ್ನೂ ರವಾನಿಸಿಕೊಟ್ಟಿರುತ್ತಾರೆ. ಇಟೇಲಿಯಾನರು ದೆಸ್ಸಾಲೆ ಎಂಬಲ್ಲಿ ಒಂದು ದೊಡ್ಡ ವಿಮಾನಗಳ ನಿಲ್ದಾಣವನ್ನು ರಚಿಸುವರೆಂದು ವಾರ್ತೆ ಇದೆ. ಹಬಸಿಯವರ ಸೈನ್ಯಬಲವು ದಿನೇ ದಿನೇ ವೃದ್ಧಿಹೊಂದುತ್ತದೆ.

ಇಟೆಲಿಯಾನರ ಜಯಶಾಲಿಗಳಾಗುವರೇ?

ಪ್ರಸಿದ್ಧ ಚರಿತ್ರೆಗಾರರಾದ ಪ್ರೊಫೆಸರ್ ಟ್ರೆಕ್ಲರ್‌ರೆಂಬರು ಇತ್ತೀಚೆಗೆ ನಡೆದ ಎಲ್ಲಾ ಯುದ್ಧಗಳ ಚರಿತ್ರೆಯನ್ನು ಪರಿಶೀಲಿಸಿ, ಎಲ್ಲಾ ಯುದ್ಧಗಳಲ್ಲಿ ಯುದ್ಧಕ್ಕೆ ಕಾರಣಭೂತರಾದ ಜನಾಂಗಗಳೆ ಸೋತುದರಿಂದ, ಈ ಭಾರಿ ಕೂಡ ಇಟೇಲಿಯು ಖಂಡಿತವಾಗಿಯೂ ಸೋಲುವುದೆಂದ ಇವರ ಮಾತು.

"ಇಟೆಲಿಯಾನರು ತಮ್ಮ ಭದ್ರವಾದ ನಿಲ್ದಾಣಗಳನ್ನು ಬಿಟ್ಟು, ಅರಣ್ಯಗಳಲ್ಲಿ ಮತ್ತು ಬೆಟ್ಟಗಳಲ್ಲಿ ಮತ್ತು ಮರುಳ ಕಾಡುಗಳಲ್ಲಿ ಸಿಲುಕಿದ ವಿನಹ, ಹಬಸಿಯವರು ಯುದ್ಧಮಾಡಲಾರರು. ಓಗಡನ್ ಪ್ರಾಂತ್ಯವು ಒಂದು ಮಹಾ ಮರುಳು ಪ್ರದೇಶವು. ಅವಿತುಕೊಳ್ಳಲು ತುಂಬಾ ಪೊದರುಗಳಿವೆ. ಇಲ್ಲಿ ನೀರಿನ ಕುಟ್ಟಿ ಬಹಳ. ನೀರಿನ ಕ್ಷಾಮದಿಂದಲೆ ಇಟೆಲಿಯಾನರು ಸೋಲಬೇಕಾಗುವುದು. ಸಾಂಕ್ರಮಿಕ ರೋಗಗಳಿಂದಂತೂ ಧಾರಾಳ ಇಟೆಲಿಯಾನರು ಮಡಿಯುತ್ತಿದ್ದಾರೆ. ಆದುದರಿಂದ ಹಬಸಿಗಳು ಯುದ್ಧ ಮಾಡದಿದ್ದರೂ ಕೂಡ, ಇಟೆಲಿಯಾನರು ಸೋಲುವರು. ಇಟೆಲಿಯಾನರು ಈ ಸಂದರ್ಭಗಳಲ್ಲಿ ಅಡಿಸ್ ಅಬಾಬವನ್ನು ಸೇರುವುದೆಂದರೆ ಬರೇ ಕನಸ್ಸಿನ ಮಾತು" ಎಂದು ಹಬಸಿ ಚಕ್ರವರ್ತಿಯವರ ಸೇನಾ ಶರಬೇಶಿನ ಕೆಲಸವನ್ನು ಮಾಡಿ ಸ್ವದೇಶಕ್ಕೆ ಹಿಂತಿರುಗುವ ಬೆಲ್ಜಿಯಂ ಉದ್ಯೋಗಸ್ಥರ ಮಾತು.

ನೋಟೀಸು.

ಸಂ 1935ನೇ ಇಸವಿ ದಸಂಬರ ತಾ 1ರಲ್ಲು ಸ್ಥಿರಸೊತ್ತುಗಳ ಸಂಪೂರ್ಣ ಹಕ್ಕುದಾರರಾದ ಕೊನಿಬೈಲು ಚಿಕ್ಕಪ್ಪ ಶೆಟ್ಟರ ಹೆಂಡತಿ ಬಾಕ್ರಬೈಲು ಯಮುನಮ್ಮನವರು ಈ ಕೆಳಗೆ ದಸ್ಕತು ಹಾಕಿದವರಿಗೆ ಬರಕೊಟ್ಟ ಜನರಲ್ ಪವರ್ ಆಫ್ ಎಟೊರ್ನಿ ಪ್ರಕಾರ ಸದ್ರಿ ಕೆಳಗೆ ದಸ್ಕತು ಹಾಕಿದವರು ಸದ್ರಿ ಸ್ಥಿರ ಸೊತ್ತುಗಳನ್ನು ಮತ್ತು ತಾ 12—6—'34 ರಲ್ಲು ಮೇಲೆ ಹೇಳಿದ ಪವರ್ ಆಫ್ ಎಟೊರ್ನಿಯೊಂದಿಗೆ ತನ್ನ ದಸ್ಕತು ಸಹಿ ಸದ್ರಿ ಯಮುನಮ್ಮನವರು ತಯಾರಿಸಿದ ಸ್ಕೆಜ್‌ನಲ್ಲಿಯೂ ತೋರುವಂತೆ ಪ್ರತ್ಯೇಕ ಪ್ರತ್ಯೇಕ ಲೋಟುಗಳಾಗಿ ಸದ್ರಿ ಆಸ್ತಿಯಿರುವ ಸ್ಥಳದಲ್ಲಿ ಅಂದರೆ ದಿ ಸಿಟಿ ಮಂಗಳೂರು ಎಲೆಕ್ಟ್ರಿಕ್ ಆಫೀಸಿನ ಬಳಿಯಲ್ಲಿ 1935ನೇ ಇಸವಿ ದಸಂಬರ ತಿಂಗಳ ತಾ 1ರಲ್ಲು ಘಂಟೆ 8ರಿಂದ 12, 2ರಿಂದ 4ರ ವರೆಗೆ ಬಹಿರಂಗವಾಗಿ ಏಲಂ ಮಾಡ ಲಾಗಿಯೂ ಮತ್ತು ಅಪೂರ್ಣವಾದರೆ ಮುಂದರಿಸಿದಿಬಹುದಾದ ದಿವಸಗಳಲ್ಲಿ ಏಲಂ ಕರೆಯುವದಾಗಿಯೂ ಈ ನೋಟೀಸು ಮೂಲಕ ಸರ್ವ ಜನರಿಗೂ ತಿಳಿಸೋಣಾಗುತ್ತದೆ.

ಇದರ ವಿವರಪಟ್ಟಿಯು ವಕೀಲ ಪಿ ಡಿ ಸೋಜರ ಆಫೀಸಿನಲ್ಲಿಯೂ ಮತ್ತು ಎಚ್ ಡಿ ಆಳ್ವರಲ್ಲಿಯೂ ಸಿಗುವುದು.

(*Sd*) P D Souza.
H. D. Alva

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 326/1935

1 ವಾದಿ—ಮಂಜನಾಥಯ್ಯ, ಸಂಭಯ್ಯನವರ ಗ್ರಾನ. ಹೊನ್ನಾವರ ತಾಲ್ಲೂಕು ಭಟ್ಕಳ ಪೇಟೆ ಹೂಸಗದ್ದೆ ಗ್ರಾಮದ ಶ್ಯಾನುಭಾಗನಾಗಿರುತ್ತಾನೆ

2 1ನೇ ಪ್ರತಿವಾದಿ ನಾರಾಯಣಯ್ಯ, ಸಂಭಯ್ಯನವರ ಮಗ ಕುಂದಾಪುರ ತಾಲ್ಲೂಕು ನಂಬ 1ನೇ ಶಿರೂರ ಗ್ರಾಮದಲ್ಲಿರುವ

3 ವಾದಿಗೆ ಆದ ನಷ್ಟವನ್ನು ಹಿಡಿಪಟ್ಟಿ ಶರ್ತದಂತೆ ಒದಗಿಸಿಕೊಡಬೇಕೆಂದು ವಾದಿಯು ಮೇಲ್ಕಂಡ ಪ್ರತಿವಾದಿ ವಗೈರೆ ಮೇಲೆ ಮಾಡಿದ ದಾವೆಯು ತಾ 30—11—35ಕ್ಕೆ ತಪ್ಪಿಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟದೆ. ಆ ಕಾರಣ ಅಕ್ಷೇಪಿಸುವದ್ದರೆ ಆ ತಾರೀಕು ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಹೇಳತಕ್ಕದ್ದು. ಇಲ್ಲದಿದ್ದರೆ ಸದ್ರಿ ನಂಬ್ರನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಕುಂದಾಪುರ K. Ragunath Shenoi
20—11 1935 ವಾದಿ ಕಡೆ ವಕೀಲ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 936/1935.

ಕುಂಞಾಮ್ಮದ ಹಾಜಿ ಸಹಾ—ವಾದೀರು

ಐಸಬಿ—ಮೂಜ ಬಾಜಿ ಅಬ್ದುಲ್ಲ ಕಾದ್ರಿ ಮ್ಯೆಲಾರರ ಮಗಳು ವ ಕಾದ್ರ ಕುಂಞಾಪ್ಪಾರಿಗಳ ಹೆಂಡ್ತಿ ಕಾಸರಗೋಡು ತಾಲೂಕು ಕೂಡ್ಲು ಗ್ರಾಮದ ಬೇಂಗ್ರೆಯಲ್ಲಿರುವವಳು—

—ಪ್ರತಿವಾದಿಳು.

1ನೇ ವಾದಿಗೆ ಪ್ರತಿವಾದಿಳು ರಿಜಿಸ್ಟ್ರಿಸಿ ಬರಕೊಟ್ಟ ಸ್ಥಿರಾಸ್ತಿ ಆಧವು ದಸ್ತಾವೇಜಿನ ಐವಜಿಗೆ ದಾಖಲ್ಲು ಮಾಡಿದ ಸದ್ರಿ ವ್ಯಾಜ್ಯವು ತಾ. 11—12—1935ಕ್ಕೆ ಆಖೈರು ತನ್ನಿಗೆ ಇಟ್ಟ ಸಂಗ್ತಿ ಈ ಮೂಲಕ ತಿಳಿಸುವುದೆ.

ಕಾಸರಗೋಡು, (*Sd*) P. Ahmad, B.A.B.L.
21—11—35 *Advocate for Plaintiff.*

ರಿಸರ್ವ್ ಬ್ಯಾಂಕಿನ ನೋಟುಗಳು.

ಈಗ ಕ್ರಮದಲ್ಲಿರುವ ಕರೆನ್ಸಿ ನೋಟುಗಳ ಬದಲಾಗಿ, ರಿಸರ್ವ್ ಬ್ಯಾಂಕಿನ ಹೊಸ ನೋಟುಗಳು ಬೇಗನೆ ಚಾಲ್ತಿಗೆ ಬರುವವು. ಇವುಗಳನ್ನು ಚಾಲ್ತಿಗೆ ತರುವ ಎಲ್ಲಾ ಸಿದ್ಧತೆಗಳು ಆಗಿವೆ. ಈ ನೋಟುಗಳ ಮೊದಲು ಸಮೂಹವು ಬೇಗನೆ ಹೊರಬೀಳುವುವು. ೫೦ ರೂ ಮತ್ತು ೫೦೦ ರೂಪಾಯಿಯ ನೋಟುಗಳು ಮಾಡುವುದಿಲ್ಲವೆಂದು ತಿಳಿದುಬರುತ್ತದೆ.

ಸಿಲೋನಿನ ರಾಜ್ಯದೋರಣೆ

ಸಿಲೋನಿನ ರಾಜ್ಯಪರಿಪಾಲನೆಯು ಯೋಗ್ಯ ರೀತಿಯಲ್ಲಿ ನಡೆಯುತ್ತದೆಂದು, ಇಂಗ್ಲಾಂಡಿನ ಮಹನೀಯರೊಬ್ಬರ ಮಾತು ಆದರೆ ಇತ್ತೀಚೆಗೆ ಅಲ್ಲಿ ನಡೆದ ಕೆಲವು ಘಟನೆಗಳನ್ನು ಪರಿಶೀಲಿಸಿದ್ದಲ್ಲಿ, ಅದು ತಪ್ಪು ಭಾವನೆಯೆಂದು ವಿಧಿತವಾಗುವುದು ಬ್ರಿಟಿಷ ಪ್ರಭುತ್ವವು ಅಲ್ಲಿ ತನ್ನ ಸ್ವಾರ್ಥವನ್ನೆ ಸಾಧಿಸುತ್ತಿದೆ. ದೇಶದ ಉಚ್ಚ ಉದ್ಯೋಗಗಳು ಆಂಗ್ಲೇಯರಿಗೆ ಸಲ್ಲುವಂತೆ ಅಲ್ಲಿ ಗವರ್ನರರು, ತಮ್ಮ ಅಧಿಕಾರವನ್ನು ಉಪಯೋಗಿಸಿ, ಕೆಲವು ನಿರ್ದಾರಗಳನ್ನು ಮಾಡಿದರು. ದೇಶೀಯ ಮಂತ್ರಿಗಳು ಪಾಶ್ಚಾತ್ಯ ಜನರನ್ನು ಉದ್ಯೋಗಕ್ಕೆ ತರುವ ವಿಚಾರ ಮಾಡಿದ ಠರಾವುಗಳು ತ್ಯಜಿಸಲ್ಪಟ್ಟವು ಈಗ ಅಲ್ಲಿನ ಪೋಲೀಸ ಇಲಾಖೆ ಉಚ್ಚ ಉದ್ಯೋಗದಲ್ಲಿ, ೬ ಸಿಲೋನಿಸ್ಸ ಉದ್ಯೋಗಸ್ಥರಿಗೆ, ೨೭ ಪಾಶ್ಚಾತ್ಯರಿರುವರು ಆಂಗ್ಲೇಯ ಉದ್ಯೋಗಸ್ಥರಿಗೆ ಹೆಚ್ಚಿನ ತಲಬು ಸಲ್ಲುವದಲ್ಲದೆ, ಅವರಿಗೆ ಮನೆಕಡೆ ಕುಟುಂಬ ಸಮೇತರಾಗಿ, ಪ್ರಯಾಣಕ್ಕಾಗಿ ಭತ್ತೆಯು ಕೊಡಲಾಗುವುದು ಸಿಲೋನಿಸರಿಗೆ ತಕ್ಕ ಯೋಗ್ಯತೆಗಳಿಲ್ಲವೆಂದೇ ಇವರ ಮಾತು ಆದರೆ, ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ಸದಸ್ಯರು ಮಾಡಿದ ಭಾಷಣಗಳಿಂದ ಸಿಲೋನಿಸರಿಗೆ ಹೆಚ್ಚಿನ ಯೋಗ್ಯತೆ ಇರುವುದೆಂದು ತಿಳಿದುಬರುತ್ತದೆ ಉದ್ಯೋಗಗಳು ಹೆಚ್ಚಾಗಿ ಸ್ವದೇಶದವರಿಗೇನೆ ಸಲ್ಲಿಸಬೇಕಾಗಿ, ಹವಣಿಸುತ್ತಿದ್ದ ಯೋದ್ಧರು ಈಗ ಸೆರೆಶಿಕ್ಷೆ ಹೊಂದಿರುತ್ತಾರೆ ಇದನ್ನೆಲ್ಲಾ ನೋಡಿದರೆ, ಸಿಲೋನಿನ ಸರಕಾರಕ್ಕೆ ಕೆಲವು ಸುಧಾರಣೆಗಳ ಅಗತ್ಯವಿದೆಯೆಂದು ವ್ಯಕ್ತವಾಗುತ್ತದೆ

ಇರೇಕಿನ ಭಾರತೀಯರ ವಿಚಾರ.

ಕುರಿತು ನಮ್ಮ ಸರಕಾರದ ಪತ್ರಕ್ಕೆ ಉತ್ತರವು ಬಂದಿರುತ್ತದೆ ಅನ್ಯರನ್ನು ಹೊರಗೆ ಮಾಡುವ ಒಂದು ಕ್ರಮವು ಜ್ಯಾರಿಮಾಡಿದುದರಿಂದ, ಇರೇಕಿನಲ್ಲಿ ನಿವಾಸಿಗಳಾಗಿದ್ದ ಹೊರಗಣ ದೇಶದವರು ಬೇಗನೆ ಆ ಊರನ್ನೇ ಬಿಡಬೇಕಾಗುವುದು ಶ್ರೀ! ರವೀಂದ್ರನಾಥ ಠಾಗೂರರವರಿಗೆ ಬಂದ ಪತ್ರದ ಪ್ರಕಾರ ಇದು ಭಾರತೀಯರ ಮೇಲೆ ಮಾತ್ರ ಹೂಡಿದಲ್ಲ ಹೊರಗಣ ದೇಶದವರನ್ನು ಹೊರಗಟ್ಟುವ ಈ ಕ್ರಮವು ಬಹಳ ಕಠಿನತರವಾಗಿದ್ದರೂ, ಭಾರತೀಯರ ವಿಚಾರ ಅಲ್ಲಿನ ಸರಕಾರದವರು ಬಹಳ ಕರುಣೆ ವರ್ತನೆಯನ್ನು ಉಪಯೋಗಿಸಿದ್ದಾರೆಂದು ತಿಳಿದುಬರುತ್ತದೆ ಈ ಕುರಿತು ಎಲ್ಲಾ ವಿವರಗಳನ್ನು ಕೊಡುವ ವರದಿಯು ಬೇಗನೆ ಹಿಂದೂದೇಶದ ಸರಕಾರಕ್ಕೆ ಬರುವುದು

ನಮ್ಮ ಅಂಚೆ ಕಾರ್ಡಿನ ರೂಪವು ಬದಲಾಗುವುದು.

ಹೊಸ ತರದ ಅಂಚೆ ಕಾರ್ಡುಗಳು ಎಲ್ಲಾ ಅಂಚೆಕಟ್ಟೆಗಳಲ್ಲಿ ಮಾರಾಟಕ್ಕೆ ಬೇಗನೆ ಬರುವವು. ಅಂಚೆದರವು ಹೆಚ್ಚಾಗಿವೆ ಎಂದು ಮೊರೆಯಿಟ್ಟ ವರ್ತಕರ ಕೋರಿಕೆಯ ಮೇರೆಗೆ ಈ ಬದಲಾವಣೆಮಾಡಿದ್ದಾರೆಂದು ತಿಳಿದುಬರುತ್ತದೆ. ಕಾರ್ಡಿನ ಆಕಾರ ಮೊಂಚಿನದೇ ಆದರೆ ಹಿಂದಣಬದಿಯಲ್ಲಿದ್ದ ಅರಸರ ಮೊಹರು ಇತ್ಯಾದಿಯನ್ನು ತೆಗೆದು, ಬರೆಯಲು ಹೆಚ್ಚು ಸ್ಥಳ ದೊರಕುವಂತೆ ಬದಲಾವಣೆಗಳನ್ನು ಮಾಡಿರುತ್ತಾರೆ, ದರಗಳನ್ನು ಇಳಿಸುವ ಬದಲಾಗಿ, ಸಂಬಂಧಪಟ್ಟ ಅಧಿಕಾರಿಗಳು, ಅಂಚೆ ಕಾರ್ಡಿನಲ್ಲಿ ಹೆಚ್ಚಿನ ಸ್ಥಳ ದೊರಕುವಂತೆ ವ್ಯವಸ್ಥೆಯನ್ನು ಮಾಡಿರುತ್ತಾರೆ.

ಎಲ್ಲಾ ಔಷಧಿಗಳು ಸೋತ ಮೇಲೆ ಅಜೀರ್ಣರೋಗವು ಗುಣವಾಯಿತು.

ನಿಮ್ಮ ವರ್ಷಗಟ್ಟಳೆಯಾಗಿ ಅವಧಿಯನುಸಾರದ ಅಜೀರ್ಣರೋಗದ ಬಾಧೆಯಿದೆಯಾದರೆ, ನಿಮಗೆ ಗುಣ ಕೊಡುವ ಯಾವ ಔಷಧವೂ ಇಲ್ಲವಾದರೆ, ನೀವು ಕೊನೆಯದ್ದಾಗಿ ಉಪಯೋಗಿಸಿದ ಒಂದು ಔಷಧಿಯ ಒಂದೇ ಡೋಸು ನಿಮ್ಮನ್ನು ಗುಣಪಡಿಸಿತೆಂದು ಕಂಡು ಬಂದೊಡನೆ ಅದೊಂದು ಅದ್ಭುತವಲ್ಲವೇ?

ಆದೀಗ ಒಬ್ಬನಿಗಾಗಿದೆ ಅವನು ನಮಗೆ ಬರೆದಿರುವನು. ಅವನ ನುಡಿಗಳನ್ನೇ ಓದಿ "ನನಗೆ ಗುಣವಿತ್ತುದು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಒಂದೇ ಅವಧಿ ಪ್ರಕಾರದ ಅಜೀರ್ಣ ರೋಗದಿಂದ ನಾನು ಬಾಧಿಸಲ್ಪಡುತ್ತಿದೆ ಅಜೀರ್ಣ ರೋಗನಿವಾರಕವಾದ ಎಲ್ಲಾ ಔಷಧಿಗಳನ್ನು ಉಪಯೋಗಿಸಿದೆ, ಆದರೆ ಸಂತೃಪ್ತಿಕರ ಪರಿಣಾಮವು ದೊರೆಯಲಿಲ್ಲ. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಕೆಲವು ವಾರಗಳಿಂದ ಪ್ರಾರಂಭಿಸಿದೆ ಅದರ ಪರಿಣಾಮವು ಆಶ್ಚರ್ಯಕರ, ಈಗ ನಾನು ನನ್ನ ದೀರ್ಘಸಮಯದ ರೋಗ ಸಂಹಾರಕ ಔಷಧಿಯನ್ನು ಕಂಡುಹಿಡಿದಿರುವೆನು"

ನೀವು ಅಜೀರ್ಣದಿಂದಾಗಲೀ ಉದರವೇದನೆಯಿಂದಾಗಲೀ ಬಳಲುತ್ತಿರುವಿರಾದರೆ ನಿಮಗೆ ಕೂಡಾ ಮೇ Nಗೆ ದೊರೆತಷ್ಟೇ ಗುಣವು ದೊರೆಯುವುದೆಂಬುದನ್ನು ಮರೆಯಬೇಡಿ ಆದರೆ ನಿಮ್ಮ ಕೆಮಿಸ್ಟರಿಂದ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಕೇಳಿರಿ ಅದರಲ್ಲಿ ಒಂದು ಕೆಂಪು ಮುದ್ರೆ ಇದೆ ಮುದ್ರೆಯ ಮೇಲೆ

Alex. C. Maclean

ಎಂಬ ಸಹಿಯು ಅಚ್ಚು ವಿಲ್ಲೆ ಮತ್ತು ಬೇಟೆಗಳ ಮೇಲಿದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

15 ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸ—

ಇಲ್ಲಿಗೆ ಬರೆಯಿರಿ

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ



ನೋಟೀಸು.

Attur Vaikunta Prabhu Bank, Mangalore

ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲಪಡಕೊಂಡ ನಂತರ ಕ್ಲಪ್ತ ವ್ಯಾದೆಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬಿಡಮಾಡಿಕೊಳ್ಳುವರೆ ಅವರಿಗೆ ಬಿಟ್ಟ, ರಿಜಿಸ್ಟ್ರಿ ನೋಟೀಸು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1935ನೇ ಇಸವಿ ದಶಂಬರ ತಾ 5ನೇ ಗುರುವಾರದೊಳಗೆ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲ್ಲಿಸಿಯೂ ಬಿಡಿಸಿಕೊಂಡು ಹೋಗದೆ ಇದ್ದರೆ ಸದರಿಯವರು ಈಡಾಗಿಟ್ಟ ನಗಗಳನ್ನು ಇದೇ 1935ನೇ ಇಸವಿ ದಶಂಬರ ತಾ 5ನೇ ಗುರುವಾರ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡುವೆವು.

	ಸಾಲದ ನಂಬ್ರ ಮತ್ತು ಅಡವಿಟ್ಟ ತಾ	ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	[illegible]
1	591 / 21-3-33	ಶಾಬಾನ್ B/o K. ಮೊದಿನ್, ಕ್ಲೋತ್ ಮರ್ಚಂಟ್, ಗೋಳಿಕಟ್ಟಾ ಬಜಾರ್, ಮಂಗಳೂರು	45
2	1136 / 8-6-33	ತಿಮ್ಮಪ್ಪ ಪೂಜಾರಿ N/o ಐತಪ್ಪ ಪೂಜಾರಿ, ಭಂಡಾರ ಮನೆ, ಕಾವೂರು ಗ್ರಾಮ ಉಳ್ಳಾಲ	30
3	1716 / 15 8 33	B ನಾರಾಯಣ ರಾವ್ S/o ಪಟ್ಟಾಮನೆ ಕೃಷ್ಣಯ್ಯ ಒಳಗ್ರಾಮ ಸುರತ್ಕಲ್	30
4	2017 / 21-9-33	ಹಮ್ಮಬ್ಬ ಬ್ಯಾರಿ S/o ಕುಂಞ ಬ್ಯಾರಿ ಹಳೇ ಮಟ್ಟ ಬಜಾರ್ ಮಂಗಳೂರು	20
5	2167 / 12-10-33	ರಂಗ ನಾಯ್ಕ S/o ಸುಳ್ಯ ತಿಮ್ಮಪ್ಪ ನಾಯ್ಕ ಪೊಂಟ ಗ್ರಾಮ ಮಂಗಳೂರು ತಾಲೂಕು	25
6	76 / 12-1-34	ತುಕ್ರ S/, ಬಾಬು ಮುಕಾರಿ ದೇರೆ ಬೈಲು ದರ್ಕಾಸು ಜಾಗೆಯಲ್ಲಿ ಮಂಗಳೂರು ತಾಲೂಕು	30
7	1461 / 25-9-34	ಅಮ್ಮದ್ ಬ್ಯಾರಿ S/o ಮೊದಿನ್ ಬ್ಯಾರಿ ಗ್ಲಾಸ್ ಬ್ಯಾಟ್ ವ್ಯಾಪಾರಿ ಕುದ್ರೋಳಿ ಮಂಗಳೂರು	12
8	A 1358 / 17 9 34	ಇಸ್ಸನೆ ಬ್ಯಾರಿ S/o ಉಳ್ಳಾಲ ಹಮ್ಮಬ್ಯಾರಿ ಕೋಟೆಕಣಿ ಗೋಳಿಕಟ್ಟಾ ಬಜಾರ್, ಮಂಗಳೂರು	16
9	A 1520 / 13-11-34	ಅಬ್ದುಲ್ ಖಾದ್ರಿಬ್ಯಾರಿ S/ ಹಾಜಿ ಬ್ಯಾರಿ ಬೈಕಂಪಾಡಿ ಪಣಂಬೂರು	9
10	A 1609 / 6 11 34	ಪಕ್ಕಿಪ್ಪ S ಸುಬ್ರಾಯ ಬೇಪಾರಿಗರು ಅಟ್ಟನವರ ಗದ್ದೆ ಗ್ರಾಮದಲ್ಲಿ ಕದ್ರಿದೇವರಲ್ಲ P O ಕಂಕನಾಡಿ	10
11	A 1675 / 9 11-34	M S ನಾರಾಯಣ ಭಟ್ S [illegible] B F ಬಿಲ್ಡಿಂಗ್ ಬೇಡಿಗುಡ್ಡೆ ಮಂಗಳೂರು	10
12	A 1809 / 3-1-34	K ಆನಂದರಾವ್ S/o ವೆಂಕಟರಮಣಯ್ಯ ಕಾವೂರು ಗ್ರಾಮ ಮಂಗಳೂರು ತಾಲೂಕು	14
13	A 1911 / 20-12-34	ಇಬ್ರಾಹಿಂ ಖಾನ್ S/o ಕಾಸಿಮ್ ಖಾನ್, ಡಿಸ್ಟ್ರಿಕ್ಟ್ ಕೋರ್ಟ್ ಎಟೆಂಡರ್, ಮಂಗಳೂರು	8
14	A 332 / 20-12-34	M S ನಾರಾಯಣ ಅಕ್ಕ S/o ಮಳಾರ್ ಸಂಕಪ್ಪ ಅಕ್ಕ ಕೊಡಿಯಾಲ ಬೈಲು ಮಂಗಳೂರು	6
15	A 19 4 / 31 12 4	K ಆನಂದರಾವ್ S/o ವೆಂಕಟ್ರಮಣಯ್ಯ ಕಾವೂರು ಗ್ರಾಮ ಮಂಗಳೂರು ತಾಲೂಕು	6

ತಾ 22—11-1935 ಮಂಗಳೂರು

A. Vaikunta Prabhu,
Proprietor A V P Bank

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours. Silk Sarees & Coatings a Speciality Work is conducted under the supervision of Textile experts. We undertake special order to suit individual tastes.

Please inspect our goods at:—

Raghavendra Ranga Pai, Car Street, Mangalore.

We deal in grey & Coloured Yarns, Dyes Chemicals & Handloom accessories

M. Venkatesha Ranga Pai,

Proprietor.

ಪ್ರಪಂಚ ಪರಿಚಯಃ

ಪರ್ಶಿಯಾ ದೇಶದ ಅಭಿವೃದ್ಧಿ.

ಪಾಶ್ಚಾತ್ಯ ಕಂಕೋಳಿಗಳಿಂದ ವಿಮೋಚನೆಗೊಂಡು ಪರ್ಶಿಯಾ ದೇಶವು ಬಹಳ ಮುಂದೆ ಸಾಗುತ್ತಿದೆ. ಸ್ವದೇಶದ ಉದ್ಧಾರವು ಸ್ವದೇಶದ ಕೈಗಳಿಂದಲೇ ಆಗುತ್ತಿದೆ ಕೆಲವು ಹಳೆಯ ಪದ್ಧತಿಗಳು ತೆಗೆದುಹಾಕಲ್ಪಟ್ಟಿವೆ. ಅಲ್ಲಿನ ಪಾರ್ಲಿಮೆಂಟು ಸಭೆಯು ತುಂಬಾ ಸುಧಾರಣೆ ಹೊಂದುತ್ತಿದೆ ಮೊನ್ನೆ, ಜುಲಾಯಿ ತಿಂಗಳಲ್ಲಿ ಇಲ್ಲಿನ ರಾಷ್ಟ್ರೀಯ ಬೇಂಕಿನ ಮೂಲಧನವನ್ನು ೨೦ ಮಿಲಿಯ ರಾಯಲ್ (ಪರ್ಶಿಯಾ ನಾಣ್ಯ)ಗಳಿಂದ ೩೦೦ ಮಿಲಿಯಕ್ಕೆ ಏರಿಸಲಾಯಿತು ಇದು ಇಲ್ಲಿನ ವ್ಯಾಪಾರದ ಅಭಿವೃದ್ಧಿಯನ್ನು ಸೂಚಿಸುತ್ತದೆ ೨೧೦ ಮಿಲಿಯ ರಾಯಲ್ ಬೆಲೆಯ ಭಂಗಾರವು ಇವರ ಬೊಕ್ಕಸದಲ್ಲಿದೆ ಮೋಟಾರುಗಾಡಿಗಳ ಸಮೂಹವು ಒಂಟೆಗಳ ಬದಲಾಗಿ ಕೆಲಸ ಮಾಡುತ್ತಿವೆ ಮೋಟಾರು ಸೌಕರ್ಯದಿಂದ ದೇಶದ ಬೇರೆ ಬೇರೆ ಹಳ್ಳಿ ನಗರಗಳಿಗೆ ಪರಸ್ಪರ ವಹಿವಾಟುಗಳುಂಟಾಗಿವೆ ಸಕ್ಕರೆ ಮತ್ತು ಚಹಾದ ಮೇಲಿನ ಸುಂಕದ ಮೂಲಕ ವಸೂಲಾಗುವ ಹಣವನ್ನು ಕೆಸ್‌ಪಿಯನ್ ಸಮುದ್ರದಿಂದ ಗಲ್ಫ್ ಆಫ್ ಇರಾಕಿಗೆ ಒಂದು ರೈಲ್ವೇ ಮಾರ್ಗದ ಸಲುವಾಗಿ ವ್ಯಯಿಸಲು ಠರಾವುಗಳಾಗಿವೆ ಈ ಮಾರ್ಗವು ಬೆಟ್ಟಗಳಿಂದ ಹಾದುಹೋಗುವುದರಿಂದ ಈ ರಚನೆಯಲ್ಲಿ ೮೯ ಸುರಂಗಗಳನ್ನು ತೋಡಬೇಕಾಗುತ್ತದೆ ಸ್ವಸಾಮರ್ಥ್ಯವಾಗಿ ಬಾಳಬೇಕೆಂಬ ಇಚ್ಛೆಯಿಂದ ಕೂಡಿದವರಾಗಿ ಅಲ್ಲಿನ ಅರಸರು ಸ್ವದೇಶೀ ಕೈಗಾರಿಕೆಯನ್ನೂ, ಸಕ್ಕರೆ ಗಿರಣಿ, ವಸ್ತ್ರಗಿರಣಿ ಪೈಂಟು ಸಿಗರೇಟು, ಬೆಂಕಿಪೆಟ್ಟಿಗೆ ಮೊದಲಾದುವುಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಯೋಗ್ಯ ರೀತಿಯಲ್ಲಿ ನಡೆಯುವಂತೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ

ವಿದ್ಯಾಭ್ಯಾಸವನ್ನು ನಡೆಸಲು ಕಂಪೆನಿ ಸಂಸ್ಥೆ.

ಸ್ವಿಸ್ ದೇಶದಲ್ಲಿ ೫೯ ಸೆಕಂಡರಿ ಶಾಲೆಗಳನ್ನೂ ಔದ್ಯೋಗಿಕ ಕಾಲೇಜುಗಳನ್ನೂ ನಡೆಯಿಸುವ ೫ ಮಿಲ್ಲಿ ಫೆನ್ಸ್ (ಸ್ವಿಸ್ ನಾಣ್ಯ) ಮೂಲಧನದ ಒಂದು ಕಂಪೆನಿ ಸಂಸ್ಥೆಯು ಕಾರ್ಯನಡೆಸುತ್ತದೆ ಪ್ರಥಮದಲ್ಲಿ ಕ್ರೈಸ್ತ ಮತದ ಪಾದರಿಗಳ ಕೈಯಲ್ಲಿರುವ ದೇಶದ ವಿದ್ಯಾಭ್ಯಾಸವನ್ನು ತಪ್ಪಿಸಲು ಮಾಡಿದ ಸಂಸ್ಥೆಯಿದು ಆದರೆ, ಈ ಸಂಸ್ಥೆಯು ಸ್ಥಾಪಿಸಲ್ಪಟ್ಟ ಸ್ವಲ್ಪ ಸಮಯದ ನಂತರ ಕ್ರೈಸ್ತ ಮತದ ಪಾದ್ರಿಗಳಿಗೆ ಮತ್ತು ಪಾದ್ರಿಗಳಿಗೆ ಪ್ರೋತ್ಸಾಹಕೊಡುವ ಸರಕಾರವು ಅಧಿಕಾರಕ್ಕೆ ಬರಲು ಸಂಸ್ಥೆಯ ಪ್ರಯತ್ನಗಳು ಸಫಲವಾಗಲಿಲ್ಲ ಆದರೂ ಈ ಸಂಸ್ಥೆಯು ಈಗ ಮಿಶನರಿಗಳಿಂದ ಹಲವು ವಿದ್ಯಾಸಂಸ್ಥೆಗಳನ್ನು ಪಡೆದು, ವಿದ್ಯಾಭ್ಯಾಸವನ್ನು ಸಾಂಗವಾಗಿ ನಡೆಯಿಸುತ್ತದೆ

ನಿರುದ್ಯೋಗದ ಕುರಿತು ಸರ್. ತೇಜ ಬಹದ್ದೂರ್ ಸಪ್ರುಗಳ ಸಂದೇಶ—

"ನಿರುದ್ಯೋಗವು ದಿನೇ ದಿನೇ ವೃದ್ಧಿಹೊಂದುತ್ತಿದೆ ನಮ್ಮ ತರುಣರಿಗೆ ತಮ್ಮ ಮುಂದಿನ ಜೀವನಮಾರ್ಗದ ಹಾದಿಯು ಕಾಣಲು ಅಸಾಧ್ಯವಾಗುತ್ತಿದೆ ವಿದ್ಯಾಸಾಧಿವೃದ್ಧಿಯು ಆಗುವುದೇನೋ ನಿಜ ಆದರೆ, ಕಾಲೇಜುಗಳಲ್ಲಿ ಬಿ ಎ ಎಂ ಎ ಇತ್ಯಾದಿ ಪದವಿಗಳನ್ನು ಪಡೆದ ತರುಣರು ಪಾಶ್ಚಾತ್ಯದೇಶಗಳಲ್ಲಿರುವಂತೆ ದೇಶಸೇವೆ ಮಾಡುವ ಬದಲಾಗಿ ಹತಾಶರಾಗಿ ತಿರುಗಬೇಕಾಗಿದೆ. ಲಾ ಪರೀಕ್ಷೆ ಪಾಸಾಗಿ ಎಲ್ ಎಲ್ ಬಿ ಡಿಗ್ರಿಯನ್ನು ಪಡೆದ ನಮ್ಮ ಅನೇಕ ತರುಣರು ಕಡಿಮೆ ಸಂಬಳದ ಗುಮಾಸ್ತೆ ಕೆಲಸಗಳನ್ನು ಮಾಡುತ್ತಿದ್ದಾರೆ ಇಂಟರ್ ಮೀಡಿಯೆಟ್, ಎಸ್ ಎಸ್ ಎಲ್ ಸಿ. ಪರೀಕ್ಷೆ ಪಾಸಾದವರು ಪೇದೆಗಳ ಕೆಲಸಗಳನ್ನೋ ಪತ್ರಿಕೆಗಳನ್ನು ಮಾರಾಟ ಮಾಡುವ ಕೆಲಸಗಳನ್ನೋ ಮಾಡಬೇಕಾಗಿದೆ ಕೆಲವರು ಪೋಲೀಸು ಜವಾನರಾಗಿ ಕೆಲಸ ಮಾಡುತ್ತಿದ್ದಾರೆ ಸಾವಿರಗಟ್ಟಲೆ ತರುಣರು ಕೆಲಸಕ್ಕಾಗಿ ಅರ್ಜಿಗಳನ್ನು ಹಿಡಿದುಕೊಂಡು ಬಾಗಿಲುಬಾಗಿಲುಗಳಿಗೆ ಹೋಗುತ್ತಿರುವುದು ಯಾವಾಗಲೂ ನಮ್ಮ ದೃಷ್ಟಿಗೆ ಗೋಚರಿಸುತ್ತಿದೆ, ಹೆಚ್ಚು ಹಣವನ್ನು ಖರ್ಚುಮಾಡಿದ ತಂದೆತಾಯಿಗಳಿಗೆ ಇದರಿಂದ ಯಾವ ಸಮಾಧಾನವು ಒದಗಬಹುದು? ಕೆಲವು ಎಂ ಎ. ಪದವೀಧರರು ಹಾಲು ಮಾರಾಟ ಮೊದಲಾದ ಚಿಕ್ಕ ಪುಟ್ಟ ಉದ್ಯಮಗಳನ್ನು ಮಾಡಿ ಹೊಟ್ಟೆ ತುಂಬಿಸಬೇಕಾಗಿದೆ ನಮ್ಮ ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸಬೇಕು ನಮ್ಮ ತರುಣರು ದೇಶದ ಸಾಂಪತ್ತಿಕ ಏಳಿಗೆಗೆ ಕಾರಣರಾಗುವಂತೆ ಅವರ ವಿದ್ಯಾಭ್ಯಾಸವು ನಡೆಯಬೇಕು" ಎಂದು ಸರ್ ತೇಜ ಬಹದ್ದೂರ್ ಸಪ್ರುಗಳವರು ಸಂಯುಕ್ತ ಪ್ರಾಂತ್ಯದ ವಿದ್ಯಾರ್ಥಿಗಳ ಪರಿಷತ್ತಿನಲ್ಲಿ ಮಾಡಿದ ಭಾಷಣ,

"ಸೋಯಾಬೀನ್ಸ್" ಎಂಬ ಪೌಷ್ಟಿಕ ಆಹಾರ.

ದಕ್ಷಿಣ ಹಿಂದೂದೇಶದ ಜನರ ಆಹಾರವು ಅಷ್ಟು ಪುಷ್ಟಿಕರವಾದುದಲ್ಲ ಇದೊಂದು ಕಾರಣದಿಂದ ನಮ್ಮ ಆರೋಗ್ಯವು ದಿನೇ ದಿನೇ ಕೆಡುತ್ತಿದೆ ಇದನ್ನು ನಿವಾರಿಸಲು "ಸೋಯಾಬಿನ್ಸ್" ಎಂಬ ಧಾನ್ಯವನ್ನು ಪಾನಕ ರೂಪದಲ್ಲೋ, ರೊಟ್ಟಿಯ ರೂಪದಲ್ಲೋ ಸೇವಿಸಿದರೆ ಮನುಷ್ಯನ ಬೆಳವಣಿಗೆಗೆ ಬೇಕಾದ ವಿಟಮಿನ್‌ಗಳು ಸಿಕ್ಕಿ ಇವನು ಪುಷ್ಟಿಯುಳ್ಳವನಾಗಿ ಬೆಳೆಯುವನು ಈ ಸೋಯಾಬಿನ್ಸುಗಳ ಕ್ರಯವು ಬಹಳ ಕಡಿಮೆ ಬೆಂಗ್ಳೂರಿನಲ್ಲಿ ಇದಕ್ಕೆ ಮಣ ೧ಕ್ಕೆ ರೂ ೧-೮-೦ ಕ್ರಯವಿರುತ್ತದೆ, ಇದನ್ನು ಕಾಫಿಬೀಜದಂತೆ ಹುರಿದು ಹುಡಿಮಾಡಿ, ಕಾಫಿ ತಯಾರಿಸುವಂತೆ, ಒಂದು ಕಷಾಯವನ್ನು ತಯಾರಿಸಿ ಸೇವಿಸಿದರೆ, ನಮಗೆ ಕಾಫಿಯಿಂದ ಒದಗುವ ಫಲಗಳು ಒದಗುವುದಲ್ಲದೆ, ಕಾಫಿಯಿಂದುಂಟಾಗುವ ಭಯಂಕರ ಹಾನಿಗಳ ಬದಲಾಗಿ ಶರೀರಕ್ಕೆ ಹೆಚ್ಚು ಪುಷ್ಟಿದೊರಕುವುದು ಈ 'ಸೋಯಬೀನ್ಸ್'ಗಳು ನಮ್ಮೂರಿನ ಬಟ್ಟಾಣಿ ಕಡಲೆಯಂತಿವೆ ನಮ್ಮಲ್ಲಿ ಇದರ ಉಪಯೋಗವು ಪ್ರಾರಂಭವಾಗುವುದಾದರೆ ಇದನ್ನು ಸುಲಭರೀತಿಯಲ್ಲಿ ಮಂಗಳೂರಿನಿಂದ ತರಿಸಿಕೊಳ್ಳಬಹುದು. ಈ ಧಾನ್ಯವು ಬೊಂಬಾಯಿಯ ಎ ಬಿ ಗೋಡ್ರೆಜ್ ಎಂಡ್ ಕೋ, ೩೦೬ ಪೆಲ್ಲಾಲ್ ರೋಡ್ ಇಲ್ಲಿ ದೊರಕುತ್ತದೆ ಈ ಬೀಜವು ಪುಷ್ಟಿದಾಯಕ ಆಹಾರವೆಂದೂ ಪ್ರಸಿದ್ಧ ವೈದ್ಯರು ಪ್ರಸಂಶೆ ಮಾಡಿರುವರು

ಸಂಯುಕ್ತ ಅಮೇರಿಕಾದ ಹೊಸ ಯೋಜನೆ.

ಸಂಯುಕ್ತ ಅಮೇರಿಕದ ಎಲ್ಲ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸುಲಭ ದರದಲ್ಲಿ ಒದಗಿಸಲು ಒಂದು ಮಹಾಯೋಜನೆಯನ್ನು ನೆರವೇರಿಸಲು ನೂರು ಮಿಲಿಯ ಡೊಲ್ಲರುಗಳನ್ನು ಅಂದರೆ ಸಾಧಾರಣ ೩೦೦ ಮಿಲ್ಲಿಯ ರೂಪಾಯಿಗಳನ್ನು ಪ್ರೆಸಿಡೆಂಟ್ ರೂಸ್‌ವೆಲ್ಟ್ ಸರಕಾರವು ವಿಂಗಡಿಸಿದೆ "ರೂರಲ್ ಇಲೆಕ್ಟ್ರಿಫಿಕೇಶನ್ ಎಡ್ಮಿನಿಸ್ಟ್ರೇಶನ್" (ಹಳ್ಳಿಗಳಿಗೆ ವಿದ್ಯುತ್‌ಶಕ್ತಿಯನ್ನು ಒದಗಿಸುವ) ಸಂಸ್ಥೆಯೊಂದು ಸ್ಥಾಪಿತವಾಗಿದೆ ಈ ಸಂಸ್ಥೆಯು ಸಂ ಅಮೇರಿಕಾದ ಎಲ್ಲ ಹಳ್ಳಿಗಳಿಗೂ ವಿದ್ಯುತ್ ಶಕ್ತಿಯನ್ನು ಒದಗಿಸುವ ಮತ್ತು ಹಂಚುವ ವಿಷಯ ಒಂದು ಕಾರ್ಯಕ್ರಮವನ್ನು ಮಾಡುವುದು ಈ ಯೋಜನೆಯಿಂದ ಹಲವರಿಗೆ ಉದ್ಯೋಗವು ಒದಗಲು ಸಾಧ್ಯವಾಗುವುದು ಅಲ್ಲಲ್ಲಿನ ನಗರಸಭೆಗಳಿಗೂ ಪಂಚಾಯತ ಬೋರ್ಡುಗಳಿಗೂ ಗ್ರಾಮಸ್ಥರ ಸಂಘಗಳಿಗೂ ೨೦ ವರ್ಷಗಳ ಸಾಲಗಳ ರೂಪದಲ್ಲಿ ಮರುಪಾವತಿಯಾಗುವ ಸುಲಭ ದರದ ಬಡ್ಡಿಯಲ್ಲಿ ವಿದ್ಯುತ್‌ಶಕ್ತಿ ಸ್ಟೇಶನುಗಳನ್ನು ನಿರ್ಮಿಸಲು ಸಾಲಗಳನ್ನು ಕೊಡಲಾಗುವುದು ರೈತರಿಗೆ ಸುಲಭ ದರದಲ್ಲಿ ವಿದ್ಯುತ್‌ಶಕ್ತಿಯು ದೊರೆಯುವಂತೆ ಈ ಕಂಪೆನಿಯವರು ಸಾಧಿಸುವರು ಈ ಯೋಜನೆಯಿಂದ ರೈತರಿಗೆ ವಿದ್ಯುಚ್ಛಕ್ತಿಯು ದೊರಕುವಾಗುವಾಗ ಕೆಲವು ನವೀನ ರೀತಿಯಿಂದ ಪಡೆದು ಸೀಮೆ ಸರಬರಾಯಿ ದೊರಕು ಗ್ರಾಮಾಭ್ಯುದಯವಾಗುವುದು

7 ಜನರ ಭಯಂಕರ ಕೊಲೆ!

ರಾಮನಾಡಿನ ನಾದು ಸೂರಂಗುಡಿ ಎಂಬ ಹಳ್ಳಿಯ ನಿವಾಸಿಗಳಲ್ಲಿ ಎರಡು ಪಕ್ಷಗಳಲ್ಲಿರುವ ವೈಷಮ್ಯದಿಂದ, ಮೊನ್ನೆ ಒಂದು ಪಕ್ಷದವರು ಇನ್ನೊಂದು ಪಕ್ಷದ ಮುದಸಾಮಿ ಎಂಬವನನ್ನು ಭಯಂಕರ ರೀತಿಯಲ್ಲಿ ಕಡಿದರು, ಆತನು ಈ ವರ್ತಮಾನವನ್ನು ತನ್ನ ಪಕ್ಷಕ್ಕೆ ತಿಳಿಸಿದೊಡನೆ ಆ ಎದುರುಪಕ್ಷವು ಒಂದು ದೊಡ್ಡ ತಂಡವಾಗಿ ಬಂದು, ಒಂದು ಮನೆಯೊಳಗೆ ಅವಿತುಕೊಂಡಿದ್ದ ಮುದಸಾಮಿಯನ್ನು ಅಪರಾಧಿಗಳಿಗೆ ತಕ್ಕ ಪ್ರಾಯಶ್ಚಿತ್ತ ಒದಗಿಸಲು ಆ ಮನೆಯನ್ನು ಮುತ್ತಿಗೆ ಹಾಕಿ, ಒಳಗಿದ್ದವರನ್ನು ಹೊರಬರಲು ಬಿಡದೆ, ಮನೆಯ ಸುತ್ತಲೂ ಬೆಂಕಿ ಹಾಕಿ, ಮನೆಯನ್ನು ಸುಟ್ಟು ೭ ಜನರನ್ನು ಕೊಲೆಮಾಡಿದರು. ಅಗ್ನಿ ರಾಜು ಎಂಬವನು ಪ್ರಾಣದಾಸೆಯಿಂದ ಹೊರಗೆ ಬರಲು, ಆತನನ್ನು ಹಿಡಿದು ತುಂಡುತುಂಡಾಗಿ ಕತ್ತರಿಸಿ ಪುನಹ ಬೆಂಕಿಯಲ್ಲಿ ಎಸೆದರು, ಈ ಏಳು ಜನರಲ್ಲಿ ಕೆಲವು ಸ್ತ್ರೀಯರೂ ಇದ್ದರು ಪೋಲೀಸರು ಬರುವುದರೊಳಗೆ ಕೊಲೆಗಾರರು ಪಲಾಯನಮಾಡಿದ್ದರು. ಕೆಲವರನ್ನು ಸೆರೆಹಿಡಿದಿದ್ದಾರೆ. ತನಿಖೆ ನಡೆಯುತ್ತದೆ ಆ ಹಳ್ಳಿಯಲ್ಲಿ ಪೋಲೀಸ ಬಂದೋಬಸ್ತು ಇಟ್ಟಿರುತ್ತಾರೆ

ಜರ್ಮನಿ.

ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಏರುತ್ತಿದೆ ಆದರೆ, ಹಲವು ವರ್ಷಗಳ ಹಿಂದೆ ರೂಢಿಯಲ್ಲಿರುವ ನಿರುದ್ಯೋಗಿಗಳ ಸಂಖ್ಯೆಗಿಂತ ಈಗಿನ ಸಂಖ್ಯೆಯು ಕಡಿಮೆಯಾಗಿರುತ್ತದೆ ಹಿಟ್ಲರನ ಏಕಾಧಿಪತ್ಯದಲ್ಲಿ ಜರ್ಮನಿಯು, ಕಳೆದ ಮಹಾಯುದ್ಧದ ನಂತರ ತನಗೆ ಉಂಟಾದ ಹಲವು ಕೆಡುಕುಗಳನ್ನು ನಿವಾರಿಸಲು ಸಾಧಿಸುತ್ತದೆ ವರ್ಸಾಲೆ ಒಪ್ಪಂದದಿಂದಾಗಿ ಜರ್ಮನಿಯ ಮೇಲೆ ಹಲವು ನಿರ್ಬಂಧಗಳಿದ್ದುವು ಆದರೆ ಜನೆವದ ಮಂಡಳದ ಸದಸ್ಯತನವನ್ನು ತ್ಯಜಿಸಿದುದರಿಂದ ಜರ್ಮನಿಯು ವರ್ಸಾಲೆ ಒಪ್ಪಂದವನ್ನು ಮುರಿದುಬಿಟ್ಟಿರುತ್ತದೆ ಜರ್ಮನಿಗೆ ಹೊರಗಣ ದೇಶಗಳ ವ್ಯಾಪಾರವು ಹೆಚ್ಚಾಗಿಲ್ಲದಿದ್ದರೂ, ಸ್ವಸಾಮರ್ಥ್ಯವಾಗಿ ಬಾಳುವುದು ಮತ್ತು ಇಡೀ ಜರ್ಮನಿಯನ್ನು ಸಂಗ್ರಾಮಶೂರವಾಗಿ ಮಾಡುವುದೇ ಈಗಿನ ನಾಜಿ ಸರಕಾರದ ಮುಖ್ಯ ಉದ್ದೇಶ

ರಬ್ಬರ್ ಸಾಮಾನುಗಳನ್ನು ತಯಾರಿಸುವ ಕಾರ್ಖಾನೆ

—ಯೊಂದು ಬೇಗನೇ ಕಲ್ಕತ್ತಾದಲ್ಲಿ ಸ್ಥಾಪಿಸಲ್ಪಡುವುದು ಇದರಲ್ಲಿ ಹೊರಗಣ ದೇಶದ ಮೂಲಧನ ಹಾಕಿರುವರು ಕಲ್ಕತ್ತಾದ ಈರ್ವರು ಮಹಾಮಹಿಮರೂ ಈ ಕಂಪೆನಿಯ ಡೈರೆಕ್ಟರರಂತೆ ಈ ಕಾರ್ಖಾನೆಯನ್ನು ಪ್ರಥಮತಃ ಬೊಂಬಾಯಿಯಲ್ಲಿ ಸ್ಥಾಪಿಸಬೇಕೆಂಬ ಆಲೋಚನೆಯಿತ್ತು ವಿದ್ಯುತ್‌ಶಕ್ತಿಯು ಸುಲಭ ದರವೇ ಈ ಆಲೋಚನೆಗೆ ಮುಖ್ಯ ಕಾರಣ ಆದರೆ ಈಗ ಈ ಸಂಸ್ಥೆಗೊಂದು ಸ್ವಂತ ವಿದ್ಯುತ್‌ಶಕ್ತಿ ನಿಲಯವನ್ನು ಕೂಡಿಸಲು ನಿರ್ಧರಿಸಿರುವುದರಿಂದಲೂ ಕಲ್ಕತ್ತಾದಲ್ಲಿ ರಬ್ಬರು ಶೇಖರಿಸುವ ಸೌಕರ್ಯವು ಸುಲಭವಿರುವುದರಿಂದಲೂ ಈ ಕಾರ್ಖಾನೆಯು ಅಲ್ಲಿ ಸ್ಥಾಪನೆಯಾಗುವುದು. ಕಲ್ಕತ್ತಾದ ಹವಾಗುಣವು ಒಳ್ಳೆದು ಅಲ್ಲದೆ, ಮಜೂರರ ಕೂಲಿಯು ಕೂಡಾ ಕಡಿಮೆಯಾಗಿರುತ್ತದೆ ೧೯೩೭ರ ಒಳಗಾಗಿ ಈ ರಬ್ಬರ್ ಕಾರ್ಖಾನೆಯವರು ಎಲ್ಲಾ ತರದ ರಬ್ಬರ್ ಸಾಮಾನುಗಳನ್ನು ತಯಾರಿಸುವರು ಹೆಚ್ಚಿನ ಮಂದಿ ಪಾಲುಗಾರರು ಹೊರಗಣ ದೇಶದವರಾದರೂ, ಈ ಸಂಸ್ಥೆಯಿಂದ ಹಿಂದೂದೇಶಕ್ಕೆ ಹೆಚ್ಚಿನ ರಬ್ಬರ್ ಸಾಮಾನುಗಳು ಸುಲಭ ದರದಲ್ಲಿ ಸಿಗುವಂತೆ ಮಾಡುವುದು ಮಾತ್ರವಲ್ಲದೆ ನಮ್ಮಲ್ಲಿನ ಕೆಲವು ನಿರುದ್ಯೋಗಿಗಳಿಗೆ ಕೆಲಸವು ದೊರೆಯುವುದು.

"ಬೇಕಾಗಿಲ್ಲದ" ಶಿಶುಗಳು

ಫ್ರಾನ್ಸಿನ ಪೆರಿಸ್ ನಗರದಲ್ಲಿ ವರ್ಷಂಪ್ರತಿ ೨೦೦೦ "ಬೇಕಾಗಿಲ್ಲದ" ಮಕ್ಕಳು ತ್ಯಜಿಸಲ್ಪಡುತ್ತಿವೆ. ಇವುಗಳಲ್ಲಿ ಕೆಲವರು ಮಹಾ ಗೌರವಸ್ಥಾನವನ್ನು ಪಡೆದಿರುತ್ತಾರೆ ಸರಕಾರದ ಪ್ರೌಢ ಉದ್ಯೋಗಸ್ಥರಲ್ಲಿ ಇಬ್ಬರೂ, ನಾಲ್ಕು ಸಹಾಯಕ ಉದ್ಯೋಗಸ್ಥರೂ, ಕಾರ್ಯದರ್ಶಿಗಳು ಈ ಸಮೂಹದಿಂದ ಬಂದವರು. ನೌಕಾ ಶಾಖೆಯಲ್ಲೊಬ್ಬನು ಎಡ್‌ಮಿರಲ್‌ನಾಗಿರುವನು. ಸೇನಾ ಸಮುದಾಯದಲ್ಲಿ ೯ ಮಂದಿಗಳು ನಾಯಕತ್ವವನ್ನು ಪಡೆದಿದ್ದಾರೆ ಇವರ ಜನನ ಗುಟ್ಟು ಯಾರಿಗೂ ತಿಳಿಯುವುದು ಅಸಾಧ್ಯ "ಬೇಕಾಗಿಲ್ಲ"ದ ಮಕ್ಕಳನ್ನು ಸರಕಾರದ ಸಲಹೆಗೆ ಒಪ್ಪಿಸುವುದರಲ್ಲಿ ಹೆಚ್ಚಿನ ಆತಂಕಗಳಿಲ್ಲ. ವಿಶೇಷ ಪ್ರಶ್ನೆಗಳನ್ನು ಉತ್ತರಿಸಬೇಕಾಗಿಲ್ಲ ರಾತ್ರಿ ಸಮಯದಲ್ಲೋ ಬೆಳಗ್ಗಿನ ಜಾವದಲ್ಲೋ ಗುಪ್ತವಾಗಿ ತಾಯಂದಿರು ಈ ಸಂಸ್ಥೆಗೆ ತ್ಯಜಿಸಲ್ಪಡುವ ಶಿಶುಗಳನ್ನು ಒಪ್ಪಿಸುವರು ಇಲ್ಲಿ ಸರಕಾರವು ಅವುಗಳ ಆರೈಕೆಯನ್ನು ಮಾಡಿ, ಯೋಗ್ಯ ವಿದ್ಯಾಭ್ಯಾಸವನ್ನು ಕೊಡುತ್ತದೆ ಇದರಿಂದಾಗಿ "ಬೇಕಾಗಿಲ್ಲದ" ಶಿಶುಗಳ ಕೊಲೆಯು ಬಹಳ ಕಡಿಮೆಯಾಗಿರುತ್ತದೆ

ಅವಿವಾಹಿತರ ಮೇಲೆ ತೆರಿಗೆ ಯಾಕೆ ವಿಧಿಸಬಾರದು?

ಕರಾಚಿಯಲ್ಲಿ ಅಸಂಖ್ಯಾತ ತರುಣರು ಅವಿವಾಹಿತರಾಗಿರುವುದರಿಂದಲೂ, ಮದುವೆಯಾಗದ ಹುಡುಗಿಯರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ ಈ ಅವಿವಾಹಿತರ ಮೇಲೆ ತೆರಿಗೆಯನ್ನು ಹೊರಿಸುವ ಒಂದು ಹೊಸ ಕ್ರಮವನ್ನು ಜ್ಯಾರಿಮಾಡುವ ಠರಾವು ಕರಾಚಿಯ ನಗರಸಭೆಯ ಮುಂದೆ ಬರುವುದು ಎಂತೆ ಅವಿವಾಹಿತರ ಸಂಖ್ಯೆ ಹೆಚ್ಚುವುದರಿಂದ, ಹುಡುಗಿಯರು ವಿವಾಹವಿಲ್ಲದೆ ಹಲವು ಸಂಕಷ್ಟಗಳನ್ನು ಪಡೆಯುವರು ಈ ಕಾರಣದಿಂದ ತರುಣರ ಅನ್ಯಾಯಕರ ಕನ್ಯಾಧನವನ್ನು ಕೇಳುವುದು ಇವುಗಳನ್ನು ನಿಲ್ಲಿಸುವುದೇ ಈ ತೆರಿಗೆಯ ಮುಖ್ಯ ಉದ್ದೇಶ ಈ ಠರಾವು ಮಂಜೂರಾದರೆ ತಿಂಗಳಿಗೆ ೧೦೦ ರೂಪಾಯಿ ಸಂಬಳದ ಅವಿವಾಹಿತನಿಗೆ ಶೇಕಡಾ ೨ರ ಸಲೆ ತೆರಿಗೆಯು ವಿಧಿಸಲಾಗುವುದು ಇಂತಹ ಕ್ರಮವು ನಮ್ಮಲ್ಲೂ ಬೇಡವೇ?

ದ. ಕ. ಏಜಂಟರು — ಸುಜೀರ್ ರಾಮಪ್ಪ ನಾಯಕ್, ನರಸಿಂಹ ವೆಂಕಟೇಶ ನಾಯಕ್ ಎಂಡ್ ಕಂಪೆನಿ, ಮಂಗಳೂರು

ಉ. ಕ. ಏಜಂಟರು — ಎಸ್. ಎಸ್. ರಂಗಯ್ಯ ಶೆಣವಿ, ಪೋಸ್ಟ್ ಆಫೀಸು ಹಳಿಯಾಲ್.

ಮನೋಹರವಾದ ಗುಂಗುರುಕೂದಲುಗಳು ನಿಮಗೆ ಬೇಕೆ? ಹಾಗಾದರೆ ಸ್ವಸ್ತಿಕಾ ಕೇಶವರ್ಧಿನಿ ತೈಲವನ್ನು ಉಪಯೋಗಿಸಿರಿ ಅದು ನಿಮ್ಮ ತಲೆಗೂದಲನ್ನು ಹುಲುಸಾಗಿ ಬೆಳೆಯುವಂತೆ ಮಾಡುವುದಲ್ಲದೆ ಅದನ್ನು ನುಣುಪಾಗಿ ಗಟ್ಟಿ ತಲೆಯ ಶೋಭೆಯನ್ನು ಹೆಚ್ಚಿಸುವುದು. ಈ ಪರಿಮಳಯುಕ್ತ ಸ್ವಸ್ತಿಕಾ ಎಣ್ಣೆಯು ಕೇವಲ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟುದು ಆರು ನಮೂನೆಯ ಹೂವಿನ ಪರಿಮಳಗಳಲ್ಲಿ ಸಿಗುತ್ತದೆ.

ನಿಮ್ಮ ದಿನನಿತ್ಯದ ಉಪಯೋಗಕ್ಕಾಗಿ ಸ್ವಸ್ತಿಕಾ ಕೇಶವರ್ಧಿನಿ ಎಣ್ಣೆ, ದಂತಮಂಜನ ಟೊಯ್ಲೆಟ್, ಸೋಪ್, ಶಾಂಪೂ, ಸ್ನೋ, ವ್ಯಾನಿಶಿಂಗ್ ಕ್ರೀಮ್ ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳಿರಿ.

ಅನುಕ್ರಮಣಿಕೆ.

ಟಿಪ್ಪಣಿಗಳು ೨
ಚಿತ್ರ ಪ್ರಬಂಧ ೪
ಆರೋಗ್ಯ ಸೂಚನೆಗಳು ೫
ಪತ್ರಿಕಾಪ್ರಪಂಚ ೯
ಅಗ್ರಲೇಖ
ಮಾನ್ಯ ಹೋಮ್ ಮೆಂಬರರು ೧೦
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೨
ಇಟೆಲಿಯೂನ್ನರು ಆಹಾರಕ್ಕಾಗಿ ನವಳಬೇಕಾಗುವುದೆ? ೭
ವನಿತಾ ವಿಭಾಗ ೧೬
ವಿವಿಧ ಸಮಾಚಾರಗಳು ೧೩
ನಮ್ಮ ಅಧಿಪತ್ಯದ ಮಾಗೋಲೀಬಾಂಬುಗಳ ಮೇಲಿನ ವರದಿ ೧೮

ಸ್ವದೇಶಾಭಿಮಾನಿ

ತಾ ೨೯ನೇ ಶುಕ್ರವಾರ ನವಂಬರ '೩೫

ಮಾನ್ಯ ಹೋಮ್ ಮೆಂಬರರು

ನಮ್ಮೂರ ಸೈಂಟ್ ಎಲೋಶಿಯುಸ್ ಕೋಲೇಜಿನ ವಾರ್ಷಿಕೋತ್ಸವವನ್ನು ಮೊನ್ನೆ, ಸಂಸ್ಥಾನದ ಮಾನ್ಯ ಹೋಮ್ ಮೆಂಬರರು ಶ್ರೀ। ರಾವ್ ಬಹದ್ದೂರ್ ಪನ್ನೀರ ಸೆಲ್ವಮ್ ರವರ ಅಧ್ಯಕ್ಷತೆಯಲ್ಲಿ ಜರಗಿಸಿದಾಗ, ಅಧ್ಯಕ್ಷರು ಸಭಿಕರ ಮುಂದಿಟ್ಟ ಅದೊಂದು ವಿಷಯವನ್ನಷ್ಟೆ ಇಲ್ಲಿ ಪ್ರಸ್ತಾಪಿಸಬೇಕೆಂದಿರುವೆವು

ಮಂಗಳೂರಲ್ಲಿರುವ ಕೆಥೊಲಿಕ ಸಮಾಜವು ವಾಸ್ತವವಾಗಿಯೂ ನಮ್ಮ ಅಧಿಪತ್ಯಕ್ಕೆ ಎಷ್ಟೋ ವಿಧಗಳಲ್ಲಿ ಮೇಲ್ಪಂಕ್ತಿಯನ್ನು ಹಾಕಿ ಕೊಡಬಲ್ಲುದು ಸಂಸ್ಥಾನದ ಇತರ ಜಿಲ್ಲೆಗಳಲ್ಲಿರುವ ಕೆಥೊಲಿಕ ಮಹಾಜನರು ಇಲ್ಲಿನವರಿಂದ ಕಲಿತುಕೊಳ್ಳಬೇಕಾಗಿರುವ ವಿಷಯಗಳು ಬಹಳವಿವೆ ಮುಂದಣ ರಾಜಕೀಯ ರಂಗಸ್ಥಲದಲ್ಲಿ ಪ್ರತಿಯೊಂದು ಜಿಲ್ಲೆಯೂ ಪ್ರತಿಯೊಂದು ಸಮಾಜವೂ ತನ್ನ ಜವಾಬುದಾರಿಯನ್ನು ತಿಳಿದು ಕಾರ್ಯ ನಿರ್ವಹಿಸಬೇಕಾಗಿ ಬರುವುದರಿಂದ, ಸಮಸ್ತ ಸಮಾಜಗಳೊಡನೆ ಮೈತ್ರಿ ಅನುರಾಗ ಸಹಾನುಭೂತಿಗಳನ್ನು ಪ್ರದರ್ಶಿಸುತ್ತ ಈ ಸಮಾಜವು ಇತರರೊಡನೆ ತಾನೂ ಸಂಸ್ಥಾನದ ಅಭಿವೃದ್ಧಿಯ ಸಾಧನಗಳಲ್ಲಿ ಸಹಕರಿಸಬೇಕಾಗಿದೆ

ಆಯಾ ಸಮಾಜವು ತನ್ನವರನ್ನೆ ಮುಂದಿಟ್ಟುಕೊಳ್ಳುತ್ತಿದೆ, ಯಾವುದೊಂದು ಸಮಾಜದವರೊಳಗೆ, ಧರ್ಮವೊಂದೇ ಎಂದ ಬಳಿಕ, ನಡತೆ ನಡವಳಿಕೆಗಳು ಒಂದಾಗಿರುವ ಕಾರಣ, ಮೈತ್ರಿಯಿರುವುದು ಸಹಜ ಹಾಗಿದ್ದರೂ ಇತರರೊಡನೆ ಸಾಮಾನ್ಯ ವಿಷಯಗಳಲ್ಲಿ ಸಹಕರಿಸಿ, ಆ ಸಹಕಾರದಲ್ಲಿ ಭೇದಭಾವವನ್ನು ಮರೆವುದು ಕಷ್ಟವಾಗಿಲ್ಲ. ಮತ್ತೊಬ್ಬರನ್ನು ಕಂಡೊಡನೆ, ಅವರನ್ನು ಸರ್ವವಿಧಗಳಲ್ಲೂ ವಿರೋಧಿಸಬೇಕಾಗಿ ಯಾವ ಸತ್ಯಧರ್ಮವೂ ಬೋಧಿಸಿಲ್ಲ. ಹೀಗಿರುವುದರಿಂದ ನಮ್ಮ ಜಿಲ್ಲೆಯಲ್ಲಿ ಪ್ರತಿಯೊಂದು ಸಮಾಜವು ತನ್ನವರಿಗಾಗಿಯೆಂದೇ ತೆರೆದ ವಿದ್ಯಾಸಂಸ್ಥೆಗಳಲ್ಲಿ, ಸಮಸ್ತ ಸಾಮಾಜಿಕರಿಗೂ ಶಿಕ್ಷಣ ದೊರೆವಂತೆ ಮಾಡಿರುವುದೂ, ವೇತನಗಳೂ ಬಹುಮಾನಗಳೂ ಸರ್ವರಿಗೊಳಗೆ ವಿಕಸನಗೊಳ್ಳುವಂತೆ ಮಾಡಿರುವುದೂ, ನಮ್ಮಲ್ಲಿನ ಮುಂದಾಳುಗಳ ಪರಮತಸಹಿಷ್ಣುತೆ, ಅನ್ಯಸಮಾಜ ಮೈತ್ರಿಗಳಿಗೆ ಉದಾಹರಣೆಗಳಾಗಿವೆ. ಕೊಲಿಜನ್ನು ಕುರಿತು ಹೋಮ್ ಮೆಂಬರರು ಹೇಳಿರುವಂತೆ, ನಮ್ಮಲ್ಲಿನ ಸಮಸ್ತ ವಿದ್ಯಾಸಂಸ್ಥೆಗಳನ್ನು ಕುರಿತಾಗಿಯೂ ಹೇಳಬಹುದು.

ಸ್ವರಾಜ್ಯ ಸಾಧನೆಗಾಗಿ ಯಾರು ಸಾಧಕರಾಗುವರೋ, ಅವರಲ್ಲಿ ಈ ಬಗೆಯ ಅವಿರೋಧಭಾವವು ಇರಬೇಕಾದುದು ಅವಶ್ಯಕವಾಗಿದೆ ಚುನಾವಣೆಗಳಲ್ಲಿ ಪಕ್ಷಭೇದಗಳಿರಬಹುದು, ಅವುಗಳಲ್ಲಿ ಸಾಮಾನ್ಯ ಸ್ಥಾನಗಳಿಗಾದರೂ ಈ ಸಮಾಜಭೇದಗಳನ್ನು ವ್ಯಕ್ತಗೊಳಿಸುವುದು ಅನ್ಯಾಯವಾಗುವುದು. ಪಕ್ಷಗಳಂತೆ ಪ್ರತಿನಿಧಿಗಳನ್ನು ಆರಿಸಬೇಕೇ ವಿನಾ, ಜಾತಿ ನೋಡಿ ಆರಿಸಿದಲ್ಲಿ ಉಂಟಾಗುವ ಪತನ, ಜಾತಿಗಳನ್ನು ಪರಿಗಣಿಸದೆ ಯೋಗ್ಯತೆಯನ್ನು ಮಾತ್ರ ನೋಡಿ ಆರಿಸಿದಲ್ಲಿ ಉಂಟಾಗುವ ಅಭ್ಯುದಯ ಇವುಗಳಿಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು ಕೆಲ ಸಮಾಜಗಳಲ್ಲಿ ಯೋಗ್ಯರಿದ್ದರೂ ಅವರು ಪ್ರಾತಿನಿಧ್ಯ ಪಡೆಯದಿರುವುದೂ, ಕೆಲಸಮಾಜಗಳಿಂದ ಅಧಿಕಾಧಿಕವಾಗಿ ಆರಿಸಿಬರುವಂತಾಗುವುದೂ ಚಿಕ್ಕೇಪಳಿರವೆಂದು ಎಲ್ಲೆಲ್ಲಿಂದಲೂ ದೂರುಗಳಿವೆ ಇದಲ್ಲದೆ ಪಕ್ಷಪಂಗಡಗಳ ಮಾತೇ ಇರದೆ, ವ್ಯಕ್ತಿಪಂಗಡಗಳಾಗಿಯೂ ಚುನಾವಣೆಗಳಾಗುತ್ತಿರುವುದೂ ನಮ್ಮ ಸಂಸ್ಥಾನದಲ್ಲಿ ತಿಳಿಯದ ವಿಷಯವಲ್ಲವೆಂದೂ ಸಂತಾಪಗೊಳ್ಳಬೇಕಾಗಿದೆ ಇದೂ ಮೆಂಬರರಿಗೆ ತಿಳಿದೇ ಇರುವ ವಿಷಯವಷ್ಟೆ

ಅಲ್ಪ ವಿಷಯಗಳಿಂದಾಗಿ, ಮಹಾಕಲ್ಲಹಗಳು ಸಮಾಜಗಳೊಳಗೂ, ಒಂದೇ ಸಮಾಜದೊಳಗೂ ಉಂಟಾಗುವುದನ್ನು ಹೋಮ್ ಮೆಂಬರರು ಉಲ್ಲೇಖಿಸಿ,—ಪರರ ಮನೋಭಾವನೆಗಳನ್ನು ತಿಳಿದುಕೊಳ್ಳುವಷ್ಟು ಔದಾರ್ಯವೂ ಸಹಿಷ್ಣುತೆಯೂ ನಮ್ಮಲ್ಲಿರುವುವಾದರೆ, ಇಂತಹ ಕ್ಷುಲ್ಲಕ ವಿಷಯಗಳು ಅಡಗಿ, ಸಮಾಜಗಳೆಲ್ಲ ದೇಶಹಿತದ ಸಲುವಾಗಿ ಒಮ್ಮತವಾಗಿ ಒಂದೆಡೆಗಾಗಿ ಸೇರಲು ಅನುಕೂಲವೆಂದೂ ವಿವರಿಸಿರುವರು. ಆದರೆ, ಸಮಾಜಗಳೊಳಗೆ ನ್ಯಾಯ ಹಂಚುತ್ತೇವೆಂದು ಒಂದನ್ನು ಮತ್ತೊಂದರ ಮೇಲೆ ಹೋರಾಡುವಂತೆ ಆತುರಗೊಳಿಸುವ ವಿದ್ಯಮಾನಗಳನ್ನು ಏಕೆ ಯಾರಿಂದಲೂ ಅಳಿಸಲಾಗುವುದಿಲ್ಲವೋ ಅವರೂ ಹೇಳಲಿಲ್ಲ

ಉಚ್ಚತರಗತಿಗಳಲ್ಲಿ ಶಿಕ್ಷಣಹೊಂದುವವರಿಂದ ಇಂತಹ ಅವಿರೋಧಭಾವವು ದೇಶದಲ್ಲೆಲ್ಲ ಹರಡುವಂತಾಗಲಿ. ವಿದ್ಯಾಸಂಸ್ಥೆಗಳಲ್ಲಿ ಸಮಾನವಾಗಿ ದೊರೆವ ಶಿಕ್ಷಣವೇ ಹೂಡಿತರುವುದೆಂದು ಅವರೆಂದರು ಆದರೆ, ಶಿಕ್ಷಿತರಲ್ಲಿ ಎಲ್ಲರಿಗೂ ಉದ್ಯೋಗಗಳು ದೊರೆವಂತಿಲ್ಲವಾದದರಿಂದ ಶಿಕ್ಷಣವನ್ನೇ ಹಳಿಯಬಾರದೆಂದೂ, ಸ್ವಸಂಸ್ಕೃತಿಗಾಗಿಯೆ ಶಿಕ್ಷಣ ಪಡೆಯಬೇಕೆಂಬ ಆಶಯವಿರಬೇಕಲ್ಲಿ ಕಾಲೇಜುಗಳನ್ನು ಮುಚ್ಚುವುದೊಳ್ಳಿದೆಂದೂ ಅವರು ನುಡಿದರು ಉತ್ತಮನಾಗರಿಕರಾಗುವುದಕ್ಕಾಗಿಯೆ ಶಿಕ್ಷಣವು ಅಗತ್ಯವೆಂದು ಮೆಂಬರರೆಂದರೂ, ಈಗಣ ಶಿಕ್ಷಣಕ್ರಮದಲ್ಲಿ ನಾಗರಿಕನಿಗೆ ಇರುವ ಹಕ್ಕು ಜವಾಬುದಾರಿಗಳನ್ನು ಕುರಿತಾಗಿ ಯಾವ ಶಿಕ್ಷಣವು ಎಷ್ಟು ದೊರೆವುತ್ತಿದೆ ಎಂದಾಗಲಿ, ನಾಗರಿಕನಿಗೂ ಇರುವ ಒಂದು ಹೊಟ್ಟೆ ಒಂದು ಕುಟುಂಬ ಇವನ್ನು ಯೋಗ್ಯರೀತಿಯಲ್ಲಿ ತೃಪ್ತಿಗೊಳಿಸಲು ಈ ಶಿಕ್ಷಣದಿಂದ ದೊರೆವುದೇನೂ ಇಲ್ಲವೆಂದು ಸರ್ ಸಪ್ರೂಗಳು ಆಗ್ರಾದಲ್ಲಿ ನುಡಿದ ಅಭಿಪ್ರಾಯಗಳನ್ನು ಟೀಕಿಸಿಯಾಗಲಿ ಮೆಂಬರರೇನೂ ಹೇಳಲಿಲ್ಲ

ಕೊನೆಗೆ,—ಈ ಕೊಲೇಜಿನಲ್ಲಿ ಶಿಕ್ಷಣ ಪಡೆವಾಗ, ವಿದ್ಯಾರ್ಥಿಗಳು ಯಾವ ಕ್ರಮಶಿಸ್ತು ಶಾಸನಗಳಿಂದ ತರಬೇತು ಹೊಂದುತ್ತಿರುವರೋ, ಅವುಗಳಿಂದ ಅವರ ಮುಂದಣ ಜೀವನದಲ್ಲಿ ಅವರಿಗೆ ಆವಶ್ಯಕವಾಗಿರುವ ಅನುಭವವೆಲ್ಲವು ದೊರೆತು, ದೇಶದ ಹಿತಸಾಧಕರಲ್ಲಿ ಹಲವು ಮುಂದಾಳುಗಳನ್ನಾದರೂ ನಿರೀಕ್ಷಿಸಬಹುದೆಂದು ಮೆಂಬರರು ಅಭಿಪ್ರಾಯಪಟ್ಟರು- ನಮ್ಮ ಜಿಲ್ಲೆಯು ಶಿಕ್ಷಣದಲ್ಲಿ ಹಿಂದುಳಿದಿಲ್ಲ; ಇದರ ಅರ್ಹತೆಯನ್ನು ಮಾತ್ರ ಗ್ರಹಿಸುವವರಿಲ್ಲದೆ ನಮಗೆ ದೊರೆಯಬೇಕಾಗಿರುವ ಸ್ಥಾನಮಾನಗಳೂ ಸರಕಾರದ ಧನಸಹಾಯವೂ ದೊರೆಯದೆ ಅದು ಹಿಂದುಳಿದಿದೆ ಎಂಬುದನ್ನು ಮೆಂಬರರು ತಿಳಿದುಕೊಂಡಿರಬಹುದೆಂದು ನಂಬುತ್ತೇವೆ

ಸ್ಫುಟವಿಚಾರಗಳು

ಚತುರಂಗದೊಡನೆ ಪಂಚರಂಗ

ಸೈನ್ಯಗಳಿಗೆ ಭೂ ಜಲ ಅಂತರಿಕ್ಷಗಳಲ್ಲಿ ಸಂಚಾರಕ್ಕೂ ಕಾದಾಟಗಳಿಗೂ ಬೇಕಾಗುವ ಸನ್ನಾಹವೂ, ಕಾದಾಳುಗಳೂ ಸೇರಿ, ಈಗ ಯುದ್ಧರಂಗಗಳಲ್ಲಿ ಚತುರಂಗವು ಸರಿಯಾಗಿರುವುದು ಆದರೆ ಇವೆಲ್ಲಕ್ಕೂ ಮೇಲಾಗಿ ಮತ್ತೊಂದು ಬಲವೂ ಬೇಕಾಗಿದೆ ಇದರ ಹೆಸರು ಸುಳ್ಳು ಎಂಬುದು ಏನೇನೂ ಸಂಕೋಚವಿಲ್ಲದೆ ಸುಳ್ಳು ಹೇಳುವುದರಿಂದ, ಹೇಳುವವರ ಸೇನೆಗೆ ಬಲವು ಹೆಚ್ಚಾಗುವುದು ಇಟಲಿಯವರು ಅಭಿಯೋಗ ಮಾಡಿ ಹಿಡಿದಿರುವ ಟಿಗ್ರೆ ಪ್ರಾಂತ್ಯದಲ್ಲಿನ ೧೬,೦೦೦ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಿದರು ನಾಲ್ಕೇ ದಿನಗಳ ಹಿಂದೆ ಅಬಿಸೀನಿಯದ ಸಮ್ರಾಟರನ್ನು ಕೊಲ್ಲುವ ಹಂಚಿಕೆ ನಡೆದಿದ್ದುದನ್ನು ಸಾರಿವಾನರು ತಿಳಿಸಿದರು, ಶುಶ್ರೂಷಾಗಾರಗಳ ಮೇಲೆ ಬೊಂಬುಗಳನ್ನು ಚೆಲ್ಲಲಿಲ್ಲ ಇತ್ಯಾದಿ ವಾರ್ತೆಗಳನ್ನು ಇಟಲಿಯವರು ಹರಡಿದ್ದರು. ಟಿಗ್ರೆ ಪ್ರಾಂತ್ಯದಲ್ಲೆಲ್ಲ ೧೬,೦೦೦ ಜನಗಳೇ ಇಲ್ಲ ಸಮ್ರಾಜರ ರಾಜಧಾನಿಯಿಂದ ಗಡಿದಂಡೆಗೆ ೧೫ ದಿನಗಳಾದರೂ ಬೇಕು, ಎಂದು ಅಬಿಸೀನಿಯದವರು ಪ್ರಕಟಿಸಿ ಮೊದಲನೆ ಎರಡು ಸುಳ್ಳುಗಳನ್ನು ಹೊರಗೆಡಹಿದರು ಎಲ್ಲ ಕಟ್ಟಡಗಳ ಮೇಲೆ ಶಾಂತಿಸೂಚಕ ಧ್ವಜಗಳಿದ್ದ ಕಾರಣ, ಆಸ್ಪತ್ರೆಗಳಾವುವು ಎಂದ ತಿಳಿಯಲಿಲ್ಲ ಎಂದು, ಮೂರನೆಯ ಸುಳ್ಳಿನಲ್ಲಿದ್ದ ಅಪರಾಧವನ್ನು ಇಟಲಿಯು ಒಪ್ಪಿಕೊಂಡಿತ ಈಗ ನೂರ ದಿನಗಳೊಳಗೆ ಸಮ್ರಾಜರು ಒಮ್ಮೆ ಎಲ್ಲ ರಾಜ್ಯಗಳನ್ನು ನೋಡಿ, ಒಬ್ಬನೇ ಅಲ್ಲದೆ ಇತರ ಯಾವ ಸರದಾರರೂ ರಾಷ್ಟ್ರದ್ರೋಹ ಮಾಡಿಲ್ಲವೆಂದು ಸಾರಿರುವ ಕಾರಣ ದಿನಕ್ಕೆ ಇಷ್ಟಿಷ್ಟು ಸಾವಿರ ಮಂದಿ ಇಟಲಿಗೆ ಸೇರುತ್ತಿದ್ದಾರೆಂಬ ದ್ರೋಹಿಗಳ ಮಾತೂ ಸಳ್ಳೆಂದೇ ಆಯಿತು ಯುದ್ಧರಂಗದಿಂದ ಬರುತ್ತಿದ್ದ ವಾರ್ತೆಗಳು, ಹೆಚ್ಚಿನ ಮಟ್ಟಿಗೆ ಅಲ್ಲಲ್ಲಿನ ಅಧಿಕಾರಿಗಳ ಕಚೇರಿಯಲ್ಲೇ ತಯಾರಾಗುತ್ತಿರುವುವು ಯುದ್ಧ ಮುಗಿದ ಬಳಿಕ ತಾನೆ, ಎಲ್ಲ ಸತ್ಯಸ್ಥಿತಿಯೂ ತಿಳಿದುಬರುವುದಿಲ್ಲವೆಂದ ಬಳಿಕ ಅಗಲೆ ಸತ್ಯವು ಹೊರಬೀಳುವುದಕ್ಕೆ ಬೊಂಬುಗಳ ಹೊಗೆಯೂ, ಕೇಳುವುದಕ್ಕೆ ಸಿಡಿಗುಂಡುಗಳ ಧ್ವನಿಯೂ ಅದನ್ನು ತಡೆವುವಷ್ಟೆ

ಕೊಂಗ್ರೆಸ್ ಪಕ್ಷೀಯರ ವಿಜಯ

ಜಿಲ್ಲಾ ಬೋರ್ಡುಗಳ ಚುನಾವಣೆಗಳಲ್ಲಿ ಈ ಪಕ್ಷದವರೇ ಹೆಚ್ಚುಹೆಚ್ಚಾಗಿ, ಎಷ್ಟೋ ಸಲ ನಿರ್ದ್ವಂದ್ವರಾಗಿಯೂ, ಅಥವಾ ಅಧಿಕ ಮತಗಳ ಬೆಂಬಲ ದೊರೆತು ಸದಸ್ಯತೆ ಪಡೆದಿರುವರು ನಮ್ಮ ಪ್ರಾಂತ್ಯದಲ್ಲಿ ಜಸ್ಟಿಸ್ ಪಕ್ಷದವರು, ಎಸೆಂಬ್ಲಿಯಲ್ಲಾಗಲಿ, ಕೌನ್ಸಿಲಿನ ಹಂಗಾಮಿ ಸ್ಥಾನಗಳಿಗಾಗಲಿ ಸ್ವಪಕ್ಷೀಯರು ಗೆದ್ದು ಬಾರದಿದ್ದರೂ, ಬೋರ್ಡು ಮ್ಯುನಿಸಿಪಾಲಿಟಿಗಳೆಲ್ಲ ತಮ್ಮವೇ ಎಂದು ಹೇಳುತ್ತಲೆ, ಎಲ್ಲರಿಗೂ ತಿಳಿದಿರುವ ಇವರ ಅಪ್ರಾತಿನಿಧ್ಯವನ್ನು ಮರೆಯಲ್ಲಿಡುವ ಪ್ರಯತ್ನ ಮಾಡಿದರು ಒಂದು ಕೋಟಿ ರೂಪಾಯಿ ಕೂಡಿಸಿ ಪ್ರಚಾರಕಾರ್ಯ ಮಾಡಬೇಕೆಂದರು ಮಂತ್ರಿಪದವಿಯು ಈ ಕೊನೆಗಾಲದಲ್ಲಿ ಹಲವು ಮಹತ್ವದ ಆದರ್ಶ ಪ್ರದರ್ಶಿಸಿ, ಹೊಸ ಕಮಿಟಿಗಳ ಮೂಲಕ ಏನನ್ನೆಲ್ಲ ಸಾಧಿಸುವೆವೆನ್ನುತ್ತಿದ್ದಾರೆ. ಹಾಗೆ ಮಾಡುತ್ತಿರುವರೋ ಇಲ್ಲವೊ ಎಂದಿದ್ದರೂ, ಕೊಂಗ್ರೆಸ್ಸಿನವರಿಗೆ ಅಧಿಕಾರ ನಿರ್ವಹಿಸಿ ಅಭ್ಯಾಸವಿಲ್ಲವೆಂದೂ, ತಾವೇ ಆಳಬಲ್ಲವರೆಂದೂ ಹೇಳುತ್ತಿರುವರು ಆದರೆ, ಕೊಂಗ್ರೆಸ್ ಪಕ್ಷವು ಗೆದ್ದು ಬಂದರೆ, ತಮಗೆ ಕೇಡುಂಟೆಂದು ಇವರು ಬಲ್ಲರು. ಜನತೆಗೆ ತಮ್ಮದೇ ಆಗಿರುವ ಕೊಂಗ್ರೆಸ್ಸಿನ ಮೇಲೆ ಪ್ರೇಮವು ಹೆಚ್ಚು. ಆದರೆ ಕೊಂಗ್ರೆಸ್ ಪಕ್ಷದವರಿಂದ ಅಧಿಕಾಧಿಕವಾಗಿ ಉಪಕಾರವನ್ನು ಜನರು ಅಪೇಕ್ಷಿಸುವರು, ಇವರಲ್ಲಿ ಕಿಂಚಿತ್ತು ಲೋಪದೋಷಗಳು ಉಂಟಾದರೂ ಜನತೆಯು ದೂರುವುದು ಧಾರಾಳವಾಗುವುದು ಆದುದರಿಂದ, ಗೆದ್ದು ಬಂದಿರುವ ಈ ಪಕ್ಷದ ಮೆಂಬರರು ಕೊಂಗ್ರೆಸಿನ ಹೆಸರಿಗೆ ಕೀರ್ತಿ ತರುವಂತೆ ಸಾಧಿಸುವುದಕ್ಕೆ ಧಾರಾಳವಾಗಿ ಎಚ್ಚರದಿಂದ ದುಡಿಯಬೇಕಾಗಿದೆ ಆಗ ತಾನೆ, ಜಸ್ಟೀಸರ ಅರ್ಥವಿಲ್ಲದ ಹೆಗ್ಗಳಿಕೆ ಕುಂದುವುದು.

ಕಾಫಿ

ನಮ್ಮ ದೇಶದಲ್ಲಿ ಉತ್ಪನ್ನವಾಗುವ ಕಾಫಿಬೀಜಕ್ಕೆ ಸಮಾನವಾದುದು ಎಲ್ಲಿಯೂ ಇಲ್ಲವೆನ್ನುತ್ತಾರೆ ಆದರೆ ಇದು ಪ್ರಚಾರದ ಕಾಲ ಇಂಗ್ಲೆಂಡಿನಲ್ಲಿ ಮಹಾಯುದ್ಧಕ್ಕೆ ಮೊದಲು ಆಮದಾಗುತ್ತಿದ್ದ ಕಾಫಿಯಲ್ಲಿ ಅರೆಪಾಲು ಇಂಡಿಯದಿಂದಲೇ ಬರುತ್ತಿತ್ತು ಕಳೆದ ವರ್ಷ ೫೧೭,೬೦೦ ಹಂಡ್ರೆಡ್ವೇಟು ಕಾಫಿ (೨೬೦,೩೦೦ ಪವನು ಬೆಲೆ) ಮಾತ್ರ ಇಂಗ್ಲೆಂಡಿನಲ್ಲಿ ಆಮದಾದರೂ, ಅದರಲ್ಲಿ ಹತ್ತರಲ್ಲೊಂದು ಪಾಲೂ ಈ ದೇಶದ್ದಾಗಿರಲಿಲ್ಲ ಸುಂಕವು ಒಂದು ಪೆನ್ನಿ (ರಾತ್ತಲಿಗೆ) ಕಡಿಮೆಯಿದ್ದರೂ, ಕಾಫಿ ಉತ್ತಮವಾಗಿದ್ದರೂ ಈ ಗತಿ ಏಕಾಯಿತು? ಫ್ರಾನ್ಸಿಗೂ ಜರ್ಮನಿಗೂ ಇಲ್ಲಿಂದ ಹೋಗುತ್ತಿದ್ದ ಕಾಫಿ ಬೀಜವೂ ಕಡಿಮೆಯಾಗಿದೆ. ಇದೆ ಕೆನಿಯಾ ಮತ್ತು ಕೋಸ್ಟರೀಕಾಗಳಿಂದ ಎಲ್ಲೆಲ್ಲಿಯೂ ಕಾಫಿ ಬೀಜವು ಸ್ಪರ್ಧೆಗೆ ನಿಂತಿದೆ ನಮ್ಮ ಕಾಫಿಯನ್ನು ಕುರಿತಂದ ಮಾಹಿತಿಯನ್ನು ಸರಿಯಾಗಿ ಪ್ರಕಟಿಸುತ್ತಿಲ್ಲ, ಒಂದು ಬಗೆಯ ಲಕ್ಷಣವಾದರೂ ಸಾಮಾನ್ಯವಾಗಿ ಉತ್ತಮ ಕಾಫಿಗೆಲ್ಲ ಇರುವಂತೆ ತೋರುವುದಿಲ್ಲ ಇದರ ವಿಷಯವು ಪೂರ್ಣ ಆಲೋಚನೆಯಾಗಬೇಕು. ಈಗ ಕಾಫಿ ಸೆಸ್ ಕಮಿಟಿಯು ಉಂಟಾಗಿರುವ ಕಾರಣ ಇನ್ನಾದರೂ ನಮ್ಮ ಕಾಫಿಯ ವ್ಯಾಪಾರವು ಮುಂಬರಿಯುವುದೆಂದು ಆಸೆಯಿದೆ

ಬೋರ್ಡುಗಳಿಗೊಂದು ಹೊಸ ಸರ್ಕಲಾರು

ಬೋರ್ಡು ಮೆಂಬರಿಕೆಗೆ ಚುನಾವಣೆ ಹೊಂದಿದವರಲ್ಲಿ ಕೆಲವರಿಗೆ ಮಾತ್ರ ಇದುವರೆಗೆ ಒಂದು ಸರ್ಕಲಾರು ಕಳುಹಲಾಗಿದೆಯಂತೆ, "ನೀವು ಯಾವ ಪಕ್ಷದವರು? ಕೊಂಗ್ರೆಸ್ ಜಸ್ಟಿಸ್ ಯಾ ಇಂಡಿಪೆಂಡೆಂಟ್?" ಎಂಬುದೇ ಪ್ರಶ್ನೆ ಈ ಅನುಭವವು ಮದ್ರಾಸಿನಲ್ಲಿರುವ ಲೋಕಲ್ ಬೋರ್ಡು ಇನ್ಸ್‌ಪೆಕ್ಟರರಿಗೆ ಕಳುಹಬೇಕಂತೆ ಈ ಅನುಭವವನ್ನು ಕಾನೂನು ಪ್ರಕಾರ ಕೇಳಬೇಕಾಗಿದೆಯೆ? ಇದರ ಉದ್ದೇಶವೇನು, ಉಪಯೋಗವೇನು? ಕೆಲವರಿಗೇ ಮಾತ್ರ ಈ ಪ್ರಶ್ನೆ ಕೇಳಿ ದೊರೆಯಬಹುದಾಗಿರುವ ಪ್ರಯೋಜನವೇನು? ಅತ್ಯಗತ್ಯವಾಗಿ ಕೂಡಲೆ ಉತ್ತರ ಬೇಕಾಗಿದೆ ಎಂಬುದೇಕೆ? ಲೋಕಲ್ ಬೋರ್ಡು ಮೆಂಬರರ ಖಾನೆಸುಮಾರಿಯಲ್ಲಿ ಈ ಪಕ್ಷವಾರಾಗಿ ಅಂಕೆಸಂಖ್ಯೆಗಳನ್ನು ಕೂಡಿಸಿ ದೊರೆವುದೇನು? ಇಂತಹ ಸರ್ಕಲಾರು ಚಿತ್ತೂರು ಜಿಲ್ಲಾ ಬೋರ್ಡಿನ ಮೆಂಬರರಿಗೆ ಬಂದುದರಿಂದ ತಾನೆ ಈ ವಿಷಯ ಪ್ರಕಟವಾಗಿದೆ ಬೋರ್ಡುಗಳಿಗೆ ಧನಸಹಾಯವೂ ಪ್ರೋತ್ಸಾಹವೂ ಇದನ್ನಾದರಿಸಿ ಇದ್ದೀತೆ?

ತಾಲೂಕುಗಳಿಂದ.

ಕೂರಾಡಿ:— ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಯು. ಕಣ್ಣಪ್ಪ ಎಮ್. ಎ. ಎಲ್. ಟಿ. ಯವರು ತಾ. ೧೩—೧೧—೧೯೩೩ರಲ್ಲಿ ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ, ಶಾಲೆಯು ಕಳೆದ ಸಾರಿ ತಾ. ೨೯—೧—೧೯೩೩ರಲ್ಲಿ ಸಂದರ್ಶಿಸಿದಾಗ ಇದ್ದುದಕ್ಕಿಂತಲೂ ಅಭಿವೃದ್ಧಿಗೊಂಡಿದೆ ಎಂದು ಮನಗಂಡರು. ಬಳಿಕ ಸಡೂರು ಎಲಿಮೆಂಟರಿ ಶಾಲೆಯನ್ನೂ ನೋಡಿ ಕೆಲಸವು ಕ್ರಮವಾಗಿ ನಡೆಯುತ್ತಿದೆ ಎಂದು ಸಂತೋಷಗೊಂಡರು.

ಮುಂದರ್ತಿ:— ಸ್ಥಳೀಯ ಹಿಂದೀ ವಿದ್ಯಾರ್ಥಿಗಳ ವಾಗ್ವರ್ಧಿನೀ ಸಭೆಯ ದ್ವಿತೀಯ ಕೂಟವು ತಾರೀಕು ೬—೧೧—೩೩ನೇ ಶುಕ್ರವಾರ ರಾತ್ರಿ ಹಿಂದೀ ಪ್ರಚಾರಕರಾದ ಶ್ರೀಯುತ ಕಟೀಲ್ ಗಣಪತಿ ಶರ್ಮಾಜೀಯವರ ನೇತೃತ್ವದಲ್ಲಿ ಜರಗಿತು.

ಹೆಗ್ಗುಂಜೆ:— ಇಲ್ಲಿಯ ಭಂಡಾರ ಬೆಂಪಲ್ ಶಾಲೆಯಲ್ಲಿ ತಾ ೧೭—೧೧ ೩೩ನೇ ಆದಿತ್ಯವಾರ ರಾತ್ರಿ ಒಂದು ಯಕ್ಷಗಾನ ಸಭೆಯು ಜರಗಿತು "ಅಂಗದ ಸಂಧಾನ ಮತ್ತು ಕೃಷ್ಣಾರ್ಜುನರ ಕಾಳಗ" ಎಂಬೀ ಪ್ರಸಂಗಗಳು ಚಲೋ ರೀತಿಯಲ್ಲಿ ನಡೆಯಿತು.

ಮೂಡಬಿದ್ರಿ:— ಈ ಸರ್ಕಲಿನ ಉಪಾಧ್ಯಾಯರ ಸಂಘದ ೫ನೇ ಸಭೆಯು ಇದೇ ನವಂಬರ ೩ರ ೩೩ರಲ್ಲಿ ಜೈನ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಾದ ಪಂಡಿತ ಲೋಕನಾಥಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ೨೦ ಶಾಲೆಗಳ ೩೫ ಮಂದಿ ಅಧ್ಯಾಪಕರು ಹಾಜರಿದ್ದರು. ಬರುವ ಸಭೆಯು ಡಿಸಂಬರ ತಾ. ೧೫ಕ್ಕೆ ಇಟ್ಟಿರುತ್ತದೆಂದು ತಿಳಿಸೋಣವಾಗಿದೆ.

ಇಲ್ಲಿಯ ಲೇಬರ್ ಶಾಲಾ ಮಾಸ್ತರ್ ಕೆ ಹಾರಿಸನ್ ಸಾಹೇಬರ ಪ್ರಯತ್ನದಿಂದ ಮುಂಬೆ ಕ್ರಾಕರ ಶಾಲೆಯ ಬೋರ್ಡ್ ಮೆಂಬರರನ್ನೂ ಅದಿಪ್ಪಾಂದ ಅಲಂಗಾರ ಮುಲ್ಲಿ ಮಗ ಶ್ರೀ ಎಂಬವರ ಗಾರ್ಡನ್ ಕೀಲ ನೇಮಕವನ್ನು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿರುವುದು ಶಿಕ್ಷಕರು ಸಂತೋಷಗೊಂಡಿದ್ದಾರೆ.

ಕೆರಂದಾಡಿ:— ಇಲ್ಲಿಯ ಕೇಂದ್ರದಲ್ಲಿ ಕಳೆದ ಸಪ್ಪಂಬರ ತಿಂಗಳಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾಥಮಿಕ ಪರೀಕ್ಷೆಯಲ್ಲಿ ನಿಂತ ಇಬ್ಬರಲ್ಲಿ ರಾ ಸ ಬಟ್ಟಕಟ್ಟ ಮತ್ತು ರಾ ಪದ್ಮನಾಭ ಸೆಟ್ಟಿ ಇವರಿಬ್ಬರೂ ಪ್ರಥಮ ಶ್ರೇಣಿಯಲ್ಲಿಯೂ ಮಾರ್ಚ ಮಿಕ ಪರೀಕ್ಷೆಗೆ ನಿಂತ ಮೂವರಲ್ಲಿ ರಾ ಸಿಂಗಪ್ಪಯ್ಯ ಪ್ರಥಮ ಶ್ರೇಣಿ ತಿ ಶಿಲೀಂದ್ರಶೆಟ್ಟಿಯವರು ಮತ್ತು ಶ್ರೀಮತಿ ಸುಮಿತ್ರಾಬಾಯಿ ಈ ಮೂವರು ದ್ವಿತೀಯ ಶ್ರೇಣಿಯಲ್ಲಿಯೂ ಉತ್ತೀರ್ಣ ಹೊಂದಿರುವುದು ಈ ಕೇಂದ್ರಕ್ಕೆ ಶ್ರೇಯಸ್ಕರವು.

ಕಾರ್ಕಳ:— ಶ್ರೀವಿದ್ಯಾಸಾಲಿ ವೈಶ್ಯವರ್ಮಸೇವಾ ಯುವಕಸಂಘದ ತೃತೀಯ ವಾರ್ಷಿಕ ವರ್ಧಂತಿಯು ಇದೇ ಬರುವ ಡಿಸಂಬರ ತಾ ೧೧ನೇ ರವಿವಾರ ಮಿ ರಾ ಬಿ. ವಾಮನ ಶೆಟ್ಟಿಗಾರ ಬಿ ಎ ಯವರ ಅಧ್ಯಕ್ಷತೆಯಲ್ಲಿ ಬ್ಯಾರಿಸ್ಟರ್ ಶ್ರೀ ವೀರಭದ್ರಸಿಂಯರ ನೇತೃತ್ವದಲ್ಲಿ ಪ್ರಭಾತಫೇರಿ ವೈದಿಕ ಧ್ವಜವಂದನೆ, ದೇವತಾರಾಧನೆ, ವಿನಷ್ಟೂರ್ಣ ಸಂಕೀರ್ತನೆ ಸಾರ್ವಜನಿಕ ಸಭೆಗಳೇ ಮೊದಲಾದ ಹಲವು ಕಾರ್ಯಕ್ರಮಗಳಿಂದ ಜರಗಲಿದೆ. ಶಿಕ್ಷಯನ್ನು ಕೊಡುವುದರಿಂದ ಸಮಾಜಬಾಂಧವರೂ ಗಳಾದ ಊರ ಪರವೂರ ಸರ್ವ ಸಜ್ಜನರು ಮಹನೀಯರೂ ಇಷ್ಟಮಿತ್ರರಿಂದೊಡಗೂಡಿ ಚಿತ್ತೈಸಿ ಸಂಘದ ಹಾಗೂ ಸಮಾಜದ ಭಾವೀ ಅಭ್ಯುದಯಕ್ಕೆ ತಕ್ಕ ಹಿತ ಸೂಕ್ತ ಅಭಿಪ್ರಾಯಗಳನ್ನಿತ್ತು ಪ್ರೋತ್ಸಾಹಿಸಬೇಕಾಗಿ ಸ್ವಾಗತಕಮಿಟಿಯ ಪರವಾಗಿ ಅಧ್ಯಕ್ಷ ಶ್ರೀ ಕೆ ಮುತ್ತಯ್ಯ ಶೆಟ್ಟಿಗಾರರವರೂ, ಜೊತೆಕಾರ್ಯದರ್ಶಿಯರಾದ ರಾ ಬ್ರಹ್ಮಾನಂದ ಮತ್ತು ಕೆ. ಸುಬ್ಬಯ್ಯ ಶೆಟ್ಟಿಗಾರರವರೂ ವಿನಯಪೂರ್ವಕವಾಗಿ ವಿನ್ನವಿಸುತ್ತಾರೆ.

ತೋಕೂರು ಜೋಗಟ್ಟೆ:— ಸುರತ್ಕಲ್ಲಿನಿಂದ ಬಜಪೆಗೆ ಹೋಗುವ ದಾರಿಯ ೩ನೇ ಮೈಲಿಗಲ್ಲಿನ ಹತ್ತಿರ ಒಂದು ರಸ್ತೆಯು ತೋಕೂರು ಜೋಗಟ್ಟೆ ಪೇಟೆಗೆ ಬಂದಿದೆ. ಈ ರೋಡು ೩ನೇ ಮೈಲುಕಲ್ಲಿನ ವರೆಗೆ ಬಂದು ಅಲ್ಲಿ ನಿಂತಿರುತ್ತದೆ. ಇನ್ನು ಅಲ್ಲಿಂದ ಜೋಕಟ್ಟೆಯ ಸ್ಥಳದ ವರೆಗೆ ಸದರಿ ರಸ್ತೆಯನ್ನು ಮುಂದರಿಸಬೇಕೆಂದು ಜಿಲ್ಲಾ ಬೋರ್ಡಿನವರು ಆಲೋಚನೆಯಲ್ಲಿದ್ದಾರೆ. ಇನ್ನು ರಸ್ತೆ ಮುಂದರಿಸುವ ಸ್ಥಳವು ತೋಕೂರು ಗ್ರಾಮದ ರಾ ಅಪ್ಪಸೆಟ್ಟಿ ಸಾಹುಕಾರ ಯವರ ಪಟ್ಟಾಸ್ಥಳವಾಗಿದೆ. ಪಡೋಜಾರರ ಬಗ್ಗೆ ಉದಾರಮನಸ್ಸಿನಿಂದ ಊರವರ ಅಪೇಕ್ಷೆಯಂತೆ ಸದರಿ ಸಾಹುಕಾರರಯವರು ತನ್ನ ವರ್ಗದ ಆಸ್ತಿಯಲ್ಲಿ ರಸ್ತೆ ಹೋಗುವ ಬೈಸಿನ ಸ್ಥಳವನ್ನು ರಿಜಿಸ್ಟರುಮಾಡಿ ಬೋರ್ಡಿಗೆ ಧರ್ಮಾರ್ಥವಾಗಿ ಕೊಟ್ಟುಕೊಟ್ಟಿರುತ್ತಾರೆ.

ಕೆನರಾ ಮಹಮ್ಮದನ್ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರು ಇಲ್ಲಿಗೆ ಬಂದು, ಇಲ್ಲಿಯ ಮಹಮ್ಮದಿ ಬೋರ್ಡು ಶಾಲೆಯ ವರ್ಷಾವಧಿ ಪರೀಕ್ಷೆಯನ್ನು ತಾ. ೧೯—೧೧—೩೩ರಲ್ಲಿ ನಡೆಸಿದರು.

ಇಲ್ಲಿನ್ನ ಸಹಕಾರಸಂಘದ ಹಣದಿಂದ ಇಲ್ಲಿ ಒಂದು ಭಕ್ತಿಯನ್ನು ಕಟ್ಟಿಸುವ ಬಗ್ಗೆ ಸರಕಾರದ ಜಾಗವನ್ನು ರಿಜಿಸ್ಟ್ರಾರ್‌ಸಾಹೇಬರು ಬಿಟ್ಟುಕೊಟ್ಟಿರುತ್ತಾರೆ.

ತೆಂಕಾರು ಮತ್ತು ತೋಕೂರು ಈ ಎರಡು ಗ್ರಾಮಗಳ ಮಧ್ಯೆಗೆ ಒಂದು ಸಹಕಾರ ಸಂಘ ಇನ್ನು ಹೊಸತಾಗಿ ತೆರೆಯುವ ಹಾಗೆ ಮಾಡಬೇಕೆಂದೂ ಸದರಿ ಸಂಘದ ಆಫೀಸನ್ನು ಜೋಗಟ್ಟೆಪೇಟೆಯಲ್ಲಿ ಇಡುವ ಹಾಗೆ ವಿಚಾರ ಮಾಡಬೇಕೆಂದೂ ಊರವರು ಆಲೋಚನೆಯಲ್ಲಿದ್ದಾರೆ.

ಕಳವಾರು:— ಇಲ್ಲಿಯ ಸರ್ಕಲಿನ ಉಪಾಧ್ಯಾಯರ ಸಂಘದ ಸಭೆಯು ತಾರೀಕು ೧೬—೧೧—೩೩ರಲ್ಲಿ ಕಳವಾರು ಇಗರ್ಜಿಯ ಅಸಿಸ್ಟೆಂಟ್ ಗುರುಗಳಾದ ಫಾದರ್ ಎಮ್ ಜೆ ಮೆನೇಜಸ್‌ರವರ ಅಧ್ಯಕ್ಷತೆಯಲ್ಲಿ ಸೆಂಟ್‌ಜೋಸೆಫ್ ಶಾಲೆಯಲ್ಲಿಯೇ ಜರಗಿತು. ಈ ಸಂಘದ ವರ್ಧಂತಿಯನ್ನು ತಾರೀಕು ೨೯—೧೨—೩೩ನೇ ದಿನ ಜರಗಿಸುವುದೆಂದು ತೀರ್ಮಾನ ಆದಮೇಲೆ ಸಭೆಯು ಮುಕ್ತಾಯವಾಯಿತು.

ಕರಂಬಾರು:— ಕೆನರಾ ಮಹಮ್ಮದನ್ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರು ಇಲ್ಲಿಯ ಹಿಂದೂ ಬೋರ್ಡು ಶಾಲೆಯನ್ನು ಸಂದರ್ಶಿಸಿ ಈ ಶಾಲೆಯ ವಿದ್ಯಾರ್ಥಿಗಳು ಮಹಮ್ಮದಿ ಮಕ್ಕಳಿಗೆ ಆಟ ಮತ್ತು ಉರ್ದು ಕಲಿಸುವ ವಿಷಯ ಕೆಲವು ಸೂಚನೆಗಳನ್ನು ಕೊಟ್ಟು ಇಲ್ಲಿಂದ ಜೋಗಟ್ಟೆಯತ್ತ ಕಡೆಗೆ ತೆರಳಿದರು.

ಬಜಪೆ:— ಈ ಪೇಟೆಗೆ ಸರಕಾರಿ ಅಬಕಾರಿ ಒಂದು ಇಲ್ಲಿ ನಿಲುವಿನ ದಿನಗಳ ವರೆಗೆ ಇದ್ದು ಕೆಲವು ಏರ್ಪಾಟುಗಳನ್ನು ಅದಿತೀಯೆನು, ಇಲ್ಲಿಂದ ತಾ ೧೯ ೧೧ ೩೩ರಲ್ಲಿ ಮಂಗಳೂರುಪೇಟೆ ಅತ್ತ ಕಡೆಗೆ ಹೋಗುತ್ತಾರೆ.

ಮೂಲ್ಕಿ:— ಹಿಂದೆ ಪ್ರಚುರಪಡಿಸಿದ ತೆ ಇದು ಕಳೆದ ತಾ ೧೬—೧೧—೩೩ನೇ ರವಿವಾರ ಅಪರಾಹ್ನ ಗಂಟೆ ೪ಕ್ಕೆ ಮಂಗಳೂರಿನ ವಿಷ್ಣುಕೀರ್ತನಾ ಸಂಘದ ವಿದ್ವಾಂಸರುಗಳಾದ ಆಗುವ ಮಿ ರಾ ಶ್ರೀ ರಾಮಕೃಷ್ಣರಾವ್ ಅವರಿಂದ ಬಿ ಎ ಬಿ ಎಲ್ ರವರು "ಶ್ರೀ ಕೃಷ್ಣಸಂದೇಶ" ಎಂಬ ವಿಷಯವನ್ನೆತ್ತಿಕೊಂಡು ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಸ್ವಾರಸ್ಯಯುಕ್ತವಾದ ಭಾಷಣಮಾಡಿದರು. ಜನನಿಬಿಡರಾಗಿದ್ದ ವಿಶೇಷ ಇತ್ತು.

ಮಲಬಾರ್ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳು ಇದೇ ಕಳೆದ ತಾ ೧೮ರಿಂದ ಇಲ್ಲಿ ಮೊಕ್ಕಾಂ ಮಾಡಿಕೊಂಡಿದ್ದು ಸ್ಥಳೀಯ ಪೋಲೀಸ್ ಸ್ಟೇಶನ್ ತನಿಖೆ ನಡೆಸಿ, ತಾ ೨೦ರಲ್ಲಿ ಹಿಂತಿರುಗಿದರು. ಸಪ್ತದ್ವೀಪ ದೊರೆಗಳು ತಾ ೨೧—೧೧—೩೩ನೇ ಸಾಯಂಕಾಲ ಸ್ಥಳೀಯ ಯೂನಿಯನ್ ಕ್ಲಬ್ಬನ್ನು ಸಂದರ್ಶಿಸಿ ಸುಮಾರು ೧ ತಾಸು ಕ್ಲಬ್ಬಿನಲ್ಲಿದ್ದು ಸಮಾಧಾನಚಿತ್ತರಾಗಿ ಒಳ್ಳೇ ಅಭಿಪ್ರಾಯ ಬರೆದುಕೊಟ್ಟರು.

ಈ ಸರ್ಕಲಿನಿಂದ ನಮ್ಮ ಊರಿನವರೇ ಆಗಿರುವ ಶ್ರೀಮಾನ್ ಎ ಬಿ ಶೆಟ್ಟಿ, ಎಮ್ ಎಲ್. ಸಿ ರವರು ಪ್ರತಿಸ್ಪರ್ಧಿಯಿಲ್ಲದೆ ಡಿಸ್ಟ್ರಿಕ್ಟ್‌ಬೋರ್ಡಿಗೆ ಚುನಾಯಿತರಾಗಿದ್ದುದು ಈ ಊರಿಗೇ ಭೂಷಣಾಸ್ಪದವಾಗಿದೆ. ಅವರಿಗೆ ನಮ್ಮ ಅಭಿನಂದನೆಗಳು.

ನಮ್ಮ ಜಿಲ್ಲಾ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ್ ಶ್ರೀ ಯು. ಕಣ್ಣಪ್ಪ ಎಂ. ಎ. ಎಲ್. ಟಿ ರವರು ಮಂಗಳೂರು ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವಶೆಟ್ಟಿ ಎಮ್. ಎ. ಎಲ್. ಟಿ. ರವರೊಂದಿಗೆ ತಾ. ೧೨—೧೧—೩೩ರಿಂದ ಇಲ್ಲಿ ಮೊಕ್ಕಾಂ ಮಾಡಿಕೊಂಡಿದ್ದು, ಸ್ಥಳೀಯ ಸ್ಕೂಲಿನ ವರ್ಷಾವಧಿ ತನಿಖೆ ನಡೆಸಿ ತಾ. ೧೩ರಲ್ಲಿ ಹಿಂತಿರುಗಿದರು.

ಸ್ಥಳೀಯ ಮೆಡಿಕಲ್ ಆಫೀಸರ್ ಶ್ರೀ ಎಮ್ ಉಪೇಂದ್ರನಾಥ್ ಎಲ್. ಎಮ್. ಎಂಡ್ ಎಸ್. ರವರು ಹಿಂದೀ ವಿದ್ಯಾರ್ಥಿಗಳೂ ಹಿಂದೀ ಪ್ರೇಮಿಗಳೂ ಇದೇ ಕಳೆದ ತಾ ೧೩ರಲ್ಲಿ ಆಸ್ಪತ್ರೆಯಲ್ಲಿ ಒಂದು ಉಪಹಾರವನ್ನು ಕೊಟ್ಟರು. ಈ ಸಂದರ್ಭದಲ್ಲಿ ಮಂಗಳೂರು ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರೂ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಹಾಶಯರೂ ಉಪಸ್ಥಿತರಿದ್ದರು.

ಸ್ಥಳೀಯ ಸರ್ಕಲಿನ ಉಪಾಧ್ಯಾಯರ ಸಂಘದ ಸಾಧಾರಣ ಸಭೆಯು ಇದೇ ತಾ ೩೦—೧೧—೩೩ರಲ್ಲಿ ಕೊಲಕಾಡಿ ವಿದ್ಯಾಪ್ರದಾಯಿನೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಲಿರುವುದು. ಅಂದು ಮೂಲ್ಕಿ ಬೋರ್ಡು ಹಾ. ಎ ಶಾಲಾ ಸಹಾಯಕ ಉಪಾಧ್ಯಾಯ ಶ್ರೀ ಯು ಮುಂಡಪ್ಪ ಶಿ. ಉಪೇಂದ್ರರಾಯರು ಸಭಾಧ್ಯಕ್ಷರಾಗಿದ್ದರು ಹೆಜಮಾಡಿ ಬೋರ್ಡು ಹಾ ಎ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ ಎಚ್ ಕೆ ಗುಂಡಪ್ಪಯ್ಯನವರು "ಕರಗುಣಿಕರಣ" ಎಂಬ ವಿಷಯದ ಮೇಲೆ ಒಂದು ಉಪನ್ಯಾಸವನ್ನು ಓದಲಿದ್ದಾರೆ. ಮುಂದಿನ ತಿಂಗಳ ಸಭೆಯು ತಾ ೧೪—೧೨—೩೩ನೇ ರವಿವಾರ ಅಥವಾ ಸ್ಥಳೀಯ ಬಿ ಎಮ್ ಅನಾಥ ಹುಡುಗಿಯರ ಶಾಲೆಯಲ್ಲಿ ಕೂಡಲಿರುವುದು.

ಸ್ಥಳೀಯ ಯೂನಿಯನ್ ಕ್ಲಬ್ಬು ೧೯೩೧ನೇ ಇಸವಿಯ ೨೧ನೇ ಆಕ್ಟ್ ಪ್ರಕಾರ ರಜಿಸ್ಟರುಮಾಡಲ್ಪಟ್ಟು ರಜಿಸ್ಟ್ರೇಶನ್ ಸರ್ಟಿಫಿಕೇಟು ಇದೇ ಕಳೆದ ತಾ ೧೫ ೧೧ ೩೩ರಲ್ಲಿ ಒದಗಿದೆಯೆಂದು ತಿಳಿದುಬರುತ್ತದೆ.

ಪುತ್ತೂರು:— ತಮ್ಮ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಯಲ್ಲಿ ಪುತ್ತೂರು ಸರ್ಕಲಿನಿಂದ ನಮ್ಮ ಟಿ ಟಿನ್ನಪ್ಪನವರನ್ನು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ, ಸಹಕರಿಸಿದ ಪುತ್ತೂರು ಡಿಸ್ಟ್ರಿಕ್ಟ್‌ಬೋರ್ಡು ಸರ್ಕಲಿನ ವೋಟರರಿಗೆ ಮತ್ತು ಮುಖಂಡರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಶ್ರೀಯುತರವರ ಅಭಿಮತವನ್ನು ಸಾಧಿಸಿ ನೋಡುವೆವು. ಸದಾ ... ಪೆಂಬಲಕ್ಕೆ ಸಿಟ್ಟಿಸುವ ನಿಮ್ಮ ಸೇವೆಗೆ ಒಟಿಕಿ ಅರಿಯದ್ದ ಒಂದಿಗಳು.

ಪಿತ್ತೂರು:— ಕಳೆದ ತಾ ೨೩ ೧೧—೩೩ನೇ ದಿನ ರಾತ್ರಿ ೮ ಗಂಟೆಗೆ "ಸೀತಾಕಲ್ಯಾಣ" ಎಂಬ ಹರಿಕಥೆಯು ಶ್ರೀಯುತ ಕೆ ಎಸ್ ಪರಮೇಶ್ವರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶ್ರೀಮತಿ ಶಾರದಾ ಪದ್ಮಾವತಮ್ಮನವರಿಂದ ಜರಗಿ ೧೧ ಗಂಟೆಗೆ ಅಂತ್ಯಗೊಂಡಿತು. ಜನಸ್ತೋಮವು ಸಾಧಾರಣ ಹೆಚ್ಚಾಗಿತ್ತು. ಈ ಸಂದರ್ಭದಲ್ಲಿ ಇದ್ದ ಗ್ರಾಮಸ್ಥರಿಂದ ಸರ್ವೋದಯ ಪೂಜಾ ಯಿಯ ಮಗ ಮೋಹನ್ ಶ್ರೂದಿಂಗೆ ರಾಜಾ ಮುಖ್ಯೋಪಾಧ್ಯಾಯರ ಮೂಲಕ ಅಧ್ಯಕ್ಷರಿಂದ ಪದ್ಮಾವತಿ ಕವರಿಗೆ ಒಂದು ಚಿನ್ನದ ಪದಕವನ್ನು ಕೊಡಿಸಿದರು.

ಉಡುಪಿ:— ತಾ. ೨೧ಕ್ಕೆ ಶ್ರೀ ಸ್ವಾಮಿ ಸತ್ಯಾನಂದ ಶಿವ ಮತ್ತು ಬ್ರಹ್ಮಾನ ಗಳಿಲ್ಲ ಶ್ರೀಕೃಷ್ಣ ಕಾಂಗ್ರೆಸು ಉಡುಪಿ ಶಾಖೆಯ ವಿದ್ಯಾರ್ಥಿಗಳ ... ಸರ್ವ ಸ್ತ್ರೀಪುರುಷರ ಚಿಸ್ಟ್ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪ್ರತಿನಿಧಿಗಳಾದ ಅದಕ್ಕೆ ಜಯಗ್ಯ ತರ ಕುಂತು ಪ್ರಸ್ತಾಪ ೪ ಮಧ್ಯಾಹ್ನದ ಅಹಾರ ವಿರಾಮ ಗಿ ಇದು ಊಟ ಶಿಬಿರದಲ್ಲಿ ಶ್ರೀ ರಾ ಪಿ ಜಿ ಅಚಾರ್ಯರಲ್ಲಿದ್ದಾಗ ಒಹು ಜನರ ಅಪೇಕ್ಷೆ ಮೇರೆಗೆ ಇಲ್ಲಿ ಭಾಷಣ ಪೊಂದಿರಬೇಕೆಂದು ವಿದ್ಯಾರ್ಥಿಗಳ ... ಅಂತೆಯೇ ಅಂದು ಸಾಯಂಕಾಲ ೫ ತಾಸಿಗೆ ಶ್ರೀ ರಾ ಕೃಷ್ಣ ಥಿಯೇಟರಿನಲ್ಲಿ ಫರ ಸಭೆಯು ಡಾ ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ ಸತ್ಯಾನಂದರು ಕಾಂಗ್ರೆಸು ದರ್ಮ ಒಂದು ಅರ್ಥಗರ್ಭಿತವಾದ ಭಾಷಣವನ್ನಿತ್ತು ಜನರ ಮನಸ್ಸನ್ನು ಸಂತೋಷಗೊಳಿಸಿದರು.

ತಾ. ೨೩ನೇ ಸಾಯಂಕಾಲ ೬—೩೦ ಕ್ಕೆ ಶ್ರೀ ಪಾರ್ಶ್ವನಾಥಸ್ವಾಮಿ ಕೇತ್ರದಲ್ಲಿ ಸ್ಥಳೀಯ ... ದ ನರಸಿಂಹ ಪ್ರಸೂತಿ ... ಗಳ ನಿಮಿತ್ತವಾಗಿ ಸಮಾರಂಭವಿತ್ತು. ರಾತ್ರಿ ೧೧—೩೦ರ ವರೆಗೂ ಜರುಗಿತು. ಆಟಪಾಟಗಳು ಪ್ರದರ್ಶನಗಳು ಮುಂತಾದ ವಿಷಯಗಳು ಅತಿಸುಂದರವಾಗಿದ್ದು ಮಕ್ಕಳ ಸಮಯ ದಿವ್ಯವಾಗುವಂತೆ ಸಂಬಂಧಪಟ್ಟವರು ಏರ್ಪಡಿಸಿದ್ದರು. ಪಟ್ಟಣದ ಹೆಚ್ಚಿನ ಸಂತೋಷ ಪ್ರಯೋಜನವಾದುದೆಂದು ಜನರ ಅಭಿಪ್ರಾಯ.

ಅಂದು ರಾತ್ರಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸ್ಥಳೀಯ ಹಿಂದೂ ಮುಸಲ್ಮಾನರ ಐಕ್ಯತೆಗಾಗಿ ಅವರಿಂದ ಪಂಚಾಚ ನಾಕ್ಷುಮಾರಿ ... ಸಾರ್ವಜನಿಕ ಕರ್ನಾಟಕ ಸಂಗೀತ ನಾಟಕವು ಇಲ್ಲಿನ ಶ್ರೀ ಕೃಷ್ಣ ವಾಚನಾಲಯದ ಸಹಾಯಾರ್ಥವಾಗಿ ಪುನಃಪ್ರಯೋಗಿಸಲ್ಪಡುವ ಅಭಿನಯಿಸಲಾಯಿತು. ತರುಣರ ಪ್ರಯತ್ನವು ಆದರಣೀಯವಾಗಿತ್ತು. ನನ್ನಿ ನಾಟಕವನ್ನು ಶ್ರೀ. ಪಿ ಶೀನಸೆಟ್ಟಿ ಬರೆದಿದ್ದು ನಾಟಕ ಪಾತ್ರವನ್ನು ವಹಿಸಿದ್ದರು.

ಮಂಗಳೂರು.

ಬರುವ ಮಾರ್ಚ ತಿಂಗಳಲ್ಲಿ ನಡೆಯಲಿರುವ ಕೇಂದ್ರ ಶಾಸನ ಸಭೆಗೆ ನಮ್ಮ ಜಿಲ್ಲೆಯಿಂದ ೯ ಮಂದಿ ಪ್ರತಿನಿಧಿಗಳನ್ನು ಆರಿಸಬೇಕಾಗಿದೆ. ಈ ಪೈಕಿ ೩ ಮಂದಿಯನ್ನು ಪಟ್ಟಣದ ಸದಸ್ಯರೂ ೬ ಮಂದಿಯನ್ನು ಜಿಲ್ಲೆಯ ಇತರ ಭಾಗಗಳ ಸದಸ್ಯರೂ ಚುನಾಯಿಸಬೇಕಾಗಿದೆ. ಹೀಗೆ ಚುನಾಯಿಸಲ್ಪಟ್ಟವರು ಬಳಿಕ ವರ್ಗದ ಪ್ರಾಂತಿಕ ಕಮಿಟಿಯ ಸದಸ್ಯರಾಗುವರು. ಮತ್ತು ಅವರು ಸಭೆಗೆ ಹೋಗಲು ಸಿದ್ಧರಾದವರಿರಬೇಕು. ಉಮೇದ್ವಾರರು ಕಳೆದ ಜೂನ ತಿಂಗಳ ತಾ ೧೫ರ ಮೊದಲೇ ಕಾಂಗ್ರೆಸಿನ ಸದಸ್ಯರಾದವರಿದ್ದು, ಕಾಂಗ್ರೆಸ್ಸಿನ ನಿಯಮದಂತೆ ಪ್ರಮು ಜೀವಿ ಖಾದಿಧಾರಿ ಇರಬೇಕು. ... ಉಮೇದ್ವಾರರು ಇದೇ ತಾ. ೩೦ರೊಳಗೆ ಉಮೇದ್ವಾರಿ ಜಿಲ್ಲಾ ಕಮಿಟಿಯ ಕಾರ್ಯದರ್ಶಿ, ಮಂಗಳೂರು ಇವರಿಗೆ ತಮ್ಮ ಅರ್ಜಿಗಳನ್ನು ಕಳುಹಿಸಿಕೊಡತಕ್ಕದು. ಅಲ್ಲದೆ ಡಿಸಂಬರ ತಾ ೧೫ರಲ್ಲಿ ಎಲ್ಲಾ ತಾಲೂಕು ಕಾಂಗ್ರೆಸ್ ಕಮಿಟಿಗಳು ತಮ್ಮ ತಾಲೂಕಿನಲ್ಲಿ ಇರುವ ಎಲ್ಲಾ ಸದಸ್ಯರ ಸಭೆಗಳನ್ನು ಅಲ್ಲಲ್ಲಿ ಕೂಡಿಸಿ ತಾ ಕಮಿಟಿಯ ಸದಸ್ಯರನ್ನೂ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳನ್ನೂ ಕಾಂಗ್ರೆಸಿನ ಪ್ರತಿನಿಧಿಗಳನ್ನೂ ಅಲ್ಲದೆ ಆರಿಸುವ ... ಕಾಂಗ್ರೆಸಿಗೆ ಪ್ರತಿನಿಧಿಗಳನ್ನು ಆರಿಸತಕ್ಕದ್ದು. ತಾಲೂಕು ಕಮಿಟಿಗಳು ಜಿಲ್ಲಾ ಕಮಿಟಿಗೆ ಚುನಾಯಿಸುವ ಪ್ರತಿನಿಧಿಗಳ ಸಂಖ್ಯೆ— ಮಂಗಳೂರು ೧೦ ಕಾರ್ಕಳ ೬ ಕಾಸರಗೋಡು ೨ ಪುತ್ತೂರು ೬ ಉಡುಪಿ ೩ ಕುಂದಾಪುರ ೩ ಎಂದು ಜಿಲ್ಲಾ ಕಾ ಕಮಿಟಿಯ ಅಧ್ಯಕ್ಷರು ತಿಳಿಸುತ್ತಾರೆ.

ಇಲ್ಲಿಯ ಕ್ರಿಸೆಂಟ್ ಕ್ಲಬ್ಬಿನ ಲಿಟರರಿ ಸೊಸೈಟಿಯ ಪ್ರಥಮ ಸಭೆಯು ನವಂಬರ ತಾ. ೨೩ರಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ್ ಜನಾಬ್ ಅಬ್ದುರ್ರಹೀಮ್ ಸಾಹೇಬ್ ಬಿ.ಎ. ಬಿ. ಎಲ್. ಎಲ್. ಬಿ ಬಾರ್ ಆಟ್ ಲಾ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ "ಸಂಘವು ಅವನ ಸ್ಪರ್ಧಿಗಳಿಗೆ" ಎಂಬುದರ ಕುರಿತು ಬಿ ಮೋಹಿಯದ್ದೀನ್ ಸಾಹೇಬರ ಅಧ್ಯಕ್ಷ ಸದ್ದೀನ್ ಮಹಮ್ಮದ್ ಅಬ್ದುಲ್ ಖಾದರ್ ಸಾಹೇಬ್ ಬಿ. ಎ ಇವರು ಭಾಷಣ ಮಾಡಿದರು.

ಕ್ರೈಸ್ತ ಭಕ್ತರ ಸಂಘ ಅಲ್ಲಿಯ ಜನರ ಮುಖ್ಯ ಸ್ಥಳಗಳನ್ನು ಹೋಗಿ ನೋಡಿದಕ್ಕೆ ಮಂಗಳೂರಿನಿಂದ ಶ್ರೀ ಪಿ ಆರ್ ಎಸ್ ಡಿಸೋಜ ಬಿ ಎ ಎಲ್ ಇವರಿಗೆ ಬಿ ಡಿ ಇ ಪದವಿಯು ದೊರೆತಿದೆ ಎಂದು ತಿಳಿಸಲು ಸಂತೋಷ.

"ಜಿಲ್ಲೆಯ ಅನೇಕ ಎಂಪ್ಲಾಯ್‌ಮೆಂಟುಗಳಲ್ಲಿ ಬಹಿಷ್ಕಾರದ ಸಮಯ ... ಕಾಗದಗಳನ್ನು ಸಂಗ್ರಹಿಸಿದರು. ರಮ್ಯವಾದ ನಿಸರ್ಗಕ್ಕೆ ಅಗತ್ಯ ಸಂಗ್ರಹಿಸಿದವರಿಗೆ ಸಂಘದ ಪರವಾಗಿ ಬಹುಮಾನ ವಿತರಿಸಬೇಕೆಂದು ಇದ್ದು ಸಂದರ್ಶಿಸುವವರ ಪಟ್ಟಿ ಬೇಕಾಗುತ್ತದೆ. ಈ ಕೆಳಗಿನ ಸ್ಥಳಗಳನ್ನು ಸಂದರ್ಶಿಸುವರು. ೧೯೩೩ನೇ ಇಸವಿ ಜನವರಿಯಲ್ಲಿ ಮತ್ತೆ ಪತ್ರಿಕೆ ಸ್ಥಳಗಳನ್ನು ಜಿಲ್ಲಾ ಕಲೆಕ್ಟರರು ಮತ್ತು ಇನ್ನಿತರರು ಸಂದರ್ಶಿಸುವಾಗ ಬಿಟ್ಟವರು ತಮ್ಮ ಸಂಗ್ರಹಗಳನ್ನು ಹೋಲಿಸಬೇಕಾಗುವುದು ಹೀಗೆ ನಿಜವಾಗಿ ಸಂಗ್ರಹಿಸಿದ್ದರೆ ಬೇಕೆನಿಸಿದ್ದನ್ನು ಕೇಳಿ ಸರ್ಕಾರಕ್ಕೆ ಒಪ್ಪಿಸಲು ಅನುಮತಿಯಿತ್ತಾರೆ. ಆದಕಾರಣ ಈಗ ಮನಸ್ಸು ಬೇಕೆಂಬವರು ಸಂದರ್ಶಿಸುವಾಗ ಅಲ್ಲಲ್ಲಿನ ... ಮುಂದೆ ಬಂದು ತಮ್ಮ ಸಂಗ್ರಹಗಳನ್ನು ತೋರಿಸಬೇಕೆಂದು ಅಪೇಕ್ಷಿಸುತ್ತೇನೆ. ಡಿಸಂಬರ ತಾ. ೧೯ನೇ ಬುಧವಾರ ಬೆಳಿಗ್ಗೆ ಪುತ್ತೂರು ತಾಲೂಕಿನ ಕಡಬವನ್ನು ಬಿಟ್ಟು ... ತಾ ೫ನೇ ಗುರುವಾರ ಬೆಳಿಗ್ಗೆ ಕಾರ್ಕಳ ತಾಲೂಕಿನ ಹೊಸಬೆಟ್ಟು ಎಂಬ ಗ್ರಾಮವನ್ನು ... ತಾ. ೬ನೇ ಶುಕ್ರವಾರ (ಬೆಳಿಗ್ಗೆ)-ಸೋಮೇಶ್ವರ ಗ್ರಾಮ) ... ಎಂದು ಶ್ರೀ ಕೆ ಸಿ ರಾಮಸ್ವಾಮಿ, ಸರಕಾರ ಜಿಲ್ಲಾ ಫಾರೆಸ್ಟರು ಸಂಘ ಇವರು ತಿಳಿಸುತ್ತಾರೆ.

ಇದೇ ನವಂಬರ ತಾ ೨೬ರಲ್ಲಿ ಸಾಹೇಬ ಮಹಂತನ್ ಇಲ್ಲಿಯ ಮುನಿಸಿಪಲ್ ಕೌನ್ಸಿಲಿನ ವಿಷಯವಾಗಿ ಅವರ ಅಧಿಕಾರದಲ್ಲಿ ನಡೆಯುವುದು.

ಇಂಡಿಯಾ ಸರಕಾರದ ಪೂನ ಮೆಟೆರಿಯೊಲೊಜಿಕಲ್ ಶಾಖೆಯ ಅಧಿಕಾರಿ ಪ್ರಸಿದ್ಧರಾದ ಡಾ ಆರ್. ಎಸ್. ಸರ್ಪೂರರವರು ಇಲ್ಲಿಗೆ ಬಂದಿದ್ದು, ಇಲ್ಲಿ ಕೆಲವು ದಿನಗಳ ಮೊಕ್ಕಾಂ ಮಾಡುವರು.

ಏಸ್. ಎಮ್. ಎಸ್. 'ಇಂಡಿಯ' ಸುಪರಿಂಟೆಂಡೆಂಟರಾದ ಮಿ ಕೆ. ಜಯರಾಮರು ಮಂಗಳೂರಿಗೆ ಬಂದಿದ್ದು ತಮ್ಮ ದಾರಿ ತಮ್ಮ ಹಡಗಿಯನ್ನು ಪರೀಕ್ಷಿಸುವರನ್ನು

ಪೆಡೂರರು

ಪೆರ್ಡೂರಿನ ಪ್ರಾಚೀನ ದೇವಸ್ಥಾನವಾದ ಮಹತೋಭಾರ ಶ್ರೀ ಅನಂತಪದ್ಮನಾಭ ದೇವಸ್ಥಾನವು ಬಹು ಶೋಚನೀಯ ಅವಸ್ಥೆಯನ್ನು ತಾಳಿತ್ತು. ೧೯೩೪ರಲ್ಲಿ ಈ ದೇವಸ್ಥಾನದ ಆಡಳಿತೆಯ ಕಮಿಟಿಯಲ್ಲಿ ಕಲಹಗಳು ಬಂದು ಕಡೆಗೆ ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನವರು ಅದರ ವ್ಯವಸ್ಥೆಯ ಏರ್ಪಾಡನ್ನು ತಾವು ವಹಿಸಿಕೊಂಡರು. ಅಂತೆಯೇ ವಿ. ಎಂ. ಹೆಬ್ಬಾರ್ ಮತ್ತು ರಾ। ಎ. ಕೃಷ್ಣಯ್ಯ ಹೆಗ್ಗಡೆ ಇವರನ್ನು ಒನರರಿ ಟ್ರಸ್ಟಿಯವರನ್ನಾಗಿ ನೇಮಿಸಿದುದಲ್ಲದೆ, ಮ। ರಾ। ವಿ. ಆನಂದರಾಯರವರನ್ನು ಮೆನೇಜಿಂಗ್ ಟ್ರಸ್ಟಿಯ ಹುದ್ದೆಗೆ ನೇಮಿಸಿದರು. ಬೋರ್ಡಿನ ಹುಕುಂ ಪ್ರಕಾರ ಆನಂದರಾಯರು ದೇವಸ್ಥಾನದ ಚಾರ್ಜನ್ನು ವಹಿಸಿಕೊಳ್ಳುವಾಗ, ದೇವಸ್ಥಾನದ ಶಿಲ್ಕು ಮತ್ತು ಲೆಕ್ಕಪತ್ರಗಳು ಬಹಳ ಹೀನಾವಸ್ಥೆಯಲ್ಲಿದ್ದವು. ಆದರೂ ಶ್ರೀಯುತರು ಬಹಳ ಉತ್ಸಾಹದಿಂದ ಕೆಲಸ ಸಾಗಿಸಿದರು. ಅನೇಕ ಜೀರ್ಣೋದ್ಧಾರಗಳನ್ನು ಮಾಡಿ ದೇವಸ್ಥಾನವನ್ನು ಬೆಳಕಿಗೆ ತಂದರು. ನೌಕರರಿಗೆ ಜಾತ್ರೆ ಸಮಯದಲ್ಲಿ ಉಡುಗೊರೆಗಳು, ರಥಕ್ಕೆ ಪತಾಕೆಗಳು, ಗರ್ಭಗೃಹದ ರಿಪೇರಿ ಮಾಡಿಸಿದರು. ಆ ಕೆಲಸದಿಂದಾಗಿ ತನಗೆ ಸಿಗುತಿದ್ದ ತಿಂಗಳ ವೇತನ ರೂ ೭೫ ಹೆಚ್ಚೆಂದೂ, ತನಗೆ ರೂ. ೪೦ ಸಾಕೆಂದೂ ಬೋರ್ಡಿಗೆ ತಿಳಿಸಿ ತನ್ನ ತ್ಯಾಗಬುದ್ಧಿಯನ್ನೂ ದೈವಭಕ್ತಿಯನ್ನೂ ತೋರಿದರು. ಎಲ್ಲವನ್ನೂ ವ್ಯವಸ್ಥಿತ ರೀತಿಯಲ್ಲಿ ಇಟ್ಟು ನಂತರ ಇದೇ ತಾ ೫-೬-೩೫ರಲ್ಲು ತನ್ನ ಪದವಿಗೆ ರಾಜಿನಾಮೆಯಿತ್ತು, ಸ್ವಂತ ಖರ್ಚಿನಿಂದ ದೇವರ ಮುಂಭಾಗದಲ್ಲಿ ಮನೋಹರವಾದ ಕಲ್ಲಿನ ಗೇಟನ್ನಿಟ್ಟು ಆ ವರುಷದ ಪೂಜೆಗೆ ಬೇಕಾದ ಹಣವನ್ನೂ ಸಹ ಕೊಟ್ಟು ಪ್ರಕೃತದ ಮೆನೇಜಿಂಗ್ ಟ್ರಸ್ಟಿ ಆನಂತಪುರದ ವಕೀಲ್ ರಾ। ಕೆ ರಂಗಪ್ಪನವರಿಗೆ ಚಾರ್ಜು ವಹಿಸಿಕೊಟ್ಟು, ದೇವರ ಗಂಧಪ್ರಸಾದವನ್ನು ಪಡೆದು ನೆರೆದ ಸಜ್ಜನಸಹಸ್ರರನ್ನು ಅಭಿವಂದಿಸಿ ತನ್ನ ನಿವಾಸವಾದ ಬಜಕಪೀಠಕ್ಕೆ ಚಿತ್ತೈಸಿದರು. ಶ್ರೀಯುತರಿಗೆ ಜಗದೀಶ್ವರನು ಚಿರಾಯುರಾರೋಗ್ಯವನ್ನು ಮುಂದಿನವರಿಗೆ ಕಾರ್ಯನಿರ್ವಹಿಸಲು ಬುದ್ಧಿ ಸಾಮರ್ಥ್ಯವನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುವ

—ಭಜಕವೃಂದ.

ಕಾಂಗ್ರೆಸ್ ಸುವರ್ಣಮಹೋತ್ಸವವು

ಕಾಂಗ್ರೆಸ್ ಸುವರ್ಣಮಹೋತ್ಸವವು ಒಳ್ಳೆ ವಿಜೃಂಭಣೆಯಿಂದ ಜರಗಿಸಬೇಕೆಂದು ಎಲ್ಲ ಕಡೆಗೂ ಈಗಾಗಲೇ ಪ್ರಯತ್ನಗಳು ಅಖಿಲ ಭಾರತದಲ್ಲಿ ನಡೆದಿವೆ ಕರ್ಣಾಟಕದಲ್ಲಿ ಈ ಉತ್ಸವವು ಚೆನ್ನಾಗಿ ನೆರವೇರಬೇಕೆಂದು ಅಪೇಕ್ಷಿಸುತ್ತದೆ ಕರ್ಣಾಟಕದೊಳಗಿನ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಈಗಿನಿಂದಲೇ ಕಾರ್ಯಕ್ರಮವು ಯಶಸ್ವಿಯಾಗುವಂತೆ ಪ್ರಯತ್ನಿಸಬೇಕು. ಈ ಉತ್ಸವದಲ್ಲಿ ಎಲ್ಲ ಜನತೆಯೂ ಭಾಗವಹಿಸುವಂತೆ ವಿವಿಧ ಕಾರ್ಯಕ್ರಮಗಳನ್ನಿಟ್ಟು ಜನರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಬೇಕು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಗೊತ್ತುಪಡಿಸಿದ ಕಾರ್ಯಕ್ರಮವನ್ನು ಈ ಕೆಳಗೆ ಕೊಟ್ಟಿದೆ. ಈ ಕಾರ್ಯಕ್ರಮವು ಕರ್ಣಾಟಕದೊಳಗಿನ ಪ್ರತಿಯೊಂದು ಹಳ್ಳಿಯಲ್ಲಿ ಕೂಡಾ ಆಚರಿಸಲ್ಪಡಬೇಕೆಂದು ಭಿನ್ನವಿಸುತ್ತೇನೆ.

(೧) ಬೆಳಿಗ್ಗಿನ ಜಾವ ನಗರ ಸಂಕೀರ್ತನೆ (೨) ಧ್ವಜವಂದನೆ ಬೆಳಿಗ್ಗೆ ೮ ಘಂಟೆ (೩) ಮೆರವಣಿಗೆ, ಐದು ಘಂಟೆಗೆ ಪ್ರಾರಂಭವಾಗಿ ಸಭೆಯ ಸ್ಥಳಕ್ಕೆ ಹೋಗುವುದು. (೪) ಸಾರ್ವಜನಿಕ ಸಭೆ. (ಅ) ವಂದೇ ಮಾತರಂ, (ಬ) ಪ್ರಾರಂಭದ ೧೮೮೫ (ಕ) ಕಾಂಗ್ರೆಸ್ ಅಧ್ಯಕ್ಷರ ಸಂದೇಶವನ್ನು ಓದಲ್ಪಡುವುದು (ಡ) ಭಾಷಣಗಳು, ಕಾಂಗ್ರೆಸ್ ಇತಿಹಾಸಗಳು, ಕಾರ್ಯಕ್ರಮ, ಇದುವರೆಗೆ ಮಾಡಿದ ಕಾರ್ಯಗಳ ವಿವರ (ಇ) ಇದೇ ದಿವಸವನ್ನು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ತಿಳಿಸುವಂತಹ ಕೆಲಸಕ್ಕಾಗಿ ವಿನಿಯೋಗಿಸಬೇಕು. (೫) ಚಿತ್ರ ರಾಷ್ಟ್ರಧ್ವಜಗಳನ್ನು ಮಾರುವುದು (೬) ದೀಪೋತ್ಸವ ಮುದ್ದನ್ನು ಉಪಯೋಗಿಸ ಕೂಡದು (ಅ) ಆಟಗಳ (ಆ) ಕುಸ್ತಿ. (ಬ) ದೇಶೀ ಆಟಗಳು (ಕ) ಪಂದ್ಯಾಟಗಳು. (೭) ಪ್ರದರ್ಶನಗಳು. (ಅ) ಖಾದಿ ಪ್ರದರ್ಶನ (ಕ) ಇತರ ಸ್ವದೇಶಿ ವಸ್ತುಪ್ರದರ್ಶನ. (ಮುಖಂಡರು ಕಾಂಗ್ರೆಸ್ಸಿನ ಗೊತ್ತುವಳಿಯ ಮೇರೆಗೆ) (ಡ) ಕವಿ ಸಮ್ಮೇಳನ (ರಾಷ್ಟ್ರೀಯ ವಾಙ್ಮಯ), (ಇ) ಗಾಯನ

(ಇ) ರಾಷ್ಟ್ರೀಯ ವಾಙ್ಮಯದ ಮುಖಾಂತರ ಕಾಂಗ್ರೆಸ್ ಕಾಂಗ್ರೆಸ್ ಇತಿಹಾಸ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಮಹತ್ವವುಳ್ಳ ಪ್ರಕಟಣೆಗಳನ್ನು ಪ್ರಕಟಿಸುವುದು.

ಸಂಸ್ಕೃತ ವಾಙ್ಮಯ.

ಯಾವ ಭಾಷೆಯು ಆರ್ಯರ ಜ್ಞಾನಧನ, ವಿದ್ಯಾಧನ, ಸಹಿತ್ಯದ ಧನ, ಮೊದಲಾದ ಪರಮನಿಧಿಗೆ ಭಾಂಡಾಗಾರವಾಗಿರುವುದೋ ಅಂತಹ ಸಂಸ್ಕೃತಭಾಷೆಯ ವಿಷಯ ಕೊಂಚ ಟೀಕಿಸಲಿರುವೆನು.

ಹಿಂದೂದೇಶವನ್ನು ಆಧ್ಯಾತ್ಮಿಕಜ್ಞಾನ ವಿಕಸಿತವಾಗಿ ಮಾಡಿದುದೂ, ಹಿಂದೂದೇಶಕ್ಕೆ ಸಂಪೂರ್ಣ ನಾಗರಿಕತೆಯನ್ನುಂಟುಮಾಡಿದುದೂ, ಹಿಂದೂದೇಶವನ್ನು ಖಂಡಾಂತರವಾಸಿಗಳಿಂದ ಹೊಗಳಿಸಿದುದೂ ಸಂಸ್ಕೃತ ವಾಙ್ಮಯವೆಂದು ಧಾರಾಳವಾಗಿ ಹೇಳಬಹುದು. ಅಂತಹ ಸಂಸ್ಕೃತಭಾಷೆಯು ಈಗ ಕಾರಣಾಂತರಗಳಿಂದ ಜನ್ಮಭೂಮಿಯಾದ ಭರತಖಂಡಕ್ಕಿಂತಲೂ, ಇಂಗ್ಲೆಂಡ್, ಜರ್ಮನಿ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ಗೌರವಿಸಲ್ಪಟ್ಟು, ಆ ದೇಶವಾಸಿಗಳಿಂದ ಉಪಾಸಿಸಲ್ಪಡುತ್ತಲಿದೆ ಎಂದರೆ ಅತಿಶಯೋಕ್ತಿಯಾಗಲಾರದಷ್ಟೆ. ಇದರಿಂದ ಈ ಭಾಷೆಯ ಪ್ರಶಸ್ತ್ಯವು ವ್ಯಕ್ತವಾಗುವುದಾದರೂ, ಜನ್ಮಭೂಮಿಯಾದ ಭರತಖಂಡದಲ್ಲಿ ಇದರ ವ್ಯಾಸಂಗವು ಕಡಿಮೆಯಾಗುತ್ತಿರುವುದು ಬಹಳ ಶೋಚನೀಯವಾದ ವಿಷಯವು.

ಒಬ್ಬರ ಅಭಿಪ್ರಾಯವು ಮತ್ತೊಬ್ಬರಿಗೆ ತಿಳಿಯಪಡಿಸಬೇಕಾದ ಅವಶ್ಯಕತೆಯುಂಟಾದ ಕಾಲದಿಂದಲೂ ಈ ಸಂಸ್ಕೃತ ಭಾಷೆಯು ವೃದ್ಧಿಹೊಂದುತ್ತಲಿದೆ. ವೇದವು ಸಂಸ್ಕೃತ (Vedic) ಭಾಷಾಮಯವು ಆದುದರಿಂದ ಈ ಭಾಷೆಯು ದೇವಭಾಷೆಯಾಗಿರುವುದು ಸ್ಥೂಲದೃಷ್ಟಿಯಿಂದ ನಾವು ತಿಳಿಯಲಾರದ ಅದ್ಭುತೋಪಯೋಗ ಒಂದು ಧನವಿಶೇಷವು. ಈ ಭಾಷೆಯಲ್ಲಿದ್ದರೆ ಕಲಿಯುಗಾರಂಭದಿಂದಲೂ ನಮ್ಮ ದೇಶವು ಹೊಂದಿದ ವಿಪತ್ಪರಂಪರೆಗಳಿಂದ ಶಿಥಿಲವಾಗದೆ ನೆಲಗೊಂಡಿರುತ್ತದೆ. ದುಷ್ಕರವು ಸಾಮಾನ್ಯ ಭಾಷೆಗಳನ್ನು ಉನ್ನತಸ್ಥಿತಿಗೆ ತರುವುದಕ್ಕಾಗಲೀ ನಾಶಮಾಡುವುದಕ್ಕಾಗಲೀ ರಾಜ್ಯಾಂಗಪದ್ಧತಿಯು ಮುಖ್ಯ ಕಾರಣವಾಗುತ್ತದೆ ಹಿಂದೂದೇಶವು ಕ್ಷಣಕ್ಷಣಕ್ಕೂ ಎಷ್ಟೋ ಮಾರ್ಪಾಟುಗಳನ್ನು ಹೊಂದಿರುತ್ತದೆ. ಆದಾಗ್ಯೂ ಸಂಸ್ಕೃತಭಾಷೆ ಮಾತ್ರ ಪ್ರಭಾಕರನ ಪ್ರಭೆಯಂತೆ ಶಾಶ್ವತವಾಗಿ ಪ್ರಕಾಶಮಾನವಾಗಿ ಬೆಳಗುತ್ತಿರುವುದು.

ಭರತಖಂಡವು ಯವನರಿಂದಲೂ ಅವರ ಭಾಷೆಯಿಂದಲೂ ಪಾರಸೀಕರಿಂದಲೂ ಅನ್ಯಭಾಷೆಯಿಂದಲೂ ಆರಬ್ಬಿಗಳಿಂದಲೂ ಅವರ ಭಾಷೆಯಿಂದಲೂ ಆಂಗ್ಲೇಯರಿಂದಲೂ ಅವರ ಭಾಷೆಯಿಂದಲೂ ಆಕ್ರಮಿಸಲ್ಪಟ್ಟಿದ್ದರೂ ಸಂಸ್ಕೃತ ಭಾಷೆ ಮಾತ್ರ ತನ್ನ ಸ್ವಾತಂತ್ರ್ಯವನ್ನು ಬಿಡಲಿಲ್ಲವು. ಪ್ರಪಂಚದಲ್ಲಿ ಮತ್ತಾವ ಭಾಷೆಗೂ ಇಲ್ಲದ ವ್ಯಾಕರಣ ಮರ್ಯಾದೆಯೇ ಈ ಭಾಷೆಯನ್ನು ಸಂರಕ್ಷಿಸುತ್ತಿರುವುದು ಯಾವ ಅಭಿಪ್ರಾಯವನ್ನಾದರೂ ಅನುಮಾನಿಸಿಯೂ ಸುಲಭವಾಗಿಯೂ ಸ್ಪಷ್ಟವಾಗಿಯೂ ಸಭೋಧವಾಗಿಯೂ ವ್ಯಕ್ತಪಡಿಸುವುದಕ್ಕೆ ತಕ್ಕ ಭಾಷಾಪುಷ್ಕಳತೆಯು ಈ ಭಾಷೆಯೊಂದರಲ್ಲಿ ಹೊರತು ಮತ್ತಾವ ಭಾಷೆಯಲ್ಲಿಯೂ ಇಲ್ಲವು ಎಂಬ ಸಂಗತಿಯು ಎಲ್ಲರೂ ತಿಳಿದ ವಿಷಯವೇ.

ರಾಜಧರ್ಮವನ್ನೂ ಶಿಕ್ಷಣಧರ್ಮವನ್ನೂ ಬೋಧಿಸತಕ್ಕ ಧರ್ಮಶಾಸ್ತ್ರಗಳು ಸಂಸ್ಕೃತ ಭಾಷೆಯಲ್ಲಿರುವುದರಿಂದಲೂ ಭರತ ಖಂಡದಲ್ಲಿರುವ ಸಮಸ್ತ ಚರಾಚರವನ್ನು ಕಾಲಕ್ಕೂ ಸಂಸ್ಕೃತದಲ್ಲಿ ಮಾತ್ರವೇ ಹೆಸರುಗಳಿರುವುದರಿಂದಲೂ (ಸನಾತನ ಕಾಲದಲ್ಲಿ) ಒಂದಾನೊಂದು ವೇಳೆ ರಾಜ ಭಾಷೆಯಾಗಿಯೂ ದೇಶಭಾಷೆಯಾಗಿಯೂ ಇದ್ದಿತೆಂದು ಧಾರಾಳವಾಗಿ ಹೇಳಬಹುದು ಹಿಮವತ್ಪರ್ವತ ಪ್ರಾಂತದಲ್ಲಿರುವ ಜನರಿಗೂ ಕನ್ಯಾಕುಮಾರಿ ಅಗ್ರದಲ್ಲಿರುವ ಜನಸಂಘಕ್ಕೂ ಆಧ್ಯಾತ್ಮಿಕ ವಿಷಯದಲ್ಲಿಯೂ ಸ್ಥೂಲವಾದ ಆಚಾರಶೀಲಗಳ ವಿಷಯದಲ್ಲಿಯೂ ಏಕಾಭಿಪ್ರಾಯ ಉಂಟಾಗಿರುವುದಕ್ಕೆ ಈ ಸಂಸ್ಕೃತವೇ ಮುಖ್ಯಕಾರಣವು.

ಸಂಸ್ಕೃತ ಭಾಷೆಯಲ್ಲಿ ಮನುಷ್ಯನಿಗೆ ಬೇಕಾದ ಸಮಸ್ತ ವಿಷಯಗಳನ್ನೂ ತಿಳುಹಿಸತಕ್ಕ ಗ್ರಂಥಗಳು ಮಹಾತ್ಮರಾದ ಋಷಿಮುನಿಗಳಿಂದ ವಿರಚಿಸಲ್ಪಟ್ಟಿರುವುದರಿಂದ ಇತರ ದೇಶಗಳ ಸಹಾಯವಿಲ್ಲದೆಯೇ ಭರತಖಂಡವು ಯುಗಯುಗಾಂತರಗಳಿಂದಲೂ ಸ್ವತಂತ್ರವಾಗಿ ಶೋಭಿಸಲಾಯಿತು. ಈಗ ನಮ್ಮ ದೇಶದಲ್ಲಿ ವ್ಯಾಪಿಸಿರುವ ನವನಾಗರೀಕ (Modren Civilization) ವನ್ನು ಕಂಡು ಬೆರಗಾಗುತ್ತಿರುವ ಅನೇಕ ಮಂದಿ ಯುವಕರಿಗೆ ಆರ್ಯರ ಮಹೋನ್ನತ ವೈಭವವನ್ನು ತಿಳುಹಿಸತಕ್ಕ ಸಂಸ್ಕೃತ ಭಾಷೆಯಲ್ಲಿ ಗೌರವವಿಲ್ಲದಿರುವುದರಿಂದ ಅವರು ನವನಾಗರೀಕವನ್ನು ಅನುಸರಿಸುತ್ತ ಜಾತೀಯ ವಿಕಾಸವನ್ನು ಮರೆತು ಭ್ರಾಂತರಾಗುತ್ತಿರುವರು. ಶಾಂತಭಾವದಿಂದ ನಿಜಾಂಶವನ್ನು ಯೋಚಿಸುವ ಪಕ್ಷಕ್ಕೆ ನವನಾಗರೀಕವು, ದುರ್ಬಲವಾದುದೆಂಬ ರಹಸ್ಯವು ಗೋಚರವಾಗುತ್ತದೆ. ನವನಾಗರೀಕವು ಅಗತ್ಯ-ದುರಾಚಾರ-ವಂಚನೆ ಮುಂತಾದ ದುಷ್ಟ ಪ್ರಾಯಗಳಿಂದೊಡಗೂಡಿದ ಟೊಳ್ಳಾದ ಗಾಳಿ ಮೂಟೆಯೆಂದು ಪರಿಷ್ಕಾರವಾಗಿ ಹೇಳಬಹುದು.

ನೂರಾರು ವರ್ಷಗಳಿಂದ ವಿದೇಶೀಯರ ಪದ್ಧತಿ ಗೊಳಪಟ್ಟು ಸನಾತನವಾದ ಆರ್ಯಧರ್ಮವನ್ನು ಮರೆತು, ಆರೋಗ್ಯ ಐಶ್ವರ್ಯಗಳನ್ನು ಹೋಗಲಾಡಿಸಿಕೊಂಡು ಮುಂತಾಗಿರುವ ಕಾರಣದಿಂದಲೂ ಪ್ರಕೃತದಲ್ಲಿ ನಮ್ಮ ಜನರಲ್ಲನೇಕ ಮಂದಿ ನವನಾಗರೀಕತೆಗೆ ಬೆರಗಾಗಿರುವುದರಿಂದಲೂ ಸಂಸ್ಕೃತ ಭಾಷೆಯಲ್ಲಿ ಆದರವು ಕಡಿಮೆಯಾಗೀತ್ತದೆ

ಮುಸಲ್ಮಾನೀಯ ರಾಜರ ಕಾಲದಲ್ಲಿ ಅಕ್ಬರ್ ಬಾದಶಹನ ಹೊರತು ಮಿಕ್ಕವರು ಸಂಸ್ಕೃತ ಭಾಷೆಗೆ ಲೇಶಮಾತ್ರವೂ ಪ್ರೋತ್ಸಾಹ ಕೊಡದೆ ಬಹಳವಾಗಿ ಕ್ಷೀಣಸಲಾಯಿತು. ಸಂಸ್ಕೃತ ಗ್ರಂಥಗಳಲ್ಲಿ ಹೆಸರು ವಾಸಿಯಾದ ನಮ್ಮ ಶಾಕುಂತಲ ನಾಟಕವು ಐರೋಪ್ ಖಂಡದಲ್ಲಿ ಜಯ ಧ್ವಜಗಳಿಂದ ವಿಜೃಂಭಿಸುತ್ತಿರಲಾಗಿ ನಮ್ಮ ದೇಶದಲ್ಲಿ ಸ್ಥಾಪಿರಾರು ಮಂದಿಗೆ ಆ ನಾಟಕದ ಹೆಸರೇ ತಿಳಿಯದಿರುವುದು ಶೋಚನೀಯವಲ್ಲವೇ! ಆದಾಗ್ಯೂ ಇತ್ತೀಚೆಗೆ ಕೆಲವು ಮಂದಿ ಸಂಸ್ಥಾನಾಧಿಪರುಗಳೂ ಮಠಾಧಿಪತಿಗಳೂ ಸಂಸ್ಕೃತಕ್ಕೆ ಸ್ವಲ್ಪ ಮಟ್ಟಿಗೆ ಪ್ರೋತ್ಸಾಹವನ್ನುಂಟು ಮಾಡುತ್ತಿರುವರು

ಸ್ವಾಮಿ ದಯಾನಂದಸರಸ್ವತಿಯವರು ಡಾಕ್ಟರ್ ಭಂಡಾರ್ಕರ್ ತಾರಾನಾಥ ತರ್ಕ ವಾಚಸ್ಪತಿ ಮುಂತಾದ ಭಾರತೀಯ ಪಂಡಿತರೂ ಮೇಕ್ಸ್‌ಮುಲ್ಲರ್ ಮೋನಿಯರ್ ವಿಲ್ಲಿಯಮ್ಸ್ ವಿಲ್ಸನ್ ಮುಂತಾದ ಪಾಶ್ಚಾತ್ಯ ಪಂಡಿತರೂ ಸಂಸ್ಕೃತ ಭಾಷಾಭ್ಯುದಯಕ್ಕೆ ಬಹಳ ಮಟ್ಟಿಗೆ ಸಹಾಯಕರಾಗಿದ್ದಾರೆ. ಎಂದ ನೇಲೆ ಇಂತಹ ಪವಿತ್ರ ಭಾಷೆಗೆ ಎಲ್ಲರೂ ಪ್ರೋತ್ಸಾಹ ಕೊಡಬೇಕೆಂಬುದೇ ಲೇಖಕನ ಉದ್ದೇಶ

ಕೈ ಗಾ ರಿ ಕೆ

ಪ್ರಪಂಚದಲ್ಲಿ ನ ತ್ಯಾವ ದೇಶಕ್ಕೂ ಪ್ರಾಪ್ತವಾದ ಪುಣ್ಯ ಭೂಮಿ ಎಂಬ ಗೌರವ ನಾವ ವು ನಮ್ಮ ಮಾತೃ ಭೂಮಿಯಾದ ಈ ಆರ್ಯಾವರ್ತಕ್ಕೆ ಪ್ರಾಪ್ತವಾಗಿರುತ್ತದಷ್ಟೆ! ಮನುಷ್ಯರಿಗೆ ಜನಿಸಿ ದೇವತೆಗಳೇ ಮಹರ್ಷಿಗಳೇ ಎಂಬಂತಹ ತಮ್ಮ ಅತ್ಯುತ್ಕೃಷ್ಟ ಜೀವಿತವನ್ನು ಪ್ರಪಂಚಕ್ಕೆ ಉದಾಹರಣೆಯನ್ನಾಗಿ ಬಿಟ್ಟು ಸರಳ ರೀತಿಯಿಂದಿದ್ದ ಈ ಭೂತಳದಲ್ಲಿ ಸ್ವರ್ಗವೋ ಎನ್ನಿಸುವಂತೆ ಸುಖಶಾಂತಿಗಳನ್ನು ಸ್ಥಾಪಿಸಿ ಕೀರ್ತಿ ಪಡೆದ ಭೂಮಿಯನ್ನು ಧನ್ಯರನ್ನಾಗಿ ಮಾಡಿರುವರಷ್ಟೆ! ಅಂಥಾ ವೀರ ಶ್ರೇಷ್ಠರನ್ನು ಹೆತ್ತು ಧನ್ಯಳ ಸಕಲ ವಸ್ತುಗಳಿಗೆ ತವರು ಮನೆಯಾಗಿರುವ ನಮ್ಮ ಭಾರತ ಮಾತೆಯ ಇಂದಿನ ಸ್ಥಿತಿಯು ಶೋಚನೀಯವಾಗಿರುತ್ತದೆ ಒಂದು ಎಷ್ಟೋ ವೀರಾಗ್ರಣಿಗಳನ್ನು ಪಡೆದು ಕರ್ಮಭೂಮಿ ಎಂಬ ಸ್ಥಾನಮಾನವನ್ನು ಪಡೆದಿರುವ ಈ ಭಾರತೆಯನ್ನು ಇಂದು ಈ ಕಠಿಣ ಸ್ಥಿತಿಗೆ ತಂದೊಡ್ಡಿದವರು ಯಾರು? ಇಂದು ಕೇವಲ ಭಿಕ್ಷಾಟನ ವೃತ್ತಿಯನ್ನು ಕೈಕೊಂಡವರನ್ನು ನಾಳೆ ಐಶ್ವರ್ಯವಂತರನ್ನಾಗಿ ಮಾಡುವ ಹಾಗೂ ಸಕಲ ವಸ್ತು ಪ್ರಾಣಿಗಳಿಗೂ ಉಜ್ವಲೀಸ ಗತಿಗಳನ್ನು ಕೊಡುವಂತಹ ಶ್ರೀ ದೇವರ ವಿಧಿಯೋ? ಭಾರತ ಭೂಮಿಯ ಜನರ ಅದೃಷ್ಟವೋ? ಕಾಲಗತಿಯೇ ಹಾಗಾಗಿದೆ ಎಂದರೆ ಹೆಚ್ಚಾಗಲಿಕ್ಕಿಲ್ಲವೇ? ಈಗ ಹಿಂದೂ ದೇಶದಲ್ಲಿ ನಾಲ್ಕು ವರುಷ ಹರೆಯದಿಂದ ಗೂಡಿ ಮುದಿತನ ವರೆಗೂ ಪಾಶ್ಚಿಮಾತ್ಯರ ವೇಷ ಭಾಷೆ ಕಲಿಯುವುದರಲ್ಲೇ ಮಗ್ನರಾಗಿ ಯಾವತ್ತೂ ತಮ್ಮ ದೇಹಶಕ್ತಿಯನ್ನು ಕುಂದಿಸಿಕೊಂಡು ಐಹಿಕ ಸುಖವನ್ನು ಸ್ವತಂತ್ರವಾಗಿ ನಡೆಸುವುದನ್ನು ಬಿಟ್ಟು ಪರಸೇವಕರಾಗಿ ಕೇವಲ (ಹುದ್ದೆಗಳನ್ನೇ) ಅವಲಂಬಿಸಿರುವ ನಮ್ಮಗಳ ಯೋಗ್ಯತೆಯನ್ನು ಏನೆಂದು ವರ್ಣಿಸಲಿ! ಅಲೆಲೇ!! ನಗಲೇ!!! ಪರಸೇವಾ ವೃತ್ತಿಯಿಂದಲೇ ಆರ್ಯಾವರ್ತದ ಜನರು ಹೊಟ್ಟೆ ಹೊರೆದುಕೊಳ್ಳುವ ಪಾಡು ಆಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಪಾಶ್ಚಿಮಾತ್ಯ ಜನರಾದರೋ ವಿದ್ಯೆಯ-ಕೇವಲ ಜ್ಞಾನವೃದ್ಧಿಗೋಸ್ಕರವಲ್ಲದೆ ಹುದ್ದೆಗಳಲ್ಲೊಂದು ಭಾವಿಸಿ ಉಚ್ಚ ಶಿಕ್ಷಣವನ್ನು ಹೊಂದಿ, ಅನೇಕರದ ಕೈಗಾರಿಕೆಗಳನ್ನು ಅವಲಂಬಿಸಿ ಸ್ವತಂತ್ರ ಜೀವನವನ್ನು ಬೆಳಸಿ, ಕೀರ್ತಿ ಪಡೆದಿರುವರು. ಆದರಿಂದ ಕಡಿದ ನಿಸರ್ಗರವಾದ ಇಂಗ್ಲೆಂಡು ದೇಶದ ಜನರೂ ಇರುವೆಯಂತೆ ಶ್ರಮಪಟ್ಟು ಕೆಲಸ ಮಾಡಿ ಲೋಕದಲ್ಲಿ ಕೀರ್ತಿಪಡೆದಿರುವರೆಂದರೆ ಸುಳ್ಳಾಗದು. ಇನ್ನು ಅಮೇರಿಕಾ ಜಪಾನು ಮೊದಲಾದುವುಗಳು ಕೈಗಾರಿಕೆ ಬೇಕಾದ ಸಾಮಾನುಗಳನ್ನು ಪರದೇಶದಿಂದ ತರಿಸಿ ಇಷ್ಟು ಶ್ರಮಪಟ್ಟು ಕೆಲಸ ಮಾಡುತ್ತಿರುವ ಎಂದಾದ ಮೇಲೆ ನಮ್ಮ ಈ ಭಾರತ ಭೂಮಿಯು ಸಕಲ ವಸ್ತುಗಳ ತವರು ಮನೆಯಾಗಿದ್ದು ಬಗೆಬಗೆಯ ಒಡವೆಗಳನ್ನು ತಯಾರಿಸಲು ಸಾಧ್ಯವಿದ್ದು ಅಧೋಗತಿಗಿಳಿಯಲು ನಮ್ಮ ಮೈಗಳ್ಳತನವೇ ಕಾರಣವಲ್ಲದೆ ಮತ್ತಾವುದೂ ಅಲ್ಲ. ಎ ಭಾರತ ವೀರ ಶ್ರೇಷ್ಠರೇ! ನಿದ್ದೆ ತೊಂಬೆಯನ್ನು ನಿಲ್ಲಿಸಿದೆ ನೀವು ದೂರ ಬಿಸಾಡಿ! ಉತ್ಸಾಹಶೀಲರೆಂಬ ಬಿರುದಿನೀನೇತರದಿಂದ ಕೂಡಿ! ಆಲಸ್ಯವೆಂಬ ರಕ್ಕಸನನ್ನು ಹೊಡೆಯುವುದಕ್ಕೆ ಸೊಂಟಕಟ್ಟಿರಿ! ಕೈಗಾರಿಕೆ ದೇವತೆಯನ್ನು ಮನೆಯೊಳಗೆ ಪ್ರತಿಷ್ಠಿಸಿರಿ! ನಮ್ಮನ್ನು ಹೆತ್ತು ಪೆತ್ತ ಈ ಭೂಮಾತೆಯನ್ನು ಧನ್ಯಳನ್ನಾಗಿ ಮಾಡಿರಿ! ಕೀರ್ತಿಪಡೆಯಿರಿ!!

U. H. Shesha Bhat.

ಪ್ರಕಟಣೆ.

ಹಾಸನ ಟವನ್ನಿನ 27ನೆಯ ದನಗಳ ಪ್ರದರ್ಶನ.

ಹಾಸನ ಟವನ್ ದನಗಳ ಪ್ರದರ್ಶನ ಕ್ಷೇತ್ರದಲ್ಲಿ ೨೭ನೆಯ ದನಗಳ ಪ್ರದರ್ಶನವು ಜರಗಲು ಏರ್ಪಾಡಾಗಿರುತ್ತದೆ. ಪ್ರದರ್ಶನವು ೧೯೩೬ನೇ ಜನವರಿ ಮಾಹೆ ತಾ ೩ನೇ ಗುರುವಾರದಿಂದ ೬ನೇ ಸೋಮವಾರ ಸಂಜೆ ವರೆಗೂ ನಡೆಯುತ್ತದೆ

ಗವರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಒಕ್ಕೆ ಎರಡಾಣೆಯಂತೆ ಫೀಸು ವಸೂಲ್ಮಾಡುತ್ತದೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನಾ ಜಾಗದಲ್ಲಿ (ಮುನಿಸಿಪಲ್) ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹಾ ತಾ ೧-೧೨-೩೫ರ ಮಧ್ಯಾಹ್ನ ೩ ಗಂಟೆ ಆಗ್ಯಾತು ಹಾಸನದ ಸಂತೆಬಳಿ ಇರುವ ಆಕ್ಷನ್ ಕಟ್ಟೆ ಬಳಿ ಬಹಿರಂಗವಾಗಿ ಕಟ್ಲ್ ಶೋ ಕಮಿಟಿ ಪ್ರೆಸಿಡೆಂಟರು ಯಾ ಮುನಿಸಿಪಲ್ ಕೌನ್ಸಿಲ ವೈಸ್ ಪ್ರೆಸಿಡೆಂಟ ಇವರಿಂದ ಹರಾಜುಮಾಡಿಸಲಾಗುತ್ತದೆ

ಅಂಗಡಿ ವಗೈರೆಗಳಿಗಾಗಿ ಬಿಂಗಡಿಸುವ ಜಾಗಾಗಳನ್ನು ತಾ ೧೫-೧೨-೩೫ರ ಒಳಗಾಗುತು ಹಾಸನ ಓವನು ಮ ನಿಸಿಪಲ್ ಆಫೀಸಿನಲ್ಲಿ ವಿಲೇವಾರಿಮಾಡಲು ಉದ್ದೇಶಿಸಿರುತ್ತದೆ. ಇದಕ್ಕೆ ನಂತರ ಬರತಕ್ಕ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ ಇದಕ್ಕಾಗಿ ಪ್ರಿಂಟಾಗಿರುವ ಅರ್ಜಿ ಫಾರಂಗಳು ಮುನಿಸಿಪಲ್ ಆಫೀಸಿನಲ್ಲಿ ದೊರೆಯುತ್ತವೆ

ಈ ರೀತಿ ಜಾಗಾಗಳು ಅಪೇಕ್ಷಿಸಿ ತೆಗೆದುಕೊಳ್ಳಬೇಕಾಯಿದ್ದವರು ಮುನಿಸಿಪಲ್ ಆಫೀಸಿನ ಖುದ್ದು ಯಾ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಏಜೆಂಟರು ಹಾಜರಾಗಿ ಜಾಗಾಗಳನ್ನು ಹೊಂದತಕ್ಕದ್ದು ಅಲ್ಲದೆ ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಉಪಯೋಗ ಯಾ ವ್ಯಾಪಾರಕ್ಕೆ ಅವಶ್ಯಕವಾದಷ್ಟು ಸ್ಥಳಗಳನ್ನು ಮಾತ್ರ ಕೊಡಲಾಗುತ್ತದೆ ಇದರ ಅಧಿಕಾರವು ಸಂಪೂರ್ಣವಾಗಿ ಪ್ರೆಸಿಡೆಂಟ ಯಾ ಅವರಿಂದ ಅಧಿಕಾರ ಹೊಂದಿದವರಿಗೆ ಇರುತ್ತದೆ ಮುನಿಸಿಪಾಲಿಟಿಯವರ ಅಪ್ಪಣೆ ಇಲ್ಲದ ಸ್ಥಳ ಪಡೆದ ಯಾವ ಮನುಷ್ಯನೂ ಇತರರಿಗೆ ಹಿಂದಿ ಬಗ್ಗೆ ಮಾಡತಕ್ಕದ್ದು ಹೋದ ಸಾಲಿನಲ್ಲಿ ಸ್ಥಳ ಪಡೆದ ಇತರರಿಗೆ ಸಪ್ಲಾಯಿಗಳಿಗೆ ಪ್ರಕಟಿಸಲ್ಪಡಿದ ಕೊಂಡಿದ್ದವರಿಗೆ ಒಂದಿತ ಈ ಸಾಲಿನಲ್ಲಿ ಸ್ಥಳಗಳು ದೊರೆಯಲಾರವು.

ಬಾಕಿ ವಿಷಯಗಳನ್ನು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು

ಪ್ರೆಸಿಡೆಂಟ್,

ಕೆಟ್ಲ್ ಶೋ ಕಮಿಟ ಟೌನ್ ಮುನಿಸಿಪಾಲಿಟಿ, ಹಾಸನ

ಕಾಂಗ್ರೆಸಿನ ಸ್ವರ್ಣೋತ್ಸವದ ಜ್ಞಾಪಕಾರ್ಥವಾಗಿ ಹರಿಜನರಿಗೆ ಕಾಂಗ್ರೆಸ್ ಜುಬಿಲಿ ಬಾವಿಗಳನ್ನು ತೋಡಿಸಿ ಕೊಡಬೇಕೆಂದು ಶ್ರೀ ಸತ್ಯಮೂರ್ತಿಯವರ ಸಲಹೆ.

'NOTICE.

In the Court of the District Judge of South Kanara

O. P. No 107/'35

In the matter of the guardianship of minor K Narayana

Between—

Saraswathiamma wife of Mahalinga Bhatta and daughter of Krishna Bhatta residing at Ajji moole in Kumbdaji Village Kasaragod Taluq—Petitioner

and

Subraya Bhatta S/o Venkappa Bhatta residing at Valakunja in Perdal Village, Kasaragod Taluq—Respondent.

To

The Respondent and all the persons concerned

Please hereby take notice that the above Petitioner has applied to this Court that she is to be appointed the guardian of the person and property of the minor K Narayana aforesaid and that she may be permitted to see on behalf of the minor for the money due to the minor shown in schedule A, to the petition and that the same stands posted to 6-12-35 for hearing If any one is interested in opposing the same, he may come and oppose the same by the said date otherwise it will be decided in their absence

Mangalore 25-11-'35 — Kasaragod P Vasudeva Rao, Counsel for Petitioner

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ರೊಲೆಟ್ ಸಾಬೂನುಗಳನ್ನು
ಜರ್ಮನ್ ವರ್ತಕರು ಆಮದು ಮಾಡುತ್ತಿರುವರು.

ಗೊಡ್ರೆಜ್ ಟ್ರೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ರೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಓರ್ಗನ್ ಚೇಂಬರ್ ಒಫ್ ಕೋಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ

ಮೈಕ್ರೊಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ| ಔಫ್ರೆಚ್ಟ್ ಎಂಬವರು.—"ನಾನು ಗೊಡ್ರೆಜ್ ವೆಜಿಟೇಬಲ್ ಟ್ರೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಪ್ಟೊಕೊಕಸ್ ಮತ್ತು ಸ್ಟೆಫಿಲೊಕಕಸ್ ಎಂಬ ಕ್ರಿಮಿಗಳನ್ನು ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಜ್ ಎಂಬವರು.—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು — 'ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ' ಎಂದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ. ಎ ಅನ್ಸಾರಿ, ಎಂ. ಡಿ ಎಂ. ಎಸ್ ರವರು—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಆವಶ್ಯಕತೆಯ ದೃಷ್ಟಿಯಿಂದಲೂ ಅವುಗಳ ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಬಯಸುತ್ತೇನೆ" ಎಂದಿರುವರು

ಫೆಕ್ಟರಿ – **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು – **ನಾದಿರ್ ಷಾ, ಪ್ರಿಂಟರ್ ಎಂಡ್ ಕೋ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail, Mangalore.

ಹಿಂದೂದೇಶ.

ಕಾಂಗ್ರೆಸ್ಸಿನಲ್ಲಿ ಐಕ್ಯ.

ಈವರೆಗೆ ಪರಸ್ಪರ ಭೇದ್ಯವಿಚ್ಛೇದಗಳಿಂದ ಒಂದಾದ ಹಂಜಾಬು ಕಾಂ। ಕಮಿಟಿಯವರು ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಜರಗಿಸಲಿಕ್ಕೂ, ಸುಧಾರಿತ ಸರ್ಕಾರದ ಎಲ್ಲಾ ಚುನಾವಣೆಯಲ್ಲಿ ಜಯಶಾಲಿಗಳಾಗುವಂತೆ, ತಮ್ಮ ಎಲ್ಲಾ ಕಲಹಗಳನ್ನು ಮರೆತು, ಈಗ ಒಂದಾಗಿದ್ದಾರೆ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವದ ಸಮಯ, ಕಾಂಗ್ರೆಸ್ ಸ್ಮಾರಕಾರ್ಥವಾಗಿ ಒಂದು ಮೆಮೋರಿಯಲನ್ನು ಕಟ್ಟಿಸಲು ನಿರ್ಧಾರಗಳಾಗಿವೆ. ಇಲ್ಲಿನ ಸುಪ್ರಸಿದ್ಧ ಡಾ। ಸತ್ಯಪಾಲರೇ ಈ ಘಟನೆಗಳಿಗೆ ಕಾರಣಭೂತರು.

ರಾಮಕೃಷ್ಣ ಮಿಶನಿನ ಶತಾಬ್ದ ಮಹೋತ್ಸವ.

ರಾಮಕೃಷ್ಣ ಮಿಶನಿನ ಶತಾಬ್ದ ಮಹೋತ್ಸವವು ಭರತಖಂಡದ ಎಲ್ಲಾ ದೇಶಗಳಲ್ಲಿ ಬೇಗನೇ ಜರಗಿಸಲ್ಪಡುವುದು ಅಮೇರಿಕಾದ ಶ್ರೀ ರಾಮಕೃಷ್ಣರ ಅನೇಕ ಶಿಷ್ಯರು ಈ ಸಮಾರಂಭಕ್ಕೆ ಹಿಂದೂದೇಶಕ್ಕೆ ಬರಲಿದ್ದಾರೆ ಈ ಮಹೋತ್ಸವದ ಸಮಯ ವಿವಿಧ ಧರ್ಮ ಸಮ್ಮೇಳನವನ್ನು ಅಲ್ಲಹಾಬಾದಿನಲ್ಲಿ ಅಥವಾ ಬೆನಾರಸದಲ್ಲಿ ಜರಗಿಸಬೇಕಾಗಿ ಶತಾಬ್ದ ಮಹೋತ್ಸವ ಕಮಿಟಿಯವರು ಘೋಷಿಸಿದ್ದಾರೆ ಹಿಂದು, ಬೌಧ, ಸಿಖ್ಖ, ಜೈನ, ಮತಿತರಲ್ಲಿ ಐಕ್ಯವುಂಟಾಗುವಂತೆ ಸಾಧಿಸುವುದೆ ಈ ಸಮ್ಮೇಳನದ ಮುಖ್ಯೋದ್ದೇಶ

ಶ್ರೀ ಮೂಂಜೆಗಳವರ ಸಂಗ್ರಾಮಿಕ ಶಾಲೆ.

ಡಾ। ಮೂಂಜೆಯವರು ಹಿಂದೂ ಮಹಾಸಭೆಯ ಅಧ್ಯಕ್ಷರು ಬೇಗನೆ ನಾಸಿಕದಲ್ಲಿ ಒಂದು ಸಂಗ್ರಾಮಿಕರನ್ನು ತರಬೇತುಮಾಡುವ ಒಂದು ವಿದ್ಯಾಸಂಸ್ಥೆಯನ್ನು ಸ್ಥಾಪಿಸಲು ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಇಂಡಿಯಾ ಸರಕಾರದ ಮುಖ್ಯ ಸಂಗ್ರಾಮ ಅಧಿಕಾರಿಗಳಾದ ಸರ್ ಚೆಟ್‌ವುಡ್ಡು ಈ ಸಂಸ್ಥೆಯು ಜಯಶೀಲವಾಗಿ ಬಾಳುವಂತೆಯೂ ಮತ್ತು ಹಿಂದೂದೇಶದಲ್ಲಿ ಈ ದೃಷ್ಟಾಂತವನ್ನು ಅನುಸರಿಸಿ ಇಂಥಾ ಹಲವು ಸಂಸ್ಥೆಗಳು ಜನಿಸಲಿ ಎಂಬ ವರದಿಂದಲೂ, ಕೋರಿಕೆಯಿಂದಲೂ ಕೂಡಿದ ಒಂದು ಪತ್ರವನ್ನು ಕಳುಹಿಸಿಕೊಟ್ಟಿರುತ್ತಾರೆ ರೂಪಾಯಿ ೧೦೦೦ ಧನಸಹಾಯವನ್ನೂ ಕಳುಹಿಸಿಕೊಟ್ಟಿರುತ್ತಾರೆ

ಹಿಂದೂದೇಶವೂ ಸೆಂಕ್ಷನುಗಳೂ

ಸೆಂಕ್ಷನುಗಳಲ್ಲಿ ಹಿಂದೂದೇಶವು ಭಾಗವಹಿಸುವಂತೆ ನಮ್ಮ ಸರಕಾರದ ಕಟ್ಟಪ್ಪಣೆಗಳು ಈ ಮೊದಲೆ ಹೊರಟಿವೆ ಇಟೇಲಿಯಿಂದ ಬರುವ ಯಾವತ್ತೂ ಸಾಮಾನುಗಳ ಮೇಲೆ ನಿರ್ಬಂಧವಿದೆ ಆದರೆ ಹಿಂದೂದೇಶದಿಂದ ಇಟೇಲಿಗೆ ಹೋಗುವ ಕೆಲವು ಸರಕುಗಳ ಮೇಲೆ ನಿರ್ಬಂಧವಿರುವುದಿಲ್ಲ ಆದರೆ ಎಲ್ಲಾ ವಹಿವಾಟದಲ್ಲಿ ರೂಪಾಯಿಯನ್ನು ನಗದು ತೆಗೆದುಕೊಳ್ಳಬೇಕಾಗಿ ಅಪ್ಪಣೆಗಳು ಹೋಗಿವೆ ಇಟೇಲಿಗೆ ಹೋಗುವ ಸರಕುಗಳು ನವೀನ ಕ್ರಮಗಳಿಗೆ ಅನುಸಾರವಾಗಿ ಪರೀಕ್ಷಿಸಲು ಅಲ್ಲಲ್ಲಿ ಕಸ್ಟಮ್ಸ್ ಇಲಾಖೆಯವರು ಸ್ಪೆಶಲ್ ಆಫೀಸರರನ್ನು ಇರಿಸಿದ್ದಾರೆ

ಮುಂಬಯಿಯಲ್ಲಿ ಮಹತ್ತಾದ ವಸ್ತುಪ್ರದರ್ಶನ

ಜರ್ಮನಿಯು ಲೈಪ್‌ಜಿಗ್ ಎಂಬಲ್ಲಿ ಅತಿ ಶ್ರೇಷ್ಠವಾದ ವಸ್ತುಪ್ರದರ್ಶನವು ಆಗಾಗ್ಗೆ ಜರಗುತ್ತದೆ ಅದರಲ್ಲಿ ಜರ್ಮನಿಯಲ್ಲಿ ವಾಡಿಕೆಯಲ್ಲಿರುವ ಎಲ್ಲಾ ಕೈಗಾರಿಕೆಗಳನ್ನು ತಯಾರಿಸುವ ಸಾಮಾನುಗಳನ್ನು ಪ್ರದರ್ಶಿಸಲಾಗುವುದು. ಜಗತ್ತಿನ ಎಲ್ಲಾ ಜನಾಂಗಗಳು ಈ ಪ್ರದರ್ಶನದಲ್ಲಿ ಭಾಗವಹಿಸುತ್ತಾರೆ ಅಂತರರಾಷ್ಟ್ರೀಯ ಜನಾಂಗದ ಜನರು ಇಲ್ಲಿ ಒಕ್ಕಟ್ಟಿಂದು ಸೇರುತ್ತಾರೆ ಅಂತೆಯೆ ನಮ್ಮ ಕಾಂಗ್ರೆಸ್ ಸುವರ್ಣ ಮಹೋತ್ಸವದ ನೆನಪಾಗಿ ಒಂದು ಮಹತ್ತಾದ ಪ್ರದರ್ಶನವನ್ನು ಮುಂಬಯಿಯಲ್ಲಿ ಕೂಡಿಸಲಾಗುವುದು ಈ ಪ್ರದರ್ಶನವು ದಶಂಬರ ೨೮ಕ್ಕೆ ಪ್ರಾರಂಭವಾಗಿ ನವವರ್ಷದ ಪ್ರಾರಂಭದ ತನಕ ನಡೆಯುವುದು

ವಿವಾಹ ಕೂಟಕ್ಕೆ ಭಯಂಕರ ಅಪಘಾತ

ಮುಂಬಯಿಯ ಮಲ್ಬಾರ್ ಎಂಬಲ್ಲಿಂದ ಬೊಂಬಾಯಿ ನಗರಕ್ಕೆ ಒಂದು ವಿವಾಹ ಕೂಟವು ಸಂಚಾರ ಬೆಳಸುವಾಗ ಮೋಟಾರುಕಾರು ಒಂದು ವಾಲ್ಕಕ್ಕೆ ಡಿಕ್ಕಿ ಬಡೆದು ಕಾರಿನಲ್ಲಿದ್ದ ೫ ಜನರೂ ಮೃತರಾಗಿರುವರು. ಹಿಂದಿನಿಂದ ಕಾರಿನಲ್ಲಿ ಬರುವ ವಧುವಿನ ತಂದೆಯು ಈ ಅಪಘಾತದಿಂದ ಕಂಪನಗೊಂಡು ಮೃತನಾದನು.

ವಿದೇಶ ವರ್ತಮಾನಗಳು.

ಈಜಿಪ್ಟಿನ ಸ್ವಾತಂತ್ರ್ಯ ಚಳವಳ.

ನವಂಬರ ತಾ. ೨೧ರಲ್ಲಿ ಕೈರೋ ನಗರದಲ್ಲಿ ಒಂದು ವಿಶೇಷ ತರದ ಮುಷ್ಕರವನ್ನಾಚರಿಸಲಾಯಿತು ಎಲ್ಲಾ ವಿದ್ಯಾ ಸಂಸ್ಥೆಗಳೂ, ವ್ಯಾಪಾರ ಸಂಸ್ಥೆಗಳೂ, ಅಂಗಡಿಗಳೂ, ವಾಹನ ಚಲಾವಣೆಯೂ ನಗರದ ಯಾವತ್ತೂ ವ್ಯವಹಾರಗಳೂ ನಡೆಸಲಿಲ್ಲ ಎಲ್ಲೆಲ್ಲೂ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು ೩೦ ಪತ್ರಿಕೆಗಳಿಂದ ಕೂಡಿದ ಅರೆಬಿಕ್ ಪ್ರೆಸ್ಸು ಆ ದಿನ ಪತ್ರಿಕೆಗಳನ್ನು ಹೊರಡಿಸಲಿಲ್ಲ. ಈಗಿನ ಸರಕಾರದ ಧೋರಣೆಯು ಪ್ರತಿಭಟಿಸುವುದೇ ಈ ದೃಶ್ಯಗಳ ಉದ್ದೇಶ

ಕೈರೋದಲ್ಲಿ ಶಾಂತತೆಯು ತಲೆದೋರಿದೆ

ಮುಖ್ಯ ಮಂತ್ರಿಗಳಾದ ನಾಶಿಮ್ ಪಾಶಾರವರು ತನ್ನ ರಕ್ಷಣೆ ಮಾಡಿಕೊಳ್ಳಲು ಬ್ರಿಟಿಷ ಸರಕಾರದೊಡನೆ ಇಜಿಪ್ಟಿನ ಸಲಹೆಗಳನ್ನು ನೆರವೇರಿಸಲು ಬಿನ್ನವಿಸಿದ್ದಾರೆ. ಎಲ್ಲಾ ತಂಡದವರು ಬ್ರಿಟನಿನಿಂದ ಯೋಗ್ಯ ಉತ್ತರ ಬರುಬಹುದೆಂದು ನಿರೀಕ್ಷಿಸುತ್ತಿದ್ದಾರೆ

ರಾತ್ರಿಯಲ್ಲಿ ಕಾಮನಬಿಲ್ಲು!

ಲಂಡನಿನಲ್ಲಿ, ಮೊನ್ನೆ ರಾತ್ರಿ ಆಕಾಶದಲ್ಲಿ ಕಾಮನಬಿಲ್ಲು ಕಾಣಿಸಿತು ಆ ರಾತ್ರಿ ತುಂಬಾ ಮಳೆ ಸುರಿದಿತ್ತು ಕಾಮನಬಿಲ್ಲು ಸಾಧಾರಣ ೪ ಘಂಟೆ ೧೦ ನಿಮಿಷದಲ್ಲಿ ಗೋಚರವಾಯಿತು ಮಳೆಯ ದೆಸೆಯಿಂದ ಚಂದ್ರಪ್ರಕಾಶದಿಂದ ಈ ಕಾಮನ ಬಿಲ್ಲು ಆ ಸ್ತ ಸಮಯದಲ್ಲಿ ಕಾಣಿಸಿತು ಎಂದು ಈಗ ಭಾವಿಸಲಾಗಿದೆ

ಭಯಂಕರ ಜ್ವಾಲಾಮುಖಿ!

ಹೊನಲುಲೂ ಎಂಬಲ್ಲಿ ಅನೇಕ ವರ್ಷಗಳಿಂದ ಸುಮ್ಮಗಿದ್ದ ಮೌನಾಲೋ ಎಂಬ ಜ್ವಾಲಾಮುಖಿಯು ಮೊನ್ನೆ ಜೀವಗೊಂಡಿದೆ. ಅದರ ಹತ್ತಿರದಲ್ಲಿರುವ ಹಿಲೊ ಎಂಬ ನಗರದ ೨೦,೦೦೦ ನಿವಾಸಿಗಳು ತಮ್ಮ ಮನೆ ಮಠಗಳನ್ನು ತ್ಯಜಿಸಿ ಪಲಾಯನಮಾಡಬೇಕಾಯಿತು. ಈ ಜ್ವಾಲಾಮುಖಿಯ ಬಾಯಿಯಿಂದ ಕರಗಿದ ಲಾವಾ ನದಿಯು ಪಟ್ಟಣದ ಮೇಲೆ ಹರಿದುಹೋಗಿದೆ.

ವಿದೇಶದಲ್ಲಿ ಕಾಂಗ್ರೆಸ್ ಪ್ರಸ್ತಾರಣೆ.

ಗ್ರೇಟ ಬ್ರಿಟನಿನ ಭಾರತ ಕಾಂಗ್ರೆಸ್ ಕಮಿಟಿಯವರು, ಆಯರ್ಲೆಂಡಿನ ಡಬ್ಲಿನ ಎಂಬಲ್ಲಿ ಒಂದು ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಬೇಕಾಗಿ ನಿರ್ಣಯಿಸಿದ್ದಾರೆ ಬ್ರಿಟನಿನ ಕಾಂಗ್ರೆಸ್ ಕಾರ್ಯದರ್ಶಿಗಳು ಡಬ್ಲಿನಿಗೆ ಈ ಕಾರ್ಯ ನಿಮಿತ್ತವಾಗಿ ಬೇಗನೆ ಪ್ರಯಾಣ ಬೆಳೆಸುವರು

ಉತ್ತರ ಚೀನಾದ ಸ್ಥಿತಿ.

ಜಪಾನಿಯರಿಗೆ ಅನುಗುಣವಾಗಿ ಉತ್ತರ ಚೀನಾ ದೇಶದ ಕೆಲವು ಪ್ರಾಂತ್ಯಗಳಲ್ಲಿ ಸ್ವರಾಜ್ಯದ ಹಕ್ಕುಗಳುಳ್ಳ ಸರಕಾರವನ್ನು ರಚಿಸಲು ಪ್ರಯತ್ನಗಳು ನಡೆಯುತ್ತಿವೆ ಕೆಲವು ಕಡೆಗಳಲ್ಲಿ ಸ್ವತಂತ್ರ ರಾಜ ಸ್ಥಾಪನೆಗಳಾಗಿವೆ ಆದರೆ ಕೆಲವೆಡೆಗಳಲ್ಲಿ ಜಪಾನಿಯರ ಅಧೀನಸ್ಥರನ್ನು ಹೊಡೆದೋಡಿಸಿದ್ದಾರೆ ಜಪಾನಿಯ ನಾಯಕರು ಉತ್ತರ ಚೀನಾವನ್ನು ಸ್ವತಂತ್ರವನ್ನಾಗಿ ಮಾಡಿ ಜಪಾನಿನ ಒಡಿ ಸೇರಿಸುವ ಕಾರ್ಯವನ್ನು ಸಾಧಿಸಲು ಇಲ್ಲಿಗೆ ಬಂದಿರುವರು ಉತ್ತರ ಚೀನಾದಲ್ಲಿ ಎಲ್ಲೆಲ್ಲೂ ದಂಗೆ ಉಂಟಾಗಿದೆ

ಮೆಟ್ಸೂರಿನಲ್ಲಿ ಭೂಕಂಪ

"ಉಸ್ಸಿವೆಟ್ಸೂರಿನ ಪ್ರದೇಶದಲ್ಲಿ ಭೂಮಿಯು ಕೆಲವು ಸೆಕೆಂಡುಗಳು ಕಂಪಿಸಿತು ಎಂದು ತಿಳಿದು ಬಂದಿದೆ ಹೀಗೆ ಕೆಲವು ದಿವಸಗಳ ಹಿಂದೆ ಭೂಮಿಯು ಇಲ್ಲಿ ಕಂಪನವಾಗಿತ್ತು ಹಾನಿಯೇನೂ ಉಂಟಾಗಲಿಲ್ಲ ಆದರೆ ಭಯಂಕರ ಒಂದು ಕಂಪನವು ಮೆಟ್ಸೂರಿಗೆ ಸ್ವಲ್ಪ ದೂರದಿಂದ ಹಾದುಹೋಗಿದೆ" ಎಂದು ತಿಳಿದು ಬರುತ್ತದೆ

ಲಂಡನಿಗೆ ತೆರಳಿಸಿದ ಪಂ। ಜವಾಹರ್‌ಲಾಲ್ ನೆಹರುರವರನ್ನು ಅಲ್ಲಿನ ಭಾರತೀಯರು ಸ್ವಾಗತವಿತ್ತಿಯುವಾಗ ತೆಗೆದ ಭಾವಚಿತ್ರ ಚಿತ್ರದಲ್ಲಿ ಹಿಂದೂರಮಣಿಯೋರ್ವಳು ಶ್ರೀಯುತರಿಗೆ ಹಣೆಯಲ್ಲಿ ತಿಲಕವನ್ನಿಡುತ್ತಾಳೆ

YES! GOOD BANKERS ARE CAREFUL!

SOME PEOPLE HAVE SEEMED PRONE TO BELIEVE THAT THEY WERE HURLING A REAL INDICTMENT AT BANKS WHEN THEY CHARGED THE BANKERS WITH BEING TOO CAREFUL AND TOO CONSERVATIVE

WHAT DO YOU THINK ABOUT IT?

WHEN YOU DEPOSIT YOUR MONEY IN THE BANK MONEY WHICH MAY REPRESENT THE LIFE BLOOD OF YOUR BUSINESS MONEY WHICH MAY REPRESENT THE FRUITS OF HARD WORK AND SACRIFICE ON THE PART OF YOURSELF AND YOUR FAMILY—DO YOU THINK THAT THE BANK CAN BE TOO CAREFUL IN HANDLING IT? DO YOU THINK THAT THEY CAN BE TOO CAUTIOUS IN CHECKING THE FINANCIAL CONDITION AND THE ABILITY TO REPAY OF INDIVIDUAL SEEKING TO BORROW THAT MONEY?

IF YOU ARE A BANK CUSTOMER CAST A KINDLY EYE ON THE LOAN OFFICERS OF YOUR BANK THEY WELL MERIT IT THEIRS IS THE UNENVIABLE TASK OF STUDYING SIFTING ANALYZING AND PASSING JUDGEMENT ON THE LOAN REQUESTS WHICH MAY ULTIMATELY INVOLVE YOUR MONEY AND MINE

YES, THESE MEN ARE CAREFUL—THEY REALIZE THEIR RESPONSIBILITY TO THE MEN AND WOMEN WHOSE MONEY THEY ARE HANDLING

ESTD 1906

CANARA BANK LIMITED.

WANTED

...getic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್
ಸಾರ್ಸ ಪೆರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೫೫ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಪರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೪
ಸ್ಟಾಕಿಸ್ಟ್ — ಪೈ ಕಂಪನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA AND MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache It is a complete substitute for the domestic medicine chest Try once this unequalled remedy In ½oz tin As 3 - In oz. jar As 12 -

Superior Red Balm For relieving pains in muscles and on skin Directions for use with the bottle Price As 12 - only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as redical remedy and warmly recommed it All those who suffer from worms children and adults, try this unique remedy and be freed from your ailment Price As 10 per packet.

Pocket Inhaler For coughs and hoarseness, headache catarrch, colds use this inhaler and you will be relieved immediately Price per inhaler As 6 A As 8 -

'Po-Ho Fluid For Asthma, colds, indigestion toothache lumbago, a sure remedy in all cases Price As 6 and Re 1/ per phial

Cough Cure An infallible remedy for coughs of all kinds bronchitis, hoarseness Particulars in bottle Price As 12 - for 3 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As 1 8, 2 6, 3,-, 4,

Basel Mission Book Depot
Mangalore, Branches in Codialbail Hubli, Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯಶೋಧನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಫುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವನಿತಾ ವಿಭಾಗ

ಜಪಾನಿನ ಸ್ತ್ರೀಯರು

ಶ್ರೀ|| ಎಸ್. ಎಸ್. ಶಾ ಎಂಬವರು ಭಾರತ ಪ್ರಯಾಣ ಮಾಡಿದ ಪ್ರಸಿದ್ಧ ಭಾರತೀಯ ಸ್ತ್ರೀ. ವೊನ್ನೆ ಒಂದು ವಿದ್ಯಾಸಂಸ್ಥೆಯ ಮುಂದೆ ಸ್ತ್ರೀಯರ ಕುರಿತು ಭಾಷಣ ಮಾಡುತ್ತಿರುವಾಗ, ಜಪಾನಿನ ಸ್ತ್ರೀಯರ ಕುರಿತು ಹೀಗೆಂದರು :- "ಪೂರ್ವದ ದೇಶಗಳಲ್ಲಿ ಸ್ತ್ರೀಯರಿಗೆ ವಿಶೇಷ ಸ್ವಾತಂತ್ರ್ಯವಿಲ್ಲ. ಆದರೆ ಜಪಾನಿನ ಕುರಿತು ವಿಚಾರಿಸುತ್ತಿರುವಾಗ ಇದನ್ನು ಮರೆಯಬೇಕಾಗಿದೆ. ಅಲ್ಲಿ ಸ್ತ್ರೀಯರ ಸಂಘಗಳೇ ಇಲ್ಲ. ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಸ್ತ್ರೀಯರು ಇಲ್ಲ. ಆದರೆ ಅಲ್ಲಿನ ಸ್ತ್ರೀಯರಿಗೆ ಇರುವ ಸ್ವಾತಂತ್ರ್ಯವು ಅಷ್ಟು ಕುಂದಿದ ಬೇರೊಂದು ದಿಕ್ಕಿನಲ್ಲಿಲ್ಲ. ನಾವು ಶ್ರಮಪಟ್ಟು ಪಡೆಯಬೇಕಾದ ಸ್ವಾತಂತ್ರ್ಯವನ್ನು ಅವರಿಗೆ ಸಹಜವಾಗಿ ಬಂದಿರುತ್ತದೆ. ಅಲ್ಲಿ ಸ್ತ್ರೀಯರ ಮೇಲ್ಮೆಯನ್ನು ಬಯಸುವ ಸಂಸ್ಥೆಗಳ ಅಗತ್ಯವಿಲ್ಲ. ಸ್ತ್ರೀಯರು ಟೈಪಿಸ್ಟರಾಗಿ ಕೆಲಸ ಮಾಡುತ್ತಿದ್ದಾರೆ. ಟ್ರಾಮಿನ ಕಂಡಕ್ಟರಾಗಿದ್ದಾರೆ. ಟೆಲಿಫೋನ ಒಪರೇಟರಾಗಿರುತ್ತಾರೆ. ಬಸ್ ಡ್ರೈವರರಾಗಿರುತ್ತಾರೆ ಮತ್ತು ಆಫೀಸು ಟ್ಯೂಪಿಸ್ಟರಾಗಿರುತ್ತಾರೆ. ಮಗುವನ್ನು ಬೆನ್ನಿನ ಮೇಲೆ ಕಟ್ಟಿ ಅವರು ಸದಾ ದಣಿಯುತ್ತಿದ್ದಾರೆ. ಸಮಾಜದಲ್ಲಿ ಅವರಿಗೆ ಹಲವು ಹಕ್ಕು ಬಾಧ್ಯತೆಗಳಿವೆ; ಎಲ್ಲೆಲ್ಲೂ ಸ್ತ್ರೀಯರು ಪುರುಷರೊಡನೆ ಉದ್ಯೋಗಿಸುವುದು ನೀವು ಕಾಣಬಹುದು. ಆದರಿಂದ ನಮ್ಮಲ್ಲಿ ಕಾರ್ಯಿಸುವ ಸ್ತ್ರೀ ಸಂಘಗಳ ಆಲೋಚನೆ ಕೂಡ ಇವರಿಗೆ ಬರಲಿಲ್ಲ. ಈ ಸ್ಥಿತಿ ಶ್ಲಾಘನೀಯವೋ? ಅವರು ನಮಗಿಂತ ಶ್ರೇಷ್ಠರೋ?

ಹಿಂದೂದೇಶದ ಸ್ತ್ರೀ

ಯರಲ್ಲಿ ಅನೇಕರು ಈಗ ಪುರುಷರ ನ್ಯಾಯಾಲಯದಲ್ಲಿ ನಡೆಯುತ್ತಿದ್ದಾರೆ. ಹಲವು ಯೋಗ್ಯ ಸ್ತ್ರೀಯರು ಮೆಜಿಸ್ಟ್ರೇಟರ ಕೆಲಸವನ್ನು ನೋಡುತ್ತಿದ್ದಾರೆ. ಲಕ್ನೋದಲ್ಲಿ ಬೇಗಮ್ ಹಬೀಬುಲ್ಲಾ ಸಾಹೇಬಾ ಎಂಬ ಸ್ತ್ರೀಯು, ಪುರುಷ ಮೆಜಿಸ್ಟ್ರೇಟರ ಸಹಾಯವಿಲ್ಲದೆ ಕೋರ್ಟಿನಲ್ಲಿ ಕ್ರಮಗಳನ್ನು ನಡೆಸುತ್ತಿದ್ದಾರೆ. ಸ್ತ್ರೀಯರ ಕೋರ್ಟಿನ ಚಟುವಟಿಕೆಯಲ್ಲಿ ಬರೆ ಮಕ್ಕಳ ತಪ್ಪುಗಳಲ್ಲದೆ ದೊಡ್ಡದೊಡ್ಡ ಪೋಲೀಸ ಕೇಸ್‌ಗಳನ್ನು ತೀರ್ಮಾನಿಸುತ್ತಾರೆ. ಸಧ್ಯದಲ್ಲೆ ಸ್ತ್ರೀಯರು ಈ ವಿಚಾರದಲ್ಲಿ ಹೆಚ್ಚಿನ ಮನ್ನಣೆ ಪಡೆಯುವರೆಂದು ಭರವಸೆ.

ಸ್ತ್ರೀಯರೂ, ಸ್ಥಳೀಕ ಸಂಸ್ಥೆಗಳು.

ಸಂಯುಕ್ತ ಪ್ರಾಂತ್ಯದ ಅನೇಕ ಸ್ತ್ರೀಯರು ದಿನೇ ದಿನೇ ವೃದ್ಧಿ ಹೊಂದುತ್ತಿದ್ದಾರೆ. ಸ್ತ್ರೀಯರಿಗೆ ನಗರ ಸಭೆಗಳಲ್ಲೂ, ಜಿಲ್ಲಾ ಬೋರ್ಡುಗಳಲ್ಲೂ ಸದಸ್ಯತನವನ್ನು ಪಡೆಯುವ ಹಕ್ಕನ್ನು ಇನ್ನೂ ಅಲ್ಪ ವರ್ಷಗಳ ತನಕ, ಜೀವದಲ್ಲಿರುವಂತೆಯೂ ಮತ್ತು ಸ್ತ್ರೀಯರಿಗೆ ಯಾವಾಗಲೂ ಸ್ಥಳೀಕ ಸಂಸ್ಥೆಗಳಲ್ಲಿ ಸ್ಥಾನ ಸಿಕ್ಕುವಂತೆಯೂ ನ್ಯಾಯ ವಿಧಾಯಕ ಸಭೆಯು ಕ್ರಮವಾಗುವಂತೆಯೂ, ಅಲ್ಲಹಾಬಾದಿನ ಪ್ರಸಿದ್ಧ ಲೇಡಿ ಶ್ರೀವಾಸ್ತವರು ಪ್ರಯತ್ನಿಸುತ್ತಿದ್ದಾರೆ. ಇವರ ತನಕ, ಸ್ತ್ರೀ ಸದಸ್ಯರಿಂದ ಅಲ್ಲಲ್ಲಿಯ ವಿದ್ಯಾಭ್ಯಾಸಂಗವು, ಶಿಶುಗಳ ಉದ್ಧರಣಾ ಕಾರ್ಯವು ಬಹಳ ತೃಪ್ತಿಕರವಾಗಿ ನಡೆದಿದೆ. ನಗರ ಸಭೆಗಳಲ್ಲಿ ಸ್ತ್ರೀಯರಿಗೆ ಹೆಚ್ಚಿನ ಸ್ಥಾನಗಳನ್ನು ಕೊಡಬೇಕಾಗಿ ಚಳವಳಿ ನಡೆಯುತ್ತದೆ.

ಮಕ್ಕಳನ್ನು ಕಾಪಾಡುವ ಸಂಸ್ಥೆ.

ಕಲ್ಕತ್ತಾ ನಗರದ ಬೊಂಬ್ರಾ ಬಜಾರ್ ಎಂಬಲ್ಲಿ ಶಿಶುಗಳನ್ನು ಯೋಗ್ಯ ರೀತಿಯಲ್ಲಿ ಸಲಹಲು ಮತ್ತು ಅವುಗಳಿಗೆ ಒಂದು ನರ್ಸರಿ ಶಾಲೆಯಂತೊಡಗೂಡಿದ ಒಂದು ಸಂಸ್ಥೆಯು ಓರ್ವ ಆಂಗ್ಲೇಯ ಸ್ತ್ರೀಯರ ಕೈಯಲ್ಲಿ ಉತ್ತಮ ರೀತಿಯಲ್ಲಿ ನಡೆಯುತ್ತದೆ. ತಾಯಂದಿರು ಉದರ ಪೋಷಣೆಗಾಗಿ ಅಲ್ಲಲ್ಲಿ ಕೆಲಸಕ್ಕೆ ಸೇರಿದ ಸಮಯ ಈ ಸಂಸ್ಥೆಯಲ್ಲಿ ಮಕ್ಕಳಿಗೆ ಯೋಗ್ಯವಾದ ಆಹಾರದಿಂದಲೂ, ವಿನೋದ ಆಟಪಾಟಗಳಿಂದಲೂ ಉಪಚರಿಸುತ್ತಿದ್ದಾರೆ. ಮಾತ್ರವಲ್ಲದೆ ಶಿಶು ಆರೋಗ್ಯ ವಿಚಾರ ಪ್ರಸಾರಣ ಕಾರ್ಯವನ್ನು ಮಾಡುತ್ತಿದ್ದಾರೆ. ನಮ್ಮ ಹಿಂದೂದೇಶದಲ್ಲಿ ಹಲವು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಸ್ತ್ರೀಯರು ದುಡಿಯುತ್ತಿದ್ದಾರೆ. ಕಾರ್ಖಾನೆಗಳು ಅವರ ಮಕ್ಕಳಿಗೆ ನೋಟದ ಸಂಸ್ಥೆಯಲ್ಲಿ ಏರ್ಪಾಡನ್ನು ಮಾಡಿರುತ್ತಾರೆ. ಆದರೆ, ಕಾರ್ಖಾನೆಗಳ ಮಾಲೀಕರ ಹಿತದಲ್ಲೂ ಬಡ ಮಕ್ಕಳ ಹಿತದಲ್ಲೂ ಇಂಥಾ ಸಂಸ್ಥೆಗಳೂ ನಮ್ಮಲ್ಲಿ ಇನ್ನೂ ಹೆಚ್ಚಬೇಕಾಗಿದೆ!

ಸ್ತ್ರೀಯರ ಇತ್ತೀಚಿಗಿನ ಚಟುವಟಿಕೆ.

ಹಲವು ಸ್ತ್ರೀಯರು, ಪುರುಷರೊಡನೆ, ಎಲ್ಲಾ ಕಾರ್ಯರಂಗಗಳಲ್ಲಿ ಗೌರವ ಸ್ಥಾನವನ್ನು ಪಡೆಯಲು ಪ್ರತಿಸ್ಪರ್ಧಿಸುತ್ತಿದ್ದಾರೆ. ಆಟ, ವಿನೋದ ರಂಗದಲ್ಲಿ ಎಲ್ಲಾ ಜನಾಂಗದ ಸ್ತ್ರೀಯರು ಪುರುಷರೊಡನೆ ಕೀರ್ತಿ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಎಮಿ ಮೋರಿಸನ್ ಎಂಬ ಸ್ತ್ರೀಯು, ವಿಮಾನದ ಸಂಚಾರದಲ್ಲಿ ಪರಾಕ್ರಮವನ್ನೂ ಧೀರತೆಯನ್ನೂ ತೋರಿಸಿ ಇಂಗ್ಲಾಂಡಿನಿಂದ ಆಸ್ಟ್ರೇಲಿಯಾಕ್ಕೆ ಒಬ್ಬಂಟಿಗಳಾಗಿ ಹಾರಿ ಬಹಳ ಕೀರ್ತಿಯನ್ನು ಪಡೆದಳು. ಅಂತೆಯೆ ಹಿಂದೂ ದೇಶದ ಮಿಸ್ ಮಣಿ ಗೋಶ್ ಎಂಬವಳು ಈಜಾಡುವಿಕೆ ಪ್ರಸಿದ್ಧ ಸ್ಥಾನವನ್ನು ಪಡೆದಿರುವಳು.

ಮಕ್ಕಳ ಆರೈಕೆ

ಮಗುವು ಸ್ವಲ್ಪ ತಿಂಗಳು ಪ್ರಾಯಸ್ಥವಾದ ಮೇಲೆ ಅವರ ಕಷ್ಟಗಳು ಕಡಿಮೆಯಾಗುವವು ಎಂದು ಕೆಲವು ತಾಯಂದಿರ ನಂಬಿಗೆ. ಆದರೆ, ಕೆಲವು ತಿಂಗಳುಗಳು ದಾಟಿದ ಕೂಡಲೆ, ಮಗುವಿನ ವಿಷಯ ಹೆಚ್ಚು ಶ್ರಮವನ್ನೂ ಜಾಗ್ರತೆಯನ್ನೂ ತೆಗೆದುಕೊಳ್ಳಬೇಕಾಗಿ ಇವಳಿಗೆ ತೋರಿ ಬರುವುದು. ತಿಂಗಳುಗಳು ವರ್ಷವಾದ ಮೇಲೆ ಅವಳ ಶ್ರಮಗಳು ಕಡಿಮೆಯಾಗುವವು ಎಂದು ನಂಬುವಳು, ಆದರೆ ವರ್ಷ ಹೋಗುತ್ತಾ ಅವಳ ಮಗುವಿನ ವಿಷಯವಾದ ಶ್ರಮಗಳೂ ಚಿಂತೆಗಳೂ ಹೆಚ್ಚುತ್ತಾ ಹೋಗುತ್ತವೆ. ಮಗುವಿನ ಉತ್ತಮ ಹವ್ಯಾಸ ತಾಯಿಯ ಸಿಸ್ತೀಕೆ ಕಾರಣವಾಗುವುದು. ಮನೆಯ ಕೆಲಸದಲ್ಲಿ ಮಗ್ನಳಾದ ತಾಯಿಯು ತನ್ನ ದಾದಿಯ ಕೈಯಿಂದ ತನ್ನ ಮಗುವಿಗೆ ಯಾವ ಕಷ್ಟಗಳು ಒದಗಿರಬಹುದು ಎಂದು ಚಿಂತಿಸುವಳು. ಮಗುವಿಗೆ ಅಪಾಯಗಳು ಒದಗುವವೊ ಎಂದು ಇವಳು ಭೀತಳಾಗುವಳು; ಆದರೂ ಮಗುವನ್ನು ಸರಿಯಾದ ರೀತಿಯಲ್ಲಿ ಹತೋಟಿಯಲ್ಲಿರಿಸಲು ಇವಳಿಗೆ ಸಾಧ್ಯವಾಗುವುದೆ? ಮಗುವನ್ನು ಅಲ್ಲಸಲ್ಲದ ದಿಕ್ಕುಗಳಲ್ಲಿ ಓಡಾಡಿದಕ್ಕೆ ಶಿಕ್ಷಿಸುವಳು. ಒಂದು ಮಗುವಿನ ಬುದ್ಧಿಯೂ ಆರೋಗ್ಯವೂ ಕ್ರಮೇಣ ವೃದ್ಧಿ ಹೊಂದುತ್ತಾ ಇರುತ್ತದೆ. ಅದು ಆರೋಗ್ಯವಂತರಾಗಿದ್ದರೆ, ಮಂಚಾ ಆಹಾರವನ್ನು ತಿನ್ನುವ ಬವಣೆಯು ಇರುವುದು. ಅದಕ್ಕೆ ಎಲ್ಲವೂ ಹೊಸದಾಗಿ ಕಂಡುಬರುವ ಬಹಳ ಕುತೂಹಲದಿಂದ ತಲ್ಲಣಿಸುವುದು. ಇದರ ಈ ಯೋಗ್ಯ ಭಾವಗಳನ್ನು ಕಡೆಯುವುದು ಅಸಾಧ್ಯ. ಜ್ಞಾನಸ್ಥಾಪನೆ ಮತ್ತು ಕುತೂಹಲವು ಅದನ್ನು ಅಷ್ಟು ಕಲ್ಲಿಸಗೊಳ್ಳುವಂತೆ ಮಾಡುತ್ತದೆ. ಮನೆಯಲ್ಲಿ, ತೋಟದಲ್ಲಿ, ವಿಹಾರ ಸ್ಥಳಗಳಲ್ಲಿ, ಕುತೂಹಲದ ವಸ್ತುಗಳು ಕಾಣಬರುವವು. ಯಾವಾಗಲೂ ಅದರ ಹತ್ತರ ತುಂಬಾ ಪ್ರಶ್ನೆಗಳಿರುವವು. ತಾನು ಕುತೂಹಲಪಟ್ಟ ವಸ್ತುವನ್ನು ಪರೀಕ್ಷಿಸಲು ಇದು ಸೋಧಿಸುವದು. ತೋಟದಲ್ಲಿ ಎಲ್ಲಿಯಾದರೂ ಒಂದು ಸುಂದರ ಪುಷ್ಪವನ್ನು ಕಂಡರೆ ಓಡಿಹೋಗಿ ಅದನ್ನು ಕಿತ್ತು ತರುವದು. ಇದರಲ್ಲಿ ತಾನೂ ಯಾವತಪ್ಪು ಅನ್ಯಾಯ ಮಾಡಿದವನಾಗಿ ಇದಕ್ಕೆ ಭಾಸವಾಗುವುದಿಲ್ಲ. ತನ್ನ ಸ್ವಭಾವದಿಂದ ಬಂದ ಆಸ್ಥೆಯನ್ನ ಪೂರೈಸುವದು, ಇದರಿಂದ ತೋಟದ ಮಾಲೀಕನು ದುಃಖಿತನಾಗುವನೆಂದು ಇದಕ್ಕೆ ತಿಳಿಯುವುದಿಲ್ಲ. ತೋಟದ ಸೌಂದರ್ಯವನ್ನು ಹಾಳುಮಾಡಿದ್ದೆನೆಂದು ಭಾವನೆಯು ಕೂಡ ಬರುವುದಿಲ್ಲ. ಎಷ್ಟು ಬಯ್ದರೂ ಇದನ್ನು ಸರಿಮಾಡುವಂತಿಲ್ಲ. ಅದೇ ಸ್ಥಳಕ್ಕೆ ಮತ್ತೊಮ್ಮೆ ತೆಗೆದುಕೊಂಡು ಹೋದರೆ ಮುಂಚಿನ ಕಾರ್ಯವನ್ನೆ ಮಾಡುವುದು. ಅದು ಈ ರೀತಿ ವರ್ತಿಸದಂತೆ, ಆ ಗಿಡದಲ್ಲಿ ಜೀವವಿರುವುದೆಂದೂ ಪುಷ್ಪವನ್ನು ಕಿತ್ತರೆ ಅದಕ್ಕೆ ತನ್ನ ಬೆರಳನ್ನು ಕಡಿದರೆ ಯಾವ ರೀತಿ ನೋವಾಗುವುದೊ ಅದೇ ರೀತಿ ನೋವುಂಟಾಗುವುದೆಂದು ಮೃದುವಾದ ಮಾತುಗಳಲ್ಲಿ ತಿಳಿಸತಕ್ಕದು. ಕೆಲವು ಸಮಯ ಕಥೆಗಳ ರೂಪದಲ್ಲಿ ಪುಷ್ಪಗಳನ್ನು ಕಿತ್ತ ಮಕ್ಕಳಿಗೆ ದೇವರು ಯಾವ ರೀತಿ ಶಿಕ್ಷಿಸುವನು ಎಂದು ವರ್ಣಿಸಿದರೆ, ಅವು ಫಲವನ್ನು ಬಿಡುವವು. ವನಸ್ಪತಿ ಶಾಸ್ತ್ರವನ್ನು ಮಕ್ಕಳಿಗೆ ತಿಳಿಯುವ ರೀತಿಯಲ್ಲಿ ಸುಲಭವಾಗಿ ವಿವರಿಸಿದರೆ ಅವರು ಅದರಲ್ಲಿ ಆಸಕ್ತಿ ಪಡೆಯುವವರಾಗುತ್ತಾರೆ.

ಮಕ್ಕಳಿಗೆ ಇನ್ನೊಂದು ಕೆಟ್ಟ ಅಭ್ಯಾಸವು ನೋಡಿದನ್ನು ಮುಟ್ಟುವುದು. ಅಸ್ಕರ ಮನೆಗಳಲ್ಲೂ ಅಂಗಡಿಗಳಲ್ಲೂ ಇರುವ ಸಾಮಾನುಗಳನ್ನು ತೆಗೆಯುವುದು ಮಕ್ಕಳ ಸ್ವಭಾವ. ಅವರು ಈ ಕೆಟ್ಟ ಅಭ್ಯಾಸವನ್ನು ಬಿಡುವಂತೆ ಮಾಡಲು, ತೆಗೆದ ಸಾಮಾನುಗಳನ್ನು ಅವರಿಂದಲೇ ತೆಗೆದ ಸ್ಥಳಗಳಲ್ಲಿ ಇಡಿಸಬೇಕು. ಅಗ್ಗೆ ಅವನು ಅವಮಾನಗೊಂಡು, ಆ ಕೆಟ್ಟ ವೃತ್ತಿಯನ್ನ ಮುಂದಕ್ಕೆ ಯಾವಾಗಲೂ ಮಾಡಲಾರರು. "ನಿನ್ನನ್ನು ಶಿಕ್ಷಿಸುತ್ತೇನೆ. ಕತ್ತಲೆಕೋಣೆಯೊಳಗೆ ಹಾಕುತ್ತೇನೆ" ಎಂಬ ಗದರಿಕೆಗಳು ಪ್ರಯೋಜನಕಾರಿಯಾಗುವುದಿಲ್ಲ. ಮಕ್ಕಳ ಕುತೂಹಲವನ್ನು ಸಮಾಧಾನಮಾಡಿದ ಹೊರತು ಅವರು ಸುಮ್ಮನಿರುವುದಿಲ್ಲ. ಮಗುವು ಯಾವುದಾದರೂ ಅಪಾಯ ಸಂಭವಿಸುವ ಕಾರ್ಯದಲ್ಲಿ ಕೈ ಹಾಕದಂತೆ ಸುಲಭವಾದ ಮಾತುಗಳಲ್ಲಿ ಆ ಅಪಾಯದ ಅರಿವನ್ನು ಅದರ ತಲೆಯಲ್ಲಿ ಹಾಕತಕ್ಕದು. ಅಪಾಯ ಬರುತ್ತದೆಂದು ಗದರಿಸಿದರೆ ಅವುಗಳು ಕೇಳುವ ಹಾಗಿಲ್ಲ. ಅಪಾಯ ಬರುವುದೆಂದು ಅವುಗಳ ಮನಸ್ಸಿನಲ್ಲಿ ಸೇರಿದರೆ ನಂತರ ಅಂಥಾ ಕಾರ್ಯಗಳಲ್ಲಿ ಕೈಹಾಕುವುದಿಲ್ಲ. ಮಾತ್ರವಲ್ಲದೆ ತನ್ನ ಸಹಪಾಠಿಗಳಿಗೆ ಎಚ್ಚರಿಕೆಯನ್ನು ಕೊಡುವುವು.

ಭೂತಪ್ರೇತಗಳ ಕಥೆಗಳಿಂದಲೂ, ಕತ್ತಲೆ ಕೋಣೆಯಲ್ಲಿ ಹಾಕಲ್ಪಡುವೆನೆಂದೂ, ಮೊದಲಾದ ಕಪ್ರರ ಅಭ್ಯಾಸಗಳಿಂದ ಮಕ್ಕಳನ್ನು ಭೀತಿ ಪಡೆಯುವಂತೆ ಮಾಡುವುದು ಬಹಳ ಹಾನಿಕರ. ಕೆಲವು ಮಕ್ಕಳು ಕತ್ತಲೆ ಕೋಣೆಯಲ್ಲಿ ಪ್ರಜ್ಞೆ ತಪ್ಪುವುದು ಉಂಟು. ಚಿಕ್ಕಂದಿನಲ್ಲಿ ಭೀತಿಯುಳ್ಳ ಮಕ್ಕಳು, ದೊಡ್ಡವಾದ ಮೇಲೆ ನರಗಳ ಸಂಬಂಧವಾದ ರೋಗದಿಂದ ಪೀಡಿತರಾಗುವರು. ಈ ರೀತಿ ಒಂದು ಶಿಶುವನ್ನು ಎಚ್ಚರಿಸುವುದು ಅಹಿತಕರ. ಯಾಕೆಂದರೆ ಎಚ್ಚರಿಕೆಗಳಿಗೆ ಸರಿಯಾಗಿ ಯಾವತ್ತು ಅಪಾಯಗಳು ತನಗೆ ಒದಗದಿದ್ದರೆ, ಅದು ಆ ಕಾರ್ಯವನ್ನು ಮತ್ತೊಮ್ಮೆ ಮಾಡುವುದು. ಅಕನನ್ನು ಅಧಿಕಾರದಲ್ಲಿಡಲು ಸಾಧ್ಯವಾಗದು. ತಂದೆತಾಯಿಯು ಈ ಬಗೆಯ ಸುಳ್ಳಿನಿಂದ ಮಗುವು ಕೂಡ ಸುಳ್ಳಿನಲ್ಲಿ ಪಾಠ ಹೊಂದುವುದು.

ಕೆಲವು ಸೂಚನೆಗಳು.

ಮುಖಕ್ಕೆ ಪೌಡರನ್ನು ಉಪಯೋಗಿಸುವ ಸ್ತ್ರೀಯರಿಗೆ ಎಚ್ಚರಿಕೆ!

ನಿಮ್ಮ ಮುಖದ ಚರ್ಮವು ಏನೊಂದೂ ತೊಡಕುಗಳಿಲ್ಲದೆ ಆರೋಗ್ಯಕರವಾಗಿ ಬಾಳಬೇಕಾದರೆ ನೀವು ಯಾವತ್ತೂ ಕಡಿಮೆ ಪೌಡರುಗಳನ್ನು ಉಪಯೋಗಿಸಬಾರದು. ಆದರೆ, ನಿಮ್ಮ ಮುಖದ ಸೌಂದರ್ಯಕ್ಕಾಗಿ ಪೌಡರನ್ನು ಉಪಯೋಗಿಸುವಿರಾದರೆ, ಈ ಕೆಳಗಿನ ಕ್ರಮಗಳನ್ನು ಅನುಸರಿಸಿರಿ.

ಪೌಡರನ್ನು ಖಾಲಿ ಮುಖದ ಮೇಲೆ ಎಷ್ಟಕ್ಕೂ ಉಪಯೋಗ ಮಾಡಬೇಡಿ. ಅದು ನಿಮ್ಮ ಚರ್ಮದ ರಂಧ್ರಗಳನ್ನು ಅಂದರೆ ಸೂಕ್ಷ್ಮ ರಂಧ್ರಗಳನ್ನು ಮುಚ್ಚುವುದರಿಂದ ಚರ್ಮಕ್ಕೆ ಬಹಳ ಹಾನಿಯುಂಟಾಗುವುದು. ಪೌಡರನ್ನು ಉಪಯೋಗಿಸುವ ಮೊದಲು ಚರ್ಮದ ರಂಧ್ರಗಳು ಭದ್ರವಾಗಿರುವಂತೆ, ಮುಖದ ಮೇಲೆ 'ವ್ಯಾನಿಶಿಂಗ್ ಕ್ರೀಮ್'ನ್ನು ಹಚ್ಚಬೇಕು. ನಂತರ, ಅದರ ಮೇಲೆ ನಿಮ್ಮ ಮುಖವರ್ಣಕ್ಕೆ ತಕ್ಕುದಾದ ಬಣ್ಣದ ಪೌಡರನ್ನು ಉಪಯೋಗಿಸಬೇಕು. ಯಾವಾಗಲೂ ಉತ್ತಮ ತರದ ಪೌಡರನ್ನ ಕ್ರೀಮನ್ನು ಉಪಯೋಗಿಸತಕ್ಕದು. ರಾತ್ರಿ ಮಲಗುವ ಸಮಯ ಆ ಕ್ರೀಮನ್ನು ಪೌಡರನ್ನು ಮುಖದ ಮೇಲಿಂದ ತೆಗೆಯಬೇಕು. ನೀರಿನಿಂದಲ್ಲ. ಅದಕ್ಕೆ ಕೋಲ್ಡ್ ಕ್ರೀಮನ್ನು ಉಪಯೋಗಿಸಬೇಕು. ಕೋಲ್ಡ್ ಕ್ರೀಮನ್ನು ಮುಖಕ್ಕೆ ಹಚ್ಚಿ ಒಂದು ಟವೆಲಿನಿಂದ ಉಜ್ಜಿ ತೆಗೆಯತಕ್ಕದು. ಆಗ್ಗ ನಿಮ್ಮ ಮುಖವು ಸ್ವಚ್ಛವಾಗುವುದು. ಈ ರೀತಿಯಲ್ಲಿ ಮಾಡಿದರೆ ಮಾತ್ರ ಮುಖದ ಚರ್ಮಕ್ಕೆ ಯಾವ ಕೆಡುಕೂ ಬಾರದೆ, ಪೌಡರು ಮತ್ತು ಕ್ರೀಮ್‌ಗಳ ಉಪಯೋಗವನ್ನು ಮಾಡಬಹುದು.

ಜರ್ಮನಿಯ ವಾರ್ತಾ ಪತ್ರಿಕೆಗಳು.

೧೯೩೩ರಲ್ಲಿ ಜರ್ಮನಿಯಲ್ಲಿ ೧೯,೦೦೦ ವಾರ್ತಾ ಪತ್ರಿಕೆ ಲಾಭದಲ್ಲಿದ್ದವು. ಈ ಸಂಖ್ಯೆಯು ೮೭೦೦ಕ್ಕೆ ಇಳಿದಿದೆ ಎಂಬುದು ಅಂಕೆ ಖಾತೆಯವರ ವರದಿ. ೧೯೩೩ ಆಂಬೆವ್ವಾರ, ೧೫ ಕೋಟಿ ಪತ್ರಿಕೆಗಳು ರವಾನೆಯಾಗುತ್ತಿದ್ದವು. ಈ ವರ್ಷ ೧೪ ಕೋಟಿ ಪತ್ರಿಕೆಗಳು ಮಾತ್ರ ರವಾನೆಯಾಗಿವೆ. ಅಂತೆಯೆ ಮಾರ್ಗದಲ್ಲಿ ಮಾರಾಟ, ಮತ್ತು ಬಿಟವಾದ ಪ್ರತಿಗಳು ಕಡಿಮೆಯಾಗಿರಬೇಕು. ಹೊರದೇಶಕ್ಕೆ ಹೋಗುವ ಪತ್ರಿಕೆಗಳ ಸಂಖ್ಯೆಯು ಶೇಕಡಾ ೩೫ ಸಲ ಕಡಿಮೆಯಾಗಿರುತ್ತದೆ. ಹೊರಗಣ ದೇಶದಿಂದ ಒಳಗೆ ಬರುವ ಪತ್ರಿಕೆಗಳ ಸಂಖ್ಯೆ ಮಿತಿಮೀರಿ ಏರಿರುತ್ತದೆ. ೧೯೩೩ರಲ್ಲಿ ಜರ್ಮನಿಯು ೩೨ ಮಿಲಿಯ ಪತ್ರಿಕೆಗಳನ್ನು ಹೊರಗಣ ದೇಶಗಳಿಗೆ ಕಳುಹಿಸಿಕೊಟ್ಟಿದೆ. ೧೯೩೪-೩೫ರಲ್ಲಿ ಅದು ಬರೆ ೧೯ ಮಿಲ್ಲಿಯಕ್ಕೆ ಇಳಿದಿರುತ್ತದೆ. ೧೯೩೩ರಲ್ಲಿ ೭ ಮಿಲಿಯ ಪತ್ರಿಕೆಗಳನ್ನು ಆಮದುಮಾಡಿದ ಜರ್ಮನಿಯು ಈಗ ೪೨ ಮಿಲ್ಯ ಪತ್ರಿಕೆಗಳನ್ನು ಆಮದು ಮಾಡುತ್ತಿದೆ. ಸರಕಾರದ ಪತ್ರಿಕಾ ವ್ಯವಸ್ಥೆಯು ಹೊಸ ನಿರ್ಬಂಧಗಳು ಇದಕ್ಕೆ ಕಾರಣವೆಂದು ತಿಳಿದುಬಂದಿದೆ.

5ನೇ ಮಕ್ಕಳ ಕೂಟ, ವಿಟ್ಲ.

(ತಾ. ೧೫-೨೧ ದಸಂಬರ ೧೯೩೫)

ಈ ಬಾರಿಯ ಮಕ್ಕಳ ಕೂಟದಲ್ಲಿ ಕೆಲವೊಂದು ಬದಲಾವಣೆಗಳು ಮಾಡಲ್ಪಟ್ಟಿವೆ. ಅವುಗಳಲ್ಲಿ ಸಂಚಾರವು ಮುಖ್ಯವಾದ್ದೊಂದು ಬದಲಾವಣೆ. ಬಂದು ಹೋಗುವವರು ಈ ಬದಲಾವಣೆಯನ್ನು ಅವಶ್ಯವಾಗಿ ಗಮನಿಸತಕ್ಕದ್ದು. ನೇರೋಟ:-ತಾ. ೧೪ ಶನಿವಾರ ಸಂಜೆ ತಾ. ೧೫-೧೬ ವಿಟ್ಲ ಶಾಲೆಯಲ್ಲಿ ಅಧಿವೇಶನ, ತಾ. ೧೭ರ ಬೆಳಿಗ್ಗೆ ಮಂಕುಡೆಗೆ ಪಯಣ, ತಾ. ೧೭-೧೮ ಮಂಕುಡೆಯಲ್ಲಿ. ತಾ. ೧೯ರ ಬೆಳಿಗ್ಗೆ ಕನ್ಯಾನಕ್ಕೆ ಪಯಣ, ತಾ. ೧೯-೨೦ ಕನ್ಯಾನದಲ್ಲಿ. ತಾ. ೨೧ರ ದಿನ ವಿಟ್ಲದಲ್ಲಿ ಕೂಟವು ಸಮಾಪ್ತಿಯಾಗುವುದು. ಈ ಬಾರಿ ಕೂಟಕ್ಕೆ ಬರಲಿರುವ ಅತಿಥಿಗಳು-ಶ್ರೀ ಜ. ಪಿ. ರಾಜರತ್ನಂ ಮತ್ತು ಹೊಯಿಸಳರವರು.

ಕಾರ್ಯಕ್ರಮದ ವಿವರ:-ತಾ. ೧೫ ಆದಿತ್ಯವಾರ ಬೆಳಿಗ್ಗೆ ೮-೧೦-೩೦ಕ್ಕೆ ಪ್ರಾರಂಭ ಉತ್ಸವ. ಮಧ್ಯಾಹ್ನ ೨-೪-೩೦ಕ್ಕೆ ಅಭಿನಯ ಗೀತಗಳು. ತಾ. ೧೬ ಸೋಮವಾರ ಬೆಳಿಗ್ಗೆ ೮-೧೦-೩೦ಕ್ಕೆ ಮಣ್ಣಿನಿಂದ ಚಿತ್ರಲೇಖನ. ಮಧ್ಯಾಹ್ನ ೨-೪-೩೦ಕ್ಕೆ ವಾದವಿವಾದಗಳು. ತಾರೀಕು ೧೭ನೇ ಮಂಗಳವಾರ ಬೆಳಿಗ್ಗೆ ೮-೧೦-೩೦ಕ್ಕೆ ಮಂಕುಡೆಗೆ ಪಯಣ. ಮಧ್ಯಾಹ್ನ ೨-೪-೩೦ಕ್ಕೆ ಹಳ್ಳಿಯ ಹಾಡುಗಳೂ ಸ್ವಂತ ಕವನಗಳೂ. ತಾ. ೧೮ನೇ ಬುಧವಾರ ಬೆಳಿಗ್ಗೆ ೮-೧೦-೩೦ಕ್ಕೆ ಸುತ್ತಲಿನ ಬಯಲಿಗೆ ಹೋಗಿ ಅಲ್ಲೇ ಕುಳಿತು, ಅಲ್ಲಿನ ಸೃಷ್ಟಿಯ ದೃಶ್ಯವೊಂದನ್ನು-ಪೆನ್ಸಿಲು, ವಾಟರ್ ಕಲರ್, ಇಂಡಿಯನ್ ಇಂಕ್ ಇವುಗಳಿಂದ ಚಿತ್ರಿಸುವುದು. ಮಧ್ಯಾಹ್ನ ೨-೪-೩೦ಕ್ಕೆ ಬಣ್ಣದ ಕಾಗದಗಳಿಂದ ಚಿತ್ರಲೇಖನ. ತಾ. ೧೯ನೇ ಗುರುವಾರ ಬೆಳಿಗ್ಗೆ ೮-೧೦-೩೦ಕ್ಕೆ ಕನ್ಯಾನಕ್ಕೆ ಪಯಣ. ಮಧ್ಯಾಹ್ನ ೨-೪-೩೦ಕ್ಕೆ ಭೂಗೋಳದ ದೃಶ್ಯಾವಳಿಯನ್ನು ತೋರಿಸುವುದು. ತಾರೀಕು ೨೦ನೇ ಶುಕ್ರವಾರ ಬೆಳಿಗ್ಗೆ ೮-೧೦-೩೦ಕ್ಕೆ ಹೊರಗಿನ ಬಯಲಿಗೆ ಹೋಗಿ ಚಿಕ್ಕ ವಸ್ತುಗಳನ್ನು ಅಂದರೆ, ಗಿಡ ಮರ, ಹೂ, ಪ್ರಾಣಿಗಳನ್ನು ಕಂಡು ಅವುಗಳ ಚಿತ್ರಗಳನ್ನು ಪೆನ್ಸಿಲು, ಬಣ್ಣ, ಮೊದಲಾದವುಗಳಿಂದ ಚಿತ್ರಿಸುವುದು. ಮಧ್ಯಾಹ್ನ ೨-೪-೩೦ಕ್ಕೆ ಇತಿಹಾಸದಿಂದ ಒಂದು ದೃಶ್ಯಾವಳಿಯನ್ನು ಮಾಡಿ ತೋರಿಸುವುದು. ತಾ. ೨೧ನೇ ಶನಿವಾರ ಬೆಳಿಗ್ಗೆ ೮-೧೦-೩೦ಕ್ಕೆ ವಿಟ್ಲಕ್ಕೆ ಪಯಣ ಮತ್ತು ಕೂಟದಲ್ಲಿ ತಮ್ಮ ಇಲ್ಲದೆ ಗೆಳೆಯರ ಜೀವನವನ್ನು ಕುರಿತು ಅನುಭವವನ್ನೂ ಕವನಗಳನ್ನೂ ಬರೆಯುವುದು. ಮಧ್ಯಾಹ್ನ ೨-೪-೩೦ಕ್ಕೆ ಇಷ್ಟೆಲ್ಲ ದಿನ ಸಂಚರಿಸಿದಾಗ ಸಂಗ್ರಹಿಸಿದ ವಿವಿಧ ಹೂಗಳು, ಕಲ್ಲುಗಳು, ಎಲೆಗಳು, ಗರಿಗಳು ಮೊದಲಾದುವನ್ನು ಪ್ರದರ್ಶನಕ್ಕೆ ಅನುಕೂಲಿಸುವಂತೆ ಪುಸ್ತಕಗಳಿಗೆ ಅಂಟಿಸುವುದು. ಅನಂತರ ಅಧಿವೇಶನದ ಕೊನೆ.

ಕೂಟದ ಬಿಡುವಿನ ಸಮಯವನ್ನು ಬಾಲಕರು ಎಲೆ, ಕಾಯಿ, ಗರಿ, ವಿವಿಧ ಕಲ್ಲುಗಳು ಮೊದಲಾದುವುಗಳ ಸಂಗ್ರಹಕ್ಕೆ ಉಪಯೋಗಿಸಬೇಕು.

ರಾತ್ರಿಯ ವಿನೋದಗಳು (ಗಂಟೆ ೭ರಿಂದ ೯ಕ್ಕೆ). ತಾ. ೧೫ನೇ ಆದಿತ್ಯವಾರ ಸಿನಿಮಾ, ಮಕ್ಕಳ ನಾಟಕ. ತಾ. ೧೬ನೇ ಸೋಮವಾರ ವಿಜಯನಗರ (ಸಾಹಿತ್ಯರೂಪದ ಚಿತ್ರ), ಮಕ್ಕಳ ನಾಟಕ. ತಾ. ೧೭ನೇ ಮಂಗಳವಾರ ಸಿನೆಮಾ, ಮಕ್ಕಳ ನಾಟಕ. ತಾ. ೧೮ನೇ ಬುಧವಾರ ಹಾದಿ ಜನರು (ದೃಶ್ಯಾವಳಿ), ಮಕ್ಕಳ ನಾಟಕ. ತಾ. ೧೯ನೇ ಗುರುವಾರ ಸಿನೆಮಾ, ಮಕ್ಕಳ ನಾಟಕ. ತಾ. ೨೦ನೇ ಶುಕ್ರವಾರ ಬಾಳ್ವೆಯ ಬೆಂಕಿ (ದೃಶ್ಯಾವಳಿ) ತಾ. ೨೧ನೇ ಶನಿವಾರ ಎಲ್ಲರೂ ಸೇರಿ-ವಿವಿಧ ವಿನೋದಾವಳಿ.

-ಕೂಟದ ವಿಚಾರವಾಗಿ ಕೆಲವು ಸೂಚನೆಗಳು:- ಸಂಚಾರದ ಕೂಟವಾದುದರಿಂದ ಪ್ರತಿನಿಧಿಗಳ ಸಂಖ್ಯೆಯನ್ನು ಮಿತಪಡಿಸಿದೆ. ಮುಂದಾಗಿ ಬರೆದು ಸಮ್ಮತಿಗಳಿಸದವರಿಗೆ ಅನುಕೂಲತೆಪಡಿಸುವುದು ಸಾಧ್ಯವಾಗಲಾರದು. ಪ್ರತಿನಿಧಿಗಳು-ಪುತ್ತೂರು ತಾಲೂಕಿನ ಹಾಯರ್ ಎಲಿಮೆಂಟರಿ ಶಾಲೆಗಳಿಂದ ನಾಲ್ಕರಂತೆ, ಹತ್ತು ಪ್ರತಿನಿಧಿಗಳು ಇತರ ಶಾಲೆಗಳಿಂದ, ಶಾಲೆಗೆ ಇಬ್ಬರಂತೆ ಉಪಾಧ್ಯಾಯರಿಗೂ ಹೊರಗಿನಿಂದ ಹತ್ತು ಮಂದಿ ಉಪಾಧ್ಯಾಯರಿಗೂ ಅನುಕೂಲಪಡಿಸಲಾಗುವುದು. ಪ್ರತಿನಿಧಿಗಳು ಚಿತ್ರಲೇಖನಕ್ಕೆ ಬೇಕಾಗುವ ಸಾಮಗ್ರಿಗಳನ್ನೂ ಅದನ್ನು ಕಡಿಮೆ ಬಟ್ಟೆಬರೆ, ಹಾಸಿಗೆಗಳನ್ನೂ ತರಬೇಕು. ಪಯಣದ ಕಾಲದಲ್ಲಿ ೩-೬ ಮೈಲು ದೂರ ನಡೆಯಬೇಕಾಗುವುದು. ಕೇವಲ ೮-೧೪ ಪ್ರಾಯಿಗಳೂ, ಈ ಕೂಟದಲ್ಲಿ ವಿಶ್ವಾಸವಿರುವವರನ್ನೂ ಪ್ರತಿನಿಧಿಗಳಾಗಿ ಆರಿಸಬೇಕೆಂದು ವಿನಂತಿ.

ನಾಯಕ್ ಬ್ರದರ್ಸ್‌ರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸ್‌ರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು: – ಕಾಮತ್ಸ್ ಸ್ವದೇಶೀ ಎಂಪೋರಿಯಂ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ / ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು	ರೂ	ಆ	ಪೈ	ಸಾಮಾನ್ಯ ವಿಜ್ಞಾನ.				ಅಜ್ಜಿ ಕಥೆಗಳು
								ನೂರು ಕರಡಿಗಳು.
				ಎರಡನೇ ದರ್ಜೆ	0	3	0	ಹೇನ ಸತ್ತು ಕಾಗೆ ಬಡವಾಯಿತು.
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0	ಮೋಸಗಾರ ಕಾಳಪ್ಪ
ಮೂರನೇ ,,	0	4	6	ನಾಲ್ಕನೇ ,,	0	6	0	ಅರಗಿನ ಮುದ್ದೆ
ಎರಡನೇ ,,	0	4	0	ಐದನೇ ,	0	5	0	ಇಲಿಗಳ ಧಕ್ಕಧೈ
ಸಮಾಜಶಾಸ್ತ್ರ								ಅಂಗಳ ದಗ್ಗು
ಐದನೇ ದರ್ಜೆ	0	3	0					ಗುಡುಗುಡು ಗುಮ್ಮಟ ದೇವರು
ನಾಲ್ಕನೇ ,,	0	3	0	ಆರನೇ ದರ್ಜೆ	0	4	0	ಒಡ್ಡನ ಓಟ
ಮೂರನೇ ,,	0	2	6	ಏಳನೇ ,,	0	5	0	
				ಎಂಟನೇ ,,	0	6	0	(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಶಿಯೋಲೋಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಆಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

1936

ಇಸವಿಯ

ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ

ತಯಾರಾಗಿದೆ!

ಸಮಾಜಶಾಸ್ತ್ರ

ಅಥವಾ

ಸೋಶಿಯೋಲೋಜಿ.

ಟೆಕ್ಸ್ಟ್‌ಬುಕ್ ಕಮಿಟಿಯ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ ಇದನ್ನು [illegible] ಪಠ್ಯಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪಸೆಂಜರ್	ಮ. 12-45	ಮ. 2 40
ಕಿಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್		
ಪಸೆಂಜರು	ಬೆ 8 25	ಮ. 1 20
ಬಾಸರಗೋಡು		
ಪಸೆಂಜರು	ಸಂಜೆ 3.20	ಸಂಜೆ 6-15

ನಮ್ಮ ಆದಿಪತ್ಯದ ಮಾರ್ಗೋಪಾಯಗಳ ಮೇಲಿನ ವರದಿ

ನಮ್ಮ ಜಿಲ್ಲೆಗೆ ವರ್ಷಂಪ್ರತಿ ೫೬,೦೪೬ ಟ್ರಂಕ್ ಮತ್ತು II ಕ್ಲಾಸ್ ರಸ್ತೆಗಳನ್ನು ಆರೈಕೆಮಾಡಲು ಗ್ರೇಂಟು ಮತ್ತು ನವೀನ ಮಾರ್ಗೋಪಾಯಗಳ ರಚನೆ (ಸಂಕಗಳಿಗೆ, ರೂ. ೧೫,೧೬,೯೦೦ ಗ್ರೇಂಟನ್ನು, ರಸ್ತೆಗಳಿಗೆ ರೂ. ೨,೬೦,೦೦೦ ಗ್ರೇಂಟನ್ನು, ಕಲ್ಲಿಕೋಟೆ, ಕಂದಾಪುರ ರಸ್ತೆಯನ್ನು ರಚಿಸಲು, ರೂ. ೪,೧೦,೫೦೦ ಗ್ರೇಂಟನ್ನು) ಗ್ರೇಂಟುಗಳನ್ನು ಕೊಡಬೇಕಾಗಿ ಸೂಚನೆಗಳು. ಮಂಗಳೂರು—ಉಡ್ಪಿ ರೈಲ್ವೆ ರಚನೆಯಾಗುದು ಸಂದೇಹಕರ. ಮೋಟಾರು ಚಲಾವಣೆಯನ್ನು ಹತೋಟಿಗೆ ತರುವರೆ?

ಮದ್ರಾಸು ಸರಕಾರವು ಆದಿಪತ್ಯದ ಮಾರ್ಗೋಪಾಯಗಳ ಸ್ಥಿತಿಯನ್ನು ಪರಿಶೀಲಿಸಲು, ಒಬ್ಬ ಸ್ಪೆಶಲ್ ಇಂಜಿನಿಯರರನ್ನು ನೇಮಕಮಾಡಿತ್ತು ಸ್ಪೆಶಲ್ ಇಂಜಿನಿಯರರ ಕಾರ್ಯವು ಮುಗಿದು, ೨೩೭ ಪೇಜುಗಳುಳ್ಳ, ೧೧ ಪರಿಚ್ಛೇದಗಳುಳ್ಳ ಅವರ ವರದಿಯು ಪ್ರಕಟವಾಗಿರುತ್ತವೆ. ಈ ವರದಿಯಲ್ಲಿ ಈಗಿನ ಕೆಲವು ರಸ್ತೆಗಳ ಜೀರ್ಣೋದ್ಧಾರ, ಕೆಲವು ಕಡೆ ಹೊಸ ಮಾರ್ಗ, ಸಂಕ, ಕಾಲುವೆ, ರೈಲ್ವೆ ಮಾರ್ಗ ಮೊದಲಾದುವುಗಳ ರಚನೆಗಳನ್ನು ಸೂಚಿಸಿರುತ್ತಾರೆ

ನಮ್ಮ ಆದಿಪತ್ಯದ ಮಾರ್ಗೋಪಾಯಗಳು, ಕೆಲವು ಮುಖ್ಯ ರಸ್ತೆಗಳ ಹೊರತು, ಎಲ್ಲಾ ವಿವಿಧ ಜಿಲ್ಲಾ ಬೋರ್ಡುಗಳ ಮತ್ತು ನಗರ ಸಭೆಗಳ ಆಧೀನದಲ್ಲಿವೆ ಕೆಲವು ರಸ್ತೆಗಳ ಆರೈಕೆಯು ಸರಕಾರಕ್ಕಾಗಿ ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನವರಿಂದ ಆಗುತ್ತದೆ ಜಿಲ್ಲಾ ಬೋರ್ಡುಗಳು ಮತ್ತು ನಗರಸಭೆಗಳು ಸರಕಾರದ ಗ್ರೇಂಟುಗಳಿಂದಲೂ, ತಮ್ಮ ಸ್ವಂತ ಉತ್ಪಾದನೆಯಿಂದಲೂ, ತಮ್ಮ ಆಧೀನದಲ್ಲಿರುವ ಮಾರ್ಗೋಪಾಯಗಳನ್ನು ಸಲಹುತ್ತಿದ್ದಾರೆ ಆದರೆ ಟೋಲ್‌ಗೇಟುಗಳು ತೆಗೆದು ಹಾಕಿದಂದಿನಿಂದ, ಇವರ ಆದಾಯವು ಕಡಿಮೆಯಾದುದರಿಂದ ಮಾರ್ಗೋಪಾಯಗಳ ರಚನೆ ಮತ್ತು ಆರೈಕೆಗಳು ಹೆಚ್ಚಾಗಿ ಸರಕಾರದ ಗ್ರೇಂಟಿನಿಂದಲೇ ಆಗಬೇಕಾದುದರಿಂದ ಹೆಚ್ಚಿನ ರಸ್ತೆಗಳು ಬಹಳ ಹಾಳುಸ್ಥಿತಿಯಲ್ಲಿವೆ ಹಳ್ಳಿಗಳ ರಸ್ತೆಗಳು ಪಂಚಾಯಿತ ಬೋರ್ಡಿನವರ ಆಧೀನದಲ್ಲಿವೆ ಇವುಗಳ ದುರುಸ್ತಿ ಸರಿಯಾಗಿ ನಡೆಯದೆ ಇವುಗಳೂ ಬಹಳ ಹಾಳುಸ್ಥಿತಿಯಲ್ಲಿವೆ ನಮ್ಮ ಆದಿಪತ್ಯದಲ್ಲಿ ೩೨,೬೨೭ ಮೈಲು ಮಾರ್ಗೋಪಾಯಗಳಿವೆ (ಟ್ರಂಕ್ ರೋಡ್ ಎರಡನೇ ತರಗತಿ ರಸ್ತೆ ಇತರ ರಸ್ತೆಗಳು, ರೈಲ್ವೆ ಮಾರ್ಗ, ಕಾಲುವೆ ಇತ್ಯಾದಿ) ರೈಲ್ವೆ ಮಾರ್ಗಗಳು ಯಾವುವೂ ಸರಕಾರದ ಆಧೀನದಲ್ಲಿಲ್ಲದಿದ್ದರೂ, ರೈಲ್ವೆ ಕಂಪನಿಯವರ ಸಹಕಾರದಿಂದ ಸರಕಾರವು ಇವುಗಳ ಗಮನವನ್ನು ತೆಗೆದುಕೊಳ್ಳುತ್ತದೆ

ವಿವಿಧ ಜಿಲ್ಲೆಗಳಲ್ಲಿರುವ ಟ್ರಂಕು ರೋಡುಗಳು ಮತ್ತು ಎರಡನೆ ತರಗತಿಯ ರಸ್ತೆಗಳ ಆರೈಕೆಯು ಮಾತ್ರ ಸರಕಾರದ ಗ್ರೇಂಟುಗಳಿಂದ ಆಗಬೇಕು ಈ ಎರಡು ಶಾಖೆಗಳ ಮಾರ್ಗೋಪಾಯಗಳಿಗಾಗಿ, (೯೦೦೫) ಮೈಲು ಟ್ರಂಕು ಮತ್ತು ಎರಡನೆ ತರಗತಿಯ ರಸ್ತೆಗಳ ಆರೈಕೆಗಾಗಿ ೧೪,೨೪,೧೩೫ ರೂ ಹೆಚ್ಚಿನ ಗ್ರೇಂಟು ಇನ್ನು ಮುಂದಕ್ಕೆ ಕೊಡಬೇಕು ಇದರಲ್ಲಿ ನಮ್ಮ ಜಿಲ್ಲೆಯ ಅಂಶ, ೩೯೦ ಮೈಲು—ರೂ ೫೬,೦೪೬ ಹೆಚ್ಚಿನ ಗ್ರೇಂಟು ಈ ಸೂಚನೆಗಳ ಪ್ರಕಾರ ಮುಂದಕ್ಕೆ ಜಿಲ್ಲಾ ಬೋರ್ಡಿನವರು, ಟ್ರಂಕ್ ಮತ್ತು ಕೆಲವು ಮುಖ್ಯ ರಸ್ತೆಗಳನ್ನು ಹೊರತಾಗಿ, ಇತರ ಯಾವತ್ತೂ ರಸ್ತೆಗಳ ಆರೈಕೆಯು ಅವರ ಆಧಾಯದಿಂದಲೆ ಮಾಡಬೇಕಾಗುವುದು ಮೇಲಿನ ಗ್ರೇಂಟುಗಳಿಂದ ಜಿಲ್ಲಾ ಬೋರ್ಡಿನವರೂ, ಇಷ್ಟರ ತನಕ ಹಣದ ಅಭಾವದಿಂದ ದುರುಸ್ತಿ ಮಾಡದೆ ಇರುವ ಇತರ ರಸ್ತೆಗಳನ್ನು ಉದ್ಧಾರಮಾಡಬಹುದು ನಮ್ಮ ಜಿಲ್ಲಾ ಬೋರ್ಡಿಗೆ, ೩೦೮ ಮೈಲು ಜಲ್ಲಿ ಹಾಕಿದ ರಸ್ತೆಯನ್ನೂ, ೭೩೯ ಮೈಲು ಇತರ ರಸ್ತೆಗಳ ಆರೈಕೆಯನ್ನೂ ನೋಡಬೇಕಾಗುವುದು.

ಕೆಲವು ಹೊಸ ರೈಲ್ವೆ ಮಾರ್ಗಗಳ ವಿಚಾರವಾಗಿ

ಸರಕಾರದವರ ರೈತರ ಪರಿಸ್ಥಿತಿಯನ್ನು ಪರಿಶೀಲಿಸಲು ನೇಮಕ ಮಾಡಿದ ಉದ್ಯೋಗಸ್ಥರ ವರದಿಯ ಪ್ರಕಾರ, ಎಲ್ಲಾ ದವಸಧಾನ್ಯಗಳ ಬೆಲೆಯು ಇಳಿದುದರಿಂದ, ಗಾಡಿಯವರ ಆದಾಯವು ಶೇಕಡ ೫೦ರ ಸಲೆ ಇಳಿದಿರುತ್ತದೆ ಈಗ ಇರುವ ಮಾರ್ಗೋಪಾಯಗಳೊಂದಿಗೆ, ರೈಲ್ವೆ ಮಾರ್ಗವನ್ನು ರಚಿಸಿದರೆ ಈ ಬಡ ಗಾಡಿವಾಲರ ಜೀವನದ ಮೂಲವನ್ನು ತೆಗೆದಂತಾಗುವುದು ಆದುದರಿಂದ ಈ ಸಣ್ಣ ಸಣ್ಣ ರೈಲ್ವೆ ಮಾರ್ಗಗಳನ್ನು ರಚಿಸುವ ಬದಲಾಗಿ, ಈ ಬಡ ರೈತರು ಉಪಯೋಗ ಮಾಡುವ ರಸ್ತೆಗಳನ್ನು ಉದ್ಧರಿಸುವುದು ಲೇಸು (ಈ ಸೂಚನೆಯನ್ನು ಅನುಸರಿಸಿ ಮಂಗಳೂರಿನಿಂದ ಉಡ್ಪಿಗೆ ಮುಂದುವರಿಸಬೇಕಾಗಿ ನಿಯಮಿಸಿದ ರೈಲ್ವೆ ಮಾರ್ಗವು ರಚನೆ ಹೊಂದುವುದರಲ್ಲಿ ಸಂದೇಹಗಳಿವೆ)

ವಿವಿಧ ಜಿಲ್ಲೆಗಳನ್ನು ಒಟ್ಟುಗೂಡಿಸುವ ರಸ್ತೆಗಳು ರಚನೆಯಾಗಬೇಕಾಗಿದೆ ಈ ಸೂಚನೆ ಪ್ರಕಾರ ಕಲ್ಲಿಕೋಟೆಯಿಂದ ಕಂದಾಪುರಕ್ಕೆ ಒಂದು ರಸ್ತೆಯು ನಿರ್ಮಾಣವಾಗಬಹುದು

ನಮ್ಮ ಆದಿಪತ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಅತಿ ಅಗತ್ಯವಿರುವ ಸಂಕಗಳ ಮತ್ತು ರಸ್ತೆಗಳ ನಿರ್ಮಾಣ ಮಾಡಲೂ, ಅವುಗಳ ಆರೈಕೆಗಾಗಿಯೂ ಗ್ರೇಂಟುಗಳನ್ನು ಸರಕಾರದವರು ಕೊಡಬೇಕು ವಿವಿಧ ಜಿಲ್ಲೆಗಳ ಅಗತ್ಯಗಳನ್ನು ವಿವರಿಸಿ, ಸಂಕಗಳ ಮತ್ತು ಅವುಗಳ ಖರ್ಚಿನ ಅಂದಾಜುಪಟ್ಟಿಯನ್ನು ಈ ವರದಿಯಲ್ಲಿ ಕೂಡಲಾಗಿದೆ ನಮ್ಮ ಜಿಲ್ಲೆಗೆ ಸಂಕಗಳ ರಚನೆಗೆ ರೂ ೧೫,೧೬,೯೦೦ ಮತ್ತು ಹೊಸ ರಸ್ತೆಗಳ ರಚನೆಗೆ ರೂ ೨,೬೦,೦೦೦ ಗ್ರೇಂಟುಗಳನ್ನು ಕೊಡಬೇಕಾಗಿ ಈ ಸೂಚನೆಯಲ್ಲಿ ನಮೂದಿಸಿದೆ ಹೊಸ ಮಾರ್ಗೋಪಾಯಗಳ ರಚನೆಗಾಗಿ ೪,೩೨,೯೧,೧೯೦ ವ್ಯಯಿಸಬೇಕಾಗುವುದು ಅದರಲ್ಲಿ ರೂ ೨,೧೫,೧೯ ೭೨೦ ಸಂಕಗಳ ರಚನೆಗೂ, ರೂ ೨,೧೭ ೭೯ ೪೭೦ ರಸ್ತೆಗಳ ರಚನೆಗೂ ವ್ಯಯಿಸಬೇಕು ಈ ಸಂಕಗಳಿಂದ ಮತ್ತು ರಸ್ತೆಗಳಿಂದ ಸಂಕ್ರಾರಕ್ಕೆ ರೂ ೬,೨೬,೦೫೦ ಗ್ರೇಂಟನ್ನು ವರ್ಷಂಪ್ರತಿ ಕೊಡಬೇಕಾಗುವುದು

ನವೀನ ರೀತಿಯು ರಸ್ತೆಗಳ ರಚನೆ ಮತ್ತು ದುರುಸ್ತಿಯಾಗುವ ವಿಚಾರದಲ್ಲಿ

ನಮ್ಮ ಆದಿಪತ್ಯದ ೩೨,೬೩೨ ಮೈಲು ಮಾರ್ಗೋಪಾಯದಲ್ಲಿ ೧೯,೭೩೨ ಮೈಲು ಜಲ್ಲಿ ರಸ್ತೆಗಳಾಗಿವೆ ಈ ರಸ್ತೆಗಳ ಆರೈಕೆಗೆ ೧೯೩೩ ೩೪ರಲ್ಲಿ ರೂ ೯೦,೪೬,೦೦೦ ವ್ಯಯಿಸಲಾಯಿತು ಈ ರಸ್ತೆಗಳನ್ನು ನವೀನ ರೀತಿಯಲ್ಲಿ ಉದ್ಧರಣೆ ಮಾಡಲು, ಅಂದರೆ, ೧೯,೭೩೨ ಜಲ್ಲಿ ರಸ್ತೆಯಲ್ಲಿ ೬೦೦೫, ಟ್ರಂಕು ರಸ್ತೆ ಮತ್ತು ಮುಖ್ಯ ರಸ್ತೆಗಳಿಗೆ ಕೊಂಕ್ರೀಟನ್ನು ಹಾಕಲು ಅಂದರೆ ಅವುಗಳ ಮೇಲ್ಮೈಯನ್ನು ನವೀನ ರೀತಿಯಲ್ಲಿ ರಚಿಸಲು, ರೂ ೩೦ ಕೋಟಿ ಅಥವಾ ೧೫ ಕೋಟಿ ಬೇಕಾಗುವುದು ಆದುದರಿಂದ ಈ ರೀತಿಯ ಉದ್ಧರಣೆಯು ಅಸಾಧ್ಯದ ಮಾತಾಗಿದೆ ಕೆಲವು ನವೀನ ತರದ ರಸ್ತೆಗಳ ಬಾಳುವಿಕೆಯ ವಿಷಯ, ಹಿಂದೂದೇಶದ ಕೆಲವು ಪ್ರಾಂತ್ಯಗಳು ಶೋಧೆ ನಡೆಸುತ್ತಿವೆ ಅವರ ವರದಿ ಹೊರಗೆ ಬಂದನಂತರ ಮತ್ತು ಮುಂದಕ್ಕೆ ಆರ್ಥಿಕ ವ್ಯವಸ್ಥೆಯು ಸರಿಯಾಗಿದ್ದರೆ ಇದರ ಆಲೋಚನೆಯನ್ನು ಮಾಡಬಹುದು

ರಸ್ತೆಗಳ ಉಪಯೋಗವು ಯೋಗ್ಯ ರೀತಿಯಲ್ಲಿ ಆಗುವಂತೆ, ಮೋಟಾರುಗಳಿಂದ ಜನ ಜೀನಸುಗಳ ಚಲಾವಣೆಯ ಮೇಲೆ, ಹತೋಟಿ ಇಡಲು, ಮೋಟಾರು ಸಂಸ್ಥೆಗಳ ಕಡೆಗೆ ಈ ಕೆಳಗಿನ ವರ್ತನೆಯನ್ನು ಅನುಸರಿಸತಕ್ಕದು ಎಂದು ಚಲಾವಣೆ ಸೂಚನಾ ಸಮಿತಿಯವರು ನವಡಿಲ್ಲಿಯಲ್ಲಿ ಜನವರಿ ೧೯೩೫ರಲ್ಲಿ ನಡೆದ ಸಭೆಯಲ್ಲಿ ಸೂಚನೆಯನ್ನು ಮಾಡಿರುವರು

"ಅನಾವಶ್ಯಕ ಸ್ಪರ್ಧೆಯು ಉಂಟಾಗದಂತೆ ಮೋಟಾರು ಬಸ್ಸುಗಳ ಸಂಖ್ಯೆಯನ್ನು ನಿರ್ಣಯಿಸತಕ್ಕದ್ದು"

೧ ಈ ಉದ್ದೇಶವು ಫಲಕಾರಿಯಾಗುವಂತೆ, ಮೋಟಾರು ಬಸ್ಸುಗಳಿಗೆ ಅಥವಾ ಸರ್ವಿಸುಗಳಿಗೆ ಕೆಲವು ನಿಯಮಿತ ರಸ್ತೆಗಳ ಮೇಲೆ ಮಾತ್ರ ಲೈಸನ್ಸು ಕೊಡತಕ್ಕದು

೨ ಲೈಸನ್ಸನ್ನು ಕೊಡುವ ವೇಳೆ ಕ್ರಮದಲ್ಲಿರುವ ಸಂಸ್ಥೆಗಳು ಆ ಪ್ರದೇಶದ ಚಲನೆಗೆ ಸಾಕಾಗುವವೊ ಅಥವಾ ಇನ್ನೂ ಹೆಚ್ಚಿನ ಸರ್ವಿಸುಗಳು ಬೇಕಾಗುವುವೊ ಎಂದು ನೋಡತಕ್ಕದು

೩ ಹೊಸ ಸರ್ವಿಸಿನಿಂದ ಚಲಾವಣೆಯು ಸಾರ್ವಜನಿಕ ಉಪಯೋಗದ ಬಗ್ಗೆ ಎಷ್ಟರ ಮಟ್ಟಿಗೆ ಅಗತ್ಯವಿರುವುದು ಎಂದು ಪರಿಶೀಲಿಸತಕ್ಕದು

೪ ಆ ಪ್ರದೇಶದ ಚಲಾವಣೆಗೆ ಎಷ್ಟು ಸೌಕರ್ಯಗಳು ಬೇಕಾಗುವುದು (ರೈಲ್ವೆ ಸ್ಟೇಶನುಗಳನ್ನು ಮತ್ತು ಮುಖ್ಯ ಮಾರ್ಗಗಳನ್ನು ಸೇರಲು) ಎಂದು ವಿಚಾರಿಸತಕ್ಕದು

೫ ಕೇಳಲ್ಪಟ್ಟ ರಸ್ತೆಗಳು, ಚಲಾವಣೆಗೆ ಯೋಗ್ಯವೊ ಎಂದು ತಿಳಿಯತಕ್ಕದ್ದು ಮದ್ರಾಸ ಸರಕಾರದವರು ಈ ಮೇಲಿನ ವರ್ತನೆಯನ್ನು ಇನ್ನೂ ಉಪಯೋಗಕ್ಕೆ ತರಲಿಲ್ಲ ಹೊಸ ರಸ್ತೆಗಳ ನಿರ್ಮಾಣದಿಂದ ಚಲಾವಣೆಯು ಹೆಚ್ಚಾಗಿ, ದೇಶದ ಅಭ್ಯುದಯವು ಆಗುವುದೆಂದು ಹೇಳುವುದು ಅಸಾಧ್ಯ ಈ ಮಾರ್ಗೋಪಾಯಗಳ ರಚನೆಯಲ್ಲಿ ದೇಶದ ಅಭ್ಯುದಯವಾಗುವುದು ಬಹಳ ಸಂದೇಹಾಸ್ಪದಕರವಾದುದು

ನಾವು ಉಪಯೋಗಿಸುವ ಹೊಗೆಸೊಪ್ಪಿನ ಮೇಲೆ ತೆರಿಗೆ.

ಹೊಗೆಸೊಪ್ಪಿನ ಮೇಲೆ ತೆರಿಗೆ ವಿಧಿಸುವ ಒಂದು ಹೊಸ ಕ್ರಮವು ನಮ್ಮ ಮದ್ರಾಸು ಸರಕಾರದ ಮುಂದೆ ಬಂದಿರುತ್ತದೆ ಸರಕಾರಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ ಎಂದು ಇದಕ್ಕೆ ಕಾರಣ ಕೊಟ್ಟಿರುವರು. ಈಗಾಗಲೆ ತೆರಿಗೆಯ ಭಾರದಿಂದ ಬಳಲುವ ಪ್ರಜೆಗಳಿಗೆ ಇದು ಒಂದು ಹೊಸ ಹೊರೆಯನ್ನಾಗಿ ಮಾಡಲು ಯತ್ನಿಸುತ್ತಿದ್ದಾರೆ ೧೯೩೦ರಿಂದ ಇಷ್ಟರ ವರೆಗೆ ನಮ್ಮ ಸರಕಾರದ ಲೆಖ್ಖಗಳನ್ನು ವಿಚಾರಿಸಿದಲ್ಲಿ ಪ್ರತಿ ವರ್ಷದಲ್ಲೂ ಉಳಿತಾಯವು ಕಂಡುಬರುತ್ತದೆ ಅಂದಾಜು ಪಟ್ಟಿಗಳಲ್ಲಿ ಕೆಮ್ಮಾನು ಕೋರಿಸಿ ಉಳಿತಾಯವನ್ನು ಗಳಿಸುವುದೆ ನಮ್ಮ ಸರಕಾರದ ಕ್ರಮವಾಗಿರುತ್ತದೆ ನಮ್ಮಲ್ಲಿ ಕೆಲವು ತೆರಿಗೆಗಳು, ಸರಕಾರಕ್ಕೆ ಹಣದ ಅಭಾವವಿದ್ದುದರಿಂದ ಹೊರಿಸಲ್ಪಟ್ಟಿದ್ದವು ಆದರೆ ಸರಕಾರಕ್ಕೆ ಬೇಕಾದ ಹಣ ಒದಗಿಸಿ, ಉಳಿತಾಯವಾದರೂ ಈ ತೆರಿಗೆಗಳು ತೆಗಿಯಲ್ಪಟ್ಟವೆ? ಶಕ್ತಿಗೆ ಮೀರಿದ ಕಂದಾಯವನ್ನು ಹೊರಿಸುವುದರಲ್ಲಿ ನಮ್ಮ ಪ್ರಾಂತ್ಯವು ಮೊದಲನೇ ಸ್ಥಾನವನ್ನು ಪಡೆದಿದೆ ವ್ಯಾಪಾರದ ದುರ್ಬಲತೆಯಿಂದ ದವಸಧಾನ್ಯ ಜೀನಸುಗಳ ಕ್ರಯವು ಬಹಳವಾಗಿ ತಗ್ಗಿರುತ್ತದೆ ಆದರೆ ರೈತರ ಮೇಲಿರುವ ಕಂದಾಯವು ಅದೇ ಪ್ರಕಾರ ಇಳಿದಿದೆಯೊ? ಕಂದಾಯವನ್ನು ೬ ಕೋಟಿಯಿಂದ ೭ ಕೋಟಿಗೆ ಏರಿಸಿದ್ದಾರೆ ಇನ್ನೂ ಇವರಿಗೆ ಹಣ ಬೇಕಾಗಿದೆಯೋ, ಪ್ರಜೆಗಳಿಗೆ ಈಗಿನ ಹೊರೆ ಸಾಲದೆ?

ಈ ಹೊಗೆಸೊಪ್ಪಿನ ತೆರಿಗೆಯಿಂದ ಸರಕಾರದ ಆದಾಯವನ್ನು ಇನ್ನೂ ಹೆಚ್ಚಿಸುವುದ ಈ ಮೇಲಿನ ಮುಖ್ಯ ಉದ್ದೇಶ ಮುಂಬಾಯಿ ಮತ್ತು ಬಂಗಾಳ ಸರಕಾರದವರು, ತಮ್ಮ ಬಂಢಾರ ಬರಿದಾಗಲು, ಈ ತೆರಿಗೆಯನ್ನು ಹೊರಿಸಬೇಕಾಯಿತು ಆದರೆ ನಮ್ಮ ಮದ್ರಾಸು ಸರಕಾರದ ಖಜಾನೆಯು ಸ್ಥಿತಿಯು ಒಳ್ಳೆದಾಗಿರುವಾಗ, ನಮಗೆ ಈ ತೆರಿಗೆಯು ಅಗತ್ಯವಿದೆಯೆ? ತೆರಿಗೆಯನ್ನು ಲೈಸನ್ಸು ರೂಪದಲ್ಲಿ ವಿಧಿಸುವರು. ಹಿಂದೂದೇಶದಲ್ಲಿ ನಮ್ಮ ಮದ್ರಾಸು ಪ್ರಾಂತ್ಯವು ಹೊಗೆಸೊಪ್ಪಿನ ಸಾಗುವಳಿಯಲ್ಲಿ ಮೊದಲಿನ ಸ್ಥಾನವನ್ನು ಪಡೆದಿರುತ್ತದೆ ಜನರು ವಿಲಾಸಕ್ಕಾಗಿ ಇದರ ಉಪಯೋಗವನ್ನು ಮಾಡುವುದಲ್ಲ ಹೊಗೆಸೊಪ್ಪು ಅವರಿಗೆ ನಿತ್ಯದ ಅಗತ್ಯದ ಜೀನಸಾಗಿದೆ ಧಾರಾಳ ಜನರ ಜೀವನಾಂಶ್ಯ ಹೊಗೆಸೊಪ್ಪಿನ ಸಾಗುವಳಿಯು ಮೂಲಕಾರಣವಾಗಿರುತ್ತದೆ ಇಂಪೀರಿಯಲ್ ಪ್ರಿಪರೆನ್ಸ್ ಪ್ರಕಾರ ಬ್ರಿಟಿಷ ಸಾಮ್ರಾಜ್ಯದ ದೇಶಗಳು ಹಿಂದೂದೇಶದಿಂದಲೆ ಹೊಗೆಯಸೊಪ್ಪನ್ನು ಪಡೆಯಬೇಕೆಂದು ಹಿಂದೆ ಕೆಲವು ನಿರ್ಣಯಗಳಾಗಿದ್ದವು ಆದರೆ ಬ್ರಿಟಿಷ ಸಾಮ್ರಾಜ್ಯದ ಆಶ್ರಿತ ಜನಾಂಗಗಳು ಇದಕ್ಕೆ ಹೆಚ್ಚಿನ ಮನ್ನಣೆ ಕೊಟ್ಟಂತೆ ಕಾಣುವುದಿಲ್ಲ ನಮ್ಮ ಹೊಗೆಸೊಪ್ಪಿನ ಸಾಗವಳಿಯನ್ನು ನಮಗಾಗಿಯೇ ನಡೆಯಿಸಬೇಕಾಗಿದೆ ಆದುದರಿಂದ ಇದರ ಮೇಲೆ ಈ ಹೊಸ ತೆರಿಗೆಯು ಬಂದರೆ, ಇದನ್ನು ಬೆಳಸುವ ರೈತರ ಮೇಲೆ ಮಾತ್ರವಲ್ಲದೆ, ನಮ್ಮ ಪ್ರಾಂತ್ಯದ ಎಲ್ಲಾ ಪ್ರಜೆಗಳ ಮೇಲೆ ಇದೊಂದು ಹೆಚ್ಚಿನ ತೆರಿಗೆಯನ್ನು ವಿಧಿಸಿದಂತಾಗುವುದು ನಮ್ಮಲ್ಲಿ ಹಲವರು ಚುಟ್ಟಾ ಬೀಡಿ ವಗೈರೆ ಮಾಡಿ ಅಂಗಡಿ ಅಂಗಡಿಗಳಿಗೆ ಹೋಗಿ ಮಾರಿ ಜೀವನ ಸಾಗಿಸುತ್ತಾರೆ ಇವರ ಮೇಲೆ ಈ ತೆರಿಗೆ ಹೇಗೆ ಪರಿಣಮಿಸುವುದು

ಆದುದರಿಂದ ಸಿಲೆಕ್ಟ ಕಮಿಟಿಯ ವಿಚಾರಕ್ಕೆ ಕಳುಹಿಸಲ್ಪಟ್ಟ ಈ ಹೊಸ ತೆರಿಗೆ ವಿಧಿಸುವ ಬಿಲನ್ನು ನ್ಯಾಯವಿಧಾಯಕ ಸಭೆಯು ತಿರಸ್ಕರಿಸುವುದು ನ್ಯಾಯಸಮ್ಮತವು ನಮ್ಮ ಪ್ರಾಂತ್ಯದ ಹಲವು ಜಿಲ್ಲೆಗಳಿಂದ ಈ ಬಿಲನ್ನು ಪ್ರತಿಕೂಲಿಸಿ, ಅರ್ಜಿಗಳು ಬಂದಿವೆ ನಮ್ಮ ಜಿಲ್ಲೆಯು ಇಷ್ಟರ ತನಕ ಯಾವತ್ತೂ ಗಮನ ತೆಗೆದುಕೊಳ್ಳದಲ್ಲಿ ಹೊಗೆಸೊಪ್ಪಿನಿಂದ ಆಶಿತರಾದವರು ಒಂದು ಕೂಟ ಮಾಡಿ, ಮದ್ರಾಸು ಸರಕಾರಕ್ಕೆ ಈ ಹೊಸ ಬಿಲನ್ನು ಪ್ರತಿಕೂಲಿಸುವ ಅರ್ಜಿಗಳನ್ನು ಕಳುಹಿಸಿಕೊಡತಕ್ಕದು ನಮ್ಮ ಜಿಲ್ಲೆಯ ಎಲ್ಲಾ ಹಳ್ಳಿಪಳ್ಳಿಗಳು ಇದರ ಗಮನಮಾಡಲಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 912/1936

ಅಬ್ಬಕ್ಕೆ ಹೆಂಗ್ಸು—ವಾದಿ

ಮತ್ತು

ಕೈಡುಮ್ಮಾ ಕೂಡಾ ಆರು ಜನರು—ಪ್ರತಿವಾದಿರು

ಇವರೊಳಗೆ—

ಈ ವ್ಯಾಜ್ಯದ ೩ನೇ ಪ್ರತಿವಾದಿ ಮೊಗ್ರಾಲು ಗ್ರಾಮದಲ್ಲಿರುವ ಇಸ್ಮಾಯಿ ಬ್ಯಾರಿಯ ಹೆಂಡ್ತಿ ಬೀಬಿ ಉಮ್ಮಾ 5ನೇ ಪ್ರತಿವಾದಿ ಪೈವಳಿಕೆ ಗ್ರಾಮದಲ್ಲಿರುವ ಮಮ್ಮದೆ ಬ್ಯಾರಿಯ ಹೆಂಡ್ತಿ ಖದೀಜಮ್ಮಾ ಇವರುಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಿಮ್ಮ ತಂದೆ ಮೃತಪಟ್ಟ ಇದ್ದಿನ ಕುಂಞಿ ಬ್ಯಾರಿಯು ತಾ 27 6 33ರಲ್ಲು ವಾದಿಗೆ ಬರಕೊಟ್ಟ ಆನ್ ಡಿಮಾಂಡ್ ಪ್ರೊಮಿಸರಿ ನೋಟಿನ ಐವಜನ್ನು ವಸೂಲುಮಾಡುವರೆ ದಾಖಲು ಮಾಡಿದ ಈ ವ್ಯಾಜ್ಯವನ್ನು ತಾರೀಕು 5 12-'35ಕ್ಕೆ ತನಖೆಗೆ ಇಟ್ಟಿರುತ್ತದೆ ಸದ್ರಿ ತಾರೀಕಿನಲ್ಲಿ ನೀವು ಹಾಜರಾಗುವರೆ ತಪ್ಪಿದ್ದಲ್ಲಿ, ನಿಮ್ಮನ್ನು ಕಿವ್ವಾಮಾಡಿ, ಈ ವ್ಯಾಜ್ಯದ ತನಿಖೆಯನ್ನು ನಿಮ್ಮ ವಿನಹ ಮುಂದರಿಸಲಾಗುವುದು

ಕಾಸರಗೋಡು 21-11-35

A. Ganash Rao,
ವಾದಿಯ ವಕೀಲರು



ನವರತ್ನ ದ್ರಾಕ್ಷಾಸವ. ನರಗಳಿಗೆ ಬಲವನ್ನು ಕೊಟ್ಟು ಕಫ, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನು ಅಜೀರ್ಣವನ್ನೂ ಪರಿಹಾರಮಾಡುವ ಟಾನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 8 0 8 ಔನ್ಸ್ ರೂ 0 14 0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿವಾರಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ ಚರ್ಮವ್ಯಾಧಿಗಳಲ್ಲಿಯೂ, ದೇಹವ್ಯಾಧಿಗಳಲ್ಲಿಯೂ ತೀವ್ರ ಗುಣಕಾರಿ

4 ಔನ್ಸ್ ರೂ 1- 0—0 8 ಔನ್ಸ್ ರೂ 1 8 0

ದಕ್ಷಿಣ ಕನ್ನಡದ ಏಜಂಟರು ಪ್ರೊಪ್ರೈಟರ ಸ್ಟೋರ್ಸ್, ಮಂಗಳೂರು.

BEHAR CHEMICAL WORKS,
Bhagalpur.

ಬಿ. ಸಿ ರಸಾಯನಿಕ ವೈದ್ಯಶಾಲೆಯ
ಚ್ಯವನ ಪ್ರಾಶ ಲೇಹ್ಯ

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ

ಸೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಶಾರದ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಚರಕ ಋಷಿಗಳು ಇದರ ಗುಣವನ್ನು ಬಹುತೇಕವಾಗಿ ಹೊಗಳಿರುವುದರಿಂದಲೂ ಹಿಮಾಲಯದ ಕವಿ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು.

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8 0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು
ಮಂಗಳೂರು

New Era Technical School,
Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟೈಪ್‌ರ್‍ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to tl e Manager

ವಜ್ರದ ಉಂಗುರುಗಳು

ಒಕ್ಕೆ ರೂ. ೦—೧೨—೦.



ಈ ಉಂಗುರುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್‌ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ ಇದರ ಬಣ್ಣವು ಎಂದಿಗೂ ಕೆಡದಂತೆ ಇಲೆಕ್ಟ್ರಿಕ್ ಪವರಿನಿಂದ ಬಣ್ಣ ಕೊಟ್ಟಿದೆ ...

ವಿಳಾಸ -ಸಿಟಿ ಮಾರ್ಟ್,
... ಮದರಾಸು.

ಸಪಟ್ ಲೋಶನ್

Sapat & Company,(S M)
Kalbadevi Road Bombay

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಲದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 3 ಬಾಟ್ಲಿಗಳಿಗೆ ರೂ. 1-12-0.



ಜಲದ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತದೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0—0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.

ಎಮ್- ಗಣಪಯ್ಯ ಎಂಡ್ ಸನ್ಸ್ ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ಡಾ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಜ್ಜರ ... ಟ್ರೇಡರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ಶಾಪಾಹೌಸ್, ಗಿರಿಗಾಂವ್, ಬ್ಯಾಕ್‌ರೋಡ್ ಮುಂಬಾಯಿ, ನಂ. 4 ದಿ ವರ್ಕ್ಸಾಪ್ ಹೋಲ್, ಮಡಿಕೇರಿ ಕೂರ್ಗ್. ರಾವ್ ಫಾರ್ಮಸಿ, ಸಾಗರ

The Canara Banking Corporation Udipi, Ltd.

Head office:—UDIPI, S. K. (Incorporated in British India) TEL.-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg)

DEPOSITS:

1922	1926	1930	1934	15 11 '35
ರೂ. 2,28,419/	6,43,940/	20,28,887/	24,95,329/	**26,85,980/-**

SAVINGS BANK ACCOUNTS

INTEREST allowed at 3½ %

Facilities } 1. Withdrawal by **CHEQUES.** 2. Production of pass books unnecessary at the time of withdrawal. 3. Accounts transferred **FREE** of charge from one office to another.

Regd.

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ಎಲ್ಲಿಯುಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಗೀಕಾರಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

TO INSURE OR TO REPRESENT

CONSULT:—

The Bombay Life Assurance Company Ltd.

ESTD 1908.

Offers:
- (1) Attractive Schemes of Assurances to suit individual needs.
- (2) Rebate for yearly payment of premiums.
- (3) Additional Rebate for larger assurances.
- (4) Permanent Disability Benefits without extra.
- (5) Increased rate of Bonuses.
- (6) Accident Risk on a small extra payment.

Attractive Rates of Commission & Bonuses to Agents.

For particulars apply to any of our Offices:

Kochikar Brothers. Branch Secretaries.

OFFICES (1) "Gautam Nivas" Charni Rd., Girgaum, Bombay No. 4. (2) P. B. 887, Mount Road, Madras. (3) Visveshwarapuram Circle, Bangalore City. (4) Hazur Road, Calicut. (5) Car Street, Mangalore, S. K. (6) Udipi, (S. India).

ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರುಮಾಡಿದ ಅಮೋಘ ಔಷಧ. ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಪ್ರಮಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು.

ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ.

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೆನ್ನು ಶಾಯಿಗಳೂ ತಯಾರಾಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ —

ವೆಂಕಟ್ರಾಯ ಅಪ್ಪಪ್ಪ ಬಾಳಿಗ—ಮೆನೇಜಿಂಗ್ ಡೈರೆಕ್ಟರ್.

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು:—(1) ರಥಬೀದಿ ಮಂಗಳೂರು. (2) 1/70 ನ್ಯಾನಪ್ಪ ನಾಯಕನ ಬೀದಿ, ಜಾರ್ಜ್‌ಟೌನ್ ಮದ್ರಾಸು. (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

Karnataka Chemical and Pharmaceutical Works, Ltd., Udipi. (South India)

Edited, Printed & Published By A. S. Kamath at the Sharada Press, Car Street, Mangalore.

[illegible] RegisteredNo. M. 498 ಶಿಪ್ಪಾಯಿ ಸಾಸಲು ಸೇರಿ ರೂ. 2-13-0.

ಬಿಡಿ ಸಂಚಿಕೆ 1 ಆಣೆ.

for Quality Snuff
H. Rama Rao and Sons.
HighClassSnuff Manufacturers
Mangalore S. I.
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT."
Safeguard yourself & your family TODAY
Buy a policy in THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡ ತ ಎದುತಿರುವ ॥

ಗರಳಕವರಂಜದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನ ॥ ೨ ॥

ಪುಸ್ತಕ ೨೯ ಮಂಗಳೂರು ತಾ. ೧ನೇ ಶುಕ್ರವಾರ ನವಂಬರ ೧೯೩೫ (1–11–'35) ಸಂಚಿಕೆ ೪೩

[illegible] ಶ್ರೀ ಬಾಬು ರಾಜೇಂದ್ರ ಪ್ರಸಾದರವರು.

ನೋಟಿಗಳು.
NOTE . S.

ಇಟೇಲಿ ಸೈನಿಕರಿಗೆ ನರಕ ಪ್ರಾಪ್ತಿಯಾಗಿದೆ. ಈ ನರ್ಕಕ್ಕೆ ಕಾರಣ, ಅವರ ಗುರು ಮುಸಲೋನಿ. ನರಕವೆಂದರೆ—ಸೈನಿಕರು ಉಷ್ಣತೆಯನ್ನು ತಾಳಲಾರದೆ ಶೀತ ಹವೆಯನ್ನು ಅನುಕೂಲಿಸಿಕೊಳ್ಳಲು ಅನೇಕರು ಕೋಡುಗಳಲ್ಲಿ ವಿಶ್ರಮಿಸಿಕೊಳ್ಳುತ್ತಿರುವರಂತೆ ಇದೇ ಮುಸೋಲಿನಿಯ ನ-ರ-ಕ

\+ + + +

ಈ ನರಕಕ್ಕಿಂತ ಇನ್ನೊಂದು ವರ ಪ್ರಾಪ್ತಿಯಾಗಿದೆ ಕುಡಿಯಲು ನೀರು ಹುಡುಕುತ್ತಿರುವರು ಪತ್ರಿಕೆಗಳ ಗಲಾಟೆ, ನೀರು ಇಲ್ಲ, ಮಾರ್ಗವಿಲ್ಲ ಎಂದು ಮಾರ್ಗ, ನೀರು ನೋಡದೆ ಮುಸೋಲಿನಿ ಹೊರಟಿದ್ದಾನೆಯೋ?

\+ + + +

'ಲಂಡನ್'—ನಲ್ಲಿ ಪಾರ್ಲಿಮೆಂಟಿಗೆ ಸದ್ಯಕ್ಕೆ ರಜೆ. ಆದರೆ, ಹೊಸ ಇಲೆಕ್ಷನ್ ಗಡಿಬಿಡಿಯು ಪ್ರಾರಂಭ ಈಗಲೇ ೫೯ ಮಂದಿ ಸ್ತ್ರೀಯರು ಮುಂದೆ ಬಂದಿರುವರಂತೆ ಸ್ತ್ರೀಯರ ಮುಂದುವರಿಕೆಯು ಲಂಡನಿನ ಸಂಖ್ಯೆಯನ್ನು ನಮ್ಮ ಹಿಂದೂಸ್ಥಾನದವರು ನೋಟ್ ಮಾಡಿ ಇಡಲಿ ನಮ್ಮಲ್ಲಿ ಇಲೆಕ್ಷನ್ ನಡೆಯುವಾಗ್ಗೆ ಸಂಖ್ಯೆ ಕಡಿಮೆಯಾಗದ ಹಾಗೆ ನೋಡಿದರಾಯಿತು

\+ + + +

ವಿಲಾಯಿತಿಯಲ್ಲಿ ಒಂದು ವಿಚಿತ್ರ ತೀರ್ಪು ತಪ್ಪುಕೊಂಡವರದ್ದು ಅಲ್ಲ, ಸತ್ತವರದ್ದು ತಾಯಿ ರೋಗದಿಂದ ನರಳುತ್ತಿರುವುದನ್ನು ನೋಡಲಾರದೆ ವಿಷಕೊಟ್ಟದ್ದು ಹೌದು ಎಂದು ಮಗಳ ವಾದ ಜಡ್ಜಿಯವರ ತೀರ್ಪು—ಖುಲಾಸೆ ಮಾಡಿದ್ದೇನಾಗಿ

\+ + + +

ಮದ್ರಾಸಿನಲ್ಲಿ ಕೋಮುವಾರಿನ ವಿಷಯ ಮುಸ್ಲಿಂ ವಿದ್ಯಾರ್ಥಿನಿಯರ ಸಭೆ ಸಭೆಯಲ್ಲಿ ಮುಂದೆ ಬಂದುದು ಮತ್ತೇನಿಲ್ಲ,—ಯಾರೂ ಕೋಮುವಾರಿನ ಗುಲಾಮರಾಗಬಾರದಾಗಿ ಶ್ರೀಮತಿ ಲಕ್ಷ್ಮಿ ರೆಡ್ಡಿಯವರ ಬುದ್ಧಿವಾದ ಇನ್ನೊಂದು ಹೇಳಲು ಮರೆತಿಲ್ಲ ಗಂಡಸರು ಇದ್ದಾರುವ ಸಮುದ್ರಕ್ಕೆ ಹೆಂಗಸರು ಬೀಳುವುದು ಬೇಡವೆಂದು ಇವರ ಬುದ್ಧಿವಾದದ ಅವಶ್ಯ ನಡೆದ ಸಭೆಯವರಿಗೇನೆ

\+ + + +

ನಮ್ಮ ಡಿ| ಬೋ| ನವರು ಸರ್ಪಕಡಿತದವರನ್ನು ಬದುಕಿಸಲು ಓರ್ವ ವೈದ್ಯರನ್ನು ಇಟ್ಟಿರುವರು. ಇವರ ಮೊಕ್ಕಾಂ ಕಾಸರಗೋಡು ಮಂಗಳೂರಿನಲ್ಲಿ ಸರ್ಪ ಕಡಿದರೆ, ಕಾಸರಗೋಡಿಗೆ ಹೋಗಿ ವೈದ್ಯರನ್ನು ಕಾಣುವಷ್ಟರೊಳಗೆ ಕಡಿದವನ ಗತಿ ?

\+ + + +

ಇಂದಿನಿಂದ ನಮ್ಮ ಮಂಗಳೂರಿನ ವಿಠೋಬ ದೇವಸ್ಥಾನದಲ್ಲಿ ಭಜನೆ ಸಪ್ತಾಹದ ಪ್ರಾರಂಭ ಆಮಂತ್ರಣ ನಮಗೂ ಬಂದಿದೆ ಇನ್ನು ಏಳು ದಿವಸಗಳ ವರೆಗೆ ವಿಠೋಬನು ಜಾಗ್ರಣಯಲ್ಲಿರುವನು ಕಳೆದ ಭಾರಿಯ ಲೆಕ್ಕಪತ್ರಗಳೆಲ್ಲಾ ಕರೆಕ್ಟ್ ಏನೂ ದೋಷವಿಲ್ಲ

\+ + + +

ಮೋಟಾರು ಅಪಘಾತಗಳನ್ನು ಕಡಿಮೆ ಮಾಡಲು ತಕ್ಕ ಔಷಧಿ ಹುಡುಕಬೇಕೆಂದು ಮದರಾಸು ಕೌನ್ಸಿಲಿನಲ್ಲಿ ಹಲವರ ಅಭಿಪ್ರಾಯ ಮಾಮೂಲಿನಂತೆ, ಲೆಕ್ಕಪತ್ರ ಪೋಲೀಸ್ ವರದಿಯಲ್ಲಿ ಸರಿಯಾಗಿ ಬರುತ್ತದೆ ಆದರೆ ಮೋಟಾರು ಅಪಘಾತಗಳ ಸೈಕಿ ಓಟು ತೆಗೆದು, ಸನದು ಕೊಡುವುದು ನಿಶ್ಚಯಮಾಡಿದರೆ, ಮದ್ರಾಸಿಗೇನೆ ಮೊದಲು ಸನದು ಕೊಡುವುದು ಉತ್ತಮ

ದಿ ಸೆಂಟ್ರಲ್ ಬೇಂಕ್ ಲಿಮಿಟೆಡ್— ಇವರು ಮಂಗಳೂರಲ್ಲಿ ತಮ್ಮ ಶಾಖೆಯೊಂದನ್ನು ನವಂಬರ ೫ ತಾ ಆರಲ್ಲು ಬಂದರದಲ್ಲಿರುವ ಮಾಜೀ ಬಿ ಎಸ್ ಎನ್ ಕಂಪೆನಿಯವರ ಕಟ್ಟೋಣದಲ್ಲಿ ತೆರೆಯುವರು ಪ್ರಾರಂಭೋತ್ಸವದ ಅಧ್ಯಕ್ಷರಾಗಲು ಮಂಗಳೂರು ಬಿಶಪರಾದ ರೆವರೆಂಡ್ ಡಾ| ವಿ ಆರ್ ಫೆರ್ನಾಂಡಿಸ್ ಡಿ ಡಿ, ರವರು ಒಪ್ಪಿರುವರು ಈ ಸಮಯದಲ್ಲಿ ಡಾ| ಎಫ್. ಎಕ್ಸ್ ಡಿ'ಸೋಜ ಎಮ್ ಎಲ್. ಎ ಎಮ್ ಎ, ಎಲ್. ಎಲ್. ಡಿ, ಬಿ, ಸಿ ಎಸ್ ಮತ್ತು ಮಂಗಳೂರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ... ಶ್ರೀ ವಿಠಲಶೆಟ್ಟರೂ ಮಾತಾಡುವವರಿದ್ದಾರೆ.

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ ಓವಲ್ಟಿನ್ ಸೇವಿಸಿದರೆ ದರ ನಿಮಗೆ ಸುಖವಾದ ಸ್ವಸ್ಥವಾದ ನಿದ್ರೆಯು ಲಭಿಸುವುದು ಈ ನಿದ್ರೆಯು ನಿಮ್ಮ ನರಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಒಲವನ್ನೀಯುವುದು. ಓವಲ್ಟಿನ್ ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ ಬೆಳಿಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗಿ...

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಣೆಯ ವಸ್ತು ಪ್ರಕೃತಿಸಿದ್ಧವಾದ ...ದ ಬಾರ್ಲಿ, ದನದ ಕೆನೆಹಾಲು ವಿಶಿಷ್ಟವಾದ ಕೋಕ್ಕೋಗಳಿಂದ ತಯಾರಾಗಿದೆ ... ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತ ... ದಲ್ಲಿ ದೇಹಕ್ಕೆ ಶಕ್ತಿ ... ತದೆ

ನಿಮ್ಮ ... ಓವಲ್ಟಿನ್ ಸೇವಿಸಿ—ಅದು ಆರೋಗ್ಯಕರ ಬಲವರ್ಧಕ ಮತ್ತು ಶಕ್ತಿದಾಯಕ

ಓವಲ್ಟಿನ್

ಟೋನಿಕ್ ಆಹಾರ ಪಾನಕ—ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ

ಏಜಂಟ್ —ಜೇಮ್ಸ್‌ರೈಟ್ ೬೨ ಎ ರಿಪನ್‌ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮತ್ತು ಮದ್ರಾಸು.

OV/335

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O P No 64/1935

1 ಶ್ರೀದೇವಿ ಅಮ್ಮ, ಉದ್ದಿ ದಾಸಪ್ಪ ಶೆಟ್ಟಿ ವಿಧವೆ 2 ಪಾಂಡುರಂಗ ಶೆಟ್ಟಿ 3 ನರಹರಿ ಶೆಟ್ಟಿ—ದಾಸಪ್ಪ ಶೆಟ್ಟಿ ಮಕ್ಕಳ ಉಡುಪಿ ಕಸಬಾ ಬಡಗಬೆಟ್ಟು ಅರ್ಜಿದಾರರು

1ನೇ ಅರ್ಜಿದಾರಳ ಮಗ ವ 2ನೇ 3ನೇ ಅರ್ಜಿದಾರರ ಸಹೋದರ ಮೃತ ವಿಠಲದಾಸಪ್ಪ ಶೆಟ್ಟಿ ಬಾಬ್ತು Hindustan Co operative Insurance Society Limited, Calcutta, ಈ ಕಂಪೆನಿಯಿಂದ Insurance Policy No 91488ರ ಬಾಬ್ತು ರೂ 1000ದ ವಸೂಲಿ ಕುರಿತು 1ನೇ ಅರ್ಜಿದಾರಳಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ 18-11-1935ರಲ್ಲಿ ಇಡೋಣಾಗಿದೆ ಆ ಬಗ್ಗೆ ಆಕ್ಷೇಪಹೇಳುವವರು ಸದ್ರಿ ತಸ್ಕಿ ದಿವಸ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜ್ಯಾಹೀರುಮಾಡತಕ್ಕದ್ದು.

Udipi, S. K. 24-10-35. } K Ramanath Pai, Pleader for Petrs,

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd,
PUTTUR
ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು—3 ತಿಂಗಳಿಗೆ ಶೇಕಡಾ 5ರಂತೆ 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935. } G N Lakshman Pai, *Secretary.*

ಈ ವಾರದ ಯುದ್ಧವಾರ್ತೆಗಳು.

ಓಗಡನ್ ಪ್ರಾಂತ್ಯದಲ್ಲಿ

ಓಗಡನ್ ಪ್ರಾಂತ್ಯದಲ್ಲಿ ಇರಿಸಿದ ಎಥಿಯೋಪಿಯಾದ ಸೈನ್ಯದಳದ ಕಾರ್ಯವು ಫಲಕಾರಿಯಾಗುವುದು. ಕಾರಣ ಆ ಪ್ರದೇಶದ ರಚನೆಯಿಂದ ಇಟೇಲಿಯಾನರಿಗೆ ತೊಂದರೆಗಳು ಸುಲಭವಾಗುವುದು. ಈ ಪ್ರಾಂತ್ಯವು ಅರಣ್ಯಪ್ರದೇಶವಾಗಿದೆ ಯೋಗ್ಯವಾದ ಮಾರ್ಗೋಪಾಯಗಳು ಇಲ್ಲಿ ದುರ್ಲಭ ಇಟೇಲಿಯ ಸೈನ್ಯದಳವು ಈ ಅರಣ್ಯಗಳನ್ನು ದಾಟುತ್ತಿರುವಾಗ ತೋಡುಗಳಲ್ಲಿ ಅವಿತ ಎಥಿಯೋಪಿಯಾನ ಸೈನಿಕರು ಇವರ ಮೇಲೆ ಬಿದ್ದು ತಮ್ಮ ಶ್ರೇಷ್ಠವಾದ ಗೋರಿಲ್ಲ ಯುದ್ಧ ಪ್ರಯೋಗವನ್ನು ಮಾಡಲು ಸಾಧ್ಯವಾಗುವುದು ಮಲೆನಾಡಿನ ರೋಗಗಳು ಇಟೇಲಿಯನ್ನು ಪೀಡಿಸುತ್ತಿವೆ ಸೊಳ್ಳೆಗಳು ಇವರ ಮೇಲೆ ವೈರತ್ವ ಬೆಳಸಿದಂತೆ, ವೆಬ್‌ಶಿಬೆಲ್ಲಿ ನದಿಯ ತೀರದಲ್ಲೂ, ಇದರ ಉಪನದಿಗಳ ತೀರಗಳಲ್ಲೂ ಇಟೇಲಿಯಾನರ ಮೇಲೆ ತಮ್ಮ ಅಧಿಕ್ರಮವನ್ನು ಮಾಡುತ್ತಿದ್ದಾರೆ ಅಂತೂ ಇಂತೂ, ಇಟೇಲಿಯವರ ಗರ್ವಭಂಗವು ಇಲ್ಲಿ ಸಾಧ್ಯವಾಗಬಹುದು ಓಗಡನ್ ದೇಶದ ಧೀರ ಸೈನ್ಯ ಮಂಡಳವು, ಮುಂದುವರಿಯುವ ಇಟೇಲಿಯಾನ ದಂಡನ್ನು ತಡೆಯುವ ಯೋಗ್ಯತೆವುಳ್ಳವರಾಗಿದ್ದಾರೆ ಅರಣ್ಯದ ಪರಿಚಯವು ಅವರಿಗೆ ತುಂಬಾ ಇದೆ ನವೋಪಕರಣಗಳಿಂದ ಕೂಡಿದ ಇಟೇಲಿಯ ಸೈನ್ಯ ಮಂಡಳಕ್ಕೆ ಎಬಿಸೀನಿಯವನ್ನು ಇಲ್ಲಿ ಸದೆಬಡೆಯಲು ಅಸಾಧ್ಯವಾಗುವುದಲ್ಲದೆ, ಇವರಿಗೆ ಸೋಲು ಲಭಿಸುವುದೆ ಎಂಬ ಊಹೆಯು ಎಲ್ಲೆಲ್ಲೂ ಇದೆ ಆದುದರಿಂದ ಇಟೇಲಿಯ ಸೈನ್ಯದಳವು ಇನ್ನೂ ಮುಂದುವರಿದರೆ ಅವರಿಗೆ ಭಯಂಕರ ಅಪಾಯಗಳು ಒದಗುವವು

ಮಳೆಯ ಪ್ರಾರಂಭ

ಮಳೆಯು ಇನ್ನೂ ಆರು ತಿಂಗಳಲ್ಲಿ ತಲೆದೋರುವುದು. ಅಷ್ಟರಲ್ಲಿ ಇಟೇಲಿಯವರು ತಮ್ಮ ಯುದ್ಧ ಸನ್ನಾಹವನ್ನು ಕೊನೆಗೊಳ್ಳಿಸಬೇಕು ಮಳೆಯ ಪ್ರಯುಕ್ತ ಇವರಿಗೆ ಹಿಂದೆ ಹೋಗಬೇಕಾಗುವುದಲ್ಲದೆ, ವಶೀಕರಿಸಿದ ಪ್ರಾಂತ್ಯಗಳು ಇವರ ಕೈಬಿಡುವ ಸಂದರ್ಭಗಳು ಒದಗಲು ಕಾರಣಗಳಿವೆ

ಒಂಭತ್ತು ಆಸ್ಪತ್ರೆಗಳು

ಇಟೇಲಿಯವರು ಇರಿಟ್ರಿಯಾದಲ್ಲಿ 25000 ಸೈನಿಕರ ಉಪಶಮನಗೋಸ್ಕರ 9 ಆಸ್ಪತ್ರೆಗಳನ್ನು ನಿರ್ಮಿಸಿರುತ್ತಾರೆ ರೋಮಿನಿಂದ ದೊಡ್ಡ ದೊಡ್ಡ ಸ್ಟೀಮರುಗಳಲ್ಲಿ ವೈದ್ಯಕೀಯ ಸಾಮಗ್ರಿಗಳು ಒಯ್ಯಲಾಗಿವೆ ಸಾಂಕ್ರಾಮಿಕ ರೋಗ ನಿವಾರಣೆಗೋಸ್ಕರ ಈ ಆಸ್ಪತ್ರೆಗಳಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ

ಹಿಂದುಸ್ಥಾನದೊಡನೆ ಕರಾರು

ಇಟೇಲಿಯು ಒಂದು ದೊಡ್ಡ ನಾರಿನ ಕಾರ್ಖಾನೆಯು ಹಿಂದುಸ್ಥಾನದೊಡನೆ, ಬರುವ ವರ್ಷಕ್ಕೆ ಬೇಕಾದ ನಾರನ್ನು ಒದಗಿಸಬೇಕೆಂಬ ಕರಾರು ಮಾಡಿದೆ ಎಂಬ ವರ್ತಮಾನವು ಬಂದಿದೆ ಕಳೆದ ಮೂರು ದಿವಸಗಳಲ್ಲಿ ಇಟೇಲಿಯು ಬ್ರಿಟನಿನಿಂದ ರೊಕ್ಕ ಹಣ ಕೊಟ್ಟು ಮೂರು ಸಾವಿರ ಟನ್ ಕಲ್ಲಿದ್ದಲನ್ನು ಪಡೆದುಕೊಂಡಿದೆ ಮುಂದಿನ ಕಲ್ಲಿದ್ದಲಿನ ವ್ಯಾಪಾರ ಸಂಬಂಧ ಕರಾರು ಮಾಡಲು ಕೆಲವು ಬ್ರಿಟಿಷ ವರ್ತಕರು ರೋಮನಗರಕ್ಕೆ ಹೋಗಿರುವರು

ಅಂತರಿಕ್ಷದಿಂದ ಬೊಂಬುಗಳ ಪ್ರಯೋಗ

ಇಟೇಲಿಯಾನರು ಕೆಲವು ಕಡೆಗಳಲ್ಲಿ ಅಂತರಿಕ್ಷದಿಂದ ಬೊಂಬುಗಳನ್ನು ಎಸೆದು ಕೆಲವು ಗ್ರಾಮಗಳನ್ನು ಧ್ವಂಸಪಡಿಸಿರುವರು ವಿಷಕರ ಗ್ರೇಸಿನ ಪ್ರಯೋಗವು ಧಾರಾಳವಾಗಿ ನಡೆಯುತ್ತಿರುವುದು. ಎಥಿಯೋಪಿಯಾನರು ದಿಗಿಲುಗೊಳ್ಳುತ್ತಿದ್ದಾರೆ ಕೆಲವು ಯುದ್ಧಯುಕ್ತವಾದ ಪ್ರದೇಶಗಳನ್ನು ವಶೀಕರಿಸಿದ ನಂತರ ಇಟೇಲಿಯಾನರು ತಮ್ಮ ಮೇಲ್ಗಾಯಿಕೆಯನ್ನು ನಿಲ್ಲಿಸುವರು ಹೀಗೆಯೇ ಎಬಿಸೀನಿಯಾದವರು ತಮ್ಮ ಸೈನ್ಯಬಲವನ್ನು ಅಲ್ಲಲ್ಲಿ ಹೆಚ್ಚಿಸುತ್ತಿರುವರು ಇವರಿಬ್ಬರ ಈ ಎರಡು ಕಾರ್ಯಗಳು ಕೊನೆಗೊಂಡ ನಂತರ ಒಂದು ಮಹಾ ಸಮರವು ಉಂಟಾಗುವುದೆಂದು ವರ್ತಮಾನವಿದೆ

ಸೆಂಕ್ಷನುಗಳು ಫಲಿಸದಿದ್ದರೆ

ಸೆಂಕ್ಷನುಗಳು ಇಟೇಲಿಯವರ ಬುದ್ಧಿ ವಿಕಾಸ ಮಾಡದಿದ್ದರೆ ಜನಪದ ಮಂಡಳವು ಮುಂದೇನು ಮಾಡುತ್ತಿದೆ ಎಂದು ಒಂದು ಪ್ರಶ್ನೆ. ಇದಕ್ಕೆ ಸೆಂಕ್ಷನುಗಳಿಗಿಂತ ಸಾಂಕ್ರಾಮಿಕ ರೋಗ, ಕ್ಷಾಮ ಇವೇ ಮೊದಲಾದ ಆಫ್ರಿಕದ ಪ್ರಕೃತಿ ಅನಿಷ್ಟಗಳು ಇವರನ್ನು ಸದೆಬಡೆಯುವುದಲ್ಲದೆ ಶೇಖರಿಸಿದ ಹಣವು ಎಲ್ಲಾ ವೆಚ್ಚವಾಗಿ ಸೆಂಕ್ಷನುಗಳು ಜ್ಯಾರಿಯಲ್ಲಿರುವುದರಿಂದ ಹಣವು ದೊರಕದೆ ಇಟೇಲಿ ಗರ್ವಭಂಗವಾಗುವುದೆಂದು ಕೆಲವರ ನಂಬಿಕೆ.

ಅಬಿಸೀನಿಯವೂ ಐಗುಪ್ತವೂ

ಐಗುಪ್ತದ ಪ ಹಮ್ಮದೀಯರು ಅಬಿಸೀನಿಯಾದ ಚಕ್ರವರ್ತಿಯವರೊಡನೆ ಸಹಕರಿಸಲು ಸಿದ್ಧವಿದ್ದಾರೆ ಎಂಬ ದಾಗಿಯೂ ಈಗಾಗಲೆ ಸಾವಿರ ಗಟ್ಟಲೆ ಸೈನಿಕರು ಟೊಂಕಕಟ್ಟಿರುವರೆಂದು ವರ್ತಮಾನವು ಬಂದಿದೆ

ಇಟೇಲಿಯು ಎಡೋವಾದಿಂದ

ಇಟೇಲಿಯಾನ ಸೈನ್ಯದಂಡವು ಪಶ್ಚಾಲಿ ಪ್ರಾಂತ್ಯದ ಕಡೆ ಮುಂದುವರಿಯುತ್ತಿದೆ ಶಿಬೆಲ್ಲಿ ಜಿಲ್ಲೆಯ ಮುಖ್ಯ ಪಟ್ಟಣದ ಕಾಲಾಫೊ ಎಂಬ ದೇಶವನ್ನು ವಶೀಕರಿಸಿದ್ದಾರೆ

ಸೆಂಕ್ಷನುಗಳ ವಿಚಾರ

ಆರ್ಥಿಕ ಸೆಂಕ್ಷನ ಒಕ್ಟೋಬರ ತಾ 29ರಿಂದ ಜ್ಯಾರಿಗೆ ಬರುವವು ಈ ಸೆಂಕ್ಷನುಗಳಲ್ಲಿ ಬ್ರಿಟನ್, ಫ್ರಾನ್ಸು ಮತ್ತು ನೆತರ್‌ಲೆಂಡಿನವರು ಸೇರಿ ಪರ ಅಮೇರಿಕಾವು ಈ ಮೊದಲು ತಿಳಿಸಿದಂತೆ ಈ ಸೆಂಕ್ಷನ ಗಳಲ್ಲಿ ಸಹಕರಿಸಲು ಸಿದ್ಧವಿಲ್ಲ ಬ್ರಿಟನಿನಲ್ಲಿ ಒಕ್ಟೋಬರ ತಾ 29ರಲ್ಲಿ ಆರ್ಥಿಕ ಸೆಂಕ್ಷನುಗಳನ್ನು ಸರಕಾರದ ಅಪ್ಪಣೆ ಮೇರೆ ಜ್ಯಾರಿಗೆ ತರಲಾಗುವುದು ವ್ಯಾಪಾರ ಸಂಬಂಧದ ಸೆಂಕ್ಷನುಗಳು ಜನಾಂಗಸಭೆಯ ಸೂಚನೆ ಬಂದ ಕೂಡಲೆ ಜ್ಯಾರಿಗೆ ಬರುವವು

ಈ ಸೆಂಕ್ಷನುಗಳು ನ್ಯಾಯಸಮ್ಮತವಾದುದಲ್ಲ' ಎಂದು ಮುಸಲೋನಿಯ ಪ್ರಕಟಣೆ ಇಟೇಲಿಯು ಸರ್ವ ಸಿದ್ಧವಾಗಿದೆ 1935ರಿಂದ 88ರ ವರೆಗೆ ವಿಶೇಷ ನೌಕಾ ರಚನೆಯು ಮಾಡುವಂತೆ, ಇಟೇಲಿಯ ಸರಕಾರವು 404 ಮಿಲಿಯ ಲಾಯರು (ಇಟೇಲಿಯ ನಾಣ್ಯ)ಗಳನ್ನು ವಿಂಗಡಿಸಿದೆ

ಆರ್ಥಿಕ ಸೆಂಕ್ಷನುಗಳು ಜ್ಯಾರಿಯಲ್ಲಿರುವ ಸ್ಥಳಗಳಲ್ಲಿ ಇವುಗಳಿಗೆ ವಿರುದ್ಧವಾಗಿ ನಡೆದವರಿಗೆ, ಸೆರೆಮನೆ ಯಾ ಜುಲುಮಾನೆ ವಿಧಿಸುವ ಕ್ರಮಗಳನ್ನು ಮಂಜೂರು ಮಾಡಿರುವರು ಅಗತ್ಯವಿದ್ದರೆ, ಹಿಂದುಸ್ಥಾನದಲ್ಲಿ ಈ ಕ್ರಮಗಳು ಮಂಜೂರಾಗುವುವು.

ಅಮೇರಿಕಾ ಮತ್ತು ಇನ್ನು ಕೆಲವು ಜನಾಂಗದವರು ಈ ಸೆಂಕ್ಷನುಗಳಲ್ಲಿ ಭಾಗವಹಿಸುವುದಿಲ್ಲ

ಅಬಿಸೀನಿಯಾ ಇಟೇಲಿ ಯುದ್ಧವೂ ಬ್ರಿಟಿಷ ಸರಕಾರವೂ

ಬ್ರಿಟಿಷ ಪಾರ್ಲಿಮೆಂಟು ಬೇಗನೆ ಕೊನೆಗೊಂಡು, ನವಂಬರ ತಾ. 14ರಲ್ಲಿ ಮಹಾ ಚುನಾವಣೆಯು ನಡೆಯುವುದು. ಈಗ ಅಧಿಕಾರದಲ್ಲಿರುವ ನ್ಯಾಶನಲ್ ಸರಕಾರವು ಯುದ್ಧಮೋಡಗಳಿಂದ ಕೂಡಿದ ಸಮಯವೆ ನಮಗೆ ವಿಜಯಗಳಾಗಲು ತಕ್ಕುದಾದ ಸಮಯವೆಂದು ಈ ಮಹಾ ಚುನಾವಣೆಯನ್ನು ಇಷ್ಟು ಬೇಗನೆ ಕರೆದಿರುವರು

ಎಥಿಯೋಪಿಯಾನರಿಗೆ ನಿಸರ್ಗದ ಸಹಾಯವು

ಇಟೇಲಿಯಾನರು ಅಬಿಸೀನಿಯಾದ ವಿಸ್ತಾರವಾದ ಮರಳುಗಾಡನ್ನು ದಾಟಬೇಕು ಪರ್ವತ ಪ್ರದೇಶಗಳಲ್ಲಿಯೂ, ಇಕ್ಕಟ್ಟಾದ ಆಳವಾದ ಕಣಿವೆಗಳಲ್ಲಿಯೂ ಸಂಚರಿಸಬೇಕು ಇದರ ಕಷ್ಟವಂತೂ ಅಸದಳವಾದೀತು ಪ್ರತಿ ಬೆಟ್ಟದಲ್ಲಿಯೂ ಗಹ್ವರದಲ್ಲಿಯೂ ಇಟೇಲಿಯಾನರ ಅಪಾಯಕ್ಕೆ ತತ್ಪರರಾಗಿರುವ ಭಾರತದಲ್ಲಿ ಮರಾಟರು ಅನುಸರಿಸುತ್ತಿದ್ದ ಕುಟಿಲ ಸಂಗ್ರಾಮ ನೀತಿ(ಗನಿಮಿ ಕಾವಾ)ಯಲ್ಲಿ ಅಬಿಸೀನಿಯಾದವರು ಪ್ರವೀಣರು. ವೀರ ಅಬಿಸೀನಿಯಾನರು ಶಸ್ತ್ರ ಸಜ್ಜಿತರಾಗಿ ಗುಹೆಗಳಲ್ಲಿಯೂ, ಹಳ್ಳಕೊಳ್ಳಗಳಲ್ಲಿಯೂ ಅವಿತಿದ್ದು ಇಟೇಲಿಯಾನರ ಮೇಲೆ ಯೋಗ್ಯ ಸಮಯ ಬಿದ್ದು, ಅವರನ್ನು ಧ್ವಂಸಮಾಡಬಲ್ಲರು ಈ ಪರಿಸ್ಥಿತಿಗಳನ್ನು ಗಮನಿಸಿದರೆ ಇಟೇಲಿಯ ದಂಡಯಾತ್ರೆಯು ಎಷ್ಟು ಕಠಿನವಾದದೆಂಬುದು ವಿಧಿತವಾಗುವುದು

ಸಂಧಿ ಪ್ರಸ್ತಾಪ

ಈ ಕುರಿತ ಮಾತುಕತೆಗಳು ಇಟೆಲಿಗೂ ಬ್ರಿಟಿಷ ಮತ್ತು ಫ್ರೆಂಚರಿಗೂ ನಡೆಯುತ್ತಿವೆ ಇವುಗಳು ಫಲಕಾರಿಯಾಗುವುದರಲ್ಲಿ ಸ್ವಲ್ಪ ಸಂದೇಹವಿದೆ ಎಂದು ಕೆಲವು ವರ್ತಮಾನ ಪತ್ರಗಳ ಊಹೆ ಇಷ್ಟರ ತನಕ ನಡೆದ ಮಾತುಕತೆಗಳಿಂದ ಯಾವುದೇ ಒಂದು ಖಂಡಿತ ವರ್ತನೆಯು ಹೊರಡುವುದಿಲ್ಲ ಆದರೆ ಸಂಬಂಧಪಟ್ಟವರ ಇನ್ನೂ ನಿರಾಶರಾಗಲಿಲ್ಲ ಬೇಗನೇ ಶಾಂತಿ ಸ್ಥಾಪನೆಯಾಗಬಹುದೆಂದು ಬ್ರಿಟಿಷ ಮತ್ತು ಫ್ರಾನ್ಸಿನಲ್ಲಿ ಕೆಲವರ ನಂಬಿಕೆ

ಅಬಿಸೀನಿಯಾದ ರೈಲ್ವೆ

ಫ್ರೆಂಚ್ ಮಿಲಿಯಗಟ್ಟಲೆ ಹಣವನ್ನು ಇಲ್ಲಿ ರೈಲ್ವೆ ಮೇಲೆ ವೆಚ್ಚ ಮಾಡಿರುತ್ತಾರೆ ಯುದ್ಧ ಪ್ರಾರಂಭವಾಗುವ ಮೊದಲು ಈ ರೈಲ್ವೇಯ ರಕ್ಷಣೆ ಸಂಬಂಧ ಇಟೇಲಿಗೂ ಇವರಿಗೂ ಸ್ವಲ್ಪ ಚರ್ಚೆಯು ನಡೆದು ಅವುಗಳ ಯುದ್ಧ ಸಂಬಂಧವಾಗಿ ಪ್ರಯೋಗವಾಗದಿದ್ದರೆ ಅವುಗಳ ಗೋಜಿ ತಾವು ಹೋಗುವುದಿಲ್ಲ ಎಂದು ಇಟೇಲಿಯವರು ತಿಳಿಸಿದ್ದರು ಆದರೆ ಎಥಿಯೋಪಿಯಾನರ ಸೈನ್ಯ ದಳಗಳನ್ನು ಇರಿಟ್ರಿಯಾಕ್ಕೂ ಓಗಡನ್ ಪ್ರಾಂತ್ಯಗಳಿಗೂ ಸಾಗಿಸಲು ಇವರು ಸಹಕರಿಸಿದ್ದಾರೆ ಇದು ಒಪ್ಪಂದಕ್ಕೆ ವಿರುದ್ಧವಾದುದರಿಂದ ಇಟೇಲಿಯವರು ಅಂತರಿಕ್ಷ ಇದರ ಮೇಲೆ ದಾಳಿ ನಡೆಯಿಸುವರೋ ಎಂಬ ಭಯ ಕೂಡಿದವರಾಗಿ, ಒಂದುವೇಳೆ ರೈಲ್ವೆ ಹಾದಿಯು ಕಡಿದುಹೋದರೂ ರೈಲ್ವೇಯ ಚಲಾವಣೆಯು ಇರುವಂತೆ, ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ ಸ್ವದೇಶದಿಂದ ಕೆಲಸಗಾರರನ್ನು ತಂದಿರುತ್ತಾರೆ ಸಂಕಗಳ ಎರಡು ಕಡೆಗಳಲ್ಲಿಯೂ ಹೆಚ್ಚಿನ ರೈಲ್ವೇ ಇಂಜಿನುಗಳನ್ನು ಬಂಡಿಗಳನ್ನು ಶೇಖರಿಸಿದ್ದಾರೆ ಯಾಕೆಂದರೆ ಒಂದು ವೇಳೆ ಸಂಕಗಳು ಮುರಿದರೂ ಸಣ್ಣ ಸಂಕಗಳನ್ನು ನಿರ್ಮಿಸಿ, ಅವುಗಳ ಉಪಯೋಗದಿಂದ ಜನರನ್ನೂ ಸಾಮಾನುಗಳನ್ನೂ ಅತ್ತಸಾಗಿಸಿ ರೈಲ್ವೇ ಚಲನವು ನಿಲ್ಲದ ಹಾಗೆ ಮಾಡಬಹುದು ರೈಲ್ವೇ ರಸ್ತೆ ರಕ್ಷಣೆಗೋಸ್ಕರ ಸ್ವದೇಶದಿಂದ ತಂದ ಸೈನಿಕರನ್ನು ಅಲ್ಲಲ್ಲಿ ಇರಿಸಿದ್ದಾರೆ

ಅಬಿಸೀನಿಯಾದಲ್ಲಿ ಗೂಢಚಾರರ ಹಾವಳಿ

ಸೋಮಾಲಿಯ ಜನರು ಶೇಕಗಳ ಪೋಷಾಕುಗಳನ್ನು ಧರಿಸಿಕೊಂಡು ಎಥಿಯೋಪಿಯಾದ ಎಲ್ಲಾ ದೇಶಗಳಲ್ಲಿ ಗೂಢಚಾರರಾಗಿ ತಿರುಗುತ್ತಿರುವರು ಜಾಗರೂಕರಾದ ಹಬಸಿಗಳು ಇಂಥ ಕೆಲವು ಸೋಮಾಲಿಯವರನ್ನು ಸೆರೆಹಿಡಿದಿರುವರು ಹಲವರು ಇಟೇಲಿಯವರನ್ನು ತ್ಯಜಿಸಿ ಬಂದಂತೆ ನಟಿಸಿ ಎಥಿಯೋಪಿಯಾ ತಂಡಗಳನ್ನು ಸೇರಿ ಯುದ್ಧ ಸಿದ್ಧತೆಯ ಸೂತ್ರ ತಿಳಕೊಂಡು ಇಟೇಲಿಯಾನರಿಗೆ ತಿಳಿಸಿದ್ದಾರೆ ಈ ಗೂಢಚಾರ ಕೆಲಸದಲ್ಲಿ ಸೋಮಾಲಿಯ ಹೆಸರುವಾಸಿ ನಾಯಕರೆ ಭಾಗವಹಿಸಿರುವರು ಸಿಕ್ಕಿಬಿದ್ದ ಹಲವು ಗೂಢಾಚಾರರನ್ನು ಬಂಧನೆಯಲ್ಲಿ ಇಟ್ಟಿರುತ್ತಾರೆ ಕೆಲವರನ್ನು ಭೀತಿ ಉಂಟಾಗುವಂತೆ ದೇಶದ ಮುಖ್ಯಸ್ಥಳಗಳಲ್ಲಿ ಗೂಢಚಾರರ ಕುತ್ತಿಗೆಗೆ ನೇಣ ಹಾಕಿ ಕೊಂದಿರುವರು. ಎಬಿಸೀನಿಯಾದ ಚಕ್ರವರ್ತಿಯವರು ಗೂಢಚಾರರ ಈ ಹಾವಳಿಯನ್ನು ಕಡಿಮೆಮಾಡಲು ತಕ್ಕ ವ್ಯವಸ್ಥೆಗಳನ್ನು ಮಾಡಿರುತ್ತಾರೆ

ಎಥಿಯೋಪಿಯಾದ ಸ್ತ್ರೀಯರೂ ಈಗಿನ ಯುದ್ಧವು

ತನಗೆ ಒದಗಿದ ಸಂಕಷ್ಟವನ್ನು ನಿವಾರಿಸಲು ಅಬಿಸೀನಿಯಾವು ತನ್ನ ಎಲ್ಲಾ ಜನರನ್ನು ಸಮರಕ್ಕೆ ಬಿಟ್ಟಿರುತ್ತದೆ ಇವರು ದೇಶ ವಾತ್ಸಲ್ಯಗಳು ದೇಶರಕ್ಷಣೆಗಾಗಿ ಮಡಿಯಲು ಸಿದ್ಧರಿರುವರು ಇವರೊಡನೆ ಕೆಲವು ವೀರ ರಮಣಿಯರು ಮುಂದುವರಿದು ಬಂದಿರುತ್ತಾರೆ ತಾಯಂದಿರು ತಮ್ಮ ಮಕ್ಕಳು ಯುದ್ಧಾತುರದಿಂದ ಯುದ್ಧರಂಗಕ್ಕೆ ಹೊರಡಲು ಅನ್ನರಂತೆ ಅವರೆದುರು ಗೋಳಿಡುವ ಬದಲಾಗಿ ಸಂತೋಷದಿಂದ ಇವರನ್ನು ಕಳುಹಿಸಿ ಕೊಡುತ್ತಿದ್ದಾರೆ ಇದರಿಗೂ ಯುದ್ಧರಂಗಕ್ಕೆ ಹೋಗಿ ಹೆಣಗಾಡಲೂ ಇಚ್ಛೆಯಿದೆ ಆದರೆ ಯುದ್ಧರಂಗವನ್ನು ಸೇರಲು ಕೆಲವು ಆತಂಕಗಳಿವೆ ಇದರಿಂದ ಕೆಲವರು ಬಹಳ ವ್ಯಸನಿಗಳಾಗಿ ಕೂಗಿರುವರೆಂದು ಅತ್ತ ಕಡೆಯಿಂದ ಒಂದ ಮಹಸ್ತಿಯ ಕೊಟ್ಟರ ನಾಡು.

ಬ್ರಿಟಿಷ ಪಾರ್ಲಿಮೆಂಟಿನ ವಿಸರ್ಜನೆ

ಮಹಾಚುನಾವಣೆಯು ಬೇಗನೆ ನಡೆಯುವುದು.

ಸಾರ್ವಭೌಮರ ಭಾಷಣ.

ಪಾರ್ಲಿಮೆಂಟಿನ ಕೊನೆಯ ಸಭೆಯು ಇದೇ ತಾ 25ರಲ್ಲಿ ಜರಗಿತು ಚರ್ಚೆಗಳೇನು ನಡೆಯಲಿಲ್ಲ. ವಿಸರ್ಜನೆ ಕಾರ್ಯವೆ ಈ ಸಭೆಯ ಮುಖ್ಯ ಕಾರ್ಯಕ್ರಮವಾಗಿತ್ತು ಮುಂಚಿನ ಕ್ರಮಗಳನ್ನು ಅನುಸರಿಸಿ ಹಿಂದಿನ ಸಭೆಯ ವಿಸರ್ಜನೆಯು ನಡೆಯಿತು ಅನಂತರ ಹೌಸ್ ಒಫ್ ಕೋಮನ್ಸರಿಗೆ ಲೋರ್ಡ್ಸರ ಮಂದಿರದಲ್ಲಿ ಸಾರ್ವಭೌಮರ ಭಾಷಣವಿತ್ತು ಈ ಭಾಷಣದಲ್ಲಿ ಅಬಿಸೀನಿಯಾ ಯುದ್ಧ ವಿಚಾರದಲ್ಲಿ ಬ್ರಿಟಿಷ ಸರಕಾರವು ಶಾಂತಿಗಾಗಿ ಪ್ರಯತ್ನಗಳನ್ನು ಮಾಡಿದರೆಂದು, ಇನ್ನು ಮುಂದಕ್ಕೂ ತನ್ನ ಸರಕಾರಕ್ಕೆ ಇದೇ ಮುಖ್ಯ ಉದ್ದೇಶವಾಗಿರುವುದೆಂದೂ ಹಿಂದೂದೇಶಕ್ಕೆ ಸಧ್ಯದಲ್ಲಿ ಸುಧಾರಣೆಗಳನ್ನು ಕೊಡಲಿರುವರೆಂದೂ, ಪಾರ್ಲಿಮೆಂಟಿನ ಕಳೆದ ಜೀವಮಾನವನ್ನು ಉಲ್ಲೇಖಿಸಿದ ಈ ಭಾಷಣವು ಅರಸರಿಗಾಗಿ ಲೋರ್ಡ ಸಭೆ ಓರ್ವ ಸದಸ್ಯರು ವ್ಯಾಖ್ಯಾನ ಮಾಡಿದರು. ಮಹಾ ಚುನಾವಣೆಯ ಸಿದ್ಧತೆಗಳು ಎಲ್ಲಾ ದಿಕ್ಕುಗಳಲ್ಲಿ ನಡೆಯುತ್ತಿವೆ ಇಷ್ಟರ ವರೆಗೆ 1270 ಉಮೇದುವಾರರು ಮುಂದಕ್ಕೆ ಬಂದಿರುವರು 615 ಸ್ಥಾನಗಳಿಗೆ ಚುನಾವಣೆಯು ಆಗಲಿದೆ ಮುಂಚಿನ ಸದಸ್ಯರಲ್ಲಿ 62 ಜನರು ಮರು ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ. 8 ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—
ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ನಿಘಂಟುಗಳ ಉದಾರದಿಂದ ಸಾಧು ಶಿಷ್ಯರು ಸ್ವಾನುಭವದಿಂದಿದ ಎಲ್ಲಾ ಔಷಧಿ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಈ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ,

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ಸಹಿತ
ಬೆಲೆ ಆಣೆ 8.
80, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ ಅದು ಆರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ — ಅದು ಪೂರ್ಣವಾದ ಟೋನಿಕ್ ಆಹಾರ ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ
ರೂ. 3-4-0 ಮತ್ತು ರೂ 1 12-0

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

WANTED.

Matrimonial

Wanted a beautiful accomplished girl of less than 21 years age, of high class Hindu family to marry a young man 29 years old holding very decent position handsome and an accomplished singer. Virgin widows, no objection. No dowry or caste restrictions. Apply in Strictest Confidence with full details and latest photograph to

XYZ
C/o Swadeshabhimani,
Mangalore S K

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)
ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ
ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

[ಹೊಸ ಕೆಟಲಾಗು ಧರ್ಮಾರ್ಥ]
ವಿಳಾಸ
The Scientific Gold Bangles Co., Ltd.
Head Office 48, Byragimatam Street,
Post Box No 208, Madras

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದು ಸ್ತ್ರೀಸಂಗಮದಿಂದ ಮನುಷ್ಯಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು



ಅನೇಕರು ಕಾಹಿಲೆಯ ದೆಸೆಯಿಂದ ಕೋಟಲೆಗೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ

ಕ್ರಯ -ದೊಡ್ಡ ಬಾಟ್ಲಿಗೆ ರೂ 4 ಮಧ್ಯಮ 2-4-0 ಚಿಕ್ಕದು 1-2-0.

ತಯಾರಿಸುವವರು.— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್ :—ಚಿಕ್ಕಪೇಟೆ, ಬೆಂಗಳೂರು
ಮುಖ್ಯ ಏಜಂಟರು.— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಈ ವಾರದ ಯುದ್ಧವಾರ್ತೆಗಳು.

(ಮುಂದುವರಿದುದು)

ಮುಸ್ಲಿಮರು ಇಟೆಲಿಯಾನರು

10,000000 ಮಂದಿ ಎಥಿಯೋಪಿಯಾನರ ಸ್ವಾತಂತ್ರ್ಯದ ವಿನಾಶವು, ಇಟೇಲಿಯಾನರ ಗರ್ಜನೆಯು, 800,000,000 ಮಂದಿ ಮುಸ್ಲಿಮರನ್ನು ಅವರೊಡನೆ ಸಹಕಂಪಿಸಲು ಕರೆದಿರುತ್ತದೆ ಇದರಲ್ಲಿ 40,000,000, ಮಂದಿ ಹತ್ತಿರದ ಐಗುಪ್ತ ಪೆಲಾಸ್ತೈನ್ ಸಿರಿಯಾ ಟ್ರೇನ್ಸಜೋರ್ಡನ, ಇರೇಕ್ ಇರಾನ್, ಅರಬಿಯಾ ಮೊದಲಾದ ಪ್ರಾಂತ್ಯದವರು

ಇಸ್ಲಾಮು ಧರ್ಮಕ್ಕೆ ಇಟೇಲಿಯ ಪ್ರಭುತ್ವದಿಂದ ಹಾನಿಬರುದೆಂಬ ಯೋಚನೆಯನ್ನು ಅಲ್ಲಿನ ಜನರ ಮನಸ್ಸಿನಲ್ಲಿ ಸೇರಿಸಿ, ರಾಷ್ಟ್ರೀಯ ಪುರುಷರು ಹಲವು ಜನಗು ಎಥಿಯೋಪಿಯಾದ ಸಹಾಯಾರ್ಥವಾಗಿ ಟೊಂಕಕಟ್ಟುವಂತೆ, ಭಾಷಣ ಮಾಡಿರುತ್ತಾರೆ ಇಟೇಲಿಯ ವಸಾಹತುಗಳ ರಚನೆ ಎಷ್ಟಕ್ಕೂ ಇಲ್ಲಿ ಆಗಬಾರದೆಂದು ಇವರ ಹಠ

ಇಟೆಲಿಯವರು ಒಂದಾನೊಂದು ಕಾಲದಲ್ಲಿ ಟ್ರಾಪೋಲಿ ಎಂಬಲ್ಲಿ ಮುಸ್ಲಿಮರ ಮೇಲೆ ದಾಳಿ ನಡೆಸಿದರೆಂದೂ, ಇವರ ಮಸೀದಿಗಳನ್ನು ನೆಲಸಮವಾಡಿದರೆಂದೂ ಇವೇ ಮೊದಲಾದ ಕಾರಣಗಳಿಂದ ಇವರು ಅವರ ಮೇಲೆ ರೇಗಿರುತ್ತಾರೆ. ಅಲ್ಲಿನ ಮುಸ್ಲಿಮ್ ವಾರ್ತಾ ಪತ್ರಿಕೆಗಳು, ಎಬಿಸೀನಿಯಕ್ಕಾಗಿ ಪ್ರಸಾರಕಾರ್ಯವನ್ನು ಮಾಡುತ್ತಿವೆ

ಇಟೇಲಿಯಾನರಿಗೆ ಆಡಿಸ್ ಅಬಾಬವನ್ನು ವಶೀಕರಿಸಲು 5 ವರ್ಷಗಳು ತಗಲುವವು

ಎಂದು ಮಹಸೀಯರೊಬ್ಬರ ಮಾತು ಇವರ ಮತವು ಹೀಗಿದೆ ಯುದ್ಧ ಪ್ರಾರಂಭವಾದಂದಿನಿಂದ ಇಷ್ಟರ ತನಕ ನಡೆದ ಘಟನೆಗಳನ್ನು ಪರಿಶೀಲಿಸಿದರೆ ಎಬಿಸೀನಿಯವೆ ಗೆದ್ದಹಾಗೆ ಭಾಸವಾಗುತ್ತಿದೆ ಅಂತರಿಕ್ಷದಿಂದ ಬೋಂಬಿನ ಪ್ರಯೋಗವು ಎಥಿಯೋಪಿಯಾನರನ್ನು ದಿಗಿಲುಗೊಳಿಸದ ಹಾಗಿಲ್ಲ ಗೊರಿಲ್ಲಾ ಯುದ್ಧ ಕ್ರಮದಲ್ಲಿ ಇವರು ನಿಪುಣರು ಬಹಳ ತರಬೇತು ಹೊಂದಿದ ಸೈನಿಕರು ಕೂಡ ಇವರೆದುರು ಈ ಗೊರಿಲ್ಲಾ ಯುದ್ಧದಲ್ಲಿ ನಿಲ್ಲಲಾರರು ಎಬಿಸೀನಿಯಾವನ್ನು ವಶೀಕರಿಸಬೇಕಾದರೆ, ಇಟೇಲಿಗೆ ಕನಿಷ್ಠಪಕ್ಷಕ್ಕೆ 5 ವರ್ಷಗಳು ತಗಲುವವು

ಐರ್ಲೆಂಡಿನ ಹತ್ತಿರ ಒಂದು ದೊಡ್ಡ ಹಡಗವು ನೀರುಪಾಲಾಯಿತು

ಮೊನ್ನೆ ತಾ ೨೦ರಲ್ಲಿ ಅತ್‌ಲಾಂತಿಕ್ ಸಾಗರ, ಇಂಗ್ಲಿಷ್ ಕಾಲುವೆ ಮತ್ತು ಉತ್ತರ ಸಮುದ್ರಗಳಲ್ಲಿ ಬಹಳ ತುಫಾನು ಎದ್ದಿತು ನೌಕಾ ಸಂಚಾರಗಳಿಗೆ ಹೆಚ್ಚಿನ ಅಪಾಯಗಳು ಒದಗಿದುವು ೫ ಜನರು ಮೃತರಾಗಿರುವರು ಅನೇಕರು ಜಖಂಗೊಂಡಿರುವರು ಬ್ರಿಟನಿನ ಕರಾವಳಿಗಳಲ್ಲಿ ತುಂಬಾ ಅಪಾಯಕರ ಘಟನೆಗಳು ಸಂಭವಿಸಿದ್ದಾವೆ

'ವೆದೂರ್‌ಲಾ'ವೆಂಬ ಹಡಗು ಐರ್ಲೆಂಡಿನಿಂದ ೭೦೦ ಮೈಲು ದೂರದಲ್ಲಿ ಮುಳುಗಿರುವುದು. ಇದರ ೩೭ ಜನರು ದೋಣಿಗಳಲ್ಲಿ ಸಮುದ್ರಕ್ಕೆ ಇಳಿದಿದ್ದರೂ, ಆದರೆ, ೨೪ ಗಂಟೆ ಶೋಧಿಸಿದರು ಇವರ ಪತ್ತೆಯು ಇನ್ನೂ ಆಗಲಿಲ್ಲ. ಹೊಲ್ಲೆಂಡಿನ ಹತ್ತಿರ ಇನ್ನೊಂದು ನೌಕೆಯು ಹೊಡೆದುಹೋಗಿರುತ್ತದೆ ಜರ್ಮನಿಯವರು ೨೫ ಜನರಿಂದ ಕೂಡಿದ ವರ್ತಕ ನೌಕೆಯು ಮಾಯವಾಗಿದೆ. ಫ್ರೆಂಚರ ಒಂದು ಹಡಗವು ಜರ್ಮನಿಯ ಕರಾವಳಿಯಲ್ಲಿ ನೆಲವನ್ನು ಸೇರಿರುತ್ತದೆ.

ಆಕಾಶದಲ್ಲಿ ಒಂದು ವಿಚಿತ್ರ ಬೆಳಕು

ದಿಗಿಬೋಯಿ ಎಂಬಲ್ಲಿ ಮೊನ್ನೆ ರಾತ್ರಿ ತಾ. 20 ಗಂಟೆ 8ಕ್ಕೆ ಸರಿಯಾಗಿ ಚಂದ್ರನ ಹತ್ತಿರ ಒಂದು ಪ್ರಕಾಶಮಯ ರಶ್ಮಿಯು ತಲೆದೋರಿ, ಚಂದ್ರನ ಎಡಬದಿಯಲ್ಲಿ ಅತಿವೇಗದಿಂದ ಚಲಿಸಿ ಚಂದ್ರನ ಮೇಲಕ್ಕೆ ಸರಿದು ನಾಶವಾಯಿತು ಇಷ್ಟು ಸಂಚಾರ ಮಾಡಲು ಈ ರಶ್ಮಿಗೆ 15 ಮಿನಿಟುಗಳು ತಗಲಿದವು ಈ ವಿಚಿತ್ರ ಘಟನೆಯನ್ನು ದಿಟ್ಟಿಸಲು ಜನಸ್ತೋಮವು ಕಿಕ್ಕಿರಿದು ನೆರೆದಿತ್ತು

ದೇವತೆಗೆ ಮನುಷ್ಯನ ಆಹುತಿ

ಕೊಕನಾಡಿನಿಂದ 80 ಮೈಲು ದೂರದ ರುವ ಅನ್ನಾವರಂ ಎಂಬಲ್ಲಿ ಮಹಾನವಮಿ ದಿವಸ ದೇವಿಯ ಪೂಜೆಯ ಸಮಯ ಒಂದು ಬಾಲಕಿಯನ್ನು ಆಹುತಿಯಾಗಿ ಕೊಟ್ಟಿರುವರು ಹುಡುಗಿ ಒಬ್ಬ ಉಪಾಧ್ಯಾಯನ ಮಗಳು ಅವಳನ್ನು ಮನೆಯಿಂದ ಕದ್ದೊಯ್ದಿದ್ದರು ಎರಡು ದಿವಸಗಳ ನಂತರ ಕತ್ತು ಕಡಿದ ಇವಳ ಶವವನ್ನು ಯಾರೊ ಮನೆ ಅಂಗಳದಲ್ಲಿ ತಂದು ಹಾಕಿದರು ಒಂದು ಮನೆಯಿಂದ ಹೆಣ ಸುಟ್ಟ ವಾಸನೆಯು ಗೊತ್ತು ಕೆಲವರಿಗೆ ಅದ್ದರಿಂದ ಹುಡುಗಿಯ ಶವ ದೊರಕಿದ ಕೂಡಲೆ ಈ ಭಯಂಕರ ಕೃತ್ಯ ಕಂಡು ಹಿಡಿದರು. ಅಪರಾಧಿತರನ್ನು ಹಿಡಿದಿರುವರು.

ಕೊಂಗ್ರೆಸ್ಸಿನ 50ನೇ ವರ್ಷ

ಅಖಿಲ ಭಾರತ ಕಾಂಗ್ರೆಸಿನ ಮಂದಿನ ಅಧಿವೇಶನದಲ್ಲಿ ಅದರ ಸುವರ್ಣ ಮಹೋತ್ಸವವನ್ನು ಜರಗಿಸುವರು ಇದರ ಕಾರ್ಯಕ್ರಮವು ಹೀಗಿದೆ

1 ಪ್ರಭಾತಪೇರಿ ಬೆಳಿಗ್ಗೆ ಬೆಳಕು ಹೊರಡವ ಮೊದಲು. ಬೆಳಿಗ್ಗೆ 8–80ಗಂಟೆ ವರೆಗಣಿಗೆ ಮಧ್ಯಾಹ್ನ ಸಾರ್ವಜನಿಕ ಸಭೆ

ಸಾರ್ವಜನಿಕ ಸಭೆ ಪ್ರಾರಂಭದಲ್ಲಿ ವಂದೆಮಾತರಂ ಹಾಡು ಅಧ್ಯಕ್ಷರ ಸಂದೇಶ ವಾಕ್ಯಗಳನ್ನು ಓದುವುದು, ಕಾಂಗ್ರೆಸ್ಸಿನ ಕುರಿತು ಭಾಷಣಗಳು

ದೇಶಸೇವೆ ಕಾರ್ಯಗಳ — ಕಾಂಗ್ರೆಸ್ಸಿನ ಇಷ್ಟರ ವರೆಗಿನ ಕೆಲಸವನ್ನು ವ್ಯಕ್ತಪಡಿಸಲು ರಾಷ್ಟ್ರೀಯ ಧ್ವಜಗಳ ಪ್ರ —

ರಾತ್ರಿ ದೀಪಾ ಅಲಿ (ಸಿಡಿಮದ್ದಿನ ಉಪಯೋಗವಿಲ್ಲ) ಕುಸ್ತಿ ಮೊದಲಾದ ಸಾಹಸ ಕಾರ್ಯಗಳ ಪ್ರದರ್ಶನ

ಮೇಳ—(ಎ)ಖಾದಿ ಮತ್ತು ಇತರ ಸ್ವದೇಶಿ ಒಡವೆಗಳ ಪ್ರದರ್ಶನ (ಬಿ) ಗ್ರಾಮಗಳ ಕೈಗಾರಿಕೆಯ ಪ್ರದರ್ಶನ (ಸಿ) ಕವಿಗಳ ಸಮ್ಮೇಲನ (ಡಿ) ಗಾಯನ

ಕೊಂಗ್ರೆಸ್ಸಿನ ಪ್ರಸಾರಕಾರ್ಯ ಕೊಂಗ್ರೆಸ್ಸಿನ ಚರಿತ್ರೆಯ ಪ್ರಸಾರ ಮತ್ತು ದೇಶಸೇವೆ ವಿಷಯ ಇತರ ಪ್ರಸಾರ ಕಾರ್ಯ

ನಮ್ಮ ರೈತರಲ್ಲೂ ಐರಿಶ್ ಜನಾಂಗದ ಧೋರಣೆಯು ಬೇಕು

ಶ್ರೀ ಯಜ್ಞಿಕರ ನವಸಂದೇಶ.

'ಐರಿಷ್ ಜನಾಂಗದವರು ಬೇಸಾಯದ ಕೆಲಸದಲ್ಲಿ ಬಹಳ ಖ್ಯಾತಿಯನ್ನು ಪಡೆದವರು ಅವರ ಕ್ರಮಗಳನ್ನೇ ನಾವು ಅನುಸರಿಸಿದರೆ ನಮ್ಮ ದೇಶದ ಸಂಪತ್ತನ್ನು ವೃದ್ಧಿಯಾಗುವಂತೆ ಮಾಡಬಹುದು' ಎಂಬುದೇ ಶ್ರೀ ಇಂದೂಲಾಲ್ ಯಜ್ಞೀಕರ ಸಂದೇಶ ಪಾಶ್ಚಿಮಾತ್ಯರ ದೇಶಗಳನ್ನು ಸಂಚರಿಸಿ ಅಲ್ಲಿಯ ದೇಶಸ್ಥಿತಿ ಜನಾಂಗದ ನವೀನ ಸುಧಾರಣಾ ಸಂಸ್ಥೆಗಳು ಇವನ್ನೆಲ್ಲಾ ನೋಡಿ ಸ್ವತಃ ಮಾಹಿತಿಯನ್ನು ಪಡೆದು ಹಿಂದೂದೇಶಕ್ಕೆ ಮರಳಿರುವರು. ಮೊದಲು ಶ್ರೀಯುತರು ನೊನ್‌ಕೊಪರೇಶನ್ ಚಳವಳಿಯ ಸಮಯದಲ್ಲಿ ಗಾಂಧೀಜೀಯವರ ಕಾರ್ಯದರ್ಶಿಗಳಾಗಿದ್ದವರು ಮತ್ತು ಕಾರಣಾಂತರ ಅವರನ್ನು ತ್ಯಜಿಸಿ ಹೋದರು.

ಶಿಕ್ಷಣದ ಕೆಲವು ಸಮಸ್ಯೆಗಳು

ಮಯೂರ ಭಂಜಸ್ಥಾನದ ಮಾಜಿ ದಿವಾನರಾಗಿದ್ದ ಡಾಕ್ಟರ ಪಿ ಕೆ ಸೆನ್, ಬಾರ್-ಅಟ್ ಲಾ ರವರು ಜವ್ಮೇದಪುರದ ಬ್ರಹ್ಮಸಮಾಜ ಮಂದಿರದಲ್ಲಿ 'ಶಿಕ್ಷಣ ಸಮಸ್ಯೆ'ಗಳ ಕುರಿತು ಕೊಟ್ಟ ಭಾವಗರ್ಭಿತ ಭಾಷಣವನ್ನು ಕನ್ನ ಸುದ್ದಿಗಾರನು ಕಳುಹಿಸಿಕೊಟ್ಟಿರುವುದನ್ನು 'ಹಿಂದೂ' ಪತ್ರಿಕೆಯು ಪ್ರಕಟಿಸಿದೆ ಭಾಷಣಕರ್ತರ ವಿಚಾರಗಳು ಮನನೀಯವಾಗಿರುವುದರಿಂದ ಅವುಗಳನ್ನೇ ಇಲ್ಲಿ ವಾಚಕರ ಮುಂದಿಡಲಾಗಿದೆ

ಡಾಕ್ಟರ ಸೇನರ ಅಭಿಪ್ರಾಯದಲ್ಲಿ—ಶಿಕ್ಷಣಕ್ಕೆ ಸಂಬಂಧಪಟ್ಟ ಹಲವು ಸಮಸ್ಯೆಗಳಿರುವುವು ವಿದ್ಯಾರ್ಥಿಗಳನ್ನು ಜೀವನನಿರ್ವಾಹ ಮಾಡಿಕೊಳ್ಳಲಿಕ್ಕೆ ಯೋಗ್ಯರನ್ನಾಗಿ ಮಾಡುವಂತೆ ಆಹಾರ ಸಂಪಾದನೆಯ ಮಾರ್ಗವನ್ನು ಕಲ್ಪಿಸಿಕೊಡುವ ಪ್ರಶ್ನೆಯೊಂದು, ಮನುಷ್ಯನಾಗಿ ಹುಟ್ಟಿದವನಿಗೆ ಮನುಷ್ಯತ್ವವನ್ನು ತಂದು ಕೊಡಲಿಕ್ಕೆ ಪಾರಮಾರ್ಥಿಕ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಪ್ರಶ್ನೆಯೊಂದು — ಹೀಗೆ ಇವೆರಡು ಸಮಸ್ಯೆಗಳು ಬಹು ಮುಖ್ಯವಾಗಿವೆ ನವನಾಗರಿಕತೆಯನ್ನು ಪಡೆದ ಈಗಿನ ಪ್ರಪಂಚದಲ್ಲಿ ಪಾರಮಾರ್ಥಿಕ ಮತ್ತು ಭೌತಿಕ ಎಂಬೆರಡು ಪದಗಳನ್ನು ಶುದ್ಧ ಅರ್ಥದಲ್ಲಿ ಉಪಯೋಗಿಸುವುದು ಕಡಿಮೆ ಪೌರ್ವಾತ್ಯ ದೇಶಗಳಿಗೆ ಸಂಬಂಧಪಟ್ಟದ್ದನ್ನೆಲ್ಲಾ ಪಾರಮಾರ್ಥಿಕವೆಂದೂ ಪಾಶ್ಚಾತ್ಯ ದೇಶಗಳಿಗೆ ಸಂಬಂಧಪಟ್ಟದ್ದನ್ನೆಲ್ಲಾ ಭೌತಿಕವೆಂದೂ ಸಾಮಾನ್ಯವಾಗಿ ತಿಳಿಯುವ ವಾಡಿಕೆ ಇರುತ್ತದೆ ಯಂತ್ರೋಪಕರಣಗಳ ಆವಿರ್ಭಾವವಾಗಿ ಸಜೀವಿಗಳು ಹೆಚ್ಚೆಚ್ಚು ವಿರಾಮ ಪಡೆದು ಸುಖಜೀವನದ ಸಕಲ ಅನುಕೂಲತೆಗಳನ್ನೂ ಅನುಭವ ಮಾಡಿಕೊಳ್ಳುವಂತಾದ ಪಾಶ್ಚಾತ್ಯ ನಾಗರಿಕತೆಯು ವರ ಪ್ರಸಾದವು ಹೀಗೆ ಪಾಶ್ಚಾತ್ಯ ನಾಗರಿಕತೆಯ ಅಲ್ಪ ಪರಿಶ್ರಮದಿಂದ ಮನುಷ್ಯನು ಅಧಿಕ ಸುಖಿಯಾಗುವಂತೆ ಸಾಧ್ಯ ಅವನೊಡನೆ ಸಹಾನುಭೂತಿ-ದಯಾಭಾವಗಳನ್ನು ಕಲಿಸುವುದು ಆ ನಾಗರಿಕತೆಯ ಪಾರಮಾರ್ಥಿಕತೆಯನ್ನು ತೋರಿಸುತ್ತದೆ ಈ ಕಾರಣದಿಂದ ಪಾಶ್ಚಾತ್ಯ ನಾಗರಿಕತೆಯ ಪ್ರಥಮ ಸ್ಥಳಗಳಾದ ಅಮೇರಿಕವು ತನ್ನ ಜನರ ದುರ್ದಿನಗಳಲ್ಲಿ ಊರೂರು ದೇಶ ವಿದೇಶ ಸುತ್ತಾಡಿ ಸಹಾಯ ಧನ ಪಡೆದುಕೊಳ್ಳಲಿಲ್ಲ. ತನ್ನ ಪತಿಯೊಬ್ಬ ಕೃಷಿಕನಿಗೂ ಕೂಡ ಒಂದೊಂದು ಮೋಟರಗಾಡಿಯನ್ನು ಕೊಂಡಿಟ್ಟುಕೊಳ್ಳಲಿಕ್ಕೆ ತಕ್ಕ ಸಾಮರ್ಥ್ಯವನ್ನು ಕೊಡುಕೊಟ್ಟಿದೆ ಇದು ಅಮೆರಿಕನರ ಸಹೋದರ ಭಾವವನ್ನು ಸೂಚಿಸುತ್ತದೆ

ಆದರೆ ನಮ್ಮದು ಪಾರಮಾರ್ಥಿಕ ಸಂಸ್ಕೃತಿ ಎಂದು ಬಾಯಿ ಬಡಾಯಿ ಕೊಚ್ಚಿಕೊಳ್ಳುವ ಪೌರ್ವಾತ್ಯರಲ್ಲಿ ಆ ಸಹೋದರ ಭಾವವು ಕಂಡು ಬರುವುದಿಲ್ಲ ಆ ಕಾರಣದಿಂದ ಅವರು ಆ ನುಟ್ಟಿಗೆ ಭೌತಿಕ ವಾದಿಗಳಾಗಿರುವರೆಂದೇ ಹೇಳಬಹುದು ಮನುಷ್ಯನಿಂದ ಎಳೆಯಲ್ಪಡುವ ರಿಕ್ಷಾ ಬಂಡಿಗಳು ಮತ್ತು ಎತ್ತು ಕುದುರೆ ಮೊದಲಾದ ಬೇರೆ ಜಾನುವಾರುಗಳಿಂದ ಎಳೆಯಲ್ಪಡುವ ಬೇರೆ ವಾಹನಗಳ ಉಪಯೋಗವು ಹೆಚ್ಚಾಗಿ ಪೌರ್ವಾತ್ಯರಲ್ಲಿ ಕಂಡುಬರುತ್ತದೆ ಗಾಡಿಗಳನ್ನು ಎಳೆದುಕೊಂಡು ಹೋಗುವಾಗ ಬಡಪಾಯಿಗಳಾದ ಆ ಮನುಷ್ಯರು ಅಥವಾ ಎತ್ತು ಕುದುರೆ ಮೊದಲಾದ ಪ್ರಾಣಿಗಳು ಹೇಗೆ ವ್ಯಾಕುಲಗೊಂಡಿರಬಹುದೆಂಬುದನ್ನು ಪೌರ್ವಾತ್ಯರು ಆಲೋಚಿಸುದುದಿದೆಯೆ? ಕೇವಲ ತಮ್ಮ ಅನುಕೂಲತೆಗಳನ್ನು ಮಾತ್ರ ಅವರು ಮನಸ್ಸಿಗೆ ತಂದುಕೊಂಡಿರಬಹುದೆ ಹೊರತು ಆ ಬಡಪಾಯಿಗಳ ಕಷ್ಟದ ಕಡೆಗೆ ವಿಚಾರ ಮಾಡಿದುದಿಲ್ಲ. ಸ್ವಾರ್ಥಮಾತ್ರದಿಂದ ಪೌರ್ವಾತ್ಯರು ತಮ್ಮ ಹೊಲ [illegible]

ಯನ್ನು ನಿರ್ಮಿಸಿಟ್ಟುಕೊಂಡಿದ್ದಾರೆ. ಆದರೆ ಮಲ, ಮೈಲಿಗೆ, ಕಸ ಕಡ್ಡಿಗಳನ್ನು ದೂರ ಒಯ್ಯುವ ಸುಧಾರಿತ ಕ್ರಮಗಳನ್ನು ಅವರು ಕೈಕೊಂಡಿದ್ದರೆ ತಮ್ಮ ಪತನಕ್ಕೆ ಕಾರಣವಾಗುವ ಈ ಹೊಲಸು ವೃತ್ತಿಯನ್ನು ಬಿಟ್ಟು ತೋಟಿಗಳು ತಮ್ಮ ಸಮಯದ ಬೇರೆ ಸದುಪಯೋಗ ಮಾಡಿಕೊಂಡು ಅವರು ಸುಖ ಪಡೆಯಬಹುದಾಗಿತ್ತು

ಈಗೀಗ ಮಕ್ಕಳಲ್ಲಿ ಹೆಚ್ಚೆಚ್ಚಾಗಿ ಕಂಡು ಬರುವ ನಿರಾಶಾಭಾವವು ಬಹು ಭಯಂಕರ ಪರಿಣಾಮಗಳನ್ನು ಉಂಟುಮಾಡುವಂತಹುದಾಗಿದೆ ನಿರಾಶೆಯಿಂದ ಅನೇಕರು ಆತ್ಮಘಾತ ಕೂಡ ಮಾಡಿಕೊಳ್ಳುತ್ತಾರೆ ಮೆಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ಮಾತ್ರಕ್ಕೆ, ಒಬ್ಬನು ಪ್ರಾಣತ್ಯಾಗ ಮಾಡಿಕೊಳ್ಳಬೇಕೇಕೆ? ಇಂಥ ಘಟನೆಗಳು ನಮ್ಮಲ್ಲಿ ಸಾಮಾನ್ಯವಾಗಿರುವಾದರೂ ಪಾಶ್ಚಾತ್ಯರಲ್ಲಿ ಅಪರೂಪವಾಗಿವೆ ಪರೀಕ್ಷೆಗಳಲ್ಲಿ ನಿರುತ್ತೀರ್ಣರಾಗುವುದು ಜೀವನದ ನಿರರ್ಥಕತೆಯನ್ನು ತೋರಿಸುತ್ತದೆಂದು ನಮ್ಮ ವಿದ್ಯಾರ್ಥಿಗಳ ಅಂದಾಜು. ಆದ್ದರಿಂದ ಅವುಗಳಲ್ಲಿ ಕೃತಾರ್ಥರಾಗದವರು ಇನ್ನು ತಾವು ಒದುಕಿ ಫಲವಿಲ್ಲವೆಂದು ಬಗೆದು ಪ್ರಾಣತ್ಯಾಗ ಮಾಡಿಕೊಳ್ಳುವರು ವಾಸ್ತವವಾಗಿ ವಿದ್ಯಾರ್ಥಿಗಳು ಹೊಂದಬೇಕಾದ ಶಿಕ್ಷಣಕ್ಕೂ ಅವರು ಕೊಡುವ ಪರೀಕ್ಷೆಗೂ ಸಂಬಂಧವಿರುವುದಿಲ್ಲ ಈ ಭಾವನೆಯು ನಮ್ಮ ವಿದ್ಯಾರ್ಥಿಗಳಲ್ಲಿ ಮೂಡಿ ಬರುವುದು ಅಗತ್ಯ ಅವರು ಆಶಾವಾದಿಗಳಾಗಬೇಕು, ಶರೀರ ಪರಿಶ್ರಮದಲ್ಲಿ ಆದರ ಬುದ್ಧಿಯುಳ್ಳವರಾಗಬೇಕು ಸ್ವಾವಲಂಬನ ಮಾರ್ಗದ ಶ್ರೇಷ್ಠತೆಯನ್ನು ಅವರು ಮನಗಾಣಬೇಕು. ಕ್ಷೌರಿಕ ಅಥವಾ ಸವಗಾರ ಅಥವಾ ಕೃಷೀಕನ ವೃತ್ತಿಯು ಕೂಡ ಯಾವ ಕಾರಣದಿಂದಲೂ ಡಾಕ್ಟರ ಅಥವ ವಕೀಲರ ವೃತ್ತಿಗಿಂತ ಹೀನವಾದುದಲ್ಲವೆಂದೂ ಅದು ಅಷ್ಟೇ ಗೌರವದಾಯಕವಾಗಿರುವುದೆಂದೂ ತಿಳಿಯಬೇಕು.

ಹೀಗೆ ವಿದ್ಯಾರ್ಥಿಗಳ ತಿಳಿದೊಂಡಾಗ ಸರಕಾರಿ ನೌಕರಿಗಳಿಗಾಗಿ ಮಾತ್ರ ಹಾತೊರೆಯುವುದು ನಿಂತುಹೋಗುವುದು. ಜಪಾನಿನಲ್ಲಿ ಒಬ್ಬ ಶ್ರೀಮಂತನ ಕೂಡ ಬೇರೆಯವರಷ್ಟೆ ಸಂಪತ್ತಿಯನ್ನು ಗಳಿಸಿ ಸ್ನಾನ ಮಾಸಗಳಲ್ಲಿ ಮಾರಿಗೊಂಡರೂ ಕಡಿಮೆ ಯವನೆನಿಸದೆ ಸುಖವಾಗಿರುವ ಸಂಗತಿಯನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳುವುದಾವಶ್ಯಕ

ಕಟಪಾಡಿ ಶ್ರೀನಿವಾಸ ಶೆಟ್ಟಿ.

ರುಚಿಕರ! — ಹಿತಕರ!

ದಿ ರಿನೌನ್ ಬಿಸ್ಕಿಟ್ ಕಂಪೆನಿಯ

ನಾನಾ ತರದ ಬಿಸ್ಕಿಟುಗಳು

ವಿವಿಧ ಪ್ರದರ್ಶನಗಳಲ್ಲಿ 14 ಸುವರ್ಣ ಪದಕಗಳನ್ನೂ ಮಹನೀಯರನೇಕರಿಂದ ಪ್ರಶಂಸಾಪತ್ರಗಳನ್ನೂ ಪಡೆದಿರುವುದು

ಇಷ್ಟು ಉತ್ಕೃಷ್ಟವಾದ ಮತ್ತು ಜನಪ್ರಿಯವಾದ ಬಿಸ್ಕಿಟ್ ಮತ್ತೊಂದಿಲ್ಲ.

ಒಮ್ಮೆ ತಿಂದರೆ ಖಚಿತವಾಗುವುದು.

ಈಗ ತಾನೇ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

B S Biscuits

A L Biscuits

Renown Biscuits

ಮೇಲಿನ ಈ ಮೂರು ತರಗತಿಗಳೂ 40 ರಾತ್ತಲ ಪೆಟ್ಟಿಗೆಗಳಲ್ಲಿಯೂ 10 3 1 ½ ರಾತ್ತಲ ಟಿನ್ನುಗಳಲ್ಲಿಯೂ ½ ¼ ರಾತ್ತಲ ಪೊಟ್ಟಣಗಳಲ್ಲಿಯೂ ದೊರೆಯುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

S. E. Baugera,

Representative of

JAYA BHARATHAM Co.,

Mission Compound, Kasargod, S. K

ಮದ್ರಾಸ್ ಸಂಸ್ಥಾನದ ಏಜಂಟರು –

Jaya Bharatham Co,

P. O. Box No. 64 G. T. MADRAS.

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗೀಳಿದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖ, ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಳೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ಬಾತಕ್ಕೆ ಕ್ಷೀರಬಲವೂ ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ ಇಳಿಮುಖೋಧ ಪಕ್ಷಸ್ಕಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೯೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು ಅಲ್ಲದೆ ಶಾಂತಿಯುತವಾದುದು, ಬಹಳ ಆಶ್ಚರ್ಯಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನಟ್ಟದೆಯೋ ಅವರು ಸುಲಭವಾಗಿ ವಶರಾಗುತ್ತಾರೆ ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ. ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ. ಶ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ ೨ ಮಾತ್ರ

01 P. 8   Bengali Mesmarism House
5—7   Panchpota, Bengal (S.B.)

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3—10	3— 14
ಮಸ್ಕತಿ	4— 0	4— 8
ಗುಡ್ಡೆ	3—12	4— 2
ಊರ ಅವ್ವಲ್ ಬೆಲ್ಲಗ	4—10	5— 0
ರಂಗೂನು ಟಿ. ಗೋ. ಗಿಕ್ಕೆ	7— 0	7— 8
ಎಲ್ಲೂರು ಟಿ ಮೂ ಗಿಕ್ಕೆ	4— 4	4— 8
ಗೋಧಿ ಗೋಣಿ ಗಿಕ್ಕೆ	10— 0	12— 8
ತೊಗರಿ ಗೋಣಿ ಗಿಕ್ಕೆ	10 —8	11— 0
ಮುರುಳಿ ಗೋಣಿ ಗಿಕ್ಕೆ	7— 4	7 —10
ಕಡಲೆ ಗೋಣಿ ಗಿಕ್ಕೆ	7 — 8	10— 8
ತೊಗರಿಬೇಳೆ ಗೋಣಿ ಗಿಕ್ಕೆ	10— 0	17— 0
ಉದ್ದು ಗೋಣಿ ಗಿಕ್ಕೆ	9— 8	10 — 0
ಹೆಸರು ಗೋಣಿ ಗಿಕ್ಕೆ	9— 4	9—12
ಉರುಬೆಲ್ಲ ಖಂಡಿ ಗಿಕ್ಕೆ	37— 8	41— 8
ಉಪ್ಪು ಗೋಣಿ ಗಿಕ್ಕೆ	4—12	5— 0
ಕೊಬ್ರಿ ಖಂಡಿ ಗಿಕ್ಕೆ	65— 0	62— 0
ಕೊಪ್ರಾ ಹಿಂಡಿ ಖಂಡಿ ಗಿಕ್ಕೆ	28— 0	29— 0
ಎಳ್ಳಿಂಡಿ ಖಂಡಿ ಗಿಕ್ಕೆ	30 — 8	37— 0
ಕೊಬ್ರಿ ಎಣ್ಣೆ ಮುಡಿ ಗಿಕ್ಕೆ	4 —12	5— 12
ಎಳ್ಳೆಣ್ಣೆ ಮುಡಿ ಗಿಕ್ಕೆ	5— 2	6— 0
ಶಿವುಡಿಎಣ್ಣೆ ಪೆಟ್ಟಿಗೆ ಗಿಕ್ಕೆ	5— 8	5—12
ಪೋರಿನ ಸಕ್ಕರೆ ಮು. ಗಿಕ್ಕೆ	3—11	3—13
ಮುಣಸು	3— 3	5— 0
ಸಾಸಿವೆ ಮುಡಿ ಗಿಕ್ಕೆ	6 — 0	6—14
ಕಾಳುಮೆಣಸು ಖ. ಗಿಕ್ಕೆ	120— 0	122— 8
ಯೇಲಕ್ಕಿಬೀಜ ಮುಡಿಗಿಕ್ಕೆ	35— 8	36— 8
ಗೇರುಬೀಜ ಮು. ಗಿಕ್ಕೆ	4—14	5 — 4
ಕಬ್ಬಿಣ ಖಂಡಿ ಗಿಕ್ಕೆ	40— 0	40— 8
ತಾಂಬ್ರದ ತಗಡು ಮ. ಗಿಕ್ಕೆ	10— 0	10— 8
ತಾಂಬ್ರಪಾತ್ರಗಳು ಮ ಗಿಕ್ಕೆ	14— 0	14— 8
ಹಿತ್ತಾಳೆ ಸೇರು ಗಿಕ್ಕೆ	17 — 4	18— 0
ಹಿತ್ತಾಳೆ ತಗಡು ಮ. ಗಿಕ್ಕೆ	9— 0	9— 8
ಸತುವು ಗಿಕ್ಕೆ	22— 6	22— 8
ಹೊಗೆಸೊಪ್ಪು ಖಂಡಿ ಗಿಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಗಿಕ್ಕೆ	170— 0	180— 0
ಪ್ಲಾಂಟೇಶನ್ ಕಾಫಿ ಖಂಡಿ ಗಿಕ್ಕೆ	200— 0	205— 0
ಮಡಿಕೇರಿ ಏಲಕ್ಕಿ	26— 0	26— 12
ಸಕಲೇಶಪುರ ಏಲಕ್ಕಿ	28— 0	30 — 0
ಹಳತು ಅಡಿಕೆ	110—0	120—0

ಸಪಟ ಲೋಶನ್

ಗಜಕರ್ಣ, ಹುರುಗಜ್ಜಿ, ತಾಯಿಟಿ, ಇಸಬು ಮುಂತಾದ ಚರ್ಮ ರೋಗಗಳ ಮೇಲೆ ೨೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ ವಸ್ತ್ರಕ್ಕೆ ಕಲೆ ಹೋಗುವುದಿಲ್ಲ ಬಾಟ್ಲಿ ಗಿಕ್ಕೆ ಕಿಮ್ಮತ್ತು ೦-೬-೦ ಟಿ ಖರ್ಚು ಬೇರೆ ಪತ್ರವ್ಯವಹಾರ ಇಂಗ್ಲಿಷ್ ಯಾ ಮರಾಠಿಯಲ್ಲಿ ಮಾಡಬೇಕು

Sapat & Company,(S M)
Kalbadev Road Bombay

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ
VIM-O-LA
ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂಡಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಿಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"
Manufactured by
American Herbal Products Co.,
Sole representatives for above medicine
The National Kanara News Agency,
Sir Pherozsha Metha Road,
Fort Bombay.

Shiromani Narayanacharya & Co.,

Silk Lace & Cloth Manufacturers
Choukhamba   Benares City

THIS MAN
OUR CUSTOM

ಕೃಷ್ಣರಾಯರು – ಸ್ವಾಮಿ ಆನಂದರಾಯರೆ ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು:–ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು – ಅದರ ಕ್ರಯವೆಷ್ಟು?"

ಆನಂದರಾಯರು–ಎಲ್ಲಾ ಕಡೆಗಳಿಗಿಂತ ಕೇವಲ 25 ಶಡಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ಮೊದಲಾದ ಸೀರೆಗಳು ಸಿಗುತ್ತವೆ 18 ಮೊಳ ಉದ್ದ 2¼ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಪದಲು ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪದಲು ಸಹ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ, ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ. 8 ಮೊಳದ ಸಲಮುಡಿ 1ಕ್ಕೆ ರೂ 7ರಿಂದ 15ರ ವರೆಗೆ. 6 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಟಾರ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಟಾರ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ವಸ್ತ್ರಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ, ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್

LOOK SHARP!   LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under graduates and S S L C s and also for those who have not passed any University examination

Coaches students for the Special ised Banking Courses (C A I B & C A I I B) and also for Accountancy, Secretarial, and Insurance Courses (L A A, A C R A, F R A, F I S A, A C I I etc)

Classes for the Cambridge School Certificate (Senior Cambridge) Examination for 1936 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,
Dip Econ, F R Econ, S (Lond.)
Principal
Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಕಾರ್ತಿಕ ಶು| ೬ ಶನಿವಾರದಿಂದ ಕಾರ್ತಿಕ ಶು| ೧೩ ಶುಕ್ರವಾರದ ವರೇಗಿನ ಪಂಚಾಂಗ (೧೯೩೫ನೇಯ ಜುಲಾ ಬೊಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
2	ಶನಿ	೬	೨೫	ಪೂ ಷಾಢಾ	೧೯	೧೬	ಕಾರ್ತಿಕ ಸೋಮವಾರ
3	ರವಿ	೭	೨೧	ಉ ಷಾಢಾ	೧೭	೧೭	
4	ಸೋಮ	೮	೧೬	ಶ್ರವಣಾ	೧೪	೧೮	
5	ಮಂಗಳ	೯	೧೧	ಧನಿಷ್ಠಾ	೧೦	೧೯	
6	ಬುಧ	೧೦	೫	ಶತಭಿಷಾ	೬	೨೦	
7	ಗುರು	೧೨	೫೯	ಪೂ ಭಾದ್ರ	೨	೨೧	
8	ಶುಕ್ರ	೧೩	೫೪	ರೇವತೀ	೫೪	೨೨	

ಹಯಾತಿಯಲ್ಲಿ ೨೦೦೦ ಜನರು ಮೃತರಾದರು!

ಎಥಿಯೋಪಿಯಾದ ಯುದ್ಧ! ಬ್ರಿಟಿಷ ಪಾರ್ಲಿಮೆಂಟಿನ ಚುನಾವಣೆ!

ಹೊಗೆಸೊಪ್ಪಿನ ಮೇಲೆ ತೆರಿಗೆ. ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಜಿಲ್ಲೆ.

ಇಟಲಿಯಾನರ ಒಂದು ಮಹಾ ಉದ್ದೇಶ

ಒಂದಾನೊಂದು ಕಾಲದಲ್ಲಿ ಇಟಲಿಯವರ ಸಾಮ್ರಾಜ್ಯವು ಇಡಿ ಯುರೋಪು ಖಂಡಕ್ಕೂ, ಏಸ್ಯಾದ ಕೆಲವು ದಿಕ್ಕುಗಳಲ್ಲಿಯೂ, ಆಫ್ರಿಕಾದ ಬಗುಸ್ತದಲ್ಲಿಯೂ ಪ್ರಸರಿಸಿಕೊಂಡಿತ್ತು ಜೂಲಿಯಸ್ ಸಿಸರ್‌ನಂಥ ಪ್ರಚಂಡ ವೀರನ ಮುಂದಾಳತ್ವದಲ್ಲಿ ಇಟಲಿಯು ಶ್ರೇಯಸ್ಕರವಾಗಿ ಬಾಳಿತ್ತು ಆದರೆ ಕ್ರಮಶಃ ಇವರ ಕಾಂತಿಯು ಕುಂದುತ್ತಾ ಬಂದು ಬೇರೆ ಜನಾಂಗದವರು ಮುಂದುವರಿದು ಬಂದು, ಅದರಲ್ಲಿ ಮುಖ್ಯತಃ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಭೂಲೋಕದ ಹಲವು ದಿಕ್ಕುಗಳಿಗೆ ಪ್ರಸರಿಸಿದರು ಹಲವು ಕಾರಣಗಳಿಂದ ಇಟಲಿಯು ಹಿಂದುಳಿಯಬೇಕಾಯಿತು ಆದರೆ ಈಗಿನ ಪೆಸಿಯುಪ್ಪಪ್ರಭುತ್ವದಲ್ಲಿ ಮುಸಲಿ ಯ ನಾಯಕತ್ವದಲ್ಲಿ ಇಟಲಿಯು ಈಗ ಒಂದು ಪ್ರಸಿದ್ಧ ಸ್ಥಾನವನ್ನು ಪಡೆದಿದೆ ಮುಸಲೀನಿಯು ಅಷ್ಟರಲ್ಲೆ ತೃಪ್ತಿಹೊಂದುವ ಹಾಗಿಲ್ಲ ತಮ್ಮ ಪುರಾತನ ಕೀರ್ತಿಯನ್ನು ಗಳಿಸಬೇಕೆಂದೆ ಇವನ ಮುಖ್ಯ ಉದ್ದೇಶ

ಈ ದಿಕ್ಷೆಯನ್ನು ಹಿಡಿದ ಇವರ ದೃಷ್ಟಿಯು ಆಫ್ರಿಕಾದ ಕಡೆ ಸರಿಯಿತು ವ್ಯಾಪಾರದ ನೆವದಿಂದ ಆಫ್ರಿಕಾದಲ್ಲಿ ಇಳಿದರು ಉಪಾಯದಿಂದ ಕೆಲವು ಪ್ರಾಂತ್ಯಗಳನ್ನು ಹಿಡಿದರು ಆದರೆ ಇವು ಬರಿ ಮರಳುಭೂಮಿಗಳು ಇವುಗಳ ಹತ್ತಿರವಿರುವ ಅಬಿಸೀನಿಯಾವು ಹಿಂದು ದೇಶದಂತೆ ಸರ್ವ ವಿಷಯದಲ್ಲೂ ಫಲವತ್ತಾದ ಪ್ರದೇಶವು, ಅನೇಕ ಸಾಮಗ್ರಿಗಳು ಇಲ್ಲಿ ಧಾರಾಳವಾಗಿ ದೊರಕುತ್ತಿವೆ ಇಟಲಿಯಾನರು ಇದನ್ನು ಹಿಡಿಯುವುದೆ ಉಚಿತವೆಂದು ತಿಳಿದರು

ಮೊತ್ತಮೊದಲು ವ್ಯಾಪಾರ ಸಂಬಂಧದ ಕೆಲವು ಕರಾರುಗಳನ್ನು ಅಬಿಸೀನಿಯಾದವರ ಕೂಡೆ ಮಾಡಿದ ಬಳಿಕ ಈ ಕರಾರುಗಳ ಬಲದಿಂದ ತಮಗೆ ಅಲ್ಲಿನ ರಾಜ್ಯಗಳ ಆಡಳಿತೆಯ ಮೇಲೆ ಹಕ್ಕುಬಾಧ್ಯತೆಗಳ ಇವೆ ಎಂದು ತೋರಿಸಿಕೊಂಡರು ಇವರು ಇಷ್ಟರಲ್ಲಿ ನಿಲ್ಲಲಿಲ್ಲ ಇಡೀ ಅಬಿಸೀನಿಯಾವನ್ನು ನುಂಗುವ ಆಲೋಚನೆಯಿಂದ, ೧೮೯೬ರಲ್ಲಿ ಅವರ ಮೇಲೆ ಒಂದು ಭಯಂಕರ ಯುದ್ಧವನ್ನೊಡ್ಡಿದರು ಸ್ವಾತಂತ್ರ್ಯಪ್ರಿಯರಾದ ಎಥಿಯೋಪಿಯಾನರು ತಮ್ಮ ಗೊರಿಲ್ಲಾ ಯುದ್ಧದಲ್ಲಿ ಮಹಾ ನಿಪುಣರು ಕಠಿಣತರದ ಕಷ್ಟಗಳನ್ನು ಅನುಭವಿಸಬಲ್ಲರು ಎಡೋವಾದಲ್ಲಿ ಇಟಲಿಯಾನರನ್ನು ಹೊಡೆದೂಡಿಸುದುದು ಮಾತ್ರವಲ್ಲದೆ, ಅನೇಕರನ್ನು ಸೆರೆಹಿಡಿದರು ಸಾಮಾನು ಇತ್ಯಾದಿಗಳನ್ನು ವಶೀಕರಿಸಿದರು ಈ ಕಾರಣದಿಂದ ಇಟಲಿಯಾನರು ಕೆಲವು ಒಪ್ಪಂದಗಳಿಗೆ ಸಹಿಹಾಕಬೇಕಾಯಿತು

ಸೀಸರ್, ನೆಪೊಲಿಯನ್—ಮುಸಲೋನಿ ಮುಂಚಿನ ಕೀರ್ತಿಯನ್ನು ರೋಮ್ ಈಗ ಅಪೇಕ್ಷಿಸುತ್ತದೆ ಮುಸಲೋನಿಗೆ ಮಹಾ ಕೀರ್ತಿಯು ಕರೆಯುತ್ತಿದೆ ರೋಮಿನ ಹಿಂದಣ ಪ್ರಭುತ್ವವು ಈತನ ಮನಸ್ಸಿನಲ್ಲಿ ಝೇಂಕರಿಸುತ್ತಿದೆ ಅಬಿಸೀನಿಯಾವನ್ನು ನುಂಗುವುದು ಮಾತ್ರವಲ್ಲ, ಇದರಿಂದಾಗಿ ಪೂರ್ವ ದಿಕ್ಕಿನಲ್ಲಿ ಒಂದು ಮಹಾಸಾಮ್ರಾಜ್ಯದ ರಚನೆಯು ಈಗಿನ ಪೆಸಿಯುಪ್ಪ ಸರಕಾರದವರ ದಿಕ್ಷೆ. ಇತ್ತಲಾಗೆ ಅರೇಬಿಯಾದ ಯಾಮೇನ ಎಂಬಲ್ಲಿ ಇವರ ದಿಕ್ಷೆಬೀಜವನ್ನು ಬಿತ್ತಿರುತ್ತಾರೆ ಹಲವು ಜನರು ಯಾಮೇನಿರನ್ನು ಸೈನಿಕರನ್ನಾಗಿ ತೆಗೆದುಕೊಂಡಿದ್ದಾರೆ ಇಲ್ಲಿ ಇವರ ವರ್ತನೆಯು ಪರಿಶೀಲಿಸಿದರೆ, ಸಂದರ್ಭ ಒದಗಿದರೆ, ಅರೇಬಿಯಾದಲ್ಲಿ ಕೈಕಾಲು ಚಾಚಬೇಕೆಂಬ ಉದ್ದೇಶವು ಇವರಿಗೆ ಇದ್ದಂತೆ ಭಾಸವಾಗುತ್ತದೆ ಕಾರ್ಯವು ಇವರು ಮನಗೊಂಡಂತೆ ಸಫಲವಾದರೆ, ಪೂರ್ವ ದಿಕ್ಕಿನಲ್ಲಿ ಇಟಲಿಯನ ಸಾಮ್ರಾಜ್ಯ ರಚನೆಯು ಪೂರ್ಣವಾದಂತಾಗುವುದು ಪೇಪಿಯ ಪ್ಪ ಪತ್ರಿಕೆಯು ತನ್ನ ಸರಕಾರದ ಮತವನ್ನು ಹೀಗೆಂದು ಸಾರಿದೆ

'ಆಫ್ರಿಕಾ ದಟ್ರಿಪೋಲಿಯನ್ನು ಸೇರಿ ಎಡಕ್ಕೂ ಬಲಕ್ಕೂ ಇರುವ ರಾಜ್ಯಗಳನ್ನು ವಶಮಾಡಿ, ಅಲ್ಲಿಂದ ಕೆಂಪು ಸಮುದ್ರದ ವರೆಗಿರುವ ಈಗುಪ್ತ ನ್ಯೂಬಿಯೂ, ನ್ಯಾಲ ಪ್ರಾಂತ್ಯಗಳ ಮೇಲೆ ಕೈಮಾಡಿ, ಅವುಗಳನ್ನು ವಶೀಕರಿಸಿ, ನೈಲ ನದಿಯ ಮಾರ್ಗವಾಗಿ ಕೆಂಪು ಸಮುದ್ರದೊಡನೆ ವ್ಯಾಪಾರ ಸಂಚಾರವನ್ನು ಏರ್ಪಡಿಸಬೇಕು

ಮುಸೋಲಿನಿಯು ಈ ಕಾರ್ಯದಲ್ಲಿ ದೈವಿಚ್ಛೆಯೆ ತನ್ನನ್ನು ನಾಯಕನಾಗಿ ಮಾಡಿದೆ ಎಂದು ನಂಬಿರುತ್ತಾನೆ ರೋಮಿನ ಪುರಾತನ ಕೀರ್ತಿಯನ್ನು (ಚಕ್ರಾಧಿಪತ್ಯದ ಮತ್ತು ಸ ಗ್ರವಿ ಕ ಕೀರ್ತಿ) ಗಳಿಸುವ ಉದ್ದೇಶದಿಂದ ಈಗ ಅಬಿಸೀನಿಯಾದ ಮೇಲೆ ಕೈಮಾಡಿರುವನು ಈ ವ ಹತ್ತದ ಕಾರ್ಯದಲ್ಲಿ ಈತನನ್ನು ಯಾರು ತಾನೆ ತಡೆಯಬಲ್ಲರು ತನ್ನ ಈ ಉದ್ದೇಶವನ್ನು ಕಾಣ ರಚಿಸಿರುವ ಹಲವು ಗ್ರಂಥಗಳಲ್ಲಿ ವ್ಯಕ್ತವಾಗಿರುವನು ಈ ಉದ್ದೇಶವು ತನ್ನ ಜನಾಂಗದ ಮನಸ್ಸಿನಲ್ಲಿ ನಾಟಲು ಅಲ್ಲಿನ ಸರಕಾರದಲ್ಲಿ ಹಲವು ಕ ನಸೂತ್ರಗಳನ್ನು ಸಿರ್ಮಿಸಿರುವನು ವಿದ್ಯಾಭ್ಯಾಸದಲ್ಲಿ ರೋಮಿನ ಕೀರ್ತಿ ಪೆಚ್ಚಾಗಿ ಪ್ರಚಾರವಾಗ ವಂತೆ ಪಾಠಗಳಾಗುತ್ತಿವೆ ರೋಮಿನಲ್ಲಿರುವ ಅವರ ಪುರಾತನ ಕೀರ್ತಿಯ ಕ ರ ಪ ಗಳನ್ನು ಜೀರ್ಣೋದ್ಧಾರ ಮಾಡಿಸುತ್ತಾರೆ ಒಂದು ಮಹಾ ಸ್ಮಾರಕದ ಕಟ್ಟಡದ ಹತ್ತಿರ ಇಟಲಿ ಪುರಾತನ ಯುರೋಪದಲ್ಲಿ ಸಾಮ್ರಾಜ್ಯಗಳನ್ನು ಚಿತ್ರಿಸಿದ ನಕೆಯಿಂದ ಕೂಡಿದ ಕಲ್ಲುಗಳನ್ನು ಇಟ್ಟಿರುವರು ಸಣ್ಣ ಮಕ್ಕಳಿಗೆ ಇವುಗಳ ಭೇಟಿ ಮಾಡಬೇಕೆಂದು ಅಪ್ಪಣೆಗಳು ಜ್ಯಾರಿಯಲ್ಲಿವೆ ಈ ಕಾರಣದಿಂದ ಇಡೀ ಜನಾಂಗವೆ ಕೀರ್ತಿಯ ಆತುರದಿಂದ ತುಳುಕಾಯುತ್ತಿದೆ ಇಟಲಿಯ ಅಬಿಸೀನಿಯಾದೊಡನೆ ಯುದ್ಧ ಸಿರ್ಧರಿಸಲು—ತಂಡೋಪತಂಡ ಯುವಕರು ಮುಂದುವರಿದು ಬಂದು, ಕೀರ್ತಿಗಾಗಿ ಈಗ ಆಫ್ರಿಕಾದಲ್ಲಿ ಶ್ರಮಪಡುತ್ತಿರುವರು ಇವರು ಜಯಶೀಲರಾಗುವರೆ?

ಎಥಿಯೋಪಿಯಾದ ಯುದ್ಧ.

ಇಟಲಿಯಾನರು ಇರಿಟ್ರಿಯಾದಲ್ಲೂ, ಓಗಡನ್ ಪ್ರಾಂತ್ಯಗಳಲ್ಲೂ ಮುಂದುವರಿಯುತ್ತಿರುವರು ಎಥಿಯೋಪಿಯಾನರು ಇವರನ್ನು ತಡೆಗಟ್ಟಲುತಕ್ಕ ಸಿದ್ಧತೆಗಳನ್ನು ಮಾಡಿರುತ್ತಾರೆ ಆದಿಸ್ ಅಬಾಬವನ್ನು ಅಂತರಿಕ್ಷದ ಅಭಿಕ್ರಮದಿಂದ ತಪ್ಪಿಸಲು, ಅಲ್ಲಲ್ಲಿ ರಕ್ಷಣಾ ವ್ಯವಸ್ಥೆಗಳನ್ನು ಮಾಡಿರುವರು. ಹರಾರ್ ಮೊದಲಾದ ಎಥಿಯೋಪಿಯಾನರ ರಕ್ಷಣಾ ಪ್ರಾಂತ್ಯಗಳಲ್ಲಿ ಸೈನ್ಯಬಲವು ವೃದ್ಧಿಹೊಂದುತ್ತಿದೆ

ಸೆಂಕ್ಷನುಗಳ ವಿಚಾರ

ಮಿ ಬಾಲ್ಡವಿನ್ನರು ತಮ್ಮ ಒಂದು ಭಾಷಣದಲ್ಲಿ ಅಮೆರಿಕಾ, ಜಪಾನು, ಜರ್ಮನಿ ಮೊದಲಾದ ರಾಷ್ಟ್ರಗಳು ಸಹಕಾರವಿಲ್ಲದೆ ವಿನಹ ಸುಯೇಜ ಕಾಲವೆಯನ್ನು ಮುಚ್ಚುವುದು ಅಪಾಯಕರವೆಂದು ತಿಳಿಸಿರುವರು.

ಬ್ರಿಟಿಷ ಪಾರ್ಲಿಮೆಂಟಿನ ಮಹಾ ಚುನಾವಣೆ

ವಿವಿಧ ಪಂಗಡದವರು ಬಹಳವಾಗಿ ಶ್ರಮಪಡುತ್ತಿದ್ದಾರೆ. ಮಿ. ಏಡನ್, ಲೋರ್ಡ್ ಜಟ್‌ಲೆಂಡ್ ಇವರೇ ಮೊದಲಾದವರು, ಗಂಭೀರ ಭಾಷಣಗಳನ್ನು ಮಾಡುತ್ತಿದ್ದಾರೆ ಲ್ಲೊಯ್ಡ್ ಜಾರ್ಜರ ಹೊಸ ಪಂಗಡವೊಂದು ನಿರ್ಮಾಣವಾಗಿದೆ ಇವರು ಈಗಿನ ಸರಕಾರಕ್ಕೆ ಎದುರಾಗಿ ಚುನಾವಣೆಯಲ್ಲಿ ಭಾಗವಹಿಸುವರೆಂದು ವಾರ್ತೆ ಇದೆ ಲೇಬರ್ ಪಕ್ಷದವರಾದ ಮೇಜರ್ ಅಟ್ಲಿಯವರು ನೇಶನಲ್ ಸರಕಾರದ ಕೆಲವು ವರ್ತನೆಗಳನ್ನು ಪರಿಶೀಲಿಸಿ ಅವುಗಳಿಂದ ಬ್ರಿಟಿಷ ಸರಕಾರಕ್ಕೆ ಹಾನಿ ಬರುವುದೆಂದೂ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದಲ್ಲಿ ಶಾಂತಿಸ್ಥಾಪನೆಯಾಗುವುದಲ್ಲದೆ, ಇಂಗ್ಲಾಂಡಿನ ವ್ಯಾಪಾರವು ಅಭಿವೃದ್ಧಿ ಹೊಂದುವಂತೆ ಮಾಡುವರೆಂದೂ ಒಂದು ಮಹಾದೊಡ್ಡ ಭಾಷಣವನ್ನು ಮಾಡಿರುವರು ಇಷ್ಟರ ವರೆಗೆ ೧೨೫೫ ಉಮೇದುವಾರರು ಚುನಾವಣೆಯಲ್ಲಿ ಭಾಗವಹಿಸಲು ಮುಂದುವರಿದು ಬಂದಿದ್ದಾರೆ ಇದರಲ್ಲಿ ೫೯ ಮಂದಿ ಸ್ತ್ರೀಯರೆ ಇರುವರು ವಿವಿಧ ಪಂಗಡದವರ ಉಮೇದ್ವಾರರು,—೫೫೭ ನೇಶನಲ್ ಸರಕಾರ ಪಕ್ಷ ೬೩೭ ಇತರ ಪಕ್ಷದವರ, (೫೪೦ ಲೇಬರ್ + ೧೭೮ ಲಿಬರಲ್ + ೨೧ ಸ್ವಾತಂತ್ರ ಪಕ್ಷ + ೨ ಕೊಮ್ಯುನಿಸ್ಟ್)

ಮದ್ರಾಸು ನ್ಯಾಯವಿಧಾಯಕ ಸಭೆ

ದಕ್ಷಿಣ ಕನ್ನಡದ ಕಂದಾಯವಸೂಲು

ಮೊನ್ನೆ ದಕ್ಷಿಣ ಕನ್ನಡದಲ್ಲಿ ಕಂದಾಯ ತೆರದಿದ್ದಕ್ಕಾಗಿ ಸಜೆ ವಿಧಿಸಲ್ಪಟ್ಟ ಪ್ರಶ್ನೆಯನ್ನು ಚರ್ಚೆಗೆ ತರಬೇಕೆಂದು ನಮ್ಮ ಮಾನ್ಯ ಸದಸ್ಯರಾದ ಮು ಸಿ ಸುಬ್ರಮಣ್ಯ ಭಟ್ಟರು, ಒಂದು ಠರಾವನ್ನು ಸರಕಾರದ ಮುಂದಿಟ್ಟರು ಇದರ ವಿಷಯ ಕೌನ್ಸಿಲಿನಲ್ಲಿ ಚರ್ಚೆ ವಿಷಯವಾಗಿ ಬಹಳ ವಾದ ನಡೆದ, ಕೊನೆಗೆ ಇದನ್ನು ಚರ್ಚಿಸಬಹುದೆಂದು ಬಹುಮತದಿಂದ ನಿರ್ಧರಿಸಲಾಯಿತು ಚರ್ಚೆಯು ನಡೆಯುತ್ತಿದೆ

ಹೊಗೆಸೊಪ್ಪಿನ ಮೇಲೆ ತೆರಿಗೆ

ಹೊಗೆಸೊಪ್ಪಿನ ಮೇಲೆ ತೆರಿಗೆ ವಿಧಿಸುವ ಬಿಲನ್ನು ಮಾನ್ಯ ಆರ್ಥಿಕ ಮೆಂಬರರಾದ ಸೌಟರರು ಮುಂದಕ್ಕೆ ತಂದಿರುವರು ಸಭೆಯು ಇದರ ಚರ್ಚೆಯನ್ನು ವಹಿಸಿರುತ್ತದೆ ಈ ಬಿಲು ಖಂಡಿತವಾಗಿಯೂ ಅಂಗೀಕರಿಸಲ್ಪಡುವುದು

ಹಯಾತಿಯಲ್ಲಿ ಪ್ರಚಂಡ ಬಿರುಗಾಳಿ

೨೦೦೦ ಜನರು ಮೃತರಾಗಿರುವರು

ಸಾವಿರಗಟ್ಟಲೆ ಜನರು ಮನೆಗಳಿಲ್ಲದೆ ಅಲೆದಾಡುತ್ತಿರುವರು ಇಡೀ ಊರೆ ಧ್ವಂಸವಾಗಿ ಹೋಗಿರುತ್ತದೆ ಮಹತ್ತರವಾದ ನಷ್ಟವು ಸಂಭವಿಸಿದೆ ಸರಕಾರದವರು ಜನರ ರಕ್ಷಣೆಗಾಗಿ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು

ಪ್ರಯಾಗದ ಮಹಿಳಾ ವಿದ್ಯಾಪೀಠದ ಮಹಾ ಸಭೆ

ಗಾಂಧಿಜೀಯವರನ್ನು ಆಮಂತ್ರಿಸಿರುವರು

ಪ್ರಯಾಗದ ಮಹಿಳಾ ವಿದ್ಯಾಪೀಠದ ಮಹಾಸಭೆಯ ಪ್ರಾರಂಭೋತ್ಸವ ಕಾಲದಲ್ಲಿ ಗಾಂಧಿಜೀಯವರನ್ನು ಭಾಷಣ ಕೊಡಬೇಕಾಗಿ ಕೇಳಿಕೊಂಡಿದ್ದಾರೆ ಸಭೆಯ ಅಧಿವೇಶನವು ಬರುವ ವರುಷದ ಫೆಬ್ರವರಿ ತಿಂಗಳಲ್ಲಿ ನವೀನ ಕಾರ್ಯಕ್ರಮವೆಂದರೆ ಈ ಸಮಯದಲ್ಲಿ ಅಖಿಲ ಭಾರತ ಕಾದಂಬರಿ ಕರ್ತರಾದ ಮಹಿಳೆಯ ಪರಿಷತ್ತನ್ನು ಜರಗಿಸುವುದು ಸ್ತ್ರೀಕವಿಗಳ ಪರಿಷತ್ತು, ವಿಂರಾಬಾಯಿಯವರ ಜನ್ಮದಿನಾಚರಣೆಯೂ ಆಚರಿಸಲ್ಪಡುವುವು

---

೧೪ ವರ್ಷಗಳ ಅಗ್ನಿಮಾಂದ್ಯ, ವಾತ ಮತ್ತು ಚಳಿಜ್ವರ.

ಆ ಮೇಲೆ ಪೂರ್ಣ ಗುಣ.

14 ವರ್ಷಗಳ ಅಗ್ನಿಮಾಂದ್ಯದ ವೇದನೆಯ ಬಾಧೆ, ಆ ಮೇಲೆ ಪೂರ್ಣ ಮತ್ತು ಶಾಶ್ವತ ಗುಣ! ಯೋಚಿಸಿರಿ! Mrs M ಇವರ ನಿಜವಾದ ಅನುಭವ ವಾಯು ಬಾಧೆ ಮತ್ತು ಚಳಿಜ್ವರವಿಲ್ಲದೆ ಅವಳಿಗೆ ಒಂದು ದಿನ ನಿದ್ದೆ ಇಲ್ಲ ಎಲ್ಲಾ ಉದರವೇದನೆಗಳಿಗೂ ಅನ್ಯಮೋಪಯೂ ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿರುವೂ ಆದ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸುವ ವರೆಗೆ ಅವಳಿಗೆ ಈ ಕಷ್ಟ

Mrs M ಬರೆದ ಪತ್ರವನ್ನೋದಿ —

"ನಿಮ್ಮ ಒಪ್ಪುತಕ್ಕ ಮೆಕ್‌ಲೀನ್ ಬ್ರೇಂಡ್ ಪೌಡರನ್ನು ಉಪಯೋಗಿಸಿ ನನಗೆ ಸಿಕ್ಕಿದ ಗುಣಕ್ಕಾಗಿ ನಿಮಗೆ ವಂದನೆಗಳು ಮಿತ ವ ರ್ಷ ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದೆ ರಾತ್ರಿ ಮಲಗಿದೊಡನೆ ಎಚ್ಚತ್ತಿದ್ದೆ ಇದ್ದಕ್ಕಿದ್ದಹಾಗೆ ವಾಯುವಿನ ಉಪದ್ರವು ಇರುತಿತ್ತು ಹೃದಯವು ನಡುಕವು ಹೊಗುತ್ತಿತ್ತು ಚಳಿಯಿಂದ ದೇಹವು ಕಂಪಿಸುತ್ತಿತ್ತು ಸಣ್ಣ ತುಂಡು ಊಟವನ್ನು ತಿಂದೊಡನೆ ನನ್ನ ಹೊಟ್ಟೆಯು ಆಡಿಮೇಲಾದಂತಾಗುತ್ತಿತ್ತು ಎಲ್ಲಾ ಔಷಧಿಯಿಂದಲೂ ಸಾಧಿಸದೆ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸುವವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ

Mrs M ಗೆ ದೊರೆತಷ್ಟೇ ಗುಣವು ನಿಮಗೂ ದೊರಕಬಹುದು ಆದರೆ ಕೆಲವು ಅನ್ಯರ ಲಾಭಕ್ಕಾಗಿ ಕೀಳು ತರಗತಿಯ ವಸ್ತುವನ್ನು ಕೊಡುವ ಅಪಾಯಕ್ಕೆ ಗುರಿಯಾಗದೆ ಕೇರ್ ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೇಳಿಕೊಳ್ಳಿರಿ ... ರಕ್ಷಾಪತ್ರ ಮತ್ತು ಬಾಟ್ಲಿಗಳು ...

Alex C. Maclean

ಎರಡು ವರ್ಷದ ಇದೆ ಸ್ಟಾಕಿಸ್ಟ್ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಗಳಿಸುವುದೆ ಕಷವಿರುವುದಿಲ್ಲ

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

೧೨ ಸಂಥ ರಾಮು ಚೆಟ್ಟಿ ಸ್ಟ್ರೀಟ್ ಮದ್ರಾಸು

... ಅಲ್ಲಿ ...

ಬಿಲ್ಲೆಗಳ ರೂಪದಿಂದಲೂ ವಿಕ್ರಯಿಸಲ್ಪಡುತ್ತದೆ

WANTED.

Wanted a Representative to push our goods on a fixed Salary Only men with Canvassing ability and ready to furnish a small Security need apply Good prospects for the right man Apply at once in person to —

The Modern Trading Co.,
Opp City Press, Mangalore

ವಿನೋದವಿಹಾರ.

ಉಪಾಧ್ಯಾಯರು ಕ್ಲಾಸಿನ ಎಲ್ಲ ಹುಡುಗರಿಗೆ ಬಹಳ ಮೌನವಾಗಿರಬೇಕೆಂದು ಹೇಳಿದರು. "ಸಾಸಿವೆ ಕಾಳು ಬಿದ್ದರೂ ಸದ್ದು ಕೇಳಿಸುವಷ್ಟು ಮೌನವಾಗಿರಿ" ಎಂದವರ ಆಜ್ಞೆ. ಕೂಡಲೆ ಎಲ್ಲ ಹುಡುಗರು ಮಾತನಾಡುವುದನ್ನು ನಿಲ್ಲಿಸಿ, ಸುಮ್ಮನೆ ಕೂತರು. ಮರುಕ್ಷಣವೇ ಸಣ್ಣ ಹುಡುಗನೊಬ್ಬನು ಅವಸರಗೊಂಡ ದನಿಯಲ್ಲಿ, "ಈಗಲೇ ನಿಮ್ಮ ಸಾಸಿವೆಕಾಳು ಬೀಳಿಸಿರಿ, ಸರ್. ಇನ್ನಿಂತಹ ಸಮಯ ಸಿಗಲಿಕ್ಕಿಲ್ಲ" ಎಂದನು.

\+ + + +

ಒಬ್ಬ ಪ್ರಯಾಣಿಕನು ಮಾರ್ಗದ ಬದಿಯಲ್ಲಿ ಕುಳಿತ ಮುದುಕನೊಬ್ಬನೊಡನೆ ಅಲ್ಲಿಂದ ಬಸ್ ಸ್ಟೇಷನಿಗೆ ಹೋಗಲು ತನಗೆ ಎಷ್ಟು ಸಮಯಬೇಕಾಗಬಹುದೆಂದು ಕೇಳಿದನು. ಆದರೆ ಎಷ್ಟು ಸಲ ಕೇಳಿದರೂ ಮುದುಕನು ಉತ್ತರ ಕೊಡದಿದ್ದುದರಿಂದ ಪ್ರಯಾಣಿಕನು ಮುಂದರಿದನು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಮುದುಕನು ಅವನನ್ನು ಕರೆದು, "ಕಾಲು ಗಂಟೆ ಬೇಕಾಗುವುದು" ಎಂದನು. 'ಆಗಲೇ ಏಕೆ ಹೇಳಲಿಲ್ಲ?' ಎಂದು ಪ್ರಯಾಣಿಕನು ಕೇಳಿದನು. 'ನೀನು ಎಷ್ಟು ಬೇಗ ನಡೆಯುವಿಯೆಂಬುದನ್ನು ತಿಳಿಯದೆ ನಾನು ಹೇಗೆ ಹೇಳಲಿ? ಎಂದು ಮುದುಕನು ಉತ್ತರಕೊಟ್ಟನು.

\+ + + +

ಗರ್ವಿಷ್ಠನಾದ ಮನುಷ್ಯನೊಬ್ಬನು ಒಂದು ದೊಡ್ಡ ಆಫೀಸಿಗೆ ಹೋಗಿ "ಮೆನೇಜರರಿದ್ದಾರೋ?" ಎಂದು ಕೇಳಿದನು.

'ಅವರು ಇಲ್ಲಿಲ್ಲ. ಏನಾದರೂ ಕೆಲಸವಿದ್ದರೆ ನಾನು ಮಾಡಬಹುದೇ?' ಎಂದು ಒಬ್ಬ ಕ್ಲಾರ್ಕನು ಕೇಳಿದನು.

'ನಿನ್ನಂತಹವರೊಡನೆ ನನಗೆ ಕೆಲಸವಿಲ್ಲ; ಅವರು ಬರುವವರೆಗೆ ತನಕ ಕೂತುಕೊಳ್ಳುತ್ತೇನೆ' ಎಂದನು ಬಂದ ಮನುಷ್ಯ.

'ಆಗಲಿ, ಸ್ವಾಮಿ; ಈ ಕುರ್ಚಿಯಲ್ಲಿ ಕೂತುಕೊಳ್ಳಿರಿ' ಎಂದು ಕ್ಲಾರ್ಕನು ಕುರ್ಚಿ ತೋರಿಸಿದನು.

ಎರಡು ಗಂಟೆಗಳು ಕಳೆದ ಮೇಲೆ ಬಂದವನು, 'ಮೆನೇಜರರು ಇನ್ನು ಯಾವಾಗ ಬರುವರು?' ಎಂದು ಕ್ಲಾರ್ಕನಿಗೆ ಕೇಳಿದನು.

'ನಾಳೆ ತಪ್ಪಿದರೆ ನಾಡದು ಖಂಡಿತ ಬರುತ್ತಾರೆ. ಅವರು ತನ್ನ ತಮ್ಮನ ಮದುವೆಗಾಗಿ ಬೇರೆ ಊರಿಗೆ ಹೋಗಿದ್ದಾರೆ' ಎಂದು ಉತ್ತರ ಬಂತು.

\+ + + +

ಮದ್ಯಪಾನ ನಿಷೇಧಕ ಚಳವಳಿಯವನೊಬ್ಬನು ಮೈದಾನಿನಲ್ಲಿ ನಿಂತು ಭಾಷಣವನ್ನು ಕೊಡುತ್ತಿದ್ದನು—'ನೀವು ಒಂದೇ ಬಾಟ್ಲಿ ಹೆಂಡವೆಂದು ತೆಗೆದುಕೊಳ್ಳುತ್ತೀರಿ. ಆದರೆ, ಅದರ ಹಿಂದೆ ಮತ್ತೊಂದು ಬರುತ್ತದೆ. ಅದರ ಮೇಲೆ ಇನ್ನೊಂದು, ಅದಾದ ಮೇಲೆ ಬೇರೊಂದು ......' ಅಷ್ಟರಲ್ಲಿ ಸಭಿಕರಲ್ಲೊಬ್ಬನು, 'ಹೀಗೆ ಒಂದು ಬಾಟ್ಲಿ ಹೆಂಡ ತೆಗೆದುಕೊಂಡರೆ ಅದರ ಮೇಲೆ ಇಷ್ಟು ಬಾಟ್ಲಿ ಹೆಂಡವನ್ನು ಯಾವ ಗಡಂಗಿನಲ್ಲಿ ಕೊಡುತ್ತಾರಯ್ಯಾ?' ಎಂದು ಕೇಳಿದನು.

\+ + + +

ಮನೆಗೆ ಬಂದ ಅತಿಥಿಯೊಬ್ಬನು ಸಂಜೀವನೊಡನೆ, ಒಂದು ಗಂಟೆಯಿಂದ ತನಗಾದ ಅಪಘಡಗಳನ್ನು ವಿವರಿಸುತ್ತಿದ್ದನು. ಸಂಜೀವನಿಗೆ ಕೇಳಿ ಕೇಳಿ ಬೇಸರ ಹಿಡಿಯಿತು. ಕೊನೆಗೆ ಅತಿಥಿಯು, 'ಮುಂಚಿನ ವಾರ ನಾನು ಒಂದು ಗಾಡಿಯ ಕೆಳಗೆ ಬಿದ್ದು ಪ್ರಾಣ ತಪ್ಪಿದೆನು!' ಎಂದು ಕೂಡಲೆ ಸಂಜೀವನು, 'ಇನ್ನು ನೀನು ಸೌಖ್ಯವಾಗುವುದು ಯಾವಾಗ?' ಎಂದು ಕೇಳಿದನು.

\+ + + +

ರಾಮಣ್ಣನಿಗೆ ವ್ಯಾಪಾರದೇನೂ ಇರಲಿಲ್ಲ. ಅಂಗಡಿಯಲ್ಲಿ ಕುಳಿತು, ಜನರ್ಯಾರೂ ಸಾಮಾನುಗಳನ್ನು ಕೊಂಡುಕೊಳ್ಳಲು ಬರುವರೋ ಎಂದು ಬೀದಿಯನ್ನೇ ನೋಡುತ್ತಿದ್ದ. ಅಷ್ಟರಲ್ಲಿ, ಸಣ್ಣ ಹುಡುಗಿಯೊಬ್ಬಳು ಕೈಯಲ್ಲೊಂದು ರೂಪಾಯಿಯನ್ನು ಹಿಡಿದು, ಓಡುತ್ತ ಬಂದು ರಾಮಣ್ಣನೊಡನೆ ಕೇಳಿದಳು:—'ನನ್ನ ತಂದೆ ಬೆಳಿಗ್ಗೆ ಇಲ್ಲಿ ಒಂದು ರೂಪಾಯಿ ಸಾಲ ಮಾಡಿದ್ದನೇ?' ರಾಮಣ್ಣ ಕೂಡಲೇ ಉತ್ತರ ಕೊಟ್ಟ:—'ಹೌದು, ಹೌದು ಆದರೆ, ನೀನು ಯಾರ ಮಗಳು?'

\+ + + +

'ಧೂಮಪ್ಪ, ನಿನಗೆ ಕೆಲಸಕ್ಕೆ ಬರಲು ಇಷ್ಟು ಹೊತ್ತೇನೋ?'

'ಬೆಳಿಗ್ಗೆ ಒಂದು ಸಂಗತಿ ನಡೆಯಿತು ಸ್ವಾಮಿ; ಎದ್ದ ಕೂಡಲೆ ನಾನು ಕನ್ನಡಿಯಲ್ಲಿ ನೋಡಿದೆ. ನಾನು ಇರಲಿಲ್ಲ. ಅದುದರಿಂದ ಕೆಲಸಕ್ಕೆ ಹೋಗಿರಬೇಕೆಂದುಕೊಂಡೆ. ಆದರೆ, ಕನ್ನಡಿ ಚೌಕಟ್ಟಿನಿಂದ ಕೆಳಗೆ ಬಿದ್ದಿತೆಂದು ನನಗೆ ಎರಡು ಗಂಟೆಗಳ ತರುವಾಯ ತಿಳಿಯಿತು'.

\+ + + +

ಅಜ್ಜಿಯು ಸಣ್ಣ ನಳಿನಿಯೊಡನೆ ಮಾತನಾಡುತ್ತಿದ್ದಳು:—'ಎಷ್ಟು ಬೇಗ ಬೆಳೆಯುತ್ತಿ ಮಗೂ, ನೀನು. ನೀನು ಹುಟ್ಟಿದ ದಿವಸವು ನನಗೆ ಚೆನ್ನಾಗಿ ನೆನಪಿದೆ. ಅದೊಂದು ಬುಧವಾರ ಮಧ್ಯಾಹ್ನವಾಗಿತ್ತು.' ನಳಿನಿಯು ಕೂಡಲೆ, 'ನೀನು ತಪ್ಪು, ಅಜ್ಜಿ. ಪ್ರತಿ ಬುಧವಾರ ಮಧ್ಯಾಹ್ನ ನಾನು ಶಾಲೆಯಲ್ಲಿರುತ್ತೇನೆ' ಎಂದಳು.

\+ + + +

ಪೋಲೀಸ್ ಸಾರ್ಜಂಟನು ಪ್ರತಿಯೊಬ್ಬ ಪೋಲೀಸನ ಪೋಷಾಕು ಮೊದಲಾದುವುಗಳನ್ನು ಪರೀಕ್ಷಿಸುತ್ತಿದ್ದನು. ಒಬ್ಬನನ್ನು ನೋಡಿದ ಕೂಡಲೆ, 'ನೀನೇಕೊ ಗಡ್ಡ ತೆಗೆಯಲಿಲ್ಲ?' ಎಂದು ಸಾರ್ಜಂಟನು ಕೇಳಿದನು.

'ತೆಗೆದಿದ್ದೇನೆ ಸಾರ್.'

'ಸುಳ್ಳು ಹೇಳುತ್ತಿಯೋ? ಸವರಿನೋಡು; ತೆಗೆಯಲಿಲ್ಲವೆಂದು ತಿಳಿಯುತ್ತದೆ.'

'ಹಾಗಾದರೆ, ಸ್ವಲ್ಪ ಮೋಸವಾಯಿತು ಸಾರ್. ಬೆಳಿಗ್ಗೆ ನಾವು ಹೆಚ್ಚು ಜನರು ಒಟ್ಟಿಗೆ ಒಂದೇ ಕನ್ನಡಿಯೆದುರು ಗಡ್ಡ ತೆಗೆಯುತ್ತಿದ್ದೆವು. ನಾನು ನನ್ನದೆಂದು ಬೇರೊಬ್ಬನ ಗಡ್ಡವನ್ನು ತೆಗೆದಿರಬೇಕು.'

\+ + + +

ಕೋಪಗೊಂಡ ರಾಮು ತನ್ನ ದರ್ಜಿಯೊಡನೆ ಚರ್ಚಿಸುತ್ತಿದ್ದ:—'ಏನಯ್ಯ, ಇದು? ಮೊನ್ನೆ ನೀನು ಹೊಲಿದ ಕೋಟನ್ನು ನಾನು ಮೊದಲನೆಯ ಸಲ ಹಾಕುವಾಗಲೇ ಅದು ಬೆನ್ನಿನ ಮೇಲೆ ಹರಿಯಿತು.' ದರ್ಜಿ ಸಂತೋಷದಿಂದ ಹೇಳಿದ—'ನಾವು ಗುಂಡಿಗಳನ್ನು ಎಷ್ಟು ಗಟ್ಟಿಯಾಗಿ ಹೊಲಿಯುತ್ತೇವೆಂಬುದು ನಿಮಗೆ ಅದರಿಂದಲೇ ತಿಳಿಯುತ್ತದಲ್ಲ.'

\+ + + +

ಸಂಕಪ್ಪ ತನ್ನ ಮಿತ್ರ ಶಾಂತಪ್ಪನೊಡನೆ ಕೇಳಿದ:—'ನಮ್ಮ ಸ್ನೇಹಿತ ಸೋಮಪ್ಪ ಹೇಗಿದ್ದಾನೆ? ನಾನವನನ್ನು ನೋಡದೆ ಎಷ್ಟೋ ದಿನಗಳಾದವು.'

'ಅವನು ಇತ್ತೀಚೆಗೆ ಚೆನ್ನಾಗಿಲ್ಲ; ಪಾಪ, ಅವನ ಆಹಾರದ ವಿಷಯ ಬಹಳ ಜಾಗ್ರತೆ ತೆಗೆದುಕೊಳ್ಳುತ್ತಾರೆ.'

'ಅದೇನು ಅವನು ಆಸ್ಪತ್ರೆಯಲ್ಲಿರುವನೇ?'

'ಅಲ್ಲ; ಜೈಲಿನಲ್ಲಿ.'

\+ + + +

ಚಿಕ್ಕ ರಮೇಶನು ರೈಲಿನಲ್ಲಿ ಹೋಗುತ್ತಿದ್ದಾಗ ತನ್ನ ತಾಯಿಯ ತೊಡೆಯ ಮೇಲೆ ಕೂತಿದ್ದನು. ಸ್ಥೂಲ ಶರೀರದ ಹೆಂಗುಸೊಬ್ಬಳು ರಮೇಶನ ತಾಯಿಯ ಹತ್ತಿರ ಬಂದು ಕೂತಳು. ಕೆಲ ನಿಮಿಷಗಳ ತನಕ ಅವಳನ್ನೇ ದಿಟ್ಟಿಸಿ ನೋಡಿ, ಕೊನೆಗೆ ರಮೇಶನು ತನ್ನ ತಾಯಿಯೊಡನೆ, 'ಅಮ್ಮ ಈಗ ಬಂದವಳು ಒಬ್ಬ ಹೆಂಗಸು' ಎಂದನು. 'ನಮಗೆ ಗೊತ್ತಿದೆ ಮಗೂ; ಸುಮ್ಮನಿರು' ಎಂದು ತಾಯಿಯು ರಮೇಶನಿಗೆ ಮೆಲ್ಲಗೆ ಹೇಳಿದಳು. ರಮೇಶನು ಕೂಡಲೇ, "ಹಾಗಾದರೆ, ಅವಳು ಒಳಗೆ ಬರುವಾಗ ನೀನು ಅಪ್ಪನೊಡನೆ 'ಈಗ ಒಳಗೆ ಬರುವ ಪ್ರಾಣಿ ಯಾವುದು?' ಎಂದು ಕೇಳಿದುದೇಕೆ?" ಎಂದು ಗಟ್ಟಿಯಾಗಿ ಕೇಳಿಬಿಟ್ಟ.

\+ + + +

ಕಮಲಮ್ಮ ನೇತ್ರ ವೈದ್ಯನೊಡನೆ ಹೋಗಿ, ತನ್ನ ಮಗಳ ಕಣ್ಣುನೋವು ಇನ್ನೂ ಕಡಿಮೆಯಾಗಲಿಲ್ಲವೆಂದು ಹೇಳಿದಳು. 'ನಾನು ಕೊಟ್ಟ ಕನ್ನಡಕವನ್ನು ಅವಳು ಇಡುತ್ತಾಳೇ?' ಎಂದು ವೈದ್ಯನು ಕೇಳಿದ. ಕಮಲಮ್ಮ ಸಪ್ಪೆ ಮೋರೆಯಿಂದ ಹೇಳಿದಳು:—'ಇಲ್ಲ; ಅವಳು ಕನ್ನಡಕ ಇಡಲು ಬಿಡುವುದೇ ಇಲ್ಲ.' ಆದರೆ (ಸಂತೋಷದಿಂದ ಕಮಲಮ್ಮನ ಮೋರೆ ಅಗಲವಾಯಿತು) 'ಅವಳು ನಿದ್ರಿಸುತ್ತಿದ್ದಾಗ ಅವಳಿಗೆ ತಿಳಿಯದಂತೆ ಇಟ್ಟುಬಿಡುತ್ತೇನೆ'.

\+ + + +

ಸಂಕಪ್ಪ ಶೆಟ್ಟಿ ಬೇಂಕಿಗೆ ಹೋಗಿ ತನ್ನ ಎಲ್ಲ ದುಡ್ಡನ್ನು ಕೊಡಬೇಕೆಂದು ಕೇಳಿದ. ಕೂಡಲೆ ಅವನ ದುಡ್ಡೆಲ್ಲ ಅವನ ಕೈಗೆ ಬಂತು. ಕೆಲನಿಮಿಷಗಳ ತರುವಾಯ ಎಲ್ಲ ದುಡ್ಡನ್ನು ಪುನಃ ಬೇಂಕಿನಲ್ಲಿಡುವಂತೆ ಕ್ಲಾರ್ಕನಿಗೆ ಹೇಳಿದನು. 'ಹಾಗಾದರೆ ನೀವೀಗ ದುಡ್ಡನ್ನು ತೆಗೆದುಕೊಂಡುದೇತಕ್ಕೆ?' ಎಂದು ಆಶ್ಚರ್ಯಗೊಂಡ ಕ್ಲಾರ್ಕನು ಕೇಳಿದನು. 'ಎಲ್ಲ ದುಡ್ಡು ಭದ್ರವಾಗಿ ಇದೆಯೋ ಇಲ್ಲವೋ ಎಂದು ಎಣಿಸಿ ನೋಡುವುದಕ್ಕಾಗಿ ತೆಗೆದುಕೊಂಡೆ' ಎಂಬುದು ಸಂಕಪ್ಪ ಶೆಟ್ಟಿಯ ಉತ್ತರ.

\+ + + +

'ಆ ವಿಶ್ವನಾಥಯ್ಯನವರು ನನ್ನ ಹತ್ತಿರ ಒಂದು ಹಲ್ಲಿನ ಮಾಲೆಯನ್ನು ಮಾಡಿಸಿ ಮೂರು ತಿಂಗಳಾಯಿತು; ಇನ್ನೂ ದುಡ್ಡು ಬರಲಿಲ್ಲ. ಏನು ಮಾಡಲಿ?' ಎಂದು ದಂತವೈದ್ಯನೊಬ್ಬನು ತನ್ನ ಸ್ನೇಹಿತನೊಡನೆ ಕೇಳಿದ. 'ಮಾರಾಟಕ್ಕಿದೆ—ಒಂದು ಕೃತ್ರಿಮದಂತ ಮಾಲೆ. ಬೇಕಾದವರು ವಿಶ್ವನಾಥಯ್ಯನವರ ಬಾಯಿಯಲ್ಲಿಯಲ್ಲಿ ನೋಡಬಹುದು' ಎಂದು ಒಂದು ಪತ್ರಿಕೆಯಲ್ಲಿ ಪ್ರಕಟಿಸಿರಿ. ಕೂಡಲೆ ನಿಮ್ಮ ದುಡ್ಡು ಬರದಿರದು' ಎಂದು ಮಿತ್ರನೊಂದು ಸಲಹೆ ಕೊಟ್ಟ.

"ಭ್ರಮರ".

ನೋವಿನ ಉಪಶಮನಕ್ಕಾಗಿ ತಲೆಯನ್ನು ಕಟ್ಟಬೇಕಾಗಿತ್ತು

ಒಂದೊಂದು ಬಾರಿ ತಲೆದೋರಿದ ಶಿರೋವೇದನೆಯು ಹಲವು ದಿವಸಗಳ ತನಕ ಪೀಡಿಸುತಿತ್ತು.

ಕ್ರುಶೆನಿನಿಂದ ವೇದನೆಯು ಗುಣಕಾರಿಯಾಯಿತು

ಕ್ರುಶೆನ್ ಲವಣಗಳನ್ನು ಸೇವಿಸಿ ಫಲವನ್ನು ಹೊಂದಿದ ಸ್ತ್ರೀಯೋರ್ವಳು, ಹೀಗೆಂದು, ಉಪಕಾರಸ್ಮರಣಾ ಪತ್ರವನ್ನು ಬರೆದಿರುವಳು:—

"ಕ್ರುಶೆನನ್ನು ಸೇವಿಸುವ ಮೊದಲು ನನಗೆ, ವಾತದ ನೋವು ಮತ್ತು ಶಿರೋವೇದನೆಯು, ಆಗಾಗ್ಗೆ ತಲೆದೋರಿ ಹಲವು ದಿವಸಗಳ ತನಕ ಪೀಡಿಸುತ್ತಿದ್ದವು. ಉಪಶಮನೆಗಾಗಿ ತಲೆಯನ್ನು ವಸ್ತ್ರದಿಂದ ಕಟ್ಟಿಕೊಂಡು ತಿರುಗಬೇಕಾಗಿತ್ತು, ಮತ್ತು ಪ್ರಾತಃಕಾಲ ಸಮಯ ಕೈಕಾಲುಗಳು ಮರಕಟ್ಟಿದರಿಂದ, ನನಗೆ ಏಳಲು ಬಹಳ ಕಷ್ಟವಾಗುತ್ತಿತ್ತು. ಈಗ ನನ್ನ ಶಿರೋವೇದನೆಯು ನಾಶವಾಗಿದೆ ಮಾತ್ರವಲ್ಲ ಬೆಳಿಗ್ಗೆ ದಣಿವು ಹೋದವಳಾಗಿ ಚಾಪೆಯನ್ನು ಬಿಡುತ್ತಿದ್ದೇನೆ. ಅದೂ ಅಲ್ಲದೆ ನನ್ನ ತೂಕವು ೧೨ ಮಣದಿಂದ ೯ ಮಣ ೩ ಪೌಂಡಿಗೆ ಇಳಿದಿದೆ. ಈಗ ನನಗೆ ಕ್ರುಶೆನ್ ಸೇವಿಸುವ ಅಗತ್ಯವೆ ಬೀಳುವುದಿಲ್ಲ"—ಮಿ॥ W. H. C.

ಒಳಗಿನ ಇಂದ್ರಿಯಗಳು ಸರಿಯಾಗಿ ಕಾರ್ಯಸದಿರುವಾಗ–ಜೀರ್ಣ ಸಂಬಂಧದ ಇಂದ್ರಿಯಗಳು ಮುಷ್ಕರಹಿಡಿದು, ಅವುಗಳ ಕಾರ್ಯಗಳನ್ನು ಮಾಡದೆ ಇರುವಾಗ, ಮಲವಿಸರ್ಜನೆಯು ಸರಿಯಾಗಿ ನಡೆಯದೆ, ಶಿರೋವೇದನೆಯು ಲಭಿಸುವುದು. ಈ ಕಾರಣದಿಂದ ನಮ್ಮ ರಕ್ತದಲ್ಲಿ ವಿಷವು ಸೇರುವುದು.

ನಿಮ್ಮ ಕಲಿಜೆಯನ್ನು ಮತ್ತು ಮೂತ್ರಾಶಯವನ್ನು ಸ್ವಚ್ಛವಾಗಿಡಿರಿ. ಅವಾಗ ನಿಮಗೆ ಸಂಕಷ್ಟಗಳು ಒದಗಲಿಕ್ಕಿಲ್ಲ. ಕ್ರುಶೆನ ಆರು ಲವಣಗಳನ್ನು ನಿಮ್ಮ ರಕ್ತದಲ್ಲಿ ಸೇರಿಸಿರಿ. ಆಗ್ಯೆ ನಿಮ್ಮ ಇಂದ್ರಿಯಗಳು ಪ್ರಕೃತಿ ಸ್ವಾಭಾವಿಕ ರೀತಿಯಲ್ಲಿ ಚಲಿಸುವವು. ಹೀಗೆ ಸರಿಪಡಿಸಿದ ಇಂದ್ರಿಯಗಳು ಒಳಗಿನ ಯಾವತ್ತೂ ಕಲ್ಮಶಗಳನ್ನು ಹೊರದೂಡುವುವು.

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ, ಕ್ರುಶೈನ್ ಸೋಲ್ಟ್ ದೊರೆಯುತ್ತದೆ.

ಪತ್ರಿಕಾಪ್ರಪಂಚ:

ಅಮೇರಿಕಾದ ವಿದ್ಯಾಭ್ಯಾಸ.

ಸಂಯುಕ್ತ ಅಮೇರಿಕಾದ 'ಸರ್ವೆಗ್ರಾಫಿಕ್' ಎಂಬ ಮಾಸಪತ್ರಿಕೆಯು ಅಲ್ಲಿನ ವಿದ್ಯಾಭ್ಯಾಸದ ಕುರಿತಾಗಿ ಹೀಗೆನ್ನುತ್ತಿದೆ.

ದಾಸ್ಯ, ಸ್ವತಂತ್ರ, ಮತ್ತು ವಿದ್ಯಾಭಿವೃದ್ಧಿ, ಇವು ಮಾನವನ ಮುಖ್ಯ ಹಕ್ಕುಗಳಾಗಿವೆ. ಶಾಲೆಗಳು ಪ್ರಜಾಧಿಪತ್ಯದ ಅಡಿಗಲ್ಲಾಗಿವೆ. ವಿದ್ಯಾಭ್ಯಾಸದಿಂದಾಗಿ ಸಕಲ ಸಾಂಸರ್ಗಿಕ ಮತ್ತು ರಾಷ್ಟ್ರೀಯ ವಿಚಾರಗಳನ್ನು ಸುಲಭ ತರದ ರೀತಿಯಲ್ಲಿ ಉದ್ಧರಿಸಬಹುದು.

ಈ ನಂಬಿಗೆಯಿಂದ ಕೂಡಿದವರಾದ ನಾವು ನಮ್ಮ ದೇಶದ ಪ್ರತಿಯೊಬ್ಬ ಮಗುವಿಗೂ ವಿದ್ಯೆಯನ್ನು ಅನುಕೂಲಿಸುವ ಸುವ್ಯವಸ್ಥೆಗಳನ್ನು ಮಾಡಿಟ್ಟಿದ್ದೇವೆ. ವಿದ್ಯೆಯ ಪ್ರಸಾರವು ನಮ್ಮಲ್ಲಿ ನಡೆವ ರೀತಿ ಅನ್ಯಾದ ದೇಶಗಳಲ್ಲೂ ನಡೆಯುತ್ತದಿಲ್ಲವೆಂಬುದು ನಮ್ಮ ಮತ. ಪ್ರಾಥಮಿಕ ಶಿಕ್ಷಣ ಹೊಂದಿದವರು ಸೇಕಡಾ ೫೬ ಸಲ, ಹೈಸ್ಕೂಲುಗಳನ್ನು ಸೇರುತ್ತಿರುವರು ಇದು ಫ್ರಾನ್ಸ್, ಇಂಗ್ಲೆಂಡ್, ಜರ್ಮನಿಯವರಿಗಿಂತ ಮೂರು ಪಾಲು ಅಧಿಕವಾದುದು. ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಒಂದು ಮಿಲಿಯಕ್ಕೆ ಮಿಕ್ಕಿದ ವಿದ್ಯಾರ್ಥಿಗಳ ಸಂಖ್ಯೆಯು ಇರುವುದು ಇತರ ಜನಾಂಗದವರು ಇಷ್ಟು ದೊಡ್ಡ ಸಂಖ್ಯೆಯನ್ನು ಕಂಡುದೇ ಇಲ್ಲ. ಒಂದೇ ಮಾತಿನಲ್ಲಿ ಹೇಳಬೇಕಾದರೆ ನಮ್ಮ ದೇಶದಲ್ಲಿ ೩೦ ಮಿಲಿಯ ಜನರು ಹಲವು ವಿಧಗಳಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿರುವರು ಇದು ನಮ್ಮ ಜನಸಂಖ್ಯೆಯ ನಾಲ್ಕನೆ ಒಂದಂಶವಾಗಿದೆ

ಪಾಶ್ಚಾತ್ಯದಲ್ಲಿ ಭಾರತೀಯರ ವಿದ್ಯಾಭ್ಯಾಸ

ನಮ್ಮ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪ್ರೌಢ ವಿದ್ಯಾಭ್ಯಾಸಕ್ಕೆ ನಮ್ಮ ವಿದ್ಯಾರ್ಥಿಗಳನ್ನು ಇಂಗ್ಲೆಂಡ್ ಜರ್ಮನಿ, ಫ್ರಾನ್ಸ್ ಮೊದಲಾದ ಪಾಶ್ಚಾತ್ಯ ದೇಶಗಳಿಗೆ ಕಳುಹಿಸುವುದರಲ್ಲಿ ಲಾಭವಿದೆಯೋ ಎಂದು ಚರ್ಚಿಸಿ, ಕೆಲವರು ಅದು ಅಗತ್ಯವಿಲ್ಲವೆಂಬ ಸಿದ್ಧಾಂತಕ್ಕೆ ಬಂದಿರುವರು ಈ ಕುರಿತು ಪಂಡಿತ ತಾರಾನಾಥರು ನವಸಂದೇಶದಲ್ಲಿ ಹೀಗೆನ್ನುತ್ತಿರುವರು

"ಶಿಕ್ಷಣ ಎಂದರೇನು? ಅದರ ಉದ್ದೇಶವೇನು? ಅದರಿಂದಾಗಬೇಕಾದ ಫಲವೇನು? ಎಂದು ನಾವು ಕೇಳಬಹುದಷ್ಟೆ? ಶಿಕ್ಷಣದಿಂದ ಬುದ್ಧಿ ಬೆಳೆಯಬೇಕು ಹೃದಯ ಅರಳಬೇಕು ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು, ಕಾರ್ಯಬಲ ಹೆಚ್ಚಬೇಕು, ಸಂಘಾಭಿಮಾನ ದೇಶಾಭಿಮಾನ, ಜಗದಾಭಿಮಾನಗಳು ವೃದ್ಧಿಯಾಗಬೇಕು. ಆದರೆ ಈ ಶಕ್ತಿಯು ಪಾಶ್ಚಾತ್ಯ ದೇಶಗಳಿಗೆ ಹೋಗಿ ಶಿಕ್ಷಣ ಹೊಂದಿಬಂದವರಲ್ಲಿದೆಯೆ? ಇಲ್ಲಿ ವಿದ್ಯಾಭ್ಯಾಸ ಮಾಡುವರಿಗಿಂತಲೂ ಅಧಿಕ ಶಕ್ತಿ ಅವರಲ್ಲಿದೆಯೊ? ನಮಗೇನೂ ಹಾಗೆ ಕಾಣುವುದಿಲ್ಲ

" . . . ಅವರ ಶಿಕ್ಷಣಕ್ಕೆ ಖರ್ಚು ಹೆಚ್ಚು ಆದರೆ ಅವರಿಂದ ಆ ಮಟ್ಟಿಗೆ ಉತ್ಪನ್ನ ಹೆಚ್ಚಿಲ್ಲ. ಅವರ ಸ್ವಾತಂತ್ರ್ಯಬುದ್ಧಿ ಹೆಚ್ಚು ಆದರೆ ಆ ಸ್ವಾತಂತ್ರ್ಯ ತಮ್ಮ ಸ್ವಾರ್ಥಕ್ಕಾಗಿಯೆ ಮಾಡಲು ಅಲ್ಲವೆ ಜನರಿಗದರಿಂದ ತಕ್ಕ ಉಪಕಾರವಾಗುವುದಿಲ್ಲ. ಅವರು ಅವರ ಕೆಲಸಕ್ಕಾಗಿ ಬೇಡುವ ಹಣ ಹೆಚ್ಚು ತೋರಿಸುವ ಕಾರ್ಯಲಾಭ ಪಾಲು ಕಮ್ಮಿ ಅವರ ಸಂಸಾರದ ಖರ್ಚು ಹೆಚ್ಚು ಗಳಿಸುವ ಶಕ್ತಿ ಅದಕ್ಕೆ ತಕ್ಕಂತಿಲ್ಲ

ಅವರ ದೇಶಾಭಿಮಾನವು ಮನಸ್ಸಿನಲ್ಲಿ ಎಷ್ಟು ತುಂಬಿದ್ದರೂ ನವಯೌವನದಲ್ಲೇ ಅದನ್ನು ಸುಖಲೌಲ್ಯಕ್ಕೆ ಬಲಿಹಾಕಿದ ಅವರ ಶಿಕ್ಷಣಪ್ರಭಾವದಿಂದ ಅವರು ದೇಶಕ್ಕಾಗಿ ಯಾವ ಸಾಹಸವನ್ನೂ ಮಾಡಲಾರರು, ಯಾವ ತ್ಯಾಗವನ್ನೂ ಮಾಡಲಾರರು, ಅನೇಕರಿಗೆ ಅಲ್ಲಿಂದ ಹಿಂತಿರುಗಿ ಬಂದಮೇಲೆ ಇದೀ ಹಿಂದೂದೇಶದಲ್ಲಿ ಯಾವ ಸುಖವೂ ಕಾಣಿಸುವುದಿಲ್ಲ, ಯಾವ ಯೋಗ್ಯತೆಯೂ ಕಾಣುವುದಿಲ್ಲ! ಇಲ್ಲಿಂದ ಹೋಗುವುದಕ್ಕೆ ಮೊದಲು ಮಾಡಿಕೊಂಡ ಹೆಂಡತಿಮಕ್ಕಳು ಸಂತೋಷಪಡುವುದಿಲ್ಲ. ಅಲ್ಲಿ ಇನ್ನೊಬ್ಬಳೊಬ್ಬಳನ್ನು ಮಾಡಿಕೊಂಡ ಇಲ್ಲಿಯವಳ ಜೀವನಸೌಭಾಗ್ಯಕ್ಕೆ ಕೊನೆಸುತ್ತಿ ಹಾಳು ಮಾಡಿದ ಇನ್ನೂ ಮಾಡುತ್ತಿರುವ ಗಂಡಸರೆಷ್ಟುಮಂದಿಲ್ಲ ನಮ್ಮಲ್ಲಿ? ಅಲ್ಲಿ ವಿದ್ಯೆಪಡೆದ ಅನೇಕರಿಗೆ ಪಶ್ಚಿಮದೇ ಸ್ವರ್ಗ, ಹಿಂದೂದೇಶವು ನರಕ! ಈ ಕಲ್ಪನೆಯನ್ನು ಬೆಳೆಸುವ ಶಿಕ್ಷಣವ್ಯವಸ್ಥೆಗಾಗಿ ಲಕ್ಷೋಪಲಕ್ಷ ರೂಪಾಯಿಗಳನ್ನು ನಮ್ಮ ಈ ಬಡ ದೇಶದಿಂದ ಪಶ್ಚಿಮ ದೇಶಗಳಿಗೆ ಹರಿದುಹೋಗುತ್ತವೆ. ಈ ಪ್ರವಾಹದಿಂದ ವಿದ್ಯಾರ್ಥಿಯು ಯಾವ ವಿಕಾಸವೂ ಲಭಿಸುವುದಿಲ್ಲ, ಅತನಿಂದ ದೇಶಕ್ಕೂ ಲಾಭವಾಗುವುದಿಲ್ಲ"

'ನವಸಂದೇಶ.'

ಉದ್ಯೋಗ ಮತ್ತು ಒಕ್ಕಲತನ.

ಹಿಂದೂಸ್ಥಾನದ ಅಭಿವೃದ್ಧಿಯು ಹಳ್ಳಿಗಳ ಮೇಲೆ ಅವಲಂಬಿಸಿಕೊಂಡಿದೆಯೆಂದೂ ಹಿಂದೂಸ್ಥಾನದ ಪ್ರಗತಿಯು ವಿಚಾರಮಾಡುತ್ತಿರುವ ಈ ಸಮಯದಲ್ಲಿ ಗ್ರಾಮಾಭ್ಯುದಯವನ್ನು ಸರ್ವರೂ ಕೈಕೊಳ್ಳಬೇಕಾಗಿಯೂ ಮಾಡಿದ ಶ್ರೀ ನಳಿನರಂಜನ ಸರಕಾರರವರ ಭಾಷಣದ ಅನುವಾದವು ಹೀಗಿದೆ

"ಹಿಂದೂಸ್ಥಾನದ ನಿಜವಾದ ಜೀವನವು ಹಳ್ಳಿಗಳಲ್ಲಿ ಇರುವುದು . . ಪಟ್ಟಣದಲ್ಲಿ ಉದ್ಯೋಗ ವ್ಯವಸಾಯ, ಕಾರಖಾನೆ ಮುಂತಾದುವುಗಳು ರಾಷ್ಟ್ರೀಯ ಸ್ಥಿತಿಗಾಗಿಯೇ ಇರುವುವೆಂಬುದು ನಿಜ ಆದರೆ ಅವುಗಳ ನಿಜವಾದ ಆಧಾರವು ಹಳ್ಳಿಗಳಲ್ಲಿ ಇರುವುದು ಮತ್ತು ಕೃಷಿಜೀವನವನ್ನು ಅವಲಂಬಿಸುವುದು . ಅಮೇರಿಕೆಯ ಅಧ್ಯಕ್ಷರಾದ ರೂಝ್ವೆಲ್ಟರು ಒಮ್ಮೆ "ಒಕ್ಕಲಿಗರಿಗೆ ಸೌಖ್ಯವು ಎಲ್ಲಿಯವರೆಗಾಗುವುದಿಲ್ಲವೋ ಅಲ್ಲಿಯ ವರೆಗೆ ರಾಷ್ಟ್ರದ ಉನ್ನತಿಯೂ ಕೂಡ ಆಗಲಾರದು" ಅಂದಿದ್ದರು. ಕೃಷಿಜನರು ತಾವು ಉತ್ತಮಸ್ಥಿತಿಯಲ್ಲಿದ್ದು ತಮ್ಮ ಮಕ್ಕಳುಮರಿಗಳನ್ನು ಉತ್ತಮಸ್ಥಿತಿಯಲ್ಲಿಟ್ಟು ಸ್ವಾಭಿಮಾನವನ್ನು ಕಾಯ್ದುಕೊಳ್ಳುವಂತೆ ಮಾಡಬೇಕು. ಸರಕಾರದವರೆ ಈ ವಿಷಯದಲ್ಲಿ ಇನ್ನಷ್ಟು ಲಕ್ಷ್ಯಕೊಟ್ಟು ಗ್ರಾಮೀಣ ರೈತರ ಜೀವನವನ್ನು ಸುಗಮವಾಗಿ ಮಾಡತಕ್ಕದ್ದು ಸರಕಾರವು ಕೂಡ ೧ ಕೋಟಿ ೧೩ ಲಕ್ಷ ರೂಪಾಯಿಗಳನ್ನು ಗ್ರಾಮಸಂಘಟನೆಯ ಸಲುವಾಗಿ ಖರ್ಚುಮಾಡಲು ಸಿದ್ಧವಾಗಿರುವುದು ಸದ್ಯದ ಅವಶ್ಯಕತೆಯ ಪ್ರಮಾಣದಿಂದ ವಿಚಾರಮಾಡಲಾಗಿ ಈಗ ವೆಚ್ಚಮಾಡಬೇಕೆಂದಿರುವ ಹಣವು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎನ್ನುವಂತೆಯೇ ಸರಿ

ಪ್ರಶ್ನೆಯ ವ್ಯಾಪಕಸ್ವರೂಪ.

ಈ ಪ್ರಶ್ನೆಯು ಸ್ವರೂಪದ ವ್ಯಾಪಕತೆ ಎಷ್ಟಿರುವುದೆಂಬುದನ್ನು ಕೆಲವು ಅಂಕಿಗಳ ಮೂಲಕ ತಿಳಿದುಕೊಳ್ಳಬಹುದು ಬ್ರಿಟಿಷಹಿಂದೂಸ್ಥಾನದಲ್ಲಿಯ ೨೭ ಕೋಟಿ ೧೦ ಲಕ್ಷ ೫೦ ಸಾವಿರ ಜನರಲ್ಲಿ ೨೪ ಕೋಟಿ ೩೦ ಲಕ್ಷ ಜನರು ಹಳ್ಳಿಗಳಲ್ಲಿ ವಾಸಿಸುತ್ತಾರೆ ಭಾರತದಲ್ಲಿ ಹೆಚ್ಚಿನ ಜನರು ಭೂಸಾಗುವಳಿಯ ಮೇಲೆಯೇ ಉದರನಿರ್ವಾಹ ಸಾಗಿಸುತ್ತಿರುವರು ನೂರರಲ್ಲಿ ೮೩ ಜನರು ಭೂಸಾಗುವಳಿಯನ್ನು ಮಾಡಿಯೇ ಉಪಜೀವಿಸುತ್ತಿರುವರು. ಉಳಿದ ದೇಶಗಳಲ್ಲಿ ಜನರು ಹೆಚ್ಚಾಗಿ ಉದ್ಯೋಗದಲ್ಲಿ ಮುಂದುವರಿಯುತ್ತಿದ್ದಾರೆ ಆದರೆ ನಮ್ಮ ಹಿಂದೂಸ್ಥಾನದಲ್ಲಿ ನಾಲ್ಕು ಭೂಸಾಗುವಳಿಯೇ ಹೆಚ್ಚು ಜನರು ಆಧರಿಸಿದ್ದಾರೆ . . . ಹಳ್ಳಿಗಳಲ್ಲಿಯ ಸಣ್ಣ ಪುಟ್ಟ ಉದ್ಯೋಗಗಳೆಲ್ಲಾ ಹಾಳಾಗಿ ಹೋಗಿ ಇವತ್ತಿನ ವರೆಗೆ ೫೦ ಭಾರವು ಒಕ್ಕಲತನದ ಮೇಲೆಯೇ ಬಿದ್ದಿರುವುದು ಇದರ ಪರಿಣಾಮದಿಂದಲೆ ಹಿಂದೂಸ್ಥಾನದ ರೈತರು ೩೦೦ ಕೋಟಿ ರೂಪಾಯಿಗಳ ಸಾಲದಲ್ಲಿ ನರಳುತ್ತಿರುವರು"

'ಧನಂಜಯ.'

ಕಲೆಗಳೂ ಸ್ತ್ರೀಯರೂ.

ಕಲೆಗಳ ತವರುಮನೆಯಾಗಿದ್ದು ಒಂದಾನೊಂದು ಕಾಲದಲ್ಲಿ ಹಿಂದೂಸ್ಥಾನವು ಸ್ವರ್ಣಭೂಮಿಯಾಗಿ ಮೆರೆಯುತ್ತಿತ್ತು ಆದರೆ ನವನಾಗರಿಕರ ಹೆಜ್ಜೆಗಳನ್ನಿಟ್ಟು ಮುಂದುವರಿಯುತ್ತಿರುವ ಭಾರತವರ್ಷಕ್ಕೆ ಈ ಕಲೆಯ ಉಪಯೋಗವಿಲ್ಲದೆ ನಿರುದ್ಯೋಗ ನಿರುತ್ಸಾಹ ದಾರಿದ್ರ್ಯ ರೋಗರುಜಿನಗಳು ಪೀಡಿಸುತ್ತಿರುವುವು ಈ ಕಲೆಯ ಉದ್ಧರಣೆಯ ಕಾರ್ಯದಲ್ಲಿ ನಮ್ಮ ಸ್ತ್ರೀಯರು ಹೇಗೆ ಸಹಕರಿಸಬಹುದೆಂಬುದರ ವಿಷಯ ಶ್ರೀಮ ಪಿ ಆರ್ ಕಲ್ಯಾಣಮ್ಮನವರು ತಮ್ಮ ಸರಸ್ವತಿಯೆಂಬ ಮಾಸಪತ್ರಿಕೆಯಲ್ಲಿ ಹೀಗೆನ್ನುತ್ತಿರುವರು.

"ಸ್ತ್ರೀಯರು ಮನೆಯಲ್ಲಿದ್ದುಕೊಂಡೇ ಅಭ್ಯಾಸ ಮಾಡಿ ಅದರಿಂದ ಲಾಭಹೊಂದಿ ತಮ್ಮ ಜೀವನವನ್ನು ಸುಸೂತ್ರವಾಗಿ ಸಾಗಿಸಲನುಕೂಲವಾಗುವಂತಹ ಲಲಿತ ಕಲೆಗಳೆಷ್ಟೊ ಇವೆ , ನೂಲು ನೇಯುವುದು ಮೊದಲಾದ ಕೆಲಸಗಳೆಲ್ಲವನ್ನು ಸ್ತ್ರೀಯರೆ ಮಾಡುತ್ತಿದ್ದರು ತಮ್ಮ ಗೃಹಕೃತ್ಯಕ್ಕೆ ಸಂಬಂಧಿಸಿದ ಕಾರ್ಯಗಳೊಡನೆ ಮನೆಮಂದಿಗೆ ಬೇಕಾಗುವಷ್ಟು ಬಟ್ಟೆಬರೆಗಳನ್ನು ಸ್ವತಃ ತಯಾರುಮಾಡಿಕೊಳ್ಳುತ್ತಿದ್ದರು

ಮನೆಯಲ್ಲಿ ಮಾಡುವ ಅಲ್ಪಸ್ವಲ್ಪ ಕೆಲಸಗಳು ಮುಗಿದನಂತರ ನಾಲ್ಕಾರು ಮನೆಯ ಮಹಿಳೆಯರೊಂದಿಗೆ ಸೇರಿ ಅವರವರ ಮನೆಯ ಹುಳುಕನ್ನೆತ್ತಿ ಆಡುತ್ತ ಕಾಲಕಳೆಯುವುದಕ್ಕಿಂತ ಸುಲಭಸಾಧ್ಯವಾದ ಗೃಹಪರಿಶ್ರಮಗಳನ್ನು ಮಾಡುವುದರಿಂದ ಕುಟುಂಬಕ್ಕೆ ಸಹಾಯವಾಗುವುದಿಲ್ಲವೆ? ಪುರುಷರಿಗೆ ಜೀವನಸಂಗ್ರಾಮದಲ್ಲಿ ತೋರಿಬರುವ ಅವಶ್ಯಕತೆಯಿಂದ ಹೊಟ್ಟೆಗಾಗಿ ದುಡಿಯುವ ಅಗತ್ಯವಿದೆ ಆದ ಸ್ತ್ರೀಯರ ಸ್ಥಿತಿಯು ಹಾಗಿಲ್ಲ ನಮ್ಮ ಭಾರತದಲ್ಲಿ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಮಹಿಳೆಯರೆಷ್ಟೊಮಂದಿ ಇದ್ದರು

ದೊಡ್ಡ ಕುಟುಂಬವಾಗಿದ್ದು ವರಮಾನವು ಕಡಿಮೆಯಾದಲ್ಲಿ ಅಂತಹ ಕುಟುಂಬಗಳ ಸ್ತ್ರೀಯರೂ ಈ ಕಲೆಗಳ ಮೂಲಕ ದ್ರವ್ಯಗಳಿಸಿ ಕುಟುಂಬಪೋಷಣೆಗೆ ಸಹಾಯಮಾಡಬಹುದು

"ಆದರೆ ಇಂದಿನ ಸ್ಥಿತಿಯೇ ಬೇರೆ ಪುರುಷರೊಡನೆ ಸಮನಾಗಿ ನಿಂತು ಅವರ ಉದ್ಯೋಗಕ್ಕಾಗಿ ಹೋರಾಡಿ ಆ ಉದ್ಯೋಗಸಾಗರದಲ್ಲಿ ಮುಳುಗಿ ತೇಲುವ ದೃಶ್ಯವು ಎಲ್ಲೆಲ್ಲೂ ಸ್ತ್ರೀತ್ವವನ್ನೆ ಸಂಪೂರ್ಣವಾಗಿ ಮರೆತು ಗೃಹವನ್ನು ಸ್ಮಶಾನವನ್ನಾಗಿ ಮಾಡಿ ಮಕ್ಕಳುಮರಿಗಳ ಪಾಲನೆಯ ಭಾರವನ್ನೂ ದಾದಿಯರ—ಆಳುಕಾಳುಗಳ ಮೇಲೆ ಬಿಟ್ಟು ದಾಸವೃತ್ತಿಯ ಬಲಿಗೆ ಬೀಳುವ ಪುರುಷರಂತೆ ನಾವು ಅದೇ ದಾಸ್ಯವೃತ್ತಿಗಿಳಿಯುವುದು ಮೂರ್ಖತನ

. . ನೂಲುವುದೂ ನೇಯುವುದೂ, ಲೇಸು ಬುಟ್ಟಿಗಳ, ಉಲ್ಲನಿನ ಮೊದಲಾದುವುಗಳನ್ನು ನಿರ್ಮಿಸುವುದು, ಚಿತ್ರದ ಕೆಲಸ ಮಾಡುವುದೂ, ಬಟ್ಟೆಗಳನ್ನು ಹೊಲಿಯುವುದೂ ಇತ್ಯಾದಿ ಕೆಲಸಗಳನ್ನು ಮನೆಯಲ್ಲಿದ್ದುಕೊಂಡೇ ಮಾಡಬಹುದು ಇನ್ನೊಂದು ಸಂಪಾದನೆಯನ್ನು ಮಾಡಬಹುದು ಬಾಲ್ಯಕ್ಕೈವಲ್ಯ ಪಡೆದ ಮಹಿಳೆಯರು ಗ್ರಂಥರಚನೆಮಾಡಿ ಸ್ವತಃ ಪ್ರಕಟಿಸಲು ಶಕ್ತಿಯಿದ್ದರೆ, ಪ್ರಕಟಿಸಿಯೋ ಅಥವಾ ಪ್ರಕಾಶಕರಿಗೆ ಕೊಟ್ಟು ಧನಸಂಪಾದನೆ ಮಾಡಬಹುದು ಚಿತ್ರಗಳನ್ನು ಬರೆದು ಅವುಗಳನ್ನು ವಿಕ್ರಯಿಸಿ ಧನಸಂಪಾದನೆ ಮಾಡಬಹುದು. . . ಸ್ತ್ರೀಯು ತನ್ನ ಸಹಾಯವನ್ನು ತಾನೇ ಮಾಡಿಕೊಳ್ಳುವುದಲ್ಲದೆ, ಕಲೆಯನ್ನಭಿವೃದ್ಧಿಗೊಳಿಸಿ ತನ್ನನ್ನಾಶ್ರಯಿಸಿದವರನ್ನು ಕಾಪಾಡಬಹುದು.

ಮುಸಲೋನಿಯೂ ಇಟಲಿಯ ವಿದ್ಯಾಭ್ಯಾಸವೂ.

ಎಂ ಜಿಮ್‌ರ್ ಜೆ ಪ್ಯಾಟ್ ಎಂಬವರು 'ಮುಸಲೋನಿ ಅಥವಾ ವೊಲಂಟೀರ್' ಎಂಬ ಲೇಖನದಲ್ಲಿ ಇಟಲಿಯ ವಿದ್ಯಾಭ್ಯಾಸದ ಕುರಿತು ಹೀಗೆ ಬರೆದಿರುವರು.

"ಒಂದು ದೊಡ್ಡ ಸಂಗ್ರಾಮಿಕ ಜನಾಂಗವಾಗಬೇಕೆಂದೇ ನಮ್ಮ ಇಚ್ಛೆ ಅಲ್ಲದೆ ನಾವು ಸಂಗ್ರಾಮಿಕರಾಗುತ್ತಾ ಬಂದಿದ್ದೇವೆ, ಮತ್ತು ಇನ್ನೂ ಸಂಗ್ರಾಮಿಕರಾಗಬೇಕು. ಇದಕ್ಕೆ ನಮ್ಮ ಜನಾಂಗದ, ರಾಷ್ಟ್ರೀಯ ಸಾಂಪತ್ತಿಕ ಮತ್ತು ದೈವಿಕ ಜೀವಮಾನಗಳು ಮಿಶ್ರವಾಗಿ ಒಂದು ಮಹಾ ಸಂಗ್ರಾಮಿಕ ಜೀವಮಾನವನ್ನೇ ನಾವು ಗಳಿಸಬೇಕು ಎಂದು ಮುಸಲೋನಿಯ ಮುಖ್ಯ ಉದ್ದೇಶ

ದೇಶವು ಮುಸಲೋನಿಯ ಬರೇ ಉದ್ದೇಶವಲ್ಲ. ಅದನ್ನು ಸಾಧಿಸಲು ಕ್ರಮಗಳು ಜ್ಯಾರಿಗೆ ಬಂದಿವೆ ಅವುಗಳು ಹೀಗಿವೆ —(೧) ಫೆಸಿಸ್ಟ ಸರಕಾರದಲ್ಲಿ ನಾಗರೀಕರಿಗೂ ಸಂಗ್ರಾಮಿಕರಿಗೂ ಏನು ಭೇದವಿರಬಾರದು

(೨) ಜನಾಂಗದ ವಿದ್ಯಾಭ್ಯಾಸವು ಸಂಗ್ರಾಮಿಕ ಕುಶಲತೆಗಳನ್ನು ಬೆಳೆಸುವಂತಹದಾಗಬೇಕು. ಸಂಗ್ರಾಮ ವಿದ್ಯೆಯೇ ಇದರ ಮುಖ್ಯ ಧ್ಯೇಯವಾಗಿರಬೇಕು. ವಿ ಗುವು ಪ್ರಾಯಕ್ಕೆ ಬಂದು ನಾಗರೀಕನಾಗುವ ವರೆಗೆ ತನ್ನ ಸ್ವದೇಶರಕ್ಷಣೆಗೆ ಉಪಯುಕ್ತವಾಗುವಂತೆ ಇದಕ್ಕೆ ಉತ್ಕೃಷ್ಟವಾದ ಸಂಗ್ರಾಮವಿದ್ಯೆಯನ್ನು ಬೋಧಿಸಬೇಕು

(೪) ಸಂಗ್ರಾಮ ವಿದ್ಯೆಯು ಮೂರ ವಿಧವಾಗಿರಬೇಕು ೧ ಪ್ರಾಥಮಿಕ ಇದರಲ್ಲಿ ಅಂಗಸಾಧನೆ ಮತ್ತು ಯುದ್ಧಕ್ರಮಗಳಲ್ಲಿ ಬೋಧನೆ ಕೊಡಬೇಕು. ಇಲ್ಲಿನ ತರಬೇತಿಯು ಹಿಂದಿನ ಮಟ್ಟಿಗೆ ಒಂದು ಧ್ಯಾಯವನ್ನು ಹೊಂದಿಕೊಂಡಿದೆ (೪) ಈ ವಿದ್ಯಾಲಯಗಳು ದೇಶದ ಸ್ಥಿರವಾದ ಒಂದು ದೊಡ್ಡ ಸಂಗ್ರಾಮಸಂಸ್ಥೆಯ ಕೆಳಗೆ ಕಾರ್ಯನಡೆಸಬೇಕು ಈ ಸಂಸ್ಥೆಯು ದೇಶದ ಯುದ್ಧದ ಇಲಾಖೆಯ ಅಧಿಕಾರದಲ್ಲಿರುವುದು ಹೀಗೆ ಕ್ರಮಗಳನ್ನು ಜ್ಯಾರಿಗೆ ತಂದು ಇಡೀ ಇಟಲಿಯನ್ನು ಸಂಗ್ರಾಮಕ್ಷೇತ್ರವನ್ನಾಗಿ ಮಾಡುವ ಏರ್ಪಾಡುಗಳು ಈಗ ಆಗುತ್ತಿವೆ

Hindu Weekly

ಸುಂದರವಾದ ಮುಖವು ಜೀವನದ ಒಂದು ವರವಾಗಿದೆ.

BY APPOINTMENT TO
H H THE MAHARAJA OF JHALAWAR STATE

ಲೌಸ್ ಬರ್ನಾಡನೆಂಬ ಅನುಭವಸಿದ್ಧನಾದ ರಸಾಯನಶಾಸ್ತ್ರಜ್ಞನಾದ ನಾನು ಈ ಮೂಲಕ ವ್ಯಕ್ತಪಡಿಸುವುದೇನೆಂದರೆ, ಅಫ್ಘಾನಿಸ್ತಾನ ಸ್ನೋ ಎಂಬ ಕ್ರೀಮನ್ನು ಪರೀಕ್ಷಿಸಿ ಅದರಲ್ಲಿ ಯಾವುದೆ ತರದ ವಿಷಕರ ಪದಾರ್ಥವಾಗಲಿ ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿಲ್ಲ ಈ ಕ್ರೀಮನ್ನು ಸರ್ವರೂ ತಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಸ್ತ್ರೀಯರು ತಮ್ಮ ಮುಖದ ಸೌಂದರ್ಯಕ್ಕಾಗಿ ಅತೀ ಪುರಾತನ ಕಾಲದಿಂದ ತರತರದ ಸಾಧನಗಳನ್ನೂ ಔಷಧಿಗಳನ್ನೂ ಉಪಯೋಗಿಸುತ್ತಿದ್ದರು ಆದರೆ ಇಷ್ಟರ ತನಕ ಸೌಂದರ್ಯಕ್ಕೋಸ್ಕರ ಕ್ರೀಮನ್ನು ಯಾರೂ ಕಂಡುಹಿಡಿದಿದ್ದಿಲ್ಲ

ಪಾಟಿನಾ ವಾಲಾ— ಎಂಬವರು ಗುಲಾಬಿಯ ಸತ್ವವನ್ನೂ ಮತ್ತು ಇನ್ನೂ ಕೆಲವು ವನಸ್ಪತಿಗಳನ್ನೂ ಒಟ್ಟುಗೂಡಿಸಿ ಒಂದು ಮಿಶ್ರಣವನ್ನು ವಿಜ್ಞಾನ ರೀತಿ ತಯಾರಿಸಿದ್ದಾರೆ ಈ ಕ್ರೀಮು ನಿಮ್ಮ ಚರ್ಮವನ್ನು ಮೆದುವಾಗಿರುವಂತೆಯೂ, ನುಣುಪಾಗುವಂತೆಯೂ ಮಾಡುವುದು ಈ ಅಫ್ಘಾನ ಸ್ನೋವು ಚಳಿಯಿಂದ ಇದ್ದ ಚರ್ಮಕ್ಕೆ ತೃಪ್ತಿಯನ್ನು ಕೊಡುವ ದಿವ್ಯ ಔಷಧಿಯಾಗಿದೆ ಇದು ಚರ್ಮದ ಬಿರುಕುಗಳನ್ನೂ ಕಪ್ಪು ಚಿಹ್ನೆಗಳನ್ನೂ ಅಳಿಸುವುದಲ್ಲದೆ, ಮುಡಿಸು ಮೊದಲಾದ ಚರ್ಮವ್ಯಾಧಿಗಳನ್ನು ನಾಶಮಾಡುವುದು ಮುಖಕ್ಕೆ ಗುಲಾಬಿವರ್ಣದ ಕಾಂತಿಯನ್ನು ಒದಗಿಸುವುದು.

AFGHAN Snow

ಇ. ಎಸ್. ಪಾಟನವಾಲಾ,
182-84, ಎ ಅಬ್ದುಲ್‌ರಹಿಮಾನ್ ಸ್ಟ್ರೀಟ್, ಬೊಂಬಾಯಿ 3.

ಅನುಕ್ರಮಣಿಕೆ.

[illegible]	೨
ಈ ವಾರದ ಯುದ್ಧವಾರ್ತೆಗಳು.	೩
ವಿನೋದ ವಿಚಾರ	೪
ಸತ್ರಿಕಾಪ್ರಪಂಚ	೬
ಈ ವಾರದ ಯುದ್ಧವಾರ್ತೆಗಳು	೫
ಕಾಂಗ್ರೆಸು ಕಾರ್ಯಕಲಾಪಗಳಿಗೆ ಸಹಾನುಭೂತಿಯನ್ನು ತೋರಿರಿ.	೮
ಜಪಾನಿಯಲ್ಲಿ ೩೦೦೦ ಜನರು ಮೃತರಾದರು.	೯
ಸ್ವಲೇಖ	
ಮಹಾತ್ಮಾಜಿಯವರೂ ಮಿಶನೆರಿಗಳೂ.	೧೦
ಸ್ಫುಟವಿಚಾರಗಳು .	೧೧
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೧
ಸಂಪಾದಕರ ಟಿಪ್ಪಣಿಪೆಟ್ಟಿಗೆ .	೧೨
ವಿವಿಧ ವಿಷಯಗಳು	೧೪
ನಮ್ಮ ಗುಂಡುರಾಯ	೧೫

ಸ್ವದೇಶಾಭಿಮಾನಿ.

ತಾ. ೧ನೇ ಶುಕ್ರವಾರ ನವಂಬರ '೩೪

ಮಹಾತ್ಮಾಜಿಯವರೂ ಮಿಶನೆರಿಗಳೂ.

ಮತಾಂತರಗೊಳಿಸುವ ಮರುಳನ್ನು ತೊರೆದು, ಮಿಶನೆರಿಗಳು ಜನಸೇವೆಗೆ ಮಾತ್ರ ಕೈಹಚ್ಚುವುದು ಶ್ರೇಯಸ್ಕರವಾಗಿದೆ ಎಂದು ಮಹಾತ್ಮಾಜಿಯವರು ಎಷ್ಟೋ ದಿನಗಳ ಹಿಂದೆ ಎಂದಿದ್ದರು. ಮತಾಂತರವೆಂಬುದು, ಒಂದು ಅಂಗಿಯನ್ನು ತೆಗೆದಿಟ್ಟು ಮತ್ತೊಂದನ್ನು ಹಾಕಿಕೊಳ್ಳುವಂತಲ್ಲ, ಮಾನಸಾಂತರವಾಗಿ, ವಿಶ್ವಾಸಗಳು ಮತ್ತೊಂದು ಧರ್ಮದಲ್ಲಿ ನೆಲೆನಿಂತು ಅದರಿಂದ ತಾನೆ ಮುಕ್ತಿಯು ತನಗೆ ಸಾಧ್ಯವೆಂದು ನಂಬುವವರು ಮಾತ್ರ ಮತಾಂತರ ಹೊಂದುವನಲ್ಲದೆ, ಹೊಟ್ಟೆಪಾಡಿಗಾಗಿ ಕೇವಲ ಲೌಕಿಕ ವಿಷಯಗಳಿಗೆ ಮನಸೋತು ಯಾವನೂ ಮತಾಂತರ ಹೊಂದಿದರೆ, ಅವನು ಹೆಸರು ಬದಲಾಯಿಸಿಕೊಂಡ ಅದೇ ಜೀವಿ ಎಂದೇ ಅರ್ಥ ಹಾಗೆ ಮತಾಂತರ ಹೊಂದಿದವನಾಗಲಿ, ಅವನನ್ನು ಸೇರಿಸಿಕೊಂಡ ಮತಾನುಯಾಯಿಗಳಾಗಲಿ ಕಿಂಚಿತ್ತೂ ಪ್ರಯೋಜನವಿಲ್ಲ ಅದರ ಬದಲಾಗಿ, ಕ್ರೈಸ್ತ ವೈದಿಕರು ಜನಸೇವಾ ಕಾರ್ಯ ತತ್ಪರರಾದರೆ, ಯೇಸುಸ್ವಾಮಿಯ ಬೋಧನೆಯನ್ನು ಪ್ರತ್ಯಕ್ಷ ಪ್ರಚಾರಕ್ಕೆ ತಂದು ಜನಾಂಗಕ್ಕೆ ಉಪಕಾರವನ್ನುಮಾಡುವರಾದ ಕಾರಣ, ಅವರ ಸೇವೆಯು ಸ್ಥಿರವಾಗಿ ನಿಲ್ಲುವುದು, ಜನಾಂಗವೂ ಸುಖಜೀವನದ ಕಡೆಗೆ ಸಾಗುವುದು. ಮತಾಂತರ ಹೊಂದುವುದರಿಂದಾದರೂ, ನೂತನ ಧರ್ಮ ವಿಶ್ವಾಸಗಳಲ್ಲಿ ಯಾವುದನ್ನು ತಾನೆ ಹಿಂದೂಧರ್ಮ ಬಲ್ಲವನು ಪುನಃ ಇತರ ಧರ್ಮಗಳಿಂದ ತಿಳಿದುಕೊಳ್ಳುವ ಅಗತ್ಯವಿದೆ? ಎಂಬಿತ್ಯಾದಿ ಕಾರಣಗಳನ್ನು ಕೊಟ್ಟು ಮಹಾತ್ಮಾಜಿಯವರು ಜನಸೇವೆಯೆ ಈಶಸೇವೆ ಎಂಬುದನ್ನು ಮಿಶನೆರಿಗಳಿಗೂ ನೆನಪಿಗೆ ತಂದು ಕೊಟ್ಟರು

ಇತರ ಧರ್ಮಾವಲಂಬಿಗಳಿಗೆ ಕ್ರೈಸ್ತ ಧರ್ಮವನ್ನು ಬೋಧಿಸಿ ತಮ್ಮೊಳಗೆ ಸೇರಿಸಿಕೊಳ್ಳಲು ಕ್ರೈಸ್ತಧರ್ಮವು ಕ್ರೈಸ್ತರಿಗೆ ಕಡ್ಡಾಯವಾಗಿ ವಿಧಿಸಿಯದೆ ಎಂದೇ ಅವರು ಹೇಳುತ್ತಿರುವರು. ಮಹಾತ್ಮಾಜಿಯವರ ಮಾತು ಕ್ರೈಸ್ತ ಮಿಶನೆರಿಗಳ ವಿಚಾರದಲ್ಲಿದ್ದುದರಿಂದ, ಅವರು ಈ ವಿಷಯದ ಪ್ರಕಟಣೆಯನ್ನು ಓದಿದಂದೇ ಚಕಿತರಾದರು ಸ್ವಧರ್ಮದ ಪ್ರಚಾರವನ್ನು ಮಾಡುವುದಕ್ಕೆ ಸರ್ವರಿಗೂ ಸೌಕರ್ಯವು ಸಮಾನವಾಗಿರಬೇಕು. ಅದರಂತೆ ಇವರಿಗೂ ಇರಲಿ. ಆದರೆ, ಧರ್ಮದ ಮಹತ್ವ ಮತ್ತು ಅದರ ಮಹಾಶಕ್ತಿ ಅಷ್ಟನ್ನೆ ಉಪಯೋಗಿಸಿ, ಮತಾಂತರಗೊಳಿಸುವುದು ತಪ್ಪಾಗದು. ಆದರೆ, ತನ್ನ ಧರ್ಮ ಸಾರುವುದಕ್ಕೆ ಸಾರ್ವಜನಿಕ ಖಜಾನೆಯ್ಮರಕಮನ್ನೂ ಹಿಂಬಲವನ್ನೂ ಪಡೆದು, ಮತಾಂತರ ಹೊಂದುವವರಿಗೆ ಹೆಚ್ಚಿನ ಸೌಕರ್ಯ ಒದಗಿಸಲು ಐಹಿಕ ವ್ಯಾಮೋಹಕ ವಿಷಯಗಳನ್ನು ಹಂಚುವ ಭರವಸೆಯನ್ನು ಕೊಟ್ಟು ಮತಾಂತರಗೊಳಿಸುವುದು ಉತ್ತಮವೆಂದು ಯಾವ ಧರ್ಮ ಪಂಥಗಳಲ್ಲೂ ಹೇಳಿದುದಿಲ್ಲ, ಇರಲಿ.

ಮದ್ರಾಸಿನಲ್ಲಿ ಚರ್ಚ್ ಒಫ್ ಇಂಗ್ಲೆಂಡ್ ಎಂಬ ಕ್ರೈಸ್ತ ಧರ್ಮಸ್ಥಾಪನೆಯ ಶತಾಬ್ದ್ಯುತ್ಸವವಾಯಿತು. ಆಗ ವರಿಷ್ಠ ಗುರುಗಳು ಉಪನ್ಯಾಸಮಾಡುತ್ತ,-ಜಗತ್ತು ಹೃದಯ ಪರಿವರ್ತನೆ ಹೊಂದಬೇಕಾಗಿದೆ. ಯುದ್ಧಭಾವಗಳು ಅಳಿದು ಶಾಂತಿಯು ನೆಲೆಗೊಳ್ಳಬೇಕಾದರೆ, ದೈವಿಕ ಶಕ್ತಿಯು ಮಾನವ ಹೃದಯದಲ್ಲಿ ಸುಳಿದಾಡಬೇಕು ಇದಕ್ಕಾಗಿ ಈ ಜನಾಂಗಗಳೆಲ್ಲ ಕ್ರಿಸ್ತಸ್ವಾಮಿಗೆ ಸಂಪೂರ್ಣವಾಗಿ ಶರಣಾಗುವ ಹಾಗೆಯೂ, ತಮ್ಮನ್ನು ಈಗ ಹೀನಾತ್ಮರನ್ನಾಗಿ ಮಾಡಿರುವ ಸ್ಥಿತಿಯಿಂದ ಉದ್ಧರಿಸಿಕೊಳ್ಳುವ ಹಾಗೆಯೂ ಪ್ರಯತ್ನಿಸುವ ಈ ಧರ್ಮಪಂಥವು ಕೇವಲ ಸೇವೆಮಾಡುತ್ತಿದ್ದರೆ ಸಾಕಾಗದು, ಗಾಂಧಿಯವರು ಈಗ ಶತಪ್ರಯತ್ನಮಾಡುತ್ತಿರುವ ಹರಿಜನೋದ್ಧಾರವು ಯಾವ ಚೇತನಕರವಾದ ತತ್ವಬೋಧನೆಯಿಂದ ಸಾಧ್ಯವಾದೀತೋ ಅದನ್ನು ನಾವು ಬೋಧಿಸಬಾರದೆಂದರೆ ಆದಾಗದು' ಎಂದು ಸಾರಿರುವರು ಆದರೆ,-

ಎರಡು ಸಾವಿರ ವರ್ಷಕಾಲವೂ ಕ್ರೈಸ್ತ ಜನಾಂಗಗಳು ಯಾವ ತತ್ವವನ್ನು ಅಂಗೀಕರಿಸಿರುವರೋ ಅದರಿಂದ ಇನ್ನೂ ಪಶುಜೀವನಕ್ಕೆ ಮಾತ್ರ ಸರಿಹೋಗಬಹುದಾದಂತಹ ಕ್ರೂರ ಭಾವನೆಗಳು ಅವರಿಂದ ಅಳಿದುಹೋಗಿಲ್ಲ ಆದುದರಿಂದ ಯುದ್ಧವನ್ನು ಎಲ್ಲ ಹೃದಯಗಳಿಂದ ಉತ್ಪಾಟನಮಾಡಬೇಕೆನ್ನುವ ಕ್ರೈಸ್ತ ಮಿಶನೆರಿಗಳು, ಅಗತ್ಯವಾಗಿಯೂ ಯುರೋಪಿನಲ್ಲಿ ತಮ್ಮ ಸಂಪೂರ್ಣ ಆತ್ಮಶಕ್ತಿಯನ್ನೂ,ಧರ್ಮಬಲವನ್ನೂ ಪ್ರಯೋಗಿಸಿ ಕೃತಕೃತ್ಯರಾಗಲು ಬೇಕಾದಷ್ಟು ಅವಕಾಶವು ಈಗಲೆ ಇದೆ ಇಟಲಿಯಲ್ಲಿಂದಲೇ ಯುದ್ಧದ ಭೇರಿಯು ಮೊಳಗಿದೆ, ಅದರ ರಾಜಧಾನಿಯಲ್ಲೇ ಕ್ರೈಸ್ತ ಧರ್ಮದ ಅದೊಂದು ಪೂಜ್ಯಪೀಠವು ಇದೆಯಲ್ಲ' ಧರ್ಮಗುರುಗಳು ಈ ಸಮಸ್ಯೆಗೇನು ಉತ್ತರ ಹೇಳಬಲ್ಲರು?

ಹರಿಜನರ ಉದ್ಧಾರವನ್ನು ಕುರಿತೂ ಮಾತಾಡುವಾಗ,-ಏಕದೇವನನ್ನು ಕುರಿತಾದ ಜ್ಞಾನವನ್ನು ಬೋಧಿಸಿ, ಆ ದೇವನೊಡನೆ, ಸಹಚರ್ಯವನ್ನೆ ಅನುಸರಿಸುವಂತೆ ತಿದ್ದಿ, ಹರಿಜನರನ್ನು ಉದ್ಧಾರಮಾಡಬಹುದಾಗಿ ಒಂದು ಅಮೂಲ್ಯ ಉಪಾಯವನ್ನು ಧರ್ಮಗುರುಗಳು ಸಾರಿದರು ಇದರಿಂದ ಈ ಏಕದೇವನ ಪರಿಚಯವು ಇತರ ಧರ್ಮಪಂಥಗಳಿಗೆ ಇಲ್ಲವೆಂಬ ಸೂಚನೆಯೂ ಹೊರಡುವುದಿಲ್ಲವೆ? ಕ್ರೈಸ್ತರು ಮಾತ್ರ ಏಕದೇವಾರಾಧಕರು, ಮುಸ್ಲಿಮರಲ್ಲವೇ? 'ಏಕಂ ಸತ್ ವಿಪ್ರಾಸ್ ಬಹುಧಾ ವದಂತಿ' ಎನ್ನುವ ಪುರಾತನ ವೇದಾಂತಿಗಳೂ ಅಲ್ಲವೆ?

ಜೀವನದ ದಾರಿಯು ಕಂಟಕಮಯವಾಗಿದೆ ಬೆಳಕನ್ನು ಬೀರುವ ಕರುಣಾಳುತನ ಪರಮಾತ್ಮನದು ಅವರವರಿಗೆ ಅಗತ್ಯವಾದಷ್ಟು ಅವರವರಿಗೆ ಹರಿಯುತ್ತಲೆ ಇದೆ. ಮುಕ್ತಿಪಥದ ಮೇಲೆ ಬೆಳಕನ್ನು ಬೀರುವ ಅಥವಾ ಅದಕ್ಕೊಂದು ನೂತನ ಗೂಢರಸ್ತೆಯನ್ನು ರಚಿಸುವ ಯಂತ್ರಶಕ್ತಿಯಾಗಲೀ ಮಂತ್ರಶಕ್ತಿಯಾಗಲೀ ಯಾವ ಧರ್ಮಪಂಥದವರಿಗೂ ಮೀಸಲಾಗಿ ಒಪ್ಪಿಸಲಾಗಿಲ್ಲ 'ಗುತ್ತಿ'ಗೆ ಕೊಡುವ ಕ್ರಮವು ಭಗವಂತನ ಸಾಮ್ರಾಜ್ಯದಲ್ಲಿಲ್ಲ, ಮುಕ್ತಿ ಎಂಬುದರಲ್ಲೇ 'ಗುತ್ತಿಗೆ' ವಿರೋಧವಷ್ಟೆ ಆದುದರಿಂದ, ಪ್ರತಿಯೊಬ್ಬ ಮುಮುಕ್ಷುವಿಗೆ ಸಹಾಯ ಮಾಡುವ ಸೇವಕರಾರೋ, ಅವರೇ ಭಗವಂತನ ಸಹಾಯಕ ಭಕ್ತರು, ಹೊರತು, ತಮ್ಮ ಕಡೆಗೆ ಅವರನ್ನು ಇತರ ಪ್ರಲೋಭನೆಗಳಿಂದ ಸೆಳೆವ ಪಂಥಬಾಹುರದ 'ಪಂಡರ' ಕುಲದವರಲ್ಲ.

ಸ್ಫುಟವಿಚಾರಗಳು.

ಸಂಗೀತದ ಮಹತ್ವ.

ಸಂಗೀತ ಕಲೆಯನ್ನು ಅಭ್ಯಾಸ ಮಾಡಿದವರೇ ಇಲ್ಲ, ಸಂಗೀತಕ್ಕೆ ಸಂಸ್ಕೃತಿಯಲ್ಲಿ ಸ್ಥಾನವೂ ಇಲ್ಲ; ಜೀವನದಲ್ಲಿ ಸಂಗೀತಕ್ಕೆ ಅವಕಾಶವೇ ಇಲ್ಲ-ಎಂದು ಯಾವ ಜನಾಂಗವು ತೋರಿಸಿಕೊಳ್ಳುತ್ತಿದೆಯೋ ಆ ಜನಾಂಗದಲ್ಲಿ ಚೇತನವಿಲ್ಲ, ಆತ್ಮವಿಲ್ಲ, ಉತ್ಸಾಹವೂ ಇರಲಾರದು ಇದೀ ಜನಾಂಗದ ಮನೋಭಾವನೆಗಳನ್ನು ತನಗೆ ಬೇಕಾದ ರೀತಿಯಲ್ಲಿ ತಿದ್ದಬಲ್ಲ ರಾಗಗಳನ್ನು ಆವುದೊಂದು ಜನಾಂಗವು ಅರಿತುಕೊಳ್ಳಲು ಪ್ರಯತ್ನಿಸುವುದಿಲ್ಲವಾದರೆ, ಅಥವಾ ತಿರಸ್ಕರಿಸುವುದಾದರೆ,ಅದೆಷ್ಟು ಶೋಚನೀಯವಾಗಿರುವ ಅವಸ್ಥೆ! ಎಲ್ಲೆಲ್ಲಿಯೂ ರಾಗ ದ್ವೇಷಗಳು ಹರಡಿ, ಜಗತ್ತಿನ ಶಾಂತಿ ಸಮಾಧಾನಗಳಿಗೆ ನೆಲೆಸಿಗದಿರುವಾಗ, ಕಿವಿಗೆ ಇಂಪನ್ನೂ ಮನಸ್ಸಿಗೆ ತಂಪನ್ನೂ ಒದಗಿಸುವ ಗಾಯನವು ಸರ್ವತ್ರವೂ ಅಗತ್ಯ ಹರಡಬೇಕಾಗಿದೆ ಕೃತಿಗಳ ಪುರಾತನತೆಯೊಡನೆ, ಜನಪದ ಸಂಗೀತವೂ ಮಾನ್ಯವಾಗಿರಬೇಕಾಗಿದೆ. ಸುಮ್ಮನೆ ಗಾಯನ ಕೇಳಿ ತಲೆದೂಗುವುದರಿಂದಲೇ ಸಾರ್ಥಕ್ಯವಿಲ್ಲ, ಅದನ್ನು ಅನುಭವಕ್ಕೆ ತಂದುಕೊಳ್ಳಬೇಕಾಗಿದ ಇದಕ್ಕೆ ಶಿಕ್ಷಣವು ಆವಶ್ಯಕವಾಗಿದೆ ಹಾಡುವುದೂ ಇಲ್ಲ ಹಾಡು ಕೇಳಿದರೆ ಬೇಸರ,-ಎಂತಾದಲ್ಲಿ ಅದು ಮನುಷ್ಯ ಪ್ರಕೃತಿಗೆ ಒಪ್ಪತಕ್ಕದಲ್ಲ, ಒರ್ಬರ ವರ್ಗಕ್ಕೂ ಅಲ್ಲ, ಎಂದೇ ಅಖಿಲಭಾರತದ ಸಂಗೀತ ಪರಿಷತ್ತಿನ ಭಾಷಣಗಳ ಮರ್ಮ

ಸತ್ಯಾಗ್ರಹ,-ಇಂಗ್ಲೆಂಡಿನಲ್ಲಿ!

ಕಲ್ಲಿದ್ದಲು ಗಣಿಗಳಲ್ಲಿ ಕೆಲಸಮಾಡುವ ಕೂಲಿಗಳುಸದ್ಯದಲ್ಲೇ ಮುಷ್ಕರಹಿಡಿಯುವರಂತೆ ಎಂದು ವಾರ್ತೆ ಈಗ ಅವರಿಗೆ ಸಿಗುವ ಮಜೂರಿಯನ್ನು ದಿನಕ್ಕೆ ಎರಡು ಶಿಲಿಂಗು (ಒಂದು ರೂಪಾಯಿ)ಯಷ್ಟು ಹೆಚ್ಚಿಗೆ ಕೊಡಿಸಿ ಕೊಡದಿದ್ದಲ್ಲಿ, ಗಣಿಗಳಲ್ಲಿ ಕೆಲಸಕ್ಕಿಳಿದವರು ಅಲ್ಲೇ ಮುಷ್ಕರಹಿಡಿದು ಮೇಲೆ ಬಾರದೆ, ಅವರ ಬಡ್ತಿ ಸಿಗುವ ತನಕ ಉಪವಾಸಮಾಡುವರಂತೆ ಇವರ ಬೆಂಬಲಕ್ಕೆ ಲೇಬರ್ ಪಕ್ಷವಿದೆ, ಪಾರ್ಲಿಮೆಂಟಿನ ಲೇಬರ್ ಪಕ್ಷದ ಮೆಂಬರರೂ ಇದ್ದಾರೆ ಇನ್ನು ಚಳಿಗಾಲ ತಾನೆ ಪ್ರತಿ ಮನೆಯಲಲ್ಲಿ ಇದ್ದಲು ಕೆಂಡಗಳ ಸೆಕೆಯಿರದೆ ಚಳಿಗಾಲ ಕಳೆವುದು ಕಷ್ಟ ಬ್ರಿಟಿಷ ವಿಮಾನಗಳಿಗೆ ಪೆಟ್ರೋಲನ್ನು, ಇತ್ತೀಚೆಗೆ ಇದ್ದಲಿನಿಂದಲೆ ಒದಗಿಸಿಕೊಳ್ಳಲುಕಷ್ಟ್ಯಾವಧಿ ಪವನು ವ್ಯಯಿಸಿ ನಿರ್ಮಿಸಿದ ಕಾರ್ಖಾನೆಯಿಂದ ಪಡೆಯುತ್ತಿರುವರು ಕಲ್ಲಿದ್ದಲು ಸಿಗಲಾರದಾದಲ್ಲಿ ಈ ಕಾರ್ಖಾನೆಯೂ ವಿಮಾನಗಳೂ ತಟಸ್ಥವಾಗುವುವು ಇಟಲಿಗೆ ಇದ್ದಲನ್ನು ರಫ್ತುಮಾಡದಂತೆಯೂ ನಿಯಮವಾಗಿದೆಯಾದ ಕಾರಣ, ಇದ್ದಲು ವ್ಯಾಪಾರವು ಕುಂದಿರುವ ಕಾರಣ, ಕೂಲಿಯವರಿಗೆ ಹೆಚ್ಚಿಗೆ ಮಜೂರಿಯನ್ನು ಕೊಡಲೂ ಬರುವುದಿಲ್ಲ ಎಂದು ಗನಿಗಾರರ ಆಕ್ಷೇಪ ಈಗಲೆ ೩೦,೦೦೦ ಕೂಲಿಗಳು ಮುಷ್ಕರ ಹಿಡಿದಿರುವರು ಹಡಗು ವ್ಯಾಪಾರವು ಕುಂದಿದೆ, ಆದರೂ ಈ ಹಡಗುಗಳಿಗಾದರೂ ಇನ್ನು ಇದ್ದಲನ್ನು ಅಧಿಕ ದರದಲ್ಲಿ ಮಾರಬೇಕಾಗಿ ಬಂದರೆ, ಅವರ ಗತಿಗೆಡುವುದು, ಇಷ್ಟರಲ್ಲೇ ಪಾರ್ಲಿಮೆಂಟಿಗೆ ಚುನಾವಣೆಯೂ ನಡೆಯುತ್ತಿದೆ ಹೀಗಿರುವಾಗ ಇದೊಂದು ಹೊಸ ಮುಷ್ಕರದಿಂದ ಸಂಕಟಕರವಾದ ಪರಿಣಾಮಗಳುಂಟಾಗುವುವು

ಅಂಬೇಡ್ಕರರ ಕೇಂಕಾರವು

ನಾನಾ ಕಡೆಗಳಲ್ಲಿ ನಾನಾ ರೀತಿಯಾಗಿ ಪ್ರತಿಧ್ವನಿಗಳನ್ನು ಹೊರಡಿಸಿಯದೆ ಕ್ರೈಸ್ತ ಮಿಶನೆರಿಗಳೂ, ಮಹಮ್ಮದೀಯರೂ ಬೌದ್ಧರೂ, ಆರ್ಯಸಮಾಜಿಕರೂ, ಮುಂತಾಗಿ ಡಾ। ಕುರ್ತಕೋಟಿಯರ ವರೆಗೆ ಅವರನ್ನು ಅವರ ಹಿಂಬಾಲಿಕರನ್ನೂ ಕೂಡಲೆ ಮತಾಂತರಗೊಳಿಸ್ಸಿ ಸರ್ವಸಾಮಾನ್ಯವಾಗಿ ಏಕತೆಹ ಭೇದದೃಷ್ಟಿಯೂ ದೃಷ್ಟಿ ಭೇದವೂ ಇಲ್ಲದೆ ಉದ್ಧಾರ ಮಾಡುವುದಕ್ಕೆ ಸಿದ್ಧ. ಮುಖವೆಂದರೆ, ಅಂಬೇಡ್ಕರರಂತಹ ಶಿಕ್ಷಿತರೂ ಶಿಷ್ಯಮಂಡಲದಲ್ಲಿ ಸುಪರಿಚಿತರೂ ಯಾವ ಮತವನ್ನು ಸೇರಿದರೂ ಒಂದೇ ಆದರೆ ಯಾವ ಹೆಸರನ್ನಿತ್ತರೂ ಗುಲಾಬಿಯು ಗುಲಾಬಿಯೇ ಆಗಿ ಪರಿಚಿತವಾಗುವ ಹಾಗೆ, ಹೆಸರು ಬದಲಾದ ಕೂಡಲೆ ಸಮನ್ವಯ ಸಮಾನತೆಗಳು ಎಲ್ಲ ಹರಿಜನರಿಗೂ ಸಿಗಲಾರವೆಂಬುದನ್ನು ಡಾಕ್ಟರರೂ ಹರಿಜನರೂ ಬಲ್ಲರು ಒಂದು ವೇಳೆ ಇವರು ಮತಾಂತರ ಹೊಂದಿ ಮುಕ್ತರೆನಿಸಿಕೊಂಡರೂ, ಮತಾಂತರ ಹೊಂದದ ತಮ್ಮ ಬಂಧುಗಳಿಗಾಗಿ ಯಾವ ಬಗೆಯಲ್ಲಿ ತಾನೆ ಸಹಾಯಮಾಡ ಬಲ್ಲರಂತೆ? ಈಗಲೆ ಮತಾಂತರ ಹೊಂದಿಯೂ ಎಂದಿನಂತೆ ಕೆಳತರಗತಿಯೆಂದು ಹೊಸ ಮತದವರಿಂದಲೂ ನೊಂದಿರುವ ಹರಿಜನರನ್ನು ಇವರು ಕಂಡಿಲ್ಲವೆ? ಬೇಕಾದುದು, ಅಧಿಕ ಸಂಖ್ಯಾಕರು ತನ್ನ ಅಭಿಪ್ರಾಯವನ್ನು ಅಂಗೀಕರಿಸುವಂತೆ ಮಾಡಲು ಅವರ ಹೃದಯವನ್ನು ವಿಚಲನಗೊಳಿಸುವ ಪ್ರಯತ್ನ ಅದು ಸಿಡಿಗುಂಡಿನಿಂದ ಆಗತಕ್ಕುದಲ್ಲ, ನಿಧಾನವಾದ ವಾತ್ಸಲ್ಯ ಪೂರ್ಣಯತ್ನದಿಂದ

ಮದ್ರಾಸಿನ ಕ್ರೈಸ್ತ ದೇವಾಲಯಗಳ ಕೌನ್ಸಿಲು

ಕಳೆದ ವಾರ ಚೆಂಗಲ್ಪೇಟೆಯಲ್ಲಿ ಸೇರಿದಾಗ ಎರಡು ಪ್ರಾಮುಖ್ಯ ನಿರ್ಣಯಗಳನ್ನು ಮಂಜೂರು ಮಾಡಿತು ಕ್ರೈಸ್ತರು ಎಂದಾದರೂ ವೋಟುಕೊಡುವ ಸಂದರ್ಭವುಂಟಾದಲ್ಲಿ ಮದ್ಯಪಾನವು ಸಂಪೂರ್ಣವಾಗಿಯೂ ನಿರ್ಮೂಲನಹೊಂದಲು ಪ್ರಯತ್ನ ಮಾಡತಕ್ಕವರಿಗೇ ವೋಟು ಕೊಡಬೇಕಾಗಿಯೂ ಈ ಉದ್ದೇಶಕ್ಕಾಗಿ ಎಂತಹ ಪ್ರಬಲ ಹೋರಾಟಗಳಾಗಬೇಕೋ ಅವನ್ನೆಲ್ಲ ಮಾಡುತ್ತ ನಮ್ಮ ಪ್ರಾಂತ್ಯದಲ್ಲಿ ಮದ್ಯಪಾನವೇ ಇರದಂತಾಗಬೇಕೆಂದೂ ನಿರ್ಣಯವಾಯಿತು. ಸರಕಾರವು, ಈ ಪಾನ ನಿಷೇಧದ ಕೂಡಲೆ, ಎಷ್ಟು ಕಂದಾಯ ಕುಂದುವುದು, ಅದನ್ನು ತುಂಬಿಸುವುದಕ್ಕೆ ಬೇರೆ ತೆರಿಗೆ ಹೊರಿಸಬೇಕಾಗವುದು ಎಂದೆನ್ನುವ ನೆವವನ್ನು ನೆನಪಿಗೆ ತಂದುಕೊಂಡು ಲೆಜಿಸ್ಲೇಟಿವ್ ಕೌನ್ಸಿಲು ಸದಸ್ಯರು ಈ ಬಗೆಯ ನಷ್ಟಭರ್ತಿಗೆ ಅಗತ್ಯವಾದ ಮೊಬಲಗನ್ನು ಹೇಗೆ ಒದಗಿಸಲಾಗುವುದೆಂಬುದನ್ನು ಸೂಚಿಸಬೇಕೆಂದೂ ಸೂಚನೆಯಾಯಿತು ನೋಡಿ, ಮುಂಗಾರು ಮೊದಲಾದವು ಸಮಾಜದಲ್ಲಿ ಹೆಚ್ಚಾಗಿರುವುದನ್ನು ಅಣಗಿಸಬೇಕೆಂದೂ, ವಿದ್ಯಾಭ್ಯಾಸಕ್ಕಾಗಿಯೂ ವಿವಾಹಗಳಿಗಾಗಿಯೂ ವಿಪರೀತ ಖರ್ಚನ್ನು ಮಾಡುವ ರೂಢಿಯನ್ನು ತಡೆದು, ಇವೆರಡು ನೆವಗಳಿಂದ ಸಾಲ ಎತ್ತುವುದನ್ನು ನಿಲ್ಲಿಸಲೇಬೇಕೆಂದೂ, ವರದಕ್ಷಿಣೆಯ ಪದ್ಧತಿಯನ್ನು ಕೀಳಬೇಕೆಂದೂ ನಿರ್ಧಾರಗಳಾಗಿವೆ ಆದರೆ ಪರಿಣಾಮಗಳು?—ನೋಡಬೇಕು

ಹಳ್ಳೀ ಜನರಿಗೆ ವಿನಂತಿ

ಹೊಸ ತಿದ್ದುಪಾಟುಗಳ ಪರಿಣಾಮವಾಗಿ ಹಳ್ಳೀ ನಿವಾಸಿಕರಲ್ಲಿ ಬಹಳ ಮಂದಿಗೆ ವೋಟು ಕೊಡುವ ಅಧಿಕಾರವು ದೊರೆವುದು ಒಂದೊಂದು ವೋಟು ಎಂಬುದು ಜನಾಂಗದ ಹಾಗೂ ದೇಶದ ಸ್ವರಾಜ್ಯ ಮಂದಿರ ನಿರ್ಮಾಣಕ್ಕೆ ಒದಗುವ ಇಟ್ಟಿಗೆಯಂತಿದೆ ನೂರರಲ್ಲಿ ತೊಂಬತ್ತು ಮಂದಿ ಹಳ್ಳಿಗಳಲ್ಲಿ ದುಡಿದು ತೆರಿಗೆ ತೆರುತ್ತಲಿದ್ದರೂ, ಏಳು ಲಕ್ಷ ಹಳ್ಳಿಗಳ ಉತ್ಪನ್ನವನ್ನು ಬರೇ ಇನ್ನೂರು ನಗರಗಳೂ ನಗರವಾಸಿಗಳೂ ಅನುಭವಿಸಿ ಬರುವ ಕಾರಣ ಗ್ರಾಮಾಭ್ಯುದಯದ ಕಡೆಗೆ ಇದು ವರೆಗೆ ದೃಷ್ಟಿ ಹರಿದುದು ಕಡಿಮೆ ಇನ್ನಾದರೂ, ಹಳ್ಳಿಗಳ ಉದ್ಧಾರ ಪ್ರಯತ್ನಗಳು ಅಗತ್ಯವಾಗಿಯೂ ಆಗಬೇಕಾಗಿವೆ ಅದಕ್ಕೆ ಇವೇ ಹಳ್ಳಿಗರ ವೋಟುಗಳನ್ನು ಪಡೆದು ಕೌನ್ಸಿಲು ಬೋರ್ಡು ಮೊದಲಾದುವುಗಳಲ್ಲಿ ಸದಸ್ಯರಾಗುವವರೇ ಕಾರಣರಾಗುವರು ಇತರ ಯಾವ ಸಂಬಂಧ ಸ್ನೇಹ, ಹಂಗು ಮೊದಲಾದುವನ್ನು ಗಣನೆಗೆ ತಂದುಕೊಳ್ಳದೆ, ಗ್ರಾಮೋದ್ಧಾರಕ್ಕಾಗಿ ಖಂಡಿತ ಹೋರಾಡತಕ್ಕವರನ್ನೇ ವೋಟು ಪಡೆದ ಮೇಲೂ ಹಳ್ಳಿಗಳಲ್ಲಿ ಮರೆಯಲಾರದವರನ್ನೆ ಗ್ರಾಮಸ್ಥರು ಹುಡುಕಿಕೊಂಡು ವೋಟುಗಳನ್ನು ಕೊಡುವುದೇ ಮಾತ್ರ ಅವರ ಸಂರಕ್ಷಣೋಪಾಯವೂ ನ್ಯಾಯವೂ ಆಗಿದೆ.

ಮಂಗಳೂರು.

ಮಂಗಳೂರಿನ ಗೌಡಸಾರಸ್ವತ ಬ್ರಾಹ್ಮಣ ಜನ್ಮ ಕಮ್ಮತ್ತಿಗೆ ಸಂಬಂಧಪಟ್ಟ ಶ್ರೀ ವಿಠ್ಠಲ ರುಕುಮಾಯಿ ದೇವಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ವಿಠ್ಠಲ ಭಜನ ಮಂಡಳಿಯವರು ಇದೇ ಯುವ ಸಂವತ್ಸರದ ಕಾರ್ತಿಕ ಶುದ್ಧ ೫ಯು ಶುಕ್ರವಾರ (ತಾ. ೯-೧೧-೩೪ನೇ) ಪ್ರಾತಃಕಾಲ ಘಂಟೆ ೬.೩೦ಕ್ಕೆ ಭಜನ ಸಪ್ತಾಹವನ್ನು ಪ್ರಾರಂಭಿಸುವುದೆಂತಲೂ ಅದೇ ಕಾರ್ತಿಕ ಶುದ್ಧ ೧೨ಯು ಶುಕ್ರವಾರ (ತಾ. ೧೬-೧೧-೩೪ನೇ) ಪ್ರಾತಃಕಾಲ ಘಂಟೆ ೬.೩೦ಕ್ಕೆ ಭಜನ ಸಪ್ತಾಹದ ಮಂಗಲಾಚರಣೆಯ ಅವಭೃತಸ್ನಾನ ಮಾಡುವುದೆಂತ ನಿಶ್ಚಯಿಸಿದ್ದಾರೆ. ಶ್ರೀ ಗುರುದೇವತಾನುಗ್ರಹದಿಂದ ಆವರಿಸತಕ್ಕ ಈ ಭಜನ ಸಪ್ತಾಹಕ್ಕೆ ತಾವು ತಮ್ಮಲ್ಲಿಯ ಸಂತಮಂಡಳಿಯೊಡನೆ ಇಷ್ಟಮಿತ್ರರೊಡಗೂಡಿ ಬಂದು ಈ ಸಪ್ತಾಹವನ್ನು ಯಥಾಸಾಂಗ್ಯವಾಗಿ ನಡಸಿಕೊಟ್ಟು ಶ್ರೀ ದೇವರ ಗಂಧಪ್ರಸಾದ ವಗೈರೆ ಯಥೋಚಿತಾದರಗಳನ್ನು ಸ್ವೀಕರಿಸಿ ಶ್ರೀ ದೇವಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಮಂಗಳೂರು ಶ್ರೀ ವಿಠ್ಠಲ ಭಜನ ಮಂಡಳಿಯವರ ಪರವಾಗಿ ಯಮ್ ರಾಮಕೃಷ್ಣ ಕಾಮತ್, ಮತ್ತು ಮಹಲ್ ವೆಂಕಟ್ರಾಯ ನಾಯಕರವರು ಆಪೇಕ್ಷಿಸುತ್ತಾರೆ.

ಇದೇ ಒಕ್ಟೋಬರ ತಿಂಗಳ ತಾರೀಕು ೨೭ನೇ ಆದಿತ್ಯವಾರ ಸಾಯಂಕಾಲ ೪.೩೦ ಗಂಟೆಗೆ ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಋಷಿ ದಯಾನಂದ ಸರಸ್ವತಿಯವರ ಬಲಿದಾನ ದಿನಾಚರಣೆಯು ಡಿಸ್ಟ್ರಿಕ್ಟ್ ಬೋರ್ಡ್ ಎಜ್ಯುಕೇಶನಲ್ ಆಫೀಸರರಾದ ಶ್ರೀಮಾನ್ ಆರ್ ವೆಂಕಯ್ಯಗಾರು, ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸ್ವಾಮಿಜಿಯವರ ಚರಿತ್ರೆಯ ವಿಷಯವಾಗಿ ಕೆಲವು ಮಹನೀಯರ ಭಾಷಣಗಳೂ ಇದ್ದುವು.

ಸರ್ಪ ಕಡಿತಕ್ಕೆ ಮದ್ದು ಕೊಡಲು ಒಕ್ಟೋಬರ ತಾ ೧೭ರಿಂದ ದ ಕ. ಜಿಲ್ಲಾ ಬೋರ್ಡಿನ ಅಧಿಕಾರಿಗಳು ಮಿ| ಕೆ ಕುಂಞರಾಮನ್ ಎಂಬವರನ್ನು ನೇಮಿಸಿರುವರಾಗಿ ತಿಳಿದು ಬಂದಿದೆ. ಪ್ರಸ್ತುತ ಕಾಸರಗೋಡಿನಲ್ಲಿ ಇವರು ಉಳಕೊಂಡಿರುತ್ತಾರೆ. ಜಿಲ್ಲೆಯ ಯಾವ ಮನುಷ್ಯನೂ ಬಿನೊಂದು ಫೀಸು ಇಲ್ಲದೆ ಸರ್ಪ ಕಡಿತಕ್ಕೆ ಇವರಿಂದ ಮದ್ದು ಮಾಡಿಸಬಹುದೆಂದು ದ ಕ ಜಿಲ್ಲಾ ಬೋರ್ಡು ಅಧಿಕಾರಿಗಳು ತಿಳಿಯಪಡಿಸಿದ್ದಾರೆ.

ತಾರೀಕು ೨೮-೧೦-೩೪ನೇ ಆದಿತ್ಯವಾರ ಸಂಜೆ ಜರಗಿದ ದ ಕ ಜಿಲ್ಲಾ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿ ಮೀಟಿಂಗಿನಲ್ಲಿ ಈ ಕೆಳಗಿನ ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಈ ಪಾರ್ಟಿಯ ಮೆಂಬರರಾದ ಶ್ರೀ| ರಂಗರಾವ ಕಲ್ಯಾಣಪುರರ ವರ್ತನೆಯು ಪಾರ್ಟಿಯ ಹಿತದೃಷ್ಟಿಯಿಂದ ಅನಾಹುತಕಾರಿಯೆಂದು ತಿಳಿದುಬರುವುದರಿಂದ ಅವರನ್ನು ಈ ಪಾರ್ಟಿಯಿಂದ ವಿಸರ್ಜಿಸಲ್ಪಟ್ಟಿದೆ.

ತಾ ೨೬-೧೦-೩೪ನೇ ದಿವಸ ಜಿಲ್ಲಾ ಕಾಂಗ್ರೆಸ್ ಸಿವಿಕ್ ಬೋರ್ಡಿನ ಮೀಟಿಂಗ್

ಶ್ರೀ ಕೋಟಿ ರಾಮಕೃಷ್ಣ ಕಾರಂತ—ಅಧ್ಯಕ್ಷರು

ಈ ಕೆಳಗಿನ ಉಮೇದ್ವಾರರುಗಳನ್ನು ಆಯಾಯ ಸರ್ಕಲುಗಳಿಗೆ ಕಾಂಗ್ರೆಸ್ ಉಮೇದ್ವಾರರಾಗಿ ಆರಿಸಲಾಯಿತು.

೧. ಪುತ್ತೂರು ತಾಲೂಕು

ಎ ವಿಟ್ಲ ಸರ್ಕಲ್—ರಾ| ಯಂ ಸದಾಶಿವ ರಾವ್

ಬಿ. ಉಪ್ಪಿನಂಗಡಿ ಸರ್ಕಲ್—ರಾ| ಬಿ. ವೆಂಕಪ್ಪ ರೈ

೨. ಕಾಸರಗೋಡು ತಾಲೂಕು

ಕಾಸರಗೋಡು—ರಾ| ವಿಠಲ ಭಂಡಾರಿ

ಒಕ್ಟೋಬರ ತಾ ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೬ ಮರಣಗಳೂ ೩೬ ಜನನಗಳೂ ಆಗಿವೆಯೆಂದು ಹೆಲ್ತ್ ಆಫೀಸರರ ವರದಿಯಿಂದ ತಿಳಿದುಬಂದಿದೆ.

ಮಂಗಳೂರು ಮುನಿಸಿಪಾಲಿಟಿಯಲ್ಲಿ ನವಂಬರ ತಿಂಗಳ ದೀಪ ಉರಿಯುವಿಕೆಯ ಕ್ರಮವು ಕೆಳಗೆ ಕಾಣಿಸಿದ ರೀತಿಯಲ್ಲಿರುವುದು.

ಗೇಸ್ ದೀಪಗಳನ್ನು ನವಂಬರ ತಾ. ೧, ೨, ೩, ೧೬ ರಿಂದ ೩೦ರ ತನಕ ಸಾಯಂಕಾಲ ೬ ಗಂಟೆಯ ಒಳಗೆ ಉರಿಸಿ ರಾತ್ರಿ ೧೧—೧೧ ಗಂಟೆಯೊಳಗೆ ನಂದಿಸಲ್ಪಡುವುವು. ಸಿಮ್ಸ್ ಗೇಸ್ ದೀಪಗಳನ್ನು ಸಾಯಂಕಾಲ ೬ ಗಂಟೆಗೆ ಉರಿಸಿ ಬೆಳಿಗ್ಗೆ ೪ ಗಂಟೆಗೆ ನಂದಿಸುವರು. ಹೊಸ ಮಾರ್ಕೆಟಿನ ಬಳಿ ಮಾತ್ರ ದೀಪವನ್ನು ಸಾಯಂಕಾಲ ೬ ಗಂಟೆಗೆ ಉರಿಸಿ ರಾತ್ರಿ ೧೦ ಗಂಟೆಗೆ ನೊಂದಿಸುವರು. ಗೇಸ್ ದೀಪಗಳ ಬಳಿ ಇರುವ ಚಿಮಣಿ ಎಣ್ಣೆಯ ದೀಪಗಳು ರಾತ್ರಿ ೧೦ ಗಂಟೆಯ ನಂತರ ಉರಿಸಲ್ಪಡುವುವು. ಇಲೆಕ್ಟ್ರಿಕ್ ದೀಪಗಳು ಸಾಯಂಕಾಲ ಗಂಟೆ ೬ಕ್ಕೆ ಹೊತ್ತಿಸಲ್ಪಟ್ಟು ರಾತ್ರಿ ೧೧—೩೦ ಗಂಟೆಯೊಳಗೆ ನಂದಿಸಲ್ಪಡುವುವು.

ತಾಲೂಕುಗಳಿಂದ.

ಬಂಟವಾಳ—ಸೆಂಟ್ರಲ್ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಬಂಟವಾಳ ಬೋರ್ಡು ಹುಡುಗರ ಎಲಿಮೆಂಟರಿ ಶಾಲೆಯಲ್ಲಿ ವಕೀಲ ಶಾಂತರಾಮರವರ ಅಧ್ಯಕ್ಷತೆಯಲ್ಲಿ ಜರಗಿತು. ಭಾಷಣ ಪಾಠ ಮುಂತಾದುವುಗಳು ಯಥಾ ರೀತಿಯಲ್ಲಿ ನಡೆದುವು.

ಆರೋಗ್ಯವೂ ಮತ್ತು ಶಿಶು ಸಪ್ತಾಹವು ಇಲ್ಲಿಯ ಟೆಂಪಲ್ ಹೈ ಸ್ಕೂಲಿನ ಮುಖ್ಯ ಉಪಾಧ್ಯಾಯರಾದ ರಾ| ಕೇಶವ ಮಂಗೇಶರಾವ್ ಬಿ, ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿಯ ಜನಪ್ರೀತರಾದ ಎಲ್ ಎಮ್. ಆಸ್ಪತ್ರೆಯ ಡಾಕ್ಟರ್ ನೇಮಿರಾಜ ಅಳ್ವರವರು ಗರ್ಭಿಣಿಯವರು ನಡಕೊಳ್ಳಬೇಕಾದ ರೀತಿ, ಹೆರಿಗೆಯ ಕಾಲದಲ್ಲಿ ನಡಕೊಳ್ಳತಕ್ಕ ಕ್ರಮ, ಶಿಶುಗಳನ್ನು ರಕ್ಷಿಸುವ ಕ್ರಮ, ಮುಂತಾದುವುಗಳ ಕುರಿತು ಜನರಿಗೆ ಮನದಟ್ಟಾಗುವಂತೆ ದೀರ್ಘ ಭಾಷಣ ಕೊಟ್ಟರು. ಎಮ್ ಜಿ. ನಾಗಪ್ಪರು ಕ್ಷಯ ರೋಗದ ಕುರಿತು ಒಂದು ಭಾಷಣ ಕೊಟ್ಟರು. ಬೋರ್ಡು ಹುಡುಗಿಯರ ಶಾಲಾ ಹೆಮ್ಮಕ್ಕಳ ಕೋಲಾಟ, ಲೇಜಿಮ್ ಆಟಗಳು ನಡೆದುವು. ನಂತರ ಮಾಯಲೇಂದ್ರ ದೇವಾವನೆಯಾಗಿ ಸಭೆ ಆಗಲಿತು.

ಇಲ್ಲಿ ಒಂದು ನರ್ಸರಿ ಶಾಲೆಯನ್ನು ದೇವಸ್ಥಾನದ ಪಡ್ಡದಲ್ಲಿ ತೆರೆದಿರುವರು.

ಪಾಣೆಮಂಗಳೂರು—ಇಲ್ಲಿ ಒಕ್ಟೋಬರ ತಿಂಗಳೆಂಬರು ಎಸ್ ವಿ ಎಸ ಹಾಯರ್ ಎಲಿಮೆಂಟರಿ ಶಾಲಾ ಮಕ್ಕಳಿಗೆ ತಿಂಗಳ ಹಬ್ಬದಂತೆ ನಡಿಸಿದರು. ಅದಿ ಭಾಗದಲ್ಲಿ ಶಾರದಾ ಪೂಜಾ ಮಹೋತ್ಸವ, ಮಧ್ಯ ಭಾಗದಲ್ಲಿ ಮಕ್ಕಳು ಮದರಾಸು ಗವರ್ನರ ದೊರೆಗಳವರಿಗೆ ಆಶೀರ್ವಾದ ಮಾಡಿ ಪ್ರಸಂಗ ಮಾಡಿ ಹೂಮಾಲೆ ಹಾಕಿ ಸತ್ಕರಿಸುವ ವಿನೋದ ತಿಂಗಳಾಂತ್ಯದಲ್ಲಿ ಮಂಗಳೂರು ಡಿವಿಜನ್ ಡಿಪ್ಯುಟಿ ಕಲೆಕ್ಟರರವರ ಅಧ್ಯಕ್ಷತೆಯಲ್ಲಿ ಆರೋಗ್ಯವಾದ ವ ಶಿಶು ಸಪ್ತಾಹ. ಈ ಸಮಯದಲ್ಲಿ ಇಲ್ಲಿಯ ವೀರ ವಿಠಲ ಬಾಲ ವೀರದಳದವರ ಆಟಗಳನ್ನು ಮಾಡಿ ತೋರಿಸಿದರು. ಹಾಗೆಯೇ ಲೇಜಿಮ್ ಆಟವಾಡಿ ವಿನೋದಪಡಿಸಿದರು. ಕ್ಷಯ ರೋಗ ಕುಷ್ಠ ರೋಗ ಸಿಡುಬು ಮಲೇರಿಯಾ ಕಾಲರಾ ಪ್ಲೇಗು ನಾಯಿಹುಚ್ಚು ಮುಂತಾದ ವ್ಯಾಧಿಗಳ ಕುರಿತು ಬಾಲಭಟರು ಚಲೋ ಭಾಷಣಗಳನ್ನು ಕೊಟ್ಟರು. ನಂತರ ಧನ್ವಂತರಿಗೂ ಮುಂತಾದವರಿಗೂ ಅದರ ಸಂವಾದವು ನಡೆಯಿತು. ಅಧ್ಯಕ್ಷರು ಶಾಲಾ ಕೆಲಸವು ಉತ್ತಮ ರೀತಿಯಲ್ಲಿ ನಡೆಯುವುದನ್ನು ನೋಡಿ ಸಂತೋಷಪಟ್ಟು ತೆರಳಿದರು. ನಂತರ ಮಾಯಾಲೇಂದ್ರ ದೇವಾವನೆಯು ನಡೆಯಿತು.

ಬೈಲು—ಕೋಟಿ ಕಂದಾವರ ಒಕ್ಕಲಿಗರ ಸಹಕಾರ ಸಮಿತಿಯ ಮಾಸಿಕ ಸಭೆಯು ಇದೇ ತಾ ೨೭-೧೦-೩೪ನೇ ಆದಿತ್ಯವಾರ ನೆರೆಯಿತು. ಸಮಿತಿಯ ಕಾರ್ಯದರ್ಶಿ ಶ್ರೀ| ವಿಠಲ ಶೆಟ್ಟಿಯವರು ಒಕ್ಕಲಿಗರು ಹಿಂದುಸ್ಥಾನದ ಜೀವಾಳ ಹೇಗೆ ಎಂಬುದನ್ನು ವಿವರಿಸಿ ಸಂಘದ ನಿಯಮಗಳನ್ನು ಪಾಲಿಸುವ ಅವಶ್ಯಕತೆಯ ಕುರಿತು ಭಾಷಣವಿತ್ತರು.

ಉಳ್ಳಾಲ—ತಾ ೨೧-೧೦-೩೪ನೇ ಚಂದ್ರವಾರ ಇಲ್ಲಿಯ ಮಹಿಳಾ ಬೋರ್ಡು ಶಾಲೆಯಲ್ಲಿ ಎಕ್ಸ್ಟೆನ್ಶನ್ ಸಿದಾ ಇನ್ಸ್‌ಪೆಕ್ಟರರಾದ ಜನಾಬ್ ದಸ್ತಗಿರ ಸಾಹೇಬರ ಅಧ್ಯಕ್ಷತೆಯಲ್ಲಿ ಶಿಶುಸಪ್ತಾಹವು ಬಹು ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಇಲ್ಲಿಯ ಮಿಶನ್ ಬೋರ್ಡು ಹುಡುಗಿಯರ ಮತ್ತು ಪ್ರೈವೇಟು ಶಾಲೆಗಳ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹಕರಿಸಿ ವಿದ್ಯಾರ್ಥಿಗಳ ಪಂದ್ಯಾಟಗಳಾದ ಮೇಲೆ ಬೋರ್ಡು ಹುಡುಗಿಯರ ಶಾಲಾ ವಿದ್ಯಾರ್ಥಿನಿಯರ ಕೋಲಾಟ ಮತ್ತು ಗೀತೆಗಳೂ ಆದಮೇಲೆ ಮಹಿಳಾ ಬೋರ್ಡು ಶಾಲಾ ಅಧ್ಯಾಪಕರು ಆರೋಗ್ಯಭಾಗ್ಯ ಹಾಗೂ ಮಕ್ಕಳ ಕ್ಷೇಮಲಾಭ ಎಂಬ ಉಪನ್ಯಾಸಗಳನ್ನು ಓದಿದ್ದಲ್ಲದೆ, ಪ್ಲೇಗಿಗೆ ಮತ್ತು ದಾಕು ಎಂಬ ಚಿಕ್ಕ ನಾಟಕವನ್ನು ಅಭಿನಯಿಸಿ ಸಭಿಕರ ಮನಸ್ಸನ್ನು ಆಹ್ಲಾದಗೊಳಿಸಿದರು. ನಂತರ ಇತರ ಗೃಹಸ್ಥರೂ ಶ್ರೀಯುತ ಹೆಲ್ತ್ ಇನ್ಸ್‌ಪೆಕ್ಟರರವರೂ ಹಲವು ಬೋಧನೆಗಳನ್ನು ಕೊಟ್ಟಮೇಲೆ ಶಿಶುಗಳಿಗೂ ಇತರ ಮಕ್ಕಳಿಗೂ ಇನಾಮುತಿಂಡಿಗಳನ್ನು ಹಂಚಿ ಅಧ್ಯಕ್ಷರ ಭಾಷಣವಾದ ಮೇಲೆ ಸಭೆ ಅಂತ್ಯವಾಗಿ ನಂತರ ೬—೩೦ರ ಸಮಯಕ್ಕೆ ಶ್ರೀಯುತ ಹೆಲ್ತ್ ಆಫೀಸರರವರು ಛಾಯಾಚಿತ್ರಗಳನ್ನು ಪ್ರದರ್ಶಿಸಿದ್ದಲ್ಲದೆ ಇನ್ಸ್‌ಪೆಕ್ಟರರವರ ಮತ್ತು ಹಲವು ಗೃಹಸ್ಥರ ಅಪೇಕ್ಷೆ ಮೇರೆಗೆ ಇನ್ನೊಮ್ಮೆ ಮಹಿಳಾ ಬೋರ್ಡು ಶಾಲೆಯ ಮಕ್ಕಳು ಸಿದ್ದು ಮತ್ತು ದಾಕಿನ ನಾಟಕವನ್ನು, ಮಕ್ಕಳ ಕ್ಷೇಮಲಾಭವೆಂಬ ಭಾಷಣವನ್ನೂ ಮಾಡಿ ಸಭೆಯು ಅಂತ್ಯವಾಯಿತು.

ಕಾರ್ಕಳ—ಶಿಶು ಮತ್ತು ಆರೋಗ್ಯ ಸಪ್ತಾಹವು ಇಲ್ಲಿಯೂ ಆಚರಿಸಲ್ಪಟ್ಟಿತು. ತಾ. ೨೪-೧೦-೩೪ರ ದಿನ ಸಾಯಂಕಾಲ ಶ್ರೀ ಎ. ಬಿ. ಶೆಟ್ಟಿ ಎಮ್ ಎಲ್ ಸಿ.ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ, ಭಾಷಣ, ಹರಿಕತೆಗಳಾದುವು. ಅಧ್ಯಕ್ಷರು ಆರೋಗ್ಯ ಪ್ರದರ್ಶನವನ್ನು ತೆರೆಯುತ್ತ ಪಾಶ್ಚಾತ್ಯ ದೇಶಗಳಲ್ಲಿ ಆರೋಗ್ಯ ರಕ್ಷಣೆಬಗ್ಗೆ ಮಾಡುತ್ತಿರುವ ಕಾರ್ಯಕಲಾಪಗಳನ್ನು ವಿವರಿಸಿ ವಿ ಕಸಂತತಿಯ ಅವಶ್ಯಕತೆಯನ್ನು ಹೇಳುತ್ತ ನಾವು ಪಾಶ್ಚಾತ್ಯರನ್ನು ಹೇಗೆ ಅನುಕರಣ ಮಾಡತಕ್ಕದ್ದೆಂಬುದನ್ನು ತಿಳಿಯಪಡಿಸಿದರು. ಶ್ರೀ ಇಧ್ವಾಸುದೇವಯ್ಯನವರ ಸಂಗೀತಕ್ಕೂ ಆರೋಗ್ಯಕ್ಕೂ ಇರುವ ಸಂಬಂಧವನ್ನು ಕುರಿತು ಭಾಷಣವು ಬಹು ವಿನೋದ ಪೂರ್ಣವಾಗಿದ್ದು ಸಭಿಕರನ್ನು ಆನಂದಸಾಗರದಲ್ಲಿ ತೇಲಿಸಿತು. ಇದೇ ಸಪ್ತಾಹದ ಸಂಬಂಧವಾಗಿ ತಾ ೨೬-೧೦-೩೪ರ ದಿನ ಸಾಯಂಕಾಲ ಸಿನೇಮಾ ಪ್ರದರ್ಶನವೂ ಇತ್ತು.

ಇಲ್ಲಿಯ ಆರ್ಯಧರ್ಮ ಪ್ರಚಾರಕ ಮಂಡಳಿಯ ನೇತೃತ್ವದಲ್ಲಿ ದಯಾನಂದ ದಿಗ್ವಿಜಯೋತ್ಸವವು ಇದೇ ಹೊಸತಾಗಿ ಈ ವರ್ಷ ದೀಪಾವಳಿಯ ಕಾಲದಲ್ಲಿ ಮೆರವಣಿಗೆ, ಭಜನೆ ಸಭೆ ಭಾಷಣಗಳಿಂದ ಆಚರಿಸಲ್ಪಟ್ಟಿರುವುದು. ಆರ್ಯ ಸಮಾಜಗಳ ಮತ್ತು ಅದರೊಡನೆ ಸಹಾನುಭೂತಿಯುಳ್ಳವರ ಉತ್ಸಾಹ ಪ್ರೋತ್ಸಾಹಗಳಿಂದ ಆಚರಿಸಲ್ಪಟ್ಟ ಇಂದಿನ ಈ ಉತ್ಸವವು ಪ್ರತಿ ವರ್ಷವೂ ಆಚರಿಸಲ್ಪಡುವಂತಾಗಿ ಶ್ರೀ ದಯಾನಂದ ಸರಸ್ವತಿಯವರ ಬೋಧನೆಗಳ ತಿರುಳನ್ನು ಜನರು ಹೆಚ್ಚಿಟ್ಟಾಗಿ ತಿಳಿದು ಒಂದೂ ಧರ್ಮಾಭಿಮಾನಿಗಳಾಗಲೆಂದು ನಮ್ಮ ಹಾರೈಕೆ.

ಸ್ಥಳೀಯ ಡೋಮಸ್ ಕಥೋಲಿಕರ ಜೊತೆ ಇಗರ್ಜಿಯ ದಶವಾರ್ಷಿಕ ಉತ್ಸವವು ಈ ವರ್ಷ ದೀಪಾವಳಿಯ ಕಾಲದಲ್ಲಿಯೇ ಬಂದು ಇಲ್ಲಿಯ ಜನರ ಸಂತೋಷೋಲ್ಲಾಸಗಳಿಗೆ ಹೊಸ ಬಣ್ಣವನ್ನು ಕೊಟ್ಟಿತು. ಸಿಡಿಮದ್ದು ಕೋಲಾಹಲಗಳಿಂದಲೂ ದೀಪ ಮಾಲಿಕೆಗಳಿಂದಲೂ ಅಲಂಕರಿಸಲ್ಪಟ್ಟ ನಮ್ಮ ಚಿಕ್ಕ ಊರು ಎರಡು ಮೂರು ದಿನಗಳ ವರೆಗೆ ಕಣ್ಣಿಗೆ ಹಬ್ಬವನ್ನುಂಟುಮಾಡಿತು. ಉತ್ಸವ ಕಾಲದಲ್ಲಿ ಕಥೋಲಿಕರ ಕಿಸ್ತ್ಯಾವ್ಯಕ್ತಿಗಳನ್ನು ಯಾರೇ ಆದರೂ ಅನುಕರಿಸಬೇಕಾದ್ದಾಗಿದ್ದುವು.

ಕಾರ್ಕಳದ ಓಣಿಕೇರಿಗಳಲ್ಲಿ ಹೋಗಲು ರಸ್ತೆಗಳ ಕಸಕಡ್ಡಿಗಳ ಬೆಲೆ ಕ್ಲೀನಾ ಸಂಗ್ರಹವು ಬೇಕೆಯುತ್ತಿಲ್ಲ. ಆವುಗಳಿಂದ ಬರುವ ರೋಗ ಬಾಧೆಯೇ ಸಾಕಷ್ಟು ವೆಚ್ಚಕಾರಿಯಾಗಿರುವುದು. ನಮ್ಮ ಪಂಚಾಯತಿಗೆ ಸಂಬಂಧಪಟ್ಟ ಅಧಿಕಾರಿಗಳೂ ಈ ಕಡೆ ಗಮನ ಕೊಟ್ಟು ಜನಾರೋಗ್ಯವನ್ನು ಕಾಪಾಡುವ ವಿಷಯದಲ್ಲಿ ಅವರ ಕರ್ತವ್ಯ ಜ್ಞಾನವನ್ನು ಬೆಳಗಿಸುವ ವಿಚಾರವನ್ನು ಮಾಡಬಾರದೆ?

ಮಂಜೇಶ್ವರ—ಇಲ್ಲಿಯ ಕ ಲ್ಲಾಪ್ಪುರು ಕೇಂದ್ರದಲ್ಲಿ ಕುಂಜತ್ತೂರು ಬೋರ್ಡು ಮತ್ತು ಕಣ್ವತೀರ್ಥ ಬೋರ್ಡು ಶಾಲೆಗಳೊಂದಾಗಿ ಕುಂಜತ್ತೂರು ಬೋರ್ಡು ಶಾಲೆಯಲ್ಲಿ ೧೧ನೇ ರಾಷ್ಟ್ರೀಯ ಆರೋಗ್ಯ ಸಪ್ತಾಹವನ್ನು ತಾ. ೨೬-೧೦-೩೪ನೇ ಶುಕ್ರವಾರ ದಿನ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಫರಂಗಿಪೇಟೆ—ಇಲ್ಲಿಯ ಶ್ರೀ ರಾಮ ಹಾ ಎ ಶಾಲೆಯ ವಿದ್ಯಾರ್ಥಿಗಳು ತಮ್ಮ ನೆರೆಕಾರರಾದ ಸುಜೀರು ಬೋರ್ಡ್ ಮತ್ತು ಅಮ್ಮುಂಜೆ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಆರೋಗ್ಯ ಮತ್ತು ಶಿಶುಸಪ್ತಾಹವನ್ನು ಆಕ್ಟೋ ತಾ. ೩೦ರಿಂದ ೬ರ ವರೆಗೆ ಬಹಳ ವಿಜೃಂಭಣೆಯಿಂದ ಜರಗಿಸಿದರು.

ಹೊಸದುರ್ಗ—ಇಲ್ಲಿ ಆರೋಗ್ಯ ದಿನಾಚರಣೆಯು ತಾ ೨೪-೧೦-೩೪ರಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರರಾದ ಕ. ಎಚ್ ಆಟ್ವಾರ್ಡ್, ಬಿ ಎ ಎಲ್ ಟಿ.ಯವರು ಅಧ್ಯಕ್ಷರಾಗಿದ್ದರು. ಅಂದವಾಗಿ ಶೃಂಗರಿಸಲ್ಪಟ್ಟ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಾರ್ಯಕ್ರಮಗಳು ಜರಗಿಸಲ್ಪಟ್ಟುವು. ಬೆಳಿಗ್ಗೆ ಸುಮಾರು ೮ ಘಂಟೆಗೆ ಶಾಲಾ ಮಕ್ಕಳ ಮತ್ತು ಪುರಜನರ ಮೆರವಣಿಗೆಯು ತರುವಾಯ ಮಕ್ಕಳಿಗೆ ತಿಂಡಿ ಹಂಚಲ್ಪಟ್ಟಿತು. ೯ ಗಂಟೆಗೆ ಶಿಶು ಪ್ರದರ್ಶನವಿತ್ತು. ಆರೋಗ್ಯ ಮಕ್ಕಳಿಗೆ ನಾಲ್ಕು ಬಹುಮಾನಗಳು (ಇವು ೧೪ರಲ್ಲಿ ಆರ್ಧ ಇದಿಪ್ಪಾಡಿಯವರು) ಹಂಚಲ್ಪಟ್ಟುವು. ಇತರ ಐದು ಮಕ್ಕಳಿಗೆ ಪಾರಿತೋಷಕವಾಗಿ ಚಿಕ್ಕ ಅಂಗಿಗಳು ಕೊಡಲ್ಪಟ್ಟುವು. ಇದೇ ರೀತಿಯಲ್ಲಿ ಆದಿದ್ರಾವಿಡ ಮಕ್ಕಳಿಗೆ ಪ್ರತ್ಯೇಕ ಇನಾಮು ಕೊಡಲ್ಪಟ್ಟಿದೆ. ಸಂಜೆ ಮಕ್ಕಳ ಪಂದ್ಯಾಟಗಳೂ ರಾತ್ರಿ ಹೆಲ್ತ್ ಆಫೀಸರರಿಂದ ಆರೋಗ್ಯ ಸಂಬಂಧವಾದ ಛಾಯಾಚಿತ್ರ ಪ್ರದರ್ಶನವೂ ಭಾಷಣವೂ ಇತ್ತು. ಪಂದ್ಯಾಟದಲ್ಲಿ ಗೆದ್ದ ಮಕ್ಕಳಿಗೆ ಮತ್ತು ಮನೆಗಳನ್ನು ಚೊಕ್ಕವಾಗಿಟ್ಟ ಆದಿದ್ರಾವಿಡ ಗುಡಿಸಲುಗಳಿಗೆ ಬಹುಮಾನಗಳು ಕೊಡಲ್ಪಟ್ಟಿದ್ದುವು.

ಕಳೆದ ಎರಡು ವರ್ಷಗಳಿಂದಲೂ ಈ ಪ್ರದೇಶದಲ್ಲಿ ಅನೇಕ ಕಳವುಗಳು ನಡೆಯುತ್ತಿದೆ. ಚಿನ್ನದ ಕ್ರಯವು ಹೆಚ್ಚಾದಂದಿನಿಂದ ಸಿದ್ಧ ಮಾಡುತ್ತಿರುವ ಹೆಂಗುಸರ ಮಕ್ಕಳ ಕಂಠದಿಂದ ಆಭರಣಗಳನ್ನು ಅಪಹರಿಸುವುದು ವಾಡಿಕೆಯಾಗಿದೆ. ಕೆಲವೇ ಕಳವುಗಳು ಮಾತ್ರ ಅಧಿಕೃತರ ತಿಳುವಳಿಕೆಗೆ ಬರುತ್ತವೆ. ಮೊಕದ್ದಮೆಗಳನ್ನು ತಲಾಸುಮಾಡುವುದು ಬಹಳ ಕಷ್ಟವಾದುದರಿಂದ ಅಪರಾಧಿಗಳನ್ನು ನ್ಯಾಯವಿಚಾರಣೆಗೆ ಗುರಿಪಡಿಸುವುದು ಅಸಾಧ್ಯ. ಇತ್ತೀಚೆಗೆ ಮೂರು ಯೌವನಸ್ಥರನ್ನು ಶಿಕ್ಷೆಗೆ ಗುರಿಪಡಿಸಿರುತ್ತಾರೆ. ಕೆಲವು ದಿವಸ ಹಿಂದೆ ಕದಗನನ್ನು ಕಿತ್ತು ಕೆಲವು ಆಭರಣಗಳನ್ನು ಫುಲ್ಲೂರು ತಿಕ್ಕಪ್ಪುರ ಮನೆಯಿಂದ ಎಂಬಲ್ಲಿಂದ ಕದ್ದುಕೊಂಡು ಹೋದದ್ದು ಪತ್ತೆಯಾಗಲಿಲ್ಲ.

ಹಿರಿಯಡ್ಕ—ಇದೇ ತಾ ೨೮-೧೦-೩೪ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮.೩೦ಕ್ಕೆ ಇಲ್ಲಿಯ ಆರ್ಯಸಮಾಜ ಮಂದಿರದಲ್ಲಿ ಸಾಪ್ತಾಹಿಕ ಅಧಿವೇಶನವು ಸಂಧ್ಯಾ ಪ್ರಾರ್ಥನೆ ಭಜನೆ ಇತ್ಯಾದಿಗಳಿಂದ ನೆರವೇರಿಸಿದ ನಂತರ ಸಮಾಜದ ಉಪಕಾರ್ಯದರ್ಶಿಯಾದ ಮ ರಾ ಪಿ. ಕೆ ಅನಂತಯ್ಯನವರು ಸ್ವಾಮಿ ದಯಾನಂದ ಸರಸ್ವತಿಯವರ ಜೀವನ ಚರಿತ್ರೆ ಮತ್ತು ಅವರಿಂದ ನಿರ್ಮಿಸಲ್ಪಟ್ಟ ಆರ್ಯ ಸಮಾಜದ ಮಹತ್ವದ ವಿಷಯ ಭಾಷಣವಿತ್ತನಂತರ ಸಭೆಯು ಮುಕ್ತಾಯವಾಯಿತು.

ಕುಂದಾಪುರ—ತಾ ೧೯-೧೦-೩೪ರಲ್ಲಿ ಕ್ವೆಟ್ಟಾ ಭೂಕಂಪ ಪೀಡಿತರ ಸಹಾಯಾರ್ಥವಾಗಿ ಇಲ್ಲಿಯ ಸಬ್ ಕಲೆಕ್ಟರರಾದ ಮ. ರಾ ವೆಂಕಟೇಶ್ವರನ್ ಐ ಸಿ ಎಸ್ ಎಮ್ ಎ ಅವರು ಅಧ್ಯಕ್ಷತೆಯಲ್ಲಿ ಸ್ಥಳೀಯ ಬೋರ್ಡು ಹುಡುಗಿಯರ ಶಾಲೆಯಲ್ಲಿ ನಾಟಕ ಮೊದಲಾದ ವಿವಿಧ ವಿನೋದ ಪ್ರದರ್ಶನಗಳಿದ್ದುವು. ಅಧ್ಯಕ್ಷರು ಪ್ರದರ್ಶನವನ್ನು ಯಶಸ್ವಿಯಾಗಿ ಮಾಡಿದ ಅಧ್ಯಾಪಕಿಯರನ್ನೂ ಪ್ರೋತ್ಸಾಹಿಸಿದ ಸಭಿಕರನ್ನೂ ಪ್ರಶಂಸಿ ಭಾಷಣವನ್ನು ಮಾಡಿದರು. ಜಮೆಯಾದ ಮೊಬಲಗಿನಲ್ಲಿ ಖರ್ಚು ರೂ ೨೫ ಕಳೆದು ಬಾಕಿ ರೂ ೧೦೫ನ್ನು ಭೂಕಂಪ ಸಹಾಯ ನಿಧಿಗೆ ಮಹಿಳಾ ಯಾರ ಮೂಲಕ ಕಳುಹಿಸಲಾಗಿದೆ ಎಂದು ತಿಳಿದು ಬರುತ್ತದೆ.

ಜಿಲ್ಲಾ ವಿದ್ಯಾಧಿಕಾರಿಗಳಾದ ಎಮ್ ಕಿಟ್ಟಪ್ಪ ಎಮ್ ಎ ಎಲ್ ಟಿ ಯವರು ಡಿಪ್ಯುಟಿ ಇನ್ಸ್‌ಪೆಕ್ಟರರವರೊಡನೆ ಸ್ಥಳೀಯ ಬೋರ್ಡು ಹೈ ಸ್ಕೂಲಿಗೆ ಅಕ್ಟೋಬರ ತಾ ೨೩ ೨೪ ೨೫ರಲ್ಲಿ ವಾರ್ಷಿಕ ಇನ್ಸ್‌ಪೆಕ್ಷನನ್ನು ನಡಿಸಿದರು. ತಾ ೨೫ರಲ್ಲಿ ಹೈ ಸ್ಕೂಲು ಉಪಾಧ್ಯಾಯರೂ ವಿದ್ಯಾರ್ಥಿಗಳನ್ನು ಟೀ ಪಾರ್ಟಿ ಗ್ರೂಪ್ ಫೋಟೋ ಮೊದಲಾದ ರೀತಿಯಿಂದ ಸತ್ಕರಿಸಿದರು.

ಸ್ಥಳೀಯ ಹೈ ಸ್ಕೂಲಿನ ಸ್ಕೌಟು ಬಾಲಕರು ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾ ೨೪ನೇ ಸಾಯಂಕಾಲ ಘಂಟೆ ೬.೩೦ಕ್ಕೆ ಸರಿಯಾಗಿ ಕ್ಯಾಂಪ್ ಫಯರನ್ನು ಬಹು ಸಂಭ್ರಮದಿಂದ ಜರಗಿಸಿದರು.

ಕರ್ನಾಟಕ ಸಾಹಿತ್ಯ ಸಂಘದ ಸಾರ್ವಜನಿಕ ಸಭೆಯು ತಾರೀಕು ೨೭-೧೦-೩೪ನೇ ಭಾನುವಾರ ೪ ಘಂಟೆ ೪.೩೦ಕ್ಕೆ ಸರಿಯಾಗಿ ಇಲ್ಲಿಯ ವಕೀಲರಾದ ಮ| ರಾ| ಎ ವಿ ಯನ್ ಹೆಬ್ಬಾರ ಬಿ ಎ ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ ಗತ ಸಭೆಯ ವರದಿಯನ್ನು ಓದಿದಮೇಲೆ ಇಲ್ಲಿಯ ಆಯುರ್ವೇದ ವೈದ್ಯರಾದ ಪಿ ಪಾಂಡುರಂಗ ಭಟ್ ಧನ್ವಂತರಿ ಅವರು ಆಯುರ್ವೇದವು ಪ್ರಾಚೀನ ಮತ್ತು ಆಂಗ್ಲ ಚಿಕಿತ್ಸಾ ಪದ್ಧತಿಯೂ ಎಂಬ ವಿಷಯದಲ್ಲಿ ಮಹತ್ವಪೂರ್ಣವಾದ ಭಾಷಣವನ್ನು ಮಾಡಿದರು. ಸಭಿಕರಲ್ಲಿ ಶ್ರೀಯುತ ಕೋಟ ಶಿವರಾಮ ಕಾರಂತರೂ ಹೈಸ್ಕೂಲಿನ ಕನ್ನಡ ಪಂಡಿತರಾದ ವಿದ್ವಾನ್ ಪಿ ಉಪೇಂದ್ರಾಚಾರ್ಯರೂ ಮೊದಲಾಗಿ ೬ ಜನರು ಭಾಷಣದಲ್ಲಿ ಭಾಗವಹಿಸಿದ ನಂತರ ಅಧ್ಯಕ್ಷರು ಮನೋಹರವಾದ ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿಗಳು ನೆರೆದ ಸಭಿಕರಿಗೆ ಧನ್ಯವಾದವನ್ನರ್ಪಿಸಿದರು.

ಕಾಂಗ್ರೆಸ್ ಕಾರ್ಯಕಲಾಪಗಳಿಗೆ ಸಹಾನುಭೂತಿಯನ್ನು ಕೊಡಿರಿ.

ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಬಾಬೂರಾಜೇಂದ್ರ ಪ್ರಸಾದರ ಮನವಿ

ಶ್ರೀ ರಾಜೇಂದ್ರಪ್ರಸಾದರು ಕೊಯಮುತ್ತೂರಿನ ಸಾರ್ವಜನಿಕ ಸಭೆಯಲ್ಲಿ ಕೊಟ್ಟ ಭಾಷಣದ ಸಾರಾಂಶ

ತನ್ನನ್ನು ಸತ್ಕರಿಸಿದ ವಿಷಯವಾಗಿ ಮಾತನಾಡುತ್ತಾ ಶ್ರೀ ಬಾಬೂರಾಜೇಂದ್ರ ಪ್ರಸಾದರು ಹರ್ಷಚಿತ್ತರಾಗಿ ಅಂತೆಂದರು:- ಬಿಹಾರ್ ಪ್ರಾಂತ್ಯವು ಭೂಕಂಪದಿಂದಾಗಿ ಕುಸಿದುಬಿದ್ದಿರಲು ಜನರು, ಭಯಂಕರ ಪೀಡೆಯುಂಟಾಗಿ ನರಳುತ್ತಿರಲು, ತಾವುಗಳು ಕೃಪೆದೋರಿ ಉದಾರ ಮನಸ್ಸಿನಿಂದ ಸಹಾಯವಿತ್ತು ಅದರನ್ನು ಬದುಕಿಸಿದಿರಿ. ಹಿಂದಿನ ಕಾಲದಲ್ಲಿ ಇಂತಹ ಭೂಕಂಪಗಳು ಅನೇಕ ಕಡೆಗಳಲ್ಲಿ ತಲೆದೋರಿವೆ. ೧೮೯೭ರಲ್ಲಿ ಉತ್ತರ ಕರ್ನಾಟಕದಲ್ಲಿ ಆಸ್ಸಾಮ್ ಪ್ರಾಂತ್ಯವು ಭೂಕಂಪದಿಂದಾಗಿ ಕಠಿಣ ಅವಸ್ಥೆಗೆ ಈಡಾಯಿತು. ೧೯೦೫ರಲ್ಲಿ ಕಂಗ್ರಾಘಾ ಪ್ರಾಂತ್ಯವೂ ಇದೇ ದುರವಸ್ಥೆಯನ್ನು ಅನುಭವಿಸಿತು. ಆದರೆ ಆ ಸಮಯದಲ್ಲಿ ಮಾತ್ರ ಜನರ ಪ್ರೋತ್ಸಾಹವು ಅಷ್ಟು ಸಿಗಲಿಲ್ಲ. ಲೆಖ್ಖಹಾಕಿ ನೋಡಿದರೆ ಅಸ್ಸಾಂ, ಕಂಗಾರದಲ್ಲಿ ಆದ ಭೂಕಂಪಗಳ ಹಾವಳಿಯು ಬಿಹಾರ ಪ್ರಾಂತ್ಯಕ್ಕಿಂತಲೂ ಮಿಗಿಲಾದವು. ಅಲ್ಲಿಯ ಜನರು ಹೊಟ್ಟೆಬಟ್ಟೆಗಿಲ್ಲದೆ ಪೇಚಾಡುತ್ತಿದ್ದಾಗ, ಬಾಕಿಯವರು ತಮ್ಮ ಜೇಬಿನಿಂದ ಹಣವನ್ನು ತೆರೆಸದೆ ಸುಮ್ಮನಿದ್ದರು. ಪ್ರಸ್ತುತ ಬಿಹಾರ ಪ್ರಾಂತ್ಯಕ್ಕೆ ತುಂಬಾ ಧನಸಹಾಯಮಾಡಿದ್ದನ್ನು ಕಂಡರೆ, ಜನರಲ್ಲಿ ಜಾಗೃತಿಯು ಉಂಟಾಗಿದೆ ಎಂಬುದು ನಿಜವೆಂದು ಮನಗಂಡಹಾಗಾಗುತ್ತಿದೆ. ಮೊತ್ತಮೊದಲು ಜನರು ಪರರ ಕಷ್ಟಗಳ ಗೊಡವೆಗೆ ಹೋಗದೆ ತಮ್ಮ ಸ್ವಾರ್ಥದ ಸಲುವಾಗಿ ಕಾದಾಡುವ ಸ್ವಾರ್ಥಪರರುಗಳಾಗಿದ್ದವರು ಬರಬರುತ್ತ ಇಂತಹ ಉದಾತ್ತಸ್ಥಿತಿಗೆ ಬಂದುದನ್ನು ನೋಡಿ ಮನಸ್ಸು ಆನಂದದಿಂದ ತುಂಬುತ್ತಿದೆ. ಜನರಲ್ಲಿ ಬಂಧುಪ್ರೇಮವು ಉತ್ಪನ್ನವಾಗಿದೆಯೆಂಬುದಕ್ಕೆ ಬೇರೆ ದೃಷ್ಟಾಂತ ಬೇಡ. ಹಿಂದೂದೇಶವು ಒಂದೇ ಜನಾಂಗಕ್ಕೆ ಸೇರಿದ್ದು, ಒಂದೇ ತಾಯಿಯ ಅಣ್ಣತಮ್ಮಂದಿರು ಅಕ್ಕತಂಗಿಯರು ನಾವು. ನಮ್ಮಲ್ಲಿ ಒಬ್ಬರಿಗೆ ಅಸೌಖ್ಯವಾದರೆ ಅದರಿಂದಾಗಿ ಎಲ್ಲರಿಗೂ ದುಃಖವಾಗುತ್ತದೆ ಹೇಗೊ, ಹಾಗೆಯೇ ಒಂದು ಪ್ರಾಂತ್ಯದ ಜನರು ದುಃಖದಿಂದ ನರಳುತ್ತಿರುವಾಗ ಇನ್ನೊಂದು ಪ್ರಾಂತ್ಯವು ಅದಕ್ಕೆ ಸಹಾನುಭೂತಿಯನ್ನು ತೋರಿಸುವುದು ನ್ಯಾಯವಾದ ರೀತಿ. ಇದೀಗ ಹಿಂದೀಯರಲ್ಲಿ ಉತ್ಪನ್ನವಾಗಿದೆ ಎಂದು ಹೇಳಲು ಬಹಳಾ ಸಂತೋಷ.

ಬಡ ರೈತರ ಮತ್ತು ಸಾಗುವಳಿಗಾರರ ಸಂಕಷ್ಟಗಳನ್ನು ಕಣ್ಣಾರೆ ಕಂಡು ಕಳವಳಗೊಂಡ ಮಹಾತ್ಮಾಜೀಯವರು ಬಡವರನ್ನು ಉದ್ಧರಿಸಲು ೧೮ ವರ್ಷಗಳ ಹಿಂದೆ ಒಂದು ಸತ್ಯಾಗ್ರಹವನ್ನು ತೊಟ್ಟಿದ್ದರು. ಅವರಾಗ ಬೋಧಿಸಿದ ತತ್ವವು ನಮಗೆ ತಿಳಿಯಲಿಲ್ಲ. ಅವರ ಕಾರ್ಯಕಲಾಪಗಳ ಗುಟ್ಟನ್ನು ಅರಿತುಕೊಳ್ಳುವಷ್ಟು ವಿಚಾರಶೀಲರು ನಾವಾಗಿರಲಿಲ್ಲ. ಆದರೂ ಮಹಾತ್ಮರು ಬಿಡದೆ ಮುಂದಕ್ಕೆ ಸಾಗಿ ತನ್ನ ಕಾರ್ಯದಲ್ಲಿ ಜಯಶೀಲರಾದರು. ಇಂದೂ ನಾವು ಅದೇ ಕಾರ್ಯದಲ್ಲಿ ತೊಡಗಿದ್ದೇವೆ. ೧೮ ವರ್ಷಗಳ ಹಿಂದೆ ಕೇವಲ ಒಂದು ಪ್ರಾಂತ್ಯದಲ್ಲಿ ನಡೆದ ಆಂದೋಲನವು ಇಂದು ಇಡೀ ಭಾರತದಲ್ಲಿ ತಲೆದೋರಿದೆ. ಅಂದು ಜಯಶೀಲರಾಗಿದ್ದೇವೆ, ಇಂದು ಇಷ್ಟು ನುರಿತವರಾಗಿ ಖಂಡಿತವಾಗಿಯೂ ಹಿಂದೆ ಬೀಳಲಿಕ್ಕಿಲ್ಲವೆಂಬ ಭರವಸೆಯು ನನಗಿದೆ.

ಸ್ವಾತಂತ್ರ್ಯ ಸಂಪಾದನೆಯು ನಮ್ಮ ಧ್ಯೇಯವಾಗಿದೆ. ಕಾಂಗ್ರೆಸ್ ಪಕ್ಷದವರು ಕಳೆದ ೫೦ ವರ್ಷಗಳಿಂದಲೂ ಅದಕ್ಕಾಗಿ ಅವಿಶ್ರಾಂತರಾಗಿ ಹೆಣಗಾಡುತ್ತಲೇ ಇದ್ದಾರೆ. ೧೮೮೫ರಲ್ಲಿ ಬರೇ ೭೨ ಸದಸ್ಯರಿಂದೊಡಗೂಡಿದ್ದ ಕಾಂಗ್ರೆಸು ಈಗ ಅನಭಿತವಾಗಿದೆ. ಸಸಿಯಾಗಿದ್ದದ್ದು ಮರವಾಗಿ ಅದರಿಂದ ಕವಲುಗಳು ಹೊರಟಿವೆ. ಅರ್ಥಾತ್ ಪ್ರತಿಯೊಂದು ತಾಲೂಕಿನಲ್ಲೂ ಒಂದರಂತೆ ಕಾಂಗ್ರೆಸ್ ಕಮಿಟಿಯಿದೆ. ಸ್ವಾರ್ಥಸಾಧನೆಯು ಕಾಂಗ್ರೆಸ್ಸಿನದ್ದಲ್ಲ. ಜಾತಿಮತ ಭೇದಗಳು ಅದರಲ್ಲಿಲ್ಲ. ಒಂದೇ ಪ್ರಾಂತ್ಯದವರಿಗಾಗಿ ಅದರ ಸದಸ್ಯರು ಹೆಣಗಾಡುವುದಿಲ್ಲ. ಎಲ್ಲರಿಗೂ ಅದರಲ್ಲಿ ಭಾಗವಿದೆ. ಭಾರತದೇಶದ ಯಾವ ಮೂಲೆಯವನೇ ಆಗಲೀ, ಅದರಲ್ಲಿ ಅವನಿಗೆ ಸ್ವಾತಂತ್ರ್ಯವಿದೆ. ಮಾತೃಭೂಮಿಯ ಸೇವೆಯನ್ನು ಯಾರು ಮಾಡಲಿಚ್ಛಿಸುತ್ತಾರೋ, ಯಾರಲ್ಲಿ ಮಾತೆಯನ್ನು ಪರರ ದಾಸ್ಯತ್ವದಿಂದ ಉದ್ಧರಿಸಬೇಕೆಂಬ ಮಹದಾಕಾಂಕ್ಷೆ ಯುಂಟೋ ಅಂಥವನಿಗೆ ಅದರ ಬಾಗಿಲು ತೆರೆದಿಡಲ್ಪಡುವುದು.

ಸ್ವರಾಜ್ಯವೆಂಬರೆ ಹಲವರು, ಹಲವು ಅಭಿಪ್ರಾಯಗಳನ್ನು ಪಡೆಯಬಹುದು. ಆದರೆ, ನನ್ನ ದೃಷ್ಟಿಪಥದಲ್ಲಿರುವ ಸ್ವರಾಜ್ಯವು ಅಮೋಘವಾದುದು. ಒಂದು ಜಾತಿಯವರು ಇನ್ನೊಂದು ಜಾತಿಯವರನ್ನು ಆಳುವಂತಹ ಸ್ವರಾಜ್ಯವು ನಮ್ಮದಲ್ಲ. ಬಲಿಷ್ಠರು ದುರ್ಬಲರನ್ನು ಆಳುವಂತಹ ಸ್ವರಾಜ್ಯವು ನಮ್ಮದಲ್ಲ. ಶ್ರೀಮಂತರು ಬಡವರನ್ನು ಆಳುವಂತಹ ಸ್ವರಾಜ್ಯವು ನಮ್ಮದಲ್ಲ. ಜಾತಿಮತಭೇದವಿಲ್ಲದೆ, ದೊಡ್ಡವರು ಬಡವರು ಎಂಬ ಭಾವನೆಯಿಲ್ಲದೆ, ಉಚ್ಚನೀಚರು ಎಂಬ ಗೋಷ್ಠಿಯಿಲ್ಲದೆ ಎಲ್ಲರನ್ನೂ ಏಕವಿಧವಾಗಿ ಪರಿಪಾಲಿಸುವ ರಾಜ್ಯವು ನಮ್ಮದು. ಎಲ್ಲರಿಗೂ ಸ್ವಾತಂತ್ರ್ಯವು ಅದರಲ್ಲಿರಬೇಕು. ಅದೀಗ ನಮ್ಮ ಸ್ವರಾಜ್ಯ—ಎಲ್ಲರಿಗೂ ಅದರಲ್ಲಿ ಸರಿಸಮಾನವಾದ ಹಕ್ಕಿರುವುದು. ಅದುದರಿಂದ ಎಲ್ಲರೂ ಅದರ ಸಂಪಾದನೆಗಾಗಿ ಟೊಂಕಕಟ್ಟಬೇಕು. ಅದೆಲ್ಲ ಕನಸಿನ ಗಂಟು ಎಂದು ತಿಳಿದವರು ಹೇಡಿಗಳು. ಕಾರ್ಯದಕ್ಷರೂ ವೀರರೂ ಎಂದೂ ಹಾಗೆ ಹೇಳಲಿಕ್ಕಿಲ್ಲ.

ಎಲ್ಲಾ ಜಾತಿಯವರು, ಪರಸ್ಪರ ವೈಮನಸ್ಸಿಲ್ಲದೆ ಶಾಂತಿಮಯ ಜೀವನವನ್ನು ಸಾಗಿಸಬೇಕೆಂದೇ ನಮ್ಮ ಪ್ರಯತ್ನ. ಶ್ರೇಷ್ಠ ಸತ್ಕ್ರಿಯೆಯು ಅವರಲ್ಲಿ ಬೆಳೆದು, ಎಲ್ಲರೂ ಅನ್ಯೋನ್ಯಪ್ರೇಮದಿಂದ ವಾಸಿಸಬೇಕೆಂದು ನಮ್ಮ ಆಶೆ. ದುಸ್ಸಾಧ್ಯವಾದೀ ಕೆಲಸವನ್ನು ಮಾಡುವರೆ ನಾವು ತೊಡಗಿರುವೆವು. ಅನೇಕ ಆಘಾತಗಳನ್ನು ಅನುಭವಿಸಬೇಕಾದೀತು. ಒಂದೆರಡು ತಡವೆ ನಮ್ಮ ಸರ್ವ ಪ್ರಯತ್ನಗಳು ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗಿ ಹೋದಾವು. ಆದರೂ ಎಡೆಬಿಡದೆ ಬಂದ ಕಷ್ಟಗಳನ್ನು ಸಹಿಸಿ ಮುಂದರಿದರೆ ಯಶಸ್ಸು ನಮ್ಮದು ಎಂಬುದನ್ನು ಮಾತ್ರ ಮರೆಯದಿರಿ.

ಸ್ವಾತಂತ್ರ್ಯ ಸಂಪಾದನೆಯೆಂದರೆ ಅದರ ಮರ್ಮವು ಬಹಳ ಗುರುತರವಾಗಿದೆ. ಎಲ್ಲವನ್ನು ನಮ್ಮಲ್ಲಿಂದಲೇ ಲಭಿಸಿಕೊಳ್ಳುವುದು ಇದರ ಇನ್ನೊಂದು ಕೋಡುಗೆ. ಸ್ವರಾಜ್ಯವನ್ನು ಪಡೆದವೆಂದರೆ ಮತ್ತೆ ಪರದೇಶಗಳಿಂದ ಸಹಾಯವನ್ನು ಕೋರುವುದಲ್ಲ. ನಮಗೆ ಬೇಕಾದ ಸಾಮಾನುಗಳನ್ನು ನಮ್ಮ ದೇಶದಲ್ಲಿ ಸುಲಭದಲ್ಲಿ ಒದಗಿಸಿಕೊಳ್ಳುವುದು ಎಷ್ಟೋ ವಾಸಿ. ಅದರಿಂದಾದ ಉತ್ಪತ್ತಿ ಲಾಭ ನಮ್ಮ ದೇಶಕ್ಕೆ. ದವಸಧಾನ್ಯಗಳನ್ನೂ ಬಟ್ಟೆಬರೆಗಳನ್ನು ಇಲ್ಲಿಯೇ ತಯಾರಿಸಬಹುದು. ಗಾಂಧಿಜೀಯವರು ಅದಕ್ಕಾಗಿ ಖದ್ದರ್ ವಸ್ತ್ರದ ಪ್ರಚಾರಮಾಡಿದುದು. ನಾವು ಕೆಲಸಮಾಡುವಾಗ ನಮ್ಮದೇ ಎಂಬ ಭಾಷೆಯು ನಮಗೆ ಬೇಕು. ಅದು ಎಲ್ಲರಿಗೂ ಕಲಿಯಲು ಸುಲಭವಾಗಿರಬೇಕು. —ಆ ಭಾಷೆಯೇ ಹಿಂದೀ ಭಾಷೆ. ಅದರ ಪ್ರಚಾರವು ಈಗ ಭಾರತದಲ್ಲಿ ಬಹಳ ಉತ್ತೇಜನದಿಂದ ಸಾಗುತ್ತಿದೆ.

ನಮಗೀಗ ಸಿಗುತ್ತಿರುವ ವಿದ್ಯಾಭ್ಯಾಸವು ಅಷ್ಟೊಂದು ಫಲಕಾರಿಯಾದುದಲ್ಲ. ಎಷ್ಟು ಜನರು ತಾನೇ ವಿದ್ಯೆಯನ್ನು ಕಲಿತು ಕೆಲಸವಿಲ್ಲದೆ ಸುಮ್ಮನೆ ತಿರುಗಾಡುತ್ತಾರೆ. ದೇಶದಲ್ಲಿ ದಿನ ಹೋದಂತೆ ಇವರ ಸಂಖ್ಯೆಯು ಹೆಚ್ಚುತ್ತಿದೆ. ಹೇರಳ ಹಣವನ್ನು ವ್ಯಯಮಾಡಿ ಕಲಿಸಿದ ವಿದ್ಯೆಯು ಒಬ್ಬನ ಹೊಟ್ಟೆಯನ್ನು ತುಂಬಲು ಕೂಡಾ ಸಹಕಾರಿಯಾಗುವುದಿಲ್ಲವೆಂದರೆ ಅದನ್ನು ಕಲಿತು ಪ್ರಯೋಜನವೇನು? ಆದ್ದರಿಂದ ಬೇರೆ ವಿಧಾನದಲ್ಲಿ ಶಾಲೆಗಳನ್ನು ನಿರ್ಮಾಣಿಸಿಕೊಳ್ಳಬೇಕಾಗಿರುವುದು. ಶಾಲೆಯಿಂದ ಹೊರಗೆ ಬಿದ್ದ ಯುವಕನು ಒಂದಲ್ಲ ಇನ್ನೊಂದು ಪಥದಿಂದ ತನ್ನ ಜೀವನವನ್ನು ಸಾಗಿಸಲು ಶಕ್ತನಾಗಿರಬೇಕು. ಅಂತಹ ವಿದ್ಯಾಭ್ಯಾಸವನ್ನು ಬಾಲಕರಿಗೆ ಕೊಡಬೇಕು. ಇದೆಲ್ಲವನ್ನೂ ನಾವು ಸಾಧ್ಯಗೊಳಿಸಿದೆವೆಂದರೆ ಸ್ವರಾಜ್ಯವು ಏನೊಂದೂ ತೊಂದರೆಯಿಲ್ಲದೆ ನಮಗೆ ಸಿಗುತ್ತದೆ. ಇದೆಲ್ಲವೂ, ಕಾಂಗ್ರೆಸ್ ಪಕ್ಷೀಯರು ಮಾಡಲಿಕ್ಕಿರುವ ಕೆಲಸಗಳಲ್ಲಿ ಹಲವಾಗಿವೆ. ಭೀಷಣ ಕಾಳಗದ ವಿನಹ ಸ್ವರಾಜ್ಯವು ಅಸಾಧ್ಯವೆಂದು ಹಲವರು ಹೇಳಿದರು. ಹಲವು ಭಾಷೆಗಳಿಂದಲೂ, ಹಲವು ಜಾತಿಗಳಿಂದಲೂ ಮೆರೆಯುತ್ತಿದ್ದ ಭಾರತದಲ್ಲಿ ಅದು ಸಾಧ್ಯವೇ? ಮೊದಲು ನಮ್ಮಲ್ಲಿ ಕಾದಾಡುವಷ್ಟು ಶಕ್ತಿಯಿದ್ದರೂ ಇತ್ತೆನ್ನಬಹುದು. ಆದರೆ, ಈಗ ಅದೆಲ್ಲ ಮಾಯವಾಗಿದೆ. ಅಂತೂ ಕಾದಾಡಿ ಗೆದ್ದ ರಾಜ್ಯವು ಅಷ್ಟೊಂದು ಗಟ್ಟಿಯಾಗಿ ನಿಲ್ಲಲಾರದು. ಇಂದು ಪರರಾಜ್ಯದವರನ್ನು ಓಡಿಸಿದವರು ರಕ್ತ ಬಿಸಿಯಾದಾಗ ತಮ್ಮ ಜನಾಂಗದವರನ್ನೇ ಕೊಲ್ಲಲು ಹೇಸಲಿಕ್ಕಿಲ್ಲ. ಅದಲ್ಲದೆ ಕಡೆಗೆ ಪ್ರಾಣವಂತರು ನಿತ್ರಾಣಿಗಳ ಮೇಲೆ ಸತ್ತೆಯನ್ನು ನಡೆಸಬೇಕಾಗುತ್ತದೆ. ಇವೆಲ್ಲ ಗೊಂದಲಕ್ಕಿಂತ, ತಾಳ್ಮೆಯಿಂದ ಬರಮಾಡಿಕೊಂಡ ರಾಜ್ಯವು ಲೇಸು. ಅದರಿಂದಾಗಿ ಜನತೆಯಲ್ಲಿ ವಿಶ್ವಾಸವೂ ಪರಸ್ಪರ ಪ್ರೀತಿಯೂ ಉಂಟಾಗುತ್ತದೆ ಮತ್ತು ಅವರಿಗೆ ಆವ ಪರ ಶಕ್ತಿಗಳ ಸ್ವಾಮಿತ್ವವು ಅರಿಯುತ್ತದೆ. ಆದ್ದರಿಂದ ಕಾಂಗ್ರೆಸ್ಸಿನವರ ಹೇಳಿಕೆಯಂತೆ ನೀವೆಲ್ಲರೂ ನಡೆಯಲು ಪ್ರಯತ್ನಿಸಿರಿ. ಕಷ್ಟವಿಲ್ಲದೆ ಇಷ್ಟವು ಪ್ರಾಪ್ತಿಯಾಗಲಿಕ್ಕಿಲ್ಲ. ಆದ್ದರಿಂದ ಆ ರೀತಿಯನ್ನು ಅನುಸರಿಸುವುದರಿಂದ ಅನೇಕಾನೇಕ ತೊಂದರೆಗಳು ನಿಮಗೆ ಬರಬಹುದು. ಆದರೆ ಧೈರ್ಯಗುಂದಬೇಡಿ. ಮುಂದೊತ್ತಿ ಬನ್ನಿ. ಅಂದರೆ ಕೀರ್ತಿಯು ನಮಗೆ ದೊರೆಯುವುದು.

ಹದಿನೈದು ವರ್ಷಗಳ ಹಿಂದೆ ನಾವು ಒಂದು ಕೋಟಿ ರೂಪಾಯಿಗಳನ್ನು ಜನತೆಯಿಂದ ಕಾಂಗ್ರೆಸ್ ಪರವಾಗಿ ಬೇಡಿ ಪಡೆದಿದ್ದೆವು. ಅದರ ಖರ್ಚಿನ ವಿವರವನ್ನು ಸವಿಸ್ತಾರವಾಗಿ ಜನತೆಗೆಲ್ಲಾ ಗೊತ್ತುಪಡಿಸಿದ್ದೇವೆ. ಆದರೆ ಇಂದು ಇಲ್ಲಿಗೆ ಬಂದ ಕೂಡಲೇ ಅದರ ವಿಷಯ ಒಬ್ಬನು ಒಂದು ಪ್ರಶ್ನೆಯನ್ನು ಹಾಕಿದನು. "ನೀವು ಶೇಖರಿಸಿದ ೧ ಕೋಟಿ ರೂಪಾಯಿಯ ಖರ್ಚಿನ ವಿವರವನ್ನೇಕೆ ನಮಗೆ ತಿಳಿಯಪಡಿಸಲಿಲ್ಲ?" ನನಗೆ ತುಂಬಾ ಅಸಮಾಧಾನವೂ ಸಂತೋಷವೂ ಉಂಟಾಯಿತು. ಕಾರಣ ಅವಿಶ್ವಾಸದ ಒರತೆಯು ಇದರಿಂದ ಹುಟ್ಟುತ್ತದೆ ಎನ್ನಬಹುದು. ನಾನವನಿಗೆ ಖರ್ಚಿನ ವಿವರವನ್ನು ಸಮಗ್ರವಾಗಿ ಹೇಳಿದೆ. ಪ್ರಶ್ನಾಕರ್ತನು ಸಂತೋಷದಿಂದ ಹೋದನು. ನನಗೂ ಆನಂದವಾಯಿತು. ಯಾಕೆಂತ ಕೇಳಬಲ್ಲಿರಾ? ನಮ್ಮ ಜನತೆಯಲ್ಲಿ ಪರಕೀಯರನ್ನು ಪ್ರಶ್ನಿಸುವಷ್ಟು ಧೈರ್ಯ ಸಾಹಸವಿಲ್ಲ. ಯಾರು ಏನ ಮಾಡಿದರೂ [illegible] ನೋಡುವುದೆ ವಿನಹ ಬಾಯಿಂದ ಮಾತು ಹೊರಡದು. ಇಂದು ಈತನು ಅದನ್ನು ಸಾಹಸಪಟ್ಟು ಕೇಳಿದ್ದಕ್ಕೆ ನನಗೆ ಸಂತೋಷವಾಯಿತು. ಬ್ರಿಟಿಷರು ೧೯೧೪ರಲ್ಲಿ ನಡೆದ ಮಹಾಯುದ್ಧದ ಸಮಯ ನಮ್ಮಿಂದ ಪಡಕೊಂಡ ನಾಲ್ಕು ಕೋಟಿ ರೂಪಾಯಿಗಳ ಖರ್ಚಿನ ವಿವರವನ್ನು ನಾವು ಅವರೊಡನೆ ಕೇಳಿದ್ದೇವೆಯೇ? ಪಾರ್ಲಿಮೆಂಟಿನ ಮುಖಾಂತರ ಪಡೆಯುತ್ತಿದ್ದ ಕೋಟ್ಯಂತರ ರೂಪಾಯಿಗಳ ಖರ್ಚಿನ ವಿವರವನ್ನು ನಾವು ಬ್ರಿಟಿಷರೊಡನೆ ಕೇಳಿದ್ದೇವೆಯೇ? ಇಲ್ಲ. ಯಾಕೆಂದರೆ ನಾವು ಅಂತಹ ಅಭ್ಯಾಸವನ್ನು ಇನ್ನೂ ಮಾಡಿಲ್ಲ. ಅದಕ್ಕೆ ಧೈರ್ಯಬೇಕು. ನಮ್ಮಲ್ಲಿ ಅದಿಲ್ಲ. ಅದುದರಿಂದ ಬ್ರಿಟಿಷರು ಅದರ ಸದುಪಯೋಗಮಾಡಲಿ, ದುರುಪಯೋಗಮಾಡಲಿ, ಅವರನ್ನು ಪ್ರಶ್ನಿಸುವವರಿಲ್ಲದೆ ಹೋದರು. ಆದರೆ, ಈಗ ನಮ್ಮಲ್ಲಿ ಅಂತಹ ಧೈರ್ಯವು ಬರತೊಡಗಿದೆ. ನಾವೂ ವಿಚಾರಶೀಲರಾಗಿದ್ದೇವೆ.

ವಿಮರ್ಶಕರಲ್ಲಿ ಒಂದು ಮಾತು—ಹಲವರು ಕಾಂಗ್ರೆಸ್ ಕಾರ್ಯಕ್ರಮಗಳ ಕುರಿತು ಉದ್ದುದ್ದ ಟೀಕೆಗಳನ್ನು ಬರೆಯುತ್ತಾರೆ. ಆದರೆ ಅವರಿಗೆ ತಮ್ಮ ಕೆಲಸದ ಉಂಡಾಡಿತನವು ಮಾತ್ರ ತಿಳಿಯುವುದಿಲ್ಲ. ಟೀಕೆಯನ್ನೀಯಲು ಒಬ್ಬ ಗುರುವು ಬೇಕೆಂದು ನನ್ನ ಅಲ್ಪ ಬುದ್ಧಿಗೆ ತೋರುತ್ತಿದೆ. ವಿಮರ್ಶಾಸಾಮ್ರಾಜ್ಯದಲ್ಲಿ ನುರಿತವರಾಗಿದ್ದವರು ಅಂತಹ ಅಧಿಕಾರವನ್ನು ಪಡೆಯಬಹುದು. ನನಗೆ ಅಂತಹ ಶಿಕ್ಷಣವು ದೊರೆತಿಲ್ಲವಾದ್ದರಿಂದ ನಾನು ಇಷ್ಟರವರೆಗೆ ಮಾಡಿದ ಭಾಷಣಗಳಲ್ಲಿ ಯಾರನ್ನೂ ದೂರಿದ್ದಿಲ್ಲ. ಹೊಗಳಿದ್ದಿಲ್ಲ. ಟೀಕೆಯನ್ನು ಮಾಡಿದ್ದಿಲ್ಲ. ನನಗೆ ಹಲವರು ಕಾಂಗ್ರೆಸಿನ ವಿಷಯ ಹಲವು ಪ್ರಶ್ನೆಗಳನ್ನು ಹಾಕಿರುವರು. ಅವರಿಗೆಲ್ಲಾ ಸಮರ್ಪಕವಾದ ಉತ್ತರಗಳನ್ನು ನಾನು ಚೆನ್ನಾಗಿ ಆಲೋಚಿಸಿಕೊಡುವೆನೆಂದು ಭರವಸೆಯನ್ನೀಯುತ್ತೇನೆ. ಆದರೆ ಕಾಂಗ್ರೆಸ್ ತನ್ನ ಕೆಲಸಗಳನ್ನೆಲ್ಲಾ ಒಕ್ಕಟ್ಟಿಗೆ ಇಟ್ಟು, ಕೇವಲ ಸ್ವಾರ್ಥಪರತೆಯಿಂದ ಕೆಲಸವನ್ನು ಮಾಡಿಲ್ಲವೆಂಬುದನ್ನು ಮಾತ್ರ ಎಲ್ಲರೂ ತಿಳಿದಿರಲಿ.

ನಮ್ಮ ದೇಶವು ಸಂಪತ್ಸಮೃದ್ಧಿಯಿಂದ ಕೂಡಿದೆ. ಪರದೇಶದವರ ದೃಷ್ಟಿಗೆ ಇದು ಬೀಳಲು ಇದೇ ಕಾರಣ. ನಮ್ಮ ದೇಶದವರು ಕಲಾಕೋವಿದರೂ, ಬುದ್ಧಿಯಲ್ಲಿ ಶ್ರೇಷ್ಠರೂ ಆಗಿರುವರು. ನಮ್ಮ ದೇಶದ ಯುವಕರು ಪರದೇಶಗಳಿಗೆ ತೆರಳಿ, ಪರದೇಶದವರ ಭಾಷೆಯನ್ನು ಕಲಿತು ಅಲ್ಲಿ ತಮ್ಮ ಶ್ರೇಷ್ಠತೆಯನ್ನು ತೋರಿಸಿ ಅನೇಕಾನೇಕ ಬಹುಮಾನಗಳನ್ನು ಪಡೆದಿದ್ದಾರೆ. ಕರ್ತವ್ಯಪಾಲಕರಲ್ಲಿ ನಮ್ಮ ದೇಶದ ಜನರು ಮುಂದಾಳುಗಳೆನ್ನಬಹುದು. ಸರಕಾರೀ ಹುದ್ದೆಗಳಲ್ಲೂ ಇತರ ಕೆಲಸಗಳಲ್ಲೂ ತಮ್ಮ ಯಜಮಾನರನ್ನು ತೃಪ್ತಿಗೊಳಿಸಿ ಅವರ ಮೆಚ್ಚುಗೆಗೆ ಪಾತ್ರರಾದವರು ನಮ್ಮ ದೇಶಸ್ಥರು. ಹಿಂದೂ ದೇಶದ [illegible] ಭೂಮಂಡಲವನ್ನೆಲ್ಲಾ ಸುತ್ತಿ ಪ್ರತಿಯೊಂದೆಡೆಯಲ್ಲಿಯೂ ತಮ್ಮ ವಿಜಯಪತಾಕೆಯನ್ನು ಹಾರಿಸಿ ಬಂದಿರುವರು. ಮಹಾಯುದ್ಧದ ಸಮಯ, ಆಂಗ್ಲೇಯರು ಸಂಪೂರ್ಣವಾಗಿ ಸತ್ವಹೀನರಾಗಲು ಫ್ರಾನ್ಸ್‌ದೇಶದವರೂ ಪೂರ್ಣಪ್ರಾಯವಾಗಿ ಜರ್ಮನರ ಅಧೀನರಾಗಲು ಹಿಂದೂದೇಶದವರು ತಮ್ಮ ವಿಚಕ್ಷಣಶಕ್ತಿ ಸಾಹಸದ ಪರಿಮಿತಿಯಿಂದಾಗಿ ಜರ್ಮನರನ್ನು ಸೋಲಿಸಿದರು. ನಾಲ್ದೆಸೆಗಳಿಂದಲೂ ನಮ್ಮವರ ಕೀರ್ತಿಕಲಾಪಗಳ ವಿಷಯ ಕವನಗಳೇ ಹೊರಬಿದ್ದುವು. ಅಂತಹ ಶೌರ್ಯಸಾಹಸದ ತವರುಮನೆಯು ತಮ್ಮ ಹಿಂದೂದೇಶವು. ಇಲ್ಲಿ ಬೆಳೆಯದ ಪೈರಿಲ್ಲ, ಸಿಗದ ಹಣ್ಣುಹಂಪಲುಗಳಿಲ್ಲ. ನಮ್ಮ ತಾಯಿಯ ಉದರದಲ್ಲಿ ಪ್ರಪಂಚದಲ್ಲಿ ಎಲ್ಲೂ ಸಿಗದ ಖನಿಜಗಳೂ, ಬೆಳ್ಳಿಬಂಗಾರಗಳೂ, ಮುತ್ತುವಜ್ರಗಳೂ ಇವೆ. ನೀಲವರ್ಣದ ಆಕಾಶವೂ ವೃಷ್ಟಿಯನ್ನುಗ್ಗುವ ಮೋಡಗಳೂ ಬೆಳಕನ್ನೀವ ಸೂರ್ಯನೂ ನಮ್ಮ ದೇಶದಲ್ಲಿದ್ದಂತೆ ಬೇರೆ ಇನ್ನಾವ ದೇಶದಲ್ಲಿ ಅಷ್ಟೊಂದು ಸುಪ್ರಸನ್ನವಾಗಿ ಇರಲಾರದು. ನಮ್ಮ ಹಿಂದಿನ ಚರಿತ್ರೆಯು ಪವಿತ್ರವಾಗಿರುವುದು. ಜನರು ಕೀರ್ತಿಯನ್ನು ಗಳಿಸಿರುವರು. ಸುಖಸಂತೋಷವು ಪ್ರಪಂಚದ ನಲ್ಮೆಯನ್ನು ಹೆಚ್ಚಿಸಿತ್ತು. ಆದರೆ ಈಗ ಅದೆಲ್ಲವನ್ನು ಕಳೆದುಕೊಂಡಿರುವೆವು. ಕಳೆದುಕೊಂಡ ವೈಭವವನ್ನು ಪುನಃ ಲಭಿಸಿಕೊಳ್ಳುವುದು ಭಾವೀ ಜನಾಂಗದ ಕೆಲಸವಾಗಿರುವುದು. ಹಿಂದಿನ ಕಳೆಯು ಮುಂದೆಯೂ ಮರಳುವಂತೆ ಮಾಡುವ ಕೆಲಸವು ನಮ್ಮದಾಗಿರುವುದು.

45 ನಿಮಿಷಗಳ ತನಕ ಭೂಮಿಯಲ್ಲಿದ್ದರೂ ಕೂಸು ಬದುಕಿತು.

[illegible] ಬಹಳಷ್ಟು ದಿನ ಮುಂಜಾನೆ ೨೬ ವರ್ಷದ ತರುಣಿಯು ತನ್ನ ತಾಯಿಯೊಡನೆ ತನಗೆ ಹೊಟ್ಟೆನೋವಾಗುತ್ತಿದೆ ಏನು ಮಾಡಲೆಂದು ತಿಳಿಯುತ್ತಿಲ್ಲವೆಂದು ಹೇಳಿ ತನ್ನ ಕೋಣೆಗೆ [illegible] ಕೆಲ ನಿಮಿಷಗಳಲ್ಲೇ ಅವಳೊಂದು [illegible] ಶಿಶುವನ್ನು ಹೆತ್ತಳು. [illegible] ಪಡೆಯುವ ಸಮಯ ಬಹಳವಾಗಿ ಚೀತ್ಕಾರ ಮಾಡಿದ್ದರಿಂದ ಮಗಳಿಗೇನೋ ಹಾನಿಯಾಗಿರಬೇಕೆಂದು ಅವಳ ತಂದೆಯು ಅವಳ ಕೋಣೆಯ ಒಳಗೆ ಒಂದು ಬಾಗಿಲನ್ನು ಮುರಿದು ಒಳನುಗ್ಗಿದನು. ಮಗಳು ಮೂರ್ಛಾವಸ್ಥೆಯಲ್ಲಿದ್ದಳು. ಕೂಸೊಂದು ಹಾಸಿಗೆಯಲ್ಲಿ ಬಿದ್ದಿತು. ಮಗಳಿಗೆ ಲಗ್ನವಾಗುವ ಮೊದಲೇ ಶಿಶುವು ಹುಟ್ಟಿದ್ದನ್ನು ನೋಡಿ ತಂದೆಗೆ ಬಹು ವ್ಯಸನವಾಯಿತು. ತಮ್ಮ ಗುಟ್ಟನ್ನು ರಕ್ಷಿಸಲು ಅವನು ಯಾರಿಗೂ ತಿಳಿಯದಂತೆ ಮಗುವನ್ನು ಹೊರಗೆ ತಂದು ಹಿಮದಿಂದ ಗಟ್ಟಿಯಾದ ನೆಲದಲ್ಲಿ ಒಂದು ಅಡಿ ಆಳಕ್ಕೆ ಹುಗಿದಿಟ್ಟನು. ೪೫ ನಿಮಿಷಗಳ ನಂತರ ಮಗಳಿಗೆ ಮದ್ದನ್ನು ಕೊಡಲೋಸುಗ ಡಾಕ್ಟರ್ ಕಾರ್ಮಿನ್ ಜರೆಡ್ ಬೆಂಡಿನೆಲ್ಲಿ ಎಂಬವರನ್ನು ಕರೆದರು. ತಂದೆಯು ಡಾಕ್ಟರನಿಗೆ ಎಲ್ಲವನ್ನೂ ತಿಳಿಸಿದನು. ಕೂಡಲೇ ಡಾಕ್ಟರರು ಕೂಸನ್ನು ನೋಡಬೇಕೆಂದು ಆಗ್ರಹಮಾಡಿದ್ದರಿಂದ ಹುಡುಗಿಯ ತಂದೆಯು ವೈದ್ಯನೊಡನೆ ಹೋಗಿ ಹೊಂಡವನ್ನಗೆದು ಮಗುವನ್ನು ಹೊರಗೆ ತೆಗೆದನು. ಈ ಕೂಸನ್ನು ನೋಡಿದ ಡಾ। ಬೆಂಡಿನೆಲ್ಲಿಯವರು American Journal of Surgery ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುತ್ತಾರೆ "ಕೂಸನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅದು ಪೂರ್ಣವಾಗಿ ಬೆಳೆದಿದ್ದರೂ ಮುಖದಲ್ಲೆಲ್ಲ ಕೆಸರು ಕಾಣುತ್ತಿದ್ದರೂ ಮೂಗಿನಲ್ಲಿಯೂ ಬಾಯಿಯ ಒಳಗೂ ಏನೊಂದೂ ಕೆಸರಿರಲಿಲ್ಲ. ಮಗುವನ್ನು ಕೈಗೆ ಹಿಡಿದ ಕೂಡಲೇ ಕೂಗಲಾರಂಭಿಸಿ ಕೈಕಾಲುಗಳನ್ನು ಅಲ್ಲಾಡಿಸತೊಡಗಿತು. ನಾನು ಮಗುವನ್ನು ಹಿಡಿದು ಮನೆಯ ಒಳಗೆ ಹೋದೆ. ಬಿಸಿ ನೀರನ್ನೂ ಕಂಬಳಿಯನ್ನೂ ಕೇಳಿದೆ. ಮಗುವನ್ನು ಬಿಸಿ ನೀರಿನಿಂದ ಸ್ನಾನ ಮಾಡಿಸಿ, ನಿರ್ಮಲ ಬಟ್ಟೆಗಳಿಂದ ನೀರನ್ನು ಒರೆಸಿ ತೆಗೆದು ಕಂಬಳಿಯನ್ನು ಹೊದ್ದಿಸಿದೆ. ಇಷ್ಟರಲ್ಲಿ ನಿಧಾನವಾಗಿ ಕೂಗುತ್ತಿದ್ದ ಮಗು ಈಗ ಜೋರಾಗಿ ಕೂಗತೊಡಗಿತು. ಕೂಸಿನ ತಾಯಿಗೆ ಮದ್ದನ್ನು ಕೊಟ್ಟು ಬಂದೆನು. ನಂತರ ನಾನು ಅತ್ತ ಮೂರು ವಾರ್ತೆ ಸಲ ಮಗುವಿಗೆ ಸ್ವಲ್ಪ ಜ್ವರಬರುತ್ತಿದೆಯೆಂದು ಕೇಳಿ ಮದ್ದುಕೊಡಲು ಹೋಗಿದ್ದೆನು."

ಕೆನರಾ ಬ್ಯಾಂಕ್ ಲಿಮಿಟೆಡ್, ಕುಂದಾಪುರ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನ ಆಭರಣಗಳ ಅಡವಿನ ಮೇಲೆ ಸದ್ರಿ ಬ್ಯಾಂಕಿನಲ್ಲಿ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಕೊಡದೆ ಆ ಕುರಿತು ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸದ್ರಿ ಅಸಾಮಿಗಳು ಮೃತಪಟ್ಟದ್ದಾಗಿ ನೋಟೀಸುಗಳು ವಾಪಾಸ್ ಬಂದಿರುವುದರಿಂದ ಸದ್ರಿ ಸಾಲಗಳಿಗೆ ಜವಾಬ್ದಾರಿ ಇರುವ ಡಾಗಿನೆಗಳನ್ನು ಇದೇ ಬರುವ ನವಂಬರ ತಾ ೨೬ನೇ ಮಂಗಳವಾರ ಹಗಲು ಗಂಟೆ ೧೨ಕ್ಕೆ ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ಯಾವದಾದರೂ ಒಂದು ದಿವಸ ಪುನಃ ನೋಟೀಸ್ ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು ಎಂತ ಈ ಮೂಲಕ ತಿಳಿಯಪಡಿಸಲಾಗುತ್ತದೆ

ಸಾಲದ ನಂಬ್ರ 449/32 ಹೆಸರು ಹಕ್ಲುಂಡಿ ಗಣಪಯ್ಯ ಪ್ರಭು, ಅನಂತ ಪ್ರಭು ಮಗ, ಹಳ್ಳಿ ಹೊಳೆ, ಶಂಕರನಾರಾಯಣ ಪೋಸ್ಟು, ಅಸ್ಲು ಮೊಬಲಗು 100-0-0

ಸಾಲದ ನಂಬ್ರ 598/32 ಹೆಸರು ಬಸ್ರೂರ ಬೈಂದೂರ ಕಾದೀರ ಸ್ಯಾಬ, ಉಮ್ಮರ ಸ್ಯಾಬರ ಮಗ, ಬಸ್ರೂರ ಗ್ರಾಮ ಅಸ್ಲು ಮೊಬಲಗು ರೂ 110-0-0

ಸಾಲದ ನಂಬ್ರ 60/33 ಹೆಸರು ಬಸ್ರೂರ ಬೈಂದೂರ ಕಾದೀರ ಸ್ಯಾಬ ಉಮ್ಮರ ಸ್ಯಾಬರ ಮಗ, ಬಸ್ರೂರ ಗ್ರಾಮ, ಅಸ್ಲು ಮೊಬಲಗು ರೂ 150-0-0

ಸಾಲದ ನಂಬ್ರ 899/33 ಹೆಸರು ಕೆ ವೆಂಕಟ್ರಮಣ, ಟೀಚರ್, ಲೇಬರ್ ಶಾಲೆ, ಕುಂದಾಪುರ, ಅಸ್ಲು ಮೊಬಲಗು ರೂ 40 -

ಸಾಲದ ನಂಬ್ರ 544/34 ಹೆಸರು ಅಂಪಾರ ಕೃಷ್ಣ ಭಟ್ಟ, ಅನಂತ ಭಟ ಮಗ ಶಂಕ್ರನಾರಾಯಣ ಪೋಸ್ಟು, ಅಸ್ಲು ಮೊಬಲಗು ರೂ 40-0-0

Office of the Bank Coondapoor 25 10—1935

For the Canara Bank Ltd Coondapoor
S R Achar,
Agent

ಗೋಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೋಡ್ರೆಜ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೋಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೋಡ್ರೆಜ್

ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಆಫ್ ಕಾಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ, ಬ್ಯಾಕ್ಟೀರಿಯೋಲೊಜಿ ಎಂಡ್ ಬೆಕ್ಟೆರಿಯೋಲೋಜಿ ಇದಕ್ಕೂ ರಸಾಯನಶಾಸ್ತ್ರಗಳಾಗಿರುವ

ಡಾ| ಔಫ್ರೆಚ್ಟ್ ಎಂಬವರು.— 'ನಾನು ಗೋಡ್ರೆಜ್ ವೆಜಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೊಕೊಕಸ್ ಮತ್ತು ಸ್ಟ್ರೆಪ್ಟೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ'' ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಡ್ ಎಂಬವರು. 'ಸುದೀರ್ಘವಾಗಿ ನಾವೇ ಉಪಯೋಗಿಸಿಯೂ ರಾಸಾಯನಿಕ ಮಾಡಿಯೂ ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳ ಒ ಗೌರವಸ್ಥಾನವನ್ನು ಕೊಡಬಯಸುವೆ'' ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ ರವರು — ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ'' ಎಂದರು

ರಾಜ್ಯಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ ಎ ಅನ್ಸಾರಿ, ಎ ಡಿ ಎಂ ಎಸ್ ರವರು—''ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಬಯಸುತ್ತೇನೆ'' ಎಂದಿರುವರು

ಫೆಕ್ಟರಿ — **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು — **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail, Mangalore.

ವಿವಿಧ ವಿಷಯಗಳು.

ಕೆಲವು ಬಂಗಾಳಿ ತರುಣಿಯರು— ವೈಮಾನಿಕ ಶಿಕ್ಷಣವನ್ನು ಹೊಂದಲು ಮುಂದುವರಿದು ಬಂದಿರುತ್ತಾರೆ. ದಾಸ್‌ರೋಯ್ ಮೆಮೋರಿಯಲ್ ಫಂಡ್ ಎಂಬ ಸಂಸ್ಥೆಯು ಈ ಬಗ್ಗೆ ಒಂದು ವೇತನವನ್ನು ಪ್ರಕಟಿಸಲು, ತರುಣಿಯರಿಂದ ಅಸಂಖ್ಯಾತ ಅರ್ಜಿಗಳು ಬಂದಿವೆ. ಈ ವೇತನದ ಮೌಲ್ಯ ರೂಪಾಯಿ ೧೦೦೦. ಆರಿಸಿದ ತರುಣಿಯರ ತರಬೇತಿಯು ಬೆಂಗಾಲ್ ಫ್ಲೈಯಿಂಗ್ ಕ್ಲಬ್ಬಿನಲ್ಲಿ ನಡೆಯುವುದು. ಅರ್ಜಿಗಳಲ್ಲಿ ಒಂದು ಸಿರಿವಂತ ಮುಸ್ಲಿಮ ಸ್ತ್ರೀಯಿಂದಲೂ, ೬ ಪ್ರೌಢ ವಿದ್ಯಾಭ್ಯಾಸ ಪಡೆದ ತರುಣಿಯರಿಂದಲೂ, ಒಂದು ಉಪಾಧ್ಯಾಯಿನಿಯಿಂದಲೂ ಬಂದಿರುತ್ತವೆ. ಲಾಹೋರಿನಿಂದ ಓರ್ವ ತರುಣಿಯು ಅರ್ಜಿಮಾಡಿರುವಳು. ಇದನ್ನು ಕಂಡು ಅನಾಮಧೇಯ ವೇತನವೊಂದು ಮುಂದಕ್ಕೆ ಬಂದಿದೆ. ಇದರ ಮೌಲ್ಯವು ೫೦೦ ರೂಪಾಯಿ. ಇದರಿಂದ ಇನ್ನೊಬ್ಬ ತರುಣಿಯ ವೈಮಾನಿಕ ತರಬೇತುಮಾಡುವ ವ್ಯವಸ್ಥೆಯಾಗುವುದು.

ಮೂಕರಿಗೆ ಮಾತನಾಡಲು ಸಾಧ್ಯವಾಗುವುದು.

ಮೂಕರು ಮಾತನಾಡುವಂತೆ ಒಂದು ನವೀನ ಯೋಜನೆಯನ್ನು ವಿಜ್ಞಾನಿಗಳು ಕಂಡುಹಿಡಿದಿರುವರು. ಇದು ವಿಜ್ಞಾನದ ಒಂದು ಅದ್ಭುತ ಸಾಧನವೆ ಸರಿ. ವಿಜ್ಞಾನವು ಇದೇ ರೀತಿಯಲ್ಲಿ ಮಾನವನ ಹಲವು ಸಂಕಷ್ಟಗಳನ್ನು ನಿವಾರಿಸುತ್ತದೆ. ಈ ಯೋಜನೆಯಿಂದ ಮೂಕರಿಗೆ ನವೀನ ಸ್ವರದಾನವನ್ನು ಮಾಡಬಹುದು. ನಾವು ಮಾತನಾಡುವ ಸಮಯ ಕಂಠನಾಳಕ್ಕೆ ಬೇಕಾಗುವ ಗಾಳಿಯು ಶ್ವಾಸಕೋಶಗಳಿಂದ ಬರುತ್ತದೆ. ಈ ಕಂಠನಾಳದಲ್ಲಿ ಕೆಲವು ವಿಚಿತ್ರ ನರಗಳಿವೆ. ಇವುಗಳಿಗೆ ಶ್ವಾಸಕೋಶದಿಂದ ಬಂದ ಗಾಳಿಯು ತಗಲಿದ ಕೂಡಲೇ ಸ್ವರವು ಹೊರಡುವುದು. ಈ ಸ್ವರವು ಬಾಯಿಯಿಂದ ಹೊರಗೆ ಬರುವುದು. ಮೂಕರಿಗೆ ಸ್ವರದಾನಮಾಡಲು ಒಂದು ಕೃತಕ ಕಂಠನಾಳವನ್ನೇ ನಿರ್ಮಿಸಿರುತ್ತಾರೆ. ಬಾಯಿಗೆ ಸ್ವರ ಹೊರಗಿನಿಂದ ಒದಗಿಸಲು ಇದರಿಂದ ಸಾಧ್ಯವಾಗುತ್ತದೆ. ಶಸ್ತ್ರಚಿಕಿತ್ಸೆಯಿಂದ ಶ್ವಾಸಕೋಶದ ಗಾಳಿಯು ಈ ಕೃತಕ ಕಂಠನಾಳವನ್ನು ಸೇರುವಂತೆ ಮಾಡಿದ್ದಾರೆ. ಅಲ್ಲಿ ಈ ಗಾಳಿಯು ಒಂದು ಲೋಹದ ಸ್ವರನಾಳಿಗೆಯನ್ನು ಕಂಪಿಸುತ್ತದೆ. ಈ ಕೃತಕ ಕಂಠನಾಳವನ್ನು ಧರಿಸಿದವರು ಮಾತನಾಡಲು ಪ್ರಯತ್ನಪಟ್ಟ ಕೂಡಲೆ, ಅವರ ಶ್ವಾಸಕೋಶದಿಂದ ಗಾಳಿಯು ಈ ಕೃತಕ ಕಂಠನಾಳವನ್ನು ಸೇರಿ, ಸ್ವರವು ಬರುವುದು.

ರಷ್ಯದ ವಿದ್ಯಾಭ್ಯಾಸವು.

ಸೋವಿಯಟ್ ಸರಕಾರವು ಅಧಿಕಾರಕ್ಕೆ ಬಂದಂದಿನಿಂದ ರಷ್ಯಾದ ವಿದ್ಯೆಯ ಬೆಳವಣಿಗೆಯು ಪ್ರಾರಂಭವಾಗಿದೆ. ವಿದ್ಯಾಭ್ಯಾಸವು ಸರ್ವರೂ ಪಡೆಯುವಂತೆ ಒತ್ತಾಯದ ಕ್ರಮಗಳು ಜ್ಯಾರಿಯಲ್ಲಿವೆ. ಇದರಿಂದ ಸುಶಿಕ್ಷಿತರ ಸಂಖ್ಯೆಯು ಬಹಳ ಏರಿದೆ. ಕಳೆದ ಕೆಲವು ವರ್ಷಗಳಲ್ಲಿ ಸೋವಿಯಟ್ ಯೂನಿಯನಿನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ೫೦೦೦ ಶಾಲೆಗಳು ತೆರೆಯಲ್ಪಟ್ಟವು. ಶಾಲಾಮಂದಿರಗಳು ಕಡಿಮೆಯಾಗಲೂ ಕೆಲವು ಶಾಲೆಗಳಲ್ಲಿ ದಿನಕ್ಕೆ ಮೂರು ಸಂಗಡ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುತ್ತಿರುವರು. ಹೊಸ ಕಟ್ಟೋಣಗಳು ನಿರ್ಮಾಣವಾಗುತ್ತಿವೆ. ಇನ್ನು ಸ್ವಲ್ಪ ಸಮಯದಲ್ಲೇ ಎಲ್ಲಾ ಮಕ್ಕಳಿಗೆ ಶಾಲೆಯ ಅನುಕೂಲತೆಗಳು ದೊರಕುವವು. ಸಾವಿರಗಟ್ಟಲೆ ಶಾಲಾಕಟ್ಟೋಣಗಳು ನಿರ್ಮಾಣ ಹೊಂದುತ್ತಿವೆ. ಈ ವರ್ಷ ೧೭,೪೦೬,೫೬೦ ಮಕ್ಕಳು ವಿದ್ಯಾಭ್ಯಾಸಂಗವನ್ನು ಮಾಡಿರುವರು. ಈ ವರ್ಷದ ಬಜೇಟಿನಲ್ಲಿ ವಿದ್ಯಾಖಾತೆಗೆ ಕಳೆದ ವರ್ಷಕ್ಕಿಂತ ಶೇಕಡಾ ೩೦೦ ಸಲ ಗ್ರೇಂಟನ್ನು ಹೆಚ್ಚಿಸಿರುವರು. ೧,೭೭೬,೫೦೦,೦೦೦ ರೂಬಲ್ಸುಗಳನ್ನು ವಿದ್ಯಾಭ್ಯಾಸಕ್ಕಾಗಿ ವಿಂಗಡಿಸಿದ್ದಾರೆ. ಈಗ ರಷ್ಯಾದಲ್ಲಿ ೧೩೨,೦೦೦ ಶಾಲೆಗಳಿವೆ. ಸೋವಿಯಟ್ ಸರಕಾರದ ನಿರ್ಮಾಣದಿಂದ ರಷ್ಯಾದ ಪ್ರಗತಿ ಇಷ್ಟು ಮೇಲ್ಮೆಗೆ ಬಂದಿರುತ್ತದೆ.

ರಷ್ಯಾದವರ ಪರಾಕ್ರಮ.

ಟುರ್ಕಮೇನಿಯಾ ಎಂಬುದು ಸೋವಿಯಟ್ ಯೂನಿಯನ್ನಿನ ಅಫ್ಘಾನಿಸ್ಥಾನದ ಹತ್ತಿರವಿರುವ ಪ್ರದೇಶ. ಇಲ್ಲಿಂದ ಮೊಸ್ಕೋನಗರಕ್ಕೆ ೭೫೦೦ ಮೈಲು ಹಾದಿಯಿರುವುದು. ಹಾದಿಯು ಹೆಚ್ಚಾಗಿ ನಿರ್ಜನಪ್ರದೇಶಗಳಿಂದಲೂ ಮರುಳುಭೂಮಿಗಳಿಂದಲೂ ಹಾದುಹೋಗುತ್ತಿದೆ. ಈ ಟುರ್ಕಮೇನಿಯದಿಂದ ೩೪ ಮಂದಿ ವೀರರು ಕುದುರೆಗಳಲ್ಲಿ ಮೊಸ್ಕೋನಗರಕ್ಕೆ ಹೊರಟರು. ಹಾದಿಯು ಬಹಳ ಪ್ರಯಾಸಕರವಾದರೂ, ೮೪ ದಿವಸಗಳಲ್ಲಿ ಸುರಕ್ಷಿತರಾಗಿ ಇವರು ಮೊಸ್ಕೋ ನಗರವನ್ನು ಸೇರಿದರು. ಮೊಸ್ಕೋನಗರದ ಅಧಿಕಾರಿಗಳೂ, ವರ್ತಕರೂ, ಶಾಲಾ ಹುಡುಗರೂ ಇವರನ್ನು ಯೋಗ್ಯರೀತಿಯಲ್ಲಿ ಸ್ವಾಗತೀಕರಿಸಿದರು.

ವಾರ್ತಾತರಂಗ.

ರಷ್ಯಾದಲ್ಲಿ ಕೂಲಿ ಹೆಂಗಸರಿಗೆ ಸಿಗುವ ಸೌಕರ್ಯ.

"ರಷ್ಯಾ ದೇಶದ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಬರುವ ರಮಣಿಯರಿಗೆ ಸಿಗುವ ಸೌಕರ್ಯಗಳು ಇತರ ದೇಶಗಳಲ್ಲಿ ದುರ್ಲಭ. ರಷ್ಯಾ ಸರಕಾರದ ಈ ಧೋರಣೆಯು ಬಾಕಿ ಸರಕಾರಗಳಿಗೊಂದು ಮಾದರಿಯಾದಂತಿದೆ ಎಂದು ಮೇಜರ್ ಡಿ ಗ್ರಹಮ್ ಎಂಬವರು "Modern Review" ಪತ್ರಿಕೆಯಲ್ಲಿ ಬರೆದಿರುತ್ತಾರೆ.

ಕಾರ್ಖಾನೆಗೆ ಕೆಲಸಕ್ಕೆ ಹೋಗುವಾಗ, ಹೆಂಗಸರು ತಮ್ಮ ಕೂಸುಗಳನ್ನು, ಅವುಗಳಿಗಾಗಿ ಏರ್ಪಡಿಸಿಟ್ಟ ಕೋಣೆಯಲ್ಲಿ ಬಿಟ್ಟುಹೋಗಬಹುದು. ಅಲ್ಲಿ ಕೂಸುಗಳಿಗಾಗಿ ಹಾಸಿಗೆಗಳೂ, ಆಟದ ಸಾಮಾನುಗಳೂ, ಸ್ನಾನಕ್ಕಾಗಿ ಬಾತ್‌ಟಬ್ಬುಗಳೂ ಇವೆ. ಅವರ ಆರೈಕೆಯನ್ನು ಮಾಡಲು ವೈದ್ಯರೂ ನರ್ಸುಗಳೂ ಇದ್ದಾರೆ. ಸಮಯಕ್ಕನುಸಾರವಾಗಿ ಉಣಿಸಿ ತಾಯಿಗಿಂತಲೂ ಅಕ್ಕರೆಯಿಂದ ಪಾಲಿಸುತ್ತಾರೆ. ಸಾಯಂಕಾಲ ಹಿಂದಿರುಗುವಾಗ ತಾಯಂದಿರು ತಮ್ಮ ಕೂಸುಗಳನ್ನು ಹಿಂದಕ್ಕೆ ಕರೆದುಕೊಂಡು ಹೋದರಾಯಿತು. ರೈಲ್ವೇ ನಿಲ್ದಾಣದ ಬಳಿಯಲ್ಲೂ ಇಂತಹ ನಿಲಯಗಳು ಏರ್ಪಟ್ಟಿವೆ. ಕೆಲಸ ಮಾಡಿ ದಣಿದ ಲಲನೆಯರಿಗೆ ಮಕ್ಕಳನ್ನು ಹೊತ್ತು ಹೋಗಬಂಡಿಯನ್ನು ಏರುವುದೂ ಇಳಿಯುವುದೂ ಕಂಟಾ ಪ್ರಯಾಸವಾಗುತ್ತಿದೆಯಲ್ಲವೇ? ಅದಕ್ಕಾಗಿ ಈ ಗೃಹಗಳಲ್ಲಿ ಮಕ್ಕಳನ್ನು ಬಿಟ್ಟು ತಾವು ಏನೊಂದು ಶ್ರಮವಿಲ್ಲದೆ ಹೋಗೆಬಂಡಿಯನ್ನು ಕಾದು ನಿಲ್ಲಬಹುದು. ಬಂಡಿಯು ಬರುವ ವರೆಗೆ ಕೂಸುಗಳನ್ನು ಬಹು ಜಾಗರೂಕತೆಯಿಂದ ಆ ನಿಲಯದವರು ನೋಡಿಕೊಳ್ಳುತ್ತಾರೆ.

ಲಂಡನಿನಲ್ಲಿ ಹಿಂದೂದೇವಾಲಯ.

ಹಿಂದೂಮತಪ್ರಚಾರಕರಾದ ಸ್ವಾಮಿ ಬೋಸ್ ಮಹಾರಾಜರವರು ಕಳೆದ ವಾರ ಬೊಂಬಾಯಿಯಿಂದ ಲಂಡನಿಗೆ ತೆರಳಿದರು. ಪ್ರಯಾಣದ ಉದ್ದೇಶವು ಲಂಡನ್ ನಗರದಲ್ಲಿ ಹಿಂದೂ ದೇವಾಲಯವೊಂದನ್ನು ಕಟ್ಟುವದಾಗಿರುತ್ತದೆ. "ಪ್ರಸ್ತುತ ಹಿಂದೂದೇಶದಿಂದ ಹಲವು ಯುವಕರು ಉಚ್ಚಶ್ರೇಣಿಯ ಆಂಗ್ಲ ವಿದ್ಯಾಭ್ಯಾಸಕ್ಕಾಗಿ ಲಂಡನಿಗೆ ತೆರಳುತ್ತಾರೆ. ಅಲ್ಲಿ ಹೋದ ಮೇಲೆ ಹಿಂದೂ ರೀತಿನೀತಿಗಳಲ್ಲಿರಲು ಸಾಧ್ಯವಿಲ್ಲದೆ ಆಂಗ್ಲ ಪದ್ಧತಿಯನ್ನು ಅನುಸರಿಸಿ ನಮ್ಮಗಳ ರೀತಿನೀತಿಗಳಿಗೆ ಕುಂದನ್ನು ತರುತ್ತಾರೆ. ಕಾರಣ ಇಲ್ಲಿ ಬಂದ ಮೇಲೂ ಅದೇ ರೀತಿಯಿಂದ ಅವರು ವ್ಯವಹರಿಸುತ್ತಾರೆ. ಇದೆಲ್ಲವನ್ನೂ ನಿರ್ಮೂಲಮಾಡಬೇಕು. ಆಂಗ್ಲ ದೇಶದಲ್ಲೂ ನಮ್ಮ ಪ್ರೌಢಿಮೆಯನ್ನು ತೋರಿಸಬೇಕು. ಆದ್ದರಿಂದ ಅಲ್ಲಿಗೆ ತೆರಳಿ ಒಂದು ಸುಂದರ ಪ್ರದೇಶದಲ್ಲಿ ಒಂದು ವೈಷ್ಣವ ದೇವಾಲಯವನ್ನು ತೆರೆಯುವ ಏರ್ಪಾಡನ್ನು ಮಾಡುವುದು ಏಕಿ. ನಮ್ಮ ದೇಶೀಯ ಜನರನ್ನು ಪಾಶ್ಚಿಮಾತ್ಯರ ಹಿತದಿಂದ ರಕ್ಷಿಸಲು ಇದೊಂದು ಒಳ್ಳೆಯ ಸಲಹೆ ಎಂದು ನನ್ನ ಭಾವನೆ. ಹಿಂದೂಗಳೆಲ್ಲರೂ ಈ ದೇವಸ್ಥಾನದ ಹತ್ತಿರ ಕಟ್ಟಲ್ಪಡುವ ಹಿಂದೂ ವಸತಿಗಳಲ್ಲಿ ವಾಸಿಸುವುದರಿಂದ ನಮ್ಮ ಕಟ್ಟುಕಟ್ಟಲೆಯಂತೆ ಜೀವಿಸಲು ಯಾರ ನಿರ್ಬಂಧವೂ ಇರಲಿಕ್ಕಿಲ್ಲ" ಎಂದು ಬೊಂಬಾಯಿಯಲ್ಲಿ ಇವರು ಪ್ರಯಾಣ ಬೆಳೆಸುವ ಮೊದಲು ಹೇಳಿದ ಭಾಷಣದ ಸಾರಾಂಶ.

ಈ ದೇವಾಲಯವನ್ನು ಕಟ್ಟಲು ತಗಲುವ ಖರ್ಚನ್ನು ತಾನು ಕೊಡುವೆನಾಗಿ ತ್ರಿಪುರಾದೇಶ ಮಹಾರಾಜರು ಭಾಷೆಯನ್ನಿತ್ತಿದ್ದಾರೆ. ಅಲ್ಲದೆ, ದೇವಾಲಯವನ್ನು ಕಟ್ಟುವರೇ ಬೇಕಾದ ಸ್ಥಳದ ಮೊಬಲಗನ್ನು ತಾವು ಕೊಡುವವಾಗಿ ಸಂತೋಷದ ಅರಸರೂ ಶ್ರೀ ಬಿ ಕೆ ಬಾಸುಗಳವರೂ ಮತ್ತು ಕಲ್ಕತ್ತದ ಶ್ರೀ ಎಚ್ ಎಸ್ ದತ್ತರೆಂಬವರೂ ವಾಗ್ದಾನವಿತ್ತಿರುವರು. ಸ್ವಾಮಿಗಳವರು ಸ್ಥಳವನ್ನು ಗೊತ್ತುಮಾಡಿದ ನಂತರ ಪುನಹ ಹಿಂದೂದೇಶಕ್ಕೆ ಹಿಂದಿರುಗುವವರಿದ್ದಾರೆ.

ಅಮೇರಿಕದಲ್ಲಿ ಭಗವಾನ್ ಬುದ್ಧನ ಎಲುಬು.

ಬೌದ್ಧಮತಾವಲಂಬಿಗಳು ಅಮೇರಿಕದಲ್ಲೂ ಇರುವರಷ್ಟೆ. ಅವರು ಇತ್ತೀಚೆಗೆ ಮಾಡಿದ ಗಹನವಾದ ಕೆಲಸವೆಂದರೆ, ಹಿಂದೂದೇಶದಿಂದ ಬುದ್ಧನ ಎಲುಬನ್ನು ತಂದು ಅವರ ದೇಗುಲದಲ್ಲಿ ಇರಿಸಿದ್ದು. ಈಗ ಪ್ರಪಂಚದಲ್ಲಿ ಎಲ್ಲೂ ಸಿಗದ ವಸ್ತುವಿದು. ಸೆನ್ ಫ್ರಾನ್ಸಿಸ್ಕೋ ನಗರದ ಬಿಶಪ್ ಕೆಂಗೋ ಎಂಬವರ ನಿಲಯದಲ್ಲಿ ಬಂಗಾರದ ಪೆಟ್ಟಿಗೆಯೊಂದರಲ್ಲಿ ಇಡಲ್ಪಟ್ಟಿದೆ. ಈತನಿಗೆ ಸಯಾಮಿನ ರಾಜನಿಂದ ಪಾರಿತೋಷಕವಾಗಿ ಬಂದ ವಸ್ತುವಿದು, ಬಹು ಅಮೂಲ್ಯ. ಬಿಶಪ್ ಕೆಂಗೋರವರ ಮನೆಯಲ್ಲಿ ಅದಕ್ಕೆ ದಿನವಹಿ ಪೂಜೆಯು ಸಾಗುತ್ತಿದೆ.

ಒಬ್ಬನು ತಕ್ಷಣವೇ ಮಡಿದನು ಮೂವರಿಗೆ ಪ್ರಾಣಾಂತಿಕ ಘಾಯಗಳಾಗಿವೆ.

ಮೋಟರಕಾರುಗಳೆರಡು ಢಿಕ್ಕಿ ಬಡೆದವು.

ಮದ್ರಾಸು, ಒಕ್ಟೋಬರ ೩೭.

ಈ ದಿನ ಬೆಳಗ್ಗೆ ೯—೩೦ ಘಂಟೆಗೆ ಮರೀನಾ ಎಂಬಲ್ಲಿ ಎರಡು ಮೋಟಾರು ಕಾರುಗಳು ಢಿಕ್ಕಿ ಬಡೆದು ಭಯಂಕರ ದೃಶ್ಯವೊಂದನ್ನು ಜನತೆಗೆ ತೋರಿಸಿತು. ಮೋಟಾರಿನಲ್ಲಿ ಕುಳಿತಿರುವವರಲ್ಲಿ ಒಬ್ಬನು ಕೂಡಲೇ ಸತ್ತನು. ಬಾಕಿ ಮೂರು ಮಂದಿಗೆ ಮರಣಾಂತಿಕ ಘಾಯಗಳಾಗಿವೆ. ಸಿನೆಮಾ ದೃಶ್ಯಗಳನ್ನು ತೆಗೆಯಲು ಹೋಗುತ್ತಿದ್ದವರಿಗೆ ಸಂಭವಿಸಿದ ದುರವಸ್ಥೆ.

ಮಿ। ನಾರಾಯಣ ಸ್ವಾಮಿ ಅಯ್ಯಂಗಾರ್—ಸುಂದರಮ್ ಸೌಂಡ್ ಸ್ಟುಡಿಯೊ ಇದರ ಚಾಲಕರು, ಮೃತರಾದರು. ಮಿ। ಪಿ ಕೆ ವಿಶ್ವನಾಥ ಅಯ್ಯರ್—ಅದೇ ಕಂಪೆನಿಯ ಸೌಂಡ್ ಇಂಜಿನಿಯರ್—ಇವರಿಗೆ ತಲೆಯಲ್ಲಿ ಭಯಂಕರ ಪೆಟ್ಟಾಗಿದೆ. ಮಿ। ಅಬ್ದುಲ್ ಸತ್ತಾರ—ಮುಸಲ್ಮಾನ ಗಾಯಕ—ಇವನಿಗೂ ತಲೆಗೆ ಪೆಟ್ಟಾಗಿದೆ.

ವಿ। ಸಂಪಾತಿ—ಬೆಂಡ ವಾದ್ಯದ ಹುಡುಗ ಇವನಿಗೂ ಮೃತಪ್ರಾಯ ಘಾಯಗಳಾಗಿವೆ. ಬದುಕುವದೇ ಕಷ್ಟವೆಂದು ವೈದ್ಯರು ಅಭಿಪ್ರಾಯಪಟ್ಟಿರುವರು.

ಮೇಲೆ ಹೇಳಿದವರು ಎಂ ಸಿ ಪಿ ೩೯೦ನೇ ಮೋಟಾರಕಾರಿನಲ್ಲಿ ಕುಳಿತು ಕಬೀರದಾಸ ನಾಟಕದ ಕೆಲವು ದೃಶ್ಯಗಳನ್ನು ತೆಗೆಯಲು ಮರೀನ್ ಮಾರ್ಗದ ಮುಖೇನ ಹೋಗುತ್ತಿದ್ದರು. ಮರೀನ್ ಮಾರ್ಗಕ್ಕೆ ಬರುತ್ತಲೇ ಸ್ವಲ್ಪ ದೂರದಲ್ಲಿದ್ದ ದಿ ಕ್ವೀನ್ಸ್ ಮೇರಿ ಕಾಲೇಜಿನಿಂದ ಒಂದು ಮೋಟರಕಾರು ಬರುವುದನ್ನು ಕಂಡು ೩ ನೇ ಕಂಪೆನಿಯ ಮೋಟರಕಾರಿನ ಡ್ರೈವರನಾದ ಮಿ। ಕೇಶವ ಅಯ್ಯರನೆಂಬವನು ಢಿಕ್ಕಿ ಬಡೆಯುವುದನ್ನು ತಪ್ಪಿಸಲೋಸುಗ ಮೋಟಾರಕಾರನ್ನು ಬಲಕ್ಕೆ ತಿರುಗಿಸಿದನು. ಆದರೆ ಪ್ರಯೋಜನವಾಗಲಿಲ್ಲ. ಮೋಟಾರುಗಳೆರಡು ಢಿಕ್ಕಿ ಬಡೆದು ಅವಘಡವೆಂಬ ವಿಸಿಯೇ ಬಿಟ್ಟಿತು. ಕಾಲೇಜಿನಿಂದ ಬರುತ್ತಿದ್ದ ಮೋಟಾರ ಕಾರಿನಲ್ಲಿದ್ದ ಮಿಸೆಸ್ ಮಾಲ ಎಂಬವಳಿಗೆ ಏನೊಂದೂ ಅಪಾಯವು ಸಂಭವಿಸದೆ ಇದ್ದುದು ಆಶ್ಚರ್ಯ.

ಅಲ್ಲಿಯೇ ಹೋಗುತ್ತಿದ್ದ ಓರ್ವ ಹೆಂಗಸು ತನ್ನ ಮೋಟಾರಕಾರಿನಲ್ಲಿ ಮಿ। ವಿಶ್ವನಾಥ ಅಯ್ಯರ ಅಬ್ದುಲ್ ಸತ್ತಾರ ಮತ್ತು ಸಂಪಾತಿ ಇವರನ್ನು ಮಲಗಿಸಿ ಸ್ವತಃ ಆಸ್ಪತ್ರೆಗೆ ಕೊಂಡೊಯ್ದಳು. ಡ್ರೈವರನಾದ ಕೇಶವ ಅಯ್ಯರನನ್ನು ಆಸ್ಪತ್ರೆಗೆ ಕೊಂಡುಹೋಗಿದ್ದರು. ಅವನಿಗೆ ಅಷ್ಟೊಂದು ಬಲವತ್ತರವಾದ ಘಾಯಗಳಾಗಿರಲಿಲ್ಲ. ನಾರಾಯಣ ಸ್ವಾಮಿ ಅಯ್ಯಂಗಾರರನ್ನು ಮೇರಿ ಕಾಲೇಜಿನ ಬಸ್ಸಿನಲ್ಲಿ ಮಲಗಿಸಿ ಕಾಲೇಜಿನ ಅಧಿಕಾರಿಗಳು ಆಸ್ಪತ್ರೆಗೆ ಕೊಂಡುಹೋದರು. ಆದರೆ ಅಲ್ಲಿ ಹೋದ ಐದ ನಿಮಿಷಗಳಲ್ಲೇ ಅವರು ತೀರಿಹೋದರು.

ಈ ಸಮಾಚಾರವನ್ನು ಕೇಳಿ ಪೋಲೀಸರು ಅಲ್ಲಿಗೆ ಬಂದು ಮೋಟಾರುಕಾರುಗಳನ್ನು ಸ್ವಾಧೀನ ಪಡಿಸಿಕೊಂಡು ವಿಚಾರಣೆಯಲ್ಲಿ ತೊಡಗಿದ್ದಾರೆ.

ವಿವಾಹಿತಳಾದ ತರುಣಿಯೋರ್ವಳು ತರುಣನಾಗಿದ್ದಾಳೆ

ಇವಳು ಕಾತೀವಾರಿನ ಐಶ್ವರ್ಯವಂತನ ಮಗಳಾಗಿದ್ದಳು. ಇವಳಿಗೆ ವಿವಾಹವಾಗಿ ಇವತ್ತಿಗೆ ಆರು ವರ್ಷಗಳು ಆಗಿವೆ. ಇವಳ ಪ್ರಾಯವು ೧೮. ೧೨ನೇ ವಯಸ್ಸಿನಲ್ಲಿ ಇವಳಿಗೆ ವಿವಾಹವಾದದ್ದು. ಈ ಆರು ವರ್ಷಗಳಲ್ಲಿ ಇವಳ ಸರ್ವಾಂಗಗಳಲ್ಲಿ ಪುರುಷತ್ವದ ಬದಲಾವಣೆ ಆಗಿ, ಅವಳೂ ಒಬ್ಬ ಯುವಕನೇ ಆಗಿದ್ದಾಳೆ. ಆಶ್ಚರ್ಯಗೊಂಡು ಈಕೆಯ ಗಂಡನು ಇವಳನ್ನು ತವರುಮನೆಗೆ ಕಳುಹಿಸಿಕೊಟ್ಟಿರುವನು.

ಈಕೆಯ ತಂದೆಯು ಮಹಾಸಿರಿವಂತ. ಈಕೆಯು ಒಬ್ಬಳೇ ಮಗಳು. ಅವನು ಈಗ ಮೃತನಾಗಿರುತ್ತಾನೆ. ಅವನ ಐಶ್ವರ್ಯವು ಆತನ ಕುಟುಂಬದವರಲ್ಲಿ ಯಾರಿಗೂ ಹೋಗಿತ್ತು. ಈಗ ಆ ಹುಡುಗಿಯು ಹುಡುಗನಾದುದರಿಂದ ಆ ಆಸ್ತಿಯ ಮೇಲೆ ಅಧಿಕಾರ ಹೊಂದಿದವನಾಗಿದ್ದಾನೆ. ಆಸ್ತಿಯು ಇವನಿಗೆ ಸಲ್ಲುವುದೋ? ಈ ಬಗ್ಗೆ ಕಾನೂನು ಹೇಗೆ ಇದೆಯೆಂದು ನೋಡಲಿದೆ.

ಅಮೇರಿಕದಲ್ಲಿ ೮ ಮಿಲಿಯ ನಿರುದ್ಯೋಗಿಗಳಿರುವರು

ಆಕಾಶದಿಂದ!

ಮೊದಲು ತಾವಾ ಕೊಂಗ್ರೆಸುವಾಲರಾಗಿದ್ದ ಕೆಲವರು ಈಗ ಕೊಂಗ್ರೆಸ್ ಉಮೇದುವಾರರೆಗಿದಿರಾಗಿ ಚುನಾವಣೆಗಿಳಿದಿದ್ದಾರೆ. ಆಶ್ಚರ್ಯವೆಂದರೆ ಇವರು ಮಾತ್ರ ಇನ್ನೊಂದು ಕೊಂಗ್ರೆಸಾಗಿಯೇ ಇಳಿದಿದ್ದಾರೆ!

× + × × × ×

"ಕೊಂಗ್ರೆಸ್ ಸಿಥಿರ್‌ಬೋರ್ಡಿನ ನೇಮಕ ಸರಿಯಾದುದಲ್ಲ"ವೆಂಬುದೇ ಇವರು ಹೂಡುವ ವಾದ. ಆದ್ದರಿಂದ ಸರಿಯಾದ ನೇಮಕಮಾಡಿಕೊಳ್ಳುವ ಕೊಂಗ್ರೆಸು ಇದರಿಗೆ ಇವರೇ ಅಣಿಯಾಗಿದ್ದಾರೆ!

× × × × × ×

ಎಂತಹ ಪರಿಸ್ಥಿತಿಯಲ್ಲಿಯೂ 'ಕೊಂಗ್ರೆಸ'ನ್ನು ಬಿಡದಿರುವದೆಂದರೆ ಹೀಗೆ! ಕಷ್ಟವಾದರೆ ಕೊಂಗ್ರೆಸೇ ಇದರಿಂದ ಬಿಡಿಸಿಕೊಳ್ಳಬೇಕಾದೀತು.

× × × × × ×

"ಅಂಬೇಡ್ಕರರು ಗಾಂಧಿಯವರೊಡನೆ ಸೇರಿ ಅಸ್ಪೃಶ್ಯತಾ ನಿವಾರಣೆಯ ಕೆಲಸವನಾಡಲಿ" ಎಂದು ಮಾಲವೀಯರ ಸೂಚನೆ. ಕೆಲಸಮಾಡದೆ ಸೇರಿಸಿಕೊಳ್ಳುವವರಿರುವಾಗ ಅಂಬೇಡ್ಕರರಿಗೆ ಇದು ಕಷ್ಟತೋರದೆ?

× × × × ×

ಅನ್ಯಮತಕ್ಕೆ ಸೇರುವದೆಂದರೆ ಮತಾಂತರಗೊಳಿಸುವ ಕೆಲಸವನ್ನು ಕೂಡಾ ಅವರೇ ಮಾಡಿ ಅಸ್ಪೃಶ್ಯತೆಯನ್ನು ತೆಗೆಯುತ್ತಾರೆ. ಹಾಗೆ ಸೇರುತ್ತೇವೆಂದು ಹೇಳುವ ಕೆಲಸವನ್ನು ಅಂಬೇಡ್ಕರರು ಮಾಡಿಯಾರಿದೆ. ಇನ್ನು ಕೆಲಸಮಾಡಬೇಕೆಂದರೆ?

× × × × × ×

ಮದ್ರಾಸು ಗವರ್ನರರು ನಮ್ಮ ಜಿಲ್ಲೆಯಲ್ಲಿ ಭೇಟಿಯಾದವರಲ್ಲಿ ದೊಡ್ಡವನೆಂದರೆ ಕಾರ್ಕಳ ಗೋಮಟೇಶ್ವರ. ಯಾವ ಬೇಡಿಕೆಯನ್ನೂ ಮಾಡದಿದ್ದುದರಿಂದ ಆವನ ದೊಡ್ಡಸ್ತಿಕೆಯೂ ತೋರಿಬಂತು.

× × × × × ×

ಗವರ್ನರರ ಅನುಕೂಲಕ್ಕೆ ನೋಡಿಯೇ ಕಡಿಯಾರಿನ ಕಂಬಳಕ್ಕೆ ದಿನವಿಡಲಾಗಿತ್ತು. ಇನ್ನುಮುಂದೆ ಕಂಬಳಗಳು ಕೋಣಗಳ ಅನುಕೂಲತೆ ನೋಡಿ ಅಲ್ಲ' ಕಂಬಳಕ್ಕೆ ಮನುಷ್ಯರನ್ನು ಮೆರವಣಿಗೆಯಿಂದ ಕೊಂಡು ಹೋಗಲಾಗುತ್ತದೆ.

× × × × × ×

ಇಟಲಿಯವರು ಅಬಿಸೀನಿಯದ ಒಂದೊಂದೇ ನಗರವನ್ನು ಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ. ಬೇಗನವರು ಸ್ವಾಂಕ್ಷನ್ ಇವರಿಗೆ ತರಲು ಒಂದೊಂದೇ ದಿನವನ್ನು ಇಡುತ್ತಿದ್ದಾರೆ. ಅಲ್ಲಿ ಹಲವು ನಗರಗಳಾಗುವಾಗ ಇಲ್ಲಿ ಹಲವು ದಿನಗಳೂ ಆಗುವುವು. ಹೆದರಿಕೆಯಿಲ್ಲ.

—ಗರುಡ

ಉಡುಪಿ

ಸ್ಥಳೀಯ ಜಮ್ಮಾನಾ ಕವಿ ಟಿಯು ಪದವಾದ ಕ್ರಿಕೆಟ್ ಪಂದ್ಯಾಟದಲ್ಲಿ 'ಬೋನಾಫಿದ್' ಟೀಮುಗಳೊಳಗೆ ಸ್ಥಳೀಯ ಎಂ ಎಸ್ ಸಿ ನವರು ಜಯಶೀಲರಾಗಿರುತ್ತಾರೆ.

ಇದೇ ನವಂಬರ ೩೬ ೧೭ರಿಂದ ಇಲ್ಲಿ ಜಾರಿಗೆ ಬರಲಿರುವ ಮ್ಯುನಿಸಿಪಾಲಿಟಿಗೆ ಜಿಲ್ಲಾ ಸಂಬಂಧಿತ ಆಫೀಸರರೇ ಸ್ಪೆಶಲ್ ಆಫೀಸರರಾಗಿ ನೇಮಕಗೊಂಡಿದ್ದಾರೆಂದು ಮೂರು ಮಂದಿ ಅಫೀಸು ಕ್ಲಾರ್ಕರೂ ಇಬ್ಬರು ಪೇದೆಗಳೂ ಸೆಂಕ್ಷನ್ ಆಗಿದೆಯೆಂದು ತಿಳಿದುಬರುತ್ತದೆ.

ಉಡುಪಿ ತಾಲೂಕುಬೋರ್ಡು ಹಾ ಎ ಶಾಲೆಗಳ ಉಪಾಧ್ಯಾಯರ ಬಗ್ಗೆ ಲಘುವಿಜ್ಞಾನ ಶಾಸ್ತ್ರದಲ್ಲಿ "ರಿಫ್ರೆಶರ್ ಕೋರ್ಸ್" ಜ ಬೋ ಅಧ್ಯಕ್ಷರ ಅಪ್ಪಣೆಮೇರೆಗೆ ಸ್ಥಳೀಯ ಬೋ ಹೈಸ್ಕೂಲಿನಲ್ಲಿ ಶ್ರೀ ಎಚ್ ದೇವರಾವ್, ಬಿ ಎ, ಎಲ್ ಟಿ, ಸಾಯನ್ಸ್ ಅಸಿಸ್ಟೆಂಟ್ ಇವರಿಂದ ತಾ ೩೧ಕ್ಕೆ ಪ್ರಾರಂಭಿಸಲ್ಪಟ್ಟು ನವಂಬರ ತಾ ೪ರ ವರೆಗೆ ಜರಗುವುದು. ಇದೇ ರೀತಿ ಕುಂದಾಪುರ ಪುತ್ತೂರುಗಳಲ್ಲೂ ವ್ಯವಸ್ಥೆ ಮಾಡಲಾಗಿದೆಯೆಂದು ಕೇಳುತ್ತೇವೆ.

ತಾ ೨೬ಕ್ಕೆ ಸಾಯಂಕಾಲ ರಥಬೀದಿಯಲ್ಲಿ ಅಖಿಲ ಭಾರತ ಗೋರಕ್ಷಣ ಪ್ರಚಾರ ಸಮಿತಿಯವರ ಸೂಚನೆ ಮೇರೆಗೆ ಗೋರಕ್ಷಣ ದಿನದ ಸಂಬಂಧವಾಗಿ ಡಾ। ಪಿ ಜಿ ಆಚಾರ್ಯ ಜ ಬೋ ಮೆಂಬರರ ಅಧ್ಯಕ್ಷತೆಯಲ್ಲಿ ಮಹಾಸಭೆ ಸೇರಿತು. ರಾ। ಗಳಾದ ಕೊರಡ್ಕಲ್ ಶ್ರೀನಿವಾಸರಾವ್, ಬಿ ಶ್ರೀನಿವಾಸಭಟ್ ಮತ್ತು ಮುದ್ರಾಡಿ ಜನಾರ್ದನಾಚಾರ್ಯರು ಸಂದರ್ಭೋಚಿತ ಭಾಷಣ ಮಾಡಿ ಗೋರಕ್ಷಣೆಯ ಆವಶ್ಯಕತೆ, ಪ್ರಾಮುಖ್ಯತೆಯ ಕುರಿತು ಪ್ರಸ್ತಾಪಿಸಿದರು. ಅನುಕೂಲವಿದ್ದಲ್ಲಿ ಇಲ್ಲೂ ಒಂದು ಗೋರಕ್ಷಣ ಶಾಖೆಯನ್ನು ತೆರೆಯುವುದರಲ್ಲಿದ್ದಾರೆ.

ಬೊಂಬಾಯಿ ಡ್ಯಾಫ್ ಎಕ್ಸ್‌ರೆನ್ಸ್ ಕಂಪೆನಿಯವರು ತಮ್ಮ ಮುಖ್ಯ ಏಜನ್ಸಿ (ಮೆಸರ್ಸ್ ಕೊಟ್ಟಾರಿ ಬಂಧುಗಳ) ಆಫೀಸಿನ ಬಗ್ಗೆ ಪಡಕೊಂಡಿರುವ ಅಜ್ಜರಕಾಡಿನ ಜಾಗದಲ್ಲಿ ತಾ ೩೦ರಿಂದ ಕಟ್ಟೋಣಕ್ಕೆ ಪ್ರಾರಂಭಿಸಿರುತ್ತಾರೆ.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್
ಸಾರ್ಸ ಪೆರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿ ನೋಡಿ
[illegible]
ಡಾ॥ ಗೌತಮ ರಾವ್
ಕೇಶವರವರ
ಪ್ರೊಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, [illegible], ಮುಂಬಯಿ ೩
ಸ್ಟಾಕಿಸ್ಟ್ [illegible] ಮಂಗಳೂರು
[[illegible]

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA——AND——MANGALORE.

Now For Sale.

Poholatum (Balm) (German make) This is a h me remedy for Rheumatism Asthma Sciatica, Lumbago Insect bites Herpes Wounds Cuts Colds, Headache It is a complete substitute for the [illegible] medicine chest Try once this unequalled remedy In [illegible] tin As 3 In [illegible] jar As 12 -

Superior Red Balm For relieving pains in muscles and on skin Directions for use with the bottle Price As 12 only

Wurmteufel Is a s vert[illegible] remedy against all sorts of worms in stomach and in the intestines [illegible] [illegible] [illegible] desirable it is [illegible] [illegible] warmly recommend it All those who suffer from worms [illegible] and adults try the unique remedy and be freed from your ailment Price As 10 per packet

Pocket Inhaler For [illegible] [illegible] [illegible] headache catarrh [illegible] use this [illegible] [illegible] relieved immediately Price per inhaler [illegible]

Po-Ho Fluid For Asthma [illegible] [illegible] headache [illegible] [illegible] remedy [illegible] [illegible] As [illegible] and Rs 1 per [illegible]

Cough Cure An infallible remedy for cough of all kinds bronchitis hoarseness [illegible] [illegible] Price As 12 for 3 oz bottle

The New Curative Earth A Rahum [illegible] [illegible] diseases

Mithra Toilet Soaps— Scientifically prepared [illegible] soaps excellent for health Price As 1 [illegible] 2 [illegible] [illegible] 4

Basel Mission Book Dpot
Mangalore, Branches in Codialbail Hubli Calicut

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ–ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯಪರೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. —— ಯಥೋಚಿತವಾದ ಪುರಸ್ಕಾರಗಳಿವೆ. —— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಪತ್ರಿಕೆಗಳಿಗೆ–ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಬಾತ್ಮಿದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.- ಸಂ. ಸ್ವ.]

ಕುಂಭಕಾಶಿ ಪಂಚಾಯತಕೋರ್ಟು ಮೆಂಬರರ-ಚುನಾವಣೆ.

ತಾ. ೨೬-೧೦-೩೬ನೇ ಸೋಮವಾರ ಅಪರಾಹ್ನ ಗಂಟೆ ೬ಕ್ಕೆ ಇಲ್ಲಿಯ ಪಂಚಾಯತಕೋರ್ಟು ಮೆಂಬರರ ಚುನಾವಣೆಯು ಮ. ರಾ. ಕುಂದಾಪುರ ತಹಶಿಲ್‌ದಾರರವರ ಅಧ್ಯಕ್ಷತೆಯಲ್ಲಿ ನಡೆಯಿತು ೧೪ ಜನ ಉಮೇದ್ವಾರರೂ, ಸುಮಾರು ೫೦೦ ಜನ ಓಟರರೂ ನೆರೆದಿದ್ದರು, ಮಧ್ಯಾಹ್ನ ೧೨ ಗಂಟೆಗನೇ ಜನಸಂದಣೆಯು ಕೂಡಿತ್ತು ಅಪರಾಹ್ನ ೩ ಗಂಟೆಗಳ ವರೆಗೆ ಜನರು ಕೆಕ್ಕರಿಸಿ ಕೋಲಾಹಲವು ವಿಶೇಷವಾಗಿತ್ತು ಆದರೆ ಪೋಲಿಂಗ್ ಆಫೀಸರರು ೪ ಗಂಟೆಯ ವರೆಗೂ ಬಾರದೆ ಇದ್ದುದರಿಂದಲೂ, ಗಾಳಿಮಳೆ ಹೊಡೆತವು ವಿಶೇಷವಾಗಿದ್ದುದರಿಂದಲೂ, ಜನರು ಬೇಸತ್ತು ವೈಮನಸ್ಸಿನಿಂದ ಹೆಚ್ಚಿನವರು ಹಿಂದಿರುಗಿದರು ಉಮೇದ್ವಾರರ ಬಲವಂತಕ್ಕಾಗಿ ಕೆಲವರು ಛಳಿಯಲ್ಲಿ ನಡುಗುತ್ತಾ ನಿಂತರು ಅಷ್ಟರಲ್ಲಿಯೇ ರಾಯರ ಸವಾರಿಯು ಪ್ರಕೋಪವಾಯಿತು ಓಟನ್ನು ಎಣಿಸುವುದು ಕೈಯೆತ್ತುವುದರಿಂದಲೋ, ಬಾಯಿಂದ ಹೇಳುವುದರಿಂದಲೋ ಎಂಬ ಚರ್ಚೆಯುಂಟಾಗಿ ಕೊನೆಗೆ ತಹಶಿಲ್‌ದಾರರವರ ಮತದಂತೆ ಯಾವುದೋ ಒಂದು ರೀತಿಯಿಂದ ಚುನಾವಣೆಗೆ ಆರಂಭವಾಯಿತು ಅಷ್ಟರಲ್ಲಿಯೇ ಆಕ್ಷೇಪಣೆ ಅರ್ಜಿಗಳು ಉಮೇದ್ವಾರರಿಂದ ನಾನಾ ರೂಪವಾಗಿ ಬರತೊಡಗಿದುವು. ತಹಶಿಲ್‌ದಾರರು ಕಾರಣಾಂತರಗಳಿಂದ ಅವುಗಳನ್ನು ಸ್ವೀಕರಿಸಲಿಲ್ಲ ಕೊನೆಗೆ ನಾಲ್ಕು ಜನ ಸೆಟ್ಟರನ್ನೂ ಒಬ್ಬ ಭಟ್ಟರನ್ನೂ ಕೂಡಾ ೫ ಮಂದಿಯನ್ನು ಆರಿಸಿ ೬॥ ಗಂಟೆಗೆ ಹೊರಟುಹೋದರು ಮರುದಿನ ಕುಂದಾಪುರ ಸಬ್ ಕಲೆಕ್ಟರ್ ದೊರೆಗಳವರಿಗೆ ಗ್ರಾಮಸ್ಥರ ಹಾಗೂ ಉಮೇದ್ವಾರರ ಅರ್ಜಿಗಳು ಹೋದುವು ಮಾನ್ಯ ಕಲೆಕ್ಟರ್ ದೊರೆಗಳವರು ಬಡ ಗ್ರಾಮಸ್ಥರ ಮನವಿಯನ್ನು ಮನ್ನಿಸಿ ಪುನಃ ಇಲೆಕ್ಷನ್ ಮೂಲಕ ನ್ಯಾಯತೀರ್ಮಾನ ಮಾಡಿಯಾರು ಎಂದು ನಂಬಿರುತ್ತೇನೆ

ಕುಂಭಕಾಶಿ, ೨೫-೧೦-೩೬ } ಪ್ರತ್ಯಕ್ಷದರ್ಶಿ ನಾಡಿಗ.

ಧನಿಕರಿಗೊಂದು ಎಚ್ಚರಿಕೆ.

ಪ್ರಪಂಚವು ಈಗ ಸಾಕಷ್ಟು ಕಣ್ಣು ತೆರೆದಿದೆ ಇಂದಿನ ನವಜಾಗೃತಿ ಎಂದರೆ ಸಮತಾವಾದ. ಲೋಕವು ಇಲ್ಲಿಯ ವರೆಗೂ ಹೊರಳಾಡಿಕೊಂಡು ಬಂತು ಇದನ್ನು ಹೇಗೆ ಕರೆಯಲಿ? ಅಭಿವೃದ್ಧಿಯೆಂದೋ ಅವನತಿಯೆಂದೋ! ಇದರ ಗುಟ್ಟನ್ನರಿಯಲು ಪ್ರಯತ್ನಿಸೋಣ ಸಂಪತ್ತಿನ ಸಮಾನತೆಯೇ ಸಮತಾವಾದಿಗಳ ಧ್ಯೇಯ ಸುತ್ತುಮುತ್ತಲಿನ ಸಾವಿರ ಮಂದಿ ಅನ್ನಕ್ಕಾಗಿ ಕೂಗುವಾಗ ಒಬ್ಬನೇ ಒಬ್ಬನು ದೌಲತ್ತಿನಿಂದ ಹೂಂಕರಿಸುತ್ತಿದ್ದಾನಲ್ಲ - ಅದೇಕೆ ಎಂಬ ದೇ ಸಮತಾವಾದಿಗಳ ಪ್ರಶ್ನೆ ಆ ದೌಲತ್ತು ಕಷ್ಟವಿಲ್ಲದೆ ಬಂತೇನು? ಒಬ್ಬನ ಸ್ವಪ್ರಯತ್ನವಿಲ್ಲದೇ ಆತನ ಹಿರಿಯರ ಪ್ರಯತ್ನದ ಪ್ರತಿಫಲವೇ ಆ ಸಂಪತ್ತು ಅದಕ್ಕೆ ಇನ್ನೊಬ್ಬರು ಆಶಿಸುವುದೆಂದರೇನು? ಎಲ್ಲರೂ ಅಂತಹ ಧನಿಕರಾಗಲು ಪ್ರಯತ್ನಿಸುತ್ತಿರುವಾಗ ಕೃತಕೃತ್ಯರಾದವರನ್ನು ತಪ್ಪುಗಾರರೆಂದು ತೀರ್ಮಾನಿಸುವುದೆಂದರೆ ಅದು ಮತ್ಸರವಲ್ಲವೆ? ಎಂದು ಉತ್ತರಿಸುವವರೂ ಇದ್ದಾರೆ. ಈ ಗಡಿಯೊಳಗೆನೇ ಸಮತಾವಾದದ ನ್ಯಾಯವೂ ಅಡಗಿ ಕೂತಿದೆ ಮೊದಲಾಗಿ ಸಂಪತ್ತನ್ನು ಕೂಡಹಾಕುವ ಕೆಲಸವನ್ನು ನೋಡೋಣ ಒಬ್ಬ ಜಮೀನ್ದಾರನು ಅಥವಾ ಒಂದು ಕಾರ್ಖಾನೆಯ ಮ್ಯಾನೇಜರನು ತನಗಿಂತಲೂ ಹೆಚ್ಚಾಗಿ ಸಾವಿರಾರು ಮಂದಿ ಕೆಲಸಗಾರರನ್ನು ದಣಿಸುತ್ತಾನೆ. ಆತನಲ್ಲಿಗೆ ಸಂಪತ್ತು ಬಂದು ಬೀಳಬೇಕಾದರೆ ಎಲ್ಲರೂ ದುಡಿಯಬೇಕು ಹೀಗೆ ಆ ಕೆಲಸಗಾರರು ಆ ಸಂಪತ್ತನ್ನು ನಿರ್ಮಿಸಿದರೆಂದಾಯಿತು ಆ ಸಂಪತ್ತು ಕಡೆಗೇನಾಗುವುದು? ಎಲ್ಲರನ್ನೂ ಮರೆತು ಅದರ ಮೇಲ್ವಿಚಾರಕನ ಖಾಸಗಿ ಸೊತ್ತಾಗಿ ನಿಲ್ಲುವುದು. ನಿರ್ಮಿಸುವ ಕೆಲಸದಲ್ಲಿ ಮಿಕ್ಕವರಷ್ಟೆ ಪಾಲುಗೊಂಡಿರುವವನೊಬ್ಬನೇ ಎಲ್ಲವನ್ನೂ ಅನುಭವಿಸುವುದೆಂದರೆ ಇತರರನ್ನು ಮೋಸಗೊಳಿಸಿದನೆಂದೇ ಅರ್ಥ. ಆತನೇ ಜಮೀನ್ದಾರನು ಯಾ ಮ್ಯಾನೇಜರನು. ಈ ಮೋಸ ದಾದರೂ ಈ ತನಕ ನ್ಯಾಯವೆಂದೇ ಗಣಿಸಲ್ಪಡುತ್ತಿತ್ತು ಇದಕ್ಕೆ ಕಾರಣವೇನು? ಈ ಪದ್ಧತಿಯು ಇಂದು ನಿನ್ನೆಯದಲ್ಲ. ಬಹು ಪುರಾತನದಿಂದಲೂ ನಡೆದುಬಂದ ಕ್ರಮವಿದು. ಆದುದರಿಂದ ಅದಕ್ಕೆ ಅಸ್ತಿತ್ವವು ದೊರಕಿದೆ ಅದೇ ನ್ಯಾಯವಾಗಿ ನಿಂತಿದೆ. ಶ್ರೀಮಂತಿಕೆಯು ನಿರ್ಮಿಸುವ ಸಂಕಷ್ಟಗಳಿಗೆಲ್ಲಾ ಹೋರಿಕೆಯ ಪ್ರತ್ಯೇಕ ನೆವನ ಇದ್ದೇ ಇದೆ. ಲೋಕವು ಈ ವರೆಗೂ ನೆವನಗಳೊಡನೆ ಉರುಡಾಡುವುದರಲ್ಲಿಯೇ ತೃಪ್ತಿಗೊಂಡಿತು. ಇಂದು ಜಾಗ್ರತಿಗೊಂಡು ಮೂಲಕಾರಣವನ್ನು ಕಿತ್ತೊಗೆಯ ಬೇಕೆನ್ನುತ್ತಿದೆ. ಇದರಲ್ಲೇನು ತಪ್ಪು?

ಈಗ ಧನಿಕರೇನು ಮಾಡಬೇಕು?

ಈ ಜಾಗ್ರತಿಯನ್ನೆಬ್ಬಿಸಿದುದು ಹಸಿವೆ ಬಡವರ ಹೊಟ್ಟೆಯುರಿಗೆ ದೀರ್ಘಾಯುಷ್ಯವಾಯಿತು ರಾಜಕೀಯವು ನಿರ್ಮಾಣಗೊಂಡಂದಿನಿಂದ ಹಲವು ವಿಧದ ಮಾರ್ಪಾಟುಗಳು ಆದರಲ್ಲುಂಟಾದುವು ಅವುಗಳಲ್ಲಾವುದಕ್ಕೂ ಶಾಸ್ತ್ರಸ್ಥಾನವು ದೊರಕದೆ ಹೋಯಿತು ಬಹು ಸಂಖ್ಯೆಯ ಬಡವರಲ್ಲಿ ನೆಮ್ಮದಿಯನ್ನು ನಿರ್ಮಿಸಲಾಗದ ಕೊರತೆಯೇ ಇದಕ್ಕೆ ಕಾರಣ ಈಗ ಆದಕ್ಕಾಗಿ ಶ್ರೀಮಂತಿಕೆಯನ್ನು ಅಡಗಿಸಿಕೊಳ್ಳುವ ಅಭಿಲಾಷೆಯು ಹುಟ್ಟಿದೆ ಲೋಕಕಲ್ಯಾಣಕ್ಕಾಗಿ ಕಾಲಸ್ಥಿತಿಗನುಸಾರವಾಗಿ ಎದ್ದ ಬಾಧಾಗುಂಕೆಯಿದು ಇದನ್ನು ತಡೆಗಟ್ಟುವ ಶಕ್ತಿಯೆಂಬುದೇ ಇರಲಾರದು ಈ ಕಾಲದಲ್ಲಿ ಶ್ರೀಮಂತರೇನು ಮಾಡಬೇಕು? ಎಂಬುದೇ ವಿಚಾರಣೀಯ ಸಂಗತಿ ಇವರ ಸಂಪತ್ತಿನಲ್ಲಿ ಬಡವರ ಬೆವರು ಅಂಟಿದೆ ಆ ವಾಸನೆಯ ಆಧಾರದಿಂದ ಬೆಂದೊಡಲುಗಳು ಮುಂದರಿಯುತ್ತಿವೆ ಯಾವ ಕಾಲದಲ್ಲಾದರೂ ನ್ಯಾಯಕ್ಕೆ ಜಯವಾಗಬೇಕಷ್ಟೆ ಒಂದೆಡೆಯಲ್ಲಿ ಕಡಿವೆಬಿದ್ದ ಕೊರತೆ ಕಂಡುಬರುತ್ತಿದೆ, ಇನ್ನೊಂದೆಡೆಯಲ್ಲಿ ಮಿತಿಮೀರಿದ ಕುಂದು ಗೋಚರಿಸುತ್ತಿದೆ ಈ ಪರಿಸ್ಥಿತಿಯಲ್ಲಿ ಎರಡು ತಗ್ಗುಗಳನ್ನು ಸರಿಗೊಳಿಸದೆ ಕರ್ತವ್ಯಶೂನ್ಯತೆಯೊಂದು ಸ್ಪಷ್ಟವಾಗುತ್ತದೆ ಈ ಕೆಲಸವನ್ನು ನಾವೀಗ ಮಾಡಿದರೆ ಸರಿ ಅದರಲ್ಲಿ ಇತ್ತಂಡದವರೂ ಭಂಗವಹಿಸಬೇಕು ಮೊದಲಾಗಿ ಅಕ್ರಮಿಸಿದವರು ಬಿಟ್ಟುಕೊಡುವ ಉದಾರಧೋರಣೆ ವಹಿಸಿದರೆ ಕೆಲಸಕ್ಕೆ ಶಾಂತರೂಪವು ದೊರಕುವದರೆ ಕಡಿವೆಬಿದ್ದವರು ತಾವಾಗ ತಮ್ಮ ಅಪೇಕ್ಷೆಯನ್ನು ತೀರಿಸಿಕೊಳ್ಳುವಾಗ ಕಾರ್ಯವು ಕಠಿಣವಾಗುತ್ತಿದೆ ಹೀಗೆ ಇಂದಿನ ಭವಣೆಯನ್ನು ತಪ್ಪಿಸಿಕೊಳ್ಳುವ ಉಪಾಯವು ಶ್ರೀಮಂತರ ಕೈಯಲ್ಲಿದೆ ಮನುಷ್ಯನಿಗೆ ತನ್ನಂತೆಯೇ ಇರುವ ಮನುಷ್ಯನೇ ಸಂಬಂಧಿ ಹಣವು ಕೇವಲ ಸಹಾಯ ಸಂಬಂಧಿಯೇ ಮೊದಲಿಗನು ಸಹಾಯಿ ಎರಡನೇಯವನು! ಈ ತತ್ವದನ್ನು ಶ್ರೀಮಂತರು ಅಂಗೀಕರಿಸಬೇಕು ಆವ ತಮ್ಮ ಹಣವು ಮಾನವವರ್ಗದ ಉಪಯೋಗಕ್ಕೆ ಬೀಳಬೇಕೆಂಬ ನೀತಿಯನ್ನು ಅವರು ಕಲಿಯುವರು ಇದನ್ನು ಕಲಿತ ಧನಿಕನು ತನ್ನ ಕಾರ್ಯಕ್ಷೇತ್ರವನ್ನು ಮೊದಲ್ಗುವಾಗಿಡಬೇಕು ತನ್ನ ಕೈಕೆಳಗಿನವರನ್ನು ಸಮಾನತೆಯಿಂದ ಕಂಡು ಅವರಲ್ಲಿ ಒಬ್ಬನಾಗಿ ಬೆರೆತು ಸುಖದುಃಖಗಳಲ್ಲಿ ಭಾಗಿಯಾಗಬೇಕು ಆಗಲೇ ಬಡವರ (ಬಹುಮಂದಿಯ) ವಿರೋಧದ ಸ್ವಭಾವವನ್ನು ಬಿಟ್ಟಂತಾಗುವುದು

ಪ್ರಥಮ ಚಿಕಿತ್ಸೆ

ಬಡವರ ಸಮಾಜಕ್ಕೆ ಧನಿಕರಿಂದಾಗಬೇಕಾದ ಅಗತ್ಯದ ಸಹಾಯವಿದೆ ಮೊದಲಾಗಿ ನಿರ್ಗತಿಕರ ಮಾನಸಿಕ ಕಲ್ಪನಾನಿವಾರಣೆ ಮತ್ತು ಆರ್ಥಿಕ ಸುಧಾರಣೆ ಇದರ ಪ್ರಥಮಭಾಗದಲ್ಲಿ ಧನಿಕರಿಗೆ ದುಡಿಯಬೇಕಾಗಿ ಬಂದಿದೆ ಅದಕ್ಕಾಗಿ ಮಾಲಿಕರು ಯಾ ಜಮೀನ್ದಾರರು ತಮ್ಮ ನೌಕರರ ಅಥವಾ ಒಕ್ಕಲುಗಳ ಸಂಘಗಳನ್ನು ಸ್ಥಾಪಿಸಬೇಕಾಗಿದೆ ಇಂದು ಕಣ್ಣೆತ್ತಿನೋಡುವ ವಿಚಾರಗಳಿಲ್ಲದೆ ಕೆಲಸಗಾರರ ಜೀವಮಾನವನ್ನು ಕೆಡಿಸುತ್ತಿರುವ ಸಂಕಷ್ಟಗಳೆಷ್ಟೋ ಇವೆ. ಮೇಲ್ತರಗತಿಯವರು ದರ್ಪ, ಕ್ರೋಧ, ಅಸೂಯೆಯ ಪರಿಚಯವನ್ನೇ ಬಡವರಿಗೆ ಮಾಡಿಕೊಟ್ಟಿರುವಾಗ, ಸಂದರ್ಭದೊರೆತರೆ ಅವನೂ ಅವುಗಳನ್ನಲ್ಲದೆ ಇನ್ನಾವುದನ್ನು ಮುಂದೊಡ್ಡಬೇಕು? ಬದಲಿಗೆ ಪ್ರೀತಿ, ಸಹನೆಯನ್ನು ಕಲಿಸಿದವಾದರೆ ಅವುಗಳನ್ನು ಕೆಲಸಕ್ಕೆ ಹಚ್ಚಿ ಪ್ರಯೋಜನ ಮಾಡಿಕೊಳ್ಳಲು ಕೆಲಸಗಾರರು ಸ್ವಾಭಾವಿಕವಾಗಿ ಬಲ್ಲನು. ಅದಕ್ಕಾಗಿಯೇ ಸಂಘಗಳ ಸ್ಥಾಪನೆಯು ಅತ್ಯಗತ್ಯವಿದೆ ಧನಿಕರು ತಮ್ಮ ಸಹಾನುಭೂತಿ, ಸಮಯವನ್ನು ವೆಚ್ಚಮಾಡಿಯೇ ಬಡವರನ್ನು ಹೇಗೆ ಸುಧಾರಿಸಬೇಕೆಂಬುದಕ್ಕೆ ಜೀವಂತ ಉದಾಹರಣೆಗಳಿವೆ ಶ್ರೀ ಪಿ ಟಿ ರೈಗಳು ಉತ್ಸಾಹೀ ಜಮೀನ್ದಾರರು. ಅವರು ಮಂಗಳೂರು ತಾಲೂಕಿನ ಕೊಳಂಬೆ ಕಂದಾವರ ಮತ್ತು ಕಾರ್ಕಳ ತಾಲೂಕಿನ ಪಾಲಡ್ಕ ಗ್ರಾಮಗಳಲ್ಲಿ "ಒಕ್ಕಲಿಗರ ಸಹಕಾರ ಸಮಿತಿ" ಎಂಬ ಸಂಘವನ್ನು ಸ್ಥಾಪಿಸಿ ಪಕ್ಕೇ ಸಂಘಟನೆಗೆ ತೊಡಗಿರುವರು ಯಾವ ಮೂಲ ಭಂಡವಾಳವೂ ಇಲ್ಲದೆ ಕೇವಲ ಸಂಘಶಕ್ತಿಯ ಆಧಾರದಿಂದ ನಡೆದುಬಂದ ಸಂಸ್ಥೆಯಿದು ಸಂಘವಾಗಿ ನಿಂತುದರಿಂದ ಆ ಹಳ್ಳಿಗರು ಸಾಂಪತ್ತಿಕವಾಗಿ ಪಡೆದ ಲಾಭವೇನು? ಕಳೆದ ಒಂದೇ ವರ್ಷದಲ್ಲಿ ಆ ಹಳ್ಳಿಗಳ ಸುಮಾರು ೬೨ ಮೆಂಬರರಿಗೆ ಸಾಧಾರಣ ೩೨೫ ಮುಡಿ ಅಕ್ಕಿಯ ಸಾಲವನ್ನು ಮಳೆಗಾಲದ ಖರ್ಚಿಗಾಗಿ ಪಡೆಯುವ ಆಗತ್ಯವಿತ್ತು ಇಷ್ಟಕ್ಕೆ ಆ ಹಳ್ಳಿಗಳ ವಾಡಿಕೆಯ ಬಾಯಿದೆಯ ಕ್ರಯವನ್ನು ಕೊಡುವವರಾದರೆ ಆ ರೈತರು ಸುಮಾರು ೫೪೫ ಮುಡಿ ಅಕ್ಕಿಯನ್ನು ವಿಕ್ರಯಿಸಬೇಕಾಗದೆ ಆದರೆ ಸಂಘದ ದೆಸೆಯಿಂದ ಈ ಒಕ್ಕಲಿಗರು ಕೇವಲ ೧೫೬ ಮುಡಿ ಅಕ್ಕಿಯನ್ನು ಸಂದಾಯಿಸಿ ಈ ಆಡಚಣೆಯನ್ನು ನಿವಾರಿಸಿಕೊಂಡ ಸುಮಾರು ೩೩೫ ಮುಡಿ ಅಕ್ಕಿ (ಅ ರೂ ೧೧೮೩) ಯ ಲಾಭಹೊಂದಿದರೆಂದರೆ ಇದಲ್ಲವೇ ಈಗ ಬೇಕಾದುದು? ಸಂಘದ ಮೆಂಬರನು ತನ್ನ ವರ್ಷ ಬೆಳೆಯ ಅಕ್ಕಿ ಸೇ ಒಂದರಲ್ಲಿ 1/6ನೇ ಸೇರನ್ನು ಸಂಘದ ವಂತಿಗೆಯಾಗಿ ತೆಗೆದಿಟ್ಟು ಪಾಲಿಕೊಳ್ಳುತ್ತಾ ಬರಬೇಕಾದುದು ಇದೆ ಇದನ್ನು ರೈತನು ಬದಲು ಖರ್ಚು ಮಾಡುವ ಬೆಳಗಿನ ಕಾಲದಲ್ಲಿ ತೆಗೆದಿಟ್ಟು, ಮಳೆಗಾಲದಾರಂಭದಲ್ಲಿ ಒಟ್ಟಿಗೆ ಕೊಂಡುಹೋಗತಕ್ಕದ್ದು ಹೀಗೆ ೨೮ ಸೇರು ಸೇರಿಗೊಂದು ಮುಡಿಯಂತೆ ತಿಂಗಳಿಗೊಂದೇ ಸೇರು ಅಕ್ಕಿಯ ಪಾಲಿನ ಮಿ ಸಂಘವು ಸಾಲವನ್ನು ವೆ ಒಬ್ಬರಿಗೆ ಕೊಡುವದು ಹೀಗಾಗಿ ಸಂಘದ ೬೨ ಮೆಂಬರರು ತಮ್ಮ ಅಗತ್ಯದ ೩೨೫ ಮುಡಿಯಲ್ಲಿ ೧೬೦ ಮುಡಿಯನ್ನು ಸಂಘವು ಕಲಿಸಿದ ಸ್ವಾತಂತ್ರ್ಯದ ಪರಿಣಾಮವಾಗಿ (ಸಂಘದಲ್ಲಿ ಇಟ್ಟುದನ್ನು) ಉಳಿಸಿಕೊಂಡರು ಬಾಕಿ ೧೬೫ಕ್ಕೆ ಸಂಘದ ವಂತಿಗೆ ಮತ್ತು ಹೊರಗಿನಿಂದ ಕೂಡಿ ೧೮೬ ಮುಡಿ ಅಕ್ಕಿಯನ್ನು ತೆತ್ತರಾದರು ಈ ಉಪಕಾರವು ಏತರಿಂದಾಯಿತು? ರೈತರು ಪ್ರೀತಿ ವಿಶ್ವಾಸವನ್ನು ಕಲಿತು ಸಂಘವಾಗಿ ಸೇರಿದುದರಿಂದಲ್ಲವೇ? ಇನ್ನು ನೈತಿಕವಾಗಿಯೂ ಹಲವು ವಿಧದ ಪರಿಣಾಮವನ್ನು ಒಕ್ಕಲಿಗರಲ್ಲಿ ಸಂಘವು ಉಂಟುಮಾಡಿತುಲ್ಲದೆಂಬುದಕ್ಕೆ ಉದಾಹರಣೆಗಳಿವೆ, ಲೇಖನವು ದೊಡ್ಡದಾಗುವದೆಂಬ ಭಯದಿಂದ ಅವುಗಳನ್ನಡಗಿಸಬೇಕಾಯಿತು. ಅಂತೂ, ಇವುಗಳನ್ನು ಹುಟ್ಟಿಸಬೇಕಾದ ಜಮೀನ್ದಾರರು ಈ ಕಾಲದಲ್ಲಿ ಕಾರ್ಯಕ್ಕೆ ತೊಡಗಬೇಕು. ಇಂದು ನ್ಯಾಯವು ಧನಿಕರ ಮೇಲೆ ತಿರುಗಿ ಬಿದ್ದಿದೆ ಬಡವರು ಶ್ರೀಮಂತರೊಡನೆ ದ್ವೇಷವನ್ನು ಕಟ್ಟಿಕೊಳ್ಳುವರೆ ಕಾರಣವಿದೆ ಶ್ರೀಮಂತರು ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬಾರದೇ?

V H - ಕಾರ್ಯದರ್ಶಿ,
ಒಕ್ಕಲಿಗರ ಸಮಿತಿ, ಪಾಲಡ್ಕ

ಸುಳ್ಯ ಸರ್ಕಲಿನ ಓಟರ ಮಹಾಶಯರಲ್ಲಿ ವಿನಂತಿ.

ಆಯ್ಯಾ ಓಟರ್ ಮಹಾಶಯರೇ, ನಮ್ಮ ಸರ್ಕಲಿಗೆ ಕಾಂಗ್ರೆಸು ಪಕ್ಷದಿಂದ ಸುಳ್ಯ ಸರ್ಕಲಿನವರಾದ ಶ್ರೀ, ಎಸ್ ಚಿನ್ನಪ್ಪ ಗೌಡ, ಬಿ ಎ ಬಿ ಎಲ್ ಇವರು ಡಿ ಬೋರ್ಡು ಮೆಂಬರಿಕೆಗೆ ಉಮೇದ್ವಾರರೆಂತ ಪತ್ರಿಕೆಗಳಲ್ಲಿ ಪ್ರಕಟವಾದದ್ದು ತಮಗೆಲ್ಲರಿಗೂ ತಿಳಿದಿರಬಹುದು. ಆದರೆ ಈಗ ಇನ್ನೊಬ್ಬರು ಸ್ವತಂತ್ರಪಕ್ಷದಿಂದ ನಿಲ್ಲುತ್ತಾರೆಂದು ವರ್ತಮಾನವಿದೆ ಇದು ನಿಜವಾಗಿದ್ದರೆ ಕಾಂಗ್ರೆಸು ಪಕ್ಷವನ್ನೇ ಎಲ್ಲಾ ಸಂಸ್ಥೆಗಳಿಗೂ ಚುನಾಯಿಸಬೇಕೆಂತ ಸವ ಗ್ರ ಭಾರತವೇ ಕುತೂಹಲದಿಂದ ಭಗೀರಥ ಪ್ರಯತ್ನ ಮಾಡುತ್ತಿರುವಾಗ ಸುಳ್ಯ ಸರ್ಕಲಿನವರಾದ ನಾವು ಸಹ ಕಾಂಗ್ರೆಸ್ಸಿಗೆ ವಿರೋಧ ಮಾಡದೆ ಕಾಂಗ್ರೆಸ್ ಪಕ್ಷಕ್ಕೇನೇ ನಮ್ಮ ಅಮೂಲ್ಯ ಓಟನ್ನು ಕೊಟ್ಟು ಜಯವನ್ನುಂಟುಮಾಡುವುದೇ ನಮ್ಮ ಕರ್ತವ್ಯವಾಗಿರುತ್ತದೆ ಎಂದು ವಿಜ್ಞಾಪಿಸುತ್ತೇನೆ

ಓಟರರಲ್ಲೊಬ್ಬ

ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಮುಂಬಾಯಿ

ಈ ವಿಮಾ ಕಂಪೆನಿಯು ೧೯೧೩ರಲ್ಲಿ ಮುಂಬಾಯಿ ಶಹರದಲ್ಲಿ ದೇಶೀಯರ ಹಿತವನ್ನು ಬಯಸುವ ಕೆಲವು ಮಹನೀಯರಿಂದ ಸ್ಥಾಪಿಸಲ್ಪಟ್ಟು ವರ್ಷವರ್ಷಕ್ಕೆ ಅಭಿವೃದ್ಧಿಯಾಗುತ್ತಾ ಬಂದು ೧೯೩೦ರಿಂದ ಅತ್ಯಧಿಕವಾಗಿ ಯಶಸ್ಸನ್ನು ಸಂಪಾದಿಸಿ ಈಗ ಅತಿ ಭದ್ರವಾದ ಸ್ವದೇಶಿ ವಿಮಾ ಸಂಘಗಳ ಪೈಕಿ ಒಂದಾಗಿ ಎಣಿಸಲ್ಪಟ್ಟಿದೆ ಜೀವವಿಮೆಯು ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯವಾದುದು ವ್ಯಾಪಾರಕ್ಕೂ ಮಂದಿಯ ಮನಸ್ಸನ್ನು ಓಲೈಸುತ್ತಿರುವ ಪ್ರವೃತ್ತಿಗಳು ಸುಗಮವಾಗುವರೆ ಜೀವವಿಮೆಯು ಅತ್ಯಾವಶ್ಯಕವಾಗಿದೆ ಈ ವಿಮಾ ಸಂಘವು ವಿಮಾದಾರರ ಏಳಿಗೆಯನ್ನು ಮುಂದಿಟ್ಟುಕೊಂಡು ಬಹಳ ಮಿತವ್ಯಯದಿಂದ ಆಡಳಿತೆಯು ಎಲ್ಲಾ ಕಾರ್ಯದಲ್ಲಿ ನುರಿತವರಾದ ಸ್ವದೇಶಿಯರಿಂದಲೇ ನಡೆಸಲ್ಪಡುವುದು ಎಲ್ಲರೂ ಈ ಕಂಪೆನಿಯಲ್ಲಿ ಶಕ್ತ್ಯಾನುಸಾರ ವಿಮೆ ಮಾಡುವುದಲ್ಲದೆ ತಮ್ಮ ಆಪ್ತ ಮಿತ್ರ ಬಂಧುಬಳಗದವರನ್ನು ಸಹಾ ವಿಮೆ ಮಾಡಿಸಲು ಪ್ರೋತ್ಸಾಹಿಸಿ ಈ ಕಂಪೆನಿಯ ಅಭಿವೃದ್ಧಿಯನ್ನು ಹಾರೈಸಬೇಕಾಗಿ ಕೋರಿಕೆ

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT —

Bombay—Fort,	Mangalore—City,
Bombay—Mandvi,	Mangalore—Bunder,
Hubli	Kasaragod
Calicut,	Puttur,
Cochin,	Buntwal,
Ernakulam,	Karkala,
Alleppey,	Coondapoor,
Bangalore,	Udipi,
Davangere,	&
Chickmagalur,	Gangoli

AVAILABLE IN DENOMINATIONS OF Rs. 10, UPWORDS

TOTAL YIELD RS 4-6-0% P. A.

Paid once half yearly at 3½% p a with an additional 1¼% p a on maturity If Left To Accumulate

RS. 100/- Will Amount to RS. 122-13-6

ESTD 1906

CANARA BANK LIMITED

Subscribed Capital	Paid up Capital
6,00,000	3,31,000

Reserves	Deposits	Working Capital
4,50,000	58,63,000	73,49,000

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara —

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು—ಕಾಮತ್ ಸ್ವದೇಶೀ ಎಂಪೋರಿಯಂ

1936

ಮೇಲಿನ ಇಸವಿಯ
ಶಾರದಾ ಡೈರಿಗಳು
ಬೇಕೆ?
ಶಾರದಾ ಛಾಪಖಾನೆಗೆ
ಒರ ವ ತಿಂಗಳಲ್ಲಿ
ಒರೆಯಿರಿ
ಅ ಥ ವಾ
ಬನ್ನಿ

ತಯಾರಾಗಿದೆ!

ಗಾ ಡಾ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಷಿಯೊಲೊಜಿ.

ಟೆಕ್ಸ್ಟುಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ೧೯೩೪ರ ಪಾಠ ಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟುಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0–0 9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ ಅಥವಾ 'ಸಮಾಜಶಾಸ್ತ್ರ' — ಕ್ರಯ ರೂ 1

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲ್ಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 3-50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಗ್ಗೆ 9-35
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6-15

ನಮ್ಮ ಗುಂಡುರಾಯರು.

ಮಂಗಳೂರಿನ ಗುಂಡುರಾಯರೆಂದರೆ ಅಪೂರ್ವ ವ್ಯಕ್ತಿಯೇ ಸರಿ. ಇವರನ್ನರಿಯದ ಜನರೇ ಮಂಗಳೂರಲ್ಲಿ ಅತಿ ವಿರಳ. ಕಂಡು ಕಾಣದ ಹೇಳಿ ಕೇಳದ ಕೆಲಸಗಳಲ್ಲಿ ಇವರ ಆಸಕ್ತಿಯು ಬಹಳ. ವಾಕ್ಪಟುತ್ವದಲ್ಲಿ ಇವರನ್ನು ಮೀರಿದವರು ಯಾರೂ ಇಲ್ಲವೆಂದು ಇವರ ಹೇಳಿಕೆ. ಅನೇಕ ಭಾಷಣ ಸ್ಪರ್ಧೆಗಳಲ್ಲಿ ಭಾಗವನ್ನು ವಹಿಸಿ, ಹಲಕೆಲವು ಮಹನೀಯರುಗಳಿಗೆ ಕಾಫಿ ಕುಡಿಸಿ ಭಾಷಣದ ಕಥನವನ್ನು ಬರೆಸಿ, ಗೋಡೆಗೆ ಕಾಲುಕೊಟ್ಟು ಶತಪ್ರಯತ್ನ ಗೈದು! ಅದನ್ನು ಬಾಯಿದೆರೆ ಕಲಿತು, ಸ್ಪರ್ಧೆಯಲ್ಲಿ ವಿಚಕ್ಷಣ ರೀತಿಯಿಂದ ತನ್ನ ಭಾಷಾಶೈಲಿಯನ್ನು ಪ್ರಕಟಿಸಿದ್ದರೂ, ಪರೀಕ್ಷಾಕರ್ತರು ದಿಗ್ಭ್ರಮೆಗೊಂಡು, ಶಾಲಾ ಅಧಿಕಾರಿಗಳು ಕೊಡುವ ಬಹುಮಾನವು ಇವರ ಮರ್ಯಾದೆಗೆ ಸಲ್ಲತಕ್ಕದಲ್ಲವೆಂದು ಚಿಂತಿಸಿ, ಅದನ್ನು ಬೇರೆಯವರಿಗೆ ಕೊಟ್ಟರೂ, ಎದೆಗುಂದದೆ, ಗುಪಿತದಲ್ಲೆ ದೊಡ್ಡ ಪದಕವೊಂದನ್ನು ಮಾಡಿಸಿ ತನ್ನ ಮರ್ಯಾದೆಯನ್ನು ಕಾಪಾಡಿಕೊಂಡ ಮಹಾಶಯರಲ್ಲಿ ಗುಂಡುರಾಯರೊಬ್ಬರು

ನವ ಜನಾಂಗದ, ನವೀನ ಯುವಕರ ತೇಜಸ್ಸು ಇವರಲ್ಲಿ ಅಪಾರ. ೧೯೩೦ರಲ್ಲಿ ನಡೆದ ಸ್ವರಾಜ್ಯ ಆಂದೋಲನದಲ್ಲಿ ಮುಂದೊತ್ತಿ ಬಂದು ಭಾಷಣಗಳನ್ನು ಕೊಟ್ಟು ಕ್ರಾಂತಿಕಾರರಲ್ಲಿ ತಾನೂ ಒಬ್ಬನೆಂದು ಪ್ರಾಶಸ್ತ್ಯಯನ್ನು ತಳೆಯುವುದರಿಂದ ಪ್ರಯೋಜನವಿಲ್ಲವೆಂದೂ, ನಾವೆಲ್ಲ ಕೆಲಸಮಾಡುವುದು ದೇಶದಲ್ಲಿ ಕೀರ್ತಿಯನ್ನು ಪಡೆಯಲಿಲ್ಲ, ಅಂತಹ ಆಶೆಯುಳ್ಳ ಪುರುಷನು ಪ್ರಪಂಚದಲ್ಲಿ ನೀಚನೆಂದು ಪರಿಗಣಿಸಲ್ಪಡುವನೆಂದೂ, ಇವರು ಹೊರಗೆ ಬಾರದೆ ಒಳಗಿನಿಂದಲೇ ಉಳಿದವರಿಗೆ ಸ್ಫೂರ್ತಿಯನ್ನು ಕೊಟ್ಟು ಮುಂದಕ್ಕೆ ದೂಡಿದ ಮಹನೀಯರಲ್ಲಿ ಇವರೂ ಒಬ್ಬರೆಂದರೆ ಅತಿಶಯೋಕ್ತಿಯಾಗಲಾರದು

ಇಲ್ಲಿಯ ವಿದ್ಯಾಭ್ಯಾಸವು ಅಪೂರ್ಣವೆಂದೇ ಭಾಸವಾಗಿ ಮದ್ರಾಸಿಗೆ ತೆರಳಿದರು, ಅದೇನೊ ಒನರ್ಸ್ ಪರೀಕ್ಷೆಯನ್ನು ಪ್ಯಾಸು ಮಾಡಲು. ಆದರೆ ಪರೀಕ್ಷೆಯಲ್ಲಿ ಇವರು ಬರೆದ ಉತ್ತರಗಳು ಪರೀಕ್ಷಾಕರ್ತರ ಮಿದುಳನ್ನೆ ಹಾರಿಸಿದ್ದರಿಂದ ಅವರಿಗೆ ಅರ್ಥವಾಗದೆ ಇವರ ಉತ್ತರಗಳಿಗೆ ನಂಬ್ರಗಳನ್ನೇ ಕೊಡಲಿಲ್ಲವಂತೆ. ಹಾಗೂ ಹೀಗೂ ಪರೀಕ್ಷೆಯ ಫಲಿತಾಂಶ ನೋಡುವಾಗ ರಾಯರ ಚೀಟು ಕೆಳಗೆ ಬಿದ್ದಿದೆಯೆಂದು ತೋರಿತು. ರಾಯರೇನು ಹೆದರಿದರೆ "After all examination is not a sure test of one's intelligence ಎಂದೇ ವಾದಿಸಿದರು. ಅವರ ವಿದ್ಯಾ ಪ್ರೌಢಿಮೆಯನ್ನು ನೋಡಿ ಬೆರಗಾದ ಜನರು ಅದು ಸರಿಯೆಂದೇ ಭಾವಿಸಿದರು

ಪಟ್ಟಣವಾಸವು ಕೆಟ್ಟದೆಂದು ಅವರು ಮನಗಂಡಿರಬೇಕು. ಇಲ್ಲವಾದರೆ ಪಟ್ಟಣವನ್ನು ಬಿಟ್ಟು ಅದರ ಗಡಿಯಲ್ಲಿ ಅವರು ವಾಸಿಸಲಿಕ್ಕಿಲ್ಲ. ವಿದ್ಯಾವಂತರಲ್ಲವೆ? ಅವರ ಮನಸ್ಸನ್ನು ಅರಿಯುವುದು ಬಹಳ ಕಷ್ಟ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬುದನ್ನೇ ದಿನಕ್ಕೆ ಸಾವಿರಾರು ಸಲ ಜಪಿಸಿ ನೂರಾರು ಸಂಸ್ಥೆಗಳಲ್ಲಿ ಕೆಲಸಕ್ಕೆ ಪ್ರಯತ್ನಪಟ್ಟಾಗ್ಯೂ ಫಲಕಾರಿಯಾಗದೆ ಕೊನೆಗೆ ಶಾಲೆಯ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿದರು

ಅವರ ಮನೆಯಿಂದ ಸ್ವಲ್ಪ ದೂರ ಒಂದು ಚಿಕ್ಕ ಶಾಲೆಯು ಬಹಳ ಬಡಸ್ಥಿತಿಯಲ್ಲಿದೆ. ಹತ್ತಿರ ಒಂದು ಬೀಜದ ಕಾರ್ಖಾನೆಯೂ ಇದೆ. ಶಾಲಾ ಮಾಸ್ತರರ ಸ್ನೇಹವನ್ನು ಬೆಳಸಿದರು. ಸಾಯಂಕಾಲ ಶಾಲಾ ಮಾಸ್ತರರೊಡನೆ ಅಲ್ಲಿ ಕುಳಿತು ಆ ಸುದ್ದಿ ಈ ಸುದ್ದಿ ಮಾತಾಡಿ ಹಲವು ದಿವಸಗಳನ್ನು ಕಳೆದರು. ಕಡೆಗೆ ಒಂದು ದಿನ ಶಾಲಾ ಸ್ಥಿತಿಯನ್ನು ಉದ್ಧರಿಸಬೇಕು. ಅದಕ್ಕಾಗಿ ಒಂದು ನಾಟಕವನ್ನು ಆಡುವ ಎಲ್ಲ ಪ್ರಯತ್ನವೂ ನನ್ನದು. ಹೆದರಬೇಡಿ ಎಂದು ಅಭಯ ಹಸ್ತವನ್ನಿತ್ತರು. ನಾಟಕ ಪುಸ್ತಕಗಳನ್ನು ಸಂಚಯಿಸಲು ಮಾಸ್ತರರಿಗೆ ಬಂತು ಆರ್ಡರ್. ಹಲವರಿಗೆ ಉಪದ್ರವ ಕೊಟ್ಟು ತರಿಸಿದ ನಾಟಕಗಳು ಇವರಿಗೆ ಒಗ್ಗದು. ಕಡೆಗೆ ತಾನೇ ಸ್ವಂತ ಬರೆಯುವೆನಾಗಿ ಹೇಳಿ ಹಲವು ಪುಸ್ತಕಗಳ ಹಲವು ದೃಶ್ಯಗಳನ್ನು ಬರೆದು ನಾಟಕವೊಂದನ್ನು ರಚಿಸಿದರು. ಪ್ರಯತ್ನಪಟ್ಟು ಆಡಿತೋರಿಸಿದರೂ, ಹಣದ ಅಭಾವ ಬಹಳವಾದ್ದರಿಂದ ಜನಸಂಖ್ಯೆಯು ಅಷ್ಟು ಪ್ರೋತ್ಸಾಹವನ್ನು ಕೊಡುವಂತಹುದಲ್ಲವಾಗಿತ್ತು. ಹಾಗಿದ್ದೂ ಬಾಕಿ ಬಂದವರು ಈ ನಾಟಕವನ್ನು ನೋಡಿ ಬೆರಗಾಗಿ ಟಕಮಕನೆ ನೋಡಿ ನೊಂದ ಜೀವಿಗಳಂತೆ ತೆರಳಿದರು. ಗುಂಡು ರಾಯರಿಗೇನೊ ಶಾಲಾ ಅಧಿಕಾರಿಗಳು ವಂದನೆಗಳನ್ನಿತ್ತರು, ಆದರೆ ಆಯ ವ್ಯಯದ ಪಟ್ಟಿಯನ್ನು ನೋಡುವಾಗ ಮಾಸ್ತರರ ಜೇಬಿನಿಂದ ರೂಪಾಯಿ ೨೦ ಹೆಚ್ಚಿಗೆ ಖರ್ಚಾಗಿದೆ. ರಾಯರೊಡನೆ ಹೇಳಲು, ಬೆದರಬೇಡಿರಿ ವ್ಯಾಪಾರದಲ್ಲಿ ಲಾಭ ನಷ್ಟಗಳು ಇದ್ದೆ ಇವೆ. ಇಂತಹ ಇನ್ನೊಂದು ನಾಟಕವನ್ನಾಡಿ ನಮ್ಮ ಶಾಲೆಗೆ ಧನಸಹಾಯ ಸಿಗುವಂತೆ ಮಾಡುವ ಎಂದರು. ಮಾಸ್ತರರ ಮಾತ್ರ ತಟಸ್ಥರಾಗಿದ್ದರು

ಮರುದಿನ ರಾತ್ರಿ ೭॥ ಘಂಟೆಗೆ ಶಾಲೆ ಬಳಿಯಿಂದ ವಿಚಿತ್ರ ಧ್ವನಿಯು ಕೇಳಿಬಂತು. ಅತ್ತಣಿಂದ ಹೋಗುತ್ತಿದ್ದ ನಾಲ್ಕೈದು ಮಂದಿ ಕೂಲಿಯಾಳುಗಳ ಇದನ್ನು ಕೇಳಿ ಅತ್ತ ಓಡಿದರು. ಕತ್ತಲಲ್ಲಿ ಎರಡು ವ್ಯಕ್ತಿಗಳು ಹೆಣಗಾಡುತ್ತಿದ್ದುದನ್ನೂ ಒಂದು ವ್ಯಕ್ತಿಯು ಕೂಗುತ್ತಿದ್ದುದನ್ನೂ ಕಂಡರು. ಕೂಗಿನ ಸ್ವರದಿಂದ ಒಂದು ವ್ಯಕ್ತಿಯು ಹೆಣ್ಣೆಂದು ದಿಟವಾಯಿತು. ಅವರಿಗೆ ಕೂಡಲೇ ಧಾವಿಸಿ ಆ ಇನ್ನೊಂದು ವ್ಯಕ್ತಿಯನ್ನು ಚೆನ್ನಾಗಿ ಗುದ್ದಿದರು. ಕೈಗಳನ್ನು ವಸ್ತ್ರದಿಂದ ಕಟ್ಟಿದರು. ರಮಣಿಯನ್ನು ವಿಚಾರಿಸಿ ನೋಡಲು, ಅವಳು ಬೀಜದ ಕಾರ್ಖಾನೆಯಲ್ಲಿ ಕೆಲಸ ಮಾಡುವವಳೆಂದೂ, ಮನೆಗೆ ಹೋಗುವಾಗ ದಾರಿಯಲ್ಲಿ ಈ ತರುಣನು ಈ ರೀತಿ ಆಕ್ರಮಿಸಿದನೆಂದೂ ಹೇಳಿದಳು. ಕೂಲಿಯಾಳುಗಳು ಅವಳನ್ನು ಸಂತಯಿಸಿ ಆ ವಕನನ್ನು ಧರಧರನೆ ಎಳೆದು ಬಳಿಯಲ್ಲಿದ್ದ ಅಂಗಡಿಗೆ ಕೊಂಡುಹೋದನು. ದೀಪದ ಬೆಳಕಿನಲ್ಲಿ ಅಂಗಡಿಗಾರನು ಗುಂಡುರಾಯರ ಭಯಂಕರ ಅವಸ್ಥೆಯನ್ನು ನೋಡಿ ಬೆರಗಾದರು. ಬಂದವರೊಡನೆ ವಿಚಾರಿಸಲು, ಅವರ ಕತೆಯನ್ನು ಕೇಳಿ ಅಂಗಡಿಗಾರನಿಗೆ ನಗು ಬಂತು. 'ಇಲ್ಲಿಯ ಪ್ರಸಿದ್ಧ ಪುರುಷರು ಇವರು. ವಿಶ್ವವಿದ್ಯಾಲಯದಲ್ಲಿ ... ಇವರನ್ನು ಹೊಡೆದಿದ್ದಾ ... ಎಂದನು. 'ಯಾರಾದರೇನ ... ಶಿಕ್ಷೆಯು ಸಿಗಲೇ ಬೇಕು ... ಮಾಡುವ ಕೆಲಸವ ಇದು ... ಸರ ... ಬಿಡಲಾರೆವು ... ವರ

... ರಾಯರ ... ಬಿಡಿಸಿ ... ಯಲಿಕ್ಕಿಲ್ಲ ... ಕಾಣಿಸಿದ್ದ ... ದಲ್ಲ ... ಆ ಗಡಿಯವನು ಆಗ್ರಹ ಮಾಡಿದ್ದ ... ದಲ್ಲ, ಅವರನ್ನು ಬಿಟ್ಟುಬಿಟ್ಟರು

... ಗುಂಡುರಾಯರ ಪತ್ನಿಯೇ ... ವರ್ತನೆಯು ಕುರಿತು ... ಒಂದು ಅಗ್ನಲೇಖವನ್ನೇ ಕೊಟ್ಟಿದೆ. ಎಲ್ಲರೂ ಅದನ್ನು ಓದಿ, ಗುಂಡುರಾಯರ ಕಾಣೆಯಾದ ಕಾರಣವನ್ನು ತಿಳಿದು, ಉತ್ತಮ ಶಿಕ್ಷಣದ ... ಈ ರೀತಿಯಾಗಿತು ... ದಂದ ಬಿಸ ಗುಟ್ಟಿದರು

ಚಂದ್ರ.

ನೆಗಡಿ.
ಇನ್‌ಫ್ಲುಎಂಜಾ
ಕೆಮ್ಮು
ಇವುಗಳಿಗೆ ತಿಕ್ಕಿ
ಗುಣಪಡೆಯಿರಿ.

ವನಸ್ಪತಿಗಳಿಂದ
ಮಾಡಿದ
ಸಾಂಬಕನ್ನೇ
ಉಪಯೋಗಿಸಿರಿ.

ನೆಗಡಿ ಚಳಿ, ಇನ್‌ಫ್ಲುಎಂಜಾಗಳಲ್ಲಿ ಸಾಂಬಕ್‌ನ್ನು ಎದೆಗೆ ತಿಕ್ಕುವುದರಿಂದಲೂ, ಮೂಗಿನ ಸೊಳ್ಳೆಗಳೊಳಗೆ ಸ್ವಲ್ಪ ಇಡುವುದರಿಂದಲೂ ಅವು ಬಾರದಂತೆ ನೋಡಿಕೊಳ್ಳಿರಿ. ಎದೆನೋವು, ತಲೆನೋವುಗಳಲ್ಲಿ ಸಾಂಬಕ್‌ನ್ನು ಹಚ್ಚಿ ತಿಕ್ಕುವುದರಿಂದ, ಅದು ಶರೀರ ಬಿಸಿಯಿಂದ ಕರಗಿ ಗಾಳಿಯ ರೂಪದಿಂದ ಶ್ವಾಸದಲ್ಲಿ ಸೇರಿ ಆಲಸ್ಯವನ್ನು ಕಡಿಮೆ ಮಾಡುವುದು

ಸುಟ್ಟ ಗಾಯ, ಪಟ್ಟಿನ ಗಾಯ, ಹುಣ್ಣು ಮತ್ತಿತರ ಚರ್ಮವ್ಯಾಧಿಗಳಿಗೂ ಸಾಂಬಕ್ ಉತ್ತಮ ಔಷಧಿ. ಅಮೂಲ್ಯವಾದ ವನೌಷಧಿಗಳಿಂದಲೇ ಮಾಡಲ್ಪಟ್ಟಿದೆ

ಬೆಲೆ ರೂ. 1 ಅಥವಾ ರೂ. 2-4-0

ಏಜೆಂಟರು ಮೆಸರ್ಸ್ ದಾಧಾ ಅಂಡ್ ಕೊ., ಜಿ. ಟಿ. ಮದರಾಸು

ಇದರಲ್ಲಿ ಕೊಬ್ಬಿನ ಮಿಶ್ರವಿಲ್ಲ

ಸಾಂಬಕ್
Zam-Buk

HAIL & CO
HALFTONE & LINE BLOCK MAKERS
Cinema Colour Slides & Designs A Speciality
CHIKPET
BANGALORE CITY
BLOCKS FOR BOOK Illustrations, Magazines & Newspapers. Art Tables, Etc., Etc.

ದೇಹಶಕ್ತಿ, ವೀರ್ಯವೃದ್ಧಿ,
ಶಾಶ್ವತಚೈತನ್ಯಗಳನ್ನೀಯುವ

ನವರತ್ನ ಸಾಲಾಬ್ ಕಾಂಪೌಂಡ್
ಅಥವಾ
ಚಿನ್ನವು ಸೇರಿರುವ
ನವರತ್ನಾಮೃತ
ಶ್ರೇಷ್ಠವಾದ ತೇಜಸ್ಸನ್ನೂ ವೀರ್ಯಪಟುತ್ವವನ್ನೂ ರಕ್ತವೃದ್ಧಿಯನ್ನೂ ಬುದ್ಧಿಶಕ್ತಿಯನ್ನೂ ಹೆಚ್ಚಿಸುವ ಬಲವರ್ಧಕ ಔಷಧವು ಇದೊಂದೆ ಎಲ್ಲಾ ಷಾಪುಗಳಲ್ಲಿಯೂ ದೊರೆಯುತ್ತದೆ

ನವರತ್ನ ಫಾರ್ಮಸಿ, ಪೋಸ್ಟು ಬಾಕ್ಸನಂ. ೬೭, ಕೊಚಿನ್

ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರವಾದ ಟಾನಿಕ್ಕು

24 ಔನ್ಸ ರೂ 2   16 ಔನ್ಸ ರೂ 1 8-0   8 ಔನ್ಸ ರೂ 0 14 0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಟ್ ಸರ್ಸಪರಿಲ್ಲಾ ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ ದೇಹವ್ಯಾಧಿಗಳಲ್ಲಿಯೂ ಅತ್ಯಂತ ಗುಣಕಾರಿ

1 ಔನ್ಸ ರೂ 1 0-0   8 ಔನ್ಸ ರೂ 1-8-0

ದಕ್ಷಿಣ ಕನ್ನಡದ ಏಜಂಟರು   ಪ್ರೊಪ್ರೈಟರ ಸ್ಟೋರ್ಸ್, ಮಂಗಳೂರು.

BEHAR CHEMICAL WORKS,
Bhagalpur.

ಬಿ. ಸಿ ರಸಾಯನಿಕ ವೈದ್ಯಶಾಲೆಯ
ಚ್ಯವನ ಪ್ರಾಸ ಲೇಹ್ಯ

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ

ಸೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಜನರು ಬರೆಯುವ ಇದರ ಗುಣವನ್ನು ಬಹಳ ಕಾಲದ ಸಿದ್ಧ ಮನಗಂಡಿರುವುದರಿಂದಲೂ ಎಲ್ಲೆಲ್ಲಿಯೂ ಈ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇದರಲ್ಲಿ ಸೇರಿಸಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರಾಯವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8 0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು
ಮಂಗಳೂರು.

New Era Technical School.
Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟ್ಯಾಪ್‌ರ್‍ಯಾಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ ಮಾಡಿರಿ

ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು
12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ, ಕ್ಯಾಲೆಂಡರು.

ದಶಂಬರ ತಾ. 1ರಲಿ ವಿಕ್ರಯಕ್ಕೆ ತಯಾರಾಗುವುದು
ಭಂಡಸಾಲೆಗಳಲ್ಲಿಯೂ ಪ್ರತಿಯೋರ್ವರ ಮನೆಯಲ್ಲಿಯೂ ಇಂಥ ಕ್ಯಾಲೆಂಡರು ಅತ್ಯಗತ್ಯ
ಎಲ್ಲರೂ ಉಪಕೊಳ್ಳುವಂತೆ ಬಹಳ ಕಮ್ಮಿ ಕ್ರಯವಿಟ್ಟಿದೆ.
ಕ್ರಯ ಬರೇ ಆಣೆ 3
ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು
ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು.
ಟಪ್ಪಾಲಿನಲ್ಲಿ ಕಳುಹಿಸಬೇಕಾದರೆ 0 4 0 ಸ್ಟಾಂಪು ರವಾನಿಸಿರಿ

ಪಿ ವಿ. ಉಪಾಧ್ಯಾಯ ಬಿ ಎ ಎಲ್ ಎಲ್, ಬಿ
ಇವರಿಂದ ಬರೆಯಲ್ಪಟ್ಟ
"ಒಂದೇ ತಿಂಗಳಲ್ಲಿ ಇಂಗ್ಲಿಷ್"

ಎಂಬ ಇಂಗ್ಲಿಷ್ ಸುಲಭ ಸ್ವಯಂಬೋಧಿನಿಯ ಪ್ರಥಮ ಆವೃತ್ತಿಯ ಎಲ್ಲ ಪ್ರತಿಗಳೂ ಕಳೆದ ಒಂದೇ ವರುಷದೊಳಗೆ ವಿಕ್ರಯವಾಗಿ ಬಹಳ ಮಟ್ಟಿಗೆ ಸುಧಾರಿಸಲ್ಪಟ್ಟ ಎರಡನೇ ಆವೃತ್ತಿಯ ಪ್ರತಿಗಳು ಈಗ ಮುದ್ರಣದಲ್ಲಿವೆ ತಾ 15-10-1935ರ ವಳಗೆ 50 ಯಾ ಜಾಸ್ತಿ ಪ್ರತಿಗಳಿಗೆ ಆರ್ಡರು ಕೊಡುವ ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ದರದ ಕಮಿಶನ್ ಕೊಡಲಾಗುವುದು ಮಾತ್ರವಲ್ಲದೆ ಅವರ ವಿಳಾಸವನ್ನು ಪುಸ್ತಕದಲ್ಲಿಯೂ ಕರಪತ್ರ ಜಾಹೀರಾತುಗಳಲ್ಲಿಯೂ ಕೊಡಲಾಗುವುದು

ಕರ್ನಾಟಕದ ಪುಸ್ತಕ ವ್ಯಾಪಾರಿಗಳು ತ್ವರೆ ಮಾಡಬೇಕು.

ಪಂಡಿತ ಕೆ. ಆದಿರಾಜಯ್ಯ, ಕಾರ್ಕಳ (ದ ಕ)

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ
(ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ ಸೊಂಟ ನೋವು, ಕೈಕಾಲು ಉರಿಯುವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು, ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ   3 ಬಾಟ್ಲಿಗಳಿಗೆ ರೂ 1-12-0.

ಅಲ್ಲದೆ ಬಾಲಗ್ರಹ ತೈಲ ಬಾಲಗ್ರಹ ದ್ರವ ಸಹಾ ದೊರೆಯುತ್ತವೆ   ಕ್ರಯ. ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ
ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1—0—0

ಮಲೇರಿಯಾ ನಿವಾರಿಣೀ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0   ಸಣ್ಣ ಬಾಟ್ಲಿ 1ಕ್ಕೆ ಆಣೆ 13.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರ ವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಬೇಗಬೇಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು   ಕ್ರಯ ಡಬ್ಬಿ 1ಕ್ಕೆ ರೂ 2—8—0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ಡಾ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ ಮುಲ್ಲರ ಪೇಟೆಂಟ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ ಕಾಮತ್ ಎಂಡ್ ಕೊ, ತಾರಾಹೌಸ್, ಗಿರಿಗಾಂವ್, ದೇಳರೋಡ್ ಮುಂಬಾಯಿ ನಂ. 4 ದಿ ವರ್ಕ್ಸಾಟ್ ಹೋಟೆಲ್, ಮಡಿಕೇರಿ ಕೂರ್ಗ, ರಾವ್ ಫಾರ್ಮಸಿ ಸಾಗರ

The Canara Banking Corporation Udipi, Ltd:

Head office:—UDIPI, S. K. (Incorporated in British India) Tel:-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7 Mercara** (North Coorg), **& 8 Virarajendrapet** (South Coorg).

DIPOSITS:

1922	1926	1930	1934	30 9 '35
ರೂ 2,23,419/	6,48,940/	20,28,837/	24,95,329/	**26,37,109/-**

SAVINGS BANK ACCOUNTS

INTEREST allowed at 3½ %

Facilities { 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಟ್ಟಿಯು ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಟ್ಟಿಯು ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆ ಎಂದು ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

Telegrams. **PREMALATHA** Bombay Phone No. 6311

The Bombay Life Assurance Company, Limited.

Kochikar Brothers,

Main Branch Secretaries and Chief Agents for Bombay City & Suburbs

1935—OUR SILVER JUBILEE YEAR

ANNOUNCEMENT.

We have the pleasure to inform all our Constituents, Agents and Policyholders that we have Shifted on 30th September 1935 our Bombay Chief Agency Office from Lohar chawl to 'Gautam Nivas', Charni Road, Girgaum, Bombay No 4, the newly erected Building, opposite Prarthana Samaj. This has been necessitated by the expansion of our business as the New Premises are very well situated and more spacious and we thus hope to render better service to our Policyholders. Our Patrons & Well wishers are requested to pay a visit to the New Premises at their early convenience. All correspondence and remittances should be addressed to our new Office address

Bombay, 1-10-35 KOCHIKAR BROTHERS

ಕರ್ನಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರ ಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಸ್ಥವಾಣದಲ್ಲಿ ನಿಲ್ಲಿಸುವುದು. ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು

ಕರ್ನಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್, ವಗೈರೆ ಎಲ್ಲಾ ಎಲ್ಲೋಪೆತಿಕ್ ಔಷಧಗಳೂ, ಶಾಸ್ತ್ರೋಕ್ತ ಆಯುರ್ವೇದ ಔಷಧಗಳೂ, ಅಲಂಕಾರ ಸಾಮಗ್ರಿಗಳೂ (Toilets), ಸಾಬೂನುಗಳೂ, ಫೌಂಟನ್ ಪೆನ್ ಶಾಯಿಗಳೂ ತಯಾರಾಗುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ —

ವೆಂಕಟ್ರಾಯ ಅಚ್ಚಪ್ಪ ಬಾಳಿಗ—ಮೆನೆಜಿಂಗ್ ಡೈರೆಕ್ಟರ್

ಕರ್ನಾಟಕ ಕೆಮಿಕಲ್ ಮತ್ತು ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ

ಹೆಡ್ ಆಫೀಸು ಮತ್ತು ಕಾರಖಾನೆ.-ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋಗಳು:-(1) ರಥಬೀದಿ ಮಂಗಳೂರು. (2) 1/70 ನ್ಯಾಷನಲ್ ನ್ಯಾಕನ ಬೀದಿ, ಜಾರ್ಜ್‌ಟೌನ್ ಮದ್ರಾಸು. (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2.

Karnataka Chemical and Pharmaceutical Works, Ltd., Udipi. (South India)

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ 3 ರೂಪಾಯಿ. Registered No. M. 498 ... ರೂ. 2-13-0.
ಬಿಡಿ ಸಂಚಿಕೆ ೧ ಆಣೆ.

P
for Quality Snuff
H. Rama Rao and Sons.
High Class Snuff Manufacturers
Mangalore S. 1
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Pay a ... THE BOMBAY LIFE
... Branch Secretaries
Kochikar Brothers,
... Bangalore ... Bombay

ESTABLISHED 1906

(ಕೀರ್ತಿಶೇಷ ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರ ಮಂಗಳೂರಿನ ಸ್ವದೇಶಾಭಿಮಾನಿ ಪ್ರೆಸ್ಸಿನಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ
ದೊರೆಯಲುಸುಪನುರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಮುನ್ನೆ ವಿಷವ ಸುಮತ ಎರಚಿರೆ ॥
ಗರಳಕವರಂಜದರೆ ಸುಧೆಯನು । ವುರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ದೊರೆದ ಧೀರರು ನಿಶ್ಚಿತಾರ್ಥವನ್ । ...

ಪುಸ್ತಕ ೨೯ ಮಂಗಳೂರು ತಾ. ೮ನೇ ಶುಕ್ರವಾರ ನವಂಬರ ೧೯೩೫ (8-11-'35) ಸಂಚಿಕೆ ...

ಆಲ್ಲಾಪ್ಪಿಯಲ್ಲಿ ದೋಣಿಗಳ ಮೂಲಕ ವ್ಯಾಪಾರ ನಡೆಯುವ ಕಾಲುವೆಯ ಸುಂದರವಾದ ದೃಶ್ಯ

ನೋಟುಗಳು

NOTE.....S.

ಇಂಗ್ಲಾಂಡಿನಲ್ಲಿ ಇಲೆಕ್ಷನ್ ಚಳವಳಿ ಪ್ರಾರಂಭವಾ ಯಿತು ಎನ್ನುವಷ್ಟರಲ್ಲೇ ಚುನಾವಣೆ ಆಗಿಯೇ ಹೋಯಿತು. ಇಷ್ಟರಲ್ಲಿ ೧೪೦೦ ಮಂದಿಯು ಚುನಾ ಯಿಸಲ್ಪಟ್ಟರು. ನಮ್ಮಲ್ಲಿ ಇನ್ನೂ ವರ್ಣನೆಗೆ ಪ್ರಾರಂಭ! ಆಮೆಯಾದಕ್ಕೆ ಕಾಂಗ್ರೆಸ್, ಆ ಬೋರ್ಡು, ಈ ಬೋರ್ಡು, ಕಾಂಗ್ರೆಸ್ಸಿನವರ ಕೂಡೆ—ಯೋಗ್ಯತೆ ಇದ್ದ ವರು ಎಂದೇ, ಪತ್ರವ್ಯವಹಾರ ನಡೆಯುತ್ತ ಇದೆ, ಇರಲಿ, ಇಲೆಕ್ಷನ್ ಸಮಯವನ್ನು ನಿರೀಕ್ಷಿಸುವ.

\+ + + +

ಇಲೆಕ್ಷನ್ ಸಮಯದಲ್ಲಿ ಓಟರರು ಥಕ್ಕನೇ ಗಲಿಬಿಲಿ ಯಾಗದಂತೆ ಕಾಂಗ್ರೆಸ್ ಕಡೆಯಿಂದ ನಿಂತವರು ತಮ್ಮ ಭಾವಚಿತ್ರಗಳನ್ನು ಅಂದವಾಗಿ ಅಚ್ಚು ಹಾಕಿಸಿ, ಕರಪತ್ರ ಗಳನ್ನು ಮಾಡಿಸುವುದು ಉತ್ತಮ. ಕಾರಣ, ಮಿಸ್ ರಿಪ್ರೆಸೆಂಟ್ ಮಾಡಿಯಾರು!

\+ + + +

ಮದ್ರಾಸಿನ ಫೋರ್ಟ್ ಸ್ಯಾಂಟ್ ಜೋರ್ಜ ಕೋಟೆ ಯಲ್ಲಿ ಇಟ್ಟಿದ್ದ ದೇಶರಕ್ಷಕರಲ್ಲೊಬ್ಬನಾದ ಚಾಡ್ಲರ್ ಎಂಬ ವನು ರೋಸಿಸ್ಟರ್ ಎಂಬವನನ್ನು ಕೆಲಸಮಯದ ಹಿಂದೆ ಪಿಸ್ತೂಲಿನಿಂದ ಹೊಡೆದು ಕೊಂದಿದ್ದನು. ಪೆಟ್ಟುತಿಂದ ವನು ಕೂಡಲೇ ಸಾಯಲಿಲ್ಲ. ಆಸ್ಪತ್ರೆಯಲ್ಲಿ ಮಾತಾಡಿ ಸತ್ತಿರುವನು. ಇದರಿಂದಾಗಿ ಮೇಜಿಸ್ಟ್ರೇಟರಿಗೆ ಸ್ವಲ್ಪ ಅನುಕೂಲವಾಯಿತು.

\+ + + +

ದೇಶರಕ್ಷಕನಾದ ಮಿಸ್ಟರ್ ಚಾಡ್ಲರನು ಮಿಸ್ಟರ್ ರೋಸಿಸ್ಟರನನ್ನು ಕೊಂದ ಕಾರಣ ಬೇರೆ ಇದ್ದರೂ, ಮುಂದೆಬಂದುದು. ಮೊದಲನೆಯವನ ಮುದ್ದಾದ ಪ್ರಿಯ ನಾಯಿಯನ್ನು ಎರಡನೆಯವನ ನಾಯಿಯು ಕೊಂದು ಹಾಕಿತೆಂದು, ತಲೆ ರೇಗಿ ಹೊಡೆದನೆಂದು ಅಪರಾಧಿಯ ಹೇಳಿಕೆ. ಇಂಥವರಿಗೆ ತಲೆ ರೇಗುವುದು ಜಾಸ್ತಿ. ಕಾರಣ, ಇವರು ತಿನ್ನುವ ಆಹಾರವಾದರೂ . . . ?

\+ + + +

ಆದರೆ, ಮಿಸ್ಟರ್ ಚಾಡ್ಲರನಿಗೆ ಸಿಕ್ಕಿದ್ದ ಬಹುಮಾನ ಯಾವುದೆಂದರೆ ಬರೇ ಹತ್ತು ವರುಷಗಳು ಕೋಟೆಯಲ್ಲಿ ಇರುವ ಬದಲು ಜೈಲಿನೊಳಗಿದ್ದರಾಯಿತು. ಈ ಶಿಕ್ಷೆಗೆ ಇಂಥವರು ಮೊದಲೇ ತಯಾರು:

\+ + + +

ದಿಲ್ಲಿಯಲ್ಲಿ ನಮ್ಮ ಎಂ. ಎಲ್. ಸಿ. ಗಳಾದ ಶ್ರೀ ಎ. ಬಿ. ಶೆಟ್ರನ್ನು ಪ್ರತಿಸ್ಪರ್ಧಿಯಿಲ್ಲದೆ ಮುಸ್ಲಿಂ ಸರ್ಕಲಿನ ಪರವಾಗಿ ಚುನಾಯಿಸಬೇಕೆಂದು ಅಲ್ಲಿಯ ಎಲ್ಲ ದೊಡ್ಡ ದೊಡ್ಡಣ್ಣನವರ ಅಭಿಪ್ರಾಯ, ಸಭೆ ನಡೆದು, ಮನವಿಯನ್ನು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದೆ. ಮನವಿಯಲ್ಲಿ ವರ್ಣಿಸಿದ ಸಂಗತಿಗಳೆಲ್ಲಾ ಹೌದು. ಮುಖ್ಯವಾದುದು ಆಶ್ಚರ್ಯವಾಗಿ ಶ್ರೀ ಶೆಟ್ರನ್ನು ಸ್ಪರ್ಧೆಯಿಲ್ಲದೆ ಚುನಾಯಿಸ ಬೇಕೆಂದು ನಮ್ಮ ನೋಟ್ಸಿನ ಓಟು.

× + × × × ×

ಬೆಂಗಳೂರಿನಲ್ಲಿ ಮೋಟಾರು ಡ್ರೈವರುಗಳ ಕಷ್ಟವು ಹೆಚ್ಚೆಯೆಂದು ಕಾಣುತ್ತದೆ. ಕಾರಣ, ಪೋಲೀಸ್ ಇನ್ಸ ಪೆಕ್ಟರುಗಳೇ ಜನಭರಿತ ಬಸ್ಸುಗಳನ್ನು ಡ್ರೈವ್ ಮಾಡು ತ್ತಿರುವರು. ಡ್ರೈವ್‌ಮಾಡಿ ಇನ್ಸ್‌ಪೆಕ್ಟರ ಸಾಹೇಬರು ಪರಲೋಕಕ್ಕೆ ತೆರಳಿಬಿಟ್ಟರು. ಇವರು ತೆರಳುವಾಗ್ಯೆ ಇನ್ನೊಬ್ಬರನ್ನೂ ಜತೆಯಲ್ಲಿ ಕರಕೊಂಡು ಹೋಗಿರು ವರು. ಇದು ಧೈರ್ಯಕ್ಕೆ!

× × × × × ×

ಬಸ್ಸು ಮ್ಹಾಲಿಕರು ಸಂಬಳಕೊಟ್ಟು ಇಟ್ಟ ಡ್ರೈವರರೇ ಅಪಘಾತಗಳನ್ನು ಮಾಡಲು ಆಡಿಮೆಮಾಡುವುದಿಲ್ಲ. ಆದರೆ ರಕ್ಷಣಾಕ್ರೆಲಸಕ್ಕೆ ಇಟ್ಟಿದ್ದ ಈ ಪೋಲೀಸ ಅಧೀಸರು ಬಸ್ಸ್ ಡ್ರೈವ್ ಮಾಡುವುದೆಂದರೆ . . . . .

× × × × × ×

ಬಹುಶಃ ಒಂದು ಕಾರಣದಿಂದ ಇರಬಹುದು. ಅವ ಘಡಕ್ಕೆ ಕಾರಣವಾದ ಬಸ್ಸು ಹೊಸತು. ಆದರಲ್ಲೂ ಎಂಟು ಸಿಲಿಂಡರಿದ್ದು. ಇದರ ವೇಗವನ್ನು ಟೆಸ್ಟ್ ಮಾಡಲು ಇನ್ಸ ಪೆಕ್ಟರ ಸಾಹೇಬರು ತಮ್ಮ ಪವರ್ ಉಪಯೋಗವಾಡಿರ ಬಹುದು. ಬಹುಶಃ ಉಪಯೋಗಮಾಡಿದ ಸಮಯವು ಗುಣಿಗೆಕಾಲ ಮುಗಿದು ರಾಹುಕಾಲ ಪ್ರಾರಂಭವಾಗಿರ ಬಹುದು.

× × × × ×

ನಮ್ಮ ಮೊಫಲ್ ಸ್ಟೇಟ್ ಮೈಸೂರಿನಲ್ಲಿ ಪೋಲೀಸಿನ ವರಿಗೆ ಕೆಲಸವೆಂದರೆ ಮೋಟಾರಿನದ್ದೇ. ಬಹಳ ಮೇನಕ್ಷಿ ನಲ್ಲಿ ನೋಡಿಕೊಳ್ಳುವರು. ಇನ್ಸಪೆಕ್ಟರರು ಡ್ರೈವ್ ಮಾಡುವಂಥಾದ್ದು ಹೊಸ ರೂಲ್ಸಿನಲ್ಲಿ ಜಾಗ ಬಂದಿರು ವುದೋ ಏನೋ.

× × × × × ×

ಇನ್ಸ್‌ಪೆಕ್ಟರ್ ಸಾಹೇಬರು ವಿಚಾರಣಾ ಕೆಲಸ ಮಾತ್ರ ಕೊಟ್ಟಿದ್ದಾರೆ. ವಿನಹ ಕೋರ್ಟಿಗೆ ಹೋಗುವ ಕೆಲಸ ಮುಗಿಸಿಬಿಟ್ಟಿರುತ್ತಾರೆ.

× × × × × ×

ಮುಂದಕ್ಕೆ ಬಸ್ ಮಾಲಿಕರ ಗತಿ . . . . . . ಬಿದ್ದು ಪುಡಿಯಾದ ಬಸ್ಸನ್ನು ಎತ್ತಿನ ಗಾಡಿಯಲ್ಲಿ ಹಾಕಿ ಗೆರೇಜಿಗೆ ಒಯ್ಯುವುದು.



ಅನ್ನರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾ ಗುವಿರೇಕೆ? ಅದನ್ನು ನೀವೂ ಹೊಂದಲಾಗು ವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿ ಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯ ಯಲ್ಲಿದೆ.

'ಓವಲ್ಟಿನ್'ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ಪಾನೀಯಗಳು; ದೇಹಪುಷ್ಟಿಗೆ ಸಾಧಕವಾದವುಗಳು. ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ. ಅದರ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ. ಆರೋಗ್ಯವನ್ನು ಹೊಂದುವಿರಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

ಓವಲ್‌ಟಿನ್

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಸಿಗುತ್ತದೆ.

ಏಜೆಂಟ್:—ಜೇಮ್ಸ್ ರೈಟ್, 35 ಎ. ರಿಪನ್ ಸ್ಟ್ರೀಟ್, ಕಲ್ಕತ್ತ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/341

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd.
Head Office:—43, Byragimatam Street,
Post Box No. 203, Madras.

ಶ್ರೀ ಬಾಬೂರಾಜೇಂದ್ರ ಪ್ರಸಾದರು.

ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬೂರಾಜೇಂದ್ರ ಪ್ರಸಾದರವರು ಇಷ್ಟರಲ್ಲಿಯೇ ತಮಿಳುನಾಡಿನ ಪ್ರವಾಸವನ್ನು ಮುಗಿಸಿ, ಇದೇ ತಾ. ೧೦ರಿಂದ ಆಂಧ್ರದೇಶದ ಸಂಚಾರಕ್ಕಾರಂಭಿಸುವರೆಂದು ತಿಳಿದುಬರುತ್ತದೆ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretary.

ಎಥಿಯೋಪಿಯಾದ ಯುದ್ಧ! ಮುಸಲೇನಿಯ ಭವಿಷ್ಯ!

೧೮೮೬-೧೯೩೫.

ಇಟಲಿಯ ಮೇಲೆ ಸೆಂಕ್ಷನುಗಳ ಜ್ಯಾರಿ

ಚೀಳಿನ ಕಡಿತಕ್ಕೆ ದಿವ್ಯ ಔಷಧಿ.

ಓಗಡೆನ್ ಪ್ರಾಂತ್ಯ ಇಟಲಿಗೆ ಬಿಟ್ಟುಕೊಡಲು,

ಎಬಿಸೀನಿಯಾ ಚಕ್ರವರ್ತಿಯವರು ಸಿದ್ಧರಿರುವರು. ಹಾಗೂ ಶಾಂತಿಸ್ಥಾಪನೆಯಾಗಬೇಕೆಂದು ಇವರ ಇಚ್ಛೆ. ಆದರೆ ಉತ್ತರದಲ್ಲಿರುವ ಪ್ರಾಂತ್ಯಗಳನ್ನು ಇಟಲಿಯನರಿಗೆ ಒಪ್ಪಿಸಲು ಇವರಿಗೆ ಇಷ್ಟವಿಲ್ಲ. ಇಟಲಿಯಾನರು ಉತ್ತರದಿಕ್ಕಿನ ಟಿಗ್ರೆ ಪ್ರದೇಶದಲ್ಲಿ ಎಷ್ಟರವರೆಗೆ ಇರುವರೋ ಅಷ್ಟರವರೆಗೆ ಯುದ್ಧ ಸನ್ನಾಹಗಳು ನಿಲ್ಲಲಾರವು. ಚಕ್ರವರ್ತಿಯವರಿಗೆ ಸಮುದ್ರತೀರಕಡೆ ಹೋಗಲು ಒಂದು ಹಾದಿ ಬೇಕೇಬೇಕು. ಟಿಗ್ರೆ ಪ್ರಾಂತ್ಯದಲ್ಲಿ ಇಟಲಿಯಾನರ ನೆಲೆಗೆ ಅವಕಾಶವನ್ನು ಕೊಟ್ಟರೆ, ಚಕ್ರವರ್ತಿಯವರು ತಮ್ಮ ಸಿಂಹಾಸನವನ್ನು ತ್ಯಜಿಸಬೇಕಾಗುವುದು.

ಇಟಲಿಯವರಿಗೆ ಇನ್ನೂ ಎರಡು ಪಟ್ಟಣಗಳು ದೊರಕಿವೆ.

ದಾಗ್ಗಾರಬುರ್ ಮತ್ತು ಗೋರಾಹಿ ಎಂಬಲ್ಲಿ ಘೋರ ಸಮರವು ನಡೆಯಿತು. ಎಥಿಯೋಪಿಯಾನರ ಭದ್ರತೆಗಳು ಇಟಲಿಯಾನರ ಬೊಂಬುಗಳನ್ನು ಅಲ್ಲಗಳೆದವು. ಇರಿಟ್ರಿಯಾವನ್ನು ಪ್ರವೇಶಿಸಬೇಕೆಂಬ ಮಾಡಿದ ಎಥಿಯೋಪಿಯಾನರ ಪ್ರಯತ್ನಗಳು, ಇಟಲಿಯವರ ಶ್ಯಾಪಲ್ ಪ್ರಪಾತದಿಂದಲೂ, ಮೇಶಿನ್ ಗುಂಡುಗಳ ಪ್ರಯೋಗದಿಂದಲೂ ನಿಶ್ಫಲವಾದುವು. ಉತ್ತರಕಡೆಯಲ್ಲಿ ಇಟಲಿಯಾನರು ಅಡಿಸ್ ಅಬಾಬದ ಕಡೆಗೆ ಮುಂದುವರಿಯುತ್ತಿದ್ದಾರೆ. ಅಡಿಗ್ರಾಟನಿಂದ ಮಕಾಲೆಯ ಅರ್ಧ ಹಾದಿಯನ್ನು ಮುಗಿಸಿರುವರು. ಈ ಗೊಂದಲದಲ್ಲಿ ಎಥಿಯೋಪಿಯಾದ ಎರಡು ಪಟ್ಟಣಗಳು ಇಟಲಿಯಾನರ ಕೈಸೇರಿವೆ.

ಎಬಿಸೀನಿಯಾದ ಸೈನಿಕರ ಮೇಲೆ ಬೊಂಬುಗಳನ್ನು ಎಸೆದರು.

ಅಂತರಿಕ್ಷದಿಂದ ಇಟಲಿ ವೈಮಾನಿಕರು ಎಥಿಯೋಪಿಯಾದ ಹಲವು ಕೊಡಗಳ ಮೇಲೆ ಬೊಂಬು ಎಸೆದರು. ಮುಗಾಲೊ ಎಂಬಲ್ಲಿ ಬೊಂಬಿನ ಮಳೆಯು ಧಾರಾಳವಿತ್ತು. ಈ ಬೊಂಬುಗಳಿಂದ ಅನೇಕ ಎಥಿಯೋಪಿಯಾನರು ಮಡಿದಿರುವರೆಂದು ಕೆಲವರ ವಾರ್ತೆ. ಇದರಲ್ಲಿ ಸತ್ಯಾಂಶವಿಲ್ಲವೆಂಬ ವಾರ್ತೆಯೂ ಇದೆ. ಎಬಿಸೀನಿಯಾದವರು ವಿಮಾನಗಳನ್ನು ಕೆಡಿಸುವ ಯುದ್ಧಸಾಮಗ್ರಿಗಳಿಂದ ಇಟಲಿಯಾನರ ವಿಮಾನಗಳನ್ನು ಕೆಡಲು ಮಾಡಿದ ಪ್ರಯತ್ನ ಫಲವಿಲ್ಲವಾಯಿತಲ್ಲದೆ, ಸೈನಿಕರು ಭದ್ರತೆಗಾಗಿ ಓಡಬೇಕಾಯಿತು. ಏನು ಹಾನಿಯಿಲ್ಲದೆ, ಇಟಲಿಯಾನ ವಿಮಾನಗಳು ಕೆಳಗೆ ಬಂದಿವೆ.

ಇಟಲಿಯ ಮೇಲೆ ಸೆಂಕ್ಷನುಗಳ ಜ್ಯಾರಿ.

ಈ ಮೊದಲೆ ತಿಳಿಸಿದಂತೆ ಇಟಲಿ ಆರ್ಥಿಕ ಬಹಿಷ್ಕಾರವು ಈಗ ಕ್ರಮದಲ್ಲಿರುವುದು. ವ್ಯಾಪಾರಿಕ ಬಹಿಷ್ಕಾರ ನವಂಬರ೧೮ಕ್ಕೆ ಜ್ಯಾರಿಗೆ ಬರುವುದೆಂದು ವಾರ್ತೆಯಿದೆ. ಜನಪದ ಮಂಡಳದ ಉದ್ದೇಶವು ಸಾಗುವಂತೆ ಅದರ ಸದಸ್ಯ ಜನಾಂಗಗಳು ಪ್ರತಿಜ್ಞೆಗಳನ್ನು ಮಾಡಿವೆ. ಮುಂದಕ್ಕೆ ಬರಲಿರುವ ವ್ಯಾಪಾರಿಕ ಬಹಿಷ್ಕಾರದ ಸಿದ್ಧತೆಗಳು ಅಲ್ಲಲ್ಲಿ ಆಗುತ್ತಿವೆ. ಇಟಲಿಯವರೊಡನೆ ಯಾವದಾದರೂ ವ್ಯಾಪಾರ ಸಂಬಂಧ ಕರಾರುಗಳಿದ್ದರೆ ಅವುಗಳನ್ನು ಖಂಡಿಸಿರುವರು.

ಆದರೆ, ಮುಸಲೇನಿಯ ಉತ್ಸಾಹ ಕುಗ್ಗದವನಾಗಿದ್ದಾನೆ. ಮೊನ್ನೆ ರೋಮಿನಲ್ಲಿ ನೆರೆದ ಮಿಲ್ಲಿಯಗಟ್ಟಲೆ ಕೃಷಕರನ್ನು ಉಲ್ಲೇಖಿಸಿ, ಈ ಸೆಂಕ್ಷನುಗಳಿಂದ ಇಟಲಿಯವರಿಗೆ ಯಾವತ್ತೂ ಹಾನಿಯು ಬರುವುದಿಲ್ಲವೆಂದೂ, ಮತ್ತು ಅನೇಕ ಜನಾಂಗಗಳ ತಮ್ಮೊತ್ತರ ಸ್ನೇಹಭಾವದಿಂದಿವೆಂದೂ, ಇಟಲಿಯೂ ಎಳ್ಳಷ್ಟು ದುಡುಕದೆ ಈ ಪ್ರಚಂಡ ಕಾರ್ಯದಲ್ಲಿ ಜಯಶೀಲವಾಗುವುದೆಂದೂ ಗಂಭೀರ ಭಾಷಣವನ್ನು ಮಾಡಿದನು.

ಶೀತೆಯು ಇಟಲಿಯಾನರಿಗೆ ಬಾಧಿಸುತ್ತದೆ.

ಆಫ್ರಿಕಾದ ಹವೆಯು ಅತಿರೇಕವಾದ ಶೀತೆ ಮಾಸ್ಸಾವದಲ್ಲಿ ಬಂದು ಇಳಿಯುವ ಇಟಲಿಯಾನ ಸೈನಿಕರು ಬೆಂದು ನರಳುತ್ತಿರುವರು. ತಂಪಿಗಾಗಿ ಮಾರ್ಗದ ಚರಂಡಿಗಳಲ್ಲಿ ಮಲಗುತ್ತಿರುವರು.

ಈ ಯುದ್ಧಸನ್ನಾಹ ಹೇಗೆ ಫಲಿಸುವವು.

ಇಟಲಿಯವರಿಗೆ ನವಂಬರ ಆಖೈರಿವರೆಗೆ ಮಾತ್ರ ಜಯಲಭಿಸುವುದು. ಇದರನಂತರ ಇಟಲಿಯಾನ ಸೈನಿಕರು ಕಠಿಣತರದ ಸಂಕಷ್ಟಗಳನ್ನು ಅನುಭವಿಸಬೇಕಾಗುವುದು. ರೋಗಗಳಿಂದ ಇವರು ಬಡವಾಗುವರು. ಸಾಂಕ್ರಾಮಿಕ ರೋಗಗಳು ಇವರನ್ನು ಬಲವಾಗಿ ಹಿಡಿದು, ಹೀಗೆ ರೋಗ ತಗಲಿ ಹಿಂದಕ್ಕೆ ತೆರಳಿದ ಈ ಸೈನಿಕರು ಈ ಸಾಂಕ್ರಾಮಿಕ ರೋಗಗಳನ್ನು ಯುರೋಪು ಖಂಡದಲ್ಲಿ ಹರಡುವಂತೆ ಮಾಡುವರ. ಈ ರೋಗಗಳಲ್ಲಿ ಡಾಕ್ಟರರಿಗೆ ದಿಗಿಲುಗೊಳಿಸುವ ಅನೇಕ ರೋಗಗಳು ಇರುವವು. ನವಂಬರದನಂತರ ಇಟಲಿಯ ಆರ್ಥಿಕ ಸ್ಥಿತಿಯು ಕೆಡ ಕೆಡ ವುದು. ಹೀಗಾಗಿ ಅಪಜಯ ಹೊಂದವುದು. ಇದರ ಪರಿಣಾಮವಾಗಿ ಇಟಲಿಯು ಮುಸಲೇನಿಯ ಮೇಲೆ ರೇಗಬೇಳುವುದು. ಮುಸಲೇನಿಯ ಇರ್ವರ ಮಕ್ಕಳ ಸ್ಥಿತಿಗೆ ಭಯಂಕರ ಅಪಾಯಗಳು ಒದಗುವವು. ಕೆನ್ಸರಿನಿಂದ ಬಾಧಿಸಲ್ಪಟ್ಟ ಡಾಕ್ಟರರಿಂದ ರಕ್ಷಿಸಲ್ಪಟ್ಟ ಮುಸಲೇನಿಯ ಆರೋಗ್ಯವು ಕೆಡುವುದು. ಇಟಲಿಯನ ವರ್ತಮಾನಪತ್ರಗಳು ಇಟಲಿಗೆ ಎದುರಾಗಿ ದಂಗೆ ಎಬ್ಬಿಸುವರು ಎಂದ ನಮ್ಮಲ್ಲಿನ ಮಹಾನೀಯರೊಬ್ಬರ ಜೋತಿಷ್ಯ. ಇನ್ನು ಎರಡು ವರ್ಷದೊಳಗೆ ಮುಸಲೇನಿಗೆ ಮಹಾ ಹಾನಿ ಲಭಿಸುವುದೆಂದು ಇವರ ಊಹೆ.

೧೮೮೬—೧೯೩೫

ಇಟಲಿ ಎಬಿಸೀನಿಯಾ ಕಲಹವು ೧೮೮೬ರಲ್ಲಿ ಹುಟ್ಟಿದುದು. ೧೮೮೯ರಲ್ಲಿ ಇಟಲಿಯವರಿಗೂ ಹಬಸಿಗಳಿಗೂ ಒಂದು ಒಪ್ಪಂದ ನಡೆಯಿತು. ಇದಕ್ಕೆ ಹಬಸಿಗಳ ಅರ್ಥ ಮತ್ತು ಇಟಲಿಯವರ ಅರ್ಥ ಎಂದು ೨ ಅರ್ಥಗಳಿದ್ದುವು. ಇಟಲಿಯವರು ಹಬಸಿಯವರನ್ನು ತಮ್ಮ ರಾಜಧೋರಣದ ಅಡಿಯಲ್ಲಿ ಇರಿಸಲು ಪ್ರಯತ್ನಿಸಿದರು. ಸ್ವತಂತ್ರಪ್ರಿಯರಾದ ಹಬಸಿಗಳು ೧೮೯೬ರಲ್ಲಿ ನಡೆದ ಯುದ್ಧದಲ್ಲಿ ಇಟಲಿಯವರನ್ನು ಸೋಲಿಸಿದರು, ಇದರ ನಂತರ ನಡೆದ ಒಪ್ಪಂದ ಪ್ರಕಾರ ಇಟಲಿಯವರು ಕೆಲವು ಸಮಯ ಸುಮ್ಮನಿರಬೇಕಾಯಿತು. ಹಬಸಿಯವರು ಸ್ವತಂತ್ರಿಗಳೆಂದು ಒಪ್ಪಬೇಕಾಯಿತು ಕ್ರಮಶಃ ಈ ಕಲಹದಲ್ಲಿ, ಯುರೋಪು ಖಂಡದ ಇತರ ಜನಾಂಗದವರು ಭಾಗವಹಿಸಿದರು. ಬ್ರಿಟಿಷ, ಫ್ರೆಂಚ, ಇಟಲಿ ಈ ಮೂರು ಜನಾಂಗದವರು ಎಬಿಸೀನಿಯಾವನ್ನು ನುಂಗುವ ಆಲೋಚನೆಯನ್ನು ಮಾಡತೊಡಗಿದರು.

ಆದರೆ, ಮೇಲಿನ ಜನಾಂಗಗಳ ಯಾವತ್ತೂ ಕುಯುಕ್ತಿಗಳು ಫಲದಾಯಕವಾಗಲಿಲ್ಲ. ಅಂತಹ ಇಂತಹ, ೧೮೯೮ರಲ್ಲಿ ಫ್ರೆಂಚರು, ಅವರ ಸೋಮಾಲಿಲೆಂಡಿನಿಂದ ಅಡಿಸ್ ಅಬಾಬಕ್ಕೆ ರೈಲ್ವೆ ರಚನೆ ಮಾಡಲು, ಚಕ್ರವರ್ತಿಯವರಾದ ಮೆನೆಲಕ್‌ನವರ ಅಪ್ಪಣೆಯನ್ನು ಪಡೆದರು. ೧೯೦೬ರಲ್ಲಿ ಬ್ರಿಟಿಷ, ಫ್ರೆಂಚ ಮತ್ತು ಇಟಲಿ ಈ ಮೂರು ಜನಾಂಗಗಳೂ ಎಬಿಸೀನಿಯಾದ ವಿಷಯ ತಮ್ಮಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡರು. ಈ ಜನಾಂಗಗಳ ಮುಂದೆ ಎಬಿಸೀನಿಯಾವು ತನ್ನ ಸ್ವಾತಂತ್ರ ರಕ್ಷಣೆಗೆ ಹೆಚ್ಚು ಪ್ರಯಾಸಪಟ್ಟು ಅದನ್ನು ರಕ್ಷಿಸುವವರಾದರು.

ಎಬಿಸೀನಿಯಾವನ್ನು ಭದ್ರವಾಗಿರಿಸುವುದೆ ಈ ಒಪ್ಪಂದದ ಮೂಲಸೂತ್ರ. ಆದರೆ ಈ ಒಪ್ಪಂದಕ್ಕೆ ಎಥಿಯೋಪಿಯಾದ ಮನ್ನಣೆ ದೊರಕಿದ್ದಿಲ್ಲ. ಈ ಒಪ್ಪಂದದಿಂದ ಈ ಮೂರು ಜನಾಂಗದವರು ಎಥಿಯೋಪಿಯಾದ ಮೇಲೆ ಆಸಕ್ತಿವುಳ್ಳವರಾದರು. "ಈ ಒಪ್ಪಂದದಿಂದ ಎಬಿಸೀನಿಯಾದ ರಾಜಕೀಯ ಹಕ್ಕುಬಾಧ್ಯತೆಗಳಿಗೆ ಯಾವತ್ತೂ ಹಾನಿ ಬರಕೂಡದು" ಎಂದು ಎಚ್ಚರಿಕೆಯು ಎಬಿಸೀನಿಯಾದಿಂದ ಹೊರಡಿತ್ತು.

೧೯೨೩ನೇ ಸಪ್ಟಂಬರ ೨೮ರಲ್ಲಿ ಎಥಿಯೋಪಿಯಾವು ಜನಪದ ಮಂಡಳದ ಸದಸ್ಯತನವನ್ನು ಪಡೆಯಿತು. ಇದನ್ನು ಪಡೆಯಲು ಇಟಲಿಯು ಜನಪದ ಮಂಡಳದಲ್ಲಿ ಭಾರೀ ಪ್ರಯತ್ನವನ್ನು ಪಡೆದಿತ್ತು. ೧೯೨೫ರಲ್ಲಿ ಬ್ರಿಟಿಷ ಸರಕಾರವು ಎಬಿಸೀನಿಯಾದ ಟಾನಾ ಸರೋವರದ ಉಪಯೋಗದ ಕುರಿತು ಒಂದು ಸಲಹೆಯನ್ನು ಮಾಡಿತು. ಒಂದು ಒಪ್ಪಂದವನ್ನು ಮಾಡಿ ಈ ಸರೋವರದಲ್ಲಿ ಒಂದು ಆಣೆಕಟ್ಟನ್ನು ನಿರ್ಮಿಸಿ, ಅಲ್ಲಿಂದ ಸುಡಾನಿಗೆ ಒಂದು ಮೋಟರ ರಸ್ತೆಯನ್ನು ನಿರ್ಮಿಸಲು ಪ್ರಯತ್ನಗಳು ನಡೆದುವು. ಇದಕ್ಕೆ ಪ್ರತಿಕೂಲವಾಗಿ ಇಟಲಿಯವರು, ಅಡಿಸ್ ಅಬಾಬದಿಂದ ಇರಿಟ್ರಿಯಾ-ಇಟಲಿ ಸೋಮಾಲಿಲೆಂಡಿಗೆ ರೈಲ್ವೆ ರಚಿಸಬಹುದೆಂದು. ಪರಸ್ಪರ ಒಪ್ಪಂದಗಳಾದುವು. ಆದರೆ ಇದಕ್ಕೆ ಎಥಿಯೋಪಿಯಾವು ಸಮ್ಮತಿಸಲಿಲ್ಲ. ೧೯೨೬ನೇ ಜೂನ್ ೧೫ರಲ್ಲಿ ಇಟಲಿಗೂ ಬ್ರಿಟನಿಗೂ ಈ ಕುರಿತು, ಪ್ರತ್ಯೇಕ ಪತ್ರವ್ಯವಹಾರವನ್ನು ಮಾಡಿತು. 'ನಮ್ಮ ಸ್ವತಂತ್ರ ರಾಜ್ಯದಲ್ಲಿ ಅನ್ಯ ರಾಷ್ಟ್ರಗಳು ತಮ್ಮ ಪರಸ್ಪರ ಒಪ್ಪಂದಗಳಿಂದಾಗಿ, ಯಾವತ್ತೂ ಕಾರ್ಯಗಳನ್ನು ಮಾಡಬಾರದ' ಎಂದು ಎಥಿಯೋಪಿಯಾ ಚಕ್ರವರ್ತಿಯವರು ತಿಳಿಸಿದರು.

ಆಗೋಸ್ತು ೧೯೨೮ರಲ್ಲಿ ಇಟಲಿಗೂ ಎಬಿಸೀನಿಯಾಕ್ಕೂ ಇನ್ನೊಂದು ಒಪ್ಪಂದವಾಯಿತು. ಈ ಒಪ್ಪಂದ ಪ್ರಕಾರ, ಅವರವರ ಪರಸ್ಪರ ಸ್ವಾತಂತ್ರ್ಯಕ್ಕೆ ಹಾನಿ ಬಾರದಾಗಿ ನಿಯಮಗಳಾದುವು. ಅವರಲ್ಲಿ ನಡೆಯುವ ಯಾವತ್ತೂ ಕಲಹಗಳನ್ನು ಯೋಗ್ಯ ರೀತಿಯಲ್ಲಿ, ರಾಜಿಯಲ್ಲಿ ತೀರ್ಮಾನಗೊಳಿಸಬೇಕೆಂದು ಈ ಒಪ್ಪಂದದಿಂದ ನಿರ್ಧಾರಗಳಾಗಿದ್ದವು. ಈ ಒಪ್ಪಂದವೆ ಜನಪದ ಮಂಡಳದ ಈ ಕಲಹದ ಕುರಿತು ನಡೆದ ಅಧಿವೇಶನಗಳಿಗೆ ಕಾರಣ.

ಇಟಲಿಯವರು ಸ್ವತಂತ್ರರಾಗಿ, ಎಥಿಯೋಪಿಯಾದವರೊಡನೆ ವರ್ತಿಸಬಹುದೆಂದು ಬ್ರಿಟಿಷ ಸರಕಾರವು ತಿಳಿಸಿತು. ಫ್ರಾನ್ಸು ಇಲ್ಲಿ ನಿರುತ್ಸಾಹಿಗಳಂತೆ ನಟಿಸಿದರು. ಆದರೆ, ೧೯೩೫ ಜನವರಿ ೭ರಲ್ಲಿ ಇಟಲಿಯು ಎಬಿಸೀನಿಯಾ ಆಕ್ರಮಣವನ್ನು ಕೈಗೊಳ್ಳಲು, ಫ್ರೆಂಚರು ಇವರೊಡನೆ ಕೆಲವು ಒಪ್ಪಂದಗಳನ್ನು ಮಾಡಿದರು. ಇದರಿಂದ ಇಟಲಿಯವರ ಎಥಿಯೋಪಿಯಾದ ಪ್ರಶ್ನೆಯ ಕುರಿತು ಇವರ ಯಾವ ನಿರ್ಬಂಧಗಳಿರಲಿಲ್ಲ.

ಕಳೆದ ಎಪ್ರಿಲ್ ತಿಂಗಳಲ್ಲಿ ಫ್ರಾನ್ಸು, ಬ್ರಿಟನ್, ಇಟಲಿ, ಈ ಮೂರು ಜನಾಂಗಗಳು ಜರ್ಮನಿ—ಆಸ್ಟ್ರಿಯಾ ಕಲಹದ ಕುರಿತು ತಮ್ಮ ವರ್ತನೆಯನ್ನು ನಿರ್ಧರಿಸಲು ಸ್ಟ್ರೆಸಾ ಎಂಬಲ್ಲಿ ಒಂದು ಪರಿಷತ್ತು ನಡೆಯಿಸಿದರು. ಇಲ್ಲಿ ಕೂಡ ಎಥಿಯೋಪಿಯಾವೆ ಮೂಲವಾಗಿತ್ತು. ಫ್ರಾನ್ಸು ಈ ಸಂದರ್ಭದಲ್ಲಿ ಮಸಾಹತುಗಳಿಗಾಗಿ ಮಾಡುವ ಇಟಲಿಯವರ ಈ ಯುದ್ಧವು ನ್ಯಾಯಸಮ್ಮತವಾದುದೆಂದು ಹೇಳಿದ್ದುಂಟು. ಆದರೆ ಇಲ್ಲಿ ಅವರಿಗೆ ಸರಿಯಾದ ತಿಪ್ಪಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಜೂನ್‌ನಲ್ಲಿ ಈ ಕುರಿತಾಗಿ ಇಟಲಿಯಾನರು ಸ್ಥಿರವಾದ ಒಪ್ಪಂದ ಬರಬೇಕೆಂದು ಫ್ರಾನ್ಸು ಮತ್ತು ಬ್ರಿಟನಿನವರು ಜನಪದ ಮಂಡಳವನ್ನು ಬಿಟ್ಟು ಪ್ರಯತ್ನಿಸಿದರು. ಎಥಿಯೋಪಿಯಾದ ಸ್ವಾತಂತ್ರ್ಯವನ್ನು ತಮ್ಮ ಸ್ವಾರ್ಥಕ್ಕಾಗಿ ಕೆಡಿಸಲು ಇವರು ಸಿದ್ಧರಿದ್ದರು. ಬ್ರಿಟಿಷ ಸಚೀವರಾದ ಎಡೆನ್ನರು ರೋಮಿಗೆ ತೆರಳಿ, ಮುಸಲೇನಿಯೊಡನೆ ಈ ಕುರಿತು ಮಾತುಕತೆಗಳನ್ನು ನಡೆಯಿಸಿದ್ದರು.

'ಇದರನಂತರ ಎಥಿಯೋಪಿಯಾವು ಇಟಲಿಗೆ ಕೆಲವು ಪ್ರಾಂತ್ಯಗಳನ್ನು ಒಪ್ಪಿಸಬೇಕು, ಇದಕ್ಕೆ ಪ್ರತಿರೂಪವಾಗಿ ನಾವು ಅವರಿಗೆ ನಮ್ಮ ಕೆಲವು ಪ್ರಾಂತ್ಯಗಳನ್ನು ಕೊಡುತ್ತೇವೆ' ಎಂಬ ಇವೇ ಮೊದಲಾದ ಶರ್ತಗಳು ಮುಂದಕ್ಕೆ ಬರಲಾರಂಭಿಸಿದವು. ಆದರೆ ತನ್ನ ಸ್ವತಂತ್ರವನ್ನು ಎಂತೂ ರಕ್ಷಿಸಬೇಕೆಂದು ಎಬಿಸೀನಿಯಾ ಚಕ್ರವರ್ತಿಯವರು ದೀಕ್ಷೆಗೊಂಡಿರುತ್ತಾರೆ. ಹೀಗೆ ಸಂಧಿಪ್ರಸ್ತಾಪದ ಮಾತುಕತೆಗಳನ್ನು ಬ್ರಿಟನು ಕೆಲವು ಕಾರಣಗಳಿಂದ ಮುಂದುವರಿಸಲಿಲ್ಲ.

ಕೊನೆಗೆ ಈ ಮೂರು ಜನಾಂಗಗಳ ಸಭೆಯು ಪ್ಯಾರಿಸ್ ನಗರದಲ್ಲಿ ಸೇರಿತು. ಎಥಿಯೋಪಿಯಾವನ್ನು ಹಂಚಿಕೊಳ್ಳುವ ಸಂಚುಗಳಾದುವು. ಆದರೆ ಆಗೋಸ್ತು ೨೨ರಲ್ಲಿ ಮುಸಲೇನಿಯ ಒಂದು ಪತ್ರವು ಈ ಸಭೆಯನ್ನು ಮುಕ್ತಾಯವಾಗಿ ಮಾಡಿತು. ಬ್ರಿಟಿಷ ಮಂತ್ರಿಸಭೆಯ ಅಧಿವೇಶನವು ನಡೆಯಿತು. ಜನಪದ ಮಂಡಳದಲ್ಲಿ ಚರ್ಚೆ ಪ್ರಾರಂಭವಾಯಿತು. ಎಥಿಯೋಪಿಯಾವನ್ನು ಜನಪದ ಮಂಡಳದಿಂದ ಹೊರಗೆ ತಳ್ಳಲು ಇಟಲಿಯವರಿಂದ ಪ್ರಯತ್ನಗಳು ನಡೆದುವು. ಕೊನೆಗೆ,—ಯುದ್ಧಪ್ರಾರಂಭವಾಯಿತು. ಜನಪದ ಮಂಡಳದ ಸದಸ್ಯರ ಕಮಿಟಿಗಳು ರಚನೆಹೊಂದಿದವು, ಸೆಂಕ್ಷನುಗಳನ್ನು ರಚಿಸಿದರು. ಸೆಂಕ್ಷನುಗಳ ಫಲಿತಾಂಶವು ಯುದ್ಧವೆಂದು ಮುಸಲೇನಿಯು ಗರ್ಜಿಸಿದನು. ಸೆಂಕ್ಷನುಗಳು ಜ್ಯಾರಿಗೆ ಬಂದಿವೆ—ಯುದ್ಧವು ಸಾಗುತ್ತಿದೆ—ಸಂಧಿಪ್ರಸ್ತಾಪಗಳು ನಡೆಯುತ್ತಿವೆ. ಮುಂದಕ್ಕೆ ಏನಾಗುತ್ತದೆ ಎಂದು ನೋಡಲಿದೆ.

ಚೇಳಿನ ಕಡಿತಕ್ಕೆ ದಿವ್ಯ ಔಷಧ.

ಶ್ರೀ ಎಮ್ ಎಸ್ ನಾರಾಯಣ, ನಿವೃತ್ತ ಇಂಜಿನಿಯರರು ಮಹಾತ್ಮಾ ಗಾಂಧಿಯವರ ಹರಿಜನವೆಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುವರು—

'ನಮ್ಮಲ್ಲಿ ಚೇಳಿನ ಹಾವಳಿ ಬಹಳ. ಅನೇಕ ಔಷಧಿಗಳನ್ನು ನಾನು ಉಪಯೋಗ ಮಾಡಿರುತ್ತೇನೆ. ಆದರೆ ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೆ ವಾರ್ತಾಪತ್ರದ ಮೇಲೆ ನೋಡಿ ಹಿಮಾಲಯನ್ ಔಷಧಿಗಳೆಂಬ ಒಂದು ವಿಶೇಷ ಮದ್ದನ್ನು ತರಿಸಿದ್ದೆನು. ಇವುಗಳಲ್ಲಿ ಒಂದು ಶೀಸೆಯು ಮಾತ್ರ ಉಳಿದು ಮಿಕ್ಕವುಗಳು ಎಲ್ಲಾ ಉಪಯೋಗವಾಗಿದ್ದವು. ಇದಕ್ಕೆ ಲೇಬಲು ಇದ್ದಿರಲಿಲ್ಲ. ಸಾಧಾರಣ ೧೫ ತುಟುಕು ಔಷಧವು ಇದರಲ್ಲಿ ಇತ್ತು. ಮೊನ್ನೆ ನನಗೊಂದು ಸಾಧುವಿನ ದರ್ಶನವಾಯಿತು. ಚೇಳಿನ ಕಡಿತವು ನನಗೆ ವಿಶೇಷ ಬಾಧಿಸುತ್ತದೆಂದೂ, ಅದಕ್ಕೆ ಉತ್ತಮ ಔಷಧಿ ಕೊಡಬೇಕೆಂದೂ ಬೇಡಿಕೊಂಡಿದ್ದು. ಸಾಧುಗಳು ಉಪ್ಪನ್ನು ನೀರಲ್ಲಿ ಕರಗುವಷ್ಟು ಕರಗಿಸಿ, ಆ ನೀರನ್ನು ಒಂದು ದಿವಸ ಇಟ್ಟು ನಂತರ ಗಾಳಿಸಿ, ಕಣ್ಣಿನಲ್ಲಿ ಹಾಕಬೇಕೆಂದು ತಿಳಿಸಿದರು. ಹಾಗೆಯೆ ಪರೀಕ್ಷಿಸಿದೆನು. ನೋವು ಕಡಿಮೆಯಾಯಿತು. ಸಾಧಾರಣ ೩೦ ಜನರನ್ನು ಇದೇ ನೀರಿನಿಂದ ನೋವನ್ನು ನಿವಾರಣೆಮಾಡಿದೆನು. ಕುತೂಹಲದಿಂದ ಆ ಸಣ್ಣ ಬಾಟ್ಲಿಯಲ್ಲಿರುವ ಔಷಧಿಯ ಪರೀಕ್ಷೆಯನ್ನು ಮಾಡಿಸಿದ್ದೆನು. ಅದು ಕೇವಲ ಉಪ್ಪಿನ ನೀರಾಗಿತ್ತು. ಚೇಳಿನ ಕಡಿತದಲ್ಲಿ ಮೇಲಿನ ರೀತಿಯಲ್ಲಿ ಉಪ್ಪಿನ ನೀರನ್ನು ತಯಾರಿಸಿ ಕಣ್ಣಿನಲ್ಲಿ ಪ್ರಯೋಗಮಾಡಿದರೆ ಕಚ್ಚಿದವನಿಗೆ ನೋವು ನಾಶವಾಗುವುದಲ್ಲದೆ, ಅವನು ಸಂಪೂರ್ಣ ಗುಣಹೊಂದುವನು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ನಿಘಂಟುಗಳ ಉದಾರದಿಂದ ಸಾಧ್ಯವಿದ್ದಯುಸಿ ಸ್ವಾನುಭವದೊಂದಿಗೆ ಎಲ್ಲಾ ಔಷಧಿ ಮುಡಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ, ಈ ಧರ್ಮಸಂಸ್ಥೆಯ ಈ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ—ಅದು ಪೂರ್ಣವಾದ ಟೋನಿಕ್ ಆಹಾರ ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.
ರೂ. 3—4—0 ಮತ್ತು ರೂ. 1 12—0

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ, ಕ್ಯಾಲೆಂಡರು.

ದಶಂಬರ ತಾ. 1ರಲ್ಲಿ ವಿಕ್ರಯಕ್ಕೆ ತಯಾರಾಗುವುದು
ಭಂಡಸಾಲೆಗಳಲ್ಲಿಯೂ ಪ್ರತಿಯೋರ್ವರ ಮನೆಯಲ್ಲಿಯೂ
ಇಂಥ ಕ್ಯಾಲೆಂಡರು ಅತ್ಯಗತ್ಯ
ಎಲ್ಲರೂ ಪಡಕೊಳ್ಳುವಂತೆ ಬಹಳ ಕಮ್ಮಿ ಕ್ರಯವಿಟ್ಟದೆ.
ಕ್ರಯ ಬರೇ ಆಣೆ 3
ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು.
ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು.
ಟಪ್ಪಾಲಿನಲ್ಲಿ ಕಳಹಿಸಬೇಕಾದರೆ, 0-4 0 ಸ್ಟ್ಯಾಂಪು ರವಾನಿಸಿರಿ

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮಗದ ಪ್ರಾಪ್ತಿಯ ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ —ದೊಡ್ಡ ಬಾಟ್ಲಿಗೆ ರೂ. 4 ಮಾಧ್ಯಂ 2-4-0. ಚಿಕ್ಕದು 1-2-0.

ತಯಾರಿಸುವವರು.— ಲಸ್ಪರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಪೋಲೀಸ್ ಡಿ. ಎಸ್. ಪಿ. ಮೇಲೆ ೧೨ ಆರೋಪಗಳು!

ಒಂದೇ ಬಾರಿ ಎಂಟು ಶಿಶುಗಳನ್ನು ಹಡೆದಳು!

ಪೋಲೀಸ್ ಅಧಿಕಾರಿಗಳು ಕೊಂಗ್ರೆಸ್ ವಾಲರ ಕ್ಷಮಾಪಣೆಯನ್ನು ಬೇಡಿದರು!

ಪೋಲೀಸ್ ಡಿ. ಎಸ್. ಪಿ. ಮೇಲೆ ೧೨ ಆರೋಪಗಳು.

ಚಿಟ್ಟಾಗೊಂಗಿನಲ್ಲಿ ಪೋಲೀಸ್ ಡಿ ಎಸ್ ಪಿ ಯಾದ ಎಂ ಯುಸುಫ್ ಅಲಿ ಎಂಬವರ ಮೇಲೆ, ಮೊಕದ್ದಮೆಯು ನಡೆಯುತ್ತಿದೆ ಇವರು ಜನರನ್ನು ಬಹಳವಾಗಿ ಪೀಡಿಸಿದುದಲ್ಲದೆ, ಹೆಚ್ಚಿನ ಲಂಚವನ್ನು ತೆಗೆದುಕೊಳ್ಳುತ್ತಿದ್ದರೆಂದೂ, ಹಲವು ಆರೋಪಗಳು ಇವರ ಮೇಲೆ ಬಂದಿವೆ.

ಓರ್ವ ಸಾರ್ಜಂಟರ ಸಾಕ್ಷಿಯಲ್ಲಿ ಸೂಳೆಯವರುಇರುವ ಸ್ಥಳಗಳಲ್ಲಿ ಇವರು ಅನ್ಯರನ್ನು ಬಹಳ ಪೀಡಿಸುತ್ತಿದ್ದರೆಂದು ತಿಳಿದುಬಂದಿದೆ ಒಂದು ಸಂದರ್ಭದಲ್ಲಿ ಡಿ ಎಸ್ ಪಿ ಈ ಸಾರ್ಜಂಟರೊಡನೆ ೫೦ ಜನ ಕೊನ್‌ಸ್ಟೇಬಲ್‌ಗಳೊಡನೆಯೂ, ಇಂಥಾ ಸ್ಥಳಕ್ಕೆ ಹೋಗಿ ಅಲ್ಲಿನ ಜನರನ್ನು ಹೊರಗೆ ತಂದು, ಸಾಷ್ಟಾಂಗ ನಮಸ್ಕಾರ ಮಾಡುವಂತೆ ಮಾಡಿ, ನಂತರ ಇವರನ್ನು ತುಳಿದುಬಿಟ್ಟ ಇನ್ನೊಂದು ವರ್ತನೆಯೂ ಮುಂದೆ ಬಂದಿರುತ್ತದೆ ತನ್ನ ಒಳಗಿರುವ ಅಧಿಕಾರಿಯಿಂದ ಲಂಚವನ್ನುಪಡೆದ ಇನ್ನೊಂದು ಆರೋಪ, ಈ ಬಗ್ಗೆತನಿಕೆ ನಡೆಯುತ್ತಿದೆ

ಕೋರ್ಟಿನಲ್ಲಿ ಸ್ವಯಂವರ.

ಮುಂಚಿನ ಸ್ವಯಂವರ ಪದ್ಧತಿಯು ತಿಯು ಈಗ ಹೆಚ್ಚು ಉಪಯೋಗದಲ್ಲಿ ಇಲ್ಲದಿದ್ದರೂ ಅದು ನಾಶಹೊಂದಲಿಲ್ಲ ಮೊನ್ನೆ ಅಲಿಗಢದ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಒಂದು ಸ್ವಯಂವರವು ನಡೆಯಿತು

ಒಂದು ಸಿರಿವಂತ ತರುಣಿಯು ಪ್ರಾಯಸಮರ್ಥಳಾದಳು ಇತಳಿಗೆ ತಂದೆತಾಯಿಗಳು ಇರಲಿಲ್ಲ ಇವಳಿಗೆ ಮದುವೆಯಾಗಬೇಕಾಯಿತು ಈ ವಿವಾಹ ಕಾರ್ಯಕ್ಕೆ ಜಡ್ಜರ ಸಹಾಯವು ಕೋರಲಾಯಿತು ದೇಶದ ಹಲವು ಕಡೆಗಳಿಂದ ವರರನ್ನು ಕರೆಯಲಾಯಿತು ಹಲವು ತರುಣರ ಪರೀಕ್ಷೆಯು ಜಡ್ಜರೆ ಪ್ರಾವೇಟ್ ಕೋಣೆಯಲ್ಲಿ ತರುಣಿಯಿಂದ ಮಾಡಲಾಯಿತು ವಿದ್ಯಾ ಪ್ರವೀಣರು, ಪದವಿದರರು ಆದ ಅನೇಕ ತರುಣರು ನೆರೆದಿದ್ದರು ಜಡ್ಜರು ತರುಣಿಯು ಓರ್ವ ಎಂ ಎ ಯನ್ನು ವರನಾಗಿ ಆರಿಸಬೇಕೆಂದಿದ್ದರು ಆದರೆ ಯಾವತಕ್ಕೂ ಪದವಿದರರನ್ನು ಆರಿಸದೆ, ತರುಣಿಯು ಓರ್ವ ಸ್ವಲ್ಪ ವಿದ್ಯೆ ಪಡೆದ ಸುಂದರ ಪುರುಷನನ್ನು ಆರಿಸಿದಳು. ಜಡ್ಜರು ಇದಕ್ಕೆ ತನ್ನ ಸಮ್ಮತವನ್ನು ಕೊಟ್ಟರು

ಎಂಟು ಶಿಶುಗಳನ್ನು ಹಡೆಯುವುದು.

ಫ್ರಾನ್ಸಿನಲ್ಲಿ ಓರ್ವ ಸ್ತ್ರೀಯು ಎಂಟು ಜನ ಮಕ್ಕಳನ್ನು ಒಂದೇಬಾರಿ ಹಡೆದಿರುವಳು ಇದು ಒಂದು ಆಶ್ಚರ್ಯಕರ ಸಂಗತಿ ಎಂದು ನಮಗೆ ತೋರಿದರೂ,ಸ್ತ್ರೀಯರಲ್ಲಿ ಒಂಭತ್ತಕ್ಕಿಂತ ಹೆಚ್ಚು ಮಕ್ಕಳು ಒಂದೇ ಸಲ ಜನಿಸಲು ಕಾರಣವಿದೆ ಎಂದು ವೈದ್ಯಕೀಯ\ ಜನರ ಪ್ರಕಟಣೆ

ಪೋಲೀಸ್ ಅಧಿಕಾರಿಗಳು ಕೊಂಗ್ರೆಸ್ ವಾಲರ ಕ್ಷಮಾಪಣೆಯನ್ನು ಬೇಡಿದರು.

ಬರೆಲ್ಲಿ ಎಂಬಲ್ಲಿ ಪೋಲೀಸ್ ಸುಪರಿಂಟೆಂಡೆಂಟರು, ಕಾಂಗ್ರೆಸ್ ಮುಖಂಡರಾದ ಶ್ರೀ ದಾಮೋದರ ಸಾರುಪ್ ಸೇಠರೊಡನೆ ಓರ್ವ ಸಬ್ ಇನ್ಸ್‌ಪೆಕ್ಟರರ ದುರ್ವರ್ತನೆಗಾಗಿ ಕ್ಷಮೆ ಬೇಡಿರುವರು ಈ ಇನ್ಸ್‌ಪೆಕ್ಟರರು, ದಾಮೋದರ ಸೇಠರು, ಪ್ರಸಾರಣಾ ಸಂಚಾರ ಮಾಡುತ್ತಿರುವಾಗ ಒಂದು ಕಡೆಯಲ್ಲಿ ಇವರ ತಂದೆಯ ಹೆಸರು ಕೇಳಲು, ಅವರು ಹೆಸರು ತಿಳಿಸಲು ಒಪ್ಪದೆ ಇರಲು ಅವರನ್ನು ಕಾರಿನಿಂದ ಸೆಳೆದು, ಸ್ಟೇಶನಿಗೆ ಒಯ್ಯಲಾಗಿ, ಅಲ್ಲಿ ನೀಚ ವಚನಗಳನ್ನು ಉಪಯೋಗಿಸಿ ಬೈದರ ದಾಮೋದರ ಸೇಠರ ವರ್ತನೆ ಜಿಲ್ಲಾ ಕಲೆಕ್ಟರರಿಗೆ ತಿಳಿಸಲಾಗಿ, ಸುಪರಿಂಟೆಂಡೆಂಟರ ಈ ಕ್ಷಮಾಪಣೆ ಪತ್ರವು ಬಂದಿರುತ್ತದೆ

ಚಂದ್ರನನ್ನು ಸೇರಲು ಪ್ರಯತ್ನಗಳು.

ಆಕಾಶ ಬಾಣ(ರೋಕೆಟ್)ಗಳಿಂದ ಚಲಿಸಲ್ಪಡುವ ಬೆಲೂನುಗಳನ್ನು ನಿರ್ಮಿಸಿ, ಚಂದ್ರನನ್ನು ಸೇರಬೇಕೆಂಬ ಉದ್ದೇಶ ಜರ್ಮನಿಯ ಒಂದು ವಿಜ್ಞಾನಿ ಮಂಡಳಿಕ್ಕೆ ಭೂಮಿಯ ವಾಯುಮಂಡಲವು ಬಹು ದೂರಕ್ಕೆ ಪ್ರಸರಿಸಿಕೊಂಡಿಲ್ಲ ಚಂದ್ರನಿಗೂ ವಾಯುಮಂಡಳಕ್ಕೂ ಮಧ್ಯ ಸ್ಟ್ರಟೊಸ್ಫಿಯರ ಎಂಬ ಪ್ರದೇಶವಿರುವುದು ಇದರಲ್ಲಿ ನಮ್ಮ ಜೀವನಕ್ಕೆ ಮುಖ್ಯವಾದ ಆಮ್ಲಜನಕವು ಇರುವುದಿಲ್ಲ ಬೆಲೂನುಗಳಲ್ಲಿ ಆಮ್ಲಜನಕ ಒದಗಿಸುವ ಸಿಲೆಂಡರುಗಳನ್ನು ಇಟ್ಟಿರುತ್ತಾರೆ ಚಂದ್ರನು ಭೂಮಿಯ ಒಂದು ತುಂಡಾಗಿರುವನು ಭೂಮಿಯ ತಿರುಗಾಟದಲ್ಲಿ ಈ ತುಂಡು ಹಾರಿಹೋಗಿ ಚಂದ್ರನ ನಿರ್ಮಾಣವಾಯಿತು ಚಂದ್ರನಲ್ಲಿ ಬರೆ ಗುಡ್ಡ ಪ್ರದೇಶಗಳು ಹೊರತು, ಯಾವದೆ ತರದ ಜೀವಿತ ಸೃಷ್ಟಿಯು ಇಲ್ಲವೆಂದು ವೈಜ್ಞಾನಿಗಳು ಕಂಡುಹಿಡಿದಿದ್ದಾರೆ ಯಾವಾಗಲೂ ಇಲ್ಲಿ ತಾರೆಗಳ (Meteors) ಗಳು ಸುರಿಯುತ್ತಿವೆ ಜರ್ಮನಿಯವರು ನಿರ್ಮಿಸಿದ ಈ ಬೆಲೂನುಗಳು ತಾಸು ಒಂದು ೬೦೦ ಮೈಲು ಚಲಿಸಬಲ್ಲವು ಈ ಮುಂಚೆ ಹಲವರು ಚಂದ್ರ ಯಾತ್ರೆಯನ್ನು ಕೈಕೊಂಡು ಮಡಿದಿರುವರು ಒಂದು ವೇಳೆ ಈ ರೋಕೆಟ ಬೆಲೂನ ಗಳಿ ದ ಚಂದ್ರನನ್ನು ಸೇರಿದರೂ ಅಲ್ಲಿನ ತಾರೆಗಳ ಹೊಡೆತವು ಇವರನ್ನು ಕೊಂದಿಕ್ಕುವುದು ಆದರೂ ವಿಜ್ಞಾನಿಗಳಲ್ಲವೆ? ಶೋಧನೆಯು ಕುತೂಹಲದಿಂದ ತುಂಬಾ ಬೆಲೂನುಗಳು ಚಂದ್ರ ಸಂಚಾರಕ್ಕೆ ಬೇಗನೆ ಹೊರಡುವುವು

ಹಿಂದೂದೇಶದ ಜನಸಂಖ್ಯೆ

೩೫೦ ಮಿಲಿಯ ಎಂದೂ, ಅದೂ ೧೯೪೦ ರಲ್ಲಿ ೪೦೦ ಮಿಲಿಯವಾಗುವುದೆಂದೂ ಕರ್ನಲ್ ರಸ್ಸೆಲ್ಲರ ವರದಿ ಇವರು ಹೇಳುವ ಪ್ರಕಾರ ಈ ರೀತಿಯಲ್ಲಿ ಜನಸಂಖ್ಯೆಯು ಏರಿದರೆ ಜನರಿಗೆ ತಕ್ಕ ಆಹಾರವನ್ನು ಒದಗಿಸಲು ಸ್ವಲ್ಪ ಕಷ್ಟಸಾಧ್ಯವಾಗಬಹುದು ಎಲ್ಲಾ ಭೂಮಿಯನ್ನು ಸಾಗುವಳಿ ಮಾಡಿದರೂ ಕೂಡ ಇವರಿಗೆ ಸಂಪೂರ್ಣ ಆಹಾರವನ್ನು ಒದಗಿಸಲು ಸಾಧ್ಯವಾಗಲಿಕ್ಕಿಲ್ಲ ಎಂದು ಇವರ ಮತ ಬಡಸ್ಥಿತಿಯು ಎಲ್ಲೆಲ್ಲೂ ಸ್ಥಿರವಾಗಿ ನೆಲೆಗೊಂಡಿದೆ ಆದರೆ ಮರಣದ ಸಂಖ್ಯೆಯು ಮುಂಚಿನಿಂದ ಸ್ವಲ್ಪ ಏರುತ್ತದೆ ಪಾಶ್ಚಾತ್ಯ ಉತ್ಪಾದನೆಯು ಹೆಚ್ಚಾಗಿ, ಜನರು ನರಳುತ್ತಿರುವರು ಹಿಂದೂ ದೇಶದಲ್ಲಿ ಉತ್ಪಾದನೆಯು ಕಡಿಮೆ ಜನಸಂಖ್ಯೆಯು ಹೆಚ್ಚುತ್ತಿದೆ ಆದರೆ ಇವರ ಊಹೆ ಪ್ರಕಾರ ನಮ್ಮ ಜನಸಂಖ್ಯೆಯು ಮುಂದೆ ಏರುತ್ತದೆಂದು ನಿರ್ಧಾರ ಮಾಡಲು ಸಾಧ್ಯವಿಲ್ಲ. ಜನರಂತೂ ಹೊಟ್ಟೆಗಿಲ್ಲದೆ ನರಳುತ್ತಿದ್ದಾರೆ. ಪ್ರಬಲ ಸಾಂಕ್ರಾಮಿಕ ರೋಗಗಳು ತಲೆದೋರಿದರೆ ನಮ್ಮ ಸಂಖ್ಯೆಯು ವಿಶೇಷವಾಗಿ ಏರಲು ಸಾಧ್ಯವಾಗಲಿಕ್ಕಿಲ್ಲ.

ಎಥಿಯೋಪಿಯಾದ ವೀರರಮಣಿ

ಯಾದ ವ್ಯಾಜೆನ್ನ ಅಸ್ಸೆಡೆಟ್ಟ ಎಂಬವಳು ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಎಥಿಯೋಪಿಯಾದ ಪಾಳೆಯ ಒಂದು ದಂಡಿಗೆ ನಾಯಕಳಾಗಿ ಓಗಡನ್ ಪ್ರಾಂತ್ಯಕ್ಕೆ ಬಂದಿರುವಳು ಇವಳ ದಂಡಿನ ಸೈನಿಕರು ನಿಪುಣರಲ್ಲದೆ ನವಯುವೋದ್ಬೋಧಕರಣದಿಂದ ಕೂಡಿದವರಾಗಿದ್ದಾರೆ ಇವಳ ತಂದೆಯು ಅದೇ ಪ್ರಾಂತ್ಯದಲ್ಲಿ ಇನ್ನೊಂದು ಪಾಳೆಯ ನಾಯಕನಾಗಿರುತ್ತಾನೆ ಈತನು ಮುಂಚಿನ ಎಡೋವಾದ ವೀರಪುರುಷನು ಹೀಗೆ ಓಗಡನ್ ಪ್ರಾಂತ್ಯದಲ್ಲಿ ಪ್ರವೀಣ ಸೇನಾನಾಯಕರೆ ಅಭಿಸೀನಿಯಕ್ಕಾಗಿ ದಣಿಯುತ್ತಿದ್ದಾರೆ ದೇಶರಕ್ಷಣೆಗೆ ತಮ್ಮ ಪವಿತ್ರ ಜೀವನವನ್ನು ಬಲಿಕೊಡಲೂ ಇವರು ಸಿದ್ಧರಿದ್ದಾರೆ

ಅಮೆರಿಕಾದ ಸುಪ್ರಸಿದ್ಧ

ಪತ್ರಿಕಾ ಪ್ರತಿನಿಧಿಗಳಾದ, ವಿಲ್‌ಪ್ರೆಡ್ ಬಾರಬರ್ (ಲಂಡನಿನ 'ಡೈಲಿ ಟೆಲಿಗ್ರಾಫ್' ಮತ್ತು ಚಿಕಾಗೊಡ್‌ಟ್ರಿಬ್ಯೂನಿನ'ಪ್ರತಿನಿಧಿಗಳು) ಎಂಬವರು ಓಗಡನ್ ಪ್ರಾಂತ್ಯದ ಮಲೇರಿಯಾದಿಂದ ಪೀಡಿತರಾಗಿ, ಮೊನ್ನೆ ಅಡಿಸ್ ಅಬಾಬದಲ್ಲಿ ಮೃತ್ಯುಮುಖರಾದರು ಇವರು ಓಗಡನ್ ಪ್ರಾಂತ್ಯದ ಶೋಧನಾಸಂಚಾರವನ್ನು ಮಾಡಿ, ಇಟೆಲಿಯವರು ಗೋರಾಹಿ ಎಂಬ ಪ್ರದೇಶದ ಮೇಲೆ ಬೊಂಬಿನ ಪ್ರಯೋಗ ಮಾಡುವರೆಂದೂ, ಇಟೆಲಿಯನರಿಗೆ ಮಲೇರಿಯಾ ಜ್ವರವು ಪೀಡಿಸುವುದೆಂದೂ, ಪತ್ರ ಮೂಲಕ ಹಬಸಿಯವರ ಚಕ್ರವರ್ತಿಯವರಿಗೆ ತಿಳಿಸಿದ್ದರು. ಇವರು ಚಕ್ರವರ್ತಿಯವರ ಕೃಪಾಪೋಷಿತರಾಗಿದ್ದರು ಜ್ವರದಲ್ಲಿ ನರಳುತ್ತಿರುವಾಗ ಇವರಿಗೆ ತಕ್ಕ ಶುಶ್ರೂಷೆಗಳು ನಡೆಯುವಂತೆ ಏರ್ಪಾಡುಗಳನ್ನು ಮಾಡಿದ್ದರು ಇಜಿಪ್ಟಿನಲ್ಲಿರುವ ಇವರ ಪತ್ನಿಯನ್ನು ಕರೆತರಲು ತನ್ನ ವಿಮಾನವನ್ನು ಕೊಟ್ಟಿದ್ದರು.

ಯುರೋಪಿನ ಜನಾಂಗದವರು

ಇಟೆಲಿಯನರನ್ನು ಕಪ್ಪು ಜನರು ಸೋಲಿಸುವುದು, ಎಷ್ಟಕ್ಕೂ ಸಹಿಸುವದಲ್ಲ ಮಸ್ಸೋಲಿನಿಯನ್ನು ಸೃಷ್ಟಿ ಶಾಂತಿಮಾಡುವುದಲ್ಲದೆ ಈತನ ಗರ್ವಭಂಗವು ಇವರ ಮುಖ್ಯ ಉದ್ದೇಶವಲ್ಲ ಇವನಿಗೆ ಸ್ವಲ್ಪ ಕಷ್ಟ ಒದಗುವ ಸಂದರ್ಭಗಳಿಂದಗಿದರೆ ಸಂಧಿ ಪ್ರಸ್ತಾಪದ ಮಾತುಕತೆಗಳು ನಡೆಯುವುವು ಫ್ರಾನ್ಸಿನ ಲಾವಲರು ಈತನ ಪರಮ ಮಿತ್ರರು ಬಿಟನು ಎಂತೂ ಸಂಗ್ರಾಮ ಸೆಂಕ್ಷನುಗಳ ಪ್ರಯೋಗ ಮಾಡುವುದಿಲ್ಲ ಎಂದು ವಚನಕೊಟ್ಟಿರುತ್ತದೆ ಹೀಗಾಗಿ ಒಂದು ವೇಳೆ ಫ್ರೆಂಚರು ಮುಸಲೀನಿಯ ಕಡೆಗೆ ತಿರುಗಿದರೆ ಎಲ್ಲರೂ ಇವರ ಕೂಡೆ ಸಹಕರಿಸಬಹುದು ಹೀಗಾಗಿ ಸೆಂಕ್ಷನುಗಳ ಬಿದ್ದುಹೋಗುವುವು

ಮುಸಲೀನಿಗೂ ಫ್ರಾನ್ಸಿಗೂ ಗುಪ್ತ ಒಪ್ಪಂದಗಳು ಕೆಲವು ನಡೆದಿವೆ ಗುಟ್ಟಿನ್ನು ರಟ್ಟು ಮಾಡುವನೆಂದು ಹೆದರಿಸಿದರೆ ಫ್ರಾನ್ಸು ಇವನೊಡನೆ ಸಹಕರಿಸಲೂ ಬಹುದು ಇದ ಸ್ಥಿತಿ ಪರಿಶೀಲಿಸಿದಲ್ಲಿ ಒಟ್ಟಿನಲ್ಲಿ ಎಬಿಸೀನಿಯಾವನ್ನು ವಶೀಕರಿಸುವರೊ ಎಂದು ಭಾಸವಾಗುತ್ತಿದೆ ಬಿಳಿಜನರು ತಮ್ಮ ಗೌರವಕ್ಕಾಗಿ ಯಾವುದೆ ಪಾಪಗಳನ್ನು ಮಾಡಲೂ ಸಿದ್ಧರಿದ್ದಾರೆ

ಬರೆ ೪೦೦

ಸಿರಿವಂತ ಜನರರ ಪುತ್ರರನ್ನು ತರಬೇತು ಮಾಡಲು, ಒಂದು ದೊಡ್ಡ ವಿಶ್ವವಿದ್ಯಾಲಯಕ್ಕೆ ತಗಲುವ ವೆಚ್ಚದಲ್ಲಿ 'ಪಬ್ಲಿಕ್ ಸ್ಕೂಲ್' ಎಂಬ ವಿದ್ಯಾಸಂಸ್ಥೆಯೊಂದು ಡೆಹಾಡೂನಿನಲ್ಲಿ ಹಿಂದೂದೇಶದ ಸರಕಾರದಿಂದ ಸ್ಥಾಪನೆಯಾಗಿದೆ. ವ್ಯಾಸರಾಯರು ಇದರ ಆರಂಭ ಉತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಈ ಸಂಸ್ಥೆಯ ನಿರ್ಮಾಣದಲ್ಲಿ ಸರಕಾರಕ್ಕೆ ಲಕ್ಷೋಪಲಕ್ಷ ರೂಪಾಯಿ ವೆಚ್ಚವಾಗಿರುತ್ತದೆ. ಪಾಶ್ಚಾತ್ಯ ರೀತಿಯನ್ನನುಸರಿಸಿ ಈ ಸಂಸ್ಥೆಯು ಸ್ಥಾಪನೆಯಾಗಿರುತ್ತದೆ

ಹಿಂದುಸ್ಥಾನದ ವಿದ್ಯಾಭ್ಯಾಸವು,

ಬೇರೆ ದೇಶಗಳಂತೆ ವೃದ್ಧಿಹೊಂದಲಿಲ್ಲ ನಮ್ಮ ೩೦ ಮಿಲಿಯ ಮಕ್ಕಳಿಗೆ ಎಲಿಮೆಂಟರಿ ವಿದ್ಯಾಭ್ಯಾಸ ಕೂಡ ಸರಿಯಾಗಿ ದೊರಕುವ ವ್ಯವಸ್ಥೆಗಳಿಲ್ಲ. ಎಲ್ಲೆಲ್ಲೂ ನಮ್ಮ ಮುಂದಾಳುಗಳು ನಮ್ಮ ವಿದ್ಯಾಭ್ಯಾಸವು ವೃದ್ಧಿಕರಿಸಲು ಪ್ರಯತ್ನಿಸುತ್ತಿದ್ದಾರೆ ವಿದ್ಯೆಯಿಂದ ಒಂದು ದೇಶದ ಹಲವು ತೊಡಕುಗಳನ್ನು ನಾಶಮಾಡಬಹುದು ವರ್ಷಂಪ್ರತಿ ಧಾರಾಳ ವೆಚ್ಚಮಾಡಿ ೫೦ ಜನರನ್ನು ಪ್ರವೀಣರಾಗಿ ಮಾಡುವ ಬದಲಾಗಿ, (ನವೀನವಾಗಿ ರಚಿಸಿದ 'ಪಬ್ಲಿಕ್ ಸ್ಕೂಲಿನಲ್ಲಿ) ನಮ್ಮ ಸರಕಾರವು ನಮ್ಮ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸದ ಕಡೆಗೆ ಗಮನಕೊಡಬಾರದೆ, ಎಂದು ಕೆಲವು ಪತ್ರಿಕೆಗಳಲ್ಲಿ ಮೇಲಿನ ಪಬ್ಲಿಕ್ ಸ್ಕೂಲಿನ ಮೇಲೆ ವಿಮರ್ಶೆ

ಕಳೆದ ಯುದ್ಧದ ದೆಸೆಯಿಂದ

ಜಪಾನಿನವರಿಗೆ ಪ್ರಾಣನಷ್ಟ–೫೦೦– ಇವರಲ್ಲಿ ೩೦೦ ಮಂದಿ ರೋಗಪೀಡಿತರಾಗಿ ಮಡಿದಿರುವರು ಇವರು ಥಟ್ಟನೆ ಐಶ್ವರ್ಯವಂತರಾದರು ೧೯೧೪ರಲ್ಲಿ ಇವರ ವ್ಯಾಪಾರದಿಂದ ಉಳಿತಾಯವು ೨೧ ಮಿಲಿಯ ಯೆನ್ನುಗಳು ನೌಕಾ ವಹಿವಾಟಿನ ಆದಾಯವು ನೇಕಡಾ ೧೨೦೦ ಸಲ ವೃದ್ಧಿಹೊಂದಿತ ಇವರ ದೇಶ ಎಲ್ಲರೂ ಅಸೂಯೆಪಡುವಂತಾಯಿತು ೧೯೨೩ರ ತನಕ ಇವರ ಸ್ಥಿತಿ ಇದೇ ಪ್ರಕಾರ ಉದ್ಧಾರವಾಯಿತು. ಹೆಚ್ಚಿನ ಐಶ್ವರ್ಯವು ಇವರ ಕೈಸೇರಲು ಇವರ ಲಜ್ಜೆಯು ಕಡಲಾರಂಭಿಸಿತು. ೧೯೩೩ರಲ್ಲಿ ತೆಗೆದ ಸಂಖ್ಯೆ ಪ್ರಮಾಣಗಳ ಪ್ರಕಾರ, ಜಪಾನಿನ ಜನರ ಸಂಖ್ಯೆಯು ೬೫,೦೦೦ ೦೦೦ ಇದರಲ್ಲಿ ೨೪೬೩೩,೫೦೪ ಜನರ ಲೈಸನ್ಸು ಪಡೆದ ಸೂಳೆಯ ಪರೊಡನೆ ಭೋಗಿಸುವವೆನ್ನು ಪಡೆದಿರುತ್ತಾರೆ ಪತ್ತು ಲೈಸನ್ಸು ಇಲ್ಲದೆ ಸೂಳೆವೃತ್ತಿ ನಡೆಸುವವರ ತುಂಬಾ ಇದ್ದಾರೆ ೧೯೩೩ರಲ್ಲಿ ಭೋಗ ಪದಿಂದ ಇವರಿಗೆ ೫೬ ಮಿಲಿಯ ಯೆನ್ನಿನ ನಷ್ಟವು ಸಂಭವಿಸಿದೆ

ಶಿಶುಗಳನ್ನು ರಕ್ಷಿಸಲು ಕೋತಿಗಳು.

ಶಿಶುಗಳಿಗೆ ಅವರ ಬಾಲ್ಯವಸ್ಥೆಯಲ್ಲಿ ಒಂದು ತರದ ಪಕ್ಷವಾತದ ರೋಗವು ಬರುವುದುಂಟು ಇದ ಒಂದ ಅಂಟುರೋಗವೆಂದು ಡಾಕ್ಟರರು ಶೋಧನೆಮಾಡಿದ್ದಾರೆ ಮಾತ್ರವಲ್ಲ ಮಕ್ಕಳನ್ನು ಇದರಿಂದ ಸುರಕ್ಷಿತರಾಗಿ ಮಾಡುವ ಒಂದು ಔಷಧಿಯನ್ನು ಕಂಡುಹಿಡಿದಿದ್ದಾರೆ ಈ ಔಷಧವನ್ನು ಕೋತಿಗಳಿಂದ ತೆಗೆಯುತ್ತಾರೆ. ಹಿಂದೂದೇಶದಿಂದ ೫೦೦ ಕೋತಿಗಳನ್ನು ಈ ಮದ್ದಿನ ತಯಾರಿಗಾಗಿ ಅಮೆರಿಕಾದ ಶ್ರೇಷ್ಠ ವೈದ್ಯ ರೊಬ್ಬರಿಗೆ ಕಳುಹಿಸಿಕೊಟ್ಟಿರುತ್ತಾರೆ ರೋಗದ ಅಣುಗಳನ್ನು ತಂದು, ಈ ಕೋತಿಗಳಿಗೆ ಇಂಜೆಕ್ಷನ್ ಮೂಲಕ ಸೇರಿಸಿ, ಅವುಗಳಿಗೆ ಆ ರೋಗ ಬರುವಂತೆ ಮಾಡಿ, ಅವುಗಳನ್ನು ಕ್ಲೋರೊಫೊರ್ಮ್ ಕೊಟ್ಟು ಕೊಂದು ಅವರ ಬೆನ್ನೆಲುಬು ತೆಗೆದು ಹುಡಿ ಮಾಡಿ, ಒಂದು ದ್ರಾವಕದಲ್ಲಿ ಮಿಶ್ರನ ಮಾಡಿ ಈ ಔಷಧಿಯನ್ನು ತಯಾರಿಸುತ್ತಾರೆ ಇದಕ್ಕೆ ಆ ರೋಗವನ್ನು ದೂರಕಟ್ಟುವ 'ಸೀರಮ್' ಎಂದು ಕರೆಯುತ್ತಾರೆ ಹೀಗೆ ಕೋತಿಗಳಿಂದ ಅನೇಕ ತರದ ರೋಗಗಳಿಗೆ ಸೀರಮ್ಸ್ ತಯಾರಿಸುತ್ತಾರೆ ತಂಡೋಪತಂಡ ಕೋತಿಗಳನ್ನು ಹಿಂದೂದೇಶದಿಂದ ಕಳುಹಿಸುತ್ತಾರೆ.

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬೆವರು, ಗುಂಡಿಗೆಯ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖ ಬಿಳಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಟಿಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/4ರಷ್ಟು ಅಂಚೆಟೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ ಗುಹ್ಯ ರೋಗಗಳಿಗೆ ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೦೦ ರೂಪಾಯಿ ಬಹುಮಾನ.
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು. ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದ್ದರೂ ಜಯವಾಗುತ್ತದೆ. ಅದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ ೨ ಮಾತ್ರ

೦೨.೯ ೮ Bengali Mesmarism House
5–7 Panchpota, Bengal (B.B.

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 6	3— 5
ಮಸ್ಕತಿ	4— 0	4— 8
ಗುಡ್ಡು	3—12	,— 2
ಊರ ಅವ್ವಲ್ ದೋಸೆಗೆ	4—10	5— 0
ರಂಗೂನು ಬೆ. ಗೋ ಒಕ್ಕೆ	7— 0	7— 8
ಎಲ್ಲೂರು ಬೆ ಮು ಒಕ್ಕೆ	4— 4	4— 8
ಗೋದಿ ಗೋಣಿ ಒಕ್ಕೆ	10 0	12— 8
ತೊಗರಿ ಗೋಣಿ ಒಕ್ಕೆ	10 —8	11— 0
ಹುರುಳಿ ಗೋಣಿ ಒಕ್ಕೆ	7— 0	7 — 4
ಕಡಲೆ ಗೋಣಿ ಒಕ್ಕೆ	7 — 8	10— 8
ತೊಗರಿಬೇಳೆ ಗೋಣಿ ಒಕ್ಕೆ	10— 0	17— 0
ಉದ್ದು ಗೋಣಿ ಒಕ್ಕೆ	9 — 8	10 — 0
ಹೆಸರು ಗೋಣಿ ಒಕ್ಕೆ	9— 4	9—12
ಊರುಬೆಲ್ಲ ಖಂಡಿ ಒಕ್ಕೆ	37— 8	41— 8
ಉಪ್ಪು ಗೋಣಿ ಒಕ್ಕೆ	4—12	5— 0
ಕೊಬ್ಬರಿ ಖಂಡಿ ಒಕ್ಕೆ	65— 0	68— 0
ಕೊಬ್ಬರಿ ಓಡಿ ಖಂಡಿ ಒಕ್ಕೆ	28— 0	29— 0
ಎಳ್ಳೆಣ್ಣೆ ಖಂಡಿ ಒಕ್ಕೆ	32 — 8	32— 8
ಮೆಣಸಿನ ಕಾಯಿ ಮಣ ಒಕ್ಕೆ	4— 10	5— 10
ಎಳ್ಳಿಕ್ಕೆ ಮಣ ಒಕ್ಕೆ	5— 2	6— 0
ಚಿಮಣಿಎಣ್ಣೆ ಗೆಟ್ಟಿಗೆ ಒಕ್ಕೆ	5— 8	5—12
ಮೋರಿಸ ಸಕ್ಕರೆ ಮ ಒಕ್ಕೆ	3—11	3 —2
ಮೆಣಸು	3— 8	5 - 0
ಸಾಸಿವೆ ಮುಡಿ ಒಕ್ಕೆ	6 — 8	6—12
ಕಾಳುಮೆಣಸು ಖ. ಒಕ್ಕೆ	120— 0	122— 8
ಮೆಂತ್ಯೆ ಬೀಜ ಮಣಒಕ್ಕೆ	35— 8	36— 8
ಗೇರುಬೀಜ ಮು. ಒಕ್ಕೆ	4—14	5 — 4
ಕಬ್ಬಿಣ ಖಂಡಿ ಒಕ್ಕೆ	40— 0	40— 8
ತಾಂಬ್ರತಗಡು ಮ. ಒಕ್ಕೆ	10— 0	10— 8
ತಾಂಬ್ರಪಾತ್ರಗಳು ಮ ಒಕ್ಕೆ	14— 0	14— 8
ಚೀನಿಬೆಳ್ಳಿ ಸೇರು ಒಕ್ಕೆ	17— 4	18— 0
ಹಿತ್ತಾಳೆ ತಗಡು ಮ. ಒಕ್ಕೆ	9— 0	9— 8
ಹವಿಸು ಗಳ್ಳೆ	22— 6	22— 8
ಹುಣಸೆ ಹುಳಿ ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	170— 0	180— 0
ಫಿಟೇರಿ ಕಾಫಿ ಖಂಡಿ ಒಕ್ಕೆ	200— 0	205— 0
ಮಡಿಕೇರಿ ಏಲಕ್ಕಿ	26— 0	26— 12
ಸಕಲೇಶಪುರ ಏಲಕ್ಕಿ	28— 0	30 — 0
ಕಳತು ಅಡಿಕೆ	110—0	115—0

ಸಪಟ ಲೋಶನ್

ಗಜಕರ್ಣ, ಹುರುಗಜ್ಜಿ, ನಾಯಟ್ಟಿ, ಇಸಬು ಮುಂತಾದ ಚರ್ಮರೋಗಗಳ ಮೇಲೆ ೨೪ ತಾಸಿನಲ್ಲಿ ಗುಣಮಾಡುವ ರಾಮಬಾಣ ಔಷಧಿ. ವಸ್ತ್ರಕ್ಕೆ ಕಲೆ ಬೀಳುವುದಿಲ್ಲ

ಬಾಟ್ಲಿ ಒಕ್ಕೆ ಕಿಮ್ಮತ್ತು ೦-೬-೦

ಟಿ ಖರ್ಚು ಬೇರೆ. ಪತ್ರವ್ಯವಹಾರ ಇಂಗ್ಲಿಷ್ ಯಾ ಮರಾಠಿಯಲ್ಲಿ ಮಾಡಬೇಕು

Sapat & Company,(S M)
Kalbadevi Road Bombay 2

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ—ಮೊ—ಲ

VIM-O-LA

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂದಿ ನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೊಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ.

"Vimola Depot"

Manufactured by

American Herbal Products Co.,

Sole representatives for above medicine

The National Kanara News Agency,

Sir Phirozsha Metha Road,
Fort Bombay.

Shiromani Narayanacharya & Co.,

Silk Lace & Cloth Manufacturers

Chaukhamba Benares City

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು—ಅದರ ಕ್ರಯವೆಷ್ಟು?"

ಆನಂದರಾಯರು—ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ರೂಪದಲಂದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪದಲು ಬುಟ್ಟ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪದಲು ಸಪ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1–8–0ರಿಂದ 4ರ ವರೆಗೆ, ಬುಟ್ಟಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸರಮುಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ 10ರಿಂದ 35ರ ವರೆಗೆ 6 ಮೊಳದ ಪಮಿರಿ 1ಕ್ಕೆ ರೂ. 4ರಿಂದ 16ರ ವರೆಗೆ, 6 ಮೊಳದ ಪಮಿರಿ 1ಕ್ಕೆ ರೂ. 6ರಿಂದ 35ರ ವರೆಗೆ ಬೇರೆಯೆಲ್ಲಾ ತರದ ಮ್ಯಾಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under graduates and S S L Cs and also for those who have not passed any University examination

Coaches students for the Special ised Banking Courses (C A I B & C A I I B) and also for Accountancy, Secretarial, and Insurance Courses (L A A, A C R A, F C R A, F I S A, A C I I. etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full-swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to —

D R Murdeshwar,
Dip Econ; F R Econ, S (Lond.)
Principal
Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಕಾರ್ತಿಕ ಶು| ೧೪ ಶನಿವಾರದಿಂದ ಕಾರ್ತಿಕ ಬ| ೫ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯ ತುಲಾ ಬೊಂಕೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
9	ಶನಿ	೧೪	೪೨	ಅಶ್ವಿನೀ	೫೧	೨೪	*ಹುಣ್ಣಿಮೆ
10	ರವಿ	೧೫	೩೮	ಭರಣೀ	೪೮	೨೪	
11	ಸೋಮ	೧	೩೪	ಕೃತ್ತಿಕಾ	೪೬	೨೫	
12	ಮಂಗಳ	೨	೩೧	ರೋಹಿಣೀ	೪೫	೨೬	
13	ಬುಧ	೩	೨೯	ಮೃಗಶಿರಾ	೪೫	೨೭	
14	ಗುರು	೪	೨೮	ಆರ್ದ್ರಾ	೪೬	೨೮	
15	ಶುಕ್ರ	೫	೨೯	ಪುನರ್ವಸು	೪೯	೨೯	

ಇಟೆಲಿಯಾನರು ಮಕಾಲೆಯನ್ನು ಬೇಗನೆ ಸೇರುವರು!

ಇಟೆಲಿ ಆಂಗ್ಲೇಯ ಒಪ್ಪಂದ! ಹಬಸಿಗಳ ಧೀರತ್ವ!

ಮೀರತ್ ಡಿಸ್ಟ್ರಿಕ್ಟಿನಲ್ಲಿ ಹೆಂಡತಿಯನ್ನೂ ಮಕ್ಕಳನ್ನೂ ಕೊಂದಿಕ್ಕಿದನು!

ಎಬಿಸೀನಿಯಾದಲ್ಲಿ ಕಳೆದ ಮೂರು ವಾರಗಳು

ಅಡೋವಾ, ಅಕ್ಸಮ್, ಅಡಿಗ್ರಾಟ, ಈ ಮೂರು ದೇಶಗಳನ್ನು ಇಟೆಲಿಯಾನರು ವಶೀಕರಿಸಿದುದಲ್ಲದೆ, ಈ ಯುದ್ಧದ ಮೂರು ವಾರಗಳು ಶಾಂತತೆಯಲ್ಲೇ ಉರುಳಿಕೊಂಡು ಹೋಗಿವೆ ಈ ಮೂರು ವಾರಗಳಲ್ಲಿ ಇಕ್ಕಡೆಯವರು, ಉತ್ತರ, ದಕ್ಷಿಣ ದಿಕ್ಕುಗಳಲ್ಲಿ ಒಂದು ಘೋರ ಸಮರದ ತಯಾರಿಯಲ್ಲಿದ್ದರು ನಿಜವಾಗಿ ಹೇಳುವುದಾದರೆ ಇಟೆಲಿಯಾನರಿಗೆ ಈ ಸಮರದ ಭಯಂಕರ ಸ್ಥಿತಿಯು ಅನುಭವವು ಪ್ರಾರಂಭವಾಗಿದೆನ್ನಬಹುದು ಇಥಿಯೋಪಿಯಾನರು ಇಷ್ಟರ ತನಕ ಸುಮ್ಮನಿರಲು ಹೆಚ್ಚು ಕಾರಣಗಳಿವೆ ರಭಸದಿಂದ ಮುಂದೊತ್ತುತ್ತಿರುವ ಇಟೆಲಿಯಾನ ಮೆಶೀನು ಗುಂಡುಗಳಮತ್ತು ಟೆಂಕುಗಳ ಎದುರು ಇವರ ಶಸ್ತ್ರಾಸ್ತ್ರಗಳು ನಿಷ್ಪ್ರಯೋಜನವೆಂದು ತಿಳಿದುದರಿಂದಲೆ ಇವರು ಇಟೆಲಿಯಾನರು ಆ ಮರುಳು ಅರಣ್ಯ ಗುಡ್ಡ ಪ್ರದೇಶಗಳಲ್ಲಿ ದ್ವಾರದಿಂದಲೂ ಸಿಕ್ಕೆಯಿಂದಲೂ ವಣಿಯುವ ವರೆಗೂ ಮತ್ತು ನವೀನ ಯುದ್ಧೋಪಕರಣಗಳು ಒದಗುವ ವರೆಗೂ, ಆಯಾಯ ಪ್ರಾಂತ್ಯಗಳಿಗೆ ಬೇಕಾದ ಪಾಳಯಗಳನ್ನು ಕಳುಹಿಸುವುದರಲ್ಲಿಯೂ ಇನ್ನಿತರ ಸಿದ್ಧತೆಗಳಲ್ಲಿಯೂ ಸಮಯವನ್ನು ಕಳೆದರು.

ಎಡೋವಾ, ಅಕ್ಸಮ್, ಅಡಿಗ್ರಾಟ, ಇಟೆಲಿಯಾನರ ವಶವಾಗಿದ್ದರೂ, ಇದರಿಂದ ಇವರ ಕಾರ್ಯವು ಸುಲಭವಾಯಿತೆಂದು ಹೇಳಲು ಅಸಾಧ್ಯ ಎಥಿಯೋಪಿಯಾದ ಪ್ರಚಂಡ ವೀರರು ಯೋಗ್ಯ ರೀತಿಯಲ್ಲಿ ಅಲ್ಲಲ್ಲಿ ಯುದ್ಧಸಿದ್ಧತೆಗಳಲ್ಲಿ ಮಗ್ನರಾಗಿರುತ್ತಾರೆ ಗೊರಿಲ್ಲಾ ಯುದ್ಧಕ್ರಮವನ್ನು ಉಪಯೋಗ ಮಾಡುವುದೆ ಇವರ ಮುಖ್ಯ ಉದ್ದೇಶ ಗುಡ್ಡ ಬೆಟ್ಟಗಳಲ್ಲಿಯೂ ಮರದ ತೋಪುಗಳಲ್ಲಿಯೂ ಅವಿತುಕೊಂಡು ಆಶ್ಚರ್ಯಕರವಾದ ರೀತಿಯಲ್ಲಿ ಇಟೆಲಿಯಾನರ ಮೇಲೆ ಬೀಳುವ ಸಿದ್ಧತೆಗಳಾಗಿವೆ ಮಕಾಲೆಯು ಇನ್ನೂ ಬಿದ್ದಿಲ್ಲವೆಂದು ಹಬಸಿ ಸರಕಾರದ ಪ್ರಕಟಣೆಯು ಹೊರಟಿದೆ ಒಂದು ವೇಳೆ ಮಕಾಲೆಯು ಬಿದ್ದರೂ, ಇಟೆಲಿಯಾನರ ಕೆಲಸವು ಸುಲಭವಾದಂತಾಗುವುದಿಲ್ಲ ಯಾಕೆಂದರೆ ಎಬಿಸೀನಿಯಾದ ಆ ಉತ್ತರದಿಕ್ಕಿನಲ್ಲಿ ಇಟೆಲಿಯಾನರಿಗೆ ಹಲಕೆಲವು ಸಂಕಷ್ಟಗಳು ಒದಗುವುವು ಟಿಗ್ರೆ ಪ್ರಾಂತ್ಯವು ಅರಣ್ಯಗಳಿಂದ ಕೂಡಿದ ಗುಡ್ಡಗಳಿಂದತುಂಬಿವೆ ಅಲ್ಲಲ್ಲಿ ಚಿಕ್ಕ ಪುಟ್ಟ ನದಿಗಳು ರಭಸವಾಗಿ ಹರಿಯುತ್ತಿವೆ ದನಕಾಲಿ ಎಂಬ ಮರುಳು ಭೂಮಿಯನ್ನು ದಾಟಬೇಕೆಂದು ಇಟೆಲಿಯಾನರ ಆಲೋಚನೆಯಿತ್ತು ಹೀಗೆ ಹಾದು ಹೋದರೆ, ಜ್ಬಿಬೌಟಿ–ಅಡಿಸ್ ಅಬಾಬ ರೈಲ್ವೆಯನ್ನು ಹಿಡಿಯಬಹುದು ಆದರೆ, ಈ ಹಾದಿಯನ್ನು ಹಿಡಿಯಲು ಇಟೆಲಿಯಾನರಿಗೆ ಧೈರ್ಯ ಸಾಲದು ಆದುದರಿಂದ ಓಗಡನ್ ಪ್ರಾಂತ್ಯದ ಕಡೆಯಿಂದಲೆ ಮುಂದೊತ್ತಬೇಕೆಂದು ಇವರು ನಿರ್ಧಾರ ಮಾಡಿರುತ್ತಾರೆ. ಇಲ್ಲಿ ಕೂಡ ಮರುಳುಪ್ರದೇಶಗಳನ್ನು ಹಾದಬೇಕಾಗಿದೆ ಆದರಲ್ಲೂ ರಾಸ್ ನಿಸಬೂ ಎಂಬ ಹಬಸಿ ನಾಯಕನು, ಒಂದು ದೊಡ್ಡ ಸೈನ್ಯದಳವನ್ನು ಹಿಡಿದು ಇಲ್ಲಿ ಸುತ್ತುತ್ತಿದ್ದಾನೆ. ನಿಜವಾಗಿಯೂ ಇಟೆಲಿಯವರ ಸತ್ವಪರೀಕ್ಷೆಯು ಇಲ್ಲಿ ನಡೆಯುವುದು. ಇಲ್ಲಿನ ಗೋರಾಹಿ ಎಂಬ ಪ್ರಾಂತ್ಯವನ್ನು ವಶೀಕರಿಸಬೇಕು. ಅಲ್ಲಿಂದ ಮುಂದಕ್ಕೆ ಹರಾರನ್ನು ವಶಮಾಡಿಕೊಳ್ಳಬೇಕು ಮತ್ತು ಇಲ್ಲಿಂದ ಅಡಿಸ್ ಅಬಾಬಕ್ಕೆ ಹೋಗುವ ರೈಲ್ವೆಯನ್ನು ವಶಮಾಡಬೇಕು ಎಂಬುದೇ ಇಟೆಲಿಯಾನರ ಮುಖ್ಯ ಉದ್ದೇಶಗಳು ಆದರೆ ಹಬಸಿ ಮುಖಂಡರು ಇದನ್ನು ತಿಳಿದವರಾಗಿ, ಇವರನ್ನು ತಡೆಯುವ ತಕ್ಕ ಸಿದ್ಧತೆಗಳನ್ನು ಮಾಡಿರುತ್ತಾರೆ ಚಕ್ರವರ್ತಿಯವರು "ಗೋರಾಹಿಯನ್ನು ಎಷ್ಟು ಸಂಕಷ್ಟಗಳು ಒದಗಿದರೂ ಬಿಟ್ಟುಕೊಡಬಾರದು" ಎಂದು ಅಪ್ಪಣೆಯನ್ನು ಸಾರಿರುತ್ತಾರೆ ಆದರೆ, ಇಟೆಲಿಯಾನರಿಗೆ ಮರುಳು ಪ್ರದೇಶವನ್ನು ದಾಟಲಿಕ್ಕೆ ಸೀನರ ಕೃಪೆಯಿಂದ ಬಳಲಬೇಕಾಗಿದೆ, ಸಾಂಕ್ರಾಮಿಕ ರೋಗಗಳನ್ನು ಅನುಭವಿಸಬೇಕಾಗಿದೆ ಇವರ ಈ ಆಕ್ರಮಕ್ಕೆ ಎಷ್ಟು ತಡವಾಯಿತೊ ಅಷ್ಟು ಹಬಸಿಗಳ ಬಲವು ಹೆಚ್ಚುವುದು "ಆರ್ಮ್ಸ್ ಎಂಬಾರ್ಗೋ" ತೆಗೆದ ಬಳಿಕ ಇವರಿಗೆ ಹೊರಗಣ ದೇಶಗಳಿಂದ ಯುದ್ಧೋಪಕರಣಗಳು ಸೇರುತ್ತಿವೆ ಆರ್ಥಿಕ ಸಹಾಯವು ಇವರಿಗೆ ಒದಗುವಹಾಗಿದೆ ಇದಕ್ಕೆಲ್ಲಾ ಸರಿಯಾಗಿ ಸೆಂಕ್ಷನುಗಳು, ನವಂಬರ ೧೮ ನೆಯದರಿಂದ ಇಟೆಲಿಯ ಮೇಲೆ ಜ್ಯಾರಿಗೆ ಬರುವುವು

ಎಬಿಸೀನಿಯಾದ ಬಿಸಿ ಬಿಸಿ ವಾರ್ತೆಗಳು

ಉತ್ತರ ದಿಕ್ಕಿನಲ್ಲಿ ಇಟೇಲಿಯಾನರ ಮಕಾಲೆಯನ್ನು ವಶೀಕರಿಸಲು ಮುಂದುವರಿಯುತ್ತಿರುವರೆಂದು ಈ ಮೊದಲೇ ತಿಳಿಸಿದ್ದೇವಷ್ಟೆ ಮಕಾಲೆಯ ಹತ್ತಿರ ಹೌಜಯನ್ ನನ್ನು ವಶೀಕರಿಸಿ ಅಲ್ಲಿಂದ ಮುಂದುವರಿದು ಅಗುಲಾ ಪ್ರಾಂತ್ಯ (ಮಕಾಲೆಯಿಂದ ೧೫ ಮೈಲು) ಸೇರಿರುವರು

ಮಕಾಲೆಯನ್ನು ರಕ್ಷಿಸಲು ಎಬಿಸೀನಿಯದವರು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಮಕಾಲೆಯನ್ನು ಸುಲಭಕರ ರೀತಿಯಲ್ಲಿ ವಶಮಾಡಿಕೊಳ್ಳಲು ಸಾಧ್ಯವಾಗಲಿಕ್ಕಿಲ್ಲ ಇಟೇಲಿಯಾನರ ಪರ್ವತಸ್ಥಾನಗಳ ಸ್ಥಾನದ ಇಷ್ಟರ ತನಕ ಅವರ ಮುಂದ ವರಿಕೆ ಯಾವತ್ತು ತಡೆಗಳು ಒದಗಲಿಲ್ಲವು ಆದರೆ ಮಕಾಲೆಯನ್ನು ಮುತ್ತಿ ವಶೀಕರಿಸುವುದರಲ್ಲಿ ಒಂದು ಮಹಾ ಸಮರವುಂಟಾಗಬಹುದೆಂದು ಊಹಿಸಲಾಗಿದೆ ರಾಸ್ ಸೆಯಾಮನ ಅಧಿಕಾರದಲ್ಲಿ ಹಬಸಿಗಳು ಇಟೇಲಿಯಾನರಿಗೆ ತಕ್ಕ ತಡೆಯನ್ನು ಮಾಡುತ್ತಿದ್ದಾರೆ ಈ ಮುಂದುವರಿಕೆಯಲ್ಲಿ ಇಟೇಲಿಯಾನರು ವಿಮಾನಗಳನ್ನು ರಚಿಸಿರುತ್ತಾರೆ ಅಡಿಸ್ ಅಬಾಬದಿಂದ, ಮಕಾಲೆಯನ್ನು ಎಷ್ಟು ಮಾತ್ರಕ್ಕೂ ಬಿಟ್ಟುಕೊಡಬಾರದಾಗಿ, ಅಪ್ಪಣೆಗಳು ಹೊರಟಿವೆ ಮಕಾಲೆಯ ಹತ್ತಿರ ಸ್ವಲ್ಪ ಮಳೆ ಬಂದು ಇಟೇಲಿಯ ಸೈನ್ಯವು ಸ್ವಲ್ಪ ಕಷ್ಟ ಅನುಭವಿಸಿತು ಆದರೂ ಕೆಸರನ್ನೂ ನೀರಿನ ಹಳ್ಳಗಳನ್ನೂ ದಾಟುತ್ತಾ ಇಟೇಲಿಯಾನರು ಮುಂದುವರಿಯುತ್ತಾರೆ

ಇತ್ತಲಾಗೆ ಯುರೋಪಿನಲ್ಲಿ

ಇಟೇಲಿಯಾನರಿಗೂ, ಆಂಗ್ಲೇಯರಿಗೂ ಮೆಡಿಟರೇನ್ ನೌಕಾಬಲದ ವಿಷಯ ಕೆಲವು ಒಪ್ಪಂದಗಳು ಆಗಿ, ಕೆಲವು ಶರ್ತಗಳನ್ನು ಅನುಸರಿಸಿ, ಆಂಗ್ಲೇಯರು ಅಲ್ಲಿ ತಮ್ಮ ನೌಕಾಬಲವನ್ನು ಕಡಮೆ ಮಾಡಲು ಒಪ್ಪಿರುತ್ತಾರೆ.

ಇಟೇಲಿಯಾನರು ಆಂಗ್ಲೇಯರ ಮೇಲೆ ರೋಮಿನಲ್ಲಿ ನಡೆಯುವ ವಿರುದ್ಧ ಪ್ರಸಾರಣೆ ಕಾರ್ಯವನ್ನು ನಿಲ್ಲಿಸಲು ಒಪ್ಪಿರುತ್ತಾರೆ ಇವರಿಬ್ಬರಲ್ಲೂ ಪರಸ್ಪರ ಮೈತ್ರಿಯು ಬೆಳೆಯುವ ಕುರುಹುಗಳು ಕಾಣುತ್ತಿವೆ. ಬ್ರಿಟಿಷ ಬಹಿರ ವ್ಯವಹಾರದ ಸಚಿವರಾದ ಸಾಮುವೇಲ ಹೋರರಿಗೂ ಇಟೆಲಿಯ ಪ್ರತಿನಿಧಿಗಳಾದ ಬೆರನ್ ಅಲೊಸಿಗೇಗೂ ಮೊನ್ನೆ ಜಿನೆವಾದಲ್ಲಿ ಈ ವಿಷಯ ಮಾತುಕತೆ ನಡೆದಿರುತ್ತದೆ.

ಇಟೆಲಿಯಲ್ಲಿ

ಸೆಂಕ್ಷನುಗಳನ್ನು ಪ್ರತಿಭಟಿಸಲು ತಕ್ಕ ಸಿದ್ಧತೆಗಳು ಆಗಿವೆ ಅಲ್ಲಲ್ಲಿ ಹಳೆ ಕಬ್ಬಿಣವನ್ನು ಶೇಖರಿಸುತ್ತಿದ್ದಾರೆ ರೈಲ್ವೆ ಬಂಡಿಗಳ ಸಂಚಾರವನ್ನು ಕಡಿಮೆಮಾಡಿ ಕಲ್ಲಿದ್ದಲನ್ನು ಉಳಿಸುತ್ತಿದ್ದಾರೆ ಪ್ರಜೆಗಳು ತಮ್ಮಲ್ಲಿರುವ ಹಣವನ್ನು ಸರಕಾರಕ್ಕೆ ಸಾಲರೂಪವಾಗಿ ಕೊಡಲು ಮುಂದುವರಿದು ಬಂದಿರುತ್ತಾರೆ ಈ ಸೆಂಕ್ಷನುಗಳಿಂದ, ಇಟೆಲಿಯಲ್ಲಿ ವಾಸವಾಗಿರುವ ಕೆಲವು ಅನ್ಯ ಜನಾಂಗದವರು, ತಮಗೆ ಹಾನಿ ಬರುವುದೆಂದು ನಿರೀಕ್ಷಿಸಿ, ಆ ದೇಶವನ್ನು ಬಿಟ್ಟು ತಮ್ಮ ಸ್ವದೇಶದತ್ತ ಕಡೆ ತೆರಳುತ್ತಿದ್ದಾರೆ

ಹೆಂಡತಿಯನ್ನೂ ಮಕ್ಕಳನ್ನೂ ಕೊಂದಿಕ್ಕಿದನು.

ಮೀರತ್ ಡಿಸ್ಟ್ರಿಕ್ಟಿನ ಪಂಚೀ ಗ್ರಾಮದಲ್ಲಿರುವ ನಾಥೂಶಾಗಾ ಎಂಬವನಿಗೆ ಇಬ್ಬರು ಹೆಂಡರು. ಹಿರಿಯವಳಲ್ಲಿ ಒಬ್ಬನೇ ಮಗನು ರಘುವೀರನೆಂದು ಅವನ ಹೆಸರು ಕಿರಿಯವಳಲ್ಲಿ ನಾಲ್ಕು ಮಂದಿ ಮಕ್ಕಳಿದ್ದರು. ನಾಥೂವಿಗೆ ತನ್ನ ಎರಡನೆ ಹೆಂಡತಿಯ ಮಕ್ಕಳಮೇಲೆ ರಘುವೀರನ ಮೇಲೆ ಪ್ರೇಮವು ಅಧಿಕವಾಗಿತ್ತು ರಘುವೀರನ ಮದುವೆಯ ಸಮಯ ನಾಥೂ ಮಗನಿಗೂ ಸೊಸೆಗೂ ಚಿನ್ನಾಭರಣಗಳನ್ನು ಮಾಡಿಸಿದನು ಆದರೆ ಕಿರಿಯ ಹೆಂಡತಿಯ ಮಕ್ಕಳಿಗೆ ಏನನ್ನೂ ಮಾಡಲಿಲ್ಲ ಉಡಲಿಕ್ಕೆ ಒಳ್ಳೆ ವಸ್ತ್ರವನ್ನೂ ಕೊಟ್ಟಿರಲಿಲ್ಲ ಅಷ್ಟೆ ಅಲ್ಲದೆ ರಘುವೀರನಿಗೆ ತನ್ನ ಆಸ್ತಿಯ ಮೂರನೇ ಒಂದು ಅಂಶವನ್ನೂ ಕೊಟ್ಟುಬಿಟ್ಟನು. ಕಿರಿಯ ಹೆಂಡತಿಯು ಪತಿಯ ಈ ವರ್ತನೆಯನ್ನು ಕಂಡು ಆತನನ್ನು ಮೂದಲಿಸಿ ಮಾತಾಡಲು ನಾಥೂವು ಕೋಪಗೊಂಡು ತನ್ನ ಕಿರಿಯ ಹೆಂಡತಿಯು ಮತ್ತು ಅವಳ ನಾಲ್ಕು ಮಂದಿ ಮಕ್ಕಳ ರುಂಡಗಳನ್ನು ಹಾರಿಸಿಬಿಟ್ಟನು ಪೋಲೀಸರು ಅವನನ್ನು ಸೆರೆಹಿಡಿದು ಕೋರ್ಟಿಗೆ ಕೊಂಡು ಹೋದರು. ಜಡ್ಜರು ವಿಚಾರಣೆಯನ್ನು ಮಾಡಿ ನಾಥುವಿಗೆ ಮರಣಶಿಕ್ಷೆಯನ್ನು ವಿಧಿಸಿದರು.

ಮೋಟಾರ್ ಅಪಘಾತ

ಪೋಲೀಸ್ ಇನ್ಸ್ಪೆಕ್ಟರನು ಮಡಿದನು.

ಬೆಂಗಳೂರು ಸಿಟಿಯ ಪೋಲೀಸ್ ಇನ್ಸ್ಪೆಕ್ಟರರಾದ ಶ್ರೀ ಮುಗವಾಪಿಪ್ಪರು ವಿಕ್ಟೋರಿಯ ಆಸ್ಪತ್ರೆಯಲ್ಲಿ ಇಂದು ಮುಂಜಾನೆ ಮಡಿದರು ಇವರ ಆಕಸ್ಮಿಕ ಮರಣಕ್ಕೆ ಹೇತುವು ಮೋಟಾರ ಅಪಘಾತ ಒಬ್ಬ ಹಳ್ಳಿಗನೂ ತೀರಿ ಹೋದ

ಕಳೆದ ಬುಧವಾರ ಪೋಲೀಸ್ ಇನ್ಸ್ಪೆಕ್ಟರು ಮತ್ತು ಕೆಲವು ಪ್ರಯಾಣಿಕರು ಬಸ್ಸಿನಲ್ಲಿ ಕುಳಿತು ಕುಸ್ಸಿಗಾಲಾಗೆ ಹೋಗುತ್ತಿದ್ದರು ಆದರೆ ಮಾರ್ಗ ಮಧ್ಯದಲ್ಲಿ ಬಸ್ಸಿನ ವೇಗವು ಡ್ರೈವರನ ಸ್ವಾಧೀನಕ್ಕೆ ಬಾರದೆ ಸ್ಟೇಯರಿಂಗ್ ಸ್ಟೀಲ್ ತುಂಡಾಗಿ ಒಂದು ಚರಂಡಿಯಲ್ಲಿ ಬಿದ್ದು ಬಿಟ್ಟಿತು ಒಬ್ಬ ಮುದುಕನು ಕೂಡಲೆ ಮೃತನಾದನು ಪೋಲೀಸ್ ಇನ್ಸ್ಪೆಕ್ಟರನನ್ನೂ ಜಖಂಗೊಂಡ ಇನ್ನಿಬ್ಬ ಪ್ರಯಾಣಿಕರನ್ನು ಆಸ್ಪತ್ರೆಗೆ ಕೊಂಡುಹೋದರು ಅವರಲ್ಲಿ ಪೋಲೀಸ್ ಇನ್ಸ್ಪೆಕ್ಟರರು ಇಂದು ಮಡಿದರು. ಬಸ್ಸು ಚಲಾವಣೆ ಮಾಡುತ್ತಿದ್ದವರು ಪೋಲೀಸು ಇನ್ಸ್ಪೆಕ್ಟರರೇ ಎಂದು ತಿಳಿದು ಬರುತ್ತದೆ.

ಮದ್ರಾಸಿನ ಮೋಡರ್ನ್ ಕೇಫೆಯಲ್ಲಿ ಮೈಸೂರು ದಿವಾನರಿಗೆ ಆತಿಥ್ಯ

ಇದೇ ತಿಂಗಳ ತಾ ೨ನೇ ಶನಿವಾರ ಮೋಡರ್ನ ಕೇಫೆಯ ಹೌಸ್ ಒಫ್ ಲಾರ್ಡ್ಸ್ ನಲ್ಲಿ ಮೈಸೂರು ದಿವಾನರಾದ ಸರ್ ಮಿರ್ಜಾ. ಎಂ ಇಸ್ಮಾಯಿಲ್ ರವರನ್ನು ಈ ಕೆಳಗಿನ ಇತರ ಮಹನೀಯರೊಡನೆ ಕೇಫಿನ ಪ್ರೊಪ್ರೈಟರ್ ಶ್ರೀಯುತ ಕೆ ಸೀತಾರಾಮರಾಯರು ಒಂದು ಟಿಲೋ ಟೀಪಾರ್ಟಿಯಿಂದ ಸತ್ಕರಿಸಿದರು. ದಿವಾನರ ಧನ್ಯವಾದವಾದ ನಂತರ ಸಮಾರಂಭದಲ್ಲಿ ಕೂಡಿಬಂದ ಅತಿಥಿಗಳ ಒಂದು ಗ್ರೂಫ್ ಫೋಟೋ ತೆಗೆದೊಡನೆ ಸಮಾರಂಭವು ಮುಕ್ತಾಯವಾಯಿತು ಸಮಾರಂಭದಲ್ಲಿ ಭಾಗವಹಿಸಿದ ಮಹನೀಯರು —

೧ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕೆಟಿ ಸಿ ಐ ಇ ಒ ಬಿ ಇ ೨. ಮಿ. ನೊರೆನ್ಹಾ, ದಿವಾನರ ಪ್ರೈವೇಟ್ ಸೆಕ್ರೆಟರಿ ೩ ರಾಜಾ ಸರ್ ವಾಸುದೇವ ರಾಜಾ ಆಫ್ ಕೊಲ್ಲಂಗೋಡು, ಕೆ ಸಿ ಎಸ್ ಐ ೪ ರಾವ್ ಬಹದೂರ್ ಗೋವಿಂದಾಚಾರ್ಯರ್–ಬರ್ಮಾಶೆಲ್ ೫ ಸರ್ ಪಿ ಎಸ್ ಶಿವಸ್ವಾಮಿ ಅಯ್ಯರ್, ಕೆ ಸಿ ಎಸ್ ಐ ೬ ಅಹಮ್ಮದ್ ಖಲೀಲ್ ಎಸ್ಕ್ವೈರ್–ದಿವಾನರ ಜಾಮಾತೃ ೭ ಸರ್ ವೇಪಾ ರಮೇಶಂ, ರಿಟಾಯರ್ಡ್ ಹೈಕೋರ್ಟ್ ಜಡ್ಜ್

NOTICE

Is hereby given to the public and all concerned that the partnership between Mr G Rangappa Nayak and Mr H Madhava Pai who were carrying on business under the name and style of G R NAIK & CO, has been dissolved with effect from 30–9–1935 and Mr G Rangappa Naik is now the sole proprietor of the business carried on by him under the name and style of G R NAIK & CO

Mangalore, 6th November 1935

G Rangappa Naik.
H Madhava Pai.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P 87/1935 S C 185/1930

ಅರ್ಜಿದಾರ–ತಿಮ್ಮಪ್ಪಯ್ಯ.

ಎದ್ರಿ ಮಸ್ಸಾನರ ಕೃಷ್ಣರಾವ್

ಮೇಲ್ಕಂಡ ಅಮಲ್ ಜಾರಿಯಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಎದ್ರಿಯ ಕುಟುಂಬದ ಬಾಬ್ತು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ ಆದುದರಿಂದ ವಿಕ್ರಯದ ಇಸ್ತಿಹಾರ ಷರತುಗಳನ್ನು ನಿರ್ಣಯಿಸಲಿಕ್ಕೆ ತಾ 12–11–1935 ಕ್ಕೆ ಇಡೋಣಾಗಿಯದೆಂತ ಈ ಮೂಲಕ ತಿಳಿಸೋಣಾಗುತ್ತದೆ

ಮೊಕ್ಕಾಂ ಕುಂದಾಪುರ 4–11–1935. } B. Mahabala Holla *Advocate for Petitioner.*

ಚಿತ್ರಕಲೆ.

[ಹಿಂದೀ 'ಮಾಧುರಿ'ಯ ಒಂದು ಲೇಖನದ ಅನುವಾದವು]

ಕಲೆಯು ಉನ್ನತಿಯು ನಾಗರಿಕತೆಯ ಒಂದು ಪ್ರಧಾನ ಅಂಗವಾಗಿದೆ. ವಿವಿಧ ಕಲೆಗಳ ಮತ್ತು ವಿಜ್ಞಾನಗಳ ಒಡಗೂಡಿಕೆ ಮತ್ತು ಅಭಿವೃದ್ಧಿಯ ದೆಸೆಯಿಂದಲೆ ಸಭ್ಯತೆಯು ಸೃಷ್ಟಿಯಾಯಿತು; ಅವುಗಳ ನಿರಂತರ ಪ್ರಸಾರದಿಂದಲೆ ಇದರ ಉತ್ತರೋತ್ತರ ವೃದ್ಧಿಯಾಗುವುದು. ಮಾನವ ಹೃದಯದ ಗೂಢವಾದ ಪ್ರವೃತ್ತಿ ಹಾಗೂ ಚೇಷ್ಟೆಗಳಿಗೆ ವಿಶದವಾದ ರೂಪವನ್ನು ಕೊಡುವುದೇ ಲಲಿತಕಲೆಗಳ ಮುಖ್ಯ ಕಾರ್ಯವಾಗಿದೆ. ಕಲೆಗಳ ವಿಕಾಸದಿಂದ ಮನುಷ್ಯನ ಪ್ರಕೃತಿ, ಕಲ್ಪನೆ ಪರಿಷ್ಕಾರಗೊಳ್ಳುವುದಲ್ಲದೆ ಕಾರ್ಯ ಸೂಕ್ಷ್ಮತೆಯೊಡನೆ ಶ್ರೇಷ್ಠತೆಯೂ ಹೆಚ್ಚುವುದು; ಇದರಿಂದ ಮನುಷ್ಯನು ಭಾವುಕನೂ ಕರ್ಮಶೀಲನೂ ಆಗುವನು. ಅಸಭ್ಯ ಪುರುಷನ ಬುದ್ಧಿಯು ಸೂಕ್ಷ್ಮವೂ ನಿರ್ಮಲವೂ ಆಗಿರುವುದಿಲ್ಲವೆಂಬುದು ತಿಳಿದ ಸಂಗತಿಯಾಗಿದೆ; ಆದರೆ ಸಭ್ಯತೆ (ನಾಗರಿಕತೆ)ಯ ಪ್ರಕಾಶದಿಂದ, ಮನುಷ್ಯನು ತನ್ನ ಭಾವಗಳ ಕ್ಷೇತ್ರಗಳನ್ನು ಹೆಚ್ಚಿಸಲು ಸಮರ್ಥನಾಗುತ್ತಾನೆ. ಒಬ್ಬ ಅಸಭ್ಯನಿಗೆ ಸರ್ವಥಾ ಅಸಾಧ್ಯವಾಗಿರುವಂಥ ಸೂಕ್ಷ್ಮ ವಿಚಾರಗಳನ್ನು ಪ್ರದರ್ಶಿಸಲು ಸಭ್ಯನು ಬಲ್ಲನು ತನ್ನ ವಿಚಾರಗಳಲ್ಲಿ ಅಸಭ್ಯನಿಗೆ ಅಸಂಭವವಾದ ಸೂಕ್ಷ್ಮತೆಯುಂಟಾಗುತ್ತದೆ ಪರ್ಯಾಯ ವಾಚಕ ಶಬ್ದಗಳು ಈ ಸಿದ್ಧಾಂತವನ್ನು ಪುಷ್ಟಿಗೊಳಿಸುತ್ತವೆ ಕೋಮಲ, ಪೇಲವ, ಸ್ನಿಗ್ಧ, ಮಸೃಣ, ಇತ್ಯಾದಿ ಶಬ್ದಗಳಲ್ಲಿ ಕಂಡುಬರುವ ಸೂಕ್ಷ್ಮವಿಭೇದವನ್ನು ಸಭ್ಯ ಮನುಷ್ಯನು ಸಹಜವಾಗಿ ತಿಳಿದುಕೊಳ್ಳುವನು. ಆದರೆ ಅಸಭ್ಯನು ಕೇವಲ 'ಕೋಮಲ'ವೆಂದೇ ತಿಳಿದುಕೊಳ್ಳುತ್ತಾನೆ ಕೋಮಲತೆಯೊಂದರಲ್ಲಿ ಭೇದವಿರುವುದಾದರೂ ಅದರ ಜ್ಞಾನವು ಅಸಭ್ಯನ ಬುದ್ಧಿಗೆ ಬಹಿರ್ಗತವಾಗಿರುತ್ತದೆ. ಸಾರಾಂಶವೇನೆಂದರೆ—ಕಲೆಗಳ ಉನ್ನತಿಯಿಂದ ಮನುಷ್ಯನ ಕಾರ್ಯ ಹಾಗು ವಿಚಾರ ಪ್ರಣಾಳಿಯಲ್ಲಿ ವಿಭಿನ್ನತೆ ಮತ್ತು ವಿಚಿತ್ರತೆಯುಂಟಾಗುತ್ತದೆ ಆದರಿಂದ ಅವನ ಜೀವನವು ಅತಿಶಯವಾಗಿ ಗಹನವೂ ಸರಸವೂ ಆಗುತ್ತದೆ

'ಕಲೆ' ಎಂಬುದು ಬಹಳ ವ್ಯಾಪಕಾರ್ಥವುಳ್ಳ ಶಬ್ದವಾಗಿದೆ ಸ್ಥಾನ ಮತ್ತು ಪ್ರಕರಣದ ಸಹಾಯದಿಂದ ಇದರ ದ್ಯೋತಕತೆಯು ನಿರ್ಣೀತವಾಗುತ್ತದೆ ಮಹಾ ಕವಿಯಾದ 'ಟಾಲ್ಸ್ ಟಾಯ್' ಮತ (Tolstoy) ವೇನೆಂದರೆ –

'Art is a means of union among men, joining them in the in the same feelings' (ಕಲೆಯು ಸಮಾನ ಭಾವಗಳಲ್ಲಿ ಸಂಲಗ್ನವನ್ನುಂಟುಮಾಡಿ ಮಾನವ ಜಾತಿಯನ್ನು ಸಂಯುಕ್ತಗೊಳಿಸುತ್ತದೆ)

ವಿಚಾರಿಸಿದರೆ ಈ ಸಿದ್ಧಾಂತವು ಸರ್ವಥಾ ನಿರ್ದೋಷವಾಗಿರುವುದು ಐದು ಜನರು ಒಂದು ಉತ್ತಮ ತೈಲ ಚಿತ್ರವನ್ನು ನೋಡಿದರೆ, ಚಿತ್ರದ ವಿಷಯಕ್ಕನುಸಾರವಾಗಿ ಅವರ ಹೃದಯದಲ್ಲಿ ಸಮಾನ ಭಾವವುಂಟಾಗುವುದು ಆದರೆ ವ್ಯಕ್ತಿಗತ ವಿಕಾಸಕ್ಕನುಸಾರವಾಗಿ ಅವರ ಭಾವಗಳ ಸೂಕ್ಷ್ಮತೆಯಲ್ಲಿ ತಕ್ಕಮಟ್ಟಿನ ಭೇದವಿರುವುದು; ಆದರೆ ಕೇವಲ ವಸ್ತುವಿನ ಕಲ್ಪನೆಯಲ್ಲಿ ವಿಭಿನ್ನತೆಯು ಅಸಂಭವವಾಗಿದೆ. ಈ ಕಾರಣದಿಂದಲೇ ಅಸಂಖ್ಯ ವರ್ಷಗಳಿಂದ ಒಂದೇ ಸಭ್ಯತೆ ಆಚಾರ ವ್ಯವಹಾರ ಹಾಗೂ ವಿಚಾರ ಪದ್ಧತಿಯಲ್ಲಿದ್ದುಕೊಂಡು ಒಂದು ಜನಾಂಗವು ತನ್ನ ವ್ಯಕ್ತಿತ್ವವನ್ನು ಪಡೆಯುತ್ತದೆ. ಇದರಿಂದಲೇ ಇತರ ಜನಾಂಗಗಳಿಂದ ವಿಭಕ್ತವಾಗಿ ತನ್ನ ವ್ಯಕ್ತಿತ್ವದ ಬಲದಿಂದಲೇ ಕೀರ್ತಿಶಾಲಿಯಾಗುತ್ತದೆ.

ಕಲಾಂತರ್ಗತವಾದ ಚಿತ್ರಕಲೆ ರಚನೆಯ ಸ್ಥಾನವು ಅತ್ಯುಚ್ಚವಾಗಿರುವುದು. ಉತ್ಕೃಷ್ಟವಾದ ಅಲೋಚನ್ನವು ತನ್ನ ಪ್ರಭಾವವನ್ನು ಮಾನವ ಹೃದಯದ ಅಂತಸ್ಥಲದವರೆಗೆ ಬೇಗನೆ ತಲುಪಿಸುತ್ತದೆ. ಇದರಿಂದ ಮನುಷ್ಯನಿಗೆ ವಿಶೇಷವಾದ ಲಾಭವೂ ಇದೆ. ರೇಖೆ, ವರ್ಣ ಮತ್ತು ಛಾಯೆಗಳ ಮೂಲಕ ಚತುರ ಚಿತ್ರಕಾರನು, ಮನುಷ್ಯನ ಎಲ್ಲ ಭಾವಗಳ ಚೇಷ್ಟೆಗಳ ಎಲ್ಲ ಚಿತ್ರಣವನ್ನು ಮಾಡಿ ತನ್ನ ರಚನೆಯನ್ನು ಸಜೀವವನ್ನಾಗಿ ಮಾಡಿಬಿಡುವನು. ಅಸ್ವಾಭಾವಿಕತೆಯ ಬಹಿಷ್ಕರಣವೇ ಕಲೆಯ ಚರಮಸೀಮೆಯಾಗಿದೆ. ಕವಿಯು ತನ್ನ ರಸಮಯವಾದ ಮಾತಿನಿಂದ ಮನುಷ್ಯನ ಆತ್ಮವನ್ನು ಪ್ರಭಾವಾನ್ವಿತಗೊಳಿಸುತ್ತಾನೆ; ಆದರೆ ಚಿತ್ರಕಾರನು ತನ್ನ ವರ್ಣಕ ಮತ್ತು ವರ್ತಿಕೆಗಳ ಸಹಾಯದಿಂದ ಚಕ್ಷುಮಾರ್ಗದ ಮೂಲಕ ಮಾನವ ಹೃದಯದಲ್ಲಿ ಅಧಿಕಾರವನ್ನು ಸ್ಥಾಪಿಸುತ್ತಾನೆ ಒಬ್ಬ ಸಿದ್ಧ ಹಸ್ತನಾದ ಚಿತ್ರಕಾರನ ಹೇಳಿಕೆಯೇನೆಂದರೆ.—"A good painter has two chief objects to paint, viz (a) man and (b) the intention of the soul The first is easy and the second difficult; because he has to represent it through the attitude and movements of his limbs" (ಉತ್ತಮ ಚಿತ್ರಕಾರನಿಗೆ ಎರಡು ಪ್ರಧಾನ ವಸ್ತುಗಳ ಚಿತ್ರಣವು ಆವಶ್ಯಕವಾಗಿದೆ– (೧) ಮನುಷ್ಯ ಮತ್ತು (೨) ಆತನ ಆತ್ಮದ ಆಕಾಂಕ್ಷೆ ಮೊದಲನೆಯದು ಸುಲಭವು, ಆದರೆ ಎರಡನೆಯದರ ಚಿತ್ರಣವು ಕಠಿಣವಾಗಿದೆ ಏಕೆಂದರೆ, ಅವಯವಗಳ ಪರಿಚಾಲನ ಹಾಗೂ ಉತ್ಸೇಧದ ಮೂಲಕ ಅದರ ಪ್ರದರ್ಶನವಾಗಬೇಕಾಗಿರುತ್ತದೆ)

ಬ್ರಿಟಿಷ ಚುನಾವಣೆ

ನೇಶನಲ್ ಸರಕಾರಕ್ಕೆ ವಿರೋಧವಾಗಿ, ಲಾಯಿಡ್ ಜೋರ್ಜರೂ, ಲೋರ್ಡ್ ಸ್ನೊಡಾನರೂ ಬಹಳವಾಗಿ ಹವಣಿಸುತ್ತಿದ್ದಾರೆ ಓಟರರ ಪಟ್ಟಿಯಲ್ಲಿ ಹೆಸರುಗಳನ್ನು ಹೆಚ್ಚಿಸಿರುತ್ತಾರೆ. ಬ್ರಿಟಿಷ ಸರಕಾರವು ಇಟಲಿ ಎಬಿಸೀನಿಯಾದ ಕಲಹದ ಕುರಿತು ವರ್ತನೆಯನ್ನು ಖಂಡಿಸಿ ಭಾಷಣಗಳನ್ನು ಮಾಡಿರುತ್ತಾರೆ ನೇಶನಲ್ ಪಕ್ಷವನ್ನು ಮುರಿಯಲು ಬಹಳ ಪ್ರಯತ್ನಗಳು ನಡೆಯುತ್ತಿವೆ, ಮತ್ತು ಕೆಲವು ಕಡೆಗಳಲ್ಲಿ ನಡೆದ ಘಟನೆಗಳನ್ನು ಪರಿಶೀಲಿಸಿದರೆ ಲೇಬರ್ ಪಕ್ಷವು ಜಯಹೊಂದುವುದೊ ಎಂದು ಭಾಸವಾಗುತ್ತಿದೆ ಒಂದು ವೇಳೆ ಲೇಬರ್ ಪಕ್ಷದವರು ಜಯಿಸದಿದ್ದರೂ ಇವರಿಗೆ ೧೫೦ ಸ್ಥಾನಗಳು ದೊರಕುವುದೆಂದು ಊಹೆ ಇದೆ ಇದು ಒಂದು ಸಾಮಾನ್ಯ ವಿರೋಧ ಪಕ್ಷವಲ್ಲ

ಲಂಡನಿನಲ್ಲಿ ಮಹಾತ್ಮಾಜೀಯವರನ್ನು ಹೊಗಳಿದರು.

ನಮ್ಮ ಮಾಜಿ ವೈಸರಾಯರಾದ ಲೋರ್ಡ ಇರ್ವಿನರ ಅಧ್ಯಕ್ಷತೆ ನಡೆದ ಒಂದು ಸಭೆಯಲ್ಲಿ ಆರ್ಚ ಬಿಶಪ್ ಒಫ್ ಕೇಂಟರ್‌ಬರಿಯವರು, ಗ್ರಾಮಾಭ್ಯುದಯ ಕಾರ್ಯವನ್ನು ಕೈಗೊಂಡ ಮಹತ್ಮಾ ಗಾಂಧಿಯವರನ್ನು ಬಹಳವಾಗಿ ಹೊಗಳಿದರು

ಗ್ರಾಮಾಭ್ಯುದಯವೆಂಬ ಅಡಿಕಟ್ಟಿನ ಮೇಲೆ ಮುಂದಿನ ಭಾರತ ಸರಕಾರದ ರಚನೆಯಾಗಬೇಕೆಂದು ಇವರ ಮತ.

ಜಾಪಾನೂ ಚೀನಾದೇಶವೂ.

ಜಪಾನಿನವರು ಚೀನಾದವರಿಗೆ ಒಂದು ಎಚ್ಚರಿಕೆಯ ಪತ್ರವನ್ನು ಕಳುಹಿಸಿರುತ್ತಾರೆ ಅದರ ವಿವರವು ಹೀಗಿರುವುದು.

ಚೀನಾದವರು ಜಪಾನಿನವರಿಗೆ ವಿರುದ್ಧವಾಗಿ ಮಾಡುವ ಪ್ರಸಾರಣಾ ಕಾರ್ಯಗಳನ್ನು ನಿಲ್ಲಿಸಬೇಕು. ಈ ವಿರುದ್ಧ ಪಕ್ಷಗಳು ಮಂಚೆರ್‍ಯಾದ ವಿವಿಧ ಕಡೆಗಳಲ್ಲಿ ಈಗಲೂ ಗುಪ್ತ ರೀತಿಯಲ್ಲಿ ಕಾರ್ಯಸುತ್ತಿವೆ. ಚೀನಾದವರು ಮಾಡಿದ ಸಕಲ ವಾಗ್ದಾನಗಳನ್ನು ಅವರು ನೆರವೇರಿಸುವಂತೆ ಜಾಗರೂಕರಾಗಬೇಕಾಗಿ ಜಾಪಾನಿನ ಸಂಗ್ರಾಮಿಕ ಅಧಿಕಾರಿಗಳು ಎಚ್ಚರಿಸಿದ್ದಾರೆ.

WARNING

ಉದರವೇದನೆಯಿರುವವರಿಗೆ ಎಚ್ಚರಿಕೆ!

ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಈ ಕೆಂಪು ಮುದ್ರೆಯಿದೆಯೋ ನೋಡಿ.

Alex C. Maclean
SEE THAT THIS SEAL IS UNBROKEN

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಇರುವ ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಮೇಲಿನ ಮುದ್ರೆಯು ಅದರ ತಲೆಯಲ್ಲೂ ಬುಡದಲ್ಲೂ ಇದೆ

Alex C. Maclean

ಎಂಬ ಸಹಿಯುಳ್ಳ ಸೀಲ್, ದಿಲ್ಲಿ, ಮುಂಬಾಯಿಗಳ ಮೇಲಿದ, ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್

15 ಸಂಕುರಾಮ ಚೆಟ್ಟಿಸ್ಟ್ರೀಟ್ ಮದ್ರಾಸು



ಅಜೀರ್ಣ, ಆಮ್ಲ, ಅಗ್ನಿಮಾಂದ್ಯ ವಾತ, ಎದೆಯುರಿ ಜಠರಾಗ್ನಿ ಮತ್ತು ಉದರ ಬಾಧೆಗಳ ಹಲವು ರೋಗಗಳನ್ನು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಆಶ್ಚರ್ಯಕರವಾಗಿ ಗುಣಪಡಿಸಿದುದರ ಫಲವಾಗಿ ಮಾರ್ಕೆಟಿಗೆ ಹಲವು ನಕಲಿ ಮಾಲುಗಳು ಬಂದಿವೆ, ಆದುದರಿಂದ Alex C. Maclean ಎಂಬ ದಸ್ಕತಿರುವ ಮೂಲವಸ್ತುವನ್ನೇ ಪಡೆಯುವಂತೆ ಎಚ್ಚರಿಕೆ!

ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸಮತೂಕವಾದ ಸೂತ್ರಗಳ ಮೇಲೆ ಆಧರಿಸಿಟ್ಟು ತಯಾರಿಸಲಾಗುತ್ತದೆ ಯಾವ ಬಗೆಯ ಅಸಮರ್ಪಕತೆಯೂ, ಅಶುದ್ಧತೆಯೂ ಅದನ್ನು ಪರಿಪೂರ್ಣ ನಿಷ್ಪ್ರಯೋಜಕವನ್ನಾಗಿ ಮಾಡುವುದು ಖಂಡಿತ ಕೆಲವು ನಕಲಿ ಮಾಲುಗಳ ಕ್ರಿಯವನ್ನು ಗಮನಿಸುವಾಗ ಮೆಕ್‌ಲೀನ್ಸ್ ಲಿಮಿಟೆಡ್‌ನವರು ತಮ್ಮ ತಯಾರಿಯಲ್ಲಿಟ್ಟ ಜಾಗ್ರತೆಯು ಅವುಗಳ ತಯಾರಿಯಲ್ಲಿ ಇಲ್ಲವೆಂದು ವ್ಯಕ್ತವಾಗುತ್ತದೆ, ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನಲ್ಲಿ ಅತ್ಯುತ್ಕೃಷ್ಟ ಸಾರವನ್ನೇ ಪ್ರಯೋಗಿಸಲಾಗಿದೆ ಅದರ ಮಿಶ್ರಣ ಕಾರ್ಯವನ್ನು ಅನುಭವಿಕರಾದ ಕೆಮಿಸ್ಟರರು ಆರೋಗ್ಯ ಸೂತ್ರಗಳನ್ನು ಲಕ್ಷಿಸಿಯೇ ಮಾಡುವರು

ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿಕೆ Alex C. Maclean ಎಂಬ ದಸ್ಕತಿದೆಯೋ ನೋಡಿ ಇದನ್ನು ಬಿಡಿಯಾಗಿ ಮಾರುವುದಿಲ್ಲ ಬಾಟ್ಲಿಯಲ್ಲಿ ಪೌಡರಿನ ರೂಪದಲ್ಲಿ ಮಾರಲ್ಪಡುತ್ತದೆ ಸ್ಥಳೀಯ ಕೆಮಿಸ್ಟರಿಂದಾಗಲೀ, ಸ್ಟೋರುಗಳಲ್ಲಾಗಲಿ ದೊರೆಯದೆ ಇದ್ದಲ್ಲಿ ತಪ್ಪಿದರೆ—

ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್.

ಇಲ್ಲಿಗೆ ಬರೆಯಿರಿ

548

ಲಂಡನಿನಲ್ಲಿ ಪಂಡಿತ ಜವಾಹರಲಾಲರು.

ಕಳೆದ ತಿಂಗಳ ತಾ. ೨೯ರಲ್ಲಿ ಪಂಡಿತ ಜವಾಹಿರಲಾಲರು ಅವರ ಪುತ್ರಿಯಾದ ಇಂದಿರಾ ನೆಹರುಗಳೊಡನೆ ಲಂಡನ ನಗರದಲ್ಲಿ ಇಳಿದಿರುವರು ಅಲ್ಲಿನ ವಿಕ್ಟೋರಿಯಾ ಸ್ಟೇಶನಿನಲ್ಲಿ ಇವರನ್ನು ಸ್ವಾಗತೀಕರಿಸಲು ಜನಸ್ತೋಮವು ಕಿಕ್ಕಿರಿದು ನೆರೆದಿತ್ತು ದೇಶಸೇವೆಗೆ ತನ್ನ ಸರ್ವಸ್ವ ತ್ಯಾಗ ಮಾಡಿ ಬಲಿಕೊಟ್ಟು, ಮತ್ತು ಇನ್ನೂ ಹೆಣಗಾಡುತ್ತಿರುವ ವೀರಪುತ್ರರನ್ನು ನೋಡಲು ಹಲವು ಜನರು ಆಂಗ್ಲೇಯ ಸ್ನೇಹಿತರು ಕೂಡ ನೆರೆದಿದ್ದರು ನೇಹರು ಕಿ-ಜೈ ಎಂಬ ಜಯಘೋಷಗಳಿದ್ದವು ನೆಹರುಗಳು ಆಕ್ಸಫೋರ್ಡ ಮತ್ತು ಕೆಂಬ್ರಿಜ್‌ನ್ನು ಸಂದರ್ಶಿಸಲಿರುವರು ಕೊಂಗ್ರೆಸಿನ ಪರವಾಗಿ ಪಂಡಿತರಿಗೆ ಭಿನ್ನವಗಳು ಕೊಡಲಾಯಿತು ಹಲವು ಮಂದಿ ಆಂಗ್ಲೇಯ ಮಹನೀಯರು ಇವರನ್ನು ಕಂಡರು ರೂಟರ್ ಪ್ರತಿನಿಧಿಗಳಿಂದ ಪ್ರಶ್ನಿಸಲಾಗಿ, ಶ್ರೀ ಪಂಡಿತ ಇಲ್ಲಿನ ಹತ್ತು ದಿವಸಗಳ ಸಂಚಾರವನ್ನು ಮುಗಿಸಿ ತನ್ನ ಪತ್ನಿಯವರ ಕೂಡೆ ಬೆಡನ್‌ವಿಲರ್‌ನಲ್ಲಿ ಮನೆಮಾಡಿ ವಾಸಮಾಡುವರು ಎಂದು ತಿಳಿಸಿರುತ್ತಾರೆ ಕಮಲಾ ನೆಹರುಗಳವರ ಸ್ಥಿತಿ ಸ್ವಲ್ಪ ವೃದ್ಧಿಹೊಂದಿರುತ್ತದೆ

ಚೀನದ ಮುಖ್ಯ ಮಂತ್ರಿಗಳ ಮೇಲೆ ದುರಾತ್ಮರ ದಾಳಿ

ನಾಕಿಂಗ್ ಎಂಬ ಚೀನ ದೇಶದ ಮುಖ್ಯ ಪಟ್ಟಣದಲ್ಲಿ, ಒಂದು ಪರಿಷತ್ತಿನ ಅಧಿವೇಶನದ ಸಮಯ, ಅವರ ಪ್ರಧಾನ ಮಂತ್ರಿಗಳಾದ ವಾಂಗ್—ಚೆಂಗ್—ವೈ ಎಂಬವರ ಮೇಲೆ ವರ್ತಮಾನ ಪತ್ರಗಳನ್ನು ಮಾರುವ ಓರ್ವ ತರುಣನು ಪಿಸಲ್ತಿನ ಉಪಯೋಗವನ್ನು ಮಾಡಿದನು. ಮಂತ್ರಿಯವರ ರಕ್ಷಣಾಗಾರರು ಅಪರಾಧಿತನನ್ನು ಕೂಡಲೆ ಕೊಂದಿಕ್ಕಿದರು. ಕೆಲವರು ಈ ತರುಣನು ಜಪಾನೀಯನೆಂದು ವಾರ್ತೆಯನ್ನು ಹರಟಿಸಿದ್ದರು ಆದರೆ, ಅಪಾದಿತನು ಚೀನಿಯವನೆಂದು ಈಗ ತಿಳಿದುಬಂದಿದೆ ಶಸ್ತ್ರ ಚಿಕಿತ್ಸೆಯನ್ನು ಮಾಡಿ, ಇವರಿಗೆ ಮೃತ್ಯುವಿನಿಂದ ಸುರಕ್ಷಿತರಾಗಿ ಮಾಡಿರುತ್ತಾರೆ

ಲಾಹೋರಿನ ಗಲಭೆ

ಜಾತಿ ದ್ವೇಷವು ವಿಷಯವಾದ ಈ ಗಲಭೆ ಸಂಪೂರ್ಣ ನಾಶಹೊಂದುವಂತಿದ್ದರೂ, ಈಗಲೂ ಕೆಲವು ಕಡೆಗಳಲ್ಲಿ ಚಿಕ್ಕ ಪುಟ್ಟ ಘಟನೆಗಳು ಸಂಭವಿಸುತ್ತಿವೆ ಒಂದು ಸಣ್ಣ ಮುಸ್ಲಿಮ ಪೋರನಿಗೆ, ಒಂದು ಸೈಕಲಿಷ್ಟನ ಕೈಯಲ್ಲಿ ಒದಗಿದ ಸಣ್ಣ ಹಾನಿಯು (ಉದ್ದೇಶ ಪೂರ್ವಕವಲ್ಲದ) ಒಂದು ದೊಡ್ಡ ಗಲಭೆಯನ್ನು ನಿರ್ಮಿಸುತ್ತಿತ್ತು ಪೋಲಿಸ ಅಧಿಕಾರಿಗಳು ತಕ್ಕ ಸುವ್ಯವಸ್ಥೆಗಳನ್ನು ಮಾಡಿ, ಗಲಭೆಯನ್ನು ನಿಲ್ಲಿಸಿರುವರು

ಡಿಸ್ಟ್ರಿಕ್ಟ್ ಬೋರ್ಡು ಸದಸ್ಯರನ್ನು ಕೊಲೆಗೊಂಡರು

ತಿರುಪ್ಪುರದಲ್ಲಿ ಅತಿ ಕ್ರೂರವಾದ ಕೆಳಗಿನ ಕೊಲೆಯು ನಡೆದಿರುತ್ತದೆ ಶ್ರೀ ಆರ್. ಎ ರಾಮಸ್ವಾಮಿ ಗೌಂಡರ್‌ನವರು ಸಿರಿವಂತ ಜಮೀನುದಾರರು, ಡಿ ಬೊ ಸದಸ್ಯರು, ಮತ್ತು ಕೆಲವು ಸಮಯ ನಗರಸಭೆಯ ಅಧ್ಯಕ್ಷರಾಗಿದ್ದರು ಮೊನ್ನೆ ರಾತ್ರಿ ಇವರನ್ನು ಮಲಗಿದಲ್ಲಿ ಯಾರೊ ತಿವಿದು ಕೊಂದಿರುವರು ಬಳಿಯಲ್ಲಿ ಮಲಗಿದ ಇವರ ಪತ್ನಿಯನ್ನು ಕೂಡ ಕೊಲೆಮಾಡಿರುತ್ತಾರೆ ಅಪಾದಿತರ ಪತ್ತೆಯು ಆಗಲಿಲ್ಲ ಪೋಲೀಸ ಶೋಧನೆಯು ನಡೆಯುತ್ತದೆ ಸಾಧಾರಣ ಹತ್ತು ಸಾವಿರ ಜನರು ಇವರ ಸ್ಮಶಾನ ಯಾತ್ರೆಗಾಗಿ ನೆರೆದಿದ್ದರು. ಇವರಿಗೆ ಒಂದು ಸಣ್ಣ ಹೆಣ್ಣು ಮಗು ಮಾತ್ರ ಇರುವುದು

ಪತ್ರಿಕಾಪ್ರಪಂಚ.

ಅಸ್ಟ್ರೇಲಿಯಾದ ಸಕ್ಕರೆ ವ್ಯವಸಾಯ.

ಪ್ರಪಂಚದ ಅತಿ ಸಿಹಿಯಾದ ಕಬ್ಬು ಅಸ್ಟ್ರೇಲಿಯಾದಲ್ಲಿ ಬೆಳೆಯುತ್ತದೆ. ಅಲ್ಲಿನ ನೆಲ ಮಳೆ, ಹವಾಗುಣಗಳೇ ಇದಕ್ಕೆ ಮುಖ್ಯ ಕಾರಣಗಳು. ಹಿಂದೂಸ್ಥಾನದಲ್ಲಿ ಕೃಷಿ ಮಾಡಿದ ಬಾಡಿಲ್ಲಾ ಜಾತಿಯು ಇಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಸಕ್ಕರೆ ತಯಾರಿಸುವ ವ್ಯವಸಾಯವು ಇಲ್ಲಿ ಒಂದು ಮಹಾ ಉದ್ಯಮವಾಗಿ ಸಾಗುತ್ತಿದೆ. ಇವರ ಕೆಲವು ಕ್ರಮಗಳನ್ನು ನಾವೂ ಅನುಸರಿಸಿ ನಮ್ಮ ಸಕ್ಕರೆವ್ಯವಸಾಯವು ಅತಿಶೀಘ್ರವಾಗಿ ಉದ್ಧಾರಹೊಂದಬಹುದು.

ಈ ಉದ್ಯಮವು ಅಲ್ಲಿ ಅಷ್ಟು ಶ್ರೇಯಸ್ಕರವಾಗಿ ಬಾಳಲು ಕಾರಣಗಳೇನು? ಈ ನೊಡಲೇ ತಿಳಿಸಿದಂತೆ ಅವರ ಕಬ್ಬಿನ ಗುಣವೆ ಒಂದು ಕಾರಣ. ಇನ್ನೊಂದು ಕಾರಣವಾವುದೆಂದರೆ, ಅಲ್ಲಿಯ ಕೆಲಸಗಾರರ ಮಜೂರಿಯು ಇಲ್ಲಿನ ಸರಿ ಎರಡುಪಾಲಷ್ಟಾಗಿರುತ್ತದೆ. ಹೀಗಾದುದರಿಂದ ಕೆಲಸ ಕಡಿಮೆಮಾಡುವ ಹಲವು ಯಂತ್ರಗಳನ್ನು ಕಂಡುಹಿಡಿದಿರುತ್ತಾರೆ. ಈ ಯಂತ್ರಗಳು ಕಬ್ಬಿನ ಸಾಗುವಳಿಯನ್ನು ವಿಶೇಷವಾಗಿ ಹೆಚ್ಚಿಸಿರುತ್ತವೆ. ಮೊದಲನೆಯದಾಗಿ, ಸಕ್ಕರೆ ತಯಾರಿಗೆ ಹೆಚ್ಚಿನ ವೆಚ್ಚವು ತಗಲಿದರೂ ಅಲ್ಲಿನ ಸರಕಾರದವರು ಜನರು ಸ್ವದೇಶೀ ಸಕ್ಕರೆಯನ್ನೇ ಉಪಯೋಗಮಾಡಿ ಹಲವರಿಗೆ ಉದ್ಯೋಗ ಒದಗುವಂತೆಯೂ ಮತ್ತು ಕ್ವೀನ್ಸ್‌ಲೆಂಡ ಎಂಬ ಪ್ರಾಂತ್ಯದಲ್ಲಿ ವಸಾಹತದ ರಚನೆಯಾಗುವಂತೆಯೂ, ತಕ್ಕ ಸುವ್ಯವಸ್ಥೆಗಳನ್ನು ಮಾಡಿರುವರು. ಕ್ವೀನ್ಸ್‌ಲೆಂಡಿನಲ್ಲಿ ಕಬ್ಬಿನ ಸಾಗುವಳಿಯು ಜನರ ಮುಖ್ಯ ಉದ್ಯೋಗವಾಗಿರುತ್ತದೆ ಅಲ್ಲಿನ ಜನರ ಉಚ್ಚ ತರದ ಜೀವನಮಾನವೆ ಕಬ್ಬು ಸಾಗುವಳಿಯ ವೆಚ್ಚವು ಹೆಚ್ಚಲು ಕಾರಣವಾಗಿದೆ ಒಂದಾನೊಂದು ಕಾಲದಲ್ಲಿ ಕಡಿಮೆ ತಲೆಬಿನ ಕಸಕದ ಜನರನ್ನು ಇಟ್ಟಿದ್ದರು, ಆದರೆ ಸ್ವದೇಶದ ಮೇಲ್ಮೆಗಾಗಿ ಈ ಅಭ್ಯಾಸವನ್ನು ಈಗ ನಿಲ್ಲಿಸಿರುತ್ತಾರೆ

ಅಲ್ಲಿನ ಕೃತಕ ಪ್ರಕೃತಿ.

ಕೃತಕ ಪ್ರಕೃತಿಯು ನಿಸರ್ಗದಿಂದ ಅವರು ಕಬ್ಬಿನ ಸಾಗುವಳಿಯನ್ನು ಉತ್ತಮ ರೀತಿಯಲ್ಲಿ ನಡೆಯಿಸುತ್ತಿದ್ದಾರೆ. ಕಬ್ಬನ್ನು ಇಂತಿಷ್ಟು ವಿಸ್ತೀರ್ಣದಲ್ಲಿ ಬೆಳೆಯಬೇಕೆಂದು ನಿರ್ಧಾರಗಳಿವೆ. ಕೂಲಿಯವರ ಕೂಲಿಯೂ ಅವರ ಕೆಲಸದ ಸಮಯವೂ ಇವುಗಳ ವಿಷಯ ನಿರ್ಧಾರದ ಬಳಿ ಕ್ರಮಗಳು ಚಾಲ್ತಿಯಲ್ಲಿವೆ. ಕಬ್ಬಿನ ಬೆಲೆಯನ್ನು ನಿರ್ಣಯಿಸಲು ಸರಕಾರದವರು ಒಂದು ಸಂಸ್ಥೆಯನ್ನು ಏರ್ಪಡಿಸಿದ್ದಾರೆ. ವಿದೇಶಗಳಲ್ಲಿ ಇವರ ಸಕ್ಕರೆಯು ರಾತ್ತಿಗೆ ೧॥ ಪೆನ್ನಿಗೆ ಮಾರಾಟವಾದರೂ ಅಸ್ಟ್ರೇಲಿಯಾದವರು ಸಕ್ಕರೆಗೆ ರಾತ್ತಿಗೆ ೪ ಪೆನ್ಸ್ ಕೊಡಬೇಕಾಗಿದೆ. ಸಕ್ಕರೆ ವ್ಯವಸಾಯವು ಅಷ್ಟು ಅಭಿವೃದ್ಧಿಗೊಳ್ಳಲು ಇದೇ ಮುಖ್ಯ ಕಾರಣವಾಗಿದೆ

ಇದೇ ರೀತಿ ಹಿಂದೂಸ್ಥಾನದಲ್ಲಿ ಅತಿ ಪುರಾತನವಾದ ಈ ಸಾಗುವಳಿಯನ್ನು ಯೋಗ್ಯ ರೀತಿಯಲ್ಲಿ ನಡೆಯುವಂತೆ ಯಾಕೆ ಮಾಡಕೂಡದು? ಕಬ್ಬಿನ ಸಾಗುವಳಿಯು ಈಗ ನಿರ್ಗತಿಕಗಳಾಗಿರುವ ರೈತರಿಗೆ ಜೀವಕಳೆ ಕೊಡುವುದು ಮಾತ್ರವಲ್ಲದೆ, ಹಿಂದೂದೇಶವನ್ನು ಅಸ್ಟ್ರೇಲಿಯಾದಂತೆ ಸಕ್ಕರೆಯ ವ್ಯವಸಾಯದಲ್ಲಿ ಉತ್ತಮಸ್ಥಾನವನ್ನಾಗಿ ಮಾಡುವುದು

ಹಿಂದೂ ಪತ್ರಿಕೆ.

ಹಿಂದೂದೇಶದ ಸಹಕಾರ ಸಂಘಗಳು.

ಹಿಂದೂದೇಶದಲ್ಲಿ ಸಹಕಾರ ಸಂಘ ಅಥವಾ ಕೋಓಪರೇಟಿವ್ ಚಳವಳಿಕ್ಕೆ ಅದರ ಮುಖ್ಯ ಉದ್ದೇಶವನ್ನು ಸಾಧಿಸಲು ಅಸಾಧ್ಯವಾಗಿದೆ. ಸಹಕಾರ ಸಂಘಗಳೆಂದರೆ, ಕೆಲವು ಸದಸ್ಯರು ಪಾಲುಗಳನ್ನು ಕೊಂಡಿಸಿಯೂ ಮತ್ತು ಠೇವಣಾತಿ ಮತ್ತು ಇತರ ವಿಧದ ಸಂಚಯಗಳಿಂದ ಹಣವನ್ನು ಕೂಡಿಸಿ, ಹಣದ ಅನುಪತ್ಯವಿದ್ದ ರೈತನಿಗೂ, ಕರ್ಮಗಾರರಿಗೂ, ಸಣ್ಣ ವರ್ತಕರಿಗೂ ಸಾಲ ಕೊಡುವ ಒಂದು ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಗಳಿಗೆ ಹಣವೊದಗಿಸಲು ಸೆಂಟ್ರಲ್ ಬೇಂಕುಗಳಿವೆ ಈ ಸಂಸ್ಥೆಗಳಿಂದ ಸಂದ ಸಾಲಗಳು ಮರುಪಾವತಿಯಾಗುವುದು ಬಹಳ ಕಡಿಮೆಯಾದುದರಿಂದ ಇವರಿಗೆ ಸೆಂಟ್ರಲ್ ಬೇಂಕಿನ ಆಶ್ರಯವು ತಪ್ಪಿಹೋಗಿರುತ್ತದೆ ಅದೂ ಅಲ್ಲದೆ, ಸಂಘದ ಕ್ರಮಸೂತ್ರಗಳಿಂದಲೂ ಮತ್ತು ಕಡ್ಡಾಯದಿಂದಲೂ ಇವುಗಳು ಬಡವರಿಗೆ ಹಿತಕರವಾದ ಸಂಸ್ಥೆಯೆಂದ ಭಾಸವಾಗುವುದಿಲ್ಲ. ಈ ಕ್ರಮಗಳಿಂದ ಮತ್ತು ಕೆಲವು ರೂಢಿಯಲ್ಲಿರುವ ಅಡಚಣೆಗಳಿಂದ ಅನೇಕ ಜನ ಅನುಪತ್ಯ ಗೃಹಸ್ಥರಿಗೆ ಈ ಸಂಘಗಳಿಂದ ಸಕಾಲಕ್ಕೆ ಸಾಲಗಳು ದೊರಕುವುದಿಲ್ಲ. ಹೀಗಾಗಿ ಈ ಚಳವಳವು ವ್ಯವಸ್ಥೆಯಲ್ಲಿದೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಾಗದು ಇದನ್ನು ರಕ್ಷಿಸುವುದು ಹೇಗೆ?

ಹಳ್ಳಿಗಳ ರೈತರಿಗೆ ಸಾಗುವಳಿಯ, ಸಮಯ ಹಣದ ಅಡಚಣೆಯು ಇರುತ್ತದೆ. ಈಗ ಇರುವ ಕ್ರಮಗಳನ್ನು ಸುಧಾರಿಸಿ ಇವರಿಗೆ ಇನ್ನೊಬ್ಬನ ಜಾಮೀನಿನಲ್ಲಿ ಹಣವು ಸಂಘದಿಂದ ಸಾಲವಾಗಿ ದೊರೆಯುತ್ತದೆ. ಇದನ್ನು ತಪ್ಪಿಸಲು ಬೇರೆ ಸಹೋದರಸಾಲಿಗರ ಕೈಸೇರಬೇಕಾಗುತ್ತದೆ. ಇದರ ಬದಲಾಗಿ, ಇವರಿಗೆ ಬೆಳೆಯ ಈಡಿನ ಮೇಲೆ ಸಾಲಗಳನ್ನು ಕೊಡಬೇಕು. ಇವರ ಹುಟ್ಟುವಳಿಯನ್ನು ಕೂಡಿಸಿ ಯೋಗ್ಯ ರೀತಿಯಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲಿ ಸ್ವಲ್ಪ ಮಾರಾಟದ ಕಮಿಶನು ವಿಧಿಸಬಹುದು, ಹಾಗೆ ಮಾರಾಟವಾಗಿ ಬಂದ ಮೊಬಲಗಿನಿಂದ ಸಂಘಕ್ಕೆ ಸಲ್ಲುವ ಸಾಲವನ್ನು ವಜಾಯಿಸಿ ಉಳಿದ ಐವೇಜನ್ನು ರೈತನಿಗೆ ಕೊಡಬೇಕು.

ದೀರ್ಘವಾಯಿದೆ ಸಾಲಗಳನ್ನು ಸದ್ಯದ ಅನುಪತ್ಯಗಳಿಗೆ ಉಪಯೋಗಿಸಬೇಕು. ಉದ್ದವಾಯಿದೆಯ ಸಾಲಗಳನ್ನು ಕೆಲವು ಸಾಲದ ಮರುಪಾವತಿಗೂ, ಭೂವೃದ್ಧಿಗೂ ಉಪಯೋಗ ಮಾಡಬೇಕು. ಅದೂ ಅಲ್ಲದೆ ಇನ್ನು ಸದ್ಯದಲ್ಲಿ ಜ್ಯಾರಿಗೆ ಬರುವ "ರಾಜಿಯಲ್ಲಿ ಸಾಲನಿವಾರಣೆ" ಕ್ರಮವು ಇದಕ್ಕೆ ತಗಲುವಂತೆ ಮಾಡಬೇಕು. ಕ್ರಮ ನಿಬಂಧನೆಗಳು ರೈತರಿಗೆ ಬೇಕಾಗುವ ರೀತಿಯಲ್ಲಿ ಸರಿಪಡಿಸಬೇಕು.

ಹೀಗೆ ಮಾಡಿದರೆ ಸಹಕಾರ ಚಳವಳವು ಅತಿಶೀಘ್ರವಾಗಿ ವೃದ್ಧಿಗೊಂಡೀತು. ಈಗ ಸೆಂಟ್ರಲ್ ಬೇಂಕಿನವರ ಸರಕಾರಭಕ್ತಿಯು ಪತ್ರಗಳ ಮೇಲೆ ಸಂಚಯಿಸಿದ ಹಣವು ಯೋಗ್ಯ ರೂಪದಲ್ಲಿ ರೈತರ ಕೈಯನ್ನು ಸೇರಿ, ಸಹಕಾರ ಸಂಘಗಳೂ ಸಾರ್ಥಕತೆಯನ್ನು ಹೊಂದುವುದು. ಗ್ರಾಮಾಭ್ಯುದಯ ಕೆಲಸದಲ್ಲಿ ಈ ಪ್ರಶ್ನೆಗಳನ್ನು ಕೂಡ ಸೇರಿಸಿಕೊಳ್ಳಬಾರದೆ?

ರೈತರ ಸಾಲನಿವಾರಣೆ.

ಕೃಷ್ಣಾಜಿಲ್ಲೆಯ ರೈತರ ಪರಿಷತ್ತಿನಲ್ಲಿ ಅಲ್ಲಿನ ರೈತರ ಸಂಘದ ಅಧ್ಯಕ್ಷರಾದ ಮಾನ್ಯ ಶ್ರೀ ಗೋಪಾಲಸ್ವಾಮಿ ಯವರು ಮಾಡಿದ ಭಾಷಣದ ಸಾರಾಂಶ — ನಮ್ಮ ಪ್ರಾಂತ್ಯದ ರೈತರ ಸಾಲದ ಹೊರೆಯು ೧೯೩೦ ರಲ್ಲಿ ೪೫ ಕೋಟಿ ರೂಪಾಯಿಗಳಿದ್ದು, ಈಗ ೧೯೩೪ರಲ್ಲಿ ೨೦೦ ಕೋಟಿ ರೂಪಾಯಿಗಳಿಗೆ ಏರಿರುತ್ತದೆ ಈ ಅಂಕೆಗಳು ನಮ್ಮ ಸರಕಾರವು ರೈತರ ಸ್ಥಿತಿಯನ್ನು ಪರಿಶೀಲಿಸಲು ನೇಮಿಸಿದ ಆಫೀಸರರಿಂದ ತಿಳಿದು ಬಂದಿವೆ ಈ ಆಫೀಸರರ ವರದಿಯ ಪ್ರಕಾರ ಸರಾಸರಿ ಒಂದು ರೈತಕುಟುಂಬದ ಸಾಲವು ರೂ ೯೦೦ ಆಗಿರುತ್ತದೆ ವ್ಯಾಪಾರದ ಸ್ಥಿತಿಯೂ ಕ್ಷೀಣವಾಗಲು ರೈತರಿಗೆ ಈ ಸಾಲಗಳ ಮರುಪಾವತಿಯು ಅಸಾಧ್ಯವಾಗಿದೆ. ಭೂಮಿಯ ಕ್ರಯವು ವಿಶೇಷವಾಗಿ ಇಳಿದಿರುತ್ತದೆ. ಹೀಗಾಗಿ ರೈತರು ದಿವಾಳಿಕೋರರಾಗಿ, ಅವರ ಆಸ್ತಿಗಳು ಸಾಲಿಗರ ಕೈಗಳನ್ನು ಸೇರುತ್ತವೆ, ಕಳೆದ ಸಭೆಯ ನಂತರ ಇವರದೇ ಆಗಿರುವ ಆಸ್ತಿಯು ಬೇರೆಯವರ ವಶವಾಗುತ್ತಿದೆ. ಹಲವು ರೈತರು ನಿರುದ್ಯೋಗಿಗಳಾಗಿ ನರಳುತ್ತಿರುವರು. ಸಿವಿಲ್ ಕೋರ್ಟುಗಳು ರೈತನಿಗೆ ಈ ಅಪತ್ತಿನಲ್ಲಿ ಸಹಕರಿಸುವ ಬದಲಾಗಿ, ಅವರ ಕ್ರಮನಿಯಮಗಳ ಪ್ರಕಾರ ಸಾಲಿಗರ ಕಡೆ ಸೇರಬೇಕಾಗಿದೆ. ಬೇರೆ ದೇಶಗಳಲ್ಲಿ ರೈತರನ್ನು ರಕ್ಷಿಸಲು ಹಲವು ಕ್ರಮಸೂತ್ರಗಳನ್ನು ಮಾಡಿರುತ್ತಾರೆ. ಆದರೆ ನಮ್ಮ ಮದ್ರಾಸು ಸರಕಾರವು ಇಷ್ಟರ ವರೆಗೆ ಈ ಪ್ರಶ್ನೆಯ ಕುರಿತು ಮೌನವಾಗಿತ್ತು.

ಆದರೆ, ರೈತರ ಸಾಲನಿವಾರಣೆಯನ್ನು ರಾಜಿಯಲ್ಲಿ ಮಾಡಲು ಅವಕಾಶಕೊಡುವ ಒಂದು ಹೊಸ ಬಿಲ್ಲು ನಮ್ಮ ನ್ಯಾಯವಿಧಾಯಕ ಸಭೆಗೆ ಬೇಗನೇ ಬರುವುದು. ಆತನ ಭೂಮಿಯ ಸ್ಥಿತಿ, ಬೆಳೆ, ಸಾಗುವಳಿಯ ವೆಚ್ಚ, ಆತನಿಗೆ ಜೀವನನಡೆಯಿಸಲು ಬೇಕಾಗುವ ಹಣ ಇವೇ ಮೊದಲಾದುವುಗಳನ್ನು ಚೆನ್ನಾಗಿ ವಿಚಾರಿಸಿ, ರೈತನ ಸಾಲದ ಮರುಪಾವತಿಯಾಗುವಂತೆ ಈ ಬಿಲ್ಲಿನಿಂದ ಸಾಧ್ಯವಾಗುವುದು. ಹೀಗಾಗಿ ರೈತರಿಗೆ ತಮ್ಮ ಸಾಲದ ಮರುಪಾವತಿಗೆ ದೀರ್ಘಕಾಲ ಸಮಯವು ದೊರಕುವುದು ಈ ಬಿಲ್ಲಿನ ನಿರ್ಬಂಧಗಳಿಂದಾಗಿ, ಬಡ ರೈತರಿಂದ ವಿಶೇಷ ಬಡ್ಡಿಯನ್ನು ಪಡೆಯಲು ಸಾಧ್ಯವಾಗುವುದಿಲ್ಲ ಅವರಿಗೆ ಅನುಕೂಲವಾಗುವ ಒಂದು ದರವನ್ನು ಸರಕಾರವೆ ನಿರ್ಧರಿಸುವುದು ಅದೂ ಅಲ್ಲದೆ, ಈ ಸಾಲದ ಕಾರಣಗಳಿಂದಾಗಿ ರೈತರ ಕೈಬಿಟ್ಟುಹೋದ ಭೂಮಿಗಳನ್ನು ಅವರಿಗೆ ವಾಪಾಸು ಕೊಡಿಸಲಾಗುವುದು.

ನಮ್ಮ ಸರಕಾರವು ಗ್ರಾಮಾಭ್ಯುದಯ ಕಾರ್ಯವನ್ನು ರೈತರ ಸ್ಥಿತಿಯು ಉದ್ಧಾರವಾಗುವಂತೆ ನಡೆಯಿಸಬೇಕು ಈ ಕ್ರಮದಲ್ಲಿರುವ ಕಂದಾಯವನ್ನು ಕಡಿಮೆ ಮಾಡಬೇಕು

ಹಿಂದೂದೇಶದ ವಿಮಾಸಂಸ್ಥೆಗಳು

ಹಿಂದೂದೇಶದಲ್ಲಿ ಈಗ ೩೪೧ ವಿಮಾಸಂಸ್ಥೆಗಳಿವೆ ಇವುಗಳಲ್ಲಿ ೧೯೪ ಸಂಸ್ಥೆಗಳು ಭಾರತೀಯರದ್ದಾಗಿವೆ, ಮಿಕ್ಕವುಗಳ ೧೪೭ ಸಂಸ್ಥೆಗಳು ಪರದೇಶದವುಗಳಾಗಿವೆ ನಮ್ಮಲ್ಲಿನ ೧೯೪ ಸಂಸ್ಥೆಗಳಲ್ಲಿ, ೭೪ ಮುಂಬಯಿ ಪ್ರಾಂತ್ಯದಲ್ಲೂ, ೩೭ ಬಂಗಾಳದಲ್ಲಿಯೂ, ೩೧ ಮದ್ರಾಸ ಅಧಿಪತ್ಯದಲ್ಲೂ, ೨೨ ಪಂಜಾಬಿನಲ್ಲಿಯೂ, ೯ ದಿಲ್ಲಿಯಲ್ಲಿಯೂ, ೬ ಸಂಯುಕ್ತ ಪ್ರಾಂತಗಳಲ್ಲಿಯೂ, ೫ ಬಿಹಾರ ಮತ್ತು ಒರಿಸ್ಸಾದಲ್ಲಿಯೂ, ೩ ಅಜಮೀರ ಮೇರವಾಡದಲ್ಲಿಯೂ, ೧ ಬರ್ಮಾದಲ್ಲಿಯೂ ೧ ಅಸ್ಸಾಮದಲ್ಲಿಯೂ ೧ ಗಡಿನಾಡಿನಲ್ಲಿಯೂ ಇರುವುವು ೧೪೭ ಪರದೇಶ ಸಂಸ್ಥೆಗಳಲ್ಲಿ ೬೦ ಸಂಯುಕ್ತ ರಾಜ್ಯದವುಗಳು ೩೦ ಬ್ರಿಟಿಶ ಡೊಮಿನಿಯನ್ಸದವುಗಳು ೧೭ ಐರೋಪ್ಯ ಖಂಡದವುಗಳು, ೧೬ ಸಂಯುಕ್ತ ಅಮೇರಿಕ ದವುಗಳು ೯ ಜಪಾನಿನವುಗಳು, ೫ ಜಾವದವುಗಳಾಗಿಯೂ ಇವೆ

ಭಾರತೀಯ ಸಂಸ್ಥೆಗಳಲ್ಲಿ ಹೆಚ್ಚಿನವುಗಳು ಜೀವವಿಮೆಯ ಕೆಲಸವನ್ನು ಮಾತ್ರ ಮಾಡುತ್ತಿವೆ ೪೯ ಸಂಸ್ಥೆಗಳು ಜೀವವಿಮೆ ಅಲ್ಲದೆ ಅದರೊಡನೆ ವಿವಿಧ ತರದ ವಿಮಾಕಾರ್ಯವನ್ನು ನಡೆಯಿಸುತ್ತಿವೆ.

೧೯೩೩ರಲ್ಲಿ ಭರತಖಂಡದ ವಿಮಾಸಂಘಗಳ ಫಲಿತಾಂಶವು ಹೀಗಿರುವುದು. ೨೭ ಕೋಟಿ ರೂಪಾಯಿ ಕ್ರಯಬಾಳುವ ೧೫೩ ಸಾವಿರ ಪೋಲಿಸಿಗಳು, ಇವುಗಳ ವರ್ಷ ಒಂದರ ೧॥ ಕೋಟಿ ರೂಪಾಯಿ ಕಂತಿನ ರೂಪದಲ್ಲಿ ಗಳಿಸುತ್ತಿವೆ. ಇವುಗಳಲ್ಲಿ ೨೪ ಕೋಟಿ ರೂಪಾಯಿ ಮೌಲ್ಯದ ಮತ್ತು ೧। ಕೋಟಿ ರೂಪಾಯಿ ಕಂತಿನ ಹುಟ್ಟುವಳಿ ಇರುವ ೧೩೫ ಸಾವಿರ ಪೋಲಿಸಿಗಳು ಭಾರತೀಯ ವಿಮಾಸಂಘದವುಗಳಾಗಿವೆ. ಬಾಕಿ ಉಳಿದ ಪೋಲಿಸಿಗಳು ಹೊರಗಿನ ಸಂಸ್ಥೆಗಳದ್ದಾಗಿವೆ. ಭಾರತೀಯ ವಿಮಾ ಪೋಲಿಸಿ ಪತ್ರದ ಸರಾಸರಿ ಬೆಲೆಯು ೧೮೫೫ ರೂಪಾಯಿಯೂ, ಹೊರಗಿನ ಸಂಸ್ಥೆಗಳ ಪೋಲಿಸಿಪತ್ರದ ಸರಾಸರಿ ಬೆಲೆಯು ೩೧೨೦ ರೂಪಾಯಿಯೂ ಆಗಿರುತ್ತದೆ, ಒಟ್ಟು ಚಾಲ್ತಿಯಲ್ಲಿರುವ ವಿಮಾಪತ್ರಗಳು, ೧೯೩೩ರ ವರೆಗೆ ೮೬೭ ಸಾವಿರ, ಪತ್ರಗಳ ಮೌಲ್ಯ ರೂ ೧೯೩ ಕೋಟಿ, ಕಂತುಗಳಿಂದ ಗಳಿಸುವ ಹಣ ರೂ. ೮½ ಕೋಟಿ ಇವುಗಳಲ್ಲಿ ೬೩೬ ಸಾವಿರ ಪತ್ರಗಳು, (೧೧೪ ಕೋಟಿ ರೂಪಾಯಿ ಮೌಲ್ಯದ ಮತ್ತು ೫½ ಕೋಟಿ ರೂಪಾಯಿ ಕಂತಿನ ಆದಾಯವಿರುವ) ಭಾರತೀಯ ಸಂಸ್ಥೆಯವುಗಳಾಗಿವೆ.

ಕೆಲವು ಭಾರತೀಯ ಸಂಸ್ಥೆಗಳು ಹಿಂದೂದೇಶದ ಹೊರಗೆ ಅಂದರೆ ಆಫ್ರಿಕಾ ಮೊದಲಾದ ಸ್ಥಳಗಳಲ್ಲಿ ತಮ್ಮ ಚಟುವಟಿಕೆಯನ್ನು ನಡೆಯಿಸುತ್ತಿವೆ. ಈ ಶಾಖೆಗಳಿಂದ ೬೦ ಲಕ್ಷ ರೂಪಾಯಿ ಕ್ರಯಬಾಳುವ ವಿಮಾಪತ್ರಗಳು ಜನಿಸಿವೆ ಭಾರತೀಯ ಸಂಸ್ಥೆಗಳು ಸರಕಾರದ ನಿಬಂಧನೆಗಳ ಪ್ರಕಾರ ರೂ ೧,೩೪,೮೧,೦೦೦ವನ್ನು ಸರಕಾರದೊಡನೆ ಭದ್ರತೆ ಠೇವಣಾತಿಯಾಗಿ ಇಟ್ಟಿದ್ದಾರೆ. ಈ ಸಂಸ್ಥೆಗಳ ವಿಮಾಫಂಡುಗಳು, ೨೮॥ ಕೋಟಿ ರೂಪಾಯಿಗಳಿಗೆ ಮಿಕ್ಕಿರುವುದು ಇವರ ಠೇವಣಾತಿಗಳ ಮೇಲೆ ಸರಾಸರಿ ೪½ ಸಲೆ ಬಡ್ಡಿಯು ದೊರಕಿದೆ

'ಹಿಂದೂಪತ್ರಿಕೆಯಿಂದ

[ಮೇಲಿನ ಅಂಕೆಗಳನ್ನು ಪರೀಕ್ಷಿಸಿದರೆ, ನಮ್ಮಲ್ಲಿ ಇಷ್ಟು ಸಂಸ್ಥೆಗಳಿದ್ದರೂ ಸಾಧಾರಣ ಶೇಕಡಾ ೫೦ರ ಸಂ ವಿಮಾಪತ್ರಗಳು ಹೊರಗಿನವರಿಗೆ ದೊರಕುತ್ತಿರುವುದು ವ್ಯಕ್ತವಾಗುತ್ತದೆ ಅದೂ ಅಲ್ಲದೆ, ನಮ್ಮಲ್ಲಿನ ಹೆಚ್ಚಿ ಸಂಸ್ಥೆಗಳು ಬಹಳ ಕಷ್ಟದಲ್ಲಿ ಉತ್ಪತ್ತಿಯಿಂದೂ ಪಡೆ ಇವೆ ಹೀಗಿರುವಾಗ ಭಾರತೀಯರಾದ ನಾವು ವಿಮೆ ರೂಪದಲ್ಲಿ ಹೊರಗೆ ಸಲ್ಲುವ ಈ ಹಣವು ಭಾರತೀಯ ಸಂಸ್ಥೆಗಳನ್ನು ಸೇರುವಂತೆ ಮಾಡಿ, ನಮ್ಮ ವಿಮಾಸಂಸ್ಥೆಗಳು ವೃದ್ಧಿಹೊಂದಿ ಶ್ರೇಯಸ್ಕರವಾಗಿ ಬಾಳುವಂತೆ ಮಾಡಬೇಕು ಭಾರತೀಯ ವಿಮಾಸಂಸ್ಥೆಗಳನ್ನು ಪ್ರೋತ್ಸಾಹಿಸಿರಿ ಸಂ ಸ್ವ.]

ಮುಂಬಾಯಿಯ ಕೆನರಾ ಸ್ಟುಡೆಂಟ ಯೂನಿಯನ್

ಇವರು ದೀಪಾವಳಿ ಹಬ್ಬದ ನಿಮಿತ್ತ ಆದೊಂದು ಸಣ್ಣ ಪ್ರಯಾಣವನ್ನು ಜೋಗ್ತರದ ವರೆಗೆ ಬೆಳೆಸಿ ಅದೇ ದಿನ ಫೇಂಟಿ ಒಕ್ಕೆ ಹಿಂತಿರುಗುವರು

ನಿಸ್ತೇಜಗೊಂಡ ಚರ್ಮ.

ಪ್ರಾಯವಾಗುವ ಮೊದಲೇ ಸ್ತ್ರೀಯು ಮುದುಕಿಯಂತೆ ತೋರುವಳು.

ಇಷ್ಟು ಬೇಗನೇ ಮುಪ್ಪನ್ನು ಪಡೆಯುವುದೆಂದರೆ, ಜೀವನ ಸೌಂದರ್ಯವನ್ನೇ ಕಳಕೊಂಡಂತಾಗುತ್ತದೆ ಇದರಿಂದ ನಿಮ್ಮನ್ನು ರಕ್ಷಿಸಿ, ನಿಮ್ಮ ಚರ್ಮವನ್ನು ನಯವಾಗಿಯೂ ನುಣುಪಾಗಿಯೂ ಮಾಡಿ, ನಿಮ್ಮ ಮುಖಕ್ಕೆ ಸೌಂದರ್ಯವನ್ನು ತರುವ ಒಂದು ಔಷಧಿಯು ಇದೆ. ಅದು ಕಲೆಗಳನ್ನೂ ಹುಣ್ಣುಗಳನ್ನೂ ಬೊಕ್ಕೆಗಳನ್ನೂ ಮುದಿಮೆಗಳನ್ನೂ ನಾಶಪಡಿಸುತ್ತದೆ.

ಅಪ್ಘಾನ ಸ್ನೋ.

ನಿತ್ಯವೂ ಉಪಯೋಗಿಸಿದರೆ ಸೌಂದರ್ಯವೂ ಆರೋಗ್ಯವೂ ವೃದ್ಧಿಯಾಗುವುದು.

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಇ. ಎಸ್. ಪಟಾನ್‌ವಾಲಾ,
182-84, ಎ. ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬೈ, 3

ಲೌಸ್ ಬರ್ನಾಡನೆಂಬ ಅನುಭವಸಿದ್ಧನಾದ ರಸಾಯನಶಾಸ್ತ್ರಜ್ಞನಾದ ನಾನು ಈ ಮೂಲಕ ವ್ಯಕ್ತಪಡಿಸುವುದೇನೆಂದರೆ, ಅಫ್ಘಾನ ಸ್ನೋ ಎಂಬ ಕ್ರೀಮನ್ನು ವಿಶ್ಲೇಷಿಸಿ ಅದರಲ್ಲಿ ಯಾವುದೆ ತರದ ವಿಷಕರ ಪದಾರ್ಥವಾಗಲಿ, ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿಲ್ಲ. ಈ ಕ್ರೀಮನ್ನು ಸರ್ವರೂ ತಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಅನುಕ್ರಮಣಿಕೆ

ಕತೆಗಳು ೩
ಸ್ಪೈನ್‌ ಚೀಣಾದ ಯುದ್ಧ . . . ೩
ಪೋಲೀಸ್ ಡಿ. ಎಸ್. ಪಿ. ಮೇಲೆ ಆರೋಪಗಳು ೫
ಇಟೆಲಿಯಾನರು ಮಠಶಾಲೆಯನ್ನು ಬೇಗನೆ ಸೇರುವರು ೬
ಚಿತ್ರಕಲೆ ೮
ಪತ್ರಿಕಾಪ್ರಪಂಚ ೯
ಅಗ್ರಲೇಖ
ಹೊಗೆಸೊಪ್ಪು ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ . . ೧೧
ಸಂಪಾದಕರ ಟಪ್ಪಾಲುಪೆಟ್ಟಿಗೆ . . . ೧೩
ವಿವಿಧ ವಿಷಯಗಳು ೧೪
ಮಾಡಿ-ಕೊಡತಕ್ಕ ಕೇಂದ್ರ . . . ೧೪

ಸ್ವದೇಶಾಭಿಮಾನಿ

ಕಾ. ೩ನೇ ಶುಕ್ರವಾರ ನವಂಬರ '೩೮.

ಹೊಗೆಸೊಪ್ಪು

ಮದ್ರಾಸು ಕೌನ್ಸಿಲಿನ ಮುಂದೆ, ಹೊಗೆಸೊಪ್ಪಿನ ಮೇಲೆ ಕಂದಾಯವನ್ನು ಹೊರಿಸುವ ಒಂದು ವಿಚಾರ ಇಡಲಾಗಿದೆ ಇದು ಸುಂಕವೋ ಕರಿಗೆಯೋ ಲಾಭಾದಾಯದ ವಿಷಯವೋ ಎಂದು ಸರಿಯಾಗಿ ಹೇಳಬರುವಂತಿಲ್ಲ. ಅದೂ ಅಲ್ಲದೆ, ಈ 'ಹೊಗೆಸೊಪ್ಪಿನ ಮಸೂದೆ'ಯು ಮುಂದೆ ಫೆಡರಲ್ ಸರಕಾರವು ಉಂಟಾದಾಗ, ಉಳಿಯುವುದೇ ಅಳಿಯುವುದೇ ಎಂಬ ಪ್ರಶ್ನೆಗೂ ಸರಿಯಾಗಿ ಸಮರ್ಪಕ ಉತ್ತರ ಹೇಳುವವರಿಲ್ಲ ಕೌನ್ಸಿಲಿನ ಅಧ್ಯಕ್ಷರು ಸಹ, ಈ ಕೌನ್ಸಿಲು ಈ ಮಸೂದೆಯನ್ನು ಅಂಗೀಕರಿಸಬಹುದಾದರೂ, ಇಂಡಿಯಾ ಆಕ್ಟು ಜ್ಯಾರಿಗೆ ಬರುತ್ತಲೆ ಇದು ಸಿಂಧುವಾಗಿ ಉಳಿದೀತೆಂದು ಹೇಳಬರುವುದಿಲ್ಲವೆಂದು ನುಡಿದಿರುವರು

ಸುಂಕವೆಂಬುದೆಲ್ಲ ವರಿಷ್ಠ ಸರಕಾರದ ಸೊತ್ತು; ಇದೂ ವರಿಷ್ಠ ಸರಕಾರದ ವ್ಯಯಕ್ಕಾಗಿ ಅಡಚಣೆಯುಂಟಾದಾಗ ಅಗತ್ಯತೋರಬಹುದಾಗಿರುವಂತಹ ಸುಂಕ, ಹೀಗಾಗಿ ಫೆಡರಲ್ ಸರಕಾರವು ಇಂಡಿಯಾ ಆಕ್ಟಿನನ್ವಯ ಈ ಸುಂಕವನ್ನು ತನ್ನದೆಂದೂ ತನಗೆ ಬೇಕಾಗುವ ದರಗಳನ್ನು ವಿಧಿಸಲು ಅರ್ಹವಾದುದೆಂದೂ ಮುಂದೆ ತಿಳಿಸಬಹುದು

ಹೊಗೆಸೊಪ್ಪಿನ ಮೇಲೆ ಕರವಿಧಿಸುವ ಪ್ರಕರಣಗಳು ಹಲವಿರಬಹುದು, ಮಾರಾಟಕ್ಕೆ ಲೈಸನ್ಸು ವಿಧಿಸಬಹುದು; ಹೊಗೆಸೊಪ್ಪಿನಿಂದ ತಯಾರಾಗುವ ಕೈಗಾರಿಕೆಯ ಉತ್ಪನ್ನಗಳ ಮೇಲೂ ಸುಂಕವಿರಿಸಬಹುದು, ಹೀಗಿರುವಾಗ ಮದ್ರಾಸು ಸರಕಾರವು ಮೊದಲೇ ಒಂದು ತೆರಿಗೆ ವಿಧಿಸಿಟ್ಟರೆ, ಫೆಡರಲ್ ಸರಕಾರವು ತೆರಿಗೆ ವಿಧಿಸುವರೆ ಸಿದ್ಧವಾದಾಗ, ಮೊದಲೇ ಇರುವ ತೆರಿಗೆಗೆ ಕೂಡಿಸಿ ವಿಧಿಸುವರೆ ಸಂಕ್ಷೋಚಪಡಬೇಕಾಗ ಪ್ರಮಾದವುಂಟಾದೀತು. ಮುಂದೆ ಈ ವಿಧಾನವು ಹೇಗೆಂದು ತಿಳಿಯದಿರುವ ಕಾರಣ, ಈಗ ವಿಧಿಸಲು ಹೊರಟ ಕಂದಾಯವು ಮನಸ್ಸಿಗೆ ಬಂದಂತಾಗುವ ಒಂದು ವಿಚಾರವಲ್ಲದೆ, ವಾಸ್ತವಿಕ ವಿಚಾರವಾಗದು.

ಆದರೆ, ಮುಂದೆ ಫೆಡರಲ್ ಸರಕಾರವೇ ಹೊಗೆಸೊಪ್ಪಿನ ಮೇಲೆ ಸುಂಕ ವಿಧಿಸುವಾಗ, ನಮ್ಮ ಪ್ರಾಂತ್ಯಕ್ಕೆ ನಾವೀಗ ವಿಧಿಸಲೆಳಸಿರುವ ತೆರಿಗೆಯು ನಷ್ಟವಾಗಿರುವುದರಿಂದ, ನಷ್ಟ ಭರ್ತಿ ಮಾಡಿಕೊಡಲು ಫೆಡರಲ್ ಸರಕಾರವು ಸಿದ್ಧವಾಗಿ, ಈಗ ಮೋಟರ್ ವಾಹನಗಳಿಂದ ನಮ್ಮ ಜಿಲ್ಲೆಯಿಂದ ಲಕ್ಷಗಟ್ಟಲೆ ಹಣವನ್ನೆತ್ತಿ ಹಲವು ಸಾವಿರ ರೂಪಾಯಿ ಮಾತ್ರ ನಮ್ಮ ಬೋರ್ಡಿಗೆ ತೆರುವ ಹಾಗೆ ತೆರಬಹುದು. ಆದರೂ,—ಈ 'ಬಹುದು'ಗಳ ಸಾಮ್ರಾಜ್ಯದ ಭ್ರಮೆಯಲ್ಲೇ ವಿಹರಿಸುತ್ತ ಕೌನ್ಸಿಲಿನ ಅಧ್ಯರು ನಮ್ಮ ಖಜಾನೆಯನ್ನು ಬಡಾಯಿಸಿಕೊಳ್ಳುವ ಹವ್ಯಾಸವನ್ನು ಎಂದಿಗೂ ಮಾಡಬಾರದಾಗಿದೆ. ಜೂಜಾಡುವುದು ಹಾಳೆಂದು ಹೇಳುವ ಪೈನಾನ್ಸ ಮೆಂಬರರು, ಈ ಹೊಗೆಸೊಪ್ಪಿನ ಕರದ ಮಸೂದೆಯ ಮೂಲಕ ಒಂದು ಬಗೆಯಾಗಿ 'ಚಾನ್ಸ್' ನೋಡುವರೆ ಅಪ್ಪಣೆಕೊಡುವುದು ಸಂಗತವಲ್ಲ

ಹೊಸ ತೆರಿಗೆ ವಿಧಿಸುವಾಗ, ಯಾವಾಗಲು ಅದು ಆವಶ್ಯಕವಾಗಿದೆನ್ನುವ ಬಗೆಗೆ ಕೆಲವು ಪ್ರಾಮುಖ್ಯ ಕಾರಣಗಳನ್ನಾದರೂ ಕೊಡುವ ವಾಡಿಕೆಯಿದೆ. ಈ ಸಲ, ಇಂತಹ ಕಾರಣಗಳಾವುವೂ ಹೊರಬಿದ್ದಿಲ್ಲ. ನಮ್ಮ ಪ್ರಾಂತಿಕ ಸರಕಾರದ ವ್ಯಯವು ಬಹಳವಾಗುತ್ತ ಬಂದುದರಿಂದ, ಆಯವನ್ನು ಹೆಚ್ಚಿಸಿಕೊಳ್ಳದೆ ಮೋಸವಾದೀತೆಂದು ಪೈನಾನ್ಸ ಮೆಂಬರರು ಎನ್ನುತ್ತಾರೆ ವ್ಯಾಪಾರವು ಅಭಿವೃದ್ಧಿ ಹೊಂದುತ್ತಿದ್ದು, ದವಸಗಳ ಬೆಲೆಯೂ ಏರುತ್ತ ಬರುತ್ತಿರುವಾಗ, ಸಂಪದಭಿವೃದ್ಧಿಯೇ ಎಲ್ಲೆಲ್ಲಿಯೂ ಸೂಚಿತವಾಗಿರುವಾಗ, ಈ ಬಿಲ್ಲನ್ನು ಹೂಡದಿದ್ದರೆ ಅಲ್ಲಿಗೇ ಪ್ರಳಯ ಕಾಲ ಬಂದೊದಗುವುದೆನ್ನುವುದರಲ್ಲಿ ಅರ್ಥವಿಲ್ಲ ರೆವಿನ್ಯೂ ಮೆಂಬರರ ಮತ್ತು 'ಇತರ' ಜನ ಮೋಬಿಕರ ಭಾಷಣಗಳಾದರೂ ಬಿಲ್ಲಿನ ಅಗತ್ಯವನ್ನೇನೂ ಸಮರ್ಥಿಸುವುದಿಲ್ಲವಲ್ಲ!

ಮುಂದೆ ಎಂದಾದರೂ ಹೊಗೆಸೊಪ್ಪಿನ ಮೇಲೆ ಕರ ಹೊರಿಸುವ ಅಗತ್ಯವಿರಬಾರದೆಂದಿಲ್ಲ, ಈಗ ಇದೆಯೆ? ಹೇಗಿದ್ದರೂ, ಈ ಬಿಲ್ಲನ್ನು ಈಗ ಸಿಲೆಕ್ಟ್ ಕಮಿಟಿಗೆ ಪರ್ಯಾಲೋಚನೆಗಾಗಿ ಒಪ್ಪಿಸಿ ಕೊಟ್ಟಿದ್ದಾರೆ ಗುತ್ತಿಗೆ ಒಪ್ಪಿಸಿ ಹೊಗೆಸೊಪ್ಪಿನ ಸುಂಕ ವಸೂಲು ಮಾಡಿಕೊಳ್ಳುವುದೆ? ಎಂಬದೊಂದು ಕಠಿಣ ಪ್ರಶ್ನೆಯಿದೆ ಇದರ ಉತ್ತರವೇನೋ ಸಿಲೆಕ್ಟ್ ಕಮಿಟಿಯವರು ತಿಳಿಸಬೇಕಾಗಿದೆ ಈ ಕಮಿಟಿಯು ಕೇವಲವಾಗಿ ಲೈಸನ್ಸ್‌ಗಳನ್ನು ಮಾತ್ರ ಕೊಡುವಂತಹ ಸೂತ್ರಗಳನ್ನು ಮಾಡಿ ಕೊಡಬಹುದು, ಹಾಗಿದ್ದರೂ, ಈ ಬಿಲ್ಲು ಸಾರ್ವಜನಿಕ ವಿಮರ್ಶೆಗಾಗಿ ಒಪ್ಪಿಸಿಕೊಟ್ಟುದಲ್ಲ; ಸದ್ಯದಲ್ಲಿ ಅನಾವಶ್ಯಕವಾಗಿದೆ, ಮಂಜೂರಾದರೂ, ಅದನ್ನು ಮಂಜೂರ್ಮಾಡುವ ಅಧಿಕ ಸಂಖ್ಯೆಯಲ್ಲಿ ಸೇರುವ ಸದಸ್ಯರು ತಮ್ಮ ವೋಟರರ ಮನೋಭಿಪ್ರಾಯವನ್ನು ಐದು ವರ್ಷಗಳ ಹಿಂದೆಯೇನೋ ತಿಳಿದವರು ವಿನಾ ಸದ್ಯ ವಿಚಾರ ತಿಳಿದವರಲ್ಲ,—ಎಂಬ ಈ ಕಾರಣಗಳಿಂದ ಈ ಬಿಲ್ಲು ಈಗಲೆ ಈ ಕೌನ್ಸಿಲು ಮುಂದೆ ಬಂದುದು ವಿಕಟವಾಗಿಯೆ ತೋರುತ್ತಿದೆ.

ಸ್ಫುಟವಿಚಾರಗಳು

ಪ್ರಜಾಧರ್ಮ ಶಿಕ್ಷಣವೇ

ವಿಶ್ವವಿದ್ಯಾಲಯಗಳ ಮುಖ್ಯ ಧ್ಯೇಯವಾಗಿರತಕ್ಕದೆಂದು ಇತ್ತೀಚೆಗೆ ಎಲ್ಲೆಲ್ಲಿಂದಲೂ ಸಾರಲಾಗುವ ವಿಚಾರವನ್ನೆ ಮೈಸೂರಿನ ದಿವಾನರೂ ಅನ್ನಾಮಲೆ ವಿಶ್ವವಿದ್ಯಾಲಯದಲ್ಲಿ ಸಾರಿದರು. ಜನ್ಮಭೂಮಿಯ ಅಭ್ಯುದಯವು ಕ್ರಮೇಣವಾಗಿ ಮುಂದಕ್ಕೆ ಸಾಗುವುದಕ್ಕೆ ಗ್ರೆಜ್ಯುವೇಟ ಸ್ತ್ರೀಪುರುಷರು ಹೇಗೆ ಸಹಾಯಕರೂ ಸಾಧಕರೂ ಆಗತಕ್ಕುದು ಎಂಬುದೇ ವಿಚಾರಿಗಳೆಲ್ಲರ ಮುಂದೆ ಈಗ ಇರತಕ್ಕ ಪ್ರಶ್ನೆಯಾಗಿದೆ. ಜನಾಂಗದ ಜೀವನಕ್ಕೇನೂ ಸಂಬಂಧವಿಲ್ಲದ ಶಿಕ್ಷಣವನ್ನು ಬ್ರಿಟಿಷ ಯುನಿವರ್ಸಿಟಿಗಳೂ ಸಹ ಕೊಡುತ್ತಿವೆ ಎಂಬ ಆಕ್ಷೇಪವು ಇಂಗ್ಲೆಂಡಿನಲ್ಲಿ ಕೇಳಬರುತ್ತಿರುವಾಗ, ಸಮಾಜಸೇವೆ ಮಾಡಲು ಯುವಕ ಯುವತಿಯರಲ್ಲಿ ಜವಾಬುದಾರಿಯೇನಿದೆ ಎಂಬುದನ್ನು ಅವು ಬೋಧಿಸುವುದಿಲ್ಲವಾಗಿ ವಿಮರ್ಶಕರೆನ್ನುವಾಗ, ನಮ್ಮಲ್ಲಿನ ಅನುಸರಣಾಪ್ರಿಯ ವಿಶ್ವವಿದ್ಯಾಲಯಗಳೂ ಎಚ್ಚರ ತೆಗೆದುಕೊಳ್ಳಬೇಡವೇ?

ದೇಶಾಭ್ಯುದಯ

ಕೈಗಾರಿಕೆಗಳ ಉನ್ನತಿ ಸಾಂಪತ್ತಿಕ ಪ್ರಗತಿ ನಿರುದ್ಯೋಗತೆಯ ಸಮಸ್ಯೆ, ಜನಾಂಗದ ದಾರಿದ್ರ್ಯ ಮೊದಲಾಗಿರುವ ವಿಷಯಗಳನ್ನು ಶಿಕ್ಷಿತರು ಚೆನ್ನಾಗಿ ಆಲೋಚಿಸಬೇಕಾಗಿದೆ. ವಿದ್ಯಾಲಯಗಳಿಗೂ ಈ ವಿಷಯಗಳಿಗೂ ಯಾವ ಸಂಬಂಧವೂ ಇಲ್ಲವೆ? ಯುವಕರ ತರಬೇತು ಈ ಸಮಸ್ಯೆಗಳನ್ನೆಲ್ಲ ಬಿಡಿಸಿ, ದೇಶಾಭ್ಯುದಯವನ್ನೆ ಸಾಧಿಸುವಂತೆ ಶಿಕ್ಷಣಕ್ರಮವು ತಿದ್ದುಪಡಿಹೊಂದದೆ ಯಾವ ಸಮಸ್ಯೆಯನ್ನು ಸರಿಯಾಗಿ ಇತ್ಯರ್ಥಗೊಳಿಸುವುದು ಸುಲಭವಾಗಲಾರದು

ಭಾಷಾಶಿಕ್ಷಣ

ಇಂಗ್ಲಿಷನ್ನು ಅಭ್ಯಾಸಮಾಡುವುದಂತೂ ಆವಶ್ಯಕವಾಗಿದೆ; ಸುಶಿಕ್ಷಿತರು ಮಾತೃಭಾಷಾಭಿವೃದ್ಧಿಗಾಗಿ ಪೇಚಾಡುವುದೂ ಅಷ್ಟೆ ಅಗತ್ಯವಾಗಿದೆ ಕಾಲೇಜು ಶಿಕ್ಷಣದ ಮೂಲಕವಾಗಿ ತಾವು ಗಳಿಸಿಕೊಂಡ ಅಮೂಲ್ಯ ಜ್ಞಾನ ಸಂಪತ್ತನ್ನು, ತಮಗಾಗಿ ದುಡಿಯುದ ಅಥವಾ ತಮ್ಮಿಂದ ನಿರೀಕ್ಷಿಸಿರುವ ಆಶಿಕ್ಷಿತ ವರ್ಗಕ್ಕೆ ಅವರ ಮಾತೃಭಾಷೆಯ ಮೂಲಕ ವರ್ಗಾಯಿಸಿ ಕೊಡಲು ಸುಶಿಕ್ಷಿತರಿಗೆ ಅಸಾಧ್ಯವಾದಲ್ಲಿ ಇವರು ಶಿಕ್ಷಣಹೊಂದುದೂ, ಶಿಕ್ಷಣಹೊಂದಲು ಕಷ್ಟಕ್ಲೇಷಗಳನ್ನು ಇತರರು ಸಹಿಸಿದುದೂ ನಿರರ್ಥಕವಾದೀತು ಎಂದೇ ಹೇಳಬೇಕಾಗಿದೆ

ಎರಡು ಸಂಕಟಗಳು

ಮೊದಲನೆಯದಾಗಿ, ಸಮಾಜವಾದಾಗಿ ಏಳಿಗೆ ಸಾಧಿಸುವ ಸ್ಪರ್ಧೆ ಮತ್ಸರ ಹೋರಾಟಗಳ ಸಂಕಟ, ಇದರ ಪರಿಣಾಮ ಫಲಗಳಾಗುವುವೆಂದು ಪ್ರತಿಯೊಬ್ಬರೂ ತಿಳಿದೇ ಇರುವರು ಇದರಂತೆ ಎರಡನೆಯದಾಗಿ, ಪ್ರಾಂತಿಕವಾಗಿ ಪ್ರತ್ಯೇಕತೆಯ ವಿಚಾರಗಳು, ಪ್ರಾಂತ್ಯಗಳೊಳಗೆ ವೈಮನಸ್ಸು, ಮತ್ಸರ, ಸ್ಪರ್ಧೆ ಇವೆರಡರ ದೆಸೆಯಿಂದಾಗಿ, ಇಡೀ ದೇಶಕ್ಕೂ ಇಡೀ ಜನಾಂಗಕ್ಕೂ ವಿಪರೀತವಾದ ವಿಪತ್ತು ಒದಗಿದೆ, ಮುಂದೆ ಇದು ಹೆಚ್ಚುತ್ತ ಹೋಗುವುದಾಗಿದೆ ಹೊಸ ಆಕ್ಟಿನನ್ವಯ, ರಾಜಕೀಯದಲ್ಲಿ ನಾವು ಮುಂದರಿಯುವಾಗ, ಇವೆರಡು ಕಂಟಕಗಳು ನಮ್ಮನ್ನು ಎದುರಾಗದೆ ಇರಲಾರವು ಅಂತಹ ಸಂದರ್ಭದಲ್ಲಿ ಅವನ್ನು ಅಣಗಿಸಲು ಈಗಿನಿಂದಲೇ ಸಿದ್ಧರಾಗುವ ಹಾಗೆ ಶಿಕ್ಷಿತರೂ ವಿಚಾರಪರರೂ ಅಧ್ಯರೂ ಬಹಳವಾಗಿ ಮನೋವೃತ್ತಿಯನ್ನು ಬದಲಾಯಿಸಿ, ದೇಶಹಿತದ ಧ್ಯೇಯವೊಂದನ್ನೆ ಮುಂದಿಟ್ಟುಕೊಂಡು ಮುಂದರಿಯಬೇಕಾಗಿದೆ

ಕಾಫೀ ವ್ಯಾಪಾರ

ಮೈಸೂರಿನ ವಾಣಿಜ್ಯ ಶಾಖೆಯ ಪ್ರತಿನಿಧಿಗಳು ಲಂಡನಿನಿಂದ ಪ್ರಕಟಿಸಿರುವ ಒಂದು ಪತ್ರದಲ್ಲಿ,—ಕಾಫಿಯನ್ನು ಇಂಗ್ಲೆಂಡು ಮತ್ತು ಯುರೋಪುಗಳಲ್ಲಿ ಹೇಗೆ ಮಾರಾಟಕ್ಕೆ ತರಬೇಕೆಂದೂ, ಅದರ ಪ್ರಚಾರವು ಹೆಚ್ಚುವಂತೆ ಹೇಗೆ ಸಾಧಿಸಬೇಕೆಂದೂ ತಿಳಿಸಿರುವರು ಪೂರ್ವ ಆಫ್ರಿಕದಿಂದ ಕಾಫಿ ಬೀಜವು ಈಗ ಅಲ್ಲೆಲ್ಲ ಬಹಳವಾಗಿ ವಿಕ್ರಯವಾಗುತ್ತಿದೆ. ಹಿಂದೀಯರ ಕಾಫಿಗೆ ವಿಕ್ರಯ ಕಡಿಮೆ. ನಮ್ಮ ಜಿಲ್ಲೆಗೂ ಮೈಸೂರಿಗೂ ಇದು ಕೊಡಗಿನ ಹಾಗೆಯೆ ಅಗತ್ಯವಾದ ವ್ಯಾಪಾರ. ಈಗ ಹೇಗೂ 'ಕಾಫಿ ಸೆಸ್' ವಿಧಿಸಿ, ಅದರಿಂದ ಪ್ರಚಾರ ಕಾರ್ಯ ಮಾಡಲು ಪ್ರಯತ್ನಿಸುವಾಗ, ಚಾ-ಪ್ರಚಾರಕ್ಕಿಂತ ಚೆನ್ನಾಗಿ, ನಮ್ಮವರೇ ಆಗಿರುವ ಪೂರ್ವ ಆಫ್ರಿಕದ ವ್ಯಾಪಾರಿಗಳೊಡನೆ ಸೇರಿ, ನಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳಲು ನಾವೇಕೆ ಪ್ರಯತ್ನಿಸಬಾರದು? ಕಾಫಿ ವ್ಯಾಪಾರವು ಕೆಟ್ಟಿರುವುದು ನಿಜ; ಪುನಃ ಅದನ್ನು ಉಜ್ಜೀವನಗೊಳಿಸಲು ಪ್ರಯತ್ನಿಸದೆ, ಹೋಯಿತೆಂದೇ ನಿಟ್ಟುಸಿರಿಡುವುದರಲ್ಲಿ ಪ್ರಯೋಜನವೇನಿದೆ?

ಗ್ರಾಮಸ್ಥರ ಸುಖಜೀವನಕ್ಕಾಗಿ

ಇಂಗ್ಲೆಂಡಿನಲ್ಲಿ ಮಾಡುತ್ತಿರುವ ಪ್ರಯತ್ನಗಳನ್ನು ನಾವೂ ಅನುಸರಿಸುವುದು ಉತ್ತಮವೆಂದು ಅಚ್ಚ ಸ್ವದೇಶೀ ಪಕ್ಷಪಾತಿಗಳೂ ಹೇಳುತ್ತಿರುವರು. ಗ್ರಾಮಸ್ಥರ ಜೀವನದಲ್ಲಿ ಮಾಯವಾಗಿ ಹೋಗಿರುವ ನಮ್ಮ ಸಂಸ್ಕೃತಿಯ ಅಂಗಗಳು ಎಷ್ಟೋ ಇವೆ. ಅವನ್ನು ಪುನಃ ರೂಢಿಗೆ ತರಬೇಕಾಗಿ ಇಂಗ್ಲೆಂಡಿನಲ್ಲಾಗುವಂತೆ ಇಲ್ಲಿಯೂ ಪ್ರಯತ್ನಗಳಾಗಬೇಕಾಗಿದೆ. ಗ್ರಾಮಗಳಲ್ಲಿ ಆಯಾ ಗ್ರಾಮಸ್ಥರಿಗೆ ಅತ್ಯಾವಶ್ಯಕವಾದ ಒಡವೆ ವಸ್ತುಗಳನ್ನು ಅಲ್ಲೇ ತಯಾರಿಸುವ ಹಾಗೂ ನಿರ್ಮಾಣಮಾಡುವ ಕಸಬಿನವರಿದ್ದರು ಅವರನ್ನು ಈಗಲಾದರೂ ಒಂದು ವ್ಯವಸ್ಥೆಗೆ ತಂದು, ಹೊಸ ಮಾದರಿಗಳನ್ನು ತೋರಿಸಿ, ಅವುಗಳಂತೆ ತಯಾರಿಸಲು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು, ಆ ಕೈಗಾರಿಕೆಗಳ ಉತ್ಪನ್ನಗಳನ್ನು ಮಾರಾಟಮಾಡುವುದೊಂದು ಕಾರ್ಯಕ್ರಮವಾಗಿದೆ ಗ್ರಾಮಸ್ಥರ ಮನಸ್ಸೂ ದೇಹಗಳೂ ಪುಷ್ಟಿಹೊಂದುವ ಹಾಗೆ, ವ್ಯಾಯಾಮ ಆಟ ವಿನೋದಗಳೂ ಗಾಯನ ನಾಟಕ ಮೊದಲಾದುವುಗಳೂ ಅಗತ್ಯವಾಗಿವೆ ಹಿಂದಣ ಬಯಲಾಟಗಳೂ, ಕುಣಿತಗಳೂ, ಪುರಾಣ ವಾಚನ ಮೊದಲಾದುವೂ ಚೆನ್ನಾಗಿ ರೂಢಿಗೆ ಬರುವಂತಾದಲ್ಲಿ, ಜಾತಿಭೇದವು ಹೇಗೂ ಇರಲಿ, ಅದರ ದೆಸೆಯಿಂದಾಗುವ ಮನೋಮಾಲಿನ್ಯವು ಮಾತ್ರ ಕೂಗಲಾರದೆಂದೇ ಇಂಗ್ಲಿಷರಲ್ಲಿ ಒಲ್ಲವರು ಎನ್ನುವರು. 'ರಥೋತ್ಸವ, ಅಯನಮೊದಲಾದುವು ನಡೆದಾಗ, ಸಾವಿರಾರು ಜನರು ಸೇರಿದಲ್ಲಿ 'ಮೇಲು ಕೀಳು' ಇದ್ದುವಾದರೂ, ಅವುಗಳಿಂದಾದ ವೈಮನಸ್ಸು ಇದ್ದಿಲ್ಲ ಒಂದೇ ಬಳಗದಂತೆ ಎಲ್ಲರೂ ನೆರೆದು ಬರುತಿದ್ದರು ಈ ಯುಗದ ಸುಧಾರಣೆಯೊಡನೆ ಇಂತಹ ವಿನೋದಾದಿ ಕೂಟಗಳು ಹಳ್ಳಿಗಳಲ್ಲಿ ನೆರೆಯಲಾರವಾದರೆ, ಶಿಕ್ಷಿತರ ಮನಸ್ಸು ಹಳ್ಳಿಗಳ ಕಡೆಗೆ ತಿರುಗಲಾರದೆಂದೇ' ಗ್ರಾಮಾಭ್ಯುದಯದ ಏರ್ಪಾಡು ಮಾಡುವವರಿಗೆ ಸೂಚನೆಗಳಾಗಿವೆ.

ನಮ್ಮ ಜಿಲ್ಲೆಯ ಕಬ್ಬಿನ ಪೈರು

ಕೌನ್ಸಿಲಿನಲ್ಲಿ ಪ್ರಶ್ನೋತ್ತರ ನಡೆದುದರಿಂದ ಇಷ್ಟು ವಿಷಯವನ್ನು ಸಂಗ್ರಹಿಸಲು ಬರುತ್ತಿದೆ ಕಳೆದ ವರ್ಷ ೩,೭೦೦ ಎಕ್ರೆ ಸ್ಥಳದಲ್ಲಿ ಕಬ್ಬು ನಡಲಾಗಿದ್ದಿತು, ಈ ವರ್ಷ ಇದು ೪೦೦೦ ಎಕ್ರೆಯಾಗಿದೆ ಬತ್ತ ಬೆಳೆಸುವ ೨೮೦ ಎಕ್ರೆ ಜಮೀನನ್ನು ಹೊಸದಾಗಿ ಈಗ ಕಬ್ಬು ಬೆಳೆಸಲು ವಿನಿಯೋಗಿಸಿದ್ದಾರೆ. ಮಂಗಳೂರಿನಿಂದ ಹತ್ತು ಮೈಲು ವಿಸ್ತೀರ್ಣದಲ್ಲಿ ೬೦೦ ಎಕ್ರೆ, ಉಡುಪಿಯಿಂದ ಅಷ್ಟೇ ದೂರದಲ್ಲಿ ೩೦೦ ಎಕ್ರೆ, ಜಮೀನಿನಲ್ಲಿ ಕಬ್ಬು ಬೆಳೆಸುತ್ತಾರೆ ಬತ್ತದ ಪೈರಿಗಿಂತ ಕಬ್ಬಿನ ಪೈರು ಲಾಭದಾಯಕವೆಂದು ತೋರಿದಲ್ಲಿ ಜನರು ಕಬ್ಬನ್ನೇ ಬೆಳೆಸಬಹುದಾಗಿ ಕೃಷಿ ಇಲಾಖೆಯವರೂ ಉತ್ತೇಜನ ಕೊಡುವರು ಎರಡು ಹೊಸ ತೆರದ ಕಬ್ಬು ಜಾತಿಗಳನ್ನು ಇಲಾಖೆಯವರ ಸೂಚನೆಯಿಂದ ಇಲ್ಲಿ ಬೆಳೆಸುತ್ತಾರೆ ಸುಮಾರು ೨೦ ನಮೂನೆಯ ಕಬ್ಬಿನ ಜಾತಿಗಳನ್ನು ತಳಿಪರಂಬದಲ್ಲಿ ಪರೀಕ್ಷಾರ್ಥವಾಗಿ ಬೆಳೆಸಿ, ಪರಿಣಾಮ ನೋಡುತ್ತಿದ್ದಾರೆ. ೨೧೩ನೇ ನಂಬ್ರದ ಕಬ್ಬಿನ ಜಾತಿಯನ್ನು ಹೆಚ್ಚಾಗಿ ಬೆಳೆಸಬಹುದಾಗಿ ಅಂದಾಜು ತೋರುತ್ತಿದೆ. ಶ್ರೀ ಎಮ್. ಎಸ್. ಶ್ರೇಷ್ಠರ ಕೇಳಿದ ಪ್ರಶ್ನೆಗಳಿಗೆ ಇಷ್ಟು ಅನುಭವ ದೊರೆತಿದೆ

ಮಂಗಳೂರು.

ತಾರೀಖು ೩-೧೧-೩೫ರಲ್ಲು ಕೂಡಿದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯ ವರದಿ— ೧, ದಶಂಬರ ತಾ. ೨೮ರಲ್ಲು ಕಾಂಗ್ರೆಸ್ ವರ್ಧಂತ್ಯೋತ್ಸವವನ್ನು ಈ ಕೆಳಗಿನ ರೀತಿಯಲ್ಲಿ ನೆರವೇರಿಸಬೇಕಾಗಿ ತಾಲೂಕು ಕಮಿಟಿಯವರಿಗೆ ತಿಳಿಸಬೇಕಾಗಿ ನಿಶ್ಚಯಿಸಲಾಯಿತು. ಬೆಳಗ್ಗೆ ೫ ಗಂಟೆಗೆ ಪ್ರಭಾತಫೇರಿ, ೮ಗೆ ರಾಷ್ಟ್ರ ಧ್ವಜವಂದನೆ, ಸಾಯಂಕಾಲ ಮೆರವಣಿಗೆ ಮತ್ತು ಸಭೆ, ಸಭೆಯಲ್ಲಿ ವಂದೇ ಮಾತರಂ ಹಾಡುವುದು. ಅಧ್ಯಕ್ಷರ ಸಂದೇಶವನ್ನು ಓದಿಹೇಳುವುದು, ಕಾಂಗ್ರೆಸಿನ ವಿಷಯ ಭಾಷಣಗಳು, ಈ ನಡುವೆ ರಾಷ್ಟ್ರಧ್ವಜಗಳನ್ನೂ ಖಾದಿಯನ್ನೂ ಮಾರಾಟಮಾಡುವುದು. ರಾತ್ರಿ ದೀಪೋತ್ಸವ, ಜಿಲ್ಲೆಯ ಬಗ್ಗೆ ಕಾಂಗ್ರೆಸ್ ಮಂದಿರವನ್ನೂ ಒಂದು ಪುಸ್ತಕಭಂಡಾರವನ್ನೂ ವರ್ಧಂತ್ಯುತ್ಸವದ ಸ್ಮಾರಕವಾಗಿ ಸ್ಥಾಪಿಸಬೇಕಾಗಿ ನಿಶ್ಚಯಿಸಲಾಯಿತು. ಇದರ ಬಗ್ಗೆ ನಿಧಿಯನ್ನು ಕೂಡಿಸುವರೆ ಜಿಲ್ಲೆಯ ಪ್ರಮುಖರ ಒಂದು ಕಮಿಟಿಯು ನೇಮಕವಾಯಿತು. ಹೊಸ ತಾಲೂಕು ಕಮಿಟಿಗಳನ್ನು ದಶಂಬರ ತಾ. ೧೫ರಲ್ಲು ರಚಿಸಬೇಕಾಗಿ ತಾಲೂಕಿನವರಿಗೆ ತಿಳಿಸಬೇಕಾಗಿಯೂ ಅಲ್ಲದೆ ಕಾಂಗ್ರೆಸಿಗೆ ಪ್ರತಿನಿಧಿಗಳನ್ನೂ ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳನ್ನೂ ಆರಿಸುವುದು ಕೂಡಾ ಅದೇ ದಿನ ಮಾಡತಕ್ಕದ್ದಾಗಿ ನಿರ್ಣಯಿಸಲಾಯಿತು. ಈ ವರೆಗಿನ ಜಮಾಖರ್ಚಿನ ಲೆಕ್ಕವನ್ನು ಓದಲಾಯಿತು. ಈ ವರೆಗಿನ ಲೆಕ್ಕವನ್ನು ಪರಿಶೋಧಿಸಿ ಈ ತಿಂಗಳ ೧೫ನೇ ತಾರೀಕಿನೊಳಗಾಗಿ ಜಿಲ್ಲೆಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ನಿರ್ಣಯವಾಯಿತು. ಪರಿಶೋಧಿಸುವರೆ ಯು. ಶ್ರೀನಿವಾಸರಾಯರನ್ನು ನೇಮಿಸಲಾಯಿತು. ಶ್ರೀ ಬಿ ಭೋಜರಾಯರನ್ನು ಖಜಾಂಚಿಯಾಗಿ ಚುನಾಯಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಯಾವತ್ತು ಯಕ್ಷಗಾನ ಕಲಾಭಿಮಾನಿಗಳ ಒಗ್ಗಟ್ಟನ್ನು ಸಾಧಿಸಲು ಇದೇ ಒಕ್ಟೋಬರ ತಾ ೩೦ನೆಯ ದಿನ ಗಂಟೆ ೪-೩೦ಕ್ಕೆ ಬಾಲಸಾಹಿತ್ಯ ಮಂಡಲದ ಬಿಲ್ಡಿಂಗಿನಲ್ಲಿ ಶ್ರೀ ಉಳ್ಳಾಲ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಕೆಲವು ಪ್ರಾಮುಖ್ಯ ನಿರ್ಣಯಗಳು ಮಂಜೂರಾದುವು.

ತಾ ೧೬-೧೧-೧೯೩೫ರಲ್ಲಿ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ೪ ಗಂಟೆಗೆ ಯಕ್ಷಗಾನಾಭಿಮಾನಿಗಳ ಒಂದು ಮಹಾಸಭೆಯನ್ನು ಜರಗಿಸಿ, ಶಿಷ್ಟಮೂಲಕ ಯಕ್ಷಗಾನ ಕಲೆಯ ಅಭಿವೃದ್ಧಿಗಾಗಿ ವ್ಯವಸ್ಥಿತ ರೀತಿಯಿಂದ ಒಂದು ಸಂಘದ ಸ್ಥಾಪನೆಗಾಗಿ ಈ ಕಮಿಟಿಯು ಜಿಲ್ಲೆಯ ಮಹನೀಯರ ಆಮಂತ್ರಣದಲ್ಲಿ ವಿ. ರಾಮಶರ್ಮ ಇವರಿಗೆ ಅಧಿಕಾರವನ್ನು ಕೊಟ್ಟಿರುತ್ತದೆ. ಅದೇ ದಿನ ರಾತ್ರಿ ಗಂಟೆ ೯ಕ್ಕೆ ಸದರಿ ಕಟ್ಟಡದಲ್ಲಿ ಶ್ರೀ ಬಲಿಪ ನಾರಾಯಣ ಭಾಗವತರ ಹಾಡುಗಾರಿಕೆ, ಕೆಮ್ಮಣ್ಣ ನಾರಣಪ್ಪನವರ ಮೃದಂಗವಾದನ ಇವುಗಳಿಂದ "ಸೇತುಬಂಧನ" ಎಂಬ ಪ್ರಸಂಗವನ್ನು ಶ್ರೀಯುತರಾದ ಶಂಕರನಾರಾಯಣ ಶಾಸ್ತ್ರಿಗಳು ಸುಬ್ರಾಯ ಆಚಾರಿಗಳು, ನಾರಾಯಣ ಕಿಲ್ಲೆಯವರು ಬಾಲಕೃಷ್ಣರಾಯರು, ಕೆ. ಪಿ. ವೆಂಕಪ್ಪ ಶೆಟ್ಟರು, ಬಡಗಬೈಲು ಪರಮೇಶ್ವರಯ್ಯನವರು ಇವರೇ ಮೊದಲಾದ ಜಿಲ್ಲೆಯ ಉತ್ತಮ ಪಾತ್ರವರ್ಗದವರ ಅರ್ಥನಿತ್ವರೆಯಿಂದ ಯಕ್ಷಗಾನ ಸಮಾರಂಭವನ್ನು ಜರಗಿಸಲಿರುವುದರಿಂದ ಯಕ್ಷಗಾನಾಭಿಮಾನಿಗಳೆಲ್ಲರೂ ಆ ದಿನ ೮ ಗಂಟೆಕ್ಕೆ ಬಂದು ತಮ್ಮ ಸಹಾನುಭೂತಿಯನ್ನು ತೋರಿಸಿ ಅನಂದಗೊಳಿಸಬೇಕಾಗಿ ವಿನಂತಿ. ಯಕ್ಷಗಾನಾರಂಭದಲ್ಲಿ ಶ್ರೀ ನಾರಾಯಣ ಕಿಲ್ಲೆಯವರ ಭಾಷಣವೂ ಶ್ರೀಯುತ ಉಡುಪರ ಪ್ರಹಸನವೂ ಇರುವುದು' ಎಂದು ವಿ. ರಾಮಶರ್ಮರು ತಿಳಿಸುತ್ತಾರೆ.

ಮಂಗಳೂರು ಪ್ರೆಸ್ಸಿನ ಕೆಲಸಗಾರರ ಪೈಕಿ ಇಬ್ಬರು ಯುವಕರು ಸಾಯಂಕಾಲ ಕೆಲಸದಿಂದ ಬಿಡುವು ದೊರೆತ ಕೂಡಲೇ ಹೊರಗೆ ಬಂದವರು ಪರಸ್ಪರ ಜಗಳಮಾಡಿದರು. ಜಗಳಕ್ಕೆ ಹೇತುವು ಏನು. ಆಚಾರಿಯು ಕ್ರೈಸ್ತ ತರುಣನ ಮೇಲೆ ಚಾಡಿ ಎನಿಸೆನೆಂದು ಕ್ರೈಸ್ತನು ಆಚಾರಿಯನ್ನು ಜರಿದು ಮಾತಾಡಿದನು. ಮಾತುಗಳ ಮೇಲೆ ಮಾತು ಬಂದು ಕಡೆಗೆ ಕೈಗಳಿಂದ ಹೊಡೆಕೊಂಡರು. ಕಡೆಗೆ ಅದೂ ಸಾಲದೆ ಆಚಾರಿಯು ಮುಳಿಯಿಂದ ಕೋಪದಿಂದ ಕ್ರೈಸ್ತ ತರುಣನನ್ನು ಹೊರಿಯಿಂದ ತಿವಿದನು. ಇವ್ವರಲ್ಲಿ ಸುಮಾರು ಜನರು ಅಲ್ಲಿಗೆ ಬಂದು ಕ್ರೈಸ್ತ ತರುಣನನ್ನು ಆಸ್ಪತ್ರೆಗೆ ಒಯ್ದರು. ಆಚಾರಿಯನ್ನು ಕೈದುಮಾಡಿರುತ್ತಾರೆ. ವಿಚಾರಣೆಯು ನಡೆಯಲಿದೆ.

ಸೆಂಟ್ರಲ್ ಬೇಂಕ್ ಲಿಮಿಟೆಡ್ ಶಲಾಯಿ

ಎಂಬೀ ತಿರುವಾಂಕೂರಿನ ಪ್ರಸಿದ್ಧ ಬೇಂಕಿಂಗ್ ಸಂಸ್ಥೆಯು ತನ್ನ ಶಾಖೆಯೊಂದನ್ನು ಇದೇ ತಾ ೪ನೇ ಸೋಮವಾರ ಸಾಯಂಕಾಲ ಘಂಟೆ ೫ಕ್ಕೆ ಬಹಳ ವಿಜೃಂಭಣೆಯಿಂದ ಬಂದರ ರೋಡಿನಲ್ಲಿ ತೆರೆಯಿತು. ಪಟ್ಟಣದ ಸಭ್ಯ ಗೃಹಸ್ಥರೆಲ್ಲರೂ ಸ್ಥಾಪನಾ ಸಮಾರಂಭಕ್ಕೆ ಚಿತ್ತೈಸಿದ್ದರು. ಮಂಗಳೂರಿನ ಸನ್ಮಾನ್ಯ ಬಿಶೋಪರಾದ ಡಾ। ವಿ. ಆರ್. ಫೆರ್ನಾಂಡಿಸ್ ಡಿ. ಡಿ.ರವರು ಈ ಸ್ಥಾಪನೆಯ ಶುಭ ಕಾರ್ಯವನ್ನು ಆಗ ಮಾಡಿಸಿ ಸಂಸ್ಥೆಯನ್ನು ಹರಸಿದರು. ಬಳಿಕ ಸತ್ಕಾರವಾದ ಬಳಿಕ ಸ್ವಾಗತ ಭಾಷಣವೂ, ಆ ಮೇಲೆ ಬಿಶಪರ ಸರಸವಾಣಿಯೂ, ಸಮಯೋಚಿತವಾದ ಶಾಖಾರಂಭದ ಉಪನ್ಯಾಸವೂ, ಡಾ। ಎಫ್. ಎಕ್ಸ್ ಡಿ' ಸೋಜ ಎಂ ಎ. ಎಲ್. ಎಲ್. ಬಿ ಬಿ. ಸಿ ಎಸ್. (ನಿವೃತ್ತ) ಮೆಂಬರ ಲೆಜಿಸ್ಲೇಟಿವ್ ಕೌನ್ಸಿಲ್ ದಿಲ್ಲಿ ಇವರ ಮತ್ತು ನಗರಸಭಾ ಅಧ್ಯಕ್ಷರಾದ ಡಾ। ಕೆ. ವಿಠ್ಠಲ ಶೆಟ್ಟರ ಹೃದಯಂಗಮ ಭಾಷಣಗಳೂ ಸಭಿಕರನ್ನು ಆಹ್ಲಾದಗೊಳಿಸಿದುವು. ಮಿ। ಸಿ ಜೆ ವಾರ್ಕರ ಇವರು ಮಾನ್ಯ ಅಧ್ಯಕ್ಷರಿಗೂ, ಭಾಷಣಕಾರರಿಗೂ ಉಪಸ್ಥಿತರಾದ ಸಭಿಕರಿಗೂ ಧನ್ಯವಾದಗಳನ್ನಿತ್ತರು. ಸುಮಾರು ೭೫ ಮಂದಿ ಆಢ್ಯ ಪುರುಷರು ಸಂಸ್ಥೆಗೆ ಪತ್ರಗಳನ್ನು ಕಳುಹಿಸಿದ್ದಾರೆ.

ಕೆಲವರ ಅಭಿಪ್ರಾಯಗಳು "ಬೇಂಕಿನ ಲೆಕ್ಕಪತ್ರಗಳನ್ನೂ, ಅದು ತನ್ನ ದೇಶದಲ್ಲಿ ಜನರ ಅಭ್ಯುದಯವನ್ನು ಬಯಸಿದ ರೀತಿಯನ್ನು ಕಂಡು ಇಲ್ಲಿಯವರೂ ಅದೇ ರೀತಿಯ ಉಪಯೋಗವನ್ನು ಈ ಬೇಂಕಿನಿಂದ ಪಡೆಯಬಹುದೆಂದು ನಾನು ಧೈರ್ಯಪೂರ್ವಕವಾಗಿ ಹೇಳಬಲ್ಲೆನು. ಜನನದಿಂದ ಈವರೆಗಿನ ಮನುಷ್ಯನಿಗೆ ಸುಲಭವಾಗುವಂತೆ ಈ ಬೇಂಕು ಸ್ಥಾಪಿತವಾದ ೬ ವರ್ಷಗಳಲ್ಲಿ ಸುಯೋಗ್ಯವಾದುದು ದೊಡ್ಡದಾಗಿ ಈಗ ಇದಕ್ಕೆ ಶಾಖೆಗಳು ಬಂದಿವೆ. ಅರ್ಥಾತ್ ವರ್ತಮಾನದ ಅದರ ಪ್ರಗತಿಯು ಅಭಿವೃದ್ಧಿ ಹೊಂದುತ್ತಾ ಬಂದು ಟ್ರೈವಂಕೂರಿನ ಬೇಂಕುಗಳಲ್ಲಿ ಶೈತಿಯ ಸ್ಥಾನವನ್ನು ಅದು ಪಡೆದಿದೆ ಎಂದು ಹೇಳಲು ಕೊಂಬ ಸಂತೋಷ"

ರಾಜಸಭಾ ಭೂಷಣ ಕೆ. ಚಂದ್ರಿ,
ಮಾಜಿ ಕೌನ್ಸಿಲ್ ಮೆಂಬರ್, ಮೈಸೂರು

ದಿ ಸೆಂಟ್ರಲ್ ಬೇಂಕ್ ಲಿಮಿಟೆಡ್ ಶಲಾಯಿ ಇವರು ಬಹು ಬೇಗನೇ ಕೀರ್ತಿ ದುರಂಧರರಾದರು. ಜನತೆಯಲ್ಲಿ ತಮ್ಮ ಗೌರವವನ್ನೂ ವಿಶ್ವಾಸವನ್ನೂ ಇವರು ಸಂಪೂರ್ಣವಾಗಿ ಪಡೆದುಕೊಂಡಿರುವರು

(ಕೇರಳಾ ಸಂದೇಶ ವಾರಪತ್ರಿಕೆ)

ಸಾರ್ವಭೌಮರು, ಓಂದಿನಂತೆಯೇ ಈ ವರ್ಷವೂ ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ತಾ ೧೧ನೇ ಸೋಮವಾರ ಪೂರ್ವಾಹ್ನ ೧೧ ಘಂಟೆಯಿಂದ ೨ ನಿಮಿಷಗಳ ತನಕ ಎಲ್ಲಾ ಕಾರ್ಯಗಳನ್ನೂ ನಿಲ್ಲಿಸಿ ನಿಶ್ಯಬ್ದ ವ್ರತಾಚರಣೆಯನ್ನು ಮಾಡಬೇಕೆಂದು ಸೂಚಿಸಿದ ಮೇರೆಗೆ ಹಿಂದೂಸ್ಥಾನದಲ್ಲಿಯೂ ಇದೇ ರೀತಿಯಲ್ಲಿ ನಿಶಬ್ದ ವ್ರತಾಚರಣೆಯನ್ನಾಚರಿಸಬೇಕೆಂದು ಇಂಡಿಯಾ ಸರಕಾರದವರೂ, ಮದ್ರಾಸು ಸರಕಾರದವರೂ ಪ್ರಕಟಿಸಿದ್ದಾರೆ.

ಕಳೆದ ತಾ ೩೧-೧೦-೩೫ನೇ ಸಾಯಂಕಾಲ ಮಂಗಳೂರು ನಗರಸಭೆಯು ೫-೩೦ಕ್ಕೆ ಸರಿಯಾಗಿ ನಗರಸಭಾಮಂದಿರದಲ್ಲಿ ಮಾನ್ಯ ಡಾ। ಕೆ ವಿಠ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಅನೇಕ ಸದಸ್ಯರು ಹಾಜರಿದ್ದರು. ರಾವ್ ಬಹದ್ದೂರ್ ಬಿ. ವೆಂಕಟರಾಯರು, ಓರ್ವ ಮಹನೀಯರು ೧೦೦ ಪುಸ್ತಕಗಳನ್ನು ಮ್ಯುನಿಸಿಪಲ್ ಲೈಬ್ರರಿಗೆ ತಮ್ಮ ಮೂಲಕ ಕೊಟ್ಟಿರುವುದಾಗಿಯೂ ಅವನ್ನು ಸ್ವೀಕರಿಸಬೇಕಾಗಿಯೂ ಪತ್ರ ಬರೆದಿದ್ದರು. ಸಭೆಯವರು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಬೇಕೆಂದು ತೀರ್ಮಾನವಾಯಿತು. ಈ ಸಂದರ್ಭದಲ್ಲಿ ಮ್ಯುನಿಸಿಪಲ್ ಲೈಬ್ರರಿಯನ್ನು ಸದಾ ತೆರೆಯುವುದು ಅತ್ಯಗತ್ಯವೆಂದೂ, ಲೈಬ್ರರಿಯನ್ನವರನ್ನು ನೇಮಿಸುವ ಬೀಗ ಗಾಗಿದೆ ಸಾಯಂಕಾಲದ ವರೆಗೆ ಪುಸ್ತಕಭಂಡಾರವನ್ನು ತೆರೆದಿಡುವ ಉದ್ದೇಶವಾಗಿತ್ತೆಂದೂ ಶ್ರೀ ಕಾರಂತರು ತಿಳಿಸಿದರು. ಇಂತಹ ಸಂದರ್ಭದಲ್ಲಿ ಲೈಬ್ರರಿಯನ್ನರಿಗೆ ಹೆಚ್ಚು ಸಂಬಳ ಕೊಡಬೇಕಾದೀತು ಎಂದು ಉಪಾಧ್ಯಕ್ಷರು ಸೂಚಿಸಿದರು. ಶ್ರೀಯುತರಾದ ವಿ. ಎಸ್. ಫೆರ್ನಾಂಡೀಸ್ ಮತ್ತು ಬಿ. ವಿ. ಬಾಳಿಗ— ಈ ಈರ್ವರು ಮ್ಯುನಿಸಿಪಲ್ ಉಪಾಧ್ಯಾಯರ ಸಂಬಳದ ವಿಷಯದಲ್ಲಿ ಬಹಳ ಚರ್ಚೆ ನಡೆಸಿದರು. ಇವರು ಸೆಕೆಂಡ ಗ್ರೇಡಿನವರಾದರೂ ಆ ಗ್ರೇಡಿಗಿರುವ ಸಂಬಳವು ಅವರಿಗೆ ದೊರೆಯುತ್ತಿಲ್ಲ. ನಗರ ಸಭೆಯವರು ನಿಶ್ಚೈಸಿದ ಸ್ಕೇಲು ಇರುತ್ತಾ ಅವರಿಗೆ ಕಡಿಮೆ ಸಂಬಳ ಕೊಡಲು ಕಾರಣವೇನು? ಸ್ಕೇಲು ಬದಲಾವಣೆ ಮಾಡಿದುದು ಯಾರು?

ತಾಲೂಕುಗಳಿಂದ.

ಉಡುಪಿ:— ದಿ ಕೆನರಾ ಮ್ಯಾಚುಫೆಕ್ಚರ್ ಎಣ್ಮಾರಿನ್ಸ್ ಕಂಪೆನಿ ಲಿಮಿಟೆಡ್ ಇವರು ಉಡುಪಿಯಲ್ಲಿ ತಮ್ಮ ಸಂಸ್ಥೆಯನ್ನು ಹೊಸತಾಗಿ ಏರ್ಪಡಿಸಿರುವರು. ಅದರ ಪ್ರಾರಂಭೋತ್ಸವವು ನವಂಬರ ತಾ. ೭ರಲ್ಲಿ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಅಪರಾಹ್ನ ಘಂಟೆ ೪ಕ್ಕೆ ಮಾಜಿ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಎಂ. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಸ್ಥಳೀಯ ಕ್ರಿಶ್ಚನ್ ಹೈಸ್ಕೂಲಿನ ರಜತೋತ್ಸವವಾದ ಹನ್ನೆರಡು ವರ್ಷಗಳ ತರುವಾಯ, ಇದೇ ತಾ. ೧೧ರಲ್ಲಿ ಸದ್ರಿ ಶಾಲಾ ವರ್ಧಂತಿಯು ಜರಗುವುದಿದೆ. ತನ್ನಿಮಿತ್ತದಲ್ಲಿ ಶಾಲಾ ಹಳೇ ವಿದ್ಯಾರ್ಥಿಗಳದೊಂದು ಸಂಘವು ಏರ್ಪಡಿಸಬೇಕಾಗಿ ಹಲವರ ಅಪೇಕ್ಷೆಯಂತೆ ಆಹ್ವಾನ ಪತ್ರಿಕೆಗಳೂ ಸ್ವತಃ ಆಹ್ವಾನಗಳೂ ಹೊರಟಿರಲಾಗಿ ನಿಶ್ಚಿತವಾದಂತೆ ಇದೇ ತಾ ೩ಕ್ಕೆ ಸದ್ರಿ ಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳ ಪ್ರಥಮ ಕೂಟವು ಸಾಯಂ, ೫ ಘಂಟೆಗೆ ಒಟ್ಟು ಕೂಡಿತು. ರಾ। ಪಾಂಡುರಂಗ ನಾಯಕ್, ಎಡ್ವೊಕೇಟ್ ಇವರು ಅಗ್ರಾಸನವನ್ನು ವಹಿಸಿದ್ದರು. ಶಾಲಾ ಹೆಡ್ಮಾಸ್ತರರಾದ ಮಿ। ಇ. ಸಾಲಿನ್ಸ್, ಬಿ ಎ ಇವರು, ಹಳೇ ವಿದ್ಯಾರ್ಥಿಗಳನ್ನು ಉಪಚಾರಗಳಿಂದ ಸತ್ಕರಿಸಿದ ತರುವಾಯ ಸ್ವಾಗತೀಕರಿಸಿ ಸದ್ರಿ ಕೂಟದ ಉದ್ದೇಶವನ್ನು ಸಭೆಯ ಮುಂದಿರಿಸಿ, ತಾನು ಮುಂದಿನ ವರ್ಷ ನಿವೃತ್ತನಾಗುವುದಿದ್ದಾಗ್ಯೂ, ತನ್ನ ಮೇಲ್ವಿಚಾರದಲ್ಲಿ ವಿದ್ಯಾರ್ಥಿಗಳೆಲ್ಲರೂ ಪ್ರೀತಿಪಾತ್ರನಾಗಿದ್ದೆನೆಂತೆಯೇ ಅನಂತರವೂ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿಸಿದರು. ರಾ। ಬಿ ರಾಮರಾವ್, ಎಡ್ವೊಕೇಟ್ ಇವರು ಮುಂಚಿತವಾಗಿ ತಯಾರಿಸಿದ ಉದ್ದೇಶಪತ್ರಗಳನ್ನು ಸಭೆಯ ಮುಂದಿರಿಸಿ ಒಂದೊಂದಾಗಿಯೇ ಮಂಜೂರು ಮಾಡಲಾಯಿತು. ಶ್ರೀಯುತರಾದ ಯು. ಚರ್ಚಿಲ್ ಪಡಿಯಾರ್ ಡಾ। ಸಿ ಜಿ ಆಚಾರ್ ನಾರಾಯಣ ಸುಬ್ರಾಯ ಪೈ ಕೊಟ್ಟಿಕಾರ್ ಇವರ ಹಳೇ ವಿದ್ಯಾರ್ಥಿಗಳ ಹರ್ಷ ಬಾಧ್ಯತೆಗಳ ಕುರಿತು ಸಮಂಜಸ ಅನುಭವ ನಿಶ್ಚಿತ ಹಾಗೂ ಅವಶ್ಯಕತೆಗಳ ಕುರಿತು ... [illegible] ಹಾಗೂ ಚರ್ಚೆಯು ನಡೆದು ... ವರ್ಷಗಳಿಂದ ಉಡುಪಿ ಮಹಾಜನತೆಗೂ ಸದ್ರಿ ಕ್ರಿಶ್ಚನ್ ಹೈಸ್ಕೂಲಿನ ಆಡಳಿತ ಹಾಗೂ ಅಧ್ಯಾಪಕ ವರ್ಗದವರಿಗೆ ... ವನ್ನು ಆ ಸ್ಥೆ ಅಭಿವೃದ್ಧಿಯನ್ನು ಹೋಗಲಾಡಿಸುವ ಪರಮ ಉದ್ದೇಶವಾಗಿ ಡಾ। ಬಿ ಜಿ ಆಚಾರ್ಯರವರು ಹಳೇ ವಿದ್ಯಾರ್ಥಿಸಂಘಕ್ಕೆ ಶಾಲಾ ಆವರಣದಲ್ಲಿ ಒಂದು ಯೋಗ್ಯ ಸ್ಥಾನವೀಯಬೇಕೆಂದು ಇದ್ದುರಿಸಿದರು. ಶಾಲಾ ಮೆನೇಜ್ಮೆಂಟ್ ಬಾಸೆಲ್ ಮಿಶನಿನಿಂದ ನವೆಸಲಾಗುತ್ತ, ಈ ಅಂಶವನ್ನು ಯೂನೈಟೆಡ್ ಮಿಶನ್ ಬೋರ್ಡ್ ಮೆನೇಜ್ಮೆಂಟ್ (ಇಂಗ್ಲೀಶರಿಗೆ) ಎಂಬ ಆಸಮಜಸ ವನ್ನು ವ್ಯಕ್ತಪಡಿಸಿದ್ದಾಯಿತು. ಅದರೆ ಸದ್ರಿ ಬಾಸೆಲ್ ...

ಅದು ನ್ಯಾಯವಿರುದ್ಧವಲ್ಲವೇ? ಎಂದಿದ್ದಾರೆ ಪ್ರಶ್ನೆಗಳನ್ನು ಶ್ರೀ ಬಾಳಿಗರು ಕೇಳಿದರು. ಈ ವಿಷಯದಲ್ಲಿ ಬಹಳ ಹೊತ್ತು ಚರ್ಚೆಯಾಗಿ ಕೊನೆಗೆ ಅಯಾ ಗ್ರೇಡಿನ ಸಂಬಳವನ್ನು ಅವರು ತರಗತಿಯ ಉಪಾಧ್ಯಾಯರಿಗೆ ಕೊಡಬೇಕೆಂದಾಯಿತು. ಇದೇ ಮೊದಲಾದ ನಿರ್ಣಯಗಳನ್ನು ಮಂಜೂರು ಮಾಡಿದರು.

ಮುಂಬಾಯಿ ತಿರುವಾಂಕೂರು ವಿಮಾನ ಸಂಚಾರವೀಗ ಆರಂಭಿಸಿದೆ. ಪಾರ್ಸಲುಗಳನ್ನು ಒಟ್ಟಿಗೆ ಇಬ್ಬರು ಪ್ರಯಾಣಿಕರನ್ನು ಒಯ್ಯಲಾಗುವುದು. ಪ್ರತಿ ಮಂಗಳವಾರ ಮುಂಬಾಯಿಯಿಂದ ಮಧ್ಯಾಹ್ನ ಹೊರಟು ಕಣ್ಣಾನ್ನೂರಿನಲ್ಲಿಳಿದು, ನಂತರ ಅಲ್ಲಿಂದ ಹೊರಡುವುದು, ಮಂಗಳೂರಿನಿಂದ ಬೇಗನೆ ಮೈಲುಬಂದಿಯಲ್ಲಿ ಹೊರಟರೆ ವಿಮಾನವು ಸಿಕ್ಕುವುದು.

ನಿವೃತ್ತ ಡಿ। ಜಡ್ಜಿಗಳಾದ ರಾ। ಬ। ಬಿ. ವೆಂಕಟರಾಯರ ಮಕ್ಕಳಾದ ಶ್ರೀ ಬಿ. ಜಿ ರಾವ್, ಐ. ಸಿ. ಎಸ್ ರವರು ತಮ್ಮ ವಿಲಾಯತಿಯ ಶಿಕ್ಷಣವನ್ನು ಮುಗಿಸಿ ಇಲ್ಲಿಗೆ ದಯಮಾಡಿರುವರು. ಇವರನ್ನು ಸಂಯುಕ್ತ ಪ್ರಾಂತ್ಯದಲ್ಲಿ ನಿಯೋಜಿಸಲಾಗಿದೆ.

ಮದ್ರಾಸು ಸಂಸ್ಥಾನದ ಜೈಲು ಶಾಖೆಯ ಪ್ರಮುಖ ಉದ್ಯೋಗಸ್ಥರಾದ ಮೇಜರ್ ಖಾನ್ ಐ. ಎಂ. ಎಸ್ ರವರು ಇಲ್ಲಿಗೆ ಸಂದರ್ಶನವನ್ನು ಕೊಟ್ಟು ಸಿಕ್ಕೆ ಹಿಂತಿರುಗಿದರು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನಿಗೆ ಈ ತಿಂಗಳ ಅಂತ್ಯದ ವರೆಗೆ ಸರಕಾರದಿಂದ ಜೀವದಾನ ಕೊಡಲಾಗಿದೆ.

ಮೈಸೂರಿನ ಒಂದು ಹೊತ್ತು ಟೀಮು ಇಲ್ಲಿಗೆ ಬಂದು ಫುಟ್ಬಾಲಿನ ಟೀಮುಗಳೊಡನೆ ಆಡಿ ಸೋತು ಹೋಗಿರುವರು.

ಸ್ಥಾಪನೆಯಾಗಿ ಇಂದಿಗೆ ೩೭ ವರ್ಷಗಳಾಗಿದ್ದು ಜಿಲ್ಲೆಯ ಮುಖ್ಯ ಶಾಲೆಗಳ ಇಂತಹ ಸಂಘಗಳು ಏರ್ಪಟ್ಟು ಶಾಲಾ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ವಿಶೇಷ ಸಹಾಯವೂ ಪ್ರೋತ್ಸಾಹವೂ ತೋರಿಸುತ್ತಿದ್ದು, ಸದ್ರಿ ಶಾಲೆಯ ರಜತ ಮಹೋತ್ಸವ ಕಾಲದಲ್ಲಿ ಇಂತಹ ಸಂಘವನ್ನು ಸ್ಥಾಪಿಸಬೇಕೆಂಬುದಾಗಿ ಅನೇಕಾನೇಕ ಹಳೇ ವಿದ್ಯಾರ್ಥಿಗಳ ಪಿ೦ಸಗಳನ್ನು ಕೇಳಲಾಯಿತು. ಅನಂತರ ರಾ। ಪ. ಲಕ್ಷ್ಮೀನಾರಾಯಣರಾವ್, ಎಡ್ವೊಕೇಟ್ ಇವರ ಚಾತುರ್ಯದಿಂದ ಸದ್ರಿ ಸಂಘದ ೯ ಪ್ರತಿನಿಧಿಗಳೂ ಶಾಲಾ ಮೆನೇಜ್ಮೆಂಟಿನ ಕಡೆಯ ೫ ಪ್ರತಿನಿಧಿಗಳೂ ಕೂಡಿ ಒಂದು ಎಡ್ವೈಸರಿ ಕೌನ್ಸಿಲು ಶಾಲಾ ಆಡಳಿತದಲ್ಲಿ ಭಾಗವಹಿಸುವಂತೆ ಮೆನೇಜ್ಮೆಂಟಿಗೆ ಅರುಹಬೇಕೆಂದಾಯಿತು. ಶಾಲಾ ಹೆಡ್ಮಾಸ್ತರರೇ ಎಕ್ಸ್-ಅಫೀಸಿಯೋ ಅಧ್ಯಕ್ಷರೂ, ರಾ ಪಿ. ಪಾಂಡುರಂಗ ನಾಯಕರು ಉಪಾಧ್ಯಕ್ಷರು, ರಾ। ಯು ಪುಂಡಲೀಕ್ ಶೆಣೈ (ಸದ್ರಿ ಶಾಲಾ ಅಧ್ಯಾಪಕ) ಖಜಾಂಚಿ, ರಾ। ಬಿ. ರಾಮರಾವ್ ಇವರು ಕಾರ್ಯದರ್ಶಿಗಳಾಗಿರುವ ಒಟ್ಟು ೧೫ ಮಂದಿಯುಳ್ಳ ಒಂದು ಸಮಿತಿಯು ಸ್ಥಾಪಿತವಾಗಿದೆ.

ಉಚ್ಚಿಲ:— ಆರೋಗ್ಯ ಮತ್ತು ಶಿಶುಸಪ್ತಾಹ ಸಮಾರಂಭವು ತಾ ೨೦ ಮತ್ತು ೨೧ ಈ ಎರಡು ದಿವಸಗಳಲ್ಲಿ ಉಚ್ಚಿಲ ಶ್ರೀ ಜನಾರ್ದನ ಹಾಯರ್ ಎಲಿಮೆಂಟರಿ ಉಚ್ಚಿಲ ಪಂಚಾಯತ ಬೋರ್ಡು ಅಧ್ಯಕ್ಷರಾದ ಜೆ ಅನಂತಯ್ಯನವರ ಅಧ್ಯಕ್ಷತೆಯಲ್ಲಿ ಸದರಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣದಲ್ಲಿ ಕ್ರಮದಂತೆ ಜರಗಿಸಲಾಯಿತು.

ಬೊಕ್ಕಪಟ್ಣ:— ಇಲ್ಲಿಯ ಪ್ರಮುಖ ವರ್ಗದವರೆಲ್ಲರೂ ದೊಡ್ಡ ವ್ಯಾಪಾರಸ್ಥರಲ್ಲೊಬ್ಬರೂ ಆಗಿದ್ದ ಶ್ರೀಯುತ ಬೈಕೂರು (ಕಟ್ಟಿ) ಸುಬ್ಬಾಯರು ಇದೇ ತಾ. ೧೯ನೇ ಬುಧವಾರ ಸಾಯಂಕಾಲ ೬ ಗಂಟೆ ಸಮಯಕ್ಕೆ ಪರಲೋಕವನ್ನೆದಿದರೆಂಬ ವಾರ್ತೆಯನ್ನು ತಿಳಿಸುವರೆ ಕುಂಬಾ ವಿಷಾದಿಸುತ್ತೇನೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬಕ್ಕೆ ದೀರ್ಘಾಯುರಾರೋಗ್ಯವನ್ನೂ ಕೊಡಲೆಂದೂ ಪ್ರಾರ್ಥನೆ.

ಮೂಲ್ಕಿ:— ಸ್ಥಳೀಯ ಸೆಂಟರಿನ ಉಪಾಧ್ಯಾಯ ಸಂಘದ ಅರ್ಧಿಯಿಂದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೧೯-೧೦-೩೫ನೇ ಶನಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕಟ್ಟ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿ ಬಂತು. ಅಂದು ಮೂಲ್ಕಿ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ ಬಿ ಭೋಜರಾಯರು ಸಭಾಧ್ಯಕ್ಷರಾಗಿದ್ದರು.

ಸ್ಥಳೀಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ಕಡೆಯಿಂದ ಏರ್ಪಡಿಸಲಾದ ಶಿಶು ಸಪ್ತಾಹದ ಕಡೇ ದಿನದ ಸಮಾರಂಭವು ಮೊನ್ನೆ ತಾ ತಾ ೨೪-೧೦-೩೫ನೇ ಗುರುವಾರ ಅಪರಾಹ್ನ ಘಂಟೆ ೩-೩೦ಕ್ಕೆ ಸ್ಥಳೀಯ ಬೋರ್ಡ ಹೈಸ್ಕೂಲಿನ ಮುಖ್ಯ ಉಪಾಧ್ಯಾಯ ಶ್ರೀ ಕೆ ಕೃಷ್ಣರಾವ್ ಬಿ ಎ ಎಲ್ ಟಿ ರವರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಕಡೆಯ ಉಮೇದ್ವಾರರು.

ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಸ್ಪಿಕ್ ಬೋರ್ಡಿನ ಸವದ ಕಾಂಗ್ರೆಸ್ ಕಡೆಯ ಉಮೇದ್ವಾರರನ್ನಾಗಿ ಯಾರ ನ್ನೆಲ್ಲ ನಿಲ್ಲಿಸಬೇಕೆಂಬ ವಾರ್ತೆಯು ಈಗ ಸಾಮಾನ್ಯವಾಗಿ ಜಿಲ್ಲೆಯಲ್ಲಿ ಎಲ್ಲರಿಗೂ ಗೊತ್ತಿರುತ್ತದೆ. ಈ ಉಮೇದ್ವಾರರ ಪೈಕಿ ಹಲವು ಮಹನೀಯರು ಈಗ ತಾನೇ ಕಾಂಗ್ರೆಸ್ಸಿಗೆ ಸೇರಿದವರೆಂದೂ ಇನ್ನು ಕೆಲವು ಮಂದಿ ಕಾಂಗ್ರೆಸ್ಸಿಗೆ ಸಹಾಯ ಮಾಡುತ್ತಿಲ್ಲವೆಂದೂ ಆ। ಕೆಲಸಗಾರರೆನ್ನಿಸದ ಅಸಹ್ಯಕರ ಮೊದಲಾದ ಕಾಂಗ್ರೆಸ್ ಉದ್ಯೋಗಿಗಳನ್ನು ಹೊಂದಿದವರಲ್ಲವೆಂದೂ ಮಹತ್ವವಲ್ಲ ಹಲವು ನಿಷ್ಠಾವಂತ ಕಾಂಗ್ರೆಸ್ ಕೆಲಸಗಾರರಾಗಿದ್ದು ಕೆಲಸಗಾರರ ಪಾಲಿಗೆ ಒದಗುವ ನಿಕಟ ಕಷ್ಟ ನಷ್ಟಗಳನ್ನು ಅನುಭವಿಸಿದ ಶ್ರೀಯುತರಾದ ಅಮ್ಮೆಂಬಳ ಬೈಲು ಕೃಷ್ಣರಾಯ ಕೋಡಿ ಪಾಂಗಾಳ ಮಂಜುನಾಥ ನಾಯ್ಕ ಮೊದಲಾದ ಕೆಲಸಗಾರರ ಅರ್ಜಿಗಳು ಸ್ಪಿಕ್ ಬೋರ್ಡಿನ ಮುಂದಿದ್ದರೂ ಇವರನ್ನು ಉಪೇಕ್ಷಿಸಿದ್ದರೆ ಇವರನ್ನಾಗಿ ಆನಾರಾಲಿಸಿದ್ದಿದ್ದು ಸರಿಯಲ್ಲವೆಂಬ ಸವಾಲಾಗಿ ಅಲ್ಲಲ್ಲಿ ಕೇಳಬರುತ್ತಿದೆ.

ಇವರಲ್ಲಿ ನಾವು ಮೊದಲಾಗಿ ತಿಳಿಸಬೇಕಾದ ವಿಷಯವೆಂದರೆ ಕಾಂಗ್ರೆಸ್ ಸಂಸ್ಥೆಯ ಧ್ಯೇಯದಲ್ಲಿ ಉಂಟಾಗಿರುವ ಬದಲಾವಣೆ, ೧೯೩೫ರಲ್ಲಿ ಕಾಂಗ್ರೆಸು

(೧೯ನೇ ಪುಟಕ್ಕೆ ಮುಂದುವರಿಸಿದೆ.)

ಮೂಲ್ಕಿ ಸರ್ಕಲಿನ ಡಿ। ಬೋ। ವೋಟರರಲ್ಲೊಂದು ವಿಜ್ಞಾಪನೆ.

ಮಹನೀಯರೇ,

ಇದೇ ಬರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ನಮ್ಮ ಮೂಲ್ಕಿ ಸರ್ಕಲಿನ ಪರವಾಗಿ ಉಮೇದ್ವಾರರಾಗಿ ನಿಲ್ಲುವರೇ ಶ್ರೀಮಾನ್ ಎ. ಬಿ. ಶೆಟ್ರನ್ನು ನಮ್ಮ ಸರ್ಕಲಿನ ವೋಟರರ ಸಭೆಯವರು ಕೇಳಿಕೊಂಡ ಪ್ರಕಾರ ಅವರು ಸಮ್ಮತಿಸಿರುವ ಸಂಗತಿ ತಾವೆಲ್ಲರೂ ಇಷ್ಟರಲ್ಲೇ ಅರಿತಿರಬಹುದು.

ಶ್ರೀ ಶೆಟ್ರು ನಮ್ಮ ಜಿಲ್ಲೆಗೆ ಚಿರಪರಿಚಿತರಾದರೂ ಈ ಸಂದರ್ಭದಲ್ಲಿ ಅವರ ವಿಷಯ ಕೆಲವು ಮಾತುಗಳನ್ನು ಪ್ರಸ್ತಾಪಿಸುವುದು ಅಪ್ರಾಸಂಗಿಕವಾಗಲಾರದು. ಶ್ರೀ ಶೆಟ್ರು ನಮ್ಮ ಜಿಲ್ಲೆಯ ಪ್ರಮುಖ ಮುಖಂಡರಲ್ಲೊಬ್ಬರೂ, ವಿದ್ಯಾವಿನಯ ಸಂಪನ್ನರೂ, ನಿಸ್ವಾರ್ಥದಿಂದ ಜನಸೇವೆಯನ್ನು ಕೈಕೊಂಡವರೂ, ಪ್ರತಿಯೊಂದು ವಿಷಯದಲ್ಲಿ ಪ್ರಗತಿಪರ ಹಾಗೂ ವಿವೇಕಪರ ಧೋರಣೆಯುಳ್ಳವರೂ ಕನ್ನಡನಾಡಿನಲ್ಲಿ ಜನಹಿತಕ್ಕಾಗಿ ಜನ್ಮವೆತ್ತಿದ "ನವಯುಗ" ಪತ್ರಿಕೆಯ ಜನ್ಮದಾತರೂ, ಅದರ ಆದಿಯ ಸಂಪಾದಕರೂ ಆಗಿರುವರು.

ಶ್ರೀ ಶೆಟ್ರು ಮದ್ರಾಸಿನ ನ್ಯಾಯವಿಧಾಯಕ ಸಭೆಗೆ ಎರಡು ಬಾರಿ ಪ್ರತಿಸ್ಪರ್ಧಿಗಳಿಲ್ಲದೆ ಮೆಂಬರರಾಗಿ ಚುನಾಯಿತರಾಗಿರುವರು. ಸುಮಾರು ೮ ವರ್ಷಗಳಿಂದ ನ್ಯಾಯ ವಿಧಾಯಕ ಸಭೆಯ ಮೆಂಬರರಾಗಿ ಕೆಲಸಮಾಡಿರುವರು. ಮದ್ರಾಸು ಕೌನ್ಸಿಲಿನಲ್ಲಿ ಸರಕಾರದ ರಿಸೆಟ್ಲ್‌ಮೆಂಟ್ ಮತ್ತು ಭೂಕಂದಾಯ ಧೋರಣೆ, ಅರಣ್ಯ ಸಂರಕ್ಷಣೆ ಮತ್ತು ಅಬಕಾರಿ ಧೋರಣೆ, ಜೈಲುಗಳ ಸುಧಾರಣೆ, ಪೋಲೀಸ್ ಆಡಳಿತ, ನಿರುದ್ಯೋಗ ನಿವಾರಣೆ, ಶಿಕ್ಷಣದ ಸುಧಾರಣೆಯೇ ಮೊದಲಾದ ವಿಷಯಗಳಲ್ಲಿ ವಿಚಾರಪರ ಭಾಷಣಗಳನ್ನಿತ್ತು, ಕೌನ್ಸಿಲು ಮೆಂಬರರ ಮೆಚ್ಚುಗೆ ಪಡೆದು ಸನ್ಮಾನ್ಯರಾಗಿರುವರು. ಬಜೆಟಿನ ಕುರಿತು ಮಾಡಿರುವ ವಿದಾಯಕ ಸೂಚನೆಗಳೂ, ಜಿಲ್ಲೆಯ ಸಂಕಷ್ಟಗಳನ್ನು ಬೆಳಕಿಗೆ ತರುವ ಪ್ರಶ್ನೆಗಳೂ ಶ್ರೀಯುತರು ನ್ಯಾಯ ವಿಧಾಯಕ ಸಭೆಯಲ್ಲಿ ಮಾಡಿರುವ ಸತತ ಪರಿಶ್ರಮವನ್ನೂ, ಅವರ ಕಾರ್ಯದಕ್ಷತೆಯನ್ನೂ ಸೂಚಿಸುವುವು. ಶ್ರೀ ಶೆಟ್ರ ಪ್ರಯತ್ನದಿಂದಲೇ ಶಾಲೆಗಳಲ್ಲಿ ವಿದ್ಯಾರ್ಥಿಗಳ ಶಾರೀರಿಕ ಶಿಕ್ಷಣಕ್ಕೆ ಹೆಚ್ಚಿನ ಗಮನಕೊಡುವಂತಾಗಿ ಸೆಕೆಂಡರಿ ಶಾಲೆಗಳ ಅಟೆಸ್ಟ್ ಕಗಳು ೫ ಎಕ್ರೆಗಳಿಗೆ ಕಡಿಮೆಯಾಗದಷ್ಟು ಇರಲೇಬೇಕೆಂಬ ಸರಕಾರಿ ಹುಕುಂ ಜಾರಿಗೆ ಬಂದಿರುತ್ತದೆ. ಇದು ಹೊರತು ಇವರು ಮದ್ರಾಸು ಸಂಸ್ಥಾನದಲ್ಲಿ ರೇಡಿಯೋ ಸ್ಥಾಪಿಸುವ ಕುರಿತಾದ ಠರಾವನ್ನು ಮುಂದೆ ತಂದು ಮಂಜೂರುಮಾಡಿಸಿರುವರು. ಕಳೆದ ವರ್ಷ ತೀರ್ವೆ ಮಾಫಿ ಠರಾವು ಮದ್ರಾಸು ಕೌನ್ಸಿಲಿನ ಮುಂದೆ ಬಂದಾಗ ಕೇವಲ ನಮ್ಮ ಜಿಲ್ಲೆಗೆ ಅನ್ವಯಿಸುವ ಈ ವಿಷಯದಲ್ಲಿ ಬಹುಮತವು ದೊರಕಿ ಅದು ಜ್ಯಾರಿಗೆ ಬರಲು ಶ್ರೀ ಶೆಟ್ರು ಬಹಳ ಪರಿಶ್ರಮಿಸಿರುವರು. ಮಠಾಧಿಪತಿಗಳಲ್ಲಿ ಕಳವಳವನ್ನೆಬ್ಬಿಸಿ ಬಹಳ ಕೋಲಾಹಲಕ್ಕೆ ಕಾರಣವಾದ "ಮಠಗಳ ಬಿಲ್ಲು" ಕಾಯಿದೆರೂಪವನ್ನು ತಾಳದ ಹಾಗೆ ಶ್ರೀಯುತರು ಪಟ್ಟ ಸಾಹಸವು ಮಠಾಧಿಪತಿಗಳಲ್ಲಿ ಸಂತೃಪ್ತಿಯನ್ನುಂಟುಮಾಡಿರುವುದು. ಇದರಿಂದ ಶ್ರೀ ಶೆಟ್ರು ಕೇವಲ ನ್ಯಾಯಪಕ್ಷಪಾತಿಯಿದ್ದು ಪಕ್ಷಭೇದದಿಂದ ಅವರ ಮನಸ್ಸು ದೂಷಿತವಾಗಿಲ್ಲವೆಂಬುದು ಪುರಾಣಮತವಾದಿಗಳಿಗೂ ಖಚಿತವಾಗುವಂತಾಗಿದೆ.

ಶ್ರೀ ಶೆಟ್ರು ಕಳೆದ ಸರ್ತಿ ನಮ್ಮ ಜಿಲ್ಲಾ ಬೋರ್ಡಿನ ಅಧ್ಯಕ್ಷಪದವಿಗೆ ಸ್ವಯಂ ಉಮೇದ್ವಾರರಾಗದಿದ್ದರೂ ಮೆಂಬರರ ಆಗ್ರಹದಿಂದಲೇ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಚುನಾಯಿತರಾಗಿರುವರು. ಹಲವು ವರ್ಷಗಳಿಂದ ಒಂದು ಹೈಸ್ಕೂಲಿಗಾಗಿ ಹಳವಳಿಸುತ್ತಿರುವ ಮೂಲ್ಕಿಯಲ್ಲಿ ಶ್ರೀ ಶೆಟ್ರ ಅಧ್ಯಕ್ಷತನದ ಆಡಳಿತೆಯಲ್ಲಿಯೇ ಹೈಸ್ಕೂಲು ತೆರೆದಿಟ್ಟಿರುವುದು. ಈ ಕುರಿತು ಅವರು ಮಾಡಿರುವ ಪ್ರಯತ್ನ ಸಾಹಸಗಳನ್ನು ಮೂಲ್ಕಿ ಹೋಬಳಿಯವರು ಎಂದೂ ಮರೆಯುವ ಹಾಗಿಲ್ಲ. ತಾಲೂಕು ಬೋರ್ಡುಗಳು ಸಮಾಪ್ತಿ ಹೊಂದಿ ಜಿಲ್ಲಾ ಬೋರ್ಡಿನ ಆಡಳಿತವು ವಿಷಮ ಪರಿಸ್ಥಿತಿಗೀಡು ತೀವ್ರ ಆರ್ಥಿಕ ಮುಗ್ಗಟ್ಟಿಯ ಸಂದಿಗ್ಧ ಕಾಲದಲ್ಲಿ ಬೋರ್ಡುಶಾಲೆಗಳ ಪುನರ್ವ್ಯವಸ್ಥೆ, ಮುಖ್ಯ ಮಾರ್ಗ ಮತ್ತು ಸಂಕಗಳ ದುರುಸ್ತಿ ಇವೇ ಮೊದಲಾದ ಕಾರ್ಯಗಳನ್ನು ಕೈಕೊಂಡು ಬೋರ್ಡು ಆಡಳಿತವನ್ನು ವ್ಯವಸ್ಥಿತವಾಗಿಯೂ ಸುಸೂತ್ರವಾಗಿಯೂ ಪ್ರಗತಿಪರವಾಗಿಯೂ ನಡೆಸಿರುವುದು ಶ್ರೀ ಶೆಟ್ರ ಕಾರ್ಯಚಾತುರ್ಯವನ್ನು ವ್ಯಕ್ತಗೊಳಿಸುತ್ತದೆ.

ನಮ್ಮ ಜಿಲ್ಲೆಯ ಸ್ಕೌಟು ಕಮಿಷನರರಾಗಿ ಶ್ರೀ ಶೆಟ್ರು ಮಾಡಿದ ಕಾರ್ಯಕಲಾಪಗಳೂ, ನಮ್ಮ ಜಿಲ್ಲೆಯ ಬಸ್ಸ್ ಕಂಪೆನಿಗಳು ಕಂಬೈನ್ಡ್ ಆಗಿ ನಡೆಯುವ ವಿಷಯದಲ್ಲಿ ಅವರು ತೋರಿಸಿದ ಅನುಕೂಲತೆಯೂ, ಇತ್ತಲಾಗೆ ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವನ್ನು ಕೊನೆಗಾಣಿಸಲು ಅವರು ನಡೆಸಿದ ಯತ್ನವೇ ಮೊದಲಾದ ಘಟನಾವಳಿಗಳು ಜನಸೇವಾಕಾಂಕ್ಷಿಗಳು ಕೌನ್ಸಿಲು, ಬೋರ್ಡುಗಳ ಹೊರಗೂ ಮಾಡತಕ್ಕ ಕರ್ತವ್ಯಾಂಶಗಳಿವೆ ಎಂಬುದನ್ನು ತೋರಿಸಿಕೊಡುತ್ತದೆ. ಬಂಟರ ಯಾನೆ ನಾಡವರ ಸಂಘದ ಸೂತ್ರಧಾರಿಗಳಾಗಿ ಅವರು ಮಾಡುವ ಸಮಾಜಸೇವೆಯನ್ನು ನಮ್ಮ ನಾಡವ ಬಂಧುಗಳಿಗೆ ನಾವಾಗಿ ಹೇಳಬೇಕಾಗಿಲ್ಲ. ಶ್ರೀ ಶೆಟ್ರು ಹಲವು ವರ್ಷಗಳಿಂದಲೂ ಮಂಗಳೂರು ಕೆನರಾ ಹೈಸ್ಕೂಲಿನ "ಹಳೇ ವಿದ್ಯಾರ್ಥಿ ಸಂಘ"ದ ಅಧ್ಯಕ್ಷರಾಗಿರುತ್ತಾರೆಂಬ ವಿಷಯವು ಇತರ ಸಮುದಾಯಗಳಿಗೂ ಇವರ ಮೇಲೆ ಇರುವ ಗೌರವವನ್ನು ತೋರ್ಪಡಿಸುತ್ತಿದೆ. ನಮ್ಮ ಜಿಲ್ಲಾ ಕಾಂಗ್ರೆಸ್ ಸಿವಿಕ್ ಬೋರ್ಡಿನವರೂ ಡಿಸ್ಟ್ರಿಕ್ಟ್ ಬೋರ್ಡಿನ ಬರುವ ಚುನಾವಣೆಯಲ್ಲಿ ನಮ್ಮ ಸರ್ಕಲಿಗೆ ಶ್ರೀ ಶೆಟ್ರನ್ನು ಚುನಾಯಿಸಿರುತ್ತಾರೆಂಬ ವಿಷಯವನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸಲು ನಾವು ಬಹಳ ಸಂತೋಷಪಡುತ್ತೇವೆ.

ಶ್ರೀ ಶೆಟ್ರು ಮೇಲಾಗಿ ವಿನಯಶೀಲರು, ಮೃದುಹೃದಯಿಯು ಮಧುರಭಾಷಿಯು ದರ್ಪದಿಂದ ಜನತೆಯ ಮೇಲೆ ಅಧಿಕಾರ ನಡೆಸುವವರಲ್ಲ. ಪ್ರೇಮಪೂರ್ವಕವಾಗಿ ಸಂಪೂರ್ಣ ನಿಸ್ವಾರ್ಥಿಗಳಾಗಿ ತನ್ನ ವ್ಯಕ್ತಿತ್ವವನ್ನು ಜನಸೇವೆಯಲ್ಲಿ ಲೀನಗೊಳಿಸುವ ಸಾರ್ವಜನಿಕ ಕೆಲಸಗಾರರು. ಜನಸಾಮಾನ್ಯರ ಹಾಳುಹವಾಲಿಗಳನ್ನು ಆದರದಿಂದ ಕೇಳುವ ತಾಳ್ಮೆಯುಳ್ಳವರು. ಅವರ ಶಾಂತಸ್ವಭಾವ, ಸರಳವರ್ತನೆ, ಸೌಹಾರ್ದ, ಸಹನಶೀಲತಾದಿ ಉಚ್ಚಗುಣಗಳು ಬದ್ಧವೈರಿಯ ಹೃದಯವನ್ನಾದರೂ ಬಿರಿಸುವಂತಹವು.

ಆದುದರಿಂದ ಶ್ರೀ ಶೆಟ್ರಂತಹ ನುರಿತ ಸನ್ಮಾನ್ಯ ಜನಸೇವಕರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಬರುವಂತೆ ಪ್ರಯತ್ನಿಸುವುದಲ್ಲದೆ, ಆವಶ್ಯಸಂದರ್ಭಗಳಲ್ಲಿ ಅವರಿಗನೇ ವೋಟರರೆಲ್ಲರೂ ಒಮ್ಮನಸ್ಸಿನಿಂದ ವೋಟು ಕೊಟ್ಟು ತಮ್ಮ ವೋಟಿನ ಹಕ್ಕನ್ನು ಸದುಪಯೋಗಗೊಳಿಸುವರಾಗಿ ನಾವು ಸಂಪೂರ್ಣ ಭರವಸೆಯಿಂದ ವಿಜ್ಞಾಪಿಸಿಕೊಳ್ಳುವೆವು.

ಎಂ. ಆರ್. ಪೂಂಜ,
ಮತ್ತು 46 ಮಂದಿ ಇತರರು.

---

೩೦ ಮಿಲಿಯ ಪೌಂಡು ಬೆಲೆ ಬಾಳುವ ನಿಧಿ.

೩೦ ಮಿಲಿಯ ಪೌಂಡು ಕ್ರಯಬಾಳುವ ಒಂದು ನಿಧಿಯು ಭೂತಳದೊಳಗಿಂದ ಸಿಗುವುದೆಂದು ಯೂರೋಪಿನ ಹಿಂದಿನ ಎಲ್ಲೆಲ್ಲೂ ಬಲವಾದ ವಾರ್ತೆಯಿದೆ. ೮೩ ಹಿಂದೆ ಮೃತಪಟ್ಟ ಓರ್ವ ಸಮುದ್ರಕಳ್ಳನ ಪ್ರೇತವು ಒಬ್ಬನ ಮೇಲೆ ಆವೇಶ ಮೂಲಕ ಬಂದು, ಈ ನಿಧಿಯು ಹುಡುಕಾಟದಲ್ಲಿ ಸಹಕರಿಸ ವುದಂತೆ. ಈ ನಿಧಿಯು ಕೋಕಸ್ ದ್ವೀಪದಲ್ಲಿರುವುದು.

ಜರ್ಮನಿಯ ಪ್ರಸಿದ್ಧ ನಾವಿಕನಾದ ಹರ್ ಎಟ್ ಎಡಿಫಿಜ್ ಎಂಬವನು ನಾಯಕನಾಗಿಯೂ ಮಾರ್ಗೊಟ್ ಶಿಸಿಡರ್ ಎಂಬವಳು ಆವೇಶಪಾತ್ರಿಯಾಗಿಯೂ ಮತ್ತು ಇನ್ನಿತರ ಮಹನೀಯರಿಂದ ಕೂಡಿದ ಒಂದು ಪಂಗಡವು ಈ ನಿಧಿಯ ಹುಡುಕಾಟವನ್ನು ಬೇಗನೇ ಪ್ರಾರಂಭಿಸುವರು. ಹುಡುಕೋಣವು ಹಾಂಬರ್ಗ ಎಂಬ ಸ್ಥಳದಿಂದ ಹೊರಡುವುದು. ೨ ತಿಂಗಳ ಸಮಯದಲ್ಲೇ ಈ ನಿಧಿಯ ಗೊತ್ತನ್ನು ಕಂಡುಹಿಡಿಯುವರು. ಮಾರ್ಗೊಟ್ ಶಿಸಿಡರ್ ಎಂಬವಳ ಸಮುದ್ರಕಳ್ಳನಾದ ಬೆನಿಟೋ ಎಂಬವನ ಪ್ರೇತವು ಆವೇಶಿಸಿ ಈ ನಿಧಿಯ ವಿಷಯ ಎಲ್ಲ ಸಮಾಚಾರಗಳು ಇವರಿಗೆ ಒದಗುವುವು. ಬೆನಿಟೋನು ಪೋರ್ಚುಗೀಸ್ ಅಧಿಕಾರಿಯಾಗಿದ್ದು, ಯಾವುದೋ ಒಂದು ಪ್ರಣಯದಲ್ಲಿ ನಿರಾಶನಾಗಿ ಸಮುದ್ರಕಳ್ಳನ ಉದ್ಯೋಗವನ್ನು ಕೈಕೊಂಡಿದ್ದನು. ಈ ನಿಧಿಯು ನಾಲ್ಕು ಕಡೆಗಳಲ್ಲಿ ಅಡಗಿಸಲ್ಪಟ್ಟಿರುತ್ತದೆ. ಈ ಮುಂಚೆ ಒಂದು ಪಂಗಡದವರು ಇದರ ಶೋಧನೆಯನ್ನು ಮಾಡಿ ಸೋತುಹೋಗಿರುವರು. ಸ್ವಾರ್ಥಕ್ಕಾಗಿ ಈ ನಿಧಿಯನ್ನು ಕಂಡುಹಿಡಿದರೆ ಅದು ಲಭಿಸದೆಂದು ಪ್ರೇತದ ಮಾತು. ಈಗ ಹೊರಟ ಪಂಗಡವು ಈ ನಿಧಿಯನ್ನು ಧರ್ಮಸಂಸ್ಥೆಯ ಕಾರ್ಯಕಲಾಪಗಳಿಗೆ ವಿನಿಯೋಗಿಸುವ ಉದ್ದೇಶದಿಂದ ಹೊರಟಿದೆ. ಕೊಸ್ಟಾರಿಕಾದ ಸರಕಾರವು ಈ ಪ್ರಯಾಣಕ್ಕೆ ಬೇಕಾದ ನೌಕೆಗಳನ್ನು ಕೊಟ್ಟು ಸಹಕರಿಸಿದ್ದರಿಂದ ಅವರಿಗೆ ಈ ನಿಧಿಯ ಮೂರನೇ ಒಂದಂಶವು ಸಲ್ಲುವುದು. ಉಳಿದಂಶವನ್ನು ಧರ್ಮಸಂಸ್ಥೆಗಳಿಗೆ ಹಂಚಲಾಗುವುದು.

ಮುಂಬಾಯಿ ಗೌ। ಸಾ। ಬ್ರಾಹ್ಮಣರ ಪರಿಷತ್ತಿನ ಒಂಭತ್ತನೇ ಅಧಿವೇಶನವು

ಈ ಸಮಾರಂಭವು ಮ। ರಾ। ಬಾಲಕೃಷ್ಣ ಸೀತಾರಾಮ ಕಾಮತ್, M.L.C., ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ (ದೀಪೋತ್ಸವ ದಿನಗಳಲ್ಲಿ) ತಾ ೨೬, ೨೭ ಮತ್ತು ೨೮ರಲ್ಲಿ ಗ್ರೇಂಟ್ ರೋಡಿನಲ್ಲಿರುವ ಮುಜಾಫರ್ ಆಬಾದಾ ಹೋಲಿನಲ್ಲಿ ಯಶಸ್ವಿಯಾಗಿ ಜರಗಿಸಲ್ಪಟ್ಟಿತು. ಹೋಲಿನಲ್ಲಿ ಸ್ವಜಾತಿಯೊಳಗಿನ ಬಂಧುಭಗಿನಿಯವರಿಂದ ತುಂಬಿಹೋಗಿತ್ತು. ವಿಷಯ ನಿಯಾಮಕ ಕಮಿಟಿಯವರಿಂದ ಪಾಸುಮಾಡಿರುವ ಠರಾವುಗಳು ಬಹಳವಾದ ಚರ್ಚೆ ನಡೆದು ಸಭೆಯವರಿಂದ ಒಂದೊಂದಾಗಿ ಒಮ್ಮತದಿಂದ ಮಂಜೂರುಮಾಡಲ್ಪಟ್ಟಿತು. ಮಂಜೂರಾದ ಠರಾವುಗಳ ಅನುಸಾರವಾಗಿ ಮುಂಬಾಯಿ ನಗರದಲ್ಲಿ ಮಧ್ಯವರ್ತಿ ಆಫೀಸು ಯಾ ಕಾರ್ಯಾಲಯವನ್ನು ಸ್ಥಾಪಿಸಲಾಗುವುದು. ಈ ಸಂಘಕ್ಕೆ ಹಿಂದೂದೇಶದ ಪ್ರತಿಯೊಂದು ಜಿಲ್ಲೆಗಳಿಂದ ಪ್ರತಿನಿಧಿಗಳನ್ನು ನೇಮಕಮಾಡಬೇಕಾಗಿ ಠರಾವುಗಳಾದುವು.

ಪ್ರತಿಯೊಂದು ಜಿಲ್ಲೆಗಳಲ್ಲಿಯ ಸ್ವಜಾತಿ ಬಂಧುಭಗಿನಿಯರೆಲ್ಲರೂ ಒಟ್ಟಾಗಿ ಸೇರಿ ಪ್ರತಿಯೊಂದು ವರ್ಷದ ದೀಪಾವಳಿಯ ದಿನಗಳಲ್ಲಿ "ಪರಿಷತ್ತಿನ ದಿನ"ವೆಂದು ಆಚರಿಸಬೇಕು. ಪರಿಷತ್ತಿನ ಅಧಿವೇಶನವು ಕನಿಷ್ಠಪಕ್ಷದಲ್ಲಿ ೫ ವರ್ಷಕ್ಕೊಮ್ಮೆಯಾದರೂ ಜರಗಿಸಬೇಕೆಂಬುದಾಗಿಯೂ ನಿಶ್ಚಯಿಸಿದರು. ಸ್ವಜಾತಿ ಅಖಿಲ ಗೌಡ ಸಾರಸ್ವತ ಬ್ರಾಹ್ಮಣ ಜಾತಿಯೊಳಗಿನ ಸ್ತ್ರೀಪುರುಷರ ಹೆಸರು ವಾಸಸ್ಥಾನವನ್ನು ಎಲ್ಲಾ ಜಿಲ್ಲೆಗಳಲ್ಲಿ ಹುಡುಕಿ ಅವರ ಒಂದು "All India Gowda Saraswat Directory" ಎಂಬ ಕೈಪಿಡಿಯನ್ನು ಶೀಘ್ರದಲ್ಲಿಯೇ ತಯಾರಿಸಬೇಕೆಂದೂ, ಅದರ ಖರ್ಚಿಗಾಗಿ ಸುಮಾರು ಒಂದು ಸಾವಿರ ರೂಪಾಯಿಗಳನ್ನು ಸಭೆಯವರು ಸಂಗ್ರಹ ಮಾಡಿರುವರು.

ಜಾತಿಭೇದವಿಲ್ಲದೆ ಅಂತರ್ಜಾತಿಯ ವಿಷಯವಾಗಿಯೂ ವಿದ್ಯಾಭ್ಯಾಸದ ಕುರಿತಾಗಿಯೂ ಭಾಷಣಗಳಿದ್ದುವು. ಈ ಕುರಿತಾಗಿ ಕೆಲವು ಠರಾವುಗಳು ಮಂಜೂರಾದುವು. ರಾತ್ರಿ ಸುಮಾರು ೮॥ಗೆ ಅಧಿವೇಶನದ ಸಭೆಯು ಅಂತ್ಯವಾಗಿ, ಮಿತ್ರ ಭೋಜನವು ಸಾಂಗವಾಗಿ ನೆರವೇರಿತು.

ಪರಿಷತ್ತಿನ ಮೂರನೇ ದಿವಸದಲ್ಲಿ ಹಸ್ತ ಕಲಾಕೌಶಲ ಪ್ರದರ್ಶನವು ಬಹು ಯಶಸ್ವಿಯಾಗಿ ನಡೆಯಿತು. ಇದು ಯಶಸ್ವಿಹೊಂದಲು ನಮ್ಮ ಸ್ತ್ರೀಯರೇ ಕಾರಣಭೂತರು. ಈ ಪ್ರದರ್ಶನದಲ್ಲಿ Oil painting Colour painting, Wood carving, Photography Sculpting, Poster painting, Clay Models ಅನೇಕಹಸ್ತದಿಂದ ಮಾಡಿದಂಥ ಸುಂದರವಾದ ಮೂರ್ತಿಗಳು ಹೆಣಿಗೆಯ ಕೆಲಸ ನೇಯಿಗೆಯ ಕೆಲಸ, ರಂಗವಲ್ಲಿ ಮೊದಲಾದ ವಿವಿಧ ಪ್ರಕಾರದ ಹಸ್ತಕಲಾ ಕೌಶಲ್ಯದ ೩ ಸಾವಿರಕ್ಕೆ ಮಿಕ್ಕಿದ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದವು. ಪ್ರದರ್ಶನದೊಳಗಿನ ಉತ್ತಮೋತ್ತಮ ಚಿತ್ರಗಳಿಗೂ, ಸಮಾನುಗಳಿಗೂ ಯೋಗ್ಯವಾದ ಸುವರ್ಣಪದಕಗಳನ್ನೂ ಬೆಳ್ಳಿಯ ಪದಕಗಳನ್ನೂ ಇನಾಮಾಗಿ ಕೊಡಲಾಯಿತು. ಶ್ರೀ ಭೋಸಲೆಯವರ ತೈಲಚಿತ್ರದ ಪ್ರಥಮ ವಿಭಾಗದ ಪ್ರಥಮ ಪ್ರತಿಮೆಗೆ ಸೌಭಾಗ್ಯವತಿ ಶಾಂತಾಬಾಯಿ ಬಾಟಕರ್ ಇವರ ಸುವರ್ಣ ಪದಕವು ಕೊಡಲ್ಪಟ್ಟಿತು. ಶ್ರೀ ಆರ್ ಜಿ ಚಿಮೂಲಕರ್ ಇವರ ಪೌರಾಣಿಕ ಹಿಂದೀ ಪದ್ಧತಿಗನುಸಾರವಾಗಿ ತೆಗೆದ ದೊಡ್ಡ ಆಕಾರದ ವಾಟರ್ ಕಲ್ಲರಿನ ಚಿತ್ರಗಳನ್ನು ಪ್ರದರ್ಶಿಸಿದ್ದರು. ಪೋಸ್ಟರ್ ಪೈಂಟಿಂಗಿನಲ್ಲಿ ವಿ ಪ್ರಭಾಎಂಡ್ ಕೋ ಇವರಿಗೆ ಸುವರ್ಣಪದಕವು ದೊರೆಯಿತು. ಎಂ ವಿ ಧುರಂಧರರು ತೆಗೆದ ಸರ್ ಲಲ್ಲೂಭಾಯಿ ಶಾಮಲ್‌ದಾಸರ ತೈಲಚಿತ್ರಕ್ಕೆ ಬೆಳ್ಳಿಯ ಪದಕವು ಕೊಡಲ್ಪಟ್ಟಿತು.

ಜಿ. ಜೆ. ಸ್ಕೂಲಿನ ಅಧ್ಯಾಪಕರಾಗಿದ್ದ ಮತ್ತು ಪಾಶ್ಚಾತ್ಯ ದೇಶಕ್ಕೆ ತೆರಳಿ ಪ್ರವೀಣರಾದ ಶ್ರೀ ಆರ್. ಪಿ ಕಾಮತರವರು ಬ್ರೋನ್ಸ್ (Bronze) ನಿಂದ ಮಾಡಿದ ಒಂದು ವಿಗ್ರಹದ ಚಿತ್ರವು ಪ್ರದರ್ಶಿಸಲ್ಪಟ್ಟಿತು.

ಎರಡನೇ ವಿಭಾಗದಲ್ಲಿ, ಶಿವಾಜಿಯ ಚರಿತ್ರೆಯೊಳಗಿನ ಬೇರೆ ಬೇರೆ ಪ್ರಸಂಗಗಳ ಮಣ್ಣಿನ ಚಿತ್ರಗಳೂ, ಜ್ವಾಲಾಮುಖಿ ಪರ್ವತದ ಮಣ್ಣಿನ ಹಾಗೆಯೇ ಇರುವ ನಮೂನೆಗಳು, Dufferin ಸ್ಟೀಮರಿನಲ್ಲಿ ಸಾರಸ್ವತ ಬ್ರಾಹ್ಮಣ ಯುವಕರಲ್ಲೊಬ್ಬರಾದ ಶ್ರೀ ಪ್ರಭಾಕರ ರಘುನಾಥ ದೇಶಪಾಂಡೇ ಇವರ ವಿಮಾನ, ಆಗಿಬೋಟು, ಮೋಟರ ಇಂಜಿನು, ಡ್ಯಾನಮೋ ಮೊದಲಾದ ಅಗ್ನಿಯ ಸಹಾಯದಿಂದ ಸಣ್ಣ ಸಣ್ಣ ಪ್ರಮಾಣತೆಯಲ್ಲಿ ಯಶಸ್ವಿಯಾಗಿ ಕೆಲಸ ಮಾಡಿದ ನಾನಾ ತರದ ನಮೂನೆಗಳು ಇದ್ದುವು.

ಹರಿಲೀಲಾ ಪಾರಾಯಣ ಯಕ್ಷಗಾನ ಮಂಡಳಿ, ಮುಂಬಯಿ.

ಇದೇ ಕಳೆದ ತಿಂಗಳ ತಾರೀಕು ೨೭ನೇ ಭಾನುವಾರ ಮಧ್ಯಾಹ್ನ ಗಂಟೆ ೨-೩೦ಕ್ಕೆ ಮೇಲಿನ ಮಂಡಳಿಯ ಪರವಾಗಿ, ಮುಂಬಾಯಿ ಕೋಟೆಯೊಳಗಣ ಬಿಮರಿಂಡ್ ಲೈನಿನಲ್ಲಿರುವ ಯುನೈಟೆಡ್ ಹೌಸ್ ಎಂಬ ಕಟ್ಟಡದಲ್ಲಿ ಒಂದು ಯಕ್ಷಗಾನ ಸಭೆಯು ಜರಗಿತು. ಶ್ರೀಗಳವರ ಭಕ್ತರು ತಿಂಗಳಾಯರ ಸೂಚನೆಯಂತೆ ಸರ್ವಸಮ್ಮತಿಯಿಂದ ಡಾಕ್ಟರ್ ರಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪುತ್ತೂರು ನಾರಾಯಣ ಶೆಟ್ರು ಭಾಗವತಿಗೆಯಿಂದಲೂ, ಇನ್ನಾ ಅಜ್ಜೋಡಿಗೋಳಿ ನರ್ಸು ಶೆಟ್ರು ಮೃದಂಗವಾದನದಿಂದಲೂ, "ದೇವಕಿ ಕಲ್ಯಾಣ"ವೆಂಬ ಪ್ರಸಂಗವನ್ನು ಪ್ರಾರಂಭಿಸಿದರು. ಮಾಗಧನ ಪಾತ್ರವನ್ನು ಕೆ ಸಂಜೀವ ಶೆಟ್ರು ಕೃಷ್ಣನ ಪಾತ್ರವನ್ನು ಕೆ. ರಾಮಣ್ಣ ಶೆಟ್ರು ಬಲರಾಮನ ಪಾತ್ರವನ್ನು ಸೂರು ಶೆಟ್ರು, ಶಿಶುಪಾಲನ ಪಾತ್ರವನ್ನು ಎಚ್ ರಾಮ ಬಂಗೇರರವರು, ಬಾಣಾಸುರನ ಪಾತ್ರವನ್ನು ಪಿ ನರ್ಸು ಶೆಟ್ರು, ಮೊದಲಾದವರು ವಹಿಸಿದ್ದರು. ಈ ಸಮಾರಂಭವು ಸಾಯಂಕಾಲ ಸುಮಾರು ೭-೩೦ ಘಂಟೆಯ ವರೆಗೆ ಬಹಳ ಮನೋರಂಜಕವಾಗಿಯೇ ನಡೆಯಿತು. ಸಭೆಗೆ ತುಂಬಾ ಜನರು ಬಂದು ನೆರೆದಿದ್ದರು. ಈ ಮಧ್ಯೆ ಮಂಡಳಿಯವರ ಸೂಚನೆಯಂತೆ ಆ ಸಭೆಗೆ ಬಂದಿದ್ದ ಮಂಗಳೂರ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕರಾದ ಶ್ರೀಯುತ ಬಿ ಲಕ್ಷ್ಮೀದೇವ ವಿದ್ಯಾರ್ಥಿಯವರು ಯಕ್ಷಗಾನಶಾಸ್ತ್ರ ಪರಿಚಯದ ಕುರಿತು ಒಂದು ದೀರ್ಘವಾದ ಭಾಷಣವಿತ್ತರು. ಯಕ್ಷಗಾನವು ಇತರ ಗಾನವಿದ್ಯೆಯಂತೆ ಒಂದು ಪ್ರಾಮುಖ್ಯವಾದ ಕಲೆಯಾಗಿರುತ್ತದೆ. ಬಹಳ ಹಿಂದಿನಕಾಲದಿಂದಲೂ ನಮ್ಮ ದೇಶದಲ್ಲಿ ಈ ಕಲೆಯು ಪ್ರಚಾರದಲ್ಲಿತ್ತು. ಮಧ್ಯದಲ್ಲಿ ಇದು ವಿದ್ವಾಂಸರ ಕೈತಪ್ಪಿ ಸಾಮಾನ್ಯ ಜನತೆಯಲ್ಲಿ ಸೇರಿಹೋದುದರಿಂದ ಇದರಲ್ಲಿ ಬಹುತರದ ನ್ಯೂನತೆಗಳು ಸೇರಿಹೋದುವು. ಇತ್ತೀಚೆಗೆ ಅನೇಕ ವಿದ್ವಾಂಸರ ಪ್ರೋತ್ಸಾಹದಿಂದ ಯಕ್ಷಗಾನ ಕಲೆಯು ಕಲಾಶಾಸ್ತ್ರಾನುಸಾರವಾಗಿ ದಿನೇ ದಿನೇ ಸುಧಾರಣೆಹೊಂದುತ್ತಿದೆ. ಅಂಥಾ ಕಲೆಯನ್ನು ಪ್ರತಿಯೊಬ್ಬರು ಉತ್ತಮ ರೀತಿಯಲ್ಲಿ ಅಭ್ಯಾಸಿಸಿ ಪದೇ ಪದೇ ಸಭಾಸಮಾರಂಭಗಳಲ್ಲಿ ಉತ್ತಮ ರೀತಿಯಲ್ಲೇ ಪ್ರದರ್ಶಿಸುತ್ತಾ ಬಂದರೆ ಕರ್ನಾಟಕ ಭಾಷಾಭ್ಯಾಸ ಸಾಮರ್ಥ್ಯವನ್ನು, ಪೂರ್ವದ ಇತಿಹಾಸ ವೃತ್ತಾಂತಗಳನ್ನು ಅಭಿವೃದ್ಧಿಪಡಿಸಿದಂತಾಗುವುದು. ಇವೇ ಮೊದಲಾದ ಅನೇಕ ಪ್ರಮಾಣಗಳನ್ನಿತ್ತಲ್ಲದೆ ಯಕ್ಷಗಾನದಲ್ಲಿ ಇದುವರೆಗ ಆಗಿರುವ ತಪ್ಪುಗಳ ಶೋಧನೆಯನ್ನು ಮಾಡಿಕೊಟ್ಟು, ಅರ್ಥಧಾರಿಗಳು ಬಹಳ ಮಾತಾಡುವಾಗ ವೈಯಕ್ತಿಕ ಮತಭೇದಕ್ಕೆ ಎಡೆಕೊಟ್ಟು ಪರಸ್ಪರ ದ್ವೇಷಾಸೂಯೆಗಳನ್ನು ಬೆಳೆಸಿ ಈ ಗಾನಕ್ಕೆ ಹೇಗೆ ಕಳಂಕವನ್ನು ತರುತ್ತಾರೆಂಬುದನ್ನೂ ವರ್ತಮಾನ ಕಾಲಪರಿಸ್ಥಿತಿಗನುಸಾರವಾಗಿ ಉತ್ತಮೋತ್ತಮವಾದ ಐತಿಹಾಸಿಕ ಸಮ್ಬಂಧವಾದ ಪ್ರಸಂಗವನ್ನು ಬಳಕೆಗೆ ತರಬೇಕೆಂದು ಒತ್ತಿಹೇಳಿದರು. ಅನಂತರ ಅಂದಿನ ಸಭೆಗೆ ಬಂದಿದ್ದ ಶ್ರೀಮಾನ್ ಗುಲ್ವಾಡಿ ಅಜ್ಜೋಜಿರಾವ್ ಎಮ್ ಎ ಎಲ್ ಬಿ ಯವರು ಯಕ್ಷಗಾನದ ಮೇಲೆ ತನಗಿರುವ ಸಹಾನುಭೂತಿಯನ್ನು ವಿವರಿಸಿದರು. ಶ್ರೀಯುತ ಎಚ್ ಎಸ್ ಕಲ್ಯಾಣರಾವರು ಯಕ್ಷಗಾನವೆಂಬ ಕಲೆಯನ್ನು ಇನ್ನೂ ವೃದ್ಧಿಗೊಳಿಸುವ ವಿಷಯವನ್ನೆತ್ತಿ ಭಾಷಣಮಾಡಿದರು. ಸಭಾಂತ್ಯದಲ್ಲಿ ಅಧ್ಯಕ್ಷರ ಪರವಾಗಿ ಶ್ರೀಮಾನ್ ಬಿ ವಾಮನರಾಯರು ಈ ಮಂಡಳಿಯ ಕಾರ್ಯಪ್ರೋತ್ಸಾಹಗಳನ್ನು ಪ್ರಶಂಸಿಸಿ, ಇದೇ ತರದ ಸಮಾರಂಭಗಳನ್ನು ಪದೇ ಪದೇ ಮಾಡಿಸುತ್ತಾ ಈ ಮಂಡಳಿಯನ್ನು ವೃದ್ಧಿಗೊಳಿಸಬೇಕೆಂದು ವಿವರಿಸಿದರು. ಅಂದಿನ ಅಧ್ಯಕ್ಷರು ಬಹಳ ಆಹ್ಲಾದಗೊಂಡು ಮಂಡಳಿಗೆ ಧನಸಹಾಯವನ್ನಿತ್ತರು. ಭಾಗವತರ ಮನೋಹರವಾದ ಹಾಡುವಿಕೆಗೆ ಮೆಚ್ಚಿ ಒಂದು ಶಾಲನ್ನು ಪಾರಿತೋಷಕವಾಗಿ ಕೊಡಲಾಯಿತು. ಶ್ರೀಯುತ ಉಳಿಪಾಡಿ ವಾಸುದೇವ ಶೆಟ್ರು ಮಂಡಳಿಯ ಪರವಾಗಿ ವಂದನಾರ್ಪಣಾ ಭಾಷಣವನ್ನಿತ್ತರು. ಈ ಮಂಡಳಿಯಲ್ಲಿ ದಿನಂಪ್ರತಿ ಸುಮಾರು ಹನ್ನೆರಡು ಮಂದಿಯರು ಶ್ರೀಯುತ ಎಕ್ಕಾರು ರಾಮಣ್ಣನವರ ಅಧ್ಯಾಪಕತ್ವದಿಂದ ಉತ್ತಮ ರೀತಿಯಲ್ಲಿ ಅಭ್ಯಾಸಿಸುತ್ತಾರೆ.

ಬಿ. ಎಲ್. ವಿದ್ಯಾರ್ಥಿ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ ಮುನ್ಸೀಫ್ ಕೋರ್ಟಿನಲ್ಲಿ.

Original Petition No. 212/1935.

1. ಪಾರ್ವತಿ ಅಮ್ಮ, 2 ನಾರಾಯಣಿ ಅಮ್ಮ
3. ಕಾರ್ತ್ಯಾಯಿನಿ ಅಮ್ಮ, 4. ಜಾನಕಿ ಅಮ್ಮ, 5 ಚಾತುಕುಟ್ಟಿ ನಾಯರ—ಮ್ಯೈನರು ಇವರ ಕ್ಷೇಮಚಿಂತಕಳು 1ನೇ ಅರ್ಜಿದಾರಳು ಪಾರ್ವತಿ ಅಮ್ಮ, 1ರಿಂದ 4ನೆವರೆಗಿನವರು–ತಾಯಿನಮ್ಮರು ತೆಕ್ಕೆಕರೆ ಮೇಲೋತ್ತ ಕಮ್ಮಾರ ನಾಯರ ಸೊಸೆಂದರು ವ 5ನೇಯವನು ಸದ್ರಿ ಕಮ್ಮಾರ ನಾಯರ ಅಳಿಯ ಮತ್ತು ಕೋಡೋತ್ತು ಕುತ್ತಿಕೋಲು ಚಾತು ನಾಯರ ಮಕ್ಕಳು. ಕಾಸರಗೋಡು ತಾಲ್ಲೂಕು ಚಮನಾಡು ಗ್ರಾಮದ ತ್ವಾಯನ್ನೂರು ತೆಕ್ಕೆಕರೆ ಎಂಬಲ್ಲಿರುವವರು — ಅರ್ಜಿದಾರರು

ಸದ್ರಿ ಅರ್ಜಿದಾರರ ತಂಧೆ ಇದೇ 5-7-35 1110ನೇ ಕೊಲ್ಲದ ಮಿಥುನ ಮಾಸ 21ರಲ್ಲಿ ಮೃತಪಟ್ಟ ಕೋಡೋತ್ತು ಕುತ್ತಿಕೋಲು ಚಾತು ನಾಯರರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳ ಹೆಸರಲ್ಲಿ ವಾಂಶಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 18-11-1935ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದೆಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ

Kasaragod } K Chathukuty Nambiar
31-10-35 } *Advocate for Petitioners*

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮಸಂಖ್ಯೆ 340/1935

ವಾದಿ ಕಾಶಿಮಠ ತಿಮ್ಮಯ್ಯ, ಶಂಭಯ್ಯನವರ ಮಗ, ಪುತ್ತೂರು ತಾಲ್ಲೂಕು ಕನ್ಯಾನ ಗ್ರಾಮ – ವಾದಿ

1– ಪರಿಕಜೆ ದೊಡ್ಡಮನೆ ಅಪ್ಪಯ್ಯಯಾನೆ ನಾರಾಯಣ ಭಟ್ಟ, ವೇಣಿಯೆಂತಾಯ ನಾರಾಯಣ ಭಟ್ಟರ ಮಗ

2 ನಾರಾಯಣ ಭಟ್ಟ, 3 ಕೃಷ್ಣ ಭಟ್ಟ, 4 ಪರಮೇಶ್ವರ ಭಟ್ಟ—1ನೇ ಪ್ರತಿವಾದಿಯ ಮಕ್ಕಳು ದಕ್ಷಿಣ ಮಲಬಾರು ಜಿಲ್ಲಾ ಪೊನ್ನಾನಿ ತಾಲೂಕು ಮಂಗತ್ತೂರು ದೇಶಂ ಕಾಲಾಡಿ ಅಂಶಂ ಮೊಕೂರು ಮನೆಯಲ್ಲಿರುವವರು—ಪ್ರತಿವಾದಿರು

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ ನಾರಾಯಣ ಭಟ್ಟರಿಗೆ

ಪ್ರತಿವಾದಿರು ವಾದಿಗೆ ತಾ 28 4–'34 ರಲ್ಲು ಬರೆದ ಕ್ರಯ ಸಾಧನದ ಪ್ರತಿಫಲ ಪಡೆದು ಬರಕೊಟ್ಟ ರಶಿದಿಯ ಪತ್ರಾಯ ರಜಿಸ್ಟ್ರಿ ಬಗ್ಗೆ ವಿಟ್ಲ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ವಾದಿಯು ಕೊಟ್ಟ ಅರ್ಜಿಯ ವ್ಯವಹರಣೆಯ ಖರ್ಚು ರೂ 60–0–0 ಕ ದಾವೆಯ ಖರ್ಚು ಸಮೇತ ತನಗೆ ಕೊಡಿಸಬೇಕಾಗಿ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಮೇಲ್ಕಂಡ ದಾವೆಯು ಇದೇ ಇಸವಿ ನವಂಬರ ತಾ 11ಕ್ಕೆ ಈ ಕೋರ್ಟಿನಲ್ಲಿ ಅಖೈರ ತನಿಗೆ ಇಟ್ಟಿದೆ ಸದ್ರಿ ವ್ಯಾಡೆ ದಿವಸ ಹಗಲು ಗಂಟೆ 10ಕ್ಕೆ ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿಯು ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉಪಸ್ಥಿತನಾದದ್ದರೆ ಆತಗೆ ತಿವ್ಯಮಾಡಿ ಸದ್ರಿ ದಾವೆಯು ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲ್ಪಡುವುದು

ಪುತ್ತೂರು } M. Shiva Rao,
2 11 35 } *Pleader for Plaintiff*

ಕಾಸ ಮತ್ತು ಇತರ ಶ್ವಾಸಕೋಶದ ನಿಶ್ಶಕ್ತಿಯನ್ನು ಹೋಗಲಾಡಿಸಿರಿ

ಪೆಪ್ಸನ್ನುಪಯೋಗಿಸಿರಿ.

ಕೆಮ್ಮು, ಎದೆನೋವು ಮತ್ತು ಶ್ವಾಸಕೋಶ ಸಂಬಂಧವಾದ ರೋಗಗಳಿಗೆ, ಪೆಪ್ಸ್ ದಿವ್ಯವಾದ ಔಷಧಿಯು ಈ ಶ್ವಾಸನೀಯ ಗುಳಿಗೆಗಳಲ್ಲಿ ಪ್ರಸಿದ್ಧ "ಪೈನ್" ಅರಣ್ಯದ ಶೀತದಿಂದ ನರಳುವವರಿಗೆ ಹಿತವನ್ನುಂಟುಮಾಡುವ ಗಾಳಿಯು ಸೇರಿಕೊಂಡಿದೆ ಪೆಪ್ಸ್ ಬಾಯಿಯಲ್ಲಿ ಕರಗುವಾಗ ಅದರಿಂದ ಹೊರಡುವ ಔಷಧಿಯ ಧೂಮವು ಶ್ವಾಸಕೋಶವನ್ನು ಸೇರಿ ಹಿತವನ್ನು ಉಂಟುಮಾಡುತ್ತದೆ ಎದೆ ಬಿಗಿಯುವಿಕೆ ಮತ್ತು ಶ್ವಾಸಕೋಶದ ನಿರ್ಬಂಧಗಳನ್ನು ಪೆಪ್ಸ್ ಹೋಗಲಾಡಿಸುತ್ತದೆ ಅವುಗಳ ಹಾನಿಕರ ಕ್ರಿಮಿಗಳನ್ನು ನಾಶಗೊಳಿಸುತ್ತದೆ, ಗಂಟಲು ನೋವನ್ನು ನಿವಾರಿಸುತ್ತದೆ, ಉಸಿರುಕಟ್ಟುವಿಕೆಯನ್ನು ನಿಲ್ಲಿಸುತ್ತದೆ ಮತ್ತು ಶ್ವಾಸಕೋಶವು ಬಲಗೊಳ್ಳುವಂತೆ ಮಾಡುತ್ತದೆ

ಡಬ್ಬಿ 1ಕ್ಕೆ ರೂ 1 ಪ್ರಕಾರ ಎಲ್ಲಾ ದವಾಖಾನೆಗಳಲ್ಲಿ ದೊರಕುತ್ತದೆ

ಏಜಂಟರು – ದಾಧಾ ಎಂಡ್ ಕೊ, ಜಿ ಟಿ ಮದ್ರಾಸು

ವಿಷಹಾರಿ ಶ್ವಾಸನೀಯ ಮಾತ್ರೆಗಳ.

ಪೆಪ್ಸ್ PEPS

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

Motor Accessories Of Approved Manufacture Always in Stock.

Exide Batteries Uncharged	**Rs 20 – 0 – 0**
Fully Charged	**Rs. 24 – 0 0**
Genuine Lockheed Hydraulic Brake fluid Quart tins factory Sealed	**Rs. 2 – 12 0**
Genuine Lockheed ,, locally filled	**Rs 2 – 4 0**

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು

The Canara Public Conveyance Company Ltd., Kodialbail, Mangalore.

ವಿವಿಧ ವಿಷಯಗಳು.

ಕಾಂಗ್ರೆಸಿನ ಚರಿತ್ರೆ.

ಕಾಂಗ್ರೆಸಿನ ಚರಿತ್ರೆಯು ಏಳು ಭಾಷೆಗಳಲ್ಲಿ ಬರೆಯಲ್ಪಟ್ಟು ಪ್ರಚಾರ ಮಾಡಬೇಕಾಗಿ ನಿರ್ಧಾರಗಳಾಗಿವೆ. ಅವನ್ನು ಹಿಂದೀ, ಮರಾಠಿ, ಗುಜರಾಥಿ, ಬೆಂಗಾಳಿ, ಉರ್ದೂ, ತೆಲುಗು, ಮಳಿಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ಆಯಾ ಪ್ರಾಂತಿಕ ಕಾಂ. ಸಭೆಯವರು ಪ್ರಕಟಿಸುವರು. ಅದಕ್ಕೆ ತಗಲುವ ಖರ್ಚನ್ನು ಅಲ್ಲಲ್ಲಿನ ಪ್ರಾಂತಿಕ ಸಭೆಯವರೇ ತೆರಬೇಕಾಗುವುದು. ಉರ್ದು ಭಾಷೆಯಲ್ಲಿ ಅದರ ಚರಿತ್ರೆಯನ್ನು ಪ್ರಕಟಿಸುವ ವಿಷಯದಲ್ಲಿ ಆಲೋಚನೆಗಳು ಈ ತನಕ ನಡೆಯಲಿಲ್ಲ. ಆದರೆ ಈ ಭಾಷೆಯಲ್ಲಿ ಕೂಡಾ ಒಂದು ಚರಿತ್ರೆಯು ಹೊರಡುವುದೆಂದು ತಿಳಿದುಬರುತ್ತದೆ.

ಇತರ ಭಾಷೆಗಳಲ್ಲಿ ಪ್ರಕಟವಾಗುವ ಚರಿತ್ರೆಯು ಕಾಂಗ್ರೆಸಿನಲ್ಲಿ ರಚಿತವಾದ ಚರಿತ್ರೆಯ ಪ್ರತಿರೂಪವಾಗಿರದು. ಅವು ಚಿಕ್ಕ ಸಾರಾಂಶವನ್ನು ಕೊಡುವವು. ಪ್ರತಿಗಳು ಡಿಸೆಂಬರ ತಾ. ೨೦ರಲ್ಲಿ ತಯಾರಾಗುವವು. ಕಾಂಗ್ರೆಸ್ಸಿನ ಆಂಗ್ಲೇಯ ಭಾಷೆಯ ಚರಿತ್ರೆಯು ಬೇಗನೇ ಬರಗುವುದು. ಈ ಚರಿತ್ರೆಯು ಸವಿಸ್ತಾರವಾಗಿದೆ. ೭೦೦ ಪೇಜುಗಳಿಗೆ ಪ್ರಸರಿಸಿದೆ. ಅದು ವಿಭಾಗಗಳನ್ನಾಗಿ ಮಾಡಿದ್ದಾರೆ. ಪ್ರತಿಗಳು ಎಲ್ಲರಿಗೂ ದೊರಕುವಂತೆ ಬೆಲೆ ರೂ ೩-೮-೦ ಎಂದು ನಿರ್ಣಯಿಸಿದ್ದಾರೆ.

ಜಪಾನಿನ ಮಹತ್ವಕ್ಕೆ ಕಾರಣಗಳು.

ಕೆಲವು ವರ್ಷಗಳ ಹಿಂದೆ ಬಹಳವಾಗಿ ಹಿಂದುಳಿದ ಜಪಾನು ಈಗ ಇಷ್ಟು ಮಹತ್ವವನ್ನು ಹೇಗೆ ಪಡೆಯಿತು? ಈಗ ಅದು ಇದರ ಮಹಾತ್ಮ್ಯೆಯನ್ನು ಪಡೆದ ಜನಾಂಗದೊಡನೆ ಸರಿಸಮಾನವಾಗಿರುತ್ತದೆ. ಇದಕ್ಕೆ ೧೦ ಕಾರಣಗಳಿವೆ—(೧) ಯಾವಾಗಲೂ ನಗುವ ಜನರು (೨) ಸೃಷ್ಟಿಯ ಮೇಲೆ ಪ್ರೀತಿಯುಳ್ಳವರು (೩) ಹೆಚ್ಚು ಆಡಂಬರವಿಲ್ಲದ ಜೀವನಕ್ರಮ (೪) ಸಂಸ್ಕೃತಿ ಅಡಗಿಟ್ಟು (೫) ಕುಟುಂಬವಾತ್ಸಲ್ಯ (೬) ಬಹು ಸಂಭಾವಿತ ನಡತೆ (೭) ಆಶ್ಚರ್ಯಕರ ವ್ಯವಸ್ಥಾಪನಾ ಕ್ರಮ (೮) ಸಣ್ಣವೇ ಯಾವತ್ತು ಕಾರ್ಯಗಳಲ್ಲಿಯ ಮೂಲ (೯) ಕಠಿಣ ಶಿಸ್ತು (೧೦) ಸ್ತ್ರೀಯರಿಗೆ ತಕ್ಕ ಮರ್ಯಾದೆ, ಮನ್ನಣೆ.

ಮಹಾತ್ಮಾ ಗಾಂಧಿಯವರು ರಾಜಕೀಯ ರಂಗವನ್ನು ಸೇರುವರೆ?

ಈ ಪ್ರಶ್ನೆಯನ್ನು ಬಂಗಾಳದ ಪ್ರಾಂತಿಕ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ಸಭೆಯು ನಡೆಯುತ್ತಿರು ಸಮಯ ಚರ್ಚಿಸಿರುವರು. ಮಹಾತ್ಮಾ ಗಾಂಧಿಯವರು ಮತ್ತೊಮ್ಮೆ ಕಾಂಗ್ರೆಸಿನ ನಾಯಕತ್ವವನ್ನು ವಹಿಸುವರು. ಹೊಸದಾಗಿ ಬರಲಿರುವ ವೈಸರಾಯರು ರೈತ ಜನಸಮುದಾಯದ ಪರಿಚಯವನ್ನು ಮಾಡಬೇಕೆಂದಿದ್ದಾರೆ. ಅವರ ಈ ಉದ್ದೇಶವು ಮನಗೊಳ್ಳುವಂತೆ ಅವರು ಮಹಾತ್ಮಾ ಗಾಂಧಿಯವರೊಡನೆ ಸಹಕರಿಸುವುದು ಯೋಗ್ಯವೆಂದು ಕೆಲವರು ಉಪದೇಶಿಸಿದ್ದಾರೆ.

ಒಂದುವೇಳೆ ಮಹಾತ್ಮಾ ಗಾಂಧಿಯವರು ರಾಜಕೀಯಕ್ಕೆ ಇಳಿಯುವವರಾದರೂ, ಅವರು ಲಕ್ನೋದಲ್ಲಿ ನಡೆಯಬೇಕಾದ ಅಖಿಲಭಾರತ ಕಾಂಗ್ರೆಸ್ಸಿನ ಅಧಿವೇಶನದ ವರೆಗೆ ಯಾವತ್ತೂ ರಾಜಕೀಯ ಕಾರ್ಯವನ್ನು ವಹಿಸಲಿಕ್ಕಿಲ್ಲ. ರಾಜಕೀಯರಂಗವನ್ನು ಈ ಅಧಿವೇಶನದ ಸಮಯ ಸೇರಿಕೊಂಡು, ಅಲ್ಲಿ ಒದಗಿದ ಮಹತ್ವದ ಪ್ರಶ್ನೆಗಳ ವಿಚಾರ, ಚರ್ಚೆಯಲ್ಲಿ ಭಾಗವಹಿಸಿ ಈಗ ಕಾಂಗ್ರೆಸ್ಸಿನಲ್ಲಿ ತಲೆದೋರಿರುವ ಕೆಲವು ಸಂಶಯ ನಿವಾರಣೆಗಳನ್ನು ಮಾಡಲಿಕ್ಕೆ ಸಾಕು.

ಖಾದಿಪ್ರಸಾರಣ ಕಾರ್ಯ.

ಈ ಕಾರ್ಯಕ್ಕಾಗಿ ಮಹಾತ್ಮಾ ಗಾಂಧಿಯವರು ಇಡೀ ಭರತಖಂಡವನ್ನು ಸಂಚರಿಸುವವರಿದ್ದಾರೆ. ನೇಯುವವರಿಗೆ ತಲೆ ಒಂದರ ಮಜೂರಿಗಳ ಕೂಲಿಯನ್ನು ಕೊಡಬೇಕೆಂದು ಮಾಡಿದ ಠರಾವಿನಿಂದ ಖಾದಿಗೆ ಕ್ರಯ ಹೆಚ್ಚಲು ಕಾರಣವಿದೆಯಾದುದರಿಂದ, ಖಾದಿಯ ಉಪಯೋಗವು ಹೆಚ್ಚಿ, ಖಾದಿಯು ಬಡವರಿಗೆ ಅನ್ನವನ್ನು ಕೊಡುವಂತೆಯೂ ಮತ್ತು ಅದು ಸುಲಭ ದರದಲ್ಲಿ ದೊರಕುವಂತೆಯೂ ಮಾಡುವುದು ಮಹಾತ್ಮಾ ಗಾಂಧಿಯವರ ಮುಖ್ಯ ಉದ್ದೇಶವಾಗಿರುತ್ತದೆ.

ಮಹಾತ್ಮಾ ಗಾಂಧಿಯವರ ನೂಲಿನ ಠರಾವು ಜ್ಯಾರಿಗೆ ಬಂದಂದಿನಿಂದಲೇ ಸಂಚಾರವನ್ನಾರಂಭ ಮಾಡುವರೆಂದು ವಾರ್ತೆ ಇದೆ.

ವಾರ್ತಾತರಂಗ.

ಹಿಂದೂದೇಶದಲ್ಲಿ ವಿಮಾನಗಳ ತಯಾರಿ

ಮದ್ರಾಸಿನ ವಿಮಾನಸಂಸ್ಥೆಗಳವರು ಒಂದು ವಿಮಾನವನ್ನು ತಯಾರಿಸಿರುವರು. ಹಿಂದೂದೇಶದಲ್ಲಿ ತಯಾರಾದ ವಿಮಾನಗಳಲ್ಲಿ ಇದೇ ಮೊದಲನೆಯದು. ಕೆಲವು ವರ್ಷಗಳಿಂದಲೂ ಈ ಸಂಸ್ಥೆಯ ಇಂಜಿನಿಯರುಗಳು ಬಹಳವಾಗಿ ಒದ್ದಾಡಿ ಕಡೆಗೆ ಈ ವಿಮಾನರಚನೆಯನ್ನು ಯಶಸ್ವಿಯನ್ನಾಗಿ ಮಾಡಿದರು. ಈ ಪ್ರಥಮ ಪ್ರಯತ್ನವು ದೇಶದ ಭವಿಷ್ಯದ ಸ್ಫೂರ್ತಿಗೆ ಕಳಶದಿಯಾಗಿರುವುದೆಂದು ಭಾವಿಸಲಾಗಿದೆ. ಈ ವಿಮಾನದ ಪ್ರದರ್ಶನವು ನವಂಬರ ತಾರೀಕು ೩ನೇ ಆದಿತ್ಯವಾರ ಬಹಳ ವಿಜೃಂಭಣೆಯಿಂದ ಜರಗಿತು.

ದಂತವೈದ್ಯನ ಪ್ರಾಣತ್ಯಾಗ.

"ಸ್ವದೇಶಬಾಂಧವರ ಪ್ರೀತಿಗೌರವಗಳಿಗೆ ಪಾತ್ರನಾಗದವನು ಜಗತ್ತಿನಲ್ಲಿ ಬದುಕಿದ್ದು ನಿಷ್ಪ್ರಯೋಜನ. ಅಂಥವರಲ್ಲಿ ನಾನೊಬ್ಬನಿದ್ದರೆ, ನಾನು ಜೀವಿಸಿ ಫಲವೇನು?" ಎಂದು ಬರೆದಿಟ್ಟ ಪತ್ರವು ಮೃತರ ದೇಹದ ಬಳಿ ಇತ್ತು. ಡಾ. ಎಮ್. ಜಿ. ಶಿರೂರ್ ಎಂಬವರು ಬೊಂಬಾಯಿಯ ಪ್ರಸಿದ್ಧ ದಂತವೈದ್ಯರು. ಪ್ರಾಯ ಬರೇ ೩೦ ವರ್ಷ. ಇವರು ನವಂಬರ ತಾ. ೨ನೇ ರಾತ್ರಿ ೯ ಗಂಟೆಗೆ ಪೊಟ್ಯಾಸಿಯಮ್ ಸೈನೈಡನ್ನು ನುಂಗಿ ಪ್ರಾಣವನ್ನು ಕಳಕೊಂಡರು. ಡಾ। ಶಿರೂರರವರ ತಂದೆಯವರು ಮುಂಬಾಯಿಯ ವಾರ್ತಾಪತ್ರಿಕೆಗಳೊಂದರಲ್ಲಿ ಕೆಲಸಕ್ಕಿದ್ದರು. ಇವರು ಇತ್ತೀಚೆಗೆ ದಂತವೈದ್ಯರಲ್ಲಿ ಅಗ್ರಗಣ್ಯರೆಂದು ಪ್ರಖ್ಯಾತಿಪಡೆದಿದ್ದರು. ತುಂಬಾ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಪೋಲೀಸರು ಒಂದು ವಿಚಾರಣೆಮಾಡಿ ಆತ್ಮಹತ್ಯ ಮಾಡಿಕೊಂಡಿರುವರಾಗಿ ತೀರ್ಮಾನಮಾಡಿದ್ದಾರೆ.

ಹೊಟೇಲು ಬಾಲಕರಿಗಾಗಿ ಹೊಸ ಮಸೂದೆ

ಮುಂಬಾಯಿಯಲ್ಲಿ ಹೊಸ ಮಸೂದೆಯೊಂದು ಜ್ಯಾರಿಗೆಬರಲಿದೆ. ನಿಯಮನಿರ್ಮಾಣ ಸಭೆಯಲ್ಲಿ ಕೆಲವು ಸದಸ್ಯರು ಒಂದು ಮಸೂದೆಯನ್ನು ಸಭೆಯಮುಂದಿಟ್ಟಿರುವರು. ಅದಾವುದೆಂದರೆ, ಹೊಟೇಲುಗಳಲ್ಲಿಯೂ ಫಲಾಹಾರ ಮಂದಿರಗಳಲ್ಲಿಯೂ ಚಿಕ್ಕ ವಯಸ್ಸಿನ ಬಾಲಕರನ್ನು ಬೆಳಗ್ಗಿನ ಜಾವದಿಂದ ರಾತ್ರಿ ಬಹಳ ಹೊತ್ತಿನ ತನಕ ಕೆಲಸಮಾಡಿಸುವುದರಿಂದ ಅವರ ಆರೋಗ್ಯಕ್ಕೆ ತುಂಬಾ ಹಾನಿಯಿದೆ. ಅದನ್ನು ನಿವಾರಿಸಲು ಒಂದು ಮಸೂದೆಯನ್ನು ಹೊರಡಿಸಬೇಕಾಗಿ ಸದಸ್ಯರ ವಿನಂತಿ. ಸ್ಥಳೀಯ ಮ್ಯುನಿಸಿಪಾಲಿಟಿಗಳು ತಮ್ಮ ಸಮ್ಮತಿಯನ್ನು ಕೊಟ್ಟಿವೆ.

ಸರ್ ಚಟ್‌ವುಡರ ಗ್ವಾಲಿಯರ ದೇಶಕ್ಕೆ ಆಗಮನ

ಇಂಡಿಯಾದೇಶದ ಸೈನ್ಯಗಳ ಕಮಾಂಡರ್ ಇನ್ ಚೀಫ್ ರವರಾದ ಸರ್ ಫಿಲಿಪ್ ಚಟ್‌ವುಡರು ಗ್ವಾಲಿಯರ್ ಸಂಸ್ಥಾನಕ್ಕೆ ಒಕ್ಟೋಬರ ಅಖೈರಿಯಲ್ಲಿ ದಯಮಾಡಿಸಿ ಅಲ್ಲಿನ ಸಂಸ್ಥಾನಸೈನ್ಯವನ್ನು ಪರೀಕ್ಷಿಸಿ, ಅನೇಕ ಮಿಲಿಟರಿ ಹುದ್ದೆದಾರರಿಗೆ ಬಿರುದಿನ ಬಿಲ್ಲೆಗಳನ್ನು ದಯಪಾಲಿಸಿದರು.

ಹಂದಿಯ ಪ್ರತಾಪ

ಮೈಸೂರಿನ ಗಡಿನಾಡಿನಲ್ಲಿ ಹಂದಿಗಳನ್ನು ಹಿಡಿಯಲು ಮೂವರು ಹಂದಿಗಳ ಹಿಂಡೊಂದನ್ನು ಸಾವಧಾನವಾಗಿ ಹಿಂಬಾಲಿಸಿ ಹೋಗುತ್ತಿದ್ದರು. ಅಷ್ಟರಲ್ಲಿ ಒಂದು ಬದಿಯಿಂದ ಒಬ್ಬನಿಗೆ ಯಾರೋ ದೂಡಿದ ಹಾಗೆ ಆಯಿತು. ನೋಡುವಾಗ ಒಂದು ದೊಡ್ಡ ಹಂದಿಯು ಕಣ್ಣು ಕೆರಳಿಸಿ ನಿಂತಿತ್ತು. ಅವನು ಹೆದರಿ ಕಾಲುತಪ್ಪಿ ಬೀಳಲು ಹಂದಿಯು ಅವನ ಮೇಲೆ ಹಾರಿ, ಅವನನ್ನು ಚೆನ್ನಾಗಿ ಕಚ್ಚಿ, ಒದೆದು ಉಳಿದವರನ್ನು ಹಿಂಬಾಲಿಸಿತು. ಆದರೆ ಉಳಿದವರಿಬ್ಬರು ಬಿದ್ದವನಿಗೆ ಸಹಾಯಮಾಡದೆ ಅಲ್ಲಿಂದ ಓಡಿಹೋದರು. ಒಬ್ಬನು ಮರವೇರಿದನು, ಇನ್ನೊಬ್ಬನು ಹೇಗೋ ಉಪಾಯದಿಂದ ಬದುಕಿದ. ಗಾಯಗೊಂಡವನನ್ನು ಮತ್ತೆ ಆಸ್ಪತ್ರೆಗೆ ಒಯ್ದು ಚಿಕಿತ್ಸೆ ನಡೆಸಿದರು.

ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಆಗಿದ್ದ ಮಿ। ಎಚ್. ಎಫ್. ಚಾಂಪಿಯನ್ ಎಂಬವರು ಕಳೆದ ಒಕ್ಟೋಬರ ತಾರೀಕು ೩೧ರಲ್ಲಿ ದಿವಂಗತರಾದರು.

ಅನಾಥ ಶಿಶು.

ಮೂರು ತಿಂಗಳ ಪ್ರಾಯದ ಹಸುಗೂಸಾದ ಹುಡುಗಿಯೊಬ್ಬಳನ್ನು ಯಾರೋ ಚಿಂಗಲ್ಪಟ್ಟಿನ ವೇಲಿ ಅಮ್ಮನ ದೇವಸ್ಥಾನದಲ್ಲಿ ಬಿಟ್ಟುಹೋಗಿರುವರು. ಪೋಲೀಸರು ಆ ಹುಡುಗಿಯನ್ನು ಅಲ್ಲಿಯ ನಾಟಕಕಂಪೆನಿಯ ಮೆನೇಜರರ ವಶಕ್ಕೆ ಒಪ್ಪಿಸಿದ್ದಾರೆ. ಅದರ ರಕ್ಷಕರ ಶೋಧನೆಯು ನಡೆಯುತ್ತಿದೆ. ಬಹುಶಃ ತಾಯಿತಂದೆಯರು ಮಗುವನ್ನು ದೇವಿಗೆ ಅರ್ಪಿಸಿ ಹೋಗಿರಬೇಕೆಂದು ಪೋಲೀಸರ ಊಹನೆ.

ಹುಲಿಗಳ ಕಾಟ.

ಬಿಷ್ಣುಪುರದಲ್ಲಿ ಇತ್ತೀಚೆಗೆ ಹುಲಿಗಳ ಕಾಟವು ಪ್ರಬಲಿಸಿದೆ. ಹಳ್ಳಿಯಲ್ಲಿದ್ದ ದನಕರುಗಳು ಮಾಯವಾಗುತ್ತಿದ್ದುವು. ಎಷ್ಟು ಪ್ರಯತ್ನಪಟ್ಟರೂ ಅವುಗಳನ್ನು ಕೊಲ್ಲಲು ಸಾಧ್ಯವಾಗುತ್ತಿರಲಿಲ್ಲ. ಕಡೆಗೆ ಶ್ರೀ। ಮುಖ್ತಾಡಿಕಾರಿ ಮತ್ತು ಗಾಸಿರಾಮ್‌ಶಾಸ್ತ್ರಿ ಇವರಿಬ್ಬರು ಕಾಡಿನ ಸಮೀಪದಲ್ಲಿ ಒಂದು ಮಚಾನವನ್ನು ಕಟ್ಟಿ ಎರಡು ಗಂಡುಹುಲಿಗಳನ್ನೂ ಎರಡು ಹೆಣ್ಣುಹುಲಿಗಳನ್ನೂ ಕೊಂದಿಕ್ಕಿದರು. ಈಗ ಹುಲಿಗಳ ಕಾಟವು ಸ್ವಲ್ಪ ಕಡಿಮೆಯಾಗಿದೆ.

ಚೀನಾದಲ್ಲಿ ನಿರುದ್ಯೋಗಿಗಳು ಹೆಚ್ಚಿದರು

ಚೈನಾದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಾ ಬರುತ್ತಿದೆ. ಹೆಚ್ಚಾಗಿ ವಿದ್ಯಾವಂತರೇ ನಿರುದ್ಯೋಗಿಗಳಾಗಿರುವರು. ಮೊನ್ನೆ ಕಾಂಗ್ಕಾ ಪ್ರಾಂತ್ಯದಲ್ಲಿ ಒಂದು ಕೆಲಸವು ಖಾಲಿಬೀಳಲು ಅದಕ್ಕೆ ೩೦೦ ಅರ್ಜಿಗಳು ಬಂದುಬಿದ್ದುವು. ಅದಲ್ಲದೆ ಕೆಲಸವು ಬಹು ಕೀಳುತರದಿದ್ದು ತಿಂಗಳಿಗೆ ಒಂದು ಪೌಂಡು ವೇತನವನ್ನು ಕೊಡುವಂತಹದಿತ್ತು. ಅರ್ಜಿದಾರರಲ್ಲಿ ೧೫ ಮಂದಿ ವಿಶ್ವವಿದ್ಯಾಲಯದಲ್ಲಿ ಕಲಿತವರು. ೨೬ ಮಂದಿ ಮೊದಲು ಉಪಾಧ್ಯಾಯವೃತ್ತಿಯನ್ನು ಮಾಡಿಕೊಂಡಿದ್ದವರು. ೧೫ ಮಂದಿ ಮೊದಲು ಆಫೀಸರರಾಗಿ ಕೆಲಸ ಮಾಡಿಕೊಂಡಿದ್ದವರು. ೧೪ ಮಂದಿ ಸೈನಿಕವೃತ್ತಿಯಲ್ಲಿದ್ದವರು. ವಿಶ್ವವಿದ್ಯಾಲಯಗಳಲ್ಲಿ ಲಿಟರೇಚರ್ ಮತ್ತು ಲಾ ತೆಗೆದುಕೊಂಡವರೇ ಹೆಚ್ಚಿನ ನಿರುದ್ಯೋಗಿಗಳಾಗಿರುವುದರಿಂದ ಸ್ಥಳೀಯ ಯೂನಿವರ್ಸಿಟಿಗಳಲ್ಲಿ ಹೆಚ್ಚಾಗಿ ಎಗ್ರಿಕಲ್ಚರಲ್ ಮತ್ತು ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ಎಡೆಗೊಡುವುದು ಹಿತಕರವೆಂದು ಅಲ್ಲಿಯ ಪತ್ರಿಕಾಕರ್ತರ ಅಭಿಪ್ರಾಯ.

ಮನ್ನಾರಗುಡಿಯಲ್ಲಿ ಆತ್ಮಹತ್ಯ

ಅಣ್ಣನಿಗಾಗಿ ಇಟ್ಟ ಆಹಾರವನ್ನು ತಮ್ಮನು ತಿಂದುದಕ್ಕಾಗಿ ತಂದೆಯು ತುಂಬಾ ಬೈದನು. ಅದನ್ನು ಕೇಳಿ ಜೀವದ ಮೇಲೆ ಜಿಗುಪ್ಸೆ ಹುಟ್ಟಿ ೧೬ ವರ್ಷ ಪ್ರಾಯದ ಬಾಲಕನು ಕತ್ತಿಗೆ ನೇಣುಹಾಕಿ ಸತ್ತನು. ಸಬ್ ಇನ್ಸ್‌ಪೆಕ್ಟರರು ಬಂದು, ವಿಚಾರಣೆ ನಡೆದು ಆತ್ಮಹತ್ಯ ಮಾಡಿಕೊಂಡಿರುವನೆಂದು ತೀರ್ಮಾನ ಮಾಡಿದರು.

ಮೈಸೂರಲ್ಲಿ ಹೊಸ ಸೇತುವೆಯ ನಿರ್ಮಾಣ

ಮೈಸೂರಿಗೆ ೧೬ ಮೈಲುಗಳ ದೂರದಲ್ಲಿರುವ ನರಸೀಪುರದ ಹತ್ತಿರ ಕಪಿಲಾ ನದಿಗೆ ಕಟ್ಟಿರುವ ಹೊಸ ಸೇತುವೆಯನ್ನು ಇಂಡಿಯಾ ಸರಕಾರದ ವಾಣಿಜ್ಯ ಮತ್ತು ಕೈಗಾರಿಕೆಗಳ ಮೆಂಬರರಾದ ಸರ್ ಫ್ರಾಂಕ್‌ನಾಯ್ಸ್ ರವರು ಈ ತಿಂಗಳ ೨ನೇ ತಾರೀಕಿನಲ್ಲಿ ಪ್ರಾರಂಭಿಸುವರು. ರೋಡ್ ಡೆವಲಪ್‌ಮೆಂಟ್ ಫಂಡ್ ಹಣದಿಂದ ಎರಡು ಲಕ್ಷಕ್ಕೆ ಮೇಲ್ಪಟ್ಟು ಮೊಬಲಗನ್ನು ಮೈಸೂರು ಸರಕಾರದವರು ಕೊಟ್ಟಿರುವುದಾಗಿಯೂ, ಸೇತುವೆಯ ಒಟ್ಟು ಖರ್ಚು ೪ ಲಕ್ಷ ರೂಪಾಯಿಗಳಾಗುವುದೆಂದೂ ತಿಳಿಯುತ್ತದೆ.

ಇಬ್ಬರು ಹಿಂದೂಯುವಕರ ದಸ್ತಗಿರಿ.

ಲಾಹೋರಿನಲ್ಲಿ ಹಿಂದೂ ಮುಸ್ಲಿಮರ ಪರಸ್ಪರ ವ್ಯಾಪಾರ ಬಹಿಷ್ಕಾರದ ಚಳವಳವು ಇನ್ನೂ ಹಾಗೆಯೇ ನಡೆಯುತ್ತಿದೆ. ಮುಸಲ್ಮಾನರಲ್ಲಿ ವ್ಯಾಪಾರನಡೆಸಬಾರದೆಂದು ಹಿಂದೂಗಳಿಗೆ ಉಪದೇಶಿಸುತ್ತ ಪಿಕೆಟಿಂಗ್ ನಡೆಸುತ್ತಿದ್ದ ಇಬ್ಬರು ಹಿಂದೂ ಯುವಕರನ್ನು ದಸ್ತಗಿರಿ ಮಾಡಲಾಗಿದೆ.

(೧೧ನೇ ಪುಟದಿಂದ ಮುಂದುವರಿದುದು)

ಸಂಸ್ಥೆಯ ಮುಂದಾಳುತನವನ್ನು ಮಹಾತ್ಮಾ ಗಾಂಧಿಯವರು ಕೈಕೊಂಡಂದಿನಿಂದ ಕಳೆದ ೧೫ ವರ್ಷಗಳಲ್ಲಿ ಸ್ವರಾಜ್ಯ ಪಕ್ಷದ ಕೆಲವು ದಿನಗಳಲ್ಲಿ ವಿನಾ ಇನ್ನಾವಾಗಲೂ ಕಾಂಗ್ರೆಸ್ಸಿನವರು ನ್ಯಾಯವಿಧಾಯಕ ಸಭೆಗಳು, ಡಿಸ್ಟ್ರಿಕ್ಟ್ ವ ಮುನ್ಸಿಪಾಲ್ ಸಂಸ್ಥೆಗಳ ಕಡೆಗೆ ಲಕ್ಷ್ಯ ನೋಡಿದ್ದಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಮಹಾತ್ಮಾ ಗಾಂಧಿಯಂತಹ ತಪಸ್ವಿಯ ವಿಶಿಷ್ಟ ಕಾರ್ಯಕ್ರಮದಿಂದ ಜನಾಂಗವು ಜಾಗೃತಿಹೊಂದಿರುವ ಈ ದಿನ ಸಾರ್ವಜನಿಕ ಸಂಸ್ಥೆಯೆನ್ನಿಸುವ ಕಾಂಗ್ರೆಸು ತನಗೆ ಸಹಜವಾದ ಸರ್ವತೋಮುಖವಾದ ಕಾರ್ಯಕ್ರಮವನ್ನು ಕೈಕೊಳ್ಳುವುದೇ ಸ್ವಾಭಾವಿಕವಿದ್ದು ಈ ಹೊಸಧೋರಣೆಗೆ ಮಹಾತ್ಮಾಜೀಯವರೇ ಆಶೀರ್ವಾದವಿತ್ತಿರುವರು. ಮೇಲ್ಕಾಣಿಸಿದ ಸಂಸ್ಥೆಗಳಲ್ಲಿ ಭಾಗವಹಿಸುವ ಕಾರ್ಯಕ್ರಮವನ್ನು ತನ್ನ ದೇಶಸೇವಾ ಕಾರ್ಯಕ್ರಮಗಳಲ್ಲಿಯ ಒಂದು ಕಾಯಂ ಲಕ್ಷಣವಾಗಿ ಇರಿಸಿಕೊಳ್ಳಲು ಕಾಂಗ್ರೆಸು ಸಂಸ್ಥೆಯು ನಿರ್ಧರಿಸಿರುವುದು.

ಕಾಂಗ್ರೆಸ್ ಧೋರಣೆಯಲ್ಲಿ ಈ ತೆರದ ಬದಲಾವಣೆಯಾಗಿರುವುದರಿಂದಲೇ ಹಲವು ಮಹನೀಯರು ಈಗ ತಾನೇ ಕಾಂಗ್ರೆಸ್ಸಿಗೆ ಸೇರಲು ಕಾರಣವಾಯಿತಲ್ಲದೆ, ಇದರಲ್ಲಿ ಅವರ ದೋಷವೇನೂ ಇರುವುದಿಲ್ಲ. ಕಾಂಗ್ರೆಸು ಇಡೀ ಜನಾಂಗದ ಹೃದಯವನ್ನಾಳುವ ಏಕಮಾತ್ರ ಸಂಸ್ಥೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕಾಂಗ್ರೆಸು ಹೆಸರಿಗಿರುವ ಶಕ್ತಿಯನ್ನು ಮನಗಂಡುದರಿಂದಲೇ ಈ ಸದ್ಗೃಹಸ್ಥರೆಲ್ಲರೂ ಕಾಂಗ್ರೆಸಿಗೆ ಶರಣುಬರಲು ಕಾರಣವಾಯಿತೆಂದ ಮೇಲೆ ಇಂದು ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ದೊರಕಿರುವ ವಿಜಯವನ್ನೇ ಸಾರುತ್ತಿದೆ. ಇದು ಕಾಂಗ್ರೆಸ್ ಸಂಸ್ಥೆಯು ನಿಜವಾದ ಸಾರ್ವಜನಿಕ ಸಂಸ್ಥೆಯೆಂಬುದನ್ನು ರುಜು ಪಡಿಸುತ್ತದೆ. ಕಾಂಗ್ರೆಸ್ಸಿನ ಔದಾರ್ಯವನ್ನು ಪ್ರಕಟಪಡಿಸುತ್ತದೆ. ಹಲವು ಮಹನೀಯರು ಕಾಂಗ್ರೆಸ್ಸಿಗೆ ಸೇರಿ ಕಾಂಗ್ರೆಸ್ಸಿನ ಪ್ರಾಮುಖ್ಯ ಸ್ಥಾನವನ್ನು ಈ ರೀತಿ ಒಪ್ಪಿಕೊಂಡ ಬಗ್ಗೆ ಕಾಂಗ್ರೆಸ್ ಕೆಲಸಗಾರರೆಲ್ಲರಿಗೆ ನಿಜವಾದ ಅಭಿಮಾನವೆನ್ನಿಸಬೇಕು ಮಾತ್ರವಲ್ಲ, ಇದರಿಂದ ತಾವು ಅನುಭವಿಸಿದ ಕಷ್ಟಗಳೆಲ್ಲ ಸಾರ್ಥಕವಾದವೆಂದೇ ಭಾವಿಸಬೇಕಲ್ಲದೆ ಅನ್ಯಥಾ ಇಲ್ಲ.

ಕಾಂಗ್ರೆಸ್ ಸಿವಿಕ್ ಬೋರ್ಡಿನವರು ಉಮೇದ್ವಾರರನ್ನಾರಿಸುವಾಗ ತಮ್ಮ ಮುಂದಿರುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಒಂದೇ ದೃಷ್ಟಿಯನ್ನಿರಿಸಬೇಕಾದುದು ಸಹಜವಲ್ಲದೆ ಕಾಂಗ್ರೆಸ್ ಕೆಲಸಗಾರರ ಹಿಂದಿನ ಸೇವೆಗಳ ಬಗ್ಗೆ ಉಡುಗೊರೆ ಕೊಡುವ ಪ್ರಶ್ನೆಯು ಇದರಲ್ಲಿಲ್ಲವೆಂಬುದು ಪ್ರತಿಯೊಬ್ಬ ಕೆಲಸಗಾರನಿಗೂ ತಿಳಿದ ವಿಚಾರ. ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ಕ್ರಮವಾಗಿ ನೇಮಿಸಲ್ಪಟ್ಟ ಸಿವಿಕ್ ಬೋರ್ಡಿನವರು ತಮ್ಮ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂಬ ಉದ್ದೇಶದಿಂದ ತಮ್ಮ ಕ್ರಮಗಳಿಗೆ ಅನುಸರಿಸಿ ಮಾಡುವ ಚುನಾವಣೆಗಳ ಕುರಿತು ಚರ್ಚಿಸಲು ಆಸ್ಪದವಿಲ್ಲವೆಂಬುದೂ ಸ್ಪಷ್ಟವಿರುತ್ತದೆ. ಹಲವು ವರ್ಷಗಳಿಂದ ಕಾಂಗ್ರೆಸ್ ಕೆಲಸ ಮಾಡಿ ಕಾಂಗ್ರೆಸ್ ಶಿಸ್ತಿನಲ್ಲಿ ಸುಶಿಕ್ಷಿತರಾಗಿರುವ ಶ್ರೀಗಳಾದ ಕೆ. ಮಂಜುನಾಥ ನಾಯ್ಕರೇ ಮೊದಲಾದ ನಿಜ ಕೆಲಸಗಾರರು ಈ ಕುರಿತು ತಪ್ಪು ಅಭಿಪ್ರಾಯಪಟ್ಟಿರುವುದಿಲ್ಲ. ತಮ್ಮನ್ನು ಆರಿಸದೆ ಇದ್ದ ಬಗ್ಗೆ ಬೇಸರಗೊಂಡುದ ಬದಲು, ಸಿವಿಕ್ ಬೋರ್ಡಿನವರು ನೇಮಿಸಿದ ಉಮೇದ್ವಾರರ ಬಗ್ಗೆ ಇವರು ಅಂತಃಕರಣಪೂರ್ವಕವಾಗಿ ಕೆಲಸಮಾಡುತ್ತಾ ಇದ್ದಾರೆಂಬುದನ್ನು ಮಹಾಜನರು ತಿಳಿಯಬೇಕು. ಅದ ದರಿಂದ ವಿಷಯಗಳನ್ನು ಸರಿಯಾಗಿ ಬೋಧಿಸದೆ ಸಂಬಂಧವಿಲ್ಲದ ಹಲಕೆಲವರು ಮಾಡಬಹುದಾದ ಟೀಕೆಯಿಂದ ಮತದಾರರು ಭ್ರಾಂತರಾಗಬೇಕಾಗಿಲ್ಲ ಮಾತ್ರವಲ್ಲ, ಕಾಂಗ್ರೆಸ ಉಮೇದ್ವಾರರನ್ನು ವ್ಯಕ್ತಿ ದೃಷ್ಟಿಯಿಂದ ನೋಡುವ ಆವಶ್ಯಕತೆಯಾದರೂ ಇರುವುದಿಲ್ಲ. ಕಾಂಗ್ರೆಸು ಒಂದು ಶಿಸ್ತಿಗೊಳಪಟ್ಟ ಸಂಸ್ಥೆಯಾಗಿರುತ್ತದೆ. ಇದರಲ್ಲಿ ವೈಯಕ್ತಿಕ ಕಾರ್ಯಧೋರಣೆಗೆ ಎಡೆಯಿಲ್ಲ. ಈ ಶಿಸ್ತನ್ನು ಕಾಪಾಡಲು ಸಾಧ್ಯವೇ ಎಂಬ ಕುರಿತು ಸಂಶಯಪಡಬೇಕಾಗಿಲ್ಲ. ತನ್ನ ಶಿಸ್ತನ್ನು ಕಾಪಾಡಲು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಬೆಂಬಲವಿರುತ್ತದೆಂಬುದನ್ನು ಮರೆಯಬಾರದು.

ಕಾಂಗ್ರೆಸ್ ಉಮೇದ್ವಾರರಿಗೇನೇ ಮತದಾರರು ತಮ್ಮ ಮತಗಳನ್ನು ಕೊಟ್ಟು ಕಾಂಗ್ರೆಸ್ಸ್ ತಮ್ಮ ಸಂಸ್ಥೆಯೆಂದು ರುಜುಪಡಿಸಿ ಕಾಂಗ್ರೆಸ್ ಧ್ವಜದ ಮಾನವನ್ನು ಕಾಪಾಡುವುದು ಪ್ರತಿಯೊಬ್ಬ ಮತದಾರನ ಕರ್ತವ್ಯವಿರುತ್ತದೆ.

ಹಿ. ರಾಮರಾಯ ಮಲ್ಯ,
ಕಾಂಗ್ರೆಸ್ ಸಿವಿಕ್ ಬೋರ್ಡ್ ಕಛೇರಿ, ಮಂಗಳೂರು.

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ
ಸಾರ್ಸಪರಿಲ್ಲಾ

ಕೆಟ್ಟ ರಕ್ತಕ್ಕೆ ಪರಮೌಷಧ
೫೦ ವರ್ಷದ ಅನುಭವ.
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫಾಸ್ಫರಸ್ ಗುಳಿಗೆಗಳು.
ಟಕ್ಕೆ ...
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಘಾಟಕೋಪರ್, ಮುಂಬಾಯಿ ೫
ಏಜೆಂಟ್ಸ್ - ... ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ...]

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA——AND——MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes, Wounds Cuts, Colds, Headache It is a complete substitute for the domestic medicine chest Try once this unequalled remedy In ¼oz tin As 8/ In oz jar As 12/-

Superior Red Balm For relieving pains in muscles and on skin Directions for use with the bottle Price As 12/- only

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms, children and adults try this unique remedy and be freed from your ailment Price As 10 per packet

Pocket Inhaler For coughs and hoarseness, headache catarrh colds use this inhaler and you will be relieved immediately Price per inhaler As 6 & As 8/-

Po Ho Fluid For Asthma colds indigestion toothache lumbago a sure remedy in all cases Price As 6/- and Re 1 per phial

Cough Cure An infallible remedy for coughs of all kinds bronchitis, hoarseness Particulars in bottle Price As 12/- for 3 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As 1/3, 2/6, 3/- 4

Basel Mission Book Dpot
Mangalore, Branches in Codialbail, Hubli, Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ಸ್ವದೇಶಾಭಿಮಾನಿಯ ದಸರಾ ಸಂಚಿಕೆಯಲ್ಲಿ ಪ್ರಕಟವಾದ

ಒಗಟಿನ ಉತ್ತರ.

ಮಂಗಳೂರಿನ ವಾರಪತ್ರಿಕೆಗಳಲ್ಲಿ ಸ್ವದೇಶಾಭಿಮಾನಿಯೇ ಮೊದಲನೆದು. ಜಾಹೀರಾತಿಗೆ ಇದರಷ್ಟು ಉತ್ಕೃಷ್ಟ ಕೇಂದ್ರವಿಲ್ಲ. ಇಷ್ಟು ಕಡಿಮೆ ಚಂದಾಹಣದ ಸಚಿತ್ರ ವಾರಪತ್ರಿಕೆಯು ಕನ್ನಡ ನಾಡಿನಲ್ಲಿಲ್ಲ. ಇಂದೇ ಚಂದಾದಾರರಾಗಿರಿ.

ಹೆಚ್ಚು ಸ್ಥಾನಗಳನ್ನೂ, ಸರಿಯಾದ ಉತ್ತರವನ್ನೂ ಕಳುಹಿಸಿದ ಶ್ರೀ ಕೆ. ಟಿ. ಕರ್ಕೇರ, ಬೊಂಬಾಯಿ ಇವರಿಗೆ ಒಂದು ಬೆಳ್ಳಿಯ ಪದಕವು ಬಹುಮಾನಿಸಲ್ಪಡುವುದು.

ಒಗಟನ್ನು ಸರಿಯಾಗಿ ಬಿಡಿಸಿದವರು.— ನಾರ್ಣಪ್ಪ ರಮಾನಂದರಾವ್, ೫ನೇ ತರಗತಿ, ಬೋ. ಸ್ಕೂಲ್, ಬೆಳ್ತಂಗಡಿ. ಶ್ರೀಮತಿ ಗಿರಿಜಾ ಬಾಯಿ ಎಸ್. ಎಸ್. ಎಲ್. ಸಿ. ಗವರ್ನಮೆಂಟ್ ಟ್ರೈನಿಂಗ್ ಸ್ಕೂಲ್, ಫೋರ್ ವಿಮೆನ್, ಮಂಗಳೂರು. ಕೆ. ಬಾಬುರಾಯ ಪೈ, ಸೋಡಾ ಫೇಕ್ಟರಿ, ಕುಂದಾಪುರ. ಹೊಸಂಗಡಿ ರಾಮಕೃಷ್ಣ ಪೈಗಳ ಪುತ್ರಿ ಭಾರತಾಂಬಾ ಬಾಯಿ, ಹೊಸಂಗಡಿ, ಕುಂದಾಪುರ. ಎಲ್. ಎಸ್. ಉಡುಪಿಕರ್ ಮೈಸೂರು ಮಂಗಳೂರ್. ಬಿ. ರಂಗಪ್ಪ ನಾಯಕರ ಮಗ ... ನಾಥನ ನಾಯಕ್, ಟಿಂಬರ್ ಮರ್ಚೆಂಟ್ ಮಂಗಳೂರು. ಕೆ. ಬ್ರಹ್ಮಾನಂದ ಸೆಟ್ಟಿಗಾರ, ಗೌ. ಕಾರ್ಯದರ್ಶಿ, ಎಸ್. ಪಿ. ವಿ. ಎಸ್. ಸೇವಾ ಸಂಘ, ವ್ಯಾಟರ್ ... ಕಾರ್ಕಳ. ಯು. ನಾರಾಯಣ ಮಲ್ಯರ ಮಗ ... ನರಸಿಂಹ ಮಲ್ಯ, ಜವುಳಿ ವ್ಯಾಪಾರಿ ಉಳ್ಳಾಲ. ... ದೇವರಾಯಪ್ಪ, ಮುಖ್ಯೋಪಾಧ್ಯಾಯ, ... ಸ್ಕೂಲ್ ಹೊಸದುರ್ಗ, ಕೋಟೆ ಗಣೇಶ ... ಟ್ಟಪ್ಪಯ್ಯ, ಪೋಸ್ಟ್ ತಾಡಾಗಡಿ, ಬೆಳ್ಳಾರಿ, ... C/o ಇ. ಡಿ. ಸಾಸೂನ್ ಎಂಡ್ ಕಂಪೆನಿ ... ಮಿಲ್ಸ್ ಡಿಪಾರ್ಟ್‌ಮೆಂಟ್, ಸುಪಾರಿ ... ಡ್ ಮುಂಬಾಯಿ. ಶ್ರೀ ಸಾಗರಾಜಯ್ಯ, ಉಪಾಧ್ಯಾಯ, ಕೊಲೆಕಾಡಿ ಬೈಲ್, ಮೂಡಬಿದ್ರಿ ಹಳ್ಳಿ ಪೋಸ್ಟ್ ... ಜಲಕಟ್ಟೆ. ಕೆ. ಅನಂತರಾಮಯ್ಯ, ಕಾಡ್ತಾಡೆ ... ಗ್ರಾಮ, ಮೂಡಬಿದ್ರಿ. ಶ್ರೀ ಗೋವಿಂದರಾವ್, ... ಡುಪಿ ರೋಡ್, ಸೈದಾಪೇಟೆ ಮದ್ರಾಸು ಕೆ ವಾಸುದೇವ ಪೈ, ಟೀಚರ್ಸ್ ಸೊಸೈಟಿಯ ಕಾರ್ಯದರ್ಶಿ, ... ಸರಗೋಡು ಬಿ ಪದ್ಮನಾಭ ಬಾಳಿಗಾ, ಜವುಳಿ ... ವ್ಯಾಪಾರಿ, ಬಂಟ್ವಾಳ ಶ್ರೀ ಪಿ ಪಿ ಮಧ್ವಣ್ಣ, ಜರೂಲ್ ಸ್ಟ್ರೀಟ್, ಪೋಸ್ಟ್ ಸುಂಟಿಕೊಪ್ಪ, ಕೊಡಗು. ಶಂಕರ ... ಸರಳೀಕಟ್ಟೆ ಎಚ್ ಕೆ ಕಾಮತ್, ಮರ್ಚೆಂಟ್ ... ಜಾಲಕಟ್ಟೆ. ಹೊಸಕೊಪ್ಪ ಫರೀದಾ ಪಿ ಕರ್ಕೇರಾ, C/o ... ರೈನಾನ್ ಎಂಡ್ ಕಂಪೆನಿ ಬಿಲ್ಡರ್ಸ್ ಎಸ್ಟೇಟ್ ... ರ್ಟರ್ ಬೊಂಬಾಯಿ ಯು ವಿಶ್ವಂತರಾವ್ C/o ... ಮಾಸ್ಟರ್ ಬೈಲೂರು ಪೋಸ್ಟ್ ಕಾರ್ಕಳ ... ಕೊಗ್ಗನಾಯಕ್, ಬೈಲೂರು ಯು. ಸಂಜೀವ, ಮೆನೇಜರ್, ಇಂಪೀರಿಯಲ್ ಬೀಡಿ ವರ್ಕ್ಸ್, ಉಳ್ಳಾಲ ... ಸುವರ್ಣ, ಬಸವನಗುಡಿ ರಸ್ತೆ, ಮಂಗಳೂರು ... ಪ್ರಿಯ ಪ್ರಭು C/o ಪಿ ಸುಂದರನಾಥ ಮಲ್ಯ, ಮರ್ಚೆಂಟ್ ಗೋಳಿಕಟ್ಟೆ ಬಜಾರ್ ಮಂಗಳೂರು, ... ರಾಘವೇಂದ್ರ ಶ್ಯಾನುಭೋಗ, C/o ಡಾ. ಆರ್. ವಿ ... ಪ್ರಭು, ಎಂ. ಬಿ. ಬಿ. ಎಸ್. ಕಾರ್ಕಳ ಶ್ರೀ ಎ ಆರ್. ... ಶ್ರೀಕೃಷ್ಣಯ ಸಾಳ್ ಶ್ರೀ ಎಂ ಜಿ. ಶೆಣೈ, C/o ಪಿ. ವಿ ... ಕೃಷ್ಣರಾವ್, ನಂಬ್ರ ೧೮ನೇ ಮುನ್ಸಿಪಲ್ ರೋಡ್ ... ಮದ್ರಾಸು ಶ್ರೀ ವಿಷ್ಣುರಾಬಾ ಸುಜೀರ್, ಘರಂಗಿ ಪೇಟೆ. ಶ್ರೀ ಅರ್. ಕೆ. ಸುಬ್ಬರಾಯಾ, ಪೋಸ್ಟ್ ಮಾಸ್ಟರ್, ... ಕೋಲದಾಲು ಕೆ. ಮುದ್ದು ಸುವರ್ಣ, ೮ನೇ ತರಗತಿ, ... ಬಿ. ಎಸ್. ಹಾ. ಎ. ಶಾಲೆ ಕಟಪಾಡಿ. ಶ್ರೀ ಬಸಪ್ಪ ... ಪ್ರಭು ಬೋರ್ಡ್ ಶಾಲೆ, ಘರಂಗಿಪೇಟೆ ಪಿ. ... ಗೋವಿಂದಯ್ಯ, ಕಂಟೋಡಿ ಬೆಳ್ಳಾರೆ, ಶ್ರೀ ಪದೀರ ... ಅಣ್ಣಪ್ಪ ಶೆಟ್ಟಿ, ಕುಂದಾಪುರ. ಶ್ರೀ ಎಚ್. ... ಶ್ರೀನಿವಾಸ ಕಾಮತ್ C/o ಎಚ್. ಗೋಪಾಲಕೃಷ್ಣ ಕಾಮತ್, ಲೇಂಡ್ ಲೋರ್ಡ್ಸ್ ಬಸ್ರೂರು, ... ಶ್ರೀ ರಾಮ ಹಾ. ಎ. ಶಾಲೆ, ಘರಂಗಿಪೇಟೆ, ... ರಾಜಬಂಗೇರ C/o ಕಾಪ್ತುಕಿನಾ ಚಂದಪ್ಪಯ್ಯ ... ಅಪೋಲೋ ರೋಡ್, ಫೋರ್ಟ್ ಬೊಂಬಾಯಿ. ಎಚ್. ಬೇರಾಗ್ ಅಣ್ಣಪ್ಪ, ಮುಖ್ಯೋಪಾಧ್ಯಾಯ, ಮುಹಮ್ಮದನ್ ಬೋ. ಸ್ಕೂಲ್, ಬೆಳ್ತಂಗಡಿ. ಬಾಡಿಸ್ಲವ್ ಬಿ ಕುಂಜ, ೮ನೇ ದರ್ಜೆ

ಬೋ. ಹೈಸ್ಕೂಲ್ ಮುಲ್ಕಿ. ಶ್ರೀ ಎಸ್ ಬಾಬುರಾಯ ಶೆಟ್ಟಿ, ಉಪ್ಪಿನಂಗಡಿ, ಬಿ. ಉಮಾನಾಥ ನಾಯಕ್ C/o ಜಸಾರಿ. ಅಪ್ಪು ಮಲ್ಯ ಎಂಡ್ ಸನ್ಸ್, ಗೋಳಿಕಟ್ಟೆ ಬಜಾರ್, ಮಂಗಳೂರು. ಹಸನಬ್ಬ ಎ. ದಾಸಾ ಎಲಿಮೆಂಟರಿ ಶಾಲೆ ಸೂಜೀರು, ಶ್ರೀ ಕೆ. ಪದ್ಮನಾಭ ಪ್ರಭು C/o ಕೆ. ಅನಂತ ನಾರಾಯಣ ಪ್ರಭು, ಸಾವಕಾರ ಗೋಳಿಕಟ್ಟೆ ಬಜಾರು, ಮಂಗಳೂರು. ಶ್ರೀ ಎಂ. ತಾರಾಮತಿ ಬಾಯಿ, ೬ನೇ ತರಗತಿ, ಬೋ. ಹೈಸ್ಕೂಲು ಮುಲ್ಕಿ. ಶ್ರೀ ಎಸ್. ವಿಠಲ ನಾಯ್ಕ, IV ಫೋರ್ಮ್ ಕೆನರಾ ಹೈಸ್ಕೂಲ್ ಮಂಗಳೂರು. ಕೆ. ವಾಮನ ಪೈ, ಜವುಳಿ ವ್ಯಾಪಾರಿ, ಮುಚ್ಚಯಾಲ್, ಅಜೇಕಾರ್. ಕೆ. ಸುಬ್ಬಣ್ಣ ಉಪಾಧ್ಯಾಯ, ಗೌ. ಹಾ. ಎ. ಟ್ರೈನಿಂಗ್ ಶಾಲೆ, ಮಂಗಳೂರು ಶ್ರೀ ಎ. ಬಿ. ಗುಮ್ಮಣ್ಣ ಶೆಟ್ಟಿ, ಉಪಾಧ್ಯಾಯ, ಶ್ರೀರಾಮ ಹಾ. ಎ. ಶಾಲೆ, ಘರಂಗಿಪೇಟೆ. ಶ್ರೀ ಕೆ ಪಿ. ಮಲ್ಯ C/o ಎ. ಪಿ. ಮಟ್ಟಾಡಿ ಬ್ರದರ್ಸ್, ಬೋಳಾರ ಮಂಗಳೂರು. ಶ್ರೀ ಶೆಟ್ಟಿ ನಾರಾಯಣ ಪೈ, V ಫೋರ್ಮ್ ಬೋ. ಹೈಸ್ಕೂಲು, ಕಾರ್ಕಳ. ಮೊಯಿದಿ ಕುಂಞ ಬ್ಯಾರಿ, ವ್ಯಾಪಾರಿ ಮಂಜೇಶ್ವರ. ಶ್ರೀ ಕೆ. ಎಂ. ಕುಂಞಾ, ಕಂಬಳಿ ವ್ಯಾಪಾರಿ, ಸಂತೆಪೇಟೆ ಉಡುಪಿ. ಭಾಮಾ ರಘುನಾಥಶೆಣೈ V ಫೋರ್ಮ್ ಎಸ್. ವಿ. ಎಸ್. ಟೆಂಪಲ್ ಹೈಸ್ಕೂಲ್ ಬಂಟ್ವಾಳ. ಶ್ರೀಯು ಕೃಷ್ಣಭಟ್, ಕುಲ್ಯಾಡಿ ಗ್ರಾಮ ಪರ್ಕಳ. ಶ್ರೀ ಸಿ. ಗೋಪಾಲಶೆಟ್ಟಿ, ಅಧ್ಯಾಪಕ, ಶ್ರೀ ಮಹಾಲಿಂಗೇಶ್ವರ ಸ್ವಾಮಿ ಎಲಿಮೆಂಟರಿ ಶಾಲೆ, ಶಿರ್ವ ಪಂಜಿಮಾರ, ಶಿರ್ವ. ಕಂಟ್ರಿಬೈಲು ಸುಬ್ಬರಾವ್ ಗರ್ಲ್ಸ್ ಬೋರ್ಡ್ ಶಾಲೆಯ ಬಳಿ, ಬಂಟ್ವಾಳ ಮೈಕೆಲ್ ಕೋರ್ಡರ್ ಘರಂಗಿಪೇಟೆ. ಎಚ್ ವಾಸುದೇವ ಕಾಮತ್, ಪಾಂಡೇಶ್ವರ ... ಲಾಂಡ್‌ಪೇಟೆ, ಮಂಗಳೂರು. ಸುಳ್ಯ ಕಸಬಾ ಗ್ರಾಮದ ಕೊಡಿಯಾಲಬೈಲು ಸುಬ್ಬಣ್ಣ ನಾಯ್ಕರ ಮಗ ಅಚ್ಚಣ್ಣ ನಾಯ್ಕ್, ಸುಳ್ಯ ಶ್ರೀ ಸಿ. ಎನ್. ಪಿ ಭಂಡಾರ್‌ಕಾರ್ ಬೆಳ್ಳೂರು. ಬಿ ಪಿ. ಬಹದ್ದೂರ್‌ಖಾನ್ C/o ಎಂ ಕೆ. ನಾಯಕ್ ಅಂಡ್ ಸನ್ಸ್, ಮಂಗಳೂರು ಎಚ್ ಸಂಕಯ್ಯ ಶೆಟ್ಟಿ, ಬೆಂತಾರಿ ಗ್ರಾಮದ ಪಟೇಲ, ಬ್ರಹ್ಮಾವರ ಶ್ರೀನಿವಾಸರಾಯ ಕಾಮತ್, ೮ನೇ ತರಗತಿ, ಬೋ. ಹೈಯರ್ ಎಲಿಮೆಂಟರಿ ಶಾಲೆ, ನಂದಳಿಕೆ. ಸುಬ್ರಾಯ ನಾಯ್ಕ ಎಸ್ ಮರ್ಚೆಂಟ್ ಘರಂಗಿಪೇಟೆ. ಡಿ ಪಿ ಪುಟ್ಟಣ್ಣ ಶೆಟ್ಟಿ, ಪ್ರಭಾಕರ ಹಿಂದೂ ಹೊಟೇಲು, ಬೊಂಬಾಯಿ. ಎಚ್. ಗುಂಡುನಾಯ್ಕ, ೭ನೇ ತರಗತಿ, ಬೋರ್ಡ್ ಹಾ. ಎಲಿಮೆಂಟರಿ ಶಾಲೆ, ಹೆಬ್ರಿ ಶ್ರೀ ಬಿ ಶ್ರೀಧರ ಕಾಮತ್, S/o ಬಿ ದಾಮೋದರ ಕಾಮತ್, ಬೆಳ್ಮಣ್ಣು ಎಚ್ ರಂಗರಾಜು, ವಿದ್ಯಾರ್ಥಿ, ಬೋ. ಹಾ. ಎ. ಶಾಲೆ, ಹೆಬ್ರಿ ಬಿ. ಶ್ರೀನಿವಾಸರಾವ್ ಪೋಲೀಸ್ ದಫೇದಾರ, ಬಸ್ರಿಕಟ್ಟೆ ಬಾಳೆಹೊನ್ನೂರು ಎಚ್ ರಾಮದಾಸ ಶೆಣೈ ೩ನೇ ತರಗತಿ ಹೆಬ್ರಿ ಶಾಲೆ, ಹೆಬ್ರಿ ಮಿತ್ತೂರು ವೆಂಕಟ್ರಮಣ ಭಟ್, ಮಿತ್ತೂರು ಬೋ. ಶಾಲೆ, ಮಿತ್ತೂರು

ಬಿತ್ತುಗರಲ್ಲಿ ಸೋದ್ದಿಯನ್ನು ತೆಗೆಯಲಾಗಿ ಪೆಸರಿನ ಮುಂಗಡೆಯಲ್ಲಿ ಈ ಶ್ರೀ ಗುರುತು ಇದ್ದವರಿಗೆ ಒಂದೊಂದು ಪುಸ್ತಕವು ಬಹುಮಾನವಾಗಿ ದೊರೆತಿರುತ್ತದೆ, ಅದನ್ನು ಅವರಿಗೆ ಕಳುಹಿಸಲಾಗುವುದು

ಒಗಟಿನ ಕಾರ್ಯದರ್ಶಿ,
ಸ್ವದೇಶಾಭಿಮಾನಿ ಕಾರ್ಯಾಲಯ ಮಂಗಳೂರು

ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಬಾತ್ಮಿದಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಸ್ವದೇಶಾಭಿಮಾನಿಯ ಸಂಪಾದಕರಿಗೆ,

ಮಹನೀಯರೇ, ನಮ್ಮ ಜಿಲ್ಲೆಯ ಸೋಶಲಿಸ್ಟ್ ಪಾರ್ಟಿಯ ಕಾರ್ಯಕಲಾಪಗಳೇನಿದ್ದರೂ ಸ್ವದೇಶಾಭಿಮಾನಿಯ ವಾಚಕರ ಅವಗಾಹನೆಗೆ ಈ ತನಕ ಬಾರದಿದ್ದರೂ ನನ್ನ ಹೆಸರನ್ನು ಪಾರ್ಟಿಯಿಂದ ವಿಸರ್ಜಿಸಲ್ಪಟ್ಟಿದೆಯೆಂಬ ವರ್ತಮಾನವನ್ನು ತಮ್ಮ ಪತ್ರಿಕೆಯ ಮೂಲಕ ಪ್ರಕಟಿಸಿದುದು ಸೋಶಲಿಸ್ಟ್ ಪಾರ್ಟಿಯ ನ್ಯಾಯಬುದ್ಧಿಯನ್ನೂ ನೀತಿಯ ಧ್ಯೇಯವನ್ನೂ ಸ್ಪಷ್ಟಗೊಳಿಸುತ್ತದೆ, ಯಾಕೆಂದರೆ ೧೪—೧೦—೩೫ಕ್ಕೆ ನಾನು ಸೋಶಲಿಸ್ಟ್ ಪಾರ್ಟಿಗೆ ವಿರೋಧವಾಗಿ ವರ್ತಿಸಿದ್ದರಿಂದ ನನ್ನನ್ನು ವಿಸರ್ಜಿಸಬೇಕೆಂಬ ಠರಾವು ಚರ್ಚಿಸಲ್ಪಡುವುದೆಂದು ಕಾರ್ಯದರ್ಶಿಯವರ ನೋಟೀಸು ನನಗೆ ತಲಪಿದಾಗ, ನನ್ನ ಮೇಲಿರುವ ಆರೋಪಗಳು ಯಾವುವು ಎಂಬುದನ್ನು ಸಂಕ್ಷೇಪವಾಗಿ ನನಗೆ ತಿಳಿಸಬೇಕೆಂದು ನಾನು ಉತ್ತರ ಕಳುಹಿಸಿದೆನು. ಬ್ರಿಟಿಷ ಸರ್ಕಾರದಲ್ಲಿ ಕೂಡ ಒಬ್ಬ ಮನುಷ್ಯನನ್ನು ಶಿಕ್ಷಿಸಬೇಕಾದರೆ, ಶಿಕ್ಷೆಯನ್ನು ವಿಧಿಸುವ ಮುಂಚಿತವಾಗಿ ಅವನ ಮೇಲಿರುವ ಆರೋಪಗಳಾವುವು ಎಂಬುದು ತಿಳಿಸಲ್ಪಡುವುದು ಆದರೆ, ಸಮತಾವಾದ, ನ್ಯಾಯನೀತಿ, ಮುಂತಾದ ಧ್ಯೇಯಸಾಧನೆಗಾಗಿ ಹೋರಟ ನಮ್ಮ ಜಿಲ್ಲೆಯ ಸೋಶಲಿಸ್ಟ್ ಪಾರ್ಟಿಯು ನನ್ನ ಮೇಲಿರುವ ಆರೋಪಗಳಾವುವೆಂದಾಗಲೀ, ಯಾವ ರೀತಿಯಲ್ಲಿ ನಾನು ಸೋಶಲಿಸ್ಟ್ ಪಾರ್ಟಿಗೆ ವಿರೋಧವಾಗಿ ವರ್ತಿಸಿದೆನೆಂದಾಗಲೀ ತಿಳಿಸುವಷ್ಟು ನ್ಯಾಯಬುದ್ಧಿಯನ್ನು ತೋರಿಸಲಿಲ್ಲ ಈ ಪರಿಸ್ಥಿತಿಯಲ್ಲಿ ಆ ದಿನದ ಸಭೆಗೆ ನಾನು ಬರುವುದರಿಂದ ಉಪಯೋಗವೇನೂ ಇಲ್ಲವೆಂದು ಅವರಿಗೆ ತಿಳಿಸಿದೆನು ನನ್ನನ್ನು ಪಾರ್ಟಿಯಿಂದ ವಿಸರ್ಜಿಸಿದ್ದರೆಂಬ ವರ್ತಮಾನ ಕೂಡ ನನಗೆ ತಿಳಿಸಲಿಲ್ಲ

ಎರಡು ಸಾರಿ ಬರಹ ಮೂಲಕ ಕೇಳಿಕೊಂಡರೂ ನನ್ನ ಮೇಲಿರುವ ಆರೋಪಗಳು ಯಾವುವೆಂಬುದನ್ನು ನನಗೆ ತಿಳಿಸದೆ ಕೊನೆಯ ಪತ್ರಕ್ಕೆ ಉತ್ತರ ಕೂಡಾ ಕೊಡದೆ ನನ್ನ ಗೈರ್‌ಹಾಜರಿಯಲ್ಲಿ ಪಾಸುಮಾಡಿದ ಈ ಠರಾವಿನಿಂದ ಸೋಶಲಿಸ್ಟ್ ಪಾರ್ಟಿಯು ಏನನ್ನು ಸಾಧಿಸಿತೆಂಬುದನ್ನು ಬೇರೆ ಹೇಳಬೇಕಾಗಿಲ್ಲ; ಪತ್ರಿಕೆಗಳಲ್ಲಿ ಪ್ರಕಟಿಸಿದುದರಿಂದ ನನಗೆ ಅವಮಾನವಾಗುವುದೆಂಬ ಎಣಿಕೆಯಿದ್ದರೆ, ಅದು ಕೈಗೂಡಲಿಲ್ಲವೆಂದಿಷ್ಟೇ ಹೇಳಬಲ್ಲೆನು. ಇತಿ,

4-10-35. ರಂಗರಾವು ತಲಚೇರಿಕರ್

ಸೆಲ್ಫ್ ಇಂಗ್ಲಿಷ್ ಸ್ಟಡಿ.

ಕನ್ನಡ ಓದಲಿಕ್ಕೆ ತಿಳಿದವರು ಇನ್ನೊಬ್ಬರ ಸಹಾಯವಿಲ್ಲದೆ ಇಂಗ್ಲಿಷು ಓದುವುದಕ್ಕೂ ಬರೆಯುವುದಕ್ಕೂ, ಮಾತನಾಡುವುದಕ್ಕೂ, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದಕ್ಕೂ 2 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೫೦ ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರವೇ ಇರುವುವು ಬೇಗನೇ ಬರೆಯಿರಿ, ಕ್ರಯ ಪುಸ್ತಕ 1ಕ್ಕೆ ರೂ 2

ವಿಳಾಸ —K. L BENSON & CO.
17 Beat MADRAS

ಕಥಾಕುಂಜ.
(ಸಣ್ಣ ಕಥೆಗಳ ಮಾಸಪತ್ರಿಕೆ)

ಮುಂಬಾಯಿ, ಮೈಸೂರು ಪ್ರಾಂತಗಳ ವಿದ್ಯಾಖಾತೆಯವರಿಂದ ಶಾಲೆ—ಕಾಲೇಜುಗಳ ವಾಚನಾಲಯಗಳಿಗೆ ಮಂಜೂರಾಗಿದೆ

ಕನ್ನಡ ನಾಡಿನ ಸುಪ್ರಸಿದ್ಧ ಬರೆಹಗಾರರ ಕಥೆ, ಏಕಾಂಕ ನಾಟಕ, ಸಾಹಿತ್ಯ ಸುದ್ದಿ, ಮಾಸಭವಿಷ್ಯ ಮೊದಲಾದುವುಗಳನ್ನು ಒಂದೆಡೆಗೆ ಓದಲು ಸಿಗುವ ಮಾಸಪತ್ರಿಕೆ ಕರ್ನಾಟಕದಲ್ಲಿ ಇದೊಂದೇ ಬೇಗನೇ ಮುಂಗಡ ಹಣ ಕಳುಹಿಸಿ ಚಂದಾದಾರರಾಗಿರಿ, ವಾರ್ಷಿಕ ಚಂದಾ ರೂ ೨—೮—೦ (ಅಂಚೆ ವೆಚ್ಚ ಸೇರಿ) ಶಾಲೆ ಕಾಲೇಜು, ವಾಚನಾಲಯಗಳಿಗೆ ರೂ ೨.

ಜಾಹೀರಾತು ಕೊಡುವವರಿಗೆ ಸುವರ್ಣ ಸಂಧಿ!

ಕಥಾಕುಂಜ ಕಾರ್ಯಾಲಯ, ಬೆಳಗಾವಿ.

ದರ ಸುಲಭ' ಇಂದೇ ಪಡಕೊಳ್ಳಿರಿ ಮತ್ತೆ ಸಿಗಲಾರದು! ಹೊಸ ವ್ಯಾಲ್ಯು!



ಈಗ 4 ರೂಪಾಯಿಗೆ ಸಿಗಬಹುದಾದ ವಸ್ತುಗಳು ಮತ್ತೆ 8 ರೂಪಾಯಿಗಳನ್ನು ಕೊಟ್ಟರೂ ಸಿಕ್ಕಲಿಕ್ಕಿಲ್ಲ ... ಗೊಳ್ಳಬೇಡಿ ಇದೀಗ ಸುಸಂಧಿ! 2 ಡಜನು ರಿಸ್ಟ್‌ವಾಚುಗಳು ಸಿಲ್ಕು ಪಟ್ಟಿ ಸಮೇತ 1 ಜಾರ ಪ್ರೂಫ್‌ಲ್ಯಾನರ್ ಪೋಕೆಟ್ ವಾಚು ಸರಿಯಾದ ಸಮಯವನ್ನು ಕೊಡುತ್ತದೆ 8 ವರ್ಷಗಳ ಗೆರಂಟಿಯನ್ನು ಕೊಡುತ್ತೇವೆ 1 ಟೈಮ್‌ಪೀಸ್ 10 ವರ್ಷಗಳ ಗೆರಂಟಿ ಕೊಡಲ್ಪಡುವುದು ಬಂಗಾರದ ನಿಬ್ಬುಳ್ಳ ಒಂದು ಸ್ವರಾಜ್ ಫೌಂಟನ್‌ಪೆನ್, ಒಂದು ಟೋರ್ಚ್ ಲೈಟ್ ಬೆಟರಿ ಸಮೇತ ಒಂದು ಪನಾಮ ಸೋಪು ಇವುಗಳೆಲ್ಲವನ್ನೂ ನಾಲ್ಕು ರೂಪಾಯಿಗಳಿಗೆ ಪಡೆಯಬಹುದು ಪೇಕಿಂಗ್ ಮತ್ತು ಟಪ್ಪಾಲು ಹಾಸಲು ಪ್ರತ್ಯೇಕ, ವ್ಯಾಲ್ಯು ಬೇಡವೆಂದು ಕಂಡುಬಂದರೆ ಹಣ ಪರತ

International Trading Co. Post Box No 6714 (4W SW) CALCUTTA

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT.—

Bombay—Fort,	Mangalore—City,
Bombay—Mandvi,	Mangalore—Bunder,
Hubli,	Kasaragod,
Calicut,	Puttur,
Cochin,	Buntwal,
Ernakulam,	Karkala,
Alleppey,	Coondapoor,
Bangalore,	Udipi,
Davangere,	&
Chickmagalur,	Gangoli.

AVAILABLE IN DENOMINATIONS OF Rs. 10x UPWORDS.

TOTAL YIELD RS 4-6-0% P.A.

Paid once half yearly at 3½% p. a. with an additional 1½% p. a on maturity If Left To Accumulate

RS. 100/-

Will Amount to

RS. 122-13-6

Estd 1906

CANARA BANK

LIMITED

Subscribed Capital		Paid up Capital
6,00,000		3,31,000
Reserves	Deposits	Working Capital
4,50,000	58,62,000	73,49,000

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara.—

Raghavendra Ranga Pai, Car Street, Magnalore.

ಕುಂದಾಪುರ ಪ್ರವರ್ತಕರು:—ಕಾಮತ್ ಸ್ವದೇಶೀ ಎಂಪೋರಿಯಂ

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ,
ಅಥವಾ
ಬನ್ನಿರಿ

ತಯಾರಾಗಿದೆ!

ಗೌ. ಹಾ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ ಇದನ್ನು ಗವರ್ನ್ಮೆಂಟ್ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.	ರೂ	ಆ	ಪೈ
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	3	0				
ನಾಲ್ಕನೇ ,,	0	3	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಆರ್ಗಣೆ ಮುದ್ದೆ.
ಇಲಿಗಳ ಧಕ್ಕ ಧೈ.
ಅಂಗಳ ದುಗ್ಗ.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೋಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ. 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾರಘಾಂಗಾಡ್ ಪೆಸೆಂಜರು	ಬೆ 8-25	ಮ 1-20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6 16

ಖಾದಿ– ತೊಡಕಿನ ಪ್ರಶ್ನೆ.

(ಮಹಾತ್ಮಾ ಗಾಂಧಿ)

ನೂಲುವ ಕೂಲಿಯನ್ನು ಹೆಚ್ಚಿಸಬೇಕೆಂಬ ವಿಚಾರವು ನಡೆದ ಕೂಡಲೇ ಎಷ್ಟೋ ಖಾದಿ ಪ್ರೇಮಿಗಳು ನಿಜವಾಗಿ ಹೆದರಿಕೊಂಡಿರುತ್ತಾರೆ. ಖಾದಿಯ ಬೆಲೆಯು ಏರಿದಾಕ್ಷಣ ಖಾದಿಯ ಮಾರಾಟವು ಇಳಿಯುವುದೆಂದು ಖಾದಿ ಪ್ರೇಮಿಗಳ ಅಂಜಿಕೆ. ಖಾದಿಯ ಬೆಲೆಯ ಏರಿಕೆಯನ್ನು ಜನತೆಯು ಮನ್ನಿಸುವುದೆಂದು ನಾನು ಆಶಿಸುತ್ತೇನೆ. ಚರಖಾ ಸಂಘದವರು ಖಾದಿಯ ದರವನ್ನು ಇಳಿಸಬೇಕೆಂಬ ಉದ್ದೇಶದಿಂದ ಪ್ರಯತ್ನಮಾಡುತ್ತ ಬಂದರು; ಅದರಿಂದ ಖಾದಿಯನ್ನು ಕೊಳ್ಳುವವರಿಗೆ ಲಾಭವಾಗಿದೆ ಖಾದಿಯು ಈಗ ತೀರ ಅಗ್ಗವಾಗಿದೆ, ಆದರೂ ಖಾದಿಯ ಮಾರಾಟವೂ ತೀರ ಇಳಿದಿದೆ ಪ್ರಚಾರಕಾರ್ಯದ ಅಭಾವವೇ ಇದಕ್ಕೆ ಕಾರಣವಾಗಿದೆ ಸುವ್ಯವಸ್ಥೆಯಿಂದ ಪ್ರಚಾರಕಾರ್ಯವನ್ನು ಕೈಕೊಂಡರೆ ಖಾದಿಯ ಮಾರಾಟವು, ಬೆಲೆಯು ಕಿಂಚಿತ್ತು ಹೆಚ್ಚಾದರೂ, ಏರುವುದೆಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆನು

ಎಂತಹ ಆಪತ್ತಿಗೂ ತಲೆಯೊಡ್ಡಲು ಸಿದ್ಧವಾಗಿರುವುದು ಒಳ್ಳೆಯದು ಮಾರಾಟವು ಇಳಿಯುವುದೆಂದು ಜನತೆಗೆ ಹೆದರಿ ಚರಖಾ ಸಂಘವು ನೂಲುವವರ ನ್ಯಾಯವಾದ ಬೇಡಿಕೆಯನ್ನು ಅಲ್ಲಗಳೆಯಲಾಗದು ಯಾರು ಹೊಟ್ಟೆಯ ಸಲುವಾಗಿ ನೂಲುವುದಿಲ್ಲವೋ ಅವರ ಹೆಸರುಗಳನ್ನು ನೂಲುವವರ ಪಟ್ಟಿಯೊಳಗಿಂದ ಕಡಿಮೆಮಾಡಬಹುದು ಹೊಟ್ಟೆಗಾಗಿಯಲ್ಲ? ಆದರೆ ತಂಬಾಕು ಬಳೆ ಮೊದಲಾದ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಣಬೇಕೆಂದು ನೂಲುವವರು ನೂರಾರು ಅಲ್ಲದೆ ಸಾವಿರಾರು ಜನರಿದ್ದಾರೆ ಹೊಟ್ಟೆಯ ಸಲುವಾಗಿ ಯಾರು ನೂಲುವರೋ ಅವರೊಡನೆ ಪ್ರತಿಸ್ಪರ್ಧೆ ಮಾಡಬೇಡಿರೆಂದು ಉಳಿದವರಿಗೆ ಹೇಳಬೇಕು ನೂಲುವವರಲ್ಲಿ ಬಹುಸಂಖ್ಯಾಕ ಜನರು ಈ ವರ್ಗಕ್ಕೆ ಸೇರಿದವರಿದ್ದಾರೆ. ಈ ಯೋಜನೆಯ ಮೇರೆಗೆ ಯಾರಿಗೆ ನೂಲುವ ಅಗತ್ಯವಿದೆ ಎಂಬುದನ್ನು ಕಂಡುಹಿಡಿಯಬೇಕಾಗುವುದು ಯಾರು ಆಳುಗಳನ್ನಿಟ್ಟುಕೊಂಡು ಒಕ್ಕಲತನ ಮಾಡುವರೋ ಯಾರಿಗೆ ಹೊಟ್ಟೆ ಬಟ್ಟೆಯ ಕೊರತೆಯಿರುವುದಿಲ್ಲವೋ ಅಂತಹವರನ್ನು ಈ ಶಾಖೆಯಲ್ಲಿ ಸೇರಿಸಕೂಡದು ನೂಲುವುದೇ ಮೊದಲಾದ ಕೆಲಸಗಳನ್ನು ಅಗತ್ಯವಿದ್ದವರಿಗೆ ಪೂರೈಸಿಕೊಡುವುದು ಅತ್ಯಂತ ಕಠಿಣವಿದೆ ದಿನಾಲು ಎಂಟು ಗಂಟೆಯವರೆಗೆ ದುಡಿದು ಹೊಟ್ಟೆಯ ಪೂರ್ತಿ ಸಂಬಳವನ್ನು ಪಡೆಯಲು ಸಿದ್ಧವಿದ್ದ ಮನೆವಾರಗಳಿಲ್ಲದ ಅನೇಕ ಜನರಿರಬಹುದು ಮತ್ತು ಚರಖಾ ಸಂಸದವರಾಗಲಿ ಅಥವಾ ಗ್ರಾಮೋದ್ಯೋಗ ಸಂಘದವರಾಗಲೀ ಇಂತಹವರಿಗೆ ಪೂರ್ಣ ಅಂಶತಃ ಕೆಲಸವನ್ನು ಪೂರೈಸಿಕೊಡುವರು ಈ ಸಂಘಗಳು ಎರಡನೆಯ ರೀತಿಯಿಂದ ಹೊಟ್ಟೆಹೊರೆದುಕೊಳ್ಳುವವರ ಗೊಡವೆಗೆ ಹೋಗುವುದಿಲ್ಲ ಯಾಕೆಂದರೆ ಎಲ್ಲರಿಗೂ ಕೆಲಸವನ್ನು ಪೂರೈಸಿಕೊಡುವಷ್ಟು ಸಾಮರ್ಥ್ಯವು ಈ ಸಂಘಗಳಲ್ಲಿಲ್ಲ

ಈ ಸಂಘಗಳು ತಮ್ಮ ಧ್ಯೇಯವನ್ನು ಸಂಪೂರ್ಣ ಸಾಧಿಸಿಕೊಂಡರೆ ಕೊರತೆಯುಳ್ಳ ಜನರಿಗೆ ಅನ್ನವಸ್ತ್ರ ಸಹಾಯಮಾಡಿದಂತಾಗುವುದಲ್ಲದೆ ನಿರಾಶಾಮಯವಾದ ಅವರ ಬಾಳ್ವೆಯನ್ನು ಸಂತೋಷಮಯ ಮಾಡಿದ ಹಾಗಾಗುವುದು. ಹರಿಜನ, ೫-೧೦-'೩೫

ದೇಶ ಬಾಂಧವರಲ್ಲಿ ವಿಜ್ಞಾಪನೆ

ಖಾದಿಯ ಬೆಲೆಯ ಪ್ರತಿಯೊಂದು ಅಂಶವೂ ನಮ್ಮ ಬಡ ದೇಶಬಾಂಧವರನ್ನು ಸೇರುವುದಾಗಿ, ಖಾದಿಯನ್ನು ಕೊಂಡಲ್ಲಿ ನಮಗೆ ಅವಶ್ಯವಾದ ಬಟ್ಟೆಯೂ ಬಡವರಿಗೆ ಅನ್ನದಾನ ಮಾಡಿದ ಪುಣ್ಯವೂ ಒಡನೆಯೇ ಲಭಿಸುವುದಾಗಿ, ಖಾದಿಗೆ ಒಂದೆರಡಾಣೆ ಹೆಚ್ಚಿಗೆ ಕೊಡಲಿಕ್ಕಿಲ್ಲ, ಸುಖಲಾಲಸೆಯನ್ನು ಒಂದಿಷ್ಟು ಬಿಡಲಿಕ್ಕಿಲ್ಲವೆಂದರೆ, ನಮ್ಮ ದೇಶಾಭಿಮಾನದ ಬೆಲೆಯೇನು? ಸ್ವದೇಶದ ಹಿತಕ್ಕಾಗಿಯಾದರೂ ಇಂದಿನಿಂದ ಖಾದಿ ಧರಿಸಲುಪಕ್ರಮಿಸಿರಿ.

ಶ್ರೀ. ನಾ. ಕೃ.

ಪ್ರಾಚೀನ ಕಾಲದ ಶಿಕ್ಷಣ ವೈಭವ.

(ಲೇಖಕ –ಶ್ರೀ ಕೆ. ಕೇಶವ ಕುಡುವ ಅಧ್ಯಾಪಕ ಉಡುಪಿ)

ಅತೀ ಪೂರ್ವಕಾಲದಲ್ಲಿ ಶಿಕ್ಷಣವು ಹೇಗಿದ್ದಿತೆಂಬುದಕ್ಕೆ ಇತಿಹಾಸವು ಉಪಲಬ್ಧವಿಲ್ಲದ ಪ್ರಯುಕ್ತ, ಅತೀ ಪ್ರಾಚೀನ ಕಾಲದಲ್ಲಿ ನಿರ್ಮಿತವಾದ ಗ್ರಂಥಗಳ ಮೇಲೆಯೇ ಆ ಕಾಲದ ವಿದ್ಯೆಯು ಅದೆಷ್ಟು ಉನ್ನತ ಸ್ಥಿತಿಯನ್ನು ಪಡೆದಿತ್ತೆಂಬುದನ್ನು ಊಹಿಸಬೇಕಾಗಿದೆ ಪೂರ್ವಕಾಲದ ಗ್ರಂಥಗಳೆಂದರೆ ಸಂಹಿತೆಗಳು, ಉಪನಿಷತ್ತುಗಳು, ಸ್ಮೃತಿ ಗ್ರಂಥಗಳು ಇತ್ಯಾದಿ ಅನೇಕ ಗ್ರಂಥಗಳ ವಿಚಾರ ಮಾಡಿದರೆ ಆ ಕಾಲದಲ್ಲಿ ಸಂಸ್ಕೃತ ವಿದ್ಯಾಭ್ಯಾಸವು ಅತ್ಯುನ್ನತ ಪದವಿಯನ್ನು ಪಡೆದಿತ್ತೆನ್ನಬಹುದು ಅನಂತರ ಮಧ್ಯಯುಗೀನ ಕಾಲದಲ್ಲಿಯೂ ಕೂಡ ರಾಮಾಯಣದಂತಹ ಜಗದ್ವಿಖ್ಯಾತ ಗ್ರಂಥವು ಜನ್ಮವೆತ್ತಿ ಭರತಭೂಮಿಯನ್ನು ಪಾವನಗೊಳಿಸಿತು ತದನಂತರ ಭಾಗವತ ಜೈಮಿನಿ ಸೂತ್ರ ಷಡ್ದರ್ಶನ, ಅಷ್ಟಾದಶ ಪುರಾಣಗಳು, ಉಪಪುರಾಣಗಳು ಬರೆಯಲ್ಪಟ್ಟವು ವ್ಯಾಸ ಮಹಋಷಿಯ ಅಗಾಧ ಜ್ಞಾನಶಕ್ತಿಯು ಅವರು ಪಡೆದ 'ವೇದವ್ಯಾಸ' ರೆಂಬ ಅಲೌಕಿಕ ಬಿರುದಿನಿಂದಲೇ ವ್ಯಕ್ತವಾಗುವುದು ಯಾವ ಜಗದ್ವಂದ್ಯ ಮಹಾಪುರುಷರಿಂದ ಬರೆಯಲ್ಪಟ್ಟ ಗೀತಾ ಶಾಸ್ತ್ರದ ಮೇಲೆ ಇಪ್ಪತ್ತೊಂದು ಭಾಷ್ಯಗಳು ಬರೆಯಲ್ಪಟ್ಟರೂ, ಇನ್ನೂ ನಿಶ್ಚಿತವಾದ ಗೀತಾಮಹೋದಧಿಯ ಯಥಾರ್ಥಜ್ಞಾನವು ಜಗತ್ತಿಗೆ ಸರಿಯಾಗಿ ಆಗಿಲ್ಲವೆಂಬ್ದೇ ಸೂಜ್ಞರ ವಾದವಿವಾದವು ನಡೆಯುತ್ತಲೇ ಇವೆ ಈ ಕಾರಣದಿಂದಲೆ ಕೈಲಾಸವಾಸಿ ಲೋಕಮಾನ್ಯ ತಿಲಕರು ಮಂಡಾಲೆಯ ಕಾರಾಗೃಹದಲ್ಲಿ ಆರು ವರ್ಷಕಾಲ ಶ್ರಮಪಟ್ಟು "ಗೀತಾ ರಹಸ್ಯ' ಅಥವಾ "ಕರ್ಮಯೋಗ ಶಾಸ್ತ್ರ" ಗ್ರಂಥವನ್ನು ಬರೆಯುವ ಪ್ರಸಂಗವು ಬಂದೊದಗಿತು ಧನ್ಯ ಶ್ರೀಕೃಷ್ಣ' ಧನ್ಯ ತ್ರೈಲೋಕ್ಯವೀರ ಅರ್ಜುನ' ಧನ್ಯ ವೇದವ್ಯಾಸ ಮಹಋಷಿ ಯಾರ ಗರ್ಭದಲ್ಲಿ ಈ ಪರಮ ಸುಜ್ಞಾನಿಗಳು ಜನ್ಮವೆತ್ತಿದರೋ ಆ ಭರತಮಾತೆಯೂ ಧನ್ಯ ಧನ್ಯಳು'!

Silk Lace & Cloth Manufacturers

Choukhamba Benares City

MISHES HE HAD
THIS MAN

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು, ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು—"ಅದರ ಕ್ರಯವೆಷ್ಟು?"

ಆನಂದರಾಯರು—ಎಲ್ಲಾ ಕಡೆಗಳಿಗಿಂತ ಕೇವಲ 25 ಕಡಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ಕಳ್ಳ ಮಾಲು ಖಂಡಿತ ಇಲ್ಲ. ಬಂಗಾರ ಜರಿ, ರಂಗು ಮೊದಲಾದ ಸೀರೆಗಳು ಸಿಗುತ್ತವೆ, 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಪಡಲು ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ. 45ರಿಂದ 150ರ ವರೆಗೆ, 16 ಮೊಳ ಪಡಲು ಸದ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ, ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಶಲಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ, 5 ಮೊಳದ ಪಂಚೆ 1ಕ್ಕೆ ರೂ. 4ರಿಂದ 16ರ ವರೆಗೆ, 6 ಮೊಳದ ಪಂಚೆ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯೆಲ್ಲಾ ತರದ ವಸ್ತ್ರಗಳ ಕ್ರಯದ ಪಟ್ಟಿ ಇನಾಂ 1 ಅರೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕಟಿಗಳೊಂದಿಗೆ ಕಳುಹಿಸುವೆವು. ಇತರ ವಿವರಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬನಾರಿಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S S L C's and also for those who have not passed any University examination

Coaches students for the Specialised Banking Courses (C A. I. B. & C. A. I I B.) and also for Accountancy, Secretarial, and Insurance Courses (L A A., A C R A, F C. R. A, F I S A, A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to —

D R Murdeshwar,
Dip. Econ; F. R Econ; S. (Lond.)
Principal.
Ganapathy High School Street,
Mangalore.

ಶಾಲಿವಾಹನ ಶಕ ೧೮೫೬ನೆಯ ಯುವ ಸಂವತ್ಸರದ ಕಾರ್ತಿಕ ಶು ೬ ಶನಿವಾರದಿಂದ ಕಾರ್ತಿಕ ಶು ೧೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ತುಲಾ ಬೊಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
16	ಶನಿ*	೬	೪೧	ಪುಷ್ಯ	೫೩	೪೦	[illegible]
17	ರವಿ	೭	೪೪	ಆಶ್ಲೇಷಾ	೫೮	೧	
18	ಸೋಮ	೮	೪೯	ಮಘಾ	೬೦	೨	
19	ಕುಜ	೯	೫೩	ಮಘಾ	೩	೩	
20	ಬುಧ	೧೦	೫೯	ಹುಬ್ಬಾ	೧೦	೪	
21	ಗುರು	೧೧	೫೪	ಉತ್ತರಾ	೧೬	೫	
22	ಶುಕ್ರ	೧೨	೫೯	ಹಸ್ತಾ	೨೧	೬	

ಇಟೆಲಿಯಾನರು ಸಾಸಾಬೇನಾವನ್ನು ಹಿಡಿದಿರುವರು!

ಅಡಿಸ್ ಅಬಾಬದ ಮೇಲೆ ಇಟೆಲಿಯಾನ ವಿಮಾನಗಳು!

ಎಥಿಯೋಪಿಯಾನರು ಹಿಂದೆ ಸರಿಯುತ್ತಿದ್ದಾರೆ! ಬ್ರಿಟಿಷ ಗಡಿನಾಡಿನಲ್ಲಿ ಭದ್ರತೆಗಳಾಗಿವೆ!

ಮಹಾ ಸಮರವು ಬೇಗನೇ ಘಟಿಸುವುದು!

ನವಂಬರ ತಾ ೯

ಓಗಡನ್ ಪ್ರಾಂತ್ಯದ ರಣರಂಗದ ವಾರ್ತೆಯು ಸರಿಯಾಗಿ ಬರಲು ಹೆಚ್ಚು ತಡೆಗಳಿವೆ. ಇತ್ತಕಡೆಯಿಂದ ಬ್ರಿಟಿಷ ಸೋಮಾಲಿಲೆಂಡಿಗೆ ಯಾನತಷ್ಟು ಸಂಚಾರವು ನಡೆಯುವುದಿಲ್ಲ ಅಲ್ಲಿನ ವಾರ್ತೆಯು ಒಂಟೆಸವಾರಿಗಳಿಂದ ಬರಬೇಕಾಗಿದೆ

ಓಗಡನ್ ಪ್ರಾಂತ್ಯದ ಗೆಲಿಯಾಗಬ್ಯಾಬಿಯನ್ನು ಹಿಡಿಯುವ ಉದ್ದೇಶದಿಂದ, ಇಟೆಲಿಯಾನರು ಒಂದು ದೊಡ್ಡ ಅಭಿಕ್ರಮವನ್ನು ಆಲೋಚಿಸುತ್ತಾರೆ ಸೈನ್ಯದಳವು ಹರಾರನ್ನು ಸೇರುವ ವರೆಗೆ ಯಾವದೂ ಖಚಿತ ವರ್ತಮಾನವು ಬರುವುದು ಕಷ್ಟಸಾಧ್ಯವಾಗಿದೆ ಈ ವಾರದ ಇಟೆಲಿಯಾನ ಅಭಿಕ್ರಮವು ಮಳೆಯ ದೆಸೆಯಿಂದ ಹೆಚ್ಚಿನ ಆತಂಕವನ್ನು ಪಡೆದಿದೆ ಗೋರಾಹಿ ಮತ್ತು ದಾಗಬೂರದ ಮೇಲೆ ಅಂತರಿಕ್ಷದಿಂದ ಧಾರಾಳ ಬೊಂಬಿನ ಪ್ರಯೋಗವು ಆಗಿರುತ್ತದೆ ಸಾಸಾಬೇನಾದಲ್ಲಿ ಹಬಸಿಗಳ ಸಿಡಿಮದ್ದಿನ ಡೀಪೋಗಳ ಮೇಲೆ ಬೊಂಬುಗಳನ್ನು ಎಸೆದಿರುತ್ತಾರೆ ಆದರೆ ಇವುಗಳ ಫಲಿತಾಂಶವು ಇನ್ನೂ ತಿಳಿದಿಲ್ಲ ಮುಂದುವರಿಯುತ್ತಿರುವ ಇಟಲಿಯಾನರು ರಾತ್ರಿ ಸಮಯ ವಿಶ್ರಾಂತಿ ಪಡೆಯುತ್ತಿರುವಾಗ ಹಬಸಿಗಳು ತಮ್ಮ ಸ್ವಾಭಾವಿಕ ರೀತಿಯಲ್ಲಿ ಇವರ ಮೇಲೆ ಬಿದ್ದು ಸೈನ್ಯದಳವನ್ನು ಚೆದರ ಮಾಡಿ, ಅವರಿಗೆ ಹೆಚ್ಚಿನ ಋಣಗಳನ್ನು ಕೊಡುತ್ತಿದ್ದಾರೆ ಇನ್ನೂ ಮುಂದಕ್ಕೆ ಇಟಲಿಯಾನರು ಗುಡ್ಡಬೆಟ್ಟಗಳಿಂದ ದಾಟತ್ತರುವಾಗ, ಇಂಥಾ ಅಭಿಕ್ರಮವು ತುಂಬಾ ನಡೆಯುವುದೆಂದು ಭಾವಿಸಲಾಗಿದೆ ಇಟಲಿಯಾನರು ವಶೀಕರಿಸಿದ ಪ್ರಾಂತ್ಯಗಳಲ್ಲಿ ವ್ಯವಹಾರಗಳು ಸಿಕ್ಕದಂತೆ ನಡೆಯುತ್ತಿವೆ

ಇಟೆಲಿಯನ ಒಂದು ವಿಮಾನವು ಅಡಿಸ್ ಅಬಾಬದ ಮೇಲೆ ಸಂಚರಿಸಿತು ಇಟೆಲಿಯಾನ ವಿಮಾನಗಳು ಅಡಿಸ್ ಅಬಾಬದ ಮೇಲೆ ಸಂಚರಿಸುವುದು ಯುದ್ಧಪ್ರಾರಂಭವಾದಂದಿನಿಂದ ಇದು ಪ್ರಥಮವಾಗಿರುತ್ತದೆ

ಓಗಡನ್ ಪ್ರಾಂತ್ಯದ ಹರಾರಿನಲ್ಲಿರುವ ಮತ್ತು ಜಜಗಾ ಎಂಬಲ್ಲಿಂದ ೭೦ ಮೈಲು ದೂರವಿರುವ ಸಾಸಾಬೇನಾವನ್ನು ಇಟೆಲಿಯಾನರು ಹಿಡಿದಿರುವರು. ಉತ್ತರ ದಿಕ್ಕಿನಲ್ಲಿ ಮಕಾಲೆಯನ್ನು ಹಿಡಿದುದರಿಂದಲೂ ದಕ್ಷಿಣ ದಿಕ್ಕಿನಲ್ಲಿ ಸಾಸಾಬೇನಾವನ್ನು ವಶೀಕರಿಸಿದುದರಿಂದಲೂ, ಇಟೆಲಿಯಾನ ಯುದ್ಧ ಕುಶಲತೆಗಳು ಸಾಂಗವಾಗಿ ನಡೆದಂತಾಗಿವೆ

ಸೈನ್ಯದಳವನ್ನು ಎಲ್ಲಾ ದಿಕ್ಕುಗಳಿಗೆ ಚದರಿಸಿ, ಒಂದು ಮಹಾ ಅಭಿಕ್ರಮದ ತಯಾರಿಯನ್ನು ಇಟೆಲಿಯಾನರು ಮಾಡುತ್ತಿದ್ದಾರೆ ಮಕಾಲೆಯಲ್ಲಿ ವಿಮಾನಗಳ ನಿಲ್ದಾಣವನ್ನು ನಿರ್ಮಿಸಿರುತ್ತಾರೆ ಮಕಾಲೆ ಮತ್ತು ಟೋಲೋ ಮಾರ್ಕೆಟುಗಳಲ್ಲಿ ಇಟೆಲಿಯಾನರ ಅಧಿಕಾರ ನಡೆಯುತ್ತಿದೆ

ಇಟೆಲಿಯಾನ ಸೈನ್ಯ ದಳವು ಮಕಾಲೆಯಿಂದ, ಅಡಿಸ್ ಅಬಾಬದ ಕಡೆಗೆ ತನ್ನ ಮುಂದುವರಿಕೆಯನ್ನು ಪ್ರಾರಂಭ ಮಾಡಿರುತ್ತದೆ ಮಳೆಯು ಇವರಿಗೆ ಸ್ವಲ್ಪ ಬಾಧಿಸುತ್ತದೆ ರಾಸ್ ಸೆಯಾಮನು ಯುದ್ಧಮಾಡದವನಾಗಿ ಹಿಂದೆ ಸರಿಯುತ್ತಿದ್ದಾನೆ.

ವಿಮಾನಗಳ ಮಹತ್ವ

ಅಂತರಿಕ್ಷದಿಂದ ವಿಮಾನಗಳ ಮೂಲಕ ಹಬಸಿಗಳ ತಂಡಗಳು ಚದರಿಸುವಂತೆ ಸಾಧ್ಯವಾಯಿತು ವಿಮಾನಗಳನ್ನು ನೋಡಿ, ಹಬಸಿಗಳು ತಮ್ಮ ಸ್ಥಾನವನ್ನೂ ಯುದ್ಧೋಪಕರಣಗಳನ್ನೂ ತ್ಯಜಿಸಿ ಪಲಾಯನ ಮಾಡಿರುವರು

ಅಡಿಸ್ ಅಬಾಬದಿಂದ ಬಂದ ವಾರ್ತೆ

ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಎಥಿಯೋಪಿಯಾನರು ಹಿಂದೆ ಸರಿಯುತ್ತಿದ್ದಾರೆ ಇಟೆಲಿಯಾನರು ಮಕಾಲೆಯಿಂದ ಮುಂದುವರಿದು, ೧೫ ಮೈಲು ದೂರವಿರುವ ಎಂಟೋಲಾವನ್ನು ವಶೀಕರಿಸಿದ್ದಾರೆ ಓಗಡನ್ ಪ್ರಾಂತ್ಯದಲ್ಲಿ ಇಟೆಲಿಯಾನರು ಹರಾರ್‌ನ ಕಡೆಗೆ ಅತೀ ವೇಗದಿಂದ ಸರಿಯುತ್ತಿದ್ದಾರೆ

ಇಟೆಲಿಯಾನರು ಆಶ್ಚರ್ಯಚಕಿತರಾಗಿರುವರು

ಎಥಿಯೋಪಿಯಾನರ ವಿಚಿತ್ರ ಯುದ್ಧೋಪಾಯಗಳು

ನವಂಬರ ತಾ ೧೧

ಹಬಸಿಯವರ ಧೈರ್ಯ ಕುಂದಲಿಲ್ಲ. ಇಟೆಲಿಯಾನರು ಎಷ್ಟು ರಭಸದಿಂದ ಮುಂದುವರಿಯುತ್ತಿದ್ದಾರೋ ಅದಕ್ಕಿಂತ ಹೆಚ್ಚು ವೇಗದಿಂದ ಹಬಸಿಗಳು ಹಿಂದೆ ಸರಿಯುತ್ತಿದ್ದಾರೆ ಇದರಿಂದ ಇಟೆಲಿಯಾನರು ಸಂಶಯಾಸ್ಪದರಾಗಿದ್ದಾರೆ ಈ ಹಿಂದುವರಿಕೆಯಲ್ಲಿ ಒಂದು ಮಹಾ ಯುಕ್ತಿಯು ಅಡಗಿದೆ ಎಂದು ತಿಳಿದು ಬರುತ್ತದೆ ರಣರಂಗದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಹಬಸಿಗಳು ವಿಶೇಷವಾಗಿ ಹಿಂದೆ ಸರಿದಿರುತ್ತಾರೆ ಇಟೆಲಿಯಾನರನ್ನು ಕಠಿಣ ಪ್ರದೇಶಗಳಿಗೆ ಸೆಳೆದು ನಂತರ ಹಬಸಿಯವರು ಇವರ ಮೇಲೆ ಧಾವಿಸುವರು ಎಂಬ ವಾರ್ತೆ ಇದೆ ಓಗಡನ್ ಪ್ರಾಂತ್ಯದಲ್ಲಿ ಕೆಲವು ಸಮಯದ ಹಿಂದೆ ಆಂಗ್ಲೇಯರೊಡನೆ ಯುದ್ಧ ನಡೆಸಿದ, 'ಮರುಳು ಮುಲ್ಲಾ'ರ ಪುತ್ರ ಅಬ್ದುಲ್ ಕರೀಮನು ಇಟೇಲಿಯಾನರನ್ನು ಸೇರಿರುವನು ಸಾಸಾಬೇನಾವನ್ನು ಇಟೆಲಿಯಾನರು ಹಿಡಿದ ವಾರ್ತೆಯು ರೋಮಿನ ಯಾವ ಪತ್ರಿಕೆಗಳಲ್ಲೂ ಇಲ್ಲ ಆದರೆ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಇಟೆಲಿಯಾನ ಸೈನ್ಯದಳಗಳು ಯೋಗ್ಯ ರೀತಿಯಲ್ಲಿ ಪ್ರಸರಿಸಿದ್ದಾರೆ ರಾಸ್ ಗುಗ್ಸಾನು ಇಟೆಲಿಯಾನ ನಾಯಕರಾದ, ಡಿಬೋನರವರನ್ನು ಸನ್ಮಾನಪೂರ್ವಕ ಮಕಾಲೆಯಲ್ಲಿ ಸ್ವಾಗತೀಕರಿಸಿದನು

ರೋಮಿನಲ್ಲಿ, ಇಟೇಲಿಯು ಯುರೋಪು ಖಂಡದಲ್ಲೂ, ಆಫ್ರಿಕಾ ಖಂಡದಲ್ಲೂ ಮತ್ತು ಇನ್ನು ಇತರ ಸ್ಥಳಗಳಲ್ಲಿ ಯುದ್ಧಸನ್ನಾಹಗಳ ಸಂಗ್ರಾಮ ಸಿದ್ಧತೆಗಳು ಆಗಿವೆ. ಮುಸಲೀನಿಯು ಇವುಗಳ ವಿಷಯ ಸಂಪೂರ್ಣ ತೃಪ್ತಿ ಹೊಂದಿರುತ್ತಾನೆ.

ಆಂಗ್ಲೇಯ ನಗರಸಭೆಗೆ ಭಾರತೀಯ ಸಭಾಧ್ಯಕ್ಷರು

ಲಂಡನಿನ ಫಿನ್ಸ್‌ಬರಿ ಎಂಬಲ್ಲಿ ಡಾ। ಸಿ. ಎಲ್ ಕಾಟಿಯಾಲ್ ಎಂಬವರು ನಗರಸಭೆಯ ಸಹಾಯಕ ಅಧ್ಯಕ್ಷರಾಗಿ ಚುನಾವಣೆ ಹೊಂದಿದರು. ಇವರು ಈ ಸ್ಥಾನವನ್ನು ಪಡೆಯಲು, ಮೊದಲಿನ ಭಾರತೀಯರಾಗಿರುತ್ತಾರೆ.

ಸರದಾರ್ ಪಟೇಲರ ಮೇಲೆ ಶಸ್ತ್ರಚಿಕಿತ್ಸೆ.

ಮುಂಬ್ಯಾಯಲ್ಲಿ ಸರದಾರ್ ವಲ್ಲಭಭಾಯಿ ಪಟೇಲರ ಮೇಲೆ ಮೂಲವ್ಯಾಧಿ ನಿವಾರಣೆಗೋಸ್ಕರ ಶಸ್ತ್ರಚಿಕಿತ್ಸೆ ಮಾಡಲಾಯಿತು ಸುಪ್ರಸಿದ್ಧ ವೈದ್ಯರಾದ ಡಾ। ಶಾಹಾ ಮತ್ತು ಡಾ। ಮೇಥಾರವರು ಈ ಶಸ್ತ್ರಕ್ರಿಯೆಯನ್ನು ಮಾಡಿದರು ಶ್ರೀ। ಪಟೇಲರು ಈಗ ಗುಣ ಹೊಂದುತ್ತಿದ್ದಾರೆ

ಗ್ರೀಸ್‌ದೇಶದ ಅರಸರನ್ನು ಹಿಂದೆ ಕರೆಯಲಾಯಿತು.

ಕೆಲವು ಸಮಯದ ಹಿಂದೆ ಗ್ರೀಸ್ ದೇಶದಲ್ಲಿ ಕ್ರಾಂತಿ ನಡೆದು, ಅಲ್ಲಿನ ಅರಸರು ಸಿಂಹಾಸನವನ್ನು ತ್ಯಜಿಸಿ, ಜನರು ರಿಪಬ್ಲಿಕ್ ಸರಕಾರವನ್ನು ಸ್ಥಾಪನೆಮಾಡಿದ್ದರು ಆದರೆ ಮೊನ್ನೆ ಒಂದು ಸ್ಪರ್ಧೆಯು ನಡೆದು, ಅರಸರನ್ನು ಹಿಂದಕ್ಕೆ ಕರೆಯಬೇಕೆಂದು ಬಹುಮತದಿಂದ ನಿರ್ಧರಿಸಲಾಯಿತು ಈ ನಿರ್ಧಾರದ ಪ್ರಕಾರ ಕೆಲವು ಮುಂದಾಳುಗಳ ಮೊನ್ನೆ ಲಂಡನಿಗೆ ತೆರಳಿ ಅಲ್ಲಿ ವಾಸವಾಗಿರುವ ಅರಸರನ್ನು ಪುನಃ ರಾಜ್ಯಕಾರ್ಯಗಳನ್ನು ವಹಿಸಲು ಆಮಂತ್ರಿಸಿದರು ಗ್ರೀಕ್ ಅರಸರಾದ ಜೋರ್ಜರು ಇವರ ಆಮಂತ್ರಣವನ್ನು ಸ್ವೀಕರಿಸಿದ್ದಾರೆ ಗ್ರೀಸ್ ದೇಶಕ್ಕೆ ಬೇಗನೆ ಹೋಗುವವರಿದ್ದಾರೆ

ಭೀಕರ ಕೊಲೆ.

ಮುಂಬಾಯಿಯಿಂದ ಮದ್ರಾಸಿಗೆ ಚಲಿಸುವ ಬೊಂಬೇ ಮೈಲಿನಲ್ಲಿ ಯಾರೋ ತ್ಯಜಿಸಿದ ಒಂದು ಟ್ರಂಕು ಹಾದಿಯಲ್ಲಿರುವ ವಾಡಿ ಸ್ಟೇಶನಿನಲ್ಲಿ ದೊರಕಿತು. ಇದರ ಮಾಲಿಕರು ಇಲ್ಲದಾಗಿ, ಇದು ಕೆಲವು ದಿನ ಅಲ್ಲಿನ ಸ್ಟೇಷನಿನಲ್ಲಿದ್ದು, ಮೊನ್ನೆ ಇದರಿಂದ ದುರ್ವಾಸನೆಯು ಹೊರಡಲು, ಅದನ್ನು ತೆರೆಯಲಾಗಿ ಅದರಲ್ಲಿ ತುಂಡು ತುಂಡ ಮಾಡಿದ ಹೆಣವು ದೊರಕಿತು ಹೆಣದ ರೂಪವನ್ನು ಕಂಡುಹಿಡಿಯಲು ಅಸಾಧ್ಯವಾಗಿತ್ತು ಸರಿಯಾಗಿ ಪರಿಶೋಧನೆ ಮಾಡಿ, ಆ ಪೆಟ್ಟಿಗೆಯಲ್ಲಿ ಎರಡು ಆಭರಣಗಳು ದೊರಕಿದುದರಿಂದಲೂ ಆ ಶವವು ಸಾಧಾರಣ ೨೦–೨೫ ವರ್ಷದ ತರುಣಿಯದೆಂದು ತಿಳಿದುಬರುತ್ತದೆ ಈ ಪೆಟ್ಟಿಗೆಯು ಬೊಂಬಾಯಿಯಿಂದ ಬಂದದೆಂದು ಊಹಿಸಲಾಗಿದೆ ಯಾಕೆಂದರೆ ಆ ಟ್ರಂಕು ವಾಡಿ ಸ್ಟೇಶನು ಸೇರಿದ ದಿವಸ ಬೊಂಬಾಯಿ ಸ್ಟೇಶನಿನಲ್ಲಿ ವಾಡಿ ಸ್ಟೇಶನಿಗೆ ಎರಡು ಟಿಕೇಟುಗಳು ವಿಕ್ರಯವಾಗಿವೆ ಅಪಾದಿತರ ಶೋಧೆಯನ್ನು ಬೊಂಬಾಯಿ ಪೋಲೀಸಿನವರು ನಡೆಯಿಸುತ್ತಿದ್ದಾರೆ

ಸಪ್ತುರವರ ಸಂಯುಕ್ತ ಪ್ರಾಂತ್ಯದ ನಿರುದ್ಯೋಗ ವರದಿ

ಇದರ ಪ್ರಮಾಣ ಸಾಧಾರಣ ೩೦೦ ಪೇಜುಗಳು ಇದನ್ನು ಮುದ್ರಿಸಿ, ನಿರುದ್ಯೋಗವನ್ನು ನಿವಾರಿಸಲು ಮಾಡಿದ ಒಂದು ಸಮಿತಿಯ ಸದಸ್ಯರಲ್ಲಿ ಹಂಚಲಾಗುವುದು ವರದಿಯ ವಿವರವು ಇಷ್ಟರ ವರೆಗೆ ತಿಳಿದಿಲ್ಲ ಆದರೆ ಸಪ್ರೂಗಳವರು, ನಿರುದ್ಯೋಗವು ಎಲ್ಲೆಲ್ಲಿ ಹರಡಿದೆ ಎಂದೂ, ಮತ್ತು ಇದು ಒಂದು ಸಾಮಾನ್ಯ ಪ್ರಶ್ನೆಯಲ್ಲವೆಂದೂ ತಿಳಿಸಿರುತ್ತಾರೆ ನಿರುದ್ಯೋಗ ನಿವಾರಣೆಯ ಕುರಿತು ಕೆಲವು ಉತ್ತಮ ಸೂಚನೆಗಳನ್ನು ಮಾಡಿರುತ್ತಾರೆ

ಚೀನಾ–ಜಾಪಾನು ಕಲಹ.

ಶಾಂಗಾಯಿಯಲ್ಲಿ ನಡೆದ ಜಾಪಾನಿಯ ನೌಕಾಪುರುಷನ ಕೊಲೆಯು, ಬಹಳ ಕ್ಷೋಭೆಯನ್ನುಂಟುಮಾಡಿದೆ ಸಾಧಾರಣ ೩೦೦ ಜಪಾನು ಯುದ್ಧನೌಕೆಗಳು ಇಲ್ಲಿನ ಬಂದರದಲ್ಲಿ ಸುಳಿದಾಡುತ್ತಿವೆ. ಇಲ್ಲಿನ ಜಪಾನಿಯರ ಪ್ರದೇಶದಲ್ಲಿ ಬಹಳ ಶೋಧೆಯು ನಡೆಯುತ್ತದೆ ಚೀನಾ ದೇಶದವರು ಇಲ್ಲಿ ದೊಡ್ಡ ಸೇನಾಸಮೂಹವನ್ನು ಶೇಖರಿಸಿದ್ದರಿಂದ ಜಪಾನ ಸಂಗ್ರಾಮ ಅಧಿಕಾರಿಗಳು ಈ ಶಾಂಗಾಯಿಯಲ್ಲಿ ಒಂದು ಮಹಾ ಅರ್ಥವಿರುವುದೆಂದು ತಿಳಿದು, ಸಂಗ್ರಾಮ ಸಿದ್ಧತೆಗಳನ್ನು ಮಾಡಿರುತ್ತಾರೆ

ಉದರವೇದನೆಯಿಂದ ಜೀವದ ಆಶೆಯನ್ನೇ ತೊರೆದನು.

ಮಿ। D [illegible] ಉದರವೇದನೆಯಿಂದ ನರಳುತ್ತಿದ್ದನು. ವೇದನೆಯನ್ನು ನೀಗಿಸಲು ನಾನಾ [illegible] ಹಣವನ್ನು [illegible] ಯಾಗಲಿಲ್ಲ [illegible] ಮ್ಯಾಕ್‌ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರಿನ [illegible] ಮಿ। D [illegible] ಬರೆದ ಪತ್ರವನ್ನು ಓದಿ

"ನನಗೆ [illegible] ಮ್ಯಾಕ್‌ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರನ್ನು [illegible] ಉದರವೇದನೆಯು [illegible]"

[illegible] ಉದರವೇದನೆಯಿಂದ [illegible] ಮಿ। D [illegible] ಮ್ಯಾಕ್‌ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರ್ [illegible]



[illegible]

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

15 [illegible]

[illegible]

ನಗಬಾರದು.

ಪುರೋಹಿತ–ನಿನ್ನ ತಂದೆಯವರು ಯಾವದಿವಸ ಸತ್ತರು? ಆ ತಿಥಿಯಲ್ಲಿ ಅವರ ಶ್ರಾದ್ಧ ಮಾಡುವುದು ಬೇಡವೆ?

ಯಜಮಾನ:–ಅವರು ಏಕಾದಶಿಯ ದಿವಸ ಸತ್ತದ್ದು; ಆ ದಿವಸ ಉಪವಾಸ ಇರಬೇಕು. ಆದುದರಿಂದ ಶ್ರಾದ್ಧದ ಊಟ ಮಾಡಲಾಗುವುದೇ?

\+ + + +

ಮಾಸ್ತರ್:–ಬ್ರಹ್ಮಚಾರಿಯೆಂದರೆ ಯಾರು?

ಶಿಷ್ಯ:–ನೈಷ್ಠಿಕ ಬ್ರಹ್ಮಚಾರಿ ಮಗ ಸರ್!

\+ + + +

ಒಬ್ಬ:–ನನಗೆ ಮಾವನ ಮನೆಯ ಸುಖಪಡೆಯ ಬೇಕೆಂಬ ಆಶೆಯುಂಟಾಗಿದೆ.

ಇನ್ನೊಬ್ಬ–ಮದುವೆಮಾಡಿಕೊಂಡರೆ ಸರಿ.

ಒಬ್ಬ:– ಅದೇ ನನ್ನಿಂದಾಗದ ಕೆಲಸ.

\+ + + +

ಮಾಸ್ತರ್:–ಇಟಲಿ ಎಬಿಸೀನಿಯಾಗಳೊಳಗೆ ಎಲ್ಲಿ ಯುದ್ಧ ನಡೆಯಿತು?

ಶಿಷ್ಯ:–ನಮ್ಮ ಮನೆಯಲ್ಲಿ ಸರ್!

ಮಾಸ್ತರ್:–ಅದು ಹೇಗೆ?

ಶಿಷ್ಯ:–ನನ್ನ ತಂದೆ ಇಟಲಿಯ ಪರವಾಗಿ, ನನ್ನ ತಾಯಿ ಎಬಿಸೀನಿಯಾದ ಪರವಾಗಿ ಕಾದಾಡಿದರು. ಮೊದಲು ಬಾಯಿಯಿಂದಲೇ ಕಾದಾಟ, ಕಡೆಗೆ ಕೈಕೈಯಿಂದ ಕಾದಾಟವಾಯಿತು ಸರ್!

\+ + + +

ಮಾಸ್ತರ್:–ದೇವರು ದೊಡ್ಡವರೋ ತೆಂಗಿನ ಮರವೋ?

ಶಿಷ್ಯ:–ತೆಂಗಿನ ಮರ ಸರ್! ಯಾಕೆಂದರೆ ದೇವರು ಎಷ್ಟು ದೊಡ್ಡವರು ಎಂತ ನೋಡುವಾ ಎಂದರೆ ಅವರು ಕಾಣಲಿಕ್ಕೆ ಸಿಕ್ಕುವುದಿಲ್ಲ; ತೆಂಗಿನ ಮರ ಕಾಣಲಿಕ್ಕೆ ಸಿಕ್ಕುತ್ತದೆ ಸಾರ್!

\+ + + +

"ಅಂತರ ಜಾತಿಯ ವಿವಾಹವೆಂದರೇನು?"

"ನಮ್ಮ ಹುಡುಗನಿಗೆ ನಿಮ್ಮ ಹುಡುಗಿ, ನಿಮ್ಮ ಹುಡುಗಿಗೆ ನಮ್ಮ ಹುಡುಗ ಕೊಟ್ಟು ವಿವಾಹ ಮಾಡುವುದು" (ಒಟ್ಟಾರೆ ಹುಡುಗ ನಮ್ಮವ)

\+ + + +

ಮಾಸ್ತರ್.–ಇಟಲಿ ಎಬಿಸೀನಿಯಾಗಳ ಯುದ್ಧದಿಂದಾಗಿ ನೀನು ಯಾವ ಪಾಠ ಕಲಿತಂತಾಗುತ್ತದೆ?

ಶಿಷ್ಯ.–ಬಲಿಷ್ಠರು ಅನಾವಶ್ಯಕವಾಗಿ ಅಬಲರ ಮೇಲೆ ಬೀಳಬಾರದು. ಅಂತೇ ನೀವು ಬಲಿಷ್ಠರಾಗಿ ನಮ್ಮಂಥಾ ಅಬಲರಿಗೆ ಬೆತ್ತದಿಂದ ಹೊಡೆಯಕೂಡದು ಸರ್!

\+ + + +

ಒಬ್ಬ:–ನೀನು ತಲೆ ತಲೆಗೆ ಗಂಟುಹಾಕುವುದರಲ್ಲಿ ಪ್ರವೀಣನಾಗಿದ್ದೆ.

ಇನ್ನೊಬ್ಬ:–ಈಗಿನ ನಾಗರಿಕರಿಗೆ ಜುಟ್ಟೆ ಇಲ್ಲವಲ್ಲ; ಜುಟ್ಟು ಇಲ್ಲದೆ ಗಂಟುಹಾಕಲು ಸಾಧ್ಯವೆ?

\+ + + +

ಮಾಸ್ತರ್.–ಸಿದ್ದ 'ಹೊಡೆದರು' ಎಂಬ ಶಬ್ದವನ್ನು ಉಪಯೋಗಿಸಿ ಒಂದು ವಾಕ್ಯ ಹೇಳು ನೋಡೋಣ.

ಸಿದ್ದ:–ಉಪಾಧ್ಯಾಯರು ಸತ್ತದ್ದನ್ನು ನೋಡಿ ಹುಡುಗರು ಬೊಬ್ಬೆ ಹೊಡೆದರು ಸರ್!

\+ + + +

ಮಾಸ್ತರ್:–ರಾಮಾಯಣವನ್ನು ಯಾರು, ಯಾರಿಗೆ, ಯಾವಾಗ ಎಲ್ಲಿ ಹೇಳಿದರು?

ಶಿಷ್ಯ:–ರಾಮಾಯಣವನ್ನು ಪುಟ್ಟಣ್ಣ ಭಟ್ಟರು ನಮಗೆಲ್ಲರಿಗೆ, ಸಂಜೆ ೬ ಗಂಟೆಗೆ, ಅನಂತಶಯನ ದೇವಸ್ಥಾನದ ಜಗುಲಿಯಲ್ಲಿ ಕುಳಿತಿದ್ದಾಗ ಓದಿ ಹೇಳಿದರು ಸರ್!

\+ + + +

ಒಬ್ಬ:–ನಾನು ಉದ್ದವಾಗಿದ್ದೇನೆ, ಗಿಡ್ಡವಾಗಲಿಕ್ಕೆ ಏನುಮಾಡಲಿ?

ಇನ್ನೊಬ್ಬ:–ತಲೆಕಡಿದು ಬಿಟ್ಟರೆ ಸರಿ!

\+ + + +

ಒಬ್ಬ:–ನನ್ನ ಹಲ್ಲುಗಳು ಒರೆ ಕೋರೆಯಾಗಿವೆ ಅವನ್ನು ಹೇಗೆ ತೆಗೆಸಲಿ.

ಇನ್ನೊಬ್ಬ:–ಒಬ್ಬ ಪೋಕರಿ ಬೈದುಬಿಟ್ಟರೆ ಸರಿ ಕೂಡಲೆ ಹಲ್ಲುಗಳು ನಿಮ್ಮ ಕೈಗೆ ಬೀಳುತ್ತವೆ.

\+ + + +

ಗಾಯಕ:–ಈ ಪದ್ಯಕ್ಕೆ ಮಾತ್ರೆಗಳು ಕಡಿಮೆಯಾಗಿವೆಯಲ್ಲ!

ಭಿಷಕರತ್ನ:–ಮಾತ್ರೆಗಳು ನನ್ನಲ್ಲಿವೆ ಎಷ್ಟು ಬೇಕಾದರೂ ನಾನು ಕೊಡಬಲ್ಲೆನು. ಅದರಲ್ಲಿ ನಿಮಗೆ ಯೋಚನೆ ಬೇಡಾ.

\+ + + +

ಅವನು:–ನಾನು ನಿನ್ನನ್ನು ಹೇಗೆ ವರಿಸಲಿ? ನಿನ್ನನ್ನು ಇಷ್ಟರವರೆಗೆ ನನ್ನ ತಂಗಿಯೆಂದೇ ಭಾವಿಸಿದ್ದೆನಲ್ಲ.

ಅವಳು:–ಹಾಗಾದರೆ, ನನಗೂ ನಿನ್ನ ತಂದೆಯ ಆಸ್ತಿಯಲ್ಲಿ ಪಾಲು ಸಿಕ್ಕಬಹುದಲ್ಲ. ಚಿಂತಿಲ್ಲ.

\+ + + +

ಒಬ್ಬ.–ನೀನು ಗೋಪಾಲಕೃಷ್ಣ ರಾಯರ ಮಗಳನ್ನು ವರಿಸಿಕೊಳ್ಳಬಹುದಲ್ಲವೇ?

ಇನ್ನೊಬ್ಬ –'ಪರನಾರೀ ಮಾತೃಸಮಾನಂ' ಎಂದಿದ್ದಾರಲ್ಲ. ನಾನು ಅವಳನ್ನು ವರಿಸಿಕೊಂಡರೆ ತಾಯಿಯನ್ನೇ ವರಿಸಿಕೊಂಡಂತಾಗುವುದಲ್ಲ. ಅದು ನ್ಯಾಯವೆ?

ಕೆ. ಅಚ್ಯುತ ಕೃ.

(೧೪ನೇ ಪುಟದಿಂದ ಮುಂದುವರಿದುದು)

ಕ್ಯವನ್ನು ಸೇರಿಸಿ ಅನೇಕ ಗೀತೆಗಳನ್ನೂ ಗಾನವರ್ಣಗಳನ್ನೂ ದೇವರ ನಾಮಗಳನ್ನೂ ರಚನೆ ಮಾಡಿ ಲೋಕೋಪಕಾರ ಮಾಡಿದರು. ತ್ಯಾಗರಾಜರಂಥ ಗಾನಮೂರ್ತಿಗಳಿಗೆ ಅವರ ತಾಯಿ ಹಾಡುತ್ತಿದ್ದ ಪುರಂದರದಾಸರ ದೇವರನಾಮಗಳೇ ಸ್ಫೂರ್ತಿದಾಯಕವಾದವೆಂದು ತ್ಯಾಗರಾಜ ಇತಿಹಾಸವು ಹೇಳುತ್ತದೆ

ಜನ್ಮತಃ ಚಂಡಾಲರಾಗಿರುವವರಿಗಿಂತಲೂ ಕರ್ಮತಃ ಚಂಡಾಲರು ನೀಚರೆಂದು ದಾಸರು ಭಾವಿಸಿದ್ದರು. ಈ ವಿಷಯವು ಅವರ ಕೆಲವು ಕೀರ್ತನೆಗಳನ್ನು ನೋಡಿದರೆ ತಿಳಿಯುವುದು.

ಹೊಲೆಯ ಬಂದನೆಂದು ಒಳಗೆ ಬೇದರ ಮಾಡಿ ॥
ಗಣ ಗಣ ಗಂಟೆ ಬಾರಿಸುವರಯ್ಯ ।
ತನುವಿನ ಕೋಪವು ಹೊಲೆಯಲ್ಲವೇ ॥
ಪರಧನ ಪರಸತಿ ಹೊಲೆಯಲ್ಲವೇ ।
ಹರಿಯ ವಿಸ್ಮೃತಿ ತಾನು ಹೊಲೆಯಲ್ಲವೇ ।
ಹೊರಗಿದ್ದ ಹೊಲೆಯನ ಒಳಗೇ ಇಟ್ಟಿದ್ದರೆ ।
ಇವಕ್ಕೇನು ಮದ್ದು ಪುರಂದರವಿಟ್ಠಲ । ೧ ।

೪॥ ಲಕ್ಷ ಗ್ರಂಥಕರ್ತರ ಚರಿತ್ರೆಯು ಅದಕ್ಕೆ ತಕ್ಕಷ್ಟಿರಬೇಕೆಂದು ಯಾರಾದರೂ ಊಹಿಸಬಹುದು. ೮೦ ವರ್ಷ ಜೀವಿತಕಾಲದಲ್ಲಿ ೪೦ಕ್ಕಿಂತ ಹೆಚ್ಚು ವರ್ಷಗಳಲ್ಲಿ ದಾಸರು ಹರಿದಾಸರಾಗಿ ದೇಶಸೇವೆ ಮಾಡಿದರು. ಮೂರು ಮೂರು ಬೇಳೆ ಭರತಖಂಡದ ಪ್ರದಕ್ಷಿಣೆ ಮಾಡಿದರು. ಲಕ್ಷಾವಧಿ ಪಾಮರ ಜನರನ್ನು ಧರ್ಮೋಪದೇಶದಿಂದ ಉದ್ಧಾರಮಾಡಿದರು. ಲೋಕಕ್ಕೆ ಆದರ್ಶಜೀವನವನ್ನು ತೋರಿಸಿಕೊಟ್ಟರು. ಪುರಂದರದಾಸರು ಮರ್ತ್ಯಲೋಕದಲ್ಲಿ ಮಾಡಬೇಕೆಂದಿದ್ದ ಸೇವೆಯನ್ನು ಪೂರೈಸಿ ಶಾ. ಶ. ೧೪೮೬ನೇ ರಕ್ತಾಕ್ಷಿ ಸಂ. ಪು. ಬ. ಅಮವಾಸ್ಯೆ ದಿನ ಕ್ರಿ. (೧೫೬೪) ಪರಂಧಾಮವನ್ನೈದಿದರು. ಪುರಂದರದಾಸರ ಸಾಹಿತ್ಯವೆಂದರೆ ಬರೇ ಸ್ತೋತ್ರಪದಗಳಲ್ಲಿ ಅವರು ಉಪನಿಷತ್ತುಗಳನ್ನೆಲ್ಲಾ ಕನ್ನಡಿಸಿದರು ಭಗವದ್ಗೀತೆಯನ್ನು ವಿವಿಧ ರಗಳೆಗಳಲ್ಲೂ ಪ್ರಶ್ನೋತ್ತರಗಳಲ್ಲೂ ಬೀಸುವ ಕುಟ್ಟುವ ಹಾಡುಗಳಲ್ಲಿಯೂ ಜೋಗುಳದಲ್ಲೂ ಬರೆದರು ದೊಡ್ಡ ದೊಡ್ಡ ಮನುಪರಾಶರರ ಸ್ಮೃತಿಗಳನ್ನೂ ಕನ್ನಡಿಸಿದರು.

ಜನಪದ ಸಾಹಿತ್ಯೋದ್ಧಾರ ಮಾಡಬೇಕೆಂಬ ಉದಾರ ಭಾವನೆಯು ಧಾರವಾಡ ಜನರಲ್ಲುಂಟಾಗಿದೆ. ಅಂತಹ ಸಾಹಿತ್ಯ ಶೋಧಕರು ಹಳ್ಳಿಗಳಲ್ಲಿ ತಿರುಗಿ ದಾಸರ ಪದಗಳನ್ನು ಸಂಗ್ರಹಿಸಬೇಕು. ರಾಯಚೂರ್, ಧಾರವಾಡ ಬಿಜಾಪುರಗಳಲ್ಲಿ ಸಿಗುವಷ್ಟು ದಾಸಸಾಹಿತ್ಯವು ಇನ್ನೆಲ್ಲಿಯೂ ಸಿಗುವಂತಿಲ್ಲ ಆ ಸಾಹಿತ್ಯವೆಲ್ಲಾ ಭಿನ್ನಭಿನ್ನವಾಗಿದೆ. ರಾಯಚೂರು ಜಿಲ್ಲೆಯು ಹರಿದಾಸರ ಆಗರ ಈಗಲೂ ಸಿಕ್ಕಿದುದನ್ನು ಬರೆದಿಡಬೇಕು ಬರೆದುದನ್ನು ಶುದ್ಧಗೊಳಿಸಿ ಮುದ್ರಿಸುವ ಸಂಘವು ಬೇಕು. ಇವೆಲ್ಲ ಉತ್ಸಾಹೀ ಕನ್ನಡ ಸಾಹಿತ್ಯ ಭಕ್ತರಿಂದ ಆಗಬೇಕಾಗಿದೆ. ದಾಸಸಾಹಿತ್ಯದಲ್ಲಿ ಅಭಿರುಚಿಯುಳ್ಳವರು ಅವಶ್ಯ ಗಮನಿಸಬೇಕಾಗಿದೆ.

ಈಗ ದೊರೆಯುತ್ತಿರುವ ಪುರಂದರದಾಸರ ಪದಗಳು ಎಂಬ ಪುಸ್ತಕಗಳಲ್ಲಿ ದಾಸರಿಂದಲೇ ರಚಿತವಾದ ಪದಗಳಾವುವು? ಅವರ ಮಕ್ಕಳಿಂದ ರಚಿತವಾದುವು ಯಾವುವು? ಎಂಬ ಭೇದವನ್ನು ತಿಳಿಯಲಾರದೆ ಅನೇಕರು ಎಲ್ಲವೂ ಪುರಂದರದಾಸರ ಕೃತಿವೆಂದೇ ಭಾವಿಸಲು ಅವಕಾಶವುಂಟು. ಈ ಸಂದರ್ಭದಲ್ಲಿ ಈ ಸೂಚನೆಯನ್ನು ಗಮನಿಸುವುದು ಸೂಕ್ತವೆಂದು ತೋರುವುದು. ಅವರಿಗಿದ್ದ ನಾಲ್ಕು ಮಂದಿ ಮಕ್ಕಳೂ ಹಿರಿಯರಿಂದ ಅನುಕ್ರಮವಾಗಿ "ವರದ ಪುರಂದರವಿಠಲ" "ಗುರುಪುರಂದರ ವಿಠಲ" "ಮಧ್ವಪತಿ ಪುರಂದರ ವಿಠಲ" "ಅಭಿನವ ಪುರಂದರ ವಿಠಲ" ಎಂಬ ಅಂಕಿತದಿಂದಲೂ ಮಗಳು "ತಂದೆ ಪುರಂದರ ವಿಠಲ" ಎಂತಲೂ ಪತ್ನಿಯು "ಶ್ರೀ ಪುರಂದರ ವಿಠಲ" ಎಂಬುದಾಗಿಯೂ ಭೃತ್ಯನು "ಒಡೆಯ ಪುರಂದರ ವಿಠಲ" ಎಂಬಂಕಿತವನ್ನಿಟ್ಟುಕೊಂಡು ಭಗವಂತನನ್ನು ಹೊಗಳಿ ಪಾಡಿದರೆಂದು ತಿಳಿದು ಬರುತ್ತದೆ.

(ಆಧಾರದಿಂದ)

ಚಳಿ ಹಿಡಿಯುವುದನ್ನು ತಪ್ಪಿಸಿ, ಶ್ವಾಸಕೋಶದ ಅಪಾಯಗಳಿಂದ ಸುರಕ್ಷಿತರಾಗಿರಿ.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಇಲ್ಲಿನ ಹವಾಗುಣವು ಆಗಾಗ್ಗೆ ಬದಲಾವಣೆಯಾಗುವುದರಿಂದ, ನೀವು ಶಕ್ಕನೆ ಚಳಿಯನ್ನು ಹಿಡಿದು ನರಳಬೇಕಾಗುವುದು. ಈ ಚಳಿಯ ದೆಸೆಯಿಂದ, ನಿಮ್ಮ ಶ್ವಾಸಕೋಶಕ್ಕೆ ಹಾನಿ ಉಂಟಾಗುವುದು, ಪ್ಲೂರೆಸಿ, ನಿಮೋನಿಯಾ, ಬ್ರೊಂಕಾಯಿಟಿಸ್ ಮೊದಲಾದುವು ನಿಮಗೆ ಬಾಧಿಸುವುವು. ಆದರೆ, ಪೆಪ್ಸ್ ಗುಳಿಗೆಗಳನ್ನು ಆಗಾಗ್ಗೆ ತೆಗೆದುಕೊಂಡಲ್ಲಿ ಅವುಗಳಿಂದ ಹೊರಡುವ ಧೂಮವು ನಿಮ್ಮ ಶ್ವಾಸಕೋಶವನ್ನು ಸಂಚರಿಸಿ, ರೋಗದ ಕ್ರಿಮಿಗಳನ್ನು ನಾಶಮಾಡಿ, ನಿಮ್ಮ ಗಂಟಲನ್ನೂ, ಎದೆಯನ್ನೂ ಮತ್ತು ಶ್ವಾಸಕೋಶಗಳನ್ನೂ ಹಾನಿಯಿಂದ ಸುರಕ್ಷಿತವಾಗಿ ಮಾಡುವುದು.

ಎಲ್ಲಾ ದವಖಾನೆಗಳಲ್ಲಿ ಬಾಟ್ಲಿ ಒಂದರ ರೂ. 1ಕ್ಕೆ ಪೆಪ್ಸ್ ದೊರೆಕುತ್ತದೆ.

ಪೆಪ್ಸ್ PEPS

Bank Constituents, look here please!

Constituents of The Travancore National Bank Ltd., (Mangalore Branch) The Canara Banking Corporation Udipi Ltd. and other leading banks of South Kanara are cordially invited to examine "THE DEPOSITORS INSURANCE SCHEME" of The Guardian of India Insurance Co. Ltd, Madras. No other Insurance company in India or abroad has such a splendid scheme as this!

THE GUARDIAN with a paid-up Capital of Rs 1,00,375 and with a *record business* of about 35 lakhs within 14 months of its start, offers special facilities to its agents has splendid attractive schemes for the public and boasts of one of the lowest premium rates!

For full particulars write to the Head Office, 11, Mount Road, Madras, or to

Mr. V. D. Heranjal,
Dist. organiser (for South & North Kanara) UDIPI.

ಪತ್ರಿಕಾಪ್ರಪಂಚ:

ಎಥಿಯೋಪಿಯಾವನ್ನು ಹಂಚಿಕೊಳ್ಳುವ ಸಂಚು.

ಈಗ ಇಟಲಿ, ಫ್ರಾನ್ಸ್, ಬ್ರಿಟನ್ ಈ ಮೂವರಲ್ಲಿ ಅಬಿಸೀನಿಯಾದ ಕುರಿತು ಒಪ್ಪಂದದ ಮಾತುಕಥೆಗಳು ನಡೆಯುತ್ತಿವೆಯಷ್ಟೆ. ಎಬಿಸೀನಿಯಾವನ್ನು ತಮಗೆ ಯುಕ್ತ ಕಂಡ ರೀತಿಯಲ್ಲಿ ಹಂಚಿಕೊಳ್ಳುವುದೇ ಇವರ ಮುಖ್ಯ ಉದ್ದೇಶವಾಗಿರುತ್ತದೆ. ಬರುವ ಕ್ರಿಸ್‌ಮಸ್ ಒಳಗಾಗಿ ಎಬಿಸೀನಿಯಾವನ್ನು ಹಂಚಿಕೊಳ್ಳುವ ಖಂಡಿತ ನಿರ್ಧಾರಗಳು ಬರುವವು. ಫ್ರಾನ್ಸಿನ ಲಾವಲರು, ಬ್ರಿಟನಿನ ಬಾಲ್ಡ್‌ವಿನ್ನರು ಅಧಿಕಾರ ಸೂತ್ರದಲ್ಲಿರುವ ವರೆಗೆ ಅನ್ಯಥಾ ಇದು ಬೇರೆ ವಿಧದಲ್ಲಿ ರೂಪಿಸುವಂತಿಲ್ಲ. ಇವರು ಕೆಳಗಿನ ನಿರ್ಧಾರಗಳನ್ನು ಮಾಡಬಹುದು.

೧. ಇಟಲಿಯವರು ಉತ್ತರ ದಿಕ್ಕಿನ ಟಿಗ್ರೆ ಎಂಬ ಪ್ರಾಂತ್ಯವನ್ನು ಮತ್ತು ಆಕ್ರಮಣೆಯಲ್ಲಿ ವಶೀಕರಿಸಿದ ಹಲವು ಪ್ರಾಂತ್ಯಗಳನ್ನು ತಮ್ಮ ಅಧೀನದಲ್ಲಿಡಬಹುದು. ೨. ಟಾನ ಸರೋವರವಿರುವ ಪ್ರದೇಶವನ್ನು ಬ್ರಿಟಿಷರ ಉಪಯೋಗಕ್ಕಾಗಿ, ಜನಪದ ಮಂಡಲದ ಅಧಿಕಾರದಲ್ಲಿ ಇರಿಸುವುದು. ೩. ದಕ್ಷಿಣ ದಿಕ್ಕಿನ ಪ್ರಾಂತ್ಯಗಳಲ್ಲಿ ಇಟಲಿಯವರಿಗೆ ಜನಪದ ಮಂಡಲದಿಂದ ಒಂದು 'ಮ್ಯಾಂಡೇಟ'ನ್ನು ಕೊಡುವುದು ಇವೇ ಇವರ ಒಪ್ಪಂದದ ಮುಖ್ಯ ಸೂತ್ರಗಳು. ಇವರ ಈ ಉದ್ದೇಶಕ್ಕೆ ಕೆಳಗಿನವುಗಳು ಕಾರಣಗಳಾಗಿವೆ.

ಜರ್ಮನಿಯವರು ಗುಪ್ತರೀತಿಯಲ್ಲಿ ಶಸ್ತ್ರಪಾಣಿಗಳಾಗುವುದನ್ನು ಕೇಳಿದಂದಿನಿಂದ, ಫ್ರಾನ್ಸು ಭೀತಿಗೊಂಡು ಜರ್ಮನಿಯು ತನ್ನ ಮೇಲೆ ಬರುವ ಸಂದರ್ಭ ಬ್ರಿಟನು ತನ್ನೊಡನೆ ಸಹಕರಿಸುವುದೋ ಎಂಬ ಪ್ರಶ್ನೆಯು ಕೇಳಲಾಯಿತು. ಜರ್ಮನಿಯು ಆಸ್ಟ್ರಿಯಾವನ್ನು ಹಿಡಿದರೆ, ಜನಪದ ಮಂಡಲದ ಸದಸ್ಯರಾದ ಬ್ರಿಟಿಷರು ಜರ್ಮನಿಯ ಮೇಲೆ ಮಿಲಿಟರಿ ಸಂಕ್ಷನುಗಳನ್ನು ಜಾರಿಮಾಡಲು ತನ್ನೊಡನೆ ಸಹಕರಿಸುವುದೇ? ಈ ಪ್ರಶ್ನೆಗಳಿಗೆ ಇವರಿಗೆ ಬ್ರಿಟಿಷರಿಂದ ಯಾವ ಉತ್ತರವು ಸಿಕ್ಕಿತು? ಇಂಗ್ಲೇಯರಿಗೂ ಜರ್ಮನಿಯವರಿಗೂ ನೌಕಾ ರಚನೆಯ ಮಹಾ ಒಪ್ಪಂದವೊಂದು ನಡೆಯಿತು! ಈ ಒಪ್ಪಂದಕ್ಕೆ ಬ್ರಿಟಿಷರು ಕೊಟ್ಟ ಕಾರಣ? ಬಾಲ್ಟಿಕ್ ಸಾಗರದಲ್ಲಿ ತಮ್ಮ ನೌಕಾಭದ್ರತೆ.

ಇತ್ತೀಚೆಗೆ ಈ ವರ್ಷದ ಪ್ರಾರಂಭದಲ್ಲಿ ಫ್ರಾನ್ಸಿನ ಲಾವಲರು ರೋಮಿಗೆ ತೆರಳಿ, ಮುಸಲೋನಿಯ ಕೂಡೆ ಫ್ರಾನ್ಸಿಗೂ ಇಟಲಿಗೂ ಇರುವ ಹಲವು ಭೇದಗಳನ್ನು ನಿವಾರಿಸಲು ಒಂದು ಒಪ್ಪಂದವನ್ನು ಮಾಡಿದರು. ಈ ಒಪ್ಪಂದದ ಶರ್ತಗಳನ್ನನುಸರಿಸಿ ಇಟಲಿಗೆ ಎಬಿಸೀನಿಯಾದಲ್ಲಿ ಸ್ವೇಚ್ಛೆಯಾಗಿ ವರ್ತಿಸಲು ಬಿಡಬೇಕು, ಇದಕ್ಕೆ ಪ್ರತಿಯಾಗಿ ಇಟಲಿಯು ಫ್ರಾನ್ಸಿನೊಡನೆ ಹಿಟ್ಲರನನ್ನು ಹಿಂದಿಸಲು ಸಹಕರಿಸಬೇಕು ಎಂಬ ನಿರ್ಣಯಗಳಾಗಿದ್ದುವು. ಈ ಒಪ್ಪಂದದಲ್ಲಿ ಸಿಲುಕಿದ ಲಾವಲರು ಮುಸಲೋನಿಯನ್ನು ರಕ್ಷಿಸಲು ಜನಪದ ಮಂಡಳದಲ್ಲಿ ಹಲವು ಪ್ರಯತ್ನಗಳನ್ನು ಮಾಡಬೇಕಾಯಿತು. ತನ್ನ ವಚನವನ್ನು ಮುರಿಯದಂತೆ ಮುಸಲೋನಿಯನ್ನು ಕಾಪಾಡುವುದು ಇವರ ಮುಖ್ಯ ಕರ್ತವ್ಯವಾಗಿರುತ್ತದೆ.

ಫ್ರಾನ್ಸು ಈ ರೀತಿ ವರ್ತಿಸಲು ಬ್ರಿಟಿಷರೇ ಜರ್ಮನ ಆಕ್ರಮಣದ ಕುರಿತು ಮೌನವೆ, ಜಪಾನು ಮಂಚೂರಿಯಾದ ಮೇಲೆ ದಾಳಿನಡೆಸುತ್ತಿರುವ ಸಮಯ ಬ್ರಿಟಿಷರು ಇದನ್ನು ತಡೆಯಲು ತಮಗೆ ಅಸಾಧ್ಯವೆಂದು ತಿಳಿಸಿದರು, ಆಗಲೂ ಇವರು ಜನಪದಮಂಡಲದ ಸದಸ್ಯರಾಗಿದ್ದರು. ಜನಪದ ಮಂಡಲದ ಉದ್ದೇಶದ ಶ್ರೇಷ್ಠತ್ವವು ಆಗ ಇವರಿಗೆ ತಿಳಿದಿಲ್ಲವೇ? ಈಗ ತಮ್ಮ ಸ್ವಾರ್ಥಕ್ಕಾಗಿ ಜನಪದ ಮಂಡಳವನ್ನು ಒಂದು ಶಸ್ತ್ರವಾಗಿ ಉಪಯೋಗಿಸಲು ಇವರು ಈ ರೀತಿ ತಿಳಿಸುತ್ತಿದ್ದಾರೆ. ಈಗಲೂ ಕೆಲವು ವಾರಗಳ ಹಿಂದೆ ಜರ್ಮನಿಯು ಆಸ್ಟ್ರಿಯಾವನ್ನು ಹಿಡಿಯುವ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಸಹಕರಿಸುವೆವೆಂಬ ಫ್ರಾನ್ಸಿನ ಪ್ರಶ್ನೆಗೆ ಉತ್ತರವೇ ದೊರಕುವುದಿಲ್ಲ.

ಸಂಗತಿಗಳು ಹೀಗಿರಲು, ಬ್ರಿಟನು ಹೇಗೆ ವರ್ತಿಸುವುದು? ತನ್ನ ಯಾವತ್ತೂ ವರ್ತನೆಗೆ ತಕ್ಕ ಸಿದ್ಧತೆಗಳನ್ನು ಮಾಡಿಯೇ ತೀರಿಸಿದ್ದಾರೆ. ಇಟಲಿಯ ಮೇಲೆ ಇದರ ಸ್ವತಂತ್ರವಾಗಿ ಮಿಲಿಟರಿ ಸಂಕ್ಷನು ಜಾರಿಮಾಡಬಹುದು. ಇವರು ಬ್ರಿಟಿಷ ಸೋಮಾಲಿಲ್ಯಾಂಡಿನ ಸುಡಾನ-ಎಬಿಸೀನಿಯಾ ಗಡಿನಾಡಿನಲ್ಲಿ ಧಾರಾಳ ಸೈನ್ಯವನ್ನೂ, ಮೆಡಿಟರೇನಿಯನ್ ಸಮುದ್ರದಲ್ಲಿ ನೌಕಾಬಲವನ್ನು ಸೇರಿಸಿರುವುದರಿಂದಲೇ ಇದು ವ್ಯಕ್ತವಾಗುತ್ತದೆ. ಆದರೂ, ಈ ಮಹಾಕಾರ್ಯದಲ್ಲಿ ಒಬ್ಬಂಟಿಗರಾಗಿ ನಟಿಸಲು ಇವರಿಗೆ ಇಷ್ಟವಿಲ್ಲ. ಬ್ರಿಟಿಷರ ಈ ಸಿದ್ಧತೆಗಳು ಮುಸಲೋನಿಯನ್ನು ಸ್ವಲ್ಪ ಹಿಂದೆಗೆಯುತ್ತದೆ. ಮಹಾಪ್ರಭುತ್ವವೇ ಮುಖ್ಯ ಉದ್ದೇಶವಾಗಿ, ಮುಂದುವರಿಸಿದ ಮುಸಲೋನಿಯು ಬ್ರಿಟಿಷರು ಕೊಟ್ಟ ಈ ಎಚ್ಚರಿಕೆಯಿಂದ ಸ್ವಲ್ಪ ಚೇತರಿಸಿಕೊಂಡವನಾಗಿ ಸಂಧಿಪ್ರಸ್ತಾಪಗಳಿಗೆ ತಲೆಕೊಟ್ಟಿರುತ್ತಾನೆ.

ಫ್ರಾನ್ಸಿನವರು ಮುಸ್ಸೋಲಿನಿಯೊಡನೆ ಅತಿ ಜಾಗರೂಕತೆಯಿಂದ ವರ್ತಿಸಲು ಬ್ರಿಟಿಷರಿಗೆ ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ. ಬ್ರಿಟಿಷರ ಎಚ್ಚರಿಕೆಯು ಮುಸಲೋನಿಯನ್ನು ಒಂದು ಮಹಾಯುದ್ಧಕ್ಕೆ ಕೈಹಾಕುವಂತೆ ಮಾಡುವ ಸಂಭವಗಳು ಇವೆ. ಈ ಸಂಭವದಲ್ಲಿ ಮೆಡಿಟರೇನಿಯನ್ ಸಮುದ್ರದಲ್ಲಿ ಮುಸಲೋನಿಯು ಇವರ ಮೇಲೆ ಆಕ್ರಮಿಸಿದರೆ, ಫ್ರಾನ್ಸು ಇವರೊಡನೆ ಸಹಕರಿಸುವುದೋ ಎಂಬ ಪ್ರಶ್ನೆಗೆ 'ಹೌದು' ಎಂಬ ಉತ್ತರವು ಇನ್ನು ದೊರೆತಿಲ್ಲ. ಲಾವಲರು ಈ ಸಂಭವವನ್ನು ತಪ್ಪಿಸಲು, ಮಹಾಯುದ್ಧವು ತಲೆದೋರದ ಹಾಗೆ ಒಪ್ಪಂದಗಳನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ. ಇತ್ತಲಾಗಿ ಬ್ರಿಟಿಷರ ಟೋರಿಗಳಿಗೂ ಯುದ್ಧವು ಬೇಡವಾಗಿದೆ. ಆದರಿಂದ ಇನ್ನು ಎರಡು ತಿಂಗಳುಗಳ ವರೆಗೆ ಅಂದರೆ ಕ್ರಿಸ್‌ಮಸ್ ವರೆಗೆ ಮುಸ್ಸೋಲಿನಿಯೂ ತನ್ನ ಪ್ರತಿಜ್ಞೆಯ ಗೌರವಕ್ಕಾಗಿ ಈ ಎಬಿಸೀನಿಯಾ ಯುದ್ಧವನ್ನು ಸಾಗಿಸುವಂತೆ ಮಾಡಿದ ನಂತರ ಪ್ರಾರಂಭದಲ್ಲೇ ತಿಳಿಸಿದ ಶರ್ತಗಳನ್ನನುಸರಿಸಿ ಒಪ್ಪಂದವಾಗುವುದು. (ಅಮೃತಬಜಾರ್ ಪತ್ರಿಕೆಯಲ್ಲಿ ಯು. ಪಿ. ಎಂಬವರ ಸಂದೇಶದ ಅನುವಾದ)

ಹಿಂದೂದೇಶದ ಸಕ್ಕರೆ ಕೈಗಾರಿಕೆ

ಹಿಂದೂದೇಶದ ಸಕ್ಕರೆಕೈಗಾರಿಕೆಯು ಬಹಳವಾಗಿ ವೃದ್ಧಿಹೊಂದುತ್ತದೆ. ಈಗ ದೇಶದಲ್ಲಿರುವ ಕೈಗಾರಿಕೆಗಳಲ್ಲಿ ಈ ಕೈಗಾರಿಕೆಯು ಎರಡನೆ ಸ್ಥಾನವನ್ನು ಪಡೆದಿದೆ. ನಮ್ಮಲ್ಲೀಗ ೩೬೦ ೪೦೦ ಜನರು ದುಡಿಯುವ ೩೧೫ ವಸ್ತ್ರದ ಗಿರಣಿಗಳಿವೆ. ಸಕ್ಕರೆಯ ಕೈಗಾರಿಕೆಯಲ್ಲಿ ೩೦೦,೦೦೦ ಜನರಿಂದ ಕೂಡಿದ ೧೪೩ ಕಾರ್ಖಾನೆಗಳು ಈಗ ಚಲಿಸುತ್ತಿವೆ. ೧೯೩೨ರ ವರೆಗೆ ಪರದೇಶದಿಂದ ಬರುವ ಸಕ್ಕರೆಯ ಮೇಲೆ ನಮ್ಮ ಸರಕಾರದ ಯಾವ ನಿರ್ಬಂಧಗಳು ಇರದೆ ಇದ್ದುದರಿಂದ, ಈ ಕೈಗಾರಿಕೆ ಅಂದು ಬಹಳ ಶೋಚನೀಯ ಅವಸ್ಥೆಯಲ್ಲಿತ್ತು. ಈಗ ಪರದೇಶದ ಆಮದುಗಳಿಗೆ ಸುಂಕದ ರೂಪದಲ್ಲಿ ಬಲವಾದ ನಿರ್ಬಂಧಗಳನ್ನು ಹಾಕಿರುತ್ತಾರೆ. ಇವೇ ನಮ್ಮ ಸಕ್ಕರೆಕೈಗಾರಿಕೆಯ ಏಳ್ಗೆಗೆ ಮುಖ್ಯ ಕಾರಣ. ೧೯೩೨ರಲ್ಲಿ ಹಿಂದೂದೇಶವು ೩೦,೦೦೦ ಟನ್ ಸಕ್ಕರೆಯನ್ನು ತಯಾರಿಸುತ್ತಿತ್ತು. ಈಗ ೬ ಲಕ್ಷ ಟನ್ ಸಕ್ಕರೆ ತಯಾರಿಸುತ್ತದೆ. ಅಂದಿನ ಸಕ್ಕರೆಯ ಆಮದು ೯ ಲಕ್ಷ ಟನ್, ಇಂದು ಇದು ೨ ಲಕ್ಷ ಟನ್ನಿಗೆ ಇಳಿದಿರುತ್ತದೆ. ಇದರಿಂದ ಪರದೇಶಿಯರಿಗೆ ಈ ಮೊದಲು ಸಲ್ಲುತ್ತಿರುವ ೧೬ ಕೋಟಿ ರೂಪಾಯಿಗಳು ಹಿಂದೂದೇಶದಲ್ಲಿ ಉಳಿಯುವಂತಾಗಿದೆ. ನಮ್ಮಲ್ಲಿ ಸಕ್ಕರೆ ಕಬ್ಬಿನಿಂದಲೆ ಮಾಡುತ್ತಾರೆ.

೧೯೩೦ರಲ್ಲಿ ೨,೬೬೬,೦೦೦ ಎಕ್ರೆ ಸ್ಥಳದಲ್ಲಿ ಕಬ್ಬಿನ ಸಾಗುವಳಿಯು ನಡೆಯುತ್ತಿತ್ತು. ಈಗ ೩,೬೦೦,೦೦೦ ಎಕ್ರೆಗಳಿಗೆ ಏರಿರುತ್ತದೆ. ಅದೂ ಅಲ್ಲದೆ, ಕೋಯಂಬತ್ತೂರಿನಲ್ಲಿ ಕೃಷಿಮಾಡಿದ ಒಂದು ವಿಶೇಷ ತರದ ಕಬ್ಬಿನ ಸಾಗುವಳಿಯು ಉತ್ತರ ಹಿಂದೂಸ್ಥಾನದಲ್ಲಿ ಧಾರಾಳವಾಗಿ ನಡೆಯುತ್ತದೆ. ೨೫ ಮಿಲ್ಲಿಯ ಎಕ್ರೆ ಸ್ಥಳದಲ್ಲಿ ಇದರ ಸಾಗುವಳಿಯು ನಡೆಯುತ್ತಿದೆ. ಕಬ್ಬಿನ ಸಾಗುವಳಿಯು ಅಭಿವೃದ್ಧಿಹೊಂದಿದರೆ ಮಾತ್ರ, ಸಕ್ಕರೆಯು ಸುಲಭವಾದ ದರದಲ್ಲಿ ವಿಕ್ರಯಿಸಬಹುದು. ಜಾವಾದಲ್ಲಿ ಮಣ ೧ರ ೨ ಆಣೆ ವೆಚ್ಚದಲ್ಲಿ ಕಬ್ಬಿನ ಸಾಗುವಳಿಯು ನಡೆಯುತ್ತದೆ. ನಮ್ಮ ದರವು ಮಣ ೧ರ ೮ ಆಣೆಯಿಂದ ೧೦ ಆಣೆಯ ವರೆಗೆ. ಈ ಒಂದು ಕಾರಣದಿಂದಲೆ ನಾವು ಈ ಕೈಗಾರಿಕೆಯಲ್ಲಿ ಪೂರ್ಣ ಚೇತರಿಸಿಕೊಳ್ಳುವಂತಾಗಲಿಲ್ಲ. ಈ ದರವನ್ನು ಒಂದು ವೇಳೆ ೪ ಆಣೆಗಳಿಗೆ ಇಳಿಯುವಂತೆ ಮಾಡಿದರೆ, ಪರದೇಶಿಯ ಸಕ್ಕರೆಯ ಆಮದನ್ನು ಅತಿ ಕಡಿಮೆ ಮಾಡಿಬಿಡಬಹುದು. ಆದುದರಿಂದ ಹೆಚ್ಚಿನ ಸ್ಥಳವನ್ನು ಕಬ್ಬಿನ ಸಾಗುವಳಿಗೆ ಉಪಯೋಗಮಾಡಬೇಕು. ನವೀನ ತರದ ರೀತಿಯಲ್ಲಿ ಕಬ್ಬನ್ನು ಬೆಳೆಯಿಸಬೇಕು. (ಬೆಳೆಯು ಸಂತೃಪ್ತಿಯಾಗುವಂತೆ) ಕಬ್ಬಿನತ್ತ ಸರಕಾರವೂ ಪ್ರಜೆಗಳೂ ಹೆಚ್ಚಿನ ಗಮನಕೊಡಬೇಕು.

ನಮ್ಮ ದೇಶದ ಅಭಿವೃದ್ಧಿಯು ಜಾವಾದ ಮೇಲೆ ಹೇಗೆ ಪರಿಣಮಿಸಿತು? ಸಕ್ಕರೆಯು ವಿಶೇಷವಾಗಿ ತಯಾರಾಗಿ ಗಿರಾಕಿಗಳಿಲ್ಲದೆ ಅವರಲ್ಲೇ ನಿಂತಿತು. ಇದನ್ನು ಹೊರಗೆ ಹಾಕಲು ಅನ್ಯಾಯಕರ ಸ್ಪರ್ಧೆಯ ದರಗಳನ್ನು ವಿಧಿಸಿದರು. ಈಗ ಅವರು ಸಕ್ಕರೆಯೊಡನೆ ಬೆಲ್ಲದ ತಯಾರಿಯನ್ನು ಮಾಡುತ್ತಿದ್ದಾರೆ.

ನಮ್ಮ ಸರಕಾರವು ಪರದೇಶಿಯ ಸಕ್ಕರೆಯ ಆಮದಿನ ಮೇಲೆ ನಿರ್ಬಂಧ ಹಾಕಿದುದಲ್ಲದೆ, ನಮ್ಮ ಸಕ್ಕರೆಯ ಮೇಲೆ ಅಬಕಾರಿ ತೆರಿಗೆ ವಿಧಿಸಿರುತ್ತದೆ. ಆದರೆ ಈ ತೆರಿಗೆಯಿಂದ ನಮ್ಮ ವ್ಯಾಪಾರಕ್ಕೆ ಹೆಚ್ಚಿನ ಹಾನಿ ಏನಿಲ್ಲ. ಒಂದು ಹಂಡ್ರೆಡ್ ವೈಟಿಗೆ ರೂ ೧—೫—೦ ಸುಂಕವಿರುವುದು. ಇದು ಈಗಿನ ದರದ ಶೇಕಡಾ ೧೩ ಸಲೆಯಾಗಿರುತ್ತದೆ. ಹೀಗಿದ್ದರೂ ಕೂಡ, ನಮಗೆ ಈಗ ಕಾಲು ಶತಮಾನ ಹಿಂದಿಗಿಂತ ಸುಲಭ ದರದಲ್ಲಿ ಸಕ್ಕರೆ ದೊರಕುತ್ತದೆ.

೧೯೩೪-೩೫ರಲ್ಲಿ ತಯಾರಾದ ಸಕ್ಕರೆಯ ಮೌಲ್ಯ ರೂ ೧೩೫೦ ಲಕ್ಷ. ಈ ೧೩೫೦ ಲಕ್ಷದಲ್ಲಿ (a) ಕಬ್ಬಿನ ಕ್ರಯ ರೂ ೬೦೦ ಲಕ್ಷ, (b) ಕಬ್ಬಿನ ಸಾಗುವಳಿಗೆ ರೂ ೧೨೦ ಲಕ್ಷ, (c) ಮಜೂರರ ಕೂಲಿ ರೂಪಾಯಿ ೨೦೦ ಲಕ್ಷ, (d) ವಿದ್ಯಾವಂತ ನೌಕರರಿಗೆ ರೂ ೩೦ ಲಕ್ಷ. ನಮ್ಮ ಸಕ್ಕರೆಕೈಗಾರಿಕೆಯು ೧೫೦೦ ಪದವೀಧರರಿಗೆ ಮತ್ತು ವಿಜ್ಞಾನಿಗಳಿಗೂ ೬೫೦೦ ವಿದ್ಯಾವಂತರಿಗೂ ೨ ಲಕ್ಷ ಮಜೂರರಿಗೂ ಉದ್ಯೋಗವನ್ನು ಒದಗಿಸಿರುತ್ತದೆ.

ಆದರೆ ಸಕ್ಕರೆ ಕೈಗಾರಿಕೆ ಇನ್ನೂ ಅಭಿವೃದ್ಧಿಹೊಂದಬೇಕಾಗಿದೆ. ನಾವು ಇಷ್ಟರಲ್ಲಿ ತೃಪ್ತಿಹೊಂದಬಾರದು. ಕಬ್ಬಿನ ಸಾಗುವಳಿಯ ಉದ್ಧರಣೆಯು ಆಗತಕ್ಕದ್ದು. ಕೋಯಂಬುತ್ತೂರಿನಲ್ಲಿ ಒಂದು ಸಾಗುವಳಿ ರಿಸರ್ಚ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಹೀಗೆಯೇ ಹಿಂದೂದೇಶದ ಬೇರೆ ಬೇರೆ ಸಕ್ಕರೆ ಕೈಗಾರಿಕೆಯ ನಗರಗಳಲ್ಲಿ ಇಂಥಾ ಸಂಸ್ಥೆಗಳಿವೆ. ಈ ಸಂಸ್ಥೆಗಳು ಕಬ್ಬಿನ ಸುಧಾರಣೆ, ಬೀಜಗಳ ಸುಧಾರಣೆ [illegible] ಇವೇ ಮೊದಲಾದ ಪ್ರಶ್ನೆಯ ಕುರಿತು ಶೋಧಗಳನ್ನು ನಡೆಸಿ, ಕಬ್ಬಿನ ಸಾಗುವಳಿಯು ಉದ್ಧಾರಹೊಂದುವ ನವೀನ ಕ್ರಮಗಳನ್ನು ರಚನೆಮಾಡುತ್ತಾರೆ. ಈ ಸಂಸ್ಥೆಗಳ ಬೆಳವಣಿಗೆ ಅದರ ಮೂಲಕ ಸಕ್ಕರೆಕೈಗಾರಿಕೆಯು ಉದ್ಧಾರವಾದಂತಾಗುವುದು. ಅಂತೂ ಸಕ್ಕರೆ ಕೈಗಾರಿಕೆ ನಮ್ಮ ಮುಖ್ಯ ಉದ್ಯಮವಾಗಿದೆ ಮಾತ್ರವಲ್ಲ, ನಾವು ಮತ್ತು ನಮ್ಮ ಸರಕಾರದವರು ಯೋಗ್ಯ ರೀತಿಯಲ್ಲಿ ನಡೆದು ಈ ಕೈಗಾರಿಕೆಯಲ್ಲಿ ಶ್ರೇಯಸ್ಸನ್ನು ಪಡೆಯಬಹುದು. ನಿರುದ್ಯೋಗಿಗಳನ್ನು ಸ್ಥಾಪಿಸಬಹುದು. ನಮ್ಮ ಜಿಲ್ಲೆಯಲ್ಲಿ ಇಂಥಾ ಸಂಸ್ಥೆ ಏಕೆ ತಲೆದೋರಬಾರದು? ಈಗ ಬಹಳಷ್ಟಾಗಿ ಭತ್ತವನ್ನು ಬೆಳೆಯಿಸುವ ಭೂಮಿಯನ್ನು ಕಬ್ಬಿನ ಸಾಗುವಳಿಗೆ ಉಪಯೋಗ ಮಾಡಿ ಕೃಷಿಕರನ್ನು ಏಕೆ ಉದ್ಧರಿಸಬಾರದು?

(ಬಿರ್ಲಾ ವಾರಪತ್ರಿಕೆಯಲ್ಲಿನ ಶ್ರೀಯುತ ಸರ್. ಟಿ. ವಿಜಯ ರಾಘವಾಚಾರ್ಯರ ಲೇಖನವನ್ನು ಅನುಸರಿಸಿ ಬರೆದುದು)

ಕಾಂಗ್ರೆಸಿನ ಅಂತಃಕಲಹಗಳು.

ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸಭೆಯಲ್ಲಿ ಆಂತಃಕಲಹಗಳು ತಲೆದೋರಿವೆ. ಪರಸ್ಪರ ಭೇದಗಳು ಕೆಲವು ಮುಖಂಡರಲ್ಲಿ ತಲೆದೋರಿವೆ. ಇವರಲ್ಲಿ ಭಿನ್ನತೆಗಳನ್ನು ಒಡಂಬಡಿಸುವ ಪ್ರಯತ್ನಗಳು ಫಲಕಾರಿಯಾದಂತೆ ಕಾಣುವುದಿಲ್ಲ. ಇದಕ್ಕೆ ಸೋಶಿಯಲಿಸ್ಟ ಎಂಬ ಹೊಸ ಪಕ್ಷವೇ ಕಾರಣ. ಕೆಲವು ಮುಖಂಡರಿಗಾಗಿ ಈ ಎಲ್ಲಾ ಕಲಹ. ಇವರು ಸ್ವಲ್ಪ ಚೇತರಿಸಿಕೊಳ್ಳುವಂತೆ ಕಾಂಗ್ರೆಸ್‌ವಾಲಾರು ಎಚ್ಚರವಾಗಬಾರದೆ? ಸೋಶಿಯಲಿಸ್ಟ್ ಪಂಗಡವು ದೇಶದ ಹಲವು ಕಡೆಗಳಲ್ಲಿ ಕಾಂಗ್ರೆಸ್ಸಿನೊಡನೆ ಸಹಕರಿಸುವ ಬದಲಾಗಿ ಕಾಂಗ್ರೆಸ್ಸಿಗೆ ಹಾನಿಯನ್ನು ಮಾಡುತ್ತವೆ. ಲಖ್ನೋದಲ್ಲಿ ಮುಂದಿನ ಅಧಿವೇಶನದ ವಿಷಯ ತಲೆದೋರುವ ಚರ್ಚೆಯು ಶಾಂತವಾಗದಿದ್ದರೆ, ಇದನ್ನು ಬೇರೆ ನಗರದಲ್ಲಿ ಜರಗಿಸುವೆವು ಎಂದು ಹಲವರು ಸಿದ್ಧರಿರುವರು.

ಆಲಿಗಾರದ ವಿದ್ಯಾರ್ಥಿಗಳು.

—ಇಟಲಿಯಿಂದ ಬರುವ ವೆಲ್ವೆಟ್ ಟೋಪಿಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಇಟಲಿಯವರು ಆಫ್ರಿಕಾದಲ್ಲಿ ಇಸ್ಲಾಂ ಧರ್ಮಕ್ಕೆ ಹೆಚ್ಚಿನ ಹಾನಿಯನ್ನುಂಟುಮಾಡಿರುತ್ತಾರೆ. ಹೀಗಿರುವಾಗ ಅಲಿಗಾರದವರು ಈ ಟೋಪಿಗಳನ್ನು ಧರಿಸುವುದು ನ್ಯಾಯವೆ? ಈ ಟೋಪಿಯನ್ನು ಇವರೇಕೆ ತ್ಯಜಿಸಬಾರದು?

ಕೊಚ್ಚಿಯಲ್ಲಿ ಹಿಂದೀ ಪ್ರಚಾರಕ್ಕಾಗಿ

ಒಬ್ಬ ಪ್ರೊಫೇಸರರ ನೇತೃತ್ವದಲ್ಲಿ ಹಿಂದೀ ಪ್ರಚಾರ ಕಾರ್ಯವು ಇಲ್ಲಿ ಬಹು ಆನಂದದಿಂದ ನಡೆಯುತ್ತದೆ. ಇದನ್ನು ಬೇರೆ ಅಧಿಕಾರಿಗಳು ಅನುಸರಿಸುವಂತಾಗಬೇಕಾಗಿದೆ. ನಮ್ಮಲ್ಲಿ ಕೂಡ ಹಿಂದೀ ಪ್ರಚಾರಕ್ಕೆ ಕೊಚ್ಚಿಯಲ್ಲಿ ನಡೆದ ರೀತಿ ಆದರ್ಶವಲ್ಲವೇ? ಹಿಂದೀ ಪ್ರಚಾರಕ್ಕೆ ವೆಚ್ಚಮಾಡಿದ ಹಣದಿಂದ ನಮಗೆ ಒಳ್ಳೇ ಫಲವು ದೊರಕುವುದು.



ಅನುಕ್ರಮಣಿಕೆ.

ಟಿಪ್ಪಣಿಗಳು ೩
ಹಬಸಿ ಚಕ್ರವರ್ತಿಯವರನ್ನು ಕೊಲೆಮಾಡುವ ಸಂಚು. ೩
ಇಟಲಿಯಾನರು ಮಕಾಲೆಯನ್ನು ವಶೀಕರಿಸಿದರು ೫
ಇಟೆಲಿಯಾನರು ಸಾಸಾಬೇನಾವನ್ನು ಹಿಡಿದಿರುವರು ೬
ನಗಬಾರದು ೮
ಪತ್ರಿಕಾಪ್ರಪಂಚ ೯
ಅಗ್ರಲೇಖ
ಗ್ರಾಮಗಳಲ್ಲಿ ಕಡ್ಡಾಯದ ಮೂಲವಿದ್ಯಾಭ್ಯಾಸ ೧೦
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ಸಂಪಾದಕರ ಟಪ್ಪಾಲುಪೆಟ್ಟಿಗೆ ೧೬
ವಿವಿಧ ಸಮಾಚಾರಗಳು ೧೩
ಪುರಂದರದಾಸರೂ, ಕನ್ನಡ ಸಾಹಿತ್ಯವೂ ೧೪

ಸ್ವದೇಶಾಭಿಮಾನಿ

…೧೫ನೇ ಶುಕ್ರವಾರ ನವೆಂಬರ '೩೫.

ಗ್ರಾಮಗಳಲ್ಲಿ ಕಡ್ಡಾಯದ ಮೂಲವಿದ್ಯಾಭ್ಯಾಸ

ಐದು ಸಾವಿರ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ ವಿದ್ಯಾರ್ಥಿ ದಶೆಯಲ್ಲಿರಬೇಕಾದ ಎಲ್ಲ ಬಾಲಕರಿಗೆ ಕಡ್ಡಾಯವಾಗಿ ಮೂಲ ವಿದ್ಯಾಭ್ಯಾಸವನ್ನು ಕೊಡಲೇ ಬೇಕಾದರೆ ಯಾವ ಕ್ರಮವನ್ನನುಸರಿಸಬೇಕು ಎಂಬ ಪ್ರಶ್ನೆಯನ್ನು ಆಲೋಚಿಸಿ ಸಮರ್ಪಕ ಉತ್ತರ ಕೊಡಲು ನಮ್ಮ ಸರಕಾರವು ಒಂದು ಕಮಿಟಿಯನ್ನು ನೇಮಿಸಿಯದೆ. ಇನ್ನು ಹತ್ತು ವರ್ಷಗಳಲ್ಲಿ ಸಾರ್ವತ್ರಿಕವಾಗಿ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿ ಕೊಡುವಂತಾಗಬೇಕೆಂದು ಮುಖ್ಯ ಮಂತ್ರಿಗಳು ನಿರ್ಧರಿಸುವುದರ ಪೂರ್ವ ಸೂಚನೆಯಿದು. ಇತ್ತೀಚೆಗೆ, 'ಪ್ರಾಂತಿಕ ಸಾಂಪತ್ತಿಕ ಕೌನ್ಸಿಲು' ಎಂಬೊಂದು ಹೊಸ ಕೌನ್ಸಿಲನ್ನು, ಸರಕಾರವು ರಚಿಸಿ, ಅದರ ಮೂಲಕ ಪ್ರಾಂತ್ಯದ ಅಭ್ಯುದಯ ಸಾಧನೆ ಮಾಡಬೇಕೆಂದಿದೆ. ಈ ಮೂಲವಿದ್ಯಾಭ್ಯಾಸ ಪ್ರಚಾರದ ವಿಷಯವನ್ನು ಇದೇ ಕೌನ್ಸಿಲು ಮುಂದೆ ಮೊದಲನೆಯದಾಗಿ ಇಡಲಾಗುವುದು.

ಇದುವರೆಗೆ,—ಮದ್ರಾಸು ನಗರದಲ್ಲಿ ಸಹ—ಕಡ್ಡಾಯವಾಗಿ ವಿಧಿಸಿರುವ ಮೂಲ ಶಿಕ್ಷಣವು ಸಾರ್ಥಕವಾಗದೆ ಹೋಗಿದೆ. ಏಕೆಂದರೆ ಮೊನ್ನೆ ಮೊನ್ನೆ ಪ್ರಕಟವಾದ, ಮದ್ರಾಸು ನಗರದ ಎಜ್ಯುಕೇಶನ ಕೌನ್ಸಿಲಿನ ವರದಿಯಲ್ಲಿ ಸೂಚಿಸಿರುವಂತೆ, ೧೫,೦೦೦ ಬಾಲಕರು ಇನ್ನೂ ಯಾವ ಶಾಲೆಗೂ ಹೋಗದೆ ಇರುವರು; ಇವರು ಶಾಲೆಗೆ ಹೋಗಲು ಮ್ಯುನಿಸಿಪಾಲಿಟಿಯೂ ಒತ್ತಾಯಮಾಡಿಲ್ಲ; ಯಾವ ಇಂಥ ಮಗುವಿನ ತಂದೆಯನ್ನಾದರೂ ದಂಡನೆಗೆ ಒಳಪಡಿಸಿದುದೇ ಇಲ್ಲ. ಏಕೆ? ಈ ಮಕ್ಕಳು (೧೫೦೦೦) ಈಗಲೆ ಶಾಲೆಗೆ ಸೇರುವೆವೆಂದು ಮುಂದೆ ಬಂದರೆ, ಅವರಿಗೆ ಶಿಕ್ಷಣಕೊಡುವುದಕ್ಕೆ ಬೇಕಾಗುವ ಶಾಲೆ ಶಿಕ್ಷಕರು ಮೊದಲಾದುವಕ್ಕೆ ಬೇಕಾಗುವ ಹಣವು ಮ್ಯುನಿಸಿಪಾಲಿಟಿಯ ಖಜಾನೆಯಲ್ಲಿಲ್ಲ! ಶಾಲೆಗಳೇ ಇಲ್ಲವಿರುವಾಗ, ಶಾಲೆ ಸೇರಿಲ್ಲವೆಂದು ವಿದ್ಯಾರ್ಥಿಗಳ ಮೇಲೆ ದೂರು ತರುವುದು ಹೇಗೆ? ಇತರ್ಡ್ ಶಾಲೆಗಳು ಈ ಬಾಲಕರನ್ನು ಸೇರಿಸಿಕೊಳ್ಳಲು ನೆರವಾಗಬಹುದು. ಆದರೆ, ಇವರಿಗೆ ಗ್ರೇಂಟನ್ನು ಯಥಾವಿಧಿಯಾಗಿ ಕೊಡುವವರೂ ಇಲ್ಲ, ಕೊಡಲು ಹಣವೂ ಇಲ್ಲ. ಹೀಗಾಗಿ ಏಡೆಡ್ ಶಾಲೆಗಳಿಂದ ಅಶಿಕ್ಷಿತ ಬಾಲಕರ ಸಂಖ್ಯೆ ಇಳಿಸಲು ಸಾಧ್ಯವಾಗುತ್ತಿಲ್ಲ. 'ಕಡ್ಡಾಯ ವಿದ್ಯಾಭ್ಯಾಸ' ಎಂಬುದು ಮದ್ರಾಸಿನಲ್ಲಿ ಅರ್ಥಹೀನ ಮಾತಾಗಿದೆ! ಇದೇ ರೀತಿಯಾಗಿ ಕೆಲವು ಮ್ಯುನಿಸಿಪಾಲಿಟಿಗಳಲ್ಲಿಯೂ ಮೂಲ ಶಿಕ್ಷಣವು 'ಕಡ್ಡಾಯ'ವಾಗಿ ಜ್ಯಾರಿಗೆ ಬಂದಿದೆ.

ಆಲಸ್ಯ ಮತ್ತು ಅಡಚಣೆ ಎಂಬ ಎರಡು ಮುಖ್ಯ ಕಾರಣಗಳಿಂದಲೂ, ಜಾತಿಗಳ ಸಮಸ್ಯೆಯಿಂದಲೂ, ಚಾಂಪಿಯನ್ ರಿಪೋರ್ಟನ್ನು ಅಂಗೀಕರಿಸಲು ಒಲ್ಲದರಿಂದಲೂ, ನಮ್ಮ ಮೂಲ ವಿದ್ಯಾಭ್ಯಾಸವು ಬೇಕಾಗುವಷ್ಟು ವಿಸ್ತಾರವಾಗಿ ಪ್ರಚಾರಹೊಂದುತ್ತಿಲ್ಲವೆಂದು ವಿಮರ್ಶಕರೆನ್ನುತ್ತಾರೆ. ಹಣ,—ಎಲ್ಲೆಲ್ಲಿಯೂ ಕಡಮೆಯಾಗಿದೆ. ಸ್ಥಳೀಯ ಬೋರ್ಡಿನ ಖಜಾನೆಯಲ್ಲಿ ಇರುವ ಇಷ್ಟೇ ಹಣವನ್ನು ಎಲ್ಲ ಬಗೆಯ ಖರ್ಚಿಗೂ ಉಪಯೋಗಿಸಬೇಕಾಗಿದೆ; ಯಾವುದೊಂದೇ-ವಿದ್ಯಾಪ್ರಚಾರದ ಮಾತೇ ಎನ್ನೋಣ—ವಿಷಯಕ್ಕೆ ಹೆಚ್ಚಿಗೆ ವ್ಯಯಮಾಡಿದರೆ, ಅತಿವ್ಯಯ ಅಪವ್ಯಯಗಳ ತಕ್ರಾರಿಗೆ ಬೋರ್ಡು ಒಳಗಾಗುವುದು; ಕ್ಷೇಮಸಾಧನ, ಹೆದ್ದಾರಿಗಳು ಇವುಗಳಿಗೇಕೆ ಖರ್ಚುಮಾಡುವುದು ಕಡಮೆಯಾಗಿದೆ ಎಂದು ತೆರಿಗೆದಾದರೂ, ಆಯಾ ಮೆಂಬರರೂ ಕೇಳುತ್ತಾರೆ. ಸರಕಾರವು ವಿದ್ಯಾಪ್ರಚಾರಕ್ಕಾಗಿಯೆಂದೇ ತುಂಬ ಸಹಾಯಮಾಡದಿರುವಲ್ಲಿ, ಈಗ ಜ್ಯಾರಿಯಲ್ಲಿರುವಷ್ಟು ಪ್ರಚಾರವು ಸಹ ಕಡ್ಡಾಯ ಸ್ಥಿತಿಯಲ್ಲಿ ಉಳಿಯುವುದು ಸಂದೇಹಾಸ್ಪದವಾಗಿದೆ.

ಇನ್ನೂ ಒಂದು ಮಾತಿದೆ. ನಿರೋಗಿಗಳಾಗಿರುವ ಬಾಲಕರು ಮತ್ತು ಶಿಕ್ಷಿತರಾಗಿರುವ ಬಾಲಕರು ಇವರೊಳಗೆ ದೇಶಕ್ಕೆ ಹೆಚ್ಚಿನ ಉಪಕಾರವು ಯಾರಿಂದ? ಅಥವಾ, ಒತ್ತಾಯದಿಂದ ನಾಲ್ಕು ವರ್ಷ ಕಲಿಸಲು ಹಣವ್ಯಯಿಸಿ, ನಂತರ ಶಾಲೆಬಿಡುತ್ತಲೇ ಬಾಲಕರು ನಿರಕ್ಷರಸ್ಥಿತಿಗೆ ಇಳಿಯುವುದಾದರೆ, ಅಂಥ ಕಡ್ಡಾಯ ಶಿಕ್ಷಣಕ್ಕಾಗಿ ವ್ಯಯಿಸುವುದು ವಿಹಿತವೆ?—ಎಂಬೀ ಪ್ರಶ್ನೆಗಳಿಗೆ ಉತ್ತರಕೊಡುವುದು ಸರಕಾರಕ್ಕೂ ಕಷ್ಟವಾಗಿದೆ. ಬಾಲಕನಿಗೆ ನಾಲ್ಕಕ್ಷರ ಕಲಿಸಿದರೆ ತಂದೆಗೆ ಹೆಚ್ಚಿನ ಪ್ರಯೋಜನವೊ, ಅವನ ವೃತ್ತಿಯಲ್ಲಿ ಬಾಲಕನು ಸಹಕರಿಸಿ ದುಡಿದರೆ ಹೆಚ್ಚಿನ ಪ್ರಯೋಜನವೊ—ಎಂಬುದನ್ನು ಹೆತ್ತವರು ನಿಷ್ಕರ್ಷಿಸಬೇಕಾಗಿದೆ. ಕೆಲವು ಜಿಲ್ಲೆಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸವನ್ನು ವಿಧಿಸುವಾಗ, ಇತರ ಜಿಲ್ಲೆಗಳಿಗೆ ಇತರ ವಿಷಯಗಳಿಗೆ ಕೊಡಲಾಗುವ ಧನಸಹಾಯವನ್ನು ಸರಕಾರವು ಕಡಮೆಮಾಡಬೇಕಾಗುವುದೋ ಇಲ್ಲವೋ ಎಂಬುದನ್ನು ಸರಕಾರ ನಿಷ್ಕರ್ಷಿಸಬೇಕಾಗಿದೆ.

ಮುಖ್ಯ ಮಂತ್ರಿಗಳ ಆಶಯವು ಉತ್ತಮವಾಗಿದೆ; ನಾವೂ ಎಲ್ಲರೂ ಅವರನ್ನು ಹೊಗಳೋಣ. ಆದರೆ, "ಹತ್ತು ವರ್ಷಗಳಲ್ಲಿ ಪ್ರಾಂತಿಕ ಮೂಲ ಶಿಕ್ಷಣವು ಕಡ್ಡಾಯವಾಗಿ ಹರಡುವುದು" ಎಂಬ ಮಾತನ್ನು ಮಾತ್ರ, ಅದು ಕೈಗೂಡಿತೆಂದು ಯಾರೂ ನಂಬಲಾರರೆಂದೇ ಹೇಳಬೇಕಾಗಿದೆ. ಕಡ್ಡಾಯ ಶಿಕ್ಷಣವು ಈಗ ಜ್ಯಾರಿಯಲ್ಲಿರುವಲ್ಲಿಂದಲಾದರೂ ಅದು ಮಾಯವಾಗದಂತೆ ಹತ್ತು ವರ್ಷಗಳ ತನಕ ಜಾಗ್ರತೆಯಿಂದ ಕಾಪಾಡಿದರೆ, ಬಹಳ ಉಪಕಾರವಾದೀತು. ಇದಾದ ಬಳಿಕ, ಇತರ ಸರಹದ್ದುಗಳಲ್ಲಿ ಅದನ್ನು ಜ್ಯಾರಿಗೆ ತರೋಣ ಎಂದು ಕಮಿಟಿಯವರು ಶಿಫಾರಸು ಮಾಡುವುದು ಸಂಗತವಾದೀತೆನ್ನಬೇಕು.

ಸ್ಫುಟವಿಚಾರಗಳು

ಸ್ವರಾಜ್ಯವೆಂಬುದು

ನಮ್ಮ ಮನೋಭಾವನೆಯು ಹೊರತು ಬೇರೇನೂ ಅಲ್ಲವೆನ್ನದಿರಿ. ಸ್ವಾತಂತ್ರ್ಯವನ್ನು ಸಿದ್ಧಮಾಡಿಕೊಳ್ಳಬೇಕೆಂದು ಯಾರು ಪ್ರಯತ್ನ ಮಾಡುತ್ತಾರೆಯೋ, ಅವರ ಮನೋಭೀಷ್ಟವು ಸಿದ್ಧವಾದರೆ ತಾನೆ ಸ್ವರಾಜ್ಯ? ನಮ್ಮ ದೇಶದ ಸ್ತ್ರೀಪುರುಷರೆಲ್ಲರಿಗೆ ಜೀವನವು ಸುಖಜೀವನವಾಗುವಂತೆ ಯಾವುದು ಮಾಡಬಲ್ಲುದೋ ಅದೇ ಸ್ವರಾಜ್ಯ ತಂತ್ರ. ಇದುಕಾರಣವೆ, ಸರ್ವ ಭಾರತೀಯರು ಸಹಕರಿಸಿ ಸ್ವರಾಜ್ಯವು ಸಾಧ್ಯವಾಗುವಂತೆ ಕೈಲಾದಷ್ಟು ಸಾಧಿಸಬೇಕೆನ್ನುತ್ತೇನೆ. ಆದುದರಿಂದಲೇ, ನಾನು ಎಂತಹನ—ಅವನು ರಾಷ್ಟ್ರಪಕ್ಷದ ವಿರೋಧಿಯೇ ಆಗಿರಬಹುದಾದರೂ—ಕಾಲಿಗಾದರೂ ಎರಗಿ, 'ಒಂದಾಗೋಣ ಬನ್ನಿ' ಎಂದೇ ಬೇಡಿಕೊಳ್ಳಲು ನಾನು ಸಿದ್ಧನಾಗಿರುವೆನು'' ಎಂಬೀ ಮಾತುಗಳಲ್ಲಿ ರಾಷ್ಟ್ರ ಸಭಾಧ್ಯಕ್ಷರಾಗಿರುವ ಶ್ರೀ ಬಾಬುರಾಜೇಂದ್ರ ಪ್ರಸಾದರವರು ತ್ರಿಚಿನಾಪಳ್ಳಿಯಲ್ಲಿ ಅವರಿಗೆ ಮಾನಪತ್ರವನ್ನು ಅರ್ಪಿಸಿದ ಮಹಾಜನರಿಗೆ ನಿವೇದಿಸಿಕೊಂಡಿರುವರು.

ಇಲ್ಲಿರುವ ಯುರೋಪೀಯರು

ಭಾರತವರ್ಷದ ಉಪ್ಪನ್ನ ತಿಂದವರು. ಇವರೇ ಪ್ರಾಂತಿಕ ಸ್ವರಾಜ್ಯಕ್ಕಾಗಿಯೂ ಕೇಂದ್ರದಲ್ಲಿ ಜವಾಬುದಾರ ಸರಕಾರಕ್ಕಾಗಿಯೂ ಹಿಂದೀ ಪ್ರತಿನಿಧಿಗಳು ವರ್ತುಲ ಪರಿಷತ್ತಿನಲ್ಲಿ ಸೂಚನೆ ತಂದಾಗ ಅನುಮೋದಿಸಿದವರು. ಈಗ ಈಗ ಹೊಸ ಸುಧಾರಣೆಗಳು ಜ್ಯಾರಿಗೆ ಬರುವಾಗ, ಇವರೇ ಸರ್ವ ಪಕ್ಷಗಳೊಡನೆ ಸಹಕರಿಸಿ, ಸುಧಾರಣೆಗಳು ಜಯಶೀಲವಾಗುವಂತೆ ಪ್ರಯತ್ನಿಸಲೇಬೇಕಾಗಿದೆ. ಸರ್ ಜೋನ್ ಥೊಮ್ಸನಂತಹರು ಸಹ "ನಾವು 'ಪರಮಕಾಲರು' ಎಂದರೆ, ಭಾರತ ವರ್ಷದ ಉಪ್ಪನ್ನ ತಿಂದವರು; ಅತಿಥಿಗಳಾಗಿ ಬಾಳಿದವರು ನಾವು; ಆದುದರಿಂದಲೇ ಈ ದೇಶಕ್ಕೆ ನಮ್ಮ ಕೃತಜ್ಞತೆ ಸಲ್ಲಿಸಬೇಕು" ಎನ್ನುವರು. ಹೀಗಿರುವಾಗ, ಹಿಂದೀಯರೊಡನೆ ಸಮಾಜದಲ್ಲಿ ಬಂಧುಭಾವದಿಂದ ಕಲೆತು, ದೂರವಿರುವ ಅಭ್ಯಾಸವನ್ನು ಬಿಟ್ಟು, ಹಿಂದೀಯರ ಸೌಹಾರ್ದವನ್ನು ಯುರೋಪೀಯರು ಗಳಿಸಿಕೊಳ್ಳಬೇಕಾಗಿದೆ. ಯುರೋಪೀಯರನ್ನು ಇದಿರಾಡುವವರ ಸಂಖ್ಯೆ ಬಹಳವಾಗಿದೆ ನಿಜ; ಅದಕ್ಕಾಗಿ ಸರಕಾರಕ್ಕೆ ಮೊರೆಯಿಡುವುದು ಪ್ರಯೋಜನಕರವಲ್ಲ; ಸ್ನೇಹವೇ ಅಗತ್ಯ—ಎಂದು ಟೈಮ್ಸ್ ಪತ್ರಿಕೆ ಎನ್ನುತ್ತಿದೆ.

ಬೊಂಬಾಯಿ ಪ್ರಾಂತ್ಯದ ಸೆಕೆಂಡರಿ ಶಿಕ್ಷಣ ಪರಿಷತ್ತು

ಬರೋಡದಲ್ಲಿ ಸೇರಿತು. ಅಲ್ಲಿನ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕುರಿತು ನಿರ್ಣಯ ಮಾಡುವಾಗ, ಅದರಲ್ಲಿ ಉತ್ತೀರ್ಣರಾಗಬೇಕಾಗುವವರಿಗೆ ನಿರ್ದಿಷ್ಟವಾಗಿರುವ ಯೋಗ್ಯತೆಯ ಮಾರ್ಕುಗಳನ್ನು ಇಳಿಸಬಾರದೆಂದೂ, ಪರೀಕ್ಷೆಯ ಫೀಸನ್ನು ಹತ್ತು ರೂಪಾಯಿಗೆ ಇಳಿಸಬೇಕೆಂದೂ ಸೂಚನೆಗಳಾಗಿವೆ. ಖಾಸಗಿ ಶಾಲೆಗಳು ಆ ಪ್ರಾಂತದಲ್ಲಿ ಸಹ, ಶಾರೀರಕ ವ್ಯಾಯಾಮದ ಶಿಕ್ಷಣದ ಕಡೆಗೆ ತುಂಬಾ ಲಕ್ಷ್ಯ ಕೊಡಬೇಕೆಂದೂ, ಜನರಿಗೆ ಉಪಯೋಗಕ್ಕೆ ಬೀಳುವ ಹಾಗೆ ಸಾರ್ವಜನಿಕ ಮೈದಾನುಗಳನ್ನು ನಗರಗಳಲ್ಲಿ ವ್ಯವಸ್ಥೆಗೊಳಿಸಬೇಕೆಂದೂ, ಪ್ರಾಮುಖ್ಯ ಕೇಂದ್ರಗಳಲ್ಲಿ ಸ್ತ್ರೀ ಶಿಕ್ಷಣಕ್ಕೆ ಅನುಕೂಲವಾಗಿ ಸರಕಾರವು ಸೆಕೆಂಡರಿ ಶಾಲೆಗಳನ್ನು ತೆರೆಯಬೇಕೆಂದೂ, ಮನಃಶಾಸ್ತ್ರವನ್ನು ಬೋಧಿಸಿ ಪ್ರತ್ಯಕ್ಷಜ್ಞಾನವನ್ನು ಶೋಧಗಳ ಮೂಲಕ ಸಂಪಾದಿಸಲಾಗುವಂತೆ ಒಂದು ವಿದ್ಯಾಲಯವನ್ನು ತೆರೆಯಬೇಕೆಂದೂ, ಸೆಕೆಂಡರಿ ಶಾಲೆಗಳಲ್ಲಿ ವೃತ್ತಿ ಶಿಕ್ಷಣದ ಕಡೆಗೆ ಹೆಚ್ಚಾಗಿ ಗಮನಕೊಡಬೇಕೆಂದೂ ಮೊದಲಾಗಿ ಸೂಚನೆಗಳೆಲ್ಲವೂ ಮಂಜೂರಾಗಿವೆ.

ತೀರ್ವೆಯ ವಿಧಾನದ ತಿದ್ದುಪಡಿ

ತೀರ್ವೆ ಹೊರಿಸುವ ಮತ್ತು ವಸೂಲು ಮಾಡುವ ಕ್ರಮಗಳು ತಿದ್ದುಪಡಿಹೊಂದಲೇ ಬೇಕೆಂದು ಕರಾಚಿಯಲ್ಲಿ ಧಾನ್ಯಸಭೆಯು ನಿಷ್ಕರ್ಷಿಸಿದ್ದುದನ್ನು ಆ ಸಭೆಯು ಮರೆತಿಲ್ಲ. ಆದರೆ, ದೇಶದ ಸರಕಾರದ ಕ್ರಮವೂ ಅದರೊಡನೆ ಸುಧಾರಣೆ ಹೊಂದಬೇಕಾಗಿದೆ. ಏಕೆಂದರೆ; ಈ ಸರಕಾರವು ಆಡಳಿತಕ್ಕಾಗಿ ಮಾಡುವ ವ್ಯಯವು ಬಹಳವಾಗಿದೆ. ಈ ವ್ಯಯವು ಇಷ್ಟು ಹೆಚ್ಚಾಗಿರುವಾಗ; ಕಂದಾಯವನ್ನು ಹೇಗೆತಾನೆ ಕಡಮೆಮಾಡಬಹುವುದು? ಇಷ್ಟು ವ್ಯಯವು ಅಗತ್ಯವೇ? ಎಂಬುದನ್ನು ಚರ್ಚಿಸಿದ ಬಳಿಕವೇ ಕಂದಾಯವನ್ನು ಎಷ್ಟು ಮಟ್ಟಿಗೆ ಯಾವ ಭಾಗದಲ್ಲಿ ಇಳಿಸಬಹುದು ಎಂಬುದನ್ನು ನಿರ್ಧರಿಸಬಹುದು. ಆದರೆ ಹೀಗೆ ಚರ್ಚಿಸುವುದಕ್ಕೂ ಹಾಗೆ ನಿರ್ಧಾರ ಮಾಡುವುದಕ್ಕೂ ಅಧಿಕಾರವು ಯಾರಿಗಿದೆ? ಅದು ದೊರೆವ ತನಕ ತೀರ್ವೆಯ ಸುಧಾರಣೆಯಾಗಲಾರದು.

ಮ್ಯುನಿಸಿಪಾಲಿಟಿಗಳ ಕರ್ತವ್ಯ

ಮ್ಯುನಿಸಿಪಾಲಿಟಿಗಳ ಕರ್ತವ್ಯಗಳಲ್ಲಿ ಮುಖ್ಯವಾದುದು ನಗರದ ನಿರ್ಮಲತೆಯನ್ನು ಕಾಪಾಡುವಿಕೆಯು ಆಗಿದೆ. ಹರಿಜನರ ಸಹಾಯವಿಲ್ಲದೆ ಈ ಕರ್ತವ್ಯವನ್ನು ಮ್ಯುನಿಸಿಪಾಲಿಟಿಗಳು ಪಾಲಿಸಬಲ್ಲುವೆ? ಅವರು ಸುಖವಾಗಿ ಜೀವಿಸುವ ಹಾಗೆಯೂ ಅವರ ಜೀವನದಲ್ಲಿ ವಿನೋದವೂ ನಿರ್ಮಲತೆಯೂ ತುಂಬುವ ಹಾಗೆಯೂ ಮ್ಯುನಿಸಿಪಾಲಿಟಿಗಳು ವ್ಯವಸ್ಥೆ ಮಾಡಬೇಕಾಗಿದೆ. ಹರಿಜನರಿಗೆ ಸುಖವನ್ನೊದಗಿಸುವ ಮ್ಯುನಿಸಿಪಾಲಿಟಿಯೇ ತೃಪ್ತಿಕರವಾಗಿ ಕರ್ತವ್ಯಪೂರ್ತಿಯನ್ನು ಮಾಡಬಹುದು. ಮ್ಯುನಿಸಿಪಾಲಿಟಿಗಳು ಈ ವಿಷಯವನ್ನು ಕಣ್ಣಿದಿರಲ್ಲಿಟ್ಟುಕೊಂಡರೆ, ಹರಿಜನರಿಗಾಗಿ ಹೊಸ ವಸತಿಗಳನ್ನು ಕಟ್ಟಿಸಿ, ಅವರಿಗೆ ನಿರ್ಮಲ ನೀರು ಸಿಗುವಂತೆಯೂ ಭಾವಿಗಳನ್ನು ತೋಡಿಸಿ ಕೊಟ್ಟರೆ ಎಷ್ಟೋ ಉಪಕಾರವಾದೀತೆಂದು ತಂಜಾವೂರ ಮ್ಯುನಿಸಿಪಾಲಿಟಿಯವರಿಗೆ ರಾಷ್ಟ್ರ ಸಭಾಧ್ಯಕ್ಷರ ಸೂಚನೆ.

ಸುಶಿಕ್ಷಿತೆಯರಾಗುವ ಸ್ತ್ರೀಯರು

ಮನೆತನಗಳ ಗೌರವವನ್ನು ಕಾಪಾಡುವುದಕ್ಕೆ ಸ್ತ್ರೀಯರು ಸುಶಿಕ್ಷಿತೆಯರಾಗಿರಬೇಕೆಂದು ನಮ್ಮ ವಿದ್ಯಾಂಗದ ಡೈರೆಕ್ಟರರ ಅಭಿಪ್ರಾಯವಾಗಿದೆ. ಈ ಅಧಿಪತ್ಯದಲ್ಲಿ ಹೆಣ್ಮಕ್ಕಳ ವಿದ್ಯಾಭ್ಯಾಸವು ಬಲು ಚೆನ್ನಾಗಿ ಮುಂದರಿಸಿದೆಯಾದರೂ, ಅದೇನೂ ಸಾಕಷ್ಟು ಪ್ರಗತಿಯಲ್ಲ. ಮಕ್ಕಳ ಶಿಕ್ಷಣಕ್ಕೆ ಮನೆಯೇ ಮೂಲವೆಂಬುದು ನಿಜವಾಗಿದೆಯಾದರೆ, ಹೆಮ್ಮಕ್ಕಳು ಸುಶಿಕ್ಷಿತೆಯರಾಗುವುದು ಅತ್ಯಾವಶ್ಯಕವಾಗಿದೆ. ಸಂಗೀತವನ್ನು ಹೆಮ್ಮಕ್ಕಳ ಶಾಲೆಗಳಲ್ಲಿ ಕಲಿಸದಿದ್ದರೆ ಆ ಶಾಲೆಗಳಿಗೆ ಬಾಲಿಕೆಯರೇ ಸೇರುವುದಿಲ್ಲ; ಸ್ತ್ರೀಯರಿಗೆ ಸಂಗೀತಾಭ್ಯಾಸವೆಂಬುದು ಆವಶ್ಯಕವೆಂದು ಹಿರಿಯರು ತಿಳಿದುಕೊಂಡುದಾದರೂ, ಮನೆಯ ವಾತಾವರಣವನ್ನು ರಸಮಯವನ್ನಾಗಿ ಮಾಡುವುದಕ್ಕಲ್ಲವೆ? ಹಿರಿಯರ ವೃತ್ತಿಯನ್ನು ಶಿಕ್ಷಿತ ಯುವಕರು ಅನುಸರಿಸುತ್ತಿಲ್ಲ; ಹಾಗೆಂದು ಮನೆತನದಲ್ಲಿ 'ಮನೆವಾರ್ತೆ' ಕಸಬನ್ನು ಶಿಕ್ಷಿತೆಯರು ಬಿಟ್ಟುಬಿಡುವರೇ ಎಂದು ಸಂದೇಹಪಡುವವರಿದ್ದಾರೆ. ಆದರೆ ಹಾಗೆ ಅಂಜಲು ಕಾರಣವಿಲ್ಲ. ಶಿಕ್ಷಿತ ಯುವಕನು ನಿರುದ್ಯೋಗಿಯಾದರೆ, ತನ್ನ ಹಿರಿಯರ ಕಸಬನ್ನು ಕೈಕೊಳ್ಳದೆ, ನಿರುದ್ಯೋಗಿ ಶಿಕ್ಷಿತರ ಸಂಖ್ಯೆಯನ್ನು ಹೆಚ್ಚಿಸುವರು; ಆದರೆ ಶಿಕ್ಷಿತೆಯರು ನಿರುದ್ಯೋಗಿ ಶಿಕ್ಷಿತೆಯರಾಗುವ ಬದಲಾಗಿ ಮನೆಯಲ್ಲಿ ಅಶಿಕ್ಷಿತರಿಗೆ ಶಿಕ್ಷಣವನ್ನು ಪ್ರತ್ಯಕ್ಷವಾಗಿತ್ತು, ಶಿಕ್ಷಣ ಪ್ರಭಾವವನ್ನು ಮನೆತನದ ಗೌರವವನ್ನು ಬೆಳೆಯಿಸುವುದರಲ್ಲಿ ಪ್ರದರ್ಶಿಸುವ ವೃತ್ತಿಯನ್ನೆ ಕೈಕೊಳ್ಳುವರು.

ತಾಲೂಕುಗಳಿಂದ

ಬೆಳ್ತಂಗಡಿ—ಇಲ್ಲಿಯ ಪಂಚಾಯತ ಕೋರ್ಟ ಪ್ರೆಸಿಡೆಂಟರ ಚುನಾವಣೆಯು ತಾ. ೩ರಲ್ಲಿ ಜರಗಿ ಈ ವರೆಗೂ ಈ ಕೋರ್ಟಿನ ಪ್ರೆಸಿಡೆಂಟರಾದ ಜನಾಬ್ ... ಗ್ರಾಮದ ಪಟೇಲ್ ಎಚ್. ಅಬ್ದುಲ ಖಾದರ್ ... ಸಾಹೇಬ್ ಬಹದ್ದೂರರವರೇ ಈ ಸಲವೂ ... ಮತದಿಂದ ನೇಮಕಗೊಂಡಿರುತ್ತಾರೆ. ಇವರ ... ಯಲ್ಲಿ ಕೋರ್ಟಿನ ಕಾರ್ಯಕ್ರಮಗಳೆಲ್ಲಾ ಸರಿ ... ನಡೆಯುತ್ತವೆ. ಹೆಚ್ಚು ವಿಳಂಬ ಮಾಡದೆ ನಂಬ್ರ ... ಇತ್ಯರ್ಥವಾಗುತ್ತವೆ. ನ್ಯಾಯನೀತಿ ಕಾಪಾಡುವುದ ... ಬಹಳ ನಿಗಾ ಇಡುತ್ತಾರೆ. ಜನರಿಗೆ ಇವರ ಮೇಲೆ ... ಯೂ ವಿಶ್ವಾಸವೂ ಇರುತ್ತದೆ. ಇನ್ನು ಸಹಾ ... ಕೋರ್ಟು ಯೋಗ್ಯ ರೀತಿಯಿಂದ ನಡೆಯುತ್ತಿರುವು ... ಗಿ ನಂಬಿಕೆ.

ಮೂಡಂಬೈಲು—ಇಲ್ಲಿಯ ಬ್ರಾಹ್ಮಣ ತರುಣ ... ದ ಶ್ರೀ ಸಿ. ಎಚ್. ಯಂ ಎನ್. ಶಾಸ್ತ್ರಿಗಳವರು ... ಮೈಸೂರ ಅನೇಕ ಮಹನೀಯರ ಮೆಚ್ಚುಗೆಗೆ ಪಾತ್ರರಾ ... ಶಿವಮೊಗ್ಗ, ಘಾಟಿ ಸೋಮೇಶ್ವರ, ಅಗುಂಬೆ, ... ಪುರ ಮೊದಲಾದೆಡೆಗಳಲ್ಲಿ ಸಂಚರಿಸಿ, ತನ್ನ ವಿಸ್ಮಯ ... ವಾದ ಅಂಗವ್ಯಾಯಾಮ ಆಸನ ಇತ್ಯಾದಿಗಳಿಂದ ... ಯುವರಿಂದ ಮನ್ನಣೆಯನ್ನೂ ಸಿದ್ಧಾಂತರವರಿಂದ ... ನ್ನದ ಪದಕಗಳನ್ನೂ ಪಡೆದು ಬಂದಿರುವರು.

ವಿಟ್ಲ—ಈ ಕೇಂದ್ರದ ಅಧ್ಯಾಪಕರ ಮಾಸಿಕ ... ಯು ಸ್ಥಳೀಯ ಹಾ. ಎ. ಶಾಲೆಯಲ್ಲಿ ಇದೇ ತಿಂಗಳ ... ರಲ್ಲಿ ಕೂಡಿಬಂತು. ಸರ್ವಸಮ್ಮತದಿಂದ ... ಕನ್ಯಾನ ಬೋ. ಶಾಲಾ ಹೆಡ್ಮಾಸ್ತರ್ ರಾ. ಶ್ರೀನಿ ... ವಾಸ ಗೌಡರವರು ಅಗ್ರಾಸನವನ್ನು ವಹಿಸಿದ್ದರು. ಜಿಲ್ಲಾ ... ಧ್ಯಾಪಕ ಸಂಘದ ಗೌ. ಕಾರ್ಯದರ್ಶಿಯವರು ಈ ... ವರ್ಷ ವಿಟ್ಲದಲ್ಲಿ ಜರಗುವ ವಿದ್ಯಾರ್ಥಿ ಪರಿಷತ್ತಿನ ವಿಚಾರ ... ಸ್ತಾಪಿಸಿ ಒಂದು ದಿನದ ಖರ್ಚನ್ನು ಈ ಕೇಂದ್ರಾಧ್ಯಾ ... ಪಕರು ವಹಿಸಬೇಕೆಂದು ಸಭಿಕರಿಂದ ನಿರ್ಣಯವಾ ... ಯಿತು. ಕೊನೆಗೆ ವಿ. ಬಿ. ಸಿ. ಪಿಂಟೋ ಇವರು ನೆರೆದ ... ಸಭಿಕರಿಗೆಲ್ಲರಿಗೂ ವಂದನೆಗಳನ್ನರ್ಪಿಸಿದ ತರುವಾಯ ... ಸಭೆಯು ಅಂತ್ಯವಾಯಿತು.

ಪಾಂಗಾಳ—ಇಲ್ಲಿಯ ಯೇಣಗುಡ್ಡೆ ಪಂಚಾಯತ ಕೋರ್ಟಿನಲ್ಲಿ ಈ ಮೊದಲು ಪ್ರೆಸಿಡೆಂಟರಾಗಿದ್ದ ದಿವಂಗತ ... ಪಾಂಗಾಳ ಶ್ರೀನಿವಾಸ ನಾಯ್ಕರ ಸ್ಥಾನಕ್ಕೆ ಸದ್ರಿ ... ಅವರ ಪುತ್ರ ಶ್ರೀ. ವಕೀಲ ಪಾಂಗಾಳ ರಾಮದಾಸ ... ನಾಯಕ್ ಇವರು ಸರ್ವಸಮ್ಮತದಿಂದ ಕಳೆದ ತಾರೀಖು ... ರಲ್ಲಿ ಸದ್ರಿ ಕೋರ್ಟಿನ ಪ್ರೆಸಿಡೆಂಟರಾಗಿ ... ಚುನಾಯಿಸಲ್ಪಟ್ಟುದು ಸಂತೋಷಕರ. ಈ ಸಮಯದಲ್ಲಿ ... ಆಕ್ಟಿಂಗ್ ಪ್ರೆಸಿಡೆಂಟರಾಗಿದ್ದ ರಾ. ಕುಶಾಲ ಗಣಪಯ್ಯ ... ರವರ ಚಿಕ್ಕ ಭಾಷಣವೂ ಇತ್ತು.

ಮುಲ್ಕಿ—ಮುಂಬಾಯಿಯ ಕರ್ನಾಟಕ ಸೋಶಲ ... ಸಂಗೀತ ಸಭೆಯವರು ಇದೇ ಅಕ್ಟೋಬರ ತಾ. ೧೪ರಲ್ಲಿ ಮುಂಬಾಯಿ ಭಂಗವಾಡಿ ಥಿಯೇಟರಿನಲ್ಲಿ ಮುಲ್ಕಿ ಆಸ್ಪತ್ರೆಯ ನಿರಾಶ್ರಿತ ಫಂಡಿನ ಸಹಾಯಾರ್ಥ ... ವಾಗಿ ಆಡಿತೋರಿಸಿದ ಸತ್ಯಹರಿಶ್ಚಂದ್ರ ವೆಂಬ ನಾಟಕ ... ರಿಂದ ಬಂದ ... ಹಣದಲ್ಲಿ ... ಖರ್ಚು ಕಳೆದು ಉಳಿದ ... ಸುಮಾರು ೨೦೦ ರೂ ಗಳನ್ನು ಸದ್ರಿ ಸಭೆಯವರು ಕಳುಹಿಸಿರುತ್ತಾರೆ. ಈ ಕುರಿತು ಸದ್ರಿ ಆಸ್ಪತ್ರೆಯ ... ನಿರಾಶ್ರಿತ ಫಂಡಿನ ಗೌ. ಕಾರ್ಯದರ್ಶಿಗಳು ಸದ್ರಿ ಸಭೆಯ ಪರವಾಗಿ ಈ ಸಭೆಯವರಿಗೂ ಮತ್ತು ಈ ನಾಟಕಕ್ಕೆ ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ತಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಪತ್ರಿಕೆ ಮೂಲಕ ತಿಳಿಸುತ್ತಾರೆ. ಊರು ಪರವೂರುಗಳಲ್ಲಿರುವ ಮುಲ್ಕಿಯ ಮಹನೀಯರೆಲ್ಲರೂ ಈ ನಿರಾಶ್ರಿತ ಫಂಡಿಗೆ ಮುಂಬರರಾಗಿ ಉದಾರ ಮನಸ್ಸಿನಿಂದ ಈಗ ತಾನೇ ಹೊಸತಾಗಿ ಕಟ್ಟಿಸುವ ಜೆನರಲ್ ವಾರ್ಡಿಗೆ ಧನಸಹಾಯ ಮಾಡಬೇಕಾಗಿ ವಿನಂತಿ. ಸಹಾಯಧನವನ್ನು ಮುಲ್ಕಿ ಆಸ್ಪತ್ರೆಯ ನಿರಾಶ್ರಿತ ಫಂಡಿನ ಗೌರವ ಕಾರ್ಯದರ್ಶಿಯವರಿಗೆ ಕಳುಹಿಸ ತಕ್ಕದ್ದು.

ಮೂಡಬಿದ್ರೆ—ಇಲ್ಲಿಯ ತ್ರಿಭುವನ ತಿಲಕ ಚೂಡಾಮಣಿ ಚೈತ್ಯಾಲಯದಲ್ಲಿ ವರ್ಷಂಪ್ರತಿ ನಡೆದು ಬರುವ ದೀಪಾರಾಧನೆಯ ಉತ್ಸವವು ಇದೇ ತಿಂಗಳ ತಾ. ೧೩ನೇ ಆದಿತ್ಯವಾರ ಅತಿ ವಿಜೃಂಭಣೆಯಿಂದ ಜರಗ ಲಿರುವುದು.

ಶ್ರೀಧರ್ಮಸ್ಥಳ—ಇಲ್ಲಿ ವರ್ಷಂಪ್ರತಿ ಜರಗ ತಕ್ಕ ದೀಪೋತ್ಸವ ಸಮಾರಂಭವು ಇದೇ ತಾ. ೨೦ನೇ ಗುರುವಾರ ಆರಂಭವಾಗಿ ತಾ. ೨೪ನೇ ಸೋಮವಾರ ತನಕ ಜರಗುವದು. ಈ ಸಮಯ ಎಂದಿನಂತೆ "ಸರ್ವಮತ ಧರ್ಮಸಮ್ಮೇಳನ"ವೂ ನಡೆಯಲಿಕ್ಕಿರುವುದು. ತಾರೀಕು ೨೪—೧೧—೩೬ರಲ್ಲಿ "ಆತ್ಮನಿಗೆ ಪುನರ್ಜನ್ಮ ಉಂಟೆಂಬ ವನ್ನು ನಿಮ್ಮ ಮತಶಾಸ್ತ್ರ ಪ್ರಮಾಣಗಳಿಂದಲೂ ಯುಕ್ತ ದೃಷ್ಟಾಂತಗಳಿಂದಲೂ ಸಾಧಿಸಬಲ್ಲಿರಾ?" ಎರಡೇ ವಿಷ ಯವು ತಾ. ೨೫ನೇ ದಿವಸ "ನಿಮ್ಮ ಮತತತ್ವಗಳು ದೇಶದ ಇತರ ಗಣನೀಯ ಮತತತ್ವಗಳೊಂದಿಗೆ ಸಾಮ ರಸ್ಯವನ್ನು ಹೊಂದಿ ಜನರ ಐಕ್ಯಕ್ಕೂ ಪರಸ್ಪರ ಮೈತ್ರೀ ಭಾವಕ್ಕೂ ಹೇಗೆ ಅನುಕೂಲವಾಗಬಹುದು?" ಎಂಬೀ ವಿಷಯವೂ ಇಡಲ್ಪಟ್ಟಿರುವುದು. ಸರ್ವರಿಗೂ ಸುಸ್ವಾಗತ ವಿದೆ ಎಂದು ಧರ್ಮಸಮ್ಮೇಳನದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕುಂದಾಪುರ—ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯವರು ಬರುವ ವಾರ ಕುಂದಾಪುರಕ್ಕೆ ಬರುತ್ತಾರಾಗಿ ತಿಳಿದುಬರುತ್ತದೆ. ಥಿಯೇಟರಿನ ಕೆಲಸವು ಭರದಿಂದ ಸಾಗುತ್ತಲಿದೆ.

ಜಿಲ್ಲಾ ಕಲೆಕ್ಟರರು ಕುಂದಾಪುರಕ್ಕೆ ಬಂದು ಒಂದು ವಾರದ ತನಕ ಮೊಕ್ಕಾಂ ಮಾಡಿದರು. ಕಲೆಕ್ಟರವರು ಇಲ್ಲಿಗೆ ಬಂದಾಗ ಪುರಸಭೆಯ ಅರಿಕೆಯಂತೆ ಸ್ಥಳೀಯ "ನೆಹರೂ"ವೆಂಬ ಮೈದಾನವನ್ನು ಸಂದರ್ಶಿಸಿ, ಅದನ್ನು ಇಲ್ಲಿಯ ಆಟಗಾರರಿಗೂ ಪಟಾಕಿ ಸುಡುವವರಿಗೂ ಅನುಕೂಲವಾಗುವಂತೆ ದುರುಸ್ತಿ ಮಾಡುವ ವಿಷ ಯದಲ್ಲಿ ಆಲೋಚಿಸಿ ಸರಿಯಾದ ಎಸ್ಟಿಮೇಟನ್ನು ತಯಾ ರಿಸಿ ಸರ್ಕಾರಕ್ಕೆ ರಿಪೋರ್ಟು ಮಾಡುವಂತೆ ರೆವಿನ್ಯೂ ಉದ್ಯೋಗಸ್ಥರಿಗೆ ಅಪ್ಪಣೆಕೊಡಿಸಿರುತ್ತಾರಾಗಿ ತಿಳಿದು ಬರುತ್ತದೆ.

"ಕರ್ನಾಟಕ ಸಾಹಿತ್ಯ ಸಂಘ"ದ ೫ನೇ ಸಭೆಯು ಇಲ್ಲಿಯ ಹಿಂದೀ ಪಾಠಶಾಲೆಯಲ್ಲಿ ಇಲ್ಲಿಯ ವಕೀಲ ರಾದ ಶ್ರೀ ಕೆ. ಎಲ್. ಭಂಡಾರ್ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಇದೇ ತಾ. ೧೦ರಲ್ಲಿ ಜರಗಿತು. ಶ್ರೀಯುತ ನಾಗವರ ವಾಸುದೇವ ಹೆಬ್ಬಾರರು "ಕನ್ನಡ ದೇಶವೂ ಕನ್ನಡ ಭಾಷೆಯೂ" ಎಂಬ ವಿಷಯದಲ್ಲಿ ಪ್ರಾಚೀನ ಮತ್ತು ಅರ್ವಾಚೀನ ವಿದ್ವನ್ಮಾನಗಳನ್ನು ವಿವರಿಸುತ್ತಾ ಭಾಷಣಮಾಡಿದರು. ಸಭಿಕರಲ್ಲಿ ಇಲ್ಲಿಯ ವಕೀಲ ರಾದ ಶ್ರೀ. ಎ. ವಿ. ಎಸ್. ಹೆಬ್ಬಾರರವರೂ ಮುನ್ಸೀಫ ಕೋರ್ಟಿನ ಕ್ಲಾರ್ಕರಾದ ಶ್ರೀ. ರಾಮಕೃಷ್ಣ ಶ್ಯಾನುಭಾಗ್ ಬಿ. ಎ. ಇವರೂ ಮೊದಲಾಗಿ ೭ ಜನರು ಕನ್ನಡ ದೇಶ ಮತ್ತು ಭಾಷೆಯ ವಿಚಾರದಲ್ಲಿ ನಮ್ಮ ಕರ್ತವ್ಯವೇ ನೆಂಬುದನ್ನು ವಿಸ್ತಾರವಾಗಿ ವರ್ಣಿಸಿ ಕನ್ನಡದ ಶ್ರೇಷ್ಠತೆ ಯನ್ನು ಸಮರ್ಥಿಸಿ ಕನ್ನಡ ಸಂಘಗಳಲ್ಲಿ ನಾವು ಮಾಡ ಬೇಕಾದ ಕಾರ್ಯವನ್ನು ಸೂಚಿಸಿ ಭಾಷಣಮಾಡಿದರು. ಕಾರ್ಯದರ್ಶಿಗಳು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯ ವಾದಗಳನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾ ಯಿತು. ಬರುವ ೬ನೇ ಸಭೆಯು ತಾ. ... ರಲ್ಲಿ ಜರಗು ವುದು. ಇಲ್ಲಿಯ ತರುಣಕವಿಗಳಾದ ಶ್ರೀ. ಕೆ. ಗೋಪಾಲ ಕೃಷ್ಣ ಅಡಿಗರ "ಸ್ತ್ರೀ ವಿದ್ಯಾಭ್ಯಾಸದ ಅವಶ್ಯಕತೆ" ಎಂಬ ವಿಷಯದಲ್ಲಿ ಭಾಷಣವನ್ನು ಮಾಡುವರು. ಕರ್ನಾಟಕ ಭಾಷಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ. ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ.

ಬಂಗ್ರಮಂಜೇಶ್ವರ—ಇಲ್ಲಿಯ ಮಿಶನ್ ಶಾಲಾ ಉಪಾಧ್ಯಾಯ ಶ್ರೀ ... ಪ್ರಸಾದರು ಶಾಲೆಗೆ ಬರುವಂಥ ಕೆಲವು ಬಾಲಕಿಯರಿಗೆ ಮುತ್ತನ್ನು ಕೊಟ್ಟ ರೆಂಬ ಆರೋಪಣೆಯು ಹೊರಿಸಲ್ಪಟ್ಟಿದೆ. ಶಾಲಾ ಮೆನೇ ಜರುಗಳ ತನಿಖೆಯು ನಡೆಯುತ್ತಲಿದೆ. ಆತ್ತ ಉಪಾ ಧ್ಯಾಯರಿಗೆ ಹಲವು ದಿನಗಳ ರಜೆಯಂತೆ. ಅತ್ತ ಹಲವು ಬಾಲಕಿಯರಿಗೆ ವಿಶ್ರಾಂತಿ. ಅಂತೂ ಈ ಸಂಬಂಧ ಹಲವು ಬಾಲಕಿಯರು ಬೇರೆ ಶಾಲೆಗೆ ಹೋಗುವಂತಾ ಯಿತು. ತನಿಖೆಯಲ್ಲಿ ಏನೆಲ್ಲಾ ಆಗಲಿಕ್ಕಿದೆಯೆಂದು ಮುಂದೆ ನೋಡಲಿಕ್ಕಿದೆ.

ಕಾರ್ಕಳ—ವ್ಯವಸಾಯಕ್ಕೂ ಜಾನುವಾರುಗಳ ಉಪಯೋಗಕ್ಕೂ ಅತ್ಯಂತಾವಶ್ಯಕವಾದ ರಾಮ ಸಮುದ್ರದ ಹರಿದುಹೋಗುವ ನೀರನ್ನು ತಡೆದು ನಿಲ್ಲಿಸ ಲಿಕ್ಕೆ ಹಿಂದಿನ ಕಾರ್ಕಳ ತಾಲೂಕು ಬೋರ್ಡು ಕಟ್ಟಲು ಪ್ರಾರಂಭಿಸಿ, ಹಣದ ತಗಾದೆಯಿಂದ ಅರ್ಧ ಮಾತ್ರ ಕಟ್ಟಿ ಮುಗಿಸಿದ ಶ್ರೀ ಶ್ರೀನಿವಾಸ ಅಪ್ಪಯ್ಯ ಹತ್ತಿರವಿರುವ ಕಿಪಸಮುದ್ರದ ಕಟ್ಟವನ್ನು ಜಿಲ್ಲಾ ಬೋರ್ಡಿನವರು ತಮ್ಮ ಬೊಕ್ಕಸದಿಂದಾಗಲೀ ಇಂಡಿಯಾ ಸರಕಾರದಿಂದ ಗ್ರಾಮೋದ್ಧಾರಕ್ಕಾಗಿ ದೊರೆಯುವ ನಿಧಿಯಿಂದಾಗಲೀ ಹಣವನ್ನು ಕಡ್ಡೀಮಾಡಿ ಪೂರ್ಣಮಾಡಬೇಕೆಂದು ಪ್ರಾರ್ಥಿಸುವ ಮಹಾಜನರ ಮನವಿಯೊಂದು ಜಿಲ್ಲಾ ಬೋರ್ಡಿಗೆ ಹೋಗಿದೆ. ಅದು ಜನರ ಈ ಪ್ರಾರ್ಥನೆ ಯನ್ನು ಮನ್ನಿಸಿ ಕಾರ್ಯತತ್ಪರರಾಗುವುದೆಂದು ನಂಬಿಕೆ.

ಇದುವರೆಗೆ ಜಸ್ಟೀಸ್ ಪಕ್ಷಕ್ಕೆ ಸೇರಿಕೊಂಡಿದ್ದ ಶ್ರೀ. ನಿಟ್ಟೆಗುತ್ತು ಮಂಜಪ್ಪ ಅಡ್ಯಂತಾಯರು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಈ ಸರ್ಕಲಿಗೆ ಜಿಲ್ಲಾ ಬೋರ್ಡಿನ ಉಮೇ ದ್ವಾರರಾಗುವುದರಿಂದ ಅವರು ಪ್ರತಿಪಕ್ಷಿಗಳಿಲ್ಲದೆ ಬೋರ್ಡಿಗೆ ಆರಿಸಬರುವರು. ಶ್ರೀ ಅಡ್ಯಂತಾಯರು ನಮ್ಮ ಜಿಲ್ಲಾ ಕಾಂಗ್ರೆಸಿನ ಒಂದು ದೊಡ್ಡ ಆಧಾರಸ್ತಂಭ ರಾಗಿ ಕಾಂಗ್ರೆಸ್ಸಿನ ಧ್ಯೇಯಾದರ್ಶಗಳು ಸರ್ವತ್ರ ಪ್ರಚಾರ ವಾಗಲೆಂದೂ, ಅವರ ಮೂಲಕ ಈ ಸರ್ಕಲಿನ ಕಾಂಗ್ರೆ ಸಿನ ಮಾನವೂ ಪ್ರತಿಷ್ಠೆಯೂ ಬೆಳೆಯಲೆಂದೂ, ಜಿಲ್ಲಾ ಬೋರ್ಡಿನಿಂದ ಈ ಸರ್ಕಲಿಗಾಗತಕ್ಕ ಸೇವೆಯು ಶ್ರೀಯು ತರ ಮೂಲಕವೇ ಎಂದಿಗಿಂತಲೂ ಹೆಚ್ಚೆಚ್ಚು ಆಗಿ ನಾವೆ ಲ್ಲರೂ ಆ ಸಂಬಂಧ ಅಭಿಮಾನಪಡುವಂತಾಗಲೆಂದೂ ಇಚ್ಛಿಸುತ್ತೇವೆ.

ದಿವಂಗತ ಶ್ರೀ. ವೆಂಕಟರಾಯ ಪ್ರಭುಗಳ ಸ್ಥಾನದಲ್ಲಿ ಅವರ ಅಣ್ಣಂದಿರಾದ ಶ್ರೀ. ಸೂರ್ಯ ಪ್ರಭುಗಳು ಇಲ್ಲಿಯ ಶ್ರೀ ವೆಂಕಟ್ರಮಣ ದೇವಳದ ಪ್ರಥಮ ಆದಕ್ತ ಮೋಕ್ತೇ ಸರರಾಗಿರುವರು. ಇವರು ಪ್ರಾಯಸಂದವರಾಗಿದರೂ ವಿದ್ಯಾವಂತರೂ, ಅನುಭವಶಾಲಿಗಳೂ ಉತ್ಸಾಹಿಗಳೂ ಆಗಿರುವುದರಿಂದ ಆಡಳಿತೆಯು ಸುಸೂತ್ರವಾಗಿ ನಡೆಯು ವುದರಲ್ಲಿ ಸಂದೇಹವಿಲ್ಲ. ಇವರ ಆಡಳಿತೆಕಾಲದಲ್ಲಿ ಕೂಡ ಶ್ರೀ ದೇವಸ್ಥಾನಕ್ಕೆ ಸಂಬಂಧಪಟ್ಟ ಶಾಲೆಗಳೇ ಮೊದಲಾದ ಸಾರ್ವಜನಿಕೋಪಯೋಗಿ ಸಂಸ್ಥೆಗಳ ಉತ್ತ ರೋತ್ತರ ಅಭಿವೃದ್ಧಿಯಾಗಲೆಂದು ಬಯಸುವೆವು.

ಇಲ್ಲಿಯ ಪಂಚಾಯತಿನ ಚುನಾವಣೆಯು ಇನ್ನು ಕೆಲವು ದಿನಗಳಲ್ಲಿಯೇ ಆಗುವುದು. ಇಲ್ಲಿಯ ಕಾಂಗ್ರೆಸ್ ಕಮಿಟಿಯು ಪಂಚಾಯತಿನ ಮೆಂಬರ ಸ್ಥಾನಗಳನ್ನೆಲ್ಲಾ ತಾನು ಆಕ್ರಮಿಸಬೇಕೆಂಬ ದೀಕ್ಷೆಯನ್ನು ವಹಿಸಿದೆ. ನಮ್ಮ ಇಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಜಯವಾಗಿ ಕಾರ್ಕಳದಲ್ಲಿ ಪಂಚಾಯತನ್ನು ಸ್ಥಾಪಿಸಿದ ಉದ್ದೇಶವು ಈಗಲಾದರೂ ಪೂರ್ಣವಾಗಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ.

ಹಿಂದೀ ಪರೀಕ್ಷಾ ಫಲಿತಾಂಶ

ಕಳೆದ ಸಪ್ಟಂಬರ ತಿಂಗಳಲ್ಲಾದ ದ. ಭಾ. ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ ಪರೀಕ್ಷೆಯಲ್ಲಿ ಈ ಕೆಳಗಿ ನವರು ಪಾಸಾಗಿರುವರೆಂದು ಹಿಂದೀ ಪ್ರಚಾರಕರಾದ ಶ್ರೀ. ಓಲೆಲು ಗಣಪತಿ ಶರ್ಮರಿಂದ ತಿಳಿದುಬರುತ್ತದೆ.

ಬ್ರಹ್ಮಾವರ—(೭ರಲ್ಲಿ ... ಉತ್ತೀರ್ಣ) ಪ್ರಥಮ ಶ್ರೇಣಿ—ಶ್ರೀಗಳಾದ ರಾಮರಾಯ ಪೈ ಲಕ್ಷ್ಮೀನಾರಾ ಯಣ ಅಡಿಗ ಕೇಶಗಿರಿ ಆನಂದರಾವ್ ನರಸಿಂಹ ಕಾಮತ್ ರಾಮಣ್ಣಶೆಟ್ಟಿ ಕೃಷ್ಣಬಾಯಿ, ಮುಕ್ತಾ ಬಾಯಿ ದ್ವಿತೀಯ ಶ್ರೇಣಿ ಶ್ರೀಗಳಾದ ರಾಮದಾಸ್ ಗುರ ಕಲ್ ನರಸಿಂಹ ನಾಯಕ್, ಸೀನಶೆಟ್ಟಿ ಜೋನ್ ಮಾರ್ ಎಲ್. ಜೆ. ಡಿ. ಸೋಜ ಮೋಹನಮಾಸಪ್ಪ ಗಣಪತಿ ಸೋನಾರ್ ನರಸಿಂಹ ಶ್ಯಾನುಭಾಗ ಗೋಪಾಲಕೃಷ್ಣ ಉಪಾಧ್ಯ ದಯಾನಂದ ಪೈ ಎಫ್. ಸಿಕೇರಾ ಮಹಾ ಲಕ್ಷ್ಮಮ್ಮ ರಾಜೀವಿಬಾಯಿ ಅಫೋಲಿನ್ ಮಾರ್.

ಬಾರಕೂರ್—(... ಲ್ಲಿ ... ಉತ್ತೀರ್ಣ) ಪ್ರಥಮ ಶ್ರೇಣಿ—ಶ್ರೀಗಳಾದ ವೆಂಕಟೇಶ ಕಾಮತ್ ಗೋಪಾಲ ಕೃಷ್ಣ ಕಾಮತ್ ವಿಠ್ಠಲ ಕಾಮತ್ ಗೋಪಾಲನಾಯಕ್ ಸುಬ್ಬಣ್ಣಯ್ಯ, ಉಮಾಶಂಕರ ಶೆಟ್ಟಿ ದ್ವಿ. ಶ್ರೇಣಿ ಶ್ರೀಗಳಾದ ದಾಸಕಾಮತ್ ಶೀನಪ್ಪಶೆಟ್ಟಿ ಅನಂತಯ್ಯ ... ಪಾಂಡುರಂಗ ಕಾಮತ್ ನಾರಾಯಣ ಹೆಗ್ಡೆ ಹೆಸ್ರಿ ದಾಲ್ಮೇದ ಹಸನ್ ಸಾಹೇಬ್

ಮಂದರ್ತಿ—(೧೮ರಲ್ಲಿ ೧೪ ಉತ್ತೀರ್ಣ) ಪ್ರಥಮ ಶ್ರೇಣಿ—ಶ್ರೀಗಳಾದ ವಾಸುದೇವ ಮಂಡಿ ಉಡುಪ ರಾಮ ಚಂದ್ರಯ್ಯ, ನಾರಾಯಣಭಟ್ ದ್ವಿತೀಯ ಶ್ರೇಣಿ—ಶ್ರೀಗಳಾದ ಗಣಪಯ್ಯ ಶೆಟ್ಟಿ, ಕೆ. ಮಹಾಬಲ ಶೆಟ್ಟಿ, ವಾಸುದೇವ ಶ್ಯಾನುಭಾಗ ಗೋಪಾಲ ಶೆಟ್ಟಿ ಅನಂತ ಶೆಟ್ಟಿ, ಸೋಮಪ್ಪ ಶೆಟ್ಟಿ, ಎಚ್. ಮಹಾಬಲ ಶೆಟ್ಟಿ, ಶ್ರೀನಿ ವಾಸ ರಾವ್, ರಾಮಕೃಷ್ಣ ಶ್ಯಾನುಭಾಗ, ಮಂಜಯ್ಯ ಶೆಟ್ಟಿ.

ಮಂಗಳೂರು,

ಸ್ಥಳೀಯ ಕಾಂಗ್ರೆಸ್ ಹಾಲಿನಲ್ಲಿ ಮಂಗಳವಾರ, ಗುರುವಾರ ಮತ್ತು ಶನಿವಾರಗಳಲ್ಲಿ ಸಾಯಂ ಘಂಟೆ ೫ರಿಂದ ೬ರ ವರೆಗೆ ಪ್ರಾಥಮಿಕ ಮತ್ತು ೬ರಿಂದ ೭ರ ವರೆಗೆ ಮಾಧ್ಯಮಿಕ ವರ್ಗಗಳು ನಡೆಸಲ್ಪಡುತ್ತವೆ.

ನವೆಂಬರ ತಾ. ೩ಕ್ಕೆ ಅಂತ್ಯವಾಗುವ ವಾರದಲ್ಲಿ ನಗರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧೩ ಮರಣಗಳೂ ೪೮ ಜನನಗಳೂ ಆಗಿವೆಯೆಂದು ತಿಳಿದುಬಂದಿದೆ.

ಸ್ಥಳೀಯ ಮಹಿಳಾ ಸಭೆಯ ವರ್ಧಂತಿ ಉತ್ಸವವು ಕಳೆದ ತಾ. ೧೦—೧೧—೩೬ರಲ್ಲಿ ಡಾ. ಜತ್ತನ್ನ ಪತ್ನಿಯವ ರಾದ ಶ್ರೀಮತಿ ಅಮಿರುದ್ದೀನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ ೨೦೦ ಮಹಿಳೆಯರು ನೆರೆದಿದ್ದರು. ಫಲಾಹಾರದ ನಂತರ ಗಾಯನವೂ ಸ್ಪರ್ಧೆಯ ಆಟಗಳೂ ನಡೆದು ಆಟದಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದ ತರುವಾಯ ಸಭೆಯು ಈ ವರ್ಷದ ವರದಿ ಗಳನ್ನು ಮಂಡಿಸಲಾಯಿತು. ... ಶ್ರೀ ... ಸ್ನೇಹಿಯು ಕಳವಳದ ... ಈ ಸಭೆಯವರು ತಮ್ಮ ಶೋಕಸಂತಾಪವನ್ನು ಸೂಚಿಸುವುದಲ್ಲದೆ, ನರಳಾ ಡದವರ ... ಅಧಮನಾದ ... ಪತ್ರಿಕೆಯವರಲ್ಲಿ ... ಪ್ರಯೋಜನವಾಗಿ ... ಮತ್ತು ... ಸತೀತ್ವವನ್ನು ... ಶ್ರೀ. ಅಮ್ಮತ ... ದೈವರ್ಗಸ್ಥರಿಗೆ ಈ ಸಭೆಯು ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಥಿಯೋಸೊಫಿಕಲ್ ಸೊಸೈಟಿಯ ದ್ವಿವಾರ್ಷಿಕೋತ್ಸವವು ಇದೇ ನವಂಬರ ತಾ. ೧೭ರಲ್ಲಿ ಸಾಯಂ ೫ ಗಂಟೆಗೆ ಶ್ರೀ. ಬಾಲ ಸುಬ್ರಹ್ಮಣ್ಯಂ ಅಯ್ಯರ್ ಬಿ. ಎ. ಬಿ. ಎಲ್. ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಥಿಯೊಸೊಫಿಕಲ್ ಲಾಜಿನಲ್ಲಿ ಜರಗಲ್ಪಡುವುದು. ಅಂದಿನ ಕಾರ್ಯಕ್ರಮ—ಸರ್ವಮತಸ್ಥರ ಪ್ರಾರ್ಥನೆ ಮತ್ತು ಡಾ. ಜಿ. ಎಸ್. ಅರುಂಡೇಲ್ ಇವರ ಜನ್ಮದಿನ ಸಂದೇಶ ... ಪಾರ್ವತೀಬಾಯಿಯವರ ಹಿಂದೀ ಭಾಷಣವೂ, ಪಂಡಿತ ಎಸ್. ಅನಂತ ಉಪಾಧ್ಯಾಯರ ಕನ್ನಡ ಭಾಷಣವೂ ... ಇಂಗ್ಲೀಷು ಭಾಷಣವೂ ಇರುವುವು. ಸರ್ವರಿಗೂ ಸುಸ್ವಾಗತವಿದೆ.

ಬೆಸೆಂಟ್ ಗರ್ಲ್ಸ ಸ್ಕೂಲಿನ ವಿಹಾರದ ... ಸ್ಥಳ ... ಉತ್ಸವವು ಇದೇ ತಾ. ೧೬ನೇ ಆದಿತ್ಯವಾರ ... ಶ್ರೀಮತಿ ... ಇವರ ... ನಡೆಸಲ್ಪಡುವುದು.

ಕೆನರಾ ಹೈಸ್ಕೂಲಿನ ಸ್ಥಾಪಕರಾದ ದಿವಂಗತ ಅಮ್ಮೆಂ ಬಳ ಸುಬ್ಬರಾಯ ಪೈಗಳ ಜನ್ಮದಿನಾಚರಣೆಯ ಉತ್ಸವವು ಇದೇ ತಾ. ೧೯ರಲ್ಲಿ ಅತಿ ವಿಜೃಂಭಣೆಯಿಂದ ಕೆನರಾ ಹೈಸ್ಕೂಲಿನಲ್ಲಿ ಮ. ರಾ. ರಾ. ... ಕಣ್ಣಪ್ಪ ಅವರ್ಗಳ್ ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಲಿ ರುವುದು. ಎಲ್ಲ ಹಳೇ ವಿದ್ಯಾರ್ಥಿಗಳೆಲ್ಲರಿಗೂ ಸ್ವಾಗತವಿದೆ.

ಇಂಡಿಯಾ ಸರಕಾರದ ಲೈಟ್ ಹೌಸ್ ವಿಭಾಗದ ಚೀಫ್ ಇಂಜಿನಿಯರರಾದ ಮಿ. ಎಂ. ಜಿ. ... ಬಿ. ಎಸ್‌ಸಿ. ಸಿ. ಇ. ಇವರು ನಿನ್ನೆ ಇಲ್ಲಿಗೆ ಬಂದಿದ್ದು ... ವರೆಗೆ ಮದ್ರಾಸಿನ ... ದೀಪಸ್ತಂಭ ಮೊದಲಾದ ಇಲ್ಲಿನ ಲೈಟ್ ಹೌಸುಗಳನ್ನು ಸಂದರ್ಶಿಸಿ ಅಂದೇ ಮರಳುವರು.

ಡಿಸ್ಟ್ರಿಕ್ಟ ಬೋರ್ಡು ನೊಮಿನೇಶನುಗಳು.

ಮಂಗಳೂರು ತಾಲೂಕು—ಮಂಗಳೂರು ಸರ್ಕಲ್‌ಗೆ ಡಾ. ವಿಠಲ ಶೆಟ್ಟಿ (ಕಾಂಗ್ರೆಸು) ಮತ್ತು ರಾವ್ ಬಹ ದೂರ್ ಎಸ್. ವೆಂಕಟರಾಯರು. ಉಳ್ಳಾಲ ಸರ್ಕಲಿಗೆ ಮಿ. ಜೆ. ಪಿ. ರೇಗೊ (ಕಾಂ) ಮಿ. ಬಿ. ಎಮ್. ಡಿಸೋಜ ಮತ್ತು ಎಮ್. ಎಸ್. ಶೆಣೈ ಮೂಲ್ಕಿ ಸರ್ಕಲ್—

(೧೪ನೇ ಪುಟವನ್ನು ನೋಡುವುದು)



ದಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್ ಇವರು ತಮ್ಮ ಮಂಗಳೂರು ಶಾಖೆಯ ಆರಂಭೋತ್ಸವ ಕಾಲದಲ್ಲಿ ತೆಗೆದ ಭಾವಚಿತ್ರ.

ವಿವಿಧ ವಿಷಯಗಳು.

ಸರ್ಪ ಕಡಿತಕ್ಕೆ ನಿವಾರಣೆ

ಬಿದೂರಿನ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಒಬ್ಬ ವೈದ್ಯನನ್ನು ಸರಕಾರವು ನೇಮಕ ಮಾಡಿರುವುದು ಎಂಬ ವಾರ್ತೆಯು ಬಂದಿರುತ್ತದೆ. ಇಲ್ಲಿಂದ ಒಂದು ವಿಷದ ಸರ್ಪವನ್ನು ಮದ್ರಾಸಿಗೆ ಕಳುಹಿಸಲಾಗಿ, ಅಲ್ಲಿನ ಸರ್ಜನ್ ಜನರಲರು ಅದರ ವಿಷ ಪರೀಕ್ಷೆ ಮಾಡಿ, ನಮ್ಮ ಜಿಲ್ಲೆಗೆ ಸರ್ಪ ಕಡಿತದ ಚಿಕಿತ್ಸೆ ಬಗ್ಗೆ ಒಬ್ಬ ವೈದ್ಯನನ್ನು ನೇಮಿಸಲು ಗ್ರಾಂಟನ್ನು ಕೊಡದೇ ಕೆಂಬ ಅಪ್ಪಣೆ ಹೊರಟಿದೆ ಎಂಬ ವಾರ್ತೆಯಲ್ಲಿ ಸತ್ಯಾಂಶವಿಲ್ಲವೆಂದು ತಿಳಿದು ಬರುತ್ತದೆ.

ಜಪಾನಿಯರ ದೇಶಪ್ರೇಮ.

ಪೂರ್ವ ದಿಕ್ಕಿನಲ್ಲಿ ಮಹಾಯುದ್ಧವು ತಲೆದೋರುವುದೇ?

"ಜಪಾನಿಯರು ದೇಶಪ್ರೇಮಿಗಳು. ಇವರಿಗೆ ಮರಣದ ಅಂಜಿಕೆಯಿಲ್ಲ. ದೇಶಕ್ಕಾಗಿ ೧೧,೦೦೦ ಜಪಾನಿಯರು ಸೀರಿನಲ್ಲಿ ಮುಳುಗಬೇಕಾಗಿದ್ದರೂ, ಅತೀ ಸಂತೋಷದಿಂದ ಮುಂದೆ ಬರುವರು. ಅವರ ದೇಶಪ್ರೇಮ ಅಷ್ಟು" ಎಂದು ಓರ್ವ ಬೌದ್ಧ ಮತಾವಲಂಬಿಗಳ ಮಾತು.

ಜಪಾನಿಗೂ ರಷ್ಯಕ್ಕೂ ಯುದ್ಧ ಸಂಭವಿಸುವ ಕುರಿತಾಗಿ, ರಷ್ಯವು ತನ್ನ ಗಡಿಯನ್ನು ಭದ್ರೀಕರಿಸಿದೆ ಮತ್ತು ರಷ್ಯದ ವಿಮಾನ ಸೇನೆಯು ಅರ್ಧಾಂಶವು (ಪ್ರಪಂಚದಲ್ಲಿ ಪ್ರಬಲವಾದ) ಜಪಾನೀಯ ಹತ್ತಿರವೇ ಶೇಖರಿಸಿದ್ದಾರೆ. ಇವರಲ್ಲಿ ಪರಸ್ಪರ ಭೇದವುಂಟಾಗಿ ಯುದ್ಧವು ತಲೆದೋರಿದರೆ, ಅದು ಒಂದು ಭಯಂಕರ ಯುದ್ಧವಾಗಿ ಪರಿಣಮಿಸಬಹುದು.

ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ—

ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಪಡೆಯುವಂತೆ ಕಾರ್ಯಕಲಾಪಗಳು ಈಗಲೇ ಪ್ರಾರಂಭವಾಗಿವೆ. ಈ ವಿಷಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ತಕ್ಕ ವ್ಯವಸ್ಥೆಗಳನ್ನು ಮಾಡುತ್ತಿದೆ. ಶ್ರೀಗಳಾದ ಕೆ. ಎಫ್. ನರಿಮನರು ಈ ವಿಚಾರದಲ್ಲಿ ಹೆಚ್ಚಿನ ಪರಿಶ್ರಮ ಪಡುತ್ತಿದ್ದಾರೆ. ಹೆಚ್ಚಿನಮಟ್ಟಿಗೆ ನ್ಯಾಯವಿಧಾಯಕ ಸಭೆಗಳಲ್ಲಿ ಕಾಂಗ್ರೆಸ್ ಮೆಜಾರಿಟಿ ಇರಬೇಕೆಂದು ಇವರು ಸಾಧಿಸುತ್ತಿದ್ದಾರೆ. ಮಹಾರಾಷ್ಟ್ರ, ಗುಜರಾಥ, ಕರ್ನಾಟಕ ಪ್ರಾಂತಿಕ ಕಮಿಟಿಯವರು ಒಮ್ಮತದಿಂದ ಕಾರ್ಯ ಸಾಧಿಸಬೇಕೆಂದಾಗಿದೆ.

ಲಖ್ನೌದಲ್ಲಿ ಈ ಬಾರಿಯ ಕಾಂಗ್ರೆಸ್ಸು ಜರಗುವುದೆ?

ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯಲ್ಲಿ ತಂಡಗಳು ಉಂಟಾಗಿ ಮುಂದಿನ ಕಾಂಗ್ರೆಸ್ ಕಾರ್ಯಕ್ರಮ ವಿಷಯವೂ ಮತ್ತು ಕಾಂಗ್ರೆಸ್ಸಿನ ಹಿಂದಿನ ಹಲವು ಸಂಗತಿಗಳ ಮೇಲೆ ಈ ತಂಡಗಳಿಗೆ ಪರಸ್ಪರ ಭೇದ ಉಂಟಾಗಿ, ಲಖ್ನೌದಲ್ಲಿ ಮಾಡಬೇಕೆಂದಿದ್ದ ಕಾಂಗ್ರೆಸನ್ನು ಬೇರೆ ಪ್ರಾಂತಗಳಲ್ಲಿ ಜರಗಿಸಬೇಕಾಗುವುದು ಎಂದು ಈಗ ಕಾಂಗ್ರೆಸ್ ಸದಸ್ಯರು ಆಲೋಚಿಸಬೇಕಾಗಿದೆ. ಶ್ರೀಗಳಾದ ಮೊಹನಲಾಲ್ ಸೆಕ್ಸೆನಾರು ಕಾಂಗ್ರೆಸ್ ಅಲ್ಲಿಯೇ ಜರಗಿಸಬೇಕಾಗಿಯೂ, ಅದು ಜಯಶೀಲವಾಗುವಂತೆ ತಾನು ಸಾಧಿಸುತ್ತೇನೆಂದೂ, ಒಂದು ತಂತಿಯನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ಬಿಟ್ಟಿರುತ್ತಾರೆ. ಇತ್ತಂಡದವರ ಭೇದವನ್ನು ಪರಿಹರಿಸಲು, ಇವರು ಸಾಧಿಸುವರು, ಮಾತ್ರವಲ್ಲ, ಜಯಶೀಲರಾಗುವರೆಂದು ಭರವಸೆ ಇದೆ.

ಎಥಿಯೋಪಿಯಾದಲ್ಲಿ ಭಾರತೀಯ ಪತ್ರಿಕಾಪ್ರತಿನಿಧಿ.

ಲಾಹೋರಿನ "ಟ್ರಿಬ್ಯೂನ್" ಪತ್ರಿಕೆಯವರು ಇಲ್ಲಿಂದ ಶ್ರೀ ಪಿ. ಟಿ. ಚಂದ್ರ ಎಂಬವರನ್ನು ತಮ್ಮ ಪ್ರತಿನಿಧಿಯಾಗಿ ಹಬಿಸಿ ರಣರಂಗಕ್ಕೆ ಕಳುಹಿಸಿರುತ್ತಾರೆ. ಇವರು ಬಂದರಿನಿಂದ ಅಡಿಸ್ ಅಬಾಬಕ್ಕೆ ತೆರಳುವರು. ಇವರ ಜನ್ಮದ ದೆಸೆಯಿಂದ ಇಟಲಿಯ ಕೈಯಿಂದ ಇವರಿಗೆ ಹಾನಿಯೊದಗುವುದೆಂದು ಕೆಲವರು ಸೂಚಿಸಿದರು. ಆದರೂ ಇವರು ಧೈರ್ಯದಿಂದ ರಣರಂಗವನ್ನು ಭಾರತೀಯರಿಗಾಗಿ ಸೇರಿರುವರು. ಘಟನೆಗಳು ತಮ್ಮ ಮೇಲೆ ಹಿಂದೂದೇಶದ ಪರ ಕಷ್ಟವನ್ನು ಕಂಡು ಸಂತೋಷಪಡದಿರುವರು.

ವಾರ್ತಾತರಂಗ.

ಅಖಿಲಭಾರತ ಹಿಂದೂ ಮಹಾಸಭೆ.

ಇದೇ ಬರುವ ದಶಂಬರದಲ್ಲಿ ಪೂನಾದಲ್ಲಿ ಜರಗುವ ಈ ಮಹಾಸಭೆಯ ಅಧಿವೇಶನದ ಸಮಯ ಕೆಲವು ಪ್ರಚಂಡ ಪ್ರಶ್ನೆಗಳ ವಿಷಯ ಚರ್ಚೆನಡೆದು ಮುಖ್ಯ ನಿರ್ಧಾರಗಳಿಗೆ ಬರುವ ಕಾರ್ಯಕ್ರಮವನ್ನು ಅನುಸರಿಸಲಾಗುವುದು.

ಕಾರ್ಯಕ್ರಮ:—

೧. ದೇವಾಲಯಗಳ ಉದ್ಧಾರ — ಸಮಸ್ತ ಭಾರತದ ದೇವಾಲಯಗಳನ್ನು ಸಂದರ್ಶಿಸಿ, ಅವುಗಳ ಸ್ಥಿತಿಗತಿಗಳನ್ನು ತಿಳಿಯುವರೆ ಒಂದು ಸಮಿತಿಯು ನೇಮಕ, ಈ ಕಾರ್ಯದಲ್ಲಿ ಮಹಾಸಭೆಯ ಪ್ರಾಂತಿಕ ಸರಳಿಗಳು ಸಹಕರಿಸಬೇಕು.

೨. ಹಿಂದೂಗಳು ಶಸ್ತ್ರಧರಿಸುವುದು— ಹಿಂದೂಗಳು ಕಠಾರಿಯನ್ನು ಅತೀ ಪುರಾತನಕಾಲದಿಂದ ಶಕ್ತಿಯ ಕುರುಹಾಗಿ ಪೂಜಿಸುತ್ತಿದ್ದಾರೆ. ಹಿಂದೂಗಳು ಜನಿವಾರ ಧರಿಸುವಂತೆ ಕಠಾರಿಯನ್ನು ಧರಿಸಬೇಕೆಂದು ಸೂಚನೆಗಳು ಬಂದಿವೆ. ಪಂಜಾಬು ಸರಕಾರವು ಈಗ ಜ್ಯಾರಿಯಲ್ಲಿರುವ ಈ ವಿಷಯದ ನಿರ್ಧಾರಗಳನ್ನು ತೆಗೆದು ಹಾಕಲು ಆಲೋಚಿಸುತ್ತದೆ. ಮಹಾಸಭೆಯು ಈ ಅಧಿವೇಶನದ ಸಮಯ ಎಲ್ಲಾ ಹಿಂದೂಗಳು ಖಡ್ಗವನ್ನು ಧರಿಸುವಂತೆ ಸರಕಾರದವರು ನಿರ್ಬಂಧಗಳನ್ನು ತೆಗೆದುಹಾಕಲು ಕೋರಬೇಕಾಗಿ ಠರಾವುಗಳು ಆಗುವವು.

೩. ಹರಿಜನ ಸೇವೆ— ಇದಕ್ಕಾಗಿ ೫೦ ವರ್ಷಗಳಿಂದ ಹಿಂದೂಗಳು ಹರಿಜನರ ಉದ್ಧಾರಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಡಾ। ಅಂಬೇಡ್ಕರರ ನಿರ್ಧಾರವನ್ನು ಎದುರುಗೊಳ್ಳಲು ವ್ಯವಸ್ಥೆಗಳನ್ನು ಮಾಡಲಾಗುವುದು.

ಮುಸಲೀನಿ.

ಕೇವಲ ರೈತನಾಗಿದ್ದವನು ಪತ್ರಿಕಾ ವ್ಯವಸಾಯದಿಂದ ಈಗ ಇಟಲಿಯ ನಾಯಕನಾಗಿರುವನು. ಇವನು ತನ್ನ ಈಗಿನ ಗೌರವಪದವಿಯನ್ನು ತನ್ನ ಯೋಗ್ಯತೆಯಿಂದಲೇ ವಾರ್ತಾಪತ್ರಗಳ ಬೋಲ್ಶೆವಿಕ್ಸ್ ಗಳಿಂದ ಗಳಿಸಿದನು. ಚಿಕ್ಕಂದಿನಿಂದಲೂ ಧೈರ್ಯಶಾಲಿ. ಈಗಲೂ ಯುರೋಪಿನ ಇತರ ಜನಾಂಗದವರು ಗರ್ಜಿಸುತ್ತಿರುವಾಗ, ಮತ್ತು ಇತರ ದೇಶದ ಯಾವತ್ತೂ ಮಹತ್ವ ವಿಚಾರಗಳ ಸಮಯ ಇವನು ತನ್ನ ಜನ್ಮಸ್ಥಳವಾದ ರೋಮಾಗ್ನಕ್ಕೆ ಹೋಗಿ ಅಲ್ಲಿ ಸಾಗುವಳಿ ಕೆಲಸದಲ್ಲಿ ನಿರತನಾಗುವನು. ಕೆಲವರು ಈತನು ಯಾವತ್ತೂ ವಿಚಾರದಲ್ಲಿ ಆಲೋಚನೆಯನ್ನು ಭೂಮಿಯಿಂದ ಪಡೆಯುತ್ತಾನೆ ಎಂದು ಹೇಳುತ್ತಿರುವರು. ಬಹಳ ಸ್ವಭಾವಶಾಲಿ, ಆದರೆ ನಿಗರ್ವಿ. ಯಾರಕೂಡೆಯೂ ಮಾತಾಡಬಲ್ಲನು. ತನ್ನ ದೇಶಕ್ಕಾಗಿ ಸದಾ ಕಾಲ ದುಡಿಯಲು ಶಕ್ತಿ, ಮನಸ್ಸು, ಚೈತನ್ಯವುಳ್ಳವನು. ಆಡಂಬರಗಳಲ್ಲಿ ಹೆಚ್ಚು ಸಮಯವನ್ನು ಕಳೆಯನು. ಕೆಲಸಗಾರನಾಯಬೇಕಾದ ಬೊಂಬೆಗಳಾಗಿ ದೀರ್ಘ ಆಲೋಚನೆಯಲ್ಲಿ ಸಮಯವನ್ನು ಕಳೆಯುವುದು ಇವನ ಮುಖ್ಯ ಅಭ್ಯಾಸ. ಅನಿವಾರ್ಯ ಕಷ್ಟಗಳಲ್ಲಿ ನರಳುತ್ತಿರುವ ರೈತರ ಗೋಳನ್ನು ನಿವಾರಿಸಿದವನು ಈತನೇ. ಪೆಸಿಯಾಸ್ಟ ಪ್ರಭುತ್ವದ ಏಳಿಗೆಗೆ ಕಾರಣಭೂತನು. ರೋಮನ್ ಪುರಾತನ ಕಾಲದಲ್ಲಿ ಪೂರಸಂಗ್ರಾಮ ರಾಜಧಾನಿಯಾಗಿದ್ದು ಭೂಲೋಕದ ಎಲ್ಲಾ ದಿಕ್ಕುಗಳಲ್ಲಿ ತನ್ನ ಕೀರ್ತಿಯನ್ನು ಪ್ರಸರಿಸಿತು. ಯೂರೋಪು ಖಂಡದ ಡಿಕ್ಟೇಟರು (ಜನರ ಪ್ರತಿನಿಧಿ ಯಾ ನಾಯಕ) ಹೆಚ್ಚಾಗಿ ತಮ್ಮ ದೇಶದ ರಾಷ್ಟ್ರೀಯ, ಆರ್ಥಿಕ ವ್ಯಾಪಾರಿಕ ಉನ್ನತಿಯನ್ನು ಉದ್ದೇಶವಾಗಿಟ್ಟು ಕಾರ್ಯ ಸುತ್ತಿದ್ದಾರೆ. ಆದರೆ ಮುಸಲೀನಿಯು ಪುರಾತನ ರೋಮಿನಂತೆ, ನೀಗರನಯೋಕಾದಿಯಲ್ಲಿ ಪೆಸಿಯಾಸ್ಟ ಪ್ರಭುತ್ವದಿಂದ ಸ್ಥಿರವಾದ ಇಟಲಿಯ ಸ್ಥಾಪನೆಯನ್ನು ಮಾಡಿದುದಲ್ಲದೆ, — ಇಟಲಿಗಾಗಿ ರಾಜ್ಯಗಳನ್ನು ಸಂಪಾದಿಸಲು ಹೊರಟಿರುವನು. ಭೂಲೋಕದ ಸಕಲ ಜನಾಂಗಗಳ ಇಚ್ಛೆಗೆ ಎದುರಾಗಿ, ಮಹಾ ಪ್ರಭುತ್ವ ಪಡೆದ ಜನಾಂಗಗಳೊಡನೆ ಭುಜಹರಿಸಿ, ಜನಾಂಗಗಳ ಯಂತಹ ಮಹಾಸಭೆಯು ರಾತ್ರಿ ಹಗಲು ಆಲೋಚನೆಯಲ್ಲಿ ಮಗ್ನರಾಗುವಂತೆ ಮಾಡಿ, ಎಥಿಯೋಪಿಯಾ ಪಕ್ಕಕಡೆ ಪ್ರಯಾಣ ಬೆಳೆಸಿ, ಯಾವತ್ತೂ ಅಪಾಯಗಳಿಗೆ ಮುಖಕವೆ ಈಗ ಅಲ್ಲಿ ಒಂದೆಂದೆ ದೇಶಪ್ರಕಾರ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದಿರುವನು.

ಒಂದು ಸಣ್ಣ ದೋಣಿಯಲ್ಲಿ ಭೂಪ್ರಯಾಣ.

ಶಾಂಗಾಯಿಯಿಂದ ನಾಲ್ಕು ಜನ ರಷ್ಯದವರು ನಾಲ್ಕು ಟನ್ ಭಾರವನ್ನು ಹೊರುವ ಮತ್ತು ಹಾಯಿಗಳ ಮೂಲಕ ಚಲಿಸುವ ನಾವೆಯಲ್ಲಿ ಭೂಪ್ರಯಾಣಕ್ಕೆ ಹೊರಟಿದ್ದಾರೆ. ಇವರಲ್ಲಿ ಕೆಪ್ಟನ್ ಕತ್ರಿಲೋಪನೆಂಬವನು ಮಾತ್ರವಲ್ಲದೆ ಇನ್ನಿತರರು ಕಡಿಮೆ ವಯಸ್ಸಿನ ಯುವಕರು. ಸಂಚಾರಕ್ಕೆ ಬೇಕಾಗುವ ಹಣವನ್ನು ಪ್ರಯಾಣದ ಸಮಯ ದುಡಿಯಬೇಕೆಂದಿದ್ದಾರೆ. ಒಬ್ಬನು ಬೂಟ್ಸುಗಳನ್ನು ಹೊಲಿಯುವುದರಲ್ಲಿ ಪ್ರವೀಣನು. ಮತ್ತೊಬ್ಬನು ಗಾಯಕನು. ಮೂರನೆಯವನು ಚಿತ್ರಕನು. ನಾಲ್ಕನೆಯವನು ರೇಡಿಯೊದಲ್ಲಿ ಪ್ರವೀಣನು.

ಸ್ಥಳೀಕ ಸಂಸ್ಥೆಗಳ ಚುನಾವಣೆ.

"ಮದ್ರಾಸು ಅಧಿಕೃತ ಹಲವು ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮತ್ತು ನಗರಸಭೆಯ ಚುನಾವಣೆಗಳಲ್ಲಿ ಕಾಂಗ್ರೆಸ್ಸೇ ಹೆಚ್ಚಿನ ಸ್ಥಳಗಳನ್ನು ಪಡೆದಿರುತ್ತದೆ. ಇದರಿಂದ ಕಾಂಗ್ರೆಸಿನ ಮೇಲಿನ ಪ್ರಜೆಗಳ ವಿಶ್ವಾಸ ಮತ್ತು ಪ್ರೀತಿಯು ವ್ಯಕ್ತವಾಗುತ್ತದೆ. ಎಲ್ಲಾ ಕಡೆಗಳಲ್ಲಿ ಕಾಂಗ್ರೆಸು ಜಯಶಾಲಿಯಾಗುವುದರಲ್ಲಿ ಏನೂ ಸಂದೇಹವಿಲ್ಲ. ಜಸ್ಟಿಸ್ ಪಾರ್ಟಿಯವರು ಧಾರಾಳ ದ್ರವ್ಯ ಉಪಯೋಗ ಮಾಡಿ, ಅಲ್ಲಸಲ್ಲದ ರೀತಿಗಳನ್ನು ಉಪಯೋಗಿಸುತ್ತಿದ್ದಾರೆ. ಇದಕ್ಕಾಗಿ ೧೫ ವರ್ಷ ಅಧಿಕಾರದಲ್ಲಿದ್ದು ಯಾವತ್ತು ಸಾರ್ಥಕದ ಕೆಲಸಗಳನ್ನು ಮಾಡದೆ ಇರುವ ಈ ಪಂಗಡವನ್ನು ಹೊರಗಟ್ಟಲು ಎಲ್ಲರೂ ಒಮ್ಮನಸ್ಸಿನಿಂದ ಸಾಧಿಸತಕ್ಕದ್ದು. ಇವರು ಕಾಂಗ್ರೆಸ್ ವೈರಿಗಳು. ಮದ್ರಾಸಿನ ಕೌನ್ಸಿಲ್ ಚುನಾವಣೆಯು ಬೇಗನೇ ಜರಗಬೇಕಾಗುವುದು. ನ್ಯಾಯವಿಧಾಯಕ ಸಭೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಎಲ್ಲರೂ ಪ್ರೋತ್ಸಾಹಿಸಿ ಕೆಲಸಮಾಡತಕ್ಕದ್ದು. ಸ್ಥಳೀಕ ಸಂಸ್ಥೆಗಳಿಗೆ ಚುನಾಯಿತರಾದ ಕಾಂಗ್ರೆಸ್ ಸದಸ್ಯರು ಪರಸ್ಪರ ಪ್ರೀತಿಯಿಂದ ದೇಶಸೇವೆಯನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ಒಮ್ಮನಸ್ಸಿನಿಂದ ವರ್ತಿಸಬೇಕು" ಎಂದು ಶ್ರೀಗಳಾದ ಸತ್ಯಮೂರ್ತಿಯವರು ಕೂನೂರಿನಲ್ಲಿ ಭಾಷಣಮಾಡಿದರು.

ಕಾಂಗ್ರೆಸ್ ಅಧ್ಯಕ್ಷರಾದ ಬಾಬೂರಾಜೇಂದ್ರ ಪ್ರಸಾದರು.

ತಮಿಳುನಾಡಿನ ತಮ್ಮ ಪ್ರಯಾಣವನ್ನು ಪೂರೈಸಿ ಈಗ ಆಂಧ್ರದೇಶದ ಪ್ರಯಾಣವನ್ನು ಪ್ರಾರಂಭಿಸಿದ್ದಾರೆ. ತಮಿಳುನಾಡಿನ ಎಲ್ಲಾ ದಿಕ್ಕುಗಳಲ್ಲಿ ಇವರಿಗೆ ಯೋಗ್ಯ ಸ್ವಾಗತ ಮಾತ್ರ ಸಿಕ್ಕಿದುದಲ್ಲದೆ, ಇವರ ಭಾವಪೂರ್ಣ ಭಾಷಣಗಳು ಕಾಂಗ್ರೆಸ್ಸಿನ ಮಹತ್ವವನ್ನು ಸರ್ವರಲ್ಲೂ ನಾಟುವಂತೆ ಮಾಡಿರುತ್ತದೆ. ಕಳೆದ ೨೦ ದಿನಗಳಲ್ಲಿ ಶ್ರೀಯುತ ಪ್ರಸಾದರು ಭಾಷಣಗಳಲ್ಲೂ ಸಭೆಗಳಲ್ಲೂ ಪ್ರಯಾಣದಲ್ಲೂ ತಮ್ಮ ಸಮಯವನ್ನು ಕಳೆದರು. ಕಾಂಗ್ರೆಸ್ಸಿನ ವಿನಿಯೋಗಕ್ಕೆ ಬೇಕಾಗುವ ದ್ರವ್ಯಸಹಾಯವನ್ನು ಕೂಡ ಇವರು ಈ ಪ್ರಯಾಣದ ಸಮಯ ಶೇಖರಿಸುತ್ತಿದ್ದಾರೆ. ಆಂಧ್ರದೇಶದ ಸಂಚಾರವಾದನಂತರ ಇವರು ಮುಂಬಯಿ ಪ್ರಾಂತ್ಯದ ಸಂಚಾರವನ್ನು ಕೈಗೊಳ್ಳುವರು.

೮೦೦ ಹರಿಜನರು ಹಿಂದೂಧರ್ಮವನ್ನು ತ್ಯಜಿಸಿದರು.

ನಾಸಿಕ ಜಿಲ್ಲೆಯ ಎಲ್ಲಾ ಹಳ್ಳಿಗಳ ಹರಿಜನ ತರುಣರು ತಮ್ಮ ಹಿಂದೂಧರ್ಮ ತ್ಯಜಿಸುವ ನಿರ್ಧಾರವನ್ನು ಸೂಚಿಸಲು ಒಂದು ಮಹಾ ಪರಿಷತ್ತನ್ನು ಜರಗಿಸಿದರು. ಇವರು ತಮಗೆ ವಿರೋಧವಿರುವ ಹಿಂದೂಶಾಸ್ತ್ರ ಪುಸ್ತಕಗಳನ್ನು ರಾಶಿಮಾಡಿ ಸುಟ್ಟಿರುವರು. ಹಿಂದುಗಳಿಂದ ತಮ್ಮ ಇಷ್ಟರ ತನಕ ಒದಗಿದ ಸಂಕಷ್ಟಗಳನ್ನು ವಿವರಿಸಿ ಭಾವಪೂರ್ವಕ ಅನೇಕ ಭಾಷಣಗಳಿದ್ದುವು. ಕೆಲವು ಮುಸ್ಲಿಮರು ಕೂಡ ಈ ಪರಿಷತ್ತಿನಲ್ಲಿ ಪ್ರೇಕ್ಷಕರಾಗಿ ಬಂದಿದ್ದರು. ಅಸ್ಪೃಶ್ಯತೆಯನ್ನು ಕೆಡವಬೇಕೆಂದು ಇವರು ಮಹಾ ಪ್ರತಿಜ್ಞೆಯನ್ನು ಮಾಡಿರುವರು. ಸಾಧಾರಣ ೮೦೦ ತರುಣರು ನೆರೆದಿದ್ದರು. ಹಿಂದೂಗಳ ಜಾತ್ರೆಗಳಲ್ಲೂ ಭಾಗವಹಿಸಬಾರದೆಂದೂ, ಹಿಂದೂ ಪವಿತ್ರ ಸ್ಥಳಗಳನ್ನು ಸಂದರ್ಶಿಸಬಾರದಾಗಿಯೂ, ಹಿಂದೂ ಪುರೋಹಿತರಿಗೆ ಹಣ ಕೊಡಬಾರದಾಗಿಯೂ ಮತ್ತು ಯಾವತ್ತೂ ಹಿಂದೂ ಹಬ್ಬಗಳನ್ನು ಆಚರಿಸಬಾರದಾಗಿ ಠರಾವುಗಳಾದುವು.

ರಾಜ್ಯದಲ್ಲಿ ಸಾಲನಿವಾರಣೆ—

ಮಾಡುವ ಒಂದು ಹೊಸ ಬಿಲು ಸದ್ಯ ಮದ್ರಾಸು ನ್ಯಾಯವಿಧಾಯಕ ಸಭೆಯ ಮುಂದೆ ಚರ್ಚೆಗೆ ಬಂದಿರುತ್ತದೆ. ಇದರಿಂದ ರೈತನಿಗೆ ಈಗಿನ ಹಲವು ಕಷ್ಟಗಳು ನಾಶವಾಗುವುವು. ಬಡ್ಡಿ ರೂಪದಲ್ಲಿ ಹಣಗಳಿಸುವವರಿಗೆ ಇದರಿಂದ ಸ್ವಲ್ಪ ಹಾನಿಬರುವುದು. ರೈತನ ಸಾಲಗಳ ಯೋಗ್ಯ ಮತ್ತು ನ್ಯಾಯರೀತಿ ನಿವಾರಣೆ ಆಗುವಂತೆ ಆಯಾಯ ಜಿಲ್ಲೆಗಳಲ್ಲಿ ನಿವೃತ್ತ ನ್ಯಾಯಾಧಿಕಾರಿಗಳ ಕಮಿಟಿಗಳನ್ನು ರಚಿಸುವರು. ಈ ಬಿಲಿನ ಕೆಲವು ಕ್ರಮಸೂತ್ರಗಳ ವಿಷಯ ಬಹಳ ಚರ್ಚೆಯು ನಡೆಯುತ್ತದೆ. ಈ ಬಿಲನ್ನು ಚರ್ಚಿಸಲು ಒಂದು ಸಿಲೆಕ್ಟ ಕಮಿಟಿಯು ನೇಮಕವಾಗಿದೆ.

ಭಾರತೀಯ ವರ್ತಕರು ಇನ್ನು ಮೂರು ತಿಂಗಳಲ್ಲಿ—

ಇರಾಕನ್ನು ಬಿಡಬೇಕಾಗಿ ಅಪ್ಪಣೆಗಳು ಹೊರಟಿವೆ ಎಂದು ಡಾ। ರವೀಂದ್ರನಾಥ ಠಾಗೂರರಿಗೆ ಓರ್ವ ಸ್ನೇಹಿತರ ಪತ್ರವು ಬಂದಿರುತ್ತದೆ. ಇದೂ ಅಲ್ಲದೆ ಹಿಂದಿಯರನ್ನು ಹೊರಗಿಡುವ ಹಲವು ಕ್ರಮಗಳು ಅಲ್ಲಿನ ಸರಕಾರದವರು ತರುವವರಿದ್ದಾರೆ. ಇದರಿಂದ ಅಲ್ಲಿನ ಭಾರತೀಯ ವರ್ತಕರಲ್ಲಿ ಬಹಳ ದಿಗಿಲು ಉಂಟಾಗಿರುತ್ತದೆ.

ಆದರೆ ನಮ್ಮಿಂದ ಇರಾಕಿನವರಿಗೆ ಹೆಚ್ಚಿನ ಲಾಭವಿದೆ. ಒಂದು ವರ್ಷದಲ್ಲಿ ೩೮೦೦೦ಕ್ಕೆ ಮಿಕ್ಕಿದ ಯಾತ್ರಿಕರು ಅತ್ತ ತೆರಳಿ ಧಾರಾಳ ಹಣವನ್ನು ಕಾಣಿಕೆ ರೂಪದಲ್ಲಿ ಸಲ್ಲಿಸುತ್ತಿದ್ದಾರೆ. ಇದೂ ಅಲ್ಲದೆ ಕೆಲವು ಮುಸಲ್ಮಾನರಿಂದ ಧಾರಾಳ ಹಣವನ್ನು ಇಲ್ಲಿಂದ ಅಲ್ಲಿಗೆ ಕಳುಹಿಸಿಕೊಡುತ್ತಾರೆ. ಇವರನ್ನು ಟರ್ಕಿಯವರಿಂದ ವಿಮೋಚಿಸಲು ೪೦ ೦೦೦ ಹಿಂದೀಯರ ಪ್ರಾಣ ಬಲಿಯಾಗಿದೆ. ಹಲವು ಮಂದಿ ಇರಾಕಿಗಳು ಇಲ್ಲಿ ತರತರದ ವೃತ್ತಿ ನಡೆಯಿಸಿ ಜೀವಿಸುತ್ತಿದ್ದಾರೆ.

ಸುಪ್ರಸಿದ್ಧ ಚಾರ್ಲಿ ಚಿಪ್ಲಿನನು.

ಮೋಶಿನ ಹೆಸರನ್ನು ತಿಳಿಯದ ಮಾನವರಿಲ್ಲ. ಹಾಸ್ಯದಾಯಕ ನಟನೆಯಲ್ಲಿ ಏಕ ಪ್ರಸಿದ್ಧನಾಗಿ ಭೂಲೋಕದ ಎಲ್ಲಾ ಭಾಗಗಳಲ್ಲೂ ಇವನ ಚಿತ್ರಗಳನ್ನು ಕಾಣಲು ಸಿನಿಮಾ ಮಂದಿರಗಳಲ್ಲಿ ಜನರು ಕಿಕ್ಕಿರಿದು ಸೇರುವರು. ಇವನ ನಟನೆಯು ಜನರನ್ನು ಹಿಂದು ಮುಂದು ಮಾಡುವ ವೃತ್ತಿಯನ್ನು ಮಾಡಿರುತ್ತದೆ. ಇವನ ಚಿತ್ರಗಳಿಗೆ ಜಾಹೀರಾತಿನ ಅಗತ್ಯವಿಲ್ಲ. ಅನೇಕ ಪತ್ರಿಕೆಗಳು, ಯಾಕೆ ಇಡೀ ಭೂಲೋಕದ ಎಲ್ಲಾ ಪತ್ರಿಕೆಗಳು ಇವನನ್ನು ಹೊಗಳುತ್ತಾ ಕೊಂಡಾಡುತ್ತಿದ್ದಾರೆ. ಮುಸಲೀನಿ, ಹಿಟ್ಲರ್, ರೂಸ್‌ವೆಲ್ಟ್ ಮೊದಲಾದ ಪ್ರಮುಖ ವ್ಯಕ್ತಿಗಳೊಡನೆ ಇವನ ಹೆಸರು ಕೂಡಾ ಬರುತ್ತಿದೆ. ಮಾತಾಡುವ ಚಲಚ್ಚಿತ್ರಗಳಲ್ಲಿ ಚಾರ್ಲಿಯು ನಟಿಸಿದರೂ ಇಷ್ಟರ ತನಕ ಅವುಗಳಲ್ಲಿ ಮಾತನ್ನು ಎತ್ತಲಿಲ್ಲ. ಇವನ ನಟನೆ ಅತಿ ಶ್ರೇಷ್ಠವಾದುದು. ನಟನೆಯಿಂದ ಮಾತುಕತೆಗಳು ತಿಳಿಯುವುವು. ಹೆಸ್ಪೆನ್ಸರ್ ನಂತ ಅಮೇರಿಕಾದ ಧನಿಕರೊಡನೆ ಅಮೇರಿಕಾ ಮಾಸಿಕ ಇತ್ಯಾದಿಗಳಲ್ಲಿ ಇವನಿಗೆ ಒಂದು ಸ್ಥಾನ ದೊರಕದೇ ಇದ್ದರೆ, ನಟನಾರಂಗದಲ್ಲಿ ಇವನ ಕೀರ್ತಿಯು ಎತ್ತರದಲ್ಲಿರುವುದೆಂದು ಹೇಳಬೇಕಾದುದು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ -

The Scientific Gold Bangles Co., Ltd.
Head Office -43, Byragimatam Street,
Post Box No. 203, Madras.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕೃಸ. ನಂಬ್ರ 369/35

ಯಂ. ಎಲ್ ರಾಮಕೃಷ್ಣರಾವ್—ವಾದಿ
ಹಯಗ್ರೀವ ಕುಂಡಂತಾಯ ಪ್ರತಿವಾದಿ
ಇವರೊಳಗೆ

ಸದ್ರಿ ದಾವೆಯ ಪ್ರತಿವಾದಿ ಹಯಗ್ರೀವ ಕುಂಡಂತಾಯ, ಕುಂಡಂತಾಯ ಕೃಷ್ಣಯ್ಯನವರ ಮಗ-ಉಡ್ಪಿ ತಾಲ್ಲೂಕು ಯಲ್ಲೂರು ಕಸಬಾ ಗ್ರಾಮದ ಕುಂಜೂರು ಎಂಬಲ್ಲಿರುವವ ಇವರಿಗೆ

ನೀವು S. R. ಗೋಪಾಲಕೃಷ್ಣರಾವ್ ಎಂಬವನಿಗೆ ರೂಪಾಯಿ 100-0-0ಕ್ಕೆ ತಾರೀಕು 30—7—1932ರಲ್ಲಿ ಬರಕೊಟ್ಟ ದಿವಾಂದು ನೋಟಿನ ಅಸಲು ಬಡ್ಡಿ ಐವೇಜು ವಸೂಲು ಮಾಡುವ ಹಕ್ಕನ್ನು ಪರಾಭಾರೆಗೆ ಪಡೆದಿರುವ ವಾದಿಯು ಸದ್ರಿ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 187-8-0 ಮತ್ತು ಕೋರ್ಟು ಖರ್ಚು ಕೂಡಾ ಬರಮಾಡಿಕೊಳ್ಳುವರೆ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮ ಮೇಲೆ ದಾಖಲು ಮಾಡಿರುವ ಮೇಲೆ ಕಾಣಿಸಿರುವ ದಾವೆಯು ಸದ್ರಿ ಕೋರ್ಟಿನಲ್ಲಿ ತಾರೀಕು 26-11-1935ಕ್ಕೆ ಅಖೈರ ತನಿಖೆಗೆ ಇಟ್ಟಿರುತ್ತದೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ನೀವು ಸ್ವತಃ ಯಾ ವಕೀಲರ ಮೂಲಕ ಆ ಕೋರ್ಟಿಗೆ ಹಾಜರಾಗದೆ ಇದ್ದರೆ ನಿಮ್ಮನ್ನು ಕಿವ್ವಾ ಮಾಡಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ದಾವೆಯು ತೀರ್ಮಾನ ಮಾಡಲಾಗುವುದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸಿರುತ್ತೇನೆ

ಕೋರ್ಟಿನವರ ಹುಕುಂ ಪ್ರಕಾರ

ಕಾರ್ಕಳ 9 11 35 } ಇಡ್ಯದ ವಾಸುದೇವಯ್ಯ ಬಿ ಎ ಬಿ ಯಲ್ ವಾದಿಯ ಕಡೆ ವಕೀಲ

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 69/35

H ದೇವಿದಾಸ ರಾವ್, H. ಸದಾನಂದ ರಾವ್, ಮ್ಯಾನೆರರು ಇವರ ಕ್ಷೇಮ ಚಿಂತಕರು ಇವರ ತಾಯಿ H ವತ್ಸಲಾ ಬ್ಯಾ—ಅರ್ಜಿದಾರರು

ಮತ್ತು

H. ಭವಾನಿ ಶಂಕರ ರಾವ್, B A LL B Advocate Shimoga—ಎದ್ರಿ.

ಅರ್ಜಿದಾರರ ತಂದೆಯಾದ H ನಾರಾಯಣ ರಾಯರು The Empire of India Life Insurance ಕಂಪೆನಿಯಲ್ಲಿ ನಂಬ್ರ 71804 ಪೊಲಿಸಿ ಮೇಲೆ ಇನ್ಶೂರ್ ಮಾಡಿ, ತಾ 14—8— 35ರಲ್ಲಿ ಮೃತಪಟ್ಟಿರುವ ಕಾರಣ, ಸದ್ರಿ ಪೊಲಿಸಿ ಮೇರೆಗೆ ಬರತಕ್ಕದ್ದಾಗುವ ರೂ 1128-0-0ನ್ನು ಪಡಿಯುವರೆ ತಾವು ಹಕ್ಕುದಾರರೆ ಇಲ್ಲ ಅದರ ವಸೂಲಿ ಕುರಿತು ತಮಗೊಂದ ಸಾಕ್ಸೆಸರ್ ಸರ್ಟಿಫಿಕೇಟು ಕೊಡಬೇಕೆಂತಲೂ ಕಾಣಿಸಿ ಕೊಟ್ಟ ಮೇಲ್ಕಂಡ ಅರ್ಜಿಯು ತಾ 23-11-35ರಲ್ಲಿ ತನಿಖೆಗೆ ಇಟ್ಟಿರುವುದರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರ ಮಾಡಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ

Udipi 6 11-35 } K. Vittal Nayak, *Vakil for Petitioners*

ನಿಮ್ಮ ಎಲ್ಲಾ ಕೊಲೆಗಳನ್ನು ಮತ್ತು ಬೇನೆಗಳನ್ನು ಹೋಗಲಾಡಿಸಿರಿ

ವನಸ್ಪತಿದಾಯಕ ಝಾಂಬಕ್ ಮುಲಾಮನ್ನು ಉಪಯೋಗಿಸಿರಿ.

ಕೂಲೆ ಮತ್ತು ಬೇನೆಗಳಿರುವ ಎಡೆಯ ಮೇಲೆ ಚೆನ್ನಾಗಿ ಮೇಲೂ ಝಾಂಬಕನ್ನು ತಿಕ್ಕಿರಿ ಅದು ಅದರ ಸಂಬಂಧವಾದ ಈ ಕ್ರೂರವಾದ ಬೇನೆಗಳನ್ನು ನಾಶಗೊಳಿಸುವುದು. ಝಾಂಬಕ್ ಚರ್ಮದ ಮೂಲಕ ಬೇನೆಯಿರುವ ಸ್ಥಳವನ್ನು ಸೇರುತ್ತದೆ ನಮ್ಮ ಪ್ರಕೃತಿಗೆ ಸರಿಯಾಗಿ ನಮ್ಮ ದೇಹದಲ್ಲಿರುವ ಎಣ್ಣೆಯು ಹೋಗಲು ಬೇನೆಯು ಉಂಟಾಗುವುದು. ಝಾಂಬಕ್ ಈ ಎಣ್ಣೆಯನ್ನು ಅವುಗಳಿಗೆ ಒದಗಿಸಿ ದೇಹದ ಆ ಭಾಗಗಳು ಆರೋಗ್ಯವಾಗುವಂತೆ ಮಾಡುತ್ತದೆ ಝಾಂಬಕನ್ನು ತಿಕ್ಕಿದರೆ ದೇಹದ ಒಳಗಿರುವ ನೋವನ್ನು ತಿಕ್ಕಿ ಹೊರಗೆ ತಳ್ಳಿದಂತಾಗುವುದು.

ಒಂದು ರೂಪಾಯಿಗೆ ಅಥವಾ ರೂ 0—1—0 ಎಲ್ಲಾ ದವಾಖಾನೆಗಳಲ್ಲಿ ದೊರೆಯುತ್ತದೆ

ಇದರಲ್ಲಿ ಕೊಬ್ಬಿನ ಮಿಶ್ರವಿಲ್ಲ

ಝಾಂಬಕ್

Zam Buk

ರುಚಿಕರ! ಹಿತಕರ!

ದಿ ರಿನೌನ್ ಬಿಸ್ಕಿಟ್ ಕಂಪೆನಿಯ

ನಾನಾ ತರದ ಬಿಸ್ಕಿಟುಗಳು

ವಿವಿಧ ಪ್ರದರ್ಶನಗಳಲ್ಲಿ 14 ಸುವರ್ಣ ಪದಕಗಳನ್ನೂ ಮಹನೀಯರನೇಕರಿಂದ ಪ್ರಶಂಸಾಪತ್ರಗಳನ್ನೂ ಪಡೆದಿರುವುದು

ಇಷ್ಟು ಉತ್ಕೃಷ್ಟವಾದ ಮತ್ತು ಜನಪ್ರಿಯವಾದ ಬಿಸ್ಕಿಟ್ ಮತ್ತೊಂದಿಲ್ಲ.

ಒಮ್ಮೆ ತಿಂದರೆ ಖಚಿತವಾಗುವುದು.

ಈಗ ತಾನೇ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

B S Biscuits
XL Biscuits
Renown Biscuits

ಮೇಲಿನ ಈ ಮೂರು ಗುಣವುಳ್ಳ 40 ರಾತ್ತಲಿನ ಪೆಟ್ಟಿಗೆಗಳಲ್ಲಿಯೂ 10 2 1 ½ ರಾತ್ತಲಿನ ಟಿನ್ನುಗಳಲ್ಲಿಯೂ ½ ¼ ರಾತ್ತಲಿನ ಪೊಟ್ಟಣಗಳಲ್ಲಿಯೂ ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

S. E Bangera,
Representative of
JAYA BHARATHAM Co.,
Mission Compound, Kasargod S K
ಮದ್ರಾಸ್ ಸಂಸ್ಥಾನದ ಜಿಲ್ಲೆ.

Jaya Bharatham Co,
P O Box No 8 G T MADRAS

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ. ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ಪಶುಬಲಿ.

ಬಂಗಾಳದ ಇಂಟರ್ನ್ಯಾಶನಲ್ ಇನ್ಸ್ಟಿಟ್ಯೂಟನಲ್ಲಿ ಕೊಟ್ಟ ಭಾಷಣಗಳ ಸಾರಾಂಶ:

ಡಾ॥ ಸರಕಾರರವರ ಅಭಿಪ್ರಾಯ:- ಬಹು ಪುರಾತನ ಕಾಲದಿಂದಲೂ ಪ್ರಾಣಿಹಿಂಸೆಯ ಪೈಶಾಚಿಕ ಕೆಲಸವು ಏನೊಂದೂ ತೊಡಕಿಲ್ಲದೆ ಸಾಗಿಬಂದಿದೆ. ಅನೇಕ ಜಾತಿಯವರು ಧರ್ಮಕ್ಕನುಗುಣವಾಗಿ ಈ ಹೇಯ ಕೆಲಸವನ್ನು ಕೈಗೊಂಡರೆಂದು ಎಲ್ಲರಿಗೂ ತಿಳಿದ ವಿಷಯ. ರಕ್ತವನ್ನು ಹೊರಸೂಸುವುದರಿಂದ ನಮ್ಮ ಕಷ್ಟನಿವಾರಣೆಯಾಗುತ್ತದೆ ಎಂಬ ಭಾವನೆಯು ಎಲ್ಲರಲ್ಲಿಯೂ ಮೂಡಿ ಬಂದುದೇ ಇದರ ಕಾರಣವಾಗಿರಬೇಕು. ಇದಲ್ಲದೆ ಪೂರ್ವಕಾಲದ ಪೂಜಾರಿಗಳು ಅದರ ಗುಣಾವಳಿಗಳನ್ನು ಕುರಿತು ದೊಡ್ಡ ದೊಡ್ಡ ವ್ಯಾಖ್ಯಾನವನ್ನೇ ಮಾಡಿದ್ದರು. ಈಶ್ವರ ಭಕ್ತಿಗೆಯೂ, ಅಜ್ಞಾನಿಗಳೂ ಆದ ನಮ್ಮ ಪೂರ್ವಿಕರಲ್ಲಿ ಅದು ನೆಲೆನಿಂತಿತು. ಅಂತೆ ಪಶುಬಲಿ ಪ್ರಾರಂಭ. ಶ್ರೇಷ್ಠವಾದ ಹಿಂದೂಧರ್ಮದಲ್ಲಿ ಅದಕ್ಕೆ ಸ್ಥಾನವಿದ್ದುದು ಶೋಚನೀಯವಾದ ಸಂಗತಿ. ಪಶುಬಲಿಗೂ ಪಾರಮಾರ್ಥಿಕಕ್ಕೂ ಸ್ವಲ್ಪ ಸಂಬಂಧವಿದೆಯೆಂದು ಹಲವರ ಅಭಿಪ್ರಾಯ. ಹಿಂದೂ ಶಾಸ್ತ್ರದಲ್ಲಿ, ಒಂದೆಡೆಯಲ್ಲಿ ಪಶುಬಲಿಯು ನ್ಯಾಯವಾದ ಸಂಗತಿಯೆಂದು ಬರೆಯಲ್ಪಟ್ಟಿದೆ.

ಡಾ॥ ನರೆನ್ ಲೋ ಇವರ ಅಭಿಪ್ರಾಯ:—ಇವರ ಹೇಳಿಕೆಯ ಮೇರೆಗೆ ಪಶುಬಲಿಯು ಮನುಷ್ಯನ ಪಾಪದ ನೆಲೆಯನ್ನು ಸೂಚಿಸುವುದಾಗಿರುತ್ತದೆ. ಏಕೆಂದರೆ, ಯಾವನಾದರೊಂದು ಕೆಟ್ಟ ಕೆಲಸವನ್ನು ಮಾಡಿ ಅದರ ಫಲವನ್ನು ಉಣ್ಣಲಾಗದೆ ದೇವಿಯ ಮರೆಹೊಕ್ಕು ತನ್ನನ್ನು ಅದರ ಕಾಟದಿಂದ ರಕ್ಷಿಸಲೋಸುಗ ಮನುಷ್ಯನು ಪಶುಬಲಿಯನ್ನರ್ಪಿಸುತ್ತಾನೆ. ಏನೊಂದು ದಯೆ ದಾಕ್ಷಿಣ್ಯವಿಲ್ಲದೆ ಯುರೋಪ ಅಮೇರಿಕಾ ದೇಶಗಳಲ್ಲಿ ಮಾಂಸಾಹಾರಿಗಳು ಅನೇಕ ಜಾತಿಯ ಜಂತುಗಳನ್ನು ಹಿಡಿದು ಕೊಲ್ಲುತ್ತಾರೆ. ಅದಾದರೂ ಮಾನವನ ಆಹಾರಕ್ಕಾಗಿ. ಇಲ್ಲಿಯೂ ಅದೇ ರೀತಿ ನಡೆಯುವುದಾದರೆ ಅದನ್ನು ದೇವರ ಮುಂದೆ ಕೊಂದು ಪುಣ್ಯಗಳಿಸಿ ಪ್ರಯೋಜನವೇನು? ಅದಕ್ಕೂ ಪುಣ್ಯವೆನ್ನುವರೇ? ಹಿಂದೂ ಧರ್ಮದಲ್ಲಿ ಇಂತಹ ಕೃತಿಗಳಿಗೆ ಸ್ಥಾನವಿದ್ದಲ್ಲಿ ಅದು ಮನುಷ್ಯನ ತಾಮಸಿಕ ಗುಣಗಳಿಗೆ ಶ್ರೇಷ್ಠತೆಯನ್ನು ಕೊಡುವಂತೆ ಆಯಿತು. ಈ ತಾಮಸಿಕ ಗುಣವು ಮನುಷ್ಯನಲ್ಲಿ ಉದ್ಭವಿಸಿದ ಕೂಡಲೇ ಅವನು ನಿರಂತರವೂ ರಕ್ತಕ್ಕೆ ಸೊಕ್ಕಿದ ಪ್ರಾಣಿಯಾಗುವನು. ನಂತರ ಅವನಿಗೂ ಮೃಗಗಳಿಗೂ ಅಷ್ಟೊಂದು ಭೇದವಿರಲಿಕ್ಕಿಲ್ಲ.

ಶ್ರೀ ಗೋಪಾಲ ರೇ ಇವರ ಅಭಿಪ್ರಾಯ:- ಉತ್ತರ ಬಂಗಾಳ ಪ್ರಾಂತ್ಯದಲ್ಲಿ ಸಾಧಾರಣ ಎರಡು ತಲೆಮಾರುಗಳಿಂದ ಕೆಲವು ಮನೆತನದವರು ಈ ಪಶುಬಲಿಯನ್ನು ನಿಷೇಧಿಸಿರುವರು. ಮತ್ತು ದೇಶದಲ್ಲಿ ಅದರ ಪ್ರಚಾರವನ್ನು ತಡೆಗಟ್ಟಲು ಸಾಧಿಸಿದರು. ಆದರೆ ಅವರಿಂದ ಸಾಧ್ಯವಾಗಲಿಲ್ಲ. ಬಲಿಯು ಯಥಾಪ್ರಕಾರ ಸಾಗುತ್ತಾ ಬಂದಿದೆ.

ಮಿ॥ ಭರನ್ ಎಂಡ್ ಸತಿನ್‌ದಾಸ ಗುಪ್ತರ ಅಭಿಪ್ರಾಯಗಳು:—ಮನುಷ್ಯನು ತನ್ನ ಆಹಾರಕ್ಕಾಗಿ ಪಶುಗಳನ್ನು ಕೊಲ್ಲುವುದು ಬಹು ಪಾಪಕರವಾದ ಸಂಗತಿ. ಯುರೋಪ ಮತ್ತು ಅಮೇರಿಕಾ ದೇಶಗಳಲ್ಲಿ ಅದಕ್ಕೆ ಪ್ರಾಶಸ್ತ್ಯವಿದೆ. ಒಂದು ತರದ ಪಶುಗಳನ್ನು ಕೊಲ್ಲಬಾರದೆಂಬ ನಿಷೇಧ ಶಸ್ತ್ರವನ್ನು ಇಡೀ ಜಗತ್ತಿನಲ್ಲಿ ಹೂಡಿದರೂ ಅಂಥ ಸಮಯದಲ್ಲಿ ದೇಗುಲದಲ್ಲಿ ಪಶುಬಲಿಯಾಗುವುದನ್ನು ನಿಲ್ಲಿಸದಿದ್ದರೂ ಚಿಂತೆ ಇಲ್ಲ. ಅದಕ್ಕಿಂತಲೂ ಸಾವಿರ ಪಾಲು ಕ್ರೂರವಾಗಿರುವಂತಹ ಈ ಮಾಂಸಾಹಾರಿಗಳ ತಾಮಸಿಕ ಗುಣವನ್ನು ತಡೆಗಟ್ಟಿದಂತೆ ಆಗುವುದು. ಅಂತೂ ಮಾಂಸಾಹಾರವು ಮನುಷ್ಯನ ಆಹಾರವಲ್ಲ. ಮನುಷ್ಯನು ತನ್ನ ದೇಹಪುಷ್ಟಿಗೆಂದು ಅದನ್ನು ಆಹಾರವಾಗಿ ಮಾಡಿಕೊಂಡಿರುವನು. ಅದಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದು ಯೋಗ್ಯವಲ್ಲ.

ಪ್ರೊಫೆಸರ್ ಬಿನ್ಯ ಸರಕಾರರ ಅಭಿಪ್ರಾಯಗಳು:— ಮನುಷ್ಯನು ತಾನು ಪ್ರಾಣಿಗಿಂತಲೂ ಶ್ರೇಷ್ಠನು, ತನ್ನಲ್ಲಿ ಅವುಗಳನ್ನು ಆಳುವಂತಹ ತ್ರಾಣವು ಇದೆ ಎಂಬ ತತ್ವವನ್ನು ಸೂಚಿಸಲು ಈ ಪಶುಬಲಿಯನ್ನು ಪ್ರಾರಂಭಿಸಿದನು. ಪೂರ್ವದಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನನ್ನು ಕೊಂದರೆ ಅದೊಂದು ದೊಡ್ಡ ಭೂಷಣವಾಗಿತ್ತು. ತಾನು ಗೆದ್ದ ವಸ್ತುಗಳನ್ನು ಪರರಿಗೆ ಬಹುಮಾನವಾಗಿ ಕೊಡುವುದು ಅವನಲ್ಲಿರುವ ಗುಣಗಳಲ್ಲಿ ಒಂದಾಗಿರುತ್ತದೆ. ಅದೇ ಕ್ರಮವನ್ನು ಅನುಸರಿಸಿ ಮನುಷ್ಯನು ತಾನು ಹಿಡಿದುತಂದ ಮೃಗಗಳನ್ನು ದೇವರಿಗೆ ಪಾರಿತೋಷಕವಾಗಿ ಕೊಡುವುದರಿಂದ ದೇವರಿಗೆ ತುಂಬಾ ಆನಂದವಾಗುತ್ತದೆ ಎಂದೇ ಅವನ ಭಾವನೆಯಾಗಿತ್ತು. ತಮ್ಮ ಕ್ರೂರ ಕೃತ್ಯಗಳ ನೆಲೆಯು ಮಾತ್ರ ಅವರಿಗೆ ಗೊತ್ತಿರಲಿಲ್ಲ. ಅದೊಂದೇ ಅವರ ತಪ್ಪು.

ಪ್ರೊಫೆಸರ್ ವಿಧುಶೇಖರ ಶಾಸ್ತ್ರಿಗಳವರ ಅಭಿಪ್ರಾಯಗಳು:- ಆದಿಯಿಂದಲೂ ಪಶುಬಲಿಯು ಆಚರಣೆಯು ಹಲಕೆಲವು ಜಾತಿಗಳಲ್ಲಿ ನಡೆದುಬಂದ ಸಂಗತಿಯು ನಿಜವಾದುದು. ಆದರೆ, ಪುರಾಣಗಳನ್ನು ನೋಡಿದರೆ ಅದರಲ್ಲಿ, ಆಗಿನ ಕಾಲದಲ್ಲೂ ವಿಶಿಷ್ಟ ಪುರುಷರಲ್ಲಿ ಪಶುಬಲಿಯು ಹೇಯ ಕೆಲಸವೆಂದು ಅಭಿಪ್ರಾಯವಿತ್ತು. ಅಶ್ವಮೇಧವೂ ಪುರುಷಮೇಧವೂ ದೇಶಕ್ಕೆ ಹಿತಕಾರಿಯಾಗಿರುವುದಿಲ್ಲವೆಂದು ಆಗಿನ ಹಲವರ ಅಭಿಪ್ರಾಯಗಳನ್ನು ನಾವು ಓದಬಹುದು. ಮರಗಳನ್ನೂ ಕಾಯಿಪಲ್ಯಗಳನ್ನೂ ತಮ್ಮ ಆಹಾರಕ್ಕೆ ಉಪಯೋಗಿಸುವುದೂ ಒಂದು ವಿಧದಲ್ಲಿ ಮರಗಿಡಗಳ ವಧೆಯನ್ನು ಮಾಡಿದಂತಾಗುತ್ತದೆ ಎಂಬ ಅಭಿಪ್ರಾಯವೂ ಅವರಲ್ಲಿ ಮೂಡಿತ್ತು. ಜನರು ತಮ್ಮ ಅಭಿಪ್ರಾಯವನ್ನು ಸೂಚಿಸಿದರೆ ವಿನಹ ಅದನ್ನು ತಡೆಗಟ್ಟುವ ಹವಣಿಕೆಗೆ ಹೋಗಲಿಲ್ಲ. ಆದುದರಿಂದ ಬಲಿಯು ಯಥಾಪ್ರಕಾರ ನಡೆದು ಬಂದಿದೆ.

ಹಿಂದೂಧರ್ಮದಲ್ಲಿ ಜನರಿಗೆ ಸ್ವಾತಂತ್ರ್ಯವು ಬಹಳ. ಅವರೇನು ಮಾಡಿದರೂ ಶಾಸ್ತ್ರರೀತಿಯಿಂದಾಗಿ ಅವರನ್ನು ತಡೆಗಟ್ಟುವವರು ಯಾರೂ ಇಲ್ಲ. ನಾನಾ ನಮೂನೆಯ ಕ್ರಮಗಳು, ರೀತಿನೀತಿಗಳು ಅದರಲ್ಲಿ ಹುಟ್ಟಿಬರಲು ಇದೇ ಕಾರಣ. ಜಾತಿಗಳು ಹೆಚ್ಚಾಗಲು ಕಾರಣಗಳು ಇದೇ. ಗೌತಮಬುದ್ಧನು ಇದಕ್ಕೆ ತೀರ ವಿರೋಧಿಯಾಗಿದ್ದನು. ಆದರೆ ಎಲ್ಲರೂ ಅವನ ಮತವನ್ನು ಸೇರಲಿಲ್ಲ. ಕಾರಣ, ಅವನ ಮತವು ಎಲ್ಲರಿಗೂ ಸೇರುತ್ತಿರಲಿಲ್ಲ.

ಜಗತ್ತು ಯುದ್ಧಮಯವಾಗುವುದೆ?

(ಮಿ॥ ನಾರಾಯಣ ರೋಯ್‌ರವರು ಅಮೃತಬಜಾರ ಪತ್ರಿಕೆಯಲ್ಲಿ ಕೊಟ್ಟ ಲೇಖನದ ಸಾರಾಂಶ.)

ಈಗಿನ ಜನಾಂಗಗಳ ಭಿನ್ನತೆಯು ಅವರ ವಸಾಹತುಗಳಲ್ಲಿಯು ಜನರ ಅವಸ್ಥೆಯಿಂದ ಕಂಡುಬರುತ್ತಿದೆ. ಮೊತ್ತಮೊದಲು ರೋಮ್ ಪಟ್ಟಣವು ವಸಾಹತುಗಳನ್ನೇರ್ಪಡಿಸಲು ಬಹಳ ಹೆಸರುವಾಸಿಯನ್ನು ಪಡೆದಿತ್ತು. ಭೂಕಲವನ್ನು ಸುತ್ತಿ ತಮ್ಮ ಪ್ರಾಬಲ್ಯವನ್ನು ಪ್ರತಿಯೊಂದೆಡೆಯಲ್ಲಿ ತೋರಿಸಿ ವಸಾಹತುಗಳನ್ನು ಏರ್ಪಡಿಸಿದರವರು. ಹಾಗೆ ಮಾಡಲು ಕಾರಣವೇನಿರಬಹುದು? ಏನೊಂದೂ ತಿಳಿಯದ ಜನರನ್ನು ತಮ್ಮ ಶಸ್ತ್ರಾಸ್ತ್ರಗಳಿಗೆ ಬಲಿಕೊಟ್ಟು ಅವರ ಪ್ರದೇಶವನ್ನು ತಮ್ಮ ವಶಪಡಿಸಿದ ರೋಮನ್‌ಜನಾಂಗದ ಉದ್ದೇಶವಾದರೂ ಆದಾವದಿರಬಹುದು ಎಂಬ ಪ್ರಶ್ನೆ? ಜಗತ್ತಿನಲ್ಲಿ ನಮ್ಮಷ್ಟು ನಾಗರಿಕ ಜನಾಂಗವು ಬೇರೊಂದಿಲ್ಲ. ತಮ್ಮಂತೆ ಬಾಕಿ ಜನಾಂಗದವರನ್ನೂ ನಾಗರಿಕರನ್ನಾಗಿ ಮಾಡುವ ಉದಾತ್ತಭಾವನೆಯು ಅವರಲ್ಲಿ ಮೂಡಿತು. ಅದೇ ಅದರ ಕಾರಣ. ಅನೇಕ ಊರುಗಳನ್ನು ಗೆದ್ದರು, ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆದರೆ ಅದು ಬಹುಕಾಲ ಬಾಳಲಿಲ್ಲ. ತೀವ್ರವಾಗಿ ನಲಿಸಿತು. ಕಾರಣ ಸುಶಿಕ್ಷಿತ ಜನಾಂಗದ ವಿಪರೀತಧೋರಣೆಯಿಂದಾಗಿ. ಚಕ್ರಾಧಿಪತ್ಯದ ಅಡಿಗಲ್ಲು ಹಿಂಸೆ. ಪರರನ್ನು ಪೀಡಿಸಿಯೇ ಚಕ್ರಾಧಿಪತಿಗಳಾಗುವುದು. ಇಟಲಿಯು ಈಗ ಚಕ್ರಾಧಿಪತಿಯಾಗಲು ಸಾಧಿಸುತ್ತಿದೆ. ಅಧೀನಿಯದ ಜನರು ಸುಶಿಕ್ಷಿತರಲ್ಲ. ಅವರ ಜನಾಂಗವನ್ನು ಉದ್ಧರಿಸಬೇಕು, ಅದನ್ನು ಉಚ್ಚತರಗತಿಗೆ ತರಲು ನಮ್ಮಿಂದಸಾಧ್ಯ. ನಮ್ಮ ಅಧಿಪತ್ಯಕ್ಕೆ ಅದು ಒಳಗಾದರೆ ಇದೆಲ್ಲವೂ ಸುಲಭದಲ್ಲಿ ಆಗುವುದು ಎಂದು ಇಟಲಿಯು ಭಾವಿಸಿ ಬಡವರ ಮೇಲೆ ದಾಳಿಯಿತ್ತು ಹೋಗಿದೆ. ಇಂತಹ ಅಮೋಘ ಕೆಲಸದಲ್ಲಿ ತೊಡಗಿದ ಇಟಲಿಗೆ ನಾವು ಸಹಾಯವನ್ನೀಯಲಿಕ್ಕಿಲ್ಲವೆಂದು ಹಲವರು ಹೇಳಿದುದು ಸ್ತುತ್ಯ. ಆದರೆ ಬಾಕಿ ರಾಷ್ಟ್ರಗಳು ಇಟಲಿಯನ್ನು ಈ ರೀತಿಯಲ್ಲಿ ಹೋಗಗೊಡಲು ಬಿಟ್ಟುದು ಆಶ್ಚರ್ಯ. ಇಂಗ್ಲೆಂಡಿನ ಅವಸ್ಥೆಯಾದರೂ ಬೇರೆಯೆ, ಅವರನ್ನು ದೂರಿ ಫಲವಿಲ್ಲ.

ಯುರೋಪದ ಜನಾಂಗಗಳ ಅಂತಸ್ಥಿತಿಯೇ ಬೇರೆ. ಅವರೆಲ್ಲರೂ ತಾವೆಲ್ಲ ಪ್ರತ್ಯೇಕ ಜನಾಂಗದವರೆಂದು ತಿಳಿಯುತ್ತಾರೆ. ಮತ್ತು ಅವರಲ್ಲಾಗುವ ಯುದ್ಧಗಳು ರಾಜಕೀಯ ಯುದ್ಧಗಳು. ಐರೋಪದೇಶಕ್ಕಿಂಗೂ ಪರರಾಷ್ಟ್ರಗಳಿಗೆ ಯುದ್ಧವಾಗುವುದಾದರೆ, ಅದು ಪರರಾಷ್ಟ್ರಗಳನ್ನು ಉದ್ಧರಿಸುವ ಸಲುವಾಗಿ. ಆದ್ದರಿಂದ ಇಟಲಿಯಂತಹ ಸುಶಿಕ್ಷಿತ ಜನಾಂಗವು ಅಧೀನಿಯದಂತಹ ಕಾಡುಜನರನ್ನು ಉದ್ಧರಿಸುವ ಸಲುವಾಗಿ ಅದರ ಮೇಲೆ ದಾಳಿಯಿತ್ತು ಹೋದರೆ ದಾಯವಾದಿಗಳಾದ ಉಳಿದ ಐರೋಪ್ಯ ಜನಾಂಗದವರು ಅದನ್ನು ಕೇಳುವುದೆ?

ಈಗ ಇಟಲಿ ಇಂಗ್ಲೆಂಡುಗಳೊಳಗೆ ನಡೆಯುತ್ತಿರುವ ಚಳವಳಿಯು ಕೇವಲ ಅಣ್ಣತಮ್ಮಂದಿರೊಳಗೆ ಕೆಲಸದ ನಿಮಿತ್ತ ಉಂಟಾಗುವ ಜಗಳದಂತಿದೆ. ಒಂದೇ ಮಾತೆಯ ಮಕ್ಕಳೆಂಬುದನ್ನು ಅವರು ಮರೆತಿಲ್ಲ. ಅವರ ಪರಸ್ಪರ ಸ್ವಾರ್ಥ ಸಾಧನೆಯನ್ನು ಬಿಡಲಾಗುವುದೇ? ಮಿ॥ ಬರ್ನ್ಸರ ಹೇಳಿಕೆಯ ಮೇರೆಗೆ ಐರೋಪ್ಯ ಜನಾಂಗದವರೊಡನೆ ಜಗಳವಾಡುವುದಾದರೆ ಅದು ಭಯಂಕರ ಯುದ್ಧವಾಗಿಯೂ ಪರಿಣಮಿಸುವುದು. ಕಾರಣ, ಪರಕೀಯರನ್ನು ಸದೆಬಡೆಯಲು ಅವರು ಹೇಸುವವರಲ್ಲ. ಆಗ ಅವರ ಕಣ್ಣುಗಳಲ್ಲಿ ರಕ್ತವಿರುವುದಿಲ್ಲ. ಅದೇ ಅವರೊಳಗಾದರೆ ಅಷ್ಟೊಂದು ಕಠಿಣತರ ಸನ್ನಿವೇಶವು ಕಂಡುಬರುವುದಿಲ್ಲ.

ಐರೋಪ್ಯರ ರಾಜಧುರಂಧರತೆಯು ಶ್ರೇಷ್ಠ ಭಾಷಣಕರ್ತನಾದ ಅರಿಸ್ಟಾಟಲ್‌ನು ಎಂದಂತಿದೆ. ಅವನು ಹೇಳಿದುದೇನೆಂದರೆ "ಕೆಲವು ಮನುಷ್ಯರು ಸ್ವಾತಂತ್ರ್ಯಪ್ರಿಯರು ಸ್ವತಂತ್ರರಾಗಿಯೇ ಅವರಿರುವರು. ಕೆಲವರು ಗುಲಾಮರಾಗಿರುವವರು, ಅವರ ಹಣೆಬರಹವೇ ಅದಾಗಿರುವಾಗ ಅವರು ಆ ವೃತ್ತಿಯನ್ನು ಅನುಸರಿಸುವುದರಲ್ಲಿ ಹಾನಿಯಿಲ್ಲ." ಐರೋಪ್ಯರ ಭಾವನೆಯೆಂದರೆ ಐರೋಪ್ಯರಲ್ಲದ ಇತರ ಜನಾಂಗದವರು ಸ್ವಭಾವತ ಗುಲಾಮರಾಗಿರಲು ಅರ್ಹರು ಎಂಬುದಾಗಿ. ಕಳೆದ ಮಹಾಯುದ್ಧದಲ್ಲಿ ನಾಗರಿಕ ಜನಾಂಗಗಳೊಳಗೆ ಯುದ್ಧವಾಯಿತು. ಅದಕ್ಕೆ ಮಾತ್ರ ಅನಾಗರಿಕರನ್ನು ಸಹಾಯಕ್ಕಾಗಿ ಕರೆದರು, ಏನೋ ಅನಾಗರಿಕರ ಭಾಗ್ಯ. ಆದರೆ ಇಂದಿನ ಅವಸ್ಥೆಯು ಬೇರೆ. ಇದು ನಾಗರಿಕ ಮತ್ತು ಅನಾಗರಿಕ ಜನಾಂಗಗಳೊಳಗೆ ನಡೆದ ಯುದ್ಧವಾದುದರಿಂದ ಬಾಕಿಯವರೇಕೆ ಸಹಾಯಮಾಡಬೇಕು? ನಾಗರಿಕ ಇಟಲಿಯು ಅಬಿಸೀನಿಯವನ್ನು ಗೆದ್ದು, ಅಲ್ಲಿ ನಾಗರಿಕತೆಯನ್ನು ಬೀರಲಿ, ಆಗ ಎಲ್ಲಿದೆ ಜಗತ್ತಿನ ಯುದ್ಧ. ಎಲ್ಲರೂ ಹೇಳಿದರು ಜಗತ್ತು ಯುದ್ಧಮಯವಾದೀತು ಎಂದು. ಆದರೆ ಈಗ ಅದರ ಕುರುಹುಗಳೇ ಕಂಡುಬರುವುದಿಲ್ಲ.

ಇಟಲಿಯ ದಾಯವಾದಿಗಳು ಈ ಯುದ್ಧದಲ್ಲಿ ತಾವು ಇತ್ತಂಡದವರಿಗೂ ಸಹಾಯಮಾಡುವುದಿಲ್ಲವೆಂದು ತಟಸ್ಥರಾಗಿದ್ದಾರೆ. ಇದರಿಂದಾಗಿ ಇಟಲಿಗೆ ಸ್ವಲ್ಪ ಸ್ಫೂರ್ತಿ ಕೊಟ್ಟಂತಾಯಿತು. ನಿಸ್ಸಹಾಯಕ ರಾಜ್ಯವಾದ ಅಬಿಸೀನಿಯವನ್ನು ವಶಪಡಿಸಲು ಇಟಲಿಗೆ ಅಸಾಧ್ಯವೆ? ಕುಲನೆಯನ್ನು ಮಾಡಿದ್ದಲ್ಲಿ, ರಾಕ್ಷಸನಿಗೂ ಕುಬ್ಜನಿಗೂ ಯುದ್ಧವಾದ ಹಾಗಾಗುವುದು, ಪ್ರಕೃತದ ಸ್ಥಿತಿ. ಇಂತಹ ಸಮಯದಲ್ಲಿ ಬಾಕಿಯವರು ತಟಸ್ಥರಾದರೆ ಕುಬ್ಜನನ್ನು ಕೊಲ್ಲಲು ರಾಕ್ಷಸನಿಗೆ ಸಹಾಯಮಾಡಿದಂತಾಯಿತಲ್ಲ. ಅಂತಹ ಅವಸ್ಥೆಯು ಈಗ ಘಟಿಸಿದೆ.

ಇಟಲಿಯು ತನ್ನಿಂದಾದಷ್ಟು ಮಟ್ಟಿಗೆ ಅಬಿಸೀನಿಯಾವನ್ನು ಕೈವಶಮಾಡಲು ಪ್ರಯತ್ನಿಸುವುದು ದಿಟ. ಆದರೆ ಪರಾಧೀನರಾಗಿ ಜೀವಿಸುವ ಆಶೆಯು ಅಬಿಸೀನಿಯಾದವರಿಗಿಲ್ಲ. ಅಂತೂ ರಾಕ್ಷಸ ಕುಬ್ಜರೊಳಗಾಗುವ ಈ ಯುದ್ಧದ ಪರಿಣಾಮವೇನಾದೀತೆಂದು ಮತ್ತೆ ಹೇಳಬೇಕೆ?

ಉಡುಪಿ.

ಇದೇ ತಾ. ೬ಕ್ಕೆ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ನಮೂನೆಯಲ್ಲಿ ನವೀನವಾಗಿ ಜನ್ಮವೆತ್ತಿರುವ "ಕೆನರಾ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್"ನ ಪ್ರಾರಂಭೋತ್ಸವವು ನಿವೃತ್ತ ಡಿ. ಮತ್ತು ಸೆ. ಜಡ್ಜಿಯವರಾದ ಶ್ರೀ ಎಮ್. ನರಸಿಂಗ್ ರಾವ್, ಬಿ. ಎ., ಎಮ್. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಲಪ್ತಕಾಲಕ್ಕೆ ಅಧ್ಯಕ್ಷರು ಅಗ್ರಾಸನವನ್ನು ಅಲಂಕರಿಸಿದೊಡನೆ ಸ್ಥಳೀಯ "ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್", ಹಾಗೂ 'ಕೆನರಾ ಇನ್ವೆಸ್ಟ್‌ಮೆಂಟ್ಸ್, ಲಿಮಿಟೆಡ್'ನ ಅಧ್ಯಕ್ಷರೂ, ಮೇಲಣ ವಿಮಾಕಂಪೆನಿಯ ಜನಕರೂ ಆಗಿರುವ ಶ್ರೀ ಡಾ॥ ಟಿ. ಮಾಧವ ಪೈ ಎಮ್. ಬಿ., ಬಿ. ಎಸ್. ರವರು ಪೀಠಿಕಾರೂಪವಾಗಿ ಮತ್ತು ಸದ್ರಿ ವಿಮಾಕಂಪೆನಿಯ ಆಡಳಿತ ನೋಡತಕ್ಕದ್ದಿರುವ ಬೇಂಕಿಂಗ್ ಸಿಂಡಿಕೇಟಿನ ಸವಿವರವಾದ ಅನುಭವ ಕಾರ್ಯಕಲಾಪ ಹಾಗೂ ಉಪಯುಕ್ತತೆಯ ಕುರಿತು ಪ್ರಸ್ತಾಪಿಸಿದುದಲ್ಲದೆ, ಈಗಾಗಲೇ ಸದ್ರಿ ಕಂಪೆನಿಗೆ ಐದು ಲಕ್ಷಕ್ಕೆ ಮೇಲ್ಪಟ್ಟ ನವೀನ ಪ್ರೊಪೋಜಲುಗಳು ಬಂದಿವೆಯಾಗಿ, ಊರ ಪರವೂರ ಮಹನೀಯರೂ ದೇಶಬಾಂಧವರೂ ಸದ್ರಿ ಕಂಪೆನಿಯನ್ನು ಉದಾರಾಶ್ರಯದಿಂದ ಪ್ರೋತ್ಸಾಹಿಸಿ ಸಹಕರಿಸಬೇಕೆಂದು ವಿನಂತಿ ಮಾಡಿದರು. ಆ ಮೇಲೆ ಶ್ರೀ ಎಸ್. ಯು. ಪಣಿಯಾಡಿಯವರು ನಮ್ಮ ಜಿಲ್ಲೆಯ ವಿಮಾ ಪ್ರಚಾರಕರಲ್ಲಿ ಅಗ್ರಗಣ್ಯರೂ ಸಾಹಸಿಗಳೂ ಜನಪ್ರಿಯರೂ ಆಗಿರುವ ಮ. ಕೊಟ್ಟಿಶಾರ ಬಂಧುಗಳನ್ನು ಅಭಿವಂದನಮಾಡುತ್ತ, ಸಮಗ್ರ ಭಾರತದಲ್ಲಿ ಹಾಗೂ ಅಖಿಲಕರ್ನಾಟಕದಲ್ಲಿ ಮೇಲಾಗಿ ನಮ್ಮೂರಲ್ಲಿ ಕೂಡ ತಕ್ಕ ವ್ಯವಸಾಯ ಪ್ರಚಾರಗಳನ್ನು ಗೈಯ್ಯಲ್ಲಿ ಸದ್ರಿ ಕಂಪೆನಿಯು ಯಶಸ್ವಿಯಾಗಿ ವೃದ್ಧಿಗೊಳ್ಳಬಹುದಾದ ರೀತಿ ನೀತಿಗಳನ್ನು ದೀರ್ಘ ಭಾಷಣದಿಂದ ಮುಂದಿಟ್ಟುಮಾಡಿ, ಸದ್ರಿ ಕಂಪೆನಿಗೆ ಶ್ರೇಯಸ್ಸನ್ನು ಕೋರಿದರು. ಅನಂತರ ಶ್ರೀ ದಳವಾದ ಎ. ಎಲ್. ನಾರಾಯಣ ರಾವ್, ಬಿ. ಎ. ಎಲ್. ಎಡ್ವೊಕೇಟ್, ಆರ್. ಫೆರ್ನಾಂಡಿಸ್, ಬಿ. ಎ. ಎಲ್. ಟಿ. ಮುಖೋಪಾಧ್ಯಾಯ, ಬೋ. ಹ್ಯಾ ಸ್ಕೂಲ್ ಸದಾಶಿವರಾವ್ ಗರೂಡದವರೂ ಸಂದರ್ಭೋಚಿತ ಭಾಷಣಗಳಾದ ಸದ್ರಿ ವಿಮಾಕಂಪೆನಿಗೆ ದೀರ್ಘಾಯುಸ್ಸನ್ನೂ ಅಭಿವೃದ್ಧಿಯನ್ನೂ ಕೋರಿದರು. ಕೊನೆಗೆ ಮಾನ್ಯ ಅಧ್ಯಕ್ಷರು ಉಡುಪಿ ವೈಶಿಷ್ಟ್ಯದ ಕುರಿತೂ, ವಿಮಾ ಕಂಪೆನಿಗಳ ಮುಖ್ಯ ಕರ್ತವ್ಯದ ಕುರಿತೂ ಚೊಕ್ಕವಾದ ಭಾಷಣ ಮಾಡುತ್ತಾ, ಸದ್ರಿ ಕಂಪೆನಿಯ ಹಿತವನ್ನು ಬಯಸಿದರು.

(೧೧ನೇ ಪುಟದಿಂದ ಮುಂದರಿಸಿದುದು)

ಶ್ರೀ ಎ. ಬಿ. ಶೆಟ್ರು, (ಕಾ) ಶ್ರೀ ಕೋಟಿ ಶೆಟ್ರು ಮತ್ತು ಮಿ॥ ಬೆಂಜಿಯಮ್ ಸೋಜರು. ಬಂಟ್ವಾಳ ಸರ್ಕ್ಲ:—ಶ್ರೀ ಬಿ ವೈಕುಂಠ ಬಾಳಿಗರು, (ಕಾ) ಮತ್ತು ಶ್ರೀ ಬಿ. ರಾಮ ಭಟ್ಟರು. ಪಾಣೆಮಂಗಳೂರು ಸರ್ಕ್ಲ:—ಶ್ರೀ ಸದಾಶಿವ ಅಡಿಗರು, ಶ್ರೀ ಶ್ರೀನಿವಾಸ ಬಾಳಿಗರು ಮತ್ತು ಶ್ರೀ ಕೆ ಶ್ರೀನಿವಾಸ ಆಳ್ವರು. ಕೋಟೆಕಾರ್ ಸರ್ಕ್ಲ:—ಶ್ರೀ ಲಕ್ಷ್ಮಣ ಶೆಣವರು. ಮುಸಲ್ಮಾನ ರಿಸರ್ವ್ ಸೀಟಿಗೆ ಮಿ॥ ಡಿ. ಎಲ್. ಅಹಮ್ಮದರು. (ಕಾ) ಗುರುಪುರ ಸರ್ಕ್ಲ:—ಶ್ರೀ ಕೆ. ರಘುಚಂದ್ರ ಬಲ್ಲಾಳರು. ಮಂಗಳೂರಿನ ಯುರೋಪಿಯನ್ ಸೀಟಿಗೆ:— ಪಿಯರ್ಸ್ ಲೆಸ್ಲಿ ಕಂಪೆನಿಯ ಮೆನೆಜರರಾದ ಮಿ॥ ಪಪ್ಪಿಸರು. ಸುರತ್ಕಲ್ ಸರ್ಕ್ಲನ ನೋಮಿನೇಶನ್ ಮತ್ತು ಪೋಲಿಂಗಿನ ಕುರಿತು ಸಬ್ ಜಡ್ಜರು ಇಂಜಂಕ್ಷನ್ ಕೊಟ್ಟಿರುತ್ತಾರೆ. ಈ ಸರ್ಕ್ಲನ ಕಾಂಗ್ರೆಸ್ ಉಮೇದ್ವಾರಿಯಾದ ಶ್ರೀ ಕೋಟು ಶೆಟ್ರು, ವೋಟರು ಪಟ್ಟಿಯ ದೋಷದ ಕುರಿತು ಸಬ್ ಕೋರ್ಟಿನಲ್ಲಿ ವ್ಯವಹರಣೆ ಮಾಡಿದುದೇ ಇದಕ್ಕೆ ಕಾರಣ.

ಪುತ್ತೂರು ತಾಲೂಕು . ಸುಳ್ಯ ಸರ್ಕ್ಲ ಶ್ರೀ ಚಿನ್ನಪ್ಪಗೌಡರು (ಕಾಂಗ್ರೆಸ್) ಪ್ರತಿಸ್ಪರ್ಧಿಯಿಲ್ಲ. ಕೊಕ್ಕಡ ಸರ್ಕ್ಲ ಶ್ರೀ ನೊಳಕ್ಕಿ ಶಿವರಾಯರು (ಕಾ) ಪ್ರತಿಸ್ಪರ್ಧಿಯಿಲ್ಲ. ವಿಟ್ಲ ಸರ್ಕ್ಲ ಶ್ರೀ ಎಸ್. ಸದಾಶಿವ ರಾವ್ (ಕಾ) ಮತ್ತು ಶ್ರೀ ಕೆ. ಉಗ್ಗಪ್ಪ ಶೆಟ್ರು. ಪುತ್ತೂರು ಸರ್ಕ್ಲ. ಶ್ರೀ ಅಬಲಾಡಿ ವೆಂಕಪ್ಪ ರೈಗಳು. ಸ್ತ್ರೀಯರ ರಿಸರ್ವ್ ಸೀಟಿಗೆ ಮಿಸೆಸ್ ವೆಂಕಪ್ಪ ರೈ ಮತ್ತು ಶ್ರೀಮತಿ ಅರಿಯಡ್ಕ ಚೆನ್ನಮ್ಮ. ಬೆಳ್ತಂಗಡಿ ಸರ್ಕ್ಲ:— ಶ್ರೀ ಬಿ. ಮಂಗೇಶರಾಯರು (ಕಾ) ಶ್ರೀ ದಾಮೋದರ ಬಾಳಿಗರು. ಉಪ್ಪಿನಂಗಡಿ—ಶ್ರೀ ಬಿ. ಸೋಮಪ್ಪ ರೈಗಳು (ಕಾ) ಶ್ರೀ ರಾಮಣ್ಣ ಗೌಡರು ಮತ್ತು ಶ್ರೀ ಪ್ರಭಾಕರರಾಯರು.

ಕಾಸರಗೋಡು:— ಮಂಜೇಶ್ವರ ಸರ್ಕಲ್ ಶ್ರೀ ಅಮ್ಮಾಕೃಷ್ಣರಾಯರು (ಕಾಂಗ್ರೆಸ್) ಮತ್ತು ಶ್ರೀ ವಾಸಣ್ಣ ಆಳ್ವರು. ಮುಸಲ್ಮಾನ ರಿಸರ್ವ್ ಸೀಟಿಗೆ— ಮಿ. ಎಮ್. ಎ. ಮೂಸ್ಸಾ, ಮಿ. ಮುಹಮ್ಮದ್ ಬ್ಯಾರಿ ಮತ್ತು ಮಿ. ಅಬ್ದುಲ್ ಕುಂಞ. ಕುಂಬಳೆ ಸರ್ಕಲಿಗೆ ಶ್ರೀ ಪುಂಡಿಗ ಕೃಷ್ಣಭಟ್ಟರು (ಕಾ) ಪುಂಡಿಗೆ ಮಹಾಲಿಂಗ ಭಟ್ಟರು ಮತ್ತು ವಾಸುದೇವ ನಾಯ್ಕರು. ಕಾಸರಗೋಡು ಸರ್ಕಲ್—ಡಾ॥ ಪಿ. ವಿಠ್ಠಲ ಭಂಡಾರಿಗಳು (ಕಾ) ಮುಸಲ್ಮಾನ ರಿಸರ್ವ್ ಸೀಟಿಗೆ—ಮಿ. ಮಹಮ್ಮದ್ ಶಿವಾಬುದ್, ಮಿ. ಮುಹಮ್ಮದ್ ಶರೀಫ್ ಮತ್ತು ಮಿ. ಅಬ್ದುಲ್ಲ ಸಾಹೇಬ್. ಮುಳಿಯಾರ್—ಮಿ. ಕುಂಞ ಕಲಂದರ್ ಬ್ಯಾರಿ ಮತ್ತು ಶ್ರೀ ಕೋಡೋತ್ತು ಕುಂಞಂಬು ನಾಯರ್. ಹೊಸದುರ್ಗ—ಶ್ರೀಯುತ ಕೋಮನ್ ನಾಯರ್, ಶ್ರೀ ಕುಂಞಂಬು ನಾಯರ್ ಮತ್ತು ಶ್ರೀ ಕೆ. ಪಿ ನಾರಾಯಣದಾಸ್, ಆದಿದ್ರಾವಿಡ ಸೀಟಿಗೆ—ಶ್ರೀಗಳಾದ ಮುಂದರ ಮತ್ತು ಗುರುವ ಮೇಸ್ತ್ರಿ.

ಕಾರ್ಕಳ ತಾಲೂಕು: ನೆಲ್ಲಿಕಾರು ಸರ್ಕಲ್—ಶ್ರೀ ವರ್ಮಶೆಟ್ಟಿ (ಕಾಂಗ್ರೆಸ್) ಪ್ರತಿಸ್ಪರ್ಧಿಯಿಲ್ಲ. ಹೆಬ್ರಿ—ಶ್ರೀ ಭುಜಂಗ ಬಲ್ಲಾಳರು (ಪ್ರತಿಸ್ಪರ್ಧಿಯಿಲ್ಲ.) ಕಾರ್ಕಳ—ಶ್ರೀ ಸಿಟ್ಟೆ ಮಂಜಪ್ಪ ಅಧ್ಯಂತಾಯರು (ಕಾ) ಪ್ರತಿಸ್ಪರ್ಧಿಯಿಲ್ಲ. ಮೂಡಬಿದ್ರೆ—ಶ್ರೀ ಕಡಂದಲೆ ದೇಜು ಶೆಟ್ರು ಮತ್ತು ಶ್ರೀ ಕರಿಯಂಗಳ ಮುತ್ತಯ ಶೆಟ್ರು, ಶ್ರೀ ಕೆ. ಸದಾಶಿವ ಭಟ್ಟರು. ಆದಿದ್ರಾವಿಡ ಸೀಟಿಗೆ— ಶ್ರೀಗಳಾದ ಐತು, ಬಾಡು ಮುಗ್ಗೇರ, ಈಶ್ವರ ಮತ್ತು ಗೋಪಾಲ ಶಾಲೆನ್ನರು.

ಕುಂದಾಪುರ:—ಬೈಂದೂರು ಸರ್ಕಲ್—ಶ್ರೀ ಕೆ. ವೆಂಕಪ್ಪ ಶೆಟ್ರು (ಕಾಂಗ್ರೆಸ್) ಮತ್ತು ಶ್ರೀ ಮಹಾಬಲ ಹೊಳ್ಳರು. ವಂಡ್ಸೆ—ಶ್ರೀ ಸೂರಪ್ಪಯ್ಯನವರು (ಕಾ) ಮತ್ತು ಶ್ರೀ ಅಂಕಣ್ಣ ಶೆಟ್ರು. ಕುಂದಾಪುರ—ಶ್ರೀ ಪುಂಡಲೀಕ ಕಾಮತರು (ಕಾ) ಶ್ರೀ ಒಡೇರ ಹೋಬಳಿ ರಾಮಣ್ಣ ಶೆಟ್ರು ಮತ್ತು ಶ್ರೀ ನಾಗಪ್ಪ ಜೋಳ್ಕರು. ಸ್ತ್ರೀಯರ ಸೀಟಿಗೆ—ಶ್ರೀಮತಿ ಸುಶೀಲಾ ಬಾಯಿ ಉಡುಪರು. ಬಸರೂರು ಸರ್ಕಲ್—ಶ್ರೀ ಬಿ. ಶಿವರಾಮ ಶೆಟ್ರು (ಕಾ) ಮತ್ತು ಶ್ರೀ ಚಂದ್ರಶೇಖರ ಅಡಿಗರು.

(ಉಳಿದುದು ಈ ನಡೆಗೆ ಮುಂದರಿಯುವುದು)

WANTED

Energetic, Active and Influential men to work as organisers and ;ents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, ngalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purnaih Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ

ಸಾರ್ಸ ಪರಿಲಾ
ಶಕ್ತಿ, ರಕ್ತಶಕ್ತಿ ಪರಮೌಷಧ
೮೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳುತ್ತಾರೆ.
ಡಾ॥ ಗೌತಮ ರಾವ್
ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೩
ಸೋಲ್ ಏಜಂಟ್ಸ್— ಪಾ ಕಂಪೆನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

THE 1935 MODEL
HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA—AND—MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds Cuts, Colds, Headache It is a complete substitute for the domestic medicine chest Try once this unequalled remedy In ¼oz tin As 3/- In oz jar As 12/-

Superior Red Balm For relieving pains in muscles and on skin Directions for use with the bottle Price As 12 - only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as redical remedy and warmly recommed it All those who suffer from worms, children and adults try this unique remedy and be freed from your ailment Price As 10 per packet

Pocket Inhaler For coughs and hoarseness, headache catarrch colds, use this inhaler and you will be relieved immediately Price per inhaler As 6 As 8

Po-Ho Fluid For Asthma colds indigestion toothache lumbago, a sure remedy in all cases. Price As 6 and Re 1/ per phial

Cough Cure An infallible remedy for coughs of all kinds bronchitis hoarseness Particulars in bottle Price As 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As. 1/3, 2, 6, 3/-, 4,

Basel Mission Book Depot
Mangalore, Branches in Codialbail Hubli, Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ಸಂಪಾದಕರಿಗೆ ಟಪಾಲು ಪೆಟ್ಟಿಗೆ.

[ಪತ್ರಕಾರರು ಕೊಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಸುಳ್ಯ ಸರ್ಕಲಿನ ಓಟರ ಮಹಾಶಯರಿ

ಇದೇ ನವಂಬರ ೧ನೇ ತಾರೀಕಿನ "ಸ್ವದೇಶಾಭಿಮಾನಿ"ಯಲ್ಲಿ ಸುಳ್ಯ ಸರ್ಕಲಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಿಕೆ ಚುನಾವಣೆಯ ಕುರಿತು ಓಟರರೊಬ್ಬರ ವಿನಂತಿಯು ಪ್ರಕಟವಾದ್ದು ಕಾಣುತ್ತದೆ. ಅದರಲ್ಲಿ, ಸಮಗ್ರ ಭಾರತವೇ ಭಗೀರಥ ಪ್ರಯತ್ನದಿಂದ ಕಾಂಗ್ರೆಸಿನ ಜಯವನ್ನು ಹಾರೈಸುತ್ತಿರುವಾಗ್ಗೆ ಸುಳ್ಯ ಸರ್ಕಲಿನ ಓಟರರು ಕಾಂಗ್ರೆಸ್ ಉಮೇದ್ವಾರರಿಗೆ ತಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ಸೂಚಿಸುತ್ತಾರೆ. ಆದರೆ, ಸುಳ್ಯ ಸರ್ಕಲಿನ ನೆರೆ ಸರ್ಕಲ್ ಮತ್ತು ತಾಲೂಕಿನ ಮುಖ್ಯ ಪಟ್ಟಣವಾದ ಪುತ್ತೂರಲ್ಲಿಯೂ, ಅದಕ್ಕೆ ತಾಗಿರುವ ವಿಟ್ಲ ಸರ್ಕಲಿನಲ್ಲಿಯೂ, ಇನ್ನು ಈ ಜಿಲ್ಲೆಯ ಇತರ ಅನೇಕ ಕಡೆಗಳಲ್ಲಿ ಕೂಡಾ ಸ್ವತಂತ್ರ ಪಕ್ಷದ ಉಮೇದ್ವಾರರು ಚುನಾವಣೆಗೆ ನಿಂತಿರುವಾಗ್ಗೆ ಅವರ ವಿಷಯಗಳನ್ನೆಲ್ಲಾ ಬಿಟ್ಟು ಬರೀ ಸುಳ್ಯ ಸರ್ಕಲಿನಲ್ಲಿ ಜಿಲ್ಲಾ ಬೋರ್ಡಿಗೆ ನಿಂತಿರುವ ಕಾಂಗ್ರೆಸ್ ಪಕ್ಷದ ಉಮೇದ್ವಾರರನ್ನು ಸಮರ್ಥಿಸಿ ಬರೆದ ಈ ಲೇಖನವನ್ನು ನೋಡಿದರೆ ಈ ಓಟರರಿಗೂ ಆ ಕಾಂಗ್ರೆಸ್ ಉಮೇದ್ವಾರರಿಗೂ ಯಾವುದಾದರೊಂದು ಸಂಬಂಧವಿದೆಯೋ? ಅಥವಾ ಸ್ವತಂತ್ರಪಕ್ಷದ ಉಮೇದ್ವಾರನ ಮೇಲೆ ಯಾವುದಾದರೂ ವಕ್ರದೃಷ್ಟಿಯಿದೆಯೋ? ಎಂಬ ಯೋಚನೆಗೆ ಅವಕಾಶವಾಗುತ್ತದೆ.

ಇರಲಿ. ಕಾಂಗ್ರೆಸ್ ಉಮೇದ್ವಾರರಿಗೇ ಓಟು ಕೊಡಬೇಕೆಂತ ಜನರಿಗೆ ತುಂಬಾ ಮನಸ್ಸಿರಬಹುದು. ಆದರೆ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಿವಿಲ್ ಬೋರ್ಡಿನವರು ಕಾಂಗ್ರೆಸಿನ ಹಿತದೃಷ್ಟಿಯಿಂದ ಎಷ್ಟೋ ವರ್ಷಗಳಿಂದ ದೇಶಸೇವೆಯನ್ನು ಮಾಡುತ್ತಿರುವವರನ್ನು ಆರಿಸದೆ, — ಜಾತಿಭೇದವನ್ನು ಕಲ್ಪಿಸಬಾರದೆಂಬುದು ಕಾಂಗ್ರೆಸಿನ ಮುಖ್ಯ ತತ್ವವಾಗಿದ್ದರೂ — ಗೌಡಸಮಾಜದವರನ್ನೇ ಆರಿಸಬೇಕೆಂಬ ಜಾತಿವಾತ್ಸಲ್ಯವನ್ನು ಕಲ್ಪಿಸಿಕೊಂಡು ವಕೀಲ ಎಸ್ ಚನ್ನಪ್ಪಗೌಡರನ್ನು ಇವರ ಯಾವ ದೇಶಸೇವೆಯನ್ನು ಕಂಡು ಕಾಂಗ್ರೆಸಿನ ಪರವಾಗಿ ಆರಿಸಿದರೋ ಎಂತ ತಿಳಿದುಬರುವುದಿಲ್ಲ. ಅಲ್ಲದೆ ಪತ್ರಕಾರರು ಎಸ್ ಚನ್ನಪ್ಪಗೌಡ ಬಿ ಎ ಬಿ ಎಲ್ ವಕೀಲ ಎಂತ ಮಾತ್ರ ಕಾಂಗ್ರೆಸ್ ಉಮೇದ್ವಾರರನ್ನು ಬರೆದಿರುತ್ತಾರಲ್ಲದೆ ಅವರು ಕಾಂಗ್ರೆಸಿಗೆ ಸೇರಿ ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಯಾವ ಮಹತ್ಕಾರ್ಯಗಳನ್ನು ಮಾಡಿರುತ್ತಾರೆ? ಎಷ್ಟು ಸಲ ಜೈಲಿಗೆ ಹೋಗಿರುತ್ತಾರೆ? ಎಷ್ಟು ಸಲ ಲಾಠಿಪ್ರಹಾರಕ್ಕೆ ಗುರಿಯಾಗಿರುತ್ತಾರೆ? ಕಾಂಗ್ರೆಸಿಗೆ ಸೇರಿ ಎಷ್ಟು ಸಮಯವಾಯಿತು? ಇವರು ದಿನಕ್ಕೆ ಎಷ್ಟು ಗಜ ನೂಲು ಮಾಡುತ್ತಾರೆ? ಖಾದಿಯನ್ನೇ ಧರಿಸುತ್ತಾರೋ? ಮತ್ತು ಇನ್ನು ಮುಂದೆಯೂ ಧರಿಸುವರೋ? ಕಾಂಗ್ರೆಸಿಗಾಗಿ ಯಾವ ತನ್ನ ತನುಮನಧನಗಳನ್ನು ಅರ್ಪಿಸಿರುತ್ತಾರೆ? ಈ ವರ್ಷ ಜಿಲ್ಲಾ ಬೋರ್ಡ್ ಚುನಾವಣೆ ಬರುತ್ತದೆಂತ ಬರೇ ನಾಲ್ಕಾಣೆ ಕೊಟ್ಟು ಕಾಂಗ್ರೆಸಿಗೆ ಸೇರಿದ ಮೆಂಬರರೋ? ಎಂಬ ಯಾವುದೊಂದು ವಿವರವನ್ನೂ ಸೂಚಿಸಲಿಲ್ಲ. ಆದುದರಿಂದ ದಯಮಾಡಿ ಮೇಲಿನ ವಿಷಯಗಳನ್ನೆಲ್ಲಾ ವಿವರವಾಗಿ ಸೂಚಿಸಿದರೆ ಓಟರರಿಗೆ ತುಂಬಾ ಉಪಕಾರವಿತ್ತು.

ಮುಖ್ಯವಾಗಿ, ಬೆಕ್ಕು ಸನ್ಯಾಸಿಯಾದಂತೆ ತನ್ನ ಕಾರ್ಯಕ್ಕಾಗಿ ಕಾಂಗ್ರೆಸ್ ಮೆಂಬರರೆನ್ನಿಸಿಕೊಂಡು ಚುನಾವಣೆಗೆ ನಿಲ್ಲುವ ಉಮೇದ್ವಾರರನ್ನು ಚುನಾಯಿಸುವುದು ಮೇಲೋ? ಸಮಯ ಬಂದಂತೆ ನಟಿಸದೆ ಸ್ವತಂತ್ರಪಕ್ಷದವರಾಗಿ ಇದಿರುಬಂದರೂ ಸ್ವಾಭಾವಿಕವಾಗಿ ಕಾಂಗ್ರೆಸ್ ತತ್ವಕ್ಕನುಗುಣವಾಗಿ ಕೆಲಸಮಾಡುವವರನ್ನು ಚುನಾಯಿಸುವುದು ಮೇಲೋ? ಎಂಬ ವಿಷಯವನ್ನು ಓಟರರು ಚೆನ್ನಾಗಿ ವಿಚಾರಿಸಿಕೊಂಡು ತಮ್ಮ ಅಮೂಲ್ಯವಾದ ಓಟನ್ನು ಸದ್ವಿನಿಯೋಗ ಪಡಿಸಿಕೊಳ್ಳುವರೆಂಗಿ ನಂಬಿರುತ್ತೇನೆ.

ಕಾಂಗ್ರೆಸ್ ಸದಸ್ಯರಲ್ಲೊಬ್ಬ.

ಜಿಲ್ಲಾ ಬೋರ್ಡು ಚುನಾವಣೆಯೂ ಕಾಂಗ್ರೆಸ್ ಪಕ್ಷವೂ.

ಇದೇ ತಿಂಗಳ ತಾ. ೨೫ಕ್ಕೆ ಆಗುವ ನಮ್ಮ ಜಿಲ್ಲಾ ಬೋರ್ಡು ಚುನಾವಣೆ ಸಂಬಂಧವಾದ ಕಾಂಗ್ರೆಸ್ ಸಿವಿಲ್ ಬೋರ್ಡಿನ ನೀತಿನಿರ್ವಹಣೆಗಳು ಸಖೇದಾಶ್ಚರ್ಯವನ್ನುಂಟುಮಾಡುವ ಸಂಗತಿಗಳಾಗಿವೆ. ಕಾರ್ಕಳ ಸರ್ಕಲಿಗೆ ಇಲ್ಲಿಯ ವಕೀಲ ಶ್ರೀ ಕೆ ಸದಾಶಿವ ಭಟ್ಟರವರು ಕಾಂಗ್ರೆಸ್ ಕಡೆಯ ಉಮೇದ್ವಾರರಾಗುವರೆಂದು ಈ ಮೊದಲು ಪ್ರಕಟವಾಗಿತ್ತು. ಈಗ ಮಾತ್ರ ನಮ್ಮ ಜಿಲ್ಲೆಯ ಜಸ್ಟೀಸಪಾರ್ಟಿಯ ಪ್ರಮುಖರೊಳ ಶ್ರೀ ಕೆ ಮಹಾಬಲ ಹೆಗ್ಡೆರ ಬಲಗೈ ಎನ್ನಿಸುವ ಇಲ್ಲಿಯ ಶ್ರೀ ಮಂಜಪ್ಪ ಅಧ್ಯಂತಾಯರು ಶ್ರೀ ಭಟ್ಟರ ಬದಲಿಗೆ ಕಾರ್ಕಳ ಸರ್ಕಲಿನ ಕಾಂಗ್ರೆಸ್ ಪಕ್ಷದ ಉಮೇದ್ವಾರರಾಗುವರೆಂದು ವಿಶ್ವಾಸನೀಯ ಸೂತ್ರಗಳಿಂದ ತಿಳಿಯುತ್ತದೆ. ಶ್ರೀ ಅಧ್ಯಂತಾಯರು ಇಷ್ಟರವರೆಗೆ ಕಾಂಗ್ರೆಸಿನ ಧ್ಯೇಯದರ್ಶಿ ನೀತಿನ್ಯವಹಾರಗಳ ಪ್ರಬಲವಿರೋಧಿಗಳಾಗಿರುತ್ತ ಈಗ ಚುನಾವಣೆಯ ತಾರೀಕು ಹತ್ತಿರ ಬಂದು ಕಾಂಗ್ರೆಸ ಉಮೇದ್ವಾರರಿಗೆ ಎದುರಾಗಿ ನಿಲ್ಲುವವರಿಂದ ಯಶಸ್ಸು ದೊರೆಯಲಾರದೆಂದು ತಿಳಿದ ಮೇಲೆ ಮಾತ್ರ ಈಗ ಪಕ್ಷಬದಲಾವಣೆ ಮಾಡಿಕೊಂಡದರ ಮರ್ಮವನ್ನು ಮತದಾರರು ಅರಿತುಕೊಳ್ಳಲಾರರು. ಈ ಮೊದಲು ಕಾಂಗ್ರೆಸ ಪಕ್ಷೀಯರಾಗಿ ನಿಲ್ಲಬೇಕೆಂದು ಶ್ರೀಯುತ ಅಧ್ಯಂತಾಯರನ್ನು ಕೇಳಿಕೊಂಡಾಗ ಸಿವಿಲ್ ಬೋರ್ಡಿನವರ ವಿನಂತಿಯನ್ನು ಅವರು ತಿರಸ್ಕರಿಸಿದುದು ಪ್ರಸಿದ್ಧವಾಗಿತ್ತು. ಈಗ ಮಾತ್ರ ತಾನು ಕಾಂಗ್ರೆಸ್ ಪಕ್ಷೀಯನೆನ್ನುವುದು, ಅವರು ಚುನಾವಣೆಯಲ್ಲಿ ಯಶಸ್ಸಂಪಾದನೆ ಮಾಡುವುದಕ್ಕಾಗಿ ಹೂಡಿದ ಒಂದು ತಂತ್ರ ಮಾತ್ರವೆಂದು ತಿಳಿದುಕೊಳ್ಳಬಹುದಲ್ಲದೆ ಅವರ ಹೃದಯಬದಲಾವಣೆಯಾಗಿದೆ ಎಂದು ತಿಳುಕೊಳ್ಳಲಿಕ್ಕೆ ಯಾವ ಆಧಾರವೂ ಇರುವುದಿಲ್ಲ. ಅವರ ಹೃದಯ ಮನಸ್ಸುಗಳು ಕಾಂಗ್ರೆಸಿನ ಕಡೆಗೆ ಬಂದಿರಲಿಕ್ಕೆ ಅಂಥ ಯಾವ ಮಹತ್ವದ ಘಟನೆಯೂ ತನ್ಮಧ್ಯೆ ನಡೆದುಹೋಗಿರುವುದಿಲ್ಲ. ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಭಟ್ಟರನ್ನು ಸ್ಪರ್ಧಿಸುವುದರಿಂದ ಪ್ರಯೋಜನವಿಲ್ಲವೆಂದೇ ತಿಳಿದು ಶ್ರೀ ಅಧ್ಯಂತಾಯರು ಈಗ ಸಿವಿಲ್ ಬೋರ್ಡಿನಲ್ಲಿ ತಂತ್ರೋಪಾಯ ಹೂಡಿದುದಾಗಿ ಅರ್ಥವಾಗಿ ತೋರ್ಪಡಬಹುದು. ಶ್ರೀ ಭಟ್ಟರು ಬೇರೊಂದು ಕಡೆ ಉಮೇದ್ವಾರರಾಗುವಂತೆ ಮಾಡುವುದರಿಂದ ತಾನು ಪ್ರತಿಸ್ಪರ್ಧಿಯಿಲ್ಲದೆ ಚುನಾಯಿತನಾಗುವೆನೆಂಬ ಭರವಸೆ ಉಂಟಾದುದರಿಂದಲೂ ಅವರು ಹೀಗೆ ಮಾಡಿದ್ದಾಗಿರಬಹುದು. ಆದರೆ ಹೃದಯಬದಲಾವಣೆ ಆಗದೆ ಗತಿ ಬಂದಹಾಗೆ ಹಾಯಿ ಬದಲಾಯಿಸುವುದು ಪುರುಷೋಚಿತರ ಲಕ್ಷಣವಾಗಿ ಎಂದಿಲ್ಲ. ಶ್ರೀ ಅಧ್ಯಂತಾಯರು ಸಹಜವಾಗಿಯೂ ಈಗ ಕಾಂಗ್ರೆಸ್ಸಿನ ಧ್ಯೇಯದರ್ಶಿ ನೀತಿವ್ಯವಹಾರಗಳನ್ನು ಒಪ್ಪಿ ಅದರಂತೆ ಕೆಲಸಮಾಡುವವರೆಂದ ನಾವೀಗ ತಿಳಕೊಳ್ಳಬಹುದೆ? ಹಾಗಾದರೆ ನಮಗೆ ಬಹಳ ಸಂತೋಷ! ಹಾಗಾಗಿಲ್ಲದೆಹೋದರೆ ಬಹುರೂಪೀ ಸಾಧುಗಳ ಜಾಲಬಿದ್ದಿಯುತ್ತ ಹೋಗುವುದರ ಬದಲಿಗೆ ನಮ್ಮ ಸಿವಿಲ್ ಬೋರ್ಡು ಕಾರ್ಕಳ ಸರ್ಕಲಿಗೆ ಬೇರೆ ಯೋಗ್ಯ ಕಾಂಗ್ರೆಸ್ ಉಮೇದ್ವಾರರನ್ನು ತಂದು ನಿಲ್ಲಿಸಬಾರದೇಕೆ? ಹಾಗೂ ಅಗಿರದೆ ಇದನ್ನು ಸಿವಿಲ್ ಬೋರ್ಡು ಮಾಡದೆಹೋದರೆ ಕಾಂಗ್ರೆಸಿನ ಧ್ಯೇಯದರ್ಶಿಗಳ ಮೇಲೆ ನಮ್ಮ ಸಿವಿಲ್ ಬೋರ್ಡಿಗೆ ಎಷ್ಟರಮಟ್ಟಿನ ಆದರ ಭಕ್ತಿ ವಿಶ್ವಾಸಗಳಿವೆ ಎಂದು ತಿಳಕೊಂಡು ಮತದಾರರು ತಮಗೆ ಉಚಿತಕಂಡಂತೆ ನಡೆಯುವರೆಂದಿರಲಾರರು. ಸಂಬಂಧಪಟ್ಟವರು ಕೂಡಲೇ ಈ ವಿಷಯವನ್ನು ಪರ್ಯಾಲೋಚಿಸಿ ಮತದಾರರ ಈ ಕೆಲವು ಸಂದೇಹಗಳ ನಿವಾರಣೆಯನ್ನು ಮಾಡುವರೆಂದು ನಂಬಿದ್ದೇನೆ.

ಸಿ ಮಂಜುನಾಥ ಕಾಮತ್.

ವಿದ್ಯಾದಾಯಿನಿ ಸಭಾ, ಮುಂಬಾಯಿ

ಈ ಸಭೆಯ ಅಂಗವಾಗಿದ್ದ ಶ್ರೀ ಎಂ ಚೆನ್ನಪ್ಪ ಸುವರ್ಣ ಎಂಬವರು ಇದೇ ಕಳೆದ ತಾ. ೭ರಲ್ಲಿ ಪರಲೋಕವಾಸಿಯಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ. ಶ್ರೀಯುತರು ಈ ಸಭೆಯ ಸ್ಥಾಪನಾರಭ್ಯ ಸದಸ್ಯರಾಗಿದ್ದುದಲ್ಲದೆ, ಕೆಲವು ವರ್ಷಗಳಿಂದ ಕಾರ್ಯನಿರ್ವಾಹಕ ಸಮಿತಿಯ ಮೆಂಬರರೂ ಆಗಿದ್ದು ಸಭೆಯ ಏಳ್ಗೆಗಾಗಿ ಹೆಣಗಾಡುತ್ತಿದ್ದರು. ಇವರ ಅಕಾಲಮರಣದಿಂದ ಸಭೆಗೆ ಅಪಾರ ನಷ್ಟವುಂಟಾಗಿದೆ. ಮೃತರ ಕುಟುಂಬದವರ ದುಃಖದಲ್ಲಿ ಭಾಗಿಗಳಾಗಿದ್ದೇವೆ, ಪರಮಾತ್ಮನು ಇವರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲಿ.

ಕಾರ್ಯದರ್ಶಿ

ವೀರಣ್ಣನವರ 'ಸದಾರಮೆ' ಚಲಚ್ಚಿತ್ರ

ಆರಂಭದ ಪ್ರಯತ್ನವೆಂದು ವೀರಣ್ಣನವರ ಸದಾರಮೆ ಎಂಬ ಮಾತಾಡುವ ಚಲಚ್ಚಿತ್ರವನ್ನು ನೋಡಲು ನಾನು ಸ್ಟರ್ಲಿಂಗ್ ಟಾಕೀಸಿಗೆ ಹೋಗಿದ್ದೆ. ಆದರೆ ಹಿಂದಿರುಗುವಾಗ ಹೆಚ್ಚಿನ ಸಮಾಧಾನವುಂಟಾಗಲಿಲ್ಲ. ಸದಾರಮೆಯ ಕಥೆಯೇ ಅಚ್ಚುಮೆಚ್ಚಿನದಲ್ಲ! ಅಂತಹ ಕಥೆಗಳ ಕಾಲವು ಕಳೆದುಹೋಯಿತು. ವೀರಣ್ಣನವರ ಕಳ್ಳನ ವೇಷ ಮಾಹಿಯಾದವನು ನಿಜ. ಆದರೆ ಇನ್ನಾವುದಾದರೊಂದು ಕಥೆಯಲ್ಲಿ ಅದೇ ಕಳ್ಳನನ್ನು ತರಬಹುದಿತ್ತು. ಬೇರೆ ಯಾವುದಾದರೊಂದು ಉತ್ತಮವಾದ ಕಥೆಯನ್ನು ಆರಿಸಬಹುದಿತ್ತು.

ನಾಯಿಕೆಯ ಪಾತ್ರವನ್ನು ವಹಿಸಿದುದು ಅಷ್ಟು ಚೆನ್ನಾಗಿ ಹಾಡಬಲ್ಲವಳಲ್ಲ. ಆದರೆ, ಅವಳ ರೂಪವು ನಾಯಿಕೆಗೆ ಸಾಲದು. ಜಯಮ್ಮನನ್ನು ನಾಯಿಕೆಯನ್ನಾಗಿ ಮಾಡಿದ್ದರೆ ಎಲ್ಲವೂ ಸಾಂಗವಾಗಿ ನೆರವೇರುತ್ತಿತ್ತು. ಅದರ ಫೋಟೋಗ್ರಾಫಿಯಲ್ಲಿ ನಮ್ಮಲ್ಲಿ ಜುಗುಪ್ಸೆಯನ್ನಲ್ಲದೆ ಬೇರೇನನ್ನೂ ಉಂಟುಮಾಡಲಿಲ್ಲ. ಒಟ್ಟಿನ ಮೇಲೆ ಮೊದಲನೆಯ ಪ್ರಯತ್ನವಾಗಿರುವುದರಿಂದ ವೀರಣ್ಣನವರನ್ನು ಶ್ಲಾಘಿಸಲೇಬೇಕಾಗುವುದು.

ಕೆ ಎಸ್ ಎಕೌರ್ಡಿತ್ತಾಯ, ಮುಂಬಾಯಿ

ಸೆಲ್ಫ್ ಇಂಗ್ಲಿಷ್ ಸ್ಟಡಿ



ಕನ್ನಡ ಓದಲಿಕ್ಕೆ ತಿಳಿದವರು ಇನ್ನೊಬ್ಬರ ಸಹಾಯವಿಲ್ಲದೆ ಇಂಗ್ಲಿಷ ಓದುವುದಕ್ಕೂ ಬರೆಯುವುದಕ್ಕೂ ಮಾತನಾಡುವುದಕ್ಕೂ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದಕ್ಕೂ 2 ತಿಂಗಳಲ್ಲಿ ಕಲಿತ ಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಬಹಳ ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರವೇ ಇರುವುದು. ಬೇಗನೇ ಬರೆಯಿರಿ. ಕ್ರಯ ಪುಸ್ತಕ 1ಕ್ಕೆ ರೂ 2

ವಿಳಾಸ —K L BENSON & CO
17 Bert MADRAS

ಶರೀರ ಮರ್ಮಶಾಸ್ತ್ರ

ಇದರಲ್ಲಿ ಅನೇಕ ಜಾತಿ ಸ್ತ್ರೀಯರ ಲಕ್ಷಣ ವರ್ಣನೆಗಳೂ ಗರ್ಭಾದಾನ ಸಂತಾನ ನಿರೋಧ ಅತಿಸಂಭೋಗದಿಂದ ಆಗುವ ಹಾನಿ ಸಂಭೋಗದಲ್ಲಿ ಶಾಸ್ತ್ರ ಸ್ತ್ರೀಯರ ಜನನೇಂದ್ರಿಯ ವರ್ಣನೆ ಗರ್ಭಬಿದ್ದಿ ಗರ್ಭವೃದ್ಧಿ ರೂಪ ಶಿಶು ಉತ್ಪತ್ತಿ ಏಳು ಪ್ರಸವಕಾಲದ ಹಿರಿಕೆ ಗರ್ಭಿಣಿಗೆ ಅನುಸರಿಸಬೇಕಾದ ನಿಯಮಗಳು ಇವುಗಳೇ ಅಲ್ಲ ಇನ್ನು ಸ್ತ್ರೀಪುರುಷರಿಗೆ ಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೬೪ ಚಿತ್ರಗಳೊಡನೆ ವಿವರಿಸಿ ಬರೆದಿದೆ. ಬೆಲೆ ರೂ ೧ ಟ ಪಾ ಬೇರೆ.

ವಿಳಾಸ —ಕರ್ನಾಟಕ ಏಜನ್ಸಿ, ಬುಕ್‌ಸೆಲ್ಲರ್ಸ್
ಕೃಷ್ಣಪ್ಪ ನಾಯಕನ ಬೀದಿ, ಮದರಾಸ

ದರ ಸುಲಭ — ಇಂದೇ ಪಡಕೊಳ್ಳಿರಿ ಮತ್ತೆ ಸಿಗಲಾರದು! — ಹೊಸ ವ್ಯಾಲು



ಈಗ 4 ರೂಪಾಯಿಗೆ ಸಿಗಬಹುದಾದ ವಸ್ತುಗಳು ಮತ್ತೆ 8 ರೂಪಾಯಿಗಳನು ಕೊಟ್ಟರೂ ಸಿಕ್ಕಲಿಕ್ಕಿಲ್ಲ. ಮುಸ್ತೈರಾಂಕಿ ಗೋಲ್ಡಿನ ಇವುಗಳ ಸಂಧಿ 3 ವಿಮ್ಮ ರಿಸ್ಟ್ ವಾಚುಗಳು ಸಿಲ್ಕ್ ಪಟ್ಟಿ ಸಮೇತ 1 ಜಾಂ ಸ್ಟ್ರಾರ್ಲಿನ್ ವಾರ್ ಫೋಕಟು ವಾಚ ಸರಿಯಾದ ಸಮಯವನ್ನು ಕೊಡುತ್ತದೆ. 8 ವರ್ಷಗಳ ಗೆರಂಟಿ ನಮ್ಮ ಕೊಡುತ್ತೇವೆ. 1 ಟೈಮ್‌ಪೀಸ್ 10 ವರ್ಷಗಳ ಗೆರಂಟಿ ಕೊಡಲ್ಪಡುವುದು. ಬಂಗಾರದ ಹಿಟ್ಟುಳ್ಳ ಒಂದು ಸ್ವಿಟ್ ಫೌಂಟನ್ ಪೆನ್ ಒಂದು ಟಾರ್ಚ್ ಲೈಟ್ ಬಟನ್ ಸಮೇತ ಒಂದು ಸಿಗಾರ್ ಕೇಸು ಇವುಗಳೆಲ್ಲ ಬರೇ ನಾಲ್ಕು ರೂಪಾಯಿಗೆ ಪಡೆಯಬಹುದು. ಪೆಕಿಂಗ್ ವ ತ್ತು ಟಪ್ಪಾಲು ಹಾಸಲು ಪ್ರತ್ಯೇಕ. ವ್ಯಾಲು ಬೇಡವೆಂದು ಕಂಡುಬಂದರೆ ಹಣ ವಾಪಸ.

International Trading Co, Post Box No 6714 (4W SW) CALCUTTA

KANNADA

Savings Certificates can be cashed even before maturity.

Full Particulars from—

CANARA BANK LTD

OFFICES AT—

Bombay—Fort,	Mangalore—City,
Bombay—Mandvi,	Mangalore—Bunder,
Hubli	Kasaragod
Calicut,	Puttur,
Cochin,	Buntwal,
Ernakulam,	Karkala,
Alleppey,	Coondapoor,
Bangalore,	Udipi,
Davangere,	&
Chickmagalur,	Gangoli.

AVAILABLE IN DENOMINATIONS OF Rs. 10/- UPWORDS

TOTAL YIELD RS 4-6-0% P. A

Paid once half yearly at $3\frac{1}{8}\%$ p. a. with an additional $1\frac{1}{4}\%$ p. a. on maturity

If Left To Accumulate

RS. 100/-

Will Amount to

RS. 122-13-6

ESTD 1906

CANARA BANK

LIMITED

Subscribed Capital		Paid up Capital
6,00,000		3,81,000
Reserves	Deposits	Working Capital
4,50,000	58,62,000	73,49,000

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara —

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು– ಕಾಮತ್ ಸ್ವದೇಶೀ ಎಂಪೋರಿಯಂ

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ
ಆ ಥ ವಾ
.. ರಿ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 19 ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟುಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.	ರೂ	ಆ	ಪೈ
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದುಗ್ಗ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ತಯಾರಾಗಿದೆ.

ಗೌ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ
ಸಮಾಜಶಾಸ್ತ್ರ
ಅಥವಾ
ಸೊಸಿಯೊಲೊಜಿ.
ಟೆಕ್ಸ್ಟುಬುಕ್ ಕಮಿಟಿಯಿಂದ ಶಿಫಾರಸು
ಮಾಡಲ್ಪಟ್ಟಿದೆ. ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ. ಇದನ್ನು ಹೊಸ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುತ್ತದೆ.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸ್‌ಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6-15

"ಶ್ರೀ ಪುರಂದರದಾಸರೂ ಕನ್ನಡ ಸಾಹಿತ್ಯವೂ"

(ಪುತ್ತೂರಿನಲ್ಲಿ ತಾರೀಖು ೬-೧೦-೧೯೪೯ರಲ್ಲು ಧಾರವಾಡದ ಶ್ರೀಯುತ ದ. ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಾಹಿತ್ಯೋತ್ಸವದಲ್ಲಿ ಓದಿದ ಪ್ರಬಂಧ. ಓದಿದವರು ಶ್ರೀಯುತ ಬಿ. ಕೃಷ್ಣಣ್ಣಾಚಾರ್ಯ ವಿದ್ವಾನ್, ಕನ್ನಡ ಪಂಡಿತ ಬೋರ್ಡು ಹೈಸ್ಕೂಲು ಕುಂದಾಪುರ.)

ಮಹನೀಯರಾದ ಅಧ್ಯಕ್ಷರೇ, ಮತ್ತು ಸಭಿಕರೇ,

ನಮ್ಮ ಕನ್ನಡ ಸಾಹಿತ್ಯದಲ್ಲಿ ಇಪ್ಪತ್ತನೇ ಶತಮಾನದೊಳಗೆ ೧೧೪೩ ಕವಿಗಳಿದ್ದರೆಂದೂ ಅವರಲ್ಲಿ ೫ವರು ಮಹಾರಾಜರೂ ೨೫ ರಾಜರೂ ೪೩ ಹೆಂಗಸರೂ ಸೇರಿರುತ್ತಾರೆಂದೂ ಕವಿಚರಿತ್ರೆಗಳ ಆಧಾರದಿಂದ ನಮಗೆ ತಿಳಿದುಬರುತ್ತದೆ. ಮಹಾ ಕವಿಗಳ "ವಾಗ್ದೇವಿಯ ಭಂಡಾರ ಮನೆಯದೆಘು" ವಾಗಿರುವ ಮಹಾ ಕಾವ್ಯಗಳು ಪಾಮರರಂಜನೆಯನ್ನು ಮಾಡಲಾರವು. "ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ" ಎಂಬಂತೆ ವಿದ್ವಾಂಸರಿಗೆ ಮಾತ್ರ ಗ್ರಾಹ್ಯಗಳಾಗುವುವು. ಕ್ರಮೇಣ ಕನ್ನಡ ಸಾಹಿತ್ಯದಲ್ಲಿ ಪಂಡಿತ ಪಾಮರರಿಗೂ ರಂಜನೆಯಾಗುವ ಸುಲಭ ಶೈಲಿಯ ಸಾಹಿತ್ಯ ರಚನೆಯೂ ಪ್ರಾರಂಭವಾಯಿತು. ೧೨ನೇ ಶತಮಾನದ ಬಳಿಕ ವೀರಶೈವ ಮತದವರು (ಲಿಂಗಾಯತರು) ಪಂಡಿತ ಪಾಮರರಿಗೂ ರಂಜನೆಯಾಗುವಂತೆ ಷಟ್ಪದಿ, ತ್ರಿಪದಿ, ರಗಳೆ, ಮೊದಲಾದ ಹಲವು ವೃತ್ತಗಳಲ್ಲಿ ಅನೇಕ ಕಾವ್ಯಗಳನ್ನು ರಚಿಸಿದರು. ಇವರಲ್ಲಿ ಕೆಲವು ವಚನಕಾರರೂ ಇರುತ್ತಾರೆ. ಹೀಗೆಯೇ ವೈಷ್ಣವರೂ ೧೬ನೇ ಶತಮಾನದಲ್ಲಿ ದಾಸಕೂಟವೆಂಬ ಸಂಘವನ್ನು ಮಾಡಿಕೊಂಡು ಅನೇಕ ರೀತಿಯ ಸುಲಭ ಶೈಲಿಯ ಕೀರ್ತನೆಗಳನ್ನೂ ಸುಳಾದಿಗಳನ್ನೂ ರಚಿಸಿದರು. ದಾಸ ಕೂಟದವರ ದ್ರಾಕ್ಷಾಪಾಕದಿಂದ ಕೂಡಿಸಿ ತಿಳಿಗನ್ನಡದಲ್ಲಿ ಸರ್ವಗ್ರಾಹ್ಯವಾಗುವಂತೆ ರಚಿಸಲ್ಪಟ್ಟಿರುವ ಕೀರ್ತನೆಗಳು ಕರ್ನಾಟಕ ಸಾಹಿತ್ಯ ಕಲ್ಪಲತೆಯ ಸುಮಧುರ ಫಲಗಳಂತಿದ್ದು, ವೇದಾಂತಿಗಳಿಗೂ ಲೌಕಿಕರಿಗೂ ಸಂಗೀತ ಕಲಾಭಿಮಾನಿಗಳಿಗೂ ಗಾನವಿದ್ಯಾವಿಶಾರದರಿಗೂ ಏಕಕಾಲಕ್ಕೆ ಮನಸ್ಸಂತೋಷವನ್ನುಂಟುಮಾಡುತ್ತಲಿವೆಯೆಂದರೆ ಅತಿಶಯೋಕ್ತಿಯಾಗಲಾರದು. ಇಂಥ ದಾಸಕೂಟಕ್ಕೆ ಸಾರ್ವಭೌಮರೇ ನಮ್ಮ ಪುರಂದರದಾಸರು.

ಯಾರು ಯಾರು ಎಷ್ಟೆಷ್ಟು ಮಟ್ಟಿಗೆ ಕನ್ನಡದಲ್ಲಿ ಭಾಗವತ ಧರ್ಮವನ್ನು ಪುನರುದ್ಧಾರ ಮಾಡಿದವರೆಂದು ಹೆಸರು ಪಡೆದಿರಲಿ ಯಾರು ಯಾರು ಎಷ್ಟೆಷ್ಟು ದೇವರ ನಾಮಗಳನ್ನು ಹಾಡಿರಲಿ; ಪುರಂದರದಾಸರು ಭಾಗವತ ಧರ್ಮಕ್ಕೆ ಮಾಡಿರುವ ಸೇವೆಯನ್ನು ಸ್ಮರಿಸದಿದ್ದರೆ ಅದು ಭಾಗವತ ಧರ್ಮವೆನಿಸುವುದಿಲ್ಲ. ಅವರ ದೇವರ ನಾಮಗಳನ್ನು ಹಾಡದಿದ್ದರೆ ಅವರು ನಿಜವಾದ ಹರಿದಾಸರಾಗುವುದಿಲ್ಲ.

ಭಾಗವತ ಧರ್ಮೋಪದೇಶಕ್ಕೆ ವ್ಯವಸ್ಥಿತವಾದ ಮಾರ್ಗವನ್ನು ತೋರಿಸಿಕೊಟ್ಟವರು ಪುರಂದರದಾಸರು. ಕೀರ್ತನೆ ಮಾಡುವವರಿಗೆ ಹಾದಿಯನ್ನು ಹಾಕಿಕೊಟ್ಟವರು ಪುರಂದರದಾಸರು. ದಕ್ಷಿಣ ಭಾರತದ ಆಂಧ್ರ, ತಮಿಳು, ಕನ್ನಡ ನಾಡುಗಳಲ್ಲಿ ಪುರಂದರದಾಸರನ್ನು ಸ್ಮರಿಸದವರಿಲ್ಲ. ಅವರ ದೇವರ ನಾಮವೊಂದನ್ನಾದರೂ ಹಾಡದವರಿಲ್ಲ. ದಾಸರ ಹೆಸರಲ್ಲಿ ಜಾತಿ ಮತ ವ್ಯತ್ಯಾಸ ನೋಡುವವರಿಲ್ಲ. ಇಂಥ ಮಹಿಮರು ಪುರಂದರದಾಸರು. ಪುರಂದರದಾಸರ ಜನ್ಮಭೂಮಿಯು 'ಪುರಂದರಗಡ'ವೆಂಬ ಸ್ಥಳವು. ಅದು ಆ ಕಾಲದಲ್ಲಿ ಅತಿ ಮುಖ್ಯವಾದ ದುರ್ಗವಾಗಿತ್ತು. ಆಗ ಅದು ಕರ್ನಾಟಕದ ಭಾಗವಾಗಿದ್ದುದರಿಂದ ಕನ್ನಡವು ಜನರ ಭಾಷೆಯಾಗಿತ್ತು. ನೆರೆಹೊರೆಯಲ್ಲಿ ಮಹಾರಾಷ್ಟ್ರ ಭಾಷೆಯಿದ್ದುದರಿಂದ ಉಭಯ ಭಾಷೆಗಳ ಪ್ರಚಾರವಿದ್ದು ಮಹಾರಾಷ್ಟ್ರರು ತಲೆಯೆತ್ತಿದ ಮೇಲೆ ಕನ್ನಡವು ಮರೆತುಹೋಯಿತು; ಪುರಂದರದಾಸರು ಶಾಲಿವಾಹನ ಶಕ ೧೪೦೬ರಲ್ಲಿ ಜನಿಸಿದರು. ವರದಪ್ಪ ನಾಯಕರೇ ಅವರ ತಂದೆ. ತಂದೆತಾಯಿಗಳು ದಾಸರಿಗೆ ಮೊದಲು ಶ್ರೀನಿವಾಸನೆಂದು ನಾಮಕರಣ ಮಾಡಿದರು. ಶ್ರೀನಿವಾಸನು ಹೆಸರಿಂದಲೂ ಕೃತಿಯಿಂದಲೂ ಶ್ರೀನಿವಾಸನೇ ಆಗಿದ್ದನು. ವಯೋಧರ್ಮಕ್ಕನುಸಾರವಾಗಿ ಚೌಲೋಪನಯನಗಳಾದಂತೆ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ವಿದ್ಯಾಭ್ಯಾಸವಾಯಿತು. ಸರಸ್ವತೀಬಾಯಿಯೆಂಬ ಶ್ರೀಮಂತ ಕನ್ಯೆಯೊಡನೆ ಶ್ರೀನಿವಾಸನ ವಿವಾಹವೂ ಆಯಿತು. ಯಾಚಕರನ್ನು ಕಂಡಕೂಡಲೇ ಅವನಿಗೆ ಶತ್ರುವನ್ನು ಕಂಡಂತಾಗುತ್ತಿತ್ತು. ಯಾರಾದರೂ ಧರ್ಮಬೋಧೆಯನ್ನು ಮಾಡಿದ್ದಾದರೆ ನಿಮ್ಮ ಬೋಧನೆಯೆಲ್ಲಾ ದುಡ್ಡಿಗಾಗಿ ಎನ್ನುತ್ತಿದ್ದನು. ಲೋಭಗುಣದಿಂದ ನಾಸ್ತಿಕನಾದನು. ವ್ಯಾಪಾರದಲ್ಲವನಿಗೆ ಸರಿಸಮಾನರಿರಲಿಲ್ಲ. ಬಿಜಾಪುರ, ವಿಜಯನಗರ ಗುಲ್ಬರ್ಗ ನಗರಗಳ ರಾಜರ ಆಸ್ಥಾನದಲ್ಲಿ ಅತ್ಯಂತ ಮಾನ್ಯ ವರ್ತಕನೆನಿಸಿ ರತ್ನಪಡಿ ವ್ಯಾಪಾರಗಳಿಂದ ಕೋಟ್ಯಾವಧಿ ಧನಾರ್ಜನೆ ಮಾಡಿದನು. ಅವನಿಗೆ ನಾಲ್ಕು ಗಂಡುಮಕ್ಕಳೂ ಒಬ್ಬ ಮಗಳೂ ಆದರು. ಶ್ರೀನಿವಾಸ ನಾಯಕನು ವಿಜಯನಗರ ಕೃಷ್ಣದೇವರಾಯರ ಆಸ್ಥಾನಕ್ಕೆ ಎಷ್ಟೋ ಸಲ ಬಂದಿದ್ದರೂ ರಾಜಗುರುಗಳಾದ ಶ್ರೀ ವ್ಯಾಸರಾಯರ ದರ್ಶನಕ್ಕೆ ಹೋದವನಲ್ಲ.

ಸರಸ್ವತಿಯಲ್ಲಾದರೋ ನಾಯಕನ ಎಲ್ಲಾ ಗುಣಗಳಿಗೂ ವಿಪರೀತ ಗುಣಗಳಿದ್ದುವು. ಆಕೆಯು ನಿರಂತರ ಪುರಾಣ ಶ್ರವಣಾದಿಗಳಿಂದ ಪರಮ ಆಸ್ತಿಕ ಶಿರೋಮಣಿಯಾಗಿದ್ದಳು. ಪತಿಯ ಸ್ವಭಾವವನ್ನು ನೋಡಿ ಕನಿಕರದಿಂದ ಸಮಯವರಿತು ಧರ್ಮಮಾರ್ಗ ಬೋಧನೆ ಮಾಡುತ್ತಿದ್ದಳು. ಭಾರ್ಯೆಯ ಈ ಉಪದೇಶವು ಊಷರಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ ವ್ಯರ್ಥವಾಗುತ್ತಿತ್ತು. ವೃದ್ಧ ಬ್ರಾಹ್ಮಣನೊಬ್ಬನು ಯಾಚಕನಾಗಿ ಬರಲು ನಾಳೆ ನಾಳೆ ಎಂದು ಹೇಳಿ ಹಿಂದಕ್ಕೆ ಕಳುಹಿಸಿದರೂ ಯಾಚಕನು ತಪ್ಪದೆ ಇವನ ಬೆನ್ನು ಹಿಡಿಯಲು ನಾಯಕನು ಖತಿಗೊಂಡು ಸವೆದ ದುಡ್ಡುಗಳನ್ನು ತುಂಬಿದ್ದ ಚೀಲವನ್ನು ಸುರಿದು ಇದರಲ್ಲಿ ಒಂದು ದುಡ್ಡನ್ನಾರಿಸಿಕೊಳ್ಳೆಂದು ಜಬರಿಸಿದನು. ವೃದ್ಧನು ಅಸಂತುಷ್ಟನಾಗಿ ಏನನ್ನೂ ತೆಗೆದುಕೊಳ್ಳದೆ ಹೊರಟುಹೋದರೂ ಅಷ್ಟಕ್ಕೇ ಬಿಟ್ಟುಬಿಡದೆ ನಾಯಕನ ಸತಿಯಾದ ಸರಸ್ವತೀ ಬಾಯಿಯನ್ನು ಸೇರಿ ತನ್ನ ಮಗನ ಮುಂಜಿಗೆ ಏನಾದರೂ ಸಹಾಯ ಮಾಡಬೇಕೆಂದು ಬೇಡಲು ಅವಳು ಮನಕರಗಿ ತನ್ನ ಮೂಗಿನ ಮುಖರವನ್ನು ತೆಗೆದುಕೊಡಲು ವೃದ್ಧನು ಅದನ್ನು ತೆಗೆದುಕೊಂಡು ನಾಯಕನ ಅಂಗಡಿಗೆ ಹೋಗಿ ಇದನ್ನು ಇಟ್ಟುಕೊಂಡಾದರೂ ಸ್ವಲ್ಪ ಹಣ ಕೊಡೆಂದು ಕೇಳಿದಾಗ ಅದು ತನ್ನ ಭಾರ್ಯೆಯ ಮೂಖರವೆಂದು ಸಂಶಯ ಉಂಟಾದ್ದರಿಂದ ಅದನ್ನು ಅಲ್ಲಿಯೇ ಪೆಟ್ಟಿಗೆಯೊಳಗಿಟ್ಟು ಬ್ರಾಹ್ಮಣನಿಗೆ ಸ್ವಲ್ಪ ತಡೆದು ಬರುವಂತೆ ಹೇಳಿ ಮನೆಗೆ ಬಂದು ಹೆಂಡತಿಯನ್ನು ನೋಡಿದಾಗ ಅವಳ ಮೂಗಿನಲ್ಲಿ ಮುಖರವಿರಲಿಲ್ಲ. ನಾಯಕನು ಏನಾಯಿತೆಂದು ಕೇಳಿದಾಗ ಸರಸ್ವತೀಬಾಯಿಯು ಸತ್ಯ ಹೇಳಲು ಧೈರ್ಯ ಸಾಲದೆ ತೆಗೆದಿಟ್ಟಿದ್ದೇನೆಂದು ಹೇಳಲು ನಾಯಕನು ತೋರಿಸೆಂದು ಒತ್ತಾಯಪಡಿಸಲು ಸರಸ್ವತಿಯು ತರುತ್ತೇನೆಂದು ಒಳಗೆ ಹೋದವಳು ಈ ರೀತಿಯಾಗಿ ಗಂಡನಿಂದ ಜಗಳ ಮಾಡಿಸಿಕೊಳ್ಳುವುದಕ್ಕಿಂತ ವಿಷಪಾನ ಮಾಡಿ ಸಾಯುವುದು ಲೇಸೆಂದು ಯೋಚಿಸಿ ವಿಷಪೂರಿತವಾದ ಬಟ್ಟಲನ್ನು ಮೇಲಕ್ಕೆತ್ತಲು ಬಟ್ಟಲಿಗೇನೋ ಬಿದ್ದಂತೆ ಶಬ್ದವಾಗಲು ಏನೆಂದು ನೋಡಿದಾಗ ಮುಖರವೇ ಬಟ್ಟಲಿನಲ್ಲಿ ಬಿದ್ದಿತ್ತು. ಸರಸ್ವತಿಯು ಆಶ್ಚರ್ಯದಿಂದಲೂ ಸಂತೋಷದಿಂದಲೂ ಅದನ್ನು ಪತಿಗೆ ತಂದೊಪ್ಪಿಸುವಳು. ನಾಯಕನು ಆಶ್ಚರ್ಯಹೊಂದಿದರೂ ಮಾತಾಡದೆ ಅದನ್ನು ಹಿಡಿದುಕೊಂಡು ಅಂಗಡಿಗೆ ಬಂದು ನೋಡಿದಾಗ ಪೆಟ್ಟಿಗೆಯಲ್ಲಿಟ್ಟಿದ್ದ ಮುಖರವು ಅಲ್ಲಿರಲಿಲ್ಲ. ಗಾಬರಿಗೊಂಡು ಮನೆಗೆ ಬಂದು ಹೆಂಡತಿಯನ್ನು ಕುರಿತು ಸತ್ಯವೇನೆಂದು ಧೈರ್ಯದಿಂದ ಕೇಳಲು ಸರಸ್ವತೀಬಾಯಿಯು ಕನಿಕರಗೊಂಡು ಎಲ್ಲವನ್ನೂ ವಿವರಿಸುವಳು. ನಾಯಕನಿಗೆ ಮನಸ್ಸಿನಲ್ಲಿ ಇದೆಲ್ಲ ಭಗವಂತನ ಲೀಲೆಯೆಂದು ತಿಳಿದು ಜ್ಞಾನೋದಯವಾಗಲು ಧನ್ಯನಾದೆನು ಎಂದು ಆನಂದ ನಿರ್ಭರವಾಗಿ ನಾಮಸಂಕೀರ್ತನೆ ಮಾಡುತ್ತಾ ನರ್ತನಮಾಡತೊಡಗಿದನು. ಮೈಮೇಲೆ ಅಲಂಕರಿಸಿಕೊಂಡಿದ್ದ ಆಭರಣಗಳನ್ನು ಕಿತ್ತೊಗೆದನು. ಚೀರ ವಸ್ತ್ರಗಳನ್ನುಟ್ಟು ಪತ್ನೀಪುತ್ರಸಹಿತನಾಗಿ ಸಕಲೈಶ್ವರ್ಯದಿಂದ ಕೂಡಿದ ಮನೆಯನ್ನು ಬಿಟ್ಟು ಬೀದಿಯಲ್ಲಿ ಬಂದು ನಿಂತನು. ಮನೆಯನ್ನು ಬಡವರಿಗೆ 'ಕೃಷ್ಣಾರ್ಪಣ'ವೆಂದು ತುಲಸೀದಲವನ್ನೆಸೆದು ಕೈಮುಗಿದನು. ನಾಮ ಕೀರ್ತನೆಯನ್ನು ಮಾಡುತ್ತಾ ಪುರಂದರಗಡದ ಬೀದಿಯಲ್ಲಿ ನಡೆದನು.

ಆ ರಾತ್ರಿಯಲ್ಲಾದ ಸ್ವಪ್ನದಂತೆ ವಿಜಯನಗರಕ್ಕೆ ಬಂದು ರಾಜಗುರುಗಳೂ ದಾಸಕೂಟಪ್ರದರ್ಶಕರೂ ಮಹಾಮಹಿಮರೂ ಆದ ಶ್ರೀ ವ್ಯಾಸರಾಯ ಸ್ವಾಮಿಗಳಲ್ಲಿ ವೈಷ್ಣವ ಮಂತ್ರೋಪದೇಶವನ್ನು ಹೊಂದಿ ಭಾಗವತ ಧರ್ಮದೀಕ್ಷಿತನಾದನು. ದಾಸರು ಮಾಡುವ ಕೃತಿಗಳನ್ನು ಪುರಂದರವಿಠಲಗೆ ಅಂಕಿತಮಾಡಬೇಕೆಂದು ಗುರುಗಳಾಜ್ಞೆಯಾಯಿತು. ಅಂದಿನಿಂದ ನಾಯಕರು ಪುರಂದರವಿಠಲ ಮುದ್ರಿಕೆಯಿಂದ ಮಾಡಿದ ಕೀರ್ತನೆಗಳನ್ನು ಶ್ರೀಹರಿಗೆ ಸಮರ್ಪಿಸುತ್ತಾ ಬಂದರು. ಅಂದಿನಿಂದ ನಾಯಕರಿಗೆ ಪುರಂದರದಾಸರೆಂಬ ಹೆಸರು ಪ್ರಸಿದ್ಧವಾಯಿತು. ಆ ದಿನ ಅವರು ರಚಿಸಿರುವ ಪದ್ಯವೊಂದು ಈ ರೀತಿಯಾಗಿರುವುದು

ಉಗಾಭೋಗ

ಇಂದಿನ ದಿನವೇ ಶುಭದಿನವು । ಇಂದಿನ ವಾರ ಶುಭ ವಾರ ।
ಇಂದಿನ ತಾರೆ ಶುಭ ತಾರೆ । ಇಂದಿನ ಯೋಗ ಶುಭಯೋಗ
ಇಂದಿನ ಕರಣ ಶುಭಕರಣ । ಇಂದು ಪುರಂದರವಿಠಲರಾಯನ
ಸಂದರುಶನಫಲವೆನಗಾಯ್ತು । ಸಂದರುಶನಫಲವೆನಗಾಯ್ತು ।

ಈ ದಿನದಿಂದ ಅವರಾಡಿದ ಮಾತುಗಳು ಛಂದೋಬದ್ಧವಾದ ದೇವರ ನಾಮವಾಯಿತು. ತಮಗೆ ಜ್ಞಾನೋದಯವಾಗುವುದಕ್ಕೆ ಹೆಂಡತಿಯೇ ಕಾರಣಳೆಂದು "ಹೆಂಡತಿ ಸಂತತಿ ಸಾವಿರವಾಗಲಿ । ದಂಡಿಗೆ ಬೆತ್ತ ಹಿಡಿಸಿದಳಯ್ಯ" ದೇವರ ನಾಮದಲ್ಲಿ ಕೃತಜ್ಞತೆಯನ್ನು ತೋರಿಸಿದರು.

(ಯದೃಚ್ಛಾ ಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ) ಎಂಬ ಗೀತೋಕ್ತಿಯು ದಾಸ ಕೃತಿಯಿಂದ ಕಂಡುಬರುತ್ತಿತ್ತು. ಪುರಂದರದಾಸರು ಭರತಖಂಡದ ಎಲ್ಲಾ ತೀರ್ಥಕ್ಷೇತ್ರಗಳನ್ನೂ ಸಂದರ್ಶಿಸಿದರು. ಆಯಾಯ ಕ್ಷೇತ್ರ ಮೂರ್ತಿಗಳ ಮೇಲೆ ತೀರ್ಥಗಳ ಮೇಲೆ ಸ್ಥಳಪುರಾಣಗಳ ಮೇಲೆ ಅಗಣಿತ ದೇವರ ನಾಮಗಳನ್ನು ರಚಿಸಿದರು. ತಾವು ಬರೆದ ದೇವರ ನಾಮಗಳ ಸಂಖ್ಯಾ ವಿವರವನ್ನು ಕೆಳಗೆ ಕಂಡ ದೇವರ ನಾಮಗಳಲ್ಲಿ ಕೊಟ್ಟಿರುತ್ತಾರೆ. ಅನ್ಯರು ಹೇಳುವ ಪ್ರಮಾಣಗಳಿಗಿಂತ ಅವರೇ ತಿಳಿಸಿದ ಪ್ರಮಾಣವಚನವು ಸಂದೇಹಜನಕವಲ್ಲವಷ್ಟೆ!

ವಾಸುದೇವನಾಮಾವಳಿಯ ಕ್ಲುಪ್ತಿಯನು ।
ವ್ಯಾಸರಾಯರ ದಯದಿಂದ ಬಲ್ಲೆನನು ॥ ಪ ॥
ಕೇದಾರ ರಾಮೇಶ್ವರ ಕೇರಳ ಭೂತಳದ
ಪಾದಾರವಿಂದಕ್ಷೇತ್ರ ಪ್ರತಿಕ್ಷೇತ್ರವು
ಆದರದಿಲಕ್ಷದಿಪ್ಪತ್ತೈದು ಸಾವಿರ ಕೃತಿಯ
ವೇದಶಾಸ್ತ್ರ ಪುರಾಣಸಮ್ಮತದಿಂದ ॥ ೧ ॥
ಮಧ್ವರಾಯರ ಮಹಿಮೆ ಮಹಗುರು ಪರಂಪರೆ ಪ್ರ
ಸಿದ್ಧ ವ್ಯಾಸರಾಯರ ಪದಿಯಂತವು
ಶುದ್ಧತಂತ್ರಸಾರೋಕ್ತಿ ಜೀವತಾರತಮ್ಯ
ಉದ್ಧರಿಸಿದೈದು ಸಾವಿರದ ಪೇಳಿದೆನು ॥ ೨ ॥
ಬ್ರಹ್ಮ ಲೋಕ ಕೈಲಾಸ ಭರದಿ ದಿಕ್ಪಾಲಕರ
ಪೇರ್ಮೆ ತೊಂಭತ್ತುಸಾವಿರ ದಿಟೀಕರಿಸಿದೆನು
ಸಮ್ಮತದಿಹಲವು ಕಥಾಸಾರ ತೊಂಭತ್ತು ಸಾವಿರ
ಧರ್ಮ್ಮವದಿ ಪೇಳಿದೆನು ಕೇಳಿ ಜನರು ॥ ೩ ॥
ಅವರವರ ಮೂರ್ತಿಧ್ಯಾನ ಅವರವರ ಕೀರ್ತಿಮಾನ ।
ವಿವರದಿಂದಲಿ ನಾಮಗಳ ವಿಸ್ತರಿಸಿದೆನು ।
ಭುವನ ಆಗಣಿತಗಂತಕಿಯ ಶಿಲಾಮೂರ್ತಿ ।
ಅನಘಕಲ್ಯಾಣಕಥೆ ಅರವತ್ತು ಸಾವಿರ ॥ ೪ ॥
ಆಸ್ತಿಕ ಗುಣವು ಜನ್ಮಾಷ್ಟಮಿ ಏಕಾದಶಿಯ ।
ನಿರ್ಣಯವನು ಶ್ರುತಿ ಸ್ಮೃತಿ ಸಹಿತದಿ
ವರ್ಣಿಸಿದೆ ಕ್ಷೀರಾಬ್ಧಿಶಯನ ಆತೋಟಬಲನರ ।
ಸಿಂಹ ಮೂರ್ತಿಗಳ ಶ್ರೀಪಾದಗಳ ॥ ೫ ॥
ಸುಳಾದಿ ಅರವತ್ತುನಾಲ್ಕು ಸಾವಿರ ಬಹುತರನಾಮ
ವಳಿಯು ಇಪ್ಪತ್ತೈದು ಸಾವಿರವಾಗಿವೆ
ತಿಳಿದು ಶ್ವೇತ ದ್ವೀಪ ಅನಂತಾಸನ ವೈಕುಂಠ
ಸಲೆ ಶೇಷನ ಚರಿತ್ರೆಯನು ಪೇಳಿದೆನು
ಇಂತು ನಾಲ್ಕುಲಕ್ಷದಿಪ್ಪತ್ತೈದು ಸಾವಿರ ಕೃತಿಯನು ।
ಸಂತುಜನಕನ ನಾಮ ಘನಮಹಿಮೆ ।
ಸಂತತದಿ ಶ್ರುತಿ ಸ್ಮೃತಿ ಸಮ್ಮತದಿಂದ
ಪುರಂದರವಿಠಲ ವ್ಯಾಸಮುನಿಗಳು ಪೇಳಿಸಿದರು ॥ ೬ ॥

ಈ ಪದಗಳಲ್ಲಿ ಹೇಳುವವರ ಬರೆಯುವವರ ದೋಷಗಳಿರಬಹುದು. ಅವು ಶಬ್ದಮಾತ್ರವಲ್ಲದೆ ಸಂಖ್ಯೆಯು ಪುರಂದರದಾಸರ ೪॥ ಲಕ್ಷಕ್ಕೆ ಸಂಹೋಗುತ್ತದೆ. ಮೇಲ್ಕಂಡ ವಿವರಣೆಯು ಎಂಥವರಿಗೂ ಎದೆಯೊಡೆಯುವಂತಿದೆ. ಹಳೆವಹಿಯಲ್ಲಿ ಬಲು ಹಿಂದಿನವರು ಬರೆದಿಟ್ಟ ದೇವರ ನಾಮವನ್ನು ಕಲ್ಪಿತವೆನ್ನುವುದು ಸಾಹಸವಾಗುತ್ತದೆ. ದಾಸರು ನಾಲ್ಕೂ ಮುಕ್ಕಾಲು ಲಕ್ಷ ಪದಗಳನ್ನು ರಚಿಸಿದರೆಂಬ ಮಾತು ಇನ್ನೂ ಇತರ ಸುಳಾದಿಗಳಲ್ಲೂ ನಾಮಗಳಲ್ಲೂ ನಿಃಸಂಶಯವಾಗಿ ಉದಾಹರಿಸಲ್ಪಟ್ಟಿದೆ. ಪುರಂದರದಾಸರೊಬ್ಬರು ಮೇಲ್ಕಂಡ ಸಂಖ್ಯೆಯ ಗ್ರಂಥರಚನೆ ಮಾಡಿದ್ದರೆ ಉಳಿದ ದಾಸ ಮಹನೀಯರು ಎಷ್ಟು ಮಾಡಿರಬಹುದು? ಬೇರೆಯವರದನ್ನು ೧ ಲಕ್ಷವೆಂದು ಊಹಿಸಿದರೂ ೬ ಲಕ್ಷ ಬರೇ ಕನ್ನಡ ದಾಸಸಾಹಿತ್ಯವೇ ಆದಂತಾಗುವುದು. ಅಂದ ಮೇಲೆ ಮಿಕ್ಕ ಎಲ್ಲಾ ಕವಿಗಳ ಸಾಹಿತ್ಯದ ಸಂಖ್ಯೆಯು ಎಷ್ಟಾಗಬಹುದು. ಎಲ್ಲವೂ ಉಪಲಬ್ಧವಿದ್ದರೆ ಕನ್ನಡ ವಾಙ್ಮಯವು ಸಂಸ್ಕೃತದ ಸ್ಥಾನವನ್ನೆ ಹೊಂದಬಹುದಲ್ಲವೇ?

ಮಾನವ ಪ್ರಪಂಚದ ಇತಿಹಾಸದಲ್ಲಿ ಬಹು ಲಕ್ಷ ಗ್ರಂಥಗಳನ್ನು ಬರೆದವರೆಂಬ ಕೀರ್ತಿ ವೇದವ್ಯಾಸರೊಬ್ಬರಿಗಿದೆ. ಅನಂತರ ಮತಾಚಾರ್ಯರಲ್ಲಿ ಶ್ರೀ ಶಂಕರಾಚಾರ್ಯರು ೧ ಲಕ್ಷ ಗ್ರಂಥಕರ್ತರೆನಿಸಿ ಪ್ರಸಿದ್ಧರಾದರು. ವಿದ್ಯಾರಣ್ಯರೂ ಸ್ವಲ್ಪ ಹೆಚ್ಚುಕಡಿಮೆ ಇಷ್ಟೇ ಎಂದು ತಿಳಿದವರು ಹೇಳುತ್ತಾರೆ. ರಾಮಾನುಜಾಚಾರ್ಯರು ಅನೇಕ ಸಹಸ್ರ ಗ್ರಂಥಗಳೊಡೆಯರೆನಿಸಿದರು. ಮಧ್ವಾಚಾರ್ಯರು ೩೭ ಸಾವಿರ ಗ್ರಂಥಕರ್ತರೆನಿಸಿದರು. ಪುರಂದರದಾಸರು ರಚಿಸಿದ ಗ್ರಂಥಗಳ ಲೆಖ್ಖವನ್ನು ನೋಡಿದರೆ "ವ್ಯಾಸರ ನಂತರ ದಾಸರೇ" ಎಂಬ ನಾಣ್ಣುಡಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಬಹು ಪುರಾತನ ಕಾಲದಿಂದ ಪ್ರಚಾರದಲ್ಲಿದ್ದ ಭಾಗವತ ಧರ್ಮವನ್ನು ಕೀರ್ತನರೂಪದಲ್ಲಿ ಧರ್ಮೋಪದೇಶ ಮಾಡುವ ಸಂಸ್ಥೆಯನ್ನು ಕರ್ನಾಟಕ ದೃಷ್ಟಿಯಿಂದ ಉಜ್ಜೀವನಗೊಳಿಸಿದ ಕೀರ್ತಿಯು ಅನೇಕ ಕನ್ನಡ ದಾಸರಿಗೆ ಸೇರುವುದಾದರೂ ಸಂಪೂರ್ಣ ಕೀರ್ತಿಪಾತ್ರರು ಯಾರೆಂದರೆ ಪುರಂದರದಾಸರೇ. ದಾಸರಷ್ಟು ಕನ್ನಡ ಪದಗಳನ್ನು ರಚಿಸಿದವರು ಮತ್ತೊಬ್ಬರಿಲ್ಲ.

ಮೊದಲು ಕನ್ನಡ ಭಾಷೆಗೆ ಸಂಸ್ಕೃತ ವಿದ್ವತ್ಸಭೆಗಳಲ್ಲಿ ಗೌರವವಿರಲಿಲ್ಲ. ಧರ್ಮ ಸಂಬಂಧವಾದ ಮಾತೂ ಗೀರ್ವಾಣ ಭಾಷೆಯಲ್ಲಿ ಒಂದಲ್ಲದೆ ಅದಕ್ಕೆ ಪುರಸ್ಕಾರವಿಲ್ಲ. ದಾಸರು ಸಕಲ ಶಾಸ್ತ್ರಗ್ರಂಥಗಳ ಸಾರವನ್ನು ಕನ್ನಡಿಸಿದರು. ಮೂಲಗ್ರಂಥಗಳ ವ್ಯಾಸಪೀಠದಲ್ಲಿಟ್ಟು ಪೂಜೆಯನ್ನು ಮಾಡುವ ಮರ್ಯಾದೆಯನ್ನು ಕನ್ನಡಕ್ಕೆ ಮಾಡಿದರು. ಇವರ ಕೀರ್ತನೆಗಳಿಗೆ ಶ್ರೀ ವ್ಯಾಸರಾಯಸ್ವಾಮಿಗಳವರು "ಪುರಂದರೋಪನಿಷತ್" ಎಂದು ಹೆಸರಿಟ್ಟರು.

ಪುರಂದರದಾಸರ ಕಾಲದಲ್ಲಿ ಸಂಸ್ಕೃತ ಭಾರತವು ನಾರಣಪ್ಪ ಕವಿಯಿಂದ ಕನ್ನಡದಲ್ಲಿಯೂ ರಚಿಸಲ್ಪಟ್ಟಿತು. ರಾಜಸಭೆಯ ಪ್ರಶಂಸೆಗೆ ಬಂದಿತು. ನಾರಣಪ್ಪನು "ಕುಮಾರವ್ಯಾಸ"ನೆನಿಸಿದನು. 'ಸಂಸ್ಕೃತದಲಿನ್ನೇನು' ಎಂದು ಎದೆತಟ್ಟಿ ನಿಲ್ಲುವ ಧೈರ್ಯವು ಕರ್ನಾಟಕ ವಾಙ್ಮಯಕ್ಕೆ ಬಂದಿತು. ಈ ಸುಕೃತವೆಲ್ಲಾ ದಾಸರದಾಯಿತು.

ಬ್ರಹ್ಮಾನಂದದಾಯಕವಾದ ಸಂಗೀತಶಾಸ್ತ್ರ ಆ ಶಾಸ್ತ್ರಾಭ್ಯಾಸಿಗಳಿಗಾನಂದವಾಗುವಂತೆ ಅಪೂರ್ವ ರಾಗಗಳಲ್ಲಿ ಭಕ್ತಿಭರಿತವಾದ ಸಾ

(ಇನ್ನೂ ಇದೆ ಮುಂದುವರಿಸಿದೆ.)

ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು [illegible] ಕೆಮ್ಮು, ಕ್ಷಯ, ಸೂತಿಕಾ ರೋಗಗಳನ್ನು ಹಿಂಗಿಸಿ ಮಲಬದ್ಧತೆಯನ್ನೂ ಅಜೀರ್ಣವನ್ನೂ ಪರಿಹಾರಮಾಡ[illegible]

24 ಔನ್ಸ್ ರೂ 2   16 ಔನ್ಸ್ ರೂ 1 8 0   8 ಔನ್ಸ್ ರೂ 0 11 0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಕೋಶದ ವ್ಯಾಧಿಗಳನ್ನು [illegible] ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು [illegible]ಲಿಸುತ್ತದೆ

ಆಯೊಡ್ಯಾಸ್ಟ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ [illegible] ಔಷಧ, ಚರ್ಮವ್ಯಾಧಿಗಳಲ್ಲಿಯೂ [illegible] ವ್ಯಾಧಿಗಳಲ್ಲಿಯೂ ಶೀಘ್ರ ಗುಣಕಾರಿ

1 ಔನ್ಸ್ ರೂ 1 0 0   6 ಔನ್ಸ್ ರೂ 1 8 0

ದಕ್ಷಿಣ ಕನ್ನಡದ ಏಜೆಂಟರ   ಪ್ರೊವಿನ್ಶಿಯಲ್ ಸ್ಟೋರ್ಸ್, ಮಂಗಳೂರು.

BEHAR CHEMICAL WORKS,
Bhagalpur.

ಬಿ. ಸಿ ರಸಾಯನಿಕ ವೈದ್ಯಶಾಲೆಯ ಚ್ಯವನ ಪ್ರಾಸ ಲೇಹ್ಯ.

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ.

ಶೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಚವನ ಋಷಿಗಳು ಇದರ ಗುಣವನ್ನು ಬಹುಶ್ರೇಷ್ಠವಾಗಿ ವರ್ಣಿಸಿರು ವುದರಿಂದಲೂ ಎಲ್ಲ [illegible] ಕವಿರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇವರಲ್ಲಿ ಸಡಿಲ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8-0

ಏಜೆಂಟರು – ಶಾ ಕಂಪೆನಿ, ಗವರ್ನಮೆಂಟ್ ಕಾಲೇಜ್ ಎದುರು ಮಂಗಳೂರು

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager

---

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

WANDER OF THE DAY

(ಗೋಡೆಗೆ ತಗಲಿಸುವ ಗಡಿಯಾರ)



ಈ ಗಡಿಯಾರಗಳು ಈ ಚಿತ್ರದಲ್ಲಿ ಇರುವಂತೆಯೇ [illegible]

[illegible]

ಕ್ರಯ ಒಂದಕ್ಕೆ ರೂ. 3 – 8 – 0.

[illegible] 1 0 0

ಕೆ ಎನ್ ರಾಧಾಕೃಷ್ಣ ಎಂಡ್ ಬ್ರದರ್ಸ್,

106 [illegible]

K. N. Radhakrishna & Bros

106 [illegible] Bazaar, Madras

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು ಮಲಬದ್ಧತೆ, ಪಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2–8–0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ.   8 ಬಾಟ್ಲಿಗಳಿಗೆ ರೂ. 1–12–0.



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ [illegible] ದೊರೆಯುತ್ತವೆ   ಕ್ರಯ ಬಾಲಗ್ರಹ [illegible] ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0–0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ ಸ್ವರಾಣ ಜ್ವರ, ಕಫ ಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ.

ಬಾಟ್ಲಿ 1ಕ್ಕೆ ರೂ 1-8-0   ಸಣ್ಣ ಬಾಟ್ಲಿ 1ಕ್ಕೆ ಆಣೆ 13

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು.   ಕ್ರಯ ಡಬ್ಬಿ 1ಕ್ಕೆ ರೂ 2–8–0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್ ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:– ಶ್ರೀ ರಾಮ ಸ್ಟೇಶನರಿ ಹೌಸ್, [illegible] ಪೇಟೆ, ಕಾಸರಗೋಡು. [illegible] ಶ್ರೀನಿವಾಸ [illegible] ಪುತ್ತೂರು. ಮೆಸರ್ಸ್ [illegible] ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ. [illegible] ಮುಂಬಾಯಿ ನಂ. 4 [illegible]

The Canara Banking Corporation Udipi, Ltd.

Head office:—UDIPI, S K (Incorporated in British India) TEL.-'BANKING' **ESTD. 1906.**

Branches:—1 Udipi, 2 Coondapoor, 3. Car Street, Mangalore, 4. Shimoga, 5. Madras (George Town), **6 Bunder Mangalore, 7 Mercara** (North Coorg), **& 8 Virarajendrapet** (South Coorg)

DEPOSITS:

1922	1926	1930	1934	30 9 '35
ರೂ 2,28,419/	6,48,940/	20,28,887/	24,95,829/	**26,87 109/-**

SAVINGS BANK ACCOUNTS

INTEREST allowed at 3½ %

Facilities 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯನ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ ಕಿಂಗ್ ಎಂಡ್ ಕ್ವೀನ್ ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಪ್ರಾ ಕಂಪನಿಯಲ್ಲಿ ದೊರೆಯುವುದು

Telegrams PREMALATHA Bombay ... No 63 4

The Bombay Life Assurance Company, Limited

Kochikar Brothers,

M ... Branch Secretaries and Chief Agents for Bombay City & Suburbs

1935—OUR SILVER JUBILEE YEAR

ANNOUNCEMENT.

We have the pleasure to inform all our Constituents, Agents and ... that we have Shifted on 30th September 1935 our Bombay Chief Agency Office from Lohar chawl to 'Goutam Nivas' Charni Road Girgaum Bombay No 4 ... opposite Prarthana Samaj This has been necessitated by the expansion of our business as the New Premises are very well situated and more spacious ... we thus hope to render better service to our Policyholders. Our Patrons & Well wishers are requested to pay a visit to the New Premises at their early convenience. All correspondence and remittances should be addressed to our new Office address

Bombay, 1-10 35 KOCHIKAR BROTHERS

ಕರ್ಣಾಟಕ ಪ್ರಸೂತಿಸಂಜೀವನ:

ಬಾಣಂತಿಯರಿಗಾಗಿಯೇ ತಯಾರ ಮಾಡಿದ ಅಮೋಘ ಔಷಧ ಇದು ಗರ್ಭಕೋಶದೊಳಗಣ ಎಲ್ಲಾ ತರದ ನಂಜನ್ನು ಹೊರಗೆ ಹಾಕಿ ಗರ್ಭಕೋಶವನ್ನು ಸ್ವಸ್ಥಾನದಲ್ಲಿ ನಿಲ್ಲಿಸುವುದು ಇದರ ಸೇವನೆಯಿಂದ ಸರ್ವ ಧಾತುಗಳು ಮೊದಲಿನಂತೆಯೇ ತುಂಬುವವು

ಕರ್ಣಾಟಕ ಕ್ಷೀರಬಲಾ:

ಪಕ್ಷವಾತಕ್ಕೆ ಇದಕ್ಕೆ ಸಮಾನವಾದ ಔಷಧವು ಬೇರೆ ಇಲ್ಲ

ನಮ್ಮ ಔಷಧಗಳು ಮದ್ರಾಸು ಗವರ್ನಮೆಂಟಿನ ಸೆಂಟ್ರಲ್ ಬೋರ್ಡ್ ಒಫ್ ಇಂಡಿಯನ್ ಮೆಡಿಸಿನ್ಸ್‌ನವರಿಂದ ಮಂಜೂರುಮಾಡಲ್ಪಟ್ಟಿವೆ

ನಮ್ಮಲ್ಲಿ ಟಿಂಕ್ಚರ್ಸ್ ವಗೈರೆ ಎಲ್ಲಾ ಎಲೋಪತಿಕ್ ಔಷಧಗಳು, ಶಾಸ್ತ್ರೀಯ ಆಯುರ್ವೇದ ಔಷಧಗಳು, ಅಲಂಕಾರ ಸಾಮಗ್ರಿಗಳು (Toilets), ಸಾಬೂನಗಳೂ ಪೌಡರ್ ಫೇಸ ಪಾಯಿಗಳೂ ತಯಾರಾಗುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಈ ವಿಳಾಸಕ್ಕೆ ಬರೆಯಿರಿ

ವೆಂಕಟ್ರಾಯ ಅಣ್ಣಪ್ಪ ಬಾಳಿಗ— ಮೆನೆಜಿಂಗ್ ಡೈರೆಕ್ಟರ್

ಕರ್ಣಾಟಕ ಕೆಮಿಕಲ್ ಮತ್ತು ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ

ಹೆಡ್ ಆಫೀಸು ಮತ್ತು ಕಾರಖಾನೆ –ಉಡುಪಿ, ದಕ್ಷಿಣ ಹಿಂದೂಸ್ಥಾನ

ವ್ಯಾಪಾರದ ಡಿಪೋಗಳು –(1) ರಥಬೀದಿ ಮಂಗಳೂರು (2) 1/70 ಪ್ಯಾಪಪ್ಪ ನ್ಯಾಕನ ಬೀದಿ, ಜಾರ್ಜಟೌನ್ ಮದ್ರಾಸು (3) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

Karnataka Chemical and Pharmaceutical Works, Ltd , Udipi. (South India)

Edited, Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ 2 ರೂಪಾಯಿ
ಬಿಡಿ ಸಂಚಿಕೆ 1 ಆಣೆ.
Registered No. M. 498
ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons.
High Class Snuff Manufacturers
Mangalore S. I.
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE is NO EXPENSE BUT AN INVESTMENT"
Safeguard yourself & your family TODAY
Buy a policy in the BOMBAY LIFE
Kochikar Brothers,
Bombay

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible]

ಪುಸ್ತಕ ೨೯ ಮಂಗಳೂರು ತಾ. ೨೨ನೇ ಶುಕ್ರವಾರ ನವಂಬರ ೧೯೩೫ (22–11–'35) ಸಂಚಿಕೆ ೪೬

ಮಿಸ್. ಪದ್ಮಾದೇವಿ.

ಸೂಚನೆಗಳು.
NOTES.

ಹಿಂದೂಸ್ಥಾನದಲ್ಲಿ ಹೆಸರುವಾಸಿಯಾದ ಬೆನಾರಸ್ ಹಿಂದೂ ಯುನಿವರ್ಸಿಟಿಯ ಎಸಿಸ್ಟೆಂಟ್ ಚಾನ್ಸಲರು ಫೆಬ್ರುವರಿ ತಿಂಗಳ ವಿಷಯ ಪ್ರಕಟಿಸಿದ್ದಾರೆ. ಚಾನ್ಸಲರು ಹೊಸ್ತು ಇರುವವರೇ ಅದರ ಇಂಗ್ಲಿಷ್ ಭಾಷೆಗೆ ಆಡು ಸಂಗಿ ಹೆಲ್ಪ್ ಹೇಟ್ ಇರುತ್ತಾರೆ.

× × × × + ×

ಯುನಿವರ್ಸಿಟಿಯು ಮುಸ್ಲಿಂ ವಿದ್ಯಾರ್ಥಿಗಳಿಗೆ ಗೊಂಡೆ ಟೋಪಿಗಳನ್ನೇ ಇಡಿರಿ ಎಂಬ ಹುಕುಂ ಜ್ಯಾರಿ. ಆದರೆ, ಪಿಯ್ ಟೋಪಿಗಳು ಇಟೇಲಿಯ ಮೇಲಿನ ಸಂಕ್ಷನಿಂದ ಇನ್ನು ಬರಲಾರವು. ಕ್ರಯ ಹೆಚ್ಚಿದೆ. ಯಾವ ಜಾತಿಯ ಟೋಪಿಗಳಿಗೂ ಹುಕುಂ ಕೊಡಬೇಕೆಂದು ವಿದ್ಯಾರ್ಥಿಗಳ ಮನವಿ. ಹುಕುಂ ಕೊಟ್ಟರೆ, ಚಾನ್ಸಲರ್‌ಸಾಹೇಬರು ಗೊಂಡೆ ಟೋಪಿಗಳ ವ್ಯಾಪಾರವು ಹಾಳುಮಾಡಿದಂತಾಗುವುದು. ಮುಸ್ಲಿಂ ಮತ್ತು ಜಾತಿಯ ಗುರುತು ಸಿಗಲಾರದು.

× × × × × ×

ಹೈದರಾಬಾದಿನಲ್ಲಿ ಸೈಜಾಮರ ಸಿಲ್ವರ್ ಜುಬಿಲಿ. ಅದು-ಇದು-ಹೀಗೆಂದು ಗಡಿಬಿಡಿ ನಡೆಯುತ್ತಿದೆ. ಸಿಲ್ವರ್ ಜುಬಿಲಿ ದಿನವನ್ನು ಮುಂದರಿಸಿಯೂ ಆಯಿತು. ಆದರೆ, ರೈಲ್ವೆಯಲ್ಲಿ ೩೦೦ ಮಂದಿ ಉದ್ಯೋಗವಿಲ್ಲವೆಂದು ಮನೆಗೆ ಕಳುಹಿಸಿದರು—ಯಾರು? ರಿಟ್ರೆಂಚ್‌ಮೆಂಟ್ ಭೂತ! ಈ ೩೦೦ ಜನರಿಗೆ ಸಿಕ್ಕಿತು ಸಿಲ್ವರ್ ಜ್ಯುಬಿಲಿ ಬಹುಮಾನ!

× × × × × ×

ಬರುತ್ತದೆ! ಬರುತ್ತದೆ! ತಾರೀಕನ್ನು ಗಮನಿಸಿರಿ! ಯಾವುದು—ಹಿಂದೂದೇಶಕ್ಕೆ ನವಸುಧಾರಣೆಗಳು. ನವ ಢಿಲ್ಲಿಯಲ್ಲಿ ಯಾರಿಗೂ ನಿದ್ರೆಯಿಲ್ಲದಂತೆ! ಕೆಲವರಿಗಂತೂ ನಿದ್ರೆ ಹತ್ತುವುದೇ ಇಲ್ಲ.

× × × × ×

ಅಯಾಯ ಸಂಸ್ಥಾನದ ಗವರ್ನರ ಸಾಹೇಬರುಗಳು ಸ್ಪೆಶಲ್ ರೈಲು,—ಆರ್ಡಿನರಿ ರೈಲಿನಲ್ಲಿ ಹೊರಟು ವೈಸರಾಯರನ್ನು ಕಾಣಲು ಹೊರಟಿದ್ದಾರೆ.

× × × × × ×

ನಮ್ಮ ವೈಸರಾಯರಿಗಂತೂ ಪುರುಸೊತ್ತೇ ಇಲ್ಲ. ಆದರೆ, ಇದರ ಮಧ್ಯೆ ಇನ್ನೊಂದು ಮಹಾ ಸ್ಪರ್ಧೆ!—ಅದಾವುದು – ನಮ್ಮ ವೆ.ಕ.ದೊರೆಗಳಲ್ಲಿ ಸಾಕಷ್ಟು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಸೀಟು ಸಿಕ್ಕದೆ ಇರುವದು!

+ + + +

ಇದರ ಜೊತೆಗೆ ಔಷಧಿಯನ್ನು ಮಿ। ಬಾಲ್ಡವಿನ್ನರು ಹುಡುಕುತ್ತಿರುವರು. ಮೆಕ್ಡೋನಾಲ್ಡರನ್ನು ಒಂದು ಸೀಟಿನಲ್ಲಿ ಕುಳ್ಳಿರಿಸಬೇಕೆಂದೇ ದಿನ ಹುಡುಕುತ್ತಿರುವರು. ಕಾರ್ಯವು ಜಯವಾಗಲಿ. ಹಿಂದೂದೇಶದ ನವಸುಧಾರಣೆಗೆ ಇವರು ಬಹು ಅಗತ್ಯ.

+ + + +

ಕುಮಾರಿ ಜಾಜಿನಲ್ಲಿ ಹೆಸರುವಾಸಿಯಾದ ನಮ್ಮ ಆಗಖಾನ ಸಾಹೇಬರ ಪಿತೃವಿಗೆ, ಆಗಖಾನರು ದೇವರೇ ಎಂದು ಕನಸು ಬೀಳುತ್ತದಂತೆ. ಇತ್ತೀಚೆಗೆ ಮುಂಬಯಿಯಲ್ಲಿ, ಆಗಖಾನರು ತಮ್ಮ ಮಿತ್ರನನ್ನು ನೋಡಲು ಹೋದಾಗ್ಗ ಮಿತ್ರರವರ ಸಿಪಾಯಿ, ದೇವರು ಬಂದಿದ್ದಾರೆ ಎಂದು ಬೊಬ್ಬಿಟ್ಟನು. ಹೊರಬಂದು ನೋಡಲು ನಮ್ಮ ಜಾಜಿನ ಸಾಹೇಬರು, ಸಿಪಾಯಿಯ ಕಣ್ಣೆದುರಲ್ಲಿ ದೇವರು ಕಾಣಿಸಿದ್ದು, ಇನ್ನು ಇವರಿಗೆ ಬೇರೆ ಹೆಸರು ಇರುವದೇ.

+ + + +

ಪೂನಾದಲ್ಲಿ ಹರಿಜನರ ಕೆಲವಿದ್ಯಾರ್ಥಿಗಳಿಗೆ ತಲೆ ಬೋಳಿಸಿ, ಸವರ್ಣ ಹಿಂದೂಗಳ ಬಾಧೆಯಿಂದ ಕಾಲಭೇದದ ವಿಗ್ರಹಗಳಿಗೆ ಕಾಲುಗಳಿಂದ ಒದೆಯುವದೆ, ಉಗುಳಾಡಿ ಸುವದೆ, ಇವೆ ಮೊದಲಾದ ಕಾರ್ಯಗಳು. ಇವರಿಂದ ಅವರಿಗೆ ಸಿಕ್ಕುವ ಹೊಸ ಜಾತಿ ಯಾವುದು?

+ + + +

ಇದರ ಬೊಡ್ಡ್ವಣ್ಣನವರಾದ ಮಿಸ್ಟರ್ ಅಂಬೇಡಕಾರರು ಸ್ವಲ್ಪ ರಿಯಾಯಿತಿ ತೋರಿಸಿದ್ದಾರೆ. ಪೂನಾದಲ್ಲಿ ನಡೆಯುವ ಪರಿಷತ್ತಿನಲ್ಲಿ, ತಾನು ಸೂಚಿಸಿದ ಕೆಲವು ಠರಾವುಗಳನ್ನು ಪಾಸುಮಾಡಿದರೆ, ತನ್ನ ಘೋಷಣೆಯನ್ನು ಸ್ವಲ್ಪ ಕಡಿಮೆಮಾಡಿ ರಿಯಾಯಿತಿ ತೋರಿಸಲು ಹೊರಟಿದ್ದಾರೆ. ಎಷ್ಟರ ರಿಯಾಯಿತಿ—ಹಿಂದೂಗಳ ಅದೃಷ್ಟ!

+ + + +

ನಾಗಪುರದ ಕಾಂಗ್ರೆಸ್ಸಿನವರ ಮತ್ತು ಹೊಸ ಸಿಂಹಲಿಷ್ಟ ಪಾರ್ಟಿಯವರಿಗಿರುವ ಭೇದಗಳನ್ನು ಮತ್ತು ಎರಡು ಪಕ್ಷದವರೂ ಮುಂದಕ್ಕೆ ಜಟಾಪಟಿ ನಡೆಸದಂತೆ, ಗಾಂಧಿಯವರು ಪ್ರವೇಶಮಾಡಿರುವರು. ಮಹಾತ್ಮರ ಪ್ರವೇಶದಿಂದ ಉಭಯಪಕ್ಷದವರಲ್ಲೂ ರಾಜಿಯಾಗಲಿ, ಇಲ್ಲವಾದರೆ ನವಸುಧಾರಣೆಗೆ ಅಡ್ಡಿ ಮಾಡಲಿ.

+ + + +

ಇನ್ನೊಂದು ತೀರ್ಮಾನವಾಗಿಲ್ಲ— ಈ ಪರ್ಷದ ಕಾಂಗ್ರೆಸು ಎಲ್ಲಿ ನಡೆಯುತ್ತದೆಂದು. ಮುಂದರಿಸಿದರು

ಆರೋಗ್ಯಕ್ಕೆ ಓವಲ್ಟಿನ್ ಎಂಬುದು ಅತ್ಯಮೋಘ ಪಾನಕವೆಂದು ಸರ್ವ ಜಗತ್ತೇ ತೀರ್ಮಾನಮಾಡಿರುತ್ತದೆ. ನಿಮ್ಮ ಮನೆಯಲ್ಲಿ 'ಓವಲ್ಟಿನ್'ನನ್ನು ದಿನನಿತ್ಯದ ಪಾನಕವನ್ನಾಗಿ ಮಾಡಿರಿ. ನಿಮ್ಮ ಕುಟುಂಬದ ಪ್ರತಿ ಮೆಂಬರರಿಗೆ ಅದರ ಅಸಮಾನವಾದ ದೇಹವರ್ಧಕ ಶಕ್ತಿಯ ಪ್ರಯೋಜನವು ದೊರೆಯಲಿ. ಸರಿಯಾದ ದೇಹಪೋಷಣೆಯಲ್ಲೇ ಆರೋಗ್ಯವು ಹೊಂದಿಕೊಂಡಿದೆಯೆಂಬುದು ತಿಳಿದಿರಲಿ. ದೇಹ, ನರ, ಮೆದುಳುಗಳನ್ನು ಸುಸ್ಥಿತಿಯಲ್ಲಿಡಬೇಕಾದರೆ 'ಓವಲ್ಟಿನ್' ಎಂಬ ಅಸಮಾನ ಪಾನಕವೇ ಅವಶ್ಯ. 'ಓವಲ್ಟಿನ್' ರುಚಿಕರವಾಗಿದೆ. ನಿಮ್ಮ ಚಹಕ್ಕೆ 'ಓವಲ್ಟಿನ್' ಸೇರಿಸಿ—ಅದು ಆರೋಗ್ಯಕರ, ಬಲವರ್ಧಕ.

ನಿಮ್ಮ ಮನೆಯಲ್ಲಿ "ಓವಲ್ಟಿನ್"ನನ್ನು ಉಪಯೋಗಿಸಿದರೆ ನಿಮ್ಮ ಕುಟುಂಬಕ್ಕೆ ಸೇವು ಅತ್ಯುತ್ತಮ ಆಹಾರವನ್ನೊದಗಿಸಿಕೊಟ್ಟಂತಾಗುತ್ತದೆ. ಇದನ್ನು ಪ್ರಕೃತಿಜನ್ಯ ವಸ್ತುಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲು ಮತ್ತು ವಿಶಿಷ್ಟವಾಗಿ ತಯಾರಿಸಿದ ಕೋಳಿಮೊಟ್ಟೆಗಳಿಂದ ಇದು ಉತ್ಪನ್ನವಾಗಿರುತ್ತದೆ. ದೇಹಾರೋಗ್ಯಕ್ಕಾಗಿ ಇದನ್ನು ಉಪಯೋಗಿಸಿ ಕುಡಿಯಿರಿ. ಆರೋಗ್ಯಶಕ್ತಿ ಮತ್ತು ಚೈತನ್ಯಗಳನ್ನು ವೃದ್ಧಿಸಿಕೊಳ್ಳಿರಿ. ಯಾವಾಗಲೂ ಖಾಸಾ "ಓವಲ್ಟಿನ್"ನನ್ನೇ ಪಡೆಯಿರಿ. ನಕಲಿಗಳನ್ನು ಬಹಿಷ್ಕರಿಸಿರಿ; ಅವು ಗುಣದಲ್ಲೂ ಕ್ರಯದಲ್ಲೂ ಖಾಸಾ "ಓವಲ್ಟಿನ್"ಗೆ ಸರಿಸಾಟಿಯಾಗವು.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿ—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

"ಓವಲ್ಟಿನ್" ಟೋನಿಕ್, ಆಹಾರ, ಪಾನಕ.

OVALTINE

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ. ಮದ್ರಾಸ.

OV/309

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd.
Head Office:-43, Byragimatam Street,
Post Box No. 203, Madras.

ಪ್ರಯತ್ನ—ಮದ್ರಾಸಿನಲ್ಲೇ ಜರಗಬೇಕೆಂದು. ಮದ್ರಾಸಿನಲ್ಲಿ ನಡೆಯುವುದಕ್ಕೆ ಈಗಿನ ಪ್ರೆಸಿಡೆಂಟರ ಸಮ್ಮತಿ ಇದೆ. ನಮ್ಮ ಟಿಟೊ ಮದ್ರಾಸಿಗೇನೆ, ಕಾರಣ, ತಮ್ಮ ಮುಂಗಳೂರಿನ ಕಾಂಗ್ರೆಸ್ ಪಾರ್ಟಿಗೆ ಹತ್ತಿರವಾಯಿತಲ್ಲ ಬರೇ ೫೫೦ ಮೈಲು.

Estd 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,
PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,
ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ. ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretary.

ಮಹಾಪ್ರಭುತ್ವದ ಜನಾಂಗಗಳಿಗೆ ಇಟಲಿಯ ಎಚ್ಚರಿಕೆ!

ಇಟಲಿಯು ಸೆಂಕ್ಷನುಗಳನ್ನು ಪ್ರತಿಕೂಲಿಸುವುದು!

ಓಗಡನ್ ಪ್ರಾಂತ್ಯದಲ್ಲಿ ಭೀಕರ ಕದನ! ಇಟಲಿಯಾನರು ಚೆಲ್ಲಾಪಿಲ್ಲಿ ಓಡಿದರು!

ಧಾರಾಳ ಯುದ್ಧಸಾಮಗ್ರಿಗಳು ಎಥಿಯೋಪಿಯಾವನ್ನು ಸೇರುತ್ತಿವೆ!

ಓಗಡನ್ ಪ್ರಾಂತ್ಯದಲ್ಲಿ ಭೀಕರ ಕದನ

ಇಟಲಿಯಾನರು ಚೆಲ್ಲಾಪಿಲ್ಲಿಯಾದರು!

ಹಬಸಿಗಳ ಶೌರ್ಯ!

ಆಡಿಸ್ ಅಬಾಬ ನವಂಬರ ೧೬ ಗು

ಓಗಡನ್ ಪ್ರಾಂತ್ಯದ ದಾಗ್ನಾಬಾರು [illegible]ಬಳಿ ನಡೆದ ಸಮರದಲ್ಲಿ ಹಬಸಿಗಳು ಇಟಲಿಯಾನರ ನಾಲ್ಕು ಟೆಂಕ ಗಳನ್ನು ವಶೀಕರಿಸಿ[illegible]ಕೊಂಡಿದ್ದಾರೆ ಬರಿ ರ್‍ಯಾವಲ್‌ಗಳಿಂದ ಶಸ್ತ್ರ[illegible]ಗಳಾದ ಹಬಸಿಗಳು ಹಠಾತ್ತಾಗಿ, ಇಟಲಿಯಾನ ಟೆಂಕುಗಳ ಮೇಲೆ ಬಿದ್ದು, ಅವುಗಳನ್ನು ಹಿಡಿದಿರುವರು ಈ ಕದನದಲ್ಲಿ ಇಟಲಿಯಾನರಿಗೆ ಧಾರಾಳ ನಷ್ಟವಾಗಿದೆ ಎಂದೂ, [illegible]ವರು ದಾರಿತೋಚದೆ ಓಡುತ್ತಿರುವರೆಂದೂ, [illegible]ರು ಇಟಲಿಯಾನ ಆಫೀಸರರ ಮಡಿದಿರುವ[illegible]ರೆಂದೂ ವಾರ್ತೆ ಬಂದಿರುತ್ತದೆ

ಇಟಲಿಯಾನ ಪ್ರಸಿದ್ಧ ಪತ್ರ

ರೋಮ್ ತಾ ೧೬

ಮಕಾಲೆ ಪ್ರಾಂತ್ಯದಲ್ಲಿ ಇಟಲಿಯಾನರ ಎರಡನೆ ತಂಡವು ಅಬಿನ್ ಎಡ್ಡ ಮತ್ತು ಅಬಿಯಾಲೊ ಎಂಬ ದೇಶಗಳನ್ನು ಹಿಡಿದಿರುವುದೆಂದೂ, ದೇಶಿ ಸೈನಿಕರು ಟಕಜೆ ನದಿ ಅತ್ತ ಕಡೆ ಸರಿಯುತ್ತಿರುವರೆಂದೂ, ಇಟಲಿಯಾನರ ದಕ್ಷಿಣ ದಿಕ್ಕಿನ ಮುಂದ ನಡಿಕೆಯು ಯೋಗ್ಯ ರೀತಿ ಸಾಗಿರುತ್ತದೆಂದೂ ರೋಮಿನಿಂದ ವಾರ್ತೆ ಬಂದಿರುತ್ತದೆ

ಆಂಗ್ಲೇಯರನ್ನು ದೂಷಿಸುವ ರೋಮಿನ ವಾರ್ತಾಪತ್ರಿಕೆಗಳ ಬುದ್ಧಿ ಬದಲಾವಣೆಯಾದಂತಾಗಿದೆ ಬ್ರಿಟಿಷ ಸಾಮಾನ ಗಳನ್ನು ಬಹಿಷ್ಕಾರ ಮಾಡಬೇಕೆಂದು ಸಾರಿದ ಈ ಪತ್ರಿಕೆಗಳು ಈಗ ಎ[illegible] ವಿಷಯವನ್ನು ನವೀನ ರೀತಿಯಲ್ಲಿ ಆಲೋಚಿಸಲು ಪ್ರಾರಂಭಿಸಿವೆ ಬ್ರಿಟಿಷರಿಗೂ-ಇಟಲಿಗೂ ಮ[illegible]ಚಿನಿಂದ ಮೈತ್ರಿ ಇತ್ತೆಂದೂ ಅವರೊಳಗೆ ಪರಸ್ಪರ ಕಲಹಗಳ ಎದ್ದಿದ್ದರೂ ಅವುಗಳು ಸಾಮಾನ್ಯವೆಂದೂ ಬ್ರಿಟಿಷರು,ತಾವು ಕೈಕೊಂಡ ಈ ಮಹಾಕಾರ್ಯದಲ್ಲಿ ಆತಂಕಮಾಡಬಾರದಾಗಿಯೂ, ಈ ಪ[illegible]ಕೆಗಳಿಂದ ಲೇಖಗಳು ಹೊರಡುತ್ತಿವೆ

ಸೆಂಕ್ಷನುಗಳು

ಇಟಲಿಯು ಸೆಂಕ್ಷನುಗಳನ್ನು ಪ್ರತಿಕೂಲಿಸುವುದು. ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳು ಜನಪದ ಮಂಡಳದೊಡನೆ ಸಹಕರಿಸುವುವು.

ಆಸ್ಟ್ರಿಯಾ ಸರಕಾರವು ಸೆಂಕ್ಷನುಗಳ ವಿಚಾರದಲ್ಲಿ ಜನಪದ ಮಂಡಳದೊಡನೆ ಸಹಕರಿಸುವ ತನ್ನ ಇಚ್ಛೆಯನ್ನು ವ್ಯಕ್ತಮಾಡಿರುತ್ತದೆ. ಜರ್ಮನಿಯು ತನ್ನ ವ್ಯಾಪಾರದ ಸ್ಥಿತಿಯನ್ನನುಸರಿಸಿ ಸೆಂಕ್ಷನುಗಳಲ್ಲಿ ಭಾಗವಹಿಸುವುದು

ಇಟಲಿಯು ಕೆಳಗಿನ ಎಚ್ಚರಿಕೆಯನ್ನು ಮಹಾಪ್ರಭುತ್ವದ ಜನಾಂಗಗಳಿಗೆ ಕಳುಹಿಸಿರುತ್ತದೆ —

"ನಾವು ಕೈಕೊಂಡ ಕಾರ್ಯವು ಧರ್ಮಸಮ್ಮತವಾದುದು ನಾವು ಎಬಿಸೀನಿಯಾಕ್ಕೆ ಕಾಲೊನಿಂದಿಂದ ೧೫,೦೦೦ ಗುಲಾಮರನ್ನು ವಿಮೋಚನೆಗೊಳಿಸಿದ್ದೇವೆ, ಅಲ್ಲದೆ ಎಬಿಸೀನಿಯಾವನ್ನು ಯೋಗ್ಯ ರೀತಿಯಲ್ಲಿ ಆಳುವುದೇ ನಮ್ಮ ಉದ್ದೇಶ ಎಲ್ಲೆಲ್ಲೂ ಜನರು ನಮ್ಮ ಆಶ್ರಯವನ್ನು ಕೇಳುತ್ತಿದ್ದಾರೆ, ನಮ್ಮ ಅಧಿಕಾರದ ಕೈಯನ್ನು ಅಲ್ಲಿಂದ ತೆಗೆದರೆ, ಅಲ್ಲಿ ಜನಸಮುದಾಯಕ್ಕೆ ಕಷ್ಟಪರಂಪರೆಗಳು ಒದಗುವುವು. ಕೊನೆಯು (ಶರ್ತಗಳು) ಪ್ರಕಾರ ಜ್ಯಾರಿಗೆ ಬಂದ ಈ ಸೆಂಕ್ಷನುಗಳು ಸ್ವಾತಂತ್ರ್ಯದಾಯಕವಲ್ಲ" ಅವು ಅನ್ಯಾಯಗಳಿಂದ ತುಂಬಿರುತ್ತದೆ ಈ ಸೆಂಕ್ಷನುಗಳಿಂದ ಈಗಿನ ಕಲಹವು ಇನ್ನೂ ಬೆಳೆಯುವಂತಾಗುವುದು ಸೆಂಕ್ಷನುಗಳಿಂದ ವಿವಿಧ ಜನಾಂಗಗಳಿಗೆ ಪರಸ್ಪರ ವೈಮನಸ್ಸು ಉಂಟಾಗಿ ಪ್ರಪಂಚದಲ್ಲಿ ಕ್ಷೋಭೆಯು ಉಂಟಾಗುವುದು ಸೆಂಕ್ಷನುಗಳು ಪ್ರತಿಕೂಲಿಸಲು ನಾವು ತಕ್ಕ ಯೋಜನೆಗಳನ್ನು ಮಾಡಿದ್ದೇವೆ ಇವುಗಳನ್ನು ಎದುರಿಸಲು ಯುದ್ಧವನ್ನು ಹೂಡಲು ನಾವು ಸಿದ್ಧರಿದ್ದೇವೆ"

ಧಾರಾಳ ಯುದ್ಧಸಾಮಗ್ರಿಗಳು ಎಥಿಯೋಪಿಯಾವನ್ನು ಸೇರುತ್ತಿವೆ-ಇಟಲಿಯಾನರ ಮೇಲೆ ಅಭಿಕ್ರಮ-೧೦೦೦ ಇಟಲಿ ಸೈನಿಕರನ್ನು ಸೆರೆಹಿಡಿದಿರುವರು ಇಟಲಿಯವರ ಸೋಲು

ನವಂಬರ ತಾ ೧೪

ಹರಾರ ಪ್ರದೇಶದಲ್ಲಿ ರಾಸ್ ಡೆಸ್ಟಾನೆಂಬ ನಾಯಕನ ಸೇನಾದಳವು ಬಹಳ ಪರಾಕ್ರಮದಿಂದ ಇಟಲಿಯಾನರ ಮೇಲೆ ಅಭಿಕ್ರಮಿಸಿತು ಹದಿನೆರಡು ಇಟಲಿಯಾನರು ಮಡಿದಿರುವರು ೧೦೦೦ ಸೈನಿಕರನ್ನು ಸೆರೆಹಿಡಿದಿರುವರು ರಾಸ್ ಡೆಸ್ಟನ ಈಗ ಕನ್ಯಾ ಗಡಿನಾಡಿನ ಹತ್ತಿರದಲ್ಲಿ ಇಟಲಿಯಾನ ಸೈನ್ಯಗಳ ಮೇಲೆ ಬೀಳಲು ಉತ್ತರದಿಕ್ಕಿನಲ್ಲಿ ಮುಂದುವರಿಯುತ್ತಿದ್ದಾನೆ [illegible]ನ ಜಿಜಿಗಾ ಎಂಬಲ್ಲಿ ಎಥಿಯೋಪಿಯಾನರು ವಿಶೇಷ ಸಿದ್ಧತೆಗಳನ್ನು ಮಾಡಿರುತ್ತಾರೆ ಇಲ್ಲಿ ಹ[illegible] ಸೈನಿಕರನ್ನು ಒಯ್ಯುವ ಒಂದು ಲಾರಿಯ ಮೇಲೆ ಇಟಲಿಯಾನ ವಿಮಾನಗಳು [illegible]ಸಿದುವು ಇಲ್ಲಿ ಅಂತರಿಕ್ಷದಲ್ಲಿ ಇಟಲಿಯಾನ ವಿಮಾನಗಳು ಸಂಚರಿಸುತ್ತವೆ ಆ[illegible] ಎಂಬಾರ್ಗೋ ಎಂಬ ನಿರ್ಬಂಧವು ತೆಗೆಯಲಾಗಿ ಈಗ ಹಬಸಿಯವರಿಗೆ ಧಾರಾಳ ಯುದ್ಧೋಪಕರಣಗಳು ಬಂದು ಸೇರುತ್ತಿವೆ ಔಷಧಿಗಳು ಕೂಡಾ ಬಂದಿವೆ ವಿಷಕರ ಗೇಸಿನಿಂದ ರಕ್ಷಿಸಿಕೊಳ್ಳಲು ಅರ್ಧ ಮಿಲಿಯ ಗೇಸ್ ಮಾಸ್ಕುಗಳ ಬಂದಿವೆ ಇನ್ನೂ ಯುದ್ಧೋಪಕರಣಗಳ ಬರಲಿವೆ

ಹಬಸಿಗಳು ಜಯಶೀಲರಾಗುವರೇ?

ಆದರೆ ಹಬಸಿಯವರ ಈ ಯುದ್ಧದಲ್ಲಿ ಈ ಭಾರಿ ಜಯ ಶಾಲಿಯಾಗುವುದರಲ್ಲಿ ತುಂಬಾ ಸಂದೇಹಗಳಿವೆ ಅಲ್ಲಿನ ಅಂತಃಕಲಹಗಳೇ ಅವರ ಸೋಲಿಗೆ ಕಾರಣವಾಗಬಹುದು ಹಬಸಿಗಳ ಧೀರತೆ ವೀರತ್ವ ಮೊದಲಾದವುಗಳು ನಂಬತಕ್ಕವುಗಳಲ್ಲ ಇಟಲಿಯ ಜಯವು ಹಲವರನ್ನು ದಿಗಿಲುಗೊಳಿಸಿದೆ ತಂಡೋಪತಂಡ ಜನರು ಇಟಲಿಗೆ ಶರಣಾಗತರಾಗುತ್ತಿದ್ದಾರೆ ಬೊಂಬುಗಳಿಂದಂತೂ ಇವರು ಭೀತಿಮಯರಾಗಿದ್ದಾರೆ ಮಾತ್ರವಲ್ಲ ಹಬಸಿಯ ಚಕ್ರವರ್ತಿ ಕಡೆಗೆ ಜನರಿಗೆ ಅಷ್ಟು ಪ್ರೀತಿ ವಿಶ್ವಾಸವಿಲ್ಲವೆಂದೂ,-ಇದಕ್ಕೆ ಪಟ್ಟಕ್ಕೆ ನಿಜವಾಗಿಯೂ ಹಕ್ಕುದಾರನಾದ ರಾಸ್ ಮೆನಲಿಕ್ ಚಕ್ರವರ್ತಿಯ ಮಗನ ಬಂಧನವೆ ಕಾರಣ ಸಾಧ್ಯವಾದರೆ, ಚಕ್ರವರ್ತಿಯವರನ್ನು ಕೆಲವರು ಕೊಲೆಮಾಡಲೂ ಸಾಕು ಎಂದು ಕೆಲವರ ಹೇಳಿಕೆ.

ಇಟಲಿಯವರು

ಯುದ್ಧಸನ್ನಾಹದೊಡನೆ ಅಲ್ಲಿ ರಾಜ್ಯ ರಚನೆಯನ್ನು ಮಾಡುತ್ತಿದ್ದಾರೆ ಅಲ್ಲಲ್ಲಿ ಮಾರ್ಗೋಪಾಯಗಳನ್ನು ರಚಿಸುತ್ತಿದ್ದಾರೆ. ಬಾವಿಗಳನ್ನು ತೋಡುತ್ತಿದ್ದಾರೆ. ಇಟಲಿಯಾನ ಸೈನಿಕರು ಈ ಕಾರ್ಯದಲ್ಲಿ ದಣಿದುದ್ದು ಹೆಚ್ಚು. ಈಗಿನ ಮುಂದುವರಿಕೆಯಲ್ಲಿ ಇವರು ನೀರಿನ ಸರಬರಾಯಿಯ ವಿಷಯ ಹೆಚ್ಚು ಜಾಗ್ರತೆಯನ್ನು ತೆಗೆದುಕೊಳ್ಳುತ್ತಿದ್ದಾರೆ ಉಷ್ಣ ಪ್ರದೇಶವಾದ ದರಿಂದ ಬೇಕಾದಷ್ಟು ನೀರು ದೊರಕುವುದಿಲ್ಲ [illegible]ರುವ ಸ್ಥಳಗಳನ್ನು ವಶೀಕರಿಸದಿದ್ದರೆ, ಹಬಸಿಗಳು ಇವುಗಳಲ್ಲಿ ವಿಷ ಚೆಲ್ಲಬಹುದು ಎಂಬ ಹೆದರಿಕೆಯು ಇವರಲ್ಲಿ ಇದೆ ಮಾತ್ರವಲ್ಲ, ನೀರಿರುವ ಸ್ಥಳಗಳ ಅತಿ ವಿರಳ [illegible]ದಕ್ಕೆ ಇರುವ ದೇಶಗಳು ಮರುಳುಪ್ರದೇಶಗಳ - ಇಟಲಿಯ ವಿಮಾನಗಳ ಅಲ್ಲಲ್ಲಿ [illegible] ವೈರಿಗಳ ಗುಟ್ಟನ್ನು ತಿಳಿಯುತ್ತಿವೆ

ಟಿಗ್ರೆ ಪ್ರಾಂತ್ಯದಲ್ಲಿ ಭಯಂಕರ ಕದನ-ಇಟಲಿಯಾನರು ಆಶ್ಚರ್ಯಚಕಿತರಾಗಿರುವರು-ಹಬಸಿಗಳ ಅಭಿಕ್ರಮ

ನವಂಬರ ತಾ ೧೫

ಇಟಲಿಯಾನರ ಒಸ್ಕಾರಿ ದಳವೊಂದು ಧನಶಾಲಿ ಭರ್ಗವಾಗಿ ಕರ್ನಲ್ [illegible] ಯೋಟಿಯ ಇನ್ನೊಂದು ಇಟಲಿಯಾನ ದಳವನ್ನು ಸೇರಲು ಹೋಗುತ್ತಿರುವಾಗ ಹಾದಿಯಲ್ಲಿ ಅವಿತಿದ್ದ ೫೦೦ ಹಬಸಿಗಳು ಮೆಶೀನು ಗನ್ನುಗಳಿಂದ ಕೂಡಿದವರಾಗಿ ಇವರ ಮೇಲೆ ಬಿದ್ದರು ಆಶ್ಚರ್ಯಚಕಿತರಾದ ಇಟಲಿಯಾನರ ದಾರಿತೋಚದೆ ಓ[illegible] ಮೆಶೀನು ಗನ್ನುಗಳ [illegible] ಕರ್ನಲ್ [illegible] ಸೈನ್ಯದಳವು ಬಹಳ ಸಾಹಸದಿಂದ [illegible] ಸಾಧ್ಯ[illegible] ದಿವಸದ ಕದನವು ನಡೆಯಿತು [illegible] ಹಬಸಿಗಳ [illegible] ಇಟಲಿಯಾನರ ಕಡೆಯಲ್ಲಿ ೫೦ ಆಸ್ಕಾರಿಗಳ ಗಾಯ ಹೊಂದಿದ್ದಾರೆ,-೩೦ ಜನರು ಸತ್ತಿರುವರು ಹಬಸಿಗಳ ಪುನಃ [illegible]ಗಳನ್ನು [illegible] ಎಥಿಯೋಪಿಯಾವು ಭೀಕರ [illegible] ಸ್ಥಳವಾಗಿರುತ್ತದೆ [illegible] ಕೂ[illegible] ಇಟಲಿ [illegible] ಧಾರಾಳ ಸ[illegible]ಗಳನ್ನು ಕೆ[illegible] [illegible] ಇಟಲಿಯಾನರ [illegible]ದಲ್ಲಿ [illegible] ಗಳಿಂದ ಹಲವು ಹಬಸಿ ಹಳ್ಳಿಗಳನ್ನು [illegible] ಮಾಡಿರು[illegible] ಇದ[illegible] ಹಬಸಿಗಳ [illegible] ಲಿಯ ಹತ್ತಿರ ಇಟಲಿಯಾನರ [illegible] [illegible] [illegible]ತ್ತದೆ ಹಬಸಿಗಳ ಭೀತಿ[illegible]

ಸೆಂಕ್ಷನುಗಳ ವಿಚಾರ

ಹಿಂದುಸ್ಥಾನವು ಹೇಗೆ ವರ್ತಿಸಬೇಕು? ನಮ್ಮ ಸರಕಾರವು ಈ ಸೆಂಕ್ಷನುಗಳಲ್ಲಿ ಭಾಗವಹಿಸಲು ಒಪ್ಪಿರುತ್ತದೆ ಇಟಲಿಯಿಂದ ಹಿಂದೂದೇಶಕ್ಕೆ ವರ್ಷಕ್ಕೆ ಸಾಧಾರಣ [illegible] ಕೋಟಿ [illegible] ದೊರೆಯುತ್ತದೆ ಆದುದರಿಂದ ಸೆಂಕ್ಷನುಗಳನ್ನು ಜ್ಯಾರಿಗೆ ತರುವಾಗ ಈ ವಿಚಾರವನ್ನು ಮುಖ್ಯವಾಗಿಟ್ಟು ನಮಗೆ ಇವುಗಳಿಂದ ಒದಗಬಹುದಾದ ನಷ್ಟವನ್ನು ಭರ್ತಿ ಮಾಡಲು (ಜನಪದ ಮಂಡಳವು ಧರಿಸಿದಂತೆ) ಏರ್ಪಾಡುಗಳನ್ನು ಮಾಡತಕ್ಕದು ಬ್ರಿಟಿಷರಿಗೂ ಫ್ರೆಂಚರಿಗೂ ಈ ಸೆಂಕ್ಷನುಗಳಿಂದ ನಷ್ಟ ಒದಗಿದರೂ, ಅವುಗಳನ್ನು ಅವರು ಹೊರತಕ್ಕದು ಯಾಕೆಂದರೆ ಈ ಕಲಹದಲ್ಲಿ ಅವರ ಉದ್ಧಾರವು ಹೊಂದಿಕೊಂಡಿದೆ ಎಂದು ಶ್ರೀ ಎಸ್. ಎನ್ ಸರ್ಕಾರರವರ ಮತ.

ಒಂದು ಆಶ್ಚರ್ಯಕರ ಸ್ವಪ್ನ.

ಪ್ರೆಟೋರಿಯಾ ಎಂಬಲ್ಲಿ ಓರ್ವ ಸ್ತ್ರೀಗೆ ಒಂದು ವಿಚಿತ್ರ ಸ್ವಪ್ನ ಬಿದ್ದಿರುತ್ತದೆ. ಪ್ರಿಟೋರಿಯಾವು ಸಂಯುಕ್ತ ಅಮೇರಿಕಾದಿಂದ ಅತಿ ದೂರದಲ್ಲಿರುವ ಒಂದು ನಗರ ಈ ಕನಸಿನಲ್ಲಿ ಇವಳಿಗೂ, ಲಿಂಡ್‌ಬರ್ಗ್ ಕೂಸನ್ನು ಕೊಲೆ ಮಾಡಿದ ನಿಜವಾದ ಅಪರಾಧಿತನಿಗೂ ಸಂಭಾಷಣೆ ನಡಿಯಿತು ಈ ಶಿಶುವಿನ ಕೊಲೆಗಾಗಿ ನ್ಯೂಯೋರ್ಕಿನಲ್ಲಿ ಜರ್ಮನ ಕಮ್ಸ್ಪಾರಿಗನಾದ ಬ್ರುನೊ ಹಾಪ್ಟಮೇನ್‌ನ ವಿಚಾರಣೆ ನಡೆಯುತ್ತಿದೆ ಮಾತ್ರವಲ್ಲದೆ ಈತನು ಅಪರಾಧಿತನೆಂದು ಹಲವು ಘಟನೆಗಳಿಂದ ಪತ್ರ ಸಾಕ್ಷಗಳಿಂದ ದೃಢವಾಗುತ್ತಿದೆ ಇವಳ ಕನಸಿನಲ್ಲಿ ಈ ನಿಜವಾದ ಅಪರಾಧಿತನ ತಾನು [illegible]ಕನ್ಸಾಸ ನಗರದಿಂದ ಬಂದ ಲಿಂಡ್‌ಬರ್ಗ್ ಕೂಸನ್ನು ಕೊಲೆಮಾಡಿದ್ದನೆಂದೂ ತನ್ನ ಹೆಸರು ಜೆ ವಿ ಬ್ಲಿರನೆಂದೂ, ಮತ್ತು ಹಾಪ್ಟಮೇನನು ನಿರಪರಾಧಿಯೆಂದೂ ತಿಳಿಸಿರುವನು ಇದರಲ್ಲಿ ಆಶ್ಚರ್ಯವೇನೆ ವರೆ ಪ್ರಿಟೋರಿಯಾದ ಈ ಸ್ತ್ರೀ ತನ್ನ ಇಷ್ಟರವರೆಗಿನ ಜೀವಮಾನದಲ್ಲಿ ಅಮೇರಿಕಾದ ನ್ಯೂಯೋರ್ಕ ನಗರವನ್ನು ನೋಡಿದ್ದಿಲ್ಲ ಆದರೆ ಇವಳ ನ್ಯೂಯೋರ್ಕಿನ ವರ್ಣನೆ ಇತ್ಯಾದಿಗಳ ಹಲವದಲ್ಲಿ ಆಶ್ಚರ್ಯ ಉಂಟುಮಾಡಿರುತ್ತದೆ ಜೆ ವಿ ಬ್ಲಿರನ್ನು ಈಗ ಮಡಿದಿರ ಬಹುದ [illegible] ತಿಳಿದ [illegible] ಈ ಸ್ವಪ್ನದ ಆಧಾರದಲಿ ಹಾಪ್ಟಮೇನನ ಬಂಧವಿಮೋಚನೆಗಾಗಿ ಆತನ ವಕೀಲರು ಪ್ರಯತ್ನಿಸುವರಂತೆ

ಇಂಗ್ಲಾಂಡಿನ ವ್ಯಾಪಾರ ಅಭಿವೃದ್ಧಿ.

ಇಂಗ್ಲೆಂಡಿನ ಎಲ್ಲೆಲ್ಲೂ ವ್ಯಾಪಾರದ ಅಭಿವೃದ್ಧಿಯ ಕುರುಹುಗಳ ಕಾಣುತ್ತಿವೆ ಈ ಹಿಂದಿನ [illegible] ಹಲವು ಗಿರಣಿಗಳು ಕಾರ್ಖಾನೆಗಳ [illegible] ಹಲವು ಇತರ ಸ್ಥಳಗಳ [illegible]ಯಿಂದಾಗಿ ಧಾರಾಳ ಜನರಿಗೆ ಉದ್ಯೋಗವು ದೊರಕುವುದು ಉತ್ತರದ ಒಂದು ಮಹಾಸಂಸ್ಥೆ ಬೇಗನೆ ಕಾರ್ಯ ಪ್ರಾರಂಭ ಮಾಡುವುದು [illegible] ಸಾಮಾನ ಗಳನ್ನು ತಯಾರಿಸುವ [illegible]ಗಳ ಪುನ ಜನ್ಮದಿಂದ ವವು ಉತ್ಪತ್ತಿಗೆ [illegible] ಒಂದು ಕಬ್ಬಿಣದ [illegible] [illegible] ಉದ್ಯೋಗಿಗಳಿಗೆ ಉಪಯೋಗವಾಗುವುದು

ಹಿಂದೂದೇಶದ ಸಾಂಪತ್ತಿಕ ವಿಚಾರ

ಕೆಳಗಿನದು ಎಸ್ ಎಸ್ ಸರಕಾರ್‌ರವರ ಬಂಗಾಳದ ಚೇಂಬರ್ ಒಫ್ ಕೋಮರ್ಸಿನಲ್ಲಿ ಮಾಡಿದ ಭಾಷಣದ ಸಾರಾಂಶ

ಹಿಂದುದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರಹೊಂದಬೇಕಾದರೆ ಹಣವು ಸುಲಭ ರೀತಿಯಲಿ ದೊರಕುವಂತಾಗಬೇಕು ಹಣದ ದರವು ಸುಲಭವಾದಲಿ ದವಸ, ಜೀನಸುಗಳ ಕ್ರಯವು [illegible]ವುದು ಇಂಗ್ಲೆಂಡಿನ ವ್ಯಾಪಾರವು ಈ ಸೂತ್ರದಲ್ಲಿ ನಡೆಯುತ್ತದೆ

ಸಾಂಪತ್ತಿಕ ಸುಧಾರಣೆಯನ್ನು ಮಾಡುವ ಹಲವು ಹೊಸ ಸ್ಕೀಮುಗಳನ್ನು ಮಾಡತಕ್ಕದ್ದು.

ಕೈಗಾರಿಕೆಗಳಿಗೆ ಸರಕಾರದ ಆಶ್ರಯವು ದೊರಕಬೇಕು ಸರಕಾರವು ಕೈಗಾರಿಕೆಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು ನಮ್ಮಲ್ಲಿ ತಯಾರಾಗುವ ಯಾವತ್ತೂ ಸಾಮಾನುಗಳಿಗೆ ಹೊರಗಣ ದೇಶದ ಸ್ಪರ್ಧೆಯಿಲ್ಲದಂತೆ ಮಾಡಬೇಕು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದ್ದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—
ನಮ್ಮ ಫಾರ್ಮೆಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಗಳಿಂದ ರಚಿಸಲ್ಪಟ್ಟ ನಿಘಂಟುಗಳ ಉದಾರದಿಂದ ತಾವೇ ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧಿ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಈ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು

ಚಿತ್ರಾಹುತಿ ಸಹಿತ
ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 3.
(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಆರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ- ಅದು ಪೂರ್ಣವಾದ ಟೋನಿಕ್ ಆಹಾರ ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ದೊರೆಯುತ್ತದೆ
ರೂ 3-4-0 ಮತ್ತು ರೂ 1 12-0

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ, ಕ್ಯಾಲೆಂಡರು.

ದಶಂಬರ ತಾ. 1ರಲ್ಲಿ ವಿಕ್ರಯಕ್ಕೆ ತಯಾರಾಗುವುದು.
ಭಂಡಸಾಲೆಗಳಲ್ಲಿಯೂ ಪ್ರತಿಯೋರ್ವರ ಮನೆಯಲ್ಲಿಯೂ
ಇಂಥ ಕ್ಯಾಲೆಂಡರು ಅತ್ಯಗತ್ಯ
ಎಲ್ಲರೂ ಪಡಕೊಳ್ಳುವಂತೆ ಬಹಳ ಕಮ್ಮಿ ಕ್ರಯವಿಟ್ಟಿದೆ
ಕ್ರಯ ಒರೇ ಆಣೆ 3
ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು.
ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು
ಟಪ್ಪಾಲಿನಲ್ಲಿ ಕಳುಹಿಸಬೇಕಾದರೆ 0 4 0 ಸ್ಟಾಂಪು ಕಳುಹಿಸಿರಿ

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ
"ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ)

ಸ್ವಪ್ನಮೇಹವು ಯೌವನಮದದ ಪ್ರಾಪ್ತಿಯ ಇದ ಸ್ತ್ರೀಸಂಗವುದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೊರಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ' ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ವ ದು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ

ಕ್ರಯ -ದೊಡ್ಡ ಬಾಟ್ಲಿಗೆ ರೂ 4 ಮಧ್ಯಮ 2-4-0 ಚಿಕ್ಕದು 1-2-0.

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್ — ಚಿಕ್ಕಪೇಟೆ, ಬೆಂಗಳೂರು
ಮುಖ್ಯ ಏಜಂಟರು.— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡೆಕೊಳ್ಳಿರಿ—ಓದಿರಿ

ಕರ್ನಾಟಕ ಸಾಹಿತ್ಯ ಪರಿಷತ್ತು.

೨೦ನೆಯ ವಾರ್ಷಿಕಾಧಿವೇಶನ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರಲ್ಲಿ ವಿಜ್ಞಾಪನೆ—

ಪರಿಷತ್ತಿನ ೨೦ನೆಯ ವಾರ್ಷಿಕಾಧಿವೇಶನವು ೧೯೩೫ನೇ ಇಸ್ವಿ ಡಿಸೆಂಬರ ೨೭ನೆಯ ತಾರೀಖು ಶುಕ್ರವಾರ ಬೆಳಿಗ್ಗೆ ೮॥ ಗಂಟೆಗೆ ಬೆಂಗಳೂರಿನಲ್ಲಿ ೨೧ನೇಯ ಸಾಹಿತ್ಯ ಸಮ್ಮೇಳನಕ್ಕಾಗಿ ಗೊತ್ತಾಗಿರುವ ಕಡೆ ನಡೆಯತಕ್ಕದ್ದೆಂದು ನಿಶ್ಚಯವಾಗಿದೆ,

ಪರಿಷತ್ತಿನ ನಿಬಂಧನೆಗಳನ್ನು ಕುರಿತಾಗಲೀ ಕಾರ್ಯ ವಿವರಗಳನ್ನು ಕುರಿತಾಗಲೀ ಸೂಚನೆಗಳನ್ನು ಕಳುಹಿಸ ಲಿಚ್ಛಿಸುವ ಸದಸ್ಯರು ತಮ್ಮ ಸೂಚನೆಗಳನ್ನು ಪರಿಷತ್ತಿನ ಕಾರ್ಯಾಲಯಕ್ಕೆ ಡಿಸೆಂಬರ ೧೦ನೆಯೊಳಗಾಗಿ ತಲುಪುವಂತೆ ಕಳುಹಿಸಬೇಕೆಂದು ಸೂಚನೆ.

ಪರಿಷತ್ತಿನ ಸದಸ್ಯರೆಲ್ಲರೂ ಅಧಿವೇಶನಕ್ಕೆ ದಯಮಾಡಿ ಬಂದು ಪರಿಷತ್ತಿನ ಕಾರ್ಯಗಳನ್ನು ನೆರವೇರಿಸಿಕೊಡ ಬೇಕೆಂದು ಬೇಡುತ್ತೇನೆ

ಸಿ. ಕೆ. ವೆಂಕಟರಾಮಯ್ಯ, ಗೌ॥ ಕಾರ್ಯದರ್ಶಿ

ಬ್ರಿಟಿಷ ಪಾರ್ಲಿಮೆಂಟ್ ಚುನಾವಣೆಯ ಫಲಿತಾಂಶ.

ಬ್ರಿಟಿಷ ಪಾರ್ಲಿಮೆಂಟಿನ ಚುನಾವಣೆಯು ಮೊನ್ನೆ ತಾ. ೧೪ರಲ್ಲಿ ಜರಗಿತು. ನೇಷನಲ್ ಸರಕಾರವೇ ಹೆಚ್ಚಿನ ಸ್ಥಾನಗಳನ್ನು ಪಡೆದಿರುವುದು. ಮಾಜಿ ಹಿಂದೀ ಮಂತ್ರಿಗಳಾದ ರಾಮ್ಸೆ ಮೆಕ್ಡೋನಾಲ್ಡರು ಸೋತುಹೋಗಿರುವರು. ಎಂಟು ಮಂದಿ ಸ್ತ್ರೀಯರಿಗೆ ಸದಸ್ಯಸ್ಥಾನಗಳು ದೊರಕಿವೆ. ಮೆಕ್ಡೋನಾಲ್ಡರ ಪುತ್ರನಿಗೂ ಈ ಭಾರಿ ಪಾರ್ಲಿಮೆಂಟಿನಲ್ಲಿ ಸ್ಥಾನಸಿಗಲಿಲ್ಲ

ಸರಕಾರಕ್ಕೆ—

ಕನ್ಸರ್ವೇಟಿವ್	೩೮೭
ಲಿಬರಲ್ ನೇಶನಲ್	೩೧
ನೇಶನಲ್ ಲಿಬರಲ	೩
ಇಂಡಿಪೆಂಡೆಂಟ್	೧
ನೇಶನಲ್ ಲೇಬರ್	೮
ಒಟ್ಟು	೪೨೯

ವಿರೋಧಪಕ್ಷಕ್ಕೆ—

ಲೇಬರ್	೧೫೩
ಇಂಡಿಪೆಂಡೆಂಟ್ ಲೇಬರ್	೪
ಇಂಡಿಪೆಂಡೆಂಟ ಲಿಬರಲ್ಸ್	೧೯
ಕಮ್ಯೂನಿಸ್ಟ	೧
ಒಟ್ಟು	೧೭೭

ಸರಕಾರಕ್ಕೆ ೨೫೦ ಸದಸ್ಯರ ಅಧಿಕಬಲವು ಸಿಕ್ಕಿರುತ್ತದೆ ಈ ಭಾರಿಯ ಚುನಾವಣೆಯಲ್ಲಿ ಸರಕಾರವು ೧೪ ಸ್ಥಾನಗಳನ್ನು ಹೆಚ್ಚಾಗಿ ಪಡೆದುದಲ್ಲದೆ ೮ ಸ್ಥಾನಗಳನ್ನು ಕಳಕೊಂಡಿರುವರು. ವಿರೋಧಪಕ್ಷವು ೧೦೧ ಸ್ಥಾನಗಳನ್ನು ಹೆಚ್ಚಾಗಿ ಪಡೆದು ೫೧ ಸ್ಥಾನಗಳನ್ನು ಕಳಕೊಂಡಿರುವುದು ವಿರೋಧಪಕ್ಷವು ಮೊದಲಿಗಿಂತ ಸ್ವಲ್ಪ ಬಲಗೊಂಡಿದೆ, ಕಳೆದ ಚುನಾವಣೆಯಲ್ಲಿ ನೇಶನಲ್ ಪಕ್ಷವು ಸರ್ವಾನುಮತದಿಂದ ಅಧಿಕಾರಕ್ಕೆ ಬಂದಿರುತ್ತದೆ. ಆದರೆ ಈ ಭಾರಿ ಓಟುಗಳು ಲೇಬರ್ ಮತ್ತು ಇತರ ಪಂಗಡಗಳಲ್ಲಿ ಹಂಚಿಹೋದುದರಲ್ಲಿ ನೇಶನಲ್ ಸರಕಾರದ ಮೇಲೆ ಪ್ರಜೆಗಳ ವಿಶ್ವಾಸವು ಕಡಿಮೆಯಾದಂತೆ ಭಾಸವಾಗುತ್ತದೆ. ಇನ್ನು ೫ ವರ್ಷದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಅಧಿಕಾರವು ಇವರ ಕೈಬಿಟ್ಟು ಹೋಗುವುದೋ ಎಂದು ಸಂದೇಹವುಂಟಾಗಿದೆ ವಿರೋಧಪಕ್ಷಕ್ಕೆ, ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸಲು ಮೂರು ಪಂಗಡಗಳು ಮುಂದೆ ಬಂದುದರಿಂದ ಕೆಲವು ಸ್ಥಾನಗಳು ತಪ್ಪಿಹೋಗಿವೆ ನಮ್ಮ ಮಂತ್ರಿಗಳಾದ ಮಿ॥ ಬಾಲ್ಡವಿನ್ನರು ಸ್ಥಾನತಪ್ಪಿದ ಮಾಜಿ ಮಂತ್ರಿಗಳವರಿಗೆ ಅಂದರೆ, ಮಿ॥ ಮೆಕ್ಡೊನಾಲ್ಡರಿಗೆ ಒಂದು ಸ್ಥಾನವನ್ನು ರಚಿಸಿ ಒದಗಿಸುತ್ತೇನೆಂದು ವಚನಕೊಟ್ಟಿರುವರು, ಮಿ॥ ಲ್ಯಾಡ್ ಜೋರ್ಜರು, ಅವರ ಪುತ್ರ ಮತ್ತು ಅವರ ಪುತ್ರಿ ಬಹುಮತದಿಂದ ಆರಿಸಲ್ಪಟ್ಟಿರುವರು, ಮಿ॥ ಚರ್ಚಿಲ್ಲರೂ ಬಹುಮತದಿಂದ ಚುನಾಯಿಸಲ್ಪಟ್ಟಿರುವರು

ಡಿಲ್ಲಿಯಲ್ಲಿ ಕೆಲವು ಪರಿಷತ್ತುಗಳು.

ನವಸುಧಾರಣೆಗಳ ಕುರಿತಾಗಿ ಡಿಲ್ಲಿಯಲ್ಲಿ ಬೇಗನೆ ಕೆಲವು ಪರಿಷತ್ತುಗಳು ನಡೆಯುವುವು, ವಿವಿಧ ಪ್ರಾಂತ್ಯಗಳ ಸುಧಾರಣೆ ಆಫೀಸರರ ಮತ್ತು ಮುಖ್ಯ ಕಾರ್ಯಕಾರೀ ಪರಿಷತ್ತು ೧೯೩೬ನೇ ಜನವರಿಯಲ್ಲಿ ನಡೆಯುವುದು ಸುಧಾರಣೆಯ ಕಮಿಶನರ ಮತ್ತು ಸುಧಾರಣೆಯ ಎಲ್ಲಾ ಆಫೀಸಿನ ಶಾಖೆಗಳ ಪರಿಷತ್ತು ಕಳೆದ ವಾರದಲ್ಲಿ ನಡೆಯಿತು,

ವಾರ್ತಾತರಂಗ.

ತೆಂಗಿನ ಸಾಗುವಳಿಗೆ ತಕ್ಕ ರಕ್ಷಣೆ.

ದಕ್ಷಿಣ ಹಿಂದೂಸ್ಥಾನದ ತೆಂಗಿನ ಸಾಗುವಳಿಯ ಉದ್ಧಾರಕ್ಕಾಗಿ ಹೊರಗಣ ತೆಂಗಿನ ವ್ಯಾಪಾರದ ಮೇಲೆ ನಿರ್ಬಂಧಗಳನ್ನು ತರಬೇಕೆಂದು ಸರಕಾರದವರೊಡನೆ ಹಲವು ಬಾರಿ ಮೊರೆ ಇಡಲಾಯಿತು. ಆದರೆ ಇಷ್ಟರವರೆಗೆ ಸರಕಾರದವರು ಯಾವತ್ತೂ ಕ್ರಮಗಳನ್ನು ಜ್ಯಾರಿಗೆ ತಂದಿರುವುದಿಲ್ಲ. ಆದ್ದರಿಂದ ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರಾದ ಸರ್ ಗಿರಿಜಾ ಶಂಕರಬಾಜಪೈ ಇವರು ಮದ್ರಾಸಿಗೆ ಬಂದ ಸಮಯದಲ್ಲಿ ಅವರ ಕೂಡೆ ತಮ್ಮ ಸಂಕಷ್ಟಗಳನ್ನು ಹೇಳಬೇಕಾಗಿ ದಕ್ಷಿಣ ಹಿಂದೂಸ್ಥಾನದ ತೆಂಗಿನ ಸಾಹುಕಾರರು ನಿರ್ಧರಿಸಿರುವರು

ಅಮೇರಿಕಾದಲ್ಲಿ ವ್ಯಾಪಾರಾಭಿವೃದ್ಧಿ.

ಕೆಲವು ಸಮಯದ ಹಿಂದೆ ವಿಶೇಷವಾಗಿ ತಗ್ಗಿದ ಇದರ ವ್ಯಾಪಾರವು ಈಗ ದಿನೇ ದಿನೇ ವೃದ್ಧಿಹೊಂದುತ್ತಿದೆ ಆಗ್ಗೆ ಬೇಂಕುಗಳ ಮೇಲೆ ನಂಬಿಗೆಯು ತಪ್ಪಿಹೋಗಿತ್ತು. ಈಗ ಎಲ್ಲಾ ಬೇಂಕುಗಳ ಒಂದು ಸಮಿತಿಯು ಸರಕಾರವು ಬೇಂಕುಗಳಿಂದ ಮತ್ತು ವ್ಯಾಪಾರದಿಂದ ಹೊರಗೆಹೋಗಬಾರದೆಂದು (ಸರಕಾರವು ವ್ಯಾಪಾರ ಮತ್ತು ಬೇಂಕಿಂಗ್ ಸಂಸ್ಥೆಗಳ ಅಧಿಕಾರವನ್ನು ವಹಿಸಿದ್ದರು) ವ್ಯಾಪಾರವು ಊರ್ಜಿತಸ್ಥಿತಿಯನ್ನು ಪಡೆದುದರಿಂದ ಬೇಂಕುಗಳು ಇನ್ನು ಸಾಂಗವಾಗಿ ನಡೆದು ಜನರ ಭರವಸೆಗೆ ಒಳಗಾಗುವುದೆಂದೂ, ಮುಂಚೆ ಏರಿಸಿದ ತೆರಿಗೆಗಳನ್ನು ಈಗ ಇಳಿಸಬೇಕೆಂದೂ ಮೊದಲಾದ ಸೂಚನೆಗಳನ್ನು ಕೊಡುವ ವರದಿಯನ್ನು ಮಾಡಿರುವರು

ಕೋವಿ ಮತ್ತು ಪಿಸ್ತೂಲುಗಳು.

ಕಲ್ಕತ್ತದ ಒಂದು ಹಳ್ಳಿಯಲ್ಲಿ ಕೋವಿಗಳನ್ನು ಮತ್ತು ಪಿಸ್ತೂಲುಗಳನ್ನು ತಯಾರಿಸುವ ಕೆಲವನ್ನು ಹಿಡಿದಿರುವರು ಇವರು ಅನೇಕ ಕೋವಿಗಳನ್ನೂ ಪಿಸ್ತೂಲುಗಳನ್ನೂ ಸಿಡಿಮದ್ದಿನ ಬುಲ್ಲೇಟುಗಳನ್ನೂ ತಯಾರಿಸಿದ್ದಾರೆ ಈ ಕಾರ್ಯದಲ್ಲಿ ಭಾಗವಹಿಸಿದ ೧೫ ಜನರನ್ನು ಹಿಡಿದಿದ್ದಾರೆ

ಆಶ್ಚರ್ಯಕರವಾದ ಮೆದುಳಿನ ವಿಚಿತ್ರ ಹುಡಗಿ

ಜೆಕ್ಕದ ಒಂದು ಹಳ್ಳಿಯಲ್ಲಿ ಲೀಡಿಯಾ ನೆಂದು ಕರೆಯುವ ಒಂದು ಹುಡುಗಿ ಇರುವಳೆಂದು ಪಾಶ್ಚಾತ್ಯ ಪತ್ರಿಕೆಗಳಲ್ಲಿ ಎತ್ತಿ ಈ ಹುಡುಗಿಗೆ ಸರಿಯಾಗಿ ಓದಲೂ ಬರೆಯಲೂ ಬರುವುದಿಲ್ಲ ಆದರೆ ಯಾರಾದರೂ ತಮ್ಮ ಪಕ್ಕೆ ಮನೆಯ ಜಗಲಿಯಲ್ಲಿ ಬೈಬಲುಗಳನ್ನೊ ಅಥವಾ ಇತರ ಗ್ರಂಥಗಳನ್ನೊ ವಸ್ತಿನಲ್ಲಿ ಓದುತ್ತಿರುವಾಗ ಅದನ್ನು ಗಟ್ಟಿಯಾಗಿ ಈ ಹುಡುಗಿ ಕೋಣೆಯೊಳಗಿನಿಂದ ಹೇಳಬಲ್ಲಳು. ಸುಪ್ರಸಿದ್ಧ ಡಾಕ್ಟರರು ಇದನ್ನು ತಿಳಿದು ಈ ಹುಡುಗಿಯನ್ನು ಪರೀಕ್ಷಿಸಲು ಬಂದಿರುವರು ಹುಡುಗಿಯು ಈ ಸಮಯದಲ್ಲಿ ಫ್ರೆಂಚ್, ಲೇಟಿನ್, ಯಾವತ್ತು ಭಾಷೆಯಲ್ಲಿ ಮಾತಾಡಬಲ್ಲಳು

ಆರ್ಯಸಮಾಜದವರೂ ಸನಾತನಿಗಳೂ.

ಹಾಪುರದಲ್ಲಿಯ ಹಿಂದೂಗಳು ಆರ್ಯಸಮಾಜ ಪ್ರಚಾರಕರ ಮೇಲೆ ದಾವೆಯನ್ನು ಹೂಡಿದ್ದಾರೆ ಈ ಪ್ರಚಾರಕರು ಜನರಿಗೆ ತನ್ನ ಮತದ ಕುರಿತು ಭಾಷಣಗಳನ್ನೀಯುವುದಾಗ ಶ್ರೇಷ್ಠ ಋಷಿಗಳಾದ ವಶಿಷ್ಠನನ್ನು ತೆಗಳಿದುದೇ ಇದರ ಕಾರಣವಾಗಿದೆ, ಶ್ರೀ ಕೃಷ್ಣಶಾಸ್ತ್ರಿಗಳು ಇದರಲ್ಲಿ ಮುಂದಾಳುತನವನ್ನು ವಹಿಸಿರುವರು. ಆದರೆ, ಶಾಸ್ತ್ರಿಗಳ ಮೇಲೆ ಆರ್ಯಸಮಾಜದವರು ನೊಂದುಕೊಂಡು ದಯಾನಂದ ಸರಸ್ವತಿಗಳನ್ನು ದೂಷಿಸಿ ಮಾತಾಡಿದಕ್ಕಾಗಿ ವ್ಯಾಜ್ಯ ಹೂಡಿದ್ದರಂತೆ, ಅದಕ್ಕಾಗಿಯೇ ಶಾಸ್ತ್ರಿಗಳು ಈ ಗಲಾಟೆಯನ್ನು ಎಬ್ಬಿಸಿದ್ದಿರಬೇಕು ಜಡ್ಜರು ಇದನ್ನು ಶಮನಗೊಳಿಸಲು ಶತಪ್ರಯತ್ನಗೈದರೂ ಸಾಧ್ಯವಾಗಲಿಲ್ಲ

ಒಮರ್ ದೇಶದ ರಮಣಿಯರಲ್ಲಿ ಮಿಸೆಸ್, ವಿ, ಇಸೆಕ್ಸ್ ಎಂಬವಳೇ ಪ್ರಥಮತಃ ವಾಯುವಿಮಾನಗಳ ಸಂಚಲನೆಯಲ್ಲಿ ಲೈಸನ್ಸು ಪಡೆದವಳು, ಇವಳು ವಿಮಾನ ಚಲನೆಯ ಅನೇಕ ಪರೀಕ್ಷೆಗಳನ್ನು ಪಾಸುಮಾಡಿರುವಳು,

ಓಕ್ಸ್‌ಫೋರ್ಡಿನಲ್ಲಿ ಹೊಸ ಕ್ರಮ.

ನೂತನ ಸುಧಾರಣೆಗಳಿಗೆ ಸರಿಯಾಗಿ ಓಕ್ಸ್‌ಫೋರ್ಡಿನ ವಿದ್ಯಾರ್ಥಿನಿಗಳು ಪುರುಷ ವಿದ್ಯಾರ್ಥಿಗಳ ಕೋಣೆಗಳನ್ನು ಸಂದರ್ಶಿಸುವ ನಿರ್ಧಾರವನ್ನು ತೆಗೆದುಹಾಕಿರುತ್ತಾರೆ. ಮುಂಚೆ ವಿದ್ಯಾರ್ಥಿನಿಯರು, ನಿಯಮಿತ ಸಮಯದಲ್ಲಿ ಅವರ ಕೋಣೆಗೆ ಹೋಗತಕ್ಕದಿತ್ತು ಈಗ ಈ ನಿರ್ಬಂಧವನ್ನು ತೆಗೆದುಹಾಕಿದುದಲ್ಲದೆ, ವಿದ್ಯಾರ್ಥಿನಿಯರು ಎಷ್ಟು ಸಮಯವೂ ಇವರ ಕೋಣೆಯಲ್ಲಿದ್ದರೂ ಇದನ್ನು ವಿಚಾರಿಸುವವರಿಲ್ಲ

ಸುಪ್ರಸಿದ್ಧ ಜಿ. ಕೆ. ದೇವಧಾರರು ಸ್ವರ್ಗವಾಸಿಗಳಾದರು

ಗೋಪಾಲಕೃಷ್ಣ ಗೋಖಲೆಯವರಿಂದ ಸ್ಥಾಪನೆಯಾದ 'ಸರ್ವೆಂಟ್ಸ್ ಒಫ್ ಇಂಡಿಯಾ' ಎಂಬ ಸಾರ್ವಜನಿಕೋದ್ಧಾರ ಸಂಸ್ಥೆಯ ಅಧ್ಯಕ್ಷರಾಗಿದ್ದ, ಪೂನೆಯಲ್ಲಿ ಸೇವಾಸದನವನ್ನು ಸ್ಥಾಪಿಸಿದ, ಮಲಬಾರಿನ ಮಾಪಿಳ್ಳೆದಂಗೆ ಸಮಯದಲ್ಲಿ ಅನಾಥರಿಗೆ ಉಪಶಮನ ಮಾಡಿದ ಮಲಬಾರಿನ ಹಳ್ಳಿಹಳ್ಳಿಗಳ ಉದ್ಧಾರವನ್ನು ಮಾಡಿದ, ಭರತಖಂಡದ ನೆರೆ ಕ್ಷಾಮ, ಮೊದಲಾದ

ಸಂಕಷ್ಟಗಳು ಒದಗಿದ ಪ್ರದೇಶಗಳಿಗೆ ತನ್ನ ಶುಶ್ರೂಷೆಯನ್ನು ಮಾಡಿದ ಸಹಕಾರ ಚಳವಳಿಯ ಮುಂದಾಳಾಗಿದ್ದ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಸುಪ್ರಸಿದ್ಧರಾದ ಗೋಪಾಲಕೃಷ್ಣ ದೇವಧಾರರು ಮೊನ್ನೆ ತಾ ೧೭ರಲ್ಲಿ ದೈವಾಧೀನರಾದರು ಇವರ ಸ್ಮಶಾನಯಾತ್ರೆಗೆ ಸಾವಿರಾರು ಜನರು ನೆರೆದಿದ್ದರು. ಮುಂಬಾಯಿಯ ಸೆಂಡ್ ಹರ್ಸ್ಟ್ ರೋಡಿನಲ್ಲಿರುವ ಸರ್ವೆಂಟ್ಸ್ ಒಫ್ ಇಂಡಿಯಾದ ಸದನದಿಂದ ಈ ಮೆರವಣಿಗೆಯು ಹೊರಹೊರಟಿತು

ಜಪಾನಿನಲ್ಲಿ ಭಾರತೀಯರ ವಿದ್ಯಾಭ್ಯಾಸ

ಕಲ್ಕತ್ತದ "ದಿ ಇಂಟರ್ನೇಶನಲ್ ಎಜ್ಯುಕೇಶನ್ ಟ್ರಸ್ಟ್" ಸಂಸ್ಥೆಯವರು ಜಪಾನಿನ ಹಲವು ಕೈಗಾರಿಕೆ ಮತ್ತು ವಿಜ್ಞಾನ ಸಂಸ್ಥೆಗಳಲ್ಲಿ ಭಾರತೀಯರೂ ತರಬೇತುಹೊಂದುವಂತೆ ಅಲ್ಲಿಗೆ ೫ ಯಾ ೧೦ ವಿದ್ಯಾರ್ಥಿಗಳನ್ನು ಕಳುಹಿಸಲು ವೇತನಗಳನ್ನು ವಿರ್ಪಡಿಸಿದ್ದಾರೆ ವಿದ್ಯಾರ್ಥಿಗಳ ಚುನಾವಣೆಗಾಗಿ ಮದ್ರಾಸು, ಮುಂಬಾಯಿ, ಕಲ್ಕತ್ತಾ, ಲಾಹೋರ ಮತ್ತು ಡಿಲ್ಲಿಯಲ್ಲಿ ಬರುವ ಮಾರ್ಚ ತಿಂಗಳಲ್ಲಿ ಪರೀಕ್ಷೆಗಳು ನಡೆಯುವುವು. ದಸಂಬರ ೧೫ರ ಒಳಗೆ ವಿದ್ಯಾರ್ಥಿಗಳು ಸಂಘದ ಕಾರ್ಯದರ್ಶಿಗಳಿಗೆ ಅರ್ಜಿ ಮಾಡತಕ್ಕದ್ದು

ಕಾಂಗ್ರೆಸ್ಸಿನ ಮುಂದಣ ಅಧ್ಯಕ್ಷರಾರು?

ಸಂಯುಕ್ತಪ್ರಾಂತ್ಯದ ಮುಖಂಡರಾದ ಶ್ರೀಯುತ ಜವಾಹರ್‌ಲಾಲ್ ನೆಹರುಗಳ ಹೆಸರನ್ನು ಸೂಚಿಸಿರುವುದು ಮಾತ್ರವಲ್ಲದೆ, ಅವರನ್ನು ಅಧ್ಯಕ್ಷರಾಗಿ ಮಾಡಲು ಬಗೆಬಗೆಯ ಪ್ರಯತ್ನಗಳನ್ನು ಮಾಡಿದರು. ಆದರೆ ಈ ಮೊದಲೇ ನೆಹರುಗಳವರನ್ನು ಸ್ವಾಗತಕಮಿಟಿಯ ಅಧ್ಯಕ್ಷರಾಗಿ ಚುನಾಯಿಸಿದ್ದಾರೆ. ಮಾತ್ರವಲ್ಲದೆ ಒಂದು ಪ್ರಾಂತ್ಯದ ಕಾಂಗ್ರೆಸ್ ಜರಗುವಾಗ ಆ ಪ್ರಾಂತ್ಯದವರೆ ಅಧ್ಯಕ್ಷಸ್ಥಾನವನ್ನು ಪಡೆಯಬಾರದಾಗಿ ಕಾಂಗ್ರೆಸ್ಸಿನ ನಿಯಮವಿದೆ ಹೀಗಿರುವಾಗ ನೆಹರುಗಳವರು ಅಧ್ಯಕ್ಷರಾಗುವುದರಲ್ಲಿ ಬಹಳ ಸಂದೇಹವಿದೆ.

ಸಿವಿಲ್ ಉದ್ಯೋಗವನ್ನು (ಸಿವಿಲ್ ಸರ್ವಿಸನ್ನು) ತ್ಯಜಿಸಿ, ದೇಶಬಂಧು ದಾಸರೊಡನೆ ಹಗಲಿರುಳು ದುಡಿದು ತನ್ನ ಸರ್ವಸ್ವವನ್ನೂ, ತನ್ನ ಆರೋಗ್ಯವನ್ನೂ ದೇಶಸೇವೆಗಾಗಿ ಅರ್ಪಿಸಿದ ಸುಭಾಶ್ಚಂದ್ರಬೋಸರನ್ನು ಅಧ್ಯಕ್ಷರಾಗಿ ಮಾಡುವುದು ಕಾಂಗ್ರೆಸ್ಸಿನ ಮುಖ್ಯ ಕರ್ತವ್ಯ ಎಂದು ನಮ್ಮ ಬಂಗಾಲಿ ಸಹೋದರರ ಮಾತು. ಹಲವು ಪತ್ರಿಕೆಗಳು ಈ ಸೂಚನೆಯನ್ನು ಅನುಮೋದಿಸಿದ ಹಾಗಿರುವಾಗ ಸುಭಾಷ್ಚಂದ್ರ ಬೋಸರಿಗೆ ಅಧ್ಯಕ್ಷಪದವಿಯು ಸಲ್ಲುವುದೆಂದೂ ಇನ್ನೊಂದು ವಾರ್ತೆ ಇದೆ

ಸೋಮೇಶ್ವರ ಬೋವಿ ಮಹಾಸಭೆ, ಮುಂಬಾಯಿ.

ಈ ಮೇಲಿನ ಸಭೆಯ ವರ್ಷಾವಧಿ ಮಹಾಸಭೆಯು ಇದೇ ಕಳೆದ ತಾ ೩ನೇ ದಿನ ಗಿರ್ಗಾಮ್ ಮಂದಿರದಲ್ಲಿ ಸಂಘದ ಅಧ್ಯಕ್ಷರಾದ ಆರ್ ಎಸ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ, ಈ ಕೆಳಗಿನವರು ಹೊಸ ಕಾರ್ಯಕಾರಿ ಸಮಿತಿಯವರಾಗಿ ಚುನಾಯಿಸಲ್ಪಟ್ಟರು. ಶ್ರೀ ಯು ಸುಂದರ—ಅಧ್ಯಕ್ಷ, ಶ್ರೀ ಯು ಕೃಷ್ಣಯ್ಯ—ಕಾರ್ಯದರ್ಶಿ, ಶ್ರೀ ಯು ಕೆ ಬಿಲ್ಲ ಕೋಶಾಧಿಕಾರಿ, ಶ್ರೀ ಯು ಶ್ರೀನಿವಾಸ—ಉಪಾಧ್ಯಕ್ಷ ಒಟ್ಟು ಹನ್ನೆರಡು ಮಂದಿಯ ಒಂದು ಆಡಳಿತ ಕಮಿಟಿಯು ಚುನಾಯಿಸಲ್ಪಟ್ಟಿತು

ಹೊಟೇಲು ಕೆಲಸಗಾರರ ಸಂಘ, ಮುಂಬಾಯಿ

ಮುಂಬಾಯಿಯ ಹೊಟೇಲು ಕೆಲಸಗಾರರ ಸಂಘದ ಪ್ರಥಮ ಸಭೆಯು ಸೇರಿ, ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಚುನಾಯಿಸಲಾಯಿತು

ಮಿ॥ ಎಸ್ ಎಚ್ ಜಬ್ವಾಲಾರನ್ನು ಅಧ್ಯಕ್ಷರನ್ನಾಗಿಯೂ, ಮಿ॥ ಚಾರ್ಲ್ಸ್ ಮಸ್ಕರೇನ್ಹಾಸ್ [illegible] ಕೆ ಓಬಾರೇ ಮಿ॥ [illegible] ಮಹಮೂದ್ ಮತ್ತು ಸೈಯದ್ ಹಬೀಬ್ ಹಸ್ಮೀ ಇವರನ್ನು ಉಪಾಧ್ಯಕ್ಷರನ್ನಾಗಿಯೂ ಮಿ॥ ಎಚ್ ಎಂ ಓಝಾ ಇವರನ್ನು ಜನರಲ್ ಕಾರ್ಯದರ್ಶಿಗಳನ್ನಾಗಿಯೂ, [illegible] ನಸರ್ವಾ ಅಡ್ವಾನಿ ವಿ ಎಸ್ ಶಿವದಾಸ್ ಕಾರ್ ಇವರೂ ಜಾಯಿಂಟ್ ಸೆಕ್ರೆಟರಿಗಳನ್ನಾಗಿಯೂ ಮಿ॥ [illegible] ದೇಸಾಯಿ ಮತ್ತು ಪಿ ಕೃಷ್ಣಮೂರ್ತಿ ಇವರನ್ನು ಕೋಶಾಧ್ಯಕ್ಷರನ್ನಾಗಿಯೂ ಚುನಾಯಿಸಲಾಯಿತು. ಸಂಘವನ್ನು ರಜಿಸ್ಟರ್ ಮಾಡಲು ಒಂದು ಪ್ರತ್ಯೇಕ ಕಮಿಟಿಯು ನಿರ್ಧರಿಸಲ್ಪಟ್ಟಿತು

ನಾಸಿಕದಲ್ಲಿ ಹರಿಜನರು

ತಮ್ಮ ಒಂದು ಕೂಟದ ಸಮಯ ಕೆಲವು ಹಿಂದೂ ವಿಗ್ರಹಗಳನ್ನು ನೆಲಕ್ಕುರುಳಿಸಿ ಅವುಗಳನ್ನು ಕಾಲಿನಿಂದ ಒದೆದು, ತಮ್ಮ ಹಿಂದೂಧರ್ಮದ ಮೇಲಿನ ಕೋಪವನ್ನು ವ್ಯಕ್ತಗೊಳಿಸಿದರು ಸ್ಪೃಶ್ಯ ಹಿಂದೂಗಳು ಕೊಡುವ ಬಾಧೆಗಳನ್ನು ಸಹಿಸಲಾರದೆ ಅವರು ಈ ರೀತಿ ವರ್ತಿಸಲು ಕಾರಣವೆಂದು ತಿಳಿದುಬರುತ್ತದೆ

ಸ್ತ್ರೀಪುರುಷರ ಪ್ರಿಯ ರಹಸ್ಯ. (ಶರೀರ ಮರ್ಮಶಾಸ್ತ್ರ)

ಮಹನೀಯರುಗಳೇ, ಇದು ವರೆಗೆ ಇಂಥಾ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ—ಅನೇಕ ಜಾತಿಯ ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಶುಕ್ಲನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ರೋಗಗಳು, ಗರ್ಭಚಿಹ್ನೆ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತರಹಸ್ಯಗಳನ್ನೆಲ್ಲಾ ೬೮ ಚಿತ್ರಪಟಗಳೊಡನೆ ೧೩೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿದ್ದಿಲ್ಲ ಬೆಲೆ ರೂ. ೧. ಟ. ಖ. ಬೇರೆ.

ವಿಳಾಸ—ಕರ್ನಾಟಕ ಏಜನ್ಸಿ, ಕೃಷ್ಣಪ್ಪನಾಯಕನ ಟೆಂಕ್ ಬೀದಿ, ಮದರಾಸು

ಈ ವಾರದಲ್ಲಿ ಪುಸ್ತಕವನ್ನು ತರಿಸುವವರಿಗೆ ೧೯೩೬ನೇ ಇಸವಿ ಕ್ಯಾಲೆಂಡರು ಇನಾಂ.



ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ದಳವಾದ, ಗುಂಡಿಗೆಳದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖ ಹಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು ನಿಶ್ಶಕ್ತಿ, ಭಾರವು ಕಡಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮಾಡ್ಸುಗಳೂ ಇವೆ

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು; ಅಲ್ಲದೆ ಶಾಂತಿಯುತವಾದುದು, ಬಹಳ ಆಶ್ಚರ್ಯಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ಸಲ್ಲುವದೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ನಾಶವಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ ೨ ಮಾತ್ರ.

01.P.8 Bengali Mesmarism House
5-7 Panchpota, Bengal (E.B.)

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 1	3— 4
ಮುಸ್ಕಿ	4— 0	4— 8
ಗುಡ್ಡ	3— 0	3—10
ಊರ ಅಕ್ಕಿಲ್ ಬೆಲ್ಲಗೆ	4—10	5— 0
ರಂಗೂನು ಬಿ ಗೋ ಗೆ	6— 8	7— 0
ಎಲ್ಲೂರು ಬಿ ಮು ಗೆ	4— 4	4— 8
ಗೋದಿ ಗೋಣಿ ಗೆ	10— 0	12— 8
ತೊಗರಿ ಗೋಣಿ ಗೆ	10—8	11— 0
ಹುರುಳಿ ಗೋಣಿ ಗೆ	6— 0	6— 8
ಕಡಲೆ ಗೋಣಿ ಗೆ	7— 8	10— 8
ತೊಗರಿಬೇಳೆ ಗೋಣಿಗೆ	10— 0	17— 0
ಉದ್ದು ಗೋಣಿ ಗೆ	9— 8	10— 0
ಹೆಸರು ಗೋಣಿ ಗೆ	9— 4	9—12
ಊರುಬೆಲ್ಲ ಖಂಡಿ ಗೆ	37— 8	41— 8
ಉಪ್ಪು ಗೋಣಿ ಗೆ	4—12	5— 0
ಕೊಬ್ಬರಿ ಖಂಡಿ ಗೆ	65— 0	68— 0
ಕೊಬ್ರಿ ಹಿಂಡಿ ಖಂಡಿಗೆ	27— 8	28— 0
ಎಣ್ಣೆಂಡಿ ಖಂಡಿ ಗೆ	82— 8	32— 8
ತೆಂಗಿನ ಎಣ್ಣೆ ಮುಡಿ ಗೆ	4— 10	5— 10
ಎಳ್ಳೆಣ್ಣೆ ಮುಡಿ ಗೆ	5— 2	6— 0
ಚಿಮಿಣಿಎಣ್ಣೆ ಪೆಟ್ಟಿಗೆ ಗೆ	5— 8	5—12
ರೋಣಿನ ಸಕ್ಕರೆ ಮು. ಗೆ	3—10	3—12
ಮೆಣಸು	3 — 0	4— 0
ಸಾಸಿವೆ ಮುಡಿ ಗೆ	6 — 8	6—12
ಕಾಳುಮೆಣಸು ಖ. ಗೆ	120— 0	122— 8
ಮೆಂತ್ಯೆ ಬೀಜ ಮುಡಿಗೆ	35— 8	36— 0
ಗೇರುಬೀಜ ಮು. ಗೆ	4—14	5 — 0
ಕಬ್ಬಿಣ ಖಂಡಿ ಗೆ	40— 0	40— 8
ತಾಮ್ರತಗಡು ಮು. ಗೆ	10— 0	10— 8
ತಾಮ್ರಪಾತ್ರಗಳು ಮು. ಗೆ	14— 0	14— 8
ಚೀನಿಬೆಲ್ಲ ಸೇರು ಗೆ	16— 4	16— 8
ಹಿತ್ತಾಳೆ ತಗಡು ಮು. ಗೆ	9— 0	9— 8
ಹವಸು ಗೆ	22— 4	22— 6
ಹುಣಿಸೆ ಹುಳಿ ಖಂಡಿ ಗೆ	20— 0	25— 8
ನೇಟಿವ್ ಕಾಫಿ ಖಂಡಿ ಗೆ	165— 0	171— 4
ಪ್ಲಾಂಟೇಶನ್ ಕಾಫಿ ಖಂಡಿ ಗೆ	190— 0	195— 0
ಮಂಗಳೂರು ಹಂಚು	26— 0	27 — 0
ಸಕಲೇಶಪುರ ಹಂಚು	28— 0	33 — 0
ಹೊಗೆ ಸೊಪ್ಪು	110—0	115—0

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ

ಪ್ರಶಂಸೆ.

ಪ್ರಖ್ಯಾತ ಅಮೆರಿಕನ್ ಡಾಕ್ಟರರು

ಪ್ರಶಂಸಿಸಿರುತ್ತಾರೆ

ವಿ-ಮೋ-ಲ

VIM-O-LA,

ಅಮೆರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ. ಹೊಟ್ಟೆಯಲ್ಲಿ ಚೆಂದಿನಂತೇಳುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಪಾನೀಯ. ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ ಬಾಟ್ಲಿ 1ಕ್ಕೆ ರೂ 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ಣಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co.,

Sole representatives for above medicine.

The National Kanara News Agency,

3 Sir Pherozsha Metha Road,

Fort Bombay.

Shiromani Narayanacharya & Co.,

Silk Lace & Cloth Manufacturers

Choukhamba Benares City



THIS MAN
OUR CUSTOMER

ಕೃಷ್ಣರಾಯರು ಸ್ವಾಮಿ ಆನಂದರಾಯರೆ ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವನು

ಆನಂದರಾಯರು ಸ್ವಾಮಿ ಆ ಶೀರೆಗೆ ಹತ್ತು ಪದಿನೈದು ಅಂಗಡಿ ನೋಡಿ ಸನಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — 'ಅದರ ಕ್ರಯವೆಷ್ಟು?'

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ಧರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಸಿಂದಿತ ಜರಿ ರಂಗು ಮೊದಲಾದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ವಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ವಡಲು ಸಾದ ಶೀರೆ 1ಕ್ಕೆ ರೂ 10ರಿಂದ 65ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸಲೆಮಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ 10ರಿಂದ 35ರ ವರೆಗೆ 5 ಮೊಳದ ಪಟಕ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಟ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯಲ್ಲಾ ತರದ ವಸ್ತುಗಳ ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್,

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S S L C's and also for those who have not passed any University examination

Coaches students for the Specialised Banking Courses (C A I B & C A I I B.) and also for Accountancy, Secretarial, and Insurance Courses (L A A, A C R A, F C R A, F I S A, A C I I etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D R Murdeshwar,
Dip Econ, F R Econ; S. (Lond.)
Principal

Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಕಾರ್ತಿಕ ಬ. ೧೩ ಶನಿವಾರದಿಂದ ಮಾರ್ಗಶಿರ ಶು. ೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ವೃಶ್ಚಿಕ ಪಾದೆ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರದಿನ	ವಿಶೇಷ
28	ಶನಿ	೧೩	೬೦	ಚಿತ್ರಾ	೨೮	೭	ಕೃತ್ತಿಕೋತ್ಸವ
24	ರವಿ	೧೩	೨	ಸ್ವಾತೀ	೩೨	೮	
25	ಸೋಮ	೧೪	೫	ವಿಶಾಖಾ	೩೬	೯	
26	ಮಂಗಳ	೩೦	೭	ಅನುರಾಧಾ	೪೯	೧೦	
27	ಬುಧ	೧	೭	ಜ್ಯೇಷ್ಠಾ	೪೦	೧೧	
28	ಗುರು	೨	೬	ಮೂಲಾ	೪೦	೧೨	
29	ಶುಕ್ರ	೩	೪	ಪೂ. ಷಾ.	೩೯	೧೩	

ಯುದ್ಧ ವಾರ್ತೆಗಳು

ಇಟೇಲಿಯ ಸೇನಾನಾಯಕರ ಬದಲಾವಣೆ

ನವಂಬರ, ೧೬.

ಉತ್ತರ ದಿಕ್ಕಿನ ಇಟೇಲಿಯ ಸೇನಾನಾಯಕರಾದ ಜನರಲ್ ಡಿಬೋನೋರವರ ಸ್ಥಾನವನ್ನು ಮಾರ್ಶಲ್ ಬೊಡೊಗ್ಲಿಯೊ ಎಂಬವರಿಗೆ ಕೊಡಲಾಯಿತು ಮುಪ್ಪಿನ ದೆಸೆಯಿಂದ ಬೋನೋರವರು ಈ ಸ್ಥಾನವನ್ನು ತ್ಯಜಿಸಬೇಕಾಯಿತು ಇವರ ಇಷ್ಟರ ವರೆಗಿನ ಸಾಹಸಗಳಿಂದ ಇವರು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಇವರ ಪ್ರಾಯ ೬೯ ವರ್ಷ ಇವರಿಗೆ ಮಾರ್ಶಲ್ ಒಫ್ ಇಟೇಲಿ ಎಂಬ ಬಿರುದು ಕೊಡಲಾಯಿತು

ಜನರಲ್ ಬೊಡೊಗ್ಲಿಯೊರವರು ವೀರ ನಾಯಕರು. ಪ್ರಾಯ ೬೪ ವರ್ಷ ಬಹಳ ಪ್ರಭಾವ ಶಾಲಿ

ಇಟೇಲಿಯಾನರ ಮುಂದುವರಿಕೆಯು ನಿಲ್ಲಿಸಲಾಗುವುದು.

ಜನರಲ್ ಬೊಡೊಗ್ಲಿಯೊರು ನಾಯಕತ್ವವನ್ನು ವಹಿಸಿದಂದಿನಿಂದ ೬ ವಾರಗಳ ತನಕ ಯಾವತ್ತೂ ಸಂಗ್ರಾಮಕಾರ್ಯವು ನಡೆಯುವುದಿಲ್ಲವಂತೆ ಈ ೬ ವಾರಗಳಲ್ಲಿ ಮಾಗೋರ್ನಾಯ ರಚನೆಗಳನ್ನು ರಚಿಸುವರಂತೆ ಈ ಮಾರ್ಗಗಳನ್ನು ರಚಿಸಿದರೆ, ಫಿರಂಗಿಗಳಿಂದ ಕೂಡಿದ ಟೆಂಕುಗಳನ್ನು ಸುಲಭ ರೀತಿಯಲ್ಲಿ ಮುಂದಕ್ಕೆ ಸಾಗಿಸಬಹುದು ಇಟೇಲಿಯಲ್ಲಿ ಮಹಾಯುದ್ಧದ ಸಿದ್ಧತೆಗಾಗಿ ಸರ್ವರೂ ಸಂಗ್ರಾಮಿಕರಾಗಿ ತರಬೇತು ಹೊಂದುವಂತೆ ಅಪ್ಪಣೆಗಳು ಹೊರಟಿವೆ. ಇಟೇಲಿಯ ಎಲ್ಲಾ ಸ್ತ್ರೀಯರೂ ತಮ್ಮ ಭಂಗಾರದ ಮದುವೆಯ ಉಂಗುರವನ್ನು ಮುಸಲೀನಿಯವರಿಗೆ ಯುದ್ಧಕ್ಕೆ ದ್ರವ್ಯ ಸಹಾಯವಾಗಿ [illegible] ಕೊಟ್ಟಿರುತ್ತಾರೆ ಇವುಗಳಿಂದ [illegible] ಗಟ್ಟಲೆ ಹಣವು ಸಿಕ್ಕಿದಂತಾಯಿತು

ದಕ್ಷಿಣ ದಿಕ್ಕಿನ ಸಮರ

ಜನರಲ್ ಗ್ರೆಜಿಯಾನೊ ಎಂಬವನ ನಾಯಕತ್ವದಿಂದ ಇಟೇಲಿಯಾನರು ಓಗಡನ್ ಪ್ರಾಂತ್ಯದಲ್ಲಿ ಗೊರಾಹಿ ಹತ್ತಿರ ಒಂದು ಪ್ರದೇಶವನ್ನು ಸೇರಿರುವರು. ಸಾಸಾಬೆನ್ಹದ ಹತ್ತಿರ ಇಟೇಲಿಯಾನರಿಗೂ ಎಬಿಸೀನಿಯರಿಗೂ ಕದನ ನಡೆದು, ಎಬಿಸೀನಿಯರು ಪಲಾಯನ ಮಾಡಿರುವರು

ಕುಂಭದ್ರೋಣ ಮಳೆ.

ಜಿಜಿಗಾದಲ್ಲಿರುವ ಎಥಿಯೋಪಿಯಾನರ ಸೈನಿಕರ ರಕ್ಷಣಾ ಕೆಲಸವು ಮಳೆಯಿಂದಾಗಿ ಸುಲಭವಾಗಿರುತ್ತದೆ ಮಳೆಯು ಕುಂಭದ್ರೋಣವಾಗಿ ಸುರಿಯುತ್ತಿದೆ ಇಟೇಲಿಯಾನರು ಈ ಕಡೆಯ ಮುಂದುವರಿಕೆಯನ್ನು ನಿಲ್ಲಿಸಿರುತ್ತಾರೆ.

ಎಥಿಯೋಪಿಯಾನಕ್ಕೆ ಬರಬೇಕಾದ ಯುದ್ಧಸಾಮಗ್ರಿಗಳು, ಅಲ್ಲಿನ ಫ್ರೆಂಚ ರೈಲ್ವೆ ಕಂಪೆನಿಯವರಿಗೆ ಸಾಗಿಸಲು ಅಸಾಧ್ಯವಾದ್ದರಿಂದ ಜಿಬೂಟಿ ಬಂದರದಿಂದ ಅಡಿಸ್ ಅಬಾಬಕ್ಕೆ ಮಾರ್ಗರಚನೆಯು ಆಗುತ್ತಿದೆ.

ಸೆಂಕ್ಷನುಗಳಿಂದ.

ಇಟೇಲಿಯು ಕೆಲವೇ ವಾರಗಳಲ್ಲಿ ತನ್ನ ಈ ಭೀಕರ ಕಾರ್ಯವನ್ನು ನಿಲ್ಲಿಸುವಂತೆ ಮಾಡುವುದೆಂದು ಕೆಲವು ಪತ್ರಿಕೆಗಳ ನಂಬಿಕೆ. ಸೆಂಕ್ಷನುಗಳು ಮೊನ್ನೆ ಸೋಮವಾರದಿಂದ ಜ್ಯಾರಿಗೆ ಬಂದಿವೆ.

ವಿಚಾರತರಂಗ

ಸೋವಿಯಟ್ ರಷ್ಯಾದಲ್ಲಿ

ಶೇಕಡಾ ೯೨ ಸಲೆ ಜನರು ಸರಕಾರಕಾರದ ಸದಸ್ಯರ ಚುನಾವಣೆಯಲ್ಲಿ ಭಾಗ ವಹಿಸಿರುತ್ತಾರೆ ಪ್ರಜೆಗಳಿಗೆ ಸರಕಾರದ ಮೇಲೆ ಪೂರ್ಣ ಅಧಿಕಾರವು ಇದೆ ಕೂಲಿಗಾರರ, ರೈತರು ತಮ್ಮ ಸರಕಾರದ ರಚನೆಯಲ್ಲಿ ಹಕ್ಕು ಭಾಧ್ಯತೆವುಳ್ಳವರಾಗಿದ್ದಾರೆ ಅಲ್ಲಿನ ಚುನಾವಣೆಯು ಯೋಗ್ಯ ರೀತಿಯಲ್ಲಿ ನಡೆಯುತ್ತಿದೆ ಚುನಾವಣೆಯು ಹಲವು ದಿನಸಗಳ ಮುಂಚಿತವಾಗಿ, ಬೇಕಾದ ಎಲ್ಲಾ ದಿಕ್ಕುಗಳಲ್ಲಿ ಸದಸ್ಯರ ಯೋಗ್ಯತೆಯು ಮತ್ತು ಸರಕಾರದ ಇತರ ಧೋರಣೆಗಳ ವಿಷಯ ಬಹಳ ಚರ್ಚೆ ನಡೆಯುವುದು

ಸೋವಿಯಟ್ ಜೀವನದ ಸ್ಥಿತಿ

ಒಂದಾನೊಂದು ಕಾಲದಲ್ಲಿ ಅನ್ನ ಬಟ್ಟೆಗಾಗಿ ನರಳಿ, ಮಾರ್ಗದ ಚರಂಡಿಗಳಲ್ಲಿ ರೋಧಿಸುತ್ತಿರುವ ಬಡ ಜನರು, ಈಗ ಸಂತುಷ್ಟರಾಗಿ ಬಾಳುತ್ತಿದ್ದಾರೆ ಈಗಲೂ ಈ ಕಠಿಣ ಸ್ಥಿತಿಯು ಚೀನಾದ ಕೆಲವು ದೇಶಗಳಲ್ಲಿ ಕಾಣಬಹುದು. ಆದರೆ ರಷ್ಯಾದಲ್ಲಿ ಸೋವಿಯಟರ ಅಧಿಕಾರವು ಜನ್ಮಹೊಂದಿದಂದಿನಿಂದ, ಜನರ ಉದ್ಧಾರವು ಪ್ರಾರಂಭವಾಗಿರುತ್ತದೆ ರಷ್ಯವು ನಿರುದ್ಯೋಗದ ಹಾವಳಿಯನ್ನು ಅಟ್ಟಬಿಟ್ಟಿದೆ ಹಿಂದೆ ಪಾದರಕ್ಷೆ, ವಸ್ತ್ರ, ಟೂತ್ ಬ್ರೆಶ್ ಇತ್ಯಾದಿಗಳಿಲ್ಲದೆ ನರಳುತ್ತಿರುವ ಮಿಲಿಯಗಟ್ಟಳೆ ರೈತರು, ಸೈಕಲು, ಗ್ರಾಮಾಫೋನು, ರೇಡಿಯೊ, ಗಾಯನ ಉಪಕರಣಗಳನ್ನು ಪಡೆಯುತ್ತಿದ್ದಾರೆ ಈ ಮುಂಚೆ ೧೬೦,೦೦೦ ಟನ್ ಸಾಬೂನನ್ನು ತಯಾರ ಮಾಡುತ್ತಿದ್ದ ರಷ್ಯದಲ್ಲಿ ಈಗ ೪೬೮,೦೦೦ ಟನ್ ಸಾಬೂನು ತಯಾರಾಗುತ್ತಿದೆ ೧೯ ಮಿಲಿಯ ಶಾಲೆಗಳು ಎರ್ಪಾಡು ಹೊಂದಿವೆ

ಒಟ್ಟಾರೆ ಪೋಲೆ ಸೋವಿಯಟರ ಜೀವನ ಸ್ಥಿತಿಯು ದಿನೇ ದಿನೇ ವೃದ್ಧಿ ಹೊಂದತ್ತಿದೆ

ಹಿಂದೂದೇಶದ ಪ್ರಾಚೀನ ಮಹತ್ವ

ಹಿಂದೂದೇಶ [illegible] ಸಾಧಾರಣ ಕ್ರಿ. ಪೂ. ೩೦೦೦ದಲ್ಲಿ [illegible] ಎಂದು ಚೀನಾ ದೇಶದ [illegible] ಗಳ ಚರಿತ್ರೆಯಿಂದ ವ್ಯಕ್ತವಾಗುತ್ತದೆ ಹಿಂದೂದೇಶ ಮತ್ತು ಚೀನವು ಅತಿ ಪ್ರಾಚೀನ ಕಾಲದಿಂದ ಬಂದಿವೆ, ಸಾಧಾರಣ ೬೦೦೦ ವರ್ಷಗಳ ಹಿಂದಿನಿಂದ ನವನಾಗರಿಕತೆಯನ್ನು ಅನುಭವಿಸಿದೆ ಎಂದ ಪುರಾಣ ಶಾಸ್ತ್ರಗಳಿಂದ ವ್ಯಕ್ತವಾಗುತ್ತದೆ ಚೀನವು ೧೫ ಸಾವಿರ ವರ್ಷಗಳ ಹಿಂದಿನಿಂದ ವಿದ್ಯಾಭಿಮಾನಿಯೂ, ಕಲಾಭಿಜ್ಞಾನಿಯೂ ಆಗುತ್ತದೆಂದು ಕೆಲವರ ನಂಬಿಕೆ ಎಂದರೆ, ಈಗ ಮಹತ್ವದಲ್ಲಿರುವ ಪಾಶ್ಚಾತ್ಯ ಜನಾಂಗಗಳು ಅರಣ್ಯಗಳಲ್ಲಿ, ಬೆಟ್ಟಗಳಲ್ಲಿ ಎಲೆಗಳನ್ನು ಧರಿಸಿ, ಕ್ರೂರ ಮೃಗಗಳೊಡನೆ ಸಂಚರಿಸುತ್ತಿರುವಾಗ ಪೂರ್ವದ ಈ ಎರಡು ರಾಜಧಾನಿಗಳು ಅತೀ ವೈಭವದಿಂದ ಮೆರೆಯುತ್ತಿದ್ದವು ಸಂಸ್ಕೃತ ಭಾಷೆಯು ಅತೀ ಪುರಾತನದ್ದು ಆದರಲ್ಲೂ ಈ ಭಾಷೆಯ ಅಕ್ಷರಗಳು ಅತೀ ಹಿಂದಿನ ಕಾಲದಿಂದ ಏಕಾಧಿಕೆಯಲ್ಲಿದ್ದವು. ಹಾಗಾದರೆ, ನಮ್ಮ ವಿದ್ಯೆ ಮತ್ತು ಕಲಾಜ್ಞಾನವು ಎಷ್ಟು ಪುರಾತನವಾದುದೆಂದು ನೀವೇ ತಿಳಿದುಕೊಳ್ಳಿ. ಪ್ರಸಿದ್ಧವಾದ ಹಿಂದೂಧರ್ಮವು ಆಗಲೆ ಜನಿಸಿದ್ದು ಎಂದು ಈಗ ವ್ಯಕ್ತವಾಗುತ್ತಿದೆ. ಪ್ರಪಂಚದ ಎಲ್ಲಾ ಮತಗಳಲ್ಲಿ ಶ್ರೇಷ್ಠವಾದ ಈ ದಿವ್ಯ ಮತವು ಸಹಸ್ರ ವರ್ಷಗಳ ಹಿಂದೆ ಜನಿಸಿ, ಯೋಗ್ಯ ಮುನಿವರ್ಯರಿಂದ ಉದ್ಧಾರ ಹೊಂದಿಕೊಂಡು, ಸಾವಿರಾರು ಯೋಗ್ಯ ಕ್ರಮನಿರ್ಣಯಗಳಿರುವ ಈ ಹಿಂದೂ ಧರ್ಮವು ಇವತ್ತಿಗೂ ಶ್ರೇಯಸ್ಕರವಾಗಿ ಬಾಳುತ್ತಿದೆ.

ಅಮೇರಿಕದ ಆರೋಗ್ಯ

ಸಾಧಾರಣ ೧೫೦ ವರ್ಷಗಳ ಹಿಂದೆ ಅಮೇರಿಕದವರ ಜೀವನದ ಪರಿಮಾಣವು ೩೮ ವರ್ಷಗಳಾಗಿತ್ತು. ಈಗ ಅದು ೫೮ ವರ್ಷ ವಿರುತ್ತದೆ ಜನರು ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನ ತೆಗೆದುಕೊಳ್ಳುವುದೆ ಇದರ ಮುಖ್ಯ ಕಾರಣ ಕ್ಷಯ ರೋಗವು ಶೇಕಡಾ ೭೫ ಸಲೆ ಇಳಿದಿರುತ್ತದೆ ಟ್ಯಾಫೋಯಿಡ ಎಂಬ ವಿಷಮ ಜ್ವರವು ಈಗ ವಿರಳ ಸಿಡುಬು ಕಾಣಸಿಗದು ಆದರೂ, ಅಲ್ಲಿನವರು ತಮ್ಮ ಆರೋಗ್ಯದ ಕುರಿತು ಸಮಾಧಾನ ಹೊಂದಲಿಲ್ಲ ಆರೋಗ್ಯದ ಉದ್ಧರಣೆಯ ಕುರಿತು ಕೆಲಸವು ಇನ್ನೂ ನಡೆಯುತ್ತಿದೆ ಈ ಅವಸ್ಥೆಯನ್ನು ನಮ್ಮ ಹಿಂದೂಸ್ಥಾನವು ಯಾಕೆ ಹುಡಿಯಬಾರದು? ಅಲ್ಲಿನ ಜನರ ಸಿಕ್ಷಣ ಅಭ್ಯಾಸ ಮತ್ತು ಆಚಾರಗಳು, ಅವರಿಗೆ ಈ ಸ್ಥಿತಿಯನ್ನು ತಂದಿರುತ್ತವೆ ಆರೋಗ್ಯ ವಿಚಾರ ಸಮಿತಿಗಳು ಅಲ್ಲಲ್ಲಿ ರಚಿಸಿ, ಜನರಿಗೆ ಆರೋಗ್ಯದ ಮಹತ್ವವನ್ನು ತಿಳಿಸಿ, ನಾವು ನಮ್ಮ ಆಯುಷ್ಯವನ್ನು ಯಾಕೆ ಹೆಚ್ಚಿಸಬಾರದು?

ಹಿಂದೂಸ್ಥಾನದಲ್ಲಿ ಮಲೇರಿಯಾ ಹಾವಳಿ

ಸಾಧಾರಣ ಹಿಂದೂಸ್ಥಾನದ ಎಲ್ಲಾ ದಿಕ್ಕುಗಳಲ್ಲಿ ಮಲೇರಿಯವು ಹಾವಳಿ ಇಡುವುದು. ತಿಳಿದು ಬಂದಿರುತ್ತದೆ ನಮ್ಮ ಸರಕಾರವು ಮಲೇರಿಯ ನಿವಾರಣೆಗಾಗಿ ಧಾರಾಳ ಹಣವನ್ನು ವೆಚ್ಚ ಮಾಡುತ್ತಿದೆ ಆದರೆ ಇದರ ಪರಿಣಾಮ ವೇನು? ಮಲೇರಿಯಾ ಹಾವಳಿಯು ಬಡ ಜನರಿಗೆ ವಿಶೇಷವಾಗಿ ಹೇರುವಂತೆ [illegible] ಬಡತನ, [illegible] ಮಲೇರಿಯಾದಿಂದ ಪರಿಣಮಿಸಿ, [illegible] ಗಟ್ಟಲೆ ಜನರು ಯಾವತ್ತೂ ಉದ್ಯೋಗವನ್ನು ಮಾಡಲಾರದೆ ನರಳುತ್ತಿದ್ದಾರೆ ಕ್ವೈನನ್ನು ಬೆಳೆಸುವ ಕೈಗಾರಿಕೆಯು ಸರಕಾರದ ಬೊಕ್ಕಸಕ್ಕೆ ಹಣ ತುಂಬಿಸುವ ಉಪಾಯವಾಗಿ ಆರಂಭಿಸಿದೆ ಮಲೇರಿಯಾ ನಿವಾರಣೆ ಬೇಗನೇ ಆಗದಿದ್ದರೆ ದೇಶದ ಸಂಪತ್ತು ಕೆಡುವುದು ಈ [illegible] ಸ್ವಾತಂತ್ರ್ಯ [illegible] ಜವಾಹರ ಲಾಲರ ಅಧ್ಯಕ್ಷತೆ [illegible] ಇನ್ನು ಸ್ವಲ್ಪ ಸಮಯ ದಲ್ಲೇ [illegible] ಜರಗುವ ಅಧಿವೇಶನದಲ್ಲಿ [illegible]

(೧೪ನೇ ಪುಟಕ್ಕೆ ಮುಂದುವರಿದಿದೆ)

ಮುಂದಿನ ಕೊಂಗ್ರೆಸ್

ಲಖ್ನೋದಲ್ಲಿ ಜರಗಬೇಕೆಂದಿದ್ದ ಈ ಅಧಿವೇಶನವು ಸಾಂಗವಾಗಿ ನಡೆಯುವುದರಲ್ಲಿ ಕೆಲವರಿಗೆ ಸಂದೇಹವುಂಟಾಗಿದೆ. ಕೇವಲ ವ್ಯಕ್ತಿ ದ್ವೇಷದಿಂದ ಅಲ್ಲಿನ ಕಾಂಗ್ರೆಸ್ ಕಮಿಟಿಯವರು ಯಾವುದೂ ಒಂದು ಕರಾರು ಒಪ್ಪಂದಕ್ಕೆ ಬರಲಾರದವರಾಗಿದ್ದಾರೆ ಸಂಯುಕ್ತ ಪ್ರಾಂತ್ಯಗಳ ಮುಂದಾಳುಗಳು ಈ ಕಲಹಗಳನ್ನು ನಿವಾರಿಸಲು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಈಗಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಈ ಕಲಹಗಳಿಂದಾಗಿ ಈ ಅಧಿವೇಶನವು ನಿಲ್ಲಬಾರದೆಂದು ಕೊಂಗ್ರೆಸ್ ಇತರ ಪ್ರಾಂತ್ಯಗಳಲ್ಲಿ ಜರಗಿಸುವ ಆಲೋಚನೆಯನ್ನು ಕಾರ್ಯಕಾರಿ ಮುಂದಿಟ್ಟು ಮುಂದಿಟ್ಟಿದ್ದಾರೆ ಕೊಂಗ್ರೆಸನ್ನು ಆಗ್ರಾದಲ್ಲಿ ಜರಗಿಸಲು ಕೆಲವರು ಸೂಚಿಸಿರುತ್ತಾರೆ ಆದರೆ ಲಖ್ನೋದಲ್ಲಿ ನಡೆದಂತೆ ಇಲ್ಲಿಯೂ ಕೆಲವು ಆತಂಕಗಳು ತೋರಿದೋರಿವೆ ಆದ್ದರಿಂದ ಈ ಭಾರಿಯ ಕೊಂಗ್ರೆಸು ಅಧಿವೇಶನವು ಮದ್ರಾಸಿನಲ್ಲಿ ಜರಗಿಸಬೇಕಾದೀತು ಎಂದು ಪ್ರಸಾದರವರು ತಿಳಿಸಿರುತ್ತಾರೆ

ಈ ಭಾರಿ ಅಧ್ಯಕ್ಷ ಪದವಿಯನ್ನು ಯಾರಿಗೆ ಕೊಡುವುದೆಂದು ಇಷ್ಟರ ವರೆಗೆ ನಿಶ್ಚಯವಾಗಲಿಲ್ಲ. ಕೆಲವರು ಸುಭಾಷ್ ಚಂದ್ರ ಭೋಸರ ಹೆಸರನ್ನು ಸೂಚಿಸಿದ್ದಾರೆ. ಕೆಲವರು ಜವಾಹರಲಾಲರ ಹೆಸರನ್ನು ಸೂಚಿಸಿದ್ದಾರೆ. ಇನ್ನು ಕೆಲವರು ನಿವೃತ್ತರಾದ ರಾಜಗೋಪಾಲಾಚಾರ್ಯರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಸೂಚಿಸಿದ್ದಾರೆ

ಸುಭಾಷ್ ಚಂದ್ರ ಭೋಸರು ಮತ್ತು ಜವಾಹರಲಾಲರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವುದಿಲ್ಲವೆಂದು ತಿಳಿದು ಬಂದಿದೆ ಈ ಅಧ್ಯಕ್ಷ ಪದವಿಯನ್ನು ಕುರಿತು ಮಹಾತ್ಮಾ ಗಾಂಧಿಯವರನ್ನು ವಿಚಾರಿಸುವರೆಂದು ವಾರ್ತೆಯಿದೆ ಮಹಾತ್ಮಾಗಾಂಧಿಯವರು ಜವಾಹರಲಾಲರೊಡನೆ, ಕೊಂಗ್ರೆಸ್ಸಿನ ಮುಂದಿನ ಕಾರ್ಯಕ್ರಮವನ್ನು ನಡೆಯಿಸುವರೆಂಬ ವಾರ್ತೆಯಲ್ಲಿ ಸತ್ಯಾಂಶವಿಲ್ಲ [illegible] ಮಹಾತ್ಮಾಗಾಂಧಿಯವರು ಕೊಂಗ್ರೆಸಿನೊಡನೆ ಸಹಕರಿಸುವರು [illegible] ನಾವು ತಿಳಿಯುತ್ತೇವೆ

ಅಂತೂ, ಕಾಂಗ್ರೆಸ್ಸಿನ [illegible] ಅಧಿವೇಶನದ ಕುರಿತು ಯಾವತ್ತೂ ನಿಶ್ಚಿತ ಸೂಚನೆಗಳಾಗಲಿಲ್ಲ ಇವು ಬೇಗನೇ ಆಗಲಿ ಈ ಭಾರಿಯ ಕೊಂಗ್ರೆಸು ಸ್ಥಾಪಿತ [illegible] ದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ವಿಚಾರವು ಒಂದು ಪ್ರಾಮುಖ್ಯ ಪ್ರಶ್ನೆಯಾಗಿರುತ್ತದೆ.

(ಆಚಾರ್ಯ ಕೃಪಲಾನಿಯವರ ಪ್ರಕಾರ [illegible] ಈ ಕಲಹವನ್ನು ಬದಿಗಿಟ್ಟು ಕಾಂಗ್ರೆಸ್ಸಿನ [illegible] ಲಖ್ನೋದಲ್ಲಿ ನಡೆಯುತ್ತಿದೆ)

೩೦ ವರ್ಷಗಳ ತನಕ ಉದರ ವೇದನೆಯಿಂದ ಬಾಧೆ!

[illegible]

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

15 [illegible]

[illegible]

ಲಾಲಾ ಹರಿಕಿಷನ್ನರಿಗೆ ಸಜೆಯಾಯಿತು

ಪಂಜಾಬ ಸರಕಾರದ ಮಾಜಿ ಮಂತ್ರಿ ಯೂ ಮತ್ತು ಅಲ್ಲಿನ ಪ್ರಾಮುಖ್ಯ ವರ್ತಕರೂ ಆದ ಲಾಲಾ ಹರಿಕಿಷನ್ನ ಲಾಲರಿಗೆ ಕಂಟೆಪ್ಟ್ ಆಫ್ ಕೋರ್ಟ್ ಎಂಬ ಅಪವಾದದ ಮೇಲೆ, ಮೂರು ತಿಂಗಳ ಸಜೆಯನ್ನು ವಿಧಿಸಲಾಯಿತು. ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡುವರೆ ಹುಕುಂ ಕೊಡಬೇಕಾಗಿ ಇವರು ಮಾಡಿದ ಅರ್ಜಿಯು ಅಂಗೀಕರಿಸಲಾಗಲಿಲ್ಲ. ಇವರಿಗೆ ಆರು ತಿಂಗಳ ಸಜೆಯನ್ನು ವಿಧಿಸುವವರಿದ್ದರು ಆದರೆ ಇವರ ಪ್ರಾಯವು ಬಹಳವಾದುದರಿಂದ ಬರೆ ಒಂದು ತಿಂಗಳು ಕೊಟ್ಟಿರುತ್ತಾರೆ.

ನಿಜಾಮರ ರೈಲ್ವೆ ಕಂಪೆನಿಯಲ್ಲಿ ರಿಟ್ರೆಂಚ್ ಮೆಂಟು

ನಿಜಾಮರ ರೈಲ್ವೇ ಏಜಂಟರು, ಮೊನ್ನೆ ...೦ ಜನರನ್ನು ಕೆಲಸದಿಂದ ನಿವೃತ್ತ ಮಾಡಿರುತ್ತಾರೆ ಕಾರಣ ರಿಟ್ರೆಂಚ್ ಮೆಂಟು ಇದೂ ಅಲ್ಲದೆ ೫೫ ವರ್ಷ ಪ್ರಾಯವಾದವರನ್ನೂ ತೆಗೆಯಲಾಗುವುದು ಸಿಕಂದರಾಬಾದಿನಲ್ಲಿ ಈ ... ಸಿಸ್ಟಿನಾಗರಣೆ ಮಾಡುವುದಕ್ಕಾಗಿ ನೌಕರರ ... ಮಹಾಸಭೆಯು ಸೇರಿತು ಏಜಂಟರ ... ಡೆ ತಮ್ಮ ಕಷ್ಟಪರಂಪರೆಗಳನ್ನು ವಿವರಿಸಿ ...ನರು ಕೊಟ್ಟ ಅಪ್ಪಣೆಯನ್ನು ಹಿಂತೆಗೆಯು...ಂತೆ ಮಾಡುವರೆ ಅವರನ್ನು ಕೋರಬೇಕೆಂದು ... ರ್ಧಾರಗಳಾದುವು ನೈಜಾಮರಿಗೂ ಒಂದು ... ರ್ಜಿ ಮಾಡಬೇಕಾಗಿ ರಾವುಗಳಾದುವು

ಡಿಲ್ಲಿಯಲ್ಲಿ ಬ್ರಿಟಿಷ ಇನ್ ಕಮ್ ಟೇಕ್ಸ್ ಪ್ರವೀಣರು

... ಭರತಖಂಡದ ಇನ್ ಕಮ್ ಟೆಕ್ಸ್ ಪ್ರಶ್ನೆಯನ್ನು ಪರಿಶೀಲಿಸಿ, ಈ ಇಲಾಖೆಯ ... ತೀರ್ಣೋದ್ಧಾರಕ್ಕೆ ಸೂಚನೆಗಳನ್ನು ಕೊಡಲು, ಈ ಪ್ರವೀಣರ ಸಂಸ್ಥೆಯೊಂದು ನೇಮಕವಾಗಿದೆ ಇವರ ಸಂಸ್ಥೆ ಸದಸ್ಯರ ಲಂಡನಿನಿಂದ ... ಬಂದಿರುತ್ತಾರೆ ... ಭರತಖಂಡದ ಎಲ್ಲಾ ಪ್ರಾಂತ್ಯಗಳ ಮುಖ್ಯ ದೇಶಗಳನ್ನು ಇವರು ಸಂಚರಿಸುವರು ಇವರೊಡನೆ ಮುಂಬಾಯಿಯ ಇನ್ ಕಮ್ ಟೆಕ್ಸ್ ಕಮಿಶನರರು ಸೇರಿರುವರು.

ವಿದ್ಯಾರ್ಥಿನಿಯರು ಉಪವಾಸಗೈದರು

ಲಕ್ನೋದಲ್ಲಿ ದೀಪಾವಳಿ ಹಬ್ಬಕ್ಕೆ ಮನೆಗೆ ತೆರಳಿದ ಓರ್ವ ವಿದ್ಯಾರ್ಥಿನಿಗೆ, ಕಾಲೇಜಿನ ಕ್ರಮದ ಪ್ರಕಾರ ವರ್ತಿಸದುದಕ್ಕೆ ಪುನಃ ಕಾಲೇಜನ್ನು ಸೇರಬಾರದೆಂದು ಅಪ್ಪಣೆಯಾಯಿತು ಆದರೆ ಅವಳು ಕಾಲೇಜಿಗೆ ಬಂದವಳಾದಳು ಅಧಿಕಾರಿಗಳು ಅವಳಿಗೆ ಕಾಲೇಜನ್ನು ಸೇರಲು ಅಡ್ಡಿ ಮಾಡಲು, ಅವಳು ಉಪವಾಸ ಆರಂಭ ಮಾಡಿರುತ್ತಾಳೆ ಇವಳೊಡನೆ ಅನೇಕ ವಿದ್ಯಾರ್ಥಿನಿಯರು ಸಹಕರಿಸಿರುವರು

ಉಕ್ಕಿನ ಸಾಮಾನುಗಳನ್ನು ತಯಾರಿಸಲು ಒಂದು ಸಂಸ್ಥೆ

ಟಾಟಾ ಕಂಪೆನಿಯವರಿಂದ ೩ ಕೋಟಿ ರೂಪಾಯಿ ಮೂಲಧನ ತೆತ್ತು ಸ್ಥಾಪಿಸಲಾಗುವುದು. ಈ ಸಂಸ್ಥೆಯ ಶೇರುಗಳು ಸರ್ವಜನರಿಗೆ ದೊರಕುವುದಿಲ್ಲ ಈ ಮೂರು ಕೋಟಿ ರೂಪಾಯಿಂದ ಮೂರು ಸಂಸ್ಥೆಗಳನ್ನು ಸ್ಥಾಪಿಸುವರು ಇವುಗಳ ಶೇರುಗಳೆಲ್ಲಾ ಟಾಟಾ ಸಂಸ್ಥೆಯವರಿಗೆ ಕೊಡಲಾದೀತು ಟಾಟಾ ಸಂಸ್ಥೆಯಲ್ಲಿ ಆಗದಿರುವ ಉಕ್ಕಿನ ಸಾಮಾನುಗಳನ್ನು ಈ ಸಂಸ್ಥೆಗಳಲ್ಲಿ ತಯಾರಿಸುವರು ಇದರಿಂದ ಅನೇಕರಿಗೆ ಉದ್ಯೋಗವು ದೊರಕುವುದು.

ಗಡಿನಾಡಿನಲ್ಲಿ ಶಾಂತಿಸ್ಥಾಪನೆಯಾಗಿದೆ

ಮೇಲಿನ ಮೋಹಮಾಂಡ ಪ್ರದೇಶಗಳ ಮಾಲೀಕರೊಡನೆ ಕೆಲವು ಶರ್ತಗಳನ್ನು ಒಪ್ಪಂದ ಮಾಡಿ ಅಲ್ಲಿನ ಗಲಭೆಯು ಶಾಂತಹೊಂದಿದೆ. ಚಳಿಗಾಲವು ಬಂದುದರಿಂದ ಇಲ್ಲಿನ ಜನರು ಅವರವರ ಉದ್ಯೋಗಗಳಲ್ಲಿ ಮಗ್ನರಾಗಿರುವರು. ಈ ಗಲಭೆ ಸಮಯ ಮಿಲಿಟರಿಯವರಿಂದ ಒಂದು ಒಳ್ಳೆ ರಸ್ತೆಯು ನಿರ್ಮಾಣವಾಗಿರುತ್ತದೆ ಇದು ಮೋಟರು ವಾಹನಗಳ ಸಂಚಾರಕ್ಕೆ ಅನುಕೂಲವಾಗಿದೆ.

ಜುಬಿಲಿ ಟೆಕ್ಸ್ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಕೆಗೆ ಬೇಕಾಗುವ ಕಾತ್ರಿ ಬಣ್ಣದ ನಮೂನೆವಾರು ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು-- ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತದೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕು ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಸೂರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ 'ಪವನು'

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ಹಿಂದುಸ್ಥಾನ ಸಂಗ್ರಾಮಿಕ ಶಾಲೆ.

ನಮಗೊಂದು ಸಂಗ್ರಾಮಿಕ ಶಾಲೆಯನ್ನು ಡೆರಾಡನ್ನಿನಲ್ಲಿ ನಿರ್ಮಿಸಿರುತ್ತಾರೆ. ಇದು ಯೋಗ್ಯವಾದ ರೀತಿಯಲ್ಲಿ ನಡೆಯುತ್ತದೆಂದು ಹಿಂದುಸ್ಥಾನ ನಿವೃತ್ತರಾಗುವ ಕಮಾಂಡರ್ ಇನ್ ಚೀಫರಾದ ಫಿಲಿಪ್ ಚೆಟವೂಡರ್, ಮತ ಈ ಶಾಲೆಯು ಇವರಿಂದಲೆ ರಚನೆಯಾದುದು ಸ್ವದೇಶಕ್ಕೆ ತೆರಳುವ ಮೊದಲು ಇದನ್ನು ಕೊನೇ ಬಾರಿ ಸಂದರ್ಶಿಸಲು ಮಿ। ಚೆಟವೂಡ್‌ರು ಡೆರಾಡನ್ನಿಗೆ ತೆರಳಿದ್ದರು. ಈ ಶಾಲೆಯ ಯೋಗ್ಯ ಸಂಗ್ರಾಮ. ಅಧೀಸರರನ್ನು ಸೃಷ್ಟಿಸುವುದು, ಆದರೆ ಹಿಂದೂದೇಶದಲ್ಲಿ ಯೋಗ್ಯ ತರುಣರು ಈ ಶಾಲೆಯಲ್ಲಿ ತರಬೇತುಹೊಂದಲು ಮುಂದೆ ಬರುವುದಿಲ್ಲವೆಂದೂ, ಅಂತವರು ಮುಂದೆ ಬಂದ ಹಿಂದುಸ್ಥಾನಕ್ಕೆ ಒಂದು ಮಹಾ ಸೈನ್ಯ ಬಲವು ನಿರ್ಮಿಸುವುದರಲ್ಲಿ ಸಹಕರಿಸಬೇಕೆಂದೂ, ಇವರು ಅಲ್ಲಿ ಭಾಷಣಮಾಡಿದರು. ವಿವಾಹಿತರಾದ ತರುಣರಿಗೆ ಇಲ್ಲಿ ಪ್ರವೇಶವು ದೊರಕುವುದಿಲ್ಲ ಮಾತ್ರವಲ್ಲ ಈಗ ಈ ಸಂಸ್ಥೆಯಲ್ಲಿರುವ ವಿವಾಹಿತ ತರುಣರನ್ನು ಹೊರಗೆ ತಳ್ಳಲಾಗುವುದು.

ಪ್ರಪಂಚ ಪರಿಚಯ:

ಅಬೀಸೀನಿಯದವರಿಂದ ಮಹಾಪ್ರಭುತ್ವದ ಜನಾಂಗಗಳಲ್ಲಿ ಕಲಹ ಉಂಟಾಗಲು ಕಾರಣವೇನು?

ಆಫ್ರಿಕದ ಭಾಗಗಳಲ್ಲಿ ಈಗ ಎಬಿಸೀನಿಯಾ ಮಾತ್ರ ಸ್ವತಂತ್ರ್ಯವಾಗಿರುವುದು ಅಲ್ಲಿನ ಇತರ ಪ್ರಾಂತ್ಯಗಳನ್ನು ಮಹಾಪ್ರಭುತ್ವದ ಜನಾಂಗಗಳಲ್ಲಿ ಹಂಚಿಹೋಗಿವೆ. ಅವುಗಳಲ್ಲಿ ಬ್ರಿಟಿಷರು ದೊಡ್ಡ ಪಾಲನ್ನು ಪಡೆದಿರುತ್ತಾರೆ. ಇಟಲಿಯು ಈಗ ಎಬಿಸೀನಿಯಾದಲ್ಲಿ ಬೇರೆಯವರು ಬರುವ ಮೊದಲು ದೊಡ್ಡ ಅಂಶವನ್ನು ಹೊಡೆಯಬೇಕೆಂದಿದೆ.

ಎಬಿಸೀನಿಯಾದ ಮೇಲೆ ಆಸಕ್ತಿಯುಳ್ಳ ಜನಾಂಗಗಳು ನಾಲ್ಕು. ಬ್ರಿಟಿಷ ಭಾಂಡಾಗಾರರು, ಅವರು ಧಾರಾಳ ಹಣ ಸಂಚಯಿಸಿದರು (ಇಜಿಪ್ಟಿನ ಮತ್ತು ಸುಡಾನಿನ) ಹತ್ತಿಯ ತೋಟಗಳಿಗೆ ನೀರ ಒದಗಿಸುವ ಮೂಲಸ್ಥಾನವು ಎಬಿಸೀನಿಯಾದ ಟಾನಾಸರೋವರದಲ್ಲಿರುವುದರಿಂದ, ಎಬಿಸೀನಿಯದ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತಿದ್ದಾರೆ. ಬೇಂಕ್ ಒಫ್ ಇಜಿಪ್ಟಿನಲ್ಲಿ ಬ್ರಿಟಿಷರ ತುಂಬ ಹಣವಿದೆ. ಬೇಂಕ್ ಒಫ ಎಬಿಸೀನಿಯಾವು ಈ ಸಂಸ್ಥೆಯ ಒಂದು ಶಾಖೆಯಾಗಿದೆ. ಇದರಿಂದ ಬ್ರಿಟಿಷರು ಎಬಿಸೀನಿಯಾದ ಕಡೆಗೆ ಆಸ್ಥೆ ವಹಿಸುತ್ತಿರುವರು.

ಅಲ್ಲಿನ ಆದಿಸ ಅಬಾಬದಿಂದ ಫ್ರೆಂಚ ಬಂದರದ ಜಿಭೂತಿಗೆ ಸಂಚರಿಸುವ ಒಂದೇ ರೈಲ್ವೆಸಂಸ್ಥೆಯು ಫ್ರೆಂಚರ ಅಧೀನದಲ್ಲಿರುವುದು. ಜಪಾನಿಯರಿಗೆ ಹತ್ತಿ ಬೆಳೆಸುವ ಅನೇಕ ತೋಟಗಳಿವೆ. ಅಲ್ಲದೆ ಅವರು ತಯಾರಿಸಿದ ವಸ್ತುಗಳಿಗೆ ಎಬಿಸೀನಿಯಾವು ಒಂದು ದೊಡ್ಡ ಗಿರಾಕಿಯಾಗಿರುತ್ತದೆ.

ಎಬಿಸೀನಿಯಾದ ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಯು ಇಟಲಿಯವರ ಕೈಯಲ್ಲಿದೆ.

ಆದರಿಂದ, ಬ್ರಿಟಿಷರು, ಜಪಾನಿಯರ ಫ್ರೆಂಚರು ಎಬಿಸೀನಿಯಾದ ಮೇಲೆ ಕಣಿಕರಪಟ್ಟು ಇಟಲಿಯನ್ನು ಕಡೆಯುವವರಾಗಿದ್ದಾರೆ. ನ್ಯಾಯಸ್ಥಾಪನೆಗೆ ಅಲ್ಲ, ಬರೇ ಸ್ವಾರ್ಥದಿಂದ ವರ್ತಿಸುತ್ತಿದ್ದಾರೆ.

ಒಟ್ಟಿನ ಮೇಲೆ ಹೇಳುವುದಾದರೆ ... ಜನಕಲ್ಪದಲ್ಲಿ ನ್ಯಾಯವು ತಪ್ಪಿ ಹೋಗುತ್ತದೆ. ಬ್ರಿಟಿಷ ಫ್ರೆಂಚ ಜಪಾನು ಸರಕಾರದವರು ಅವರ ... ಮುಸಲೀನಿಯು ಎಲ್ಲವನ್ನೂ ತನ ಕೈಯಲ್ಲಿ ಹಾಕುವುದು ಸರಿ ಅಲ್ಲ.

ಇಟಲಿ ಎಬಿ... ... ಪದ ಮಹಾಯುದ್ಧ.

New Leader London

ಭಾರತೀಯ ಸರಕಾರದ ನವಸುಧಾರಣೆ-

-ಗಳನ್ನು ಜ್ಯಾರಿಗೆ ತರಲು ಲಂಡನಿನ ಇಂಡಿಯಾ ಆಫೀಸು ಕೆಲವು ದಿವಸಗಳಿಂದ ಮಹಾ ಚುರುಕಿನಿಂದ ಕೆಲಸಮಾಡುತ್ತಿದೆ. ಪಾರ್ಲಿಮೆಂಟಿನ ಸದಸ್ಯರ ಕಡೆಯ ಕಡಿವೆಯಾದುದರಿಂದ ಬಹಳವಾಗಿ ಹೆಣಗಾಡುತ್ತಿದೆ. ಒಂದು ದೇಶಕ್ಕೆ ಸುಧಾರಣೆಗಳನ್ನು ಕೊಡಲು ಇಷ್ಟರ ವರ್ಷಗಳಿಂದ ಈ ಸಂಸ್ಥೆಯು ಸಿದ್ಧವಾಗುತ್ತದೆ. ಬ್ರಿಟಿಷರಿಂದ ರಚಿತವಾದ ಈ ಸುಧಾರಣೆಗಳು ಸಮಯ ವಿಳಂಬವಾಗದೆ, ಬೇಗನೇ ಕಾರ್ಯಕ್ಕೆ ತರಬೇಕೆಂದು ಈ ಸಂಸ್ಥೆಯವರ ಮುಖ್ಯ ಉದ್ದೇಶ. ಈ ವಿಚಾರಕೆಲಸವು ರಾತ್ರಿ ಹಗಲು ನಡೆಯುತ್ತದಂತೆ. ಇವರ ಈ ಕಾರ್ಯಗಳಿಗಾಗಿ ಭಾರತೀಯರು ಅವರ ಮೇಲೆ ಕೃತಜ್ಞರಾಗಬೇಕೆಂದು ಕೆಲವು ಎಂಗ್ಲೋ-ಇಂಡಿಯನ್ ಪತ್ರಿಕೆಗಳು ಸಾರುತ್ತಿವೆ. ಸುಧಾರಿತ ಸರಕಾರಕ್ಕೆ ಇನ್ಸ್ಟ್ರುಮೆಂಟ್ ಒಫ್ ಇನ್ಸ್ಟ್ರಕ್ಷನ್ (ಸುಧಾರಣೆ ಜ್ಯಾರಿಗೆ ತರುವ ಅಪ್ಪಣೆಗಳನ್ನು) ರಚಿಸುತ್ತಿದ್ದಾರೆ. ಕೆಲಸವು ಬಿರುಸಾಗಿ ಸಾಗುತ್ತಿದ್ದರೂ ಫಲಿತಾಂಶಗಳನ್ನು ಗುಪ್ತವಾಗಿಟ್ಟಿರುತ್ತಾರೆ. ಸುಧಾರಿತ ಸರಕಾರದ ರಚನೆಗೋಸ್ಕರ ನವದಿಲ್ಲಿಯಲ್ಲಿಯೂ ರಾತ್ರಿ ಹಗಲು ಕೆಲಸ ನಡೆಯುತ್ತದಂತೆ. ಈ ವಿಷಯ ಆಲೋಚಿಸಲು ವಿವಿಧ ಪ್ರಾಂತ್ಯಗಳ ಗವರ್ನರರು ವೈಸರಾಯರ ಭೇಟಿಗೆ ತೆರಳುವರು. ನಮ್ಮ ಈಗಿನ ನ್ಯಾಯವಿಧಾಯಕ ಸಭೆಯು ಬೇಗನೇ ವಿಶ್ರಾಂತಿಗೊಳ್ಳಬೇಕಾಗುವುದು.

ಅಂಚೆದರಗಳು ಕಡಿಮೆಯಾಗುವುವೆ?

ಸರ್. ಫ್ರೆಂಕ್ ನೋಯ್ಸ್, ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಲೇಬರ್ ಮತ್ತು ಕೈಗಾರಿಕೆಯ ಸದಸ್ಯರು ಮೊನ್ನೆ ಮದ್ರಾಸಿಗೆ ಬಂದಾಗ, ಅಂಚೆ ದರಗಳು ತಗ್ಗಿಸಲಾಗುವವೆ? ಎಂದು ವಿಚಾರಿಸಲಾಗಿ-ಅದು ಹಿಂದೂದೇಶದ ಸರಕಾರದ ಮುಂದಿನ ಆಯವ್ಯಯದ ಅಂದಾಜುಪಟ್ಟಿಯ ಮೇಲೆ ಹೊಂದಿಕೊಂಡಿರುತ್ತದೆಂದೂ ಸಾಧ್ಯವಾದರೆ ಅರ್ಧಾಣೆ ಅಂಚೆದರಗಳನ್ನು ಜ್ಯಾರಿಗೆ ತರುವರಲ್ಲದೆ, ಅರ್ಧ ಕೂಲಿಯ ನಿರ್ಬಂಧವನ್ನು ತೆಗೆಯಲಾಗುವುದು ಎಂದು ತಿಳಿಸಿದರು. ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಗಳ ಒಟ್ಟುಗೂಡುವಿಕೆಯಿಂದ ವೆಚ್ಚ ಕಡಿಮೆಯಾಗುವುದಿಲ್ಲವೆಂದೂ, ಈ ಇಲಾಖೆಗಳ ವೆಚ್ಚವನ್ನು ಆಯಾ ಇಲಾಖೆಗಳೇ ವಹಿಸಬೇಕೆಂದು ತಿಳಿಸಿದರು.

ಚಿತ್ರಮಯ ಅಂಡಮಾನ ದ್ವೀಪಗಳು

ಅಂಡಮಾನ ದ್ವೀಪಗಳು ಕ್ರೂರ ಕೈದಿಗಳ ಮತ್ತು ಮೃಗಗಳ ವಾಸಸ್ಥಾನವೆಂಬುದು ತಪ್ಪಾದ ಭಾವನೆಯು. ಅಂಡಮಾನವು ೨೦೪ ದ್ವೀಪಗಳ ಒಂದು ಸಮೂಹವಾಗಿರುತ್ತದೆ. ಇದರ ಜನಸಂಖ್ಯೆಯು ೧೯,೦೦೦ ಕೋತಿಗಳ ನಿವಾಸವೆಂಬುದು ಅಂಡಮಾನ ಶಬ್ದದ ಅರ್ಥ. ಇಲ್ಲಿನ ಕಪ್ಪಗಾದ ಕುಳ್ಳಗಿನ ನಿವಾಸಿಗಳಿಂದ ಈ ಹೆಸರು ಬರಲು ಕಾರಣವಾಯಿತು. ಮೊಟ್ಟಮೊದಲು ಈ ಮೂಲನಿವಾಸಿಗಳು ಅಲ್ಲಿ ಇಳಿಯುವ ಅನ್ಯಜನರ ಮೇಲೆ ವೈಷಮ್ಯದಿಂದ ಧಾವಿಸುತ್ತಿದ್ದರು. ವಿಷಕರವಾದ ಬಾಣಗಳನ್ನು ಉಪಯೋಗಿಸಿ ಇವರನ್ನು ಕೊಲೆಮಾಡುತ್ತಿದ್ದರು. ಆದರೆ ಈಗ ಸಜ್ಜನರಾಗುತ್ತಾ ಬಂದು ನವನಾಗರೀಕರಾಗುತ್ತಿದ್ದಾರೆ. ಆದರೆ ಒಂದಾನೊಂದು ಕಾಲದಲ್ಲಿ ದೊಡ್ಡದಾಗಿರುವ ಇವರ ಸಂಖ್ಯೆಯು ೮೦೦ಕ್ಕೆ ಇಳಿದಿರುತ್ತದೆ. ಈ ಜನಾಂಗವು ಬೇಗನೆ ನಾಶಹೊಂದುವುದು.

ಮಳೆಗಾಲದಲ್ಲಿ ಅಂಡಮಾನ ದ್ವೀಪಗಳು ಹಸುರಾದ ಸೃಷ್ಟಿಗಳಿಂದ ಕಂಗೊಳಿಸುತ್ತದೆ. ಎಲ್ಲಾ ಭೂಪ್ರದೇಶಗಳು ಶೋಭಾನಮಯ ಸೃಷ್ಟಿಗಳಿಂದ ಶೃಂಗರಿಸಲ್ಪಡುವುವು. ಇಲ್ಲಿನ ಜನರು ಯಾವಾಗಲೂ ಸಂತುಷ್ಟರಾಗಿರುತ್ತಾರೆ. ತರತರದ ವಿನೋದ ಪಂದ್ಯಗಳು ಅಲ್ಲಿ ಧಾರಾಳವಾಗಿ ನಡೆಯುತ್ತವೆ. ಅಂಡಮಾನ ದ್ವೀಪಗಳಲ್ಲಿ ೩೩೦೦ ಚದರ ಮೈಲಿ ವಿಸ್ತೀರ್ಣದ ವಿವಿಧವಾದ ಅರಣ್ಯಗಳಿವೆ. ಸರಕಾರದ ಹೊಸ ಕ್ರಮದ ಪ್ರಕಾರ ಅವುಗಳಲ್ಲಿ ೧೪೦೦ ಚದರಮೈಲು ವಿಸ್ತೀರ್ಣದ ಅರಣ್ಯಗಳಲ್ಲಿ ಲಾಭಕರ ಉದ್ಯಮಗಳನ್ನು ನಡೆಯಿಸಲಾಗುವುವು. ಈ ಅರಣ್ಯಗಳಿಂದ ಒಳ್ಳೇ ಮರವನ್ನು ತೆಗೆಯಲು ಸಾಧ್ಯವಿದೆ. ಕಾಗದ ತಯಾರಿಗೆ ಬೇಕಾದ ವಲ್ಪನ್ನೂ ತಯಾರಿಸಬಹುದು.

ತೆಂಗಿನ ಸಾಗುವಳಿಯನ್ನು ಇಲ್ಲಿ ಧಾರಾಳವಾಗಿ ಮಾಡಬಹುದು. ಅಲ್ಲಿ ಉತ್ತಮ ರಬ್ಬರ್ ತೋಟಗಳನ್ನು ಬೆಳೆಯಿಸಬಹುದು. ಇನ್ನು ಸ್ವಲ್ಪ ಸಮಯದಲ್ಲಿ ಅಂಡಮಾನ ದ್ವೀಪಗಳು ಮೇಲೆ ಹೇಳಿದ ಕೈಗಾರಿಕೆಗಳಿಂದಾಗಿ ಬಹಳ ಸಂಪತ್ತಿಯಾಗಿ ಆಗುವುದು.

ಪ್ರಾಚೀನ ಕಾಲದಲ್ಲಿ ಇಡೀ ಪ್ರಪಂಚವನ್ನು ಪರಿಪಾಲಿಸಿದ ನಗರ

ರೋಮ್ ನಗರವು ಒಂದಾನೊಂದು ಕಾಲದಲ್ಲಿ ಸಮಸ್ತ ಭೂಲೋಕವನ್ನು ಆಳಿದ ಚಕ್ರಾಧಿಪತ್ಯದ ಮಹಾಸ್ಥಾನವಾಗಿತ್ತು. ಈಗಲೂ ಆ ಪ್ರಾಚೀನ ಕ್ರಿಸ್ತಶಕದ ಗುರುತುಗಳು ಅಲ್ಲಲ್ಲಿ ಕಾಣಸಿಗುತ್ತವೆ. ಪುರಾತನ ಕಾಲದಲ್ಲಿ ಚಂದ್ರಾಕಾರದ ಶಿಲ್ಪಿಯ ಸಭಾಮಂದಿರಗಳು, ಅರಮನೆಗಳು, ದೇವಾಲಯಗಳು ಸಾರ್ವಜನಿಕ ಮಂದಿರಗಳ ಇತ್ಯಾದಿ ಇವತ್ತಿಗೂ ಅಲ್ಲಿ ಕಾಣಸಿಗುತ್ತವೆ. ಇವು ರೋಮ ವಂಚನೆಗೊಳ್ಳದ ದೃಶ್ಯಗಳಾಗಿವೆ. ಇವು ರೋಮಿನ ಪ್ರಸಿದ್ಧ ಚರಿತ್ರೆಯ ಚಿತ್ರಗಳಾಗಿವೆ. ಪ್ರಾಚೀನ ಕಾಲದ 'ರೋಮನ್' ಸಾಮ್ರಾಜ್ಯದ ವೈಭವದ ಕುರುಹುಗಳು. ನಿಮ್ಮನ್ನು ದಿಗಿಲುಗೊಳಿಸುವುವು. ಬಲಾಢ್ಯ ಅರಸರೂ ನಾಯಕರೂ ಸೀಸರರೂ ಕಟ್ಟಿಸಿದ ರೋಮ್‌ನಗರವು ಈಗಲೂ ಪ್ರಾಚೀನಕಾಲದ ಶೋಭೆಯಿಂದ ಕಂಗೊಳಿಸುತ್ತಿದೆ. ಯಾವಕಾಲ್ಕು ಹಾಗಂಗದವರು ರೋಮ್ ನಗರದ ಈ ರೋಮಾಂಚಕಾರಿಸುವ ದೃಶ್ಯಗಳಿಂದ ಇಟಲಿಯ ಮೇಲೆ ತಮಗೆ ಎಷ್ಟು ಅಸ್ವಸ್ತಿ ಇದ್ದರೂ ಅದನ್ನು ಮರೆತು, ಅಲ್ಲಿ ಸಂಚರಿಸುವ ವೇಳೆ ಮೆಚ್ಚಿಗೆಯ ಭ್ರಮೆಯಿಂದ ತೂಗಾಡುವವರಾಗುವರು.

ಮೋಟರುಗಳಲ್ಲಿ ಹೆಚ್ಚಿನ ಮೈಲೇಜು ಪಡೆಯುವ ಹೊಸ ವಿಧಾನ.

ಮೈಸೂರು ಪ್ರಾಂತ್ಯದ ಒಟೋಮೊಬೈಲ್ ಎಸೋಸಿಯೇಶನ್‌ನವರು ಈಗ ಪೆಟ್ರೋಲಿನಿಂದ ಉಂಟಾಗುವ ವೆಚ್ಚವನ್ನು ಆಲ್ಕೊಹೋಲ್ ಮಿಶ್ರಿತವಾದ ಪೆಟ್ರೋಲನ್ನು ಉಪಯೋಗಿಸಿ ಕಡಿಮೆಮಾಡಬಹುದೆಂದು ಕಂಡುಹಿಡಿದಿರುತ್ತಾರೆ. ದೇಶೀಯ ಸಕ್ಕರೆಗಿರಣಿಗಳಿಂದ ಆಲ್ಕೋಹೋಲ್ ಸುಲಭ ದರದಲ್ಲಿ ದೊರಕುವಂತೆ ಏರ್ಪಾಡುಗಳನ್ನು ಮಾಡಬೇಕಾಗಿ ಈ ಸಂಸ್ಥೆಯ ಕರಾವುಗಳಾಗಿವೆ. ಕೇವಲ ೬೦ ಸರಿ ಆಲ್ಕೊಹೋಲ್ ಮಿಶ್ರಿತವಾದ ಪೆಟ್ರೋಲಿನಿಂದ ಒಂದು ಗೆಲನಿಗೆ ಹೆಚ್ಚಿನ ಮೈಲೇಜನ್ನು ಪಡೆಯಬಹುದೆಂದು ಇವರು ತಿಳಿಸಿರುತ್ತಾರೆ. ನಮ್ಮ ದಿನ ಮೋಟರು ಮಾಲೀಕರು ಇದರ ಗಮನಿಸಬಹುದಲ್ಲ!

ನಮ್ಮ ವರ್ತಕರ ಗಮನದ ಬಗ್ಗೆ

ಹೊರಗಿನ ದೇಶಗಳಿಗೆ ಕಳುಹಿಸಲಾಗುವ ಬೀಜವಸ್ತು ಸಾಮಾನನ್ನು ಇನ್ನೊಂದು ಬಾರಿ ಅಲ್ಲಿನ ಬಂದರುಗಳಲ್ಲಿ ತೂಕಮಾಡಬೇಕೆಂದು ಕೆಲವು ಸ್ಟೀಮರ್ ಕಂಪೆನಿಗಳು ತಮ್ಮ ಬಿಲ್ ಒಫ್ ಲೆಂಡಿಂಗಿನಲ್ಲಿ ಒಂದು ಹೊಸ ಕ್ರಮವನ್ನು ಸೇರಿಸಿದ್ದಾವೆ. ಆದರಿಂದ ಇಲ್ಲಿನ ಬೇಂಕುಗಳು, ಸರಕುಗಳ ಮೌಲ್ಯದ ಹುಂಡಿಗಳನ್ನು ಕೇಶ್‌ಮಾಡಲು ಒಪ್ಪುವುದಿಲ್ಲ. ಸರಕನ್ನು ತೂಕಮಾಡುವುದರಿಂದ ವಿಂದದು ತೂಕ ವ್ಯತ್ಯಾಸ ಇದ್ದರೆ, ಅದೇ ಪ್ರಕಾರ ಹೆಚ್ಚಿನ ಫ್ರೆಟ್ ಕೊಡಬೇಕಾಗುತ್ತದೆ. ಈ ಹೊಸ ಕ್ರಮವನ್ನು ತೆಗೆದುಹಾಕಲು ನಮ್ಮ ದೇಶದ ಎಲ್ಲಾ ಪ್ರಾಂತೀಯ ಕೋಮರ್ಸ್ ಚೇಂಬರ್ಸ್‌ನವರು ಪ್ರಯತ್ನಗೊಳ್ಳುತ್ತಿದ್ದಾರೆ. ಇಲ್ಲಿನ ವರ್ತಕರು ಅವರ ಹೊರಗಣ ದೇಶದ ಏಜಂಟರ ಮೂಲಕ ಈ ಕ್ರಮವನ್ನು ತೆಗೆದುಹಾಕಲು ಸಾಧಿಸಬೇಕೆಂದು ಈ ಸಂಸ್ಥೆಗಳ ಮನವಿಯು ತೋರಿಬರದೆ.

ಎಸೆಂಬ್ಲಿ ಅಧ್ಯಕ್ಷರ ಮೇಲೆ ಗುಂಡಿನ ಪ್ರಯೋಗ

ಎಸೆಂಬ್ಲಿ ಅಧ್ಯಕ್ಷರಾದ ಸರ್ ... ಅಬ್ದುಲ್ ರಹಿಮರು ಮೊನ್ನೆ ಗಡಿನಾಡಿನ ಕೋಹಟ್ ಎಂಬಲ್ಲಿಂದ ಪೇಶಾವರಕ್ಕೆ ಮೋಟರಿನಲ್ಲಿ ಹಿಂದಿರುಗುವಾಗ ಬಾವಾಬರ್ ಎಂಬ ಗ್ರಾಮದಲ್ಲಿ ಇವರ ಮೇಲೆ ಗುಂಡು ಹೊಡೆದರು. ದೈವವಶಾತ್ ಶ್ರೀ ಅಬ್ದುಲ್ ರಹಿಮಾನರಿಗೆ ಹಾನಿಯು ಉಂಟಾಗಲಿಲ್ಲ. ಗುಂಡುಗಳು ಅವರ ಕಾರಿಗೆ ತಗಲಿದವು. ಅಪರಾಧಿಯ ಪತ್ತೆಯು ಇನ್ನೂ ಆಗಲಿಲ್ಲ. ಪೋಲೀಸ ಶೋಧೆಯು ನಡೆಯುತ್ತಿದೆ.

ಈಜಿಪ್ಟಿನ ರಾಜಕೀಯ ಪರಿಸ್ಥಿತಿ.

ನಾಹಿಂ ಪಾಶಾ ಎಂಬ ಮುಖಂಡನ ... ದಲ್ಲಿ ನಾಹಿಂ ಮಂತ್ರಿಮಂಡಲವು ಈಗ ಅಲ್ಲಿಯ ಸರಕಾರದ ಅಧಿಕಾರ ಸೂತ್ರದಲ್ಲಿರುವುದು. ಈ ನಾಹಿಂ ಸಂಘವು ದೇಶದ ಹಿತವನ್ನು ಬಯಸದೆ, ಬ್ರಿಟಿಷರಿಗೆ ಬೇಕಾದ ರೀತಿಯಲ್ಲಿ ವರ್ತಿಸುತ್ತದೆ. ಬ್ರಿಟಿಷರು ಕೇಳಿದ್ದನ್ನು ಕೊಡಲು, ಹೇಳಿದುದನ್ನು ಮಾಡಲು ಇವರು ಸಿದ್ಧರಿದ್ದಾರೆ. ಆದುದರಿಂದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಈಜಿಪ್ಟಿನ ಜನಸಮುದಾಯವು ಇವರ ಮೇಲೆ ರೇಗಿರುತ್ತದೆ. ಇವರನ್ನು ಅಧಿಕಾರದಿಂದ ಹೊರಗೆ ತಳ್ಳಬೇಕಾಗಿರುವುದು. ಇವರ ಅತ್ಯೀಚಿನ ವರ್ತನೆಗಳು ಅಂದರೆ, ಇಟಲಿ-ಆಂಗ್ಲೇಯ ಕಲಹದಿಂದ ಉಂಟಾಗಬಹುದಾದ ಯುದ್ಧವನ್ನು ಈಜಿಪ್ಟಿನಲ್ಲಿ ಇಳಿಸಲು ವ್ಯವಸ್ಥೆಗಳನ್ನು ಮಾಡಿರುತ್ತಾರೆ, ... ಧಾರಾಳವಾಗಿ ಸೈನ್ಯಗಳನ್ನು ಕೂಡಿಟ್ಟಿರುವರು. ಈಜಿಪ್ಟಿನ ನಗರಗಳಲ್ಲಿ ಗುಡಿಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಮತ್ತು ಬಂದರುಗಳಲ್ಲಿ ತಮ್ಮ ಇಚ್ಛಾನುಸಾರ ಸಂಗ್ರಾಮ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಅವರ ಈ ವರ್ತನೆಗೆ ನಾಹಿಂ ಸರಕಾರವೇ ಕಾರಣ. ಈ ಸಂದಿಗ್ಧ ಸಮಯವನ್ನು ಸ್ವಾತಂತ್ರ್ಯ ಸಂಪಾದನೆಗಾಗಿ ಉಪಯೋಗ ಮಾಡುವ ಬದಲಾಗಿ ಈ ನಾಹಿಂ ಪಂಗಡವು ಬ್ರಿಟಿಷ ಸಾಮ್ರಾಜ್ಯಶಾಹಿಯವರ ಇಚ್ಛೆಗೆ ಸಾಧನವಾಗಿ ಈಜಿಪ್ಟನ್ನು ಪರಾಧೀನ ದೇಶವನ್ನಾಗಿ ಮಾಡಲು ಸಹಕರಿಸುತ್ತದೆ. ಮೊನ್ನೆ ಈಜಿಪ್ಟಿನ ಮುಖ್ಯ ಪಟ್ಟಣವಾದ ಕೈರೋದಲ್ಲಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ದಿನಾಚರಣೆ ಮಾಡುವಾಗ ಬಹು ಸ್ಪರ್ಧೆಯುಂಟಾಗಿ ಅನೇಕ ಜನರಿಗೆ ಗಾಯ ಉಂಟಾಗಿರುತ್ತದೆ. ಈ ಕೃತ್ಯದ ... ಜನರು ... ಪಡೆಯಬೇಕಾದರೆ ... ಇನ್ನು ... ಕೆಲವು ... ಮತ್ತು ... ಸುಧಾರಣೆಗಳ ಕುರಿತು ಇಂಗ್ಲಾಂಡಿನಲ್ಲಿ ಮಾಡಿದ ಭಾಷಣವನ್ನು ... ದೇಶದ ವಿವಿಧ ಪಂಗಡಗಳ ಸ್ವಾತಂತ್ರ್ಯ ಸಾಧನೆಯ ಕಾರ್ಯವನ್ನು ಒಕ್ಕಟ್ಟಿನಿಂದ ಮಾಡಬೇಕಾಗಿಯೂ ... ಸಂಗಡದ ಮಹಾಸಭೆಯಲ್ಲಿ ... ಆಹ್ವಾನದ ಪ್ರಕಾರ ಇವರು ಎಲ್ಲಾ ಸಂಸ್ಥೆಗಳಲ್ಲಿ ಕೈಸೇರಲು ಸಿದ್ಧರಿದ್ದಾರೆ. ನಾಹಿಂ ಪಂಗಡವು ಸೋತ್ತನು ಗಳಲ್ಲಿ ಸಹಕರಿಸಲು ... ಲ್ಲಿ ತರಬೇಕಾಗಿದೆ.

ವಿಕಸಿತ ರೋಜಾ ಹೂವಿನಂತೆ
ಆಕೆಯ ನಿರ್ಮಲ ಮುಖವರ್ಣವು ಬೆಳಗುತ್ತಿತ್ತು

ಪ್ರಖ್ಯಾತ ... ನೂರ್‌ಜಹಾನಳ ... ಸೌಂದರ್ಯದಲ್ಲಿ ಮೂರಗಿ ಹೋಲಿದವಳ ... ನಾದ ಪರಿಮಳ ದ್ರವ್ಯಗಳನ್ನು ಮಾಡುವುದಕ್ಕೆ ... ನೂರ್‌ಜಹಾನ್ ಬೇಗಮಳ ಸೃಷ್ಟಿಯು ಹಿಂದೆ ಶ್ರೀಮಂತ ಭೋಗಸಾಮಗ್ರಿಯಾಗಿತ್ತು. ... ಅಫಘನ್ ಪರಿಮಳ ದ್ರವ್ಯಗಳಿಗೆ ಒಂದಿದೆ ... ಸುವಾಸನೆ ...

ಮೊಗಲ ರಾಜಾಂತಃಪುರದ ... ನೂರ್‌ಜಹಾನಳು ಮುಖಸೌಂದರ್ಯ ಪಾಲನೆಯಲ್ಲಿ ... ಈಗ ನಿಮ್ಮ ಸೌಂದರ್ಯದಲ್ಲಿ ನಿಮಗೆ ಆಸಕ್ತಿಯಿಲ್ಲವೇ? ಹಾಗಾದರೆ ಕಡದೆ ಅಫಘನ್ ಸ್ನೋ ಉಪಯೋಗಿಸಿ. ಚರ್ಮಕ್ಕೆ ಒಳ್ಳೆಯ ವಸ್ತು. ಚರ್ಮವನ್ನು ... ವೃದ್ಧಿಪಡಿಸುತ್ತದೆ ... ತೊಳೆದುಹಾಕುತ್ತದೆ ... ಎಲ್ಲಾ ಮಳಿಗೆಗಳಲ್ಲೂ ಸಿಗುತ್ತದೆ.

ಪಟೇಲ್‌ವಾಲಾ ಇವರ

ಕೆಮಿಸ್ಟ್ಸ್ ಮಳಿಗೆಗಳಲ್ಲಿ ಸಿಗುತ್ತದೆ.

AFGHAN Snow

ಆಸಿಯಾ ಖಂಡದಲ್ಲೆಲ್ಲಾ ಮಾರಲ್ಪಡುತ್ತದೆ.

ಇ. ಎಸ್. ಪಟೇಲ್‌ವಾಲಾ, ೧೪೩-೧೪೪, ಅಬ್ದುಲ್ ರಹಿಮಾನ್ ಸ್ಟ್ರೀಟ್, ಬಾಂಬೇ ೩.

ಅನುಕ್ರಮಣಿಕೆ.

ಕವಿತೆಗಳು ೨

ಮಹಾ ಪ್ರಭುತ್ವದ ಜನಾಂಗಗಳಿಗೆ ಇಟಲಿಯ ಎಚ್ಚರಿಕೆ. ೩

ವಾರ್ತಾತರಂಗ ೫

ವಿಚಿತ್ರ ಪ್ರಪಂಚ ೧೪

ಲಾಲಾಹಂಸಿಪತ್ಸನ್ನಿಗೆ ಸಹಾಯಾರ್ಥ. ೮

ಪತ್ರಿಕಾಪ್ರಪಂಚ ೯

ಅಗ್ರಲೇಖ

ಹೊಸ ಪಾರ್ಲಿಮೆಂಟು ೧೦

ಸ್ಫುಟವಿಚಾರಗಳು ೧೧

ವರ್ತಮಾನ ಸಂಗ್ರಹ

ಮಂಗಳೂರು, ತಾಲೂಕುಗಳಿಂದ ೧೧

ಯುದ್ಧ ವಾರ್ತೆಗಳು ೬

ಸಂಪಾದಕರ ಟಿಪ್ಪಣಿಪೆಟ್ಟಿಗೆ ೧೬

ವಿವಿಧ ಸಮಾಚಾರಗಳು ೧೭

ಶಾಂತಿಸ್ಥಾಪನೆಯಾಗುವುದೇ? ೧೮

ಸ್ವದೇಶಾಭಿಮಾನಿ

ತಾ ೨೨ನೇ ಶುಕ್ರವಾರ ನವಂಬರ '೩೫

ಹೊಸ ಪಾರ್ಲಿಮೆಂಟು

ಒಬ್ಬ ಅತ್ತೆ ಮುಗಿದು, ಮತ್ತೊಬ್ಬರು ಬಂದಂತೆ, ಯಾವ ಪಾರ್ಲಿಮೆಂಟು ಚುನಾವಣೆ ಹೊಂದಿದರೂ, ಹಿಂದೀಯರ ಭಾಗಕ್ಕೆ ಅದೆಲ್ಲ ಒಂದೇ. ಆದರೂ, ಹೊಸ ಪಾರ್ಲಿಮೆಂಟೂ ಹಳೆಯದಷ್ಟೆ ಕನ್ಸರ್ವೇಟಿವರ ಮಹಾಮತದಿಂದಲೇ ಇನ್ನೈದು ವರ್ಷಗಳ ತನಕ ನಿರಾತಂಕವಾಗಿ ಅಧಿಕಾರ ನಡೆಸುವಂತೆ, ಇಂಗ್ಲೆಂಡಿನಲ್ಲಿ ಚುನಾವಣೆಗಳು ನಡೆದವು. ಇಪ್ಪತ್ತೊಂದು ಮಿಲ್ಯ ವೋಟರರಲ್ಲಿ ಹತ್ತೂವರೆ ಮಿಲ್ಯ ವೋಟರರು ೩೮೮ ಮಂದಿ ಕನ್ಸರ್ವೇಟಿವರನ್ನು ಆರಿಸಿದರು, ಆದರೆ ೮ ಮಿಲ್ಯ ವೋಟರರು ೧೫೪ ಮಂದಿ ಲೇಬರ್ ಪಕ್ಷದವರನ್ನು ಆರಿಸಿದರು. ಮೆಂಬರರಿಗೆ ಸರಾಸರಿಯಾಗಿ ಸಿಕ್ಕಬಹುದಾಗಿರುವ ವೋಟುಗಳನ್ನು ಲೆಕ್ಕಹಾಕಿ ನೋಡಿದರೆ, ಇಷ್ಟು ಕಡಿಮೆಯಾಗಿ ಲೇಬರ್ ಪಕ್ಷದವರು ಏಕೆ ಚುನಾವಣೆ ಹೊಂದಿದವರೆಂದು ಆಶ್ಚರ್ಯವಾಗಬಹುದು. ನಮ್ಮಲ್ಲಿಯೂ ಇದೇ ರೀತಿಯ ಸಿಂಗಲ್ ಮೆಂಬರ್ ಚುನಾವಣೆಗೆ ಈಗ ಸಿದ್ಧತೆ ನಡೆಯುತ್ತಿದೆ. ಚುನಾವಣೆ ನಡೆಯುತ್ತಲೇ ಹೀಗೆಯೇ ಗೆದ್ದ ಪಕ್ಷಕ್ಕೆ ಮೆಂಬರು ಹೆಚ್ಚಾಗಿಯೂ ಸೋತ ಪಕ್ಷಕ್ಕೆ ವೋಟುಗಳು ಹೆಚ್ಚಾಗಿಯೂ (ಸರಾಸರಿಯಾಗಿ) ತೋರುವ ಪ್ರಮಾದವು ಉಂಟಾಗದಿರದು. ಲಿಬರಲ್ ಪಕ್ಷದ ಉಮೇದ್ವಾರರು ಇಲ್ಲದಿದ್ದಲ್ಲಿ, ಲೇಬರ್ ಪಕ್ಷವು ಜಯಶೀಲವಾಗುತ್ತಿತ್ತೋ ಎಂದು ಸಂದೇಹವಿದೆ. ಲಿಬರಲ್ಲರು ಹಿಂದೆ ಪಡೆದ ಸ್ಥಾನಗಳ ಅರೆವಾಸಿಯನ್ನು ತಮ್ಮ ನಾಯಕರೊಡನೆ ಸೋತಿರುವರು; ಆದರೂ, ವೃಥಾಭಿಮಾನದಿಂದ ಉಮೇದ್ವಾರರಾಗಿ ನಿಂತು ಲೇಬರ್ ಪಕ್ಷಕ್ಕೆ ಆತಂಕವನ್ನು ಮಾತ್ರ ಉಂಟುಮಾಡಿದರು. ಕೊಂಗ್ರೆಸ್ ಜಸ್ಟಿಸ್ ಪಕ್ಷಗಳೆರಡೇ ಇದ್ದರೆ ಒಂದು ರೀತಿ, ನಡುವೆ ಇಂಡಿಪೆಂಡೆಂಟೂ ಸೇರಿದರೆ, ಇಂತಹದೊಂದು ಸಂಭವಕ್ಕೆ ಅನುಕೂಲವಾಗುವುದು.

ಬ್ರಿಟಿಷ ಚುನಾವಣೆ ನಡೆದು ಫಲಿತಾಂಶ ಹೊರಡಲು ಎರಡೇ ಎರಡು ದಿನಗಳಲ್ಲಿ ಸಾಧ್ಯವಾಗಿರುವಾಗ, ನಮ್ಮಲ್ಲೇಕೆ ಅಷ್ಟು ವಿಳಂಬವಾಗಬೇಕೋ ತಿಳಿಯದು. ದೇಶ ದೊಡ್ಡದಿರಬಹುದು. ಆದರೂ ಅವುಗಳ ತನಿಖೆ, ಲೆಕ್ಕ, ಇತ್ಯಾದಿ ಮೊದಲಾದುದಕ್ಕೆ ವಿಶೇಷ ಕಾಲ ಹರಣವಾಗುವುದು. ಗಂಡಸರಿಗಿಂತ ಹೆಂಗಸರ ಹಿಂದೂವರೆ ಮಿಲ್ಯ ಹೆಚ್ಚು ವೋಟರರಿರುವ ಇಂಗ್ಲೆಂಡಿನಲ್ಲಿ, ಈ ಸ್ತ್ರೀಯರ ವೋಟುಗಳು ಹೆಚ್ಚಾಗಿ ಕನ್ಸರ್ವೇಟಿವರಿಗೇ ಸಿಗುವುವೆಂಬ ನಂಬಿಕೆ ಯಾವಾಗಲೂ ಇದೆ.

ಇಟಲಿಯ ವಿರುದ್ಧವಾಗಿ, ಲೀಗ್‌ನಲ್ಲಿ ಬ್ರಿಟಿಷಮಂತ್ರಿಗಳು ಧೈರ್ಯತೋರಿಸಿ, ಪ್ರಪಂಚದ ಎದುರಲ್ಲಿ ರಾಜನೀತಿಜ್ಞರೆಂದು ಮೆರೆದಾಡಿದ ನೇಶನಲ್ ಗವರ್ನಮೆಂಟು ಪಂಗಡವು, ಈ ಸಂದರ್ಭ ನೋಡಿ, ಇದೇ ಶುಭಮುಹೂರ್ತವೆಂದು, ಜನರ ಭಾವನೆಗಳನ್ನು ಎಚ್ಚರಿಸಿ, ಪುನಃ ತಮಗೇ ಅಧಿಕಾರವನ್ನು ಮುಂದಣ ಪರ್ಯಾಯಕ್ಕೂ ಸುರಕ್ಷಿತಮಾಡಿಕೊಂಡರು. ದೇಶದ ಪುನರ್ಘಟನೆ ಮತ್ತು ಶಾಂತಿಸಾಧನೆ ಎಂಬ ಎರಡು ತತ್ವಗಳನ್ನು ವೋಟರರ ಮುಂದಿಟ್ಟು ಬೋಲ್ಡವಿನ್ನರ ಪಕ್ಷವು ಗೆದ್ದಿತು.

ಇನ್ನು ಅಧಿಕಾರ ಕಳೆದ ಪಂಗಡವು ೪೩೦ ಮಂದಿಯಿಂದ ಕೂಡಿದ್ದಾಗಿದೆಯಾದರೂ, ಅದರಲ್ಲಿ ೩೮೮ ಮೆಂಬರರು ಕನ್ಸರವೇಟಿವರು, ಸರ್ವಪಕ್ಷೀಯ ಸರಕಾರವೆಂದರೆ, ಕನ್ಸರ್ವೇಟಿವರದೇ ಆಗಿ ನಿಂತಿದೆ. 'ನೇಶನಲ್' ಪದವನ್ನು ಮೊದಲು ಉಪಯೋಗಿಸಿ, ಲೇಬರ್ ಪಕ್ಷ ತ್ಯಜಿಸಿ,–ಏಣಿಏರಿದವರು ಏಣಿಯನ್ನೆ ಒದ್ದಂತೆ– ಕನ್ಸರ್ವೇಟಿವರೊಡನೆ ಸೇರಿ ಮುಖ್ಯ ಮಂತ್ರಿಯಾಗಿ ಮೆರೆದ ಮೆಕ್‌ಡೊನಾಲ್ಡ ಸಾಹೇಬರು, ಈ ಬಾರಿ ತಮ್ಮ ನಗರದ ವೋಟರರಿಂದಲೇ ಅಪಜಯಹೊಂದಿದರು, ಅವರ ಪುತ್ರರೊಬ್ಬರು ವಾರ್ಷಿಕ ೫೦೦೦ ಪವನು ವೇತನದ ಮಂತ್ರಿಗಳಾಗಿದ್ದರು, ಅವರೂ ಈಗ ಚುನಾವಣೆಯಲ್ಲಿ ಗೆದ್ದುಬರಲಿಲ್ಲ. ಸೈಮನ್ ಕಮಿಶನಿನ ಸೈಮನ್ ಸಾಹೇಬರ ಜಯವು ಕೂದಲ ಮೇಲೆ [illegible] ಎಂಬಂತೆ [illegible] ಇವರನ್ನು ವಿಧಿಯು ಹಿಂಸಿಸಿರುವುದು. ಹೀಗೆ, ಆದರೆ ಹಿಂದೀಯರಿಗೆ ರಾಜಕೀಯ ತಿದ್ದುಪಾಟುಗಳ ತಿಂತಹವೂ ಸಿಗಬಾರದೆಂದು ಭಗೀರಥ ಪ್ರಯತ್ನಮಾಡಿದ ಮೆಂಬರರೆಲ್ಲರು ತಮ್ಮ ಪುತ್ರ ಮಿತ್ರ ಕಳತ್ರ ಬಂಧು ಬಾಂಧವರೊಡನೆ ಎಂಬಂತೆ ಬಹು ಸಂಖ್ಯಾತರಾಗಿ ಚುನಾವಣೆ ಹೊಂದಿರುವರು. ಇದೂ ನಮ್ಮ ಭಾಗಕ್ಕೆ ವಿಧಿಯು ಹೂಡಿರುವ ಹೊಸ [illegible] ದ ನಡೆವಾಗ [illegible] ಎಂದು [illegible] ಕರೆವುದು. ಹೇಗೆ ಅನ್ನು [illegible] ಕನ್ಸರ್ವೇಟಿವರೂ, ಹಿಂದಣ ಹೆಚ್ಚಿನ ಮಂತ್ರಿಗಳೂ [illegible] ರ ಈ ಅಧಿಕಾರ [illegible]ಗಳು, ಕನ್ಸರ್ವೇಟಿವ್ ಸರಕಾರವೆನ್ನುವುದರ ಬದಲಾಗಿ ಅಲ್ಲಿಂದೊಬ್ಬರು ಇಲ್ಲಿಂದೊಬ್ಬರು ಎಂಬಂತೆ ನಾಲ್ಕೇ ಬೇರೆ ಮಂದಿ ಕೂಡಿಕೊಂಡು ಇದು ಈಗ ನೇಶನಲ್ ಸರಕಾರವೆಂದು ಕರೆದುಕೊಳ್ಳುವುದೂ ಅಷ್ಟೆ ನ್ಯಾಯವಲ್ಲ.

ಲೇಬರ್ ಪಕ್ಷವೇ ಆದರೂ ಈಗ ಸೋತಿರುವುದ ತಿರಲಿ ಇನ್ನು ಇವೇ ಐದು ವರ್ಷಗಳಲ್ಲಿ ಅದು ಪುನಃ ತಲೆಯೆತ್ತಬಹುದು. ಕಳೆದ ಪಾರ್ಲಿಮೆಂಟಿನಲ್ಲಿ ಲೇಬರ್ ಪಕ್ಷವಾಗಿ ಸರಿಯಾಗಿ ಕಾದಾಡಲಾಗಲಿಲ್ಲ ಎಂಬುದು ಸರ್ವವಿದಿತವಾಗಿದೆ, ನಾಯಕರು ಧೀರರೂ ಜಾಣರೂ ಆಗಿರಲಿಲ್ಲ, ಪಕ್ಷದೊಳಗೂ ಕಚ್ಚಾಟವಿದ್ದಿತ್ತು. ಈಗ ಹಲವು ಲೇಬರ್ ಮುಖಂಡರು ಚುನಾವಣೆಹೊಂದಿರುವ ಪ್ರಯುಕ್ತ, ಇವರ ಮುಖಂಡತನದಿಂದಲಾದರೂ ಮುಂದೆ ಉಪಯುಕ್ತ ಸಲಹೆಗಳಿಂದ ಸಹಕಾರವೊಂದು ಇವರಲ್ಲಿ ಉಂಟಾದರೆ, ಮುಂದಣ ಚುನಾವಣೆಯಲ್ಲಿ ಲೇಬರ್ ಪಕ್ಷವು ಗೆದ್ದಬಹುದು. ಏಕೆಂದರೆ ೧೯೩೧ ಮಿಲ್ಯದಲ್ಲಿ, ಇವರಿಗೆ ಗೆದ್ದವರಿಗಿಂತ ಒರೇ ೧॥ ಮಿಲ್ಯದಷ್ಟು ವೋಟುಗಳು ಮಾತ್ರ ಕಡಿಮೆ. ಸಮುದಾಯಕ್ಕೆ ತಕ್ಕಂತೆ ಚುನಾವಣೆ ಎಂದಾಗಿದ್ದರೆ, ಲೇಬರ್ ಪಕ್ಷವು ಇನ್ನೂ ಪ್ರಬಲವಾಗುತ್ತಿದ್ದಿತು. ಈ ತಿದ್ದುಪಾಟು ಮಾತ್ರ ಪಾರ್ಲಿಮೆಂಟು ಚುನಾವಣೆಯಲ್ಲಿ ಇನ್ನೂ ಜಾರಿಗೆ ಬಂದುದಿಲ್ಲ.

ಕೊಮ್ಯೂನಿಸ್ಟ್ ಪಂಗಡದಿಂದ ಒಬ್ಬರೇ ಚುನಾವಣೆ ಹೊಂದಿರುವುದು ಈ ವರ್ಷ ಕೆಯರ್ ಹಾರ್ಡಿಯವರು ಒಬ್ಬರೇ ಒಂದು ದಿನ ಲೇಬರ್‌ಪಕ್ಷದಿಂದ ಚುನಾವಣೆ ಹೊಂದಿದ್ದುದನ್ನೂ, ಲೇಬರ್‌ಪಕ್ಷದಿಂದ ೧೫೪ ಮಂದಿ ಚುನಾವಣೆಹೊಂದಿರುವುದನ್ನೂ ನೋಡಿದರೆ, ಕೊಮ್ಯೂನಿಸ್ಟ್ ಪಂಗಡವು ಈ ಸಲ ಒಬ್ಬರನ್ನು ಮೆಂಬರನಾಗಿ ಚುನಾಯಿಸಿದುದರ ಮಹತ್ವವು ಮುಂದೆ ತಿಳಿಯುವ ಹಾಗಾದೀತು.

ಎಲ್ಲವೂ ಅಲ್ಲಿಯ ಕತೆಯಾಯಿತು. ಹಿಂದೀಯರಿಗೇನು? ಹೊಸ ಸುಧಾರಣೆಗಳನ್ನು ಕೊಡಲಾಗಿದೆ, ಆ ಆಕ್ಟಿನಂತೆ ಇಲ್ಲಿ ಬರುವ ವರ್ಷದಿಂದ ಚುನಾವಣೆಗಳು ನಡೆಯಬೇಕು, ರಾಜ್ಯಭಾರವೂ ಸಾಗಬೇಕು. ಹೊಸ ವೈಸ್ರಾಯ ಸಾಹೇಬರು ಇದಕ್ಕಾಗಿ ನೇಮಕಹೊಂದಿದ್ದಾರೆ. ಇವರ ಬೆಂಬಲಕ್ಕೆ ಈಗ ಇರುವುದಕ್ಕಿಂತಲೂ ಹೆಚ್ಚಿನ ಪ್ರೋತ್ಸಾಹ ಸಿಗುವಂತೆ, ಬಲಿಷ್ಠವಾದ ಮಹಾಮತವು ಪಾರ್ಲಿಮೆಂಟಿನಲ್ಲಿ ಕನ್ಸರ್ವೇಟಿವ ಪಕ್ಷದಿಂದ ಇವರಿಗೆ ದೊರೆವಂತೆ, ಈಗ ಚುನಾವಣೆಯಾಗಿದೆ. ಎಂದಬಳಿಕ, ಇನ್ನು ಆಕ್ಟಿನಲ್ಲಿ ಬದಲಾವಣೆಗಳೇನೂ ಇಲ್ಲದೆ ಅದರ ಉದ್ದೇಶವಾವುದೋ ಅದು ನಿರಾತಂಕವಾಗಿ ಧೈರ್ಯದಿಂದ ಮುಂದೆ ಸಾಧಿತವಾದೀತೆನ್ನಬೇಕು.

ಸ್ಫುಟವಿಚಾರಗಳು

ಚುನಾವಣೆಯ ವಿನೋದಗಳು

ನವಂಬರ ೧೪ರಲ್ಲಿ ಬ್ರಿಟಿಷ ಪಾರ್ಲಿಮೆಂಟಿನ ಸದಸ್ಯರ ಚುನಾವಣೆಗೆ ಪ್ರಾರಂಭವಾಯಿತು. ಬೆಳಿಗ್ಗೆ ೭ ಘಂಟೆಯಿಂದ ರಾತ್ರಿ ೯ರ ವರೆಗೆ ಚುನಾವಣೆ. ೩೧ ಮಿಲ್ಲಿಯ ವೋಟರರು, ಜನಸಂಖ್ಯೆ ೪೬ ಮಿಲ್ಲಿಯ. ಕಳೆದ ಚುನಾವಣೆಯಿಂದ ಹೊಸ ವೋಟರರಾಗಿ ಒದಗಿದವರ ಸಂಖ್ಯೆ ೧ ಮಿಲ್ಲಿಯ. ಸ್ತ್ರೀ ವೋಟರರ ಗಂಡಸರಿಗಿಂತ ೧॥ ಮಿಲ್ಲಿಯ ಹೆಚ್ಚಾಗಿದ್ದರು. ಸರಕಾರೀ ಪಕ್ಷವು ೫೦೦೦೦ ವೋಟರುಗಳನ್ನು ಉಪಯೋಗಿಸಿತು. ಬಿಸ್ಟಲಿನಲ್ಲಿ ಇಬ್ಬರ ಉಮೇದವಾರರ, ಊರಿನ ಮೇಲೆ ವಿಮಾನದಲ್ಲಿ ಹಾರಾಡುತ್ತ ರಾಕ್ಷಸ ಧ್ವನಿ ಕೊಡುವ ಯಂತ್ರಗಳ ಮೂಲಕ ವೋಟರರಿಗೆ ಕರೆಗಿತ್ತರು. ವೋಟರರ ಸುಗ್ಗಾಟದಿಂದ ಲಂಡನಿನಲ್ಲಿ ನೂರಾರು ವೋಟು ಕೊಡುವಲ್ಲೇ ಮಡಿದರು. ೧೦೩ ವರ್ಷ ಪ್ರಾಯದ ಮೂವರು ೧೦೦ ವರ್ಷ ಮೀರಿದ ಇಬ್ಬರೂ ವೋಟು ಕೊಟ್ಟರು. ೧೦॥ ವಯಸ್ಸಿನ ಒಬ್ಬ ಎಳೆ ಹುಡುಗಿಯು ಹೆಸರ ತಪ್ಪಾಗಿ ಬಿದ್ದಿತ್ತು, ಅವಳು ವೋಟುಕೊಟ್ಟಳು. ೧೪ ವಯಸ್ಸಿನ ಒಬ್ಬ ಹುಡುಗನಿಗೂ ವೋಟು ಇತ್ತು, ಅವನನ್ನು ತಪ್ಪಾಗಿ ಬಂದವನೆಂದು ವಜಾ ಮಾಡಿದರು. ಸರಕಾರೀ ಪಕ್ಷವು ೧೫ ವಿಮಾನಗಳ ಮೂಲಕ ವೋಟರರನ್ನು ದೂರದ ಊರುಗಳಿಂದ ವೋಟು ಕೊಡಲು ತರುತ್ತಿದ್ದಿತು. ಮದ್ಯ ನಾರಾ[illegible]ರಿಗೆ ಈ ದಿನ ಅಂಗಡಿಗಳನ್ನು ರಾತ್ರಿ ೧೦ ಗಂಟೆಗೆ ಮುಚ್ಚುವ ಬದಲು, ಮಧ್ಯರಾತ್ರಿಯವರೆಗೆ ತೆರೆದಿಡಲು ಅಪ್ಪಣೆಯಾಯಿತ್ತು. ಒಟ್ಟು ಚುನಾವಣೆಗೆ ಬರುವ ಮೆಂಬರರ ಸಂಖ್ಯೆ ೬೧೫, ೪೦ ಮಂದಿ ಎದುರಾಳಿಗಳಿಲ್ಲದೆ ಚುನಾವಣೆ ಹೊಂದಿದರು.

ಇಜಿಪ್ತದಲ್ಲಿ ಗಲಭೆ

ಬ್ರಿಟಿಷ ಸರಕಾರದೊಡನೆ ಅನುಕೂಲವಾಗ ರಿಯಾಯಿತಿಗಳುಳ್ಳ ಕರಾರನ್ನು ಮಾಡಿಕೊಂಡು ಹೆಚ್ಚಿನ ಸ್ವಾತಂತ್ರ್ಯವನ್ನು ಈಗ ತಾನೆ ಪಡೆದುಕೊಳ್ಳುವ ಅನುಕೂಲತೆ ಇದೆಯಾದರೂ ಇಜಿಪ್ತದ ಈಗಣ ಮಂತ್ರಿಮಂಡಲವು ಅದಕ್ಕಾಗಿ ಪ್ರಯತ್ನಪಡುತ್ತಿಲ್ಲವೆಂದು ರಾಷ್ಟ್ರೀಯರು ಆಕ್ಷೇಪವೆತ್ತಲು, ಜನರಲ್ಲಿ ಒಂದು ಬಗೆಯ ಉದ್ವೇಗವುಂಟಾಗಿ, ಇಜಿಪ್ತದಲ್ಲಿ ದಂಗೆಗಳಾದುವು. ಅಬಿಸೀನಿಯದಲ್ಲಿ ನಡೆವ ಯುದ್ಧ ಕಾಲದಲ್ಲಿ ಸ್ವತಂತ್ರವೆನ್ನುವ ಇಜಿಪ್ತದಲ್ಲೇ ಬ್ರಿಟಿಷರಿಗೆ ತಮ್ಮ ಸೈನಿಕ ಶಿಬಿರಗಳನ್ನೂ ಯುದ್ಧ ವಿಚಾರಗಳನ್ನೂ ಮಾಡಬೇಕಾಗಿದೆ. ಇಜಿಪ್ತದ ಸಹಾಯವು ಈಗ ಅಗತ್ಯವಿದೆ. ಹೀಗಿರುವಾಗಲೆ, ಕೆಂಪಾಗಿರುವಾಗಲೆ ಕಬ್ಬಿಣ ಬಡೆಯಿರಿ ಎಂದು ರಾಷ್ಟ್ರೀಯರೆನ್ನುವರು. ಆದರೆ ಮಂತ್ರಿಗಳು ತೀರ ಸಪ್ಪೆಯಾಗಿರುವ ಕಾರಣ, ಬ್ರಿಟಿಷರಿಗೆ ಬಹಳ ಅನುಕೂಲತೆ ಕೊಟ್ಟು, ಅವರಿಂದಂತೆ ಇಜಿಪ್ತ ಸರಕಾರವು ಒಪ್ಪುವುದು ಏಕೆ ಎಂದು ದೂರುತ್ತ ವಿದ್ಯಾರ್ಥಿಗಳ ಮುಂದೊತ್ತಿ ಗಲಾಟೆಗೆ ಕಾರಣರಾದರು. ಹೊಸ ರಾಜಕೀಯ ಸುಧಾರಣೆಗಳು ಉಂಟಾದರೆ, ಈಗ ಸರಿಯಾಗಿ ನಡೆಯದಿರುವ ಪಾರ್ಲಿಮೆಂಟು ಕೆಲಸವು ಸರಿಯಾಗಿ ನಡೆವಂತೆ ಮಾಡಿದರೆ, ರಾಷ್ಟ್ರೀಯರು ಚುನಾವಣೆ ಹೊಂದಿ, ಇಜಿಪ್ತನ್ನು ಆಳುವರಾಗಿ ಅಂದಾಜು ಇದೆ. ಹಾಗೆ ಸದ್ಯ ಸರಕಾರವು ಮಾಡುತ್ತಿಲ್ಲ. ಈ ವಿಷಯವಾಗಿಯೆ ದಂಗೆ. ದಂಗೆಯನ್ನು ಅಡಗಿಸಿದರಾದರೂ, ನೂರಾರು ಜನರಿಗೆ ಗಾಯಗಳು, ಹಲವರು ಮಡಿದರು. ಮತ್ತೊಬ್ಬರ ಅಡಚಣೆಯೆ ತನಗೆ ಅನುಕೂಲತೆ ಎನ್ನುವುದು ಅಷ್ಟು ಉತ್ತಮವಾಗಿಲ್ಲ. ಆದರೆ ಬೇರೆ ಅನುಕೂಲತೆ ಇಲ್ಲದಿದ್ದರೇನ ಮಾಡೋಣ ಎಂದೇ ರಾಷ್ಟ್ರೀಯರ ಈ ಹಂಚಿಕೆ. ಇನ್ನಾದರೂ ಇಜಿಪ್ತಕ್ಕೆ ನ್ಯಾಯವಾದಷ್ಟು ಸ್ವಾತಂತ್ರ್ಯವು ದೊರೆವುದೇ ನೋಡಬೇಕು. ಬ್ರಿಟಿಷ ಮುತ್ಸದ್ದಿಗಳೇ ಇದನ್ನು ತಿಳಿದು [illegible] ದತ್ತ.

ಗುಡಿಕೈಗಾರಿಕೆಗಳ ಮಹತ್ವವೇ

ಹಿಂದೀದೇಶದ ಭೌಗೋಳಿಕ ಮಹತ್ವಕ್ಕೂ ಸ್ವಾಭಾವಿಕತೆಗೂ [illegible] ಕೋಟಿ ಗಟ್ಟಲೆ ಜನರಿಗೆ ಇದು [illegible] ಉದ್ಯೋಗವನ್ನು ಕೆಲವು ಹಣವನ್ನು ಒದಗಿಸುವುದು. ಚೀನದಂತಹ ವಿಪುಲ ಜನಸಂಖ್ಯೆಯಿರುವ ದೇಶಗಳಲ್ಲಿ [illegible] ಅವಕಾಶವಾಗಿದೆ. ಮನುಷ್ಯರ ಬದಲಾಗಿ ಯಂತ್ರಗಳನ್ನು ಬಳಸುತ್ತ [illegible] ನಿರುದ್ಯೋಗ [illegible] ಜನರ [illegible] ದೈನಂದಿನ [illegible] ಯವು ಕಡಿಮೆಯಾಗಲು [illegible] ವಿಜ್ಞಾನವು ಬೇಕ [illegible] ಜೀವನವು ಇನ್ನಷ್ಟು ಸುಖಮಯ [illegible] ತಂತೆ [illegible] ಮಾಡುವುದಕ್ಕಾಗಿ ಮಾತ್ರವೇ ಹೊರತು ಅದನ್ನು ಕೆಲವರ [illegible] ಇಟ್ಟು [illegible] ಇತರರ ಹಿಂಸೆ ನಡೆಸುವಂತೆ [illegible] ವುದಕ್ಕಲ್ಲ. ವಿಜ್ಞಾನದ ಹುಚ್ಚು [illegible] ರೀತಿಯೆಂದರೆ, ವಿನಾಶಕತೆಯೇ ಅದರ ಹೋಗುವ ಸಂಭವವಿದೆ.

ದೇಶೀಯ ದುಸ್ತು

ನಾವು ಎಲ್ಲಿಯಾದರೆಂದು ಕಡೆ ಸೇರಿದೆವೆಂದರೆ, ನಮ್ಮ ಉಡುವ ತೊಡುವ ಪುಗಳ ರೀತಿ ಬಗೆ, ಅಂದ ಉಡುಪಿನ ಎಲ್ಲವೂ ಒಟ್ಟೊಬ್ಬರಿಗೆ ಒಬ್ಬೊಬ್ಬರದಾಗಿ ಸರಿಹೊಂದುವುದರಲ್ಲೂ ನಮ್ಮ ವೈಶಿಷ್ಟ್ಯವಿಲ್ಲವೆಂಬಂತೆ ತೋರುತ್ತಿದೆ. ಯಾವ ರಾಜ್ಯಕ್ಕೆ ಹೋಗಿದ್ದರೂ ಬ್ರಿಟಿಷರು ಎಲ್ಲಿಯೂ ತಮ್ಮ ದೇಶೀಯ ಕ್ರಮದಲ್ಲಿಯೆ ಉಡುವರು. ಪ್ರಾಮುಖ್ಯ ಜನಾಂಗಗಳು ತಮ್ಮ ದೇಶೀಯ ದುಸ್ತನ್ನು ಕುರಿತು ಒಂದು ಶಿಸ್ತನ್ನೂ ಮಾಡಿಕೊಂಡಿರುವರು. ಸ್ವದೇಶೀ ಚಳವಳದ ಈಚೆಗೆ, ನಾವು ದೋತರ, ದುಪ್ಪಟ, ಬಿಳೀ ಟೊಪ್ಪಿ, ಒಳಂಗಿಗಳಲ್ಲೇ ಸಂಪನ್ನರಾಗಿದ್ದೇವೆ. ಅದರಲ್ಲೂ ನಾನಾ ರಗಳೆಗಳುಂಟು. ಕಾಲಿಗೆ ಹಾಕಬೇಕೆ ಬೇಡವೆ? ಟೊಪ್ಪಿ ಸಾಕೇ, ರುಮಾಲೀ? ಅಥವಾ ಬಿಳಿ ತಲೆಯೇ? ಸುಸಂಸ್ಕೃತನಾಗಿರುವ ಹಿಂದೀ ಗೃಹಸ್ಥನು ಎಲ್ಲೆಲ್ಲಿಯೂ ಹೇಗೆ ಕಾಣುತ್ತಿರಬೇಕೋ, ಅದಕ್ಕಾಗಿ ಅವರು ಏನನ್ನು ಹೇಗೆ ಉಟ್ಟುಕೊಳ್ಳಬೇಕು? ಈ ಪ್ರಶ್ನೆಗೆ ಇನ್ನೂ ಉತ್ತರಸಿಕ್ಕದುದಿಲ್ಲ.

ತಾಲೂಕುಗಳಿಂದ.

ಉಡುಪಿ:— ತಾ. ೧೧ನೇ ಅಭಿಜನ್ಮೋತ್ಸವಾರ್ಥ ಸ್ಥಳೀಯ ಬೋರ್ಡು ಹೈಸ್ಕೂಲಿನ ಹೊಸ ಕಟ್ಟಡ ಶಂಕುಸ್ಥಾಪನಾ ಕಾರ್ಯವು ಜಿಲ್ಲಾ ವಿದ್ಯಾಧಿಕಾರಿಯಿಂದ ಜರಗಿಸಲಾಯಿತು.

ಅಂದೇ ಸಂಜೆ ಜಿಲ್ಲಾ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕ್ರಿಶ್ಚನ್ ಹೈಸ್ಕೂಲಿನ ಪರ್ಯಂತಿಸಮಾರಂಭಗಳು ಜರಗಿದುವು. ಸುಮಾರು ಹನ್ನೆರಡು ವರ್ಷಗಳ ಅವರ ಶಾಲಾವ್ಯಾಪ್ತಾಂತವು ಹೆಡ್ ಮಾಸ್ತರರಿಂದ ಓದಲ್ಪಟ್ಟ ಮೇಲೆ ಹಳೇ ವಿದ್ಯಾರ್ಥಿಗಳಿಂದ ಹಾಗೂ ಜಿಲ್ಲೆಯಲ್ಲಿ ಉಜ್ವಲ ಕಾಂಗ್ರೆಸ್ ಮುಂದಾಳುಗಳೂ ಮಂಗಳೂರು ಮ್ಯುನಿಸಿಪಲ್ ಕೌನ್ಸಿಲರೂ ಆಗಿರುವ ಶ್ರೀ ರಂಗನಾಥ್ ಕಲಬೇರಿಕರ್ ಬಿ. ಎ. ಎಲ್. ಎಲ್. ಬಿ. ಇವರು ಶಾಲಾ ಟ್ರೋಫಿಯನ್ನು ನಿವೇದಿಸಿದರು. [illegible] ಬಳಿ ಪ್ರೋತ್ಸಾಹದಿಂದ ಶೋಭಿಸುತ್ತಿದ್ದ ಶಾಲಾ [illegible] ಡ್ರಿಲ್ ಪ್ರದರ್ಶನಗಳು ಆಕರ್ಷಣೀಯವಾಗಿದ್ದುವು. ಇನಾಮುಗಳ ಹಂಚೋಣವಾದ ಮೇಲೆ "[illegible]" ನಾಮಕ ಹಳೇ ವಿದ್ಯಾರ್ಥಿ ಶ್ರೀ ಕೆ. [illegible] ಕಾಮತರಿಂದ ವಿರಚಿತವಾಗಿ ಅವರಿಂದಲೇ ಕಲಿಸಲ್ಪಟ್ಟ ಕನ್ನಡ ಸಂಗೀತ ನಾಟಕಾಭಿನಯವೂ ದರ್ಶನೀಯವಾಗಿತ್ತು. ಶ್ರೀ ಸದಾಶಿವರಾವ್ [illegible] ನಾಟಕ ಪಾತ್ರಗಳನ್ನು [illegible]

[illegible]

ಮಂಗಳೂರಿಗೆ ಶ್ರೀ ಎಸ್. ಸತ್ಯಮೂರ್ತಿ, ಎಂ.ಎಲ್.ಎ. ಇವರ ಆಗಮನ.

ತಮಿಳು ನಾಡಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮದ್ರಾಸಿನ ಸುಪ್ರಸಿದ್ಧ ಶ್ರೀ ಎಸ್. ಸತ್ಯಮೂರ್ತಿ, ಎಂ. ಎಲ್. ಎ. ಇವರು ತಾ. ೩೦ನೇ ದಿವಸ ಸಂಜೆ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಒಂದು ಉತ್ತೇಜನಪೂರ್ವಕ ಭಾಷಣವನ್ನು ಕೊಟ್ಟರು. ತಾ. [illegible]ರಲ್ಲಿ ನಡೆಯುವ ದ. ಕ. ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರು ಹುಮ್ಮಸ್ಸಿನಿಂದ ನಿಲ್ಲಬೇಕೆಂದೂ, ಅವರಿಗೇನೇ ಎಲ್ಲರೂ ಬಹುಮತದಿಂದ ತಮ್ಮ ಓಟುಗಳನ್ನು ಕೊಡಬೇಕೆಂದೂ ಇವರು ಕೊಟ್ಟ ಭಾಷಣದ ಸಾರಾಂಶ. ಶ್ರೀಯುತರನ್ನು ಸ್ವಾಗತೀಕರಿಸಲು

ಶ್ರೀ ಎಸ್ ಸತ್ಯಮೂರ್ತಿ ಎಂ ಎಲ್ ಎ

[illegible]

ಮಂಗಳೂರು.

ಇದೇ ತಾ. ೧೬ರಲ್ಲಿ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಸೇರಿದ ಸಭೆಯಲ್ಲಿ ಡಾ| ಕೊಡಿಯಾಲ ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಲಾಭಿವರ್ಧನೆಗಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂತಲೂ, ಅದಕ್ಕೆ "ಯಕ್ಷಗಾನ ಕಲಾಪ್ರವರ್ಧಕ ಸಂಘ, ಮಂಗಳೂರು" ಎಂಬ ಹೆಸರಿಡಬೇಕೆಂತಲೂ ನಿಶ್ಚಯಿಸಿ, ಸದ್ರಿ ಸಂಘಕ್ಕೆ ಶ್ರೀ ಉಳ್ಳಾಲ ಮಂಗೇಶರಾಯರನ್ನು ಅಧ್ಯಕ್ಷರನ್ನಾಗಿಯೂ [illegible]ರನ್ನು ಕಾರ್ಯದರ್ಶಿಯನ್ನಾಗಿಯೂ, ಕೋಶಾಧಿಕಾರಿಯನ್ನಾಗಿಯೂ ಆರಿಸಿ, ೭ ಮಂದಿಯ ಒಂದು ಕಾರ್ಯಕಾರಿ ಮಂಡಳವನ್ನು ಸ್ಥಾಪಿಸಲಾಯಿತು. ಅದೇ ದಿನ ರಾತ್ರಿ ೯ ಗಂಟೆಗೆ "ಸೇತು ಬಂಧನ"ವೆಂಬ ಯಕ್ಷಗಾನವು ಬಹಳ ವಿಜೃಂಭಣೆಯಿಂದ ಜರಗಿತು. ಜನರು ೨೦೦೦ಕ್ಕೆ ಸೇರಿದ್ದರು. ಆ ಸಂದರ್ಭದಲ್ಲಿ ಸಕಲ ಸೌಕರ್ಯಗಳನ್ನು ಯೋಗ್ಯ ರೀತಿಯಿಂದ ಒದಗಿಸಿಕೊಟ್ಟ ಆ ಶಾಲಾ ಹೆಡ್ ಮಾಸ್ತರರಿಗೂ ಸ್ಟಾಫ್ ಜನರಿಗೂ ಈ ಸಂಘವು ಋಣಿಯಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಜಿಲ್ಲಾ ಬೋರ್ಡು ಚುನಾವಣೆ.

೧ ದ. ಕ. ಜಿಲ್ಲಾ ಬೋರ್ಡಿನ ೪೪ ಸೀಟುಗಳ ಪೈಕಿ ಸರ್ಕಲ್, ಸೀಟಿನ ಚುನಾವಣೆಯು [illegible]

[illegible]

ಐರೋಪ್ಯದ ದುರ್ವರ್ತನೆಯ ಕುರಿತು

ಮಿ|| ಸಿ. ಎಫ್. ಅಂಡ್ರೂಸರ

ಅಭಿಪ್ರಾಯಗಳು.

ಬ್ರಿಟನ್ ದೇಶವು ಹಿಂದೂ ದೇಶದಲ್ಲಿ ತನ್ನ ಅಧಿಕಾರ ಶಕ್ತಿಯನ್ನು ಇನ್ನೂ ಮುಗಿಸಲಾಗಿ ನಡೆಸಿದರೆ, ಬಹು ಬೇಗನೆ ಹಿಂದೂ ದೇಶಕ್ಕೂ ಬ್ರಿಟನಿಗೂ ಹಾನಿಯೊದಗು ವುದಲ್ಲದೆ ಇಡೀ ಜಗತ್ತೇ ಕೋಲಾಹಲದಲ್ಲಿ ಮುಳುಗು ವುದಾಗಿ ಮಿ|| ಸಿ. ಎಫ್. ಎಂಡ್ರೂಸರು 'ಇಂಡಿಯಾ ಎಂಡ್ ಬ್ರಿಟನ್' ಎಂಬ ತನ್ನ ಪುಸ್ತಕದಲ್ಲಿ ಬರೆದಿರು ವರು,

ಪ್ರತಿಯೊಂದೆಡೆಯಲ್ಲೂ ಐರೋಪ್ಯ ಜನಾಂಗದವರ ಮೇಲೆ ಕವಿದಿರುವ ಮತ್ಸರ ಮತ್ತು ದ್ವೇಷವನ್ನು ಬಹು ಸ್ಪಷ್ಟವಾಗಿ ತೋರಿಸುತ್ತಾರೆ,

"ನವನಾಗರಿಕತೆಯನ್ನು ಕಲಿತ ಪೂರ್ವ ದೇಶೀಯರೂ ಹಿಂದೂ ದೇಶದವರೂ ಇನ್ನು ಬಹುಕಾಲದ ವರೆಗೂ ಐರೋಪ್ಯ ದೇಶಸ್ಥರು ತಮಗೆ ಮಾಡಿದ ಅವಮಾನಗ ಳನ್ನು ತಾಳ್ಮೆಯಿಂದ ಸಹಿಸಲಾರರು. ಅನ್ಯ ಖಂಡದವರ ರಕ್ತವು ಬಿಸಿಯಾಗುತ್ತಾ ಬಂದಿದೆ, ಯುರೋಪು ದೇಶವು ಇನ್ನು ಅದನ್ನು ತನ್ನ ಶಕ್ತಿಯಿಂದ ಒದೆಯಲು ಸಮರ್ಥವಾಗಲಿಕ್ಕಿಲ್ಲ ತಮ್ಮ ಪೂರ್ಣ ಪತನವು ಆಂಗ್ಲ ದೇಶದವರಿಂದಾಯಿತೆಂದು ಹಿಂದೂದೇಶದವರು ಮನಗಂಡಿರುವರು"

ತಮ್ಮ ಜನಾಂಗದವರ ಬಿಳಿಯನ್ನೇ ಬಯಸಿ ಆಂಗ್ಲ ದೇಶದವರು ತಮ್ಮ ಭೀಕರ ಸ್ವರೂಪವನ್ನು ಇತರ ಜನಾಂಗಕ್ಕೆ ತಿಳಿಸಿರುವರು ಅವರ ರಾಜನೀತಿಯಿಂದಾಗಿ ಪರಕೀಯರ ಮನಸ್ಸನ್ನೇ ಹಾಳು ಮಾಡಿರುವರು ಅವರ ಪ್ರೀತಿಯನ್ನು ಸಂಪಾದಿಸುವ ಬದಲಾಗಿ ದ್ವೇಷ ವನ್ನು ಪಡಕೊಂಡಿರುವರು

ಇಂತಹ ದುಸ್ಥಿತಿಯಲ್ಲಿ ಕ್ರೈಸ್ತ ಇಗರ್ಜಿಗಳು ಮುಂದೊತ್ತಿ ಬಂದು ಎಲ್ಲ ಮತಗಳಿಗೂ ಆದರ್ಶ ಪ್ರಾಯವಾಗಿರುವ ತತ್ವಗಳನ್ನು ತಮ್ಮ ಮತಸ್ಥರಿಗೆ ಬೋಧಿಸಿ ಅವರನ್ನು ಸನ್ಮಾರ್ಗಕ್ಕೆ ತಾರದೆ ಇದ್ದುದು ಶೋಚನೀಯ ಸ್ಥಿತಿ ಕ್ರೈಸ್ತ ಮತಕ್ಕೆ ಸೇರಿದವರೆಂದು ಹೇಳಿ ಅವರ ಧರ್ಮಶಾಸ್ತ್ರಗಳಿಗೆ ವಿರುದ್ಧವಾಗಿ ಬಿಳಿ ಜನಾಂಗದವರು ನಡೆಯಲು ಪ್ರಾರಂಭಿಸಿರುವರು ಅವರು ತಮ್ಮ ಬಿಳೀ ಜನಾಂಗವೇ ಬೇರೆ ಎಂದು ಭಾವಿ ಸಿರಲೂ ಸಾಕು ಸಾಮ್ರಾಜ್ಯ ಸ್ವಾತಂತ್ರ್ಯವನ್ನು ಕೃದ ಎಲ್ಲವನ್ನೂ ಪರಾಮರ್ಶಿಸಿ ನೋಡುವ ಬ್ರಿಟನ್ ದೇಶದವರಿಗೆ ತಮ್ಮ ಕೃತ್ರಿಮದ ಕೆಲಸವು ಬಹುಕಾಲ ಸಾಗಲಿಕ್ಕಿಲ್ಲೆಂದು ತಿಳಿಯದೇ ಹೋಗಲಿಕ್ಕಿಲ್ಲ ಯಾಕೆಂದರೆ ಹಿಂದೂ ದೇಶವು ಅನೇಕ ಕಷ್ಟಪರಂಪರೆ ಗಳನ್ನು ಸಹಿಸಿ ಸಾವಧಾನವಾಗಿ ಜಾಗೃತಿಯನ್ನು ಹೊಂದುತ್ತಿದೆ, ಅವರ ತಾಳ್ಮೆಯು ಸವೆದು ಹೋಗುತ್ತಾ ಬಂದಿದೆ"

ಆದರೆ ಮಿ|| ಅಂಡ್ರೂಸರೂ ಅಷ್ಟರಿಂದು ಮಾತ ವನ್ನು ತೋರ್ಪಡಿಸುವುದಿಲ್ಲ ನಿರಂತರವೂ ಸಂತೋಷ ಮುಖಿಗಳವರು ಮನುಷ್ಯನಲ್ಲಿ ಮನುಷ್ಯತ್ವವಿದೆ ಸಂಗಡ ಬೇಕಾದಷ್ಟು ದಯೆಯೂ ಇದೆ ಆದರಿಂದ ಅವನು ಅಷ್ಟೊಂದು ಅವನತಿಯನ್ನು ಹೊಂದದೆ ಅದನ್ನು ಉನ್ನತಿಯನ್ನು ಪಡೆಯುವನು

"ಈ ದೇಶದ ಅವಸ್ಥೆಯನ್ನು ಕಂಡು ಶಂಕಿಸಬೇಕಾದ ಕಾರಣವೇನಿಲ್ಲ ಪ್ರಪಂಚವು ಬಹಳ ಹೀನಾವಸ್ಥೆ ಯನ್ನು ಹೊಂದಿದಾಗ ಅವರಿಗೆ ಸಂತಸವನ್ನು ತೋರಿಸಿ ಕೊಡುವ ಮಹನೀಯರು ದೇಶದಲ್ಲೇ ಜನ್ಮವೆತ್ತುತ್ತಾರೆ ಹಿಂದೆಯೂ ಹೀಗಾಗಿದೆ, ಇನ್ನು ಮುಂದೆಯೂ ಹೀಗಾ ಗುವುದು" ಕಟ್ಟಕಡೆಯದಾಗಿ ಅವರು ಹೇಳುವುದೇ ನೆಂದರೆ ಆಂಗ್ಲೇಯರು ತಮ್ಮ ದುರ್ವರ್ತನವನ್ನೂ ಸ್ವಾರ್ಥವನ್ನೂ ಬಿಟ್ಟು ಅಧಿಕಾರಕ್ಕಾಗಿ ಆಶೆಪಡದೆ ಇದ್ದರೆ ಉಭಯ ಪಕ್ಷದವರಿಗೂ ಕ್ಷೇಮ ಲಾಭವಿದೆ, ಇಲ್ಲ ದಿದ್ದರೆ ತಮ್ಮ ಅಧಿಕಾರವನ್ನು ಪಾಲಿಸಲು ಅನೇಕಾ ನೇಕ ಕಠ್ಯತಂತ್ರಗಳನ್ನು ಜನತೆಗೆ ತೋರಿಸಿ ನೀತಿವಿರುದ್ಧ ವಾಗಿ ವರ್ತಿಸಿದರೆಂದರೆ ಇನ್ನೂ ಕೆಲವೇ ವರ್ಷಗಳಲ್ಲಿ ಬ್ರಿಟಿಷರ ಛತ್ರಿಯಲ್ಲಿ ತಿದ್ದುಪಾಟುಗಳು ಆಗುವುವು ಎಂಬುದರಲ್ಲಿ ಸಂಶಯವಿಲ್ಲ

"ಆದರೆ, ಸ್ವಾರ್ಥಪರರಾಗಿ ಹಿಂದೂದೇಶವನ್ನು ತಮ್ಮ ಭದ್ರಮುಷ್ಟಿಯಲ್ಲಿ ಇಡಬೇಕೆಂದು ಅತಿಸ, ಘೋರ ಅತ್ಯಾಚಾರದಿಂದ ಅವರನ್ನು ತಮ್ಮ ವಶದಲ್ಲಿ ಇಡಲು ಪ್ರಯತ್ನಿಸಿದರೆ, ಕ್ರಿಯೆಗಳಿಗೆ ಪ್ರತಿಕ್ರಿಯೆಗಳು ಉತ್ಪನ್ನಿಸಿ, ಪರಸ್ಪರ ಬೇರ್ಪಾಟವಾಗಿ ಬ್ರಿಟನ್ ಹಿಂದೂದೇಶಗಳಲ್ಲದೆ, ಪ್ರಪಂಚದ ಪ್ರತಿಯೊಂದೆಡೆಯಲ್ಲೂ ಭೀಕರ ಕೋಲಾ ಹಲವು ಹಬ್ಬುವುದು" ಎಂದೇ ಅವರ ಭವಿಷ್ಯ ವಾಣಿ,

---

ಲಾಲಾಜಿಯವರ ನಿಧನ

ಹಿಂದೂದೇಶವು ಒಂದು ಅಮೂಲ್ಯ ರತ್ನವನ್ನು ಕಳಕೊಂಡಿತು.

(Sunday Times ಪತ್ರಿಕೆಯಲ್ಲಿ ಮಿ|| ಟೀ. ಆರ್. ಬಿ. ಯವರು ಕೊಟ್ಟ ಲೇಖನದ ಆಧಾರದಿಂದ)

ಪೇಶಾವರದಿಂದ ಕೊಮರಿನ್‌ನ ವರೆಗಿನ ಜನರು ಇಂದು ಲಾಲಾಜಿಯವರ ಗುಣಕಥನ ಮಾಡಲು ಪಂಜಾಬಿ ನಲ್ಲಿ ಕೂಡಿರುವರು. ಪಂಜಾಬಿನ ಸಿಂಹವೆಂದು ಖ್ಯಾತಿ ಗೊಂಡ ಅವರ ಸಿಂಹನಾದವನ್ನು ಇನ್ನು ಮುಂದೆ ಕೇಳುವ ಭಾಗ್ಯವು ನಮ್ಮ ಹಿಂದೂದೇಶದವರಿಗಿಲ್ಲ.

ಸ್ವರಾಜ್ಯ ಆಂದೋಲನದ ಕೇಂದ್ರಸ್ಥಾನವಾದ ಪಂಜಾ ಬವು ಇಂದಿನ ತನಕ ಸಿಂಹರಾಜನಿಂದ ಮೆರೆಯುತ್ತಿತ್ತು ಇಂದು ಅದು ತನ್ನ ಸಿಂಹವನ್ನು ಕಳಕೊಂಡು ಬಹು ವ್ಯಥೆಗೀಡಾಗಿದೆ ಸ್ವರಾಜ್ಯ ಸಾಧನೆ, ಜಾತೀಯತೆಯ ಐಕ್ಯಮತ್ಯ ಇವುಗಳಿಗೆ ಸಾಧಿಸಿದ ವೀರರ ಪೈಕಿ ಲಾಲಾಜಿ ಯವರು ಅಗ್ರಗಣ್ಯರು ಗಾಂಧೀಜಿಯವರೂ ಇದನ್ನು ಒಪ್ಪಿರುತ್ತಾರೆ,

ಅವರ ನಿಧನವು ಎಷ್ಟು ದುಃಖಕರವಾದರೂ ಅದು ಕ್ರಾಂತಿಕಾರರನ್ನು ತಮ್ಮ ಕೆಲಸದಿಂದ ನಿರುತ್ಸಾಹರನ್ನಾಗಿ ಮಾಡಲಾರದೆಂದು ಭಾವನೆ ಪ್ರತಿಯೊಂದೆಡೆಯಲ್ಲಿ ಜಾತಿಮತ್ಸರಗಳು ಹಬ್ಬಿರುವಾಗ, ಸ್ವರಾಜ್ಯ ಆಂದೋಲ ನವು ಶಿಥಿಲವಾಗುತ್ತಾ ಬರುವಾಗ, ಲಾಲಾಜಿಯವರು ವ ಎದೆಯೊತ್ತಿ ಬಂದು ಎಲ್ಲರಲ್ಲಿ ಒಂದು ಬಗೆಯ ಉತ್ಸಾ ಹವನ್ನು ಬೀರಿ ದೇಶಕ್ಕಾಗಿ ಅವರೆಲ್ಲರೂ ದುಡಿಯುವ ವಂತೆ ಮಾಡಿದರು ಆದಕ್ಕಾಗಿ ದೇಶದಿಂದ ಅವರನ್ನು ಗಡೀಪಾರು ಮಾಡಲಾಯಿತು ಅದರ ಅವಧಿಯನ್ನು ಮುಗಿಸಿ ಪುನಹ ಅವರು ಸ್ವದೇಶಕ್ಕೆ ಬಂದೊಡನೆ ಒಂದು ಮಹಾಸಭೆಯನ್ನು ಸೇರಿಸಿ "ಪಂಜಾಬಿನ ಸಿಂಹ"ವೆಂಬ ಬಿರುದನ್ನು ಅವರಿಗಿತ್ತರು ಮುಸ್ಲಿಮರೇ ನಿಮ್ಮ ಈ ದೇಶಾಂತರ ಶಿಕ್ಷೆಗೆ ಕಾರಣರೆಂದು ಹಲವರು ಅವರಿಗೆ ಹೇಳಿದುದುಂಟು ಆದರೆ, ಅದನ್ನು ಅವರು ನಂಬಲಿಲ್ಲ

ಹಿಂದೂ ಮುಸ್ಲಿಂ ಐಕ್ಯತೆಯ ನ್ನು ಸಾಧಿಸಲು ಲಾಲಾಜಿ ಯವರು ಬಹಳ ಪ್ರಯತ್ನವನ್ನು ಪಟ್ಟಿದ್ದಾರೆ ಅದೊಂದ ಬಹಳ ಕಷ್ಟವಾದ ಕೆಲಸವೆಂದು ಮನಗಂಡರೂ ದಿನದಿನ ಜಗಳಗಳು ಮಾನವ ಸಂಸಾರದಲ್ಲಿ ಇದ್ದೇ ಇದ ಯೆಂದು ಭಾವಿಸಿ ವಿಶ್ವಾಸದಿಂದ ತಾನು ಕೈಕೊಂಡಿದ ಕಾರ್ಯದಲ್ಲಿ ಉದ್ಯುಕ್ತರಾದರು ಲಾಲಾಜಿಯವರು ಹಿಂದೆ ಮಾಡಿದ ಕೆಲಸಗಳನ್ನು ಪುನಃ ಪುನಃ ಹೇಳುವುದ ರಿಂದ ಪ್ರಯೋಜನವಿಲ್ಲ ಕಾರಣ ಎಲ್ಲರಿಗೂ ಅವರು ಮಾಡಿದ ಶ್ರೇಷ್ಠ ಕಾರ್ಯಗಳ ಪರಿಚಯವು ಇದ್ದೇ ಇದ

ಪಂಜಾಬಿನ ಸಿಂಹನೆಂದು ಹೆಸರಿಟ್ಟಿದ್ದರೂ ಕೇವಲ ಧೈರ್ಯಸಾಹಸಗಳಲ್ಲದೆ ಇತರ ಸಮಯದಲ್ಲಿ ಇವರನ್ನು ದಯಾಳು ಸಜ್ಜನವೆಂದುದರಿಲ್ಲ ಸಾಧುಸಜ್ಜನರಾದ ಗಾಂಧೀಜಿಯವರೂ ಕೆಲವೊಂದು ವೇಳೆ ಕೋಪಗೊಳ್ಳು ವುದಿದೆ ಆದರೆ ಲಾಲಾಜಿಯವರಲ್ಲಿ ಅಂಥ ಸಂದರ್ಭವೇ ಕಂಡುಬರಲಿಲ್ಲ ಯಾವ ಗೊಂದಲ ಗಲಭೆಗಳ ಮಧ್ಯದ ಲ್ಲಿದ್ದರೂ ಶಾಂತರೀತಿಯಿಂದ ವರ್ತಿಸುತ್ತಿದ್ದರು

ಸ್ವಾರ್ಥಸಾಧನೆ ಅವರಲ್ಲಿಲ್ಲ, ಸಕೌಂಸಿಲ್ಲಿ ಸ್ವರಾಜ್ಯ ಚಳವಳಿಯು ಎದ್ದಾಗ ಕಾಂಗ್ರೆಸ್ಸಿನವರ ಉದ್ಯಮಗಳು ಇಡೀ ದಾತಾವರಣದಲ್ಲಿ ಹಬ್ಬಿರುವಾಗ ಶ್ರೀ ಶ್ರೀ ನಿವಾಸರೂ ಶ್ರೀ ಅರವಿಂದರವರೂ, ಕಾಂಗ್ರೆಸ್ ಅಧ್ಯಕ್ಷಪದವಿಗೆ ಲಾಲಾಜಿಯವರಷ್ಟು ಯೋಗ್ಯ ಪುರುಷರು ಮತ್ತಾರಿಲ್ಲ ವೆಂದು ಹೇಳಿ ಅವರನ್ನು ಬೇಡಿಕೊಳ್ಳಲು ಅವರು ತಾನು ಆ ಪದವಿಗೆ ಅರ್ಹನಲ್ಲವೆಂದೇ ಹೇಳಿಬಿಟ್ಟರು

ಲಾಹೋರಿನಲ್ಲಿ ಸಿಕ್ಕಿದ ಲಾಠೀ ಪ್ರಹಾರವೇ ಅವರ ಅವಸಾನಕ್ಕೆ ಕಾರಣವಾಯಿತು ಇಲ್ಲವಾದರೆ ಹಿಂದೆ ಮಾಡಿದ್ದಂತೆ ಇನ್ನು ಮುಂದೆಯೂ ನಮ್ಮ ಮುಖಂಡ ರಾಗಿ ನಮ್ಮನ್ನು ಸುಸ್ಥಿತಿಗೆ ತಂದೊದಗಿಸುತ್ತಿದ್ದರೆಂಬುದರಲ್ಲಿ ಸಂಶಯವಿರಲಿಲ್ಲ ಆಚಾರ್ಯ ಕೃಪಾಲಾನಿಯವರು ಹೇಳಿದಂತೆ, ಅವರ ನಿಧನದಿಂದ ಭಾರತಮಾತೆಯು ತನ್ನ ಪೂಜ್ಯ ಪುತ್ರರತ್ನರಲ್ಲಿ ಒಬ್ಬರನ್ನು ಕಳಕೊಂಡಹಾಗಾ ಯಿತು ಇದರ ದುಃಖವು ಕೇವಲ ಹಿಂದೂದೇಶಕ್ಕೆ ಮಾತ್ರವಲ್ಲ, ಆಂಗ್ಲಪ್ರಭುತ್ವಕ್ಕೂ ಇರಬೇಕು ಅವರನ್ನು ಪರಕೀಯರೆಂದು ಭಾವಿಸದೆ ಅನೇಕ ಸಹವ ಘೋರ ವಿಪತ್ತುಗಳಿಂದ ರಕ್ಷಿಸಿದವರು ಲಾಲಾಜಿಯವರು, ಅದರ ಪ್ರತಿಫಲವಾಗಿ ಅವರಿಗೆ ಕಠಿಣ ಶಿಕ್ಷೆಯನ್ನು ಅನು ಭವಿಸಬೇಕಾಗಿತ್ತಾದರೂ ಅವರು ಧೈರ್ಯಗೆಡಲಿಲ್ಲ, ಸ್ವಾಮಿಭಕ್ತಿಯು ಶ್ರೇಷ್ಠವೆಂದು ಅವರ ಭಾವನೆ,

---

ಮಕ್ಕಳನ್ನು ಅಣಕಿಸುವುದು ಕೆಟ್ಟದು.

ದುರ್ಗುಣಗಳು ಬೆಳೆದು ಸಮಾಜದ ಅವನತಿಯಾಗ ದಂತೆ ಗುಣಾವಗುಣ ವಿಮರ್ಶೆಯು ಒಂದು ಪರಿಮಾಣ ದಲ್ಲಿ ಅವಶ್ಯಕವೆನ್ನಿಸುವುದಾದರೂ, ವಿಮರ್ಶೆಯು ಸೋಗುಹಾಕಿಕೊಂಡು ಛಿದ್ರಾನ್ವೇಷಣ ಮಾಡುವುದು ವಿಮರ್ಶಾಪದ್ಧತಿಯ ದುರುಪಯೋಗ ಮಾಡಿ ಕೊಂಡಂತೆಯೇ ಸರಿ. ಇಂತಹದ್ದೊಂದು ವ್ಯಾಧಿಯನ್ನು ಯಥಾ ಸಮಯ ನಿರ್ಮೂಲಿಸದಿದ್ದರೆ ಅದು ಮಹಾ ವ್ಯಾಧಿಯಾಗಿ ಸರ್ವತ್ರ ಹರಡಿಕೊಳ್ಳುವುದು ಪರರ ಹುಳುಕುಗಳನ್ನು ಹುಡುಕಿ ತೆಗೆದು ಬಯಲಿಗೆ ತರು ವುದೇ ಈ ವ್ಯಾಧಿಗ್ರಸ್ತರ ಕೆಲಸ ಇವರನ್ನು ನೆಯೋ ಕುಮಾರಿಯ ದತ್ತಪುತ್ರರೆಂದೂ ಹೇಳಬಹುದು ಸರ್ವ ಸದ್ಗುಣಸಂಪನ್ನರಾದ ಜ್ಞಾತ ಸ್ವರ್ಗೀಯರು ಈ ಮಾನವಲೋಕದಲ್ಲಿ ತೀರಾ ವಿರಳರಾಗಿದ್ದಾರೆ ಇಲ್ಲ ದಾದರೆ ಇದು ದೇವಲೋಕವೆನ್ನಿಸುತ್ತಿತ್ತು ಪ್ರಯತ್ನ ಪಟ್ಟು ಹುಡುಕಿದರೆ ಸರ್ವಸಾಧಾರಣದಲ್ಲಿ ಒಂದ ಲ್ಲೊಂದು ಕುಂದುಕೊರತೆಯನ್ನು ಕಾಣಬಹುದು. ಆದರೆ ಸಾಸಿವೆಕಾಳಿನಷ್ಟು ಅಲ್ಪವಾಗಿರಬಹುದಾದ ಆ ಕೊರತೆಯನ್ನು ಈ ದತ್ತಪುತ್ರರು ಕುಂಬಳಕಾಯಿಯಷ್ಟು ದೊಡ್ಡದು ಮಾಡುವರು ಪರಂತು ತಮ್ಮ ಕಾಲು ಬುಡದಲ್ಲಿ ಕೊಳೆತ ಕುಂಬಳಕಾಯಿ ಬಿದ್ದು ನಾರುತ್ತಿರು ವುದನ್ನು ಮಾತ್ರ ಈ ದತ್ತಪುತ್ರರು ಲೆಕ್ಕಿಸುವುದಿಲ್ಲ ಕಂಡೂ ಕಾಣದವರಂತೆ ಇರುತ್ತಾರೆ ಪಾಪದ ಇವರು ಅನ್ಯರ ದುಃಖಕ್ಕೆ ಮಣ್ಣೆರಚಲಿಕ್ಕೆ ಹೋಗಿ ತಮ್ಮ ಇಡೀ ಶರೀರವನ್ನೇ ಕೆಸರುಮಾಡಿಕೊಳ್ಳುತ್ತಾರೆ

ಪರಛಿದ್ರಾನ್ವೇಷಿಗಳಿಂದ ಇಷ್ಟೇ ಹಾನಿಯಾಗುತ್ತಿದ್ದರೆ ಚಿಂತೆ ಇರಲಿಲ್ಲ ಪರಂತು ದುರ್ಬುದ್ಧಿಯಿಂದ ಇವರ ವಿಮರ್ಶೆ ಅಲ್ಲಿ ಹೀನೈಸುವುದು ಅಣಕಿಸುವುದು ಪರಿ ಹಾಸ್ಯ ಮಾಡುವುದು ಮೊದಲಾದುವುಗಳಿಂದ ಸಮಾಜಕ್ಕೆ ಇದಕ್ಕೂ ದೊಡ್ಡ ಹಾನಿಯಾಗುತ್ತದೆ ವಿಮರ್ಶಾ ಪದ್ಧತಿಯ ದುರುಪಯೋಗ ಮಾಡಿಕೊಂಡಾಗ ಸಮಾ ಜಕ್ಕೆ ಸೇರಿದ ವ್ಯಕ್ತಿಗಳ ಮನಸ್ಸಿನಾರೋಗ್ಯವು ಕೆಟ್ಟು ಹೋಗುವುದೆಂದು ವಿವೇಕಿಗಳಾದವರು ಹೇಳುತ್ತಾರೆ ಈ ತರಹದ ವಿಕಾರದಿಂದ ಮನಸ್ಸಿಗೆ ನೋವು ತಟ್ಟಿದ ನೊಂದ ಮನಸ್ಸಿನ ಬೆಳವಣಿಗೆಯಾಗುವುದಿಲ್ಲ ಆಗ ಶರೀರಾಂಗಗಳ ಬೆಳವಣಿಗೆಯೂ ನಿಂತು ಸಮಾಜವು ಪುನಃ ಬಿದ್ದು ನಿಲ್ಲಲಿಕ್ಕಾಗದಂಥ ರೀತಿಯಲ್ಲಿ ಅವನತಿಯ ಕೂಪದಲ್ಲಿ ಬಿದ್ದು ಕೊಳೆಯುವುದು

ವ್ಯಂಗೋಕ್ತಿ ಕಟೋಕ್ತಿ ಹೀನೈಸುವುದು ಅಣಕಿಸು ವುದು ಮೊದಲಾದುವುಗಳಿಂದ ಮನಸ್ಸಿನಾರೋಗ್ಯ ಕೆಡುತ್ತ ದೆಂಬುದನ್ನು ಅನುಭವದಿಂದಲೂ ಕಂಡುಕೊಳ್ಳಬಹುದ ಮನುಷ್ಯನ ಸರ್ವತೋಮುಖವಾದ ಉನ್ನತಿಗೆ ದೇಹಾ ರೋಗ್ಯವು ಎಷ್ಟು ಅವಶ್ಯಕವೋ ಅದಕ್ಕೂ ಹೆಚ್ಚಿಗೆ ಮನಸ್ಸಿನಾರೋಗ್ಯವು ಅವಶ್ಯಕವಾಗಿದೆ ಮನುಷ್ಯನ ಬಂಧನಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವು ಆರೋಗ್ಯ ಕೆಟ್ಟ ಮನಸ್ಸಿನಿಂದ ಯಾವ ಸಾಧನೆಯೂ ಸಾಧ್ಯವಲ್ಲ ಆಗ ಅಭಿವೃದ್ಧಿಯಾಗುವುದು ಹೇಗೆ?

ಆದ್ದರಿಂದ ಛಿದ್ರಾನ್ವೇಷಣೆ ಮೊದಲಾದ ಕೆಟ್ಟ ದುರ್ಗುಣಗಳನ್ನು ಹೊಂದಿದ ಸಮಾಜದ್ರೋಹಿಗಳಿಂದ ಸಮಾಜವು ಬಹು ಎಚ್ಚರಿಕೆಯಿಂದಿರಬೇಕಾಗುತ್ತದೆ

ಮಕ್ಕಳನ್ನು ತಿದ್ದಿ ಬೆಳೆಸಬೇಕಾದ ಸಂದರ್ಭದಲ್ಲಿ ಹೆತ್ತವರೂ ಉಪಾಧ್ಯಾಯರೂ ಅವರ ಗುಣಾವಗುಣ ವಿವೇಚನೆ ಮಾಡಬೇಕಾದ ಸಂದರ್ಭಗಳು ಬರುತ್ತವೆ ಮನೆಯಲ್ಲಿ ಅಥವಾ ಶಾಲೆಯಲ್ಲಿ ಒಪ್ಪಿಸಲ್ಪಟ್ಟ ಕೆಲಸ ವನ್ನು ಮಾಡಲಸಮರ್ಥವಾದ ಮಕ್ಕಳನ್ನು ಕಟೋಕ್ತಿ ವ್ಯಂಗ್ಯೋಕ್ತಿ ಮೊದಲಾದುವುಗಳಿಂದ ದಂಡಿಸುವುದು ಸಾಮಾನ್ಯ ಸಂಗತಿಯಾಗಿದೆ ಆದರೆ ಹೀಗೆ ಮಾಡು ವುದು ತಪ್ಪೆಂದು ತಿಳಿದವರು ಹೇಳುತ್ತಾರೆ ಉಪಾ ಧ್ಯಾಯರಾಗಲೀ ಹೆತ್ತವರಾಗಲೀ ಮಕ್ಕಳ ವಿಷಯದಲ್ಲಿ ಹೀಗೆ ನಡೆಕೊಳ್ಳುವುದರಿಂದ ಆ ಮಕ್ಕಳು ಗಿಳಿಯನ್ನು ನಕಲು ಬಿಟ್ಟು ಕೆಲಸ ಮೊದಲಾದುವುಗಳಿಗೆ ಶರಣು ಹೋಗಿ ಉಪಾಧ್ಯಾಯರ ಅಥವಾ ಹೆತ್ತವರ ಕಣ್ಣಿಗೆ ಮಣ್ಣೆರಚುತ್ತಾರೆ ಅವರ ಸಹಜ ಬೆಳವಣಿಗೆಯೂ ಆಗು ವುದಿಲ್ಲ! ಮನಸ್ಸಿನಾರೋಗ್ಯವೂ ಕೆಡುವುದು ಬೆತ್ತ ದೇಟಿನಿಂದ ಮಕ್ಕಳ ಮನಸ್ಸಿನ ಮೇಲೆ ಆಗುವ ದುಷ್ಪರಿ ಣಾಮಗಳಿಗಿಂತಲೂ ಈ ತರಹದ ಹೆತ್ತವರ ಮತ್ತು ಉಪಾಧ್ಯಾಯರ ದುರ್ವರ್ತನದಿಂದ ಅವರ ಮನಸ್ಸಿನ ಮೇಲೆ ಹೆಚ್ಚು ಭಯಂಕರ ದುಷ್ಪರಿಣಾಮಗಳಾಗುತ್ತವೆ ಎಂದು ಡಾಕ್ಟರ್ ಕ್ರಿಶ್ಚನ್‌ಮಿಲ್ಲರ್ ಎಂಬವರು ಕೆಲವು ಕಾಲದ ಹಿಂದೆ ತಮ್ಮದೊಂದು ಭಾಷಣದಲ್ಲಿ ಹೇಳಿದ್ದರು

ನಾವು ಮಕ್ಕಳೊಡನೆ ವಿನೋದಶೀಲರಾಗಿರಬೇಕಾ ದರೂ ನಾವು ಮಾಡುವ ವಿನೋದವು ಮಕ್ಕಳ ಮನ ಸ್ಸನ್ನು ಚುಚ್ಚಿ ನೋಯಿಸಿ ಅವರ ಆರೋಗ್ಯವನ್ನು ಕೆಡಿಸುವ ಪರಿಹಾಸ್ಯ, ವ್ಯಂಗ್ಯೋಕ್ತಿ, ಕಟೋಕ್ತಿ ಮೊದ ಲಾದುವುಗಳಲ್ಲಿ ಪರ್ಯವಸಾನ ಹೊಂದದಂತೆ, ನಾವು ಅಂದರೆ ಉಪಾಧ್ಯಾಯರು, ಹೆತ್ತವರು ಮೊದಲಾದ ಮಕ್ಕಳ ಹಿರಿಯರು ಜಾಗ್ರತೆ ತೆಗೆದುಕೊಳ್ಳುವುದು, ಆ ಮಕ್ಕಳ ಮತ್ತು ಸಮಾಜದ ಹಿತದೃಷ್ಟಿಯಿಂದ ಅಗ ತ್ಯವೂ ಶ್ರೇಯಸ್ಕರವೂ ಆಗಿರುತ್ತದೆ.

ಪ್ರಕಟಣೆ.

ಹಾಸನ ಟವನಿನ 27ನೆಯ ದನಗಳ ಪ್ರದರ್ಶನ.

ಹಾಸನ ಟವನ್ ದನಗಳ ಪ್ರದರ್ಶನ ಕ್ಷೇತ್ರದಲ್ಲಿ ೨೭ನೆಯ ದನಗಳ ಪ್ರದರ್ಶನವು ಜರಗಲು ಏರ್ಪಾಡಾ ಗಿರುತ್ತದೆ ಪ್ರದರ್ಶನವು ೧೯೨೯ನೇ ಜನವರಿ ಮಾಹೆ ತಾ ೩ನೇ ಗುರುವಾರದಿಂದ ೭ನೇ ಸೋಮವಾರ ಸಂಜೆ ವರೆಗೂ ನಡೆಯುತ್ತದೆ

ಗವರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಗಳಿಗೆ ಎರಡಾಣೆಯಂತೆ ಫೀಸು ವಸೂಲ್ಮಾಡುತ್ತದೆ,

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಚಾಬಡಿ ಮತ್ತು ಪ್ರದರ್ಶನಾ ಜಾಗ ದಲ್ಲಿ (ಮ್ಯುನಿಸಿಪಲ್) ಜೀಳ ವಗೊಟ್ಟರವನ್ನು ಸಾಗಿಸುವ ಬಾಬನ್ನು ಸಹಾ ತಾ ೩ ೨ ೩ರ ಮಧ್ಯಾಹ್ನ ೨ ಗಂಟೆ ಅಾಗ್ರ್ಯತ ಹಾಸನದ ಸಂತೆ ಬೀದಿ ಇರುವ ಆಶ್ರಾಯು ಕಟ್ಟೆ ಬಳಿ ಬಹಿರಂಗವಾಗಿ ಸೆಟ್ಲ್‌ಮೆಂಟ್ ಕಮಿಟಿ ಪ್ರೆಸಿ ಡೆಂಟರು ಯಾ ಮುನಿಸಿಪಲ್ ಕೌನ್ಸಿಲು ವೈಸ್ ಪ್ರೆಸಿಡೆಂಟು ಇವರಿಂದ ಹರಾಜುಮಾಡಿಸಲ್ಪಡುತ್ತದೆ

ಬಂಗಡಿ ವಗ್ಯೆರೆಗಳಿಗಾಗಿ ವಿಂಗಡಿಸಿರುವ ಜಾಗ ಗಳನ್ನು ತಾ ೧೫–೧೨ ೨೮ರ ಬೆಳಗಾದ ಹಾಸನ ಟವನ ಮ್ಯುನಿಸಿಪಲ್ ಆಫೀಸಿನಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಿರುತ್ತದೆ ಇದಕ್ಕೆ ನಂತರ ಬರತಕ್ಕ ಅರ್ಜಿ ಗಳನ್ನು ಅಂಗೀಕರಿಸುವುದಿಲ್ಲ ಇದಕ್ಕಾಗಿ ಪ್ರಿಂಟಾಗಿ ರುವ ಅರ್ಜಿ ಫಾರಂಗಳು ಮುನಿಸಿಪಲ್ ಆಫೀಸಿನಲ್ಲಿ ದೊರೆಯುತ್ತವೆ

ಈ ರೀತಿ ಜಾಗಗಳನ್ನು ಅಪೇಕ್ಷಿಸಿ ತೆಗೆದುಕೊಳ್ಳಲು ಇಷ್ಟವುಳ್ಳವರ್ ಮುನಿಸಿಪಲ್ ಆಫೀಸಿನಲ್ಲಿ ಮುಚ್ಚು ಯಾ ೨ ಎಂಡ್ ಸ್ಕ್ರೀನ್ ಇಂಥ ಅಧಿಕಾರ ಹೊಂದಿದ ಸಿಬಂದಿಯರು ಹಾಜರಾಗಿ ಜಾಗಾವನ್ನು ಪಡೆಯತಕ್ಕದ್ದು ಅಲ್ಲದೆ ಒಟ್ಟು ಮನುಷ್ಯರಿಗೆ ತನ್ನ ಸ್ವಂತ ಉಪಯೋಗ ಯಾ ವ್ಯಾಪಾರಕ್ಕೆ ಅವಶ್ಯಕವಾದಷ್ಟು ಸ್ಟಾಲುಗಳನ್ನು ಮಾತ್ರ ಕೊಡಲಾಗುತ್ತದೆ ಇದರ ಅಧಿಕಾರವು ಸಂಪೂರ್ಣ ವಾಗಿ ಪ್ರೆಸಿಡೆಂಟು ಯಾ ಅವರಿಂದ ಅಧಿಕಾರ ಹೊಂದಿದ ವರಿಗೆ ಇರುತ್ತದೆ ಮುನಿಸಿಪಾಲಿಟಿಯವರ ಅಪ್ಪಣೆ ಯಿಲ್ಲದೆ ಸ್ಟಾಲು ಪಡೆದ ಯಾವ ಮನುಷ್ಯನೂ ಇತರರಿಗೆ ಬಾಡಿಗೆ ವಗೈರೆ ಕೊಡಬಾರದು ಹೋದ ಸಾಲಿನಲ್ಲಿ ಸ್ಟಾಲು ಪಡೆದು ಇತರರಿಗೆ ನಷ್ಟಪಡಿಸಿ ವಿಕ್ರಯಮಾಡಿ ಕೊಂಡಿದ್ದವರಿಗೆ ಖಂಡಿತ ಈ ಸಾಲಿನಲ್ಲಿ ಸ್ಟಾಲುಗಳು ದೊರೆಯಲಾರವು

ಬಾಕಿ ವಿವರಗಳನ್ನು ಹಾಸನ ಟವನ್ ಮುನಿಸಿ ಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು

ಪ್ರೆಸಿಡೆಂಟ್,

ಸೆಟ್ಲ್‌ಮೆಂಟ್ ಕಮಿಟಿ ಟೌನ್ ಮುನಿಸಿಪಾಲಿಟಿ,

ಹಾಸನ

ವಿಲಾಯತಿಯಲ್ಲಿ ತಯಾರಾದವುಗಳು

ಇದರಿಂದ ಒಬ್ಬರ ಸಹಾಯ ವಿಲ್ಲದೆ ಫೋಟೋ ತೆಗೆಯಬಹುದು ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು ಕ್ಯಾಮರದ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು. ಇದನ್ನು ಕೊಂಡುಕೊಳ್ಳು ವವರಿಗೆ ಮೂರು ವರ್ಷಗಳ ಗ್ಯಾರಂಟಿ ಇರುವ ಟೈಂ ಪೀಸು ಒಂದನ್ನು ಇನಾಮಾಗಿ ಕೊಡುವೆವು.

ಬೆಲೆ ಒಕ್ಕೆ ರೂ ೪–೮–೦

K. N Fernandes & Co.,

168 China Bazaar, MADRAS.

ಸಂಯುಕ್ತ ಪ್ರಾಂತ್ಯಗಳಲ್ಲಿ ಕಡಿತ.

ಸಂಯುಕ್ತ ಪ್ರಾಂತ್ಯದ ಸರಕಾರದ ವೆಚ್ಚದಲ್ಲಿ ೩೦ ಲಕ್ಷ ರೂಪಾಯಿ ಕಡಿಮೆ ಮಾಡುವುದಕ್ಕಾಗಿ ವಿಶೇಷ ತರದ ಕಡಿತಗಳನ್ನು ಇವರಿಗೆ ಬರುವವು. ಈ ಕಡಿತಗಳು ನಿಶ್ಚಯಿಸಲು ಒಂದು ಸಮಿತಿಯನ್ನು ನೇಮಿಸಿದ್ದರು ಮತ್ತು ಅದು ಕಳೆದ ಮೇ ತಿಂಗಳಿನಿಂದ ಕಾರ್ಯನಡೆಸುತ್ತಿತ್ತು. ಈಗ ಈ ಸಮಿತಿಯವರಿಂದ ಕಡಿತಗಳ ವಿಚಾರ ಸೂಚನೆಗಳು ಬಂದಿವೆ. ಮಂತ್ರಿಮಂಡಳವು ಇವುಗಳ ಕುರಿತು ಆಲೋಚಿಸುತ್ತದೆ.

ಸುಧಾರಿತ ಸರಕಾರದ ಪ್ರಾರಂಭೋತ್ಸವ.

ಓರಿಸ್ಸಾವು ಒಂದು ಹೊಸ ಪ್ರಾಂತ್ಯವಾಗಿ ನೇಮಿಸಲ್ಪಟ್ಟಿದೆ. ನವ್ಯ ಗವರ್ನರರಾದ ಲೋರ್ಡ್ ಎರ್ಸ್ಕಿನ್‌ರು ಸುಧಾರಣೆಗಳ ಕುರಿತು ಆಲೋಚಿಸಲು ನವದಿಲ್ಲಿಗೆ ತೆರಳಿರುವರು. ಸರಕಾರದವರು ಈ ಹೊಸ ವಿಧಾನದಲ್ಲಿ ಕಾಂಗ್ರೆಸ್ಸಿನವರ ಬೆಂಬಲವನ್ನು ಪಡೆಯಬೇಕೆಂದಿದ್ದಾರೆ ಎಂದು ವಾರ್ತೆ ಇದೆ. ಈ ವಿಷಯ ವೈಸರಾಯರಿಗೂ, ಮಹಾತ್ಮಾ ಗಾಂಧಿಯವರಿಗೂ, ಬೇಟಿಯಾಗುವುದಂತೆ. ಮುಂದಿನ ಮದ್ರಾಸು ಸರಕಾರವು ಕಾಂಗ್ರೆಸ್ಸಿನದಾಗಿ ಮಾಡಲು, ಸರಕಾರದವರಿಗೆ ಇಚ್ಛೆಯಿರುವುದೆಂದೂ ಈ ವಿಚಾರ ವೈಸರಾಯರ ಕೂಡೆ ಆಲೋಚಿಸಲು ನಮ್ಮ ಗವರ್ನರರು ಉತ್ತರಕಡೆ ತೆರಳಿದ್ದಾರೆ ಎಂದು ಬಲವಾದ ವಾರ್ತೆಯಿದೆ. ಅಂತೂ ನವದಿಲ್ಲಿ ಈಗ ನವಸುಧಾರಣೆಗಳ ಕೆಲಸದಲ್ಲಿ ಮಗ್ನವಾಗಿರುತ್ತದೆ. ವಿವಿಧ ಪ್ರಾಂತ್ಯಗಳ ವಿವಿಧ ವಿಷಯಗಳನ್ನು ವಿಚಾರಿಸಲು ನೇಮಕವಾದ ಹಲವು ಸಮಿತಿಗಳು ತಮ್ಮ ಕಾರ್ಯವನ್ನು ಬೇಗನೆ ಮುಗಿಸುವುವು. ಪ್ರಜೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡುವುದೇ ಈ ಸುಧಾರಣೆಗಳ ಮುಖ್ಯ ಉದ್ದೇಶವಂತೆ.

ಡಾ। ಅಂಬೇಡ್ಕರರು

ಕೆಲವು ಹಿಂದೂ ಮಹನೀಯರ ವಿನಂತಿಗಳಿಗನುಸಾರವಾಗಿ ಕೆಳಗಿನ ಶರ್ತದ ಮೇಲೆ ಹಿಂತೆಗೆಯಲು ಸಿದ್ಧರಿರುತ್ತಾರೆ.

“ಹಿಂದೂ ಮಹಾಸಭೆ ಪೂನದಲ್ಲಿ ನಡೆಯುವ ಅಧಿವೇಶನದಲ್ಲಿ, ಹಿಂದೂ ಧರ್ಮದಲ್ಲಿ ವಾಡಿಕೆಯಲ್ಲಿರುವ ಜಾತಿಭೇದವನ್ನು ತೆಗೆದುಹಾಕಬೇಕು. ಹಿಂದೂ ಮಹಾಸಭೆಯು ಈ ಕುರಿತು ನಿರ್ಧಾರಗಳನ್ನು ಮಾಡಿದರೆ, ತಾನೂ, ತನ್ನ ಆಶ್ರಿತರೂ ಹಿಂದೂ ಧರ್ಮದಲ್ಲೇ ಇರುವೆವು.”

ಜಾತಿಭೇದವನ್ನು ಈಗ ತತ್ಕ್ಷಣಕ್ಕೆ ತೆಗೆದುಹಾಕಲು ಸಾಧ್ಯವಾಗದಿದ್ದರೆ, ಅದರ ವಿಚಾರ ಆಲೋಚಿಸಲು ಸಮಯವನ್ನು ಕೊಡಲು ಅಂಬೇಡ್ಕರರು ಸಿದ್ಧರಿರುತ್ತಾರೆ ಮತ್ತು ಅಖಿಲ ಭಾರತ ಹರಿಜನ ಪರಿಷತ್ತು ಸೇರುವ ವರೆಗೆ ತನ್ನ ನಿರ್ಧಾರದ ಕುರಿತು ಯಾವತ್ತೂ ಕಾರ್ಯವನ್ನು ಮಾಡುವುದಿಲ್ಲವೆಂದು ಇವರು ತಿಳಿಸಿರುತ್ತಾರೆ.

ನೋಟೀಸು.

ಕಣ್ಣನಾಯರರು ಅಂಬಾಡಿ ವಗೈರೆ ಮೇಲೆ ಪಡೆದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು O.S. No. 243/32ನೇ ವ್ಯಾಜ್ಯದ ಡಿಕ್ರಿ ಪ್ರಕಾರ ಈಗ ಮೇಲೊತ್ತ ಕುಂಞಿರಾಮ ನಂಬ್ಯಾರರು ಕಯ್ಯಾಲ್ ನಾಣಿ ಖಾಣಿ ಅಂಬು ಮೇಲೆ ನಡಿಸಿ ಬರುವ R.E.P No. 681/35ನೇ ಅಮಲ್‌ಜ್ಯಾರಿ ಪ್ರಕಾರ ನನ್ನ ತರವಾಡಿಗೆ ಸಲ್ಲತಕ್ಕ ಒಟ್ಟು ಡಿಕ್ರಿ ಐವೇಜನ್ನು, ನನ್ನ ತರವಾಡು ಭಾಗಸಲಿಕ್ಕೆ ನೇಮಿಸಿದ ಆರ್ಬಿಟ್ರೇಟರರ ಸಮಕ್ಷಮ ನಾನು ತಾರೀಕು 11-11-35ರಲ್ಲಿ ಯೋಜಿಂಗೆ ಪಡಕೊಂಡಿರುವುದರಿಂದ ಸದ್ರಿ ಐವೇಜನ್ನು ಜಡ್ಜ್‌ಮೆಂಟು ದೇಣದಾರನಾಗಲೀ ಅವನಿಗೋಸ್ಕರ ಬೇರೆಯವರಾಗಲೀ ಕೋರ್ಟಿನಲ್ಲಿ ಕಟ್ಟುವುದು ಹೊರತು ಮೇಲೆ ಹೇಳಿದ ಕುಂಞಿರಾಮ ನಂಬ್ಯಾರರಿಗೆ ಕೊಡಕೊಡದೆಂತಲೂ ಸದ್ರಿ ಕುಂಞಿರಾಮ ನಂಬ್ಯಾರರು ಸದ್ರಿ ಐವೇಜನ್ನು ಯಾವ ವಿಧದಲ್ಲಿಯೂ ಪಡಕೊಳ್ಳಕೂಡದೆಂತಲೂ ಈ ಮೂಲಕ ತಿಳಿಸಲಾಗಿರುತ್ತದೆ.

ಕಾಯನ್ನೂರು 13-11-'35 — Meloth Chathukutty Nair, *Advocate.*

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಯೂಟು ನಂಬ್ರ 395/1935.

ಎಡೆಯಾಲ್ಯಂ ಕಣ್ಣ ನಾಯರ—ವಾದಿ

ಮತ್ತು

ಎಡೆಯಿಲ್ಯಂ ಕುಂಞಿಕಣ್ಣ ನಾಯರ ಸಹ 14 ಜನರು—ಪ್ರತಿವಾದಿಗಳು.

ಇವರೊಳಗೆ—

ಸದರಿ ವ್ಯಾಜ್ಯದ 13ನೇ ಪ್ರತಿವಾದಿಯಾದ ಕಳನಾಡು ಗ್ರಾಮದಲ್ಲಿರುವ ಅಪ್ಪಣ್ಣನ ಮಗ ಸಿರವ್ಪನದಿ ಸುಬ್ರಾಯನಿಗೆ ಈ ಮೂಲಕ ತಿಳಿಸುವುದೇನೆಂದರೆ:—

ವಾದಿಯು 1ನೇ ಪ್ರತಿವಾದಿಯು ದೇಹ ಜವಾಬ್ದಾರಿಯಿಂದಲೂ ಕೃಪೇತಿನ ಆಸ್ತಿ ಮಾರಾಟದಿಂದಲೂ ಕೂಡಾ ಬರತಕ್ಕ ಕುರಿ ಐವೇಜಿನ ವಸೂಲಿ ಕುರಿತು ಮಾಡಿದ ಮೇಲ್ಕಂಡ ವ್ಯಾಜ್ಯವು ಸದರಿ ಕುರಿಯದನೊಬ್ಬ ಮೆಂಬರನಾಗಿದ್ದ ಮೇಲ್ಕಂಡ 13ನೇ ಪ್ರತಿವಾದಿಗೆ ಪುನಃ ನೋಟೀಸು ಬಗ್ಗೆ ತಾ. 30-11-35ಕ್ಕೆ ಇಟ್ಟಿದೆ. ಆ ದಿವಸ 13ನೇ ಪ್ರತಿವಾದಿಯು ಸ್ವತಃ ಆಗಲೀ ವಕೀಲದ್ವಾರವಾಗಲೀ ಹಾಜರಾಗದಿದ್ದರೆ ಆತನನ್ನು ಎಕ್ಸ್‌ಪಾರ್ಟೆ ಮಾಡಲಾಗುವದೆಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

Kasaragod 18-11-'35. K. Sundar Rama Shetty, *Vakil for Plaintiff.*

ಬೆಂಕಿಯಿಂದ ಸುಟ್ಟು ಗಾಯಗಳಾಗಿದ್ದರೆ ಸಾಂಬಕನ್ನು ತಿಕ್ಕಿ ಅದರ ಕಲೆಕೂಡ ಉಳಿಯದಂತೆ ಗುಣವನ್ನು ಪಡೆಯಿರಿ.

ವನಸ್ಪತಿಗಳಿಂದಲೇ ತಯಾರಾದುದು

ಸುಟ್ಟ ಗಾಯ, ಪೆಟ್ಟಿನ ಗಾಯ, ಕುರಿಕಜ್ಜಿಗಳಲ್ಲದೆ ಮತ್ತಿನ್ನಿತರ ಚರ್ಮವ್ಯಾಧಿಗಳನ್ನು ವನೌಷಧಿಗಳಿಂದಲೇ ತಯಾರಿಸಲ್ಪಟ್ಟ ಸಾಂಬಕನ್ನು ತಿಕ್ಕಿ ಗುಣಹೊಂದಿರಿ. ಅವುಗಳ ಕಲೆಗಳನ್ನು ಸಹ ಕಾಣದಂತೆ ಗುಣಪಡಿಸುವ ಔಷಧಗಳಲ್ಲಿ ಸಾಂಬಕ್ ಅತ್ಯುತ್ತಮವಾದುದು. ಶೀಘ್ರ ಚರ್ಮಕ್ಕೆ ತಾಗಿಸಿದರೆಂದರೆ ಕ್ಷಣದಲ್ಲಿ ಉರಿಯು ಕಡಿಮೆಯಾಗಿ ವಿಷರ್ಣವಾದ ಚರ್ಮವನ್ನು ಸರಿಪಡಿಸುವುದು. ರಕ್ತಕ್ಕೆ ಏನೊಂದು ಹಾನಿಯನ್ನು ತಾಗದೆ ಹುಣ್ಣುಗಳಲ್ಲಿಯ ಕ್ರಿಮಿಗಳನ್ನು ಬಹುಬೇಗನೆ ಕೊಲ್ಲುವುದು. ಚರ್ಮವ್ಯಾಧಿಗಳಿಗೂ, ಗಾಯಗಳಿಗೂ, ಹುಣ್ಣುಗಳಿಗೂ ಇದನ್ನು ಉಪಯೋಗಿಸಿ ಗುಣಲಾಭವನ್ನು ಪಡೆಯಿರಿ. ಎಲ್ಲಾ ಔಷಧಿ ಅಂಗಡಿಗಳಲ್ಲಿ ಕ್ರಯಕ್ಕೆ ಪಡೆಯಬಹುದು. ಬೆಲೆ ರೂ. 1. ಅಥವಾ ಡಬ್ಬಿಗೆ 2-1-0.

ಇದರಲ್ಲಿ ಕೊಬ್ಬಿನ ಮಿಶ್ರವಿಲ್ಲ.

ಸಾಂಬಕ್
Zam-Buk

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟಾರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟಾರ ಸರ್ವೀಸುಗಳು.

ಮುಂಬಾಯಿಯಿಂದ—ಪೂನಾ—ಬೆಳಗಾಂವ—ಧಾರವಾಡ—ಹುಬ್ಬಳ್ಳಿ—ಗೋವಾ ಇವೆಲ್ಲ ಕಡೆಗಳಿಂದ.

ಮಂಗಳೂರಿಗೆ—ಪುತ್ತೂರು—ಉಡುಪಿ—ಕಾರ್ಕಳ—ಬೆಳ್ತಂಗಡಿ—ವೇಣೂರು—ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.

ಅಲ್ಲದೆ

ಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ—ಯಾತ್ರಾಸ್ಥಳವಾದ ಬಾಬಾಬುಡಾನಗಿರಿ—ಕೈಗಾರಿಕೆಯ ಕೇಂದ್ರವಾದ ಭದ್ರಾವತಿ—ಶಿಲಾಶಿಲ್ಪದ ಬೇಲೂರು, ಹಳೆಬೀಡು—ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು—

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

Chikmagalur Public Conveyance Motor Service,

CHIKMAGALUR.

ವಿಚಿತ್ರ ಪ್ರಪಂಚ.

ಮಿದುಳಿಲ್ಲದ ಮಗು

ನ್ಯೂಯೋರ್ಕದಲ್ಲಿ ಮಿದುಳಿಲ್ಲದ ಒಂದು ವಿಚಿತ್ರ ಮಗುವು ಜನಿಸಿ, ೨೭ ದಿವಸಗಳ ಜೀವಿಸಿದ್ದು, ಮಡಿದಿರುವುದು. ಮನುಷ್ಯನ ಯಾವತ್ತೂ ಕಾರ್ಯಗಳು ಅಂದರೆ, ತಿನ್ನುವುದು, ಅಳುವುದು, ಚಲಿಸುವುದು, ನೋವನ್ನು ತಿಳಿಯುವುದು, ಮಿದುಳಿಲ್ಲದೆ ಆಗದು ಎಂದು ವೈದ್ಯಕೀಯ ಜನರ ಮಾತು. ಆದರೆ, ಈ ವಿಚಿತ್ರ ಮಗುವು ಮಿದುಳಿಲ್ಲದೆ ಕೂಗಿದುದು ಮಾತ್ರವಲ್ಲದೆ, ಆಹಾರವನ್ನು ಸ್ವೀಕರಿಸಿದೆ, ಕೈಕಾಲುಗಳನ್ನು ಅಲ್ಲಾಡಿಸಿವೆ. ಈ ಮಗುವನ್ನು ಪರೀಕ್ಷಿಸಿದ ವೈದ್ಯರು ಅದರ ತಲೆಯಲ್ಲಿ ಮಾತ್ರ ಒಂದು ದ್ರಾವಕವಿತ್ತೆಂದು ಹೇಳುತ್ತಿದ್ದಾರೆ. ಮಿದುಳಿಲ್ಲದೆ ಈ ಮಗುವು ನಾಲ್ವರು ದಿವಸಗಳ ಮೇಲೆ ಈ ರೀತಿಯಲ್ಲಿ ವರ್ತಿಸಿದುದರಲ್ಲಿ ಪ್ರಖ್ಯಾತ ವೈದ್ಯರು ದಿಗಿಲುಗೊಂಡಿರುತ್ತಾರೆ.

ಮೂರು ವರ್ಷ ವಯಸ್ಸಿನ ಬುದ್ಧಿವಂತೆ ಬಾಲಕಿ

ನ್ಯೂಯೋರ್ಕಿನಲ್ಲಿ ವಾಸವಾಗಿರುವ ಒಬ್ಬ ಜರ್ಮನ ವ್ಯಾಪಾರಸ್ಥನ ಮಗಳು. ಪ್ರಾಯ ಬರೀ ೩ ವರ್ಷ. ಚರಿತ್ರೆ, ಸಾಂಪತ್ತಿಕ, ಶಾಸ್ತ್ರ, ವಿಜ್ಞಾನ, ಭೂಗೋಳ ಇತ್ಯಾದಿಗಳಲ್ಲಿ ಯಾವತ್ತೂ ಪ್ರಶ್ನೆಗಳಿಗೆ ಉತ್ತರ ಕೊಡಬಲ್ಲಳು. ನ್ಯೂಯೋರ್ಕಿನ ಹಲವು ಮಂದಿ ಮಹನೀಯರ ಮುಂದೆ ಇವಳಿಗೆ ಕರಲಾಯಿತು. ಸಂಯುಕ್ತ ಅಮೇರಿಕದ ಈಗಿನ ಮತ್ತು ಮುಂಚಿನ ರಾಷ್ಟ್ರೀಯ ವಿಷಯಗಳ ಕುರಿತು ಪ್ರಶ್ನೆಗಳನ್ನು ಕೇಳಲಾಯಿತು. ಬಾಲಕಿಯು ಇದನ್ನು ಏನೂ ತಪ್ಪದೆ ಸರಿಯಾದ ರೀತಿಯಲ್ಲಿ ಉತ್ತರಿಸಿದಳು.

ಹಿಂದೂ ದೇಶದ ತರುಣರ ಸಾಹಸ

ಮುಂಬಾಯಿಯ ಎನ್. ಎಫ್. ದಲಾಲ ಮತ್ತು ಕೆ. ಟಿ. ಪೊಚ್ಖನ್ನವಾಲಾ ಎಂಬ ಇಬ್ಬರು ಯುವಕರು ವಿಮಾನದಲ್ಲಿ ಹೊರಟು ಕರಾಚಿ, ಬಗದಾದಾ (ಅರೇಬಿಯಾ), ಅಲೆಕ್ಸಾಂಡ್ರಿಯಾ ಕಾರ್ಟೂಮ, ನೈರೋಬಿ (ಆಫ್ರಿಕಾ), ಮಾರ್ಗವಾಗಿ ದರ್ಬಾನನ್ನು ಸೇರಿರುವರು. ಮೇಲಿನ ಹಲವು ಕಡೆಗಳಲ್ಲಿ ನಿಂತು, ಅರಣ್ಯಗಳಲ್ಲಿ ಮತ್ತು ಮರಳು ಪ್ರದೇಶಗಳಲ್ಲಿ ತುಂಬಾ ಸಂಕಷ್ಟ ಅನುಭವಿಸಿ ಆಫ್ರಿಕದ ರೋಡೋಸಿಯದ ಮಸಿಕಾ ಎಂಬ ಹಳ್ಳಿಯನ್ನು ಸೇರಿದರು. ವಿಮಾನದಲ್ಲಿ ಇಷ್ಟು ಸಾಹಸಕರ ಪ್ರಯಾಣ ಮಾಡಿದಲ್ಲಿ ಇವರೇ ಮೊದಲಿನವರು. ಕೆಲವರು ಇವರಿಗೆ ಭಯಂಕರ ಹಾನಿ ಒದಗಿದೆ ಎಂದು ತಿಳಿದಿದ್ದರು.

ಒಂದು ಹುಡುಗಿಯ ವಿಚಿತ್ರಕರ ಬದಲಾವಣೆ.

ಹಂಗೇರಿಯದಲ್ಲಿ ೧೭ ವರ್ಷದ ಹುಡುಗಿಯೊಬ್ಬಳು ೪೦ ವರ್ಷದ ಸ್ಪೈನ ಸ್ತ್ರೀಯಾಗಿ ಬದಲಾವಣೆ ಹೊಂದಿದಳು. ಈ ಬದಲಾವಣೆಯ ಕುರಿತು ಹಂಗೇರಿಯದ ಪತ್ರಿಕೆಗಳು ಹೀಗೆನ್ನುತ್ತಿದ್ದಾವೆ. "ಈ ಹುಡುಗಿ ಮೊನ್ನೆ ನರಗಳ ಸಂಬಂಧದ ರೋಗದಿಂದ ಪ್ರಜ್ಞೆ ತಪ್ಪಿದ್ದಳು. ಚೇತರಿಸಿಕೊಂಡವಳು, ತನ್ನ ಮಾತೃಭಾಷೆಯನ್ನು ಮರೆತವಳಾಗಿ, ಸ್ಪೆನಿಷ್ ಭಾಷೆ ಮಾತನಾಡಲಾರಂಭಿಸಿದಳು. ಮತ್ತು ತಾನು ಪೂರ್ವ ಸ್ಪೆನಿಷ್ ಹೆಂಗುಸಳು, ತನಗೆ ೧೦ ಮಕ್ಕಳುಗಳು ಇವೆ, ಮತ್ತು ತನ್ನ ಸ್ಪೈನಿನ ಮೆದ್ರಿಡ್ ತನ್ನ ಮಾತೃ ದೇಶವೆಂದು ತಿಳಿಸಿದಳು. ಮೆದ್ರಿದನ್ನು ಇಷ್ಟರ ತನಕ ನೋಡಿದ ಈ ಹುಡುಗಿಯು ಅದನ್ನು ಸರಿಯಾಗಿ ವರ್ಣಿಸಿದಳು. ನಮ್ಮ ಪ್ರತಿನಿಧಿಗಳ ಇಚ್ಛೆಯ ಮೇರೆಗೆ ಸ್ಪೆನಿಷ್ ಭಾಷೆಯಲ್ಲಿ ಕೆಲವು ವಾಕ್ಯಗಳನ್ನು ಬರೆದಳು." ಅಧ್ಯಾತ್ಮಿಕರು ಇದು ಒಂದು ವಿಚಿತ್ರ ತರದ ಆತ್ಮ ಬದಲಾವಣೆ ಎಂದು ಹೇಳುತ್ತಿದ್ದಾರೆ.

ಮೊಟ್ಟೆ ಮತ್ತು ಹಾವು.

ಕೋಳಿಯ ಮೊಟ್ಟೆಯೊಳಗಿನ ನೀರಿನ ಬಣ್ಣದ ದ್ರಾವಕವು ವಿಷವೋ? ಅಲ್ಲ. ಆದರೆ ವಿಜ್ಞಾನಿಗಳ ಕೆಲವು ಪ್ರಕಟಣೆಗಳನ್ನು ಓದಿದರೆ ಅದು ಸರ್ಪದ ವಿಷಕರ ದ್ರಾವಕದ ಹಾಗೆಯೇ ಇರುವುದೆಂದು ತಿಳಿದುಬರುವುದು. ಆದರೆ ಈ ಪ್ರಕಟಣೆಗಳಿಂದ ಯಾರೂ ದಿಗಿಲುಗೊಳ್ಳಬಾರದು. ಈ ಪ್ರಕಟಣೆಯು ಮುಂದುವರಿದು ಹೀಗೆನ್ನುತ್ತದೆ. "ಈ ಎರಡು ದ್ರಾವಕಗಳು, ಎರಡು ಒಂದೇ ತರದ ಮೂಲ ವಸ್ತುಗಳು, ಒಂದೇ ರೀತಿಯಲ್ಲಿ ಒಟ್ಟುಗೂಡುವಿಕೆಯಿಂದ ಫಲಿಸುತ್ತವೆ. ಆದರೆ, ಇವುಗಳ ತಯಾರಿಯು ಒಂದೇ ರೀತಿಯಲ್ಲಿ ಆಗುವುದಿಲ್ಲ. ಇದೇ ಇವುಗಳ ವ್ಯತ್ಯಾಸ."

ಮನುಷ್ಯನು ನಿರ್ಮಿಸಿದ ನದಿ

ರಷ್ಯದ ವೋಲ್ಗಾ ಮತ್ತು ಮೊಸ್ಕೊದ ನಡುವೆ ಜಗತ್ತಿನ ಅತಿ ಮಹತ್ತಾದ ಕಾಲುವೆಯು ನಿರ್ಮಿಸಲಾಗುವುದು. ಇದು ೧೯೩೭ರ ಒಳಗೆ ಸಿದ್ಧವಾಗುವುದು. ಇದಕ್ಕೆ ಸೊವಿಯಟ್ ಸರಕಾರದವರು ೧೬ ಕೋಟಿ ರೂಪಾಯಿ ವ್ಯಯಿಸಿವರು. ಈ ಕಾಲುವೆಯಿಂದಾಗಿ ಹಲವು ನೀರಿನ ಪ್ರವಾಹದಿಂದ ವಿದ್ಯುತ ಶಕ್ತಿಯನ್ನು ತೆಗೆಯುವ ಶಕ್ತಾಲಯಗಳು ಸೃಷ್ಟಿ ಹೊಂದುವುವು. ಈ ಶಕ್ತಾಲಯಗಳಿಂದ ಈ ನದಿ ಕಾಲುವೆಯ ಸುತ್ತ ಮುತ್ತಲಿರುವ ಎಲ್ಲಾ ನಗರಗಳಿಗೆ ಮತ್ತು ಕೃಷಿಶಾಲೆಗಳಿಗೆ ವಿದ್ಯುಕ್ತ ಶಕ್ತಿ ಒದಗಿಸಲಾಗುವುದು. ಈ ಕಾಲುವೆಯು ಕೈಗಾರಿಕೆ ಪ್ರದೇಶಗಳನ್ನು, ಕೃಷಿ ಪ್ರದೇಶಗಳಿಗೆ ಕೂಡಿಸುವುದು. ಮೊಸ್ಕೊದಿಂದ ಲೇನಿಗಾರ್ಡ ದೇಶದ ದೂರವನ್ನು ೨೦೦ ಮೈಲು ಇಳಿಸುವುದು. ಪ್ರಾಚೀನ ಕಾಲದಲ್ಲಿ ೨೦೦೦ ಮೈಲು ಉದ್ದದ ಕಾಲುವೆ ಚೀನದಲ್ಲಿ ನಿರ್ಮಿಸುದುದಲ್ಲದೆ ಇಷ್ಟರ ತನಕ ಇಷ್ಟು ಪ್ರಮಾಣದ ಕಾಲುವೆಯು ಎಲ್ಲಿಯೂ ಸೃಷ್ಟಿ ಹೊಂದಲಿಲ್ಲ. ದೊಡ್ಡ ನೌಕೆಗಳು ಇದರಲ್ಲಿ ಚಲಿಸುವಂತೆ ಮಾಡುವರು.

(೭ನೇ ಪುಟದಿಂದ ಮುಂದುವರಿದುದು.)

ನಮ್ಮ ಬಾಲಿಕೆಯರ ವಿದ್ಯಾಭ್ಯಾಸ.

ನಮ್ಮ ಯುವಕರಿಗೆ ದೊರಕುವ ವಿದ್ಯಾಭ್ಯಾಸವು ನಮ್ಮ ಸ್ತ್ರೀಯರು ಪಡೆದರೆ, ಅದರಿಂದ ಅವರಿಗೆ ಯಾವ ಉಪಕಾರವಾದೀತು? ಈಗಿನ ವಿದ್ಯಾಭ್ಯಾಸದ ಕ್ರಮದಿಂದ, ಯುವಕರು ಪದವಿದರರಾಗಿ ನಿರುದ್ಯೋಗಿಗಳಾಗಿ ಬಾಳುವುದೆ ಎಲ್ಲೆಲ್ಲೂ ಕಾಣಿಸುತ್ತದೆ. ಅವರ ಸಹಪಾಠಿಗಳಾಗಲು ಬಾಲಿಕೆಯರ ಉದ್ದೇಶವೊ? ಅವರು, 'ಮಗುವು ಮನುಷ್ಯನ ತಂದೆ', ಅಂಥ ಮಗುವನ್ನು ಪಡೆದು, ಅತನ ಆರೋಗ್ಯ ಬುದ್ಧಿ ವಿಚಾರ ಚಿಕ್ಕಂದಿನಿಂದಲೆ ರೂಪು ಹೊಂದುವಂತೆ ಮಾಡಲು, ಮಾತ್ರ ವಿದ್ಯಾಭ್ಯಾಸ ಪಡೆಯಬೇಕು ಎಂದು ಮೈಸೂರು ಯುವರಾಣಿಯವರ ಮತ. ಸ್ತ್ರೀಯರಿಗೆ ಯೋಗ್ಯ ಜನಾಂಗರಚನೆಯಾಗಲೂ ಮತ್ತು ಸ್ತ್ರೀಯರಲ್ಲಿ ಬುದ್ಧಿವಿಕಾಸ ಮಾಡಲು ಮಾತ್ರ ಅವರಿಗೆ ವಿದ್ಯಾಭ್ಯಾಸ ಕೊಡತಕ್ಕದು. ಸ್ತ್ರೀಯರು ಪ್ರೌಢ ವಿದ್ಯಾಭ್ಯಾಸವೆ ಮುಖ್ಯ ಧ್ಯೇಯವಾಗಿಟ್ಟು, ತಮ್ಮ ಸ್ತ್ರೀತ್ವವನ್ನು ಮರೆತು, ಪುರುಷರಂತೆ ವಿದ್ಯಾಭ್ಯಾಸಪಡೆದರೆ ಜನಾಂಗಕ್ಕೆ ಅದರಿಂದ ಹೆಚ್ಚು ಹಾನಿಯು ಉಂಟಾಗುವುದು. ಇಷ್ಟು ಮುಂದುವರಿದ ಜಪಾನು ದೇಶದಲ್ಲಿ ಸ್ತ್ರೀಯರಿಗೆ ತಮ್ಮ ಮನೆವಾರ್ತೆ ಕೆಲಸ ಸರಿಯಾಗಿ ಕಾರ್ಯಗಿಸಲು ಮಾತ್ರ ತಕ್ಕ ವಿದ್ಯಾಭ್ಯಾಸವನ್ನು ಕೊಡುತ್ತಿದ್ದಾರೆ. ಜಪಾನಿಯು ಸ್ತ್ರೀಯರನ್ನು ಒಳ್ಳೆ ಕಾಯಿಂದಿರಾಗಿ ಮಾಡುವುದೆ ಅವರ ಮುಖ್ಯ ಉದ್ದೇಶ. ಜರ್ಮನಿಯಲ್ಲಿ ಕೂಡ, ಸ್ತ್ರೀಯರಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಬಾರದಾಗಿ ಅಪ್ಪಣೆಗಳು ಹೊರಟಿವೆ. ನಾವು ಇವರ ಮಾರ್ಗ ಅನುಸರಿಸಬಾರದೆ ಎಂದು ನಮ್ಮ ಕೆಲವು ಮುಂದಾಳುಗಳ ಕೋರಿಕೆ.

ಇರೇಕಿನ ಭಾರತೀಯರು

ವಿಷಯಕವಾಗಿ ಕವಿ ರವೀಂದ್ರನಾಥ ಠಾಗೂರರಿಗೆ ಬಂದ ಪತ್ರವು ಪತ್ರಿಕೆ ಮೂಲಕ ಇಂಡಿಯಾ ಸರಕಾರದ ಗೊತ್ತುವಳಿಗೆ ಬಂದು, ಇರೇಕಿನಿಂದ ಹೊರಹೊರಡಲು ಅಪ್ಪಣೆಕೊಟ್ಟು, ಇರೇಕಿನ ಸರಕಾರದೊಡನೆ ಟೆಲಿಗ್ರಾಫ್ ಮೂಲಕ ಪತ್ರವ್ಯವಹಾರ ಪ್ರಾರಂಭವಾದಿರುತ್ತಾರೆ. ರವೀಂದ್ರರ ಪತ್ರವು ತಿಳಿಸಿದ ಸಂಗತಿಗಳನ್ನು ಕುರಿತು. ಅವರೊಡನೆ ಪ್ರಶ್ನೆಗಳನ್ನು ಕೇಳಿದ ಈ ಪತ್ರಕ್ಕೆ ಇನ್ನೂ ಉತ್ತರವು ಬರಲಿಲ್ಲ.

ಕೊಂಗ್ರೆಸ್ ಕಲಹವನ್ನು ನಿವಾರಿಸಲು

ಏಕಾಧಿಪತಿ (ಡಿಕ್ಟೇಟರ) ಸಹಾಯವು ಬೇಕಾಯಿತು. ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಕಮಿಟಿಯಲ್ಲಿ ಭಯಂಕರ ಕಲಹವುಂಟಾಗಿ, ಅಲ್ಲಿ ಜರಗಬೇಕೆಂದಿದ್ದ ಕೊಂಗ್ರೆಸ್ಸಿನ ಮುಂದಿನ ಅಧಿವೇಶನವು ಬೇರೊಂದು ಪ್ರಾಂತ್ಯದಲ್ಲಿ ಜರಗಿಸುವ ಆಲೋಚನೆಯನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಮಾಡಬೇಕಾಯಿತು. ಈಗ ಶ್ರೀ ಆಚಾರ್ಯ ಕೃಪಾಲಾನಿಯವರಂತಹ ಮಹನೀಯರು ಮುಂದೆ ಬಂದು, ತಮ್ಮ ಪ್ರಾಂತ್ಯದ ಹೆಸರಿಗಾಗಿ ಏಕಾಧಿಪತದಿಂದ ಈ ಕಲಹವನ್ನು ಬದಿಯಲ್ಲಿಡುವಂತೆ ಮಾಡಿ, ಕಾಂಗ್ರೆಸ್ ಅಧಿವೇಶನದ ಕುರಿತು ಸಿದ್ಧತೆಗಳು ಆಗುತ್ತಿವೆ. ಪ್ರಜಾಪ್ರಭುತ್ವಕ್ಕಾಗಿ ಹೋರಿಯಾಡುವ ಈ ನಮ್ಮ ಕಾಂಗ್ರೆಸ್ಸಿಗೆ ಇಲ್ಲಿ ಏಕಾಧಿಪತಿಯು ಅಗತ್ಯ ಬಿತ್ತು. ಅಂತೆಯೆ ಬಂಗಾಳದ ಕಾಂಗ್ರೆಸ್ ಕಮಿಟಿಯಲ್ಲುಂಟಾದ ಭೇದವಿಚ್ಛೇದಗಳನ್ನು ಹೋಗಲಾಡಿಸಲು, ಶ್ರೀ ಶರತ್ಚಂದ್ರ ಬೋಸರನ್ನು ಕರೆದಿರುವರು. ಇಲ್ಲಿ ಕೂಡ ಕೊಂಗ್ರೆಸ್ಸಿನ ಗೌರವವನ್ನು ರಕ್ಷಿಸಲು, ಬೋಸರು ಏಕಾಧಿಪತ್ಯವನ್ನು ವಹಿಸಬೇಕಾಗುವುದೆ?

ರಾಷ್ಟ್ರಸಭೆಯ ಸ್ವರ್ಣೋತ್ಸವ

ಬರುವ ದಶಂಬರ ತಾರೀಕು ೨೮ರಲ್ಲಿ, ಕೊಂಗ್ರೆಸ್ (ರಾಷ್ಟ್ರಸಭೆಯು) ಸಭೆಯು ಸ್ಥಾಪನೆ ಹೊಂದಿ ೫೦ ವರ್ಷಗಳು ಪೂರ್ತಿಯಾಗುವುದೆಂದು, ಅಖಿಲ ಹಿಂದೂಸ್ಥಾನವು ಈ ಸ್ವರ್ಣೋತ್ಸವವನ್ನು ಆಚರಿಸುವಂತೆ ಅಧ್ಯಕ್ಷ ಬಾಬೂ ರಾಜೇಂದ್ರ ಪ್ರಸಾದರ ಅನುಜ್ಞೆಯಾಗಿರುವುದು. ಭಾರತ ವರ್ಷದಲ್ಲಿ ರಾಜಕೀಯ ವಾತಾವರಣವನ್ನು ಉಂಟುಮಾಡಿ, ರಾಷ್ಟ್ರದ ಈಗಣ ಪರಿಸ್ಥಿತಿಗೆ ಮೂಲಕಾರಣರೋ, ಮುಂದಣ ಅಭಿವೃದ್ಧಿಗೆ ದಾರಿತೋರಿಸುವವರೋ, ಎಂಬಷ್ಟು ಹೆಚ್ಚಿನ ಗೌರವಕ್ಕೆ ಯಾರು ಅರ್ಹರೋ ಅಂಥ ಭಾರತೀಯರೆಲ್ಲರು ಸೇರಿರುವ ಈ ಸಂಸ್ಥೆಯು ಸಕಲರಿಗೆ ಸಮಾನವಾಗಿಯೂ ಏಕಪ್ರಕಾರವಾಗಿ ಸ್ವತಂತ್ರಧೋರಣೆಯುಳ್ಳದೂ ಆಗಿ ಬೆಳೆದು ಬಂದಿರುವುದರಿಂದ, ಜನತೆಯಲ್ಲಿ ಮನೋಭೇದಗಳಾವುವೂ ಇಲ್ಲದೆ ಸರ್ವರೂ ಈ ಉತ್ಸವದಲ್ಲಿ ಭಾಗಿಗಳಾಗುವುದು ಅಗತ್ಯವಾಗಿದೆ. ರಾಷ್ಟ್ರಸಭೆಯ ಧ್ಯೇಯ ಸಾಧನೆ ಮೊದಲಾದುವನ್ನು ತಾವೂ ತಿಳಿದುಕೊಂಡು, ಇತರರಿಗೂ ಅದನ್ನು ತಿಳಿಯಹೇಳಿ ಕೊಂಗ್ರೆಸ್ ಪಕ್ಷದ ಬೆಂಬಲವನ್ನು ಹೆಚ್ಚಿಸುವುದು ಸ್ವರ್ಣೋತ್ಸವದ ಯಥಾರ್ಥ ವೈಭವರೂಪವೆಂದು ಹೇಳಬಹುದಾಗಿದೆ. ಇದಕ್ಕಾಗಿ ಎಂದಿನಂತೆ ಕೈಕೊಳ್ಳುವ ಕಾರ್ಯಕ್ರಮದಿಂದ ಜನರಲ್ಲಿ ಪ್ರತ್ಯಕ್ಷವಾಗಿ ಕೊಂಗ್ರೆಸ್ಸಿನ ಧ್ಯೇಯಗಳು 'ಜನತೆಯ ಚಿತ್ತಾಕರ್ಷಣ ಮಾಡುವ ಹಾಗೆ ಮನೋಹರವಾಗಿ ಏರ್ಪಟ್ಟು, ಕೃತಾರ್ಥವಾಗುವ ಹಾಗೆ' ಸ್ಥಳೀಯ ಸಮಿತಿಗಳು ನೇಮಕಹೊಂದುವುವು. ದೇಶದಲ್ಲಿ ಸುವ್ಯವಸ್ಥಿತವಾಗಿ ರಾಷ್ಟ್ರೀಯ ರಥವನ್ನು ಇದುವರೆಗೆ ಮುಂದೆ ತಂದ ಈ ಪಕ್ಷವೊಂದೇ ಸರ್ವಮಾನ್ಯವಾಗಿರುವ ಕಾರಣ, ಸಮಸ್ತ ಪಕ್ಷಗಳೂ ಒಂದಾಗಿ ಈ ಜ್ಯುಬಿಲಿ ಉತ್ಸವವನ್ನು ವಿಜೃಂಭಣೆಯಿಂದ ಅಲ್ಲದಿದ್ದರೂ ಜನಪ್ರಿಯವಾಗುವಂತೆ ಶಾಂತಿಯಿಂದ ಸಂತೋಷದಿಂದ ಜರಗಿಸಬೇಕೆಂಬುದೇ ರಾಷ್ಟ್ರಸಭಾ ನಾಯಕರ ಆಕಾಂಕ್ಷೆ, ಸಂದೇಶ.

ಈಗ ಬಂದ ಯುದ್ಧ ವಾರ್ತೆಗಳು.

ಇಟಲಿಯಾನರು ಇನ್ನೂ ಬಿರುಸಾಗಿ ಮುಂದುವರಿಯುವರು.

ಇಷ್ಟರ ತನಕ ಮಾರ್ಗೋಪಾಯಗಳನ್ನೂ ನೀರಿನ ಬಾವಿಗಳನ್ನೂ ರಚಿಸಿ, ಮೆಲ್ಲ ಮೆಲ್ಲನೆ ಮುಂದುವರಿಯುತ್ತಿರುವ ಇಟಲಿಯಾನರು ಹೊಸ ನಾಯಕರಾದ ಮಾರ್ಶಲ್ ಬೊಡೊಗ್ಲಿಯೊರ ಅಧಿಕಾರದಲ್ಲಿ ಬಿರುಸಾಗಿ ಮುಂದೆ ಸಾಗುವರು. ಮಿಂಚಿನೋಪಾದಿಯಲ್ಲಿ ಹಬಸಿಗಳ ಮೇಲೆ ದಾಳಿಸಬೇಕೆಂದು, ಇವರು ಸಿದ್ಧತೆಗಳನ್ನು ಮಾಡಿರುತ್ತಾರೆ. ವಿಮಾನಗಳಿಂದಲೂ ಟೆಂಕುಗಳಿಂದಲೂ ಮತ್ತು ಇತರ ಯಂತ್ರಗಳ ಮೂಲಕ ರಭಸದಿಂದ ಚಲಿಸುವ ವಾಹನಗಳ ಮೂಲಕ ಇಟಲಿಯಾನ ತಂಡವು ಮುಂದುವರಿಯುವುದು. ಜನರಲ್ ದಿ ಬೋನೋರವರು ಸ್ವದೇಶಕ್ಕೆ ತೆರಳಿದರು.

ಹಬಸಿಗಳ ಚಕ್ರವರ್ತಿ

ಉತ್ತರ ದಿಕ್ಕಿನ ರಣರಂಗಕ್ಕೆ ಬೇಗನೆ ತೆರಳುವರು. ೧೬ ಲೋರಿಗಳಲ್ಲಿ ಇವರ ಉಪಕರಣಗಳನ್ನು ಅಲ್ಲಿಗೆ ಸಾಗಿಸಿರುತ್ತಾರೆ. ಇಲ್ಲಿನ ಡೆಸ್ಸಿ ಎಂಬಲ್ಲಿ ಇವರು ಮೂಲಸ್ಥಾನ ಮಾಡುವರು.

ಸೆಂಕ್ಷನುಗಳಿಂದ

ಮೊನ್ನೆ ಸೋಮವಾರ ತಾ. ೧೮ರಲ್ಲಿ ಇಟ್ಯಾಲಿಗೆ ಬಂದ ಸೆಂಕ್ಷನುಗಳಿಂದ ಇಟಲಿಗೆ ಆರ್ಥಿಕ ಸಹಕಾರವೂ, ಕಾರಣ ಸಾಮುಗ್ರಿಗಳು ದವಸಧಾನ್ಯ, ಯುದ್ಧೋಪಕರಣಗಳು, ಕಲ್ಲಿದ್ದಲು, ಪೆಟ್ರೋಲು ಮೊದಲಾದುವು ಜನಪದ ಮಂಡಳದ ಸದಸ್ಯಜನಾಂಗಗಳಿಂದ ದೊರಕದು. ಈ ಸೆಂಕ್ಷನುಗಳ ದೆಸೆಯಿಂದ ಇಟಲಿಯಲ್ಲಿ ಮೇಲಿನ ಸಾಮಾನುಗಳನ್ನು ವ್ಯಯಿಸುವುದು ಕಡಿಮೆಯಾಗಲು ಹಲವು ಕ್ರಮಗಳು ಜ್ಯಾರಿಗೆ ಬಂದಿವೆ. ರೈಲ್ವೆ ಸಂಚಾರವನ್ನು ಕಡಿಮೆ ಮಾಡಿರುತ್ತಾರೆ. ಜನರು ತಿನ್ನುವುದನ್ನು ನಿಶ್ಚಿತ ಕಡಿಮೆ ಮಾಡಿದ್ದಾರೆ. ದಿನದ ಪ್ರಚಾರ್ಯವಹಾರಗಳು ಬೇಗನೆ ಕೊನೆಗೊಳ್ಳುತ್ತಿವೆ.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 681/1935.

S. C. I. A. 256/1935.

ವಾದಿ–ಬಾಬಯ್ಯಯಾನೆ ವೆಂಕಟ್ರಮಣ ಶ್ಯಾನುಭಾಗ.

ಪ್ರತಿವಾದಿ–ಕೃಷ್ಣಪ್ಪ ಕಾರಂತ.

ಪ್ರತಿವಾದಿಯ ಮೇಲೆ ವಾದಿಯು ಉಪ್ಪಿನಕುದ್ರು ಗ್ರಾಮದ ಪಟ್ಟಾ ನಂಬ್ರ 48ನೇ ಪಟ್ಟೆಗೆ ಪ್ರತಿವಾದಿಯಿಂದ ಸಲ್ಲತಕ್ಕ 1344ನೇ ಪಸಲಿ ವಸೂಲಿಯ ತೀರ್ವೆ ತೆರದೇ ಇದ್ದ ಬಾಬಿನಲ್ಲಿ ಗವರ್ನಮೆಂಟಿನವರು ಸದ್ರಿ ತೀರ್ವೆಗೆ ಸಮ್ಮಂಧಪಟ್ಟ ಆಸ್ತಿಗಳನ್ನು ಏಲಂ ಮಾಡಲಿಕ್ಕೆ ಉದ್ಯುಕ್ತರಾದಾಗ್ಯೆ ವಾದಿಯು ಪ್ರತಿವಾದಿಯ ಬಗ್ಗೆ ಸರಕಾರಕ್ಕೆ ತೆತ್ತ ತೀರ್ವೆ ರೂ. 125-4-10 ವ ಅದರ ಬಡ್ಡಿ ರೂ. 0-10-6 ಕೂಡಾ ರೂ. 125-15-4ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಪ್ರತಿವಾದಿಯ ಮೇಲೆ ಮಾಡಿದ ದಾವೆಯ ತನ್ನಿ ಮತ್ತು ಅದೇ ದಾವೆಗೆ ಸಮ್ಮಂಧಪಟ್ಟ ಮೇಲೆ ಹೇಳಿದ S. C. I. A. 256/1935ನೇ ನಕ್ಲು ಹುಟ್ಟುವಳಿಯ ಜಪ್ತಿ ಅರ್ಜಿಯ ನೋಟೀಸು ತನ್ನಿ ಸಹಾ ತಾ. 2-12-'35ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪಯಿದ್ದರೆ ತನ್ನಿ ದಿವಸ 11 ಗಂಟೆಗೆ ಮಜ್ಕೂರು ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

ಮೊಕ್ಕಾಂ ಕುಂದಾಪುರ 18-11-'35. K. Vittaldas Shenai, ವಾದಿಯ ಕಡೆ ಎಡ್ವೊಕೇಟ್.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purnah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ

ಐಷಿಡಾಯಿಜ್ಞ
ಸಾಗರ ಪಲಾರಿ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಬಲ್ಲರಿ
ಡಾ॥ ಗೌತಮ ರಾವ್
ಕೇಶವರವರ
ಫೋಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಗಿರಗಾಂವ್, ಮುಂಬಾಯಿ ೪.
ಸ್ಟಾಕಿಸ್ಟ್ - ಪೈ ಕಂಪನಿ, ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.

THE 1935 MODEL

HEAVY DUTY TRUCK



For Your Haulage

U SUBRAYA NAYAK,
FORD DEALER
SHIMOGA——AND——MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago Insect bites, Herpes Wounds, Cuts, Colds Headache. It is a complete substitute for the domestic medicine chest. Try once this unequalled remedy. In ¼oz tin As 8/- In oz. jar As 12/-

Superior Red Balm For relieving pains in muscles and on skin. Directions for use with the bottle Price As 12 - only

Wurmteufel Is a sovereign remedy against all sorts of worms in stomach and in the intestines. Physicians enjoying authoritativeness describe it as radical remedy and warmly recommend it. All those who suffer from worms, children and adults try this unique remedy and be freed from your ailment. Price As 10 per packet

Pocket Inhaler For coughs and hoarseness headache catarrh colds, use this inhaler and you will be relieved immediately. Price per inhaler As 6 & As 8

Po-Ho Fluid For Asthma, Indigestion, toothache lumbago, a sure remedy in all cases. Price As 6 and Re 1/ per phial

Cough Cure An infallible remedy for coughs of all kinds bronchitis, hoarseness. Particulars in bottle Price As. 12 - for 3 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As 1 3, 2 6 3, 4

Basel Mission Book Depot
Mangalore, Branches in Codialbail, Hubli, Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

[ಪತ್ರವ್ಯವಹಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ.]

ಸೊಲಿಸಿಂಗ ಅಮೇರಿಕನ್ ಶೋ.

ಇದೊಂದು ಇಲ್ಲಿಗೆ ಬಂದು ಕೆಲವು ದಿನಗಳಿಂದ ...ದರ್ ವ್ಯಾನ್ ಎಲಿಮೆಂಟರಿ ಶಾಲೆಯಲ್ಲಿ ತನ್ನ ಪ್ರಯೋಗಗಳನ್ನು ತೋರಿಸುತ್ತಲಿದೆ. ಹೊರಗಿನಿಂದ ...ಗೆ ನೋಡುವವರಿಗೆ ಇದು ನಾಟಕ ಸರ್ಕಸು ...ಂಬ ವಿವಿಧ ವಿನೋದಾವಳಿಗಳನ್ನು ಪ್ರದರ್ಶಿಸಿ ಜನರ ಮನೋರಂಜನೆ ಮಾಡುವ ಸಂಸ್ಥೆಯೆಂದು ತೋರಿಸಿ...ನಿಜವಾಗಿ ಇದು ಅಂಥ ಸಂಸ್ಥೆಯಲ್ಲ. ಸುಧಾರಿಕ...ದಲ್ಲಿ ಜುಗಾರಾಡುವುದೇ ಇದರ ಕಾರ್ಯಕ್ರಮ. ...ಂಗಳೂರಿಗೆ ಬಂದ ಗನ್ ಬೋಟ್ ಜಾಕಿನ ಪಂಥಯ...ವರಿಗೆ, ಇದು ಅದರ ಒಂದು ಮರಿ ಎಂದು ಹೇಳಿದರೆ ...ತ್ತು ಅರ್ಥವಾದೀತು. ಜುಗಾರಾಡುವದು ಸರಕಾ...ರಿ ಕಾಯಿದೆ ಕಾನೂನುಗಳಿಗೆ ವಿರೋಧವಾಗಿರುತ್ತ...ಗಾರಾಟದ ಈ ಹೊಸ ಕ್ರಮವನ್ನು ಸರಕಾರದವರು ...ಗೆ ನಿಷೇಧಿಸದೆ ಇದ್ದಾರೋ ಗೊತ್ತಾಗುವುದಿಲ್ಲ. ...ಗಿದ್ದರೂ ಇಂಥ ಪ್ರದರ್ಶನಗಳಿಂದ ಜನರ ನೈತಿಕ ...ರ್ಶ ಹಾನಿಯಾಗುವದು ನಿಶ್ಚಯ. ಪ್ರಜೆಗಳ ನೈತಿಕ ...ರ್ಶ ಉನ್ನತಿ ಅವನತಿಗಳಿಗೆ ಸರಕಾರವೇ ಜವಾಬ್ದಾರ...ಗಿರುವದು ನಿಜವಾದರೆ, ಇಂಥ ಸಂಸ್ಥೆಗಳು ಎಲ್ಲಿಯೂ ಪ್ರದರ್ಶನಗಳಾಗದಂತೆ, ಮತ್ತು ಅವುಗಳಿಗೆ ಯಾವುದೇ ...ದ ಪ್ರೋತ್ಸಾಹ ದೊರೆಯದಂತೆ ನೋಡಿಕೊಳ್ಳು...ವು ಸರಕಾರದ ಕರ್ತವ್ಯವಿರುತ್ತದೆ. ಆದುದರಿಂದ ...ಜಿಲ್ಲಾ ಕಲೆಕ್ಟರ ದೊರೆಗಳವರು ಈ ವಿಷಯದಲ್ಲಿ ...ಹ ಸಂಮರ್ಶೆ ತೆಗೆದುಕೊಂಡು ಪ್ರಜೆಗಳ ಕಲ್ಯಾಣ...ವನ್ನುಂಟುಮಾಡುವ ಉಚಿತ ವ್ಯವಸ್ಥೆ ಮಾಡುವರೆಂದು ...ಬಲಂಗಿದೆ. ಆರ್ಥಿಕ ಮುಗ್ಗಟ್ಟಿನ ಈ ಕಾಲದಲ್ಲಿ ...ಗಾದರೂ ಮಾಡಿ (?) ನಾಲ್ಕು ಕಾಸುಗಳನ್ನು ಗಳಿಸ...ಕೆಂದು ಪ್ರಜೆಗಳ ವಿಚಿತ್ರ ಮನೋಗತಿ ಇರುವಾಗ...ಗೆ ಮುಂಜಾಗ್ರತೆಯು ಅತ್ಯಂತಾವಶ್ಯಕವಾಗಿರುತ್ತದೆ.

ನವೀನ ರೀತಿಯ ಈ ಜುಗಾರಾಟವನ್ನು ಶಾಲಾ ವಿದ್ಯಾರ್ಥಿಗಳಂತಹ ಸಾರ್ವಜನಿಕ ಸ್ಥಾನಗಳಲ್ಲಿ ಆಡಿಸುವದು ಉಚಿತವಲ್ಲ. ನಮ್ಮ ಜಿಲ್ಹಾ ಬೋರ್ಡು ಕೆಲವು ...ಗಳ ಆಸೆಗೆ ಒಳಪಟ್ಟು ಇಲ್ಲಿಯ ಬೋರ್ಡ ...ನ ಶಾಲೆಯಲ್ಲಿ ಮೇಲ್ಕಂಡ ಕಂಪನಿಗೆ ಆಶ್ರಯ ...ಕೊಟ್ಟಿದ್ದು ಸರಿಯಾಗಲಿಲ್ಲವೆಂದೂ ಅದರಿಂದಾಗಿ ಎಳೆ ...ಮಕ್ಕಳಿಗೆ ಕೆಟ್ಟ ಆದರ್ಶವನ್ನು ತೋರಿಸಿ ಅವರು ...ದುರ್ಮಾರ್ಗಿಗಳಾಗುವಂತೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ...ವಾಗಿ ಸಹಾಯ ಮಾಡಿದಂತಾಯಿತೆಂದೂ ಇಲ್ಲಿಯ ...ದ್ವಾಂಸರ ಸದ್ಗೃಹಸ್ಥರ ಅಭಿಪ್ರಾಯವಿರುತ್ತದೆ. ಕಂಪನಿಗೆ ಆಶ್ರಯ ಕೊಟ್ಟಿದ್ದರಿಂದ ಶಾಲೆ ಕೆಲಸಕ್ಕೆ ...ಲ್ಲಿ ಮತ್ತಿಗೆ (?) ತೊಂದರೆಯಾಯಿತೆಂದೂ ತಿಳಿದುಬರು...ದೆ. ಆದಕಾರಣದಿಂದ ಜಿಲ್ಲೆಯ ಪ್ರಜೆಗಳ ಹಿತಚಿಂತನೆ ...ಯಲ್ಲಿಯೇ ನಿರತವಾಗಿರುವ ನಮ್ಮ ಜಿಲ್ಲಾ ಬೋರ್ಡ ...ಮಾನ್ಯ ಅಧ್ಯಕ್ಷರಾದ ... ಈ ಅವ್ಯವಸ್ಥೆಯನ್ನು ... ವಿಷಯದಲ್ಲಿ ಲಕ್ಷ್ಯ ... ತೆಗೆದುಕೊಂಡು ತನ್ನ ತಾಬೆ...ಯಲ್ಲಿರುವ ಶಾಲಾ ಕಟ್ಟೋಣದಂತಹ ಸ್ಥಾನಗಳಲ್ಲಿ ...ದಂತಹ ಕಂಪನಿಗಳಿಗೆ ಆಶ್ರಯ ದೊರೆಯದಂತೆ ...ಮುಂದಿನ ಕಾರ್ಯದಲ್ಲಿಯೇ ಯೋಗ್ಯ ಏರ್ಪಾಡು ಮಾಡುವ ...ದಾರ ಮನಸ್ಸನ್ನು ತೋರುವರೆಂದು ಇಲ್ಲಿಯ ಜನತೆಯು ಆಶಿಸಿಕೊಂಡಿದೆ.

ಕಟಪಾಡಿ ಶ್ರೀನಿವಾಸ ಶೆಣೈ.

ಸರದೆಯೊಳಗಿನ ಕಾಂಗ್ರೆಸ್ ಸದಸ್ಯರು

ಪ್ರಿಯ ಕಾಂಗ್ರೆಸ್ ಸದಸ್ಯರೇ,

ತಾ ೧-೧೧ ರ ಸ್ವದೇಶಾಭಿಮಾನಿಯ ಸಂಚಿಕೆಯಲ್ಲಿ, ಸುಳ್ಯ ಸರ್ಕಲಿನ ಓಟರ ಮಹಾಶಯರಿಗೆ ಬರೆದ ವಿನಂತಿ ಪತ್ರಕ್ಕೆ ನೀವು ತಾ ೧೫-೧೧-೩೭ರ ಸಂಚಿಕೆಯಲ್ಲಿ ಬರೆದ ಅಭಿಪ್ರಾಯವನ್ನು ನೋಡಿದೆನು. ನೀವು ಕಾಂಗ್ರೆಸ್ ಸದಸ್ಯ ಎಂಬ ಸರದೆಯೊಳಗೆ ನಾಮಾಂಕಿತವನ್ನು ಇಟ್ಟದ್ದು ನೋಡುವಾಗ ನಿಜವಾದ ದೇಶಸೇವಕರೆ? ...ಗಳಿಗೂ ಲಾಭಪ್ರಚಾರಕ್ಕೂ ಹೆದರದ ಕಾಂಗ್ರೆಸ್ ಸದಸ್ಯರು ತೆರೆಮರೆಯಲ್ಲಿರುವರೇ? ಸುಳ್ಯ ಸರ್ಕಲಿನ ಓಟರಿಗೆ ಬರೆದ ವಿನಂತಿಪತ್ರದಲ್ಲಿ ಇದೀ ಜಿಲ್ಲೆಯ ಅಥವಾ ...ಲೂಕಿನ ವಿಷಯ ಎತ್ತಿ ಬರೆಯುವ ಅಗತ್ಯವಿದೆಯೇ? ...ಂಥ ತೆರೆಯ ಮರೆಯಲ್ಲಿರುವ ಕಾಂಗ್ರೆಸ್ ಸದಸ್ಯರು ...ನಗೆ ವ ತನ್ನ ಮಿತ್ರರಿಗೆ ಈ ಚುನಾವಣೆಯಲ್ಲಿ ಸ್ಥಾನ ...ಗಲಿಲ್ಲವೆಂದು ಅಸೂಯೆಪಟ್ಟು ಸ್ವತಂತ್ರಪಕ್ಷದಿಂದ ...ಂತ ಉಮೇದ್ವಾರರಿಗೆ ಒಳಗೊಳಗೆ ಕೆಲಸಮಾಡುತ್ತಿದ್ದು ನಿಜವಾದ ಕಾಂಗ್ರೆಸ್ ಸದಸ್ಯನ ಧರ್ಮವೇ? ಅಂಥಾ ಮಾನ್ಯರಿಗೇ "ಬೆಕ್ಕು ಸನ್ಯಾಸಿ" ಎಂಬ ಮಾತು ಒಪ್ಪುವುದಲ್ಲವೇ? ಸ್ವಾರ್ಥವನ್ನೇ ಗುರಿಯಾಗಿಟ್ಟು ಹಲವು ವರ್ಷಗಳಿಂದ ದೇಶಸೇವಕನೆಂದು ನಟಿಸಿಕೊಂಡಿದ್ದ ನೀವು ಥರ "ಕಾಂಗ್ರೆಸ್ ಸದಸ್ಯ"ರು ಕಾಂಗ್ರೆಸ್ ಸಿವಿಲ್ ಬೋರ್ಡನ್ನ ಈ ಚುನಾವಣೆಯ ಗೊಂದಲದಲ್ಲಿ ಜರೆಯುತ್ತಿರುವುದು ಹೆಚ್ಚೇ?

ಇಂಥಾ ಕಾಂಗ್ರೆಸ್ ಸದಸ್ಯನನ್ನು ಚುನಾಯಿಸುವುದಕ್ಕಿಂತ ಕಾಂಗ್ರೆಸ್ಸಿನ ಧ್ಯೇಯಕ್ಕನುಸರಿಸಿ ನಡೆಯತಕ್ಕವನೆಂದು ಭರವಸೆ ತೋರಿದ ಹೊಸ ಸದಸ್ಯನನ್ನು ಆರಿಸಿದ್ದು ಕಾಂಗ್ರೆಸ್ ಸಿವಿಲ್ ಬೋರ್ಡಿನ ದೂರದರ್ಶಿತ್ವಕ್ಕೆ ಒಪ್ಪತಕ್ಕದ್ದೇ ಸರಿಯಲ್ಲವೇ? ಇದಕ್ಕೆ ನಿದರ್ಶನವಾಗಿ ಸಿವಿಲ್ ಬೋರ್ಡಿನವರಿಂದ ಸುಳ್ಯ ಸರ್ಕಲಿಗೆ ಆರಿಸಲ್ಪಟ್ಟ ಮು। ರಾ। ಎಸ್. ಚನ್ನಪ್ಪ ಗೌಡ, ಬಿ.ಎ.ಬಿ ಎಲ್ ಇವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟದ್ದೇ ಸಾಕ್ಷಿಯಾಗಿದೆ.

ಕಾಂಗ್ರೆಸ್ ಸದಸ್ಯರೇ, ನೀವು ಎಷ್ಟು ವಿಧವಾಗಿ ಬಣ್ಣ ಬದಲಾಯಿಸಿಕೊಂಡರೂ ನಿಮ್ಮ ನೆರಳು ಕಪ್ಪು ಎಂಬುದನ್ನು ಮರೆಯಬೇಡಿರಿ. ನಿಮ್ಮ ಕಾಲಡಿಯಲ್ಲಿ ಕುಂಬಳಕಾಯಿಯನ್ನಿಟ್ಟುಕೊಂಡು ಪರರ ಕಾಲಡಿಯ ಸಾಸಿವೆ ಕಾಳನ್ನು ಹೆಕ್ಕಲಿಕ್ಕೆ ಹೋಗುವ ಹವ್ಯಾಸಕ್ಕೆ ಕೈಹಚ್ಚಿದಿರಿ. ಇದೆಲ್ಲಾ ನಿಮ್ಮ ಹೆಸರಿಗೆ ಒಪ್ಪುವಂಥದ್ದಲ್ಲ. ಇನ್ನಾದರೂ ಶಾಂತಮನಸ್ಕರಾಗಿರಿ.

ಸುಳ್ಯ ಸರ್ಕಲಿನ ಓಟರರಲ್ಲೊಬ್ಬ

ಕರ್ನಾಟಕದ ಕವಿಗಳಲ್ಲಿ ಬಿನ್ನಹ.

ಕಾಂಗ್ರೆಸ್ ಸುವರ್ಣಮಹೋತ್ಸವದ ಬಹುಮಾನಗಳು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಲವು ತಾ ೧೦ ೧೦ ರಂದು ಹಾವೇರಿಯಲ್ಲಿ ನೆರೆದು, ಕಾಂಗ್ರೆಸ್ಸು ಸುವರ್ಣಮಹೋತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ಜರುಗಿಸಬೇಕೆಂದೂ ವಿವಿಧ ಸೃಷ್ಟಿಕಾರ್ಯಗಳನ್ನು ಕೈಕೊಂಡು ಅದರಲ್ಲಿ ಕಾಂಗ್ರೆಸ್ಸಿನ ವಿಷಯವಾಗಿ ಜನರಲ್ಲಿ ಜಾಗೃತಿಯನ್ನು ಉಂಟುಮಾಡಬೇಕೆಂದು ಗೊತ್ತುಪಡಿಸಲಾಗಿದೆ.

ಈ ದೃಷ್ಟಿಯಿಂದ ಕಾಂಗ್ರೆಸಿನ ಇತಿಹಾಸವನ್ನೂ ಅದು ಈ ವರೆಗೆ ಮಾಡಿದ ಲೋಕ ಸೇವೆಯನ್ನೂ ವೀರಕೃತ್ಯಗಳನ್ನೂ ಸಂಗ್ರಾಮಗಳನ್ನೂ ವರ್ಣಿಸುವಂಥ ಸ್ಫೂರ್ತಿಯನ್ನುಂಟುಮಾಡುವಂಥ ಹಾಡನ್ನು ಮತ್ತು ಲಾವಣಿಯನ್ನೂ ಹಳ್ಳಿಗರಿಗೆ ತಿಳಿಯುವಂತೆ ಸುಲಭವಾದ ತಿಳಿಯಾದ ಶೈಲಿಯಲ್ಲಿಯೂ ವೀರರಸಪ್ರದ ದಾಟಿಯಲ್ಲಿಯೂ ರಚಿಸಿದವರಿಗೆ ಬಹುಮಾನವನ್ನು ಕೊಡಬೇಕೆಂದು ೩ ಪದಗಳಲ್ಲಿ ಬಹುಮಾನವಾಗಿ ಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದ ಕೊಡಬೇಕೆಂದು ಗೊತ್ತಾಗಿದೆ. ಆದುದರಿಂದ ಕರ್ನಾಟಕದೊಳಗಿನ ಎಲ್ಲ ಕವಿಗಳು ತಮ್ಮ ಸೇವೆಯನ್ನು ಈ ಸುವರ್ಣಕಾಲದಲ್ಲಿ ಕಾಂಗ್ರೆಸಿಗೆ ಅರ್ಪಿಸಬೇಕೆಂದು ಬಿನ್ನವಿಸುತ್ತೇನೆ. ಕವಿತೆಗಳೂ ಲಾವಣಿಗಳೂ ದಶಂಬರ ೧ನೇ ತಾರೀಖಿನೊಳಗಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ತಲ್ಪಬೇಕು. ಮುಂದೆ ಪರೀಕ್ಷಕರಿಂದ ಪರೀಕ್ಷಿಸಲ್ಪಟ್ಟು ಸುವರ್ಣ ಮಹೋತ್ಸವದ ಕಾಲಕ್ಕೆ ಪ್ರಸಿದ್ಧಿಸಲ್ಪಡುವವು. ಸ್ಪರ್ಧೆಗಾಗಿ ಬರೆಯುವುದು ಅನುಚಿತವೆಂದು ಮಾತ್ರ ದಯವಿಟ್ಟು ದುರ್ಲಕ್ಷಿಸಬಾರದು. ರಾಷ್ಟ್ರದ ಸೇವೆಯೆಂದು ಎಲ್ಲರೂ ಬರೆಯಬೇಕಾಗಿ ಬಿನ್ನವಿಸುತ್ತೇನೆ.

ಕಾರ್ಯದರ್ಶಿ,
ಕ. ಪ್ರಾಂ। ಕಾಂಗ್ರೆಸ್ ಕಮಿಟಿ, ಧಾರವಾಡ

ಕರ್ನಾಟಕ ಟಾಕೀಸ್ ಲಿಮಿಟೆಡ್, ಧಾರವಾಡ.

ಮುಂಬಯಿ ಅಧಿಪತ್ಯಕ್ಕೆ ಸೇರಿದ ಕರ್ನಾಟಕಗಳ ಪೈಕಿ ಧಾರವಾಡ ಜಿಲ್ಲೆಯಲ್ಲಿ ಇದೊಂದೇ ಪ್ರಥಮದ್ದಾಗಿಯೂ ತೀರ ಹೊಸತಾಗಿಯೂ ತೆರೆದಿರುವ ಕನ್ನಡ ವ ಹಿಂದೀ ಮಾತಾಡುವ ಚಲಚ್ಚಿತ್ರಗಳನ್ನು ತಯಾರಿಸುವುದಕ್ಕೋಸ್ಕರ ೧೯೧೩ನೇ ಇಂಡಿಯನ್ ಕಂಪನೀಸ್ ಆಕ್ಟ್ ಪ್ರಕಾರ "ಕರ್ನಾಟಕ ಟಾಕೀಸ್ ಲಿಮಿಟೆಡ್" ಎಂದು ಸ್ಥಾಪಿತವಾಯಿತು. ಕಂಪನಿಯಲ್ಲಿ ಈಗ ೩। ಲಕ್ಷ ರೂಪಾಯಿಗಳ ಬಂಡವಾಳವಿರುವುದು. ಆ ಪೈಕಿ ಒಂದು ಲಕ್ಷ ರೂಪಾಯಿ ವಿಕ್ರಯಕ್ಕೆ ಷೇರುಗಳ ಬಗ್ಗೆ ತೆಗೆದಿರುತ್ತಾರೆ. ಹಾವೇರಿಯಲ್ಲಿದ್ದು ವಕೀಲಿಕಸಬನ್ನು ನೋಡುತ್ತಿರುವ ಮತ್ತು ಲೆಜಿಸ್ಲೇಟಿವ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸಭಾಸದಸ್ಯರೆಂತಲೂ ಕರ್ನಾಟಕ ಪ್ರಾಂತ್ಯದಿಂದ ಬಹುಮತದಿಂದ ಆರಿಸಿದ ಒಬ್ಬರಾದ ಪ್ರಮುಖ ಪುಡಾರಿ ಶ್ರೀಯುತ ಎಸ್ ಕೆ ಹೊಸಮನಿ ಎಂಬುವರು ಈ ಕಂಪನಿಯ Board of Director ಇದರ ಚೆಯರ್ ಮೆನರಾಗಿರುತ್ತಾರೆ. ಅದಲ್ಲದೆ ಧಾರವಾಡದ ರಿಟಾಯರ್ಡ ಜಡ್ಜರಾದ ಮು। ಪತ್ಕೀ, ಧಾರವಾಡದ ಸದರ್ನ ಮರಾಠಾ ರೈಲ್ವೆ ಆರ್ಬನ್ ಕೋ ಆಪರೇಟಿವ್ ಬೇಂಕಿನ ಮೆನೇಜರ ಶ್ರೀ ಗುಂಜೀಕರರೂ ಪೂನೆಯ ಇಂಜಿನಿಯರರಾದ ಶ್ರೀ ಎಂ ಎಸ್ ಕರಂದೀಕರ ಎಂಬವರೂ ಧಾರವಾಡದ ವಿಜಯ ಟಾಕೀಸ್‌ನ ಮಾಲೀಕರಾದ ಶ್ರೀ ಪಿ ಎ ಮತ್ತು ಎಸ್ ಎ ಮಂಧೋಳಕರ ಮತ್ತು ಮುಂಬಯಿಯಲ್ಲಿರುವ ದಾದರ ಇಲೆಕ್ಟ್ರಿಕಲ್ ಮತ್ತು ಮಿಕೇನಿಕಲ್ ಇಂಜಿನಿಯರರಾದ ಶ್ರೀ ಆರ ನಾಮಜೋಶಿ (?) ಇವರು ಎರಡನೇ ಡೈರೆಕ್ಟರರಾಗಿರುತ್ತಾರೆ. ಮನೋರಂಜಕ ಶಿಕ್ಷಣಾತ್ಮಕ ಮಾತಾಡುವ ಚಲಚ್ಚಿತ್ರಗಳನ್ನು ತಯಾರಿಸಿ ಪ್ರಚಾರಕ್ಕೆ ತರುವುದೇ ಇದರ ಮುಖ್ಯ ಉದ್ದೇಶವಾಗಿರುತ್ತ, ಕರ್ನಾಟಕ ಜಿಲ್ಲೆಗಳಲ್ಲೆಲ್ಲಾ ಇದೊಂದೇ ಮಾತ್ರ ಚಲಚ್ಚಿತ್ರಗಳನ್ನು ತಯಾರಿಸುವ ಕಂಪನಿಯಾಗಿರುತ್ತದೆ. ಕನ್ನಡ ಚಲಚಿತ್ರಗಳ ಕುರಿತು ಅನೇಕ ಪ್ರಮುಖ ಪುರುಷರು ಅಭಿಪ್ರಾಯವನ್ನಿತ್ತಿರುವರು. ಕರ್ನಾಟಕ ಸೃಷ್ಟಿಸೌಂದರ್ಯಕ್ಕೆ ಪ್ರಸಿದ್ಧವಾಗಿರುತ್ತದೆ. ಇತಿಹಾಸದಲ್ಲಿ ಪ್ರಸಿದ್ಧವಾದ ಅನೇಕ ಸ್ಥಳಗಳಿವೆ. ಕಾರವಾರ ಜಿಲ್ಲೆಯಲ್ಲಿ ಅರಣ್ಯ ಮತ್ತು ಸಮುದ್ರ, ಗೆರಸಪ್ಪಾ, ಹಳೇಬೀಡು, ಹಂಪಿ, ವಿಜಯನಗರ ಮೊದಲಾದ ಕಡೆಗಳಲ್ಲಿರುವ ದೇವಸ್ಥಾನಗಳೂ, ವಿಜಾಪುರದಲ್ಲಿರುವ ಮಸೀದಿಯು ಜಗತ್ತಿನಲ್ಲೆಲ್ಲಾ ಪ್ರಸಿದ್ಧಿ ಹೊಂದಿರುತ್ತದೆ. ಕನ್ನಡ ಗಾಯಕರೂ ನಟಿಯರೂ ಮೊದಲಾದವರು ಕರ್ನಾಟಕೀ ರಂಗಭೂಮಿಯಲ್ಲಿ ಒಳ್ಳೇ ಹೆಸರನ್ನು ಪಡೆದಿರುವರು. ಪಂಡಿತ ತಾರಾನಾಥ, ಎಂ ಎಸ್. ಕಾಮತ್, ಪಂಜೇ ಮಂಗೇಶರಾಯರು, ಬೆನಗಲ ರಾಮರಾವ್ ಇವರು ಲೇಖಕರಲ್ಲಿ ಪ್ರಸಿದ್ಧರಾಗಿದ್ದಾರೆ. ಬಳ್ಳಾರಿಯ ಟಿ ರಾಘವಾಚಾರ್ಯರು, ಬೆಳ್ವದಿ ನರಹರಿ ಶಾಸ್ತ್ರಿ, ಗದಗ ಸದಾಶಿವರಾವ ಗರೂಡರು ನಾಟಕಗಳಲ್ಲಿ ಸಂಚಿತರಾಗಿರುತ್ತಾರೆ. ಇಂಥವರ ಸಹಾಯವು ಹೊಸತಾಗಿ ತೆರೆದಿರುವ ಈ ಕಂಪನಿಗೆ ಇರಲಾಗಿ, ಕರ್ನಾಟಕದ ಅಭ್ಯುದಯಕ್ಕೂ ಜನರು ಜೀವನಕ್ಕೂ ವಾಕ್ಚಲಚಿತ್ರಗಳ ಮೂಲಕ ಪ್ರಚಾರ ಮಾಡುವುದೇ ಮುಖ್ಯ ಧ್ಯೇಯವಿರುತ್ತದೆ. ಪ್ರಥಮದಲ್ಲಿ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿ ಮಾತಾಡುವ ಚಲಚಿತ್ರಗಳನ್ನು ತಯಾರಿಸುವರೆ ಕಂಪನಿಯವರಿಗೆ ಆಲೋಚನೆ ಇದ್ದು ಅದಕ್ಕಾಗಿ ಮುಕ್ಕಾಲು ಲಕ್ಷ ರೂಪಾಯಿ ಖರ್ಚಾಗಬಹುದು ಇಲ್ಲವೇ ಒಂದು ಲಕ್ಷ ರೂಪಾಯಿ ಖರ್ಚಾಗಬಹುದೆಂದು ತಿಳಿಯುವ ಮನೋರಂಜಕ ಮಾತಾಡುವ ಚಲಚಿತ್ರಗಳ ಹಾಗೆಯೇ ಶಿಕ್ಷಣಾತ್ಮಕ ವಾಕ್ಚಲಚಿತ್ರಗಳನ್ನು ತೆಗೆಯುವುದಕ್ಕೆ ಕಂಪನಿಯವರು ಆಲೋಚಿಸಿದ್ದಾರೆ.

ವಿ. ಎಸ್. ಕಿಟ್ಟೂರ್‌ಕರ್

ಜರ್ಮನಿಯಲ್ಲಿ ಯುದ್ಧೋಪಕರಣಗಳ ವ್ಯಾಪಾರದ ಮೇಲೆ ನಿರ್ಬಂಧ

ಯುದ್ಧೋಪಕರಣಗಳನ್ನು ಹೊರಗಣ ಯಾವತ್ತೂ ಜನಾಂಗಕ್ಕೆ ಮಾರಲಾರದಂತೆ ಒಂದು ಹೊಸ ನಿರ್ಬಂಧವನ್ನು ಜರ್ಮನಿಯು ಜಾರಿಗೆ ತಂದಿರುತ್ತದೆ. ಈ ಕಾಯದ ಪ್ರಕಾರ, ಈ ನಿರ್ಬಂಧವು ಎಲ್ಲಾ ಜನಾಂಗಗಳಿಗೆ ತಗಲುವುದು.

ದರ ಸುಲಭ ಇಂದೇ ಪಡಕೊಳ್ಳಿರಿ ಮತ್ತೆ ಸಿಗಲಾರದು! ಹೊಸ ಮ್ಯಾಲು!



ಈಗ 4 ರೂಪಾಯಿಗೆ ಸಿಗಲಾರದ ವಸ್ತುಗಳು ಮತ್ತೆ 8 ರೂಪಾಯಿಗಳನ್ನು ಕೊಟ್ಟರೂ ಸಿಕ್ಕಲ್ಲ. ... 2 ... ಸರಿಯಾದ ಸಮಯವನ್ನು ಕೊಡುತ್ತದೆ 8 ವರ್ಷಗಳ ಗೆರಂಟಿಯನ್ನ ಕೊಡುತ್ತೇವೆ 1 ಟ್ಯಾಬಲ್ ಕ್ಲೋಕ್ 10 ವರ್ಷಗಳ ಗೆರಂಟಿ ಕೊಡಲ್ಪಡುವುದು. ಬಂಗಾರದ ನಿಬ್ಬುಳ್ಳ ಒಂದು ಸ್ಟ್ರಾಂಗ್ ಫೌಂಟನ್ ಪೆನ್ ಒಂದು ಟೋರ್ಚ್ ಲೈಟ್ ಚೆಯಿನ್ ಸಮೇತ ಒಂದು ... ಸೋಪು ಇವುಗಳೆಲ್ಲ ... ನಾಲ್ಕು ರೂಪಾಯಿಗಳಿಗೆ ಪಡೆಯಬಹುದು. ಪೆಕಿಂಗ್ ಮತ್ತು ಟಪ್ಪಾಲು ಹಾಸಲು ಪ್ರತ್ಯೇಕ. ಮ್ಯಾಲು ಬೇಡವೆಂದು ಕಂಡುಬಂದರೆ ಹಣ ವಾಪಸ

International Trading Co, Post Box No 6714 (4W SW) CALCUTTA

KANNADA

Savings Certificates
can be cashed
even before maturity.

Full Particulars from—
CANARA BANK LTD

OFFICES AT —

Bombay—Fort	Mangalore—City,
Bombay—Mandvi,	Mangalore—Bunder
Hubli,	Kasaragod
Calicut,	Puttur,
Cochin,	Buntwal,
Ernakulam,	Karkala,
Alleppey,	Coondapoor,
Bangalore,	Udipi,
Davangere,	&
Chickmagalur,	Gangoli.

AVAILABLE IN DENOMINATIONS OF
Rs. 10/- UPWORDS

TOTAL YIELD RS 4-6-0% P. A.

Paid once half yearly at 3½% p. a
with an additional 1¼% p a on maturity
If Left To Accumulate

RS. 100/-
Will Amount to
RS. 122-13-6

ESTD 1906

CANARA BANK
LIMITED

Subscribed Capital		Paid up Capital
6,00,000		3,31,000
Reserves	Deposits	Working Capital
4,50,000	58,62,000	73,49,000

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.

Distributors for South Kanara —

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು.— ಕಾಮತ್ ಸ್ವದೇಶೀ ಎಂಪೋರಿಯಂ

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿ
ಅಥವಾ

ತಯಾರಾಗಿದೆ!

ಗ್ರೇ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಅಚ್ಚಾಗಿದೆ. ಇದನ್ನು ಗಣಿತದ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕಾಗದ ಬರೆಯಿರಿ

ಮೇನೇಜರ್,
ಶಾರದಾ ಛಾಪಖಾನೆ
ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6 15

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.

	ರೂ	ಆ	ಪೈ
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0

ಸಮಾಜಶಾಸ್ತ್ರ.

	ರೂ	ಆ	ಪೈ
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6

ಸಾಮಾನ್ಯ ವಿಜ್ಞಾನ.

	ರೂ	ಆ	ಪೈ
ಎರಡನೇ ದರ್ಜೆ	0	8	0
ಮೂರನೇ ,,	0	8	0
ನಾಲ್ಕನೇ ,,	0	6	0
ಐದನೇ ,,	0	5	0
ಆರನೇ ದರ್ಜೆ	0	4	0
ಏಳನೇ ,,	0	5	0
ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ)

ಮೂರು ಕರಡಿಗಳು
ಹೇನ ಸಣ್ಣ ಹುಡುಗಿ ಬದವಾಯಿತು
ಮೆಣಸಿನ ಕಾಳಪ್ಪ
ಅರಗಿಣಿ ಮುದ್ದೆ
ಇಲಿಗಳ ಧಕ್ಕ ಧೈ
ಅಂಗೇಲ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಆಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಶಾಂತಿಸ್ಥಾಪನೆಯಾಗುವುದೇ?

ಶ್ರೀ. ಸುಭಾಷ್ಚಂದ್ರ ಬೋಸರ ಇಟೆಲಿ-ಹಬಸಿಗಳ ಕಲಹದ ಮೇಲೆ ಸಂದೇಶ.

“ಈ ೨೦ನೇ ಶತಮಾನದಲ್ಲಿ, ಯೋಗ್ಯ ಕಾಯುಬಲ ಮತ್ತು ಸಂಗ್ರಾಮಬಲವಿಲ್ಲದೆ ಒಂದು ಜನಾಂಗವು ಸ್ವತಂತ್ರವಾಗಿ ಬಾಳಲು ಸಾಧ್ಯವಾಗಲಿಕ್ಕಿಲ್ಲ, ವಿಜ್ಞಾನದ ಅರಿವಿನಿಂದ ನವೀನ ಯುದ್ಧೋಪಾಯಗಳನ್ನು ತಿಳಿದವನಾಗಬೇಕು” ಎಂಬುದು ಈ ಇಟೇಲಿ-ಎಬಿಸೀನಿಯಾ ಕಲಹದಿಂದ ವ್ಯಕ್ತವಾಗುತ್ತದೆ.

ಇಟೇಲಿಗೆ ಎಬಿಸೀನಿಯಾದ ಟಾನಾ ಸರೋವರದ ಅಧಿಕಾರವು ಸಿಕ್ಕಿದರೆ ಅದು ಬ್ರಿಟಿಷರಿಗೆ ಹೇಗೆ ಪರಿಣಮಿಸುವುದು? ಬ್ರಿಟಿಷರ ಸುಡಾಣದಲ್ಲಿ ಮತ್ತು ಇಜಿಪ್ತಿನಲ್ಲಿರುವ ಹತ್ತಿಯ ಸಾಗುವಳಿಯು ನೀರಿನ ಸರಬರಾಯಿಗೆ ಕಡಗಳು ಬರುವುವು ಇಟೇಲಿಗೆ ಎಬಿಸೀನಿಯಾದ ಪ್ರಭುತ್ವವು ದೊರಕಿದರೆ, ಕೆಂಪು ಸಮುದ್ರದಲ್ಲಿಯೂ, ಹಿಂದೂದೇಶದ ಸಮುದ್ರ ಮಾರ್ಗದ ಮೇಲೂ, ಮತ್ತು ಸುಯೇಜ ಕಾಲಿವೆಯಲ್ಲೂ, ಅವರಿಗೆ ಹೆಚ್ಚಿನ ಮಹತ್ವವನ್ನು ತರುವುದು ಬ್ರಿಟಿಷ ಸಾರ್ವಭೌಮತೆಯು ಇದನ್ನು ಸಹಿಸುವುದೇ?

ಬ್ರಿಟಿಷರಿಗೆ ಇದರಿಂದ ಇನ್ನೊಂದು ಅಪಾಯವು ಒದಗಬಹುದು ಪೂರ್ವ ಮೆಡಿಟರೇಯನದಲ್ಲಿ ಬ್ರಿಟಿಷರಿಗೆ ಮಾತ್ರ ಯಾಕೆ ಅಷ್ಟು ಅಧಿಕಾರ? ಎಂಬ ಆಲೋಚನೆಯಿಂದ ಕೂಡಿದವನಾಗಿ, ಅವರ ಈ ಅಧಿಕಾರವನ್ನು ಕಿತ್ತುಕೊಳ್ಳಲು ಮುಸಲೋನಿಯು ಸಾಧಿಸುತ್ತಿದ್ದಾನೆ ಆಫ್ರಿಕಾದಲ್ಲಿ ಇಟೆಲಿಯಾನ ಸಾಮ್ರಾಜ್ಯ ರಚಿಸುವುದಲ್ಲದೆ ಮೆಡಿಟರೇನಿಯನ್ ಸಮುದ್ರದಲ್ಲಿ ಅಧಿಕಾರ ಸ್ಥಾನವನ್ನು ಪಡೆಯುವುದು ಇವನ ಮುಖ್ಯ ಉದ್ದೇಶ ಹೆಚ್ಚೇಕೆ, ಪೂರ್ವದಿಕ್ಕಿಗೂ, ಹಿಂದುಸ್ಥಾನಕ್ಕೂ, ಮತ್ತು ಆಸ್ಟ್ರೇಲಿಯಕ್ಕೂ ಹೋಗುವ ಬ್ರಿಟಿಷರ ಹಾದಿಯಲ್ಲಿ ಒಂದು ತಡೆಯಾಗುವನು

ಇಟೇಲಿಗೆ ಮೇಲಿನವುಗಳು ಮುಖ್ಯ ಉದ್ದೇಶವಾದುದರಿಂದ, ಬ್ರಿಟಿಷ ನೇಶನಲ್ ಸರಕಾರವು ಮುಸಲೋನಿಯನ್ನು ತಡೆಯಲು ಮುಂದುಬಂದಿರುತ್ತದೆ ಸೆಂಕ್ಷನುಗಳನ್ನು ಜ್ಯಾರಿಗೆ ತರುವುದು ಶಾಂತಿಸ್ಥಾಪನೆಗಲ್ಲ, ಜನಪದ ಮಂಡಲದ ಗೌರವವನ್ನು ಕಾಯುವುದಕ್ಕಲ್ಲ-ಧರ್ಮರಕ್ಷಣೆಗಲ್ಲ ಶಾಂತಿಸ್ಥಾಪನೆಯ ನೆಪದಿಂದ ಬ್ರಿಟಿಷರು ಇನ್ನೊಂದು ಮಹಾಯುದ್ಧವನ್ನೆಬ್ಬಿಸುವವರಿದ್ದಾರೆ

ಆದರೆ ಹಿಟ್ಲರನ ನಾಯಕತ್ವದಲ್ಲಿ ಶಸ್ತ್ರಧಾರಿಯಾದ ಜರ್ಮನಿಯಿಂದ ಇವರು ಸ್ವಲ್ಪ ದುಡುಕಬೇಕಾಗಿದೆ ಆಂಗ್ಲೋ-ಜರ್ಮನ ಒಪ್ಪಂದವು ಫ್ರೆಂಚರಲ್ಲಿ ಸ್ವಲ್ಪ ಸಂಶಯವುಂಟುಮಾಡಿ ಅವರು ಇಟೇಲಿಕಡೆಗೆ ತಿರುಗುವರೋ ಎಂಬುದಾಗಿದೆ ಬ್ರಿಟಿಷನ ನೇಶನಲ್ ಸರಕಾರವು ಜನಪದ ಮಂಡಳವನ್ನು ರಕ್ಷಿಸಿರಿ ಎಂದು ಇಟೇಲಿಯ ಕಡೆ ಧಾವಿಸುತ್ತಿದೆ ಇಟೇಲಿಯು ಇದು ನೋಡಲೆ ತಿಳಿದುದರಿಂದ ತಕ್ಕ ಸಿದ್ಧತೆಗಳನ್ನು ಮಾಡಿರುತ್ತದೆ ವಸಾಹತುಗಳ ರಚನೆ ಬ್ರಿಟಿಷರ ಮತ್ತು ಫ್ರೆಂಚರಯೋಪಾದಿಯಲ್ಲಿ ಮಾಡುತ್ತೇನೆಂದೂ, ತನ್ನ ಕಾರ್ಯಕ್ಕೆ ಆತಂಕಗಳು ಬಾರದಂತೆ ಮುಸಲೋನಿಯು ಎಲ್ಲಾ ಸಿದ್ಧತೆಗಳನ್ನು ಮಾಡಿರುತ್ತಾನೆ ೧೮೯೬ರಲ್ಲಿ ಎಡೋವಾದಲ್ಲಿ ತನಗಾದ ಅಪಜಯದ ಸೇಡನ್ನು ತೀರಿಸಲು ಇಷ್ಟೆಲ್ಲಾ ಬೆಚ್ಚಬೆ? ಅಂತರಿಕ್ಷದ ಯುದ್ಧದಲ್ಲಂತೂ ಇಟೇಲಿಯು ನವೀನ ಸ್ಥಾನವನ್ನು ಪಡೆದಿರುತ್ತದೆ ನವೀನ ಯುದ್ಧ ಕ್ರಮಗಳನ್ನು ಚೆನ್ನಾಗಿ ಅರಿತವನಾಗಿದ್ದಾನೆ ಸೇನಾಬಲವು ಅಧಿಕವಾಗಿದೆ ನೌಕಾಬಲವು ವೃದ್ಧಿಯಾಗಿದೆ ಹೀಗಿರುವಾಗ ತನ್ನ ಪ್ರಭುತ್ವದ ಸ್ಥಾಪನೆ ಯಾಕೆ ಆಗಬಾರದು?

ಬ್ರಿಟಿಷರ ತನ್ನ ಅಗಾಧವಾದ ಈಗಿನ ಸಾಮ್ರಾಜ್ಯದ ಬಲದಿಂದ, ಇಟೆಲಿಯನ್ನು ಸದೆಬಡೆಯುವುದೇನು ನಿಜ ಆದರೆ ಅಂತರಿಕ್ಷದಲ್ಲಿ ಪ್ರಬಲತೆಯನ್ನು ಪಡೆದ ಇಟೆಲಿ ತನ್ನ ವಿಮಾನಗಳಿಂದ, ಬ್ರಿಟಿಷ ನೌಕಾ ಸಮೂಹಕ್ಕೆ ಹಾನಿಯನ್ನು ತರುವುದು ಅಂತರಿಕ್ಷದಿಂದ ಇವರಿಗೆ ವಿಶೇಷ ಹಾನಿಯು ಒದಗುವುದು ಜಯಶಾಲಿಯಾದ ಬ್ರಿಟನಿನ ಶಕ್ತಿಯು ಮುಖ್ಯವಾಗಿ ನೌಕಾಬಲವು ಕುಂದುವುದು ಈ ಸಮಯದಲ್ಲಿ ಸಿದ್ಧತೆಯ ಕಾರ್ಯದಲ್ಲಿ ನಿರತನಾದ ಹಿಟ್ಲರನು, ತನ್ನ ಸಮಗ್ರ ನೌಕಾಬಲ, ಅಂತರಿಕ್ಷಬಲ, ಸೇನಾಬಲ, ಮೊದಲಾದ ಬಲಗಳಿಂದ ಕೂಡಿದವನಾಗಿ ಬ್ರಿಟಿಷನ್ನು ಎದುರಾಯಿಸಿದರೆ-ಅವಾಗ ಇವರ ಗತಿಯೇನು? ಜರ್ಮನಿಯವರೊಡನೆ ಒಪ್ಪಂದ ಬೆಳೆಯಿಸಲು ಇದೇ ಮುಖ್ಯ ಕಾರಣವಾಗಿರುತ್ತದೆ

ಆದರೆ ಹಿಟ್ಲರನಲ್ಲಿ ಇವರಿಗೆ ವಿಶ್ವಾಸ ಕಡಿಮೆ ಜರ್ಮನಿಯ ವಿಮಾನಬಲವು ಪ್ರಪಂಚದಲ್ಲಿ ಶ್ರೇಷ್ಠವಾದುದು ಈಗಿನ ಸರಕಾರದ ಹೊಸಕ್ರಮದ ದೆಸೆಯಿಂದ ಇವರ ಸೈನ್ಯಬಲವು ವೃದ್ಧಿಹೊಂದುವುದು ಇಲ್ಲಿ ಕೂಡ ಬ್ರಿಟಿಷರಿಗಿಂತ ಬಲವಂತರಾಗುವರು ಆದರಿಂದ ಇವುಗಳನ್ನು ತಡೆಯಲು ಬ್ರಿಟಿಷರ ನೌಕಾಬಲದ, ವಿಮಾನಬಲದ ಮತ್ತು ಸೇನಾಬಲದ ವೃದ್ಧಿಯಾಗಲೇಬೇಕು ಫ್ರೆಂಚರು ಮತ್ತು ಬ್ರಿಟಿಷರು ತನ್ನನ್ನು ಎಬಿಸೀನಿಯಾವನ್ನು ವಶೀಕರಿಸುವುದರಲ್ಲಿ ತಡೆಯನ್ನು ಹಾಕಿದರೆ ತಾನು ಮಧ್ಯ ಯುರೋಪಿನ ರಾಜಸೂತ್ರಗಳಿಂದ ಹೊರಗಿಬಂದು ಹಿಟ್ಲರನಿಗೆ ಸ್ವೇಚ್ಛೆಯಾಗಿ ವರ್ತಿಸಲು ಬಿಡುವೆನೆಂಬ ಮುಸಲೋನಿಯ ಎಚ್ಚರಿಕೆಯು ಮತ್ತು ಹಿಟ್ಲರನು ಮತ್ತೊಮ್ಮೆ ಶಸ್ತ್ರಧಾರಿಯಾದುದು ೧೯೩೫ರಲ್ಲಿ ಶಾಂತಿಸ್ಥಾಪನೆಗೆ ಕಾರಣಗಳಾಗುವವು

ಬ್ರಿಟನು ಇನ್ನೊಂದು ಮಹಾಯುದ್ಧವನ್ನು ಸಾಗಿಸಬೇಕಾದ ಸಂದರ್ಭದಲ್ಲಿ, ಅದಕ್ಕೆ ಅದರ ಆಶ್ರಿತ ರಾಜ್ಯಗಳಿಂದ ಯಾವ ತರದ ಸಹಕಾರವು ದೊರಕುವುದು ಇಟೆಲಿಯನ್ನು ತಡೆಯಲು ಮಾಡಿದ ಸೆಂಕ್ಷನುಗಳಿಂದ ಬ್ರಿಟಿಷರಿಗೂ ಅವರ ಆಶ್ರಿತ ರಾಜ್ಯಗಳಿಗೂ ಪರಸ್ಪರ ಭೇದಗಳು ಉಂಟಾಗುವುದೇ? ಇತ್ತೀಚೆಗೆ ನಡೆದ ಘಟನೆಗಳನ್ನು ಪರಿಶೀಲಿಸಿ ನೋಡಿದಲ್ಲಿ ಸೆಂಕ್ಷನಗಳಿಂದ ಬ್ರಿಟಿಷ ಸಾಮ್ರಾಜ್ಯದಲ್ಲಿ ಭೇದಗಳು ಉಂಟಾಗ ಪುದೆಂದು ವ್ಯಕ್ತವಾಗುತ್ತದೆ ಆಶ್ರಿತ ರಾಜ್ಯಗಳಲ್ಲಿ ಅತೀ ಹಳೆಯದಾದ ಕೆನಡಾವು ಲೀಗಿನ ಕೊವೆನೆಟು (ಕರಾರ) ಗಳ ಕುರಿತು ಮಾನಂಗಲೂ ಅಸಮಾಧಾನ ಪಡುತ್ತಿದೆ ಜನಪದ ಮಂಡಳದ ಯಾತ್ರಾ ಜನಾಬ್ದಾರಿಕೆಗಳನ್ನ ವಹಿಸಲು ಇದ ಸಿದ್ಧವಿಲ್ಲ ಕಾರಣ-ಯುರೋಪಿನ ಇವರು ಬಹಳ ದೂರವಿದ್ದಾರೆ 'ಅನ್ಯರ ಕಲಹಗಳಲ್ಲಿ ನಾವು ಭಾಗವಹಿಸುವುದಿಲ್ಲ' ಎಂಬ ನಿರ್ಣಯವು ಕಳೆದ ಸಪ್ಟಂಬರ ತಿಂಗಳಲ್ಲಿ ಅವರ ಪ್ರಧಾನಮಂತ್ರಿಯವರ ಭಾಷಣದಲ್ಲಿ ಹೊರಬಿದ್ದಿತ್ತು ಆಸ್ಟ್ರೇಲಿಯಾದಲ್ಲಿ ಅವರ ಪ್ರಧಾನಮಂತ್ರಿಗಳು ಬ್ರಿಟಿಷರೊಡನೆ ಸಂಪೂರ್ಣವಾಗಿ ಸಹಕರಿಸಬೇಕೆಂದು ಆಲೋಚಿಸುತ್ತಿರುವಾಗ, ಅಲ್ಲಿನ ಲೇಬರ್ ಪಾರ್ಟಿಯವರು "ನಮಗೆ ಪರರ ಕಲಹಗಳ ಯಾಕೆ? ನಾವು ಅವುಗಳಲ್ಲಿ ಭಾಗವಹಿಸಬಾರದು" ಎಂದ ಭಾಷಣಗಳನ್ನು ಮಾಡುತ್ತಿದ್ದಾರೆ ದಕ್ಷಿಣ ಆಫ್ರಿಕಾದಲ್ಲಿ ಜನರಲ್ ಸ್ಮಟ್ಸರು ಲೀಗಿನ ಸೂತ್ರಗಳನ್ನು ಅನುಸರಿಸಬೇಕೆಂದು ನಿರ್ಧರಿಸುತ್ತಿರುವಾಗ, ಅಲ್ಲಿನ ರಕ್ಷಣಾ ಮಂತ್ರಿಗಳು ಆಫ್ರಿಕಾಕ್ಕೆ ಒಂದ ಗುಂಡು ಕೂಡ ಹೊಡೆಯುವ ಇಚ್ಛೆಯು ಇಲ್ಲ ಎಂದು ಸಾರಿರುವರು ಇದರಿಂದ ಬ್ರಿಟಿಷ ಸಾಮ್ರಾಜ್ಯದ ಆಶ್ರಿತ ರಾಜ್ಯಗಳು, ಲೀಗಿನಿಂದ ಸೆಂಕ್ಷನುಗಳ ವಿಷಯ ಹೆಚ್ಚು ಒತ್ತಾಯ ಬಂದರೆ, ಲೀಗಿಗೆ ತಮ್ಮ ರಾಜೀನಾಮೆಯನ್ನು ಕಳುಹಿಸಲು ಬಹುದು ಎಂದು ವ್ಯಕ್ತವಾಗುತ್ತದೆ ಇಷ್ಟು ಇವರೊಡನೆ ಸಹಕರಿಸಬೇಕಾದರೆ, ಅವರು ಕೋರುವ ಸ್ವಾತಂತ್ರ್ಯದಾನವನ್ನು ಅವರಿಗೆ ಮಾಡಬೇಕಾಗುವುದು ಈ ಸಮಯದಲ್ಲಿ ಹಿಂದೂದೇಶವು ಏನು ಮಾಡಬೇಕು?

ಭಾರತೀಯರು ಎಬಿಸೀನಿಯಾದ ಮೇಲೆ ಕನಿಕರಪಟ್ಟವರಾಗಿದ್ದಾರೆ. ಆದರೆ ಕೆನಡಾ, ಆಫ್ರಿಕಾ, ಆಸ್ಟ್ರೇಲಿಯಾದಲ್ಲಿ ನಡೆದಂತೆ, ಇನ್ನೊಂದು ಮಹಾಯುದ್ಧ ಸಂಭವದಲ್ಲಿ ತಮ್ಮ ನಿರ್ಣಯವನ್ನು ಇನ್ನೂ ಕಾಂಗ್ರೆಸ್ಸಿನವರಿಂದ ನಿಶ್ಚಿತವಾಗಲಿಲ್ಲ ಅಡಿಸ್ ಅಬಾಬದಲ್ಲಿರುವ ಭಾರತೀಯರ ರಕ್ಷಣೆಯ ನೆಪದಿಂದ ಅಲ್ಲಿಗೆ ಭಾರತೀಯ ಸೇನಾಸಮೂಹವನ್ನು ಕಳುಹಿಸಿ ಕೊಟ್ಟಿರುತ್ತಾರೆ ಸ್ವಾತಂತ್ರ್ಯವಾಗಿರುವ ಎಬಿಸೀನಿಯಾದಲ್ಲಿ ಭಾರತೀಯರ ರಕ್ಷಣೆಯು ಹೊರಗಿನವರಿಂದ ಆಗುವುದೂ ನ್ಯಾಯವನ್ನುತಪ್ಪೋ? ನ ಸಲೀನಿಗೆ ಹಿಂದೂದೇಶದ ಬೆಂಬಲವು ಸೂಚಿಸುವಂತೆ ಈ ಸೈನ್ಯದಳವು ಅತ್ತಕಡೆ ಸರಿಯಲು ಮುಖ್ಯ ಕಾರಣ ಭಾರತೀಯರು ಮುಂಚಿನ ಮಹಾಯುದ್ಧದಲ್ಲಿ ತೋರಿಸಿದ ಧೀರತೆ ಸಮಸ್ತ ಲೋಕಕ್ಕೆ ತಿಳಿದಿರುತ್ತದೆ ಇದರಿಂದ ಮುಸಲೋನಿಯು ಸ್ವಲ್ಪ ಚೇತರಿಸುವಂತಾಗುವುದೆಂದು, ಬ್ರಿಟಿಷರು ನಂಬಿರುವರು

ಇಟೆಲಿ ಎಬಿಸೀನಿಯಾ ಕಲಹವು ಇಡೀ ಯುರೋಪು ಖಂಡದಲ್ಲಿ ವಿಚಾರಭೇದಗಳನ್ನು ಉಂಟುಮಾಡಿರುತ್ತದೆ ಇಂಗ್ಲಾಂಡಿನ ವಿವಿಧ ಜನಸಮೂಹಗಳಲ್ಲಿ ಸ್ಪರ್ಧೆಯನ್ನು ಉಂಟುಮಾಡಿರುತ್ತದೆ ಕೆಲವರು ಶಾಂತಿಗಾಗಿ ಪ್ರೇರೇಪಿಸುವರು ಇನ್ನು ಕೆಲವರು ಯುದ್ಧಕ್ಕಾಗಿ ಸಿದ್ಧರಾಗಿದ್ದಾರೆ ಹೆಚ್ಚೇಕೆ ಬ್ರಿಟಿಷ ಸರಕಾರದ ಅಧಿಕಟ್ಟಾಗಿರುವ ಸಾರ್ವಭೌಮತೆಯಲ್ಲೂ ಭೇದಗಳು ಜನಿಸಿರುತ್ತವೆ ಎಬಿಸೀನಿಯಾವು ಮೂಲಕಾರಣವಾದ ಈ ಯುದ್ಧದಲ್ಲಿ ಬ್ರಿಟಿಷರು ಜಯಶೀಲರಾದರೆ, ಸಾರ್ವಭೌಮತೆಯ ಅಡಿಯಲ್ಲಿರುವ ರಾಜ್ಯಗಳು ನವೀನ ರೀತಿಯಲ್ಲಿ ಚೇತರಿಸಿಕೊಳ್ಳುವುವು ಈ ಚೇತರಿಕೆಯು ಸಂಘವು ಎಲ್ಲಾ ಸಾರ್ವಭೌಮ ಜನರಲ್ಲಿ ಒಂದು ಭೀತಿಮಯ ವಿಚಾರವನ್ನು ತಂದಿರುತ್ತದೆ ಪ್ರೊಫೆಸರ್ ಹೆರೊಲ್ಡಲಾಸ್ಕಿಯವರು ಹೇಳಿದಂತೆ ವಸಾಹತುಗಳನ್ನು ಜನಪದ ಮಂಡಲದ ಪರಿಪಾಲನೆಗೆ ಬಿಡಬೇಕಾಗುವುದು ವಿಲ್ಸನ್ನರಿಯವರು ಈ ಎಲ್ಲಾ ವಸಾಹತುಗಳನ್ನು ಒಟ್ಟುಮಾಡಿ ಎಲ್ಲಾ ಜನಾಂಗಗಳ ಪಾಲ್ಗೆಯನ್ನು ಧ್ಯೇಯವಾಗಿಟ್ಟು ಇವುಗಳ ತಯಾರಿ ಸಾಮಗ್ರಿಗಳ ಹಂಚೋಣ ಆಗಬೇಕೆಂದು ಸೂಚಿಸಿರುವರು ಸಾರ್ವಭೌಮತೆಯ ಮುಂದಾಳುಗಳಾದ ಸಾಮುವೇಲ ಹೋರರು ಕೂಡ, ಈ ಕುರಿತು ಒಂದು ಸಣ್ಣ ಸೂಚನೆಯನ್ನು ತನ್ನ ಜನಪದ ಮಂಡಳಕ್ಕೆ ಮಾಡಿದ ಭಾಷಣದಲ್ಲಿ ಮಾಡಿರುತ್ತಾರೆ.

ಮೇಲಿನ ಘಟನೆಗಳ ಪರಿಣಾಮ ಏನಾಗಬಹುದು? ಸಾರ್ವಭೌಮತೆಯು ಕೊನೆಗಾಣಲು ಎರಡು ಕಾರಣಗಳು ಜನಿಸುವುವು ೧ ಸಾರ್ವಭೌಮತೆಗೆ ಒಂದು ವಿರೋಧ ಪಕ್ಷವು ಜನಿಸುವುದು. ೨ ಸಾರ್ವಭೌಮತೆಯಲ್ಲಿ ಅಂತಃಕಲಹಗಳು ಪ್ರಾರಂಭವಾಗುವುವು ಈ ಎರಡು ಕಾರಣಗಳು ಇಟೇಲಿ ಎಬಿಸೀನಿಯಾ ಯುದ್ಧದಿಂದ ಸಂಭವಿಸುವುದು ಹಬಸಿಯವರ ದಣಿವಿಕೆಯು ಈ ಎರಡನೆ ಕಾರಣವನ್ನು ಸೃಷ್ಟಿಸಿದರೆ ಅವರು ಪಡೆಯುವ ಶ್ರಮವು ಸಾರ್ಥಕವಾಗುವುದು

ಕಲ್ಕತ್ತಾ ಕೊರ್ಪೊರೇಶನ್ ಕಾಂಗ್ರೆಸ್ ಜುಬಿಲಿ ಮಹೋತ್ಸವವನ್ನು ಜರಗಿಸುವುದು.

ಕಾಂಗ್ರೆಸ್ಸಿನ ಸುವರ್ಣ ಜುಬಿಲಿ ಮಹೋತ್ಸವವನ್ನು ಜರಗಿಸಲು ಕಲ್ಕತ್ತಾ ಕೊರ್ಪೊರೇಶನು ಠರಾವುಮಾಡಿರುತ್ತದೆ

ಈ ಸಮಾರಂಭದ ಸಮಯ ಇವರು ಪ್ರಕಟಿಸುವ ಕಲ್ಕತ್ತಾ ಮುನ್ಸಿಪಲ್ ಗೆಜೇಟಿನ ವಿಶೇಷ ಸಂಚಿಕೆಯು ಹೊರಡಿಸಬೇಕೆಂದು ನಿರ್ಧಾರವಾಡಿರುತ್ತಾರೆ ಆ ದಿನದ ಕೊರ್ಪೊರೇಶನ್ ಕಟ್ಟಡದ ಮೇಲೆ ಕಾಂಗ್ರೆಸ್ ಧ್ವಜವನ್ನು ಏರಿಸಬೇಕೆಂದೂ ನಿರ್ಣಯ ವಾಗಿದೆ

ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ

ಮೋಟಾರು ವಾಹನಗಳ ಮೇಲೆ ಕರಗಿಯನ್ನು ಹೊಸುವ ಒಂದು ಹೊಸ ಕ್ರಮವನ್ನು ಜ್ಯಾರಿಗೆ ತಂದಿರುವರು ಈ ಬಿಲಿನಿಂದ ಈಗ ಇರುವ ಟೋಲ್‌ಗೇಟುಗಳು ರದ್ದು ಹೊಂದುವುವು ಮತ್ತೆ ಅವುಗಳಿಂದ ಸಂಪಾದನೆಯಾಗುತ್ತಿದ್ದ ಹಣವನ್ನು ಈ ಕರದ ಮೂಲಕ ವಸೂಲ ಮಾಡುವರು ಹೀಗೆ ವಸೂಲಾದ ಹಣವನ್ನು ಹೆಚ್ಚಾಗಿ ಮಾರ್ಗಗಳ ದುರುಸ್ತಿಗೂ ರಚನೆಗೂ ವ್ಯಯಿಸಲಾಗುವುದು

Bank Constituents, look here please!

Constituents of The Travancore National Bank Ltd, (Mangalore Branch) The Canara Banking Corporation Udipi Ltd and other leading banks of South Kanara are cordially invited to examine **"THE DEPOSITORS INSURANCE SCHEME"** of THE GUARDIAN OF INDIA INSURANCE CO. LTD, MADRAS No other Insurance company in India or abroad has such a splendid scheme as this

THE GUARDIAN with a paid up Capital of Rs 1 00 375 and with a *record business* of about 35 lakhs within 11 months of its start, offers special facilities to its agents, has splendid attractive schemes for the public and boasts of one of the lowest premium rates!

For full particulars write to the Head Office 11, Mount Road Madras or to

Mr V D. Heranjal,
Dist organiser (for South & North Kanara) UDIPI

ನವರತ್ನ ದ್ರಾಕ್ಷಾಸವ. ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 8 0 ೬ ಔನ್ಸ್ ರೂ 0 14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿವಾರಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರ್ಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

1 ಔನ್ಸ್ ರೂ 1—0—0 ೬ ಔನ್ಸ್ ರೂ 1—8—0

ದಕ್ಷಿಣ ಕನ್ನಡದ ಏಜಂಟರು —ಪ್ರೊಪ್ರೈಟರ ಸ್ಟೋರ್ಸ್, ಮಂಗಳೂರು.

BEHAR CHEMICAL WORKS,
Bhagalpur.

ಬಿ. ಸಿ ರಸಾಯನಿಕ ವೈದ್ಯಶಾಲೆಯ ಚ್ಯವನ ಪ್ರಾಸ ಲೇಹ್ಯ.

ಮಾನವ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ.

ಸೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ಪೀಡಿತರ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಚರಕ ಋಷಿಗಳು ಇದರ ಗುಣವನ್ನು ಬಹುಶೀಘ್ರವಾಗಿ ವರ್ಣಿಸಿರು ವುದರಿಂದಲೂ ಎಲ್ಲಾ ಕವಿರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ ಇದರಲ್ಲಿ ನಶಿಸಿದ ಸ್ನಾಯುಗಳನ್ನು ಬಲಪಡಿಸುವ ಆಶ್ಚರ್ಯಕರವಾದ ಬಲವರ್ಧಕ ಶಕ್ತಿ ಇರುವುದರಿಂದಲೂ, ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರು ವುದರಿಂದಲೂ, ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು.

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8 0

ಏಜೆಂಟರು — ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು
ಮಂಗಳೂರು

New Era Technical School.
Near Market Square, Udipi

Commercial classes-approved by th Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

---

ವಜ್ರದ ಉಂಗುರುಗಳು

೧ಕ್ಕೆ ರೂ. ೦—೧೨—೦.

ಈ ಉಂಗುರುಗಳನ್ನು ಇಮಿಟೇಶನ್ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್‌ಗೋಲ್ಡ್ ಭಂಗಾರದಿಂದ ಕಟ್ಟಿದ ಕಟ್ಟಿದೆ ಇವರ ಬಣ್ಣವು ಎಂದಿಗೂ ಕೆಡದಂತೆ ಇಲೆಕ್ಟ್ರಿಕ್ ಪವರಿನಿಂದ ಬಣ್ಣ ಕೊಟ್ಟಿದೆ ... ಉಂಗುರಗಳಿಗೆ ... ಉಂಗುರಗಳಿಗೆ ... ಉಂಗುರಗಳಿಗೆ ... ರೋಲ್ಡ್‌ಗೋಲ್ಡ್ ... ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿಕೊಡುತ್ತೇವೆ.

ವಿಳಾಸ —ಸಿಟಿ ಮಾರ್ಟ್,
೧೭ನೇ ಪೇಟ ಮುಂಬಯಿ.

ಸಪಟ ಲೋಶನ್

... ಉಂಟಾದ ಚರ್ಮರೋಗಗಳ ... ಔಷಧಿ ... ಬಾಟ್ಲಿ ೧ಕ್ಕೆ ... ಬೇಕು

Sapat & Company, (S M)
Kalbadev Road Bombay 2

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ದಾತುಪುಷ್ಟಿ ಲೇಹ
(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಜಚ್ಚುವಿಕೆ, ಮಲಬದ್ಧತೆ, ಚಳಿಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 8 ಬಾಟ್ಲಗಳಿಗೆ ರೂ. 1-12-0.



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1—0—0.

ಮಲೇರಿಯಾ ನಿವಾರಿಣೀ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ.

ಬಾಟ್ಲಿ 1ಕ್ಕೆ ರೂ. 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು. ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದ, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:— ಶ್ರೀ ರಾಮಾ ಸ್ಟೇಷನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ದಾಸ ಶ್ರೀನಿವಾಸ ಶ್ಯೆ, ಪುತ್ತೂರು. ಮೆಸರ್ಸ್ ಮುಲ್ಲರ ಪರ್ಪ್ಟ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ... ಮುಂಬಯಿ ...

Shimoga, Virajendrapet (South

DEPOSITS.

1920	1930	1934	30-9-35
8,46,940/	20,[illegible],587/	24,96,029/	26,37,109/-

SAVINGS BANK ACCOUNTS

INTEREST allowed at 3½ %

Facilities 1. Withdrawal by CHEQUES. 2. Production of pass books unnecessary at the time of withdrawal. 3. Accounts transferred FREE of charge from one office to another.



ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಸರಕುಗಳು ಮೂರು ಬಣ್ಣದ 'ರೈಸಿಂಗ್ ಸನ್'

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

Telegrams: Bombay. Phone No. 26314.

The Bombay Life Assurance Company, Limited.

Kochikar Brothers,

Madras Branch Secretaries and Chief Agents for Bombay City & Suburbs.

1935 OUR SILVER JUBILEE YEAR.

ANNOUNCEMENT.

We have the pleasure to inform all our Constituents, Agents and Policyholders that we have Shifted on 30th September 1935 our Bombay Chief Agency Office from to "Gautam Nivas", Charni Road, Girgaum, Bombay No. 4, the newly erected Building, opposite Prarthana Samaj. This has been necessitated by the expansion of our business as the New Premises are very well situated and more spacious and we hope to render better service to our Policyholders. Our Patrons & Well wishers are requested to pay a visit to the New Premises at their early convenience. All correspondence and remittances should be addressed to our new Office address.

Bombay, 1-10-35. KOCHIKAR BROTHERS.

ಕರ್ನಾಟಕ ಪ್ರಸೂತಿಸಂಜೀವನ:

ಕರ್ನಾಟಕ ಕ್ಷೀರಬಲಾ:

(Toilets)

MISSING
29 NOVEMBER

MISSING
29 NOVEMBER

RAMA SNUFF

HighClass Snuff Manufacturers
Mangalore, S. I.
ASK FOR
RAMA SNUFF
The charm of Snuff Users!



"LIFE ASSURANCE
IS
NO. EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Madras Branch Secretaries.
Kochikar Brothers
Udipi Mangalore Bangalore Madras, Bombay and Calicut

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ದೊರೆತುದಲ್ಲವು ಮಹಾರತ್ನಗಳು ಸಾಗರವ ಮಥಿಸಲು ಸುರರಿಗದರಿಂ ಹರ ಪವಾಡಿಸಿ ತಿಂ ಪೂರ್ಣವಿಷ್ವವ ಸುಡ ಕ ಬೆದರುತಿರುವ ॥

ಗರಲಕವರಂಜದಿರೆ ಸುಧೆಯನ ವರಿತು ಕ್ಷುದ್ರ ಕರದ ಕುಳಿತರೆ । ತೆರಳ ಬಲ್ಲರೆ ತರಿದ ಧೀರರು ನಿಶ್ಚಿತಾರ್ಥವನ

ಪುಸ್ತಕ ೨೯. ಮಂಗಳೂರು ತಾ. ೬ನೇ ಶುಕ್ರವಾರ ದಶಂಬರ ೧೯೩೫ (6 – 12 – '35) ಸಂಚಿಕೆ ೪೮



...ಯುದ್ಧ ... ಸಾಗಿದೆ. ಸೆಂಕ್ಷನ್ ... ದವರೂ ಅವಮಾನವಾಯಿತೆಂಬುದು ... ತೆಂತೆ.

× × × × × ×

... ಲಾಹೋರಿನಲ್ಲಿ ಗುಪ್ತ ... ಮಾಡುವುದು, ... ಗಂಭೀರ, ಮಸೀದಿಗೆ ... ಇದರಿಂದ ಪ್ರಾರಂಭ ಫಲಧೆ, ಅಧಿಕಾರಿಗಳಿಗಂತೂ ರಾತ್ರಿ ನಿದ್ದೆ ಹತ್ತುವುದಿಲ್ಲ. ಇದಕ್ಕೆ ಔಷಧಿ ಇನ್ನೂ ತಯಾರಾಗಿಲ್ಲ.

× × × × × ×

ಲಾಹೋರಿನಲ್ಲಿ, ಇನ್ನು ಗಲಾಟೆ ಮುಗಿದಿಲ್ಲ, ಮಸೀದಿಯ ತಕರಾರು, ಮಿಲಿಟರಿಯವರಿಗೆ ಸುಮ್ಮನಿರಲು ಬಿಡುವುದಿಲ್ಲ

\+ + + +

ಜರ್ಮನಿಯವರು ಯುದ್ಧೋಪಕರಣಗಳಿಗೆ ಸೆಂಕ್ಷನ್ ಜಾರಿಮಾಡಿರುವರು ಜಾರಿಮಾಡಿದ ಹುಕುಂ ಇಟಲಿ ಯುದ್ಧಕ್ಕೆ ಅನುಕೂಲ ಕಾರಣ ಯುದ್ಧೋಪಕರಣಗಳು ಯಾರಿಗೂ ಇಲ್ಲ ಇದೀಗ ಒಳ್ಳೆ ಶೆಂಕ್ಷನ್, ಇಂಥಾದ್ದೆ ಬೇರೆಯವರು ಅನುಸರಿಸಿದರೆ ಯುದ್ಧವು ಉದ್ಧವೇ

\+ + + +

ಮುಂಬಾಯಿ ನೊನ್ ಬ್ರಾಹ್ಮಣರಿಗೆ ಒಂದು ಹೊಸ ಯೋಜನೆ ಹುಟ್ಟಿದೆ ಹೆಸರೇ ಹೊಸತು ಇಟ್ಟುಕೊಳ್ಳುವುದು. ಹೆಸರಿಡುವಾಗ ಒಳ್ಳೇ ಮುಹೂರ್ತ ನೋಡಿ ಇಡಲಿ, ಇವರು ಹೊಸ ಹೆಸರು ಇಟ್ಟುಕೊಳ್ಳುವಾಗ ಬ್ರಾಹ್ಮಣರು ಸುಮ್ಮನಿರುವರೇ!

\+ + + +

ನೊನ್ ಬ್ರಾಹ್ಮಣರಿಗೆ ಹೊಸ ಹೆಸರ ಬೇಕಾಗಿದೆ. ಆದರೆ, ಕಾಶೀವಿದ್ಯಾಪೀಠದ ಅಧ್ಯಾಪಕರು, ಒಂದು ಹಳ್ಳಿಯಲ್ಲಿ ಹರಿಜನರಿಗೆ ಕೊಟ್ಟು ಬಿಟ್ಟರು ಯಜ್ಞೋಪವಿತ್ರ, ಇವರಿಗೆ ಯಾವ ಹೆಸರು, ಹೊಸ ಹರಿ. ಬ್ರಾಹ್ಮಣ ಎಂಬುದು ಒಳ್ಳೇ ಹೆಸರು

\+ + + +

ಇಂಡಿಯದಿಂದ ಮಹಾರಾಜರುಗಳು ಇಂಗ್ಲಾಂಡಿಗೆ ಹೋಗಿ ಕೆಲವು ಪಾಠಗಳನ್ನೂ ಕೆಲವು ಹೊಸ ಯೋಜನೆಗಳನ್ನೂ ಮತ್ತು ಹೊಸ ರೀತಿಯಿಂದ ಹಣ ವ್ಯಯಮಾಡಲು ಕೆಲವು ಡಿಗ್ರಿ, ಪಾಸಾಗಿ, ಹಿಂದೂಸ್ಥಾನಕ್ಕೆ ಹಿಂತಿರುಗಿ ಬರುವರು

\+ + + +

ವಿಲಾಯತಿಗೆ ಹೋಗಿ ನರ್ತಕರಿಗೆ, ಚೀಲ ಭರ್ತಿ ಮಾಡಿದ್ದು ಈ ಸಲ, ನಮ್ಮ ಭಾವನಗರದ ಮಹಾರಾಜರು ವಿಲಾಯತಿ ಸೇರುತ್ತಲೆ ತಯಾರು ೨೦ ಕೋಣೆಗಳ ಬಂಗ್ಲೆ, ನಂತರ ಖರೀದಿ ಗೊಂಬೆಗಳು, ನಂತರ ನಾಯಿ, ಬಟ್ಟೆ ಬರೆ, ೨೬೦ ಸೂಟುಗಳು, ಕೊನೆಗೆ ಒಂದು ಮೋಟಾರು ಕಾರು, ಇದು ಗಂಡಸರ ಇಲಾಖೆಗೆಯಾಯಿತು

\+ + + +

ಇದರಂತೆಯೇ, ಮಹಾರಾಜರ ಕಡೆಯ ಮಹಿಳೆಯವರ, ಮತ್ತು ಮಹಾರಾಣಿಯವರಿಗೆ ಒಪ್ಪಿದ ನಗಗಳು.

\+ + + +

...ಕರು, ಇವರ ಈ ಸಾಮಾನುಗಳ ... ನೋಡಿ ದಿಗಿಲುಗೊಂಡರಂತೆ! ವ್ಯಾಪಾರ ... ದಿಗಿಲುಪಡುವುದೆ, ಅದರಲ್ಲೂ ಮಹಾರಾಜರ ವ್ಯಾಪಾರ. ಆದರೆ, ಮಹಾರಾಜರು ಈ ವ್ಯಾಪಾರವನ್ನು ಗುಪ್ತ ... ದಲೆ ಮಾಡಿರಬೇಕು. ಇವರಿಗೆ ... ಹೊರ ಬರುವಾಗ ಸ್ಪೆಶಲ್ ... ಯಿತಿ.

\+ + + +

... ಕಾಂಗ್ರೆಸ್ ...

ಅಸ್ವಸ್ಥದಲ್ಲಿ ಬಿದ್ದು ಏಳುತ್ತಿರುವವರು ಓವಲ್ಟಿನ್ ನಲ್ಲಿರುವ ಚೈತನ್ಯದಾಯಕವೂ ಆರೋಗ್ಯದಾಯಕವೂ ಆದ ಗುಣಗಳನ್ನು ಕಂಡು ಸಂತೋಷಗೊಳ್ಳುವರು. ... ಅಜೀರ್ಣತೆಗೂ ಕ್ರಮ ತಪ್ಪಿದ ಹಸಿವಿಗೂ 'ಓವಲ್ಟಿನ್' ಅತ್ಯುತ್ಕೃಷ್ಟ ಪಾನಕ

'ಓವಲ್ಟಿನ್' ನರಗಳನ್ನು ಪುಷ್ಟೀಕರಿಸುತ್ತದೆ ರಕ್ತವನ್ನು ವೃದ್ಧಿಗೊಳಿಸುತ್ತದೆ, ನಿದ್ರೆಯನ್ನುತ್ಪನ್ನಮಾಡುತ್ತದೆ, ರೋಗವನ್ನು ಓಡಿಸಿ ದೇಹಾರೋಗ್ಯವನ್ನು ವೃದ್ಧಿಸುತ್ತದೆ ಇದೀ ದೇಹವನ್ನು ಬೆಳೆಯಿಸಿ ಬಲವನ್ನೀಯುತ್ತದೆ ಅಸ್ವಸ್ಥದಲ್ಲಿರುವವರ ಕೋಣೆಗೆ 'ಓವಲ್ಟಿನ್' ಹೊಕ್ಕೊಡನೆ ಶೀಘ್ರ ಗುಣಲಾಭವಾಗುತ್ತದೆ.

'ಓವಲ್ಟಿನ್' ಎಂಬುದು ದೇಹ ಪೋಷಣೆಗೆ ಅನುಪಮ ಪಾನಕ ಆರೋಗ್ಯವನ್ನೂ ಶಕ್ತಿಯನ್ನೂ ದೇಹದಲ್ಲಿ ತುಂಬಿಸುತ್ತದೆ ಬೆಳೆದ ಬಾರ್ಲಿ, ದನದ ಕೆನೆಹಾಲು ಗೋಧಿ-ಇಲೇ ಮೊದಲಾದ ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲ್ಪಟ್ಟಿದೆ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ- ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ

'ಓವಲ್‌ಟಿನ್'

ಮಿದುಳು, ನರ, ದೇಹಗಳನ್ನು ಶಕ್ತಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ,

ಎಲ್ಲಾ ಕೆಮಿಸ್ಟರರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್ — ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ, ಮದ್ರಾಸು

ವಿಲಾಯತಿಯಲ್ಲಿ ತಯಾರಾದವುಗಳು

ಇದರಿಂದ ಒಬ್ಬರ ... ವಿಲ್ಲದೆ ಫೋಟೋ ತೆಗೆಯಬಹುದು ಬೇಕಾದವರಿಗೆ ಫೋಟೋ ತೆಗೆದು ಹಣ ಸಂಪಾದನೆ ಮಾಡಬಹುದು ಪೋಸ್ಟ್ ಕಾರ್ಡಿನ ಸೈಜಿನಲ್ಲಿ ಫೋಟೋಗಳನ್ನು ತೆಗೆಯಬಹುದು ಕ್ಯಾಮರದ ಜೊತೆಯಲ್ಲಿಯೇ ಫೋಟೋ ತೆಗೆಯುವ ವಿಧಾನವನ್ನು ಕಳುಹಿಸುವೆವು ಇದನ್ನು ತರಿಸಿಕೊಳ್ಳುವವರಿಗೆ ಮೂರು ವರ್ಷಗಳ ಗ್ಯಾರಂಟಿ ಇರುವ ಟೈಂಪೀಸು ಒಂದನ್ನು ಇನಾಮಾಗಿ ಕೊಡುವೆವು.

ಬೆಲೆ ಗಳ್ಗೆ ರೂ. ೪-೮-೦

K. M. Fernandes & Co.,
168, China Bazaar, MADRAS.

ವಳವು ಚೆನ್ನಾಗಿದೆ. ಕಾಂಗ್ರೆಸ್ಸಿನವರ ಉತ್ಸಾಹವೂ ಚೆನ್ನಾಗಿದೆ ಪ್ರತಿಯೊಂದು ಹಳ್ಳಿಗೂ ಕಾಂಗ್ರೆಸೆಂದರೇನೆಂದು ಗೊತ್ತಾಗಿದೆ, ಎಂಬುದನ್ನು ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬೂ ರಾಜೇಂದ್ರರು, ಹೇಳಿಯೇ ಬಿಟ್ಟರು. ನಮ್ಮ ಮಂಗಳೂರಿನ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾರ್ಟಿಯವರ ಕ್ಷೇಮಾಚಾರ ಅಲ್ಲೆಂದಲ್ಲ.

Ested 1920] THE [1920ರಲ್ಲು ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—8 ತಿಂಗಳಿಗೆ ಶೇಕಡಾ 5 ರಂತೆ, 6 ತಿಂಗಳಿಗೆ ಶೇಕಡಾ 5 ರಂತೆ, 12 ತಿಂಗಳಿಗೆ ಶೇಕಡಾ 6½ ರಂತೆ

"ಸೇವಿಂಗ್ಸ್ ಬೇಂಕ್"— ಎಂಬ ಸಂಚಯ ಠೇವಣಾತಿಗಳು ಶೇಕಡಾ 4 ರಂತೆ.

"ಚಾಲ್ತಿ ಠೇವಣಾತಿಗಳು"— ಶೇಕಡಾ 2½ ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N. Lakshman Pai,
Secretary.

ಸಂಶೋಧನಾಲಯದ ಮಾಯಾವಿಗಳು.

ಕೆಲವು ವಿಜ್ಞಾನದ ಕೌತುಕಗಳು.

ನಾವು ವಿಜ್ಞಾನದ ಕೌತುಕಗಳನ್ನು ದಿನ ದಿನ ಕೇಳುತ್ತಿದ್ದೇವೆ. ಆದರೆ ಸಂಶೋಧನಾಲಯಗಳ ಮಾಯಾವಿಗಳು ಕೆಲವು ಅದ್ಭುತಗಳನ್ನು ತೋರಿಸುತ್ತಿದ್ದಾರೆ. ಅಮೇರಿಕಾದ ಸಂಶೋಧಕನೊಬ್ಬನು, ಮನುಷ್ಯನ ಕಾರ್ಯಗಳನ್ನು ಮಾಡುವ ಒಂದು ವಿಚಿತ್ರ ಯಂತ್ರವನ್ನು ಕಲ್ಪನೆಮಾಡಿರುತ್ತಾನೆ. ಈ ಯಂತ್ರವೂ ಎಲ್ಲಾ ವಿಚಾರಗಳಲ್ಲಿ ಮಾಂಸರಹಿತ ಮಾನವನಾಗಿರುತ್ತದೆ. ಮನುಷ್ಯನಂತೆ ವರ್ತಿಸಬಲ್ಲುದು, ಆಲೋಚಿಸಬಲ್ಲುದು, ನೆನಪುಮಾಡಬಲ್ಲುದು, ತನ್ನ ವಿಚಿತ್ರ ಯಾಂತ್ರಿಕ ಕಣ್ಣುಗಳಿಂದ ವಿವಿಧ ಬಣ್ಣಗಳ ಗೊತ್ತುಹಚ್ಚಬಲ್ಲುದು. ಈ ಯಂತ್ರವು ವಿದ್ಯುತ್ ಶಕ್ತಿಯಿಂದ ಕಾರ್ಯಸುತ್ತದೆ.

'ವಿದ್ಯಾವಂತ' ಯಂತ್ರವು

ಕಲ್ಪಿತ ಮೆದುಳಿನಿಂದ ಕೂಡಿದ, ಮತ್ತು ಚಲಿಸುವ ಕೈಕಾಲುಗಳುಳ್ಳ ಈ ಯಾಂತ್ರಿಕ ಮನುಷ್ಯನು ವಿದ್ಯಾಭ್ಯಾಸಂಗ ಮಾಡಬಲ್ಲನು. ವಿದ್ಯಾವ್ಯಾಸಂಗದಲ್ಲಿ ಸಜೀವ ಮನುಷ್ಯನಿಗಿಂತ ಉಚಿತವಾದ ರೀತಿಯಲ್ಲಿ ವರ್ತಿಸಬಲ್ಲದು. ಇನ್ನು ಮುಂದಕ್ಕೆ ಇಂಥಾ ಯಾಂತ್ರಿಕ ಮನುಜರು, ಮಾನವನ ಹಲವು ನೌಕರಿಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಂತೆ. ಚಂದ್ರನಲ್ಲಿ ತುಂಬಾ ಲೋಹಗಳಿವೆಯೆಂದೂ, ಅದನ್ನು ನಾವು ಈ ತರದ ಯಂತ್ರಗಳಿಂದ ಅಗೆದು ಪಡೆಯಬಹುದೆಂದೂ ಕೆಲವು ಪ್ರಸಿದ್ಧ ವಿಜ್ಞಾನಿಗಳ ಭರವಸೆ.

ಶಿಶುಗಳನ್ನು ಪಡೆಯುವ ನವೀನ ರೀತಿ

ಕಳೆದ ವರ್ಷ ಅಮೇರಿಕಾದಲ್ಲಿ ಸ್ತ್ರೀಪುರುಷ ಸಂಗ ರಹಿತವಾಗಿ ಶಿಶುಗಳನ್ನು ಸೃಷ್ಟಿಸಿರುತ್ತಾರೆ. ಇಂತಹವುಗಳಿಗೆ 'ಟೆಸ್ಟ್‌ಟ್ಯುಬು ಬೇಬಿ'ಗಳೆಂದು ಕರೆಯುತ್ತಾರೆ. ಪುರುಷರ ವೀರ್ಯವನ್ನು ತೆಗೆದು ಅದನ್ನು ಸ್ತ್ರೀಯರ ಗರ್ಭದಲ್ಲಿ ಸೇರಿಸಿ ಶಿಶುಗಳನ್ನು ತಯಾರು ಮಾಡಿದ್ದರು. ಆದರೆ ವಿಜ್ಞಾನಿಗಳು ಇತ್ತೀಚಿಗಿನ ಕ್ರಮಗಳಿಂದ ತಾಯಂದಿರಿಗೂ ಯಾವತ್ತೂ ಕಷ್ಟವಿಲ್ಲದೆ ಶಿಶುಗಳನ್ನು ಸಂಶೋಧನಾಲಯದಲ್ಲಿ ನಿರ್ಮಿಸಲು ಸಾಧ್ಯವಾಗುವುದಂತೆ. ವಿದ್ಯುಚ್ಛಕ್ತಿಯಿಂದ ನಡೆಯುವ ಕೆಲವು ವಿಚಿತ್ರ ಉಪಕರಣಗಳಿಂದ, ಈ ಶಿಶುಗಳು ಜನಿಸುವಂತೆ ಮಾಡುವದಲ್ಲದೆ, ಅವುಗಳು ಆರೋಗ್ಯವಂತರಾಗಿ ಬೆಳೆಯುವಂತೆ ಮಾಡಲು ಸಾಧ್ಯವಾಗುವುದಂತೆ. ಮುಂದಕ್ಕೆ ಶಿಶುಗಳನ್ನು ಮಾನವನ ಅಪ್ಪಣೆಗನುಸಾರವಾಗಿ ತಯಾರಿಸಬಹುದು. ನವೀನ ರೀತಿಯಲ್ಲಿ ಜನ್ಮಹೊಂದಿದ ಈ ಶಿಶುಗಳನ್ನು ಪೋಷಕರಿಲ್ಲದೆ ಸಲಹುವ ವಿಧಾನಗಳು ಕೂಡ ನಿರ್ಮಾಣಹೊಂದಿವೆ.

ಚಕರವಿಲ್ಲದೆ ಕಾರ್ಯಗಳನ್ನು ಮಾಡುವುದು.

ವಿಜ್ಞಾನಿಗಳು 'ರೇಡಿಯೊ' ಎಂಬ ನವೀನ ತರದ ಶಕ್ತಿಯನ್ನು ಕಂಡು ಹಿಡಿದಂದಿನಿಂದ, ಮಾನವನ ಜೀವನವು ಸುಲಭವಾಗ ಬರುತ್ತಿದೆ. ಕೂತಲ್ಲಿನಿಂದಲೆ ಬೇಕಾದ ಕಾರ್ಯಗಳನ್ನು ಮಾಡಬಲ್ಲನು. ಜನರ ಸಹಾಯವಿಲ್ಲದೆ, ಬೀಗಗಳನ್ನು, ದ್ರವ್ಯ ವಿರುದ್ಧ ಮನೆಗಳನ್ನು ಯಾ ಯಾವತ್ತೂ ವ್ಯಾಪಾರ ನಿಲಯಗಳನ್ನು ಕಳ್ಳಕಾಕರಿಂದ ಸುರಕ್ಷಿತವಾಗಿ ಮಾಡಬಹುದು. 'ಫೋಟೊ ಇಲೆಕ್ಟ್ರಿಕ್ ಸೆಲ್' ಎಂಬ ಯೋಜನೆಯಿಂದ, ಹರದಾರಿ ದೂರವುಳ್ಳ ಮನುಷ್ಯನು ತನ್ನ ವ್ಯಾಪಾರ ಸ್ಥಳದಲ್ಲಿ ಬೇಡಾದವರು ಹೊಕ್ಕರೆ, ಅಥವಾ ಯಾವತ್ತೂ ಅಪಘಾತಗಳು ಬಂದರೆ ಅವು ಅರಿಯಲು ಸಾಧ್ಯವಾಗುತ್ತದೆ. ಬೆಳಕಿನ ಪ್ರಕಾಶದ ರಶ್ಮಿಯು ಇದನ್ನು ಈ ನವೀನ ಸೆಲ್ಲಿನಿಂದಾಗಿ ಇವೆಲ್ಲವನ್ನು ಮಾಡಬಲ್ಲುದು. ನಗರಗಳಲ್ಲಿ ಕತ್ತಲಾದೊಡನೆ ಮನುಷ್ಯ ಸಹಾಯವಿಲ್ಲದೆ ಮಾರ್ಗದ ಎಲ್ಲಾ ದೀಪಗಳು ಉರಿಯುವಂತೆ ಮಾಡಲು ಸಾಧ್ಯವಾಗುವುದು. ಬೆಳಕು ಹರಿದ ಕೂಡಲೆ ಈ ದೀಪಗಳು ನೊಂದು ಹೋಗುವುವು. ಇಂಥಾ ನವೀನ ಯೋಜನೆಯನ್ನು ಲಂಡನಿನಲ್ಲಿ ಉಪಯೋಗಮಾಡುತ್ತಿದ್ದಾರಂತೆ. ಇಂಗ್ಲಾಂಡಿನ ಮತ್ತೊಂದು ಕಡೆಯಲ್ಲಿ ಈ ಪ್ರಕಾಶದ ರಶ್ಮಿಯಿಂದ ಮತ್ತು ಫೋಟೊ ಇಲೆಕ್ಟ್ರಿಕ್ ಸೆಲ್‌ನಿಂದ, ಸಾಮಾನುಗಳ ಲೆಕ್ಕವನ್ನು ಅತಿ ಜಾಗರೂಕತೆಯಿಂದ ತೆಗೆಯುತ್ತಿದ್ದಾರಂತೆ. ಈ ಕಾರ್ಯದಲ್ಲಿ ಧಾರಳ ಸಾಮಾನುಗಳಿರುವ ವೇಳೆ ಮನುಷ್ಯನು ತಪ್ಪಿಹೋಗಲು ಸಾಧ್ಯವಿದೆ. ಆದರೆ ಈ ನವೀನ ಯೋಜನೆಯು ನೆಟ್ಟಗಾಗಿ ಕೆಲಸಮಾಡಬಲ್ಲದು. ಈ ನವೀನ ಪ್ರಕಾಶಕಿರಣದಿಂದ ಕಾರ್ಯಸುವ ಯೋಜನೆಯಿಂದ, ಕುಡಿಯುವ ಸರಾಯಿಯು ಒಳ್ಳೆದೊ ಕೆಟ್ಟದೊ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. [illegible] ಸರಾಯಿಯು ಈ ಯಂತ್ರದ ದೃಷ್ಟಿಗೆ ಬಿದ್ದರೆ ಅದು ಅಸಮಾಧಾನ ಪಡೆದ ಮನುಷ್ಯನಂತೆ [illegible].

ಮನುಷ್ಯರ ಸುಖವಿಲಾಸಗಳನ್ನು ಉದ್ಧರಿಸುವ ಯೋಜನೆಗಳು.

ಉಣ್ಣೆಯಲ್ಲಿ ಹಲವು ತರಗಳಿವೆ. ಕೆಲವು ಒಗೆಯಲು ಸಾಧ್ಯವಾಗವುದಿಲ್ಲ. ಆದರೆ ಇವುಗಳ ಭೇದಗಳನ್ನು ಮುಂಚಿತವಾಗಿ ತಿಳಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಮೇಲಿನ ನವೀನ ಶೋಧೆಯಿಂದಾಗಿ, ಮನುಷ್ಯನ ವಸ್ತ್ರಗಳನ್ನು ತಯಾರಿಸಲು ಯೋಗ್ಯವಾದ ಉಣ್ಣೆಯನ್ನು ಹೇಳಲಾಗುವುದು.

ಪಾಶ್ಚಾತ್ಯದಲ್ಲಿ ವರ್ಷಂಪ್ರತಿ ಮಾನವನ ಕಾರ್ಯವನ್ನು ಕಡಿಮೆಮಾಡುವ ಯಂತ್ರಗಳ ಜನ್ಮಹೊಂದುತ್ತಿವೆ. ಇವುಗಳ ವಿಜ್ಞಾನಿಗಳಲ್ಲದ ಮಾನವರಲ್ಲಿ ಬೆರಗನ್ನುಂಟುಮಾಡುತ್ತಿವೆ. ಕಳೆದ ವರ್ಷ ಲಂಡನಿನ ಒಂದು ಪ್ರಾಮುಖ್ಯ [illegible] ಸಂಸ್ಥೆಯಲ್ಲಿ ಅವರ ವರ್ಗ ಬರೆಯಲು ಒಂದು ಗಂಟೆಗೆ ೬೦,೦೦೦ ಹೆಸರುಗಳ ಅಡಿಯಲ್ಲಿ ಜಮಾ ಖರ್ಚು ಬರೆಯುವ ನವೀನ ಯಂತ್ರವನ್ನು ನಿರ್ಮಿಸಿರುತ್ತಾರೆ. ಚೆಕ್ಕುಗಳ ನಿಭಾಯಿಸುವಿಕೆಯಲ್ಲಿ ಅವುಗಳ ವಿವರಗಳನ್ನು, ಹೆಸರುಗಳನ್ನೂ ಜಾಗರೂಕವಾಗಿ ಬರೆಯುವುದಲ್ಲದೆ, ಅವುಗಳಲ್ಲಿ ಯಾವುದಾದರೂ ದೋಷ ಬಂದರೆ, ಅದನ್ನು ಕಂಡುಹಿಡಿಯುವುದು. ಇತ್ತೀಚೆಗೆ ಲಂಡನಿನಲ್ಲಿ ನಡೆದ ಪ್ರದರ್ಶನದಲ್ಲಿ ತಾಸು ಒಂದರ ೫೦ ಕಾಗದಗಳು ಬಟವಾಡೆ ಮಾಡುವ, ಮತ್ತು ಒಂದು ದಿವಸಕ್ಕೆ, (ಕಾರ್ಯದಿವಸ) ೨೫,೦೦೦ ಲಕೋಟೆಗಳಿಗೆ ಕ್ರಮಾನುಸಾರವಾಗಿ ಎಡ್ರೆಸುಗಳನ್ನು ಬರೆಯುವ ಯಂತ್ರಗಳನ್ನು ಕಾರ್ಯಸುವ ಅವಸ್ಥೆಯಲ್ಲಿ ಪ್ರದರ್ಶಿಸಲ್ಪಟ್ಟಿದ್ದುವು.

ಪಾಶ್ಚಾತ್ಯರ ಒಂದು ಲೆಕ್ಕದ ಪ್ರಕಾರ ವರ್ಷಂಪ್ರತಿ ೩೦,೦೦೦ ನವಶೋಧೆಗಳು ಅವುಗಳನ್ನು ರಿಜಿಸ್ಟ್ರಿ ಮಾಡುವ ಇಲಾಖೆಯವರಿಂದ ತಿರಸ್ಕರಿಸಲ್ಪಡುತ್ತಿವೆ. ಇದರಿಂದ ವಿಜ್ಞಾನದೀಪ ವರ್ಷಂಪ್ರತಿ ಎಷ್ಟು ನವಶೋಧೆಗಳಾಗುತ್ತಿವೆ ಎಂದು ನೀವೆ ಭಾವಿಸಬಹುದು.

ಗತವರ್ಷದ ನಮ್ಮ ಜುಮ್ಲಾ ವ್ಯಾಪಾರ ಮೌಲ್ಯವು ರೂ. ೩೮೮ ಕೋಟಿಯಾಗಿರುತ್ತದೆ.

೪೫ ದಿವಸ ಸಮಾಧಿಯಲ್ಲಿದ್ದು ಗೋರಿಯಲ್ಲಿ ವಾಸವಾಗಿದ್ದ ಪ್ರಸಿದ್ಧ ಸಾಧುಗಳು; ನಮ್ಮ ವಿದ್ಯಾಭ್ಯಾಸ.

೪೫ ದಿವಸ ಸಮಾಧಿಯಲ್ಲಿದ್ದು, ಗೋರಿಯಲ್ಲಿ ವಾಸವಾಗಿದ್ದ ಪ್ರಸಿದ್ಧ ಸಾಧುಗಳು

ಯೋಗಾಭ್ಯಾಸದಲ್ಲಿ ಶ್ರೇಷ್ಠವಾದ ತಪಸ್ಸಿನಾಚರಣೆಗಾಗಿ, ಹರಿದ್ವಾರದ ಪ್ರಸಿದ್ಧ ಸಾಧುಗಳೊಬ್ಬರು, ಘನತರದ ಸಮಾಧಿಹೊಂದಿದ ವರ್ತಮಾನವು ನಮಗೆ ಬಂದಿರುತ್ತದೆ. ಸಾಧುಗಳು ಕಡಿಮೆ ಪ್ರಾಯದ ತರುಣರು. ಒಕ್ಟೋಬರ ೧೦ನೇ ತಾರೀಕಿನ ದಿವಸ ಸಾವಿರಗಟ್ಟಲೆ ನೆರೆದಿರುವ ಜನಸ್ತೋಮದ ಎದುರಿನಲ್ಲಿ ೧೬ ಚದರ ಅಡಿ ವಿಸ್ತಾರವುಳ್ಳ, ನೆಲದಿಂದ ಕೂಡಿದ ೪ ಅಡಿ ಎತ್ತರವಿರುವ ಮತ್ತು ಎರಡು ಸಣ್ಣ ತೂತಗಳಿಂದ ಕೂಡಿದ ಗೋರಿಯಲ್ಲಿ ಸಮಾಧಿಗೈದರು. ಇವರು ಗೋರಿಯನ್ನು ಸೇರಿದೊಡನೆ ಅದನ್ನು ಕಲ್ಲುಗಳಿಂದಲೂ ಸಿಮೆಂಟಿನಿಂದಲೂ ಮುಚ್ಚಿದ್ದರು. ಗೋರಿಯನ್ನು ಪ್ರವೇಶಿಸುವ ಮೊದಲು, ಸಾಧುಗಳ ತಾನು ೪೫ ದಿವಸಗಳ ಅಂತ್ಯದಲ್ಲಿ ಓಂ ಎಂಬ ಶಬ್ದವನ್ನು ಉಚ್ಛರಿಸುವನೆಂದು, ಅದನ್ನು ಕೇಳಿದೊಡನೆ ಗೋರಿಯನ್ನು ಒಡೆದು ತನಗೆ ಹೊರಗೆ ತೆಗೆದು ಸ್ವಲ್ಪ ಫಲಗಳ ರಸವನ್ನು ಕೊಡಬೇಕಾಗಿಯೂ ಮತ್ತು ಮೈಯನ್ನು ಚೆನ್ನಾಗಿ ತಿಕ್ಕಬೇಕಾಗಿ ಆಜ್ಞೆಮಾಡಿದರು. ಅವರ ವಚನಗಳ ಸಾರವಾಗಿ, ಮೊನ್ನೆ ಎಳಿಗ್ಗೆ ಜಾವಕ್ಕೆ ಇವರ ಓಂ ಶಬ್ದವನ್ನು ಉಚ್ಛರಿಸಿದರು. ಒಡನೆ ಗೋರಿಯನ್ನು ಕೆಡವಿ ಇವರನ್ನು ಹೊರತೆಗೆದು ಆಜ್ಞಾಪಿಸಿದಂತೆ ಉಪಚಾರಗಳನ್ನು ಮಾಡಿದರು. ಸಾಧುಗಳ ಈ ರೀತಿ ಮೂರುಬಾರಿ ಸಮಾಧಿ ಹೊಂದಿದ್ದರಂತೆ. ಆಗ್ಯೆ ಇವರ ಪ್ರಥಮದ ಸಮಾಧಿಯಲ್ಲಿ ಅವರ ಒಂದು ಕೈಗೆ ಗೆದ್ದಲ ಹಿಡಿದ್ದಿತಂತೆ.

ನಮ್ಮ ವಿದ್ಯಾಭ್ಯಾಸ.

ನಮ್ಮ ವಿದ್ಯಾಭ್ಯಾಸವನ್ನು ಏನಾವುದು ಪೀಡಿಸುತ್ತಿದೆ? ಈ ಕುರಿತಾಗಿ [illegible] [illegible] ಈ ರೀತಿ ಭಾಷಣಮಾಡಿರುತ್ತಾರೆ. [illegible] ಸರಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ದೊರಕುವಂತೆ ವಿದ್ಯಾವ್ಯಾಸಂಗ ಮಾಡಲು ಸಾಧ್ಯವಾಗುವಂತೆ ಎಲ್ಲಾ ವಿದ್ಯಾಸಂಸ್ಥೆಗಳು ನಿರ್ಮಾಣವಾಗಿದ್ದವು. ಸರಕಾರದ ಚಳುವಳಿಯಲ್ಲಿ ಇವರು ಶ್ರಮಪಡಬೇಕಾಗಿ ಉದ್ದೇಶಗಳಿದ್ದುವು. ಈ ಉದ್ದೇಶಗಳಿಂದಾಗಿ ತಂದೆತಾಯಿಗಳು [illegible] ಭಾವಿಸುತ್ತಿದ್ದರು. ಶಾಲೆಗಳಲ್ಲಿ ಪಾಠಕ್ರಮಗಳು ಈ ಉದ್ದೇಶವನ್ನನುಸರಿಸಿವೆ. ಆದರೆ ಇತ್ತೀಚೆಗೆ ಶಾಲೆಗಳನ್ನು ಬಿಟ್ಟ ತರುಣರು ನಿರುದ್ಯೋಗಿಗಳಾಗಿ ಅಲೆದಾಡುತ್ತಿದ್ದಾರೆ. ಇದರಿಂದ ದೇಶದಲ್ಲೆಲ್ಲಾ ಅಸಮಾಧಾನವು ಉಂಟಾಗಿರುತ್ತದೆ. ಆದರಿಂದ ನಮ್ಮ ಪ್ರಾಥಮಿಕ ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸಬೇಕು. ಗ್ರಾಮಾಭ್ಯುದಯಕ್ಕೆ ಎರವಾಗುವಂತೆ ನಮ್ಮ ಬಾಲಕರ ವಿದ್ಯಾಭ್ಯಾಸ ನಡೆಯತಕ್ಕದು. ವಿದ್ಯಾಭ್ಯಾಸದಿಂದ ತರುಣರು ಸ್ವತಂತ್ರರಾಗಿ ತಮ್ಮ ಜೀವಮಾನವನ್ನು ನಡೆಯಿಸಲು ಸಾಧ್ಯವಾಗಬೇಕು. ಪ್ರಾಥಮಿಕ ವಿದ್ಯಾಭ್ಯಾಸವು ಅವರ ಜೀವಮಾನಕ್ಕೆ ಮುಖ್ಯ ಸೋಪಾನವಾಗತಕ್ಕದು. ಅವರ ವಿದ್ಯಾಭ್ಯಾಸವು ಮುಗಿದ ಕೂಡಲೆ ಅವರನ್ನು ಲಾಭಕರ ಉದ್ಯಮಗಳಲ್ಲಿ ತರಬೇತು ಮಾಡುವ ಸಂಸ್ಥೆಗಳನ್ನು ಸರಕಾರವು ಸ್ಥಾಪಿಸತಕ್ಕದು. ಈಗ ಅನೇಕ ವಿದ್ಯಾರ್ಥಿಗಳು, ಹೈಸ್ಕೂಲಿನಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿದನಂತರ ತಮ್ಮ ಇಚ್ಛೆಗೆ ವಿರುದ್ಧವಾಗಿ ಬೇರೆ ದಾರಿಕಾಣದೆ, ಧಾರಳ ವೆಚ್ಚ ತಗಲುವ ನಿಷ್ಪ್ರಯೋಜನಕಾರಿಯಾದ ಪ್ರೌಢ ವಿದ್ಯಾಭ್ಯಾಸವನ್ನು [illegible] ಕಾಲೇಜುಗಳನ್ನು ಸೇರಿ, ಅನಾವಶ್ಯಕ ಧಾರಳ ಹಣವ್ಯಯದಲ್ಲಿ ಭಾಗಿಗಳಾಗುತ್ತಿದ್ದಾರೆ. ಈಗ ವಿದ್ಯಾಸಂಸ್ಥೆಗಳಿಂದ "ಬುದ್ಧಿವಂತ ಭಿಕ್ಷುಕರ" ಸೃಷ್ಟಿಯು ಆಗುತ್ತಿರುವುದನ್ನು ನಿಲ್ಲಿಸುವಂತೆ ಮಾಡಿ, ವಿದ್ಯಾಭ್ಯಾಸವು ನಿಜವಾಗಿಯೂ ಉಪಯುಕ್ತವಾಗುವಂತೆ ಸರಕಾರವು ಸಾಧಿಸತಕ್ಕದು. ನಮ್ಮ ಶಾಲೆಗಳಿಂದ ನಿಜವಾದ ಮಾನವನ ಸೃಷ್ಟಿಯಾಗತಕ್ಕದು. ಅವರು, ರೈತರು, ಕರ್ಮಗಾರರು, ಉಪಾಧ್ಯಾಯರು, ವೈದ್ಯರು, ವಕೀಲರು, ಆಗುವುದಲ್ಲದೆ, ಸಮಯಕ್ಕನುಸಾರವಾಗಿ ವರ್ತಿಸಲೂ, ವಿಚಾರಿಗಳೂ, ಬುದ್ಧಿಕುಶಲತೆಯಿಂದ ಕೂಡಿದವರೂ, ಧೈರ್ಯಶಾಲಿಗಳೂ, ಪರೋಪಕಾರಿಗಳೂ, ಶ್ರೇಷ್ಠ ಜೀವಮಾನವನ್ನು ನಡೆಯಿಸುವವರಾಗತಕ್ಕದು."

ನಮ್ಮ ವ್ಯಾಪಾರದ ವರದಿ.

೧೯೩೪ರ ಹಿಂದುಸ್ಥಾನದ ವ್ಯಾಪಾರದ ವರದಿ ಈಗ ಪ್ರಕಟವಾಗಿರುತ್ತದೆ. ಇದರಲ್ಲಿ ನಮ್ಮ ವ್ಯಾಪಾರವು ಅಭಿವೃದ್ಧಿಯಾಗುತ್ತಿದೆಯೆಂದು ದೃಢೀಕರಿಸಲ್ಪಟ್ಟಿದೆ. ಆದರೆ ನಮ್ಮ ವ್ಯಾಪಾರ ಸ್ಥಿತಿಯು ನಿಜವಾಗಿಯೂ, ಅಷ್ಟು ಭರವಸೆಕೊಡತಕ್ಕದಲ್ಲ. ಕೃಷೀವಲರ ಜಿನಸುಗಳ ಕ್ರಯವು ಬಹಳ ಇಳಿದಿದ್ದು, ನಮ್ಮ ರಫ್ತು ಆಮದಿಗಿಂತ ಕಡಿಮೆ ದರದಲ್ಲಿ ನಡೆಯುತ್ತದೆ. ನಮ್ಮ ಜುಮ್ಲಾ ವ್ಯಾಪಾರವು ರೂ ೩೮೮ ಕೋಟಿ. ೧೯೩೩-೩೪ರಲ್ಲಿ ಇದು ೩೫೫ ಕೋಟಿಯಾಗಿತ್ತು. ನಮ್ಮ ರಫ್ತು ೨೦೬ರಿಂದ ೨೧೬ ಕೋಟಿಗಳಿಗೂ ಆಮದು ೧೪೬ರಿಂದ ೧೩೨ ಕೋಟಿಗಳಿಗೂ ಏರಿರುತ್ತದೆ. ಆದರೆ ಭಂಗಾರದ ರಫ್ತನ್ನು ವಿಂಗಡಿಸಿದರೆ ನಮ್ಮ ವ್ಯಾಪಾರವು ಇದರಲ್ಲಿ ಚಿತ್ರಿಸಿದಷ್ಟು ಅಭಿವೃದ್ಧಿ ಹೊಂದಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಸರಕಾರವು ಮುಂದಕ್ಕೆ ನಮ್ಮ ರಫ್ತಿನ ಅಭಿವೃದ್ಧಿಗಾಗಿ ಹೆಚ್ಚಿನ ಶ್ರಮ ಪಡಬೇಕಾಗಿದೆ. ಹೊರಗಣ ಮಾರ್ಕೆಟುಗಳಲ್ಲಿ ನಮಗೆ ಸ್ಥಳ ದೊರಕುವಂತೆ ಸಾಧಿಸತಕ್ಕದು.

ಪ್ರಕಟವಾದ ವರದಿಯ ಸಂಕ್ಷಿಪ್ತ ವಿವರಗಳು

ಹಿಂದೂದೇಶದಿಂದ ಗತವರ್ಷದಲ್ಲಿ ಹೊರಗೆ ಹೋದ ಬಂಗಾರದ ಮೌಲ್ಯ ರೂ ೫೩ ಕೋಟಿಗಳಾಗಿರುತ್ತದೆ. ಹೊರಗಿನವರಿಗೂ ನಮಗೂ ಇರುವ ಸರಕಿನ ವ್ಯಾಪಾರದ ಆದಾಯದಲ್ಲಿ ರೂ ೧೯ ಕೋಟಿ ಅಧಿಕವಿರುತ್ತದೆ. ಬೆಳೆಯು ಎಲ್ಲೆಲ್ಲೂ ಕಡಿಮೆಯಾಗಿತ್ತು. ಕೆಲವು ದವಸಧಾನ್ಯಗಳ ಬೆಲೆಗಳು ಸ್ವಲ್ಪ ಏರಿದ್ದವು. ಗೋದಿಯ ಬೆಲೆಯು ಕಡಿಮೆಯಾಗಿತ್ತು. [illegible] ವ್ಯಾಪಾರವು ಅಭಿವೃದ್ಧಿ ಹೊಂದಿದ [illegible] ಯಲ್ಲಿದ ೧೯೩೩-೩೪ಕ್ಕಿಂತ ಸ್ವಲ್ಪ ವೃದ್ಧಿಯಾಗಿದ್ದರೂ ನಮ್ಮ ದವಸಧಾನ್ಯಗಳಿಗೆ ಹೊರಗಣ ದೇಶಗಳಿಂದ ಗಿರಾಕಿಗಳು ಹೆಚ್ಚುವ ಸಂಭವವಿರಲಿಲ್ಲ. ದವಸಧಾನ್ಯಗಳ ಬೆಲೆಯೂ ೧೯೩೪ರ [illegible] ಅತಿಕಡಿಮೆಯಾಗಿ ಇದ್ದಿತ್ತು. ಸಾಗುವಳಿಯ ಆದಾಯವು ವಿವಿಧ ಪ್ರಾಂತ್ಯಗಳಲ್ಲಿ ಈ ರೀತಿ ಇದ್ದಿರುತ್ತದೆ.— ಮದ್ರಾಸ [illegible] ಸಲೆ ಬಂಗಾಳ [illegible] ಸಲೆ ಬಿಹಾರ ಮತ್ತು ಒರಿಸ್ಸಾ [illegible], ಮುಂಬಾಯಿ [illegible], ಯುನೈಟೆಡ್ ಪ್ರಾವಿನ್ಸು [illegible], ಪಂಜಾಬ [illegible], ಮಧ್ಯಪ್ರಾಂತ್ಯಗಳು [illegible]. ಒಟ್ಟಾರೆ ಹಿಂದೂದೇಶದ ಸಾಗುವಳಿಯಿಂದ ಆದಾಯವು ಅರ್ಧಕ್ಕರ್ಧ ಕಡಿಮೆಯಾಗಿರುತ್ತದೆ. ರೈತನು ತಾನು ಬೆಳೆಯುವ ದವಸಧಾನ್ಯಗಳನ್ನು, ತನಗೆ ಉಪಯುಕ್ತವಾಗುವ ಸಾಮಾನು ಯಾ ಕಾರ್ಯಗಳಿಗೆ ಬದಲಾಯಿಸುವುದರಿಂದ ದವಸಧಾನ್ಯಗಳ ಬೆಲೆಯ ಇಳಿತವು ಇವರನ್ನು ಅಷ್ಟು ಬಾಧಿಸಲಿಲ್ಲ. ೧೯೩೪-೩೫ರಲ್ಲಿ ದೇಶೀಯ ಸಾಮಗ್ರಿಗಳು ಧಾರಾಳ ತಯಾರಾಗಿವೆ ಮಾತ್ರವಲ್ಲದೆ ಮಾರಾಟವಾಗಿವೆ. ಕೃತಕ ಸಿಲ್ಕಿನ ಆಮದು ಬಹಳವಾಗಿ ವೃದ್ಧಿಹೊಂದಿದೆ. ರೂ [illegible] ಲಕ್ಷ ಮೌಲ್ಯದ ಕೃತಕ ಸಿಲ್ಕು ಹಿಂದೂದೇಶವನ್ನು ಸೇರಿರುತ್ತದೆ. ಇದರಲ್ಲಿ ಹೆಚ್ಚಿನಂಶ ಜಪಾನಿಯಿಂದ ಬಂದುದಾಗಿರುತ್ತದೆ. ಹಿಂದೂದೇಶದ ಸಕ್ಕರೆ ಕೈಗಾರಿಕೆಯು ವಿಶೇಷವಾಗಿ ಅಭಿವೃದ್ಧಿ ಹೊಂದಿದೆ. ದೇಶೀಯ ಸಕ್ಕರೆಯು ಎಲ್ಲೆಲ್ಲೂ ಪ್ರಚಾರದಲ್ಲಿದೆ. ಚಹಾ, ಹತ್ತಿ, ಇತ್ಯಾದಿಗಳ ವ್ಯಾಪಾರ ಅಭಿವೃದ್ಧಿ ಹೊಂದದ ಬದಲಾಗಿ ಸ್ವಲ್ಪ ಕುಂದಿರುತ್ತದೆ.

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದ ರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭ ಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗ ಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ 1 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವಿದ್ಯಾಪ್ರದ
ಸಂಘ, ಕೊಡಿಯಾಲಬೈಲ್, ಮಂಗಳೂ

ಋಗ್ವೇದೀ ಸಂಧ್ಯಾವಂದನೆ

ಎಂ. ನರಸಿಂಗರಾವ್, ಬಿ. ಎ., ಎಂ. ಎ

ಬೆಲೆ ಆಣೆ 3.

30, 60 100 ಪ್ರತಿಗಳನ್ನು ಒಮ್ಮೆಲೆ ತಕೊಳ್ಳು ರಿಗೆ ಒಳ್ಳೆಯ ರಿಯಾಯಿತಿ)

ವಿಳಾಸ— ಶಾರದಾ ಛಾಪಖಾನೆ
ರಥಬೀದಿ, ಮಂಗಳೂ

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ ಇದ ಚಾಡ್ಯನನ್ನು ಗ ಣಪಡಿಸವುದ ದೆ
ವ್ಯಾಧಿಯು ಬಾರದಂತೆ ತಡೆಮಾಡುವುದ

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವ

ತಯಾರಿಸುವವರು — ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ, ಕ್ಯಾಲೆಂಡರು.

ದಶಂಬರ ತಾ 20ರಲ್ಲಿ ವಿಕ್ರಯಕ್ಕೆ ತಯಾರಾಗುವುದು
ಭಂದಸಾಲೆಗಳಲ್ಲಿಯೂ ವ್ಯಾಪಾರಸ್ಥರ ಮನೆಯಲ್ಲಿಯೂ
ಇಂಥ ಕ್ಯಾಲೆಂಡರು ಅತ್ಯಗತ್ಯ
ಎಲ್ಲರೂ ಪಡಕೊಳ್ಳುವಂತ ಬಹಳ ಕಮ್ಮಿ ಕ್ರಯವಿಟ್ಟಿದೆ
ಕ್ರಯ ಬರೇ ಆಣೆ 3
ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು.

ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು.
ಟಪ್ಪಾಲಿನ ಖರ್ಚು 0 4 0 ಸ್ಟ್ಯಾಂಪು ಕಳುಹಿಸಿ

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ
"ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು,

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದ ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು



ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ' ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ಕೃತಕಾರ್ಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ

ಕ್ರಯ:-ದೊಡ್ಡ ಬಾಟ್ಲಿಗೆ ರೂ. 4. ಮಧ್ಯಮ 2-4-0. ಚಿಕ್ಕದು 1-2-0

ತಯಾರಿಸುವವರು:— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು
ಮುಖ್ಯ ಏಜಂಟರು.— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಸ್ವದೇಶಾಭಿಮಾನಿ

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಹಬಸಿಗಳ ಯೋಗ್ಯತೆಯು ಕಡಿಮೆಯಾಗುತ್ತಿದೆಯೆ?

ದಕ್ಷಿಣ ರಣರಂಗದಲ್ಲಿ ಇಟಲಿಯಾನರ ಆಶಾಭಂಗ!

ಉತ್ತರ ರಣರಂಗದಲ್ಲಿ ಶಾಂತತೆ! ಹಬಸಿಗಳ ಯೋಗ್ಯತೆಯು ಕಡಿಮೆಯಾಗುತ್ತಿದೆಯೆ?

ಸೆಂಕ್ಷನುಗಳ ಪರಿಣಾಮವೇನಾಗಬಹುದು?

ಉತ್ತರ ರಣರಂಗದ ಒಂದು ಚಿತ್ರ

ಉತ್ತರ ದಿಕ್ಕಿನಲ್ಲಿ ಯಾವತರದ ಯುದ್ಧ ಕಾರ್ಯಗಳು ನಡೆಯುತ್ತಿಲ್ಲವಾದರೂ, ಇಟಲಿಯಾನ ಸೈನ್ಯದಳವು ಅಲ್ಲಲ್ಲಿ ಪ್ರಸರಿಸುತ್ತದೆ ಈ ಕಡೆಯ ಯುದ್ಧದ ಶಾಂತಸ್ಥಿತಿಯು ಇನ್ನೂ ಒಂದು ವಾರಕ್ಕೆ ಮುಂದುವರಿಯಬಹುದು ಇಟಲಿಯಾನ ನಾಯಕರ ಅಧಿಕಾರದಲ್ಲಿ ದೇಶಿ ಸೈನಿಕರಿಂದ ಕೂಡಿದ ಸೇನಾಸಮೂಹಗಳು ಅಲ್ಲಲ್ಲಿ ಕೆಲಸಮಾಡುತ್ತಿವೆ ಕೆಲವು ದಿವಸಗಳ ಹಿಂದೆ, ಮಕಾಲೆ ಹತ್ತಿರದಲ್ಲಿ ಹಬಸಿಗಳ ಒಂದು ಮಹಾ ದಂಡು ಕೆಲಸಮಾಡುತ್ತದೆ ಎಂಬ ವರ್ತಮಾನವು ಬರಲು ಇಟಲಿಯಾನರು ಆ ಕಡೆಗೆ ಹೊಂದು ಅವರ ಮೇಲೆ ಅಭಿಕ್ರಮಿಸಿದರು. ಕೆಲವು ಇಟಲಿಯಾನರು ಗಾಯಗೊಂಡಿರುವರು ಹಬಸಿಗಳು ಅವರ ಗಾಯಗೊಂಡ ಮತ್ತು ಮಡಿದ ಸೈನಿಕರನ್ನು ಹಿಡಕೊಂಡು ಪಲಾಯನ ಮಾಡಿದರು ಮೊನ್ನೆ ಒಂದು ಹಬಸಿ ಪಟ್ಟಣದ ಮೇಲೆ ಇಟಲಿಯಾನರು ವಿಮಾನಗಳಿಂದ ದಾಳಿ ನಡೆಯಿಸಿದಾಗ, ಮತ್ತು ಶೋಧ ನಡೆಯಿಸಲು ವಿಮಾನಗಳಿಂದ ಅವರಿಗೆ ಒಂದೇ ಒಂದು ಮನುಷ್ಯನ ಹೆಣವು ಕಾಣಸಿಗಲಿಲ್ಲವಂತೆ ಗಾಯಗೊಂಡವರನ್ನೂ, ಮಡಿದವರನ್ನೂ ಹಿಡಕೊಂಡು ಪಲಾಯನ ಮಾಡುವುದು ಹಬಸಿಯವರ ಸ್ವಾಭಾವಿಕ ಕ್ರಮವಂತೆ

ಈ ಯುದ್ಧದಲ್ಲಿ ಹಬಸಿಗಳೊಡನೆ ಯುರೋಪು ಖಂಡದ ಹಲವು ಜನಾಂಗದ ಜನರು, ವಿವಿಧ ಉದ್ಯಮಗಳಲ್ಲಿ ಕಾರ್ಯಸುತ್ತಿದ್ದಾರೆ ವಿಮಾನಗಳನ್ನು ನಡೆಯುವ ಕ್ರಮಗಳಿಂದ, ಈ ಪಾಶ್ಚಾತ್ಯರ ಕೌಶಲತೆಗಳು ಬಹಳ ವಾಗಿ ವ್ಯಕ್ತವಾಗುತ್ತಿವೆ ಇದರಿಂದ ಇಟಲಿಯಾನರು ತಮ್ಮ ಸಹೋದರ ಜನಾಂಗಗಳ ಮೇಲೆ ರೇಗಿರುತ್ತಾರೆ ಇಂಥವರನ್ನು ಸೆರೆ ಹಿಡಿದ ಸಂದರ್ಭದಲ್ಲಿ ಅವರನ್ನು ಕಠಿಣ ತರದಲ್ಲಿ ಶಿಕ್ಷಿಸಬೇಕೆಂದು ಇಟಲಿಯಾನರು ನಿರ್ಣಯ ಮಾಡಿರುತ್ತಾರೆ

ಹಬಸಿಗಳು ತಂಡತಂಡವಾಗಿ ಒಟ್ಟಾಗಿ ಕೆಲಸಮಾಡುತ್ತಿದ್ದಾರೆ ಮತ್ತು ರಾಸ್ ಸೆಯಾಮನೆಂಬ ವೀರ ಪುರುಷನ ಅಧಿಕಾರದಲ್ಲಿ ಒಂದು ಮಹಾ ಸೈನ್ಯಮಂಡಳವು ಮುಂದುವರಿಯುತ್ತಿದೆ ಎಂದು ವಾರ್ತೆ ಬಂದಿದಷ್ಟೆ ಆದರೆ ಈಗ ಈ ಸೈನ್ಯದಂಡಿನಲ್ಲಿ ಸೈನಿಕರ ಸಂಖ್ಯೆ ಅಲ್ಪದ್ದಾಗಿರುವುದೆಂದೂ, ಅವರಿಗೆ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಸಾಗಿಸುವ ಯೋಗ್ಯ ವ್ಯವಸ್ಥೆಗಳಿಲ್ಲದಿದ್ದುದರಿಂದ ಅವರು ದೇಶಾಟನ ಮಾಡಬೇಕಾಗಿದೆ ಎಂದೂ, ಆದರಿಂದ ಮೊನ್ನೆ ರಾಸ್ ಸೆಯಾಮರ ಯುದ್ಧ ಕರೆಯುವಿಕೆಗೆ ಅತಿ ಸ್ವಲ್ಪ ಜನರು ಮುಂದುವರಿದು ಬಂದರೆಂದು ವಾರ್ತೆ ಬಂದಿರುತ್ತದೆ

ಇತ್ತರವರೇಗೆ ನಡದಂತೆ ತುಂಡು ಯುದ್ಧಗಳನ್ನು ಸಾಗಿಸುವ ಬದಲಾಗಿ, ಹಬಸಿಗಳು ಒಂದಡೆಸೇರಿದ ಮೇಲೆಯೆ ಯುದ್ಧವನ್ನು ಬೇಗನೆ ಕೊನೆಗಾಣಿಸಲು, ಅವರ ಮೇಲೆ ಅಭಿಕ್ರಮಿಸಬೇಕೆಂದು ಇಟಲಿಯಾನ ನಿರ್ಧಾರಗಳಾಗಿವೆ ಹಬಸಿಗಳ ಗುರಿಲ್ಲಾ ಯುದ್ಧ ಕ್ರಮವೂ, ಅವರ ರಕ್ಷಣಾಕ್ರಮವು ನಿಷ್ಪ್ರಯೋಜಕಾರಿಗಳಾಗುವುದೆಂದು ಇಟಲಿಯಾನರ ಮತ.

ಇಟಲಿಯಾನ ವಿಮಾನಗಳು, ಹಬಸಿಗಳ ಹಳ್ಳಿಹಳ್ಳಿಗಳ ಮೇಲೆ, ಬೊಂಬುಗಳಿಂದ ಭಾರಿ ದಾಳಿ ನಡೆಯಿಸುತ್ತಿದ್ದಾರೆ ಹಬಸಿಗಳಿಗೆ ಆಹಾರಕೊಡುವ ಈ ಹಳ್ಳಿಗಳ ನಿರಾಶ್ರಿತರಾದ ರೈತರು ಕೆಲಸಮಾಡದೆ, ಹಬಸಿಗಳಿಗೆ ಆಹಾರ ತಪ್ಪಿಸುವುದೆ ಇದರ ಮುಖ್ಯ ಉದ್ದೇಶವಂತೆ ಹಬಸಿಗಳ ಸೈನ್ಯಮಂಡಲದಲ್ಲಿ ಹೆಚ್ಚಾಗಿ ರೈತರೆ ಇರುವುದರಿಂದ, ಆಹಾರ ಸಾಮಗ್ರಿಗಳು ಸಿದ್ಧವಾಗಬೇಕಾದರೆ, ಇವರು ಮರು ಗದ್ದೆಗಳನ್ನು ಸೇರಬೇಕಾಗಿದೆ ಇದರಿಂದ ಬಲಗೆಡಂಡ ಹಬಸಿಗಳ ಸೇನಾಸಮೂಹವು ಚದರಬೇಕಾಗುವುದು ಆಗ್ಗೆ ಇಟಲಿಯಾನರ ಕಾರ್ಯವು ಸುಲಭವಾಗುವುದು ಇದೇ ಕಾರಣ ಇಟಲಿಯಾನರು ಈ ಕಡೆಯಲ್ಲಿ ಸಮಾಧಾನದಿಂದ ಕಾಯುತ್ತಿದ್ದಾರೆ

ಸೆಂಕ್ಷನುಗಳಿಂದ ಮುಂದಕ್ಕೆ ಸಾಗುವ ಈ ಯುದ್ಧವು ಹಬಸಿಗಳಿಗೆ ಮಾತ್ರ ಹಾನಿಕರವಾಗಿ ಪರಿಣಮಿಸುವುದೆಂದು ಇಟಲಿಯಾನರ ಪ್ರಕಟಣೆ

ಉತ್ತರರಂಗದ ಇನ್ನೊಂದು ಚಿತ್ರ

ಹಬಸಿಗಳು ಇಲ್ಲಿ ಬಹಳ ಪರಾಕ್ರಮದಿಂದ ಕದನ ನಡೆಯಿಸುತ್ತಿದ್ದಾರಂತೆ ಇಟಲಿಯಾನರು ಕೆಲವು ಕಡೆಗಳಲ್ಲಿ ಹಿಂದೆ ಚದರಬೇಕಾಯಿತು ಹಬಸಿಗಳಿಗೆ ಪರ್ವತಗಳಿಂದಲೂ ಅರಣ್ಯಗಳಿಂದಲೂ, ನದಿಗಳಿಂದಲೂ ಕೂಡಿದ ಈ ಪ್ರದೇಶದ ಪೂರ್ಣ ಅರಿವು ಇದ್ದುದರಿಂದ ಅಲ್ಲಲ್ಲಿ ಅವಿತುಕೊಂಡ ಇಟಲಿಯಾನರ ಮೇಲೆ ಆಶ್ಚರ್ಯಕರವಾದ ರೀತಿಯಲ್ಲಿ ಧಾವಿಸಲು ಸಾಧ್ಯವಾಗುತ್ತದೆ ಭಾರವಾದ ಯುದ್ಧ ಸಾಮಗ್ರಿಗಳಿಂದ ಕೂಡಿದ ಇಟಲಿಯಾನ ಸೈನ್ಯದಂಡವು ಯೋಗ್ಯ ಮಾರ್ಗೋಪಾಯಗಳಿಲ್ಲದ ಹೆಚ್ಚಿನ ಶ್ರಮಗಳಿಗೆ ಒಳಗಾಗುವರಲ್ಲ, ಇವರು ಹಲವು ಕಡೆಗಳಲ್ಲಿ ಅವಿತಿದ್ದ ಹಬಸಿಗಳ ಕೈಗೆ ಸಿಕ್ಕಬೇಕಾಗುವುದು ಈ ಪ್ರದೇಶದಲ್ಲಿ ಯೋಗ್ಯರೀತಿಯಲ್ಲಿ ಮುಂದುವರಿಯಬೇಕಾದರೆ, ಮಾರ್ಗೋಪಾಯಗಳಾಗಬೇಕು ಅಷ್ಟರವರೇಗೆ ಕಾಯಲು ಇಟಲಿಯಾನರಿಗೆ ಸೆಂಕ್ಷನುಗಳ ದೆಸೆಯಿಂದ ಸಾಧ್ಯವಾಗುವುದೆ?

ಮಕಾಲೆ ಹತ್ತಿರ

ಇಟಲಿಯಾನ ವಿಮಾನಗಳು, ಎಂಟೋಲೋ ಎಂಬಲ್ಲಿ ಅತಿ ತಗ್ಗಾಗಿ ಹಾರುತ್ತಿರುವಾಗ ಹಬಸಿಗಳು ಮೆಶಿನು ಗುಂಡುಗಳ ಉಪಯೋಗ ಮಾಡಿದರು ವಿಮಾನಗಳಿಗೆ ತುಂಬಾ ತೂತುಗಳಾದುವು. ಆದರೆ ಅವುಗಳು ಸುರಕ್ಷಿತವಾಗಿ ನಿಲ್ದಾಣವನ್ನು ಸೇರಿವೆ ಉತ್ತರ ದಿಕ್ಕಿನಲ್ಲಿ ಬಿಡು ಎಂಬಲ್ಲಿ ಒಬ್ಬ ಸುಲ್ತಾನನು ಇಟಲಿಯಾನ ಬದಿಗೆ ಸೇರಿರುವನು ಇದರಿಂದ ಡೆಸ್ಸಿ ನಗರದ ಹತ್ತಿರದಲ್ಲಿರುವ ಡೆನಾಕಾಲಿ ಪ್ರದೇಶದಲ್ಲಿ ವರಿಗೆ ಉಪಯುಕ್ತಸ್ಥಳ ದೊರಕಿಕೆನ್ನಬಹುದು ಉತ್ತರದಿಕ್ಕಿನ ಈ ಡೆಸ್ಸಿ ಎಂಬ ನಗರದಲ್ಲಿ (ಇದು ಅದಿಸ್ ಅಬಾಬಕ್ಕೆ ಹತ್ತಿರವಿರುವ ದೇಶ) ಹಬಸಿಯವರು, ಮಹಾ ಯುದ್ಧಸಿದ್ಧತೆಗಳನ್ನು ಮಾಡಿರುತ್ತಾರೆ ಡೆಸ್ಸಿಯು ಇಟಲಿಯಾನರ ಕೈಸೇರಿತೆಂದರೆ ಅದಿಸ್ ಅಬಾಬವು ಇವರ ವಶವಾಗುವುದರಲ್ಲಿ ಏನೂ ಸಂದೇಹಗಳಿಲ್ಲ. ಇಲ್ಲಿ ಹಬಸಿ ಸೈನ್ಯಮಂಡಳದ ಯುದ್ಧಸಾಮಗ್ರಿ ಬರದಾಗಿ ಬರುತ್ತಿವೆ. ನಿರ್ಬಂಧಗಳು ಇಗೆ ದಿದ್ದರೂ, ಯೋಗ್ಯ ಯುದ್ಧ ಸಾಮಗ್ರಿಗಳು ಇವರನ್ನು ಸೇರುವಹಾಗಿಲ್ಲ. ಆದರಿಂದ ಹಬಸಿಗಳ ಸ್ಥಿತಿಯು ಬಹಳ ಭಯಂಕರ ಸ್ಥಿತಿಯಲ್ಲಿರುತ್ತದೆ ಎಂದು ವಾರ್ತೆ.

ದಕ್ಷಿಣ ರಣರಂಗದಲ್ಲಿ

ದಕ್ಷಿಣ ರಣರಂಗದಿಂದ ಸರಿಯಾಗಿ ವಾರ್ತೆಗಳು ಬರಲು ಅವಕಾಶಗಳಿಲ್ಲ. ಇಟಲಿಯಾನರು ಇನ್ನೂ ಗೊತ್ತಾಗಿಲ್ಲ ಹತ್ತಿರದ [illegible] ಯಾಂತ್ರಿಕ ಯುದ್ಧ ಸಾಮಗ್ರಿಗಳಿಂದ ಕೂಡಿದ ಇಟಲಿಯಾನರು ಸುಲಭವಾಗಿ ಮುಂದುವರಿದು, ಜಿಜಿಗಾ ಪಟ್ಟಣವನ್ನು ಸೇರಬಹುದಾಗಿ ಭಾಸವಾಗಿತ್ತು ಆದರೆ ಇವರ ಪ್ರಯತ್ನಗಳು ಸಫಲವಾಗಲಿಲ್ಲ ಚಕ್ರವರ್ತಿಯವರು ಆ ಕಡೆಗೆ ಹೋಗಿ ಸೈನಿಕರನ್ನು ನೋಡಿ ಬಂದದರಿಂದಲೂ, ಕೆಲವು ಇಟಲಿಯಾನ ಟ್ಯಾಂಕುಗಳು ಅವರ ಕೈಸೇರಿದುದರಿಂದಲೂ, ಹಬಸಿಗಳ ಬಹಳವಾಗಿ ಉತ್ತೇಜನಗೊಂಡವರಾಗಿ ಹರಾರಿನ ಸೈನ್ಯಮಂಡಳವು ಬಹಳ ಪರಾಕ್ರಮದಿಂದ ಇಟಲಿಯಾನರನ್ನು ತಡೆಹಿಡಿದ್ದಾರೆ ಇಟಲಿಯಾನ ನಾಯಕರಾದ ಜನರಲ್ ಗ್ರೆಜಾನಿಯವರ, ಕಷ್ಟಗಳನ್ನನುಭವಿಸುತ್ತಿದ್ದಾರೆ ಆದರೆ ಈ ಕಡೆಯ ವಾರ್ತೆಗಳು ಸರಿಯಾಗಿ ಬರಲು ಹಾದಿಗಳಿಲ್ಲದಿಂದ ಈ ರಣರಂಗದ ಹೆಚ್ಚಿನ ವಿಷಯಗಳು ತಿಳಿಯಲು ಸಾಧ್ಯವಾಗುವುದಿಲ್ಲ

ದಕ್ಷಿಣರಂಗದ ಚಿತ್ರ.

ಓಗಡನ್ ಪ್ರಾಂತ್ಯದಲ್ಲಿ ಹಬಸಿಗಳೂ ಇಟಲಿಯಾನರೂ ವಿಶೇಷವಾಗಿ ಪ್ರಸರಿಸಲಿಲ್ಲ ಇಟಲಿಯಾನರ, ಇಲ್ಲಿ ವಿಮಾನಗಳನ್ನೆ ಉಪಯೋಗಿಸುತ್ತಿದ್ದಾರೆ ಇಲ್ಲಿನ ಜಿಜಿಗಾ [illegible] ದಾಗಬುರ್ ನಗರಗಳಲ್ಲಿ ಜನ [illegible] ವಿಶೇಷವಾಗಿ [illegible] ಹೆಚ್ಚಾಗಿ ನಗರ [illegible] ಇಲ್ಲಿ ಗೇಸಿನ ಪ್ರಯೋಗವು ಆಗಲಿಲ್ಲ ಹಬಸಿಗಳು ಇಟಲಿಯಾನರಿಂದ [illegible] ಗಳನ್ನು ವಶೀಕರಿಸಿದ್ದಾರೆ ಈ ಟ್ಯಾಂಕುಗಳಲ್ಲಿರುವ ಇಟಲಿಯಾನರನ್ನು ಕೊಲೆಮಾಡಿದ್ದಾರೆ ಓಗಡನ್ ಪ್ರಾಂತ್ಯವು ಬರೇ ಮರುಭೂಮಿಯಾಗಿದೆ ಮಾನವನ ವಾಸಗಳ ಕಡಿಮೆ. ನೀರು ದುರ್ಲಭ ಎಲ್ಲಾ ನದಿಗಳು ಒಣಗಿ ಹೋಗಿವೆ

ಮುಸಲೋನಿಯು ಇಜಿಪ್ಟಿನ ಮೇಲೆ ಅಭಿಕ್ರಮಿಸುವನೇ?

ಇಜಿಪ್ಟಿನ ಹತ್ತಿರದಲ್ಲಿರುವ ಲಿಬಿಯಾ ದೇಶವು ಇಟಲಿಯಾನರ ವಶದಲ್ಲಿರುತ್ತದೆ ಇದು ಪೂರ್ವ ಆಫ್ರಿಕಾದ ಕರಾವಳಿಯಲ್ಲಿದೆ ಇಲ್ಲಿ ಧಾರಾಳ ಇಟಲಿಯಾನ ಸೈನ್ಯದಳವು ಕೆಲಸಮಾಡುವ ಕಾರ್ಯವು, ಹಬಸಿ-ಇಟಲಿ ಕಲಹವು ಪ್ರಾರಂಭವಾದಂದಿನಿಂದ ನಡೆಯುತ್ತದೆ ಇಜಿಪ್ಟನ್ನು ಅಭಿಕ್ರಮಿಸಲು ಇಟಲಿಯು ಈ ಸಿದ್ಧತೆಗಳನ್ನು ಮಾಡುತ್ತಿದೆ ಎಂದು ಇತ್ತರ ವರೆಗೆ ಊಹಿಸಲಾಗಿತ್ತು ಆದರೆ ಇಲ್ಲಿಂದ ಈ ಅಭಿಕ್ರಮವು ಸಾಧ್ಯವಾಗುವುದೆ? ಲಿಬಿಯಾಕ್ಕೂ ಇಜಿಪ್ಟಿಗೂ ನಡುವೆ, ೩೦೦ ಮೈಲ ಉದ್ದದ ಮರುಭೂಮಿ ಇದೆ. ಈ ಪ್ರದೇಶವನ್ನು ದಾಟುತ್ತಿರುವಾಗ ವಿಮಾನಗಳ ಅಭಿಕ್ರಮವನ್ನು ತಪ್ಪಿಸುವುದು ಕಷ್ಟದ ಮಾತು ಸರಿಯಾದ ಮಾರ್ಗಗಳಿಲ್ಲ ಈ ಪ್ರದೇಶದಲ್ಲಿ ಕ್ರೂರ ಅರಬಿಯವರು ವಾಸವಾಗಿದ್ದಾರೆ. ಇಲ್ಲಿ ಬ್ರಿಟಿಷರು ಮೆಶಿನುಗನ್ನುಗಳಿಂದ ಕೂಡಿದ ಸೈನ್ಯದಳಗಳನ್ನು ಅಲ್ಲಲ್ಲಿ ಇರಿಸಿದ್ದಾರೆ ಲಿಬಿಯಾದಲ್ಲಿ ಇಟಲಿಯಾನರು ನೌಕಾ ಯುದ್ಧವನ್ನು ಮಾಡಲು ಸಾಧ್ಯವಾಗದು. ಇಲ್ಲಿ ಬ್ರಿಟಿಷರ ನೌಕಾಬಲವು ಅಧಿಕ ಬ್ರಿಟಿಷ ವಿಮಾನಗಳ ಬೊಂಬುಗಳನ್ನು ತಪ್ಪಿಸಿಕೊಂಡು, ಮುಂದುವರಿದರೆ ಬ್ರಿಟಿಷ ಮೆಶೀನು ಗನ್ನುಗಳ ಬಾಯಿಗೆ ತುತ್ತಾಗುವರು. ಲಿಬಿಯಾವು ಇಜಿಪ್ಟಿಗೆ ಹತ್ತಿರದಲ್ಲಿದ್ದರೂ, ಇಜಿಪ್ಟಿನ ವಾಯುಬಲವು, ಇವರನ್ನು ಸಂಪೂರ್ಣವಾಗಿ ಸದೆಬಡಿಯುವುದರಲ್ಲಿ ಏನೂ ಸಂದೇಹಗಳಿಲ್ಲ.

ಸೆಂಕ್ಷನುಗಳು

ಫ್ರಾನ್ಸಿನ ಎಲ್ಲಾ ವಸಾಹತುಗಳು ಸೆಂಕ್ಷನುಗಳಲ್ಲಿ ಭಾಗವಹಿಸಿವೆ ಸೆಂಕ್ಷನುಗಳು ಆಫ್ರಿಕಾದ ರೊಡೆಸಿಯಾ, ಸುಡಾನಗಳಲ್ಲೂ ಮತ್ತು ಹಿಂದೂದೇಶದಲ್ಲೂ ಹೇಗೆ ನಡೆಯುತ್ತದೆಂದು, ಜನಪದ ಮಂಡಳದ ಸೆಂಕ್ಷನು ಕಮಿಟಿಯವರು ಬ್ರಿಟಿಷರೊಡನೆ ವಿಚಾರಿಸುತ್ತಿದ್ದಾರೆ ಸ್ವಿಟ್ಜರ್‌ಲೆಂಡಿನವರು ಸೆಂಕ್ಷನುಗಳಲ್ಲಿ ಭಾಗವಹಿಸಲು ವಾಗ್ದಾನ ಮಾಡಿದ್ದರೂ ಇವುಗಳಿಗೆ ವಿರೋಧವಾಗಿ ವರ್ತಿಸುತ್ತಿದ್ದಾರೆ

ಇಟಲಿಯ ಎಚ್ಚರಿಕೆ

ಸೆಂಕ್ಷನುಗಳನ್ನು ಎಷ್ಟು ಕಲ್ಪಿಸಿದ್ದರೂ ಮತ್ತು ಕಲ್ಪನದ ಮೇಲೆ ವಿಸ್ತರಿಸುವಂತೆ ಮಾಡಿದರೆ, ಇಟಲಿಯು, ಅದು ಇತರ ಜನಾಂಗದವರ ವೈರತ್ವದ ವರ್ತನೆಯೆಂದು ಭಾವಿಸಲಾಗುವುದೆಂದು ಜನಪದ ಮಂಡಳಕ್ಕೆ ಎಚ್ಚರಿಕೆ ಕಳುಹಿಸಿಕೊಟ್ಟಿರುತ್ತದೆ

ಇಟಲಿಯಾನ ಸರಕಾರ ಮಂತ್ರಿಮಂಡಳದ ಸಭೆ

ಮೊನ್ನೆ ಇಟಲಿಯಾನ ಮಂತ್ರಿಮಂಡಳವು [illegible] ಸಭೆ ಸೇರಿತು ಜನಾಂಗದ ರಕ್ಷಣಾ ಯೋಜನೆಗಳ ವಿಷಯವಾಗಿ ಆಲೋಚನೆಗಳು ನಡೆದುವು ಈ ಸಭೆಯಲ್ಲಿ ಸೆಂಕ್ಷನುಗಳ ವಿಚಾರ ಯಾವತ್ತೂ ಮಾತು ಕತೆಗಳು ಬರಲಿಲ್ಲ ಈ ಸಭೆಯು ಇಟಲಿಯಾದಲ್ಲಿ [illegible] ಕಾರ್ಖಾನೆಗಳನ್ನು ಸ್ಥಾಪಿಸಲಿಕ್ಕೂ, ಅಲ್ಲಿನ [illegible] ಗಾರರ [illegible] ಗಳಿಗೆ ಹಣಸಹಾಯ ಮಾಡ [illegible] ಗಳನ್ನು ಹೆಚ್ಚುಮಾಡಿ [illegible] ಸಹಾಯ [illegible] ಇಟಲಿಯಾನ ಕಾರ್ಖಾನೆಗೆ ದ್ರವ್ಯ ಸಹಾಯ ಮಾಡಬೇಕಾಗಿಯೂ [illegible] ನಿರ್ಣಯಗಳನ್ನು ಮಾಡಿದರು

ಈ ಸಭೆಯು ಕಾರ್ಯಕ್ರಮವು ಬಹಳ ಗುಪ್ತವಾಗಿ ನಡೆದಿದ್ದರೂ, ಅವುಗಳ ಸೆಂಕ್ಷನುಗಳನ್ನು ಪ್ರತಿಭಟಿಸುವ ಯೋಜನೆಗಳನ್ನು ಮಾಡುವುದರಲ್ಲಿ [illegible] ಈಗ ಒದಗಿದ [illegible] ಘಟನೆಯು [illegible] ನಿರ್ಧರಿಸುವುದರಲ್ಲಿ [illegible] ಕಾಣಿಸಿದೆ [illegible] ಗಳಿಗೆ [illegible] ಎಷ್ಟು [illegible] ಗಳನ್ನು [illegible] ರೀತಿಯಲ್ಲಿ [illegible] ಉದ್ಯಮವನ್ನು ಸಾಗಿಸಲು ಒಂದು ಸಂಸ್ಥೆಯು ಬೇಗನೆ ಜನಿಸುವುದಂತೆ

ದೇಶದಲ್ಲೆಲ್ಲಾ [illegible] ಗಳಾಗಿ [illegible] ಬೇಕು ಹೊಂದಬೇಕಾಗಿ ಕಟ್ಟಪ್ಪಣೆಗಳು ಹೊರಟಿವೆ

ಸೆಂಕ್ಷನುಗಳಿಂದ ಇಟಲಿಗೆ ಯಾವ ಹಾನಿಯೂ ಆಗುವ ಹಾಗಿಲ್ಲ ನಮ್ಮಲ್ಲಿ ಧಾರಾಳ ಕಾರಣಸಾಮಗ್ರಿಗಳಿವೆ ಅಲ್ಲದೆ ಅವುಗಳನ್ನು ಮುಂದಕ್ಕೆ ಬೇಕಾಗುವ ರೀತಿಯಲ್ಲಿ ಪಡೆಯಲು ಸಿದ್ಧವಿದೆ ಆದರೆ ಸೆಂಕ್ಷನುಗಳಿಂದ ನಾವು ಸ್ವಲ್ಪ ಅವಮಾನ ಪಟ್ಟಿದ್ದೇವೆ" ಎಂದು ಮುಸಲೋನಿಯವರ ಪ್ರಕಟಣೆ

ಅಮೇರಿಕದಲ್ಲಿ ಇಟಲಿಯಾನ ಪ್ರತಿನಿಧಿಗಳು, ಅವರು ಜನಪದಮಂಡಳದ ನಿರ್ಧಾರಗಳೊಡನೆ ಸಹಕರಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂದೂ, ಅವರ ಈ ವರ್ತನೆಯಿಂದ ಪಾಶ್ಚಾತ್ಯದಲ್ಲಿ ಇನ್ನೊಂದು ಮಹಾಯುದ್ಧವು ಉಂಟಾಗುವುದೆಂದೂ, ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ ಅಮೇರಿಕಾದವರು ಈ ಎಚ್ಚರಿಕೆಯನ್ನು ಅನುಸರಿಸಿ, ಯಾವತ್ತೂ ಯುದ್ಧ ಸಾಮಗ್ರಿಗಳ ವ್ಯಾಪಾರದ ಮೇಲೆ ನಿರ್ಬಂಧಗಳನ್ನು ಹಾಕಿಲ್ಲವೆಂದು ತಿಳಿಯಬರುತ್ತದೆ.

ಮಲಯಾಳ ವನಸ್ಪತಿ ಔಷಧಿಗಳು.

ಕ್ಷಯ ಸಂಹಾರಿ

KSHAYA SANHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಿನ ರೋಗಬಾಧೆಗೆ ಒಳಗಾಗಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಅನುಪಾನದಂತೆ ಕ್ಷಯಸಂಹಾರಿಯನ್ನು ಉಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/8ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

(ವಶೀಕರಣ ಅಂಗುರ)

[illegible]

ಬೆಲೆ ರೂ. 3 ಮಾತ್ರ.

Bengal Mesmarism House
Panchpota, Bengal

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 0	3— 4
ಮುಸ್ಸಿ	4— 0	4— 8
ಗುಡ್ಡೆ ಮುಗ್ಗ	3— 6	3—14
ಊರ ಅವ್ವಲ್ ಬೆಲ್ಲ	4—10	5— 0
ರಂಗೂನು ಫ. ಗೋ ಗಳ್ಳೆ	6— 8	7— 0
ಎಲ್ಲೂರು ಬೆ ಮು ಗಳ್ಳೆ	4— 4	4— 8
[illegible]	10 — 0	13— 8
[illegible]	10 —8	11— 0
[illegible]	0— 4	6 — 4
[illegible]	7 — 8	10— 8
[illegible]	10— 0	17— 0
[illegible]	9— 8	10 — 0
[illegible]	9— 4	9—12
[illegible]	30—	35— 0
[illegible]	4— 6	5— 0
[illegible]	65— 0	68— 0
[illegible]	28— 0	29— 0
[illegible]	33 —12	35— 0
[illegible]	4—14	5— 4
[illegible]	5— 2	6— 0
[illegible]	5— 8	5—12
[illegible]	3— 7	3— 10
ಮೆಣಸು	2— 8	4— 4
[illegible]	6 — 0	6—14
[illegible]	100— 0	110—
[illegible]	35— 8	36— 8
[illegible]	4—14	5 — 0
[illegible]	40— 0	40— 8
[illegible]	10— 0	10— 8
[illegible]	14— 0	14— 8
[illegible]	16— 4	16— 6
[illegible]	9— 0	9— 8
[illegible]	32— 4	32— 6
[illegible]	20— 0	25— 8
[illegible]	160— 0	162— 8
[illegible]	190— 0	195— 0
[illegible]	25— 0	26 — 0
[illegible]	28— 0	30 — 0
[illegible]	100—0	115—0

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ

ಪ್ರಶಂಸೆ.

ಪ್ರಖ್ಯಾತ ಅಮೇರಿಕನ್ ಡಾಕ್ಟರರು ಪ್ರಶಂಸಿಸಿರುತ್ತಾರೆ

ವಿ-ಮೊ-ಲ

VIM-O-LA

ಅಮೇರಿಕಾದ ಜೀವಸಾರ ವಸ್ತು.

ಹೊಟ್ಟೆ, ಮೂತ್ರಕೋಶ, ಉದರಕೋಶಗಳ ರೋಗಗಳಿಗೆ ಫಲಕಾರೀ ಔಷಧಿ ಹೊಟ್ಟೆಯಲ್ಲಿ ಬೆಂದಿರುವ ವಾಯುವನ್ನೂ, ಅಜೀರ್ಣವನ್ನೂ ಕೂಡಲೇ ಗುಣಪಡಿಸುತ್ತದೆ. ನರಗಳನ್ನು ಪುಷ್ಟಗೊಳಿಸುವ ಶಕ್ತಿವರ್ಧಕ ಶಾಲೀಯ: ಕೂಡಲೇ ಒಂದು ಬಾಟ್ಲಿಯನ್ನುಪಯೋಗಿಸಿರಿ. ಬಾಟ್ಲಿ 1 ಕ್ಕೆ ರೂ. 1-4-0 ಪೆಕಿಂಗ್ ಚಾರ್ಜು ಪ್ರತ್ಯೇಕ. ಸ್ಟೋಕಿಸ್ಟರೂ, ಏಜಂಟರೂ ಕರ್ನಾಟಕ ಜಿಲ್ಲೆಗಳಲ್ಲಿ ಬೇಕಾಗಿದ್ದಾರೆ. ಇಲ್ಲಿಗೆ ಬರೆಯಿರಿ

"Vimola Depot"

Manufactured by

American Herbal Products Co.,

Sole representatives for above medicine.

The National Kanara News Agency,

Sir Phirozsha Metha Road,
Fort Bombay.

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು — ಸ್ವಾಮಿ ಆನಂದರಾಯರೆ, ತಾವು ನಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ತೋರಿಯುತ್ತಿರುವೆನು

ಆನಂದರಾಯರು — ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ, ಕಡೆಗೆ ನನ್ನ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — ಅದರ ಕ್ರಯವೆಷ್ಟು?

ಆನಂದರಾಯರು — ಎಲ್ಲಾ ಕಡೆಗಳಿಂತ ಹೇಳಲಾ 25 ಕಡಮೆ ದರದಲ್ಲಿ ಸಿಕ್ಕಿತು. [illegible] 18 ಮೊಳ ಉದ್ದ 2½ ಮೊಳ ಅಗಲ ಸೀರೆ 1 ಕ್ಕೆ 20ರಿಂದ 65ರ ವರೆಗೆ. [illegible] 14 ಮೊಳ ಸೀರೆ 1 ಕ್ಕೆ ರೂ. 45ರಿಂದ 150ರ ವರೆಗೆ 16 ಮೊಳ [illegible] ಸೀರೆ 1 ಕ್ಕೆ ರೂ. 10ರಿಂದ 55ರ ವರೆಗೆ, [illegible] ರೂ. 1-8-0ರಿಂದ 4ರ ವರೆಗೆ, [illegible] 1 ಕ್ಕೆ ರೂ. 3ರಿಂದ 10ರ ವರೆಗೆ 8 ಮೊಳದ [illegible] 1 ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ [illegible] 1 ಕ್ಕೆ ರೂ. 10ರಿಂದ 35ರ ವರೆಗೆ 5 ಮೊಳದ [illegible] 1 ಕ್ಕೆ ರೂ. 4ರಿಂದ 18ರ ವರೆಗೆ, 6 ಮೊಳದ [illegible] 1 ಕ್ಕೆ ರೂ. 6ರಿಂದ 85ರ ವರೆಗೆ. [illegible]

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬನಾರಿಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under graduates and S. S. L. C.s and also for those who have not passed any University examination

Coaches students for the Special ised Banking Courses (C. A. I. B. & C. A. I. I. B.) and also for Accountancy, Secretarial, and Insurance Courses (L. A. A., C. R. A., F. C. R. A., F. I. S. A., A. C. I. I. etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to—

D. R. Murdeshwar,
Dip. Econ., F. R. Econ. S. (Lond.)
Principal
Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಕಾರ್ತಿಕ ಬ| ೧೩ ಶನಿವಾರದಿಂದ ಮಾರ್ಗಶಿರ ಶು ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೆಯ ವೃಶ್ಚಿಕ ಕಾರ್ಡ್)

[illegible]	[illegible]	[illegible]	[illegible]	[illegible]	[illegible]	[illegible]	[illegible]
7	ಶನಿ	[illegible]	[illegible]	ಅಶ್ವಿನಿ	[illegible]	[illegible]	[illegible]
8	ರವಿ	[illegible]	[illegible]	ಭರಣಿ	[illegible]	[illegible]	
9	ಸೋಮ	[illegible]	[illegible]	ಕೃತ್ತಿಕಾ	[illegible]	[illegible]	
10	ಮಂಗಳ	[illegible]	[illegible]	ರೋಹಿಣೀ	[illegible]	[illegible]	
11	ಬುಧ	[illegible]	[illegible]	ಮೃಗಶಿರ	[illegible]	[illegible]	
12	ಗುರು	[illegible]	[illegible]	ಆರ್ದ್ರಾ	[illegible]	[illegible]	
13	ಶುಕ್ರ	[illegible]	[illegible]	ಪುನರ್ವಸು	[illegible]	[illegible]	

ನಮ್ಮ ಕೈಗಾರಿಕೆಗಳ ಸ್ಥಿತಿ.

ಹಿಂದೂದೇಶದ ನವಸಂಗ್ರಾಮಾಧಿಕಾರಿಗಳು,

ಇಟಲಿಯ ಚರಿತ್ರೆಗಳು.

ನಮ್ಮ ಕೈಗಾರಿಕೆಗಳು

ಸರಿಯಾದ ಆರ್ಥಿಕ ಸಹಾಯವಿಲ್ಲದೆ ಬಹಳ ಕ್ಷೀಣಸ್ಥಿತಿಯಲ್ಲಿವೆ ಎಂದು ಮದ್ರಾಸು ಸರಕಾರದ ಎಕ್ಟಿಂಗ್ ಡೈರೆಕ್ಟರ್ ಒಫ್ ಇಂಡಸ್ಟ್ರೀಸ್‌ರವರ ವರದಿ. ಮದ್ರಾಸು ಸರಕಾರದವರ ಕೈಗಾರಿಕೆಗಳಿಗೆ ಆರ್ಥಿಕ ಸಹಾಯಮಾಡುವ ಕ್ರಮವು ಜ್ಯಾರಿಗೆ ಬಂದು ಇವತ್ತಿಗೆ ೧೨ ವರ್ಷಗಳಾದರೂ, ಅಧಿಪತ್ಯದ ಕೈಗಾರಿಕೆ ಸಂಸ್ಥೆಗಳ ಬೆಳವಣಿಗೆಯಲ್ಲಿ ಸರಿಯಾಗಿ ಸಹಕರಿಸಿದುದು ಕಾಣುವುದಿಲ್ಲ. ನಮ್ಮ ಬೇಂಕುಗಳು ಕೈಗಾರಿಕೆಯ ಸಂಸ್ಥೆಗಳಿಗೆ ಉದ್ದವಾಯಿದೆಯ ಸಾಲಗಳನ್ನು ಕೊಡಲು ಅನುಮತಿಸುವುದಿಲ್ಲ ಮಾತ್ರವಲ್ಲದೆ, ಈ ತರದ ಸಂಸ್ಥೆಗಳಿಗೆ ಯಾವ ರೀತಿಯಲ್ಲೂ ಇವರಿಂದ ಆರ್ಥಿಕ ಸಹಾಯವಾಗುವುದಿಲ್ಲ ಎಂದು ಡೈರೆಕ್ಟರರ ವರದಿಯಲ್ಲಿದೆ ಹಣವಿಲ್ಲದೆ, ಶ್ರೇಯಸ್ಕರವಾಗಿ ಬೆಳೆಯುವ ಕೆಲವು ಕೈಗಾರಿಕೆಗಳನ್ನು ನಿಲ್ಲಿಸಬೇಕಾಗಿದೆ ಆದುದರಿಂದ ಸಂಯುಕ್ತಪ್ರಾಂತ್ಯಗಳೇ ಮಾದಿಯಲ್ಲಿ, ಕೈಗಾರಿಕೆಗಳಿಗೆ ಆರ್ಥಿಕ ಸಹಾಯವನ್ನು ಒದಗಿಸಲು ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ರಚಿಸಬೇಕು. ಇವರು ಪ್ರಾಂತ್ಯದ ಸಾಂಪತ್ತಿಕ ಸ್ಥಿತಿಯನ್ನನುಸರಿಸಿ ಸೂಚನೆಗಳನ್ನು ಮಾಡತಕ್ಕದು, ಎಂಬ ಸೂಚನೆಗಳು ಡೈರೆಕ್ಟರರ ವರದಿಯಲ್ಲಿದೆ ಮದ್ರಾಸು ಅಧಿಪತ್ಯದಲ್ಲಿ ಸಾಗುವಳಿ ಅಭಿವೃದ್ಧಿಯು ಇನ್ನೂ ನಡೆಯುವ ಹಾಗಿಲ್ಲ ಆದರಿಂದ ಪ್ರಾಂತ್ಯದ ಕೈಗಾರಿಕೆಗಳು ಉದ್ಧಾರಹೊಂದಲೇಬೇಕು ನೀರಿನ ಪ್ರವಾಹಗಳಿಂದ ನಮ್ಮ ಪ್ರಾಂತ್ಯದಲ್ಲಿ ಧಾರಾಳ ವಿದ್ಯುತ ಶಕ್ತಿಯನ್ನು ತಯಾರಿಸಲು ಸಾಧ್ಯವಾಗಿದೆ ಈ ವಿದ್ಯುಚ್ಛಕ್ತಿಯು ಉಪಯೋಗದಿಂದ ಹಲವು ತರದ ಕೈಗಾರಿಕೆಗಳನ್ನು ನಡೆಸುಸಲು ಸಾಧ್ಯವಿದೆ ಆದರೆ ವಿದ್ಯುಚ್ಛಕ್ತಿಯು ಬೆಲೆಯು ಇನ್ನೂ ಕಡಿಮೆಯಾಗಬೇಕಾಗಿದೆ. ಹೇಗೆ ಹಿಂದೂದೇಶದ ಎಲ್ಲಾ ಪ್ರಾಂತ್ಯಗಳಲ್ಲಿ ಕೈಗಾರಿಕೆಯ ಉದ್ಧಮತ್ತು ಅಭಿವೃದ್ಧಿ ಹೊಂದತಕ್ಕದು

ಹೊಲಸುಕೇರಿಗಳ ಜೀರ್ಣೋದ್ಧಾರ

ಹೊಲಸುಕೇರಿಗಳಲ್ಲಿ ಇಕ್ಕಟ್ಟಾಗುವುದನ್ನು ತಡೆಯಲು, ಯೋಗ್ಯ ಕಾರ್ಯವು ಅಮೇರಿಕಾದಲ್ಲಿ ನಡೆಯಲಿಲ್ಲ ಎಂದು ಅಲ್ಲಿನ ಪ್ರಸಿದ್ಧ ಪುರುಷರ ಮಾತು ಕಡಿಮೆ ಆದಾಯವುಳ್ಳ ಮಜೂರರಿಗೆ ಯೋಗ್ಯ ನಿವಾಸಗಳನ್ನು ರಚಿಸುವುದು ಸರಕಾರದ ಮುಖ್ಯ ಕೃತ್ಯವವಾಗಿರುತ್ತದೆ. ಇಂಗ್ಲಾಂಡು, ಫ್ರಾನ್ಸು, ಹೊಲ್ಲೆಂಡ್ ಜೆಗೊಸ್ಲೆವಕಿಯಾ, ಈ ದೇಶಗಳಲ್ಲಿ ಈ ಹೊಲಸುಕೇರಿಗಳ ಜೀರ್ಣೋದ್ಧಾರ ಕಾರ್ಯವು ಬಹಳ ಯಶಸ್ವಿಯಾಗಿ ನಡೆದಿದೆ ೧೯೧೯ರಿಂದಲೆ ಕೋಟಿ ಹೊಲಸುಕೇರಿಗಳ ನಿವಾಸಿಗಳಿಗೆ ನವೀನ ಕಟ್ಟಡಗಳಲ್ಲಿ ಮನೆಮಾಡಿಕೊಟ್ಟಿರುತ್ತಾರೆ ಇಂಗ್ಲಾಂಡಿನಲ್ಲಿ ಈ ಹೊಲಸುಕೇರಿಯ ನಿವಾಸಿಗಳಿಗೆ ಯೋಗ್ಯ ನಿವಾಸಗಳನ್ನು ಒದಗಿಸುವ ಕಾರ್ಯವು ಸರಕಾರದವರು ಯೋಗ್ಯರೀತಿ ನಡೆಯುಸಿರುತ್ತಾರೆ. ಮಾತ್ರವಲ್ಲ, ಕೆಲವು ಸ್ವತಂತ್ರ ಸಂಸ್ಥೆಗಳು ಈ ಕಾರ್ಯದಲ್ಲಿ ಭಾಗವಹಿಸಿ, ಸಾವಿರಾರು ನವೀನ ಮನೆಗಳನ್ನು ರಚಿಸಿರುತ್ತಾರೆ. ಅಮೇರಿಕಾದ ಸರಕಾರವು ತಮ್ಮ ಹೊಲಸುಕೇರಿಗಳ ಜೀರ್ಣೋದ್ಧಾರವನ್ನು ಬೇಗನೆ ಕೈಗೊಳ್ಳುವರಂತೆ. ಹಿಂದೂದೇಶದಲ್ಲಿ ಇಂಥಾಸಂಸ್ಥೆಗಳ ಅಗತ್ಯವಿದೆ. ಮಾತ್ರವಲ್ಲದೆ ಸರಕಾರದ ಸಹಕಾರವು ಬೇಕಾಗಿದೆ.

ಹಿಂದೂದೇಶದ ನವಸಂಗ್ರಾಮಾಧಿಕಾರಿಗಳು.

ಹಿಂದೂದೇಶದ ಹೊಸ ಕಮಾಂಡರ್ ಇನ್ ಚೀಫರಾದ ಸರ್ ರೋಬರ್ಟ್ ಕೆಸಲ್ಲರು ಮೊನ್ನೆ ಬೊಂಬಾಯಿಯಲ್ಲಿ ಇಳಿದು, ಇಲ್ಲಿನ ಸಂಗ್ರಾಮಾಧಿಕಾರವನ್ನು ವಹಿಸಿರುತ್ತಾರೆ ಇವರು ಉದ್ಯೋಗಕ್ಕೆ ಬಂದ ಈ ಸಮಯದಲ್ಲಿ ಹಿಂದೂದೇಶದ ಭದ್ರತಾ ಮತ್ತು ರಕ್ಷಣಾ ಕ್ರಮಗಳು ಸುಧಾರಣೆ ಹೊಂದಬೇಕಾಗಿವೆ ಫೆಡರೇಶನ್ ನವರಾಜಶಾಸನವು ಕ್ರಮಕ್ಕೆ ಬರುವುದು. ಅದು ಯಶಸ್ವಿಯಾಗಿ ನಡೆಯಲು ಅದರ ಸದಸ್ಯರೂ, ಸಂಗ್ರಾಮಿಗಳೂ ಪರಸ್ಪರ ಸಹಕಾರದಿಂದ ವರ್ತಿಸತಕ್ಕದು ನಮ್ಮ ಹೊಸ ಕಮಾಂಡರ್ ಇನ್ ಚೀಫರು, ಇಂಥಾ ಸಹಕಾರವು ಉಂಟಾಗುವಂತೆ, ಸಂಗ್ರಾಮ ವಿಷಯಕವಾದ ವೆಚ್ಚವನ್ನು ಕಡಿಮೆಮಾಡುವುದಲ್ಲದೆ, ಸಂಗ್ರಾಮ ಇಲಾಖೆಯಲ್ಲಿ ಹಿಂದೀಯರಿಗೆ ಅಧಿಕಸ್ಥಾನಗಳು ದೊರಕುವಂತೆ ಸಾಧಿಸಬೇಕು ಇವರ ವರ್ತನೆಯು ಹಿಂದೂದೇಶದ ಹಿತವನ್ನವಲಂಬಿಸಬೇಕಲ್ಲದೆ, ಬ್ರಿಟಿಷ ವಾರ್ ಆಫೀಸಿನ ಬೋಧಪರವಾಗಬಾರದು ಹಿಂದೂದೇಶ ಸಂಗ್ರಾಮವೆಚ್ಚದ ಹೆಚ್ಚಿನಾಂಶವು ಭಾರತೀಯರ ಕಿಸೆಗಳನ್ನು ಸೇರುವಂತಾಗಬೇಕು ಈ ಕುರಿತು ಮಾಜಿ ಕಮಾಂಡರ್ ಇನ್ ಚೀಫರಾದ ಸರ್ ಫಿಲಿಪ್ ಚೆಟವೂಡ್ಡರು ಬಹಳ ಶ್ರಮಪಟ್ಟಿರುತ್ತಾರೆ ನಮ್ಮ ಹೊಸ ಸಂಗ್ರಾಮಾಧಿಕಾರಿಯವರು ಈ ವಿಚಾರದಲ್ಲಿ ಭಾರತೀಯರಿಗೆ ಸಮಾಧಾನವಾಗುವ ರೀತಿಯಲ್ಲಿ ವರ್ತಿಸುವರೆಂದು ನಮ್ಮ ಭರವಸೆ ಸರ್ ಫಿಲಿಪ್ ಚೆಟವೂಡ್ಡರು ಸೈನ್ಯಸಮೂಹವನ್ನು ಭಾರತೀಯವಾಗಿ ಮಾಡುವುದನ್ನು ಪರಿಶೋಧನಾ ಸ್ಥಿತಿಯಲ್ಲಿರಿಸಿದ್ದರು ಈಗ ಹಿಂದೂದೇಶದ ಸೇನಾಸಮೂಹದಲ್ಲಿ ಭಾರತೀಯರ ಸಂಖ್ಯೆಯು ಅಧಿಕವಾಗುವಂತೆ ಏರ್ಪಾಡುಗಳಾಗುವುದಲ್ಲದೆ, ಹಿಂದೂದೇಶದ ಭದ್ರತಾ ಕಾರ್ಯವು ಭಾರತೀಯರಿಂದಲೆ ನಡೆಯುವ ಹಾಗೆ ಸಂಗ್ರಾಮಸಿದ್ಧತೆಗಳಾಗತಕ್ಕದು

ಬಂಗಾಳದ ನಿರುದ್ಯೋಗಿಗಳ ಪರಿಷತ್ತು

ಬಂಗಾಳದ ನಿರುದ್ಯೋಗಿ ತರುಣರನ್ನು ವಿಮೋಚನೆಗೊಳಿಸಲು ಅನೇಕ ನಿರ್ಣಯಗಳು ಈ ಪರಿಷತ್ತಿನಲ್ಲಿ ಆಗಿವೆ ಜಮೀನದಾರಿ ಸಂಸ್ಥೆಯನ್ನು ಸಹಕಾರದ ಸೂತ್ರದಲ್ಲಿ ನಡೆಯುಸಿದರೆ ಅನೇಕ ಮಧ್ಯಮ ತರಗತಿಯ ಯುವಕರಿಗೆ ಉದ್ಯೋಗ ದೊರಕುವುದೆಂದು, ಪರಿಷತ್ತಿನ ಅಧ್ಯಕ್ಷರು ಸೂಚಿಸಿದರು.

ದೇಶದ ಸಾಗುವಳಿ ಮತ್ತು ಕೈಗಾರಿಕೆಗಳನ್ನು ಯುವಕರಿಗೆ ಉದ್ಯೋಗ ಒದಗಿಸುವ ನವಮಾರ್ಗಗಳನ್ನು ಸೃಷ್ಟಿಸುವಂತೆ ನಡೆಯಿಸತಕ್ಕದು ನಿರುದ್ಯೋಗ ಸಮಸ್ಯೆಗೆ ಈಗ ಹೆಚ್ಚಿನ ಗಮನಕೊಡಬೇಕಾಗಿದೆ ಈ ಕಾರ್ಯದಲ್ಲಿ ಸರಕಾರದವರು ಪ್ರಜೆಗಳೊಡನೆ ಸಹಕರಿಸಬೇಕಾಗಿದೆ. ನಿರುದ್ಯೋಗಿಯಾದ ತರುಣನಿಗೆ ಯೋಗ್ಯ ಉದ್ಯೋಗವನ್ನು ದೊರಕಿಸುವುದು ಸರಕಾರದ ಮುಖ್ಯ ಕರ್ತವ್ಯವಾಗಿರುತ್ತದೆ ಎಂಬುದಾಗಿ ವ್ಯಕ್ತಪಡಿಸುವ ಸೂಚನೆಗಳು ಈ ಪರಿಷತ್ತಿನಲ್ಲಿ ಬಂದುವು.

ಬಂಗಾಳದ ಗವರ್ನರರು ಈ ಪರಿಷತ್ತಿಗೆ ತಮ್ಮ ಸಂದೇಶವನ್ನು ಕಳುಹಿಸಿಕೊಟ್ಟಿರುವರು

ಸಂಕ್ಷನುಗಳ ವಿಚಾರ

ಇತ್ತರ ತನಕ ಇಟಲಿಗೆ ಹೋಗುತ್ತಿರುವ ಪೆಟ್ರೋಲು, ಎಣ್ಣೆ ಇತ್ಯಾದಿಗಳ ಮೇಲೆ ಸಂಕ್ಷನು ಬಹಿಷ್ಕಾರವನ್ನು ತರಲಿಲ್ಲ. ಆದರೆ ಎಣ್ಣೆಯ ಮೇಲೆ ಸಂಕ್ಷನುಗಳನ್ನು ತರಬೇಕಾಗಿ ಜನಪದ ಮಂಡಳದ ಸಮಿತಿಯವರು ಸೂಚನೆಗಳನ್ನು ತಯಾರಿಸಿರುವರು. ಅವುಗಳು ಪ್ರಥಮದಿಂದ ಅಮಲಿಗೆ ತರಲ್ಪಡುವವು. ಆದರೆ ಫ್ರೆಂಚರಿಗೆ ಈ ಸಂಕ್ಷನುಗಳಲ್ಲಿ ಒಟ್ಟಿಂಟಿಗರಾಗಿ ವರ್ತಿಸಲು ಇಚ್ಛೆಯಿಲ್ಲ. ಇತರ ಜನಾಂಗಗಳೊಡನೆ ಒಟ್ಟಾಗಿ ಕಾರ್ಯಸುವರು ಇತ್ತಲಾಗಿ ಫ್ರಾನ್ಸಿನ ಲಾವೆಲರು ಇನ್ನೂ ರಾಜಪ್ರಸ್ತಾಪವನ್ನ ನಡೆಯುಸುತ್ತಿದ್ದಾರೆ ಮುಸಲೋನಿಯವರಿಗೆ, ತನ್ನ ಶರ್ತಗಳನ್ನು ಜನಪದ ಮಂಡಳಕ್ಕೆ ಕಳುಹಿಸಿಕೊಡಲು ವಿನಂತಿಸಿದ್ದಾರೆ ಫ್ರೆಂಚರು ಇಟಲಿಯ ಮೇಲೆ ಕರುಣೆ ಹೊಂದಿದವರಾಗಿ ವರ್ತಿಸುತ್ತಿದ್ದಾರೆ ಈ ಎಣ್ಣೆಯ ಸಂಕ್ಷನುಗಳಲ್ಲಿ ಕೆನಡಾವು ಭಾಗವಹಿಸುವುದಿಲವೆಂದು ತಿಳಿದುಬರುತ್ತದೆ

ರೋಮಿನಲ್ಲಿ

ದಶಂಬರ ೧೮ನೇ ತಾರೀಕಿನ ದಿವಸವು ಅತಿ ವಿಜೃಂಭಣೆಯಿಂದ ನಡೆಯುವುದು ಈ ದಿವಸ ದೇಶದ ಎಲ್ಲಾ ಸ್ತ್ರೀಪುರುಷರು ತಮ್ಮ ದೇಶಕ್ಕೆ ಆರ್ಥಿಕ ಸಹಾಯವಾಗುವಂತೆ, ತಮ್ಮ ಈ ಸಂದಿಗ್ಧ ಸಮಯದಲ್ಲಿ ವಿವಾಹ ಉಂಗುರಗಳನ್ನು ಯುದ್ಧ ಸ್ಮಾರಕಗಳ ಹತ್ತಿರ ಸರಕಾರಕ್ಕೆ ಒಪ್ಪಿಸುವರು ಇಟಲಿಯ ಚಕ್ರವರ್ತಿಯವರು ಯುದ್ಧಸನ್ನಾಹಕ್ಕಾಗಿ ದಾರಾಳ ಸುವರ್ಣವನ್ನು ಕಳುಹಿಸಿಕೊಟ್ಟಿರುತ್ತಾರೆ ಬೇಂಕ್ ಒಫ್ ಇಟಲಿಯವರು, ಮುಸಲೋನಿಯವರಿಗೆ ಒಂದು ಧಿಲಿಯ ಲಾಯರುಗಳನ್ನು ಕೊಟ್ಟಿರುತ್ತಾರೆ

ತಂಪಾಗಿರಿಸುವ, ವಿಷಹಾರಿ ಸಾಂಬಕ್ ಲೋಪವನ್ನು ಹೋಯು ಸದ್ಯ ಕಲೆಗಳಾಗಿಯು ಪಂತ ಗುಣಪಡಿಸುತ್ತದೆ.

ಶುದ್ಧ ವನಸ್ಪತಿಗಳಿಂದಲೆ ತಯಾರಿಸಲ್ಪಟ್ಟ ಮುಲಾಮು.

ಸಣ್ಣ ಸಣ್ಣ ಗಾಯಗಳಾದಾಗ ಜಾಗ್ರತೆಮಾಡದೆ ಇಡುವುದರಿಂದ ಅವುಗಳಲ್ಲಿ ಕ್ರಿಮಿಗಳು ಕೂತುಕೊಂಡು ರಕ್ತವು ಹಾಳಾಗಿ ನಿಮ್ಮನ್ನು ಹಲವು ದಿವಸಗಳು ಯಾ ತಿಂಗಳುಗಳವರೆಗೆ ಭಯಂಕರ ವೇದನೆಗೆ ಈಡುಮಾಡುವುದು ಅಂಥ ಸಂದರ್ಭಗಳಲ್ಲಿ ಸಾಂಬಕನ್ನು ನಿಮ್ಮ ಗಾಯಕ್ಕೆ ತಾಗಿಸಿದರೆ ಕೂಡಲೆ ಏನೊಂದು ಉರಿಯಿಲ್ಲದೆ ಗಾಯವನ್ನು ಗುಣಪಡಿಸುವುದು ನೋಡಬೇಕೆಂದರೆ ಅದರ ಕಲೆ ಕೂಡ ಸಿಗಲಿಕ್ಕಿಲ್ಲ ಹುಣ್ಣುಗಳು, ಸುಟ್ಟ ಗಾಯಗಳು, ಲೂತಿ, ಬಾತುಹೋದ ಅವಯವಗಳು ಹುಳು ಮೇಯುವುದಕ್ಕೆ ಇವ ಕೈಲ್ಲಾ ಸಾಂಬಕ್ ಪರಮೌಷಧಿ ಇದು ವಿಷಹಾರಿ ಕ್ರಿಮಿಗಳನ್ನ ತಕ್ಷಣವೇ ಕೊಲ್ಲುವುದು ಹೊರಗಿನ ಹಾಳಾದ ಪರೆಯನ್ನ ತುಸು ದಿವಸಗಳಲ್ಲಿ ಒಣಗಿಸುವುದು ಒಂದು ಸಲ ಸ್ವತಃ ಉಪಯೋಗಿಸಿದರೆಂದರೆ ಗುಣಾಂಶವು ತಿಳಿದುಬರುವುದು ಒಂದು ಪೆಟ್ಟಿಗೆಗೆ 1 ಅಥವಾ ರೂ 2-4-0ರಂತೆ ಎಲ್ಲಾ ಔಷಧ ವಿಕ್ರಯಗಾರರಲ್ಲೂ ವಿಕ್ರಯಿಸಲ್ಪಡುತ್ತದೆ

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.

ಸಾಂಬಕ್

Zam Buk

The Canara Bank Ltd,
City, Mangalore
ಕೆನರಾ ಬ್ಯಾಂಕ್ ಲಿಮಿಟೆಡ್,
ಸಿಟಿ, ಮಂಗಳೂರು

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಕೊಟುಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವ್ಯಾಧಿಗೆ ಕೊಡದೆ ಇದ್ದುದರಿಂದಲೂ ಬೇಂಕಿನ ಕ್ರಮಗಳಿಗನುಸಾರವಾಗಿ ಸದರಿಯವರಿಗೆ ಕೊಟ್ಟ ಟಪ್ಪಾಲು ರಿಜಿಸ್ಟ್ರಿ ನೋಟೀಸನ್ನು ನಂಬ್ರ 1ನೇಯವರು ಅಂಗೀಕರಿಸದೆ ಬಡ್ಡಿ ಕೊಡದೆ ಎಾಕಿ ಮಾಡಿರುವುದರಿಂದಲೂ ಮತ್ತು ನಂಬ್ರ 1ನೇಯವರು ಪಡೆಕೊಳ್ಳುವದೆ ನಿರಾಕರಿಸಿರುವುದರಿಂದಲೂ ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ಸಾಲಗಾರರು ಬೇಂಕಿಗೆ ಒಟ್ಟಾ ಅಸಲು ಬಡ್ಡಿ ಹಣಗಳನ್ನು 1935ನೇ ಇಸವಿ ದಶಂಬರ ತಾ 11ನೇ ಬುಧವಾರ ಮಧ್ಯಾಹ್ನ 3 ಗಂಟೆ ಒಳಗೆ ಬೇಂಕಿಗೆ ಕಟ್ಟಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಇದೇ 1935ನೇ ಇಸವಿ ದಶಂಬರ ತಾ 13ನೇ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ಯಾ ಬೇಂಕಿನವರಿಗೆ ಯುಕ್ತಕಂಡ ಇತರ ಸಮಯದಲ್ಲಿ ಸದರಿ ಅಡವಿಟ್ಟ ನಗಗಳನ್ನು ಬೇಂಕಿನ ಮಂಗಳೂರು ಆಫೀಸಿನಲ್ಲಿ ಬಹಿರಂಗವಾಗಿ ಹರಾಜ ಮಾಡಿ ಹುಟ್ಟಿದ ಹಣವನ್ನು ಸದರೀ ಸಾಲಕ್ಕೆ ವಜಾವಾಗಿ, ಉಳಕೆ ಖರ್ಚಿನ ವಸೂಲಿನ ಬಗ್ಗೆ ಸಾಲಗಾರರ ಮೇಲೆ ಅಲ್ಲದೆ ಸಿವಿಲ್ ದಾವಾ ನಡೆಸಲಾಗುವುದು.

1 ಲೋನ್ ನಂಬ್ರ S L 22 34 ಸಾಲಗಾರರ ಹೆಸರು ಅಚಪ್ಪ ಬ್ಯಾರಿಯವರು, ಕಾದ್ರಿ ಬ್ಯಾರಿಯವರ ಮಗ, ಅಂಬ್ಲಮೊಗ್ರು ಗ್ರಾಮದಲ್ಲಿರವರು ಉಳ್ಳಾಳ ಪೋಸ್ಟು. ಸಾಲದ ಐವಜು ರೂ 10—0—0 ಬಡ್ಡಿ ಮತ್ತು ಖರ್ಚು ಬಹಾದ್ದು ರೂ. 2-2-4 ಮತ್ತು ಈ ನೋಟೀಸಿನ ಖರ್ಚು ಸಹಾ ಬರಬೇಕು

2 ಲೋನ್ ನಂಬ್ರ L 47/35 ಸಾಲಗಾರರ ಹೆಸರು ಕೆ ಉಮ್ಮರ ಬ್ಯಾರಿ, ಕಾದ್ರಿ ಬ್ಯಾರಿಯವರ ಮಗ ಸುರತ್ಕಲ್ಲು ಪೋಸ್ಟು, ಹೊನ್ನಕಟ್ಟೆಯಲ್ಲಿರುವವರು. ಸಾಲದ ಐವಜು ರೂ 250-0-0. ಬಡ್ಡಿ ಮತ್ತು ಖರ್ಚು ಬಹಾದ್ದು ರೂ.18-1-0 ಮತ್ತು ಈ ನೋಟೀಸಿನ ಖರ್ಚು ಸಹಾ ಬರಬೇಕು.

ಬೇಂಕಿನ ಆಫೀಸು **M. Mukunda Kini,**
4-12-1935 ***Agent.***

[illegible]

[illegible]

ನಮ್ಮ ಹೊಸ ರಾಜ್ಯಶಾಸನ.

ಹಿಂದೂದೇಶಕ್ಕೆ ಸರಕಾರ ಶಾಸನ [illegible]ವುತ್ತದೆ. ಅದರಿಂದ [illegible]ಗೆ [illegible] ಸಾಧಿಸುವ ಬಗೆ [illegible] ಮತ್ತು ಕಾರ್ಯಕಲಾಪಗಳನ್ನು ಈ [illegible]ಕಾರಣಗಳನ್ನನುಸರಿಸಿ ನಿರ್ಧರಿಸ[illegible]ದು. ಈ ಕುರಿತು ಶ್ರೇಷ್ಠ ರಾಷ್ಟ್ರಧುರೀಣರಾದ ಶ್ರೀ [illegible]ದಾನಂದ ಸಿನ್ಹಾರವರು ಲಖ್ನೊ ವಿಶ್ವವಿದ್ಯಾಲಯ ಪಾರ್ಷಿಕೋತ್ಸವದ ಸಮಾರಂಭದಲ್ಲಿ ಭಾಷಣವನ್ನು ಮಾಡಿದರು "ನವರಾಜ ಶಾಸನಗಳು ಪ್ರಜೆಗಳಿಗನುಸಾರವಾಗಿ ರಚನೆಯಾಗದ ಕಾರಣ ಅದಕ್ಕೆ ಹೆಚ್ಚಿನ ಮನ್ನಣೆಯು ದೊರಕಲಿಲ್ಲ ನಮ್ಮ ಭವಿಷ್ಯಕ್ಕೆ ನಾವೆ ಕಾರಣರಾಗಬೇಕು ಎಲ್ಲಾ ರಾಜ್ಯಗಳ ಶ್ರೇಯಸ್ಸು ಅದರ ರಚನೆಯ ಮೇಲೆ ಹೆಚ್ಚಾಗಿ ಅವಲಂಬಿಸಿಕೊಂಡಿಲ್ಲ ಅದು ಪ್ರಜೆಗಳ ಮೇಲೆ ಹೊಂದಿಕೊಂಡಿರುತ್ತದೆ ರಾಜಕಾರ್ಯದಲ್ಲಿ ಪ್ರಜೆಗಳು ದೇಶಪ್ರೇಮಿಗಳಾಗಬೇಕು, ಗುಣದಲ್ಲಿ ಬಲಾಢ್ಯರಾಗಬೇಕು ಸ್ವತಂತ್ರರಾಗಿ ವರ್ತಿಸಬೇಕು ಇದು ನನ್ನ ಜನಾಂಗದವರಿಗೆ ಅನುಸರಿಸಲು ಕಷ್ಟಸಾಧ್ಯವೆನಿಸಬಹುದು ಇವುಗಳು ನಾಗರೀಕತೆಯ ಪರಮಗುಣಗಳು ಪ್ರಜಾ ಪ್ರಭುತ್ವದ ಹಕ್ಕುಗಳನ್ನು ನಾವು ಇನ್ನೂ ಸಾಧಿಸುವವರಾದರೆ, ಮುಂದಿನ ಶಾಸನಸಭೆಗಳಿಗೆ (ಪ್ರಾಂತಿಕ ಮತ್ತು ಕೇಂದ್ರ) ಯೋಗ್ಯ ಸದಸ್ಯರನ್ನು ಕಳುಹಿಸಬೇಕು ಅವರು ಸ್ವಾರ್ಥವನ್ನು ತ್ಯಜಿಸಿ, ದೇಶಹಿತಕ್ಕಾಗಿಯೇ ಶ್ರಮಪಡತಕ್ಕದು ಜಾತಿಭೇದಪರರಾಗಬಾರದು"

ಲಖ್ನೊದಲ್ಲಿ ನಮ್ಮ ಮಾನ್ಯ ವೈಸರಾಯರು:—

ನಮ್ಮ ಮಾನ್ಯ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಮೊನ್ನೆ ಲಖ್ನೊ ನಗರಕ್ಕೆ ಪ್ರವಾಸಬೆಳೆಸಿದರು ಅಲ್ಲಿ ಅವರಿಗೆ ಅತಿ ವಿಜೃಂಭಣೆಯಿಂದ ಸ್ವಾಗತೀಕರಿಸಿದರು ಔದಷ ತಾಲೂಕುಗಳ ಜಮೀನುದಾರರಿಂದಲೂ ನಗರಸಭೆಯವರಿಂದಲೂ ಭಿನ್ನ ತಾಪತ್ರಗಳು ಅರ್ಪಿಸಲ್ಪಟ್ಟವು ಅವುಗಳನ್ನು ಉತ್ತರಿಸಿ, ಭಾಷಣದಲ್ಲಿ ನವರಾಜ ಶಾಸನದ ಕುರಿತಾಗಿ ಕೆಲವು ಮಾತುಗಳನ್ನಾಡಿದರು ಸುಧಾರಣೆಗಳು ಹಿಂದೂದೇಶದ ಜನರಿಗೆ ಸಮಾಧಾನಕರವಾಗುವುದೆಂದೂ ಅವು ಹಿಂದಿಯರ ಕೋರಿಕೆಗಳನ್ನನುಸರಿಸಿವೆಂದೂ ಇವರ ಅಭಿಪ್ರಾಯ ಆದರೆ ಈಗಿನ ಸಂದರ್ಭಕ್ಕನುಸಾರವಾಗಿ ಇವರು ಔದ ತಾಲೂಕುದಾರರ ಭಿನ್ನವದ ಉತ್ತರದಲ್ಲಿ, "ನವಸುಧಾರಣೆಗಳು ಅತಿ ಜಾಗರೂಕತೆಯಿಂದಲೂ, ಸಮಾಧಾನದಿಂದಲೂ ತಯಾರುಹೊಂದಿದಾಗಿ, ಅವುಗಳು ಪ್ರಜೆಗಳಿಗೆ ಹಿತಕರವಾಗಲಭಿಸುವುದಲ್ಲದೆ, ರಾಜಾಭಿವೃದ್ಧಿಯ ಬೀಜಗಳು ಇವುಗಳಲ್ಲಿ ಹೊಂದಿಕೊಂಡಿವೆ' ಎಂದು ಸೂಚಿಸಿದರು ಇದು ಕನ್ಸರ್ವೇಟಿವ್ ಸರಕಾರದ ಒಂದು ಪಕ್ಷದ ಅಭಿಪ್ರಾಯವಾಗಿರುತ್ತದೆ ನಗರಸಭೆಗೆಕೊಟ್ಟ ಉತ್ತರದಲ್ಲಿ, 'ನವರಾಜಶಾಸನವು ಪ್ರಜೆಗಳಲ್ಲಿ ಅಧಿಕ ಸಂಖ್ಯಾಕರಿಗೆ ಒಪ್ಪುವ ಹಾಗಿಲ್ಲ. ಆದರೂ, ಹಿಂದೀಯರಿಗೆ ಮೇಲ್ಮೆಯನ್ನು ಸಾಧಿಸುವಂತೆ, ಅವರ ಯೋಗ್ಯತೆಯನ್ನೂ, ಅಭಿವೃದ್ಧಿಯನ್ನೂ ವ್ಯಕ್ತಪಡಿಸಲು ಒಂದು ಹಾದಿಯನ್ನು ತೋರಿಸಿಕೊಡುವಂತಾಗಿದೆ.' ಇದರಿಂದ ಇಂಗ್ಲಾಂಡು ಹಿಂದೀಯರ ಮೇಲೆ ಸರ್ವಾಧಿಕಾರವುಳ್ಳದಾಗಿದೆ, ಮತ್ತು ಅವರ ಯೋಗ್ಯತಾಗುಣಗಳು, ಅವರಿಂದಲೆ [illegible]ವಾಗಬೇಕಾಗಿದೆ ಎಂದು ವ್ಯಕ್ತವಾಗುತ್ತದೆ.

[illegible] ಜಠರವೇದನೆ.

12 [illegible] ವರ್ಷಗಳಿಂದಲೂ [illegible] [illegible] "[illegible]ಗಾಗಿ" ಒಂದು ಬಾಟ್ಲಿಯನ್ನು [illegible] G. W. [illegible] ಬರೆದ ಪತ್ರವನ್ನು ಓದಿ:—

ಕಳೆದ 12 ವರ್ಷಗಳಿಂದಲೂ ಜಠರವೇದನೆಯಿಂದ ನಾನು ವಿಶೇಷವಾಗಿ ಬಳಲುತ್ತಿದ್ದೆ. ಎಷ್ಟೋ ಸಲ ಉಪವಾಸ ಬೀಳಬೇಕಾಗುತ್ತಿತ್ತು ಒಂದು ತಿಂಗಳ ತನಕ ಈ ಸ್ಥಿತಿಯಲ್ಲಿದ್ದುದೂ ಇತ್ತು. ಕೆಲಸಮಾಡಿದೊಡನೆ ನೋವು ತಲೆಯೆತ್ತುತ್ತಿತ್ತು. ಪೇಟೆಯ ಎಲ್ಲಾ ಔಷಧಿಗಳನ್ನು ಪರೀಕ್ಷಿಸಿದ ನಂತರ ಒಬ್ಬರು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಒಂದು ಬಾಟ್ಲಿಯನ್ನು ಶಿಫಾರಸು ಮಾಡಿದರು, ಪರೀಕ್ಷೆಗಾಗಿ ತೆಗೆದುಕೊಂಡ ಅದೊಂದು ಪರೀಕ್ಷೆಯಾಗಲಿಲ್ಲ! ನನಗೆ ಪೂರ್ಣ ಗುಣಾರಿಯೋ ಆಯಿತೆಂದು ತಿಳಿಸುವುದು ನನ್ನ ಕರ್ತವ್ಯ ಈಗ ಒಂದು ಭೋಜನದಲ್ಲಿ ನಾನ ಹೆಚ್ಚಿನ ಅನ್ನವನ್ನು ಉಣ್ಣಬಲ್ಲೆ ಕಳೆದ ಹನ್ನೆರಡು ವರ್ಷಗಳಿಂದ ಉಣ್ಣದಷ್ಟು ಉಣ್ಣುತ್ತಿರುವೆನು. ಅಷ್ಟು ಕೆಲಸವನ್ನೂ ಮಾಡುತ್ತಿರುವೆನು ಜಠರವೇದನೆಯಿಂದರೇನೆಂದು ನನಗೆ ತಿಳಿದಿಯಾದುದರಿಂದ ಈ ರೋಗದಿಂದ ನರಳುವ ಎಲ್ಲರಿಗೂ ನಾನು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನು ಶಿಫಾರಸು ಮಾಡುವೆನು

ಒಂದು ಬಾಟ್ಲಿಯನ್ನು ಇಂದೇ ಪಡೆಯಿರಿ ಆದರೆ ಕೆಲವು ಅಣೆಗಳನ್ನುಳಿಸಹೋಗಿ ಕನಿಷ್ಟ ತರಗತಿಯದ್ದನ್ನು ಪಡೆಯುವ ಗೋಳಿಗೆ ಕೈಹಾಕಬೇಡಿ ಕೆಂಪು ಮುದ್ರೆಯಿರುವ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಕೆಮಿಸ್ಟರಿಂದ ಪಡೆಯುವಂತೆ ಎಚ್ಚರಿಕೆ

Alex C. Maclean

ಎಂಬ ಸಹಿಯು ಅಚ್ಚು ಬಿಲ್ಲೆ ಮತ್ತು ಟೀಟಗೆ ಮೇಲಿದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇವನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,

15 ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು—

ಇವರಿಗೆ ಬರೆಯಿರಿ



ರಕ್ತದ ಒತ್ತಾಟವು ಕ್ರುಶೆನ್ ಲವಣದ ಸೇವನೆಯಿಂದ ಕಮ್ಮಿಯಾಯಿತು.

ಹಿಂದಿನ ದುರವಸ್ಥೆಗಳು ಒಂದೇ ಸಲವೆ ಅಡಗಿದುವು.

ರಕ್ತದ ಒತ್ತಾಟವು ಹೆಚ್ಚಾಗಿ, ನರಳಿದ ಮಹನೀಯನೊಬ್ಬನು ಕ್ರುಶೆನನ್ನು ಹೊಗಳಿ ಹೀಗೆ ಬರೆದಿರುವನು

"ಹಲವು ವರುಷಗಳಿಂದ ನಾನು ರಕ್ತದ ಹೆಚ್ಚಾದ ಒತ್ತಾಟದಿಂದ ನರಳುತ್ತಿದ್ದೆ ಪ್ರತಿಯೊಬ್ಬರೂ ಶಿಫಾರಸು ಮಾಡಿದ ಮದ್ದನ್ನು ಸೇವಿಸಿದೆ ಆದರೆ ಪ್ರಯೋಜನಕಾರಿಯಾಗಿಲ್ಲ ಕಟ್ಟಕಡೆಗೆ ಕ್ರುಶೆನ್ ಸೇವನೆಯಿಂದ ನನಗೆ ತಂಪಾವಾಸಿಯಾಯಿತು ಮೊದಲಿಗಿಂತಲೂ ಕೃಷ್ಣನಾಗಿಯೂ ಪುಷ್ಟನಾಗಿಯೂ ಬೆಳೆದು ಮೆದುಳಿಗೆ ಒಂದು ವಿಧವಾದ ಶಾಂತಿಯು ದೊರಕಿದಂತಾಯಿತು ಪ್ರತಿದಿನ ಬೆಳಿಗ್ಗೆ ಸ್ವಲ್ಪ ಕ್ರುಶೆನ್ ಲವಣವನ್ನು ಸೇವಿಸದೆನೆಂದರೆ ತಲೆನೋವೂ ಇಲ್ಲ ಅಲಸ್ಯವೂ ಕಂಡುಬರುವುದಿಲ್ಲ ಕ್ರುಶೆನ್ ಸೇವಿಸಿದ ನಂತರ ರಕ್ತದ ಒತ್ತಾಟದ ವೇಗವನ್ನು ನೋಡಿದೆ ಅದು ಬಹಳ ಕಮ್ಮಿಯಾಗಿತ್ತು ವೈದ್ಯರಿಗೆ ಬಹಳ ಆಶ್ಚರ್ಯವಾಯಿತು"

ಮಿ। ಎಫ್. ಬಿ.

ದೇಹದಲ್ಲಿ ಕೆಟ್ಟ ರಕ್ತವು ಹರಿಯುವುದರಿಂದ ಮನುಷ್ಯನಿಗೆ ಬಹಳ ಬಾಧಕವಿದೆ ಅನೇಕಾನೇಕ ರೋಗಗಳು ಮನುಷ್ಯನಿಗೆ ಹುಟ್ಟುತ್ತವೆ ಯಾವ ಅವಯವಕ್ಕೆ ಈ ರಕ್ತವು ಹೋಗುತ್ತದೋ ಆ ಭಾಗಕ್ಕೆ ಏನಾದರೂ ಹಾನಿ ಉಂಟೇ ಉಂಟು ಈ ಕೆಟ್ಟ ರಕ್ತವು ರಂಧ್ರಗಳಲ್ಲಿ ಕೂತ ನಂತರ ಅದರಲ್ಲಿಯ ಕಲ್ಮಶಗಳು ಶುದ್ಧ ರಕ್ತವನ್ನು ಹರಿಯಬಿಡುವುದಿಲ್ಲ ಇದರಿಂದಾಗಿ ಅಲ್ಲಿ ರಕ್ತದ ಒತ್ತಾಟವು ಪ್ರಾರಂಭವಾಗುತ್ತದೆ

ಕ್ರುಶೆನ್ ಲವಣವು ಆರು ಮಿಶ್ರಿತ ಲವಣಗಳಿಂದ ತಯಾರಿಸಲ್ಪಟ್ಟಿದೆ ಇದು ಮೇಲೆ ಹೇಳಿದ ಸಂಕಟಕ್ಕೆ ದಿವ್ಯೌಷಧಿ. ಶೇಹದೊಳಗಣ ಎಲ್ಲಾ ಕಲ್ಮಶಗಳನ್ನು ಹೊರಗೆಡವಿ ನಿಮಗೆ ಸುಖವನ್ನೀಯುವುದು



ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ

ಕ್ರುಶೆನ್ ಸೋಲ್ಟ್ ದೊರೆಯುತ್ತದೆ

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಸೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು—ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕು ಸೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕು ದರದಲ್ಲಿ ಒದಗಿಸಿಕೊಡಬಹುದು

ಎಲ್ಲಾ ಜವಳಿ ಬೆಲೆಗೆ ಮಿಾರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

...ಪಂಚ ಪರಿಚಯ:

ಇನ್‌ಕಮ್ ಟ್ಯಾಕ್ಸ್ ವಿಚಾರಣಾ ಸಮಿತಿ

...ಹಿಂದೂ ಸರಕಾರದ ಇನ್‌ಕಮ್‌ಟ್ಯಾಕ್ಸ್ ಇಲಾಖೆ...ನ್ನು ಸಾಯಾಗಿ ಪರೀಕ್ಷಿಸಿ, ಈ ಇಲಾಖೆಯ ಸುಧಾ...ತಕ್ಕುದಾದ ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ನೇಮಿಸಿ, ಅದು ಈಗ ಕಾರ್ಯಗೈಯುತ್ತಿದೆ. ...ಯಾರಿಗೆ ಕೆಲವು ಸೂಚನೆಗಳು ಹಿಂದಿಯ ವ್ಯಾಪಾರ ...ಮಂಡಳಿಯಿಂದ ಬಂದಿರುತ್ತವೆ.

"ಈಗ ನೇಮಕವಾದ ಸಮಿತಿಯಲ್ಲಿ ಹೆಚ್ಚಾಗಿ ...ಇಲಾಖೆಯ ಉದ್ಯೋಗಸ್ಥರೇ ಇರುವುದರಿಂದ ಸರಕಾ...ರ ಉದ್ದೇಶಿಸಿದ ಈ ಕಾರ್ಯದಲ್ಲಿ ಪ್ರಜೆಗಳಿಗೆ ಬೇಕಾದ ...ಪ್ರಾತಿನಿಧ್ಯ ದೊರೆತಿಲ್ಲ. ಅದರಿಂದ ಈ ಸಮಿತಿ...ಯ ಮಂಡಳದಲ್ಲಿ ಪ್ರಜಾಪ್ರಾತಿನಿಧ್ಯವಿರಬೇಕು. ಅಗ್ಗ...ದ ಪದ್ಧತಿಯು ಸುಲಭವಾದ ಗೊತ್ತುಪಡಿಯು ಸಾಧ್ಯವಾಗು...ವುದು. ಹಿಂದೂದೇಶದ ಹೆಚ್ಚಿನ ಆದಾಯವು ಸಾಗು...ವಳಿಯ ಮೇಲೆ ಹೊಂದಿಕೊಂಡಿದೆ. ಅದರೆ ಈ ಆದಾಯ...ದ ಸರಕಾರದವರ ಖಜಾನೆಗೆ ಪ್ರತ್ಯಕ್ಷದಲ್ಲಿ ಸರಿಸ...ಮಾನವಾದ ತೆರಿಗೆಯು ಸೇರುವುದಿಲ್ಲ. ಪತ್ತೆಯ...ನ್ನು ಮರೆಮಾಡುವವರು ಅತಿ ಪುರಾತನ ಕಾಲದಲ್ಲಿ ...ಯಮಿಸಿದ ಕೆಲವು ಅತಿ ಸ್ವಲ್ಪ ಭೂಕಂದಾಯಗಳನ್ನು ...ಮಾತ್ರ ಸಲಾಯಿಸುತ್ತಿದ್ದಾರೆ. ಇನ್‌ಕಮ್ ಟ್ಯಾಕ್ಸ್...ನ್ನು ಅವರ ಮೇಲೆ ಯಾಕೆ ಕೈಬಾಚಬಾರದು.

ಬಡ್ಡಿಪತ್ರಗಳಿಂದ ದುಡಿಯುವ ಆದಾಯ, ಪೆನ್ಶನ್ ...ಆದಾಯ, (ಸರಕಾರಿ ಉದ್ಯೋಗಸ್ಥರ) ಮೇಲೆ ತೆರಿಗೆ...ಯನ್ನು ವಿಧಿಸಬೇಕು. ಮುಂದಕ್ಕೆ ಎಲ್ಲಾ ಆಧಾಯ...ದ ಮೇಲೆ ತೆರಿಗೆಯನ್ನು ವಿಧಿಸಲಾಗುವಂತೆ ಈ ...ಇಲಾಖೆಯ ಕ್ರಮಗಳನ್ನು ಬದಲಾಯಿಸಬೇಕು. ...ಜಂಟಿ ಸಂಸ್ಥೆಗಳ ಸೂಪರ್ ಟ್ಯಾಕ್ಸನ್ನು ಪಾಲುದ್ದಾರರ...ಗೆ ಹಿಂದೆ ಸಿಗುವ ನಿಯಮಗಳಾಗಬೇಕು. ಒಂದು ...ಸಂಸ್ಥೆಯ ನಷ್ಟವನ್ನು ಮುಂದಿನ ವರ್ಷದ ಆದಾಯ ...ದೊಡನೆ ಸೇರಿಸಕೂಡದು. ಅಪೀಲುಗಳ ವಿಚಾರದಲ್ಲಿ ಈಗ ಜಾರಿಯಲ್ಲಿರುವ ಕ್ರಮಗಳ ಪ್ರಕಾರ ಇನ್‌ಕಮ್ ಟ್ಯಾಕ್ಸ್ ಉದ್ಯೋಗಸ್ಥರೇ ಅದರ ಇತ್ಯರ್ಥವನ್ನು ಮಾಡು...ತ್ತಿದ್ದಾರೆ. ಅಲ್ಲದಿದ್ದರೆ ಹೈಕೋರ್ಟಿಗೆ ಅರ್ಜಿಮಾಡ...ಬೇಕು. ಈ ಅಪೀಲುಗಳನ್ನು ವಿಚಾರಿಸಲು ಉದ್ಯೋ...ಗಸ್ಥರಲ್ಲದ ಸದಸ್ಯರಿಂದ ಕೂಡಿದ ಮತ್ತು ಹೈಕೋರ್ಟ ...ನ್ಯಾಯಾಧೀಶರಿಂದ ಕೂಡಿದ ಒಂದು ಟ್ರಿಬ್ಯೂನಲ್ (ಸಮಿತಿ)ಯು ನೇಮಕವಾಗಬೇಕು. ಇಂಗ್ಲೆಂಡಿನಲ್ಲಿ ಸರಕಾ...ರದ ಆದಾಯವು ಸರಿಯಾಗುವಂತೆ, ಜೀವಕ್ಕೆ ಬಂದ ಕೆಲವು ಅನುಸಕ್ತದ ಕ್ರಮಸೂತ್ರಗಳನ್ನು ತೆಗೆದುಹಾಕ...ಬೇಕು. ಆದಾಯ ವಿಧಿಸುವ ಯೋಗ್ಯತೆಯನ್ನು ರೂ. ...೨೦೦೦ಕ್ಕೆ ಏರಿಸತಕ್ಕದ್ದು".

ಲಂಕೆಯವರೂ ನಾವೂ.

ಕಳೆದ ವಾರ ನಮ್ಮ ಸರಕಾರದವರು ಸ್ಪೆಶಲಾಗಿ ನೇಮಿಸಿದ ಹಿಂದೂದೇಶದ ಬಟ್ಟೆವ್ಯಾಪಾರ (ಹೊರಗಿನ ದೇಶದವರಿಂದ) ಯಾರ್ಯಾರಿಗೆ ಹೇಗೇಗೆ ಸಲ್ಲಬೇಕೆಂಬ ಪಟ್ಟಿಯನ್ನು ತಯಾರಿಸಲು ಮಾಡಿದ ಸಮಿತಿಯ ಮುಂದೆ ತಮ್ಮ ಸಲಹೆಗಳನ್ನು ಕೊಡಲು ಲಂಕೆಯಿಂದ ...ಬಟ್ಟೆವ್ಯಾಪಾರಿಗಳ ಪ್ರತಿನಿಧಿ ಮಂಡಳವು ಬಂದಿರುತ್ತದೆ. ಹಿಂದೂದೇಶದೊಡನೆ ಒಳ್ಳೇ ಒಳ್ಳೆಯ ವ್ಯಾಪಾರ ಸಂಬಂಧವನ್ನು ಬೆಳೆಯಿಸಬೇಕೆಂದು ಅವರ ಕಾಂಕ್ಷೆ. ಇವರು ಈ ಕಾಂಕ್ಷೆಪ್ರಕಾರ ನಡೆದರೆ ಮಾತ್ರ ಅವರು ಕೈಗೊಂಡ ಕಾರ್ಯವು ಸಫಲವಾಗಬಹುದು. ಪರಸ್ಪರ ಹಿತ ಸಾಧಿಸುವ ಇವರು ಹಿಂದೂದೇಶದೊಡನೆ ವ್ಯಾಪಾರಮಾಡುವುದಾದರೆ, ಇವರ ಯಾವತ್ತು ಸಲಹೆಗಳಿಗೆ ಅಡ್ಡಿಬರಲಾರದು. ಅದರೆ ಈ ನವೀನ ಬೋರ್ಡಿನಲ್ಲಿ ತಮಗೆನೆ ಹೆಚ್ಚಿನ ಅವಕಾಶ ದೊರಕುವಂತೆ ಸಾಧಿಸಿ, ಹಿಂದೂದೇಶದ ಪ್ರಸಿದ್ಧ ಹತ್ತಿವ್ಯಾಪಾರಕ್ಕೆ ಹಾನಿ ಬರುವಂತೆ ಇವರು ಸಾಧಿಸಿದರೆ, ಇವರು ಯಾವ ಸಾರ್ಥಕ ಮಾಡಿದಂತಾಗುವುದು. ನಾವು ಹೊರಗೆ ಕಳುಹಿಸುವ ಹತ್ತಿಯಲ್ಲಿ ಚೀನ, ಜಪಾನು, ಜರ್ಮನಿ, ಮತ್ತು ಫ್ರಾನ್ಸ್‌ದೇಶಗಳಿಗೆ ಬ್ರಿಟಿಶ ಸಾಮ್ರಾಜ್ಯದವರು ಹಡೆಯುವ ಪನ್ನೆರಡು ಪಾಲನ್ನು ಸಲ್ಲಿಸುತ್ತಿದೆ. ಹಿಂದೂ ದೇಶದಲ್ಲಿ ದೊರೆಯುವ ಹತ್ತಿಯೂ, ಸರಕಾರದ ಹೊಸ ನಿಯಮ ಕ್ರಮಗಳಿಂದ, ಬಹಳ ಉತ್ತಮವಾಗಿದೆ. ಹತ್ತಿವ್ಯಾಪಾರದ ವಿಚಾರದಲ್ಲಿ [illegible] ಒಂದು ಕೊರತೆ ಈ ದೇಶದಲ್ಲಿ ಉಳಿದಿರುತ್ತದೆ. ...ಕಲಕತ್ತೆಯವರು ತಮ್ಮ ವ್ಯಾಪಾರಕ್ಕಾಗಿ ಹತ್ತಿಯನ್ನು ಕೊಡ...ಗಳಿಂದ ಉತ್ಪಾದಿಸಿದ ಈಗ ಸಾಧ್ಯವಿರುವುದರಿಂದ ಅದರ ಸೂಚನೆಗಳಿಗೆ ಸ್ಪೆಶಲ್ ಬೋರ್ಡಿನವರು ಹೆಚ್ಚಿನ ಮನ್ನಣೆಯನ್ನು ಕೊಡದೆ ಹಿಂದೂದೇಶದ [illegible]

ವ್ಯಾಪಾರ ದೇಶದಲ್ಲಿ ವ್ಯಾಪಿಸುತ್ತಿರುವ ಈ ಪತ್ತಿ ವ್ಯಾಪಾರದ ಪೂರ್ವಸ್ಥಿತಿಯನ್ನು ಸಾಧಿಸಬೇಕಷ್ಟೆ.

ಆಫ್ರಿಕದ ನಮ್ಮ ಸಹೋದರರ ಗತಿ.

ದಕ್ಷಿಣ ಆಫ್ರಿಕದಲ್ಲಿ ಪಾಶ್ಚಾತ್ಯರು, ಸ್ವಾರ್ಥಪರ ರಾಗಿ ಅಲ್ಲಿಯವರನ್ನು ಮುಖ್ಯವಾಗಿ ಆಫ್ರಿಕನ್‌ ರನ್ನು ಮತ್ತು ಭಾರತೀಯರನ್ನು ಹೊರಗೆಡಹುವ ಪ್ರಯತ್ನದಲ್ಲಿದ್ದಾರೆ. ಅಲ್ಲದೆ ಅವರ ಉದ್ದೇಶವನ್ನು ಸಿದ್ಧಿ ಕಾರ್ಯವನ್ನು ಸಾಧಿಸುತ್ತಿದ್ದಾರೆ. ಭಾರತೀಯರನ್ನು ದೂರವಿಡುವ ಮತ್ತು ವ್ಯಾಪಾರಂಗದಲ್ಲಿ ಅವರಿಗೆ ಯಾವುದೂ ಅವಕಾಶ ದೊರೆಯದಂತೆ, ಸರಕಾರದಲ್ಲಿ ನಿಯಮಗಳಾಗುವಂತೆ ಪಾಶ್ಚಾತ್ಯರು ಸಭೆಗೂಡಿ ಸಾಧಿಸು ತ್ತಿದ್ದಾರೆ. ದಕ್ಷಿಣ ಆಫ್ರಿಕದ ಸಂಪೂರ್ಣ ವ್ಯಾಪಾರವು ಅವರಿಗೆನೇ ಸಲ್ಲತಕ್ಕದ್ದೋ? ಹಾಗಾಗಲು ಅವರಿಗೆ ವಿಶೇಷ ಯೋಗ್ಯತೆಗಳಾವುವು? ಹಿಂದಿಯರು ಮುನಿಸಿ ಪಾಲಿಟಿಗಳಲ್ಲಿಯೂ ಇತರ ಯಾವತ್ತು ಸರ್ಕಾರಿ ಕಾರ್ಯಾಲಯಗಳಲ್ಲಿ ಅವರೊಡನೆ ಕಲೆಯಬಾರದು, ಹಿಂದೂಗಳು ದೂರವಿರಬೇಕು, ಅವರು ಬೇರೆಯಾಗಿ ಬೇಕೆಂದು ಇಲ್ಲಿನ ಪಾಶ್ಚಾತ್ಯರ ನಿರ್ಣಯಗಳು. ನಮಗೆ ಇದಕ್ಕಿಂತ ಹೆಚ್ಚಿನ ಅವಮಾನವಾವುದು? ಈ ರೀತಿ ಭಾರತೀಯರು ಅಸಮಾಧಾನಪಡುತ್ತಿರುವಾಗ ಅವರೊ ಡನೆ ಹಿಂದಿಯರನ್ನು ಬೇರೆಯಾಗಿಸುವ ಸೂಚನೆಗಳಿಗೆ ಬಲ ದೂಗುವ ನಮ್ಮ ಪ್ರತಿನಿಧಿಗಳು ನಮ್ಮ ದೇಶವನ್ನು ಮುರಿತವಾಗಿ ಭಾವಿಸಲಾಗುತ್ತದೆ. ಅವರನ್ನೂ ಉದ್ಯೋಗ ದಲ್ಲಿರುವುದು ಹಿತಕರವೋ? ದಕ್ಷಿಣ ಆಫ್ರಿಕದ ಕೆಲವು ದೇಶಗಳಲ್ಲಿ ಹಿಂದೀಯರ ಸಂಖ್ಯೆ ಅಧಿಕ, ಅಧಿಕ ಕಂದಾಯವನ್ನು ಸಲ್ಲಿಸುತ್ತಿದ್ದಾರೆ. ಆದರೆ ಅಧಿಕಾರವು ಪಾಶ್ಚಾತ್ಯರಿಗೆ. ದಿನೇ ದಿನೇ ಪಾಶ್ಚಾತ್ಯರು ಹಿಂದಿಯರ ಮೇಲೆ ಪ್ರಬಲರಾಗುತ್ತಾ ಬರುತ್ತಾರೆ. ನಮ್ಮನ್ನು ಕೀಳು ಜನರಾಗಿ ತಿರಸ್ಕರಿಸುತ್ತಿದ್ದಾರೆ. ನಮ್ಮ ಸರಕಾರವು ನಮ್ಮನ್ನು ಇಲ್ಲಿ ಕಾಪಾಡಲು ಹೇಗೆ ವರ್ತಿಸುತ್ತಿದೆ? ಜನರ ಮಂಡಳದ ಗೌರವವನ್ನು ಮನ್ನಿಸುವ ಬ್ರಿಟಿಶ ಸರಕಾರವು ತಮ್ಮ ಈ ಪ್ರದೇಶದಲ್ಲಿ ನಡೆಯುತ್ತಿರುವ ಇಷ್ಟು ಅಸಂಖ್ಯ ಘಟನೆಗಳನ್ನು ಸಹಿಸಬಲ್ಲರೆ?

ನಮ್ಮ ಅಧಿಪತ್ಯದ ನಗರ ರಚನಾ (ಟೌನ್‌ಪ್ಲೇನಿಂಗ್) ಕಾರ್ಯವು—

—ಇಷ್ಟು ಶೀಘ್ರವಾಗಿ ಜರಗಿದೆಯೆಂದು ಹೇಳಲು ಅಸಾಧ್ಯ. ನಮ್ಮ ಸ್ಥಳೀಕ ಸಂಸ್ಥೆಗಳು ಈ ಪ್ರಶ್ನೆಯ ಮಹತ್ವವನ್ನು ತಿಳಿಯುತ್ತಿದ್ದುದು ತೋರುವುದಿಲ್ಲ. ಇಷ್ಟು ದೊಡ್ಡ ಪ್ರಾಂತ್ಯದಲ್ಲಿ ಟೌನ್‌ಪ್ಲೇನಿಂಗ್ ಮಾಡಿದ ಸ್ಥಳೀಕ ಸಂಸ್ಥೆ ಬಟ್ಟ ಹದಿನಾರು. ದಿನೇ ದಿನೇ ಶೀಘ್ರ ರೀತಿಯಲ್ಲಿ ಮುಂದುವರಿಯುತ್ತಿರುವ ನಮ್ಮ ದೇಶದಲ್ಲಿ ನಗರಗಳು ಆರೋಗ್ಯಕರವಾಗಿ ಬಾಳಬೇಕಾಗಿಲ್ಲವೆ. ಜನಸಂಖ್ಯೆಯು ನಗರಗಳಲ್ಲಿ ಹೆಚ್ಚುತ್ತಿದೆ. ನಗರಗಳ ಪ್ರಮಾಣಗಳು ಹೆಚ್ಚಬೇಕು. ಹೆಚ್ಚಿನ ಮಾರ್ಗಗಳು, ಮನೆಗಳು ಇತ್ಯಾದಿ ರಚನೆಯಾಗಬೇಕು. ಎಲ್ಲೆಲ್ಲೂ ಸಂಪತ್ತು ಸಮೃದ್ಧಿಯಾಗಬೇಕು. ಅದರಿಂದ ನಮ್ಮ ಅಧಿಪತ್ಯದ ನಗರಸಭೆಗಳು ಬೇಗನೇ ಟೌನ್‌ಪ್ಲೇನಿಂಗ್ ಸಮಿತಿಗಳನ್ನು ಸ್ಥಾಪಿಸಿ, ನಗರಗಳ ಸ್ಥಿತಿಯನ್ನು ಸಮಯಾನುಸಾರವಾಗಿ ಉದ್ಧರಿಸುವಂತೆ ನಗರ ವ್ಯಾಪನೆಯನ್ನು ಯೋಗ್ಯ ರೀತಿಯಲ್ಲಿ ನಿರ್ಧರಿಸುವಂತೆ ಈ ಸಮಿತಿಗಳ ಸಭೆಗಳು ನಡೆಯಬೇಕು. ನಮ್ಮ ಅಧಿಪತ್ಯದ ಟೌನ್‌ಪ್ಲೇನಿಂಗ್ ಇನ್ನು ಮುಂದಕ್ಕಾದರೂ ಭರದಲ್ಲಿ ಸಾಗಬೇಕಾಗಿದೆ.

ಆಫ್ರಿಕಾ ಖಂಡದ 'ಗೋಲ್ಡ್ ಕೋಸ್ಟ್‌ಕೊಲೊನಿ'ಯೂ ಬ್ರಿಟಿಷರು.

ಈ ಪ್ರದೇಶವನ್ನು ಬ್ರಿಟಿಷರು ವಶೀಕರಿಸಲಿಲ್ಲ. ಬ್ರಿಟಿಶ ಸರಕಾರವು ಇಲ್ಲಿನ ನಿವಾಸಿಗಳೊಡನೆ ಕೆಲವು ಒಪ್ಪಂದಗಳನ್ನು ಮಾಡಿದ್ದವು. ಸರಕಾರದ ದೋರಣವು ಮೂಲ ನಿವಾಸಿಗಳ ಕ್ರಮಗಳಿಂದಲೇ ನಡೆಯುತ್ತಿತ್ತು. ಹಳೆಯ ರೀತಿಯ ಪ್ರಜಾ ಪ್ರಭುತ್ವದ ಸೂತ್ರಗಳು ಅಲ್ಲಿ ಜಾರಿಯಲ್ಲಿದ್ದವು. ಆದರೆ ಇತ್ತೀಚೆಗೆ ಬ್ರಿಟಿಶ ಸರಕಾರದವರು ಒಂದು ಹೊಸ ಕಾನೂನನ್ನು ಜಾರಿಮಾಡಿ, ಮುಂಚಿನ ಪ್ರಜಾಪ್ರಭುತ್ವದ ಸರಕಾರವನ್ನು ರದ್ದುಮಾಡಿದರು. ಈ ವಿಧಿಯು ಮೂಲ ನಿವಾಸಿಗಳಿಗೆ, ನ್ಯಾಯ ವಿಧಾಯಕ ಸಭೆಯಲ್ಲಿ ಸದಸ್ಯಸ್ಥಾನವನ್ನು ಕೊಟ್ಟಾಗ

ಎಂಟು ಪಾಶ್ಚಾತ್ಯರಿಗೆ ೨೦ ಸ್ಥಾನಗಳು ದೊರೆಯಬೇಕಾಗಿ ನಿಯಮಗಳಾಗಿವೆ. ಮತ್ತು ಸರಕಾರದ ಕಾರ್ಯಕಾರಿ ಮಂಡಳದಲ್ಲಿ ಮೂಲ ನಿವಾಸಿಗಳಿಗೆ ಸ್ಥಾನ ದೊರೆಯದ ರೀತಿ ಏರ್ಪಾಡುಗಳಾಗಿವೆ. ಈ ರೀತಿ ತಮ್ಮ ಸ್ವಾತಂತ್ರ್ಯ ಮಾಯವಾಗುವುದನ್ನು ನೋಡಿ ಬ್ರಿಟಿಶ ಸರಕಾರ ಪ್ರಜೆಗಳ ಕಾರ್ಯದರ್ಶಿಯವರಾದ ಮಾಲ್ಕಮ್ ಮೆಕ್‌ಡೊನಾಲ್ಡರ ಕಡೆಗೆ ತಮ್ಮ ತಕ್ಕರಾರುಗಳನ್ನು ಹೇಳಿಕೊಂಡು, ವಿಮೋಚನೆಗೋಸ್ಕರವಾಗಿ, ಮೂಲ ನಿವಾಸಿಗಳು ತಮ್ಮ ಒಂದು ಪ್ರತಿನಿಧಿ ಮಂಡಳವನ್ನು ಇಂಗ್ಲೆಂಡಿಗೆ ಕಳುಹಿಸಿಕೊಟ್ಟರು. ಆದರೆ ಅಧಿಕಾರದಲ್ಲಿದ್ದ ಕಾರ್ಯದರ್ಶಿಗಳು, ಈ ಪ್ರತಿನಿಧಿ ಮಂಡಳವನ್ನು ಬರಮಾಡಿಕೊಳ್ಳದೆ, ಅವರನ್ನು ತಿರಸ್ಕರಿಸಿ, ಅಪಮಾನ ಮಾಡಿದರು. ಸ್ವತಂತ್ರ್ಯಕ್ಕಾಗಿ ಇವರ ಹೋರಾಟವು ನಡೆಯುವಂತೆ, ಅನೇಕ ಕಾನೂನು ಕ್ರಮಗಳನ್ನು ಸೃಷ್ಟಿಸಿ, ಇವರ ಬಾಯಿ, ಕೈಕಾಲುಗಳನ್ನು ಕಟ್ಟುತ್ತಿದ್ದಾರೆ.

ಇಜಿಪ್ಟ — ಬ್ರಿಟನೂ

ದಕ್ಷಿಣ ಆಫ್ರಿಕಾ ಅಮೇರಿಕಾ, ಮತ್ತು ಹಿಂದು ಸ್ಥಾನ, ಈ ಮೂರು ದೇಶಗಳಲ್ಲಿ ಭಯಂಕರ ದೃಶ್ಯಗಳು ಮುಗಿದ ನಂತರವೇ ಬ್ರಿಟಿಶ ಸರಕಾರವು ಕಣ್ಣು ತೆರೆದು ಅವರ ಕೋರಿಕೆಗಳನ್ನು ನಡೆಯಿಸಿದರು. ಹಾಗೆಯೆ ಇಜಿಪ್ಟನಲ್ಲಿ ಈಗ ಮಹಾ ಕ್ಷೋಭೆಯು ಉಂಟಾಗಿ ಪ್ರಜೆಗಳು ತಮ್ಮ ಪ್ರಭುತ್ವದ ಹಕ್ಕು ದೊರೆಯುವುದೆಂಬ ಭಾವನೆಯಿಂದ ಈಗಿನ ನಸೀಮ್ ಪಾಶಾರನ್ನು ಅಧಿಕಾರಕ್ಕೆ ಬಿನ್ನಾಯಿಸಿದರು. ಆದರೆ ಇದನ್ನು ಸಾಧಿಸದಿರುವುದರಿಂದ, ಜನರು ತಳಮಳಗೊಳ್ಳುತ್ತಿದ್ದಾರೆ. ಮರಿ ಟೈನಿಯನ್ ಸಾಗರದಲ್ಲಿ ಬ್ರಿಟಿಶ ಪ್ರಭುತ್ವದ ಸಂಗ್ರಾಮದ ಸಿದ್ಧತೆ ಪ್ರಾರಂಭವಾದುದರಿಂದ, ಬ್ರಿಟಿಷರು ಬಲಾತ್ಕಾರದಿಂದ ತಮ್ಮ ಅಧಿಕಾರದ ಬಗೆಗಾಗಬಹುದೆಂಬ ಭಾವನೆಯಿಂದಲೂ, ವಾಪ್ಡಪಕ್ಷದ ಜೋರಿನಿಂದ ಅವರಿಗೆ ಅವರು ಕೋರುವ ಸರಕಾರವನ್ನು ಕೊಟ್ಟರೆ

(೧೨ನೇ ಪುಟಕ್ಕೆ ಮುಂದುವರಿದಿದೆ)

ಸ್ವಸ್ತಿಕಾ ಹರಳೆಣ್ಣೆಯನ್ನು ಧಾರಾಳವಾಗಿ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲೂ ಉಪಯೋಗಿಸುತ್ತೇವೆ . . .

ಅಜೀರ್ಣ, ತಲೆನೋವು, ಆಲಸ್ಯ, ಬಾಯಿಗೆ ರುಚಿಯಿಲ್ಲದಿರುವಿಕೆ, ಪಿತ್ತಕೋಶದ ಉಪದ್ರವ, ಇವುಗಳೆಲ್ಲವು ನಾವು ದೇಹದೊಳಗಣ ಅವಯವಗಳನ್ನು ಅಶುಚಿಯಾಗಿಡುವುದರಿಂದಲೇ ಉಂಟಾಗುವುವು. ಯಾವ ವೈದ್ಯನನ್ನು ಕೇಳಿದರೂ ಅವನು ನಮ್ಮ ಹರಳೆಣ್ಣೆಯನ್ನು ಹೀಗೆ ಶಿಫಾರಸು ಮಾಡುವುದರಲ್ಲಿ ಸಂಶಯವಿಲ್ಲ. ದಿನ ಪ್ರೊಂದಾದರೂ ವಾಯುಕ್ಕೆ ತಕ್ಕಂತೆ ಸ್ವಲ್ಪ ಎಣ್ಣೆಯನ್ನು ಸೇವಿಸಿದಿರೆಂದರೆ, ಹೊಟ್ಟೆಯೊಳಗಿನ ಕಲ್ಮಶಗಳನ್ನು ಸಂಪೂರ್ಣವಾಗಿ ಹೊರಗೆಡಹಿ ನಿಮಗೆ ಸುಖವನ್ನು ಕೊಡುವುದು. ಇದಕ್ಕೆ ಸಮಾನವಾದ ದುರ್ವಾಸನೆಯೂ ರುಚಿಯೂ ಇಲ್ಲದ ಹರಳೆಣ್ಣೆಯು ಮತ್ತೊಂದಿಲ್ಲ.

ಸ್ವಸ್ತಿಕಾ ದಿವ್ಯೌಷಧಿ ಹರಳೆಣ್ಣೆ

೧೯೩೪ರಲ್ಲಿ [illegible] 1934ರಲ್ಲಿ ... 1935ರಲ್ಲಿ ... [illegible]

ಪ. ಕ. ಏಜೆಂಟರು—[illegible], ಮಂಗಳೂರು.

[illegible]

[illegible]

ವರ್ತಮಾನ ಸಂಗ್ರಹ

[illegible]

ಆಂಜನೆಯಿಂದ ಆರೋಗ್ಯ ಪಡೆಯಬಹುದು— ಆರೋಗ್ಯದಿಂದ ಸಂಪತ್ತನ್ನು ಪಡೆಯಬಹುದು [illegible]

ಸ್ವದೇಶಾಭಿಮಾನಿ.

ತಾ. ೬ನೇ ಶುಕ್ರವಾರ ಡಿಸೆಂಬರ '೩೫

ಭಾಷಾನ್ವಯ ಪ್ರಾಂತಗಳು

'ಭಾಷೆಯಂತೆ ಪ್ರಾಂತ' ಎಂಬ ಕೂಗು ಹಲವು ಬಗೆಯಿಂದಾಗಿ ಕೇಳಿಸುತ್ತಲಿದೆ. ಇದೆ ಹಲಕೆಲವು ಪ್ರಾಂತಗಳು ಈ ಕಾರಣದಿಂದಾಗಿ ರಚನೆಹೊಂದಿವೆ. ಕರ್ನಾಟಕ ಪ್ರಾಂತದ ವಿಚಾರವಾಗಿ ಲೇಖನಗಳೂ, ಭಾಷಣಗಳೂ, ಮಹಾ ಸಭೆಗಳೂ ನಿರ್ಣಯಗಳೂ ಎಷ್ಟೋ ವೇಳೆ ಎಷ್ಟೋ ಕಡೆಗಳಲ್ಲಿ ಆಗಿವೆ. ಮೊನ್ನೆ ಮೊನ್ನೆ ಆಂಧ್ರರು ಇದೇ ವಿಷಯವಾಗಿ ಖಂಡಿತವಾದ ನಿರ್ಣಯಗಳನ್ನು ಮಾಡಿ, ಇನ್ನು ಉಂಟಾಗುವುದೆಂದರೆ 'ಆಂಧ್ರಪ್ರಾಂತ' ಎಂದೇ ವಿಶ್ವಾಸದಿಂದ ಕುಳಿತಿರುವರು. ಕಾಂಗ್ರೆಸ್ ಕಮಿಟಿಯವರು, ತಮಿಳು-ಆಂಧ್ರ, ಕರ್ನಾಟಕ-ಆಂಧ್ರ, ಮರಾಟ-ಕರ್ನಾಟಕ ಇವುಗಳೊಳಗೆ ಯಾವಲ್ಲಿ ಯಾವುದು ಎಂದು ನಿರ್ಧರಿಸತೊಡಗಿ ಒಂದು ಬಗೆಯ ನಿರ್ಣಯವನ್ನೂ ಮಾಡಿರುವರು. ಸರಕಾರವೂ ಇನ್ನು ಭಾಷಾನ್ವಯ ಪ್ರಾಂತಗಳಾಗುವಲ್ಲಿ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡತಕ್ಕದು ಎಂದೂ ಒಪ್ಪಿ ನುಡಿದುದೂ ಇದೆ. ಆದರೂ, ನಮ್ಮ ಮಾನ್ಯ ಗವರ್ನರ ಸಾಹೇಬರು ಮೊನ್ನೆ ಶನಿವಾರ, ಒಂದು ಭೋಜನಾನಂತರ ಭಾಷಣ ಮಾಡುತ್ತಾ, ಇತ್ತೀಚೆಗೆ ಭಾಷಾನ್ವಯ ಪ್ರಾಂತರಚನೆಯ ಚಳವಳಿ ಅಷ್ಟು ಜೋರಾಗಿ ಕೇಳಿಸುತ್ತಿಲ್ಲ ಎಂದರು!

ರಾಜಕಾರಣದಲ್ಲಿ ಸೇರಿರುವ ಮುತ್ಸದ್ದಿಗಳು, ಇದೆಲ್ಲ ಆಗಹೋಗುವ ವ್ಯಾಪಾರವಲ್ಲ ಎಂದೇ ಸುಮ್ಮನೆ ಕೂತಿರುವರೆಂದೂ ಸರಕಾರಕ್ಕೂ ಸರಕಾರಪಕ್ಷದವರಿಗೂ ಗೊತ್ತಾಗಿದೆಯಂತೆ. ಪುನಃ ಈ ಚಳವಳಿ ತಲೆಯೆತ್ತಬಹುದು, ಆದರೆ, ಮುಖಂಡರು ಈ ಭಾಗದಲ್ಲಿ ಇನ್ನು ಬಹಳವಾಗಿ ಹೋರಾಡುವಹಾಗಿಲ್ಲವೆಂದೂ ಗವರ್ನರ ಸಾಹೇಬರು ಅಭಿಪ್ರಾಯಪಡುತ್ತಾರೆ. ಅದೇಕೆ?

ಭಾರತವರ್ಷವೆಲ್ಲ ಒಂದೇ ಜನಾಂಗ [illegible] ಎಂಬ ಮಹಾ ಉದಾತ್ತ ವಿಚಾರವೇ [illegible] ಗಳ ವಿವೇಕಗಳಾಗಿರುವ ಮುಖಂಡರಲ್ಲಿ, [illegible] ಮುಖಂಡರೊಳಗೆ [illegible]

[illegible] ಕಾಗಬೇಕೆಂದೂ ಗವರ್ನರ ಸಾಹೇಬರು ಬೋಧಿಸಿದರು.

ಹಲವು ಬೇರೆ ಬೇರೆ ಅಧಿಪತ್ಯಗಳೂ ರಾಜ್ಯಗಳೂ ಸೇರಿ, ಭಾರತವರ್ಷವು ಸೋದರ ಬಂಧನದಿಂದ ಒಂದೇ ಮಹಾಭಾರತವೆನ್ನಿಸುವಂತಾಗಬೇಕೆಂದು ಅವರು ಎಣಿಸಿರುವುದೇನೋ ನಿಜವೆ. ಆದರೂ, ಸೋದರರು ಕುಲದ ಹೆಚ್ಚಳಕ್ಕೆ ಕುಂದುಬಾರದಂತೆ, ತಂತಮ್ಮ ಸಂಸ್ಕೃತಿ ಅಭಿವೃದ್ಧಿ ಮೊದಲಾದುವನ್ನು ತಾವು ತಾವೇ ಸಾಧಿಸಿ, ಕೃತಾರ್ಥರಾಗಿ, ಕುಲದ ಹೆಚ್ಚಳವು ಕುಂದದಂತೆ ಬದುಕಲೂ ಕರ್ತವ್ಯ ಮಾಡಲೂ ಕಷ್ಟವು ಹೆಚ್ಚೆ? ಉಪಾಯವು ತಪ್ಪೆ? ಅಥವಾ, 'ಪ್ರಾಂತ' ಎಂದೊಡನೆ, ಅದರ ಜತೆಯಲ್ಲಿಯೆ, ಈಗಣ ಪ್ರಾಂತಗಳ ಮಾದರಿಯಂತೆ, ಇಡೀ ಸರಕಾರದ ಇಲಾಖೆಗಳೂ ಅಧಿಕಾರಿ ವರ್ಗವೂ ಪರಿವಾರವೂ ಕಟ್ಟಡಗಳೂ ಇತ್ಯಾದಿಗಳ ಮಹಾ ಆಯೋಜನೆಯು ಅಗತ್ಯವಾಗಿ, ಅದಕ್ಕಾಗಿ ಬೇಕಾಗುವ ಹಣದ ಮಹಾ ಯೋಚನೆಯೆ ಈ ಪ್ರಾಂತ್ಯಗಳನ್ನು ರಚಿಸಲು ತೊಡಕಾಗಿದೆಯೆ? ಈ ಪ್ರಶ್ನೆಗೊಂದು ಉತ್ತರ ಕಾಯಬೇಕಾಗಿದೆ.

ಇಂಗ್ಲಿಷನ್ನು ಇಡೀ ದೇಶಕ್ಕೆ ಅಗತ್ಯವಾದದ್ದೊಂದು ಸಾರ್ವತ್ರಿಕ ಭಾಷೆಯನ್ನಾಗಿ ಮಾಡಿಟ್ಟುಕೊಳ್ಳಲೇಬೇಕೆಂಬುದೂ; ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಪ್ರಚಾರಕ್ಕೆ ತರಬೇಕೆನ್ನುವುದೂ, ಭಾಷಾನ್ವಯ ಪ್ರಾಂತಗಳಾಗಬಾರದೆನ್ನುವುದಕ್ಕೆ ಒಂದು ಅಮೂಲ್ಯವಾದ ಕಾರಣವೆಂದು ನಂಬುವವರೂ ಇದ್ದಾರೆ. ಇತ್ತ, ನೂರು ಭಾಷೆ, ನಾನೂರು ಜಾತಿ, ಹಲವು ಮತ, ಎಂಬಿತ್ಯಾದಿ ನೆವಗಳಿಂದ ಜನಾಂಗವು ಒಡೆದುಹೋಗಿದೆ, ಇವೆಲ್ಲ ಕೂಡಿಸಿ ಒಂದಾಗಿಸುವುದು ಅಸಾಧ್ಯ ಎನ್ನುವವರೂ ಇದ್ದಾರೆ. ಜಾತಿಬದಲಾಯಿಸುವುದೂ, ಮತಾಂತರಗೊಳ್ಳುವುದೂ ಸಾಮಾನ್ಯವಲ್ಲ, ಅಥವಾ ಜಾತಿಗಳನ್ನು ಮನೆಯಲ್ಲಿ ಇಟ್ಟು ಧರ್ಮವು ವ್ಯಕ್ತಿಗತವೆಂದು ಬಿಟ್ಟು, ಭಾಷೆಯೇ ನಮಗೊಂದು ದೃಢವಾದ ಕಟ್ಟು ಎಂದಾದರೂ, ಆಯಾ ಭಾಷೆಯನ್ನಾಡುವವರು ಒಂದಾಗಲು ಹವಣಿಸಿ, ತಮ್ಮ ಭಾಷಾಕ್ಷೇತ್ರವೇ ರಾಜಕೀಯ ಕ್ಷೇತ್ರವಾಗಿ ಜನಾಂಗದ ಮತ್ತು ದೇಶದ ಮೇಲ್ಮೆಗೆ ಸಾಧನಾಕ್ಷೇತ್ರವೂ ಆಗಿರಲೆಂದರೆ,–ತಪ್ಪಾಯಿತೆ?

ಅಂದು ಕರಡುಕಾಗದವೆಂದು ಮೂಲೆಪಾಲಾಗಿದ್ದ ನೆಹರೂ ವರದಿಯನ್ನು ಈಗ ಈ ಸಿದ್ಧಾಂತದ ಸಮರ್ಥನೆಗಾಗಿ ಎತ್ತಿಹಿಡಿದು,–ಇಂತಹ ಭಾಷಾನ್ವಯ ವಿಸ್ತೀರ್ಣಗಳನ್ನು ಕರಡಾಗಿ ನಿಷ್ಕರ್ಷಿಸಿ ಹೇಳುವುದಕ್ಕೆ ಸಾಕಷ್ಟು ಆಧಾರಗಳು ನಮ್ಮ ಮುಂದಿಲ್ಲ–ಎಂದು ಅದರಲ್ಲಿನ ಅಭಿಪ್ರಾಯವನ್ನು ಸಾರುವವರು ಇರುವರು. 'ಪ್ರಾಂತ್ಯಗಳನ್ನು, ಪುನಃ ಗಡಿಸಿಕ್ಕಯ ಮಾಡುವ ಕಾಲದಲ್ಲಿ ಈ ವಿಚಾರವನ್ನು ಮನಸ್ಸಿಗೆ ತಂದುಕೊಳ್ಳಬೇಕಾದುದೆಂದು' ಅದರಲ್ಲಿರುವುದನ್ನು ನೆನಪಿಗೆ ತಂದುಕೊಂಡು,–ಹೊಸ ಸುಧಾರಣೆಗಳನ್ನು ಕೊಡುವಾಗ, ಒರಿಸ್ಸವನ್ನು ಪ್ರತ್ಯೇಕಿಸಿದ ಹಾಗೆ, ಆಂಧ್ರ, ಕರ್ನಾಟಕ, ಕೇರಳ ಮೊದಲಾದುವನ್ನು ಏಕೆ ಪ್ರತ್ಯೇಕಿಸಬಾರದು?

ಭಾಷಾನ್ವಯ ಪ್ರಾಂತಗಳಾಗಬೇಕೆನ್ನುವ ಮಾತಿನಲ್ಲಿ ದೇಶವನ್ನು ಹೋಳಾಗಿಸುವ ಕೆಡುಬುದ್ಧಿ ಏನೂ ಇಲ್ಲ. ಅರ್ಧ ಯುರೋಪಿನಷ್ಟು ದೊಡ್ಡದಾದ ಈ ದೇಶವು, ಅಲ್ಲಿರುವಷ್ಟೆ, ಜಾತಿಮತ ಭಾಷೆಗಳಿಂದ ಕೂಡಿದೆ ಎನ್ನಬಹುದು. ಆ ವಿಸ್ತೀರ್ಣಗಳುಳ್ಳ ಹಲವು ಪ್ರಾಂತಗಳಲ್ಲಿ ಭಾಷಾ ಸೋದರರು ತಮ್ಮ ಕುಲ ಸಂಭ್ರಮಕ್ಕಾಗಿ ಯಾವ ಪ್ರಯತ್ನಗಳನ್ನು ಮಾಡಿದರೂ, ಅಥವಾ ಅಂಥ ಪ್ರಯತ್ನಗಳನ್ನು ಸಾರ್ಥಕ ಮಾಡಿಕೊಳಬೇಕೆಂದರೂ, ಅದು ಅದೇಕೆ ಅಪಾಯಕರ ಎನ್ನುವುದುಂಟೆ?

[illegible] ಸರ್ಕಾರದ ಅಧ್ಯಕ್ಷರು [illegible] ಗಳೂ ಗವರ್ನರರ ಬಾಯಿಂದ ಬಂದ ಅಮೃತವಾಣಿ. ಐಕ್ಯದಾಗಬೇಕು, ಜನಾಂಗವೊಂದಾಗಬೇಕು, ಭಾರತೀಯರ ಆಸೆ, ಆಶಯ, ಪ್ರಯತ್ನ ಎಲ್ಲವೂ ಏಕಮುಖವಾಗಬೇಕು. ಆದರೆ, ಕರ್ನಾಟಕವು ತನ್ನದೊಂದು ಪ್ರಾಂತವು ನಿರ್ಮಾಣಹೊಂದಬೇಕೆಂದು ಪ್ರಯತ್ನಿಸಿದರೆ, ಈ ಐಕ್ಯಕ್ಕೆ ಹಾನಿಬಾರದಂತೆ, ಒಂದು ಪ್ರಾಂತ ರಚನೆಮಾಡಿಕೊಡಬಾರದೆ? ಅಥವಾ ಕನ್ನಡಿಗರೂ ಅಂಥ ಪ್ರಾಂತವುಂಟಾಗುವಂತೆ ಕೇಳಿಕೊಳ್ಳುತ್ತಲೂ ಇರುವುದು ಅನ್ಯಾಯವೆಂದಾದೀತೆ?

ಸ್ಫುಟವಿಚಾರಗಳು

"ಬಸ್, ಬಸ್!"

ಈ ಮಾತುಗಳಲ್ಲಿ ಧಿಕ್ಕರಿಸಿಯೋ ಬೇಸರಿಸಿಯೋ ಒಬ್ಬ ಮುಸ್ಲಿಮ್ ಗೃಹಸ್ಥರು ಮದ್ರಾಸಿನಲ್ಲಿ, ಹೊಗೆಸೊಪ್ಪಿನ ಮೇಲೆ ಕರವನ್ನು ಹೊರಿಸುವುದಕ್ಕಾಗಿ ಆ ಮಸೂದೆಯನ್ನು ಕುರಿತಾಗಿ ಚರ್ಚಿಸಲೆಂದು ಸೇರಿದ್ದ ಮಹಾಸಭೆಯಲ್ಲಿ ಉದ್ಗಾರತೆಗೆದರೆಂದು ಪ್ರಕಟವಾಗಿದೆ. ಕಾರಣವೇನು? ಶ್ರೀ। ಗೋಪಾಲರೆಂಬೊಬ್ಬ ಯುವಕರು, ಉತ್ತಮ ಪೋಷಾಕಿನಲ್ಲಿ ಸಭೆಯ ಮುಂದೆ ತಮ್ಮ ಅಭಿಪ್ರಾಯವನ್ನಿಡಲು ಅಪ್ಪಣೆ ಕೇಳಿ, ಅದನ್ನು ಪಡೆದು, ಮಸೂದೆಯನ್ನು ಸಮರ್ಥಿಸಿ, "ಶ್ರೀಮಂತರಿಗೆ ತಾನೆ ಇದು ಬೇಕಾದ ವಸ್ತು? ಎಷ್ಟೋ ಪ್ರಾಂತಗಳಲ್ಲಿ ರಾಜ್ಯಗಳಲ್ಲಿ ಹೊಗೆಸೊಪ್ಪಿನ ಮೇಲೆ ಕರ ಹೊರಿಸಿದ್ದಾರಷ್ಟೆ' ಎಂಬವರಿಗೆ ಸಂಕಟನಿವಾರಣೆಯಾಗಲೆಂದು, ಸರಕಾರವು ಹೊರಿಸಿದ ನಾನಾ ತೆರಿಗೆಗಳಂತೆ ಇದೂ ಒಂದು. ಬೊಬ್ಬಿಲಿಯ ಮಹಾರಾಜರು ನ್ಯಾಯವಿಧಾಯಕ ಸಭೆಯಲ್ಲಿ ಹೀಗೆಯೆ ಇದನ್ನು ವಿವರಿಸಿರುವರಲ್ಲ. ಬೊಬ್ಬಿಲಿಯ ಮಹಾರಾಜರೆಂದರೆ, ನಲ್ವತ್ತು ಮಿಲ್ಲಿಯ ಜನರ ಪ್ರತಿನಿಧಿಗಳು ಎಂದರು. ಆಗ ತಾನೆ ಸಭೆಯಿಂದ ಕೇಳಿಸಿದ ಉದ್ಗಾರವಿದು. ಜನರಿಗೆ ಇದು ಕೇಳಿ, ಅನುಭವಿಸಿ, ಸಾಕುಸಾಕಾಗಿದೆ ಎಂದೇ ಇದರ ಸೂಚನೆ. ಮಸೂದೆಯನ್ನು ನಿಷೇಧಿಸಿಯೆ ನಿರ್ಣಯವು ಕೂಡಲೆ ಮಂಜೂರಾಯಿತು.

ವರದಕ್ಷಿಣೆಯ ಮಹಾಕಾಟ

ಆಂಧ್ರಪ್ರಾಂತದ ಮಹಿಳಾ ಪರಿಷದದಲ್ಲಿ ವರದಕ್ಷಿಣೆಯ ಪದ್ಧತಿಯನ್ನು ನಿರ್ಮೂಲಿಸಿದ ದೇಶಾಭ್ಯುದಯವು ಎಂದೂ ಸಾಧ್ಯವಾಗಲಾರದೆಂದು ನಿರ್ಣಯವಾಯಿತು. ಶಿಕ್ಷಣವೇ ಹೆಚ್ಚು ಪಸರಿಸುತ್ತಿದ್ದ ಅತಿ ಶಿಕ್ಷಿತರ ಮನೆತನಗಳಲ್ಲೂ ವರದಕ್ಷಿಣೆಯೇ ಬಲದೃಢವಾಗಿದೆ. ಇಂತಹ ವಿಚಿತ್ರವೂ ವಿಕಾರವೂ ಆಗಿರುವ ಇನ್ನೊಂದು ಸಮಸ್ಯೆಯೇ ಇಲ್ಲವಾಗಿದೆ. ಅಸ್ಪೃಶ್ಯತೆಯು ಜನಾಂಗದ ರಾಜಕೀಯಾಭಿಲಾಷೆಗಳಿಗೆ ತಟ್ಟಿರುವ ಕಳಂಕವೆಂಬುದು ಹೇಗೆಯೋ, ಹಾಗೆಯೆ ಜನಾಂಗದ ಸಾಮಾಜಿಕಾ ಕಾಂಕ್ಷೆಗಳಿಗೆ ತಟ್ಟಿರುವ ಕ್ಷಯರೋಗವೆ ಈ ವರದಕ್ಷಿಣೆಯ ಪದ್ಧತಿಯಾಗಿದೆ. ಸಿಂಧಪ್ರಾಂತ್ಯದ ಕನ್ಯೆಯರಂತೆ, ವರದಕ್ಷಿಣೆಯ ಮಾತಿರುವಲ್ಲಿ ತಾವು ವಿವಾಹಕ್ಕೊಡಂಬಡುವುದಿಲ್ಲವೆಂದು ಧೈರ್ಯದಿಂದ ಹೇಳಲು ಇನ್ನು ಕನ್ಯೆಯರು ಮುಂದೆ ಬರಲಿ! ಗಂಡನನ್ನು ಕ್ರಯಕ್ಕೆ ಪಡೆದು ಮದುವೆಯಾಗುವುದೆ? ಡಾ। ಅಚ್ಚಮಾಂಬಾ ಎಂಬಾಕೆ, ಮೇಲ್ತರಗತಿಗಳ ತನಕ ಹೆಮ್ಮಕ್ಕಳಿಗೆ ವಿದ್ಯಾಭ್ಯಾಸವು ಅಗತ್ಯವೆಂದೂ, ಅದರಿಂದ ಅವರಿಗೆ ಸಂಸಾರದ ಜವಾಬುದಾರಿಯು ಸರಿಯಾಗಿ ತಿಳಿಯುವುದೆಂದೂ, ವರರ ಅನುಮತಿಯಂತೆ ವಧುವಿನ ಅನುಮತಿಯನ್ನು ಪಡೆದೇ ವಿವಾಹಗಳಾಗಬೇಕೆಂದೂ ಹೇಳಿದರು. ಸಮ್ಮಿಲಿತ ಶಿಕ್ಷಣವೇ ಉತ್ತಮವಾದುದೆಂದೂ ಶಿಕ್ಷಣತಂತ್ರ [illegible] ಸಾಗುತ್ತ, ಅಧ್ಯಾಪಕಿಯರು ಪ್ರತ್ಯೇಕವಾಗಿ [illegible] ಅಗತ್ಯವೆಂದೂ, 'ಸಂಸಾರ ಶಾಸ್ತ್ರದ ಪಾಠಗಳು' ಹೆಚ್ಚಬೇಕೆಂದೂ ನಿರ್ಧಾರಗಳಾದುವು.

ಕ್ರಿಸ್ತಮಸ್ ಕಾಲದಲ್ಲಿ ಯುದ್ಧ ಶಾಂತಿ?

ಜನಾಂಗಸಂಘಕ್ಕೆ ಸೇರಿರುವ ಜನಾಂಗಗಳು ಒಂದೊಂದಾಗಿ ಇಟಲಿ ರಾಜ್ಯಕ್ಕೆ ತಮ್ಮ ಸರಕುಗಳನ್ನು ಕಳುಹದೆ ಯುದ್ಧವು ಬೇಗನೆ ಕೊನೆಗಾಣುವಂತೆ ಪ್ರಯತ್ನಿಸುತ್ತಿವೆ. ಅತಿ ಅಗತ್ಯವಾಗಿರುವ ಪೆಟ್ರೋಲ್ ಎಣ್ಣೆಯನ್ನು ಈ ವಾರದಿಂದ ಇಟಲಿಗೆ ಮಾರದಂತೆ ತಡೆಹಾಕುವರೆಂದು ವಾರ್ತೆ ಹರಡಿ, ಇಟಲಿಯು 'ಇದು ಸ್ನೇಹಾಚಾರದ ವರ್ತನವಲ್ಲ' ಎಂದು ಫ್ರಾನ್ಸು ಇಂಗ್ಲೆಂಡುಗಳಲ್ಲದೆ ಇತರರಿಗೆ ತಿಳಿಸಿದೆ. ಯುದ್ಧವಾರ್ತೆಗಳು ಸಹ ನಾನಾ ರೂಪದಿಂದ ಹೊರಬೀಳುತ್ತಿವೆ. ಆದರೂ, ಇಟಲಿಯು ಒಂದು ಸಲ ಹಾದುಹೋದುದೇ ವಿನಾ, ಮುಂದರಿಸಿಲ್ಲ. ಅಲ್ಲಲ್ಲಿ ಕೈ-ಕೈಯಾಗಿ ಹೊಯ್ದಾಡುವ ಕಾಳಗಗಳು ಸಾಗುತ್ತಲಿವೆ. ವಿರೋಧಿಗಳು ತನಗೆ ಶರಣಾಗತರಾಗುವಂತೆ, ಸಂತಲ್ಲಿ ಸಮಾಧಾನ ಮಾಡುತ್ತಲೂ, ಇನ್ನಷ್ಟು ಬಲ ಕೂಡಿಸಿ ಹಗೆಗಳನ್ನು ತಲ್ಲಣಗೊಳಿಸಲೂ ಇಟಲಿಯು ಹೋರಾಡುತ್ತ, ಪ್ರತಿದಿನವೂ ಇಷ್ಟು ಬಾಂಬುಗಳನ್ನು ಅಲ್ಲಲ್ಲಿ ಚೆಲ್ಲುತ್ತಲೇ ಇದೆ. ಹೊರತು ಆಕ್ರಮಣ ಮಾಡುತ್ತಿಲ್ಲ. ಅಬಿಸೀನಿಯದ ರಾಜರು ತಮ್ಮ ಸೈನಿಕರ ಠಾಣ್ಯಗಳನ್ನು ಪ್ರತ್ಯಕ್ಷವಾಗಿ ಸುತ್ತಾಡಿ ಬಂದುದೇ ಅವರ ಸೈನ್ಯಗಳಲ್ಲಿ ಉತ್ಸಾಹವು ಹೆಚ್ಚಿದೆ. ಇಟಲಿಯವರನ್ನು ತಮ್ಮ ನಾಡಿನೊಳಗೆ ಇಳಿಯುವಷ್ಟು ದೂರ ಬರಬಿಟ್ಟು, ಕೊನೆಗೆ ಅವರನ್ನು ತಲೆಕಡಿವುದಕ್ಕೆಂದ ಈ ಸೈನ್ಯಗಳ ತಂತ್ರ ನಡೆಯುತ್ತಿದೆ. ಈಗ ೧೦,೦೦೦ ಫೀಟ್ ಎತ್ತರದ ದುರ್ಗಮವಾದ ಪರ್ವತ ಪ್ರದೇಶದಲ್ಲಿ, ತಮಗೆ ಯುದ್ಧಮಾಡಲು ತುಂಬ ಅನುಕೂಲವಿರುವಲ್ಲಿಗೆ, ಒಂದೆ ಇಟಲಿಯ ಸೇನೆಗಳನ್ನು ಧ್ವಂಸಗೊಳಿಸಿದಂತೆ ಈಗಲೂ ಧ್ವಂಸಗೊಳಿಸಲು ಈ ಸೈನ್ಯಗಳು ಕಾದಿವೆ. 'ಅಂಬಾ ಅಲಗಿ' ಎಂಬಲ್ಲೇ ಈ ಮಹಾಯುದ್ಧವಾಗುವುದೆಂದು ನಂಬುಗೆ. ಜಾತಕ ಇತ್ತಂಡಗಳೂ ಆಚರಿಸುವ ಕ್ರಿಸ್ತಧರ್ಮದ ಮಹಾಪುರುಷನ ಜಯಂತಿಯ ದಿನವೆ ಈ ಮಹಾಯುದ್ಧದ ಕರಾಳ ಮುಹೂರ್ತವಾಗುವುದೇ?

ಲಾಹೋರಿನಲ್ಲಿ ದಂಗೆ

ಐದು ತಿಂಗಳು ಕ್ರೋಧಮುಖಿಗಳಾಗಿದ್ದ ಜನರ ಕಳೆದ ಶನಿವಾರ ರವಿವಾರಗಳಲ್ಲಿ ಒಮ್ಮೆಗೆ ಕೈತಪ್ಪಿ ಹಿಂಸಾತುರರಾದರು. ಐವರು ಸತ್ತರು, ಇನ್ನೆಷ್ಟು ಮಂದಿಗಳಿಗೆ ಗಾಯಗಳಾದವೊ ತಿಳಿದಿಲ್ಲ. ಸಿಕ್ಖ-ಹಿಂದೂ ಮುಖಂಡರಿಂದೊಡಗೂಡಿದ ಮೆರವಣಿಗೆಯೊಂದು ಈ ದಂಗೆಗೆ ಕಾರಣವಂತೆ. ಮೆರವಣಿಗೆಗೆ ಪ್ರಾರಂಭವಾಗುತ್ತಲೆ, ಸೆಣಸಾಟಗಳಿಗೂ ಪ್ರಾರಂಭವಾಗುವುದೊಂದು ರೂಢಿಯಾಗಿ ನಿಂತಿದೆ. ಎಲ್ಲರೂ ಶಾಂತಿಪ್ರಿಯರೇ ನಿಜ, ಸ್ವಲ್ಪ ವಿವೇಕದಿಂದ ತ್ಯಾಗಬುದ್ಧಿಯನ್ನೂ ತೋರಿಸಿದರೆ ಸುಖವಲ್ಲವೆ? ದಂಗೆಗಳಾದರೆ, ರಾಜಕೀಯ ಸುಧಾರಣೆಗಳನ್ನು ಹಿಂತೆಗೆವರೆಂದೂ ಕೆಲವರು ನಂಬಿರುವರೆಂದು ಅಂದೇ ಭಾಷಣಮಾಡಿದ ಸರ್ ಹರ್ಬರ್ಟ್ ಎಮರ್ಸನರು ಹೇಳಿರುವರು. ಸರಕಾರವು ಆಗುವಷ್ಟು ಸಂಧಾನಕ್ಕಾಗಿ ಹೋರಾಡಿ, ಇನ್ನು ಇದಕ್ಕೊಂದು ಕೊನೆಗಾಣಿಸೋಣವೆಂದು ಈಗ ಖಂಡಿತ ನಿರ್ಧಾರಮಾಡಿರುವುದುತ್ತಮ. ಐದು ತಿಂಗಳ ಸಂಧಾನ ಪ್ರಯತ್ನಗಳೇನೂ ಫಲಕಾರಿಯಾಗಿಲ್ಲ, ಮುಖಂಡರೇ ಶಿಸ್ತಿಗೆ ಒಳಪಡದೆ ಯಾವುದೂ ಸರಿಯಾಗದೆಂದು ಈಗ, ಸರಕಾರವೇ ಕಠಿನ ಆಯೋಜನೆಗಳನ್ನು ಮಾಡಿದೆ. ಈಗ ಸದ್ಯಕ್ಕೆ ಶಾಂತಿ.

ಮಂಗಳೂರು.

[illegible] – [illegible] (೬–೧೨–೩೫)ನೇ ಸಾಯಂಕಾಲ [illegible] ಉತ್ಸವವು ಜರಗುವುದು, ಮ॥ ರಾ॥ [illegible] ಎಸ್. [illegible] ಬಿ. ಎ. ಎಸ್. ಎಲ್. [illegible] ಅಧ್ಯಕ್ಷಸ್ಥಾನವನ್ನು ಸ್ವೀಕರಿಸ [illegible] ಸಮ್ಮತಿಸಿರುತ್ತಾರೆ. ಎಲ್ಲರಿಗೂ [illegible] ಎಂದು ಎಸ್. ರಾಮರಾಘವೇಂದ್ರ ಅಯ್ಯರ್ [illegible] ತಿಳಿಸುತ್ತಾರೆ.

ಸಿದ್ಧವಿದ್ಯಾಸಂಘ ಮಂಗಳೂರು ದ [illegible] ಸ್ವಾಮಿ ದಯಾನಂದ ಸರಸ್ವತಿ [illegible] ದಿನಾಚರಣೆಯು ಇದೇ ದಶಂಬರ ತಿಂಗಳ [illegible] ರಲ್ಲಿ ಕೊಡಿಯಾಲಬೈಲ್ [illegible] ಎದುರಲ್ಲಿರುವ [illegible] ರಾವ್ ಬಹದ್ದೂರ್ [illegible] ಬಂಗ್ಲೆಯಲ್ಲಿ ನೆರವೇರಿಸಲ್ಪಡುವುದು [illegible] ಸ್ವಾಮಿಯವರಿಂದಲೂ ಅವರಿಂದ [illegible] ಸಿದ್ಧವಿದ್ಯೆ [illegible] ಎಲ್ಲಾ ಸಹೋದರ [illegible] ಪೂರೈಸುವಂತೆ ಸಹಭಾಗಿಗಳಾಗಬೇಕೆಂದು ವಿನಂತಿ.

ಜಿಲ್ಲಾ ಬೋರ್ಡು ಚುನಾವಣೆಯಲ್ಲಿ [illegible]

[illegible]

ನಗರದ ಆರೋಗ್ಯ

[illegible] ಮಂಗಳೂರು ಮುನಿಸಿಪಾಲಿಟಿಯಲ್ಲಿ [illegible] ಮರಣಗಳೂ, [illegible] ಜನನಗಳೂ ಆದುವು.

ಗೌಡಸಾರಸ್ವತ ಬ್ರಾಹ್ಮಣ ಸ್ವಾಮಿಯವರು [illegible]

[illegible] ಸಾರ್ವಜನಿಕ ಡಿಸ್ಪೆನ್ಸರಿ— [illegible] ನಾಗಪ್ಪ ಶೈಗಳವರ ಡಿಸ್ಪೆನ್ಸರಿಯಲ್ಲಿ [illegible] ತಿಂಗಳುಗಳಿಂದ [illegible] ರೋಗಿಗಳಿಗೆ ಧರ್ಮಾರ್ಥ ಚಿಕಿತ್ಸೆ [illegible] ಸಪ್ಟಂಬರ್, ನವಂಬರ್, ತಿಂಗಳುಗಳ [illegible] ರೋಗಿಗಳು ಚಿಕಿತ್ಸೆಹೊಂದಿದ್ದಾರೆ. ಈ ಸಂಖ್ಯೆಯಲ್ಲಿ ಅಧಿಕ ಅಂಶವು ಸ್ತ್ರೀಯರದ್ದು ಮತ್ತು [illegible] ಮಕ್ಕಳದ್ದಾಗಿರುತ್ತದೆ. ಈ ದಯಾಳು ಮಹನೀಯರುಗಳು [illegible] ನಾಗಪ್ಪ ಶೈಗಳವರ ಸಹಕಾರದಿಂದ [illegible] ಈ ಆಸ್ಪತ್ರೆಯು [illegible] ದೊಡ್ಡ [illegible] ಲಭಿಸಿರುತ್ತದೆ. ಈ ಸಂಸ್ಥೆಯು ಇನ್ನೂ ಅಭಿವೃದ್ಧಿ ಹೊಂದುವಂತೆಯೂ ಮತ್ತು ಈ ಸಂಸ್ಥೆಯು ಚಿರಕಾಲವು ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ [illegible] ನಾಗಪ್ಪಶೈಗಳೂ ಈ ದಯಾಳು ಮಹನೀಯರೂ ಇನ್ನೂ ಇತರ ಧನಾಢ್ಯರೂ [illegible] ಬೇಕೆಂದು [illegible] ಕೋರಿಕೆ.

ದಿವಂಗತ ಡಾಕ್ಟರ್ ಬಿ. ರಾಮಣ್ಣಶೆಟ್ಟಿ

ಡಾಕ್ಟರ ಬಿ ರಾಮಣ್ಣ ಶೆಟ್ಟಿ ಎಲ್. ಎಂ. ಎಂಡ್ ಎಸ್. [illegible]

[illegible]

ತಾಲೂಕುಗಳಿಂದ

ಉಪ್ಪಿನಂಗಡಿ—[illegible]

ಕಾರ್ಕಳ—[illegible]

[illegible]—[illegible] ೩೦–೧೧–೩೫ನೇ ಶನಿವಾರ ಸಾಯಂಕಾಲ [illegible] ಇನ್ಸ್‌ಪೆಕ್ಟರ್ [illegible] ರಾ॥ ರಾ॥ ಎಮ್. [illegible] ಅಧ್ಯಕ್ಷತೆಯಲ್ಲಿ [illegible] ಬಹಳ ವಿಜೃಂಭಣೆಯಿಂದ ಜರಗಿತು. [illegible] ಮತ್ತು [illegible] ವಿದ್ಯಾರ್ಥಿಗಳ [illegible] ಸಭೆಯು ಮುಕ್ತಾಯವಾಯಿತು.

ಇದೇ ತಾ ೨೫–೧೧ ೩೫ರಲ್ಲಿ ನಡೆದ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ ಚುನಾವಣೆಯಲ್ಲಿ [illegible]

ಬೋಳ್ವಾಡಿ—[illegible]

ಕುಂದಾಪುರ—[illegible]

"ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆ" ಎಂಬ ವಿಷಯದಲಿ [illegible] ಶ್ರೀ ವಿದ್ಯಾ [illegible] ಅಧ್ಯಕ್ಷರು ಸ್ತ್ರೀಯರ [illegible]

ಬಜಪೆ—[illegible]

ಕಟೀಲು—[illegible]

ಕಿನ್ನಿಗೋಳಿ—[illegible]

ಕಾರ್ಕಳ—[illegible]

ಸಾದರ ಸ್ವೀಕಾರ

[illegible]

[illegible]

...ಲಂಡನ್ ಪ್ರತಿನಿಧಿ ... ಹಿಂದೂ ಪತ್ರಿಕೆಯ ...

ಅಂತರರಾಷ್ಟ್ರೀಯ ವಿಚಾರ.

ಫ್ರೆಂಚರು ಜನಪದ ಮುಂತಾದ ಸರ್ಕಾರಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಪ್ರತಿಕ್ರಿಯೆಯ ಸಂಸ್ಥೆಗಳ ಉತ್ಸಾಹವುಳ್ಳವರಾಗಿದ್ದಾರೆ. ಮಾತ್ರವಲ್ಲದೆ, ಬ್ರಿಟಿಷರ ಮತ್ತು ಹಬಸಿಗಳ ಹಿತಚಿಂತಕರೆಂದು ತೋರಿಸುತ್ತಿರುವಾಗ, ಇತ್ತಲಾಗಿ ಅವರ ಪ್ರತಿನಿಧಿಗಳಾದ ಲಾವಲರು ಮುಸೊಲಿನಿಯವರೊಡನೆ ಮೈತ್ರಿಯನ್ನು ಬೆಳೆಯಿಸುವ ಪ್ರಯತ್ನದಲ್ಲಿದ್ದಾರೆ. ಜರ್ಮನಿಯ ಕೂಡ, ಸ್ನೇಹಾಚಾರವನ್ನು ಬೆಳೆಯಿಸಲು ಪ್ರಯತ್ನಿಸುತ್ತದೆ. ಇದರಿಂದ ಫ್ರೆಂಚರು ಈಗ ದಿಕ್ಕುತೋರದವರಂತಾಗಿದ್ದಾರೆಂದು ಭಾಸವಾಗುತ್ತದೆ. ಇಟೇಲಿಯನ್ನು ತಡೆಯಲು ಬ್ರಿಟಿಷರ ಕಡೆ ಸೇರುವ ಇಚ್ಛೆಯನ್ನು ವ್ಯಕ್ತಮಾಡಿದರೆ ಇಟೇಲಿಯು ರೇಗುವುದು. ಇತ್ತಲಾಗಿ ಇಟೇಲಿಯೊಡನೆ ಸ್ನೇಹಭಾವದಲ್ಲಿದ್ದರೆ, ಬ್ರಿಟಿಷ ಸಿಂಹವನ್ನು ಕೆಣಕಿದಂತಾಗುವುದು. ಸೋವಿಯೆಟ್ ಸ್ನೇಹವನ್ನು ಬೆಳೆಯಿಸುವಾ ಎಂದರೆ, ಜರ್ಮನಿಯ ಮೈತ್ರಿಯು ತಪ್ಪುವುದು. ಇವ ಸಂಗ್ರಾಮ ಸಿದ್ಧತೆ ಸರ್ಪಿಲ ಹೊಂದಿದಂತೆ ಭಾಸವಾಗುತ್ತದೆ. ಇವರಿಗೆ ಬ್ರಿಟಿಷರ ಮೇಲೆ ನಂಬಿಗೆ ಕಡಿಮೆ. ಜರ್ಮನಿಯವರನ್ನು ನಂಬುವುದು ಕಷ್ಟ. ಇಟೇಲಿಯವರೊಡನೆ ಸೇರುವುದು ನ್ಯಾಯಸಮ್ಮತವಲ್ಲ.

ಇಟೇಲಿಯ ಪ್ರತಿನಿಧಿಗಳಾದ ಬೆರೆನ್ ಅಲೊಸಿಯವರು, ಹಿಟ್ಲರನನ್ನು ಕಾಣಲು ಜರ್ಮನಿಯ ಮ್ಯುನಿಚ್ಚಿಗೆ ಪ್ರಯಾಣ ಬೆಳೆಸಿದುದು, ಹಲವಲ್ಲಿ ಕಂಪನ ಉಂಟುಮಾಡಿರುತ್ತದೆ. ಸಂಕ್ಷಣಗಳಲ್ಲಿ ಭಾಗವಹಿಸಿದ ಜನಾಂಗಗಳ ಸಾಮಾನುಗಳನ್ನು ಛಿನ್ನಾಭಿನ್ನಮಾಡುವ ಹೋರಾಟ ಕ್ರಮಗಳನ್ನು ಮುಸಲೋನಿಯು ಆರಂಭಮಾಡಿರುವನು. ಹಾಗೂ ಈಗ ಇದೇ ಇರೋಪಿನ ಜನಾಂಗದವರಿಂದ ಭಯಗೊಳ್ಳುವ ಜರ್ಮನಿಯನ್ನು ಮತ್ತು ಕೆಲವು ಜನಾಂಗಗಳನ್ನು ತನ್ನ ಕಡೆಗೆ ಸೇರುವಂತೆ ಮಾಡಿ, ತನ್ನ ಕಾರ್ಯವನ್ನು ಸಾಧಿಸುವುದರಲ್ಲಿ ಮುಸಲೋನಿಯು ಮಗ್ನನಾಗಿರುತ್ತಾನೆ.

ಶಾಲಾಮೆನೇಜರುಗಳಿಗೆ ಡೈರೆಕ್ಟರರು ಕೊಟ್ಟ ಸವಲತ್ತು

ವಿದ್ಯಾ ಇಲಾಖಾ ಉದ್ಯೋಗಸ್ಥರು, ಶಾಲಾ ಸಂದರ್ಶನ ಮತ್ತು ವರ್ಷಾವಧಿ ನಿರೀಕ್ಷಣಮಾಡುವ ಕಾಲದಲ್ಲಿ ಸಂದರ್ಶನ ಪುಸ್ತಕದಲ್ಲಿ ಬರೆದುಹೋಗುವ ಒಂದು ಸರ್ವಸಾಮಾನ್ಯ ಅಭಿಪ್ರಾಯವೆಂದರೆ—ಶಾಲೆಗೆ ಸ್ವಂತ ಕಟ್ಟೋಣವಿಲ್ಲ, ಕಟ್ಟೋಣವು ಶಾಲೆಗೆ ಉಪಯುಕ್ತವಾಗಿಲ್ಲ, ಕಟ್ಟೋಣವು ಸಾಕಷ್ಟು ವಿಶಾಲವಾಗಿಲ್ಲ, ಸಾಹಿತ್ಯೋಪಕರಣ ಚಿತ್ರಪಟಗಳು ಬೇಕಾದಷ್ಟಿಲ್ಲ, ಪುಸ್ತಕಾಲಯದ ಪುಸ್ತಕಗಳು ಸಾಕಾಗಿಲ್ಲ ... ಅವುಗಳನ್ನೆಲ್ಲ ಶೀಘ್ರದಲ್ಲಿಯೇ ... ಎಂಬರ್ಥದ್ದಾಗಿರುತ್ತದೆ. ಉತ್ತಮ ಶಾಲೆಯಲ್ಲಿ ಇಂಥ ಕೊರತೆಗಳು ... ಇರಬಾರದು ... ಈಗಿನ ಪರಿಸ್ಥಿತಿಯಲ್ಲಿ ಶಾಲಾಮೆನೇಜರುಗಳಿಗೆ ಅವುಗಳನ್ನೆಲ್ಲ ದೊರಕಿಸುವುದು ಎಷ್ಟು ಕಷ್ಟಸಾಧ್ಯವಾಗಿದೆ ಎಂಬುದು ಅವರಿಗೆ ಮಾತ್ರ ಗೊತ್ತಿರದೆ ಇರಲಿಕ್ಕಿಲ್ಲ. 'ಮದುವೆ ಕಷ್ಟ' 'ಮನೆ ಕಷ್ಟ'ಗಳು ಮದುವೆಮಾಡಿದವನಿಗೆ, ಮನೆಕಟ್ಟಿದವನಿಗೆ ಮಾತ್ರ ಗೊತ್ತಿರುವಂತೆ ಶಾಲಾ ಪರಿಪಾಲನದ ಕಷ್ಟವು ಶಾಲಾ ಮೆನೇಜರನಿಗೆ ಮಾತ್ರ ತಿಳಿದಿರಲಿಕ್ಕೆ ಸಾಧ್ಯವಿದೆ. ಇವರೆಲ್ಲ ಈಗಿನಂಥ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ 'ಉತ್ತಮ ಶಾಲೆಯ' ಸಂಗ್ರಾಹ್ಯ ವಸ್ತುಗಳೆಲ್ಲ ಒಂದೊಂದು ಶಾಲೆಯಲ್ಲಿಯೂ ಇರಬೇಕೆಂದು ಅಧಿಕಾರಿಗಳು ಮೆನೇಜರುಗಳನ್ನು ನಿರ್ಬಂಧಿಸುವುದೂ, ಆ ಕೊರತೆಗಳಿರುವ ಒಂದೇ ಕಾರಣದಿಂದ ಸರಕಾರದಿಂದ ನ್ಯಾಯವಾಗಿ ದೊರೆಯಬೇಕಾದ ಸಹಾಯದ್ರವ್ಯದಲ್ಲಿ ಕಡಿತವನ್ನು ಹೇರುವುದೂ ನ್ಯಾಯಸಂಗತವಾಗಿರುವುದಿಲ್ಲ. ಅವರೆ [illegible]

... ಹಾಗೆ ಅವು ಅನಿವಾರ್ಯವಾದ ಖಾಸಗಿ ಶಾಲೆಗಳ ಮುಖ್ಯ ... ವರ್ತಮಾನಗಳನ್ನು ಕೇಳಿಕೊಳ್ಳಬಹುದು. ಖಾಸಗಿ ಶಾಲೆಗಳ ಮುಚ್ಚೋಣದಿಂದ ಶಿಕ್ಷಣಪ್ರಚಾರಕ್ಕೆ ತಡೆಯಾದರೆ ಆ ಕಡೆಗೆ ಯಾರು ಜವಾಬ್ದಾರರಾಗುವರು? ಅಧಿಕಾರಿಗಳಲ್ಲವೆ?

ಆದ್ದರಿಂದ ಗುಂಟೂರು ಜಿಲ್ಲಾ ಎಜುಕೇಶನಲ್ ಕೌನ್ಸಿಲಿನ ಅಧ್ಯಕ್ಷರೂ ಮದ್ರಾಸು ಕೌನ್ಸಿಲಿನ ಸದಸ್ಯರೂ ಆಗಿರುವ ಶ್ರೀ. ಪಿ. ವಿ. ಕೃಷ್ಣಯ್ಯ ಚೌಧರಿಯವರು ಶಾಲೆಗಳ ಕೇಂದ್ರೀಕರಣ ಯೋಜನೆಯ ಸಂಬಂಧ ತಾವು ಕಳುಹಿಸಿ ಕೊಟ್ಟ ಜ್ಞಾಪಕಪತ್ರ (Memorandum) ದಲ್ಲಿ ಉಪರೋಕ್ತ ಕಷ್ಟಗಳನ್ನು ಸರಕಾರದ ತಿಳುವಳಿಕೆಗೆ ತಂದಾಗ 'ಶಾಲಾ ಮನೆಯನ್ನು ಕಟ್ಟಿಸಲಿಕ್ಕೂ ಶಾಲೆಗೆ ಬೇಕಾದ ಸಾಹಿತ್ಯೋಪಕರಣಗಳನ್ನು ಒದಗಿಸಿಕೊಳ್ಳಲಿಕ್ಕೂ ಸಹಾಯ ದ್ರವ್ಯವನ್ನು ಅಪೇಕ್ಷಿಸಿ ಅರ್ಜಿ ಮಾಡಿಯೂ ಅದು ಮಂಜೂರಾಗದೆ ಉಳಿದ ಸಂದರ್ಭದಲ್ಲಿ ಅಂಥ ಶಾಲಾ ಮನೆಯು ಅತೃಪ್ತಿಕರ ಅಥವಾ ಸಾಹಿತ್ಯೋಪಕರಣಗಳ ಅಭಾವವಿದ್ದ ಒಂದೇ ಕಾರಣದಿಂದ ಆ ಶಾಲೆಗೆ ನ್ಯಾಯವಾಗಿ ದೊರೆಯಬೇಕಾದ ಸರಕಾರ ಸಹಾಯ ದ್ರವ್ಯವನ್ನು ಕಡಿಮೆಮಾಡಕೂಡದೆಂದು ಡೈರೆಕ್ಟರ ಘೋಷಣೆಗಳು ಅಪ್ಪಣೆ ಕೊಟ್ಟಿರುವರು. ಹಾಗೆ ಎಲ್ಲಿಯಾದರೂ ಇನ್ಸಪೆಕ್ಟಿಂಗ ಆಫೀಸರರು ಗ್ರ್ಯಾಂಟ ಕಡಿಮೆ ಮಾಡಿದ ನಿದರ್ಶನಗಳಿದ್ದರೆ ಅವುಗಳನ್ನು ತನ್ನ ತಿಳುವಳಿಕೆಗೆ ತರಬೇಕೆಂದೂ ಅವರು ಅಪೇಕ್ಷಿಸಿರುವರು. ಡೈರೆಕ್ಟರರು ಕೊಟ್ಟ ಈ ಸವಲತ್ತಿನ ಸದುಪಯೋಗಮಾಡಿಕೊಳ್ಳುವುದು ಶಾಲಾ ಮೆನೇಜರುಗಳ ಕರ್ತವ್ಯವಿರುತ್ತದೆ.

ಪರಂತು ನಮಗೆ ತಿಳಿದಿರುವ ಮಟ್ಟಿಗೆ ಇನ್ಸಪೆಕ್ಟಿಂಗ ಆಫೀಸರರು ತಾವು ಸಂದರ್ಶಿಸಿದ ಶಾಲೆಗೆ ಇಷ್ಟು ಸಹಾಯ ದ್ರವ್ಯಗಳನ್ನು ಯಾವ ಯಾವ ಕಾರಣಗಳಿಂದ ಹೆಚ್ಚು ಕಡಿಮೆ ಮಾಡಿ ಶಿಫಾರಸು ಮಾಡಿರುವರೆಂದು ಸಂದರ್ಶನ ಪುಸ್ತಕದಲ್ಲಿ ಬರೆಯುವುದೂ ಇಲ್ಲ, ಶಾಲಾ ಮೆನೇಜರುಗಳಿಗೆ ಆ ಸಂಗತಿಯನ್ನು ತಿಳಿಸುವುದೂ ಇಲ್ಲ. ಇದರಿಂದ ಡೈರೆಕ್ಟರರು ಉಪರೋಕ್ತ ಸವಲತ್ತನ್ನು ಕೊಟ್ಟಿರುವರಾದರೂ ಮೆನೇಜರುಗಳು ಅದರ ಪ್ರಯೋಜನ ಪಡೆಯುವುದು ಅಸಾಧ್ಯ ಎಂಬಂತಾಗಿದೆ. ಈ ಕಾರಣದಿಂದ ಶಾಲಾ ಸಂದರ್ಶನ ಪುಸ್ತಕಗಳಲ್ಲಿ ಬರೆದು ಅಥವಾ ಬೇರೆ ರೀತಿಯಿಂದ ತಿಳಿಸಿ ಇನ್ಸಪೆಕ್ಟಿಂಗ್ ಆಫೀಸರರು ತಾವು ಪ್ರತಿಯೊಂದು ಶಾಲೆಗೆ ಶಿಫಾರಸು ಮಾಡಿದ ಗ್ರ್ಯಾಂಟಿನ ಕೊರತೆಯ ವಿವರವನ್ನು ಆಯಾ ಶಾಲಾ ಮೆನೇಜರುಗಳಿಗೆ ಕೊಡುವುದು ಉಚಿತವಾಗಿದೆ.

ಇದಕ್ಕಾಗಿ ಶಾಲಾ ಮೆನೇಜರುಗಳು ಒಟ್ಟಾಗಿ ಕೆಲಸಮಾಡಬಾರದೇಕೆ?

ಕಟಪಾಡಿ ಶ್ರೀನಿವಾಸ ಶೆಣೈ

ಬಾಹ್ಯಪ್ರಪಂಚ

ಚೀನಾದೇಶದ ವಿಷಮ ಸ್ಥಿತಿ.

ಉತ್ತರ ಚೀನಾ ಪ್ರಾಂತ್ಯಗಳಲ್ಲಿ ಸ್ವಯಂ ಪ್ರಭುತ್ವದ ಚಳವಳಿಯಿಂದಾಗಿ ಚಳವಳಿಯು ಭೀಕರ ಸ್ಥಿತಿಯನ್ನು ಹೊಂದಿರುತ್ತದೆ. ಈ ಚಳವಳಿಯಲ್ಲಿ ಜಪಾನಿಯರು ಹೆಚ್ಚು ಪರಿಶ್ರಮಿಸುತ್ತಿದ್ದಾರೆ. ಈ ಪ್ರಾಂತ್ಯಗಳ ಸಂಗ್ರಾಮಾಧಿಕಾರಿಗಳು ಈ ಚಳವಳಿಯನ್ನು ನಿಗ್ರಹಿಸಲು ಪ್ರಯತ್ನ ಮಾಡುವಂತೆ ಉತ್ತರ ಚೀನಾ ಮುಖ್ಯ ಸೇನಾಪತಿಗಳು ಆಜ್ಞಾಪಿಸಿದರು. ನಾನ್‌ಕಿಂಗ್‌ನಿಂದ ಪೈಪಿಂಗಿಗೆ ಬಂದಿರುತ್ತಾರೆ. ಜಪಾನಿಯರ ಪತ್ರಿಕೆಯಿಂದ, ಹೊಪೈ ಚಾಹಾರ, ದೇಶಗಳು ಮತ್ತು ಟೀನ್ಸಿನ್ ಮತ್ತು ಪೈಪಿಂಗ್ ನಗರಗಳು ಸ್ವಯಂ ಪ್ರಭುತ್ವದ ರಾಜ್ಯಗಳನ್ನು ಅದಷ್ಟು ಬೇಗ ರಚಿಸಬೇಕೆಂದು ಧೃಢಸಂಕಲ್ಪ ಮಾಡಿರುತ್ತಾರೆಂದು ತಿಳಿದುಬರುತ್ತದೆ. ಜಪಾನಿಯ ಸೇನಾ ಸಮೂಹಗಳು ಈ ಪ್ರದೇಶಗಳಲ್ಲಿ ಕೇಂದ್ರೀಕರಿಸುತ್ತವೆ. ಚೀನಿಯರು ಸಿದ್ಧರಾಗುತ್ತಿದ್ದಾರೆ. ಮೊನ್ನೆ ಶಾಂಘಾಯಿ ಸಮುದ್ರದಲ್ಲಿ ಬ್ರಿಟಿಷ ಮತ್ತು ಅಮೇರಿಕನ ಯುದ್ಧನಾವೆಗಳಿಲ್ಲದಿದ್ದರೆ ಇವರೊಳಗೆ ಯುದ್ಧ ಪ್ರಾರಂಭವಾಗುವ ಸಂಭವಗಳಿದ್ದುವು. ಜಪಾನಿಯರು ತಮ್ಮ ಈ ಮಹಾಕಾರ್ಯದಲ್ಲಿ ಪಾಶ್ಚಾತ್ಯರ ಕಡೆಯನ್ನು ನಿರೀಕ್ಷಿಸುತ್ತಿದ್ದಾರೆ.

ಇಂಗ್ಲಾಂಡಿನ ವ್ಯಾಪಾರದ ವಿಷಾದಕರ ಸ್ಥಿತಿಯ ಉಪಶಮನ

ಕಳೆದ ಮಹಾಯುದ್ಧದ ನಂತರ ವ್ಯಾಪಾರವು ಬಹಳ ಕ್ಷೀಣಿಸಿಹೋದ ಪ್ರದೇಶಗಳ ಉದ್ಧಾರವು ಜರೂರಾಗಿ ಆಗಬೇಕಾದ ಯೋಜನೆಗಳನ್ನು ಮಾಡಲು ಮಂತ್ರಿಗಳು ... ನಿರ್ಧಾರಗಳಾಗಿವೆ. ... ದೇಶದ ಭದ್ರತೆಗೆ ಬೇಕಾಗುವ ಸಾಮುಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಈ ಪ್ರದೇಶಗಳಲ್ಲಿ ಸ್ಥಾಪಿಸಬೇಕಾಗಿ ಅಪ್ಪಣೆಗಳಾಗಿವೆ. ಈ ಕೈಗಾರಿಕೆಗಳು ಮೇಲಿನ ಪ್ರದೇಶಗಳಲ್ಲಿ ನಿರುದ್ಯೋಗವನ್ನು ತೆಗೆಯುವುದಲ್ಲದೆ ಅವುಗಳ ವ್ಯಾಪಾರದ ಅಭಿವೃದ್ಧಿಯನ್ನು ಮಾಡುವುದೆಂದು ಸರಕಾರದ ಭಾವನೆ. ನೆಶನಲ್ ಸರಕಾರ ಪ್ರಭುತ್ವದ ವ್ಯಾಪಾರ ... ಇಂಗ್ಲಾಂಡು ಇರೋಪಿನ ಇತರ ಜನಾಂಗಗಳಿಗಿಂತ ಹೆಚ್ಚಿನ ... ಹೊಂದಿರುತ್ತದೆ.

ಆಂಗ್ಲೇಯರ ಯುದ್ಧಸಿದ್ಧತೆಗಳಿಗೆ ಕೆಲವು ಸೂಚನೆಗಳು

ಇಂಗ್ಲಂಡು ಇನ್ನೊಂದು ಯುರೋಪಿಯನ್ ಯುದ್ಧದಲ್ಲಿ ಭಾಗವಹಿಸುವ ಸಂಭವವುಂಟಾದಲ್ಲಿ ಅವರಿಗೆ ಅವರ ನೌಕಾಬಲದ ಮತ್ತು ವಾಯುಬಲದ ಉಪಯೋಗವನ್ನು ದಂಡಿಗೆ ಮಾಡಬೇಕಾಗುವುದು. ಇವುಗಳ ಚಲಾವಣೆಗೆ ದಾರಾಳ ಎಣ್ಣೆ ಪೆಟ್ರೋಲ್ ಇತ್ಯಾದಿ ಬೇಕಾಗುವವು. ಇವುಗಳು ಈಗ ಯುರೋಪಿನ ಕೇಂದ್ರಗಳಿಂದ ವಿಮಾನಗಳಿಗೆ ಒಂದೇ ತಾಸಿನಲ್ಲಿ ಸೇರಲು ಸಾಧ್ಯವಾಗುವ ಸ್ಥಳದಲ್ಲಿ ಜಮಾಯಿಸಿರುತ್ತಾರೆ ಮಾತ್ರವಲ್ಲ, ಈ ಎಣ್ಣೆಯ ಮತ್ತು ಪೆಟ್ರೋಲಿನ ಸ್ಟೋರು [illegible]

[illegible] ... ಕೊಂಡುಹೋಗಲು ... ಅವರ ಎಣ್ಣೆ ಮತ್ತು ಪೆಟ್ರೋಲಿಯ ... ಈ ಸ್ಟೋರುಗಳು ... ಬೇಕಾಗಿ, ಹೀಗೆ ಸಂಗ್ರಾಮಕಾರರ ಸೂಚನೆ.

ಹಬಸಿ ಚಕ್ರವರ್ತಿಯವರಿಗೆ ಆಂಗ್ಲೇಯ ವಿಮಾನಗಳು.

ಇಂಗ್ಲಾಂಡಿನಿಂದ ಹಬಸಿಯವರು ಯುದ್ಧರಂಗದಲ್ಲಿ ಸಂಚಲನಾ ಕಾರ್ಯಕ್ಕಾಗಿ ಆರು, (ಮೂವರು ಕುಳಿತುಕೊಳ್ಳುವ) ವಿಮಾನಗಳನ್ನು ತರಿಸಿಕೊಳ್ಳುವರು. ಇವುಗಳಲ್ಲಿ ಯಾವತ್ತೂ ಯುದ್ಧೋಪಕರಣಗಳನ್ನು ಇರಿಸಲಿಲ್ಲ. ಒಂದೊಂದು ಬಾರಿ ೩೮೦ ಮೈಲು ಹಾರಬಲ್ಲುವು. ತಾಸು ಒಂದರ ೧೭೩ ಮೈಲುಗಳ ವೇಗವಿದೆ.

ಆಡಿಸ್ ಅಬಾಬದಲ್ಲಿ ಒಂದು ರೇಡಿಯೊ ಸ್ಟೇಷನಿನ

ನಿರ್ಮಾಣ ಈಗ ಕೊನೆಗೊಂಡಿರುತ್ತದೆ. ಇಲ್ಲಿಂದ ವಾರ್ತೆಗಳನ್ನೂ ಸಂಗೀತವನ್ನೂ ಭೂಲೋಕದಯಾವತ್ತೂ ದೇಶಗಳಿಗೂ ಕಳುಹಿಸಲು ಸಾಧ್ಯವಾಗುವುದು. ಇದರ ನಿರ್ಮಾಣ ಕಾರ್ಯವು ಓರ್ವ ಅಮೇರಿಕನಿಂದ ನಡೆಯಿತು. ಈ ಸ್ಟೇಷನಿನಿಂದ ಯಾವತ್ತೂ ವರ್ತಮಾನಗಳು ಇಷ್ಟರ ತನಕ ಹೊರಟಿಲ್ಲ. ಹಿಂದೂ ದೇಶದವರು ಯಾರೂ ಇಷ್ಟರ ತನಕ ಈ ಸ್ಟೇಷನನ್ನು ಹಿಡಿದಿಲ್ಲ.

ಪ್ರಕಟನೆ.

ಹಾಸನ ಟವನಿನ 27ನೆಯ ದನಗಳ ಪ್ರದರ್ಶನ.

ಹಾಸನ್ ಟವನ ದನಗಳ ಪ್ರದರ್ಶನ ಕ್ಷೇತ್ರದಲ್ಲಿ ೨೭ನೆಯ ದನಗಳ ಪ್ರದರ್ಶನವು ಜರಗಲು ಏರ್ಪಾಡಾಗಿರುತ್ತದೆ. ಪ್ರದರ್ಶನವು ೧೯೩೬ನೇ ಜನವರಿ ಮಾಹೆ ೨೩ನೇ ಗುರುವಾರದಿಂದ ೩ನೇ ಸೋಮವಾರ ಸಂಜೆ ವರೆಗೂ ನಡೆಯುತ್ತದೆ.

ಗವರ್ನಮೆಂಟು ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಒಂದಕ್ಕೆ ... ಆಣೆಯಂತೆ ಫೀಸು ವಸೂಲ್ಮಾಡಲ್ಪಡುತ್ತದೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನಾ ಜಾಗದಲ್ಲಿ (ಮುನಿಸಿಪಲ್ ... ಗುತ್ತಿಗೆ) ... ಬಾಬನ್ನು ... ಗಂಟೆ ಲಾಗಾಯ್ತು ಹಾಸನದ ಸಂತೆ ಬಳಿ ಇರುವ ಆಫೀಸಿನಲ್ಲಿ ಬಹಿರಂಗವಾಗಿ ಕಟ್ಟೋಣ ಕಟ್ಟಿ ಪ್ರೆಸಿಡೆಂಟು ಯಾ ಮುನಿಸಿಪಲ್ ಕೌನ್ಸಿಲು ವೈಸ್ ಪ್ರೆಸಿಡೆಂಟು ಇವರಿಂದ ಹರಾಜುಮಾಡಲಾಗುತ್ತದೆ.

ಅಂಗಡಿ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಾಗಳನ್ನು ... ಲಾಗಾಯ್ತು ಹಾಸನ ಟವನು ಮುನಿಸಿಪಲ್ ಆಫೀಸಿನಲ್ಲಿ ವಿಲೇವಾರಿಮಾಡಲು ಉಪಕ್ರಮಿಸುತ್ತದೆ. ಇದಕ್ಕೆ ನಂತರ ಬರತಕ್ಕ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ. ಇದಕ್ಕಾಗಿ ಬಿಂಬ್ರಾಗಿರುವ ಅರ್ಜಿ ಫಾರಂಗಳು ಮುನಿಸಿಪಲ್ ಆಫೀಸಿನಲ್ಲಿ ದೊರೆಯುತ್ತವೆ.

ಈ ರೀತಿ ಜಾಗಾಗಳು ಅಪೇಕ್ಷಿಸಿ ತೆಗೆದುಕೊಳ್ಳಬೇಕಾದವರು ಮುನಿಸಿಪಲ್ ಆಫೀಸಿನಲ್ಲಿ ಮುದ್ದು ಯಾ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಏಜಂಟರು ಹಾಜರಾಗಿ ಜಾಗಾವನ್ನು ಹೊಂದತಕ್ಕದ್ದು. ಅಲ್ಲದೆ ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಉಪಯೋಗ ಯಾ ವ್ಯಾಪಾರಕ್ಕೆ ಅವಶ್ಯಕವಾದಷ್ಟು ಸೈಟುಗಳನ್ನು ಮಾತ್ರ ಕೊಡಲಾಗುತ್ತದೆ. ಇದರ ಅಧಿಕಾರವು ಸಂಪೂರ್ಣವಾಗಿ ಪ್ರೆಸಿಡೆಂಟು ಯಾ ಅವರಿಂದ ಅಧಿಕಾರ ಹೊಂದಿದವರಿಗೆ ಇರುತ್ತದೆ. ಮುನಿಸಿಪಾಲಿಟಿಯವರ ಅಪ್ಪಣೆ ಇಲ್ಲದೆ ಸೈಟು ಪಡೆದ ಯಾವ ಮನುಷ್ಯನೂ ಇತರರಿಗೆ ಪರಭಾರೆ ಮಾಡಕೂಡದು. ಹೋದ ಸಾಲಿನಲ್ಲಿ ಸೈಟು ಪಡೆದು ಇತರರಿಗೆ ನಷ್ಟವುಂಟಾಗುವಂತೆ ಮಾಡಿಕೊಂಡಿದ್ದವರಿಗೆ ಖಂಡಿತ ಈ ಸಾಲಿನಲ್ಲಿ ಸೈಟುಗಳು ದೊರೆಯಲಾರವು.

ಬಾಕಿ ವಿಷಯಗಳನ್ನು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಪ್ರೆಸಿಡೆಂಟ್,

ಟೌನ್ ... ಕಮಿಟಿ, ಟೌನ್ ಮುನಿಸಿಪಾಲಿಟಿ, ಹಾಸನ.

ಇಷ್ಟರ ವರೆಗೆ ಯಾರೂ ಹೇಳಿ ಕೇಳದ ಸಂಗತಿಯಿದು

ನಮ್ಮ ... ಅದ ... ಹೃದಯವನ್ನು ಆನಂದಗೊಳಿಸುವುದು ಇದನ್ನು ಜನರೆಲ್ಲರ ಅರಿವಿಗೆ ತರಲಿಕ್ಕಾಗಿ ರೂ ... ಕ್ರಯದ ... ಮಾತ್ರೆಗಳ ... ಒಂದನ್ನು ಕೊಂಡುಕೊಳ್ಳುವವರಿಗೆ ಒಂದು ರಿಸ್ಟ್ ವಾಚು (ಕಟ್ಟು ಸಹಿತ) ಒಂದು ಇನ್‌ಫೆಂಟ್ ಪೋಕೆಟ್ ವಾಚ್ ಚೈನ್ ... ಯಾದ ... ಕೊಡ ... ಫೀಸು ಒಂದು 10 ವರ್ಷಗಳ ಗೆರಂಟಿ ಕೊಡಲ್ಪಡುವುದು. ಒಂದು ಇಮಿಟೇಶನ್ ವಸ್ತುಗಳ ... ಇವುಗಳನ್ನು ... ಕೊಡುವರು ... ಮತ್ತು ಟಪ್ಪಾಲು ಹಾಸಲು ಪ್ರತ್ಯೇಕ ... ವಿಷಯ ಬೇಡವೆಂದು ... ಹಣ ವಾಪಸ

International Trading Co, Post Box No 6714 (4W SW) CALCUTTA

ಸ್ತ್ರೀಪುರುಷರ ಪ್ರಿಯ ರಹಸ್ಯ (ಶರೀರ ಮರ್ಮಶಾಸ್ತ್ರ)

ಮಹಾಶಯರುಗಳೇ, ಇದು ವರೆಗೆ ನೀವಿಂತಹ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ—ಅನೇಕ ಜಾತಿಯ ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಸುಖ ನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭರಕ್ಷಣೆ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭದಂಡ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತ ರಹಸ್ಯಗಳನ್ನೆಲ್ಲಾ ... ಚಿತ್ರಗಳೊಡನೆ ... ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿದ್ದಿಲ್ಲ. ಬೆಲೆ ರೂ ... ಬೇರೆ,

ವಿಳಾಸ.—ಪ್ರಕಾಶಕ ಏಜನ್ಸಿ, ಕೃಷ್ಣಪ್ಪ ನಾಯಕನ ಅಗ್ರಹಾರ ಬೀದಿ, ಮದರಾಸು.

... ಪುಸ್ತಕವನ್ನು ತರಿಸುವವರಿಗೆ ... ಇನಾಂ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 94/1935.

ಅರ್ಜಿದಾರರು—ವ್ಯಾನರ ಶ್ರೀನಿವಾಸ ಕೂಡಾ.

ಅರ್ಜಿದಾರರ ತಂದೆ ಹಾರಾಡಿ ಲಕ್ಷ್ಮಿ ಮಣಿ ಪೈಯು ತಾ 11-8-'84ರಲ್ಲಿ ಉಡುಪಿ ತಾಲೂಕು ಕಟಪಾಡಿ ಗ್ರಾಮದ ಬಾರ್ಕೂರಲ್ಲಿ ಮೃತಪಟ್ಟದ್ದಾರಿಂತಲೂ ಅವರಿಗೆ "The United India Life Assurance Co. Ltd, Madras"ನೇ ಇನ್ಶೂರು ಕಂಪೆನಿಯ ನಂಬ್ರ 27116ನೇ ಪೋಲಿಸಿಯ ಬಾಬ್ತು ಬಹಾ ಹಣಗಳನ್ನು ಪಡೆಯುವ ಬಗ್ಗೆ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಅರ್ಜಿಯು ತಾರೀಕು 18-12-'35ಕ್ಕೆ ಇಟ್ಟಿರುತ್ತದೆ ಆ ಕುರಿತು ಯಾರದ್ದಾದ್ರು ಆಕ್ಷೇಪವಿದ್ದಲ್ಲಿ ಆ ದಿವಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತದೆ.

ಕುಂದಾಪುರ, (Sd) K Narasimha Kamath
30-11-35 *Pleader for Petitioners*

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

O S 115/35

ವ್ಯಾನರ ಶೀನಪ್ಪ ಕೂಡಾ ವಾದಿರು
ರಾಮಣ್ಣ ಗೌಡ ಕೂಡಾ 8 ಜನರು—
ಪ್ರತಿವಾದಿರು

ಸದ್ರಿ ವ್ಯಾಜ್ಯದ 8ನೇ ಪ್ರತಿವಾದಿ ಒಳ್ಳಿ ಗ್ರಾಮದ ಸಣ್ಣಣ್ಣ ಗೌಡನ ಮಗ ಕುಕ್ಕಪ್ಪ ಗೌಡಗೆ ಈ ಮೂಲಕ ತಿಳಿಸುವುದೇನೆಂದರೆ

ವಾದಿರು ಪ್ರತಿವಾದಿರ ಮೇಲೆ ಡಿಕ್ಲರೇಶನಿಗೂ, ಪರ್ಮನೆಂಟ್ ಇಂಜಂಕ್ಷನಿಗೆ ಕೂಡಾ ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 8ನೇ ಪ್ರತಿವಾದಿಗೆ ತಾ 20-12-1935ಕ್ಕೆ ನೋಟೀಸು ಬಗ್ಗೆ ಇಟ್ಟದೆ ಆ ದಿವಸ ಆತನು ಸ್ವತಃ ಯಾ ವಕೀಲರ ಮುಖಾಂತರವಾಗಲಿ ಈ ಕೋರ್ಟಿಗೆ ಹಾಜರಾಗದಿದ್ದರೆ ಆತನನ್ನು ಎಕ್ಸಪಾರ್ಟಿ ಮಾಡಲಾದೀತೆಂತ ಈ ಮೂಲಕ ತಿಳಿಸೋಣಾಗಿದೆ

ಪುತ್ತೂರು, P. Ramachandra Rau
30-11-35 *Pleader for Plaintiff*

ಗೋಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರ.

ಗೋಡ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ. ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೋಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೋಡ್ರೆಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು-ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಗವ್ಮೆಂಟ್ ಲೆಬೋರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ,

ಮೈಕ್ರೋಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಗಳಾಗಿದ್ದ

ಡಾ| ಔಫ್ರೆಚ್ಟ್ ಎಂಬವರು:—"ನಾನು ಗೋಡ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಫೈಲೊಕೊಕಸ್ ಮತ್ತು ಸ್ಟ್ರೆಪ್ಟೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಜ್ ಎಂಬವರು.—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು— 'ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ' ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ. ಎ. ಅನ್ಸಾರಿ, ಎಂ ಡಿ ಎಂ ಎಸ್ ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ಫೆಕ್ಟರಿ – **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು – **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

Motor Accessories Of Approved Manufacture Always in Stock.

Exide Batteries Uncharged	Rs. 20-0-0
Fully Charged	Rs. 24-0-0
Genuine Lockheed Hydraulic Brake fluid Quart tins factory Sealed	Rs 2-12-0
Genuine Lockheed " locally filled	Rs 2-4-0

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

An Enquiry with us will save you money

ದಿ. ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು.

The Canara Public Conveyance Company Ltd., Kodialbail, Mangalore.

ವಿದೇಶ ವರ್ತಮಾನಗಳು

ನಾರಿನ ವಲ್ಲಿಗಳು.

ಬ್ರಿಸ್ಟೆ ಶಿರ್ಕಾಸ್ಸವನ್ನು ೩೦ ವರ್ಷ ಜೀವನಾನ ವನ್ನು ಪ್ರಯಾಸ ಹತ್ತಿಯ ರೀತಿ ನೂಲನ್ನು ಒದಗಿಸುವ ಒಂದು ನವೀನ ನಾರನ್ನು ಕೊಡುವ ಗಿಡವನ್ನು ಒಬ್ಬ ಇಂಗ್ಲೆಂಡಿನವನು ಈಗ ಉಪಯೋಗಕ್ಕೆ ತಂದಿರುವನು. ಹತ್ತಿಗೆ ತಗಲುವ ಮೂರನೆ ಒಂದಂಶದ ವೆಚ್ಚದಲ್ಲಿ ಮನುಷ್ಯನಿಗೆ ಉಪಯುಕ್ತವಾಗುವ ವಸ್ತ್ರ ಸಾಮಾನುಗಳನ್ನು ತಯಾರಿಸಬಹುದು. ಈ ಗಿಡದ ನಾರಿನಿಂದ ಉತ್ಕೃಷ್ಟ ತರದ ವಲ್ಲಿಗಳನ್ನು ತಯಾರಿಸಬಹುದು, ಗುಣಗಳಲ್ಲಿ ಹತ್ತಿಯ ವಲ್ಲಿಗಿಂತ ಶ್ರೇಷ್ಠವಾಗುವುವು. ಈ ನಾರಿನಿಂದ ನೇಯುವ ನೂಲನ್ನು ಇಜಿಪ್ಟಿನ ಹತ್ತಿಯ ನೂಲಿನ ಒಟ್ಟಿಗೆ ಮಿಶ್ರಮಾಡಿ, ಈ ನೂಲನ್ನು ನಿಜವಾದ ಹತ್ತಿಯ ನೂಲಿನಿಂದ ವಿಂಗಡಿಸಲು ಅಸಾಧ್ಯವಾಯಿತು. ಹತ್ತಿಯಿಂದ ನೂಲು ತೆಗೆಯುವ ಯಂತ್ರ ಸಾಧನೆಗಳಿಂದಲೇ ಈ ನಾರಿನಿಂದ ನೂಲನ್ನು ತಯಾರಿಸಬಹುದು. ಈ ಗಿಡವನ್ನು ಶೇವರ್ನ್ ನದಿಯ ದಡದಲ್ಲಿ ಬೆಳೆಯಿಸುತ್ತಿದ್ದಾರೆ. ಆದರೆ ಆಸ್ಟ್ರೇಲಿಯದಲ್ಲಿ ಮತ್ತು ಕೆನಡಾದಲ್ಲಿ ಇವು ವಿಶೇಷವಾಗಿ ಬೆಳೆಯಿಸಬಹುದೆಂದು ಊಹಿಸಲಾಗಿದೆ. ಇದರಿಂದ ನಮ್ಮಲ್ಲಿ ಬೆಳೆಯುವ ಹತ್ತಿಯ ವ್ಯಾಪಾರಕ್ಕೆ ಕುಂದುಬರುವುದೋ?

ಲಾಹೋರಿನಲ್ಲಿ ಕೋಮುವಾರು ಗಲಭೆ.

ನವೆಂಬರ ತಾ ೩೦ರಲ್ಲು ಸಿಕ್ಖರ ಗುರುಗಳಾದ ಗುರು ತೇಜ್ ಬಹದ್ದೂರ್‌ರವರ ಸ್ಮಾರಕ ದಿನಾಚರಣೆಗಾಗಿ ೬೦ ಸಾವಿರ ಹಿಂದೂಗಳು ಮತ್ತು ಸಿಕ್ಖರು ಕೂಡಿದ ಡಾಯಿಧಗಂಜ್ ಗುರುದ್ವಾರದಿಂದ ಹೊರಟ ಮೆರವಣಿಗೆಯು ಮಹಾಕ್ಷೋಭೆಗೆ ಕಾರಣವಾಯಿತು. ಎಲ್ಲರೂ ಆಯುಧಪಾಣಿಗಳಾಗಿದ್ದರು. ಕ್ಷೋಭೆಪಾಲದ ಹಾಗೆ ಯೋಗ್ಯ ಪೋಲೀಸ್ ಬಂದೋಬಸ್ತು ಮೆರವಣಿಗೆಯು ಸಾಗುತ್ತಿರುವಾಗ ಎಲ್ಲಿಯೋ ಮುಸ್ಲಿಮರು ಬೊಂಬನ್ನೆಸೆದರು ಎಂಬ ವರ್ತಮಾನವು ಹೊರಡಲು ಗಲಭೆಗೆ ಪ್ರಾರಂಭವಾಯಿತು. ಅಲ್ಲಲ್ಲಿ ಮುಸ್ಲಿಮರಿಗೂ ಹಿಂದೂಗಳಿಗೂ, ಸಿಕ್ಖರಿಗೂ ಕೈ ಜಗಳಗಳಾದುವು. ಪೋಲೀಸರು ತುಪಾಕಿಗಳನ್ನು ಹಾರಿಸಿ ಗಲಭೆಯನ್ನು ನಿಲ್ಲಿಸಬೇಕಾಯಿತು. ಎರಡು ಹಿಂದೂ ಅಂಗಡಿಗಳ ಮೇಲೆ ಮುಸ್ಲಿಮರ ದಾಳಿ ನಡೆಯಿತು. ನಗರದ ಎಲ್ಲೆಲ್ಲೂ ದಾರಿಹೋಕರಿಗೆ ಕಡಿದರು. ಮಿಲಿಟರಿಯು ನಗರವನ್ನು ಸಂಚರಿಸುತ್ತಿದೆ. ಇಪ್ಪತ್ತು ಜನರು ಇಬ್ಬರು ಮಡಿದಿರುವರು. ನಗರದ ಸ್ಥಿತಿಯನ್ನು ಸಂಪೂರ್ಣ ಅಧಿಕಾರದಲ್ಲಿರಿಸಲಾಗಿದೆ ಎಂದು ಸರಕಾರದ ಪ್ರಕಟಣೆ. ಧಾಂಡಳ ಜನರು ಗಾಯ ಹೊಂದಿರುವರು.

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರ ಸ್ಥಿತಿ.

ಅಲ್ಲಿ ಹಿಂದಿಯರಿಗೆ ಪೀಡನೆಗೆ ಆಸ್ಪದಕೊಡುವ ಅನೇಕ ಕ್ರಮಗಳು ಜಾರಿಗೆ ಬಂದಿವೆ. ಈ ಕ್ರಮಗಳಿಂದ ಹಿಂದಿಯರ ಮೇಲೆ ಕೈಮಾಡಲು ಸರಕಾರದ ಉದ್ಯೋಗಸ್ಥರಿಗೆ ಬಹಳ ಅಧಿಕಾರ ದೊರಕಿರುತ್ತದೆ. ದಿನೇ ದಿನೇ ಈ ಉದ್ಯೋಗಸ್ಥರು ಹಿಂದಿಯರ ಮೇಲೆ ಹಾನಿ ಹೊರಿಸುವ ವಿಚಾರದಲ್ಲಿ ಬಹಳ ಪ್ರಬಲತೆ ಹೊಂದುತ್ತಿದ್ದಾರೆ. ಅಲ್ಲಿನ ಸರಕಾರದೊಡನೆ ಹಿಂದಿಯ ಸರಕಾರವು ಬೇಗನೇ ಭಾರತೀಯರ ಹಿತಸಾಧನೆಗಾಗಿ ಸಾಧಿಸಬೇಕಾಗಿದೆ. ಅಲ್ಲಿನ ಹಿಂದಿಯರ ಸ್ಥಿತಿಯನ್ನು ನಮ್ಮ ಸರಕಾರಕ್ಕೂ ನಮಗೂ ತಿಳಿಸುವಂತೆ ದಕ್ಷಿಣ ಆಫ್ರಿಕಾದ ಹಿಂದಿಯ-ಕಾಂಗ್ರೆಸ್ ಪ್ರತಿನಿಧಿಗಳಾದ ಸ್ವಾಮಿ ದಯಾಲ ಸನ್ಯಾಸಿಯವರು ಹಿಂದೂದೇಶಕ್ಕೆ ಬಂದಿರುವರು. ನವೀನವಾಗಿ ಜನಿಸಿದ ಹೊಲಸುಕೇರಿಗಳ ಉದ್ಧರಣಾ ಬಿಲು ಅದರ ರಚನೆಯಲ್ಲಿ ಬಹಳ ಯೋಗ್ಯವೆಂದು ಕಂಡರೂ ಅದರಿಂದ ಹಿಂದೀಯರಿಗೆ ನಗರಸಭೆಗಳ ಉದ್ಯೋಗಸ್ಥರಿಂದ ಹಾನಿಬರುವುದೆಂದು ಊಹಿಸಲಾಗಿದೆ.

ವೈದಿಕೀಯ ಶೋಧನಾಕಾರರ ಪರಿಷತ್ತು.

ಮೇಜರ್ ಜನರಲ್ ಸರ್, ಕ್ರೆಂಕ್ ಕೊನರ್ ಇಂಡಿಯನ್ ಮೆಡಿಕಲ್ ಸರ್ವಿಸಿನ ಡೈರೆಕ್ಟರ್ ಜನರಲ್, ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಭರತಖಂಡದಿಂದ ಎಲ್ಲಾ ದಿಕ್ಕುಗಳಿಂದ ಪ್ರತಿನಿಧಿಗಳು ಬಂದಿದ್ದರು.

ಪೌಷ್ಟಿಕ, ಬಾಣಂತಿಯರ ಉಪಶಮನ ಶಿಶುಗಳ ಆರೈಕೆಯ ಕುರಿತು ಸೂಚನೆಗಳು ಕೊಡಲು ಎರಡು ಹೊಸ ಸಮಿತಿಗಳು ನೇಮಕವಾಗುವುವು. ಈ ಸಂಶೋಧನಾ ಮಂಡಳಿಯವರಿಗೆ ಹಿಂದೂದೇಶ ವೈದ್ಯಕೀಯ ಇಲಾಖೆ ಯೊದಗೂ ಅಧಿಕಾರಗಳಲ್ಲಿ ದಿಷ್ಟರೂ ಅವರ ಸೂಚನೆಗಳು ತೆಗೆದುಕೊಳ್ಳಲಾಗುವವು. ಈ ಸಂಸ್ಥೆಯು ಹಿಂದೂದೇಶದ ಸಾಂಕ್ರಾಮಿಕ ರೋಗ ನಿವಾರಣೆಗಾಗಿ ಶ್ರಮಿಸುತ್ತದೆ.

ಭಾಷೆಗಳನ್ನನುಸರಿಸಿ ಪ್ರಾಂತ್ಯಗಳ ರಚನೆ.

ಭಾಷೆಗಳನ್ನನುಸರಿಸಿ ಪ್ರಾಂತ್ಯಗಳ ರಚನೆಯಾಗಬೇಕೆಂದು, ಕರ್ನಾಟಕ, ಆಂಧ್ರ ತೆಲುಗು ದೇಶದವರು ಪ್ರಯತ್ನಗೊಳ್ಳುತ್ತಿದ್ದಾರಷ್ಟೆ. ಈ ವಿಚಾರದಲ್ಲಿ ಮದ್ರಾಸಿನ ಗವರ್ನರರಾದ ಲೋರ್ಡ್ ಎರ್ಸ್ಕಿನರು, ಮದ್ರಾಸಿನ ಸೈಂಟ್ ಅಂಡ್ರೂ ದೇವಾಲಯದ ವಾರ್ಷಿಕೋತ್ಸವದಲ್ಲಿ ಮಾಡಿದ ಭಾಷಣದಲ್ಲಿ ಒಂದು ಸಂದೇಶವನ್ನು ಕೊಟ್ಟಿರುತ್ತಾರೆ. "ಇದರಿಂದ ಹಿಂದೂ ದೇಶವು ತುಂಡು ತುಂಡಾಗಿ ಮಾಡಿದಂತಾಗಿ ಪ್ರಾಂತ್ಯಗಳ ಸಂಖ್ಯೆಗಳು ಹೆಚ್ಚಾಗಿ ಆ ಪ್ರಾಂತ್ಯಗಳಲ್ಲಿ ವೈಮನಸ್ಸುಂಟಾಗಿ, ಅಲ್ಲಲ್ಲಿ ಸ್ವಾರ್ಥ ಸಾಧನೆ ಸಾಧಿಸುತ್ತಿದ್ದ ಸರಕಾರಗಳು ಉಂಟಾಗಿ ಹಿಂದುಸ್ಥಾನದ ಐಕ್ಯ ಮುರಿದು ಹೋಗಿ ಅಭಿವೃದ್ಧಿಯು ಸರಿಯಾಗಿ ನಡೆಯದು. ಹಿಂದೂದೇಶವು ಆಗ್ನೆಯ ಯೂರೋಪು ಹಿಂದದಂತೆ ಅಲ್ಲಿ ನಿತ್ಯಲೂ ಕಲಹಗಳುಂಟಾಗುವವು. ಆದರಿಂದ ಹಿಂದೂದೇಶವು ನವರಾಜ ಶಾಸನದಿಂದ ಶ್ರೀಮಂತ್ಯರವಾಗಿ ಬಾಳುವಂತೆ ಭಾಷೆಗಳನ್ನನುಸರಿಸಿ ಪ್ರಾಂತ್ಯ ರಚನೆಯಾಗಬೇಕಾಗಿ ಚಳವಳ ಮಾಡುವ ವಿವಿಧ ಬಾಷಾ ಸಂಸ್ಥೆಗಳು ತಮ್ಮ ಕಾರ್ಯಗಳನ್ನು ನಿಲ್ಲಿಸುವುದು ಲೇಸು.

ಪಂಡಿತ ಮದನಮೋಹನ ಮಾಲವೀಯರು

ಬಿಕಾನಿರಿನಿಂದ ಬೆನಾರಿಸಿಗೆ ತೆರಳಿದುವರು ಲಾಹೋರಿನ ಗಲಭೆಯು ಇವರಿಗೆ ತಿಳಿಸಲು ಇವರು ಬಹಳ ದುಃಖಿತರಾದರು. ಆದರೆ ಇತ್ತೀಚೆಗೆ ಹೆಚ್ಚಾಗಿ ಪ್ರವಾಸದಲ್ಲಿದ್ದುದರಿಂದ ಅಲ್ಲಿನ ಗಲಭೆಯ ಕಾರಣ ಮತ್ತು ಸ್ಥಿತಿಗಳರಿವು ಇವರಿಗೆ ಸರಿಯಾಗಿ ಇಲ್ಲದುದರಿಂದ, ಈ ಗಲಭೆಯ ನಿವಾರಣೆ ಕುರಿತು ಯಾವತ್ತೂ ಕಾರ್ಯ ಸೂಚನೆ ಮಾಡಲು ಅಸಾಧ್ಯವೆಂದರು.

ಇವರು ಡಾ॥ ಅಂಬೇಡ್ಕರರಿಗೆ ಒಂದು ತಂತಿ ಕಳುಹಿಸಿರುತ್ತಾರೆ, ಉತ್ತರವು ಇಷ್ಟರ ತನಕ ಬರಲಿಲ್ಲ. ಯೋಗ್ಯ ಉತ್ತರವು ಬಂದರೆ ಅವರನ್ನು ಅವರ ಹಿಂದೂ ಮತವನ್ನು ತ್ಯಜಿಸ ವ ನಿರ್ಧಾರದ್ದ ಕುರಿತು ಕೆಲವು ಮಾತುಕತೆಗಳನ್ನು ನಡೆಯಿಸಲು ಮತ್ತು ಆ ನಿರ್ಧಾರವನ್ನು ತ್ಯಜಿಸುವಂತೆ ಸಾಧಿಸುವರೆಂದು ತಿಳಿದುಬರುತ್ತದೆ.

ದಶಂಬರದಲ್ಲಿ ಪೂನೆಯಲ್ಲಿ ಸೇರುವ ಹಿಂದೂ ಮಹಾಸಭೆಯ ಪರಿಷತ್ತಿನ ಅಧ್ಯಕ್ಷರಾಗುವರು. ಅಗ್ಗಿ ಅದರ ನ್ಯಾಶನಲಿಷ್ಟ ಪಾರ್ಟಿಯ ಪ್ರಚಾರವೆಯು ಇಡೀ ಭರತಖಂಡದಲ್ಲಿ ಮಾಡಲು ಅಲ್ಲಿ ನೆರೆದ ಮಹನೀಯರುಗಳಿಂದ ಸೂಚನೆಗಳನ್ನು ಪಡೆದು ನ್ಯಾಶನಲ್ ಪಾರ್ಟಿಯ ರಿತು ಪ್ರಸಾರಣಾ ಕಾರ್ಯವನ್ನು ಬೇಗನೇ ಪ್ರಾರಂಭಿಸುವರಂತೆ.

ಇಟೆಲಿ – ಹಬಸಿ ಯುದ್ಧ

ಓಗಡನ್ ಪ್ರದೇಶದಲ್ಲಿ ಇಟಲಿಯಾನರು ತಮ್ಮ ಮುಂದುವರಿಕೆಗೆ ತಡೆಬಂದುದರಿಂದ ಗೋರಾಹಿಯಲ್ಲಿ ಂತಿರುವರಷ್ಟೆ. ಈ ಕಡೆಯ ಸೇನಾನಾಯಕರಾದ ಜನರಲ್ ಗ್ರೆಜಿಯಾನಿಯವರು ಮುಂಬರುವ ಹರಾರನ್ನು ಹಿಡಿಯಲು ಘನತರ ಪ್ರಯತ್ನ ಮಾಡಿದರು. ಹಬಸಿಗಳು ವಾಲವಾಲನ್ನು (ಇಟಲಿಯಾನ ಸೋಮಾಲಿಲೆಂಡಿನ ಒಂದು ಸ್ಥಳ) ಹಿಡಿದುಕೊಂಡ ವಾರ್ತೆ ಸುಳ್ಳೆಂದು ತಿಳಿದುಬಂದಿದೆ. ಇಟಲಿಯಾನರು ತಮ್ಮ ಅಧೀನದಲ್ಲಿರುವ ದೇಶಿಸೇನಾ ಸಮೂಹದ ಬಲವು ತನದಿಂದ, ಸ್ವಲ್ಪ ಬಾಧಿಸಲ್ಪಟ್ಟಿದ್ದರು ಹೊರತು, ಹಬಸಿ ನಾಯಕರಾದ ರಾಸ್ ದೆಸಾನ ಸೇನಾಸಮೂಹದಿಂದಲ್ಲ. ಯಾವಾಗಲೂ ಯುದ್ಧದ ಕಠಿಣ ಭಾಗದಲ್ಲಿ ಅವರೇ ಭಾಗವಹಿಸಬೇಕಾದುದರಿಂದಲೂ ಮತ್ತು ಮರಳುಭೂಮಿಯ ಸಂಕಷ್ಟಗಳನ್ನು ಸಹಿಸಲಿಕ್ಕಾಗದುದರಿಂದ ಈ ಸೈನಿಕರು ರೇಗಿಕೊಂಡಿರುವರು. ಅದರಲ್ಲೂ ಇವರಲ್ಲಿ ಅನೇಕರು ಮುಸ್ಲಿಮರು. ರಮ್ಜಾನ ಹಬ್ಬದ ಸಮಯ ಇವರು ಯುದ್ಧ ಮಾಡಲಾರರು. ನೀರಿಲ್ಲದೆಯೂ ಆಹಾರವಿಲ್ಲದೆಯೂ ಯುದ್ಧ ಮಾಡುವ ಇಚ್ಛೆ ಇವರಿಗಿಲ್ಲ.

ದೇಶಿ ಸೈನಿಕರ ಒಂದು ತಂಡವು ಹಬಸಿಯವರ ಒಂದು ಸಣ್ಣ ಸೈನ್ಯದ ಇದಿರು, ಅವರ ಹಿಂದೆ ಒಂದು ಮಹಾ ಸೈನ್ಯವಿರಬಹುದೆಂಬ ಭಾವನೆಯಿಂದ ದಿಗ್ಭ್ರಾಂತರಾಗಿ ಪಲಾಯನ ಮಾಡಿದರು. ಇವೆಲ್ಲಾ ಕಾರಣಗಳಿಂದ ಇಟಲಿಯವರು ಪಾಶ್ಚಾತ್ಯ ಸೇನಾ ಸಮೂಹಗಳನ್ನು ತರುವ ವಿಚಾರಗಳನ್ನು ಮಾಡುತ್ತಿದ್ದಾರೆ. ಹಬಸಿಗಳೂ ಆಹಾರವಿಲ್ಲದೆಯೂ ರೋಗರುಜಿನೆಗಳಿಂದಲೂ ನೀರಿನ ತೃಷೆಯಿಂದಲೂ ಬಹಳವಾಗಿ ನರಳುತ್ತಿದ್ದಾರೆ. ಒಟ್ಟಾರೆ ಹೇಳುವುದಾದರೆ ಇಟಲಿಯಾನ ಸೋಮಾಲಿ ಸೈನ್ಯವು ಕೆಲವು ಕಡೆಗಳಲ್ಲಿ ಭಯಗೊಂಡು ಪಲಾಯನ ಮಾಡಿದುದರಿಂದಲೇ ಇಟಲಿಯವರ ಸೋಲು ಪ್ರಾರಂಭವಾಗಿದೆಯೆಂದು ವಾರ್ತೆ ಹರಡಲಾಯಿತು.

ಉತ್ತರ ದಿಕ್ಕಿನಲ್ಲಿ

ಇಟಲಿಯಾನರು ಮಕಾಲೆಯನ್ನು ಕೈವಶಪಡಿಸಿದ್ದಾರೆ. ಆದರೆ ಹಬಸಿಯವರು ಇದನ್ನು ಸೇರಲು ಭೀತರಾಗಿದ್ದಾರೆ. ಯಾಕೆಂದರೆ ಇಟಲಿಯಾನರ ಈ ತ್ಯಜನೆಯಲ್ಲಿ ಏನೋ ಕುಯುಕ್ತಿ ಉಂಟೆಂದು ಅವರ ಭಾವನೆ. ಹಬಸಿ ಸಂಗ್ರಾಮ ಸಚಿವರು ಅಲ್ಲಿಯ ನಾಯಕರಾದ ರಾಸ್ ಸೆಯೊಮಾನಿಗೆ ಮಕಾಲೆಯನ್ನು ಎಷ್ಟಕ್ಕೂ ಸೇರಬಾರದಾಗಿ ಎಚ್ಚರಿಗೆಯನ್ನು ಕಳುಹಿಸಿ ಕೊಟ್ಟಿರುತ್ತಾರೆ.

ದಕ್ಷಿಣ ದಿಕ್ಕಿನಲ್ಲಿ ಎಂದರೆ ಓಗಡನ್ ಪ್ರಾಂತ್ಯದಲ್ಲಿ

ಅತಿರೇಕವಾದ ಶಖೆ ಮತ್ತು ಅಶುದ್ಧ ನೀರು ಮತ್ತು ಕೆಲವು ಭಯಂಕರ ಸಾಂಕ್ರಾಮಿಕ ರೋಗಗಳು ಇವುಗಳಿಂದ ಪಾರಾಗಲು ಇಟಲಿಯಾನರು ಈ ದಿಕ್ಕಿನ ಯುದ್ಧವನ್ನು ನಿಲ್ಲಿಸಿ ತಮ್ಮ ಎಲ್ಲಾ ಯುದ್ಧ ಕಾರ್ಯವನ್ನು ಉತ್ತರ ದಿಕ್ಕಿನಿಂದಲೇ ಮಾಡಬೇಕೆಂದಿದ್ದಾರೆ.

ಹಿಂದೂದೇಶ ಮತ್ತು ಆಸ್ಟ್ರೇಲಿಯಾದ ವ್ಯಾಪಾರ

ಆಸ್ಟ್ರೇಲಿಯಾದ ವ್ಯಾಪಾರಿಗಳ ಪ್ರತಿನಿಧಿ ಮಂಡಳವು ಹಿಂದೂದೇಶಕ್ಕೆ ಬಂದಿರುತ್ತದೆ. ಆಸ್ಟ್ರೇಲಿಯಾದಿಂದ ಹಿಂದೂದೇಶಕ್ಕೆ ರೂ ೧೧೦ ಲಕ್ಷ ಮೌಲ್ಯದ ಸಾಮಾನುಗಳು ರಫ್ತಾಗುತ್ತಿವೆ. ಹಿಂದೂದೇಶದಿಂದ ಆಸ್ಟ್ರೇಲಿಯಾಕ್ಕೆ ರೂ. ೩೯೫ ಲಕ್ಷ ಮೌಲ್ಯದ ಸಾಮಾನುಗಳು ರಫ್ತಾಗುತ್ತಿವೆ. ಆಸ್ಟ್ರೇಲಿಯಾದಿಂದ ಹಿಂದೂದೇಶಕ್ಕೆ ಬರುವ ಸಾಮಾನುಗಳಲ್ಲಿ (ಉಣ್ಣೆ) ರೂ. ೧೪ ಲಕ್ಷ, ಕುದುರೆಗಳು ರೂ. ೧೮ ಲಕ್ಷ, ಜವಸುಗಳು ರೂ. ೧೩ ಲಕ್ಷ, ಪ್ರಾಣಿಗಳ ಕೊಬ್ಬು ರೂ. ೧೫ ಲಕ್ಷ, ಜಿಂಕ್ ರೂ. ೧೩ ಲಕ್ಷ ಮತ್ತು ಗೋಧಿ ರೂ. ೧೬ ಲಕ್ಷಗಳಾಗಿರುತ್ತವೆ. ಹಿಂದೂದೇಶದಿಂದ ಅವರಿಗೆ ಹೋಗುವ ಸಾಮಾನುಗಳಲ್ಲಿ ರೂ. ೩೪೩ ಲಕ್ಷದ ನಾರಿನ ಸಾಮಾನುಗಳು. ಹಿಂದೂದೇಶಕ್ಕೆ ಆಸ್ಟ್ರೇಲಿಯಾದಿಂದ ವ್ಯಾಪಾರ ಹೆಚ್ಚು ಆದಾಯ ಲಭಿಸುವದರಿಂದ ಇದಕ್ಕೆ ಪ್ರತಿರೂಪವಾದಿ ಭಾರತೀಯರು ಅವರ ಹೆಚ್ಚಿನ ಸಾಮಾನುಗಳನ್ನು ಪಡಕೊಳ್ಳಬೇಕೆಂಬುದೇ ಈ ಪ್ರತಿನಿಧಿ ಮಂಡಳದ ಸಲಹೆ. ಅವರಿಂದ ಹೆಚ್ಚು ಉಣ್ಣೆ ಪಡಕೊಳ್ಳಬೇಕಂತೆ. ಆದರೆ ಗತವರ್ಷ ನಮ್ಮ ಉಣ್ಣೆವ್ಯಾಪಾರದ ಸ್ಥಿತಿಯನ್ನು ಪರಿಶೀಲಿಸಿದರೆ ಅವರು ಈ ಸಲಹೆಯನ್ನು ನೆರವೇರಿಸಲು ಹೇಗೆ ಸಾಧ್ಯವಾಗುವುದು. ಹಿಂದೂದೇಶದವರು ಅವರ ಬೆಣ್ಣೆ ಫಲ ಇತ್ಯಾದಿಗಳನ್ನು ಪಡೆಯಬೇಕಂತೆ. ಹಿಂದೂದೇಶ ಸರಕಾರವು ನಮ್ಮ ಬೆಣ್ಣೆ, ಫಲ ಇತ್ಯಾದಿಗಳ ವ್ಯಾಪಾರವನ್ನು ರಕ್ಷಿಸಲು ಆಲೋಚಿಸುವಾಗ ಇವರ ಸಲಹೆಗಳನ್ನು ಹೇಗೆ ಮನ್ನಿಸಬಲ್ಲರು.

ಹಿಂದೂದೇಶಕ್ಕೂ ಇತರ ದೇಶಗಳಿಗೂ ವ್ಯಾಪಾರದ ಕುರಿತು ಒಪ್ಪಂದಗಳು.

ಇರಾನಿಗೂ ಹಿಂದೂದೇಶಕ್ಕೂ ವ್ಯಾಪಾರ ಸಂಬಂಧದ ಕುರಿತು ಕೆಲವು ಒಪ್ಪಂದದ ಮಾತುಕತೆಗಳನ್ನು ನಡೆಯಿಸಲು ಇರಾನಿನ ಪ್ರತಿನಿಧಿಯವರು ನ್ಯೂಡಿಲ್ಲಿಗೆ ಬಂದಿದ್ದಾರಷ್ಟೆ. ಅವರಿಗೂ ಹಿಂದು ಸರಕಾರಕ್ಕೂ ಮಾತುಕತೆಗಳು ಅಗೋಚರವಾಗಿ ನಡೆದುವು. ಅವರಿಗೂ ನಮಗೂ ಒಪ್ಪಂದವು ಬ್ರಿಟಿಷ ಸರಕಾರದಿಂದಲೆ ಆಗತಕ್ಕದೆಂದು ನಮ್ಮ ಸರಕಾರದ ವ್ಯಾಪಾರದ ಕುರಿತು ಯಾವತ್ತೂ ಒಪ್ಪಂದಕ್ಕೆ ಬರಲಿಲ್ಲ. ಈ ರೀತಿ ಹಿಂದೂದೇಶದ ಒಂದು ಹಕ್ಕನ್ನು ಯಾವದೋ ಉದ್ದೇಶಪೂರ್ವಕ ತಿಕ್ಕುಹಾಕಿರುತ್ತಾರೆ. ಅನ್ಯರೊಡನೆ ವ್ಯಾಪಾರ ಒಪ್ಪಂದ ಮಾಡುವುದು ಹಿಂದೀಯ ಸರಕಾರದ ಶಾಸನದಲ್ಲಿದೆ. ನವ ರಾಜಶಾಸನದಲ್ಲೂ ಈ ಕುರಿತು ಸೂಚನೆಗಳಿವೆ. ಅದರಿಂದ ಇರಾನಿನ ಸರಕಾರದೊಡನೆ ಹಿಂದೂದೇಶವು ವ್ಯಾಪಾರ ಒಪ್ಪಂದವು ಬ್ರಿಟಿಷ ಸರಕಾರದಿಂದಲೆ ಆಗತಕ್ಕದೆಂದು ತೀರ್ಮಾನಿಸಿದುದು ಬಹಳ ಆಶ್ಚರ್ಯಕರ.

ಕಾಂಗ್ರೆಸ್ ಸ್ವರ್ಣಮಹೋತ್ಸವ ಸಂಚಿಕೆ

ಕಾಂಗ್ರೆಸ್ ಸುವರ್ಣಮಹೋತ್ಸವ ಸ್ಮರಣೋತ್ಸವಕ್ಕಾಗಿ ಸ್ವದೇಶಾಭಿಮಾನಿಯು ತಾ ೨೮ ೧೨-೩೫ರಲ್ಲಿ ಸಚಿತ್ರ ಕಾಂಗ್ರೆಸ್ ಸುವರ್ಣ ಮಹೋತ್ಸವ ಸಂಚಿಕೆಯಾಗಿ ಹೊರಡುವುದು. ಪ್ರಸಿದ್ಧ ಬರಹಗಾರರು ತಮ್ಮ ಲೇಖನಗಳನ್ನು ತಾ ೨೦-೧೨-೩೫ರೊಳಗೆ ನಮಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ವಿನಂತಿ. —ಸಂಪಾದಕ

ನಿಸ್ತೇಜಗೊಂಡ ಚರ್ಮ.

ಪ್ರಾಯವಾಗುವ ಮೊದಲೇ ಸ್ತ್ರೀಯು ಮುದುಕಿಯಂತೆ ತೋರುವಳು

ಇಷ್ಟು ಬೇಗನೇ ಮುಪ್ಪನ್ನು ಪಡೆಯುವುದೆಂದರೆ, ಜೀವನ ಸೌಂದರ್ಯವನ್ನೇ ಕಳಕೊಂಡಂತಾಗುತ್ತದೆ. ಇದರಿಂದ ನಿಮ್ಮನ್ನ ರಕ್ಷಿಸಿ ನಿಮ್ಮ ಚರ್ಮವನ್ನು ನಯವಾಗಿಯೂ ನುಣುಪಾಗಿಯೂ ಮಾಡಿ, ನಿಮ್ಮ ಮುಖಕ್ಕೆ ಸೌಂದರ್ಯವನ್ನು ತರುವ ಒಂದು ಔಷಧಿಯು ಇದೆ. ಅದು ಕಲೆಗಳನ್ನೂ ಸುಕ್ಕುಗಳನ್ನೂ ಬೊಕ್ಕೆಗಳನ್ನೂ ಮುಡಿಮೆಗಳನ್ನೂ ನಾಶಮಾಡುತ್ತದೆ.

ಅಫ್ಘಾನ ಸ್ನೊ.

ನಿತ್ಯವೂ ಉಪಯೋಗಿಸಿದರೆ ಸೌಂದರ್ಯವೂ ಆರೋಗ್ಯವೂ ವೃದ್ಧಿಯಾಗುವುದು.
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಇ. ಎಸ್. ಪಟೆಲ್‌ನ್‌ವಾಲಾ,
182-84, ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ 3.

ಲೌಸ್ ಬರ್ನಾರ್ಡನೆಂಬ ಅನುಭವಸಿದ್ಧನಾದ ರಸಾಯನ ಶಾಸ್ತ್ರಜ್ಞನಾದ ನಾನು ಈ ಮೂಲಕ ವ್ಯಕ್ತಪಡಿಸುವುದೇನೆಂದರೆ, ಅಫ್ಘಾನ ಸ್ನೊ ಎಂಬ ಕ್ರೀಮನ್ನು ವಿಂಗಡಿಸಿ ಅದರಲ್ಲಿ ಯಾವುದೇ ತರದ ವಿಷಕರ ಪದಾರ್ಥವಾಗಲಿ, ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿಲ್ಲ. ಈ ಕ್ರೀಮನ್ನು ಸದಾ ತಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

ಡಾಕ್ಟರ ವಾಮನ ಗೋಪಾಳರವರ



ಬಹಿಡಾಯಿದ್ದ
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೬೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅಶಕ್ತರು ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨
ಸ್ಟಾಕಿಸ್ಟ್— ಶಾ ಕಂಪೆನಿ, ಮಂಗಳೂರು,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯು]

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA—AND—MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica Lumbago, Insect bites, Herpes Wounds Cuts, Colds, Headache It is a complete substitute for the domestic medicine chest. Try once this unequalled remedy In ¼oz tin As 3/- In oz jar As 12/-

Superior Red Balm For relieving pains in muscles and on skin Directions for use with the bottle Price As 12/- only,

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults try this unique remedy and be freed from your ailment Price As 10 per packet

Pocket Inhaler For coryza and hoarseness headache catarrh colds use this inhaler and you will be relieved immediately Price per inhaler As 6 & As 8/-

Po-Ho Fluid For Asthma colds indigestion toothache lumbago, a sure remedy in all cases Price As 6 and Re 1/- per phial

Cough Cure An infallible remedy for coughs of all kinds bronchitis, hoarseness Particulars in bottle Price As 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As 1/5, 2/6, 3/-, 1

Basel Mission Book Depot
Mangalore, Branches in Codialbail, Hubli, Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವನಿತಾ ವಿಭಾಗ.

ಬಾಲವಿಧವೆಯರ ವಿಷಯವಾಗಿ ಗಾಂಧಿಯವರೇನನ್ನುತ್ತಾರೆ!

ಭಾರತದಲ್ಲಿ ಬಾಲ್ಯವಿವಾಹದ ಪರಿಣಾಮದಿಂದಾಗಿ ಅಸಂಖ್ಯಾತ ಬಾಲವಿಧವೆಯರು ಇರುವರಷ್ಟೆ. ಕೇವಲ ಒಂದು ವರ್ಷದ ಹಸುಳೆ ಮಕ್ಕಳೇ ವಿಧವೆಯರಾಗುವುದೆಂದರೆ, ಅದನ್ನು ಸಹಿಸಿಕೊಂಡಿರುವ ಸಮಾಜವೊಂದು ಸಮಾಜವೆ? ಆ ಸಮಾಜದ ನಾಯಕರು ಮನುಷ್ಯ ಹೃದಯ ಉಳ್ಳವರೆ? ಬಾಲವಿಧವೆಯರ ಸಂಖ್ಯಾ ಬಾಹುಳ್ಯವನ್ನು ಕಂಡು ಮಹಾತ್ಮಾ ಗಾಂಧಿಯವರು 'ಅದನ್ನು ಕೇಳಿ ನಾವೆಲ್ಲರೂ ಕೇವಲ ನಾಚಿಕೆಗಾಗಿ ತಲೆತಗ್ಗಿಸಬೇಕು. ಆದರೆ ಅಷ್ಟೇ ಈ ವ್ಯಾಧಿಯನ್ನು ನಿವಾರಿಸುವುದಿಲ್ಲ' ಎಂದು ಹೇಳಿ, ನಿವಾರಣೋಪಾಯವನ್ನು ಸೂಚಿಸುತ್ತಾರೆ.

'ಬಾಲ್ಯವಿವಾಹ ಪದ್ಧತಿಯು ನಗರಗಳಲ್ಲೆಷ್ಟು ಪ್ರಾಬಲ್ಯವಲ್ಲಿದೆಯೋ ಹಳ್ಳಿಗಾಡಿನಲ್ಲಿ ಅಷ್ಟೇ ಉಲ್ಬಣಾವಸ್ಥೆಯಲ್ಲಿದೆ. ಇದರ ನಿವಾರಣೆಯ ಕಾರ್ಯವು ಕೇವಲ ಸ್ತ್ರೀಯರ ಕರ್ತವ್ಯ; ಅಂದರೆ ಗಂಡಸು ಮಾಡಬೇಕಾದ ಕಾರ್ಯಭಾಗವೇನೂ ಇಲ್ಲವೆಂದೇ ಅರ್ಥವಾಗುವುದಿಲ್ಲ. ಗಂಡಸು ಯಾವಾಗ ಕಾರಣ ವಾದವನ್ನು ಬಿಟ್ಟು ಮೃಗದಂತೆ ಒರಟು ಮಾರ್ಗವನ್ನು ಹಿಡಿಯುತ್ತಾನೋ, ಆಗ ಹೆಂಗಸರೇ ಈ ಕಾರ್ಯಭಾರವನ್ನು ಹೊತ್ತುಕೊಳ್ಳಬೇಕು.

'ಧೈರ್ಯವಾಗಿ ನಾನೊಂದು ಸಲಹೆಯನ್ನು ಕೊಡುತ್ತೇನೆ. ಅಖಿಲಭಾರತ ಮಹಿಳಾ ಸಮ್ಮೇಳನವಿರುವುದಷ್ಟೆ. ಇದು ತನ್ನ ಹೆಸರಿಗೆ ತಕ್ಕಂತೆ ಅಖಿಲಭಾರತೀಯವಾಗಬೇಕು. ಹಳ್ಳಿಗಳಲ್ಲಿ ಹೆಚ್ಚಾಗಿ ಕಾರ್ಯವನ್ನು ನಡೆಸಬೇಕು. ಸಮ್ಮೇಳನಗಳನ್ನು ನಡೆಸುವುದು ಪ್ರಸಿದ್ಧ ಪತ್ರಿಕೆಗಳನ್ನು ಹಂಚುವುದು ಇಷ್ಟರಲ್ಲಿ ಮಾತ್ರ ನಿರತರಾಗಿದ್ದರೆ ಅವರು ತಮ್ಮ ಕಾರ್ಯಕ್ಷೇತ್ರವನ್ನು ನಗರಗಳಿಗೆ ಮಾತ್ರ ವಿಸ್ತರಿಸಿದಂತಾಗುತ್ತದೆ. ಇದರಿಂದ ಇಂಗ್ಲೀಷು ಕಲಿತ ಕೆಲವರಿಗೆ ಸರಿ, ಭಾರತ ಪ್ರಜಾಕೋಟಿಗೆ ಏನೂ ಪ್ರಯೋಜನ ದೊರಕುವುದಿಲ್ಲ. ಆದುದರಿಂದ ಗ್ರಾಮಾಂತರಗಳಲ್ಲಿ, ಅಖಿಲ ಭಾರತ ಗ್ರಾಮ ಕೈಗಾರಿಕೆ ಸಂಸ್ಥೆಯಂತೆ, ಸಾಧ್ಯವಾದರೆ ಅದರೊಡನೆ ಸಹಕರಿಸಿ ಅಖಿಲಭಾರತ ಸ್ತ್ರೀ ಸಮ್ಮೇಳನವು ಗ್ರಾಮ ಸೇವೆಗೆ ಪ್ರಾರಂಭ ಮಾಡಬೇಕು. ಗ್ರಾಮೋದ್ಧಾರವೆಂದರೆ ಅಕ್ಷರ ಕಲಿಸುವುದು ಮಾತ್ರವಲ್ಲ. ಮನುಷ್ಯನಾಗಿ ಜನ್ಮತಾಳಿರುವುದರಿಂದ ತಿಳಿಯಬೇಕಾದುದನ್ನು ಪ್ರಥಮತಃ ಕಲಿಸಬೇಕು. ಅನಂತರ ಎಲ್ಲವೂ ಸರಿಹೋಗುತ್ತದೆ.'

ವಿಶ್ವಕರ್ನಾಟಕ.

ಒಬ್ಬಂಟಿಗಳಾಗಿ ಹಾರಿದ ಸ್ತ್ರೀ

ಮಿಸ್ ಬೆಟನ್ ಎಂಬವಳು, ಪಶ್ಚಿಮ ಆಫ್ರಿಕದ ಸೆನೆಗಲ್ ಎಂಬಲ್ಲಿಂದ ೨೦೦೦ ಮೈಲು ದೂರವಿರುವ ಉತ್ತರ ಅಮೇರಿಕದ ಫೋರ್ಟಲಿಜಾ ಎಂಬಲ್ಲಿಗೆ ಅಟ್ಲಾಂಟಿಕ್ ಸಾಗರದ ಮೇಲಿನಿಂದ, ವಿಮಾನದಲ್ಲಿ ಒಬ್ಬಂಟಿಗಳಾಗಿ ಹಾರ್ದುದು ಮಾತ್ರವಲ್ಲ ಈ ವಾಯು ಸಂಚಾರವನ್ನು ೧೩ ಗಂಟೆ ೧೫ ನಿಮಿಷದಲ್ಲಿ ಮುಗಿಸಿ ಹಿಂದೆ ೫ ಜನ ವೈಮಾನಿಕ ಪುರುಷರು ಪಡೆದ ಗೌರವ ಸ್ಥಾನವನ್ನು ಈಗ ತಾನು ಪಡೆದಿರುವಳು. ಇಷ್ಟು ಉದ್ದದ ವಾಯು ಪ್ರವಾಸ ಅಷ್ಟು ಕಡಿಮೆ ಸಮಯದಲ್ಲಿ ತೀರಿಸಿದವರಲ್ಲಿ ಇವಳು ಮೊದಲನೆಯವಳು. ಇವಳ ಪ್ರಾಯ ಸಾಧಾರಣ ೨೫ ವರ್ಷಗಳು.

ಸಂಗ್ರಾಮ ಶೂರಳಾದ ಸ್ತ್ರೀ

'ಸೆಡೀಲ್ಸರ್ ಸೊಸಾನಾ,' ಎಂಬವಳು ಆಸ್ಟ್ರೀಯಾ ದೇಶದ ಪ್ರಖ್ಯಾತ ವೀರ ರಮಣಿ. ಆಸ್ಟ್ರೀಯಾ-ಇಟೇಲಿ ಯುದ್ಧ ಪ್ರಾರಂಭವಾಗಲು ಯುದ್ಧದಲ್ಲಿ ಗಾಯಗೊಂಡ ಸೈನಿಕರನ್ನು ಉಪಚರಿಸುವ ಉಪಚಾರಿಕೆಯಾಗಿ ಸೇರಿದಳು. ಆದರೆ, ಕ್ರಮೇಣ ಅವಳಿಗೆ ಪುರುಷರೋಪಾದಿಯಲ್ಲಿ ಕಣೆಯಲ್ಲಿ ಕುಳಿತು ಯುದ್ಧ ಮಾಡಬೇಕಾಯಿತು. ಇವಳ ಶೌರ್ಯಕ್ಕಾಗಿ ಎರಡು ಪದಕಗಳು ಬಹುಮಾನವಾಗಿ ದೊರೆತಿವೆ. ಇವಳು ಈಗ ಪುರುಷರ ಪೋಷಕನ್ನು ಧರಿಸುತ್ತಿದ್ದಾಳೆ. ಆಸ್ಟ್ರೀಯ ದೇಶದಲ್ಲಿ ಈಗಲೂ ಬಹಳ ಶ್ರೇಯಸ್ಸಿನಿಂದ ಜೀವಮಾನ ಕಳೆಯುತ್ತಿದ್ದಾಳೆ.

೨೪ ವರ್ಷಗಳಲ್ಲಿ ೩೦ ಸಾವಿರ ವಿವಾಹಗಳು ರದ್ದಾದುವು.

ಅಮೇರಿಕಾದಲ್ಲಿ ಇದತ್ತಿಗೆ ೨೪ ವರ್ಷಗಳಲ್ಲಿ ೩೦ ಸಾವಿರ ಮದುವೆಗಳು ರದ್ದಾಗಿವೆ. ಇವುಗಳು ವಿಶೇಷವಾಗಿ ಚಿಕ್ಕ ಪುಟ್ಟ ಮನಸ್ಕ್ಲೇಶದಿಂದುಂಟಾದವು ಎಂದು ಅಲ್ಲಿನ ಪ್ರಖ್ಯಾತ ನ್ಯಾಯಾಧೀಶರ ಮಾತು. ಉದಾಹರಣೆಗಾಗಿ; ಒಬ್ಬ ಗಂಡಸು ತನ್ನ ಹೆಂಡತಿಗೆ ಮನೆಯಲ್ಲಿ ಕೆಲಸವು ಹೆಚ್ಚಾಗಿರುವುದರಿಂದ, ಅವಳ ಶ್ರಮಗಳನ್ನು ಕಡಿಮೆ ಮಾಡಲು, ಕೆಲವು ನವೀನ ಕಾರ್ಯಕಾರಿಯ ಮಾಡುವ ಯಂತ್ರಗಳನ್ನು ಮನೆಯಲ್ಲಿ ಇರಿಸಿದನು. ಈ ಯಂತ್ರಗಳನ್ನು ಸರಿಯಾಗಿ ಚಲಿಸಲಿಕ್ಕೆ ಸಾಧ್ಯವಾಗದ ಆತನ ಹೆಂಡತಿಯು ಕುಪಿತಳಾಗಿ, ಕೋರ್ಟಿಗೆ ಹೋಗಿ ತನ್ನ ಮದುವೆಯನ್ನು ರದ್ದು ಮಾಡಿಕೊಂಡಳು.

ಸಂತತಿ ಪ್ರತಿಬಂಧವೂ ಹಿಂದೂದೇಶವು

ಒಂದು ದೇಶದ ಜನಸಂಖ್ಯೆಯು ಆದರ ಸಾಂಪತ್ತಿಕ ಸ್ಥಿತಿಯ ಮೇಲೆ ಹೊಂದಿಕೊಂಡಿರಬೇಕು. ಆದರೆ ನಮ್ಮ ಆಷ್ಯಾಖಂಡದಲ್ಲಿ ಜನರ ಯೋಗ್ಯತೆಗೆ ಮಿಗಿಲಾಗಿ ಮಕ್ಕಳು ಜನಿಸಿ, ಆಹಾರಕ್ಕೆ ಗತಿ ಇಲ್ಲದೆ ನರಳುವ ಚಿತ್ರಗಳು ಎಲ್ಲೆಲ್ಲಿ ಕಾಣಿಸುತ್ತಿವೆ. ಸಂತತಿ ಪ್ರತಿಬಂಧದ ಚಳವಳಿಗಳು ನಮ್ಮಲ್ಲಿ ಬೇಗನೆ ಪ್ರಾರಂಭವಾಗತಕ್ಕದ್ದು. ಅಮೇರಿಕಾದ ಸುಪ್ರಸಿದ್ಧ ಮಾರ್ಗರೆಟ್ ಸೆಂಗರ್ ಎಂಬ ಸಂತತಿ ಪ್ರತಿಬಂಧದ ಪ್ರಸಾರಣೆಯಲ್ಲಿ ಯಶಸ್ಸನ್ನು ಪಡೆದ ಸ್ತ್ರೀಯು ದಶಂಬರದಲ್ಲಿ ಟ್ರಾವಂಕೂರಿನಲ್ಲಿ ಜರಗಲಿಕ್ಕಿರುವ ಸ್ತ್ರೀ ಸಮ್ಮೇಲನದಲ್ಲಿ ಈ ಕುರಿತು ಭಾಷಣ ಮಾಡಲು ಬರುವರೆಂದು ನಾವು ತಿಳಿಯುತ್ತೇವೆ.

ಆಸ್ಥಾ ಹಿಂದದ ಸಂತತಿ ಪ್ರತಿಬಂಧಕ ಪ್ರಸಾರಣಾ ಕಾರ್ಯವನ್ನು ಇವರು ೧೯೨೦ರಲ್ಲಿ ಪ್ರಾರಂಭಿಸಿದ್ದರು. ಅಖಿಲಭಾರತ ಸ್ತ್ರೀ ಸಮ್ಮೇಲನದವರು, (ನಮ್ಮ ಊರಿನಿಯ ಸ್ತ್ರೀಯರ ಪ್ರತಿನಿಧಿಗಳು) ಸಂತತಿ ಪ್ರತಿಬಂಧದ ವಿಷಯ ಅನೇಕ ಠರಾವುಗಳನ್ನು ಈ ಮೊದಲು ಮಾಡಿರುತ್ತಾರೆ.

ಹಿಂದೂದೇಶದ ಸ್ತ್ರೀಯರು ಈ ಬಗ್ಗೆ ಗಮನಿಸುವುದು ತೃಪ್ತಿಕರವಾದ ಸಂಗತಿ. ಒಂದು ಕುಟುಂಬದಲ್ಲಿ ಅವರ ಆದಾಯಕ್ಕೆ ಹೆಚ್ಚಾದ ಮಕ್ಕಳು ಜನಿಸಿದರೆ, ಅವುಗಳನ್ನು ಯೋಗ್ಯ ರೀತಿಯಲ್ಲಿ ಪೋಷಿಸಲು ಸಾಧ್ಯವಾಗುವುದು. ಕುಟುಂಬ ಶಕ್ತಿಗೆ ಮೀರುವಂತೆ ಸಂತಾನವು ಅಭಿವೃದ್ಧಿಯಾದರೆ, ಮಕ್ಕಳಿಗೆ ಸರಿಯಾದ ಪೋಷಣೆ ಒದಗದೆ, ಅವು ಕ್ಷೀಣ ಜೀವಿಗಳಾಗಿ ಪರಿಣಮಿಸುವವು. ಇದರಿಂದ ಮುಂದಿನ ಜನಾಂಗವು ಕ್ಷೀಣತರವಾಗುವುದು. ಕೆಲವು ನಿರ್ಬಲ ಮನುಷ್ಯರಿಗೆ ಸಂತತಿ ಜನಿಸಿದರೆ, ನಿರ್ಬಲರ ಜನಸಂಖ್ಯೆಯು ಏರುತ್ತಾ ಹೋಗುವುದು. ರೋಗಪೀಡಿತರಿಗೆ ಸಂತಾನಕ್ಕೆ ತಡೆಯನ್ನು ಹಾಕಿದ್ದರೆ, ಮುಂದಕ್ಕೆ ರೋಗಪೀಡಿತ ಜನಾಂಗವು ಹುಟ್ಟುತ್ತದೆ. ಸಂತಾನ ಅಭಿವೃದ್ಧಿಯು ಮುಂದಿನ ಜನಾಂಗವು ಕೀರ್ತಿಶೇಷವಾಗಿ ಬಾಳುವ ವಿಧದಲ್ಲಿ ನಡೆಯತಕ್ಕದ್ದು. ಇದು ಸಂತಾನ ಪ್ರತಿಬಂಧವಿಂದಲೇ ಸಾಧ್ಯವಾಗುತ್ತದೆ.

ಆದುದರಿಂದ ಸಂತತಿ ಪ್ರತಿಬಂಧನವು ವೈಜ್ಞಾನಿಕ ರೀತಿಯಲ್ಲಿ ನಡೆಯಿಸುವ ಸಂಸ್ಥೆಗಳನ್ನು ನಮ್ಮ ಭರತಖಂಡದ ಮುಖ್ಯ ಕೇಂದ್ರಗಳಲ್ಲಿ ಸ್ಥಾಪಿಸತಕ್ಕದು.

ಮಹಾತ್ಮಾ ಗಾಂಧಿಯವರ ಆಶ್ರಮದಲ್ಲಿ.

ಶಾಂತಿಬೆನ್ ಅಥವಾ (ಮಿಸ್ ಮೇರಿ ಇಂಗ್ರಾಮ) ಎಂಬ ಆಂಗ್ಲೇಯ ತರುಣಿಯು ಮಹಾತ್ಮಾ ಗಾಂಧಿಯವರ ವಾರ್ಧಾದ ಆಶ್ರಮದಲ್ಲಿ ಗ್ರಾಮಾಭ್ಯುದಯ ಕಾರ್ಯವನ್ನು ಇನ್ನೊಂದು ವರ್ಷದಲ್ಲಿ ಕೈಗೊಳ್ಳಲು ತರಬೇತಿ ಹೊಂದುತ್ತಿದ್ದಾರೆ. ಇವರು ಲಂಕಶಯರಿನಿಂದ ಬಂದವರು. ಉಪಾಧ್ಯಾಯಿನಿ ಯೋಗ್ಯತಾ ಪತ್ರವುಳ್ಳವಳು. ನೂಲು ಮಾಡುವುದರಲ್ಲಿ ಮತ್ತು ನೇಯುವುದರಲ್ಲಿ ಇವರಿಗೆ ತುಂಬಾ ಪ್ರೇಮವಿದೆ. ತನ್ನ ಆಂಗ್ಲೇಯ ಅಭ್ಯಾಸಗಳನ್ನು ಬದಿಗಿಟ್ಟು, ಹಿಂದೂದೇಶದ ಪ್ರಕೃತಿಗೆ ಮತ್ತು ಕ್ರಮಗಳಿಗೆ ಅನುಸರಿಸಿ ವರ್ತಿಸುತ್ತಿದ್ದಾರೆ. ಸೀರೆಯನ್ನು ಧರಿಸುತ್ತಿದ್ದಾರೆ.

ಕೃಷ್ಣಾದೇಶದ ಸ್ತ್ರೀಯರ ಪರಿಷತ್ತು.

ಕೃಷ್ಣಾದೇಶದ ನಂದಿಗಾಮೂ ಎಂಬಲ್ಲಿ (ಬೆಜವಾಡದಿಂದ ೨೫ ಮೈಲು) ಸ್ತ್ರೀಯರ ಪರಿಷತ್ತೊಂದು ಶ್ರೀಮತಿ ಬಿ. ಸೀತಾಬಾಯಮ್ಮ (ಗೌರವ ಮೆಜಿಸ್ಟ್ರೇಟ್)ನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸಮಾಜದಲ್ಲಿ ಸ್ತ್ರೀಯರಿಗೆ ಯೋಗ್ಯಸ್ಥಾನ ದೊರಕುವಂತೆ ಸಾಧಿಸಬೇಕಾಗಿಯೂ, ಅವರ ವಿದ್ಯಾಭ್ಯಾಸಕ್ರಮದಲ್ಲಿ ಸುಧಾರಣೆಗಳಾಗಬೇಕಾಗಿಯೂ, ಬಾಲ್ಯವಿವಾಹಗಳನ್ನು ತಡೆಯಬೇಕಾಗಿಯೂ ಇವೇ ಮೊದಲಾದ ಸ್ತ್ರೀಸಮಾಜದ ಕುರಿತಾದ ಅಧ್ಯಕ್ಷರ ಭಾಷಣವಿತ್ತ ನಂತರ ಸ್ತ್ರೀಯರಿಗೆ ವಿದ್ಯಾಭ್ಯಾಸ ದೊರಕುವ ಸಂಸ್ಥೆಗಳು ಏರ್ಪಡಿಸುವಂತೆಯೂ, ಶಾಸನಸಭೆಯಲ್ಲಿ ಯೋಗ್ಯ ಸ್ಥಳ ದೊರಕುವಂತೆಯೂ ಆಂಧ್ರಪ್ರದೇಶವನ್ನು ಬೇರೆ ಪ್ರಾಂತ್ಯವನ್ನಾಗಿ ಮಾಡಬೇಕಾಗಿ ಠರಾವುಗಳಾದುವು.

ಮಕ್ಕಳ ಆರೈಕೆ

ಮಕ್ಕಳಿಗೆ ಬೇಡವಾದ ವಸ್ತುಗಳನ್ನು ಅವು ಕೇಳಿದಾಗ ಕೊಡದೆ ಇರುವುದು ಹಾನಿಕರ. ಎಳೆಮೆದುಳಿನ ಮೇಲೆ ಅದು ವಿಪರೀತ ಪರಿಣಾಮವನ್ನು ತರುವುದು. ತಾಯಂದಿರು ಅದಷ್ಟುಮಟ್ಟಿಗೆ ಮಕ್ಕಳು ಬಯಸುವ ವಸ್ತುಗಳನ್ನು ತಂದುಕೊಡುವುದು ವಿಹಿತ. ಇಲ್ಲವಾದರೆ, ಒಂದು ತಡವೆ ಆ ವಸ್ತುಗಳನ್ನು ತಂದುಕೊಡಲು ಸಾಧ್ಯವಿಲ್ಲೆಂದು ಹೇಳಿದ ಬಳಿಕ ಅದನ್ನು ತಂದುಕೊಡಲೇ ಬಾರದು. ಅದಾದರೂ ಪರವಿಲ್ಲ. ಕೆಲವರು ಮೊದಲು ಕೊಡಲಾಗುವುದಿಲ್ಲವೆಂದು ಮನಸಿಗೊಳ್ಳುವುದೂ, ಮಕ್ಕಳು ಮುಸ್ಕರ ಹಿಡಿದೊಡನೆ ಅದನ್ನು ತಂದು ಕೊಡುವುದೂ ಉಂಟು. ಅಂದರೆ ಮಕ್ಕಳಲ್ಲಿ ಹಟ ತೊಟ್ಟುವ ದುರಭ್ಯಾಸಕ್ಕೆ ನಾವೇ ತಳಹದಿ ಹಾಕಿದಹಾಗಾಯಿತು. ಅಂತೂ ಮಕ್ಕಳನ್ನು ಸಿಕ್ಕಿದ ಹಾಗೆ ಬಯ್ಯುವುದೂ, ಗದರಿಸುವುದೂ, ಕೇಳಿದ, ಅವರಿಗೆ ಒಳ್ಳೇದಾಗಿರುವ ವಸ್ತುಗಳನ್ನು ತಂದು ಕೊಡದೆ ಇರುವುದು ವಿಹಿತವಲ್ಲ. ಮಕ್ಕಳ ಪ್ರೇಮವು ಅಲ್ಲಿ ಕುಸಿದು ಹೋಗುವುದು. ಹೆತ್ತವರನ್ನು ಕಂಡರೆ ಅವರ ಮುಂಗಡೆಯಲ್ಲಿ ಹೆದರಿದ ಹಾಗೆ ನಟಿಸಿದರೂ ಹಿಂಗಡೆಯಲ್ಲಿ ತಮ್ಮ ಅತೃಪ್ತಿಯನ್ನು ಚೆನ್ನಾಗಿ ತೋರಿಸುವರು. ಕಳ್ಳತನದ ಕೆಟ್ಟ ಚಟವು ಇದರಿಂದಾಗಿ ಬರುವುದು. ಆದ್ದರಿಂದ ಮಕ್ಕಳ ವಿಷಯ ಹೆತ್ತವರು ಬಹಳ ಜಾಗರೂಕರಾಗಿರುವುದು ಯುಕ್ತ. ಅವರನ್ನು ಪ್ರೀತಿಯಿಂದ ಪಾಲಿಸುವುದರಿಂದ ನಮಗೂ ಸುಖ ಅವರಿಗೂ ಸಂತೋಷ. ಮೃಗಗಳೋ ಪಾದಿಯಲ್ಲಿ ಅವರಿಗೆ ಬಡಿಯಬೇಕೇ. ಸರಿಸ್ವವು ಬೇಡವೆಂಬುದರ ಪರಿವೆಯೂ ಅವರಿಗಿಲ್ಲ. ಆದರೆ ತಮಗೆ ಒಳ್ಳೇದನ್ನು ಮಾಡಿದವರಿಗೆ ಪುನಃ ಒಳ್ಳೇದನ್ನು ಮಾಡಬೇಕೆಂಬ ಬಯಕೆಯು ಅವರಲ್ಲಿ ತುಂಬಾ ಇರುವುದು. ಅದನ್ನು ಹೆತ್ತವರು ಉಪಯೋಗಿಸಬೇಕು. ಒಳ್ಳೇ ವಸ್ತುಗಳನ್ನು ಕೇಳಿದಾಗ ತಂದುಕೊಟ್ಟು ಕೆಟ್ಟ ವಸ್ತುಗಳನ್ನು ತಂದುಕೊಡೆಂದು ಹೇಳಿದಾಗ ಅದನ್ನು ಸಮಾಧಾನಪಡಿಸಿ ತಾನು ಮಾಡಿದ ಉಪಕಾರವನ್ನು ಅದಕ್ಕೆ ತಿಳಿಸಿ, ಅದರ ಮನಸ್ಸನ್ನು ಬೇರೆಕಡೆಗೆ ಹೊರಳಿಸಬೇಕು. ಹೆತ್ತವರ ಇನ್ನೊಂದು ಕೆಟ್ಟ ಬಾಳಿಯೆಂದರೆ ದುರ್ಲಭವಾದ ವಸ್ತುಗಳನ್ನು ತಂದುಕೊಡುವೆನೆಂದು ಹೇಳಿ ಮತ್ತೆ ತಂದುಕೊಡದೇ ಇರುವುದು. ಕೆಲವೊಂದು ವೇಳೆ ತಾಯಂದಿರು ಕೆಲಸದ ಭರದಲ್ಲಿರುವಾಗ ಮಕ್ಕಳು ಬಂದು ಬಾಧೆಕೊಟ್ಟು ಕಾಡಲು ಅವರನ್ನು ಸಮಾಧಾನಿಸಿ ತಿಂಡಿತಿನಸುಗಳನ್ನು ಮಾಡಿಕೊಡುವೆನೆಂದು ಹೇಳಿ ಕಳುಹಿಸುವ ವಾಡಿಕೆ. ಮತ್ತೆ ಮಾತ್ರ ಅದರ ನೆನಪೇ ಇಲ್ಲ. ಸುಳ್ಳು ಹೇಳುವ ಅಭ್ಯಾಸವು ಮಕ್ಕಳಲ್ಲಿ ಹುಟ್ಟಲು ಇದೇ ಕಾರಣ. ನಮಗೆ ಮಾತ್ರ ಆಗ ತಿಳಿಯಲಾರದು. ನಮ್ಮ ಸಂಕಷ್ಟದಿಂದ ಪಾರಾಗಲು ನಾವು ನಮಗೆ ಬೇಕಾದ ಹಾಗೆ ವರ್ತಿಸುತ್ತೇವೆ. ಪೂರ್ವಾಪರ ವಿಚಾರವನ್ನು ನಾವೂ ಮಾಡುವುದಿಲ್ಲ. ಮಕ್ಕಳಲ್ಲಿ ಮಾತ್ರ ಪರರನ್ನು ಅನುಸರಿಸುವ ಅಭ್ಯಾಸವು ಬಹಳವಾಗಿರುವುದು. ಅವು ಸಹ ಕಡೆಗೆ ಸುಳ್ಳು ಹೇಳುವ ಅಭ್ಯಾಸಕ್ಕೆ ತೊಡಗುವುವು. ಮಕ್ಕಳ ವಿಷಯ ಒಳ್ಳೇ ಜಾಗ್ರತೆಯನ್ನು ತೆಗೆದುಕೊಳ್ಳಬೇಕೆಂಬುದು ವಿಹಿತ. ಆದರೆ ಅವರೊಡನೆ ವರ್ತಿಸುವಾಗ ನಾವು ಅವರಿಗಿಂತಲೂ ದೊಡ್ಡವರು, ತಿಳಿದವರು ಎಂದು ತೋರ್ಪಡಿಸದೆ ಅವರ ಸಂಗಾತಿಗಳು, ಸ್ನೇಹಿತರು, ಹಿತಪ್ರಕಾರವಾಗಿರುವವರು ಎಂಬುದನ್ನು ಅವರಿಗೆ ರುಜುಪಡಿಸಬೇಕು. ಮಕ್ಕಳನ್ನು ತಿಳುಗೆಳೊಡನೆ ಹೆಚ್ಚಾಗಿ ವಾಸಿಸಲು ಬಿಡುತ್ತದು ಬಹಳ ಹಾನಿಕರ.

ಅವುಗಳು ಆಳುಗಳ ಭಾಷೆಯನ್ನೂ ರೀತಿನೀತಿಗಳನ್ನೂ ಕಲಿಯುವರು. ಯಾವಾಗಲೂ ತಾಯಿಯ ಬಳಿಯಲ್ಲಿ ಇದ್ದರೂ ಒಳಿತಲ್ಲ. ಇದಕ್ಕಿಂತಲೂ ಒಂದು ಚಿಕ್ಕ ಕೋಣೆಯಲ್ಲಿ ಅವುಗಳಿಗೆ ಬೇಕಾದ ಸಾಮಾನುಗಳನ್ನಿಟ್ಟು ಅದರ ಮೇಲ್ವಿಚಾರಣೆಗೆ ಒಬ್ಬ ಸೇವಕನನ್ನು ಇಡುವುದು ಎಷ್ಟೋ ವಾಸಿ.

"ಕಾಡಿನಲ್ಲಿರುವ ಹೆಣ್ಣು" ಎಂಬುದನ್ನು ಕೇಳಿದಾಕ್ಷಣ ನೀನೆಲ್ಲರೂ ಅವಳ ದೇಹಪ್ರಕೃತಿಯ ವಿಷಯ ತುಂಬಾ ಸಲಹೆಗಳನ್ನೀಯುವಿರಿ. ತಲೆ ತುಂಬಾ ಕೂದಲು, ಬೆಳೆದ ದಪ್ಪವಾದ ಮೈ, ಮೈ ಬಣ್ಣ ಕಪ್ಪು, ರೀತಿನೀತಿಗಳು ಅನಾಗರಿಕವೆಂದು ನೀವೆಲ್ಲ ಭಾವಿಸುವಿರಿ. ಆದರೆ ಮಿಸೆಸ್ ಮೆಕ್'ಟರ್ಕ ಎಂಬವಳನ್ನು ಕಣ್ಣಾರೆ ನೋಡಿದರೆ ನೀವು ಆಶ್ಚರ್ಯಪಡದಿರಿ. ಕಾರಣ ಆವಳು ಎಷ್ಟೋ ವರುಷಗಳಿಂದ ಕಾಡಿನಲ್ಲಿದ್ದರೂ, ತೆಳ್ಳಗಿನ ದೇಹದವಳಾಗಿಯೂ, ಮುಂಗುರುಳುಗಳಿಂದ ಶೋಭಿತಳಾಗಿಯೂ ಇರುವಳು. ಪ್ರಾಯ ಕೇವಲ ೨೪ ವರುಷಗಳು. ತಲೆಗೆ ಒಂದು ಹೇಟನ್ನೂ ಕಾಲಿಗೆ ಒಂದು ಜೊತೆ ಪಾದುಕೆಗಳನ್ನೂ ಧರಿಸುವಳು. ಅವಳ ಹೆತ್ತವರ ವಿರುದ್ಧವಾಗಿ ಅವಳು ಪಶ್ಚಿಮ ವ್ಯಾಪಾರಿಯಾದ ಮೆಕ್'ಟರ್ಕನನ್ನು ಮದುವೆಯಾದಳು. ಈ ತಿಬಂಧಗಳನ್ನು ಅವಳು ತೊರೆಯಬೇಕಾಗಿ ಬಂದರೂ ಗಂಡನ ಪ್ರೀತಿಯನ್ನು ಸಂಪಾದಿಸಿ ಗಂಡನೊಡನೆ ಸುಖಸಂತೋಷದಲ್ಲಿದ್ದಳು. ಆದರೆ ಅಕಸ್ಮಾತ್ ಕೆಲವೇ ವರುಷಗಳಲ್ಲಿ ಅವಳ ಗಂಡನು ತೀರಿದನು. ಗತಿಗೋತ್ರವಿಲ್ಲದವಳಾದರೂ ಹೆದರದೆ ಗಂಡನ ಮನೆಯನ್ನು ಬಿಡದೆ ಬಹಳ ಕಷ್ಟದಿಂದ ಜೀವನ ಮಾಡಿ, ಗಂಡನು ಮಾಡಿದ ಋಣವನು ಸಾಲವನ್ನು ತೀರಿಸಿ ಈಗ ತನ್ನ ನಿಗ್ರೋ ಸೇವಕರೊಡನೆ ಸುಖದಿಂದಿರುವಳು. ಅದೂ ಒಂದು ಕಾಡಿನಲ್ಲಿ.

\+ \+ \+ \+

ಪ್ರತಿಯೊಂದೂ ಧ್ವಂದ್ವಗಳಲ್ಲಿಯೂ ಹೆಂಗುಸರು ಕೆಲಸವನ್ನು ಮಾಡಬಹುದು. ದೇಶೋದ್ಧಾರದ ಕೆಲಸದಲ್ಲೂ ಅವರು ಭಾಗಿಗಳಾಗಬಹುದು. ಆದರೆ ಅವರು ಮಾತ್ರ ಇನ್ನೂ ಮುಂದೊತ್ತಿಬಂದಿಲ್ಲ. ದೇಶವನ್ನು ಉದ್ಧರಿಸಬೇಕೆ? ಹಾಗಾದರೆ ಹಳ್ಳಿಗಳ ಪುನರುಜ್ಜೀವನವಾಗಲಿ. ಕಾರಣ ಹಳ್ಳಿಗಳೇ ಪಟ್ಟಣಗಳ ಜೀವನಾಧಾರ. ಅದ್ದರಿಂದ ಯಾರಾದರೂ ದೇಶೋದ್ಧಾರದ ಕೆಲಸವೆಂದು ಹೇಳಿ ಸುಮ್ಮನೆ ನಗರಗಳಲ್ಲಿ ಮಾತ್ರ ಹೆಣಗಾಡುವುದು ಶ್ರೇಯಸ್ಕರವಲ್ಲ. ಮಹಿಳಾ ವಿಶ್ವವಿದ್ಯಾಲಯದಲ್ಲಿ ಡಾ. ಕಟ್ಟಿಯವರು ಕೊಟ್ಟ ಭಾಷಣದ ಸಾರಾಂಶವೂ ಇದೇ ಆಗಿರುವುದು. ಹೆಂಗಸರೂ ಅನೇಕ ವಿಧಗಳಿಂದ ದೇಶೋನ್ನತಿಯನ್ನು ಗಯ್ಯಬಹುದು. ಮಕ್ಕಳ ಪಾಲನ ಪೋಷಣ, ಶಿಕ್ಷಣ, ಆರೋಗ್ಯ ಕಾಪಾಡುವ ವಿಧಾನ, ಇವನ್ನೆಲ್ಲಾ ಬಹು ನಾಜೂಕಾದ ರೀತಿಯಲ್ಲಿ ಅವರು ಮಾಡಬಹುದು. ಅವರೀಗಲೇ ಒಂದು ಹೊಸ ಸಂಸ್ಥೆಯನ್ನು ಏರ್ಪಡಿಸಿ ತಾವೂ ಕಾರ್ಯರಂಗಕ್ಕೆ ಇಳಿಯುವುದು ಸಾಧುವಾದ ಕೆಲಸ. ಆದರೆ ಒಂದು ದಿನ ಹುಟ್ಟಿ ಎರಡನೇ ದಿನ ಕುಸಿದು ಬೀಳುವ ಸಂಸ್ಥೆಗಳ ಏರ್ಪಾಡು ಮಾತ್ರ ಫಲಕಾರಿಯಾಗದು. ಗಟ್ಟಿಯಾದ, ಚಿರಕಾಲ ಬಾಳುವ, ಆದರಿಂದ ಪರರಿಗೆ ಸುಖವಾಗುವ ಪ್ರಯೋಜನವಾಗುವ ಸಂಸ್ಥೆಗಳನ್ನು ಏರ್ಪಡಿಸಿ ಹಿಂದೂ ದೇಶದ ಉನ್ನತಿಯನ್ನು ಹಾರೈಸಿದರೆ ದೇಶದ ಏಳಿಗೆಯು ಬಹು ಬೇಗನೆ ಆಗುವುದು.

ಒಳ್ಳೆ ಪಾತಿವ್ರತ್ಯ.

ಮುಂಬಾಯಿ ಶ್ರೇಷ್ಠ ನ್ಯಾಯಸ್ಥಾನದಲ್ಲಿ ಒಂದು ಸ್ವಾರಸ್ಯವಾದ ಸಿದ್ಧಾಂತವಾಗಿದೆ. ಒಬ್ಬ ವಿಧವೆ ಪುನರ್ಮದುವೆಮಾಡಿಕೊಂಡಳು. ಆ ಗಂಡನ ಜತೆಯಲ್ಲಿ ಸುಖವಾಗಿದ್ದಾಳೆ. ಇದತ್ತಿಗೂ ಆದರೂ ತನ್ನ ಪೂರ್ವಾಶ್ರಮದ ಗಂಡನ ಆಸ್ತಿಯ ಸಕಲ ಹಕ್ಕು ಬಾಧ್ಯತೆಗಳನ್ನು ಅನುಭವಿಸುತ್ತಲೇ ಇದ್ದಳು. ಸತ್ತ ಗಂಡನ ಬಂಧುಗಳು ಯಾವ ಭಾಗವನ್ನೂ ವ್ಯಕ್ತಿಸ ಆಸ್ತಿಯಿಂದ ಪಡೆಯಲು ಆಕೆಗೆ ಹಕ್ಕಿಲ್ಲವೆಂದು ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡಿದರು. ಹಿಂದೂ ವಿಮರ್ಶೆಗಳಾಗಿ, ನ್ಯಾಯಾಧೀಶರು ಆಕೆಯ ಪಕ್ಷವನ್ನೇ ಸ್ಥಿರಪಡಿಸಿದರು. ಇದು ವಿಚಿತ್ರವಾಗಿ ಕಾಣುತ್ತದೆ. ಸತ್ತವನ ಹೆಂಡತಿಯೂ ಹೌದು ಏಕೆಂದರೆ ಅವನ ಆಸ್ತಿಯನ್ನು ಅನುಭವಿಸುತ್ತಿದ್ದಾಳೆ. ಈಗ ಮತ್ತೊಬ್ಬನ ಹೆಂಡತಿಯೂ ಹೌದು. ಪ್ರತ್ಯಕ್ಷವಾಗಿ ಸಂಸಾರಿಯಾಗಿದ್ದಾಳೆ. ಇದು ಹೇಗೆ ನ್ಯಾಯದೃಷ್ಟಿಯಿಂದ ಒಡಂಬಟ್ಟಿತೋ ಕಾಣೆವು!

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara:—

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

1936

ಇಸವಿಯ

ಶಾರದಾ ಡೈರಿಗಳು

ತಯಾರಾಗಿವೆ!

ಶಾರದಾ ಛಾಪಖಾನೆಗೆ

ಬರೆಯಿರಿ.

[illegible]

[illegible]

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ.	ಆ.	ಪೈ.	ಸಾಮಾನ್ಯ ವಿಜ್ಞಾನ.	ರೂ.	ಆ.	ಪೈ.
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	3	0				
ನಾಲ್ಕನೇ ,,	0	3	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ)

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೊಣಸಿನ ಕಾಳಪ್ಪ.
ಅಗಣ್ಣೆ ಮುದ್ದೆ.
ಇಲಿಗಳ ಥಕ್ಕ ಥೈ.
ಅಂಗಳ ದುಗ್ಗ.
ಗುಡುಗುಡು ಗುಮ್ಮಟ ದೇವರು.
ಜಿದ್ದನ ಓಟ.
(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಆಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ತಯಾರಾಗಿದೆ!

ಗಂ. ಹು. ಸ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೊಲೋಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಅದನ್ನು ಗವರ್ನಮೆಂಟ್ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ:

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್		
ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು		
ಪೆಸೆಂಜರು	ಸಂಜೆ 3-20	ಸಂಜೆ 6-15

"ಸಂಪತ್ತಿನಿಂದ ಆರೋಗ್ಯ ಪಡೆಯಬಹುದು, ಆರೋಗ್ಯದಿಂದ ಸಂಪತ್ತನ್ನು ಪಡೆಯಬಹುದು."

ಆರೋಗ್ಯ ಬೋಧನೆಯು ಜನರಲ್ಲಿ ನಿತ್ಯಲೂ ಆಗತಕ್ಕದು. ನಮ್ಮ ಆಧಿಪತ್ಯದ ಪ್ರತಿ ಒಂದು ಜಿಲ್ಲೆಯನ್ನು ಕ್ಷೇಮಪಾಲನ ಕ್ರಮಗಳನ್ನು ಪ್ರದರ್ಶಿಸುವ ಮಂದಿರಗಳ ಸ್ಥಾಪನೆಯಾಗತಕ್ಕದು. ಇವುಗಳಿಂದ ಆರೋಗ್ಯಪ್ರಚಾರವೂ, ಪ್ರಸಾರಣೆಯೂ ಆಗಬೇಕು. ಪೌಷ್ಟಿಕದ ಕುರಿತು ಆರೋಗ್ಯ ಖಾತೆಯವರು ಹೆಚ್ಚಿನ ಸಮನತೆಗೆದುಕೊಳ್ಳತಕ್ಕದು. ಪೌಷ್ಟಿಕರ ಆಹಾರವೆ ಜನರಿಗೆ ಮೂಲಾಧಾರವಾಗಿದೆ. ಆರೋಗ್ಯಕ್ಕಾಗಿ ಧಾರಳ ಸಂಪತ್ತನ್ನು ವ್ಯಯಿಸತಕ್ಕದು

ಸಾರ್ವಜನಿಕ ಆರೋಗ್ಯದಲ್ಲಿ ನಮಗೂ, ಪಾಶ್ಚಾತ್ಯರಿಂಗೂ ಅಷ್ಟು ಭೇದವಿರಲು ಕಾರಣವೇನು? ಕ್ಷೇಮರಕ್ಷಣಾ ಸಂಸ್ಥೆಗಳು ಜಯಶೀಲವಾಗಿ ನಡೆದು ಸಾಂಕ್ರಮಿಕ ರೋಗಗಳನ್ನು ಸಂಪೂರ್ಣ ಪ್ರತಿವಿಧಾನಿಸುವ ಕಾರ್ಯವು ಅಲ್ಲಿ ಸಾಂಗವಾಗಿ ನಡೆಯುತ್ತದಲ್ಲದೆ, ವೈದ್ಯಕೀಯ ಜ್ಞಾನದಿಂದ ರೋಗಗಳನ್ನು ತಿಳಿದವರಾಗಿ, ಅವುಗಳನ್ನು ಮೂಲದಲ್ಲಿ ನಾಶಮಾಡುವ ಔಷಧ ಉಪಕರಣಗಳನ್ನು ಸೃಷ್ಟಿಸಿರುತ್ತಾರೆ ಮಾತ್ರವಲ್ಲ ಪ್ರಜೆಗಳು ಆರೋಗ್ಯಖಾತೆಯವರೊಡನೆ ಸಂಪೂರ್ಣ ಸಹಕರಿಸುತ್ತಿದ್ದಾರೆ ಜನರ ಜೀವಮಾನವು ಉತ್ತಮ ಸ್ಥಿತಿಯನ್ನು ಹೊಂದುತ್ತಿರುವಾಗ ಅದರೊಂದಿಗೆ ಅವರ ಆರೋಗ್ಯ ಜ್ಞಾನವು (ರೋಗಗಳ ಅರಿವು-ಪ್ರತಿವಿಧಾಯಿಸಲು) ವೃದ್ಧಿಹೊಂದುತ್ತಾ ಇದೆ ನವರೀತಿಯ ವಿಜ್ಞಾನಯುಕ್ತ ಕ್ಷೇಮರಕ್ಷಣಾ ವಿಧಾನಗಳು ಮೊಳೆದೋರಿವೆ ಹಳೆ ಪದ್ಧತಿಗಳು ನಾಶಹೊಂದಿವೆ ಕ್ಷೇಮ ರಕ್ಷಣಾ ವಿಧಾನಗಳನ್ನು ಪ್ರದರ್ಶನ ರೂಪದಲ್ಲಿ ವ್ಯಕ್ತಮಾಡಿದರೆ ಭಾರತೀಯರು, ಅವುಗಳನ್ನು ಸುಲಭವಾಗಿ ತಿಳಿದುಕೊಳ್ಳುವರು ಆರೋಗ್ಯ ವಿದ್ಯಾಭ್ಯಾಸದಲ್ಲಿ ಇವರಿಗೆ ತುಂಬಾ ಆಸಕ್ತಿ ಇದೆ ' ಎಂದು ಪಾಶ್ಚಾತ್ಯರೊಬ್ಬರ ಮತ. ಭಾರತೀಯರು, ತಮ್ಮ ಶಾಸ್ತ್ರಗಳನ್ನು ಮರೆತಿದ್ದುದರಿಂದಲೆ ಹಿಂದೂ ದೇಶದ ಆರೋಗ್ಯವು ಈಗಿನ ಸ್ಥಿತಿಗೆ ಬಂದಿರುತ್ತದೆ ವಿದ್ಯಾಭ್ಯಾಸವೇ ಆರೋಗ್ಯದ ತಳಹದಿ

ರಾಜಕೀಯ ವಾತಾವರಣದಲ್ಲಿ ಆರೋಗ್ಯ ವಿಚಾರಕ್ಕೆ ಮುಖ್ಯಸ್ಥಾನವನ್ನು ಕೊಡತಕ್ಕದ್ದು ಆರೋಗ್ಯಪಾಲನೆಗೆ ಕಾನೂನ ಕ್ರಮಗಳಾಗಬೇಕು ವಿದ್ಯಾಖಾತೆಯವರು, ಕ್ಷೇಮರಕ್ಷಣಾ ಶಾಸ್ತ್ರವನ್ನು ಒಂದು ವಿಷಯವನ್ನಾಗಿ ತೆಗೆದುಕೊಳ್ಳಬೇಕು ತರಬೇತು ಹೊಂದಿದವರಿಗೆ ಯೋಗ್ಯತೆಗೆ ಅನುಸಾರವಾಗಿ ಪದವಿಗಳನ್ನು ಕೊಡಬೇಕು ವೈದ್ಯಕೀಯ ವಿದ್ಯಾರ್ಥಿಯ ತರಬೇತಿನಲ್ಲಿ ಕ್ಷೇಮ ರಕ್ಷಣಾ ಜ್ಞಾನಾಭಿವೃದ್ಧಿಯಾಗತಕ್ಕದು ಅಲ್ಲಲ್ಲಿ ನಮ್ಮ ಮದ್ರಾಸ ವಿಶ್ವವಿದ್ಯಾಲಯದವರು ಈ ವ್ಯವಸ್ಥೆಗಳನ್ನು ಮಾಡಿರುತ್ತಾರೆ ಧಾರಾಳ ಜನರು ಅಲ್ಲಿ ಅನುಭವ ಪಡೆದು, ಈಗ ಆಧಿಪತ್ಯದ ಹಲವು ಸ್ಥಳೀಕ ಸಂಸ್ಥೆಗಳ ಅಡಿಯಲ್ಲೂ ಸರಕಾರದ ಅಡಿಯಲ್ಲೂ ಕಾರ್ಯಸತ್ತಿದ್ದಾರೆ

ಪ್ರಥಮದಲ್ಲಿ ಒಂದು ಜಿಲ್ಲೆಯ ಆರೋಗ್ಯ ಖಾತೆಯು ಜಿಲ್ಲಾ ಸರ್ಜನರ ಕೈಯಲ್ಲಿತ್ತು ಇವರ ಸಹಾಯಕ ಸರ್ಜನರು ಆರೋಗ್ಯದ ಕುರಿತು ಜಾಗ್ರತೆ ತೆಗೆದುಕೊಳ್ಳಬೇಕಾಗಿ ನಿಯಮಗಳಿದ್ದುವು ಆದರೆ, ನರಳುವ ರೋಗಿಗಳ ಉಪಶಮನದಲ್ಲಿ ಮಗ್ನರಾದ ಇವರು, ರೋಗಗಳನ್ನು ಪ್ರತಿವಿಧಾಯಿಸುವ ಕಡೆಗೆ ಹೆಚ್ಚಿನ ಗೋಚರವಿಡಲು ಸಾಧ್ಯವಾಗಲಿಲ್ಲ ನಂತರ, ಈ ಕಷ್ಟನಿವಾರಣೆಗಾಗಿ, ಮದ್ರಾಸು ಸರಕಾರದಲ್ಲಿ ಒಂದು ಸ್ವತಂತ್ರ ಆರೋಗ್ಯಖಾತೆಯ ಸ್ಥಾಪನೆಯಾಯಿತು ಪ್ರಾಂತ್ಯದ ಎಲ್ಲಾ ನಗರಸಭೆಗಳಿಗೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಕ್ಷೇಮರಕ್ಷಣಾ ಸಿಬಂಧಿಯನ್ನು ನೇಮಿಸಲು ಅಪ್ಪಣೆಗಳು ಹೊರಟವು ಜಿಲ್ಲಾ ಹೆಲ್ತ್ ಆಫೀಸರರೂ, ಮುನ್ಸಿಪಲ್ ಹೆಲ್ತ್ ಆಫೀಸರರೂ ಡೈರೆಕ್ಟರ್ ಒಫ್ ಪಬ್ಲಿಕ್ ಹೆಲ್ತ ಮತ್ತು ಅವರ ಸಹಾಯಕ ಉದ್ಯೋಗಸ್ಥ ಮಂಡಲಿಯು ಕೆಳಗೆ ನೇಮಕ ಹೊಂದಿದರು ಒಂದು ದೇಶದ ಆರೋಗ್ಯವನ್ನು ಅಲ್ಲಿನ ಸಂಪತ್ತಿನ ಮೇಲೆ ಹೊಂದಿಕೊಂಡಿದೆ ಆರೋಗ್ಯವನ್ನು ಕ್ರಯಕ್ಕೆ ಪಡಕೊಳ್ಳತಕ್ಕದು ಒಂದು ಜನಾಂಗವು ಆರೋಗ್ಯವಂತಾಗಬೇಕಾದರೆ ಐಶ್ವರ್ಯವಂತಾಗಿರಬೇಕು

ನಮ್ಮ ಸರಕಾರವು ಈಗ ಪ್ರೌಢ ವಿದ್ಯಾಭ್ಯಾಸಕ್ಕೆ ವಿಶೇಷವಾಗಿ ವ್ಯಯಿಸುವುದು ಸ್ವಲ್ಪ ಕಡಿಮೆಮಾಡಿ ಪ್ರಜೆಗಳ ಆರೋಗ್ಯರಕ್ಷಣೆಗೆ ಈ ದ್ರವ್ಯವನ್ನು ಉಪಯೋಗಿಸಬಹುದು ವಿಶ್ವವಿದ್ಯಾಲಯದಲ್ಲಿ ಅನಾರೋಗ್ಯವಂತ ವಿದ್ಯಾರ್ಥಿಗಳಲ್ಲಿ ಕಠಿಣ ವಿದ್ಯೆಯನ್ನು ಸೇರಿಸುತ್ತಿದ್ದರೆ ಪೂರ್ಣ ಭರತಖಂಡದ ಸ್ಥಿತಿ ಇದಾಗಿರುತ್ತದೆ ಇದುದರಿಂದ ಹಣಕ್ಕಾಗಿ ಕಷ್ಟಪಡುತ್ತಿರುವ ನಮ್ಮ ಸರಕಾರವು ವಿಶ್ವವಿದ್ಯಾಲಯದವೆಚ್ಚದಲಿ ಒಂದಿಷ್ಟು ಉಳಿಸಿದ ಹೊರತು ಈ ಆರೋಗ್ಯ ಖಾತೆಯನ್ನು ಯೋಗ್ಯ ರೀತಿಯಲ್ಲಿ ನಡೆಸಲು ಸಾಧ್ಯವಾಗದು ಸರಕಾರವು ಈಗಿನ ಕ್ರಮವನ್ನೆ ಅನುಸರಿಸುವುದಾದರೆ ಒಂದೆಡೆ ಧಾರಳ ಹಣವು ಅನಾವಶ್ಯಕವಾಗಿ ವ್ಯಯವಾಗುತ್ತಿರುವಾಗ ಇನ್ನೊಂದೆಡೆ ಹಣವಿಲ್ಲದೆ ಒಂದುಮುಖ್ಯ ಇಲಾಖೆಯು ಸರಿಯಾಗಿ ಕೆಲಸ ನಡೆಯದು

ಪುಷ್ಟಿಕರವಲ್ಲದ ಆಹಾರದಿಂದ ಜನಂ ತೇಜಸ್ಸು ಕಡಿಮೆಯಾಗಿ ಅವರು ರೋಗಗಳಿಗೆ ತುತ್ತಾಗುವರು ರೋಗದಿಂದ ಬಡವರಾಗುವರು ಬಡತ್ನಿಕೆಯೆ ಇದಕ್ಕೆ ಕಾರಣವಲ್ಲ ಕಲಬನ್ನು ಹೆಚ್ಚಿಸಿದ ಮಾತ್ರಕ್ಕೆ ಜನರ ಪೌಷ್ಟಿಕರ ಆಹಾರವನ್ನು ತೆಗೆದ ಕೊಳ್ಳಲಾರರು ವಿದ್ಯಾಭ್ಯಾಸದೊಂದಿಗೆ ಪೌಷ್ಟಿಕರ ಆಹಾರ ವಿಜ್ಞಾನ ಪ್ರಸಾರವಾಗತಕ್ಕದ ನಮ್ಮ ಮದ್ರಾಸ ಸರಕಾರದವರು ಈ ವಿಚಾರದಲ್ಲಿ ಹೆಚ್ಚಿನ ಗಮನ ತೆಗೆದ ಕೊಂಡ ಹಾಗೆ ಕಾಣುವುದಿಲ್ಲ

ಆರೋಗ್ಯ ವಿಚಾರದಲ್ಲಿ ಹಿಂದೂದೇಶದಲ್ಲಿ ನಮ್ಮ ಪ್ರಾಂತ್ಯವು ಮುಂದ ವರಿದಿದೆ ಸಾಂಕ್ರಮಿಕ ರೋಗಗಳ ಉಪಶಮನ ಮತ್ತು ಅವುಗಳಿಗೆ ಪ್ರತಿಕ್ರಿಯೆ ಮಾಡುವ ಔಷಧಿಗಳನ್ನು ತಯಾರಿಸುವ ಶೋಧನಾಲಯಗಳು ಉತ್ತಮ ವಿಜ್ಞಾನಿಗಳ ಅಧಿಕಾರಂತರ ನಾಗಳಿಂದ ಯೋಗ್ಯ ರೀತಿಯಲ್ಲಿ ನಡೆಯುತ್ತಿವೆ ಆದರೆ ಪೌಷ್ಟಿಕ ಶೋಧನಾಲಯ ಕೂಲಗಿರಿಯಲ್ಲಿ ಸ್ಥಾಪನೆ ಮಾಡಿರುತ್ತಾರೆ ಇದನ್ನು ಕೇಂದ್ರ ಸ್ಥಳವಾದ ಮದ್ರಾಸು ಪಟ್ಟಣಕ್ಕೆ ವರ್ಗಾಯಿಸಿ, ಅಲ್ಲಿ ಮೆಡಿಕಲ್ ಕೋಲೇಜು ವೈದ್ಯಕೀಯ ಇಲಾಖೆ ಆರೋಗ್ಯಇಲಾಖೆ ಮೊದಲಾದ ಅದಕ್ಕೆಸಂಬಂಧಪಟ್ಟ ಇಲಾಖೆಗಳೊಡನೆ ಸಹಕರಿಸಿ, ಪೌಷ್ಟಿಕದ ಕುರಿತು ಪ್ರಸಾರಣೆ ಕಾರ್ಯವನ್ನು ಮಾಡತಕ್ಕದು ಆರೋಗ್ಯಖಾತೆಯವರು, ಪ್ರಜೆಗಳು ಪೌಷ್ಟಿಕರ ಆಹಾರವನ್ನು ಸೇವಿಸುವಂತೆ ಕ್ರಮಪಡೆಯಬೇಕು

ಆರೋಗ್ಯಶಾಸ್ತ್ರ ಮತ್ತು ಕ್ಷೇಮಪಾಲನಾ ಶಾಸ್ತ್ರಕ್ಕೆ ಸಂಬಂಧವಿದೆ ಆಕ್ಕದ ಮತ್ತು ಮನಸ್ಸಿನ ನಿರ್ಮಲತೆ ಕುರಿತು ಪ್ರೇರೇಪಿಸುವ ಮತಗಳಲ್ಲಿ ಆರೋಗ್ಯದ ಕುರಿತು ಬೋಧೆಗಳಿಲ್ಲವೆ? ಆರೋಗ್ಯ ಕುರಿತು ಬೋಧನೆ ನಿತ್ಯಲೂ ನಡೆಯತಕ್ಕದು, ಕ್ಷೇಮರಕ್ಷಣಾವಿಧಿಗಳ ಪ್ರದರ್ಶನ ಮಂದಿರಗಳನ್ನು ಪ್ರತಿಜಿಲ್ಲೆಗಳಲ್ಲಿ ಸ್ಥಾಪಿಸಬೇಕು. ಅವುಗಳಿಗೆ ಪ್ರಸಾರಣೆ ಮತ್ತು ಪ್ರಕಟಣೆ ಕೆಲಸಕ್ಕೆ ಕಾಯಂ ಸಿಬಂಧಿಯು ಇರತಕ್ಕದು. ಈ ಆರೋಗ್ಯ ದೇವಾಲಯಗಳಿಗೆ ಜನರನ್ನು ಆಕರ್ಷಿಸುವಂತೆ ಮಾಡತಕ್ಕದು ಜನರು ಇಲ್ಲಿಗೆ ಯಾತ್ರೆಮಾಡಿ, ಆರೋಗ್ಯವನ್ನು ದುಡಿಯುವ ಕ್ರಮಗಳನ್ನು ಕಲಿಯುವಂತಾಗಬೇಕು "ರೋಗದ ಉಪಶಮನಕ್ಕಿಂತ ಅದರ ಪ್ರತಿವಿಧಾನವೆ ಶ್ರೇಷ್ಠವಾದುದು" ಎಲ್ಲಾ ಶಾಲೆಗಳಲ್ಲಿ ಕ್ಷೇಮಪಾಲನ ಶಾಸ್ತ್ರದಲ್ಲಿ ಪಾಠಗಳಿರಬೇಕು. ವಿದ್ಯಾಭ್ಯಾಸವು ಜ್ಞಾನಸಾಧನೆ ಸಾಧಿಸುತ್ತಿರುವಾಗ, ಈ ಜ್ಞಾನವು ಆರೋಗ್ಯ ಪಡೆಯುವಂತೆ, ಉಪಯೋಗಿಸತಕ್ಕದಾಗಬೇಕು ಆರೋಗ್ಯವಿಲ್ಲದ ಜ್ಞಾನಿಯು ದೇಶಕ್ಕೆ ಯಾವ ಸೇವೆ ಮಾಡಬಲ್ಲನು?

ವರ್ಷಂಪ್ರತಿ ಧಾರಳ ತರುಣರು, ವಿವಿಧ ವಿಷಯಗಳಲ್ಲಿ ಪರೀಕ್ಷೆಗಳನ್ನು ಕೊಟ್ಟು, ಪದವೀಧರರಾಗಿ, ನಿರುದ್ಯೋಗದ ಬಾಯಿಗೆ ತುತ್ತಾಗುತ್ತಿದ್ದಾರೆ ವೈದ್ಯಕೀಯ ಪದವಿಪಡೆದವರನೇಕರು ಹಳ್ಳಿಗಳನ್ನು ಸೇರಿ, ಅಲ್ಲಿ ಜನಸೇವೆ ಮಾಡಿ, ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ ಇಲ್ಲಿಗೆ ನ್ಯಾಯಶಾಸ್ತ್ರಗಳನ್ನು ಕಲಿತ ವಕೀಲರು ಕೂಡ ಯಾಕೆ ಹೋಗಬಾರದು ಕೆಲವು ಹಳ್ಳಿಗಳಲ್ಲಿ ಶಾಲೆಗಳೇ ಇಲ್ಲ ವಿದ್ಯಾವಂತರಾದ ಕೆಲವು ಯುವಕರು ಹಳ್ಳಿಗಳನ್ನು ಸೇರಿ ಶಾಲೆಗಳನ್ನು ಸ್ಥಾಪಿಸಿ ವಿದ್ಯಾಪ್ರಚಾರ ಮಾಡುತ್ತಾ ಹೀಗೆ ತಮ್ಮ ಜೀವನವನ್ನು ಸಾಗಿಸಬಹುದು ಅಂತೆಯೆ ಸಾಗುವಳಿ ಪದವೀಧರರಿಗೂ ಇದೆ ವಿವಿಧ ಪದವೀಧರರಿಗೂ ಹಳ್ಳಿಗಳಲ್ಲಿ ಸ್ಥಾನವಿದೆ ಈ ರೀತಿ ನಮ್ಮ ಯುವಕರು ಸೇರಿ ಗ್ರಾಮೋದ್ಧಾರದ ಕೆಲಸವನ್ನು ಯೋಗ್ಯ ರೀತಿಯಲ್ಲಿ ನಡೆಯಿಸಬಹುದು ದೇಶಕ್ಕೆ ಆರೋಗ್ಯವನ್ನು ತರಬಹುದು ಪ್ರಜೆಗಳ ಸಂತುಷ್ಟಿಗೆ ಚಿರಕಾಲ ಬಾಳುವಂತೆ ಸಾಧಿಸಬಹುದು

ಖಾದಿ ಮತ್ತು ಗ್ರಾಮ ಕೈಗಾರಿಕೆ ಪ್ರದರ್ಶನ

ಅಧ್ಯಕ್ಷರು—ಶ್ರೀ ಸಿ ವೆಂಕಟಪ್ಪ ಎಂ ಎಲ್ ಸಿ
ಕಾರ್ಯದರ್ಶಿ—ಶ್ರೀ ಕೆ ಎ ವೆಂಕಟರಾಮಯ್ಯ ಬಿ ಎ
ಕೋಶಾಧ್ಯಕ್ಷರು—ಶ್ರೀ ಕೆ ... ಬಿ ಎ

ಇದೇ ದಶಂಬರ ಕಡೇ ವಾರ ಬೆಂಗಳೂರು ನಗರದಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆ ಪ್ರದರ್ಶನವೊಂದನ್ನು ಏರ್ಪಡಿಸಲು ನಿರ್ಧಾರವಾಗಿದೆ ಹಳ್ಳಿಯ ಜನತೆಯ ಆರ್ಥಿಕ ಸುಧಾರಣೆಗೆ ಅವಶ್ಯಕವಾದ ಹಳ್ಳಿ ಕೈಗಾರಿಕೆಗಳ ಕಡೆಗೆ ಸಾರ್ವಜನಿಕ ದೃಷ್ಟಿಯನ್ನು ತಿರುಗಿಸುವುದೇ ಪ್ರದರ್ಶನದ ಉದ್ದೇಶ ಗ್ರಾಮಾಂತರ ಪ್ರದೇಶಗಳಿಗೊಪ್ಪುವ ಕೈಕಸಬುಗಳು ಗ್ರಾಮ ಸಂಘಟನಾ ಕಾರ್ಯಕ್ರಮಗಳಲ್ಲಿ ಅವುಗಳ ಸ್ಥಾನ ಮಹತ್ವಗಳೂ ಸರಕಾರದ ಮತ್ತು ಸಾರ್ವಜನಿಕ ಮುಂದಾಳುಗಳ ಲಕ್ಷ್ಯವನ್ನು ಇಂದ ಹೆಚ್ಚು ಹೆಚ್ಚಾಗಿ ಸೆಳೆಯುತ್ತಿವೆ

ಗಿರಣಿ ಕಾರ್ಖಾನೆಗಳ ಮತ್ತು ಸ್ವದೇಶೀ ವಸ್ತುಗಳ ಪ್ರದರ್ಶನಗಳ ಆಗಾಗ್ಗೆ ನಡೆಯುತ್ತಿವೆ ಆದರೆ ಬೇಸಾಯಗಾರರ ಆನುಷಂಗಿಕ ಸಂಪಾದನೆಯ ಆಸ್ಥೆಯಲ್ಲಿ ಒಂದೆರಡಾಣೆಗಳನ್ನಾದರೂ ಸಂಪಾದಿಸಿಕೊಟ್ಟು ಅವರ ನಿರುದ್ಯೋಗವನ್ನು ಸ್ವಲ್ಪ ಮಾತ್ರವಾದರೂ ನಿವಾರಿಸಿ ಚೈತನ್ಯದಾಯಕವಾಗಬಹುದಾದ ಮತ್ತು ಸದ್ಯಸ್ಥಿತಿಯಲ್ಲಿ ಅರ್ಧವಾಗಿಯೋ ಪೂರ್ಣವಾಗಿಯೋ ಗುಪ್ತವಾಗಿರುವ ಕೈಕಸಬುಗಳ ಪ್ರಯೋಜನ ಮಹತ್ವಗಳನ್ನು ಮಹಾಜನರಿಗೆ ತಿಳಿಸಿ, ಅಂಥ ಕಸಬುಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಮಹಾಜನಗಳ ಅಸಕ್ತ್ಯಭಿಮಾನಗಳನ್ನು ಉತ್ತೇಜಿಸಲು ಇದೇ ಮೊದಲನೆ ಪ್ರಯತ್ನವಾಗಿದೆ ಹಳ್ಳಿ ಕೈಗಾರಿಕೆಗಳನೇಕವಾಗಿ ದೇಶೀ ಅಥವಾ ವಿದೇಶೀ ಕಾರ್ಖಾನೆಗಳ ಸ್ಪರ್ಧೆಯ ಪರಿಣಾಮವಾಗಿ ಜೀವಸಹಿತ ಉಳಿಯುವುದೇ ಕಷ್ಟವಾಗಿದೆ ಕೆಲವು ಆಗಲೇ ಕಣ್ಮರೆಯಾಗಿಹೋಗಿವೆ. ಈ ಉಪಯುಕ್ತ ಮತ್ತು ಯೋಗ್ಯ ಕೈಗಾರಿಕೆಗಳಿಗೆ ಎಲ್ಲ ವಿಧದಿಂದ ಪ್ರೋತ್ಸಾಹವನ್ನೂ ರಕ್ಷಣೆಯನ್ನೂ ಹೆಚ್ಚು ಹೆಚ್ಚಾಗಿ ಕೊಡಬೇಕಾದ್ದು ಅಗತ್ಯವೆಂದು ಧಾನ್ಯದ ಹಿತಚಿಂತಕರೆಲ್ಲರೂ ಏಕಮತದಿಂದ ಒಪ್ಪುತ್ತಾರೆ ಕೈಗಾರಿಕೆಗಳು ಅಲ್ಪ ಪರಿಣಾಮ ಕಾರಕವಾಗಿ ತೋರಿ, ಸಣ್ಣ ಮಾನದಿಂದ ನಡೆಯುವವಾದರೂ ಒಟ್ಟಿನಲ್ಲಿ ಇಡೀ ದೇಶದ ದೃಷ್ಟಿಯಿಂದ ಅವುಗಳ ಉತ್ಪನ್ನದ ಮೊತ್ತವು ಬಹಳ ದೊಡ್ಡದೆಂಬ ಮಾತು ನಿರ್ವಿವಾದವಾದುದು ಆದ್ದರಿಂದ ಈ ಪದ್ಧತಿಯಲ್ಲಿ ಗ್ರಾಮ ಕೈಗಾರಿಕೆಗಳ ವಿಸ್ತೃತ ಪ್ರಚಾರವು ಅತ್ಯಗತ್ಯ, ಮತ್ತು ಎಲ್ಲ ದೇಶಾಭಿಮಾನಿಗಳ ಸಹಾನುಭೂತಿಯುಕ್ತ ಪ್ರೋತ್ಸಾಹವು ಅತ್ಯಂತ ಅವಶ್ಯ

ಈ ಪ್ರಯತ್ನವು ಯಶಸ್ವಿಯಾಗುವಂತೆ ನೆರವೇರಿಸುವುದರಲ್ಲಿ ಎಲ್ಲ ದೇಶಭಕ್ತರ, ಮುಖ್ಯವಾಗಿ ಗ್ರಾಮ ಕೈಗಾರಿಕೆಗಳಲ್ಲಿ ಸಹಾನುಭೂತಿ ಸಂಬಂಧವುಳ್ಳ ಮಹನೀಯರ ಸಹಕಾರವನ್ನೂ ಸಹಾಯವನ್ನೂ ಪ್ರದರ್ಶನ ಸಮಿತಿಯವರು ಕೃತಜ್ಞತೆಯಿಂದ ಸ್ವೀಕರಿಸುತ್ತಾರೆ ಗ್ರಾಮ ಕೈಗಾರಿಕೆಗಳಲ್ಲಿ ಉದ್ಯುಕ್ತರಾದವರು ತಮ್ಮ ಸಾಮಾನುಗಳನ್ನು, ಬಂಡವಾಳ, ತಯಾರಿಕೆಯ ವೆಚ್ಚ, ಕೆಲಸಗಾರರ ಸಂಖ್ಯೆ, ಕೆಲಸಗಾರರ ಸಂಪಾದನೆ, ಮೊದಲಾದ ಯೋಗ್ಯ ಮಾಹಿತಿಗಳ ಸಹಿತ, ಪ್ರದರ್ಶನ ಸಮಿತಿಯವರು ವಿನಂತಿ ಮಾಡಿಕೊಳ್ಳುತ್ತಾರೆ ಗ್ರಾಮ ಕೈಗಾರಿಕೆಗಳಲ್ಲಿ ಆಸಕ್ತರಾದವರು ತಮಗೆ ಗೊತ್ತಿರುವ ಕಸಬುದಾರರ ವಿಳಾಸವನ್ನು ನಮಗೆ ಕಳುಹಿಸಬೇಕೆಂದೂ, ಸದರೀ ಕಸಬುದಾರರು ತಮ್ಮ ಸಾಮಾನುಗಳನ್ನು ಕಳುಹಿಸಬೇಕೆಂದೂ ವಿನಂತಿಯಿದೆ, ಅಲ್ಲದೆ ಮಹಾಜನರು ಪ್ರದರ್ಶನವನ್ನು ಯಶಸ್ವೀ ಮಾಡಲು ಅವಶ್ಯವೆಂದು ಕಳಿಸಬಹುದಾದ ವಿಶೇಷ ಮಾಹಿತಿಗಳೂ ಸೂಚನೆಗಳು ಕೃತಜ್ಞತಾಪೂರ್ವಕ ಅಂಗೀಕರಿಸಲ್ಪಡುತ್ತವೆ .

ಪ್ರದರ್ಶನವು ಹೆಚ್ಚು ಬೋಧಪ್ರದವಾಗಬೇಕೆಂದು ಸಾಧ್ಯವಾದ ಮಟ್ಟಿಗೆ ಎಲ್ಲ ಕೈಕಸಬುಗಳ ಬೇರೆ ಬೇರೆ ಹಂತ ಅಥವಾ ಸಿದ್ಧತೆಯ ಮೆಟ್ಟಲುಗಳನ್ನೂ ಉಪಾಯಗಳನ್ನೂ ಪ್ರದರ್ಶಿಸುವ ವ್ಯವಸ್ಥೆಯಾಗಿದೆ ಆದ್ದರಿಂದ ಕೆಲಸಗಾರರು ತಮ್ಮ ಉಪಕರಣಗಳ ಸಮೇತ ಒಬ್ಬ ತಂತಮ್ಮ ಕೈಕಸಬುಗಳ ಕ್ರಮಗಳನ್ನು ಕಾರ್ಯತಃ ಮಾಡಿ ಪ್ರದರ್ಶಿಸಬೇಕೆಂದು ಕೋರಿದೆ

ಇತರ ಮಾಹಿತಿಗಳಿಗಾಗಿ

ಕಾರ್ಯದರ್ಶಿ,
ಖಾದಿ ಮತ್ತು ಗ್ರಾಮ ಕೈಗಾರಿಕೆ ಪ್ರದರ್ಶನ,
ಖಾದಿ ಮಳ್ಳಿಗೆಯ ಕೋಟೆ ಬೆಂಗಳೂರು ಸಿಟಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 222/1935.

ಕೆ ವಿಷ್ಣುಭಟ್ಟ—ಅರ್ಜಿದಾರ

ಮತ್ತು

1 ವೆಂಕಪ್ಪ ಭಟ್ಟ, 2 ಗೋಪಾಲಕೃಷ್ಣ ಭಟ್ಟ ವಗೈರೆರು 8 ಲಕ್ಷ್ಮಿ ಅಮ್ಮ—ರೆಸ್ಪಾಂಡೆಂಟರು—ಕುಂಬಡಾಜೆ ಗ್ರಾಮ

ಇವರೊಳಗೆ—

ಅರ್ಜಿದಾರ ಮತ್ತು ವಗೈರೆರು 1-2ನೇ ರೆಸ್ಪಾಂಡೆಂಟರ ತಂದೆ ವ 8ನೇ ರೆಸ್ಪಾಂಡೆಂಟಳ ಗಂಡ ಮೃತಪಟ್ಟ ಕೇಶವ ಭಟ್ಟರಿಗೆ ಸಿಕ್ಕತಕ್ಕ ತೀರಿಕ್ಕಾಡ Aided ಸ್ಕೂಲಿನ ಗ್ರೇಂಟ್ ಬಾಬ್ತು ರೂ 275—0—0ನ್ನು ಪಡಕೊಳ್ಳುವರೆ ತಾನು ಹಕ್ಕುದಾರನೆಂಬುದಕ್ಕೆ ಸಕ್ಸೆಶನ್ ಸರ್ಟಿಫಿಕೇಟು ಅಪೇಕ್ಷಿಸಿ ಸದ್ರಿ ಅರ್ಜಿದಾರನು ಸದ್ರಿ ಕೋರ್ಟಿನಲ್ಲಿ ಅರ್ಜಿಯನ್ನು ದಾಖ್ಲೆಮಾಡಿರುತ್ತಾನೆ ಸದ್ರಿ ಅರ್ಜಿಯು ತಾ 18-12-'35ಕ್ಕೆ ತನಿಕೆಗೆ ಇಟ್ಟಿರುತ್ತದೆ ಆ ಕುರಿತು ಆಕ್ಷೇಪವಿದ್ದವರು ಸದ್ರಿ ತಾರೀಕಿಗೆ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ತಮ್ಮ ಆಕ್ಷೇಪಗಳನ್ನು ನಿವೇದಿಸತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು, K. R. Dandillaya B.A.B.L.
29-11-'35 Vakil, Kasaragod.

ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 ೬ 0 6 ಔನ್ಸ್ ರೂ 0 11-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ಶೀಘ್ರ ಗುಣಕಾರಿ

4 ಔನ್ಸ್ ರೂ 1-0-0 8 ಔನ್ಸ್ ರೂ 1-೬-0

ದಕ್ಷಿಣ ಕನ್ನಡದ ಏಜಂಟರು ಪ್ರೊಪ್ರೈಟರ ಸ್ಟೋರ್ಸ್, ಮಂಗಳೂರು.

BEHAR CHEMICAL WORKS,
Bhagalpur.

ಬಿ. ಸಿ ರಸಾಯನಿಕ ವೈದ್ಯಶಾಲೆಯ
ಚ್ಯವನ ಪ್ರಾಸ ಲೇಹ್ಯ.

ದಣಿದ ಶರೀರದ ಮೇಲೆ ಅತ್ಯುಪಯೋಗಕರವಾದ ಶಕ್ತಿವರ್ಧಕ ಹಾಗೂ, ಮೆದುಳನ್ನು ಬೆಳೆಸುವ ಪೌಷ್ಟಿಕ ಸಾಧನ

ಸೀತ, ನೆಗಡಿ, ಕೆಮ್ಮು, ಗೂರಲು, ಸ್ವರಭಂಗ, ಎದೆಯ ನೋವು, ಕ್ಷಯ ವಿಕಾರದ ಮೇಲೆ ಈ ದಿವ್ಯೌಷಧಿಯ ವಿಷಯವಾಗಿ ಚವನ ಋಷಿಗಳು ಇದರ ಗುಣವನ್ನು ಬಹುತೇಕವಾಗಿ ವರ್ಣಿಸಿರುವುದರಿಂದಲೂ ಎಷ್ಟೋ ರಾಜರುಗಳು ಇದನ್ನು ಶಾಸ್ತ್ರೋಕ್ತವಾಗಿ ತಯಾರಿಸುವುದರಿಂದಲೂ, ಇದರಲ್ಲಿ ಸಡಿಲಿದ ಸ್ನಾಯುಗಳನ್ನು ಬಲಪಡಿಸುವ ಅಸದೃಶವಾದ ಬಲವರ್ಧಕ ಶಕ್ತಿ ಇರುವುದರಿಂದಲೂ ಇಂಗ್ಲೀಷು ಮತ್ತು ಆಯುರ್ವೇದೀಯ ಡಾಕ್ಟರುಗಳು ಇದನ್ನು ಅನೇಕ ವ್ಯಾಧಿಯ ಮೇಲೆ ಉಪಯೋಗಿಸಿ ಉತ್ತಮ ರೀತಿಯ ಗುಣ ಕಂಡ ದಾಖಲೆಗಳನ್ನು ಪಡೆದಿರುವುದರಿಂದಲೂ ಮಕ್ಕಳ ಅನೇಕ ತರದ ರೋಗಗಳ ಮೇಲೆ ಈ ಔಷಧಿಯು ಸಂಜೀವನ ಪ್ರದವಾಗಿರುವುದರಿಂದಲೂ ಹೆಂಗಸರೂ ಗಂಡಸರೂ ಶಕ್ತಿವರ್ಧಕವಾದ ಈ ಔಷಧಿಯನ್ನು ಒಮ್ಮೆ ಪರೀಕ್ಷಿಸಲೇ ಬೇಕು.

1 ತಿಂಗಳ ಉಪಯೋಗದ ಶೀಸೆ 1ಕ್ಕೆ ರೂ 1 8 0

ಏಜೆಂಟರು.—ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು,
ಮಂಗಳೂರು

NOTICE.

Warning to Lorries.

All owners and drivers of Motor lorries are reminded that under G. O. No. 1627 Law (Genl.) Dept, dated 10-5-1935, the maximum speed of lorries in South Kanara is 25 Miles an hour and the speed must be reduced to 15 miles an hour in towns and villages and in places where the view ahead is obstructed

Drivers convicted of overspeeding will in addition have their driving licences suspended for a substantial period

E M Gawne,
District Magistrate.

New Era Technical School.
Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಟೈಪ್ ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ವಜ್ರದ ಉಂಗುರುಗಳು

೧ಕ್ಕೆ ರೂ. ೦—೧೨—೦.



ಈ ಉಂಗುರುಗಳನ್ನು ಇಮಿಟೇಶನ ವಜ್ರದ ಕಲ್ಲುಗಳನ್ನು ಇಟ್ಟು ರೋಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಿದ ಕಟ್ಟಿದೆ ಇವರ ಒಪ್ಪವು ಎಂದಿಗೂ ಕೆಡದು ... ಒಂದು ... ಉಂಗುರಗಳಿಗೆ ... ಉಂಗುರಗಳಿಗೆ ... ಉಂಗುರಗಳಿಗೆ ರೋಲ್ಡ್ ಗೋಲ್ಡ್ ಭಂಗಾರದ ... ಉಂಗುರಗಳಲ್ಲಿ ಬೇಕಾದ ಹೆಸರನ್ನು ಕೆತ್ತಿಕೊಡುವೆವು

ಲಕ್ಷ್ಮೀ—ಪಟೆ ವಾಚ್ ಕೋ.,
ಗಡಿ ಪೇಟ ಮದರಾಸು.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ
(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 3 ಬಾಟ್ಲಿಗಳಿಗೆ ರೂ. 1-12-0.



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0—0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಆತಂಕಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0. ಸಣ್ಣ ಬಾಟ್ಲಿ 1ಕ್ಕೆ ಆಣೆ 13.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ ರೂ. 2-8-0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:— ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ಡಾ। ಶ್ರೀನಿವಾಸ ಪೈ, ಧರ್ಮಸ್ಥಳ. ಮೆಸರ್ಸ್ ಮುಲ್ಕಿ ಹಿಡಿನ್ ಬ್ರದರ್ಸ, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ. ತಾರಾಹೌಸ್, ಗಿರಗಾಂವ್. ಬೇಕರೋಡ್ ಮುಂಬಯಿ ನಂ. 4. ಡಾಕ್ಟರ್ ಪ್ಯಾಟಿ ಹೋಟೆಲ್, ಮಡಿಕೇರಿ ಕೂರ್ಗ್, ರಾವ್ ಫಾರ್ಮಸಿ, ಸಾಗರ.

The Canara Banking Corporation Udipi, Ltd.

Head office:—UDIPI, S. K. (Incorporated in British India) Tel.-'BANKING' **ESTD. 1906.**

Branches:—1. Udipi, 2 Coondapoor, 3 Car Street, Mangalore, 4. Shimoga, 5 Madras (George Town), **6. Bunder Mangalore, 7 Mercara** (North Coorg), **& 8. Virarajendrapet** (South Coorg).

DEPOSITS:

1922	1926	1930	1934	15 11 '35
ರೂ 2,28,419/	6,48,940/	20,23,837/	24,95,329/	**26,85,980/-**

SAVINGS BANK ACCOUNTS

INTEREST allowed at 3½ %

Facilities 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

(Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹಳೆ ಕಡ್ಡಿಯ ಮೂಲಕವು ಇಲ್ಲಿಯ ವರೆಗಿನ ನವ್ಯ ವಿಲ್ಲಿಯಮ್ ಮತ್ತು ಕಂಪೆನಿಯ ಹಳೆ ಕಡ್ಡಿಯ ಮೂಲಾವಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆ ದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

TO INSURE OR TO REPRESENT

CONSULT –

The Bombay Life Assurance Company Ltd.

ESTD 1908

Offers
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Koebikar Brothers, Branch Secretaries.

OFFICES (1) 'Gautam Nivas' Charni Rd, Girgaum Bombay No 4 (2) P B 337 Mount Road, Madras (3) Visvesbwarapuram Circle, Bangalore City (4) Hazur Road Calicut, (5) Car Street, Mangalore, S K (6) Udipi (S India

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ –

The Scientific Gold Bangles Co., Ltd.
Head Office:—43, Byragimatam Street,
Post Box No. 203, Madras.

Edited, Printed & Published By A. S. Kamath at the Sharada Press, Car Street, Mangalore

ವಾರ್ಷಿಕ ವರ್ಗಣಿ 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M. 498

ಟಪ್ಪಾಲು ಹಾಸಲು ಸೇರಿ ರೂ. 3-13-0.

For Quality Snuff
H. Rama Rao and Sons.
High Class Snuff Manufacturers
Mangalore, S. C.
ask for
RAMA SNUFF
The charm of Snuff Users

ಸ್ವದೇಶಾಭಿಮಾನಿ

SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY
Buy a policy in
THE BOMBAY LIFE
Madras Branch Secretaries
Kochikar Brothers,
Udupi, Mangalore, Bangalore, Mysore, Bombay and Calicut.

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ರಾವ್‌ರವರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಪ್ರೆಸ್ಸಿನಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಕೊಳಲನುಪಮರತ್ನಗಳು ಸಾ । ಗರವ ಮಥಿಸಲು ಸುರಗಣದರಿಂ । ಹರುಷವಾಯಿತೆ? ಮುಕ್ತಿ ವಿಶ್ವವ ಸುಡುತ ಬರುತಿರುವ ॥
ಗರಲಕಿನಿತಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? ತೆರಳ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೯. | ಮಂಗಳೂರು ತಾ. ೧೩ನೇ ಶುಕ್ರವಾರ ದಶಂಬರ ೧೯೩೫. (13—12—'35) | ಸಂಚಿಕೆ ೪೯



ಟಿಪ್ಪಣಿಗಳು

NOTES

...ದಿರು ಧಿಕ್ಕಾರ ಬಿಡಿಯನ್ನೆನ್ನುವರು ಇನ್ನು ಜೈಲಿನಿಂದ ಹೊರಬಿದ್ದಿಲ್ಲ. ಬಿಡಲ್ಪಡಬೇಕು ಎಂದು ಲಂಡನಿನಲ್ಲಿ ಪಾರ್ಲಿಮೆಂಟಿನಲ್ಲಿ ಕಾಣುತ್ತದೆ. ಇವರು ಬಿಡುಗಡೆಯಾಗಬೇಕು ಈ ಕೈದಿಗಳನ್ನು ಬಿಡುವುದೂ ಬಹಳ ಅಗತ್ಯವಂತೆ. ಕಾರಣ, ಬಂಗಾಲದವರ ದೆಸೆಯಿಂದ.

\+ + + +

ಸುಭಾಷ್‍ಚಂದ್ರ ಬೋಸರನ್ನು ಹಿಂದೂಸ್ಥಾನದಿಂದ ಬರ್ಲಿನಿನ ಕಡೆ ಕಳುಹಿಸಿದ್ದು ಅವರ ದೇಹಸ್ಥಿತಿಗೆ ಔಷಧೋಪಚಾರ ಮಾಡುವ ಬಗ್ಗೆ ಮತ್ತು ಅಲ್ಲಿಯ ಇತರ ಸ್ಥಳಗಳನ್ನು ತಿರುಗಾಡಲು ಬಿಟ್ಟದ್ದು. ಅವರ ದೇಹಸ್ಥಿತಿಯ ಅನುಕೂಲತೆ ಬಗ್ಗೆ ಎಂದು ಪಾರ್ಲಿಮೆಂಟಿನಲ್ಲಿ ಉತ್ತರ ಹೊರಟಿದೆ. ಲಂಡನಿಗೆ ಬರುವುದೇ ಬೇಡಾ, ವಾಸು ಕೊಡುವುದಿಲ್ಲ ಎಂದು ತಿಳಿಸಿಬಿಟ್ಟರು. ಅದರಲ್ಲೂ ಒಂದು ರಿಯಾಯತಿ— ಲಂಡನಿನಲ್ಲಿ ಇವರಿಗೆ ಔಷಧಿ ಬೇಕಾದರೆ, ಇದಕ್ಕೆ ಬಲವಾದ ರುಜುವಾತು ಕೊಟ್ಟರೆ ಒಂದು ವೇಳೆ ಒಂದು ಆಲೋಚನೆ ಮಾಡಿ ಪಾಸುಕೊಡುವ ನಿರ್ಧಾರ ನಾಲಗೆ ತುದಿಯಲ್ಲಿ ನೇತಾಡುತ್ತಿದೆ. ಅಂತೂ ಲಂಡನಿನ ಕ್ರಿಸ್‍ಮಸ್ ತಪ್ಪಿತು ನಮ್ಮ ಸುಭಾಸಬೋಸರಿಗೆ.

\+ + + +

ಇನ್ನೊಂದು ನಾಟಕ ನಡೆಯುತ್ತಿದೆ. ಫ್ರಾನ್ಸಿನ ಲಾವಲರು ಮುಖ್ಯ ಪಾತ್ರಧಾರಿ, ರಾಜಿ–ರಾಜಿಯಂತೆ. ಎಬಿಸೀನಿಯಾಕ್ಕೂ ಇಟಲಿಗೂ. ಒಂದರ ಹಿಂದೆ ಒಂದು ವರ್ತನೆ. ಈ ರಾಜಿಯು ಮುಸಲೋನಿಗೂ ಸಮ್ಮತವಂತೆ. ಪೆಟ್ರೋಲು, ಎಣ್ಣೆ ಇತ್ಯಾದಿಗಳನ್ನು ಒಳಹಾಕಲು ಈ ರಾಜಿ. ಇನ್ನೊಂದು ಮುಖ್ಯ, ಇಟೆಲಿಯವರಿಗೆ ನಿರ್ಬಂಧವಿಲ್ಲದೆ ಪೆಟ್ರೋಲು ಸಿಕ್ಕುವ ಹಾಗೆ ಇನ್ನೊಂದು ರಾಜಿ.

\+ + + +

ಈಗ ಮುಸಲೋನಿ ಎಂದರೆ ಎಲ್ಲರಿಗೂ ಒಂದು ಅಗ್ನಿಕುಂಡದಂತೆ ಕಾಣುತ್ತಾನೆ. ದಕ್ಷಿಣ ಆಫ್ರಿಕದಲ್ಲಿ ಸಚಿತ್ರ ಮುಸಲೋನಿಯನ್ನು ಚೂರುಚೂರಾಗಿ ಮಾಡಿ ಬೆಂಕಿಕೊಟ್ಟು ಸುಟ್ಟು ಹಾಕಿದರಂತೆ. ಇದು ಸೇಡುತೀರಿಸಿಕೊಳ್ಳುವುದು. ಇಟಲಿಗೆ ಅಪಜಯವಾದರೆ ನಂತರ, ಜೀವಂತ ಮುಸಲೋನಿಗೆ. . . .

\+ + + +

ನಮ್ಮ ಕಾಂಗ್ರೆಸ್ ಸುವರ್ಣಮಹೋತ್ಸವವು ಬಂತು. ಇದು ವಿಲಾಯತಿಲ್ಲೂ ಅಲ್ಲಿಯ ಕಾಂಗ್ರೆಸ್ ಪಾರ್ಟಿಯವರಿಂದ ನಡೆಸುತ್ತದೆಯಂತೆ. ಇದೇ ಹಿಂದೂಸ್ಥಾನಕ್ಕೆ ಒಂದು ಹಬ್ಬ.

\+ + + *

ಮದ್ರಾಸಿನ ಪೌರಸಭೆಯವರು ಈ ಉತ್ಸವದಲ್ಲಿ ಭಾಗಗಳಾಗುತ್ತಾರಂತೆ, ರೂ. ೫೦೦ ಅಂತೂ ಸಂಕ್ಷನಾಯಿತು. ಇದು ಪೌರಸಭೆದ್ದೋ ಅಥವಾ ಮೆಂಬರರ ಬೊಕ್ಕಸದಿಂದಲೋ ಎಂದು ಇದನ್ನು ಸದ್ಯ ಕೇಳಬಹುದು.

\+ + + +

ಕಾಂಗ್ರೆಸ್ಸಿನ ಸ್ವರ್ಣೋತ್ಸವವು ಸಾಂಗವಾಗಿ ನಡೆಯುವುದು. ಇನ್ನು ಕಾಂಗ್ರೆಸ್ಸಿಗೆ ಪ್ರೆಸಿಡೆಂಟರು ಯಾರೆಂಬುದು ಇನ್ನೂ ನಿಶ್ಚಯವಾಗಲಿಲ್ಲ. ತಕ್ಕಡಿಗೆ ಎಷ್ಟು ಕಲ್ಲು ಹಾಕಿದರೂ ಅದು ಸರಿತೂಗುವುದಿಲ್ಲ. ತಮಿಳುನಾಡು ಗಾಂಧಿ, ಆ ಗಾಂಧಿ, ಈ ಗಾಂಧಿ ಎಂದು ಕಾಲಹರಣ. ಸುಭಾಸಬೋಸರು ಆಗಬೇಕೆಂದು ಕೆಲವರು. ಪಂಡಿತ ಜವಾಹರಲಾಲರು ಆಗಬೇಕೆಂದು ಕೆಲವರು. ಇದರ ಇತ್ಯರ್ಥ ಒಪ್ಪಿದ ಮಹನೀಯರ ಮೇಲಿದೆ.

\+ + + +

ಬಂತು ಕಾಫಿಯ ಸುಂಕ. ಮಾದರಿಗಾಗಿ ಹದ್ರೈವೇಟಿಗೆ ರೂಪಾಯಿ ಒಂದು. ಅನಂತರ ಅನುಕೂಲವಾದ ಹಾಗೆ ಈ ಸುಂಕಕ್ಕೆ ಪ್ರಮೋಶನ್. ಸದ್ಯದಲ್ಲಿ ಇನ್ನೊಂದಕ್ಕೆ ಪ್ರಮೋಶನ್ ಕೊಡಲಾಗುತ್ತದೆ. ಅದಾವುದೆಂದರೆ ಹೊಗೆ ಬಿಡುವವರಿಗೆ.

× × × × × ×

ಮದ್ರಾಸಿನಲ್ಲಿ ಬಹಳ ಆತುರದಿಂದ ಹೊಗೆ ಸೊಪ್ಪಿನ ಮೇಲೆ ಸುಂಕ ಮತ್ತು ಲೈಸನ್ಸು ಪಡಕೊಂಡು ವ್ಯಾಪಾರ ಮಾಡುವ ವಿಲೆವಾರಿ ಮಾಡಲು ರೂಲ್ಸುಗಳು ಆಗಿವೆ. ಈಗ ರೂಲ್ಸು ಸ್ವಲ್ಪ ರಿಯಾಯತಿಯಲ್ಲಿ ಇಡಬೇಕೆಂದು ಹೊಸ ಸೂಚನೆ.

ಮಕ್ಕಳನ್ನು ಬಲಿಷ್ಠರನ್ನಾಗಿಯೂ ಆರೋಗ್ಯಶಾಲಿಯರನ್ನಾಗಿಯೂ ಮಾಡುವುದಕ್ಕೆ ಅವರಿಗೆ 'ಓವಲ್ಟಿನ್'ನ್ನು ದಿನನಿತ್ಯದ ಪಾನೀಯವನ್ನಾಗಿ ಕೊಡುವುದೊಂದಲ್ಲದೆ ಬೇರೆ ನಿಶ್ಚಿತದಾರಿಯಿಲ್ಲ. 'ಓವಲ್ಟಿನ್'ನಲ್ಲಿ ಪ್ರಕೃತಿಸಿದ್ಧವಾಗಿರುವ ದೇಹವರ್ಧಕ ಆಹಾರ ಸಾರವಿದೆ. ಇದು ಮಕ್ಕಳ ಆರೋಗ್ಯ, ಶಕ್ತಿ, ಮೇಧಾಶಕ್ತಿ, ಸ್ನಾಯುಶಕ್ತಿ, ದೇಹಶಕ್ತಿಗಳಿಗೆ ಬೇಕಾದ ಪೋಷಣಾಸಾರಗಳನ್ನೊದಗಿಸಿಕೊಡುತ್ತದೆ. 'ಓವಲ್ಟಿನ್'ನ ಸೇವನೆಯೆಂಬರೆ ದೇಹದಾರ್ಢ್ಯಕ್ಕೆ ಪಂಚಾಂಗವಿಟ್ಟಂತೆ.

'ಓವಲ್ಟಿನ್'ನನ್ನು ಎಲ್ಲಾ ಪ್ರಾಯದ ಮಕ್ಕಳೂ ಮೆಚ್ಚುತ್ತಾರೆ. ಅದರ ರುಚಿಕರವಾದ ಪರಿಮಳವನ್ನು ಅವರು ಆಸ್ವಾದಿಸಲಾಶಿಸುತ್ತಾರೆ. ತಮ್ಮ ಮಕ್ಕಳಿಗೆ ಇದನ್ನು ಕೊಡುತ್ತಾಯಂದಿರು ಇದರ ಸತ್ಪರಿಣಾಮವನ್ನು ಕಂಡುಕೊಳ್ಳುವರು. ಹಸುಳೆಗಳಿಗೆ ಧಾರಾಳ ಚೇತನವಿತ್ತು ಬೇಗನೇ ಅವರನ್ನು ಬೆಳೆಸಿ ರಾತ್ರೆ ನಿದ್ದೆ ಕೊಡುತ್ತದೆ.

ನಿಮ್ಮ ಚಹಕ್ಕೆ 'ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

"ಓವಲ್ಟಿನ್"

ಮಿದುಳು, ನರ, ದೇಹಗಳನ್ನು ರಚಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಕೆಮಿಸ್ಟರರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ಏಜಂಟ್:—ಜೇಮ್ಸ್ ರೈಟ್, 85ಎ. ಕ್ಲಿವ್ ಸ್ಟ್ರೀಟ್, ಕಲ್ಕತ್ತಾ ಮತ್ತು ಮುಂಬಾಯಿ, ಮದ್ರಾಸು.

OV/325

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:—

The Scientific Gold Bangles Co., Ltd.
Head Office:—43, Byragimatam Street,
Post Box No. 203, Madras.

ಕಲ್ಕತ್ತದಲ್ಲಿ, ಜನವರಿ, ಫೆಬ್ರವರಿ ತಿಂಗಳಲ್ಲಿ ಮಹಿಳೆಯರು ಸಮ್ಮೇಲನವನ್ನು ನಿಶ್ಚಯಿಸಿರುವರು. ಬ್ರಿಟಿಷ ಜನಾಂಗದವರು ೩೦ ಪ್ರತಿನಿಧಿಗಳು ಬರುತ್ತಾರಂತೆ. ಅಮೇರಿಕದ ಸಂತಾನ ನಿರೋಧದವರನ್ನೂ ಕರೆಯಲು ಮರೆತಿರುವರೇ— ಇವರ ಹಾಜರು ಅಗತ್ಯ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretary.

ಸಂಶೋಧನಾಲಯದ ಮಾಯಾವಿಗಳು.

ಆಲೋಚನಾಶಕ್ತಿಯನ್ನು ವೃದ್ಧಿಪಡಿಸುವ ದಿವ್ಯ ಔಷಧಿ.

ರಕ್ತದೊಂದಿಗೆ 'ಹಾರ್ಮೋನ್ಸ'ವೆಂಬ ವಿಚಿತ್ರ ಪದಾರ್ಥವು ಸೇರಿ ಅದು ನಮ್ಮ ಮೆದುಳನ್ನು ಸೇರುವುದರಿಂದಲೇ ನಾವು ಆಲೋಚಿಸಬಲ್ಲೆವು ಎಂದ ದೇಹ ಶಾಸ್ತ್ರಜ್ಞರ ನಿರ್ಧಾರ. ಈ ಹಾರ್ಮೋನ್ಸ'ಗಳು ಮನುಷ್ಯ ರಕ್ತದಲ್ಲಿ ಕಡಿಮೆಯಾಗಿದ್ದರೆ ಆತನು ಮಂದಮತಿಯಾಗುವನು. ಕೆಲವರಲ್ಲಿ ವಿಶೇಷ ತರದ ರೀತಿಯಲ್ಲಿ ಆಲೋಚಿಸಲು ಸಾಧ್ಯನಾಗುವ 'ಹಾರ್ಮೋನ್ಸ' ಗಳನ್ನು ಕೊಡುವ ಗ್ರಂಥಿಗಳಿವೆ. ಈಗ ದೇಹ ಶಾಸ್ತ್ರಜ್ಞರು ಪ್ರಾಣಿಗಳಿಂದ ಉತ್ತಮ ತರದ 'ಹಾರ್ಮೋನ್ಸ'ಗಳನ್ನು ಕೊಡುವ ಗ್ರಂಥಿಗಳಿಂದ ಮನುಷ್ಯರ ಚೇತನಾಶಕ್ತಿಯನ್ನು ಉದ್ಧರಿಸುವ ಔಷಧಿಯನ್ನು ತಯಾರಿಸಿರುವರು. ಈ ಔಷಧಿಯನ್ನು ಮನುಷ್ಯರಲ್ಲಿ ಇಂಜೆಕ್ಷನ್ ಮೂಲಕ ಸೇರಿಸಿದರೆ ಆತನ ಭಾವನಾಶಕ್ತಿಯು ವಿಶೇಷವಾಗಿ ವೃದ್ಧಿಹೊಂದುವುದು. ಈ ಔಷಧಿ ಉಪಯೋಗವು ಧಾರಳವಾದರೆ ಭಾವನಾಶಕ್ತಿ ಅತಿರೇಕವಾಗಿ ಪ್ರಫುಲ್ಲವಾಗಿ ಮನುಷ್ಯರು ಭ್ರಾಂತರಾಗಿ ಹುಚ್ಚರಾಗುವರು. ಈ ಔಷಧಿಯ ನಿಮಿತ್ತ ಮುಂದಕ್ಕೆ ನಮ್ಮಲ್ಲಿ ಎಲ್ಲರೂ ಬುದ್ಧಿವಂತರಾಗಲು ಸಾಧ್ಯವಿದೆ ಮಂದಮತಿಗಳು ಮಾಯವಾಗುವರು. ಪ್ರಪಂಚದಲ್ಲಿ ಎಲ್ಲರೂ ಪ್ರಸಿದ್ಧ ಪುರುಷರಾಗುವರು

ನಿಮ್ಮನ್ನು ಅದರ್ಶಗೊಳಿಸುವ ಪ್ರಕಾಶರವಿ.

ವಿಯಾನಾದಲ್ಲಿ ಓರ್ವ ತರುಣ ಹಂಗೇರಿಯಾನ ವಿಜ್ಞಾನಿಯು ಫೋಟೋಗ್ರಾಫಿಯಲ್ಲಿ ಕೆಲವು ಶೋಧೆಗಳನ್ನು ನಡೆಯಿಸುತ್ತಿರುವಾಗ ಅಕಸ್ಮಾತ್ತಾಗಿ ಅವನ ಕೆಲವು ಸಾಮಾನುಗಳನ್ನು ಮಾಯವಾಗುವುದನ್ನು ಕಂಡನು ತನ್ನ ಈ ಶೋಧನಾಕಾರ್ಯದಲ್ಲಿ ಉಪಯೋಗವಾದ ಒಂದು ಯಂತ್ರದಿಂದ ಬಂದ ಒಂದು ವಿಚಿತ್ರ ಪ್ರಕಾಶದ ರವಿಯೆ ಇದಕ್ಕೆ ಕಾರಣವೆಂದು ತಿಳಿದನು. ಸಾಮಾನುಗಳು ಅದರ್ಶಗಳಾದುವು ಮಾತ್ರ. ಅವುಗಳನ್ನು ಮುಟ್ಟಲು ಸಾಧ್ಯವಾಗುತ್ತಿತು. ಈ ವಿಚಿತ್ರ ಪ್ರಕಾಶ ರವಿಯ ಪ್ರದರ್ಶನವನ್ನು ಮಾಡಲು ಈ ತರುಣ ವಿಜ್ಞಾನಿಯು ಒಂದು ಯಂತ್ರವನ್ನು ನಿರ್ಮಾಣಿಸಿ, ಒಂದು ಸಣ್ಣ ಸ್ಟೇಜನಲ್ಲಿರಿಸಿದ ಎಂಟು ಇಂಚು ಉದ್ದದ ಚಾರ್ಲಿ ಚೆಪ್ಲಿನನ ಗೊಂಬೆ ಮೇಲೆ ಹರಿಸಿ, ಅದನ್ನು ಅದರ್ಶಮಾಡಿದನು ಈ ಶೋಧನೆಯಿಂದಾಗಿ ಹುಟ್ಟಿದ ಅನೇಕ ವಿಚಿತ್ರ ಘಟನೆಗಳು ಮುಂದಕ್ಕೆ ನಾವು ಕೇಳಬಹುದು

ಪ್ರಸಿದ್ಧ ಆಂಗ್ಲೇಯ ಬರಹಗಾರರಾದ ಎಚ್ ಜಿ. ವೆಲ್ಸರು ತಮ್ಮ 'ಇನ್‌ವಿಜಿಬಲ್ ಮೇನ್' ಎಂಬ ಕಥೆಯಲ್ಲಿ, ದೇಹವನ್ನು ಅದರ್ಶಗೊಳಿಸುವ ವಿಜ್ಞಾನಿಯನ್ನು ಚಿತ್ರಿಸಿದ್ದಾರೆ. ಆದರೆ ಇಲ್ಲಿ ಈ ವಿಜ್ಞಾನಿಗೆ ದೇಹ ಮಾತ್ರವಲ್ಲದೆ ಉಡುವನ್ನು ಅದರ್ಶಗೊಳಿಸುವ ಶಕ್ತಿ ಬರಲಿಲ್ಲ ಆದರಿಂದ ಈ ಚಿತ್ರದಲ್ಲಿ ಕಾಲಿ ಉಡುಪುಗಳು ಸಂಚಲಿಸುವ ದೃಶ್ಯಗಳಿದ್ದುವು. ಇದು ನಮ್ಮಲ್ಲಿ ಕೌತುಕವನ್ನುಂಟು ಮಾಡದೆ ಇರುವದೆ. ಆದರೆ ಈ ನವೀನ ಶೋಧೆಯಿಂದ ಎಲ್ಲವನ್ನೂ ಅದರ್ಶಮಾಡಲು ಸಾಧ್ಯವಾಗುತ್ತದೆ.

ಆದರಿಂದ ಈ ಶೋಧನೆಯನ್ನು ಅನುಸರಿಸಿ, ಕಿಸೆಯಲ್ಲಿರಿಸಲು ಸಾಧ್ಯವಾಗುವ ಮನುಷ್ಯರನ್ನು ಅದರ್ಶಗೊಳಿಸುವ ಈ ಯಂತ್ರಗಳು ನಿರ್ಮಾಣವಾದರೆ! ಎಷ್ಟು ಜನರಿಗೆ ಇದು ಒಂದು ವರದಾನವಾಗದು ಕೋರ್ಟಿನ ವಾರಂಟು ಪೇದೆಗಳನ್ನು ಅತಿ ಸುಲಭ ರೀತಿಯಲ್ಲಿ ತಪ್ಪಿಸಬಹುದು. ನಾವು ಮೋಸಗೊಳಿಸಿದ ಸ್ನೇಹಿತರ ಗೋಚರವನ್ನು ತಪ್ಪಿಸಲು ಇನ್ನು ಪರವೂರಿಗೆ ಹೋಗಬೇಕಾಗಿಲ್ಲ. ಈ ಯಂತ್ರದಿಂದ ಊರಿನಲ್ಲೆ ಇದ್ದು, ಅವರಿಂದ ಅದೃಶ್ಯರಾಗಿ ಜೀವಿಸಬಹುದು ಪೋಲೀಸರಿಂದ ತಪ್ಪಿಸಿಕೊಳ್ಳಬಹುದು. ಈ ಯಂತ್ರದಿಂದ ಒಂದು ದೇಶದಲ್ಲಿ ನ್ಯಾಯಸಾಧನೆಗೆ ಆತಂಕಗಳು ಬರುವವು. ಅಪಾದಿತರೊಡನೆ ಈ ನವೀನ ಯಂತ್ರವಿದ್ದರೆ ಸರಿ! ಇವನನ್ನು ಹುಡುಕಿ ತೆಗೆಯುವವರಾರು?

ಆದರಿಂದ ಈ ಯಂತ್ರವನ್ನು ಪಡೆಕೊಳ್ಳಲು ಲೈಸನ್ಸು ಪಡೆಯಬೇಕಾಗುವುದು. ಆದರೆ ಲೈಸನ್ಸು ಇಲ್ಲದ ಈ ಯಂತ್ರಗಳನ್ನು ಪಡೆದವರನ್ನು ಗೊತ್ತುಹಚ್ಚುವುದು ಹೇಗೆ? ಆದರಿಂದ ಪಕ್ಷಪಾತಿಗಳನ್ನು ತಮ್ಮ ಕಾರ್ಯಭಾರವನ್ನು ನಡೆಯಿಸಿಯೆ ಬಿಡುವರು

ನಮ್ಮ ನಿತ್ಯದ ಜೀವಮಾನದಲ್ಲಿ ಜನರು ಥಕ್ಕನೆ ಅದರ್ಶಗೊಳ್ಳುವುದು, ನಮ್ಮಲ್ಲಿ ಯಾವ ದಿಗಿಲನ್ನು ಉಂಟುಮಾಡಲಿಕ್ಕಿಲ್ಲ ಇಬ್ಬರು ಸ್ನೇಹಿತರು ಒಟ್ಟಾಗಿ ಸಂಭಾಷಣೆ ಮಾಡಿ ನಡೆಯುತ್ತಿರುವಾಗ, ಒಬ್ಬನು ತನ್ನ ಮಧ್ಯೆ ಅದರ್ಶನಾದರೆ, ಇನ್ನೊಬ್ಬನಲ್ಲಿ ಎಷ್ಟು ಆಶ್ಚರ್ಯವುಂಟಾಗಲಿಕ್ಕಿಲ್ಲ! ದೊಡ್ಡ ದೊಡ್ಡ ಸಭೆಗಳಲ್ಲಿ ಭಾಷಣಗಾರರು ಭಾಷಣಮಾಡುತ್ತಿರುವಾಗ, ಜನಸ್ತೋಮವು ಥಕ್ಕನೆ ಮಾಯವಾಗಿ, ಆತನು ಖಾಲಿ ಬೆಂಚುಗಳಿಗೆ ಭಾಷಣಮಾಡುವ ಸಂಭವಗಳು ಒದಗಿದರೆ—ಆಗ

ರೈಲ್ವೆ, ಬಸ್ಸು ಮತ್ತು ಟ್ರಾಮ್ ಕಂಪೆನಿಗಳಿಗಂತೂ, ಇದರಿಂದ ಧಾರಳ ನಷ್ಟ ಒದಗಬಹುದು ಮನುಷ್ಯನು ಅದರ್ಶನಾಗಿ ಟಿಕ್ಕೆಟು ಕೂಡ ಕೊಡದೆ ತನ್ನ ಇಚ್ಛೆಯ ಸ್ಥಳ ಪ್ರಯಾಣ ಮಾಡಬಹುದ.

ಕಣ್ಣಿನಿಂದ ಕೇಳಿಸುವುದು.

ಕಿವಿಗಳು ಮಾತ್ರ ಕೇಳಿಸುವ ಇಂದ್ರಿಯಗಳೆಂದು ನಾವು ಇಷ್ಟರವರೆಗೆ ನಂಬಿರುತ್ತೇವೆ ಆದರೆ ಅಮೇರಿಕಾದ ಓಹಿಯೊ ಯುನಿವರ್ಸಿಟಿಯಲ್ಲಿ ಕಣ್ಣಿನಿಂದಲೂ ಕೇಳಬಹುದೆಂದೂ, ಕಂಡುಹಿಡಿದಿದ್ದಾರೆ ಒಂದು ಜನಸಂಘಣೆಯನ್ನು ಒಂದು ಕತ್ತಲೆಯ ಕೋಣೆಯಲ್ಲಿ ಇರಿಸಿದರು ಇವರು ಎದುರಲ್ಲಿ ಶಬ್ದ ಒಳಗೆ ಸೇರದ ಎಂದು ಗಾಜಿನ ಕಂಡಿಗಳುಳ್ಳ ಪೆಟ್ಟಿಗೆಯು ಇರಿಸಲಾಯಿತು ಈ ಪೆಟ್ಟಿಗೆ ಎರಡು ಕಡೆಯಿಂದ ಎರಡು ದೀಪಗಳ ಜನಸಂಘಣೆಯದ ಮೇಲೆ ಪ್ರಕಾಶವನ್ನು ಭೀರೀವ ಹಾಗೆ ಮಾಡಿದರು ಇದರಿಂದ ಈ ಪೆಟ್ಟಿಗೆ ಒಳಗಿದ್ದವನನ್ನು ಜನರ ಗೋಚರದಿಂದ ತಪ್ಪಿಸಿದ ಹಾಗಾಯ್ತು ಪೆಟ್ಟಿಗೆ ಒಳಗಿದ್ದವನು ಮಾತನಾಡಲು ಪ್ರಾರಂಭಿಸಿದನು. ಇವನ ಭಾಷಣವು ಲೌಡ್‌ಸ್ಪೀಕರ್ ಎಂಬ ಯಂತ್ರದಿಂದ ಜನರಿಗೆ ತಿಳಿಸಲಾಯಿತು ಪೆಟ್ಟಿಗೆ ಒಳಗಿದ್ದವನಿಗೂ ಹೊರಗಿನವರಿಗೆ ಸಂಭಾಷಿಸಲು ಒಂದು ಟೆಲಿಫೋನನ್ನು ಇಟ್ಟಿದ್ದರು ಪ್ರಾರಂಭದಲ್ಲಿ ಈ ಪೆಟ್ಟಿಗೆಯೊಳಗಿದ್ದ ಈ ಲೌಡ್‌ಸ್ಪೀಕರಿನಿಂದ ಹೊರಡಿದ ಭಾಷಣವು ಜನರಿಗೆ ಸರಿಯಾಗಿ ಕೇಳಿಸಿತು ನಂತರ ಒಂದು ಈ ಶಬ್ದವನ್ನು ಪ್ರತಿಫಲಿಸುವ ಒಂದು ಯಂತ್ರವನ್ನು ಚಲಿಸಲಾಯಿತು ಈ ಯಂತ್ರದಿಂದ ಈ ಲೌಡ್‌ಸ್ಪೀಕರಿನ ಮಾತುಗಳನ್ನು ಮುಳುಗಿಸಲಾದವು

ನಂತರ ಈ ಪೆಟ್ಟಿಗೆ ಒಳಗಿನ ದೀಪಗಳು ಹಚ್ಚಲಾದುವು ಒಳಗಿನ ವ್ಯಕ್ತಿಯು ಇನ್ನೂ ಭಾಷಣ ನಡೆಯಿಸುತ್ತಿತ್ತು ಈಗ ಅವನ ಭಾಷಣವು ಅಲ್ಲಿ ನೆರೆದ ಜನರಿಗೆ ಕೇಳಿಸಿತು. ಅದು ಹೇಗೆ ಸಾಧ್ಯವಾಯಿತೆಂದು ಎಲ್ಲರಲ್ಲೂ ಆಶ್ಚರ್ಯವನ್ನುಂಟುಮಾಡಿತು. ಈ ರೀತಿ ಹಲವು ರೀತಿಯಲ್ಲಿ ಈ ಪರಿಶೋಧನೆಯನ್ನು ನಡೆಯಿಸಿ, ನಾವು ಪ್ರಕಾಶದ ಮೂಲಕ ಕೇಳಿಸಬಹುದೆಂದು ಪ್ರಕಟವಾಗಿರುತದೆ.

ಸರಕಾರಕ್ಕೂ-ಕೊಂಗ್ರೆಸ್ಸಿಗೂ ಮೈತ್ರಿ ಬೆಳೆಯುವುದೆ?

ಆಸ್ಯಾ ಖಂಡದಲ್ಲೂ ಯುದ್ಧ ಪ್ರಾರಂಭವಾಯಿತೆ.

ಆಸ್ಯಾ ಖಂಡದಲ್ಲೂ ಯುದ್ಧ ಪ್ರಾರಂಭವಾಯಿತೆ? ಜಪಾನಿಯರು ಯುದ್ಧೋನ್ಮುಖರಾಗುವರು.

"ಕೆಲವು ಒಪ್ಪಂದಗಳ ಪ್ರಕಾರ ಚೀನಾ ದೇಶದ ಸ್ವಾತಂತ್ರ್ಯವು ಇತರ ಜನಾಂಗಗಳ ಮೇಲೆ ಹೊಂದಿಕೊಂಡಿರುತ್ತದೆ ಚೀನಾವು ಈ ಒಪ್ಪಂದವನ್ನು ತಿರಸ್ಕರಿಸತಕ್ಕದು, ಚೀನಾವು ಸ್ವಾತಂತ್ರ ಜನಾಂಗವಾಗತಕ್ಕದು" ಎಂದು ಚೀನಾದೇಶದ ಧುರೀಣರ ಪ್ರಕಟಣೆ.

ಉತ್ತರ ಚೀನಾದಲ್ಲಿ ಜಪಾನಿಯರು ಯುದ್ಧೋನ್ಮುಖರಾದಂತೆ ಭಾಸವಾಗುತ್ತದೆ. ಈ ಪ್ರಾಂತ್ಯಗಳಲ್ಲಿನ ಜಪಾನಿಯ ಸಂಗ್ರಾಮಾಧಿಕಾರಿಗಳು, ಯುದ್ಧಾತುರರಾಗಿದ್ದಾರೆ ಜಪಾನಿಯ ಯುದ್ಧ ವಿಮಾನಗಳು ಪೈಪಿಂಗ ಎಂಬಲ್ಲಿ, ಆಕಾಶದಲ್ಲಿ ಹಾರಾಡುತ್ತಿವೆ. ಇತ್ತೀಚೆಗೆ ೬೦ ಜಪಾನಿಯ ಯುದ್ಧ ವಿಮಾನಗಳು ಬಂದುವಂತೆ ಉತ್ತರ ಚೀನಾದಲ್ಲೆಲ್ಲಾ ಅಂದರೆ, ೫ ಪ್ರಾಂತ್ಯಗಳಲ್ಲಿ ಸ್ವಯಂಪ್ರಭುತ್ವದ ರಾಜರಚನೆಯಾಗಬೇಕೆಂದೇ ಜಪಾನಿಯ ಸಂಗ್ರಾಮಾಧಿಕಾರಿಗಳು ಒತ್ತಾಯಪಡಿಸುತ್ತಿದ್ದಾರೆ

ವಿದ್ಯಾಭ್ಯಾಸದ ಅರ್ಥ.

'ಜ್ಞಾನದ ಕೆಲವು ವಿಭಾಗಗಳನ್ನು ತಿಳಿಯುವುದು ಮಾತ್ರ ವಿದ್ಯಾಭ್ಯಾಸ ಧ್ಯೇಯವಾಗಿರವಾರದು. ಮಾನಸಿಕ ತರಬೇತು ಮಾತ್ರ ಜಗತ್ತಿನಲ್ಲಿ ಸುತ್ತಮುತ್ತಲಿನ ಪ್ರಪಂಚದಲ್ಲಿ ಏನಾಗುತ್ತಿದೆ, ಕಾರ್ಯಸುವ ಬುದ್ಧಿ ಮತ್ತು ಸ್ವತಂತ್ರವಾಗಿ ಇತ್ಯರ್ಥಮಾಡುವ ಬುದ್ಧಿ, ಸೌಂದರ್ಯವನ್ನು ಶಿಫಾರಸುಮಾಡುವ ಶಕ್ತಿ, ದೇಹದ ಬೆಳವಣಿಗೆ, ಗುಣಾಢ್ಯರಾಗಿ, ಯೋಗ್ಯ ವ್ಯಕ್ತಿಗಳು ಜನಿಸಿ, ಆತನ ಸುತ್ತಮುತ್ತಲಿನ ಜೀವಮಾನವನ್ನು ಸಮಾಜವು ಯೋಗ್ಯರೀತಿಯಲ್ಲಿ ನಡೆಸುವಂತೆ ವಿದ್ಯಾಭ್ಯಾಸವು ನಡೆಯತಕ್ಕದು. ಹೀಗೆ ತ್ರೀಯುತ ವಿದ್ಯಾಭ್ಯಾಸಕೂಡ ನಡೆಯತಕ್ಕದು.' ಎಂದು ಸಂಯುಕ್ತ ಪ್ರಾಂತ್ಯದ ಗವರ್ನರರಾದ ಸರ್ ಹೇರಿ ಹೈಗರ, ಅಲ್ಲಹಾಬಾದಿನ ಮೇಯೊ ಕೋಲಿನ, ಶಾಲಾ ಮಕ್ಕಳಿಗೆ ಬಹುಮಾನ ಹಂಚೋಣ ಸಮಾರಂಭದಲ್ಲಿ ಮಾಡಿದ ಭಾಷಣದ ಸಾರಾಂಶ.

ಸಂಗ್ರಾಮ ವಿದ್ಯೆ.

ಅಲ್ಲಹಾಬಾದಿನ ವಿಶ್ವವಿದ್ಯಾಲಯದವರು ಸಂಗ್ರಾಮ ಶಾಸ್ತ್ರವನ್ನು ಬೋಧಿಸುವ ವಿಷಯಗಳನ್ನು ಬಿ. ಎ. ಮತ್ತು ಬಿ. ಎಸ್. ಸಿ. ಪರೀಕ್ಷೆಗಳಿಗೆ ಕೂಡಿಸಬೇಕಾಗಿ ನಿರ್ಣಯ ಮಾಡಿರುತ್ತಾರೆ ಹೀಗೆ ಪರೀಕ್ಷೆಯಲ್ಲಿ ತರಬೇತುಹೊಂದಬೇಕಾದವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸಂಗ್ರಾಮ ವಿಧಗಳಲ್ಲಿ ತರಬೇತುಮಾಡುವ ಸಂಸ್ಥೆಯಲ್ಲಿ ತರಬೇತು ಹೊಂದಿದವರಾಗಬೇಕು. ಎರಡು ವರ್ಷ ಅಂತ್ಯದಲ್ಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಸಂಗ್ರಾಮ ಯೋಗ್ಯತಾ ಪತ್ರವನ್ನು ಕೊಡಲಾಗುವುದು

ಸರಕಾರವೂ — ಕೊಂಗ್ರೆಸ್ಸೂ.

ಕೊಂಗ್ರೆಸ್ಸಿನೊಡನೆ ಸರಕಾರದವರು ಮೈತ್ರಿ ಬೆಳೆಯಿಸಲು ಸಾಧಿಸುತ್ತಿದ್ದಾರೆಂದು, ನವದಿಲ್ಲಿಯಲ್ಲಿ ಬಲವಾದ ವಾರ್ತೆ ಎಬ್ಬಿರುತ್ತದೆ. ಹಲವರು ಸಂಧಿಸ್ಥಾಪನೆ ಕಾರ್ಯದಲ್ಲಿ ಮಗ್ನರಾಗಿದ್ದಾರಂತೆ. ಆದರೆ ಇಷ್ಟರವರೆಗೆ ಸರಕಾರದವರ ಪ್ರಯತ್ನಗಳು ಕಾಣಿಸುವುದಿಲ್ಲ ಎಂದು ಹಿಂದೂ ಪ್ರತಿನಿಧಿಗಳ ಮಾತು. ಆದರೆ ಸರಕಾರದವರು ರಾಷ್ಟ್ರೀಯ ಪ್ರಪಂಚದಲ್ಲಿ ಅತಿ ಶ್ರೇಷ್ಠವಾದ ಜನರಿಂದ ಮನ್ನಿಸಲ್ಪಟ್ಟ ಜನರೆದೇ ಆಗಿರುವ ಈ ಕಾಂಗ್ರೆಸ್ ಸಮಸ್ಯೆಯೊಡನೆ ಭರತಖಂಡದ ಹಿತವನ್ನು ಸಾಧಿಸಲು ಸಹಕರಿಸುವುದು, ಮೈತ್ರಿಯಿಂದಿರುವುದು. ಇತ್ತಂಡದವರಿಗೂ ಲಾಭಕರವಾಗುವುದು.

"ಕೊಂಗ್ರೆಸ್ಸು ಒಂದು ಕೆಟ್ಟ ಮತ್ತು ರಕ್ತ ಸಂಸ್ಥೆ" ಎಂದು ಕೆಲವೆಡೆಗಳಲ್ಲಿ ಭಾವನೆ. ಸರಕಾರದ ಅಧಿಕಾರ ಸೂತ್ರದಲ್ಲಿ ಉದ್ಯೋಗಸ್ಥರು ಯಾ ಪತ್ರಿಕಾ ವ್ಯವಸಾಯಿಗಳೂ, ಯಾ ಸರಕಾರಿ ಉದ್ಯೋಗಸ್ಥರಲ್ಲದ ಶಾಸನ ಸಭೆಯ ಪಾಶ್ಚಾತ್ಯ ಸದಸ್ಯರು ಕೊಂಗ್ರೆಸ್ಸನ್ನು ದೂರವಿಡದೆ ಇದ್ದಲ್ಲಿ "ಆತನು! ಕೊಂಗ್ರೆಸ್ಸಿ ಆಧೀನದಲ್ಲಿದ್ದಾನೆ" ಎಂಬುದನ್ನು ದೂಷಣಾ ಶಬ್ದವಾಗಿ ಉಪಯೋಗಿಸುತ್ತಿದ್ದಾರೆ. "ಕೊಂಗ್ರೆಸ್ಸಿನವರು ಒಟ್ಟುಗೂಡಿಸಿದ ಧಾರಳ ಹಣದ ಗತಿ ಏನು?" ಎಂದು ಬಹಳ ಹಿಂದೆ ಸಿಮ್ಲಾದಲ್ಲಿ ಈ ಮಂಡಳದಲ್ಲಿ ಮಾತು ಒಂದಿತ್ತು ಇವರ ಈ ಪ್ರಶ್ನೆಯಲ್ಲಿ ಕೊಂಗ್ರೆಸ್ಸಿನ ಮೇಲೆ ಒಂದು ಮಹಾ ಅಪಮಾನವನ್ನು ಹೋರಿಸುವ ಪ್ರಯತ್ನಗಳು ಅಡಕವಾಗಿದೆ ಕೆಲವರಿಗೆ ಈ ಸಂದಿಗ್ಧ ಸಮಯದಲ್ಲಿ, ಕೊಂಗ್ರೆಸ್ ಸಮಸ್ಯೆಯು ನುಚ್ಚುನೂರಾಗಿ ಹೋಗುತ್ತಿದೆ ಎಂದು ಭಾಸವಾಗುತ್ತಿದೆ ಆದರೆ ನವದಿಲ್ಲಿಯಲ್ಲಿ ಕೊಂಗ್ರೆಸಿನ ಬೆಂಬಲಕ್ಕಾಗಿ ಅದನ್ನು ಪ್ರೀತಿಸುವ ಕೆಲಬಾ ಮುಹಸೀಯರಿದ್ದಾರೆ

ಶಾಸನಸಭೆಯಲ್ಲಿ ಕೊಂಗ್ರೆಸ್ ಸದಸ್ಯರಿಗೂ ಮತ್ತು ಸರಕಾರದ ಸದಸ್ಯರಿಗೂ ವ್ಯಕ್ತಿ ಇಲ್ಲದಿದ್ದುದರಿಂದಲೆ, ಕೊಂಗ್ರೆಸ್ಸಿನ ದೃಷ್ಟಿಯು ಇವರ ಮೇಲೆ ಸ್ವಲ್ಪ ಕಠೋರವಾಗಿ ಸಂಭವಿಸಿತು. ಆದರೆ ಈ ಭಾರಿಯು ಶಾಸನಸಭೆಯ ವರ್ತನೆಯಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗಿದೆ ಶಾಸನಸಭೆಯ ಲೋಬಿಗಳಲ್ಲಿ ಇವರಲ್ಲಿ ಪರಸ್ಪರ ಮನ್ನಣೆ ಹುಟ್ಟಬೇಕಾಗಿದೆ ಹೊರಗೂ ಕೊಂಗ್ರೆಸ್ ಸದಸ್ಯರೊಡನೆ ಇವರು ಕಲೆಯಬೇಕಾಗಿದೆ ನಮ್ಮ ಮಾನ್ಯ ವೈಸರಾಯರು ಕೂಡ, ಬ್ರಿಟಿಷ ಪಾರ್ಲಿಮೆಂಟಿನ ಅಧಿಕಾರ ಕೈಯಲ್ಲಿದ್ದರೆ ತಾನು ಹಿಂದೂ ದೇಶಕ್ಕೆ ಇನ್ನೂ ಉತ್ತಮತರದ ರಾಜಶಾಸನ ಕೊಡುವವನಿದ್ದೆ ಎಂದು ಅಭಿಪ್ರಾಯಪಡುವುದನ್ನು ಅವರ ಕೆಲವು ಭಾಷಣಗಳಲ್ಲಿ ಮತ್ತು ವರ್ತನೆಯಲ್ಲಿ ಪ್ರಖ್ಯಾತಮಾಡಿರುತ್ತಾರೆ ಇವರಂತೆ ಸರಕಾರದ ಎಲ್ಲಾ ಅಧಿಕಾರಸ್ಥಾನಗಳಲ್ಲಿ ಈ ಆಲೋಚನೆ ಬರುವುದು ಉಚಿತವು ನವ ರಾಜ ಶಾಸನದಲ್ಲಿ ಇವರ ಬುದ್ಧಿ ವಿಕಾಸವಾಗಲೂ ತುಂಬಾ ಅವಕಾಶಗಳಿವೆ.

"ಹಾಗಾದರೆ ಒಟಾವಾದಲ್ಲಿ ಆದ ವ್ಯಾಪಾರದ ಕರಾರಿನ ವಿಷಯ ದುರಭಿಪ್ರಾಯ ಹುಟ್ಟುವಂತೆ ಸರಕಾರದವರಿಂದ ಇಷ್ಟು ಪ್ರಯತ್ನಗಳೇಕೆ? ಅದು ಎಸೆಂಬ್ಲಿಯಲ್ಲಿ ಇತ್ಯರ್ಥವಾಗತಕ್ಕದಲ್ಲವೆ? ಹಿಂದೀಯರು ಅಲಂಕರಿಸಿದ ಕೆಲವು ಮಹಾ ಸ್ಥಾನಗಳನ್ನು ಅವರಿಂದ ಅಪಹರಿಸಿ ಅದನ್ನು ಪಾಶ್ಚಾತ್ಯರಿಗೆ ಕೊಡುವ ಪ್ರಯತ್ನಗಳೇಕೆ? ಸ್ವರಾಜ್ಯ ಸಾಧಿಸಲು ಪ್ರಜೆಗಳಿಗೆ ಈ ತರದ ತರಬೇತೆ? ಈ ರೀತಿಯ ವರ್ತನೆಯಿಂದ ರಾಷ್ಟ್ರೀಯ ಯಾ ವ್ಯಾಪಾರಿಕ ಪ್ರಪಂಚದಲ್ಲಿ, ಭಾರತೀಯರ ಮೈತ್ರಿಯು ದೊರಕಲಾರದು" ಎಂದು ಹಿಂದೂಪತ್ರಿಕೆಯ ಪ್ರತಿನಿಧಿಗಳ ಮಾತು.

[ಆ ಪೆಟ್ಟಿಗೆಯೊಳಗಿಂದ ಶಬ್ದವು ಲೌಡ್‌ಸ್ಪೀಕರ್‌ನ ಹೊರತು ಬೇರೆ ಯಾವ ವಿಧದಲ್ಲೂ ಹೊರಗೆ ಬರುತ್ತಿದ್ದಿಲ್ಲ. ಆ ಶಬ್ದವನ್ನು ಪ್ರತಿವಿಧಾಯಿಸಿ, ಈ ಪೆಟ್ಟಿಗೆಯೊಳಗಿನ ದೀಪಗಳು ಹಚ್ಚಲಾಗಿ ವ್ಯಕ್ತಿಯು ಜನಸ್ತೋಮಕ್ಕೆ ಗೋಚರನಾಗಲೂ ಆತನ ಮಾತುಗಳು ಕೇಳಿಸಿ ಬಂದುದರಿಂದ ನಾವು ಪ್ರಕಾಶದಿಂದ, ಅಂದರೆ ಕಣ್ಣಿನಿಂದ ಕೇಳಿಸಬಹುದೆಂಬು ಪ್ರಕಟವಾಗುತ್ತದೆ]

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ಕಿಳಂಟುಗಳ ಆಧಾರದಿಂದ ನಾವು ತಿಕ್ಷ್ಣ ... ಸ್ವಾನುಭವದೊಂದಿಗೆ ಎಲ್ಲಾ ಔಷಧಿ ಗುಳಿಗೆಗಳು ಸುಲಭ ಬೆಲೆಗೆ ವಿಕ್ರಯವಾಗುತ್ತವೆ. ಈ ಧರ್ಮಸಂಸ್ಥೆಯು ಈ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುಕ್ತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ಭೃಷ್ಣವಂಗ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ್‌ಮೆಂಟ್ ರಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ

ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
82, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾರದಾ ಕ್ಯಾಲೆಂಡರು ಶಾರದಾ ಕ್ಯಾಲೆಂಡರು

12 ಸುಂದರವಾದ ಚಿತ್ರಗಳನ್ನೊಳಗೊಂಡ 1936ನೇ ಇಸವಿಯ ಕ್ಯಾಲೆಂಡರು.

ದಶಂಬರ ತಾ. 20ರಲ್ಲಿ ವಿಕ್ರಯಕ್ಕೆ ತಯಾರಾಗುವುದು.

ಭಂಡಸಾಲೆಗಳಲ್ಲಿಯೂ ಪ್ರತಿಯೋರ್ವರ ಮನೆಯಲ್ಲಿಯೂ
ಇಂಥ ಕ್ಯಾಲೆಂಡರು ಅತ್ಯಗತ್ಯ

ಎಲ್ಲರೂ ಪಡಕೊಳ್ಳುವಂತೆ ಬಹಳ ಕಮ್ಮಿ ಕ್ರಯವಿಟ್ಟಿದೆ.

ಕ್ರಯ ಬರೇ ಆಣೆ 3

ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನ್ ಕೊಡಲಾಗುವುದು.

ಸಿಗುವ ಸ್ಥಳ — ಶಾರದಾ ಛಾಪಖಾನೆ ರಥಬೀದಿ ಮಂಗಳೂರು.
ಟಪ್ಪಾಲಿನಲ್ಲಿ ಕಳುಹಿಸಬೇಕಾದರೆ, 0-4-0 ಸ್ಟಾಂಪು ರವಾನಿಸಿರಿ

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲೂ ಜಾಗ್ಗರ್" ವಜ್ರಗಳೂ
"ಎಕ್ಸ್‌ಟ್ರಾ ವ್ಹೈಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗದಿಂದ ಮನುಷ್ಯನ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ:—ದೊಡ್ಡ ಬಾಟ್ಲಿಗೆ ರೂ. 4 ಮಧ್ಯಮ 2–4–0. ಚಿಕ್ಕದು 1–2–0.

ತಯಾರಿಸುವವರು— ಲಕ್ಷ್ಮೀ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು
ಮುಖ್ಯ ಏಜಂಟರು.— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಸ್ವದೇಶಾಭಿಮಾನಿ

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಫ್ರೆಂಚ ಪ್ರಧಾನ ಮಂತ್ರಿಯವರ ಉಭಯಸಂಕಟ!

ಲಂಕೆಶಯರೂ, ಹಿಂದೂದೇಶವೂ.

ಬ್ರಿಟಿಷರಿಗೂ ಜಪಾನಿಯರಿಗೂ ಚೀನದ ಸ್ವಾತಂತ್ರ್ಯದ ಕುರಿತು ಯುದ್ಧ ಘಟಿಸುವುದೇ?

ಫ್ರೆಂಚ ಪ್ರಧಾನ ಮಂತ್ರಿಯವರ ಉಭಯಸಂಕಟ.

ಇಟೇಲಿಯನ್ನು ಕೆಣಕುವ ಇಚ್ಛೆ ಇವರಿಗಿಲ್ಲ. ಆದರೆ ಇವರಿಗೆ ಬ್ರಿಟಿಷ ಸ್ನೇಹಾಚಾರ ಬೇಕಾಗಿದೆ. ಇಟೇಲಿಯ ಮೇಲೆ ಪೆಟ್ರೋಲ್ ಎಣ್ಣೆ ಇತ್ಯಾದಿಗಳ ಸೆಂಕ್ಷನು ಪ್ರತಿಕ್ರಿಯೆಗಳನ್ನು ಜ್ಯಾರಿಮಾಡಬೇಕೆಂಬ ಪ್ರಶ್ನೆಯನ್ನು ಜನಾಂಗಸಭೆಯಲ್ಲಿ ಚರ್ಚಿಸಲು ಇಚ್ಛೆಯಿಲ್ಲದವರಾಗಿದ್ದಾರೆ ಬ್ರಿಟಿಷರು ಇಟೇಲಿಯನ್ನು ಸದೆಬಡಿಯಲು ಈ ಸೆಂಕ್ಷನುಗಳನ್ನು ಜ್ಯಾರಿಮಾಡಲು ಸಿದ್ಧರಾಗಿದ್ದಾರೆ ಯಾವಾಗಲೂ ಒಟ್ಟಾಗಿ ಕಾರ್ಯಸಾಧಿಸುತ್ತೇವೆ ಎಂದು ಜನಾಂಗಸಭೆಗೆ ಇವರು ವಾಗ್ದಾನವನ್ನು ಮುಂಚೆಯೇ ಮಾಡಿಬಿಟ್ಟಿರುತ್ತಾರೆ. ಆದರೆ ಜನಾಂಗಸಭೆಯನ್ನು ಕ್ರಮಗೆ ಬೇಕಾದ ರೀತಿಯಲ್ಲಿ ಕುಣಿದಾಡಿಸಲು ಇವರಿಗೆ ತುಂಬಾ ಭರವಸೆ ಇದೆ ಈ ಪ್ರಶ್ನೆಯಲ್ಲಿ ಫ್ರೆಂಚರ ಮತ್ತು ಬ್ರಿಟಿಷರ ಹಿತವು ಮಾತ್ರ ಅಪಾಯಕರ ಸ್ಥಿತಿಯಲ್ಲಿದೆ ಜರ್ಮನಿಯವರ ಭಯದಿಂದ ಫ್ರೆಂಚರು ಬ್ರಿಟಿಷರಸಹಕಾರವನ್ನು ತೋರುತ್ತಿದ್ದಾರೆ. ಹೀಗಾಗಿ ಜನಾಂಗಸಭೆಯು "ಒಬ್ಬನ ನಾಟಕವಾಗಿ" ಈಗ ನಡೆಯುತ್ತದೆ

ಬ್ರಿಟಿಷರಿಗೂ, ಜಪಾನಿಯರಿಗೂ, ಚೀನದ ಸ್ವಾತಂತ್ರ್ಯದ ಕುರಿತು ಯುದ್ಧ ಘಟಿಸುವುದೇ?

ಮಧ್ಯ ಏಸ್ಯಾದಲ್ಲಿ ಬ್ರಿಟಿಷರಿಗೂ ಜಪಾನಿಯರಿಗೂ ಒಂದು ಯುದ್ಧ ಘಟಿಸುವ ಸಂಭವಗಳಿವೆ. ದಕ್ಷಿಣ ಚೀನಾದಲ್ಲಿ ಬ್ರಿಟಿಷರ ಆಕರ್ಷಣಾ ಪ್ರಯತ್ನಗಳು ಕಾಣುತ್ತಿವೆ ಜಪಾನಿಯರು ಚೀನಾದೇಶದ ಪ್ರಾಂತ್ಯಗಳನ್ನು ತನ್ನ ಬದಿಗೆ ಸೇರಿಸಿಕೊಳ್ಳಲು ಸಾಧಿಸುತ್ತದೆ ಇಬ್ಬರೂ ಚೀನಾ ದೇಶದವರ ಸ್ವಾತಂತ್ರ್ಯದ ನೆಪದಿಂದ ತಮ್ಮ ಸ್ವಾರ್ಥಕ್ಕಾಗಿ ಕಾರ್ಯಗಳನ್ನು ಸಾಧಿಸುತ್ತಿದ್ದಾರೆ ಜಪಾನಿಯ ಸಾಮ್ರಾಜ್ಯದ ಜನಸಂಖ್ಯೆ, ಜಪಾನ ಸಾಮ್ರಾಜ್ಯದ ಹರಹು ವಿಕೆಯನ್ನು ಅನುಸರಿಸಿ, ದಿನೇ ದಿನೇ ವೃದ್ಧಿ ಹೊಂದುತ್ತಿದೆ ಇಂಗ್ಲೆಂಡಿಗೆ ಅವರ ಜನಸಂಖ್ಯೆ ಬ್ರಿಟಿಷ ಸಾಮ್ರಾಜ್ಯದ ೪ ಅಂಶವಾಗಿರುತ್ತದೆ ಅದಲ್ಲದೆ ಜಪಾನಿಯರು ಸರ್ವ ವಿಷಯಗಳಲ್ಲೂ ಬ್ರಿಟಿಷರ ಬೆನ್ನು ಹಿಡಿಯುತ್ತಿದ್ದಾರೆ ಇದನ್ನು ಬ್ರಿಟಿಷರು ಎಂದಿಗೂ ಸಹಿಸಲಾರರು ಈ ಕಾರಣದಿಂದಲೆ ಬೇಂಕ್ ಒಫ್ ಇಂಗ್ಲೆಂಡಿನವರು ಈ ಪ್ರದೇಶಗಳಲ್ಲಿ ತಮ್ಮ ಚರ್ಚುಗಳನ್ನು ಸ್ಥಾಪಿಸಲು ಸಾಧಿಸುತ್ತಿದ್ದಾರೆ. ಆದರೆ ಜಪಾನಿಯರ ಬೇಂಕ್ ಒಫ್ ಟೋಕಿಯೋದವರು, ಇವರೊಡನೆ ಸ್ಪರ್ಧಿಸುತ್ತಿದ್ದಾರೆ. ಆಂಗ್ಲೇಯ ಚಲಾವಣೆ ನಾಣ್ಯವಾದ ಪೌಂಡಿಗೆ ಈ ಪ್ರದೇಶಗಳಲ್ಲಿ ಮಹತ್ವ ಬರುವಂತೆ ಸಾಧಿಸುತ್ತಿರುವಾಗ, ಜಪಾನಿಯರ ಚಲಾವಣೆ ನಾಣ್ಯವಾದ ಯೆನ್ನಿಗೆ ಹೆಚ್ಚಿನ ಅವಕಾಶ ದೊರೆತಿರುತ್ತದೆ. ಆದರೆ ಪ್ರಕೃತಕ್ಕೆ ಒಂದು ಒಪ್ಪಂದದಿಂದ ಈ ಎರಡು ಸಂಸ್ಥೆಗಳ ಕಾರ್ಯಭಾರವು ನಿಯಮಿತ ಸ್ಥಳಗಳಲ್ಲಿ ನಡೆಯುವಂತೆ ವ್ಯವಸ್ಥೆಗಳಾಗಿವೆ. ಅಂತೂ ಇಂತೂ, ಬೇಗನೆ 'ಚೀನಿಯರಿಗೆ ಸ್ವಾತಂತ್ರ್ಯವಿರಬೇಕು' ಎಂದು ಇತ್ತಂಡದವರು ಯುದ್ಧರಂಗಕ್ಕೆ ಇಳಿಯುವ ಸಂಭವ ಬಾರದೆ ಇರದು.

ಯುರೋಪು ಖಂಡಕ್ಕೂ-ಅಮೇರಿಕಾಕ್ಕೂ ಇರುವ ಭೇದ.

ಅಮೇರಿಕಾದ ವ್ಯಾಪಾರ ಪ್ರಪಂಚದಲ್ಲಿ ಎಲ್ಲೆಲ್ಲೂ ಸಂತೋಷದ ಕುರುಹುಗಳ ಕಾಣುತ್ತಿವೆ. ಎಲ್ಲಾ ವ್ಯಾಪಾರ ಸಂಸ್ಥೆಗಳ ಶೇರುಗಳ ಮೇಲೆ ಯೋಗ್ಯ ಡಿವಿಡೆಂಡುಗಳು ಹಂಚುವಿಕೆಯು, ಆಧಾಯಪಟ್ಟಿಗಳೂ, ಅಮೇರಿಕಾದ ವ್ಯಾಪಾರದ ಸಂತುಷ್ಟಿಯನ್ನು ಸೂಚಿಸುತ್ತಿವೆ ಧಾರಳ ಭಂಗಾರವು ಪರದೇಶಗಳಿಂದ ಇವರ ಬೊಕ್ಕಸ ಸೇರುತ್ತಿವೆ. ಫ್ರೆಂಚ ಸರಕಾರದ ಭಯಂಕರ ಆರ್ಥಿಕ ಸ್ಥಿತಿಯು ಯುರೋಪು ಖಂಡದ ಈಗಿನ ಸ್ಥಿತಿಯನ್ನು ಸೂಚಿಸುತ್ತದೆ.

ಅಮೇರಿಕಾದ ಸ್ಟೆಂಡಾರ್ಡ ಒಯಿಲ್ ಕಂಪೆನಿಯವರು ಇಟೆಲಿಯವರಿಗೆ ಯುದ್ಧ ಕಾರ್ಯಗಳಿಗೆ ಬೇಕಾಗುವ ಪೆಟ್ರೋಲ್ ಇತ್ಯಾದಿ ಖನಿಜ ಎಣ್ಣೆಗಳನ್ನು

ಒದಗಿಸಿ ಕೊಡಲು ಒಂದು ಕರಾರನ್ನು ಮಾಡಿರುತ್ತದೆ ಇದಕ್ಕೆ ಬದಲಾಗಿ ಮುಂದಕ್ಕೆ ಇಟೇಲಿಯ ಎಣ್ಣೆ ವ್ಯಾಪಾರದಲ್ಲಿ ಏಕಾಧಿಕಾರ ಕೊಡುವರೆಂದು ಇಟೇಲಿಯಾನ ಸರಕಾರವು ಒಪ್ಪಿರುವುದ ಸಂಯುಕ್ತ ಅಮೇರಿಕಾದ ಸರಕಾರದವರು ತಮ್ಮ ವ್ಯಾಪಾರ ಮಂಡಳದ ಮೇಲೆ ಸೆಂಕ್ಷನುಗಳನ್ನನುಸರಿಸಿ ನಿರ್ಬಂಧಗಳನ್ನು ಹಾಕಲು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ ಯುದ್ಧದ ದೆಸೆಯಿಂದ ಉಂಟಾಗಬಹುದಾದ ಈ ವ್ಯಾಪಾರವನ್ನು ಅಂದರೆ ಮಹತ್ತಾದ ಸಂಪತ್ತನ್ನು ಗಳಿಸುವ ಸುಯೋಗವನ್ನು ಅಮೇರಿಕನ್ ವ್ಯಾಪಾರಿಗಳು ತಿರಸ್ಕರಿಸಲು ಸಿದ್ಧರಿಲ್ಲ ಇದರಿಂದ ಮುಸಲೋನಿಯು ಇನ್ನೂ ಹಿಗ್ಗಿಕೊಂಡಿರುತ್ತಾನೆ

'ಬ್ರಿಟಿಷರು ಅದನ್ನು ಆಕ್ರಮಿಸುತ್ತಿದ್ದರು'

ಇಂಗ್ಲೆಂಡಿನ 'ದಿ ಇನ್‌ಕ್ವಾಯಿರರ್' ಎಂಬ ಪತ್ರಿಕೆಯ ೧೨ನೇ ಅಕ್ಟೋಬರ ೧೯೩೫ರ ಸಂಚಿಕೆಯಲ್ಲಿ ಕೆಳಗಿನ ಹಾಸ್ಯಭರಿತ ಕಥೆಯು ಪ್ರಕಟವಾಗಿರುತ್ತದೆ

"ಬ್ರಿಟಿಷರಿಗೆ ಅವರ ಮೇಲಿನ ಹಾಸ್ಯಗಳನ್ನು ಸಹಿಸುವ ಶಕ್ತಿಯಿದ್ದರೆ ಮಾತ್ರ ಅವರು ಸ್ಥಿರವಾಗಿ ಬಾಳಬಹುದು ಈ ಕೆಳಗಿನ ಕಥೆಯನ್ನು ನಾನು ಒಂದು ವಾರ ಪತ್ರಿಕೆಯಲ್ಲಿ ಕಂಡೆನು ಓರ್ವ ಕ್ರೈಸ್ತ ಧರ್ಮ ಪ್ರಸಾರಕನು ಓರ್ವ ಹಿಂದುವನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವ ಸಾಧನೆಯಲ್ಲಿ ಭಾರಿ ಭಾಷಣವನ್ನು ನಡೆಯಿಸಿದರು ಕೊನೆಗೆ ಆತನೊಡನೆ 'ನಿನಗೆ ಸ್ವರ್ಗಲೋಕವನ್ನು ಸೇರುವ ಇಚ್ಛೆಯಿಲ್ಲವೇ' ಎಂದು ಕೇಳಿದನು ಅದಕ್ಕೆ ಆ ಹಿಂದೂವು ಅಸಮಾಧಾನದಿಂದ ತಲೆದೂಗಿ, "ಸ್ವರ್ಗವು ಅಷ್ಟು ಉತ್ತಮವಾದ ಸ್ಥಳವೆಂದು ನಾನು ಭಾವಿಸುವುದಿಲ್ಲ ಅದು ಯೋಗ್ಯಸ್ಥಳವಾದಲ್ಲಿ ಅದನ್ನು ಬ್ರಿಟಿಷರು ಆಕ್ರಮಿಸುತ್ತಿದ್ದರು" ಎಂದನು

ಲಂಕೆಶಯರೂ, ಹಿಂದೂದೇಶವೂ

ಜಾಪಾನೇ ಲಂಕೆಶಯರಿನ ಈಗಿನ ಸ್ಥಿತಿಗೆ ಕಾರಣ.

"The International Review of Missions (Oct 1935)" ಎಂಬ ಪತ್ರಿಕೆಯಲ್ಲಿ Lancashire looks at Mission 'ಧರ್ಮ ಪ್ರಸಾರಕರ ಮೇಲೆ ಲಂಕೆಶಯರಿನ ದೃಷ್ಟಿ' ಎಂಬ ಲೇಖನದಲ್ಲಿ ಹೀಗೆಂದಿದ್ದಾರೆ

ಲಂಕೆಶಯರಿನ ಹತ್ತಿ ಕೈಗಾರಿಕೆಯ ನೇಯಿಗೆ ವರ್ಗವು ಹಿಂದೂದೇಶದ ವ್ಯಾಪಾರದ ಮೇಲೆ ವಿಶೇಷವಾಗಿ ಹೊಂದಿಕೊಂಡಿತ್ತು ಇಲ್ಲಿಂದ ಅಸಂಖ್ಯಾತ ಬಿಳಿ ದೋತಿಗಳು ಹಿಂದೂದೇಶವನ್ನು ಸೇರುತ್ತಿದ್ದವು. ತಯಾರಾದ ಸಾಮಾನು ಬರೇ ಆರು ತಿಂಗಳಲ್ಲಿ ಮಾಯವಾಗುತ್ತಿತ್ತು. ಹೀಗಿರುವ ಗಾಂಧಿಯವರು ಬಹಿಷ್ಕಾರ ಚಳವಳವು ತಲೆದೋರಿತು. ಜಪಾನಿಯ ಸ್ಪರ್ಧೆಯೂ ಪ್ರಾರಂಭವಾಯಿತು ಒಂದೆ ಒಂದು ರಾತ್ರಿಯಲ್ಲಿ ಮಿಲ್ಲಿನ ಮಾಲಿಕರು ದಿವಾಳಿ ಕೋರರಾದರು. ಅಸಂಖ್ಯಾತ ಜನರು ನಿರುದ್ಯೋಗಿಗಳಾದರು

೧೯೩೧ರಲ್ಲಿ ಲಂಕೆಶಯರಿಗೆ ಬಂದ ಗಾಂಧಿಯವರು ಒಂದು ಸಿನೆಮಾ ಮಂದಿರದಿಂದ ಹೊರಗೆ ಬರುವ ಜನಸಂದಣಿಯನ್ನು ನೋಡಿ ಆಶ್ಚರ್ಯಚಕಿತರಾದರು ಯಾಕೆಂದರೆ ಅದರಲ್ಲಿ ಹಲವರು ನಿರುದ್ಯೋಗಿಗಳು ಆದರೆ ಒಬ್ಬರಲ್ಲೂ ನಿರುದ್ಯೋಗದ ಕುರುಹುಗಳು ಕಾಣುತ್ತಿದ್ದಿಲ್ಲಾ ಬದಲಾಗಿ ಅವರು ಉತ್ತಮ ಉಡುಪನ್ನು ಧರಿಸಿ, ಸಂತೋಷಮುಖಿಗಳಾಗಿದ್ದರು ನಿರುದ್ಯೋಗ ನಿವಾರಣೆಗಾಗಿ ಇವರಿಗೆ ಎಷ್ಟು ಹಣಸಹಾಯ ದೊರೆಯುತ್ತಿದೆ ಎಂದು ವಿಚಾರಿಸಲಾಗಿ, 'ವಾರಕ್ಕೆ ೨೮ ಸಿಲ್ಲಿಂಗುಗಳು ಎಂದರೆ ಸಾಧಾರಣ ರೂ ೨೦/-(ಒಂದು ಕುಟುಂಬಕ್ಕೆ) ಎಂದು ತಿಳಿದ ಬಂತು ಇಷ್ಟು ಹಣವನ್ನು ದುಡಿಯಲು ಭಾರತೀಯರಿಗೆ ಒಂದು ವರ್ಷ ತಗಲುತ್ತದೆ

ಗಾಂಧಿಯವರ ಸಂದರ್ಶನದಿಂದ ಲಂಕೆಶಯರಿನವರಿಗೆ ಹಿಂದೂದೇಶದ ನಿಜವಾದ ಸ್ಥಿತಿಯು ತಿಳಿಯಿತು ಭಾರತೀಯರ ಸ್ಥಿತಿ ಬಹಳ ಹಾಳಾಗಿದೆಯೆಂದೂ, ಅವರ ಒದಾ ನೊಂದ ಕಾಲದಲ್ಲಿ ಈ ಬಡಜನರ ವ್ಯಾಪಾರದ ಮೇಲೆ ಆಶಿತರಾಗಿದ್ದರೆ ದ... ತಿಳಿಸಿತ

ಲಂಕೆಶಯರಿನಲ್ಲಿ ಹಿಂದೂದೇಶ... ದೂಷಿಸುವವರು ಕಡಿಮೆ. ಆದರೆ ಧರ್ಮ ಪ್ರಸಾರಕರಿಗೆ ಇವರ ಬೆಂಬಲವು ಕಡಿಮೆಯಾಗಿರುತ್ತದೆ ತಮ್ಮ ಈಗಿನ ಕಠಿಣ ಅವಸ್ಥೆಗೆ ಜಾಪಾನೇ ಕಾರಣವೆಂದು ಇವರ ತಿಳಿದಿರುತ್ತಾರೆ ಜಾಪಾನಿನ ಅನ್ಯಾಯಕರ ಸ್ಪರ್ಧೆ ಅವರ ನಿರುದ್ಯೋಗ, ಅವಳ ಕೀಳು ಜೀವನಮಾನವೇ ಮೊದಲಾದ ಅವರ ವಿಷಯ ಕಥೆಗಳನ್ನು ಕೇಳುವುದರಲ್ಲಿ ಇವರಿಗೆ ತುಂಬಾ ಪ್ರೀತಿ ಜಾಪಾನು ಬ್ರಿಟಿಷರಂತೆ ಕೈಗಾರಿಕೆಯಲ್ಲಿ ಬಹಳವಾಗಿ ಅಭ್ಯುದಯ ಹೊಂದುತ್ತಿದೆ ಕೈಗಾರಿಕೆಯ ವಿಜ್ಞಾನ ಅರಿವಿನಿಂದ ಜಾಪಾನು ಮುಂದೆ ಸಾಗುತ್ತಿದೆ ಎಲ್ಲರನ್ನೂ ಬೆರಗುಗೊಳಿಸುತ್ತಿದೆ

'ಹರಿಜನೋದ್ಧಾರವಾಗತಕ್ಕದು'

'ಜಿಲ್ಲಾ ಬೋರ್ಡಿನವರಿಗೆ ಹರಿಜನೋದ್ಧಾರಕಾರ್ಯದಲ್ಲೂ, ಹಳ್ಳಿಗಳ ಸಣ್ಣ ಕೈಗಾರಿಕೆಗಳ ಉದ್ಧಾರಮಾಡುವ ಕಾರ್ಯದಲ್ಲೂ, ಹಿಂದಿ ಪ್ರಚಾರದಲ್ಲೂ ಭಾಗವಹಿಸಿ, ಅವುಗಳು ಯಶಸ್ವಿಯಾಗಿ ನಡೆಯುವಂತೆ ಮಾಡಲು, ತುಂಬಾ ಅವಕಾಶವಿದೆ ಅವರು ಮೇಲಿನ ದೇಶೋದ್ಧಾರದ ಕಾರ್ಯಗಳನ್ನು ಮಾಡತಕ್ಕದು" ಎಂದು ಶ್ರೀ ಬಾಬು ರಾಜೇಂದ್ರ ಪ್ರಸಾದರು ಕಲ್ಲಿಕೋಟೆಯಲ್ಲಿ ಮಲಬಾರು ಜಿಲ್ಲಾ ಬೋರ್ಡಿನವರು ಅರ್ಪಿಸಿದ ಬಿನ್ನವತ್ತಳೆ ಉತ್ತರದಲ್ಲಿ ಸೂಚಿಸಿದರು

ಇನ್‌ಕಮ್ ವಿಚಾರಣಾ ಸಮಿತಿ

ಈಗ ಮುಂಬೈಯಲ್ಲಿ ತನ್ನ ಕಾರ್ಯವನ್ನು ನಡೆಸುತ್ತಿದ್ದಾರೆ ಮಹಾರಾಷ್ಟ್ರ ವ್ಯಾಪಾರ ಮಂಡಳದವರೂ, ಹಿಂದೂದೇಶದಲ್ಲಿ ವ್ಯಾಪಾರ ಮಾಡುವ ಬಹೀರ್ ಸಂಸ್ಥೆಗಳ ಹಲವು ನೆಪಗಳಿಂದ ತಿದಾಯಕರಿಕೆ ನ್ನ ತಪ್ಪಿಸಿಕೊಳ್ಳುವುದರಿಂದ ಸರಕಾರಕ್ಕೆ ಸಾಧಾರಣ ~ ಕೋಟಿ ರೂಪಾಯಿ ನಷ್ಟವಿರುವುದೆಂದೂ, ಅವರ ಮೇಲೆ ತೆರಿಗೆ ವಿಧಿಸುವ ಕ್ರಮಗಳಾಗಬೇಕೆಂದೂ ಸಾಗುವಳಿ ಆದಾಯದ ಮೇಲೆ ತೆರಿಗೆ ವಿಧಿಸಬಾರದಾಗಿಯೂ, (ಹಿಂದೂದೇಶದ ವ್ಯಾಪಾರ ಮಂಡಳ ಸೂಚನೆಗಳನ್ನನುಸರಿಸಿ) ಆದಾಯ ತೆರಿಗೆಯನ್ನು ವಿಧಿಸುವ ಯೋಗ್ಯತೆಯನ್ನು ೨೦೦೦ಕ್ಕೆ ಏರಿಸಬೇಕೆಂದು ಈ ಸಮಿತಿಗೆ ಮನವಿಮಾಡಿರುವರು



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರಗಟ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ ಹಸಾಗ್ ದೀಪದ ಪ್ರತ್ಯೇಕ... ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR

ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವುದು



Sole Representatives — F Racek & Co.,

Bombay	Calcutta	Madras	Colombo
P. O. Box	P. O Box	P O Box	P O Box
2006	2121	1248	389

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗಿಳಿದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖ ದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದು ಸಿಕ್ಕುತ್ತವೆ

೧೦೦ ರೂಪಾಯಿ ಬಹುಮಾನ
(ಮ್ಯಾಗ್ನೆಟಿಕ್ ಉಂಗುರ)

ಬಹು ಶಕ್ತಿಯುತವಾದುದು ಅಲ್ಲದೆ ಶಾಂತಿ ಯುತವಾದುದು. ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ. ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ನಾಶವಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ, ಇನ್ನೊಬ್ಬರಿಗೆ ದಾಸರಾಗ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ ೨ ಮಾತ್ರ.

01.P.8 Bengal Mesmarism House
5-7 Panchpota, Bengal (S. B

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ ...	3— 2	3— 8
ಮುಸ್ಕತಿ ...	4— 0	4— [illegible]
ಗುಡ್ಡ ಸುಗ್ಗಿ ...	3— 6	3—14
ಊರ ಅವ್ವಲ್ ಬೆಳ್ತಿಗೆ	4—10	5— 0
ರಂಗೂನು ಬೆ. ಗೋ. ಒಕ್ಕೆ .	6— 8	7— 0
ಎಲ್ಲೂರು ಬೆ. ಮು. ಒಕ್ಕೆ ..	4— 4	4— 8
ಗೋದಿ ಗೋಣಿ ಒಕ್ಕೆ ..	10— 0	12— 8
ತೊಗರಿ ಗೋಣಿ ಒಕ್ಕೆ	10 —8	11— 0
ಹುರುಳಿ ಗೋಣಿ ಒಕ್ಕೆ ..	5— 8	6 — 2
ಕಡಲೆ ಗೋಣಿ ಒಕ್ಕೆ ...	7 — 8	10— 8
ಹೆಸರುಬೇಳೆ ಗೋಣಿ ಒಕ್ಕೆ .	10— 0	17— 0
ಉದ್ದು ಗೋಣಿ ಒಕ್ಕೆ .	9— 8	10 — 0
ಹೆಸರು ಗೋಣಿ ಒಕ್ಕೆ	9— 4	9—12
ಊರುಬೆಲ್ಲ ಖಂಡಿ ಒಕ್ಕೆ .	30—	35— 0
ಉಪ್ಪು ಗೋಣಿ ಒಕ್ಕೆ ...	4— 6	4— 4
ಕೊಬ್ರಿ ಖಂಡಿ ಒಕ್ಕೆ ..	70— 0	75— 0
ಕೊಬ್ರಿ ಹಿಂಡಿ ಖಂಡಿ ಒಕ್ಕೆ ..	28— 3	29— 0
ಎಳ್ಳಿಂಡಿ ಖಂಡಿ ಒಕ್ಕೆ ...	33 —12	35— 0
ಕೊಬ್ರಿ ಎಣ್ಣೆ ಮುಡಿ ಒಕ್ಕೆ .	4—10	4 — 14
ಎಳ್ಳೆಣ್ಣೆ ಮುಡಿ ಒಕ್ಕೆ ..	5— 2	6— 0
ಬಿಳಿಎಣ್ಣೆ ಪಟ್ಣಗೆ ಒಕ್ಕೆ ..	5— 8	5—12
ಮೋರಿಸ ಸಕ್ಕರೆ ಮು. ಒಕ್ಕೆ. .	3—7	3—10
ಮೆಣಸು ...	2— 8	4—,4
ನಾಟಿ ಮೆಣಸು ಒಕ್ಕೆ ...	6 — 0	6—14
ಕಾಳುಮೆಣಸು ಖ. ಒಕ್ಕೆ . .	100— 0	105-
ಯಾಲಕ್ಕಿ ದೇಶ ಪೌಂಡ್ ಒಕ್ಕೆ..	35— 8	36— 5
ಗೇರುಬೀಜ ಮು. ಒಕ್ಕೆ ...	4—14	5 — 0
ಕಬ್ಬಿಣ ಖಂಡಿ ಒಕ್ಕೆ ...	40— 0	40— 8
ತಾಂಬ್ರ ತಗಡು ಮು. ಒಕ್ಕೆ...	10— 0	10— 8
ತಾಂಬ್ರಪಾತ್ರಗಳು ಮು ಒಕ್ಕೆ	14— 0	14— [illegible]
ಚಿಕ್ಕಬೆಳ್ಳಿ ಸೇರು ಒಕ್ಕೆ .	16— 4	16— 8
ಹಿತ್ತಾಳೆ ತಗಡು ಮು ಒಕ್ಕೆ .	9— 0	9— 8
ಹವನು ಒಕ್ಕೆ .	22— 6	23— 8
ಹುಣಸೆ ಹುಳಿ ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	150— 0	167— 8
ಫಿಟೇರ ಕಾಫಿ ಖಂಡಿ ಒಕ್ಕೆ ,	190— 0	195— 0
ಮಂಗಳೂರು ಹಂಚು ..	25— 0	26 — 0
ಸಕಲೇಶಪುರ ಹಂಚು ..	28— 0	30 — 0
ಹಲಸು ಅಡಿ ...	100—0	115—0

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P. 76/1935

ಕಮಲ ಪಡುಬಿದ್ರಿ ಅನಂತಾಚಾರಿ ವಿಧವೆ, ಉಡುಪಿ ಕಸಬಾ ಶಿರಿಬೀಡಿನಲ್ಲಿರುವವಳು—ಅರ್ಜಿದಾರಳು.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ.—

ಅರ್ಜಿದಾರಳು ತನ್ನ ಗಂಡ ಮೃತ ಉಡ್ಪಿ ಕಸಬಾ ಶಿರಿಬೀಡಿನಲ್ಲಿ ವಾಸಿಸಿಕೊಂಡಿದ್ದ ಪಡುಬಿದ್ರಿ ಸುಬ್ರಾಯಾಚಾರಿ ಮಗ ಅನಂತಾಚಾರಿಯ ಬಾಬ್ತು ಸದ್ರಿ ಮೃತನು ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡ್ಪಿ ಲಿಮಿಟೆಡ್ ಉಡ್ಪಿ-ಬೇಂಕಿನಲ್ಲಿ ಸೆಕ್ಯೂರಿಟಿ ಆಗಿ ಇರಿಸಿದ H O S F D No 6/33ರ ಬಾಬ್ತು ಸದ್ರಿ ಬೇಂಕಿನಿಂದ ಬರಾ ಅಸಲು ಬಡ್ಡಿ ಏವೇಜು, ಮೇಲ್ಕಂಡ ಬೇಂಕಿನಲ್ಲಿ ಮೃತನು ಪಡೆದ ಶೇರ್ ಸರ್ಟಿಫಿಕೇಟು No 280ರ ಬಾಬ್ತು ಬಡ್ಡಿ ಯಾ ಡಿವಿಡೆಂಡ್ ವಸೂಲು ಮಾಡುವ ವ ಸದ್ರಿ ಶೇರನ್ನು ಮಾರಾಟಮಾಡುವ ವಗೈರೆ ಯಾವತ್ತು ಹಕ್ಕು ಮತ್ತು ಸದ್ರಿ ಬೇಂಕಿನಲ್ಲಿ ಮೃತನು ನಂಬ್ರ J L No 170/33ರ ಪ್ರಕಾರ ಈಡುಮಾಡಿದ ಆಭರಣಗಳನ್ನು ಸದ್ರಿ ಬೇಂಕಿನಿಂದ ಪಡಕೊಳ್ಳುವ ಹಕ್ಕು ವಗೈರೆಗಳಿಗೆ ಸದ್ರಿ ಮೃತನು ತಾ 30-9-1935ರಲ್ಲಿ ಬರೆದಿಟ್ಟ ವೀಲುನಾಮೆ ಪ್ರಕಾರ ತಾನು ಹಕ್ಕುದಾರಳೆಂತಲೂ ಆ ಕುರಿತು ಒಂದು ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿಯೂ ವಗೈರೆ ಅಪೇಕ್ಷಿಸಿ ಮಾಡಿಕೊಂಡ ಅರ್ಜಿದಾರಳ ಮೇಲ್ಕಂಡ ಅರ್ಜಿಯು ತಾ 7-1-1936ಕ್ಕೆ ತನಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಸ್ವತಹಾ ವ ವಕೀಲರ ದ್ವಾರಾ ಮೇಲ್ಕಂಡ ಕೋರ್ಟಿನ ಮುಂದೆ ಜ್ಯಾಹೀರುಮಾಡಿಕೊಳ್ಳಬಹುದು ಎಂತ ಈ ಮೂಲಕ ತಿಳಿಸಲಾಗುತ್ತದೆ.

P. N Madhava Rao,
Vakil for Petitioner.

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ.

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು—ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು— ಅದರ ಕ್ರಯವೆಷ್ಟು?"

ಆನಂದರಾಯರು—ಎಲ್ಲಾ ಕಡೆಗಳಿಗಿಂತ ಕೇವಲ 25 ಟಕಾ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ತಕ್ಕ ಮಾಲು ಖಂಡಿತ. ಜರಿ, ರಂಗು ಮೊದಲಾದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪಡಲು ಸದ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ, ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಜರಿಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ. 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಮರಿ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಮರಿ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ವಸ್ತುಗಳ ಕ್ರಯದ ಪಟ್ಟಿ ಇನಾಮ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟಿ, 1 ಕಾಶೀ ವಿಶ್ವೇಶ್ವರ ಪಟ ಕಳಿಸಲಾಗುವುದು. ಕಳುಹಿಸುವೆವು. ಇತರ ವಿವರಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬನಾರಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L C's and also for those who have not passed any University examination.

Coaches students for the Specialised Banking Courses (C. A. I. B. & C. A. I. B.) and also for Accountancy, Secretarial, and Insurance Courses (L A A., A. C. R. A., F C R. A., F I S A., A C I I etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D R Murdeshwar,
Dip. Econ, F R Econ, S. (Lond.)
Principal.
Ganapathy High School Street,
Mangalore.

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾರ್ಗಶಿರ ಬ॥ ೪ ಶನಿವಾರದಿಂದ ಮಾರ್ಗಶಿರ ಬ॥ ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೯೩೫ನೇಯ ಧನು ಪೆರಾರ್ದ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
14	ಶನಿ	೪	೯	ಪುಷ್ಯ	೧೦	೨೮	ಕೃಷ್ಣಪಕ್ಷ
15	ರವಿ	೫	೧೨	ಆಶ್ಲೇಷಾ	೧೩	೨೯	
16	ಸೋಮ	೬	೧೬	ಮಘಾ	೨೧	೧	
17	ಮಂಗಳ	೭	೨೧	ಪುಬ್ಬ	೨೭	೨	
18	ಬುಧ	೮	೨೬	ಉತ್ತರಾ	೩೪	೩	
19	ಗುರು	೯	೩೨	ಹಸ್ತಾ	೪೦	೪	
20	ಶುಕ್ರ	೧೦	೩೬	ಚಿತ್ತಾ	೪೬	೫	

ಮುಸಲೋನಿಯು ಜನಾಂಗಸಭೆಯನ್ನು ಮನ್ನಿಸುವನೆ?

ಹಬಸಿಯವರು ಬಹಳ ಧೀರತೆಯಿಂದ ಕಾದಾಡುತ್ತಿದ್ದಾರೆ.

ಡೆಸ್ಸಿ ನಗರದ ಮೇಲೆ ಬೊಂಬಿನ ಸುರಿಮಳೆ! ೪೦೦ ಜನರು ಮಡಿದಿರುವರು!

ದಕ್ಷಿಣ ದಿಕ್ಕಿನಲ್ಲಿ ಎಲ್ಲಾ ಯುದ್ಧಕಾರ್ಯಗಳು ನಿಂತಿವೆ.

ಎಥಿಯೋಪಿಯಾದಲ್ಲಿ ಮಳೆ ಪ್ರಾರಂಭವಾಗಲು ಇನ್ನೂ ಎರಡು ತಿಂಗಳುಗಳಿವೆ. ಅಷ್ಟರೊಳಗೆ ಅದಷ್ಟು ಕಾರ್ಯ ಸಾಧಿಸುವುದಿಟಲಿಯಾನ ನಾಯಕರಾದ ಜನರಲ್ ಬೊಡೊಗ್ಲಿಯೊರವರು ಪರಿಶ್ರಮ ಪಡಲಿಕ್ಕೆಂಥಿದ್ದಾರೆ. ಉತ್ತರ ದಿಕ್ಕಿನ ದಾಬಾಟ ಮತ್ತು ಡೆಸ್ಸಿ ನಗರದ ಮೇಲೆ ಇಟಲಿಯಾನ ವಿಮಾನಗಳು ಧಾರಳ ಬೊಂಬಿನ ಪ್ರಯೋಗವನ್ನು ಮಾಡಿರುತ್ತಾರೆ. ಹಬಸಿ ಸೈನಿಕರ ಧೈರ್ಯ ಪತನವಾಗುವಂತೆಯೂ, ಡೆಸ್ಸಿಯಲ್ಲಿರುವ ಹಬಸಿ ಚಕ್ರವರ್ತಿಯವರಿಗೆ ಅಪಾಯ ಒದಗುವಂತೆಯೂ, ಅವರು ಈ ರೀತಿ ಬೊಂಬಿನ ಪ್ರಯೋಗವನ್ನು ಮಾಡುತ್ತಿದ್ದಾರೆಂದು ತಿಳಿದು ಬರುತ್ತದೆ. ಡೆಸ್ಸಿಯಲ್ಲಿ ಹಬಸಿಗಳ ಮಹಾಸೇನೆಯೊಂದು ಸಿದ್ಧವಿದೆ. ಇಲ್ಲಿ ಚಕ್ರವರ್ತಿಯವರು ಯುದ್ಧ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದಾರೆ. ಉತ್ತರ ದಿಕ್ಕಿನಲ್ಲಿ ಇಟಲಿಯಾನರಿಗೆ ಮಹಾ ತಡೆಯು ಉಂಟಾಗುವುದೆಂದು ಊಹಿಸಲಾಗಿದೆ. ಇಟೇಲಿಯಾನರ ಉದ್ದೇಶಕ್ಕೆ ವಿರೋಧವಾಗಿ ಡೆಸ್ಸಿಯಲ್ಲಿ ಸಂಚಾರಮಾಡುತ್ತಿರುವ ಚಕ್ರವರ್ತಿಯವರು, ವಿಚಿತ್ರ ರೀತಿಯಲ್ಲಿ ಮೃತ್ಯುವಿನ ಬಾಯಿಯಿಂದ ಪಾರಾದರು. ಇಟೇಲಿಯಾನ ಬೊಂಬುಗಳಿಂದ ಇವರು ದೈವವಶಾತ ಪಾರಾದರು. ಇಟೇಲಿಯು ಇತರ ಜನಾಂಗಗಳಿಗೆ, ತಾನು ನಗರಗಳ ಮೇಲೆ ಬೊಂಬಿನ ಉಪಯೋಗಮಾಡುವುದಿಲ್ಲ ಎಂದು ವಾಗ್ದಾನಮಾಡಿತ್ತು. ಆಸ್ಪತ್ರೆಗಳನ್ನೂ ರೆಡ್ ಕ್ರಾಸ್ ಸಂಸ್ಥೆಗಳನ್ನೂ ಬೊಂಬುಗಳಿಂದ ಕೆಡವಬಾರದಾಗಿ ವಿನಂತಿಗಳಿದ್ದವು, ಮತ್ತು ಇಟಲಿಯು ಇವುಗಳ ಮನ್ನಣೆಯು ಮಾಡಿತ್ತು. ಆದರೆ ವೈರಿಗಳನ್ನು ಹೊಡೆಯುವ ಭರದಲ್ಲಿ, ಇಟೇಲಿಯಾನರು ಮೇಲಿನ ಸಂಸ್ಥೆಗಳ ಮೇಲೂ ಬೊಂಬಿನ ಪ್ರಯೋಗವನ್ನು ಮಾಡಿರುವರು. ಒಂದು ಅಮೇರಿಕನ್ ಆಸ್ಪತ್ರೆಯು ದಾಳಿಯಾಗಿರುತ್ತದೆ. ಈ ಕುರಿತು ಚಕ್ರವರ್ತಿಯವರು ಜನಾಂಗಸಭೆಗೆ ತಂತಿ ಕಳುಹಿಸಿಕೊಟ್ಟಿರುತ್ತಾರೆ. ಜನಾಂಗಸಭೆಯು ಇದಕ್ಕೆ ತಕ್ಕ ಪ್ರತಿಕ್ರಿಯೆ ಮಾಡತಕ್ಕದು. ಇಟೇಲಿಯಾನರು ಈ ನಿಷ್ಕಾರುಣ್ಯಕರ ಕಾರ್ಯದಿಂದ ಬಹಳ ಬೇಗ ಅಮೇರಿಕಾದವರು ತಮ್ಮ ಸೇಡನ್ನು ತೀರಿಸದೆ ಬಿಡರು.

ಅಂತರಿಕ್ಷದಿಂದ ಒದಗುವ ಈ ಬೊಂಬುಗಳ ಅಭಿಕ್ರಮದ ಭೀಕರತೆಯೂ ಹಬಸಿಗಳನ್ನು ಸ್ವಲ್ಪವೂ ಬಾಧಿಸುವುದಿಲ್ಲ. ಈ ಅಂತರಿಕ್ಷದ ಅಭಿಕ್ರಮದಿಂದ ಅತಿ ಸ್ವಲ್ಪ ಜನರಿಗೆ ಅಪಘಾತಗಳು ಉಂಟಾಗಿವೆಂದು ಮಹನೀಯರೊಬ್ಬರ ಮಾತು. ಕಾರಣ, ಹಬಸಿಗಳು ಈ ಅಭಿಕ್ರಮಗಳಿಂದ ಪಾರಾಗುವ ಯೋಜನೆಗಳಲ್ಲಿ ಬಹಳ ತರಬೇತು ಹೊಂದಿರುತ್ತಾರೆ. ಈ ಕಾರಣದಿಂದಲೆ, ಇಟೇಲಿಯಾನರು ಓಗಡನ್ ಪ್ರಾಂತ್ಯದ ಅಂತರಿಕ್ಷದಿಂದ ಅಭಿಕ್ರಮಿಸುವ ವಿಧಾನವನ್ನು ತ್ಯಜಿಸಿದರು. ಇಟೇಲಿಯಾನರ ಈ ವರ್ತನೆಗಳಿಂದ ಅವರು ಹತಾಶರಾಗಿದ್ದಾರೆಂದು ವ್ಯಕ್ತವಾಗುತ್ತದೆ. ಹಬಸಿಗಳು ಇಟೇಲಿಯಾನ ಸೈನಿಕರನ್ನು ಬಹಳವಾಗಿ ಪೀಡಿಸುತ್ತಿದ್ದಾರೆಂದೂ, ಅಸ್ಮರಾದಿಂದ ಇಟಲಿಯಾನ ನಿಲ್ದಾಣದಿಂದ ವರದಿ ಬಂದಿರುತ್ತದೆ. ರಾಸ್ ಸೆಯಾಮನು ಟೆಂಬಿಯನ್ ಎಂಬಲ್ಲಿ ಇಟೇಲಿಯಾನರ ಮೇಲೆ ಬಿದ್ದಿರುವನು. ತುಂಬಾ ಇಟೇಲಿಯಾನ ಸೈನಿಕರು ಮಡಿದಿರುವರು. ಇಟೇಲಿಯಾನರು ಹಬಸಿಗಳ ಎದುರು ಸೋಲುವವರಾದರು. ದೇಶಿಯ ಸೈನಿಕರ ಅಯೋಗ್ಯತೆಯೇ ಇದಕ್ಕೆ ಕಾರಣವೆಂದೂ, ಇನ್ನು ಮುಂದಿನ ಯುದ್ಧಕಾರ್ಯಗಳು ಸ್ವದೇಶದ ಅಂದರೆ ಪಾಶ್ಚಾತ್ಯ ಸೈನಿಕರಿಂದಲೆ ನಡೆಯುಸುವ ವ್ಯವಸ್ಥೆಗಳನ್ನು ಮಾಡಿರುತ್ತಾರೆಂದು ವಾರ್ತೆ.

ಮುಂದಕ್ಕೆ ಆಗಲಿರುವ ಯುದ್ಧದಲ್ಲಿ ಹಬಸಿಗಳ ಮತ್ತು ಇಟೇಲಿಯಾನರ ಶಕ್ತಿಪರೀಕ್ಷೆಯಾಗುವುದು. ರೋಮಿನಲ್ಲಿರುವ ಇಟೇಲಿಯಾನ ಭಂಡಾರವು ಬರಿದಾಗುತ್ತಾ ಬಂದಿದೆ. ಸೆಂಕ್ಷನುಗಳು ಫಲಕಾರಿಯಾಗಿ ನಡೆಯುತ್ತಿವೆ ಎಂದು ಬ್ರಿಟಿಷ್ ಬಹಿರ್ ವ್ಯವಹಾರಗಳ ಕಾರ್ಯದರ್ಶಿಗಳ ವರದಿ ಮಾಡಿರುತ್ತಾರೆ. ಮಾತ್ರವಲ್ಲದೆ, ಇಟೇಲಿಯ ಮೇಲೆ ಎಣ್ಣೆಯ ಬಹಿಷ್ಕಾರವು ಬೇಗನೆ ತರಲಾಗುವುದೆಂದು ತಿಳಿಸಿರುತ್ತಾರೆ. ಚಳಿಕಾಲಕ್ಕಾಗಿ ಯುದ್ಧ ಸನ್ನಾಹಗಳನ್ನು ನಿಲ್ಲಿಸುವ ಒಳಗಾಗಿ ಆದಷ್ಟು ಪ್ರಾಂತ್ಯಗಳನ್ನು ವಶೀಕರಿಸಬೇಕಾಗಿ ಇಟೇಲಿಯಾನರು ಪ್ರಯತ್ನಪಡುತ್ತಿದ್ದಾರೆ. ಚಕ್ರವರ್ತಿಯವರ ಮುಂದಾಳುತ್ವದಲ್ಲಿ, ಹಬಸಿಗಳು ಇವರನ್ನು ತಡೆಯದೆ ಬಿಡಲಾರರು.

ಇಟಲಿಯಾನರು ವಿಮಾನಗಳಿಂದ ಬೊಂಬುಗಳನ್ನು ಎಸೆದು ದಾಳಿ ನಡೆಯುಸುತ್ತಿದ್ದಾರೆ. ದಾಗಾಬೂರ್ ಎಂಬ ನಗರವು ಸಂಪೂರ್ಣ ನಿರ್ನಾಮವಾಗಿರುತ್ತದೆ. ಆದರೆ ಅಂತರಿಕ್ಷದ ಅಭಿಕ್ರಮದಿಂದ ಮರಣಗಳೂ ಅಪಘಾತ ಅತಿ ಕಡಿಮೆ. ಕಾರಣ, ಹಬಸಿಯವರು ಈ ಬೊಂಬುಗಳಿಂದ ತಪ್ಪಿಸಿಕೊಳ್ಳಲು ತುಂಬಾ ತರಬೇತು ಹೊಂದಿರುತ್ತಾರೆ. ಈ ಅಭಿಕ್ರಮದಿಂದ ಯಾ ಬೊಂಬಿನ ಪ್ರತಾಪದಿಂದ ಹಬಸಿಯವರು ಭೀಕರಾಗುವ ಹಾಗಿಲ್ಲ. ಅಂತರಿಕ್ಷದಿಂದ ಅಭಿಕ್ರಮದ ಮಹತ್ವ ಸಂಪೂರ್ಣ ಜಾರಿಹೋಗಿರುತ್ತದೆ. ಇದನ್ನೂ ಇಟೇಲಿಯಾನರು ತಿಳಿದವರಾಗಿ, ಇತ್ತೀಚೆಗೆ ಬೊಂಬುಗಳ ಉಪಯೋಗವನ್ನು ಮಾಡುವುದಿಲ್ಲ. ಅಡಿಸ್ ಅಬಾಬದಿಂದ ಪರಾಕ್ರಮ ನಾಯಕರ ಅಧಿಕಾರದಲ್ಲಿ ಸೈನಬಲವು ಓಗಡನ್ ಪ್ರಾಂತ್ಯಕ್ಕೂ, ಉತ್ತರ ದಿಕ್ಕಿಗೂ ಕಳುಹಿಸಲಾಗಿದೆ.

ಮಕಾಲಿಯ ದಕ್ಷಿಣದಲ್ಲಿ ಇಟೆಲಿಯಾನರ ಮೇಲೆ ಹಬಸಿಯವರು ಒಂದು ಅಭಿಕ್ರಮವನ್ನು ಮಾಡಿದರು. ಘೋರ ಕದನವು ನಡೆಯಿತು. ಹಬಸಿಗಳನ್ನು ಹೊಡೆದೂಡಿಸಿದ್ದಾರೆಂದು ವಾರ್ತೆ ಬಂದಿರುತ್ತದೆ.

೯ ಇಟೇಲಿಯಾನ ವಿಮಾನಗಳು ಡೆಸ್ಸಿ ನಗರದ ಮೇಲೆ ಬೊಂಬುಗಳಿಂದ ತುಂಬಾ ದಾಳಿ ನಡೆಸಿದರು. ಹಬಸಿ ಚಕ್ರವರ್ತಿಯವರು ಈಗ ಇಲ್ಲಿಯೆ ವಾಸವಾಗಿರುತ್ತಾರೆ. ಯುದ್ಧ ಕಾರ್ಯದಲ್ಲಿ ಭಾಗವಹಿಸುತ್ತಿದ್ದಾರೆ. ಇಲ್ಲಿಂದ ಇವರು ಉತ್ತರ ದಿಕ್ಕಿನ ನಾಯಕರೊಡನೆ ಯುದ್ಧದ ಕುರಿತು ಸಮಾಲೋಚನೆ ಮಾಡಲು ತೆರಳುವರು.

ಡೆಸ್ಸಿ ನಗರದ ದಾಳಿಯಲ್ಲಿ ಸುಮಾರು ಒಂದು ಸಾವಿರ ಬೊಂಬುಗಳು ಉಪಯೋಗಿಸಲ್ಪಟ್ಟಿದ್ದವು. ಚಕ್ರವರ್ತಿಯವರ ಅಧಿಕಾರದಲ್ಲಿ ವಿಮಾನಗಳನ್ನು ತಡೆಯುವ ಗುಂಡುಗಳ ಉಪಯೋಗವು ಮಾಡಲಾಯಿತು. ನಿರ್ಭಯರಾಗಿ ತನ್ನ ಅರಮನೆ ಕೋಟೆಯಿಂದ ಈ ಕಾರ್ಯವನ್ನು ಮಾಡಿದರು. ಯುದ್ಧವು ನಿಜವಾಗಿಯೂ ಈಗ ಪ್ರಾರಂಭವಾಗಿದೆಂದು ವಾರ್ತೆ ಬಂದಿರುತ್ತದೆ. ಮಕಾಲಿ ಹತ್ತಿರ ಒಂದು ಸಮರದಲ್ಲಿ ಸಾಧಾರಣ ೪೦೦ ಜನರು ಮಡಿದರೆಂದು ವಾರ್ತೆ ಬಂದಿರುತ್ತದೆ.

ಡೆಸ್ಸಿಯಲ್ಲಿರುವ ಅರಸರ ಅರಮನೆಯನ್ನು ಇಟೇಲಿಯಾನರು ಬೊಂಬುಗಳಿಂದ ಕೆಡವಿ, ಸುಟ್ಟು ಬಿಟ್ಟಿರುತ್ತಾರೆ. ಅಲ್ಲಿರುವ ಅಮೇರಿಕನ್ ಆಸ್ಪತ್ರೆಯ ಮೇಲೆ ಬೊಂಬಿನ ಪ್ರಯೋಗವಾಗಿರುತ್ತದೆ. ಸಾಧಾರಣ ೧೦ ಜನರು ಮಡಿದಿರುವರು. ೪೦ ಜನರು ಗಾಯಹೊಂದಿರುವರು. ಚಕ್ರವರ್ತಿಯವರು ಅವರ ಪುತ್ರರೊಡನೆ ಈ ಆಸ್ಪತ್ರೆಗೆ ನಡೆದು, ರೋಗಿಗಳನ್ನು ಸಮಾಧಾನಪಡಿಸಿದರು. ಇಟೇಲಿಯಾನರು ಸಾಧಾರಣ ಮೂರು ಭಯಂಕರ ಅಂತರಿಕ್ಷದ ಅಭಿಕ್ರಮವನ್ನು ಮಾಡಿದರು. ತುಂಬಾ ಹಾನಿಯೂ ನಷ್ಟವೂ ಉಂಟಾಗಿದೆ. ಹಬಸಿ ಚಕ್ರವರ್ತಿಯವರು ದೈವವಶಾತ ಮೃತ್ಯುವಿನಿಂದ ಪಾರಾಗಿರುವರು. ಈ ತರದ ಕ್ರೂರ ವರ್ತನೆಯನ್ನು ಖಂಡಿಸಿ ಹಬಸಿಯ ಚಕ್ರವರ್ತಿಯವರಿಗೆ ಜನಾಂಗಸಭೆಗೆ ತಂತಿಬಿಟ್ಟರು.

ಡೆಸ್ಸಿ ನಗರದ ಎಲ್ಲಾ ಮನೆಮಠಗಳು ಬೊಂಬುಗಳಿಂದ ನಿರ್ನಾಮಹೊಂದಿವೆ. ಸ್ತ್ರೀಯರೂ, ಮಕ್ಕಳೂ, ಮುದುಕರೂ, ಈ ಬೊಂಬಿನ ಪ್ರತಾಪಕ್ಕೆ ತುತ್ತಾಗಿರುತ್ತಾರೆ. ಈ ಬೊಂಬುಗಳು ಸಂಗ್ರಾಮಿಕರಲ್ಲಿ ವಿಶೇಷ ಹಾನಿಮಾಡದೆ ನಾಗರೀಕರಿಗೆ ತುಂಬಾ ಹಾನಿಯನ್ನುಂಟುಮಾಡಿದೆ. ರೋಗಿಗಳ ಉಪಶಮನ ನಡೆಯುಸುವ ಆಸ್ಪತ್ರೆಗಳನ್ನು ಕೂಡ ಕೆಡವಿರುತ್ತಾರೆ. ಹತಾಶರಾಗಿ ಇಟೇಲಿಯಾನರು ಈ ರೀತಿ ವರ್ತಿಸುತ್ತಿದ್ದಾರೆಂದು ಕೆಲವರ ಮತ.

ಇಟೇಲಿಯಾನರು ಎಲ್ಲಾ ನಗರದ ಮೇಲೆ ವಿಮಾನಗಳಿಂದ ಬೊಂಬಿನ ಪ್ರಯೋಗಮಾಡಿರುತ್ತಾರೆಂದೂ, ಆದರೆ, ಇವುಗಳಿಂದ ಯಾವ ಫಲವು ಉಂಟಾಗಲಿಲ್ಲವೆಂದು ವಾರ್ತೆ ಬಂದಿರುತ್ತದೆ. ಹಳ್ಳಿಹಳ್ಳಿಯ ರೈತರು ತಮ್ಮ ಮನೆಮಠಗಳನ್ನು ತ್ಯಜಿಸಿ, ಇಟೇಲಿಯಾನರಿಂದ ತಪ್ಪಿಸಿಕೊಳ್ಳಲು ಹಬಸಿ ಸೈನಿಕರಿಂದ ರಕ್ಷಿತ ಸ್ಥಳಗಳಿಗೆ ಪಲಾಯನ ಮಾಡುತ್ತಿದ್ದಾರೆ.

ದಕ್ಷಿಣದಿಕ್ಕಿನಲ್ಲಿ ಯಾವತ್ತೂ ಯುದ್ಧ ಕಾರ್ಯಗಳು ನಡೆಯಲಿಲ್ಲ. ಇಟೇಲಿಯಾನರ ಅಂತರಿಕ್ಷ ಅಭಿಕ್ರಮದ ವಾರ್ತೆಯು ಎಲ್ಲೆಲ್ಲೂ ಹರಡಿರುತ್ತದೆ.

ಸರ್ ಸಾಮುವೇಲ್ ಹೋರರೂ, ಹಬಸಿ ಇಟೇಲಿ ಕಲಹವೂ

ಜನಾಂಗಸಭೆಯವರು ನಿರ್ಮಿಸಿದ ಸೆಂಕ್ಷನು ಪ್ರತಿಕ್ರಿಯೆಗಳು ಸಾಂಗವಾಗಿ ನಡೆಯುತ್ತಿವೆ. ಇವುಗಳ ಪರಿಣಾಮವು ಬಹಳ ಕುತೂಹಲದಿಂದ ನಿರೀಕ್ಷಿಸಲಾಗಿದೆ. ಈ ಸೆಂಕ್ಷನುಗಳನ್ನು ಪುಷ್ಟೀಕರಿಸುವ ಯೋಜನೆಗಳನ್ನು ಸಿದ್ಧಮಾಡುವವರಿದ್ದೇವೆ. ಜನಾಂಗಸಭೆಯು ಪೆಟ್ರೋಲ್ ಇತ್ಯಾದಿಗಳ ಸೆಂಕ್ಷನನ್ನು ಜ್ಯಾರಿಗೆತರಲು ಸಿದ್ಧತೆಗಳನ್ನು ಮಾಡುತ್ತದೆ. ನಮ್ಮ ಸರಕಾರವು ಇತರ ಜನಾಂಗಗಳ ಸರಕಾರದವರೊಡನೆ ಸಹಕರಿಸಿಯೆ ಕಾರ್ಯಮಾಡುತ್ತಿದೆ. ಕೆಲವು ಕಡೆಯಲ್ಲಿ ಈ ಸೆಂಕ್ಷನುಗಳ ವಿಚಾರ ಬ್ರಿಟಿಷರು ಕಪಟರೀತಿಯಲ್ಲಿ ವರ್ತಿಸುತ್ತಿದ್ದಾರೆಂದು ವಾರ್ತೆಯು ಹರಡಿರುತ್ತದೆ. ಬ್ರಿಟಿಷ ಸಂಸ್ಥೆಗಳು ಇಟೇಲಿಗೆ ಧಾರಳ ಪೆಟ್ರೋಲನ್ನು ಒದಗಿಸಿರುತ್ತದೆ ಎಂಬ ವರ್ತಮಾನವು ಬಂದಿರುತ್ತದೆ. ಆದರೆ ಆ ಸಂಸ್ಥೆಗಳಿಗೂ ಬ್ರಿಟಿಷ ಸರಕಾರದವರಿಗೂ ಯಾವ ತರದ ಸಂಬಧ ಇರುವುದಿಲ್ಲ. ಆದರೂ ಇಂಥಾ ಸಂಸ್ಥೆಗಳಿಂದ ಇಟಲಿಗೆ ರಫ್ತಾಗುವ ಎಣ್ಣೆ ಇತ್ಯಾದಿಗಳು ಬಹಳ ಕಡಿಮೆಯಾಗಿವೆ.

"ಇಟೇಲಿಯವರಿಗೂ ಹಬಸಿಯವರಿಗೂ ಸಮಾಧಾನಪಡಿಸಿ, ಅವರಲ್ಲಿ ಸಂಧಿಸ್ಥಾಪನೆ ಮಾಡುವುದು ಮಹಾ ಸಾಹಸದ ಕಾರ್ಯವಾಗಿರುತ್ತದೆ. ಆದರೂ ನಾವು ಫ್ರೆಂಚರ ಸಹಕಾರದಿಂದ ನಮ್ಮ ಪ್ರಯತ್ನಗಳನ್ನು ಇನ್ನೂ ಹೆಚ್ಚಿಸಬೇಕೆಂದಿದ್ದೇವೆ. ಇಟೇಲಿಯು ಕುಂದುವಂತೆ ಮಾಡುವುದು–ಅವರನ್ನು ಅವಮಾನಗೊಳಿಸುವುದು ನಮ್ಮ ಇಚ್ಛೆಯಲ್ಲ. ನಾವು ಕುಯುಕ್ತಿಯಿಂದ ವರ್ತಿಸುತ್ತೇವೆಂದು ಮುಸಲೋನಿಯು ಭಾವಿಸಬಾರದು. ಇಟೇಲಿಯನ್ನು ಯಾವ ತರದಲ್ಲೂ ಬಾಧಿಸುವುದು ನಮ್ಮ ಇಚ್ಛೆಯಲ್ಲ.

'ಸಂಶಯಗಳನ್ನು ಬದಿಗಿಟ್ಟು ಬೇಗನೆ ಒಪ್ಪಂದಕ್ಕೆ ಬರುವ ಸಾಧನೆಗಳನ್ನು ಮಾಡಬಾರದೆ? ಪ್ರಪಂಚದಲ್ಲಿ ಶಾಂತಿಯು ಉಂಟಾಗುವಂತೆ ಮಾಡಬಹುದಲ್ಲವೆ? ಇಟೇಲಿಯೊಡನೆ ಮೈತ್ರಿ ಬೆಳೆಯಿಸಲು ಜನಾಂಗಸಭೆಯ ಎಲ್ಲಾ ಸದಸ್ಯ ಜನಾಂಗಗಳು ಸಿದ್ಧವಿವೆ. ಆದರೆ, ಜನಾಂಗಸಭೆ ಗೌರವವನ್ನು ಕಾಯಲು ನಾವೆಲ್ಲರೂ ಒಟ್ಟಾಗಿ ಯಾವತ್ತೂ ಪ್ರತಿಕ್ರಿಯೆಗಳನ್ನು ಮಾಡಲು ಸಿದ್ಧರಿದ್ದೇವೆ. ಬ್ರಿಟನ ಶಾಂತತೆ, ಬ್ರಿಟಿಷ ಸಾಮ್ರಾಜ್ಯದ ಶಾಂತತೆ, ಇಡಿ ಪ್ರಪಂಚದ ಶಾಂತತೆ ನಮ್ಮ ವರ್ತನೆಯ ಧ್ಯೇಯವಾಗಿದ್ದು, ಇನ್ನೊಂದು ಮಹಾಯುದ್ಧ ಉಂಟಾಗದ ಹಾಗೂ ಈಗಿನ ಯುದ್ಧಕ್ಕೆ ಕೊನೆಗಾಣಿಸುವ ಹಾಗೂ, ಪ್ರಯತ್ನಪಡುವೆವು'' ಎಂದು ಹೌಸ್ ಒಫ್ ಕೊಮನ್ಸಿನಲ್ಲಿ ಸರ್ ಹೋರರ ಭಾಷಣೆ.

ಮುಸಲೋನಿಯವರ ಭಾಷಣ! ದುಡುಕದೆ ತನ್ನ ಉದ್ದೇಶವನ್ನು ಸಾಧಿಸುವರು.

ಇಟೇಲಿಯ ಫೆಶಿಸ್ಟ ಮಂಡಳದ ಪ್ರಾರಂಭೋತ್ಸವದಲ್ಲಿ ಸರ್ವಾಧಿಕಾರಿಯಾದ ಮುಸಲೋನಿಯವರು ಭಾವಪೂರ್ವಕ ಭಾಷಣ ಮಾಡಿದರು. ಸಾಧಾರಣ ೪೦೦ ಸದಸ್ಯರು ಅಲ್ಲಿ ನೆರೆದಿದ್ದರು. ಅಷ್ಟು ಕಾಡಿಕ್ತ ಕಡೆ ಕೋರ್ತ ೪೩ ಸದಸ್ಯರ ಮಾತ್ರ ಈ ಅಧಿವೇಶನಕ್ಕೆ ಬರಲಿಲ್ಲ. ಮುಸಲೋನಿಯವರು ಸಭಾ ಮಂದಿರವನ್ನು ಪ್ರವೇಶಿಸಿದೊಡನೆ ಭಾರಿ ಜಯಘೋಷಗಳಾದವು. ಸಭಾ ಮಂಡಳದ ಅಧ್ಯಕ್ಷರಾದ ಕೌಂಟ್ ಸಿಯಾನೊರವರು "ಇಟೇಲಿಯಾನ್ನರು ಸೆಂಕ್ಷನುಗಳನ್ನು ಪ್ರತಿಭಟಿಸಲು ನಿರ್ಧಾರಮಾಡಿರುತ್ತಾರೆ. ಎಲ್ಲಾ ಇಟೇಲಿಯಾನರು ದೇಶಸೇವೆಗಾಗಿ ತಮ್ಮಲ್ಲಿ ಸಂಗ್ರಹವಾಗಿರುವ ಭಂಗಾರವನ್ನು ಸರಕಾರಕ್ಕೆ ಒಪ್ಪಿಸುತ್ತಿದ್ದಾರೆ. ನಾವು ನಮ್ಮ ಗೌರವದ ಮುದ್ರೆಉಂಗುರಗಳನ್ನು ಕೂಡ ಅರ್ಪಿಸುತ್ತೇವೆ" ಎಂದು ಭಾಷಣ ಮಾಡಿದರು. ಮುಸಲೋನಿಯವರು ತಮ್ಮ ಮದುವೆ ಉಂಗುರಗಳನ್ನು ದೇಶಕ್ಕೆ ಅರ್ಪಿಸಿರುತ್ತಾರೆ.

ಸೆಂಕ್ಷನು ವಿಚಾರದಲ್ಲಿ—"ಇತ್ತೀಚೆಗೆ ಸೆಂಕ್ಷನುಗಳಿಂದ ಉಂಟಾದ ದುರ್ದೆಶೆಯು ಸ್ವಲ್ಪ ಉದ್ಧರಣೆ ಹೊಂದಿರುತ್ತದೆ. ಕೆಲವು ಕಡೆಗಳಲ್ಲಿ ಸೆಂಕ್ಷನುಗಳು ಅಷ್ಟು ಫಲಕಾರಿ ಕಾರ್ಯಗೊಳ್ಳುವುದಿಲ್ಲ. ಆದರೆ ನಾವು ಹೆಚ್ಚು ಧೈರ್ಯವಂತರಾಗಬಾರದು. ಸಂಧಿ ಪ್ರಸ್ತಾಪಕ್ಕಾಗಿ ನಮ್ಮ ಶರ್ತಗಳು ಕಳೆದ ಅಕ್ಟೋಬರ ತಿಂಗಳಲ್ಲಿ ಕೇಳಲಾದವು. ನಾವು ಅವುಗಳನ್ನು ಕಳುಹಿಸಿಕೊಟ್ಟೆವು. ಆದರೆ ಸಂಧಿಯ ಬದಲಾಗಿ ನಮ್ಮ ಮೇಲೆ ಸೆಂಕ್ಷನು ಜ್ಯಾರಿಗೆ ಬಂದಿವೆ. ನಮ್ಮೊಳಗಿನ ನಮ್ಮ ನಾಗರೀಕತೆಯನ್ನು ಪಡೆದ ಈ ಜನಾಂಗಗಳು ನಮಗೆ ಹೀಗೆ ಉಪಕಾರ ಮಾಡುತ್ತಿವೆ" ಎಂದು ಮುಸಲೋನಿ ತಮ್ಮ ಭಾಷಣಗಳಲ್ಲಿ ತಿಳಿಸಿದರು.

ಫ್ರೆಂಚರಿಗೂ ಬ್ರಿಟಿಷರಿಗೂ ನಡೆದ ಸಂಧಿಪ್ರಸ್ತಾಪಗಳು ಬೇಗನೆ ಫಲಕಾರಿಯಾಗುವ ಹಾಗಿಲ್ಲ ಎಂದು ತಿಳಿಸಿದರು. ಜನಾಂಗಸಭೆಯು ಇಟೇಲಿಯ ವಿಷಯ ಮಾತ್ರ ಈ ರೀತಿ ವರ್ತಿಸುತ್ತಿದೆಂದೂ, ಅವರ ಕಾರ್ಯಗಳು ಇಟೇಲಿಯಲ್ಲಿ ಹೆಚ್ಚಿನ ಕಾರಣ ಸಾಮಗ್ರಿಗಳಿಲ್ಲದುದರಿಂದ, ನಡೆಯಲು ಸಾಧ್ಯವಾಗಿದೆ ಎಂದೂ, ಎಂತಾದರೂ ಇಟೇಲಿಯು ತನ್ನ ಕಾರ್ಯವನ್ನು ಸಾಧಿಸಿಯೆ ಬಿಡುವುದೆಂದು ಅವರ ಭಾಷಣದಲ್ಲಿ ತಿಳಿದುಬಂತು. ಇವರ ಭಾಷಣದಿಂದ ಜನಾಂಗಸಭೆಯಲ್ಲಿ ತುಂಬಾ ಅಸಮಾಧಾನವು ಉಂಟಾಗಿದೆ.

ಹಿಂದೂದೇಶದ ಸೈನಿಕರಿಗೆ ಬ್ರಿಟಿಷ ಬೂಟ್ಸುಗಳು.

“ಹಿಂದೂದೇಶದ ಪಾಶ್ಚಾತ್ಯ ಸೈನಿಕರ ಉಪಯೋಗದ ಬಗ್ಗೆ ೬೦ ಸಾವಿರ ಬೂಟ್ಸುಗಳನ್ನು ಒದಗಿಸಲು ಇಂಗ್ಲಾಂಡಿನಲ್ಲಿ ಟೆಂಡರುಗಳು ಕರೆಯಲ್ಪಟ್ಟಿವೆ. ಹಿಂದೂದೇಶಕ್ಕೆ ಬ್ರಿಟಿಷ ಸೈನಿಕರಲ್ಲದೆ ಅವರು ಧರಿಸುವ ಬೂಟ್ಸುಗಳು ಕೂಡ ಇಂಗ್ಲಾಂಡಿನಿಂದಲೇ ಬರತಕ್ಕದೆಂದು ಇದರಿಂದ ವ್ಯಕ್ತವಾಗುತ್ತದೆ. ಹತ್ತಿರವಿರುವ ಐರಿಷ್ ಫ್ರೀಸ್ಟೇಟಿನವರು, ಇವರಿಂದ ಒಂದಾನೊಂದು ಕಾಲದಲ್ಲಿ (೧೯೨೧ರಲ್ಲಿ) ೪೦ ಲಕ್ಷ ಪೌಂಡು ಬೆಲೆಬಾಳುವ ಬೂಟ್ಸು ಇತ್ಯಾದಿ ಚರ್ಮದ ವಸ್ತುಗಳನ್ನು ಪಡೆಯುತ್ತಿತ್ತು. ಆದರೆ ಐರಿಷ್ ಫ್ರೀಸ್ಟೇಟು ಸ್ವಾತಂತ್ರ್ಯವಾದಂದಿನಿಂದ ಅವರಿಗೆ ಬೇಕಾಗುವ ಬೂಟ್ಸು ಇತ್ಯಾದಿಗಳನ್ನು ತಯಾರಿಸಲು ಅಲ್ಲಿ ನಿರ್ಮಾಣವಾಗಿವೆ. ಅದುದರಿಂದ ಈಗಲೆ ಬಹಳ ಇಳಿದ ಇವರಿಂದ ಉಂಟಾಗುವ ಈ ವ್ಯಾಪಾರವು ಇನ್ನೂ ಕಡಿಮೆಯಾಗುವುದು ಮಾತ್ರವಲ್ಲದೆ, ಸಂಪೂರ್ಣ ಮಾಯವಾಗಲೂಬಹುದು. ಆದ್ದರಿಂದ ಇಲ್ಲಿ ಉಂಟಾದ ಈ ನಷ್ಟವನ್ನು ತುಂಬಿಸಲು ಹಿಂದೂದೇಶದ ಸೈನಿಕರಿಗೆ ಬೇಕಾದ ಬೂಟ್ಸು ಇತ್ಯಾದಿಗಳಿಗೆ ಇಂಗ್ಲಾಂಡಿನಲ್ಲಿ ಟೆಂಡರು ಕರೆದಿರುತ್ತಾರೆ ಎಂದು ಭಾಸವಾಗುತ್ತದೆ. ಅತಿ ಕಡಿಮೆ ದರದಲ್ಲಿ ಹಿಂದೂದೇಶದಲ್ಲಿ ಬೂಟ್ಸುಗಳನ್ನು ತಯಾರಿಸಲು ಸಾಧ್ಯವಾಗುತ್ತಿರುವಾಗ ಈ ರೀತಿ ಸಂಗ್ರಾಮ ವೆಚ್ಚವನ್ನು ಹೆಚ್ಚಿಸುವುದೇಕೆ? ಕೇಂದ್ರ ಶಾಸನಸಭೆಯವರು ಇದರ ಗಮನ ಮಾಡತಕ್ಕದು” ಎಂದು ಜೆ. ಎಂ. ದತ್ತಾರೆಂಬವರ ಅಭಿಪ್ರಾಯ.

ನೋಟೀಸು.

ಮೈಸೂರು ಸೀಮೆ ಹಾಸನದ ಡಿಸ್ಟ್ರಿಕ್ಟ್ ಹಾಸನದ ಮುನ್ಸೀಫ ಕೋರ್ಟಿನಲ್ಲಿ

Original Case 804/25-26.
Execution Case 2098/26-27.

ವಾದಿ:—ಮಂಜರಾಬಾದು ತಾಲೂಕು ಮಾರ್ನಹಳ್ಳಿ ಹೋಬಳಿ ನಟ್ಟಳ್ಳಿ ದಾಖಲೆ ಕಾಟದ್ಹಳ್ಳಿಯ ಸೈದಯಾದ್ ಬೇರಿ. ಪ್ರತಿ—ವಾರಸ್ಸುದಾರರು ಮಕ್ಕಳೂ

1ನೇ ಡಿಟೋ ಗ್ರಾಮದಲ್ಲಿರುವ ಪೂಕರ್ ಬೇರಿ.

2ನೇ ಡಿಟೋ ಹೋಬಳಿ ಹೆಗ್ಗದ್ದೆ ಗ್ರಾಮದಲ್ಲಿ ಕುಮಾರ ತೋಟದಲ್ಲಿರುವ ಮೋಹದೀನ್ ಬೇರಿ.

3ನೇ ಮಾಹಮದ್ ಬೇರಿ.

4ನೇ ಹುಸೇನ್ ಬೇರಿ.

5ನೇ ಡಿಟೋ ಹೋಬಳಿ ಹೆಗ್ಗದ್ದೆ ಮಂಟಂಗಡಿಯಲ್ಲಿರುವ ಪೂಕರ್ ಬೇರಿ—ಉರುಫಾ ಪಡಿಯಾ ಬೇರಿ.

ಪ್ರತಿವಾದಿ:-ಮಂಗಳೂರು ಡಿಸ್ಟ್ರಿಕ್ಟು ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ನೇಕಂಗಿ ಮಾಗಣೆ ಪೆಲ್ಲಡಿ ಗ್ರಾಮದಲ್ಲಿರುವ ಹೆಗ್ಗಡೆ ಸಾದು ಬೇರಿ ಮಗ ಪಕ್ಕಿ ಬೇರಿ. ಪ್ರತಿ ವಾರಸ್ಸುದಾರ ಮಕ್ಕಳು.

1ನೇ ಡಿಟೋ ಗ್ರಾಮದಲ್ಲಿರುವ ಸಾದು ಬೇರಿ

2ನೇ ಮಂಗಳೂರು ತಾಲೂಕು ಉಲ್ಲಾಳ ಮಾಗಣೆ ಒಲೆಹಿತ್ತಿಲಲ್ಲಿರುವ ಐಸಮ್ಮನ ಮಗ ಸಾದು ಬೇರಿ.

3ನೇ ಮಾಹಮದ್ ಬೇರಿ.

ಮೇಲ್ಕಂಡ ಪ್ರತಿ ವಾದಿ ಮತ್ತು ಪ್ರತಿ ವಾದಿಗಳ ವಾರಸ್ಸುದಾರಾ ಮಕ್ಕಳುಗಳಿಗೆ ತಿಳಿಯಪಡಿಸುವುದೇನೆಂದರೆ:

ಮೇಲ್ಕಂಡ ಜಾರಿ ಮೊಖದ್ದಮಾದಲ್ಲಿ 17-2-28ನೇ ಮಾರ್ಚಿನಲ್ಲಿ ಆಗಿರುವ ಹರಾಜು ಉತ್ಪತ್ತಿ ಮೊಬಲಗಿನಲ್ಲಿ ತನಗೆ ಧಾಮಾಶಾಯ ಹಂಚಿಕೆ ಬರಬೇಕೆಂದು ಕೋರ್ಟು ಮುಜಕೂರು O. S. No. 805/25-26 ಜಾರಿ ನಂಬರು 75/26-27 ರಲ್ಲಿನ ಕೈವಲ್ ಡಿಕ್ರಿದಾರ ಬಿ. ದ್ಯಾವಪ್ಪಗೌಡರು ಈ ಕೋರ್ಟಿಗೆ ಅರ್ಜಿ ಗುದರಾಯಿಸಿಕೊಂಡಿರುತ್ತಾರಾಗಿ ಪ್ರತಿವಾದಿಯು ಹರಾಜಿನಲ್ಲಿ ಬಿಡ್ಡು ಮಾಡಿರುತ್ತಾನಾಗಿ ಆತನ ವಾರಸ್ಸುದಾರರುಗಳು ಈ ಮೊಖದ್ದಮಾ ಹಿರಿಂಗು ತಾರೀಕು 18-12-1935ನೇ ದಿವಸ ಬಿಡ್ಡು ಮೊಬಲಗನ್ನು ಕೋರ್ಟಿಗೆ ಡಿಪಾಜಿಟ್ಟು ಮಾಡಲು ಹಿರಿಂಗು ಇರುತ್ತೆಯಾಗಿ ಆ ದಿವಸ ನಿಮ್ಮಗಳ ತಕರಾರು ಇದ್ದಲ್ಲಿ ಮಧ್ಯಾಹ್ನ 11 ಗಂಟೆಗೆ ನೀವಾಗಲೀ—ನಿಮ್ಮ ಪರವಾಗಿ ವಕೀಲರಾಗಲೀ ಕೋರ್ಟಿಗೆ ಹಾಜರು ಆಗತಕ್ಕದ್ದು. ತಪ್ಪಿದಲ್ಲಿ ಸದರಿ ಅರ್ಜಿಯು ಏಕಪಕ್ಷ ತೀರ್ಮಾನಿಸಲಾಗುತ್ತೆ.

ಅರ್ಜಿದಾರನ ಲಾಯರ್,
ಯಸ್. ಆರ್. ಶ್ರೀಕಂಠಯ್ಯ, ಹಾಸನ.

ನೋಟೀಸು:

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 228/1935.

ಮಂಮ್ಮದ ಕುಂಞಿ—ಅರ್ಜಿದಾರ.

ಮತ್ತು

1. ಉಮ್ಮ ಲೀಮ, 2. ಅಬ್ದುಲ್ಲ ರೈಮಾನೆ, 3. ಭೀಪಾತ್ತು, 4. ಐಸಾಬಿ, 5. ಮಾಂಞ—ರೆಸ್ಪಾಂಡೆಂಟರು.

ಇವರೊಳಗೆ

ಅರ್ಜಿದಾರನ ಕಡೆ ನೋಟೀಸು.

ಅರ್ಜಿದಾರನ ಅಣ್ಣ ತಾ. 9-4-1935ರಲ್ಲಿ ಮೃತಪಟ್ಟ ಅಬ್ದುಲ್ಲ ಬ್ಯಾರಿಯು ಕಾಸರಗೋಡು ಕೆನರಾ ಬೇಂಕಿನಲ್ಲಿ ಅಡವು ಇಟ್ಟ ಅರ್ಜಿ ಶೆಡ್ಯೂಲಿನಿಂದ ತೋರುವ ನಗಗಳನ್ನು ಬೇಂಕಿನಿಂದ ವಾಪಾಸು ಪಡಿಯುವರೆ ತನಗೆ ವಾರಿಶಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿದ ಅರ್ಜಿಯು ತಾ. 16-12-'35ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬಹುದೆಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

ಕಾಸರಗೋಡು, 4-12-'35. **K. Kamalaksha Rao,**
Advocate for Petitioner.

ಸ್ವಸ್ತಿಕಾ ದಂತಮಂಜನವನ್ನು ನೀವೇಕೆ ಉಪಯೋಗಿಸಬೇಕು?

ಇದಕ್ಕೆ ಆರು ಕಾರಣಗಳಿವೆ.

1 ನೀಮ್ ಮತ್ತು ಬಬ್ಬುಳ್ಳಗಳ ಸತ್ವವು ಇದರಲ್ಲಿ ಭರಪೂರ ಇದೆ.

2 ದಿನಾಲೂ ಸ್ವಸ್ತಿಕ ದಂತಮಂಜನವನ್ನು ಉಪಯೋಗಿಸಿದರೆ ಹಲ್ಲುಗಳು ಹಾಳಾಗದೆ ಗಟ್ಟಿಯಾಗುವವು.

3 ಸ್ವಸ್ತಿಕ ದಂತಮಂಜನವು ಹಲ್ಲುಗಳ ಸಂದುಗಳಿಂದ ಒಡೆದು ಬರುವ ರಕ್ತವನ್ನು ನಿಲ್ಲಿಸುತ್ತದೆ.

4 ಸ್ವಸ್ತಿಕ ದಂತಮಂಜನವು ಸುವಾಸನೆಯುಳ್ಳವಾಗಿದೆ. ಹಲ್ಲು ತಿಕ್ಕುವಾಗಲೆ ಬಾಯೊಳಗಿನ ಕಲ್ಮಲವನ್ನು ಹೋಗಿಸಿ ಬಾಯಿವಾಸನೆಯನ್ನು ನಿಲ್ಲಿಸುತ್ತದೆ.

5 ಸ್ವಸ್ತಿಕ ದಂತಮಂಜನವು ಬಹಳ ನಾಜೂಕಾದ ರೀತಿಯಲ್ಲಿ ತಯಾರಿಸಿರುವುದರಿಂದ ದಿನ ಒಂದಾವರ್ತಿ ಅಲ್ಪಸ್ವಲ್ಪವನ್ನು ಉಪಯೋಗಿಸಿದರೆ ಸಾಕು.

6 ಸ್ವಸ್ತಿಕ ದಂತಮಂಜನವು ಶುದ್ಧ ಸ್ವದೇಶಿ ಮಾಲು. ಸ್ವದೇಶಿ ಬಾಂಧವರಿಂದಲೆ ತಯಾರಿಸಲ್ಪಟ್ಟದ್ದು.

ದ. ಕ. ಏಜಂಟರು:—ಸುಜೀರ ರಾಯಪ್ಪ ನ್ಯಾಕ್, ನರಸಿಂಹ ವೆಂಕಟೇಶ ನ್ಯಾಕ್ ಎಂಡ್ ಕಂಪೆನಿ, ಮಂಗಳೂರು.

ಉ. ಕ. ಏಜಂಟರು:-ಎನ್. ಎಸ್. ರಂಗಯ್ಯ ಶೆಣವಿ, ಪೋಸ್ಟು ಆಫೀಸು ಹಳಿಯಾಳ್.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:—

Raghavendra Ranga Pai, Car Street, Mangalore.

We deal in grey & Coloured Yarns, Dyes, Chemicals & Handloom accessories.

M. Venkatesha Ranga Pai,
Proprietor.

ಪ್ರಪಂಚ ಪರಿಚಯ:

'ನಿದ್ರಾಜನಕ ಅಫೀಮನ್ನು ಸೇವಿಸಿ, ಇಡೀ ಪ್ರಾಂತ್ಯವೇ ಪ್ರಾಣತ್ಯಾಗ ಮಾಡುತ್ತಿದೆ.'

ಎಲ್ಲಿ? ಜಪಾನಿಯರು ವಶೀಕರಿಸಿದ ಚೀನಾದೇಶದ ಮಂಚೂರಿಯಾದಲ್ಲಿ. ಜನರು ನೊಣಗಳಂತೆ ಹಾದಿಯಲ್ಲಿ ಬಿದ್ದು ಸಾಯುತ್ತಿದ್ದಾರೆ. ಇವರ ಶವಗಳು ಗತಿಗೋತ್ರಗಳಿಲ್ಲದೆ ಅಲ್ಲಲ್ಲಿ ಶೇಖರಿಸಿದ ಕಸದ ರಾಶಿಗಳನ್ನು ಸೇರುತ್ತವೆ. ಇದಕ್ಕೆಲ್ಲಾ ಹೊಣೆಗಾರರಾರು? ಅಲ್ಲಿ ಪ್ರಭುತ್ವದಲ್ಲಿರುವ ಜಪಾನಿಯರು. ಅಲ್ಲಿನ ಚೀನಾಜನಾಂಗದವರನ್ನು ನಿರ್ಮೂಲಗೊಳಿಸಲು ಅವರು ಈ ರೀತಿ ವರ್ತಿಸುತ್ತಿದ್ದಾರೆಂದು ಕೆಲವರ ಮತ. ಈ ಭಯಂಕರ ಪದಾರ್ಥದ (ಅಫೀಮಿನ) ವ್ಯಾಪಾರವು ಅಲ್ಲಿನ ಜಪಾನೀಯರ ಕೈಯಲ್ಲಿದೆ. ಅವರ ಕೈಕೆಳಗೆ ಚೀನಾ ಸಬ್ ಏಜಂಟರು ಕಾರ್ಯಸುತ್ತಿದ್ದಾರೆ. ಈ ದುಷ್ಟ ಅಭ್ಯಾಸಕ್ಕೆ ಒಳಗಾದವರು ಕ್ರಮೇಣ ನಿದ್ರಾಜನಕರಾಗಿ ಉದ್ಯೋಗವನ್ನು ಕಳಕೊಂಡು ತಮ್ಮ ಈ ದುರಭ್ಯಾಸದ ಅರ್ಪಣೆಗಾಗಿ ಇವರ ಆಸ್ತಿಪಾಸ್ತಿಗಳು, ಮನೆಮಠಗಳು, ವಸ್ತ್ರಾಭರಣಗಳು ಅಫೀಮು ಸಾಹುಕಾರರ ಕೈಸೇರುವವು. ಕಡೆಗೆ ಇವರು ಅಫೀಮಿನ ಅಂಗಡಿಯೆದುರು ಪ್ರಾಣ ಬಿಡುವ ಸಮಯ ಈತನನ್ನು ಎಳೆದು ಅಲ್ಲೇ ಮೂಲೆಯಲ್ಲಿರುವ ಕಸದ ರಾಶಿಯ ಮೇಲೆ ಹಾಕುತ್ತಾರೆ. ಅಲ್ಲಿ ಇವನ ಮೈಮೇಲಿದ್ದ ವಸ್ತ್ರಗಳು ಕೂಡ ಕದ್ದುಹೋಗುತ್ತವೆ. ಈ ರೀತಿಯ ಮರಣಗಳು ಅಲ್ಲಿಯ ಮಾರ್ಗಗಳಲ್ಲಿ ಧಾರಾಳವಾಗಿ ನಡೆಯುತ್ತವೆ. ಈ ಭಯಂಕರ ಸ್ಥಿತಿಯನ್ನು ನಿವಾರಿಸಲು ಸರಕಾರವು ಗಮನಿಸುವುದಿಲ್ಲವೆ? ಇಲ್ಲ. ಇಲ್ಲಿಯ ಸರಕಾರ ಜಪಾನೀಯರ ಕೈಯಲ್ಲಿದೆ. ಅಫೀಮಿನ ವ್ಯಾಪಾರ ನಡೆಸುವ ಜಪಾನೀಯರನ್ನು ನಿರೋಧಿಸುವ ಹಕ್ಕು ಅಲ್ಲಿಯ ಸರಕಾರಕ್ಕೆ ಇರುವುದಿಲ್ಲ. ಈ ಸ್ಥಿತಿಯ ಕಡೆಗೆ ಅಲ್ಲಿಯ ಜಪಾನೀ ಅಧಿಕಾರಿಗಳು ಕಣ್ಣುತೆರೆಯುವುದಿಲ್ಲ. ಜಪಾನೀಯರ ಮಾತೃಭೂಮಿಯಲ್ಲಿ ಈ ದುಷ್ಟ ವೃತ್ತಿಗೆ ಅನೇಕ ನಿಬಂಧನೆಗಳಿವೆ. ತಮ್ಮ ದೇಶದಲ್ಲಿ ಮನುಷ್ಯರು ಹೀಗೆ ಪಟ್ಟಣದ ಕಸದ ರಾಶಿಯ ಮೇಲೆ ಬಿದ್ದು ಸಾಯುವುದನ್ನು ಜಪಾನಿಯರು ಸಹಿಸಬಲ್ಲರೇ? ಆದರೆ ಅವರು ಇಲ್ಲೇಕೆ ಹಾಗೆ ವರ್ತಿಸುತ್ತಿದ್ದಾರೆಂಬುದು ಒಂದು ವಿವಾದ. ಈ ದುರಭ್ಯಾಸದಿಂದ ಜನರ ವಿನಾಶದ ಯೋಗ್ಯತೆಗಳು ಜಾರಿಹೋಗುತ್ತವೆ. ಆದರೆ, ಮುಂದಕ್ಕೆ ಇವರ ಜನಾಂಗವು ಕ್ಷೀಣಹೊಂದುವುದು ಮಾತ್ರವಲ್ಲದೆ ನಿರ್ನಾಮವಾಗುವುದು. ಅಮೇರಿಕಾ ಇಂಡಿಯನ್ನರ [illegible] ಗತಿ ಏನಾಯಿತು? ಈಗ ಅವರ ಕುರುಹುಗಳನ್ನು ಕೂಡ ಕಾಣುವುದು ಅಸಾಧ್ಯವಾಗಿದೆ. ಹಾಗೆಯೇ, ಮಂಚೂರಿಯಾದಲ್ಲೂ ಒಂದು ದಿವಸ ಚೀನಿಯರೆಲ್ಲಾ ಮಾಯವಾಗಿ, ಜಪಾನೀಯರೇ ಅಲ್ಲಿ ನೆಲಸುವ ಸಂಭವವು ಒದಗುವುದೋ?

ನಮ್ಮ ತೆಂಗಿನ ವ್ಯಾಪಾರ.

ಸಿಲೋನಿನಿಂದ ಆಮದಾಗುವ ಕೊಬ್ಬರಿಯಿಂದ ನಮ್ಮ ಪ್ರಾಂತ್ಯದಲ್ಲಿ ತಯಾರಾಗುವ ಕೊಬ್ಬರಿಗೆ ದರವು ಕಡಿಮೆಯಾಗಿ ಇಳಿದಿದೆ ಮಾತ್ರವಲ್ಲದೆ, ಅದರ ವ್ಯಾಪಾರವು ಹೆಚ್ಚಾಗಿ ಸಿಲೋನಿನವರ ಕೈಸೇರುತ್ತಿದೆ. ನಮ್ಮ ತೆಂಗಿನ ವ್ಯಾಪಾರಿಗಳು ಮತ್ತು ವ್ಯವಸಾಯಗಾರರು ಕಷ್ಟಕ್ಕೊಳಗಾದ ಈ ದುಸ್ಥಿತಿಯನ್ನು ನಿವಾರಿಸಲು ಹಿಂದೂದೇಶದ ಸರಕಾರದೊಡನೆ ಮೊರೆಯಿಡಲು, ಅದು ಹ್ಯಾಟಿಲೆಕ್ಸ್‌ಚಾರ್ಜ್ ಸಿಲೋನಿನ ತೆಂಗಿನ ಕ್ರಯನಿರ್ಣಯವನ್ನು ಸ್ವಲ್ಪ ಹೆಚ್ಚಿಸಿದರು. ಆದರೆ ಈ ಕಾರ್ಯದಿಂದ ನಮ್ಮ ದೇಶದ ವ್ಯಾಪಾರಿಗಳಿಗೆ ಹೆಚ್ಚಿನ ಉಪಕಾರವಾಗಲಿಲ್ಲ. ಕಾರಣ, ಸಿಲೋನಿನ ಸ್ಪರ್ಧೆಯಿಂದ ನಮ್ಮ ತೆಂಗುಗಳಿಗೆ ಮಾರ್ಕೆಟ್ಟಿನಲ್ಲಿ ಯೋಗ್ಯ ಸ್ಥಳವು ದೊರಕುವ ಸಂಭವವು ಇನ್ನೂ ಬಂದಿಲ್ಲ.

ಪರದೇಶಗಳಿಂದ ಸಿಲೋನಿಗೆ ಧಾರಾಳವಾಗಿ ತೆಂಗು ಬರುತ್ತಿರುವುದರಿಂದ, ಸ್ಟ್ರೈಟ್ ಸೆಟಲ್‌ಮೆಂಟುಗಳಿಂದ ತುಂಬ ತೆಂಗಿನ ಕಾಯಿಗಳು ಸಿಲೋನಿಗೆ ಆಮದಾಗುತ್ತಿವೆ. ತೆಂಗಿನ ಬೆಳೆ ಕಡಿಮೆಯಾದುದು ಮತ್ತು ವ್ಯಾಪಾರಿಗಳ ಲಾಭದೃಷ್ಟಿ ಇವೇ ಮುಂತಾದುವುಗಳು ಇದಕ್ಕೆ ಕಾರಣವಂತೆ. ಆದರೆ, ಕಾರಣವೇನಿದ್ದರೂ ಇದರಿಂದ ಸಿಲೋನಿನ ವ್ಯವಸಾಯಗಾರರ ಮೇಲೆ ಗ್ರಹಣ ಬಂದಂತಾಗುತ್ತಿದೆ. ಅಲ್ಲಿಯ ತೆಂಗಿನ ವ್ಯಾಪಾರದ ಬೋರ್ಡು ಸಂಸ್ಥೆಯವರು ಸಿಲೋನಿನಲ್ಲಿ ತೆಂಗಿನ ಆಮದನ್ನು ಸಂಪೂರ್ಣ ನಿಲ್ಲಿಸಬೇಕಾಗಿ ಸರಕಾರಕ್ಕೆ ಸೂಚನೆ ಕೊಟ್ಟಿದ್ದರು. ಸಿಲೋನಿಗೆ ಆಗುವ ತೆಂಗಿನ ಆಮದಿನಿಂದ, ಅವರ ವಿದೇಶೀ ತೆಂಗಿನ ಮಾರ್ಕೆಟ್ಟುಗಳ ಅವಸ್ಥೆಯು ಹಾಳಾಗುವುದೆಂದು ಅಧಿಕ ಕಾರ್ಯದರ್ಶಿಗಳ ಸರಕಾರಕ್ಕೆ ಎಚ್ಚರಿಕೆ. ಮಧ್ಯದಲ್ಲಿ ಹಿಂದೂದೇಶದಲ್ಲಿ ಇವರ ತೆಂಗಿನ ವ್ಯಾಪಾರಕ್ಕೆ ಆತಂಕಗಳು ಬರುವ ಹಾಗಿದೆ. ಆದುದರಿಂದ ಅವರ ವ್ಯಾಪಾರವನ್ನು ರಕ್ಷಿಸಲೇ ಬೇಕು—ಹೀಗೆಂದು ಘನಗೊಳಿಸುತ್ತಿರುವ ಸಿಲೋನ್ ದ್ವೀಪವು, ಹಿಂದೂದೇಶದ ತೆಂಗಿನ ವ್ಯಾಪಾರ ಸಂಬಂಧದ ಚಳವಳಿಯು ನ್ಯಾಯಸಮ್ಮತವಾದುದೆಂದು ಏಕೆ ತಿಳಿಯುವುದಿಲ್ಲ? ಅವರು ತೆಂಗಿನ ವ್ಯಾಪಾರ ಹಿತವನ್ನು ಹೇಗೆ ಸಾಧಿಸುತ್ತಿದ್ದಾರೋ, ಅಂತೆಯೇ ನಾವೂ ನಮ್ಮ ತೆಂಗಿನ ವ್ಯಾಪಾರವನ್ನು ರಕ್ಷಿಸತಕ್ಕದ್ದು. ಸಿಲೋನಿನ ತೆಂಗಿನ ಮೇಲೆ ಡ್ಯೂಟಿಯು ಹೆಚ್ಚಿಸಬೇಕು. ನಮ್ಮ ತೆಂಗಿನೊಡನೆ ಅವರು ಸ್ಪರ್ಧಿಸದ ಹಾಗೆ ಸಾಧಿಸತಕ್ಕದ್ದು. ಸಿಲೋನಿನೊಡನೆ ಆದಿಯಲ್ಲಿ ಮಲಬಾರು, ತಿರುವಾಂಕೂರು ಮತ್ತು ಕೊಚ್ಚಿನ್ ದೇಶದವರು ನಮ್ಮ ತೆಂಗಿನ ವ್ಯಾಪಾರದ ರಕ್ಷಣಾಕಾರ್ಯದಲ್ಲಿ ನಿರತರಾಗತಕ್ಕದ್ದು. ಇಂತಹದೆ ಕಾರ್ಯದಲ್ಲಿ ನಿರತರಾದ ಸಿಲೋನಿನವರು ನಮ್ಮ ಯಾವತ್ತೂ ಯೋಜನೆಗಳನ್ನು ಪ್ರತಿಕೂಲಿಸಬಾರದು.

ಮದ್ರಾಸು ಪ್ರಬೋಧ ಸಂಸ್ಥೆ.

ಇದರ ೧೯೩೮–೩೯ರ ವರದಿಯು ಹೊರಗೆ ಬಿದ್ದಿರುತ್ತದೆ. ದುಷ್ಟ ವೃತ್ತಿಯು ಜನರಲ್ಲಿ ವ್ಯಾಪಿಸುವುದರಲ್ಲಿ ಹೆಚ್ಚಿನ ಕಡೆಗಾಣಲಿಲ್ಲವೆಂದು ತಿಳಿದುಬರುತ್ತದೆ. ನಮ್ಮ ಸರಕಾರವು ಈ ಸಂಸ್ಥೆಯೊಡನೆ ಈ ಧರ್ಮಕಾರ್ಯವನ್ನು ಸಾಧಿಸಲು ಸಹಕರಿಸುವುದು ಸಮಾಧಾನಕರವಾದುದು. ಜನರೂ ಈ ಸಂಸ್ಥೆಯೊಡನೆ ಸಹಕರಿಸಿ ಅದು ಯಶಸ್ವಿಯಾಗಿ ಬಾಳುವಂತೆ ಸಾಧಿಸತಕ್ಕದ್ದು. ಕಳೆದ ೨ ವರ್ಷಗಳಲ್ಲಿ ೧೫೦ ವ್ಯಭಿಚಾರ ನಡೆಯುವ ಮನೆಗಳನ್ನು ಸುಧಾರಣೆ ಮಾಡಿರುತ್ತಾರೆ. ಪ್ರಾಂತ್ಯದ ಇತರ ಕಡೆಗಳಲ್ಲಿ ಈ ದುಷ್ಟವೃತ್ತಿಯು ಅತಿರೇಕವಾಗಿ ಬೆಳೆಯುತ್ತಿದೆ ಮಾತ್ರವಲ್ಲದೆ ಇದರ ಪರಿಣಾಮವಾಗಿ ಹಲವು ಸ್ತ್ರೀಯರ ಮತ್ತು ಯುವಕರ ಜೀವಮಾನವು ನರಕವನ್ನು ಸೇರುತ್ತಿದೆ. ಸಣ್ಣ ಜಿಲ್ಲೆಯಲ್ಲಿಂತೂ ಮುಖ್ಯವಾಗಿ ಬಂದರುಗಳಲ್ಲಿ ವ್ಯಭಿಚಾರ ವೃತ್ತಿಯು ಘನತರದ ಹಾನಿಯನ್ನು ತಂದೊಡ್ಡುತ್ತಿದೆ. ಈ ಪ್ರಬೋಧ ಸಂಸ್ಥೆಯವರು ಮದ್ರಾಸನ್ನು ತಮ್ಮ ಕೇಂದ್ರ ಸ್ಥಳವಾಗಿಟ್ಟುಕೊಂಡು, ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಮುಖ್ಯ ತಾಲೂಕುಗಳಲ್ಲಿ ಈ ದುಷ್ಟವೃತ್ತಿಯ ನಿವಾರಣೆ ಮಾಡುವ ಉಪಸಂಸ್ಥೆಗಳನ್ನು ನಿರ್ಮಾಣಮಾಡತಕ್ಕದ್ದು. ಈ ಸಂಸ್ಥೆಗಳೂ ಅಲ್ಲಲ್ಲಿಯ ಸಮಿತಿಗಳೂ ಒಟ್ಟಾಗಿ ಕಾರ್ಯಸಾಗಿಸತಕ್ಕದ್ದು. ಸರಕಾರವು ಈ ಸಂಘದ ವಿವಿಧ ಕಾರ್ಯಕಲಾಪಗಳಿಗೆ ಬೇಕಾದ ಹಣವನ್ನು ಸಾಧ್ಯವಾದ ಮಟ್ಟಿಗೆ ದೊರಕಿಸತಕ್ಕದ್ದು. ಈ ಸಂಸ್ಥೆಯವರು ಈ ರೀತಿಯಲ್ಲಿ ಕಾರ್ಯವನ್ನು ನಡೆಸಿ ತನ್ನ ಉದ್ದೇಶವನ್ನು ನೆರವೇರಿಸಿಕೊಂಡರೆ ನಮ್ಮ ಪ್ರಾಂತ್ಯದ ದಳ್ಳುರಿಯು ಆರದಿರದು.

ಸೋಮವಾರ ಐಕ್ಯ

ಕಾಂಗ್ರೆಸ್ಸು ಪ್ರಾರಂಭದಿಂದ ಹಿಂದುಸ್ಥಾನವು ಒಂದಾಗಿರುವ ಮಹತ್ವವನ್ನು ತಿಳಿದಿರುತ್ತದೆ. ಇವರು ವಿವಿಧ ಮತಗಳಲ್ಲಿ ಐಕ್ಯವುಂಟಾಗುವಂತೆ ತುಂಬಾ ಪ್ರಯತ್ನಪಟ್ಟಿದ್ದಾರೆ. ಈ ವಿಚಾರದಲ್ಲಿ ಅವರಿಗೆ ತುಂಬಾ ಆತಂಕಗಳು ಬರುವುದಾದರೂ, ಸೋಮವಾರ ಐಕ್ಯವನ್ನು ಸಾಧಿಸದೆ ಅವರು ಸುಮ್ಮನಿರಲಾರರು. ಸ್ವರಾಜ್ಯ ಪ್ರಾಪ್ತವಾದ ಸಂಭವದಲ್ಲಿ ಹಿಂದುಗಳು ಹಿಂದೂ ಪ್ರಭುತ್ವವನ್ನು, ಮುಸ್ಲಿಮರು ಮುಸ್ಲಿಮ ಪ್ರಭುತ್ವವನ್ನು ಸಾಧಿಸುವುದು ಕೇವಲ ಮೂಢತನ. ಹೀಗೆ ಹಿಂದೂದೇಶದ ಹಲವು ಮತಾಂತರಗಳು ಆಶಿಸುವುದು ಯೋಗ್ಯವಲ್ಲ. ಎಲ್ಲರಿಗೂ ಸರಿಸಮಾನವಾದ ಹಕ್ಕುಗಳಿವೆ. ಹೆಚ್ಚೇಕೆ, ಒಬ್ಬ ಆಂಗ್ಲೇಯನು ನಮ್ಮೊಡನೆ ಜೀವಿಸುವುದಾದರೂ ಅವನಿಗೂ ಈ ಹಕ್ಕುಗಳು ಸಲ್ಲುತ್ತವೆ. ಹಿಂದೂ, ಮುಸ್ಲಿಮ, ಕ್ರಿಶ್ಚನ್, ಮೊದಲಾದವರು ತಮ್ಮ ಎಲ್ಲಾ ಭೇದ ಭಿನ್ನಭಾವಗಳನ್ನು ಮರೆತು ಒಂದಾಗಿ ಸ್ವರಾಜ್ಯ ಸಾಧನೆಯಲ್ಲಿ ನಿರತರಾಗಬೇಕು. ಸ್ವರಾಜ್ಯವು ಎಲ್ಲರ ಪ್ರಾಮುಖ್ಯ ಹಕ್ಕಾಗಿರುತ್ತದೆ. ಆದರೆ ಇದರೊಂದಿಗೆ ಹರಿಜನರಿಗೂ ಕೂಡ ಇತರರಂತೆ ಸಮಾಜದಲ್ಲಿ ಯೋಗ್ಯ ಸ್ಥಳವನ್ನು ಕೊಡಲು ಮರೆಯಬಾರದು. ಇವರನ್ನು ಹೊರಗಿಡುವ ಸ್ವರಾಜ್ಯವು ಸ್ವರಾಜ್ಯವಲ್ಲ. ಸ್ವರಾಜ್ಯದಲ್ಲಿ ಅಸ್ಪೃಶ್ಯತೆಯು ಮಾತು ಕೂಡ ಇರಬಾರದು. ಈ ಸೋಮವಾರ ಭೇದಗಳ ಮತ್ತು ಅಸ್ಪೃಶ್ಯತೆಯ ನಿವಾರಣೆ ಮಾಡುವ ಕಾರ್ಯಕ್ರಮವನ್ನು ನಾವು ಕೈಕೊಂಡರೆ ನಮ್ಮ ಬಲವು ವೃದ್ಧಿಹೊಂದುವುದಲ್ಲದೆ, ನಮ್ಮನ್ನು ಸೋಲಿಸಲು ಸಾಧ್ಯವಾಗದು.

ಹಿಂದೂದೇಶದ ಬಡತನದ ನಿವಾರಣೆಯು ಹಳ್ಳಿಗಳ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ಮೇಲೆ ಹೊಂದಿಕೊಂಡಿದೆ.

"ಬಡತನ ನಮ್ಮನ್ನು ಬಲವಾಗಿ ಹಿಡಿದಿರುತ್ತದೆ. ಬಡತನವು ಇನ್ನೂ ಹೆಚ್ಚುವ ಸಂಭವಗಳಿವೆ. ಈ ಬಡತನಕ್ಕೆ ಅನೇಕ ಕಾರಣಗಳಿವೆ. ಇವುಗಳಲ್ಲಿ ಕೆಲವನ್ನು ತಡೆಯಬಹುದು. ವಿಶೇಷ ವೆಚ್ಚ ತಗಲುವ ಸರಕಾರದ ಧೋರಣೆಯೂ ಈ ಬಡತನಕ್ಕೆ ಒಂದು ಕಾರಣ. ವರ್ಷ ವರ್ಷ ಈ ವೆಚ್ಚವು ವೃದ್ಧಿಹೊಂದುತ್ತಿದೆ. ವೆಚ್ಚವು ಈ ರೀತಿ ವೃದ್ಧಿಹೊಂದುವ ಸಮಯ ಯಾವ ಸರಕಾರಕ್ಕೂ ತೆರಿಗೆಗಳನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ನಮಗೆ ಬರುವ ನವರಾಜ್ಯ ಶಾಸನವು ವರ್ಷ ಒಂದರ ೮೦೦ ೧೦ಕೋಟಿ ರೂಪಾಯಿಗಳ ವೆಚ್ಚವನ್ನು ವಿಧಿಸುವುದು. ಸಾಗುವಳಿ ವೃತ್ತಿಯನ್ನು ನಡೆಯಿಸುವವರಿಗೆ ಬೇರೆ ಇತರ ಸಹಾಯಕ ಉದ್ಯಮಗಳಿಲ್ಲದಿರುವುದೇ ಈ ಬಡತನಕ್ಕೆ ಮತ್ತೊಂದು ಕಾರಣ. ಭಾರತೀಯರಲ್ಲಿ ಶೇಕಡಾ ೪೦ ಜನ ಸಾಗುವಳಿ ವೃತ್ತಿಯನ್ನನುಸರಿಸಿ ಜೀವಿಸುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಈ ರೈತರಲ್ಲಿ ಸ್ವಲ್ಪ ಸಂಪತ್ತನ್ನು ಕೊಡುವ ಕೆಲವು ಕೈಗಾರಿಕೆಗಳು ವಾಡಿಕೆಯಲ್ಲಿದ್ದವು. ಇವುಗಳಿಂದ ಗಳಿಸಿದ ಹಣದಿಂದ ಅವರ ಕೆಲವು ಅನುಪತ್ಯಗಳು ಸುಧಾರಿಸಲ್ಪಡುತ್ತಿದ್ದವು. ದೃಷ್ಟಾಂತಕ್ಕಾಗಿ, ನೂಲುವ ಮತ್ತು ನೇಯುವ ಕೈಗಾರಿಕೆಯಿಂದ ಜನರಿಗೆ ಧಾರಾಳ ವಸ್ತ್ರವನ್ನು ಒದಗಿಸುದುದು ಮಾತ್ರವಲ್ಲದೆ ಹಿಂದೂದೇಶವು ವಸ್ತ್ರವನ್ನು ಹೊರಗಣ ದೇಶಗಳಿಗೆ ರಫ್ತು ಮಾಡುತ್ತಿತ್ತು. ಇವತ್ತಿಗೆ ಈ ಉದ್ಯಮಗಳು ಸಿಂತಿವೆ. ಮಾತ್ರವಲ್ಲ ನಮ್ಮ ಗಿರಣಿಗಳಲ್ಲಿ ತಯಾರಾಗುವ ವಸ್ತ್ರವಲ್ಲದೆ ಹೊರಗಣ ದೇಶಗಳಿಂದ ವರ್ಷಂಪ್ರತಿ ೬೦ ಕೋಟಿ ರೂಪಾಯಿ ಮೌಲ್ಯದ ವಸ್ತ್ರವು ಆಮದಾಗುತ್ತಿದೆ. ಉದ್ಯಮವನ್ನು ತಯಾರಿಸುವ ಈ ಉದ್ಯಮಗಳು ಪುನಜೀವವಾದರೆ ಹೊರಗಣ ದೇಶಕ್ಕೆ ಹೋಗುವ ಈ ಸಂಪತ್ತು ನಮ್ಮಲ್ಲೇ ಉಳಿದಂತಾಗುವುದು. ನಿರುದ್ಯೋಗ ನಿವಾರಣೆಯೂ ಆಗಬೇಕಾದರೆ ಹಳ್ಳಿಗಳು ಅನೇಕ ಹಣ ಗಳಿಸುವ ಉದ್ಯಮಗಳ ನಡೆಯಬೇಕು. ಭಾರತೀಯರು ಈ ಹಳ್ಳಿ ಕೈಗಾರಿಕೆಗಳಿಗೆ ತುಂಬ ಪ್ರೋತ್ಸಾಹವನ್ನು ಕೊಡಬೇಕು" ಎಂದು ಶ್ರೀ ಬಾಬೂರಾಜೇಂದ್ರ ಪ್ರಸಾದರು ಕಲ್ಲಿಕೋಟೆಯಲ್ಲಿ ಭಾಷಣ ಮಾಡಿದರು.

ಪ್ರಪಂಚದ ಸಾಂಪತ್ತಿಕ ದುಃಸ್ಥಿತಿ

ಇನ್ನು ೫ ವರ್ಷಗಳ ತನಕ ನಿವಾರಣೆ ಹೊಂದಲಾರದು. ಬ್ರಿಟಿಷ ಸರಕಾರದವರಿಂದ ಲಂಡನಿನಲ್ಲಿ ಕರೆಯಲಾದ ಕೇಕಡಾ ೧೮ ಸಲೆಯು ೧೯೦ ಮಿಲಿಯ ಸೌಂಡಿನ ಬೋನಸುಗಳು, ಕೇಕಡಾ ೩೧ ಸಲೆಯು ೨೬೦ ಮಿಲಿಯ ಸೌಂಡಿನ ಟ್ರೆಜರಿ ಫಂಡು ಉಂಟುಮಾಡುವ ಸಾಲದ ಬೋನಸುಗಳು ಅತಿ ಅಲ್ಪ ಸಮಯದಲ್ಲಿ ಲಂಡನಿನ ಮಾರ್ಕೆಟ್ಟಿನಲ್ಲಿ ಮಾರಾಟವಾದುವು. ಅಲ್ಲಿನ ಅನೇಕ ವಿಮಾ ಮತ್ತು ಬ್ಯಾಂಕಿಂಗ್ ಸಂಸ್ಥೆಗಳು ತಾವು ಶೇಖರಿಸಿದ ಹೆಚ್ಚಿನ ಹಣವನ್ನು ಲಾಭಕರದೃಷ್ಟಿಯಿಂದ ಸಂಚಯಿಸುವ ಹಾದಿ ಕಾಣದೆ, ತಮ್ಮ ಹಣವನ್ನು ಈ ಬೋನಸುಗಳಿಂದ ಸರಕಾರದಲ್ಲಿ ಭದ್ರವಾಗಿಡಲು ಪ್ರೇರೇಪಿಸುತ್ತಿದ್ದಾರೆ. ಬ್ರಿಟಿಷ ಸರಕಾರದ ಮೇಲೆ ಪ್ರಜೆಗಳಿಗೆ ತುಂಬಾ ಭರವಸೆಯಿರುವುದೆಂದು ಇದರಿಂದ ಭಾಸವಾಗುತ್ತದೆ. ಅಂತೆಯೇ ಹಿಂದೂದೇಶದಲ್ಲಿ ಧನಾಢ್ಯರು ತಮ್ಮ ಹಣವನ್ನು ಭದ್ರವಾಗಿ ಸಂಚಯಿಸಲು ಒಂದು ಹಾದಿ ಹುಡುಕುತ್ತಿದ್ದಾರೆ. ಸರಕಾರಕ್ಕೆ ತಮಗೆ ಬೇಕಾಗುವ ಹಣಕ್ಕಾಗಿ ಪ್ರಜೆಗಳ ಮೇಲೆ ತೆರಿಗೆಯ ಹೊರೆ ವಿಧಿಸುವ ಬದಲಾಗಿ, ಈ ರೀತಿಯಲ್ಲಿ ಗಳಿಸಲು ಸುಲಭವಾಗುತ್ತದೆ. ಸರಕಾರದ ಕಡಿಮೆ ದರದ ಈ ಸಾಲಗಳು ಮತ್ತು ಕಡಿಮೆ ದರದಲ್ಲಿ ಉತ್ತಮ ಬೇಂಕುಗಳಲ್ಲಿ ತಮ್ಮ ಹಣವನ್ನು ಸಂಚಯಿಸುವಿಕೆಯೂ, ದೇಶದ ಸಾಂಪತ್ತಿಕ ಸ್ಥಿತಿಯನ್ನು ಸೂಚಿಸುತ್ತಿವೆ. ಹಿಂದೆ ಕವಿತ ಮೋಡವು ಇನ್ನೂ ಚದರಲಿಲ್ಲ. ಮತ್ತು ಈಗಿನ ಘಟನೆಗಳನ್ನು ಪರಿಶೀಲಿಸಿದರೆ, ಮುಂದಕ್ಕೆ ಇನ್ನೂ ಐದು ವರ್ಷಗಳ ವರೆಗೆ ಈ ನೋಟವು ಚದರಲಿಕ್ಕಿಲ್ಲವೆಂದೂ ವ್ಯಕ್ತವಾಗುತ್ತದೆ.

ಬ್ರಿಟಿಷ ಪ್ರಧಾನ ಮಂತ್ರಿಗಳ ಪುತ್ರರಾದ ಮಿ॥ ಓಲಿವರ್ ಬಾಲ್ಡ್‌ವಿನ್ನರು—

ಹಿಂದೂದೇಶದ ಕುರಿತು ಒಂದು ಗ್ರಂಥವನ್ನು ಬರೆಯಲು ಬೇಗನೇ ಹಿಂದೂದೇಶಕ್ಕೆ ಬರುವರು. "ಭಾರತೀಯ ಕಾಂಗ್ರೆಸ್ (ಸುವರ್ಣ ಮಹೋತ್ಸವ) ಅಧಿವೇಶನಕ್ಕೆ ಪ್ರೇಕ್ಷಕನಾಗಿ ಹೋಗಬೇಕೆಂದು ನಿರ್ಧರಮಾಡಿರುತ್ತೇನೆ. ನವರಾಜ್ಯಶಾಸನದಿಂದ ಉಂಟಾಗುವ ಹಿಂದೂದೇಶದ ಪ್ರಥಮದ ಮಹಾಚುನಾವಣೆಯನ್ನೂ, ವೈಸರಾಯರ ಬಿಡಾರವನ್ನೂ ನೋಡುವೆನು. ಮಹಾತ್ಮಾಗಾಂಧಿ, ಕವಿ ಠಾಗೂರ, ಶ್ರೀಮತಿ ಸರೋಜಿನಿ ನಾಯ್ಡು ಮತ್ತು ಸುಭಾಷ್‌ಚಂದ್ರಬೋಸರು ಇವರೇ ಮೊದಲಾದ ಭಾರತೀಯ ಮುಖಂಡರ ಭೇಟಿಯನ್ನು ಮಾಡುವೆನು. ಹಿಂದೂದೇಶದ ಕುರಿತು ಪ್ರಶ್ನೆಗಳನ್ನು ಮಾಡುವುದೇ ನನ್ನ ಈ ಸಂಚಾರದ ಮುಖ್ಯೋದ್ದೇಶ. ಭಾರತೀಯರ ರಾಷ್ಟ್ರೀಯ ಚಳವಳಿಯ ಸ್ಥಿತಿಯನ್ನು ಸರಿಯಾಗಿ ತಿಳಿಯಲು ಸಾಧಿಸುವೆನು. ಮತ್ತು ಈ ಸಂಚಾರದ ಅನುಭವಗಳನ್ನು ಒಂದು ಗ್ರಂಥ ರೂಪವಾಗಿ ಬರೆಯುವೆನು" ಎಂದಿರುವರು.

ಅನುಕ್ರಮಣಿಕೆ.

ಟಿಪ್ಪಣಿಗಳು ೨
ಸಂಶೋಧನಾಲಯದ ಮಾಯಾವಿಗಳು ೩
ಫ್ರೆಂಚ ಪ್ರಧಾನ ಮಂತ್ರಿಯವರ ಉಭಯಸಂಕಟ ೫
ಮುಸಲ್ಮಾನರು ಜನಾಂಗಸಭೆಯನ್ನು ಮನ್ನಿಸುವನೆ ೭
ಪ್ರಪಂಚ ಪರಿಚಯ ೯

ಅಗ್ರಲೇಖ
ಕನ್ನಡ ಸಾಹಿತ್ಯಸಮ್ಮೇಲನ ೧೦
ಸ್ಫುಟವಿಚಾರಗಳು ೧೧

ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ವನಿತಾ ವಿಭಾಗ ೧೬
ವಿವಿಧ ಸಮಾಚಾರಗಳು ೧೭
ಹಿಂದೂದೇಶದ ಸಮರಾಚರಾಸನ ೧೮

ಸ್ವದೇಶಾಭಿಮಾನಿ.

ತಾ ೧೩ನೇ ಶುಕ್ರವಾರ ದಶಂಬರ '೩೫

ಮುಂಬಾಯಿ ನಗರದಲ್ಲಿ ಇಪ್ಪತ್ತೊಂದನೆಯ ಕನ್ನಡ ಸಾಹಿತ್ಯಸಮ್ಮೇಲನ

ಕನ್ನಡ ಸಾಹಿತ್ಯ ಸಮ್ಮೇಲನವು ಈ ಸಲ ಕರ್ನಾಟಕದ ಹೊರಗೆ, ಭಾರತ ವರ್ಷದ ಮುಖ್ಯ ಕವಲದಂತಿರುವ ಮುಂಬಾಯಿ ನಗರದಲ್ಲಿ ಇನ್ನೆರಡು ಸಪ್ತಾಹಗಳಲ್ಲೆ ಜರಗುವುದಿದೆ ಎಂದೂ, ಸಮ್ಮೇಲನಾಧ್ಯಕ್ಷರು ಮೈಸೂರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರರು ಶ್ರೀಮಾನ್ ಎನ್ ಎಸ್ ಸುಬ್ಬರಾವರವರೇ ಎಂದೂ ಪ್ರಕಟವಾಗಿದೆ ಮರಾಠಿ ಗುಜರಾಥಿ ಭಾಷಾಮಯವಾಗಿರುವ ಮುಂಬಾಯಿ ನಗರದಲ್ಲಿ ಅಲ್ಲಿನ ಹಾಗೂ ಮುಂಬಾಯಿ ಪ್ರಾಂತ್ಯದ ಕನ್ನಡಿಗರು ನಮ್ಮ ಭಾಷಾ ಸಾಹಿತ್ಯಗಳದೊಂದು ಸಮ್ಮೇಲನವನ್ನು ಆಹ್ವಾನಿಸಿರುವ ಪ್ರಯುಕ್ತ, ಕನ್ನಡದ ಮೇಲೆ ಅಭಿಮಾನವಿರುವವರೆಲ್ಲರೂ ಸ್ವಹಸ್ತ ಪರಹಸ್ತಗಳ ಮೂಲಕವಾಗಿ ತುಂಬ ಪ್ರೋತ್ಸಾಹವನ್ನು ಕೊಡುವರಾಗಿ ನಂಬಲೇ ಬೇಕಾಗಿದೆ ಇದಕ್ಕಾಗಿ ಪುನಃ ಪುನಃ ವಿನಂತಿಸುವ ಅಗತ್ಯವೇ ಇಲ್ಲ

ಕನ್ನಡವು ಹರಿಹಂಚಾಗಿ ಹೋಗಿರುವ ದೇಶಭಾಗಗಳಲ್ಲಿ ಬಿದ್ದಿರುವ ಪ್ರಯುಕ್ತ, ಅಲ್ಲಲ್ಲಿನ ಬಹುಸಂಖ್ಯಾಕ ಇತರ ಭಾಷಾವತ್ಸಲರು, ಕನ್ನಡವನ್ನು ಕಡೆಗಣ್ಣಿಂದಲೂ ನೋಡದೆಯೂ, ಕನ್ನಡಿಗರಲ್ಲಿ ಬಡಜನಗಳೇ ಹೆಚ್ಚಾಗಿ ಅಶಿಕ್ಷಿತ ಸಮುದಾಯವು ಅಂತಹ ಸುಸಂಪನ್ನರ ನಡುವೆ ಜೀವಿಸ-ಮಂತಾಗಿದ್ದುದರಿಂದ ಕನ್ನಡಿಗರನ್ನು ಒಂದು ಬಗೆಯ ಮೂಢ ಬರ್ಬರ ಜನಾಂಗದವರೆಂದು ಭಾವಿಸಿಯೂ, ಕನ್ನಡ ಭಾಷೆ- ಕನ್ನಡ ಜನಗಳು ಅವಹೇಳನಕ್ಕೆ ಗುರಿಯಾಗಿರುವುದು ಶೋಚನೀಯವಾಗಿದೆಯಾದರೂ, ಅಸ್ವಾಭಾವಿಕವಾದುದಲ್ಲ. ಪ್ರಬಲರ ನಡುವೆ ದುರ್ಬಲರು ಯಾವಾಗಲು ಇದೇ ರೀತಿ ಅನುಭವಿಸುತ್ತಿರಬೇಕಾದುದು ಸೃಷ್ಟಿಯ ಧರ್ಮ ಆದರೆ, ಸೃಷ್ಟಿಗೂ ಮೇಲಾಗಿ ಸಭ್ಯನೆನಿಸಿರುವ ನಾಗರಿಕನು ಹಾಗೆಂದೂ ಇರುವುದಿಲ್ಲ, ಇತರರಿದ್ದರೆ ಸಹಿಸಲಾರನು ಅಂತಹ ಯುಗವು ಇದು, ಅದುಕಾರಣವೆ, ಕನ್ನಡ ಭಾಷೆಯು ತನ್ನ ಸೋದರಿಯರ ನಡುವೆ ತನ್ನ ಕೋಮಲತೆಯನ್ನು ಪ್ರಕಟಿಸುವಳೇ ವಿನಾ, ದೀನ ಭಾವದಿಂದ ಉತ್ತಮರ್ಥೆಯರ ಕಡೆಗೆ ಲಕ್ಷ್ಯವನ್ನಿಟ್ಟೇ ಇರುವ ತನ್ನ ಇಂಗಿತವನ್ನೂ ಪ್ರಕಟಿಸುವಳು. ಕನ್ನಡಿಗರೂ, ಇನ್ನೂ "ಕಾನಡೀ ಅಪ್ಪ" ಗಳೆಂದು ಕರೆವ ಜನಗಳ ನಡುವೆ ನಿಜವಾಗಿಯೂ ತಾವು 'ಕನ್ನಡ ಅಪ್ಪ'ರಾಗಿರಬೇಕಾಗಿದೆಂದೇ ಧೈರ್ಯದಿಂದ ಮುಂಬಾಯಿಯಲ್ಲಿ ಸೇರುವರು ಸಾಹಿತ್ಯವು ಸದ್ಭಾವನೆ, ಸದಾಚಾರ, ಸದುದ್ಯಮಗಳನ್ನು ಸೂಚಿಸುವುದಾದ ಕಾರಣ ಅಲ್ಪ ಸಂಖ್ಯಾಕರೂ ದೀನರೂ ಆಗಿ ಕನ್ನಡಿಗರು ಇರುವಲ್ಲಿ ಸಹ, ಇನ್ನು ಈ ಸಾಹಿತ್ಯದ ಅಲಂಕಾರವು ಅವರನ್ನು ಸರ್ವರ ಆದರ ಗೌರವಗಳಿಗೆ ಅರ್ಹರನ್ನಾಗಿ ಮಾಡುವುದಾಗಿ, ಸ್ವಾಗತಾಧ್ಯಕ್ಷರೂ, ಸಮ್ಮೇಲನಾಧ್ಯಕ್ಷರು, ಇತರ ಶಾಖೆಗಳ ಅಧ್ಯಕ್ಷರು ಮೊದಲಾದ ಮಹನೀಯರ ನೇತೃತ್ವದಲ್ಲಿ ಸೇರುವ ನಾನಾ ಸಭೆಗಳೇ ಸೂಚಿಸುತ್ತಿವೆ

ಎಲ್ಲ ತರಗತಿಗಳ ಜನರೂ ಪರಿಷತ್ತಿನಲ್ಲಿ ಸ್ಥಾನ ಹೊಂದುವ ಹಾಗೆ, ಈಗಣ ಪ್ರಜಾಸತ್ತೆಯ ಧೋರಣೆಕ್ಕೆ ಒಪ್ಪುವಂತಹ ಯಾವ್ಯಾವ ಕಾರ್ಯಕ್ರಮಗಳನ್ನು ಅಂಗೀಕರಿಸಿಕೊಂಡು, ಸಾಹಿತ್ಯದ ಉನ್ನತಿಗೆ ಯಾವ್ಯಾವ ರೀತಿಯಲ್ಲಿ ಸಾಧನೆ ಮಾಡಿ, ನಾವು ಜೀವಿಸಿಕೊಂಡಿರುವುದು ಸಾರ್ಥಕವಾದುದೆನಿಸುವಂತೆ ಭಾಷಾಭಾಗ್ಯವು ಬೆಳಗುವಂತೆ ಮಾಡಲು ಅಗತ್ಯವಾಗಿರುವ ನಿರ್ಣಯಗಳನ್ನು ಈ ಸಮ್ಮೇಲನವು, ತುಂಬಾ ಚರ್ಚಿಸಿ, ನಿಷ್ಕರ್ಷಿಸಬೇಕಾಗಿದೆ ಹತ್ತು ಮಂದಿ ಸೇರಿದಲ್ಲಿ ಕನ್ನಡ ಸಭೆ ಎನಿಸಬೇಕೆನ್ನುವಷ್ಟು ಸುಲಭವಾಗಿ, ಕನ್ನಡವು ಹಳ್ಳಿಗಳಲ್ಲೂ ಸಭೆಸ್ಥಾಪಿಸುವಂತೆ ಆಯೋಜನೆಗಳನ್ನು ಇಲ್ಲೇ ನಿರ್ಣಯಿಸಬೇಕಾಗಿದೆ ತಮ್ಮ ಹೇಳಿಕೆಗೆ ಬೆಲೆ ಹೆಚ್ಚು ಬರಬೇಕೆನ್ನುವವರಾರೋ, ಅವರು ಬಹುಸಂಖ್ಯಾಕರಾಗಿ ಸದಸ್ಯರೆನಿಸಿ, ಸಂಸ್ಥೆಗಾಗಿ ದುಡಿಯಬೇಕಾಗಿದೆ ಕನ್ನಡ ಬಾಲಕರಿರುವಲ್ಲಿ ಕನ್ನಡ ಕಲಿಯಲೂ ಓದಲೂ ಸೌಕರ್ಯಗಳಾಗುವ ಹಾಗೆಯೂ, ಕನ್ನಡ ಕಲಿಸುವ ಶಾಲೆಯಿರುವಲ್ಲಿ ಅದೊಂದು ಕನ್ನಡ ಸಭೆಯಾಗಿಯೆ ಏರ್ಪಡುವ ಹಾಗೆಯೂ, ಸುಲಭ ನಿಬಂಧನೆಗಳಾಗಬೇಕು ಕನ್ನಡಿಗರು ಒಂದು ದಿನದ ವಿನೋದದ ಫಲಾಹಾರಗಳಿಗಾಗಿ ಕೂಟಗಳಲ್ಲಿ, (ವ್ಯರ್ಥವಾಗಿ) ವ್ಯಯಿಸುವಷ್ಟು ಹಣವನ್ನಾದರೂ ಈ ಪರಿಷತ್ತಿಗೆ ಅಥವಾ ಅದರ ಶಾಖೆಗಳಿಗೆ ಸದ್ವಿನಿಯೋಗವಾಗಲೆಂದು ಒಪ್ಪಿಸಿದರೆ, ಕನ್ನಡ ಸಾಹಿತ್ಯದ ಬೆಳವಣಿಗೆಗೂ ಕನ್ನಡ ಭಾಷಾ ಪ್ರಚಾರಕ್ಕೂ ಎಷ್ಟೋ ಉಪಕಾರವಾದೀತು

ಈ ಭಾವನೆಗಳನ್ನು ಮನಸಿನಲ್ಲಿಟ್ಟಿಸಿ, ಮುಂಬಾಯಿಯಲ್ಲಿ ಸೇರುವ ಸಮ್ಮೇಲನಕ್ಕೆ, ಪ್ರತಿಯೊಂದು ಮೂಲೆಯಿಂದಲೂ ನೆಲೆಯಿಂದಲೂ ಪ್ರೋತ್ಸಾಹವೂ ಜನಬಲವೂ ದೊರೆತು, ಸಮ್ಮೇಲನವು ತುಂಬಾ ವಿಜಯ ಹೊಂದಲೆಂದು ಹಾರಯಿಸುತ್ತೇವೆ

ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯು ಮದ್ರಾಸು ಸಂಸ್ಥಾನಕ್ಕೂ ಅದರ ನೆರೆಯಲ್ಲಿರುವ ದೇಶೀಯ ರಾಜ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿ ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್, ಉಡುಪಿ ಇವರು ಕಾರ್ಯಾರಂಭ ಮಾಡಿ, ಇಂದಿಗೆ ೨೫ ವರ್ಷಗಳಾಗುವುವು ಕಾಲು ಶತಮಾನದಲ್ಲಿ ಸತತೋಭಿವೃದ್ಧಿ ಹೊಂದುತ್ತಲೇ ಬಂದಿರುವ ಈ ಏಜನ್ಸಿಗೂ ಮೂಲ ಕಂಪೆನಿಗೂ ಇರುವ ಬಾಂಧವ್ಯವು ಉಜ್ವಲವಾಗಿರುವುದರಿಂದಲೇ, ಕಂಪೆನಿಗಾಗಿ ಕಾರ್ಯೋದ್ಯಮವನ್ನು ಕೈಕೊಂಡ ಏಜಂಟರು ಒಂದು ರಜತೋತ್ಸವವನ್ನು ಆಚರಿಸಿ, ಮೂಲ ಕಂಪೆನಿಯ ಡೈರೆಕ್ಟರ ಮಂಡಳಿಯ ಅಧ್ಯಕ್ಷರೂ ನೇತೃವಿಗಳಾಗಿಯೂ ಇರುವ ಶ್ರೀಮಾನ್ (ಸರ್) ಲಲ್ಲೂಭಾಯಿ ಶ್ಯಾಮಲದಾಸರವರೇ ಉಡುಪಿಗೂ ಅಧ್ಯಕ್ಷರಾಗಿ ಬಂದು, ಕಂಪೆನಿಯ ಯಾವುದೇ ಸಂಬಂಧವುಳ್ಳ ಸಮಸ್ತರಿಗೂ ಆಹ್ವಾನ ಪತ್ರಗಳನ್ನು ಕಳಿಸಿ, ಅವರನ್ನು ಬರಮಾಡಿಕೊಂಡು ಸುವಿಶಾಲವಾದ ತಮ್ಮ ಮಂಟಪದಲ್ಲಿ ಸಭೆಗೂಡಿ, ಕಂಪೆನಿಯ ಡೈರೆಕ್ಟರುಗಳ ರಜತೋತ್ಸವ ಸ್ಮಾರಕಕ್ಕಾಗಿ ಕಾಸ್ಕೆಟ್ಟಿನಲ್ಲೊಂದು ಅಭಿಮಾನ ಪತ್ರವನ್ನು ಕೊಚ್ಚಿಕಾರ ಬ್ರದರ್ಸರಿಗೊಪ್ಪಿಸುವಂತೆ ಏರ್ಪಾಡಾಗಿದೆ. ಕೊಚ್ಚಿಕಾರರವರೂ ತಮ್ಮ ಏಜಂಟರುಗಳೂ ಇತ್ಯಾದಿ ಸಹಕಾರಿಗಳೆಲ್ಲರಿಗೂ ಪಾರಿತೋಷಕಗಳನ್ನು ಕೊಡುವರು, ಅವರಿಂದಲೂ ಸಂಭ್ರಮವಾಗಿ ಆಡಳಿತದ ವಾತ್ಸಲ್ಯ ಸೂಚಕವಾದ ಬಹುಮಾನವನ್ನು ಅಂಗೀಕರಿಸುವರು. ಬಂದ ಮಹಾ ಸಮುದಾಯಕ್ಕೆ ಫಲಾಹಾರಾದಿಗಳೂ ವಿನೋದಗಳೂ ಭಾಷಣಾದಿಗಳೂ ಇರುವುವು ಈ ಸಂಬಂಧದಲ್ಲಿ ಕೊಚ್ಚಿಕಾರರವರು ತಮ್ಮ ಆಫೀಸನ್ನು ನಡೆಸಿಕೊಂಡು ಬರುವಂತೆ, ಈಗ ವಿಶೇಷ ಬಡಾವಣೆ ಹೊಂದುತ್ತ ಬರುವ ಈ ಏಜನ್ಸಿಯ ಕೆಲಸ ಮಾಡಲು ಸಮಸ್ತ ಅತ್ಯಾಧುನಿಕ ಸೌಕರ್ಯಗಳು ತುಂಬ ಕೈಸೇರುವಂತೆ ದೊಡ್ಡದೊಂದು ಭವ್ಯವಾದ ಕಟ್ಟಡವನ್ನು ಬೊಂಬಾಯಿಯ ಮೂಲಕಂಪೆನಿಯೇ ಉಡುಪಿಯಲ್ಲಿ ಕಟ್ಟಿಸಲು ಮನಗೊಂಡು, ಸರ್ ಶ್ಯಾಮಲದಾಸರ ಹಸ್ತಗಳಿಂದಲೇ ಇದರ ಶಂಕುಸ್ಥಾಪನೆಯನ್ನೂ ನೆರವೇರಿಸಿಕೊಳ್ಳುವರು

ಕೊಚ್ಚಿಕಾರ ಬ್ರದರ್ಸರವರ ಪರಿಶ್ರಮವು, ಅದಕ್ಕಿಂತಲೂ ಅವರ ಔದಾರ್ಯ, ಉದ್ಯಮ, ಉದ್ಯೋಗಪರತೆ, ಇವುಗಳಿಗಿಂತ ತಮ್ಮಲ್ಲಿ ಸಹಕರಿಸಿದವರ ಕಡೆಗೆ ಇರುವ ವಿಶೇಷ ವಾತ್ಸಲ್ಯ ಮೊದಲಾದುವನ್ನು ಅಂಕಸಂಖ್ಯೆಗಳು ಬಣ್ಣಿಸುವುದಕ್ಕಿಂತಲೂ, ೭೪ ವರ್ಷ ವಯಸ್ಸಿನ ಅಧ್ಯಕ್ಷರು ಬೊಂಬಾಯಿಯಿಂದ ಇಲ್ಲಿಗೆ ಇದೊಂದು ಸಮಾರಂಭಕ್ಕಾಗಿ ದಯೆ ಮಾಡಿಸಿ ಮುಂದೆ ಕೂಡಲೆ ಕಲ್ಕತ್ತೆಗೆ ಹೊರಡುವಂತಹ ಜಗತ್ಪ ಅನುಗ್ರಹವನ್ನು ಇಟ್ಟಿರುವ ಮತ್ತು ಅರ್ಧ ಲಕ್ಷಕ್ಕೆ ಮೇಲ್ಪಟ್ಟಷ್ಟು ಧನವ್ಯಯದಿಂದ ಉಕ್ತಮವಾದ ಕಾರ್ಯಾಗಾರವನ್ನು ಕಟ್ಟಿಸುವ ಈ ಸಂಭವದಿಂದಲೇ, ಈ ಅಪೂರ್ವ ನಿದ್ದರ್ಶನಗಳಿಂದಲೇ ವ್ಯಕ್ತವಾಗುವುದಲ್ಲವೆ? ವಿಮಾದಾರರಿಗೆ ಬೇಕಾಗುವಷ್ಟು ಸಹಕಾರ, ರಿಯಾಯಿತಿ, ನಿರ್ವಂಚನೆ, ಕ್ಲಿಷ್ಟ ಕಾಲಕ್ಕೊದಗುವ ಸಹಾಯ, ಮೊದಲಾದ ನಾನಾ ವಿಧಾನಗಳಿಂದ ಉಪಕಾರವನ್ನೇ ಸೇವೆಯನ್ನೇ ಮಾಡಿರುವ ಕೊಚ್ಚಿಕಾರ ಬ್ರದರ್ಸರವರ ಮೂಲಕ ಊರ್ಜಿತದಲ್ಲಿರುವ ವಿಮೆಯು ಒಂದು ಕೋಟಿ ರೂಪಾಯಿಗಳಷ್ಟು, ವಾರ್ಷಿಕ ಆಯವು ಐದು ಲಕ್ಷದಷ್ಟು ಆಗಿರುವುದೇನೂ ವಿಚಿತ್ರವಾಗಿಲ್ಲ ನಮ್ಮಲ್ಲೇ ಇಪ್ಪತ್ತೈದು ವರ್ಷ ಕಾಲ ವಿಮಾ ಕಾರ್ಯದಲ್ಲಿ ದುಡಿದು ದಣಿಯದೆ ಯೌವನೋತ್ಸಾಹದಿಂದ ಸದಾ ಸರ್ವದಾ ವಿಮಾದಾರರ ಹಿತಸಾಧನೆ ನೋಡುತ್ತಿರುವ ಮೆಸರ್ಸ್ ಕೊಚ್ಚಿಕಾರ ಬ್ರದರ್ಸರವರು ಇನ್ನೂ ಇನ್ನೂ ಧಾರಾಳವಾಗಿ ಕೀರ್ತಿಗೊಂಡು ಮುಂದಣ ತಲಾಂತರಗಳಿಗೂ ವಿಮಾ ಸೌಕರ್ಯಾದಿಗಳನ್ನು ಒದಗಿಸಿ ಕೊಡುತ್ತ ನಮ್ಮ ಜಿಲ್ಲೆಗೂ ತಮಗೂ ಯಶಸ್ಸನ್ನು ಸಂಪಾದಿಸುತ್ತಿರಲೆಂದು ಹಾರಯಿಸುತ್ತೇವೆ

ಸ್ಫುಟವಿಚಾರಗಳು

ಧುರೀಣರು

ತಂಟೆಖೋರರಾಗಿರುವವರು ಧುರೀಣರೇ ಆದರೇನು? ಅವರನ್ನು ಧುರೀಣರೆಂದು ಬಗೆಯದೆ, ತಂಟೆಖೋರರೆಂದೇ ಸರಕಾರವು ಎಣಿಸಿ ಎಚ್ಚರಿಸುವುದೂ ಒಂದು ಕ್ರಮವಿದೆ ಈ ಕ್ರಮವನ್ನು ಕೈಕೊಳ್ಳದೆ, ಲಾಹೋರು ಮೊದಲಾದ ಸ್ಥಳಗಳಲ್ಲಿ ಆಗಾಗ ದಂಗೆಗಳೂ, ಸಮಾಜಗಳೊಳಗೆ ತಂಟೆಕಾದಾಟಗಳೂ ಆಗುತ್ತಲಿವೆ ಧುರೀಣರಾದವರು ಶಾಂತಿಗಾಗಿ ಸಾಧನೆಮಾಡದೆ ಒಳಗಿಂದೊಳಗೆ ಹಂಚಿಕೆ ಮಾಡುತ್ತಿರುವುದರಿಂದ ಜನರಿಗೂ ಸರಕಾರಕ್ಕೂ ಹಾನಿ ತಟ್ಟುತ್ತಿದೆ ಇವರು ಅಧಿಕಾರಗಳನ್ನು ಸುಲಭವಾಗಿ ತಮ್ಮ ಅಭಿಪ್ರಾಯದ ಕಡೆಗೆ ಬಲಿಸಿಕೊಳ್ಳಬಲ್ಲರೆಂದು ನಂಬಿ, ಒಂದಲ್ಲದೊಂದು ಬಗೆಯಲ್ಲಿ ತಮ್ಮ ಸಾಮಾಜಿಕರನ್ನು ಯಾವುದೋ ಹಟಸಾಧನೆ ನಡೆಸಲು ಆಸ್ಪದ ಕೊಡುವರು ಸಮಾಜಗಳೊಳಗೆ ಐಕ್ಯತೆಯಿಲ್ಲದಿರುವುದಾದರೆ ಮಾತ್ರ, ಇವರು ಧುರೀಣರಾಗಿ ಮೆರೆವರು; ಸಮಾಜಗಳು ಒಂದುಗೂಡಿದರೆ ಇವರಿಗೆ ಸ್ಥಾನಮಾನಗಳು ತಪ್ಪುವುವು ಅದುದರಿಂದಲೇ, ಸಮಾಜಗಳೊಳಗೆ ಕಲಹವೂ ಇವರ ಧುರೀಣತನವೂ ಸಮಕಾಲೀನವಾಗಿ ಮೆರೆವಂತಾಗಿದೆ, ಕಲಹಗಳು ಇನ್ನೂ ಮುಗಿಯದೆ ಇವೆ

ಪ್ರೌಢ ವಿದ್ಯಾಭ್ಯಾಸ

ಈ ವಿಷಯವಾಗಿಯೆ ಶ್ರೀಯುತ ಜಯಕರರು ನಾಗಪುರ ವಿಶ್ವವಿದ್ಯಾಲಯದ ಸ್ನಾತಕರಿಗೆ ಭಾಷಣ ಮಾಡಿದರು ಪ್ರೌಢ ವಿದ್ಯಾಭ್ಯಾಸದ ಧ್ಯೇಯವೇ ಬೇರೆಯಾಗಬೇಕೆಂದೂ, ಇದುವರೆಗೆ ಸರಕಾರಕ್ಕೆ ನವುಕರರನ್ನು ಒದಗಿಸಿ ಕೊಡುವುದಷ್ಟೆ ಈ ಧ್ಯೇಯವಾಗಿರುವುದನ್ನು ಬದಲಾಯಿಸಬೇಕೆಂದೂ ಅವರು ಸೂಚಿಸಿರುವರು. ಕೇವಲ ಜ್ಞಾನಸಂಪಾದನೆಗಾಗಿಯೆ, ಹೊಸ ಶೋಧಗಳನ್ನು ಮಾಡುವುದಕ್ಕಾಗಿಯೆ ಪ್ರೌಢವಿದ್ಯಾಭ್ಯಾಸವು ಆವಶ್ಯಕವಾದುದೆಂದು ಜನಗಳು ಭಾವಿಸಬೇಕೆಂದೂ, ವಿದ್ಯಾಭ್ಯಾಸದಲ್ಲಿ ಮುಂದರಿಸಿ ಬರುತ್ತಿರುವಂತೆ ಬೇರೆ ಬಗೆಯ ವೃತ್ತಿ ಶಿಕ್ಷಣ ಮೊದಲಾದುವನ್ನು ಪಡೆಯಲು ಅನುಕೂಲವಾಗುವಂತೆ ಸಲಕರಣೆಗಳನ್ನು ಕಲ್ಪಿಸಿಕೊಡಬೇಕೆಂದೂ ಇವರೆಂದರು ಜ್ಞಾನ ಸಂಪಾದನೆಯ ಸಲುವಾಗಿ, ಬ್ರಹ್ಮಲೋಕಕ್ಕೇರಲು ಸಾಮರ್ಥ್ಯವಿಲ್ಲದವರಿಗೆ ಉದರಂಭರಣಕ್ಕಾಗಿ ಶಿಕ್ಷಣ ದೊರೆಯಲು ಎಲ್ಲಿ ಅನುಕೂಲತೆಗಳಿಲ್ಲವೊ, ಅಲ್ಲಿ ಶಿಕ್ಷಣಕ್ಕೆ ಜಾಡ್ಯ ಹಿಡಿಯದೆ ಇರಲಾರದು ಗ್ರಾಮಾಭ್ಯುದಯ ಕೆಲಸಗಳನ್ನು ನಿರ್ವಹಿಸಲು ಸಾವಿರಾರು ಶಿಕ್ಷಿತರ ಈಗ ಬೇಕಾಗಿದ್ದಾರೆ ಎಂದು ಪ್ರತಿಯೊಂದು ಸಭಾಮಂಟಪದಿಂದ ಧ್ವನಿಯೇಳುತ್ತಿದೆ ಇಷ್ಟು ಮಂತ್ರೋಚ್ಚಾರವಾಗುತ್ತಿದ್ದರೂ ಅಂತಹ ತರಬೇತನ್ನು ಕೊಟ್ಟು ಯುವಕರನ್ನು ಈ ಕೆಲಸಕ್ಕೆ ಹಚ್ಚುವ ಕಾರ್ಯವೇನೂ ನಡೆದಿಲ್ಲವಲ್ಲ

ಬಂಗಾಳದ ಸೂಚನೆ

೧೯೧೯ರಿಂದ ಕೊಡಲಾದ ರಾಜಕೀಯ ಸುಧಾರಣೆಗಳನ್ನು ಇತರ ಪ್ರಾಂತ್ಯಗಳು ಕೈಗೊಂಡು ಮುಂದರಿದಿವೆಯಾದರೂ, ಬಂಗಾಳವು ತೀರ ಹಿಂದುಳಿದಿದೆ ವಿಧಿವಿಧಾನಗಳನ್ನು ಅನುಸರಿಸಿ, ಬಂಗಾಳದ ಪ್ರತಿನಿಧಿಗಳು ಏನನ್ನೂ ಮಾಡಲಾರದೆ ಹೋದರು ವಂಗಭಂಗದ ಕಾಲದಲ್ಲಿ ಎಂತಹ ಒಕ್ಕಟ್ಟಿನಿಂದ ಸಾಧನೆಗಳು ನಡೆಯುತ್ತಿದ್ದುವೊ ಅವೆಲ್ಲ ಮಾಯವಾದುವು; ಒಕ್ಕಟ್ಟು ಮುರಿಯಿತು ಬಂಗಾಳದಲ್ಲಿ ಹಿಂದುಗಳೊಳಗೇ ಕಚ್ಚಾಟಗಳು ಹಿರಿದಾಗಿವೆ. ಇಂದಿನ್ನು ಸೇ, ಪುನಃ ನಾವು ಒಂದಾಗಬೇಡವೆ? ಎಂದು ಇಂಡಿಯಾ ಕೌನ್ಸಿಲಿನ ಮಾಜಿ ಮೆಂಬರರಾಗಿರುವ ಶ್ರೀಯುತ ಮಲ್ಲಿಕರು ಇಂಡಿಯನ್ ಎಸೋಸಿಯೇಶನಿನಲ್ಲಿ ಭಾಷಣ ಮಾಡಿದರು. ಬಂಗಾಳ ಸರಕಾರದ ಮೆಂಬರರಾಗಿರುವ ಸರ್ ಬಿ ಪಿ ಸಿಂಗ್ ರೋಯಿಯವರೂ ಇದನ್ನು ಅನುಮೋದಿಸಿ, ಕೊಂಗ್ರೆಸ್ ಪ್ರತಿನಿಧಿಗಳು ಒಪ್ಪಿದರೆ, ಲಿಬರಲ್ ಪಕ್ಷದವರೂ ಕೊಂಗ್ರೆಸ್ಸನ್ನು ಸೇರಿ ಸಮ್ಮಿಲಿತವಾಗಿ ಕಾರ್ಯಸಾಧನೆ ಮಾಡಬಹುದೆಂದರು ಶ್ರೀಮತಿ ಜ್ಯೋತಿರ್ಮಯಿ ಗಂಗುಲಿಯವರು ರಾಷ್ಟ್ರ ಸಭೆಯು ಲಿಬರಲರೊಡನೆ ಕಲೆತು ಕಾರ್ಯ ನಿರ್ವಹಿಸಲು ಹಿಂದೆಗೆವುದಿಲ್ಲೆಂದರು. ಬಂಗಾಳದ ಹಿಂದುಗಳೇ ಎಂದಲ್ಲ, ಬಂಗಾಳ ಮುಸ್ಲಿಮರು ಸಹ ಒಂದಾಗಿ ಸೇರಿ ಹಾಗೆ ಅಪೇಕ್ಷಿಸಿದರೆ, ಕೊಂಗ್ರೆಸ್ ಪಕ್ಷವು ಅವರೊಡನೆ ಸೇರುವುದಾಗಿ, ಪಂಡಿತ ಕುಂಜ್ರುರವರು ಅಭಿಪ್ರಾಯ ಕೊಟ್ಟರು ಸಮಸ್ತ ಪಕ್ಷಗಳ ಪ್ರತಿನಿಧಿಗಳು ಒಂದಾಗಿ, ಒಕ್ಕಟ್ಟಿನ ಸಮಸ್ಯೆಯನ್ನು ಬಗೆಯಲಿ. ಚಿರಂತನಕ್ಕೆ ಶುಭವಾಗಲಿ.

ಸಮಾನತೆ

ನಮ್ಮೊಳಗೇ ಕೆಲವು ಸಮಾಜಗಳು ಅಸ್ಪೃಶ್ಯವೆಂದು ಇರುವಷ್ಟು ದಿನ, ಇತರ ಜನಾಂಗಗಳು ನಮ್ಮನ್ನು ಅಸ್ಪೃಶ್ಯರೆಂದು ಬಾವಿಸುವುದರಲ್ಲಿ ತಪ್ಪೇನೂ ಇಲ್ಲವೆಂದು ಸಾವಿರದೊಂದನೆ ಸಲ ರಾಷ್ಟ್ರ ಸಭಾಧ್ಯಕ್ಷರು ಹೇಳಿರುವರು. ಬ್ರಿಟಿಷರೊಡನೆ ಸ್ವಮಾನತೆ ಸಿಗಬೇಕೆಂದು ಹಿಂದೀಯರು ಅಪೇಕ್ಷಿಸುವುದರಲ್ಲಿ, ಇದೊಂದು ಆಕ್ಷೇಪವು ನಮ್ಮ ವಿರೋಧಿಗಳ ಬಾಯಿಂದ ಕೇಳಬರುತ್ತಲೇ ಇದೆ. ಅದಕ್ಕಾಗಿ ರಾಷ್ಟ್ರ ಸಭೆಯು ಅಸ್ಪೃಶ್ಯತಾ ನಿವಾರಣೆಯನ್ನು ತನ್ನ ಮುಖ್ಯ ಸಾಧನೆಗಳಲ್ಲಿ ಒಂದನ್ನಾಗಿ ಇಟ್ಟುಕೊಂಡಿದೆ. ಭಿನ್ನ ಸಮಾಜಗಳೊಳಗೆ ಐಕ್ಯಮತ್ಯವನ್ನು ಉಂಟುಮಾಡುವುದೇ ಮಾತ್ರವಲ್ಲದೆ, ಅಸ್ಪೃಶ್ಯತೆಯನ್ನು ನಿರ್ಮೂಲಿಸುವುದೂ ರಾಷ್ಟ್ರೀಯ ಧ್ಯೇಯಗಳಲ್ಲಿ ಒಂದಾಗಿದೆ. ಬಹು ಸಂಖ್ಯಾತರಾಗಿರುವ ಗ್ರಾಮನಿವಾಸಿಗಳ ಗುಡಿ ಕೈಗಾರಿಕೆಗಳನ್ನು ಕೈಕೊಳ್ಳುವಂತೆ ಮಾಡುವುದೂ, ಗ್ರಾಮಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದೂ ಮೊದಲಾದುವಕ್ಕೂ ಅಸ್ಪೃಶ್ಯತಾ ನಿವಾರಣೆ, ಐಕ್ಯಸಾಧನೆ ಇತ್ಯಾದಿಗಳಿಗೂ ಸರಕಾರದ ಕಾನೂನಾಗಿಯೇ ಆಗಬೇಕೆಂದೇನೂ ಇಲ್ಲದ ಬಳಿಕ, ಇವಿನ್ನೂ ಸಾಧ್ಯವಾಗದಿರುವುದೇತಕ್ಕೆಂದು ಸರ್ವರೂ ವಿಚಾರ ಮಾಡಿದರೆ, ರಾಷ್ಟ್ರಸಭೆಯು ಕೈಕೊಂಡಿರುವ ಕಾರ್ಯೋದ್ಯಮವು ಸರಿಯಾಗಿದೆ ಎಂದು ತಿಳಿಯುದಿರರು.

ಲಂಡನು ಸುರಕ್ಷಿತವೆ?

ವಿಮಾನಗಳಿಂದ ಬೊಂಬು ಚೆಲ್ಲುವುದಕ್ಕೆ ಯಾರೂ ಮನಸ್ಸು ಮಾಡಿದರೆ, ಲಂಡನಿನಂತಹ ಸುಲಭದಲ್ಲಿ ಧ್ವಂಸಮಾಡಲಾಗುವ ಇತರ ಸ್ಥಳಗಳೇ ಸಿಗಲಾರವು. ಕಳೆದ ಮಹಾಯುದ್ಧದಲ್ಲಿ ಒಂದು ದಿನ ೧೯೧೭ನೇ ಇಸ್ವಿ ಜೂನ್ ತಾ ೧೩ರಲ್ಲಿ, ಸಿಡಿಗುಂಡು ಚೆಲ್ಲಿದಾಗ, ೧೬೨ ಜನರು ಸತ್ತು, ೪೩೨ ಮಂದಿಗೆ ಗಾಯಗಳಾದುವು. ೧೨೦ ಸಲ ವಿಮಾನಗಳು ಲಂಡನಿನ ಮೇಲೆ ಬೊಂಬು ಚೆಲ್ಲಿದುವು. ಅದಕ್ಕಾಗಿ,— ಈಗ ಲಂಡನಿನ ಸುತ್ತಲು ವಿಮಾನ ಧ್ವಂಸಕ್ಕಾಗಿಯೇ ಫಿರಂಗಿಗಳನ್ನು ಇಟ್ಟಿರುವರು. ಒಂದು ಕಡೆಯಿಂದ ಮತ್ತೊಂದಕ್ಕೆ ಕೂಡಲೆ ಒಯ್ಯಲಾಗುವ ಫಿರಂಗಿಗಳೂ ಜಮೆಯಾಗಿವೆ. ತಾಸಿಗೆ ೩೦೦ ಮೈಲು ವೇಗದಿಂದ ಹಾರಾಡುವ ಮಹಾ ವಿಮಾನಗಳ ಗುಂಪುಗಳು ಅಲ್ಲಲ್ಲಿವೆ. ನೆಪೋಲಿಯಾನನ ಕಾಲದಲ್ಲಿ, ಸಮುದ್ರವೊಂದೇ ಸಾಕಷ್ಟು ಭದ್ರತೆ ಕೊಡುತ್ತಿತ್ತು. ಈಗ ಯಾವುದೊಂದು ದೇಶದಿಂದ ಒಂದೇ ತಾಸಿನೊಳಗೆ ಲಂಡನಿನ ಮೇಲೆ ಹಾರಿ, ಸಿಡಿಗುಂಡುಗಳನ್ನು ಚೆಲ್ಲುವುದು ತೀರ ಸುಲಭವಾಗಿದೆ! ವಿಮಾನಗಳ ಮೇಲೆ ನಿಮಿಷಕ್ಕೆ ೫೦೦ ಗುಂಡುಗಳನ್ನು ಹಾರಿಸುವಂತಹ ಹೊಸ ಫಿರಂಗಿಗಳನ್ನು ಈಗ ಪ್ರತಿ ನಾವೆಯಲ್ಲೂ ಇಟ್ಟಿರುವರು. ಶಾಂತಿ ಸಾಧನೆಯ ವಿಪರ್ಯಾಸ!

ನೌಕಾಬಲದ ವಿಚಾರ

ಇಂಗ್ಲೆಂಡು, ಅಮೇರಿಕ, ಜಾಪಾನುಗಳೊಳಗೆ, ಮೊದಲ ಎರಡು ದೇಶಗಳ ಬಲವು ಐದರಂತೆಯೂ ಜಾಪಾನಿನದು ಮೂರರಂತೆಯೂ ಇರಬೇಕೆಂಬ ಅದೊಂದು ಕರಾರು ಇದೆ. ಈಗ ಜಾಪಾನಿನ ಗೌರವಕ್ಕೆ ಇದು ಕುಂದು ಎಂದು ಜಾಪಾನೂ ಐದರಂತೆ ತನ್ನ ನೌಕಾಬಲವನ್ನು ಏರಿಸಲು ಹವಣಿಸಿದೆ. ಇಂಗ್ಲೆಂಡಿನ ಅಭಿಪ್ರಾಯವು ಯಾವುದಿದ್ದರೂ, ಅಮೇರಿಕವು ಈ ಸಮಾನ ಬಲಸಾಧನೆಗೆ ಜಾಪಾನನ್ನು ಪ್ರೋತ್ಸಾಹಿಸಲೊಲ್ಲದು. ಸಮಾನತೆ ಸಿಗದಿದ್ದರೆ, ಹಿಂದಣ ಕರಾರನ್ನು ರದ್ದುಗೊಳಿಸಬೇಕಾಗಿ ಜಾಪಾನು ನಿರ್ಧಾರ ಮಾಡಿರುವುದು. ಜಾಪಾನು ಅಮೇರಿಕಕ್ಕೆ ಸಮಾನ ಬಲಶಾಲಿಯಾದರೆ, ಫೆಸಿಫಿಕ್ (ಶಾಂತ) ಸಾಗರದಲ್ಲಿ ಶಾಂತಿಗೆ ಮೋಸವಿದೆ ಎಂದು ಅಮೇರಿಕವು ಬೆದರಿರುವುದು. ಕಳೆದ ವರ್ಷ ಈ ವಿಷಯ ಪರಿಷತ್ತು ಜರುಗಿ ಯಾವ ಫಲವೂ ಉಂಟಾದುದಿಲ್ಲ; ಈ ವರ್ಷ ಈಗ ಚರ್ಚೆಯಾಗುತ್ತಿರುವುದರಿಂದ ಯಾವ ಸಮಾಧಾನವುಂಟಾಗಬಹುದೋ ತಿಳಿಯದು. ಆದರೆ, ಇನ್ನೂ 'ತಾನು ಮುಂದೆ' ಎಂದು ನೌಕಾಬಲವನ್ನು ಏರಿಸಲು ಯಾವುದೊಂದು ರಾಷ್ಟ್ರದ ಕೈಯಲ್ಲೂ ಹಣವಿಲ್ಲದರಿಂದ, ಕರಾರು ಒಂದು ಬಗೆಯಾಗಿ ಆಗಬಹುದು; ಮಹತ್ತು ಸತ್ಫಲವನ್ನೀಯುವುದು ಎಂದು ನಂಬಲಾಗಿದೆ.

ಹೊಗೆಸೊಪ್ಪಿನ ಮೇಲೆ ಸುಂಕ

ಇದನ್ನು ಕುರಿತಾದ ಮಸೂದೆಯು ದೆಸೆಯಿಂದ ಪ್ರಾಂತದಲ್ಲಿ ಉಂಟಾದಷ್ಟು ನಿಷೇಧ ಚಳವಳವು ಇನ್ನಾವ ಮಸೂದೆಯಿಂದಲೂ ಉಂಟಾದುದಿಲ್ಲ. ಈಗ ಇನ್ನೂ ಉಜ್ಜೀವನಗೊಂಡಿರುವ ಈ ಕೌನ್ಸಿಲು ಇದರಂತಹ ಮತ್ತೊಂದು ಮಸೂದೆಗೆ ಕೈಹಾಕುವ ಹಾಗೂ ಇಲ್ಲ. ಅಲ್ಲಲ್ಲಿ ಸಭೆಸೇರಿ ಬಂದ ಆಕ್ಷೇಪಗಳಂತಿರಲಿ, ಸ್ಥಳೀಯ ಸಂಸ್ಥೆಗಳಿಂದ ಬಂದ ಆಕ್ಷೇಪಗಳೇನೂ ಕಡಿಮೆಯಾಗಿಲ್ಲ. ಜನತೆಯ ಅಭಿಪ್ರಾಯಗಳನ್ನು ಮನ್ನಿಸಿ, ಸರಕಾರವು ಈ ಮಸೂದೆಯನ್ನು ಹಿಂದೆಗೆಯಬಹುದು. ಹಾಗೆ ಮಾಡಿದರೆ ಸೊಗಸು. ಇದ್ದ ತೆರಿಗೆ ತೆರುವುದಕ್ಕೆ ಚಿಕ್ಕಾಸೂ ಉಳಿಯದಿರುವ ಜನರ ಮೇಲೆ ಇನ್ನಷ್ಟು ತೆರಿಗೆ ಹೇರಿಸಿ ದೊರೆವುದೇನು? ಈ ಮಸೂದೆಯು ಮಂಜೂರಾದರೆ, ಹೊಗೆಸೊಪ್ಪಿನ ಸಾಗುವಳಿಯ ಹಾಗೂ ಮಾರುವ ವೃತ್ತಿಯುಳ್ಳವರೆಲ್ಲ ಕಳೆಗೆಡುವರು. ಅಂತೂ, ಇದು ಈ ಕೌನ್ಸಿಲು ನಮ್ಮ ಸಂಸ್ಥಾನದ ಬಡವರಿಗೆ ಕೊಡುವ ಯುಗಾದಿಯ ಉಡುಗೊರೆಯೆ?

ಮಂಗಳೂರು

ಗೌ। ಕಾಲೇಜಿನ ವರ್ಧಂತ್ಯುತ್ಸವ

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ವರ್ಧಂತ್ಯುತ್ಸವವು ತಾ ೧೫—೧೬ ೩ನೇ ಆದಿತ್ಯವಾರ ಬೇಗಮ್ ಸುಲ್ತಾನ್ ಅಮರುದ್ದೀನ್ ಬಿ ಎ (ಬಿನ್ನಿ) ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಮಾಜಿ ಡಿಸ್ಟ್ರಿಕ್ಟ್ ಕಲೆಕ್ಟರ ರಾ ಬ। ಬಿ ರಾಮಬಂಗೇರ ಬಿ ಎ ಎಮ್ ಆರ್ ಎಂಡ್ ಓ ಎಸ್ ಇವರು ಈ ಸಮಯದಲ್ಲಿ ಬಹುಮಾನಗಳನ್ನು ಒಯಿಸುವವರಿದ್ದಾರೆ. ಕಾಲೇಜಿನ ಗತ ವಿದ್ಯಾರ್ಥಿಗಳಿಗೆಲ್ಲ ಸುಸ್ವಾಗತವಿದೆಯೆಂದು ಶಾಲಾ ಮುಖ್ಯಾಧಿಕಾರಿಗಳು ತಿಳಿಸುತ್ತಾರೆ.

ಸಿಟಿ ಆರ್ಯಸಮಾಜ, ಮಂಗಳೂರು— ಈ ಸಮಾಜದ ಎಲ್ಲಾ ಸದಸ್ಯರ ಒಂದು ವಿಶೇಷ ಸಭೆಯು ಇದೇ ತಿಂಗಳ ತಾ ೮ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮ ೩೦ಕ್ಕೆ ಸಮಾಜ ಮಂದಿರದಲ್ಲಿ, ಇಲ್ಲಿಯ ಮುನಿಸಿಪಾಲ್ ಕೌನ್ಸಿಲರೂ ವಕೀಲರೂ ಆದ ಶ್ರೀಮಾನ್ ರಂಗರಾವ್ ತಲಚೇರಿಕಾರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೆಳಗಿನ ವಿಷಯಗಳು ಮಂಜೂರುಗೊಳಿಸಲಾದುವು. ಮುಂದಿನ ವರ್ಷದ ಬಗ್ಗೆ ಒಂದು ಕಾರ್ಯನಿರ್ವಾಹಕ ಸಮಿತಿಯ ಚುನಾವಣೆ ನಡೆಸಲಾಯಿತು. ಇದರಲ್ಲಿ ಶ್ರೀಮಾನ್ ಬಸ್ತಿ ದಾಸಪ್ಪಶೆಣೈಯವರನ್ನು ಅಧ್ಯಕ್ಷ ಮತ್ತು ಉಪಾಧ್ಯಯವರನ್ನಾಗಿಯೂ ಬಿ ಲಕ್ಷ್ಮಣದೇವ ವಿದ್ಯಾರ್ಥಿ, ಕೆ ತಿಮ್ಮಯ್ಯ ಇವರುಗಳನ್ನು ಜೊತೆಕಾರ್ಯದರ್ಶಿಗಳನ್ನಾಗಿಯೂ ಮ ರಾ ರಾ ಗಳಾದ ರಂಗರಾವ್ ತಲಚೇರಿಕರ್ ಕೆ ಕೊರಗಪಂಡಿತ, ಎಸ್ ಕೇಶವನಾಯಕ್, ಪಿ ನರಸಿಂಹಯ್ಯ, ಎಸ್ ವಿ ಬಂಗೇರ, ಎಸ್ ಎಮ್ ಸುವರ್ಣ, ಎ ಶಿವಪ್ಪ, ವಿ ಬಾಲಕೃಷ್ಣನಾಯ್ಕ್ ಇವರುಗಳನ್ನು ಕಮಿಟಿಯ ಸದಸ್ಯರುಗಳನ್ನಾಗಿ ಚುನಾಯಿಸಲಾಯಿತು. ಸಮಾಜದ ಆರ್ಥಿಕ ಅಭಿವೃದ್ಧಿಗೋಸ್ಕರ ಶ್ರೀಯುತರುಗಳಾದ ಬಸ್ತಿ ದಾಸಪ್ಪ ಶೆಣೈ ಬಿ ಎಲ್ ವಿದ್ಯಾರ್ಥಿ, ಕೆ ತಿಮ್ಮಯ್ಯ, ವಿ ಬಾಲಕೃಷ್ಣನಾಯ್ಕ್, ಕೆ ಕೊರಗಪಂಡಿತ ಇವರುಗಳ ಒಂದು ಉಪಸಮಿತಿಯನ್ನು ನಿಯಮಿಸಲಾಯಿತು. ಶ್ರದ್ಧಾನಂದ ಬಲಿದಾನ ದಿನಾಚರಣೆಯನ್ನು ಇದೇ ತಿಂಗಳ ತಾ ೨೦, ೨೧, ೨೨ ಈ ಮೂರು ದಿನಗಳಲ್ಲಿ ಜಪ್ಪು, ಸಿರೀಶ್ವಾಲ್ಕ, ಮೈದಾನ್ ಈ ಕಡೆಗಳಲ್ಲಿ ಜರಗಿಸಬೇಕೆಂದೂ ಈ ಸಭೆಗಳಿಗೆ ಶ್ರೀಗಳಾದ ಡಾ। ಎಸ್ ಬಿ ಸುವರ್ಣ, ಡಾ। ಬಿ ಕೆ ಪಿ ಶಿವರಾವ್, ರೆವರೆಂಡ್ ಇ ಸುಬ್ಬುಕೃಷ್ಣಯ್ಯ ಇವರುಗಳನ್ನು ಅಧ್ಯಕ್ಷರನ್ನಾಗಿ ಕೇಳಿಕೊಳ್ಳಬೇಕೆಂದು ನಿಶ್ಚಯಿಸಲಾಯಿತು.

ದ. ಕ. ಜಿಲ್ಲಾ ಮೆಡಿಕಲ್ ಸಂಘದ ಸಭೆ— ಇದೇ ತಾ. ೧೪ರಲ್ಲು ಇಲ್ಲಿಯ ವೆನ್‌ಲೋಕ್ ಆಸ್ಪತ್ರೆಯಲ್ಲಿ ಸಂಜೆ ೫-೩೦ಕ್ಕೆ ದ. ಕ ಜಿಲ್ಲೆಯ ಮೆಡಿಕಲ್ ಸಂಘದ ಒಂದು ಮೀಟಿಂಗ್ ನಡೆದು ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಪ್ರೆಸಿಡೆಂಟರಾದ ಕರ್ನಲ್ ಬೋಳೋನಾಥ, ಐ ಎಂ ಎಸ್, (ನಿವೃತ್ತ) ಇವರು 'ವೈದ್ಯಕೀಯ ವೃತ್ತಿಯೂ ಅದರ ವ್ಯವಸ್ಥಾ ರೀತಿಯೂ' ಎಂಬುದರ ಕುರಿತು ಭಾಷಣಮಾಡುವರು. ಅಂದು ಟೀ ಪಾರ್ಟಿಯ ಏರ್ಪಾಡೂ ಇದೆ.

"ಹಿಂದೀ ಶಾಂತಿನಿಕೇತನ"

ಎಂಬ ಹೆಸರಿನಿಂದ ಹಿಂದೀ ರಾತ್ರಿ ಶಾಲೆಯೊಂದು ಮಂಗಳೂರಿನ ಕೆಲವು ಉತ್ಸಾಹೀ ತರುಣರಿಂದ ರಥಬೀದಿಯಲ್ಲಿ, ಹೂವಿನಾರ್ಕೆಟಿನೆದುರಲ್ಲಿರುವ ಮಾಳಿಗೆಯ ಮೇಲೆ ತಾ ೫ನೇ ಗುರುವಾರ ರಾತ್ರಿ ಗಂಟೆ ೭—೩೦ಕ್ಕೆ ಕೆನರಾ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ। ಟಿ ನಾರಾಯಣ ಭಟ್ಟ, ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿದೆ.

ಗೀತಾ ಜಯಂತಿ

ಕಳೆದ ೬ನೇ ಶುಕ್ರವಾರ ದಿವಸ ಸಾಯಂಕಾಲ ೬ ಗಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಗೀತಾ ಜಯಂತ್ಯುತ್ಸವವು ಯಶಸ್ವಿಯಾಗಿ ನಡೆಯಿತು. ಶ್ರೀಮಾನ್ ಯು ನರಸಿಂಗರಾವ್ ಬಿ ಎ ಎಂ ಎಲ್ ನಿವೃತ್ತ ಜಿಲ್ಲಾ ಜಡ್ಜರು ಅಧ್ಯಕ್ಷರಾಗಿದ್ದರು. ಜನಸಂಘಣೆಯು ತೃಪ್ತಿಕರವಾಗಿತ್ತು. ಶ್ರೀ ಎಂ ಎಸ್ ಕಾಮತರು ಮತ್ತು ಇ ಸುಬ್ಬು ಕೃಷ್ಣಯ್ಯನವರ ಭಾಷಣಗಳು ಗಣನೀಯಾಂಶವುಗಳಾಗಿದ್ದವು.

ತಾಲೂಕುಗಳಿಂದ.

ಕುಂದಾಪುರ— ಇಲ್ಲಿಯ ನಾಟಕ ಮೈದಾನದಲ್ಲಿ ಆಟಗಾರರಿಗೂ ಹವಾ ತೆಗೆದುಕೊಳ್ಳಲಿಕ್ಕೆ ಬರುವ ಪಟ್ಟಣಿಗರಿಗೂ ಅನುಕೂಲವಾಗುವಂತೆ ಮೈದಾನದ ದುರಸ್ತಿ ಕೆಲಸವು ಕಳೆದ ವಾರದಿಂದ ಪ್ರಾರಂಭವಾಗಿರುವುದು ಸ್ತುತ್ಯರ್ಹವಾಗಿದೆ.

ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪ್ರಾರಂಭವಾಗಿದ್ದ ಸಪ್ತಾಹ ಭಜನೆಯು ಮಂಗಳವು ತಾ. ೬ನೇ ಶನಿವಾರ ದ್ವಾದಶಿ ದಿವಸ ಸಂಭ್ರಮದಿಂದ ಜರಗಿತು. ಭಜನೆಯು ಬೊಡ್ಡ ಮೆರವಣಿಗೆಯೂ ಇತ್ತಲ್ಲದೆ ದೇವಸ್ಥಾನದಲ್ಲಿ ಬ್ರಾಹ್ಮಣ ಸಂತರ್ಪಣೆಯೂ ಕೂಡಾ ಇತ್ತೆಂದು ತಿಳಿದು ಬಂದಿತ್ತದೆ.

ಕರ್ನಾಟಕ ಸಾಹಿತ್ಯ ಸಂಘದ ವಿಶೇಷ ಸಭೆಯು ಕಳೆದ ತಾ ೬—೧೨—೩೫ರಲ್ಲು ಅ ಸ ಪಕ್ಷ ಕುಂದಾಪುರ ಕೃಷ್ಣಸಲ್ಲಿ ಇಲ್ಲಿಯ ವಕೀಲರಾದ ಶ್ರೀಯುತ ಸದಾಶಿವ ಉಡುಪರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ ಕೆ ಸಿ ನಾಗಾಚಾರ್ಯ ವಿದ್ವಾನ್ ಇವರು ಅಧ್ಯಕ್ಷರಿಗೂ ಇಂದಿನ ಉಪನ್ಯಾಸಕರಿಗೂ ಹೂವಿನ ಹಾರಗಳನ್ನು ಹಾಕಿ ಸತ್ಕರಿಸಿ ಉಪನ್ಯಾಸಕರಾದ ಶ್ರೀಯುತ ಸದಾಶಿವರಾವ್ ಗದಗ ನಾಟಕಾಲಂಕಾರ ಅಭಿನಯಕೇಸರಿ ಇವರು ಕರ್ನಾಟಕ ಸಾಹಿತ್ಯಕ್ಕೆ ಮಾಡಿರುವ ಮತ್ತು ಮಾಡುತ್ತಲಿರುವ ಸಾಹಿತ್ಯ ಸೇವೆಯನ್ನೂ ಅವರ ಆದರ್ಶಮಯ ಜೀವನವನ್ನು ವಿವರಿಸಿ ಭಾಷಣವನ್ನು ಮಾಡಿದರು. ತರುವಾಯ ಉಪನ್ಯಾಸಕರು ಕನ್ನಡ ನಾಟ್ಯವೆಂಬ ವಿಷಯದಲ್ಲಿ ವಿದ್ಯಾವಂತರು ಸ್ವಕೃತಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕನ್ನಡದ ಕಾರ್ಯವನ್ನು ಸೂಚಿಸಿ ಕನ್ನಡದ ಮಹತ್ವವನ್ನು ವರ್ಣಿಸಿ ಒಂದು ಘಂಟೆಯ ವರೆಗೆ ವಿಚಾರಪೂರ್ಣವಾದ ಉಪನ್ಯಾಸವನ್ನು ಮಾಡಿ ನೆರೆದ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ಅಧ್ಯಕ್ಷರು ಉಪನ್ಯಾಸಕರನ್ನು ಕೊಂಡಾಡಿ ಕನ್ನಡ ಭಾಷೆಯಲ್ಲಿ ಮತ್ತು ಕನ್ನಡ ಸಂಘಗಳಲ್ಲಿ ಮಹಾಜನರು ಮಾಡಬೇಕಾದ ಕಾರ್ಯವನ್ನು ವಿವರಿಸಿ ಭಾಷಣವನ್ನು ಮಾಡಿದರು. ನೆರೆದ ಸಭಿಕರಿಗೆಲ್ಲಾ ಸಂಘದ ಪರವಾಗಿ ಧನ್ಯವಾದವನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾಯಿತು.

ಈ ಸಂಸ್ಥೆಯ ೭ನೇ ಸಾಮಾನ್ಯ ಸಭೆಯು ತಾ ೮ರಲ್ಲಿ ಇಲ್ಲಿಯ ವಕೀಲರಾದ ಹಲಸನಾಡು ರಾಮಪ್ಪಯ್ಯ ಎಮ್ ಎ ಬಿ ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯಾಖ್ಯಾನ ವಾಚಸ್ಪತಿಗಳಾದ ಶ್ರೀಯುತ ಹಟ್ಟಿ ಕುದ್ರುಬಾಬ್ಲು ಯಾನೆ ವೆಂಕಟ್ರಮಣ ಭಟ್ಟರು ಮುಕ್ತಿಸಾಧಕ ಭಕ್ತಿ ಪ್ರಶಂಸೆಯೆಂಬ ವಿಷಯದಲ್ಲಿ ಒಂದು ಘಂಟೆಯ ವರೆಗೆ ದೀರ್ಘ ಭಾಷಣವನ್ನು ಮಾಡಿದರು. ಬರುವ ಸಭೆಯು ಇದೇ ತಿಂಗಳ ತಾ ೨೯ರಲ್ಲು ಜರಗುವುದು. ಕಾಳಾವರ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಯುತ ಚಕ್ರಪಾಣಿ ನರಸಿಂಹಯ್ಯನವರು ಕನ್ನಡಕವಿತೆಯೆಂಬ ವಿಷಯದಲ್ಲಿ ಉಪನ್ಯಾಸವನ್ನು ಮಾಡುವರು. ಸರ್ವರಿಗೂ ಸ್ವಾಗತವಿದೆ.

ಕುಂದಾಪುರದ ಬೋರ್ಡ ಹೈಸ್ಕೂಲಿನ ೧೨ನೇ ವರ್ಧಂತಿಯು ಇದೇ ತಿಂಗಳ ತಾ. ೨೧ರಲ್ಲು ಇಲ್ಲಿಯ ಸಬ್ ಕಲೆಕ್ಟರವರಾದ ಶ್ರೀಯುತ ವೆಂಕಟೇಶ್ವರನ್ ಎಂ ಎ ಐ ಸಿ ಎಸ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಇದೇ ತಿಂಗಳ ತಾ ೨೨ರಲ್ಲಿ ಈ ಶಾಲೆಯ ಹಳೆ ವಿದ್ಯಾರ್ಥಿಗಳ ಕೂಟವು ಜರಗಲಿರುವುದು.

ಅಂಬಲಮೊಗರು— ಇದೇ ಕಳೆದ ತಾರೀಕು ೭ನೇ ಶನಿವಾರ ಇಲ್ಲಿನ ಯುವಕ ಸಂಘದ ಉತ್ಸಾಹೀ ಮೆಂಬರರು ಶ್ರೀ ಕೆ ಸದಾಶಿವ ಮಲ್ಲಿಯವರ ಅಧ್ಯಕ್ಷತೆಯಲ್ಲಿ 'ಧ್ರುವ ಕುಮಾರ'ನೆಂಬ ಸಾಗ್ರ ಸಂಗೀತ ನಾಟಕವನ್ನು ಯಶಸ್ವಿಯಾಗಿ ಆಡಿ ತೋರಿಸಿದರು. ಸ್ತ್ರೀಬಾಲವೃದ್ಧರಾದಿಯಾಗಿ ಪ್ರೇಕ್ಷಕ ವರ್ಗವು ಕಿಕ್ಕಿರಿದು ಸೇರಿತ್ತು. ಇದರಲ್ಲಿ ಶ್ರೀಗಳಾದ ಪಿ. ವಿಟ್ಠಲ ಶೆಟ್ಟಿ, ಪಕೀರ ರಾಮಣ್ಣ ಪೂಂಜ, ಕೆ. ದೇವಪ್ಪ ರೈ, ಟಿ. ಶ್ರೀನಿವಾಸರಾವ್ ಇವರು ಇದೇ ಮೊದಲನೆಯ ಸಲವಾದರೂ ರಂಗಭೂಮಿಗೆ ಕಳೆಯೇರುವಂತೆ ಉತ್ತಮ ತರಗತಿಯ ನಟನಾ ಭಾಷಣ ಸಾಮರ್ಥ್ಯಗಳಿಂದ ಸಾಮಾಜಿಕರನ್ನು ತಲ್ಲೀನರನ್ನಾಗಿ ಮಾಡಿದರು. ಗ್ರಾಮ ಜೀವನದಲ್ಲಿ ಹೊಸ ಹುರುಪಿನಿಂದ ನವ ಸಂಸ್ಕೃತಿಯ ಬೀಜವು ಬೆಳೆಯುವಂತೆ ತಾವು ಪಡೆದ ವಿದ್ಯೆಯನ್ನು ನಾಟ್ಯಪ್ರಿಯರಾಗಿ (Amateurs) ಗಳಾಗಿ ಇವರು ಹಳ್ಳಿಗರಿಗೆ ಹಂಚುವ ಕೆಲಸವನ್ನು ಕೈಕೊಂಡದ್ದು ಬಹಳ ಶ್ಲಾಘನೀಯವಾದುದು.

ಉಡುಪಿ— ಕಳೆದ ವಾರದಲ್ಲಿ ಜಿಲ್ಲಾ ಸೆಕೆಂಡರಿ ಶಾಲಾ ಸಹಾಯಾಧ್ಯಾಪಕರೊಳಗೆ ಸ್ಥಳೀಯ ಬೋರ್ಡ ಹೈಸ್ಕೂಲಿನ ಶ್ರೀ। ಎಚ್ ದೇವರಾವ್ ಬಿ ಎ, ಎಲ್ ಟಿಯವರು ಬಹುಮತದಿಂದ ಸೆಕೆಂಡರಿ ಎಡ್ಯುಕೇಶನಲ್ ಕೌನ್ಸಿಲಿಗೆ ಆರಿಸಲ್ಪಟ್ಟಿರುತ್ತಾರೆ.

ಫಲಿಮಾರಿನ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ರಾಮಾಂಜನೇಯ ನಾಟಕ ಸಂಘದವರು ನಾಲ್ಕು ನಾಟಕ ಪ್ರಯೋಗಗಳನ್ನು ಸದ್ರಿ ಶಾಲಾ ಕಟ್ಟಡದ ಬಗ್ಗೆ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಮಾಡಿರುತ್ತಾರೆ. ಜನಧನ ಪ್ರೋತ್ಸಾಹವು ಚಿಕ್ಕ ಮಟ್ಟಿಗಿತ್ತು. ಆದರೆ ಬೋರ್ಡಿನವರಿಗೆ ತಂತಮ್ಮ ಶಾಲೆಗಳನ್ನು ಪುನಃ ಸ್ಥಾಪನೆ ವೃದ್ಧಿಗೊಳಿಸುವರೆ ಅನುಕೂಲತೆ ಇಲ್ಲ. ಈ ರೀತಿ ಅಧ್ಯಾಪಕ ಶಾಲೆಯವರು ಪ್ರಯತ್ನಿಸುವುದು ಒಳ್ಳೆಯದು. ಇದೇ ರೀತಿ ಇಲ್ಲಿನ ಬೋರ್ಡ ಎಲಿಮೆಂಟರಿ ಶಾಲೆಗಳವರು ಒಟ್ಟು ಕೂಡಿ ಪ್ರಯತ್ನಿಸಿದ್ದಲ್ಲಿ ಸದ್ರಿ ಶಾಲೆಗಳ ಕಟ್ಟಡ ದುರಸ್ತಿ ರಾಜೋಪಕರಣಗಳ ಸರಬರಾಯಿ ಚೆನ್ನಾಗಿ ಮತ್ತು ವಿದ್ಯಾಭ್ಯಾಸವೂ ಇನ್ನೂ ಮೇಲಾಗುತ್ತಿತ್ತು. ಈಗಂತೂ ಮಾಸ್ತರರಿಗೆ ಸಂಬಳ ಬಂದಿದೆಯೋ ಇಲ್ಲ.

ಕಳೆದ ವಾರ ಸ್ಥಳೀಯ ಮನುಮಾನ್ಸ್ ಟ್ರಾನ್ಸ್‌ಪೋರ್ಟ ಕಂಪೆನಿಯವರಿಗೆ ಪೆಂಡಿಯಾರಿಂದ ಸುಮಾರು ೩೦೦೦ ಗ್ಯಾಲನ್ ಪೆಟ್ರೋಲ್ ಮತ್ತು ೧೦೦೦ ಗೆಲನ್ ಟಿಮಿಣಿ ಎಣ್ಣೆ ರೊಟಸ ಶೆಲ್ ಕ್ರೀಮುರಿನಲ್ಲಿ ವಂಟ್ವರ್ ಸಿನಿಂದ ಸೀದಾ ಮಲ್ಪೆ ಬಂದರಿಗೆ ಬಂದಿರುತ್ತದೆ. ಅಕ್ಟೋಬರ್ ಸ ರಳವೇ ರೂ ೪೦೦೦ ವರೆಗೆ ತೆರಲಾಗಿದೆಯೆಂದು ತಿಳಿಯುತ್ತದೆ. ಈ ಸ್ಟೀಮರು ನಿಮಾಪಸ್ಥಾಗುತ್ತದೆ ಮೊದಲೆ ಇತರ ಪೆಟ್ರೋಲ್ ಕಂಪೆನಿಗಳು ಪೆಟ್ರೋಲಿನ ದರವನ್ನು ಗೇನ್ ೧ರ ರೂ. ೧—೨—೦ಕ್ಕೆ ತಗ್ಗಿಸಿದ್ದಾರೆ.

ಇದೇ ತಾ ೧೩ಕ್ಕೆ ಇಲ್ಲಿನ ಮೆಸರ್ಸ್ ಕೊಟ್ಟಿಕಾರ ಬ್ರದರ್ಸರವರು ತಮ್ಮ ಸಂಸ್ಥೆಯ ರಜತಮಹೋತ್ಸವವನ್ನು ಬೊಂಬಾಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಚೆಯರ್ಮೇನರವರ ಅಧ್ಯಕ್ಷತೆಯಲ್ಲಿ ಜರಗಿಸಲಿದ್ದಾರೆ. ಸದ್ರಿ ಕೊಟ್ಟಿಕಾರ ಬಂಧುಗಳು ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಏಜಂಟರು. ಮದ್ರಾಸು ಸಂಸ್ಥಾನ ಮತ್ತು ದೇಶೀಯ ಸಂಸ್ಥಾನಗಳ ಮುಖ್ಯ ಸೆಕ್ರೆಟರಿಗಳೂ ಕೊನೆಯದಾಗಿ ಬೊಂಬಾಯಿ ನಗರ ಮತ್ತು ಹೊರವಲಯದ ಪ್ರದೇಶಗಳ ಪ್ರಮುಖ ಏಜಂಟರೂ ಆಗಿ ಇಂದಿಗೆ ೨೫ ವರ್ಷಗಳ ಅವಿಚ್ಛಿನ್ನವಾದ ತಮ್ಮ ಮತ್ತು ಸದ್ರಿ ಕಂಪೆನಿಯೊಳಗಣ ಸಂಬಂಧ ಇದರ ಕಾರಣ ಸದ್ರಿ ಕಂಪೆನಿಯವರು ಚಲೋದಾದ ನವೀನ ಮಾದರಿಯ ದೊಡ್ಡದೊಂದು ಆಫೀಸು ಕಟ್ಟೋಣವನ್ನು ಮಾಡಿಸುವರೆ ಶಂಕುಸ್ಥಾಪನಾ ಕಾರ್ಯ ಮತ್ತಾ ೧೩ನೆ ಪ್ರಾತಃ ೬-೪೫ಕ್ಕೆ ಸರ್ ಲಲ್ಲೂಬ್ಯಾಯವರ ಹಸ್ತದಿಂದಲೇ ಜರಗತಕ್ಕದ್ದಿದೆ. ಇಂದು ಸಾಯಂಕಾಲ ಮಹಾಪತ್ರಗಳ ಅರ್ಪಣಗಳು, ಪಾರಿತೋಷಕಗಳ ಹಂಚೋಣ ಉಪಹಾರ ಸತ್ಕಾರ ಮುಂತಾದವೂ ನಡೆಯತಕ್ಕದ್ದಿವೆ.

ಕಾಂಗ್ರೆಸ್ ಸುವರ್ಣ ಮಹೋತ್ಸವ

ಪ್ರಾಂತಿಕ ಕಾಂಗ್ರೆಸ್ ಜುಬಿಲಿ ಮಂಡಳಿ

ಸಾಧಾರಣವಾಗಿ ಪ್ರತಿ ವರ್ಷವೂ ಡಿಸೆಂಬರ ತಿಂಗಳಲ್ಲಿ ಹಿಂದುಸ್ಥಾನದಲ್ಲಿ ಅನೇಕ ಕಡೆಗೆ ಅನೇಕ ಸಾರ್ವಜನಿಕ ಕಾರ್ಯಕ್ರಮಗಳು — ವಿಶೇಷತಃ ಪರಿಷತ್ತು, ಸಮ್ಮೇಲನಗಳು—ನೆರೆಯುತ್ತಲೇ ಇವೆ. ಆದರೆ ಈ ಸಲ ಡಿಸೆಂಬರದಲ್ಲಿ ಒಂದು ಅಪೂರ್ವ ಉತ್ಸವವನ್ನು ಒಂದೇ ದಿವಸ ಒಂದೇ ಕಾಲಕ್ಕೆ ಅಖಿಲ ಹಿಂದುಸ್ಥಾನವು ಆಚರಿಸಬೇಕೆಂದು ಹಿಂದೀ ರಾಷ್ಟ್ರೀಯ ಮುಂದಾಳುಗಳು ನಿರ್ಧರಿಸಿರುವರು. ಇಡೀ ಹಿಂದುಸ್ಥಾನದ ಏಕಮೇವ ಸಂಸ್ಥೆಯಾದ ಹಿಂದೀಯ ರಾಷ್ಟ್ರೀಯ ಸಭೆಗೆ (Indian National Congress) ಇದೇ ಡಿಸೆಂಬರ ೨೮ನೇ ತಾರೀಕಿಗೆ ೫೦ ವರ್ಷಗಳು ತುಂಬಿ ೫೧ನೇ ವರ್ಷವು ಪ್ರಾರಂಭವಾಗುವದು. ಈ ಮಹಾಸಂಸ್ಥೆಯ ಸುವರ್ಣ ಮಹೋತ್ಸವವೇ ಅಂದು ನಾವು ಆಚರಿಸಬೇಕಾದ ರಾಷ್ಟ್ರೀಯ ಹಬ್ಬವು.

ನಾವು ಆಚರಿಸುತ್ತಿರುವ ಉಳಿದ ಉತ್ಸವ-ಹಬ್ಬ-ಹುಣ್ಣಿಮೆಗೆ ಈ ಉತ್ಸವವು, ಮೇಲಿಂದ ಮೇಲೆ ಬರತಕ್ಕದ್ದಲ್ಲ. ಇದು ಹಿಂದೀಯರ ಸ್ವಾತಂತ್ರ್ಯಗೋಸ್ಕರ ಅಖಂಡ ೫೦ ವರ್ಷಗಳ ವರೆಗೆ ಒಂದೇ ಸಮನೆ ಅವಿಶ್ರಾಂತವಾಗಿ ಬಡಿದಾಡುತ್ತಿರುವ ನಮ್ಮ ಕಾಂಗ್ರೆಸ್ಸಿನ ಸುವರ್ಣ ಮಹೋತ್ಸವವು ಹಿಂದೀ ರಾಷ್ಟ್ರದ ಸರ್ವ ವಿಧ ಉನ್ನತಿಗೋಸುಗ, ಕಾಂಗ್ರೆಸ್ಸು ಮಾಡಿದ ಸ್ವಾರ್ಥ ತ್ಯಾಗವು ಅಷ್ಟಿಷ್ಟಲ್ಲ. ಕಾಂಗ್ರೆಸ್ಸಿನ ಹೋರಾಟವು ಒಂದು ವ್ಯಕ್ತಿಗೋಸುಗವಾಗಲಿ ಅಥವಾ ಒಂದು ಸಮಾಜಕ್ಕೋಸುಗವಾಗಲಿ ಇರುವದಿಲ್ಲ. ಇಡೀ ಭರತಖಂಡವನ್ನು ಮೇಲಕ್ಕೆತ್ತಿ ಅದನ್ನು ಜಗತ್ತಿನಲ್ಲಿಯ ಸ್ವತಂತ್ರ ರಾಷ್ಟ್ರಗಳ ಪಂಕ್ತಿಯಲ್ಲಿ ಸೇರಿಸುವ ಪ್ರಚಂಡ ಸಾಹಸಕ್ಕೆ ಕಾಂಗ್ರೆಸ್ಸು ಕೈಹಾಕಿರುವದು. ಈ ಸಾಹಸದಲ್ಲಿ ಯಶಸ್ಸನ್ನು ಸಂಪಾದಿಸುವಾಗ ಬೇಕಾದಂತಹ ಸಂಕಟಗಳನ್ನೆದುರಿಸಲು ಕಾಂಗ್ರೆಸ್ಸು ಸಿದ್ಧವಿದೆಯೆಂಬುದೂ ಬೇಕಾದಂತಹ ಸ್ವಾರ್ಥತ್ಯಾಗ ಮಾಡಲು ಅದು ಹಿಂಜರಿಯದೆಂಬುದೂ ಎಲ್ಲ ಹಿಂದೀಯರಿಗೆ ಮನದಟ್ಟಾದ ಮಾತು. ಇಂತಹ ಪ್ರಭಾವಶಾಲಿ ಸಂಸ್ಥೆಯ ಸುವರ್ಣ ಮಹೋತ್ಸವವನ್ನು ನಾವೆಲ್ಲರೂ ಆಚರಿಸಬೇಕಾದ ದಿವಸವು ಸಮೀಪಿಸಹತ್ತಿದೆ.

ನಾವು ಸಾಮಾನ್ಯವಾಗಿ ಆಚರಿಸುವ ಹಬ್ಬ ಹುಣ್ಣಿಮೆಗಳಲ್ಲಿ ಉದಾತ್ತ ತತ್ವವು ಅಡಕವಾಗಿರಬಹುದಾದರೂ ಆ ಉದಾತ್ತ ತತ್ವದ ಅವಲೇಶವಾದರೂ ಈಗ ನಮ್ಮ ಹಬ್ಬಗಳಾಚರಣೆಯಲ್ಲಿ ಕಂಡುಬರುವದಿಲ್ಲ. ಅವುಗಳಲ್ಲಿ ನಮಗೆ ಅಷ್ಟೊಂದು ಮಹತ್ವವು ತೋರುವದಿಲ್ಲ. ಆದರೆ ಈ ಕಾಂಗ್ರೆಸ್ ಸುವರ್ಣ ಮಹೋತ್ಸವವು ಅಂತಹ ಸಾಮಾನ್ಯ ಹಬ್ಬವಲ್ಲ. ಹಿಂದೀಯರ ಶಕ್ತಿ ಸರ್ವಸ್ವವೂ ಯಾವ ಮಹಾ ಸಂಸ್ಥೆಯಲ್ಲಿ ಕೇಂದ್ರೀಕೃತವಾಗಿರುವದೋ ಆ ಕಾಂಗ್ರೆಸ್ಸಿನ ಉತ್ಸವವು. ಕಾಂಗ್ರೆಸ್ಸಿನ ಉತ್ತರೋತ್ತರ ಏಳ್ಗೆಯಾಗಿ ಅದು ತನ್ನ ಧ್ಯೇಯವನ್ನು ಅಲ್ಪಾವಧಿಯಲ್ಲಿಯೇ ಸಾಧ್ಯಮಾಡಿಕೊಳ್ಳಲು ಸಮರ್ಥವಾಗಲೆಂಬ ಉತ್ಕಟೇಚ್ಛೆಯಿಂದ ಪ್ರಾರ್ಥಿಸುವುದೂ ಪ್ರೇರಕವಾಗಬೇಕು. ಇದೇ ಆ ಹಬ್ಬದ ಮೂಲೋದ್ದೇಶವು. ಈ ಪ್ರಚಂಡ ಉತ್ಸವವನ್ನು ಹೇಗೆ ಆಚರಿಸಬೇಕೆಂಬ ಬಗ್ಗೆ ಕಾಂಗ್ರೆಸ್ ಕಾರ್ಯಕಾರೀ ಮಂಡಲದವರು ಒಂದು ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಪಡಿಸಿರುವರು. ಆ ಕಾರ್ಯಕ್ರಮದಂತೆ ಇಡೀ ಹಿಂದುಸ್ಥಾನವು ಆ ದಿವಸ ಈ ಮಹೋತ್ಸವವನ್ನು ಆಚರಿಸುವದು.

ನಮ್ಮ ಕರ್ನಾಟಕದಲ್ಲಿಯೂ ಈ ಉತ್ಸವವು ನಿಶ್ಚಿತವಾದ ಕಾರ್ಯಕ್ರಮದ ಮೇರೆಗೆ ಆಚರಿಸಲ್ಪಡುವುದರಲ್ಲಿ ಸಂದೇಹವಿಲ್ಲ. ಕರ್ನಾಟಕದಲ್ಲಿಯ ಹಳ್ಳಿಹಳ್ಳಿ ಪಟ್ಟಣಗಳಲ್ಲಿಯೂ ಈ ಕಾರ್ಯಕ್ರಮವು ಬಹುಸಂಖ್ಯದಿಂದ ಆಚರಿಸಲ್ಪಡಬೇಕು. ಆಯಾ ಹಳ್ಳಿಗಳ ಹಾಗೂ ಪಟ್ಟಣಗಳ ಸಾರ್ವಜನಿಕ ಕಾರ್ಯಕರ್ತರು ಮುಂದೆ ಬಂದು ತಮ್ಮ ತಮ್ಮ ಸ್ಥಳಗಳಲ್ಲಿ ಈ ಹಬ್ಬವನ್ನು ಆಚರಿಸಬೇಕು. ಸ್ಥಾನಿಕ ಮುನಿಸಿಪಾಲಿಟಿಗಳೂ ಗ್ರಾಮಪಂಚಾಯತಿ ಸಂಸ್ಥೆಗಳೂ ಹಾಗೂ ಉಳಿದ ಸಾರ್ವಜನಿಕ ಸಂಸ್ಥೆಗಳೂ ಮುಂದಾಳುತನವನ್ನು ವಹಿಸಿ ಈ ಉತ್ಸವವನ್ನು ನೆರವೇರಿಸಬೇಕು. ಕಾಂಗ್ರೆಸ್ ಕಾರ್ಯಕಾರೀ ಮಂಡಲದವರು ಗೊತ್ತುಪಡಿಸಿದ ಕಾರ್ಯಕ್ರಮವಲ್ಲದೆ ಅವಶ್ಯಕವೆನಿಸಿದರೆ ಸ್ಥಳೀಯ ಅನುಕೂಲತೆಯ ಪ್ರಕಾರ ಇನ್ನೂ ಕೆಲವು ಕಾರ್ಯಕ್ರಮಗಳನ್ನು ಆಚರಿಸಲಡ್ಡಿಯಿಲ್ಲ.

ಈ ಉತ್ಸವವು ರಾಷ್ಟ್ರೀಯವೆಂದು ಅದರಲ್ಲಿ ಭಾಗವಹಿಸಲು ಯಾರೂ ಹಿಂದು ಮುಂದೆ ನೋಡುವ ಕಾರಣವಿಲ್ಲ. ಕಾಂಗ್ರೆಸ್ಸು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡಿದೆ. ಎಲ್ಲ ತರಹದ ವಿಚಾರದ ಜನರೂ ಅದರ ಕಾರ್ಯದಲ್ಲಿ ಭಾಗವಹಿಸಿರುವರು. ಆದುದರಿಂದ ಈ ಸಂಸ್ಥೆಯ ಉತ್ಸವದಲ್ಲಿ ಎಲ್ಲ ತರಹದ ವಿಚಾರದವರೂ ಭಾಗವಹಿಸಿ ಕಾಂಗ್ರೆಸ್ಸಿನ ವಿಷಯಕ್ಕಿರುವ ತಮ್ಮ ಪ್ರೇಮ ವಿಶ್ವಾಸಗಳನ್ನು ಇದೀಗ ಜಗತ್ತಿಗೆ ತೋರಿಸುವರೆಂದು ನಮ್ಮ ಬಲವಾದ ನಂಬಿಗೆ.

ದ. ಕ. ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಮಹಾಸಭೆ. 29-12-35ಕ್ಕೆ ಮಂಗಳೂರಿನಲ್ಲಿ

"ದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವರ್ಷಾವಧಿ ಮಹಾಸಭೆಯು ಇದೇ ಡಿಸಂಬರ ೨೯, ೩೦ನೇ ರವಿವಾರ ಪೂರ್ವಾಹ್ನ ಗಂಟೆ ೧೧ಕ್ಕೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಕಟ್ಟಡದಲ್ಲಿ ಜರಗುವುದು. ಪ್ರತಿ ಒಂದು ಸೆಂಟರಿನಿಂದಲೂ ೧೦ ಮಂದಿಗೆ ಕಡಿಮೆಯಾಗದಂತೆ ಉಪಾಧ್ಯಾಯ ಉಪಾಧ್ಯಾಯಿನಿ ಪ್ರತಿನಿಧಿಗಳನ್ನು ಕಳುಹಿಸಿ ಕಳುಹಿಸಿಕೊಡಬೇಕಾಗಿ ವಿನಂತಿ. ವಿದ್ಯಾಭಿಮಾನಿಗಳೆಲ್ಲರು ಸಭೆಗೆ ಚಿತ್ತೈಸಿ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ವ ಉಪಾಧ್ಯಾಯ ವರ್ಗಕ್ಕೆ ಉತ್ತೇಜನ ಕೊಡಬೇಕಾಗಿ ಅಪೇಕ್ಷಿಸುತ್ತೇನೆ."

ಎ. ಬಾಬುಶೆಟ್ಟಿ ಜಿಲ್ಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿ.

ಜಿಲ್ಲಾ ಬೋರ್ಡು ಮತದಾರರಲ್ಲಿ ವಿನಂತಿ

ಮೊನ್ನೆ ನಡೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಪಕ್ಷದಲ್ಲಿ ತೋರಿದ ನಂಬಿಗೆಯು ಗಣನೀಯವಿದೆ. ಜಿಲ್ಲಾ ಬೋರ್ಡಿನ ೪೪ ಸ್ಥಾನಗಳಲ್ಲಿ ೨೭ ಸ್ಥಾನಗಳಿಗೆ ಸಿವಿಲ್ ಬೋರ್ಡಿನ ಉಮೇದ್ವಾರರೇ ಚುನಾಯಿಸಲ್ಪಟ್ಟಿರುತ್ತಾರೆ. ಆದುದರಿಂದ ಕಾಂಗ್ರೆಸಿಗೆ ಬಹುಮತವು ಸಿಗುವಂತೆ ಸಹಾಯ ಮಾಡಿದ ದೇಶ ವಾತ್ಸಲಿಗಳಾದ ಮತದಾರರಿಗೆ ಸಿವಿಲ್ ಬೋರ್ಡಿನ ಪರವಾಗಿ ನಾನು ಈ ಮೂಲಕ ಧನ್ಯವಾದವನ್ನರ್ಪಿಸುತ್ತೇನೆ.

ಮಂಜ್ಞೆ ಸರ್ಕಲಿನಲ್ಲಿ ನಾನು ಜಯಶೀಲನಾಗದಿದ್ದರೂ ಮನಃಪೂರ್ವಕವಾಗಿ ಕಾಂಗ್ರೆಸಿನ ಗೌರವದ ಕಡೆಗೆ ದೃಷ್ಟಿ ಇಟ್ಟು ನನಗೆ ಸಹಾಯ ಮಾಡಿದ ದೇಶಾಭಿಮಾನಿಗಳಾದ ಮಹನೀಯರೆಲ್ಲರಿಗೂ ನಾನು ತುಂಬಾ ಅಭಾರಿಯಾಗಿದ್ದೇನೆ.

ಜಿಲ್ಲಾ ಬೋರ್ಡಿನ ಸದಸ್ಯರಲ್ಲಿ ರಾಷ್ಟ್ರಸಭೆಯ ಧ್ಯೇಯಕ್ಕೆ ಒಪ್ಪುವವರೆಲ್ಲರೂ ಕಾಂಗ್ರೆಸ್ ಪಾರ್ಟಿಗೆ ಇನ್ನಾದರೂ ಸೇರುವರೆಂದು ದೃಢವಾಗಿ ನಂಬುತ್ತೇನೆ. ಮತ್ತು ಚುನಾಯಿಸಲ್ಪಟ್ಟ ಕಾಂಗ್ರೆಸ್ ಸದಸ್ಯರು ನಿಸ್ವಾರ್ಥತೆಯಿಂದ ಬೋರ್ಡಿನ ಕೆಲಸವನ್ನು ಮಾಡಿ ರಾಷ್ಟ್ರಸಭೆಯ ಗೌರವವನ್ನು ಕಾಪಾಡುತ್ತ ಮತದಾರರ ವಿಶ್ವಾಸಕ್ಕೆ ಅರ್ಹರೆಂಬುದನ್ನು ಸ್ಪಷ್ಟ ಮಾಡುವರೆಂದು ನಂಬುತ್ತೇನೆ.

ಸೂರಪ್ಪಯ್ಯ ಹಲ್ಲನಾಡು,
ಕಾರ್ಯದರ್ಶಿ ಕಾಂಗ್ರೆಸ್ ಸಿವಿಲ್ ಬೋರ್ಡು.

ಮೊಗವೀರ ದರ್ಮಾರ್ಥ ರಾತ್ರಿ ಶಾಲೆಯ ಸಹಾಯಾರ್ಥವಾಗಿ ಮುಂಬಯಿಯಲ್ಲಿ ಕನ್ನಡ ನಾಟಕ.

ಈ ಶಾಲೆಯು ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ಸ್ಥಾಪಿತವಾಗಿ ಇಂದಿಗೆ ಸುಮಾರು ೧೫ ವರ್ಷಗಳು ಸಂದುಹೋದವು. ಇದು ಯಾವ ರೀತಿಯಿಂದ ಪ್ರಗತಿಯನ್ನು ಹೊಂದುತ್ತಾ ಬಂದಿದೆಯೆಂಬುದು ವರದಿಯನ್ನು ಓದಿದರೆ ಪ್ರಕಾಶಗೊಳ್ಳುವುದು. ಮಂಡಳಿಯ ಕಳೆದ ವರ್ಷದ ವಾರ್ಷಿಕ ವರ್ಧಂತ್ಯುತ್ಸವದಲ್ಲಿ ಅಧ್ಯಕ್ಷರಾಗಿದ್ದ ಶ್ರೀಯುತ ಕೆ. ಯಫ್. ನರೀಮಾನರು ಈ ಶಾಲೆಯ ಅಭಿವೃದ್ಧಿಯ ಕುರಿತು ಯೋಗ್ಯ ಅಭಿಪ್ರಾಯವಿತ್ತಿರುವರು. ಇದರಲ್ಲಿ ಸಾಧಾರಣ ೩೦೦ಕ್ಕೆ ಮಿಕ್ಕಿ ವಿದ್ಯಾರ್ಥಿಗಳು ವಿದ್ಯಾಸಂಗವನ್ನು ಪಡೆಯುತ್ತಿರುವರು. ಯಾವ ಜಾತಿಭೇದವಿಲ್ಲದೆ ಎಲ್ಲರಿಗೂ ಸಮಪ್ರಕಾರವಾಗಿ ಪ್ರವೇಶವಿರುವುದು. ಪ್ರೌಢ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಎಲ್ಲಾ ಸೌಕರ್ಯಗಳನ್ನೂ ಸ್ಥಾಪಿಸಿರುವುದು. ಇದನ್ನು ಇನ್ನೂ ವೃದ್ಧಿಗೊಳಿಸಲಿರುವ ಇದರ ಚಾಲಕರಿಗೆ ಹಣದ ಅಭಾವವು ಅಡ್ಡಿಯನ್ನುಂಟು ಮಾಡುವುದರಿಂದ ಇದರ ಸಹಾಯಾರ್ಥವಾಗಿ ಮುಂತೆಯ ನಂಬರದೂ ಇತರ ನಾಟ್ಯಕಲಾ ಪ್ರೇಮಿಗಳೂ ಇದೇ ತಿಂಗಳ ತಾರೀಕು ೨೦ನೇ ಶುಕ್ರವಾರ ರಾತ್ರಿ ಗಂಟೆ ೯ಕ್ಕೆ ಕಲ್ಪಾದೇವಿಯಲ್ಲಿರುವ ಬಾಂಗ್‌ವಾಡಿ ಥಿಯೇಟರಿನಲ್ಲಿ "ಅಕ್ಕ ಸಮರ್ಪಣಾ" ಎಂಬ ನಾಟಕವನ್ನು ಅಭಿನಯಿಸಿ ತೋರಿಸುವರು. ಮಂಗಳೂರಿನ ಸುಪ್ರಸಿದ್ಧ ನಟ ಶ್ರೇಷ್ಠ ಶ್ರೀಯುತ ಕೃಷ್ಣಪ್ಪ ತಿಂಗಳಾಯರೇ ಮೊದಲಾದ ಅನೇಕ ಮಹನೀಯರು ಪಾತ್ರವರ್ಗಗಳನ್ನು ವಹಿಸುವರು. ಮುಂಬಯಿಯಲ್ಲಿರುವ ಕನ್ನಡಿಗರು ಯಥಾ ಪ್ರಕಾರ ಯೋಗ್ಯ ಪ್ರೋತ್ಸಾಹವನ್ನೀಯಬೇಕಾಗಿ ಇದರ ಚಾಲಕರು ವಿನಂತಿ ಮಾಡಿಕೊಳ್ಳುತ್ತಾರೆ. ಟಿಕೇಟಿನ ದರವು ಎಲ್ಲರಿಗೂ ಅನುಕೂಲವಾಗುವಂತಿದೆ.

ಮೈಸೂರು ಮಹಾರಾಜರು.

(ಮೊಡರ್ನ್ ಕೆಫೆನಲ್ಲಿ ಭಾವಚಿತ್ರ ಅನಾವರಣ ಸಮಾರಂಭ)

ತಾರೀಕು ೩-೧೨-೩೫ರಲ್ಲು ಮದ್ರಾಸು ಮೊಡರ್ನ್ ಕೆಫೆನಲ್ಲಿ ಮೈಸೂರು ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಭಾವಚಿತ್ರ ಅನಾವರಣಾ ಸಮಾರಂಭವು ಬಹು ಸಂಭ್ರಮದಿಂದ ನೆರವೇರಿತು. ತಳಿರು ತೋರಣ ಪತಾಕೆಗಳಿಂದಲಂಕೃತವಾದ ದಿವ್ಯವಾದ ಕೆಫೆನ ಎರಡಂತಸ್ತಿನ ಭವನವು ಶೋಭಾಯಮಾನವಾಗಿ ಶೋಭಿಸುತ್ತಿತ್ತು. ಮದ್ರಾಸಿನ ಪ್ರಾಮುಖ್ಯ ಪಟ್ಟಣಿಗರಲ್ಲನೇಕರು ಸತ್ಕಾರ್ಯದಲ್ಲಿ ಭಾಗಿಗಳಾಗಿ ಕಾರ್ಯವನ್ನು ಯಶಸ್ವೀಕರಿಸಿ ಮೈಸೂರು ಮಹಾರಾಜರಲ್ಲಿ ತಮಗಿದ್ದ ಪ್ರೀತಿಭಾವವನ್ನು ತೋರಿಸಿದರು. ಸರ್. ಪಿ ಎಸ್. ಶಿವಸ್ವಾಮಿ ಅಯ್ಯರ್ ಇವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಘಂಟೆ ೬ಕ್ಕೆ ಮುಂಚಿತವಾಗಿಯೇ ಆಮಂತ್ರಿಸಿದ್ದ ಮಹನೀಯರು ಭವನದ ಎರಡನೆಯ ಅಂತಸ್ತಿನಲ್ಲಿ ನೆರೆದು ಶುಭ ಮುಹೂರ್ತದಲ್ಲಿ ಕಾರ್ಯವು ಪ್ರಾರಂಭಿಸಿತು. ರೈಟ್ ಓನರೇಬಲ್ ಶ್ರೀನಿವಾಸ ಶಾಸ್ತ್ರಿಗಳವರ ಯಥೋಚಿತ ಭಾಷಣವು ಶ್ಲಾಘನೀಯವಾಗಿತ್ತು.

ಅಖಿಲ ಭಾರತ ಕೈಗಾರಿಕೆಯ ಪ್ರದರ್ಶನ ಡಿಲ್ಲಿ 1936.

ಅಖಿಲ ಭಾರತ ಕೈಗಾರಿಕೆ ಪ್ರದರ್ಶನವು ಡಿಲ್ಲಿಯಲ್ಲಿ ೧೯೩೬ನೇ ಇಸವಿ ಫೆಬ್ರುವರಿ ೧೫ ತಾರೀಕಿಂದ ಪ್ರಾರಂಭವಾಗಿ ಎಪ್ರಿಲ್ ೧೫ ವರಲ್ಲಿ ಕೊನೆಗಾಣುವುದು. ಸ್ವದೇಶಿ ಕೈಗಾರಿಕೆಗಳ ಸಂಘವು ಏರ್ಪಡಿಸಿದ ಪ್ರದರ್ಶನಗಳಲ್ಲಿ ಇದು ನಾಲ್ಕನೇದು. ೧೯೩೩ನೇ ಇಸವಿಯಿಂದಾರಭ್ಯ ಅವರು ಪ್ರತಿ ವರ್ಷವೂ ಒಂದೊಂದು ಪ್ರದರ್ಶನವನ್ನು ಯಶಸ್ವಿಯಾಗಿ ಮಾಡುತ್ತಾ ಬಂದಿರುವರು. ಈ ವರುಷವೂ ಸ್ವಜನ ಬಾಂಧವರು, ಕಳೆದ ಸಲಕ್ಕಿಂತಲೂ ಹೆಚ್ಚಿನ ಸ್ಫೂರ್ತಿಯಿಂದ ಮುಂದೊತ್ತಿ ಬಂದು ಈ ಸ್ವದೇಶಿ ಪ್ರದರ್ಶನವು ಇನ್ನಷ್ಟು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ಅಪೇಕ್ಷೆ. ಈ ಸಲದ ನವೀನ ಉದ್ಯಮವೆಂದರೆ ಕಾಟೇಜ್ ಮತ್ತು ಹೆಂಡ್ ಲೂಮ್ ಕೈಗಾರಿಕೆಗಳ ಪ್ರದರ್ಶನವಿದೆ. ಹೆಚ್ಚಿನ ಮಾಹಿತಿ ಬಗ್ಗೆ (Association for the Development of Swadeshi Industries, Chandi Chawk Delhi) ಇಲ್ಲಿಗೆ ಬರೆದು ತಿಳಕೊಳ್ಳಬಹುದು.

ಬಳ್ಳಾರಿಯ ಹೊಸಪೇಟೆಯಲ್ಲಿ ನಡೆದ ವಿಚಿತ್ರ ಘಟನೆಗಳು.

ರಾಮರಾಯರೆಂಬವರು ಅನಂತಪುರ ಜಿಲ್ಲೆಯ ಫೋರೆಸ್ಟ್ ಇಲಾಖೆಯ ಜಸ್ಟಿಮೆಂಟಾ ಎಂಬಲ್ಲಿನ ರೇಂಜ್ ಆಫೀಸಿನ ಗುಮಾಸ್ತರು. ಅಲ್ಲಿನ ಹಳ್ಳಿಗರಿಗೂ ಇವರಿಗೂ ಯಾವುದೋ ಒಂದು ಕಾರಣಗಳಿಂದ ವೈರವುಂಟಾಯಿತು. ಹಳ್ಳಿಗರು ಮಾಟಗಳಿಂದ ಇವರ ಮೇಲೆ ಸೇಡು ತೀರಿಸಬೇಕೆಂಬ ನಿರ್ಧಾರಗಳನ್ನು ಮಾಡಿ, ಇವರ ಮನೆಯಲ್ಲಿ ಅನೇಕ ಸಂಕಷ್ಟಗಳು ಬರುವಂತೆ ಮಾಡಲೂ ಸಾಧಿಸುತ್ತಿದ್ದಾರಂತೆ. ಈ ಮಾಟಗಳಿಂದ ಪೀಡಿತರಾದ ತನ್ನ ಕುಟುಂಬದ ಸಂಕಷ್ಟಗಳನ್ನು ಪರಿಹಾರ ಮಾಡಲು, ಇವರು ತನ್ನ ಹೆಂಡತಿಮಕ್ಕಳನ್ನು ಹೊಸಪೇಟೆಯಲ್ಲಿರುವ ತನ್ನ ತಮ್ಮನಾದ ರಾಘವೇಂದ್ರರಾಯರ ಮನೆಗೆ ಕಳುಹಿಸಿಕೊಟ್ಟರು. ಇಲ್ಲಿ ಈ ಕುಟುಂಬವು ಕೆಲವು ದಿವಸಗಳ ವರೆಗೆ ಸುಖವಲ್ಲಿತ್ತು. ಆದರೆ, ಮೊನ್ನೆ ರಾಮರಾಯರ ಹೆಂಡತಿ ಅವರ ೧೧ ವರ್ಷದ ಮಗಳೊಡನೆ ಫೋರೆಸ್ಟ್ ರೇಂಜರರ ಮನೆಯಿಂದ ಹಿಂತಿರುಗುವ ಸಮಯ ಕೆಳಯ ಮಗಳು ಹಾದಿಯಲ್ಲಿ ಎರಡು ಜನರನ್ನು ನೋಡಿ ಭೀತಳಾಗಿ ಕಿರಿಚಿದಳು. ಮನೆಗೆ ಬರಲಾಗಿ ಆ ಹುಡುಗಿಯು ಆ ಹಳ್ಳಿಯ ಮಾಟಗಾರರು ಅಲ್ಲಿಗೆ ಬಂದಿರುವರು ಎಂದು ರಾಘವೇಂದ್ರರಾಯರಿಗೆ ತಿಳಿಸಿದಳು. ರಾಘವೇಂದ್ರರಾಯರು ಇದರ ಹೆಚ್ಚು ಗಮನಮಾಡಲಿಲ್ಲ. ಆದರೆ, ಅಂದಿನಿಂದ ರಾಮರಾಯರ ಹೆಂಡತಿ ಅವಳ ತಾಯಿ ಮತ್ತು ಮಗಳು ಇದ್ದಲ್ಲಿ ವಿಶೇಷ ಘಟನೆಗಳು ನಡೆಯಲು ಪ್ರಾರಂಭವಾದುವು. ಇವರ ಮೇಲೆ ಎಲ್ಲಿಂದಲೋ ಕಲ್ಲುಗಳು ಎಸೆಯಲ್ಪಡುತ್ತಿದ್ದುವು. ಬೇರೊಂದು ಕೋಣೆಯಲ್ಲಿರುವ ಕಪಾಟಿನ ಮೇಲೆ ಇರಿಸಿದ್ದ ಸಾಮಾನುಗಳು ಹಾರಿಬಂದು ಇವರ ಮೇಲೆ ಬಿದ್ದವು. ದೀಪದ ಚಿಮಣಿಗಳು ಆಶ್ಚರ್ಯಕರವಾದ ರೀತಿಯಲ್ಲಿ ಒಡೆದುಹೋದುವು. ರಾಘವೇಂದ್ರರಾಯರ ಪೆಟ್ಟಿಗೆಯಲ್ಲಿರಿಸಿದ ವಸ್ತ್ರಗಳು ಯಾವಕ್ಕೂ ಕಾರಣಗಳಿಲ್ಲದೆ ಬೆಂಕಿ ತಗಲಿ ಸುಟ್ಟುಹೋದುವು. ಆ ಮನೆಯವರು ದಿಗ್ಭ್ರಾಂತರಾಗಿ ವಿಶ್ರಾಂತಿ ಇಲ್ಲದೆ ದಿವಸಗಳನ್ನು ಕಳೆಯಬೇಕಾಯಿತು. ಹಲವರು ಈ ಮನೆಯನ್ನು ಸಂದರ್ಶಿಸಿದರು. ಈ ಘಟನೆಗಳು ಬೆಳಗಿನ ಜಾವ ೫ ಗಂಟೆಯಿಂದ ರಾತ್ರಿ ೯ ಗಂಟೆಯ ವರೆಗೆ ಮಾತ್ರ ನಡೆದವು. ಸೇಡು ತೀರಿಸಬೇಕೆಂಬ ಉದ್ದೇಶಹೊಂದಿದ ಈ ಹಳ್ಳಿಗಾರರ ಮಾಟಗಾರರು ಇವರನ್ನು ಹಿಂಬಾಲಿಸುತ್ತಿದ್ದಾರೆಂದು ತಿಳಿದುಬಂದಿದೆ. ಈ ಕುಟುಂಬವು ಈಗ ಹೊಸಪೇಟೆಯನ್ನು ಬಿಟ್ಟು ಬೇರೊಂದು ಸ್ಥಳಕ್ಕೆ ಗುಪ್ತವಾಗಿ ಸಂಚಾರಮಾಡಿರುತ್ತಾರೆ.

ಮೋಟಾರು ವಾಹನಗಳಲ್ಲದೆ ಇತರ ವಾಹನಗಳ ಮೇಲೆ ತೆರಿಗೆ.

—ಹೊರಿಸುವಂತೆ, ಒಂದು ಭಾರಿ ತೆಗೆದುಹಾಕಿದ ಟೋಲುಗೇಟುಗಳನ್ನು ಎಲ್ಲಾ ಜಿಲ್ಲಾ ಕಲೆಕ್ಟರಿಗೆ ಬಂದ ಸರ್ಕಾರುಗಳ ಪ್ರಕಾರ ಮತ್ತೊಮ್ಮೆ ಹೂಡಿಕೆ ಆಗುವುದಿಲ್ಲವೆಂದು ತಿಳಿದುಬಂದಿದೆ. ಮಾತ್ರವಲ್ಲದೆ, ಪ್ರಾಂತ್ಯದ ಗಡಿಗಳಲ್ಲೂ ಟೋಲ್ ಗೇಟುಗಳನ್ನು ರಚಿಸುವ ಆಲೋಚನೆಯನ್ನು ಕೂಡ ತ್ಯಜಿಸಲಾಗಿದೆ ಎಂದು ತಿಳಿದುಬರುತ್ತದೆ. ಆದರೆ, ಮ್ಯಾಕೆನ್‌ರವರ ಸೂಚನೆಗಳನ್ನನುಸರಿಸಿ ರಚನೆಹೊಂದುವ ಸಂಕಗಳನ್ನು ಉಪಯೋಗಿಸುವ ವಾಹನಗಳ ಮೇಲೆ, ಸಡಕಗಳ ಅಭಿವೃದ್ಧಿಗೆ ಬೇಕಾಗುವ ಹಣವನ್ನು ದುಡಿಯುವಂತೆ ತೆರಿಗೆಯನ್ನು ವಿಧಿಸುವ ವಿಚಾರ ನಮ್ಮ ಸರಕಾರವು ಆಲೋಚಿಸುತ್ತದೆ.

ವೇಷ ಬದಲಾಯಿಸಿ, ವಿದ್ಯಾರ್ಥಿಗಾಗಿ ಪರೀಕ್ಷೆಯಲ್ಲಿ ಭಾಗವಹಿಸಿದ ಉಪಾಧ್ಯಾಯರು.

ಕಲ್ಕತ್ತಾ ವಿಶ್ವವಿದ್ಯಾಲಯದ ಕಳೆದ ಬಿ. ಎ. ಪರೀಕ್ಷೆಗೆ ವಿದ್ಯಾರ್ಥಿಯ ಬದಲಾಗಿ ವೇಷಬದಲಾಯಿಸಿ ಕೂತುಕೊಂಡ ಒಂದು ಕಲ್ಕತ್ತದ ಕಾಲೇಜಿನ ಪ್ರೊಫೆಸರರಾದ ಬಿ. ಕೆ. ಗುಪ್ತರಿಗೆ ೬ ತಿಂಗಳ ಸಜೆ ವಿಧಿಸಲಾಯಿತು. ಇದರಲ್ಲಿ ಭಾಗವಹಿಸಿದ ಆರೋಪಣೆಗೆ ಒಳಗಾದ ವಿದ್ಯಾರ್ಥಿಯನ್ನು ಬಿಡಲಾಯಿತು. ಪ್ರೊಫೆಸರ್ ಗುಪ್ತರನ್ನು ಕೃತಕಮೂಗೆ ಕೂಡಿದವರಾಗಿ ಕಪ್ಪು ಕನ್ನಡಿಗಳನ್ನು ಧರಿಸಿ, ಪರೀಕ್ಷಾಮಂದಿರದಲ್ಲಿ ವಿದ್ಯಾರ್ಥಿಗಾಗಿ ಒಂದು ತಪ್ಪು ಸ್ಥಾನವನ್ನು ವಹಿಸಲು, ಆ ವಾರ್ಷಿಕ ಪರೀಕ್ಷೆಯನ್ನು ನಡೆಯಿಸುವ ಮುಖ್ಯ ಅಧಿಕಾರಿಗಳ ಕಿವಿಗಳಿಗೆ ಸೇರಿತು. ಮತ್ತು ಪ್ರೊಫೆಸರರು ಧರಿಸಿದ ಮೀಸೆಯು ಒಂದು ಭಾಗವು ಅಲ್ಲಿಯೆ ಮೇಲೆ ತಿರುಗುವ ಪೇಖಿನಿಂದ ಗಾಳಿಗೆ ಹಾರಿಹೋಗಲು ಇವರ ಗುಟ್ಟು ರಟ್ಟಾಯಿತು. ಪ್ರೊಫೆಸರರು ಪರೀಕ್ಷಾಮಂದಿರದಿಂದ ಪಲಾಯನಗೈದರು. ಆದರೆ ಇವರನ್ನು ಹಿಡಿಯಲಾಯಿತು. ತನಿಖೆ ನಡೆದು ಮೇಲಿನ ರೀತಿಯಲ್ಲಿ ಇವರಿಗೆ ಶಿಕ್ಷೆ ವಿಧಿಸಲಾಯಿತು.

ಸ್ತ್ರೀಪುರುಷರ ಪ್ರಿಯ ರಹಸ್ಯ. (ಶರೀರ ಮರ್ಮಶಾಸ್ತ್ರ)

ಮಹನೀಯರುಗಳೇ, ಇದು ವರೆಗೆ ನೀವಿಂತಹ ಪುಸ್ತಕವನ್ನು ಓದಿರಲಾರಿರಿ! ಇದರಲ್ಲಿ:—ಅನೇಕ ಜಾತಿಯ ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಸುಖಾನುಭವ, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಚಿಹ್ನೆ, ಗರ್ಭವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭಾದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತ ರಹಸ್ಯಗಳನ್ನೆಲ್ಲಾ ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿಲ್ಲ. ಬೆಲೆ ರೂ. ೧. ೪. ೩, ಬೇರೆ.

ವಿಳಾಸ:—ಕರ್ನಾಟಕ ವಿಜನ್ಸಿ, ಕೃಷ್ಣಪ್ಪನಾಯಕನ ಟೆಂಕ್ ಬೀದಿ, ಮದರಾಸು.

ಬೇಗನೇ ಪುಸ್ತಕವನ್ನು ತರಿಸುವವರಿಗೆ ೧೯೩೬ನೇ ಇಸವಿ ಕ್ಯಾಲೆಂಡರು ಇನಾಂ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. 610/1935. S. E P. 1685/1935

ವಾದಿ—ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

ಪ್ರತಿವಾದಿರು—ಹಡವು ಮಂಜುನಾಕ ಮಧ್ಯಸ್ತ ಕೂಡಾ

2ನೇ ಪ್ರತಿವಾದಿ ನಾಡಗ್ರಾಮದಲ್ಲಿರುವ ಕೆಳಮನೆ ಮಂಜಯ್ಯ ಶೆಟ್ರಿಗೆ

ಸದ್ರಿ ಅಮ್ಲುಜಾರಿಯಲ್ಲಿ 2ನೇ ಪ್ರತಿವಾದಿ ಬಾಬ್ತು ಕುಂದಾಪುರ ಕೆನರಾ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಜಪ್ತು ಮಾಡಿ ಏಲಂ ಮಾಡಿ ಸಟೀಕಾಗಿ,ವಾದಿಯು ಕೊಟ್ಟ ಸದ್ರಿ ಅರ್ಜಿಯು ತಾ 18-12-1935ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ ಆ ದಿವಸ ಹಗಲು 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದು.

ಕುಂದಾಪುರ, 8-12-'35 — **K Narasimha Kamath,** *Pleader for D H*

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P No 224-1935

1 ಐಸಾಬಿ
2. ಅಬ್ದುಲ್ಲ, 3. ಅಬ್ದುಲ್ಲ ರಹಿಮಾನ, 4 ಬೀಪಾತ್ಮ—ಮ್ಯಾನರುಗಳು ಇವರ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು ಐಸಾಬಿ } ಅರ್ಜಿದಾರರು

ಅರ್ಜಿದಾರರ ಕಡೆ ನೋಟೀಸು

1ನೇ ಅರ್ಜಿದಾರಳ ಗಂಡ ಮತ್ತು 2ರಿಂದ 4ನೇವರೆಗಿನ ಅರ್ಜಿದಾರರ ತಂದೆ ತಾರೀಕು 10—5—1935ರಲ್ಲಿ ಮೃತಪಟ್ಟ ಮಮ್ಮುಂಜಿ ಬ್ಯಾರಿಯು ಕಾಸರಗೋಡು ಕೆನರಾ ಬೇಂಕಿನಲ್ಲಿ ಅಡವು ಇಟ್ಟ ಅರ್ಜಿ ಶಿದ್ದ್ಯಾಲಿನಿಂದ, ಕೋರುವ ನಗಗಳನ್ನು ಬೇಂಕಿನಿಂದ ವಾಪಾಸುಪಡಿಯುವರೆ 1ನೇ ಅರ್ಜಿದಾರಳಿಗೆ ವಾರಿಶ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ ಅರ್ಜಿಯು ತಾ 18-12-35ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಸ್ಸಿ ಬಗ್ಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರುಮಾಡಿಕೊಳ್ಳಬಹುದೆಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ

ಕಾಸರಗೋಡು, 4-12-'35 — **K Kamaluksha Rao,** *Advocate for Petitioners*

In the Court of the District Judge of South Kanara.

O P No 113 of 1935

K Vamana Prabhu son of K Keshava Prabhu, residing in Mangalore Town } Petitioner

The Petition filed by the above named Petitioner for the grant to him of a Succession certificate empowering him to recive the interests and dividends and negotiate and transfer the share No 071897 in the Tata Iron and Steel Company Ltd, Bombay, standing in the name of *Radhamma Alias Parvathi Amma*, widow of Kumbla Vamana Prabhu who died at Kumbla on 6 10 1935 has been posted for hearing on 20 12 1935 at 11 A M Those desirous of opposing the said petition may appear and file their objections in the Court and on the said date

Mangalore, 9-12-35 — **M Ramakrishnachar,** *Vakil for Petitioner*

ನಿಮಗೆ ಗಂಟಲು ನೋವು ಇದೆಯೇ.

ಹಾಗಾದರೆ ಪೆಪ್ಸನ್ನು ಸೇವಿಸಿರಿ.



ರೋಗಾಣುಗಳ ಪ್ರಥಮ ವಾಸಸ್ಥಾನವು ಗಂಟಲಾಗಿಯುತ್ತದೆ ಅದರಿಂದ ಗಂಟಲಿನಲಿ ಸಿಮುಗೆ ತುಸು ನೋವು ಕಂಡ ಕೂಡಲೆ ವಿಷಹಾರಿ ಶ್ವಾಸನೀಯ ಪೆಪ್ಸನ್ನು ಸೇವಿಸಿರಿ ಬಾಯಿಯಲ್ಲಿ ಅವುಗಳನ್ನು ಹಾಕಿದಾಕ್ಷಣ ಪೆಪ್ಸ್ ಗುಳಿಗೆಗಳು ಕರಗಿ ಅದರಿಂದ ಹೊರಡುವ ಸುವಾಸನಾಯುಕ್ತ ಧೂಮಗಳು ನಾಸಿಕ ರಂಧ್ರಗಳಲ್ಲಿ ಹರಡಿ ಅಲ್ಲಿರುವ ರೋಗಾಣುಗಳನ್ನು ನಾಶಗೊಳಿಸುತ್ತದೆ ರೋಗಾಣುಗಳ ಉಪದ್ರವದಿಂದ ಉದ್ರೇಕಗೊಂಡ ದೇಹಕ್ಕೆ ತಂಪನ್ನೀಯುವುದು ಇವಕ್ಕೆ ಸಾಗಿದೆ ಎಲ್ಲಾ ಮದ್ದುಗಳಿಗಿಂತಲೂ ಬೇಗನೆ ಗುಣವನ್ನು ಪಡೆಯಬಹುದು ಅಂತಹ ಅಕ್ಕು ನವು ಪೆಪ್ಸ್ ಗುಳಿಗೆಗಳಲ್ಲಿರುತ್ತದೆ ಗಂಟಲಿನ ನೋವನ್ನು ಗುಣಪಡಿಸುತ್ತದೆ ಗಂಟಲು ಉಬ್ಬಿದರೆ ಶಮನವಾಗುತ್ತದೆ ಕಫ್ಫವನ್ನು ಸಿಲ್ಲಿಸುತ್ತದೆ ಚಳಿಯನ್ನು ನಿಲಿಸುತ್ತದೆ ಇಷ್ಟೆಲ್ಲಾ ಕೆಲಸವನ್ನು ಪೆಪ್ಸ್ ಮಾಡುತ್ತದೆ ಔಷಧಿಯ ಅಂಗಡಿಗಳಲ್ಲಿ ಎಲ್ಲೆಲ್ಲೂ ಸಿಗುತ್ತದೆ

ಕ್ರಯ ಸೀಸೆ 1ಕ್ಕೆ ರು 1—0 0

ಏಜಂಟರು — ಮೆಸರ್ಸ್ ದಾಧಾ ಎಂಡ್ ಕಂಪೆನಿ ... ಟಿ ... ದರಾಸ

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಪೆಪ್ಸ್ PEPS

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ಒಳಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲುಪಲು ಅತೀ ಅನುಕೂಲವಾಗಿದೆ

The Canara Public Conveyance Co., Ltd, Kodialbail Mangalore

The Sakaleshwara Motor Service Ltd., Saklaspur.

2

ದೇವರ ಪ್ರತಿಮೆಯು ಕಣ್ಣೀರು ಸುರಿಸುತ್ತಿದೆ.

ಇಂಗ್ಲೆಂಡಿನ ದಕ್ಷಿಣಭಾಗ ಎಂಬಲ್ಲಿ ಬಾಳುತ್ತಿರುವ ಕ್ರಿಸ್ತನ ವಿಗ್ರಹದ ಕಣ್ಣಿನಿಂದ ನೀರು ಸುರಿಯಲು ಪ್ರಾರಂಭವಾಗಿದೆ. ಈ ವಿಗ್ರಹವು ಅನೇಕ ದಿವಸಗಳಿಂದ ಕಣ್ಣೀರು ಸುರಿಸುತ್ತಿರುವುದು. ಶಾಸ್ತ್ರಜ್ಞರುಗಳು, ವೇದರು ಯಾವುದೋ ಕಾರಣಗಳಿಂದ ದುಃಖಿತರಾಗಿ ದ್ದುದರಿಂದ ಈ ಘಟನೆಯುಂಟಾಗಲು ಕಾರಣವೆಂದೂ, ಕೆಲವರು ಇದೊಂದು ಸಾಧುವಿನ ಹಣಗಳಿಸಲು ಹೂಡಿದ ಉಪಾಯವೆಂದೂ ತರತರದ ಅಭಿಪ್ರಾಯಪಡುತ್ತಿದ್ದಾರೆ. ಕ್ರಿಸ್ತ ವಿಗ್ರಹದ ಕಣ್ಣಿನಿಂದ ನೀರು ಸುರಿಯುತ್ತಿರುವು ದೇನೋ ನಿಜವಾದ ಸಂಗತಿ. ಸಾವಿರಗಟ್ಟಲೆ ಯಾತ್ರಿಕರು ಈ ಪವಿತ್ರ ವಿಗ್ರಹವನ್ನು ನೋಡಲು ಎಲ್ಲಾ ಕಡೆಗ ಳಿಂದಲೂ ಬರುತ್ತಿರುವರು. ದೇವರನ್ನು ಸಮಾಧಾನ ಗೊಳಿಸುವ ಪೂಜೆ, ಹವನ, ಇತ್ಯಾದಿಗಳು ನಡೆಯುತ್ತಾ ಇವೆ.

ಚೀನಾದೇಶಕ್ಕೆ 4 ಮಹಾಪ್ರಭುತ್ವ ಜನಾಂಗಗಳ ಸಾಲ.

ಬ್ರಿಟನು, ಫ್ರಾನ್ಸು, ಜಪಾನು ಮತ್ತು ಸಂ। ಅಮೇರಿಕಾ ಈ ನಾಲ್ಕು ಮಹಾಪ್ರಭುತ್ವ ಜನಾಂಗಗಳು ಹತ್ತು ಕೋಟಿ ಪೌಂಡಿನ ಒಂದು ಸಾಲವನ್ನು ಕೊಡಬೇಕಾಗಿ ಟೋಕಿಯೊ ನಗರದಲ್ಲಿ ಬ್ರಿಟಿಷರ ಸೂಚನೆಬಂದಿರುತ್ತದೆ. ಈ ಸಾಲದ ಮರುಪಾವತಿಯು ೩೦ ವರ್ಷಗಳಲ್ಲಿ ಆಗ ಬೇಕಾಗುವುದು. ಈ ಸಾಲದಿಂದ ಬಹಳ ಪ್ರಮಾಣಕ್ಕೆ ಚೀನಾ ದವರ ಆರ್ಥಿಕ ವ್ಯವಸ್ಥೆಗಳ ಮೇಲೆ ಕೈವಾಡ ಸಾಧ್ಯ ವಾಗುತ್ತದೆ. ಜಪಾನಿಯರಿಂದ ಇದನ್ನು ಸಮ್ಮತಿಸಿದ ಉತ್ತರವು ಬರಲಿಲ್ಲ. ಕಾರಣ, ಪಾಶ್ಚಾತ್ಯರು ಚೀನಾದ ವ್ಯವಹಾರದಲ್ಲಿ ಕೈಹಾಕುವುದು ಜಪಾನೀಯರ ಇಚ್ಛೆ ಯಿಲ್ಲ. ಆದರಿಂದ ಬ್ರಿಟಿಷರ ಈ ಸೂಚನೆಗೆ ಮನ್ನಣೆಯು ದೊರಕಲಿಕ್ಕಿಲ್ಲ.

ಕೈರೋದಲ್ಲಿ ವಿದ್ಯಾರ್ಥಿಗಳ ಗಲಭೆ

ಈಜಿಪ್ಟಿನ ಮುಖ್ಯ ನಗರವಾದ ಕೈರೋದಲ್ಲಿ ವಿದ್ಯಾರ್ಥಿ ಗಳ ಗಲಭೆಯು ಪುನಹ ಪ್ರಾರಂಭವಾಗಿರುತ್ತದೆ. ಈಗಿನ ಸರಕಾರಕ್ಕೂ ಬ್ರಿಟಿಷರಿಗೂ ವಿರೋಧ ಪಕ್ಷದವರಲ್ಲಿ ಎಲ್ಲಾ ಶಾಲಾ ಮಕ್ಕಳೂ ಭಾಗವಹಿಸಿರುವರು. ಕೆಲವು ವಿಶ್ವವಿದ್ಯಾಲಯಗಳು ಮುಚ್ಚಲ್ಪಟ್ಟಿವೆ. ವಿದ್ಯಾರ್ಥಿ ಯರು ಮೆರವಣಿಗೆ ನಡೆಸುತ್ತಿರುವರು. ತಮಗೆ ಸ್ವಂತ ಸೂತ್ರದ ರಾಜಶಾಸನ ಕೊಡಬೇಕಾಗಿ ಈಜಿಪ್ಟಿನ ಅರಸ ರಾದ ಫೋದರಾಜನೆಯೂ ಬ್ರಿಟಿಷ ಸರಕಾರದವ ನೆಯೂ ಕೋರಿಯಿಟ್ಟಿರುತ್ತಾರೆ.

ಕೋಂಗ್ರೆಸ್ಸಿನ ಶಾಸನದಲ್ಲಿ ಸುಧಾರಣೆ ಗಳಾಗಬೇಕು.

ಕೋಂಗ್ರೆಸ್ ಹಳೇ ಜೀವವಾನವನ್ನು ತ್ಯಜಿಸಿ, ಸುಧಾ ರಣೆ ಹೊಂದಿದ ಕೋಂಗ್ರೆಸ್ಸನ್ನು ನಿರ್ಮಿಸತಕ್ಕದ್ದು. "ಕೋಂಗ್ರೆಸ್ಸಿನ ಹಲವು ಬಲಾಢ್ಯನಾಯಕರು ನಮ್ಮನ್ನು ಬಿಟ್ಟು ಹೊರಗೆ ಇರುವುದು ಬಹಳ ದುಃಖಕರ ವಾಗಿರುತ್ತದೆ. ಶ್ರೀ ಶ್ರೀನಿವಾಸ ಅಯ್ಯಂಗಾರರು ಬೇಗನೇ ಕೋಂಗ್ರೆಸ್ ಪಕ್ಷವನ್ನು ಸೇರತಕ್ಕದ್ದು. ಅವ ರನ್ನು ನಮ್ಮ ಬದಿಗೆ ಎಳೆಯುವ ಪ್ರಯತ್ನಗಳನ್ನು ಮಾಡ ತಕ್ಕದ್ದು. ಹಿಂದೂದೇಶದ ಕುರಿತು ಯುರೋಪ್ ಖಂಡದಲ್ಲಿ ನನ್ನ ಕಾರ್ಯವು ಇನ್ನೂ ಮುಗಿದಿಲ್ಲ. ಅದನ್ನು ಪೂರೈಸಿ, ಬೇಗನೇ ಲಕ್ನೋ ಕೋಂಗ್ರೆಸ್ಸಿಗೆ ಹಾ ಯಾಗಿ ಮಾತೃಭೂಮಿಯನ್ನು ಸೇರುವೆ" ಎಂದು ಶ್ರೀ ಸುಭಾಷ್ಚಂದ್ರಬೋಸರ ಪತ್ರ ಬಂದಿರುತ್ತದೆ. ಶ್ರೀಯುತ ಜವಾಹಿರ್‌ಲಾಲ ನೆಹರುಗಳವರು ಫೆಬ್ರುವರಿಯಲ್ಲಿ ಹಿಂದೂದೇಶಕ್ಕೆ ಬರುವರು.

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹಿಂದೂ ದೇಶದ ಕುರಿತಾಗಿ ಕೆಲವು ಪ್ರಶ್ನೆಗಳು.

ಬರುವ ಕ್ರಿಸ್‌ಮಸ್ ಮತ್ತು ಹೊಸವರ್ಷದ ಹಬ್ಬ ಗಳ ಸಂದರ್ಭಗಳಲ್ಲಿ ಹಿಂದೂದೇಶದ ಅಹಿಂಸಾ ರಾಜಕೀಯ ಕೈದಿಗಳಿಗೆ ಕ್ಷಮಾಪಣೆಕೊಡಲಾಗುವುದೇ? ಎಂಬ ಲೇಬರ್ ಪಕ್ಷದ ಮಿ। ಲ್ಯಾನ್ಸಬರಿಯವರ ಪ್ರಶ್ನೆಗೆ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾದವರು 'ಆ ವಿಚಾರವನ್ನು ಸಂಪೂರ್ಣವಾಗಿ ಹಿಂದೂದೇಶದ ವೈಸರಾಯರವರಿಗೆ ಬಿಟ್ಟಿರುತ್ತದೆ' ಎಂದು ಉತ್ತರವು ಕೊಟ್ಟರು.

ಶ್ರೀ ಸುಭಾಷ್ಚಂದ್ರಬೋಸರ ಪಾಸ್‌ಪೋರ್ಟಿನ ವಿಚಾರದಲ್ಲಿ—

ಶ್ರೀ ಬೋಸರು ಬಂಗಾಳ ಕ್ರಾಂತಿಕಾರ ಚಳವಳಿ ಯಲ್ಲಿ ಬೆರತವರಿರುವ ಕಾರಣ, ಇವರ ಮೇಲೆ ನಿರ್ಬಂಧ ಗಳು ಹೇರಲಾಗಿವೆ. ಆರೋಗ್ಯಕ್ಕಾಗಿ ಯುರೋಪಿಗೆ ಹೋಗಲು ಸಾಧ್ಯವಾಗುವಂತೆ ಇವರನ್ನು ಬಿಡುಗಡೆ ಮಾಡಲಾಗಿತ್ತು. ಆರೋಗ್ಯಸಂಪಾದನೆಗಾಗಿ ಇವರು ಇಂಗ್ಲಾಂಡಿಗೆ ಬರುವುದಾದರೆ ಅವರಿಗೆ ಪಾಸುಪೋರ್ಟ ಕೊಡಲಾದೀತು ಎಂದು ನಿಶ್ಚಯಿಸಲಾಗಿರುತ್ತದೆ.

ಇವುಗಳಲ್ಲದೆ, ಲಾಹೋರಿನ ಗಲಭೆ, ಬೆಂಗಳೂರು ಕಂಟೋನ್ಮೆಂಟನ್ನು ಮೈಸೂರು ಸರಕಾರಕ್ಕೆ ಒಪ್ಪಿಸು ವುದು, ಹಿಂದುಳಿದ ಪ್ರದೇಶಗಳ ಕುರಿತೂ ಮೊದಲಾದ ಪ್ರಶ್ನೆಗಳೂ ಬಂದಿದ್ದುವು. ಸಂಬಂಧಪಟ್ಟವರಿಂದ ಅವು ಗಳಿಗೆ ಸಂದರ್ಭಾನುಸಾರ ಉತ್ತರವು ದೊರಕಿರುತ್ತದೆ.

ಜಪಾನಿನ ಪ್ರಸಿದ್ಧ ಕವಿಗಳಾದ ನೊಗುಚ್ಚಿಯವರು.

ಹಿಂದೂದೇಶಕ್ಕೆ ಬಂದಿರುವರು. ಇವರು ಕಲ್ಕತ್ತ ದಲ್ಲಿ ಇಳಿದು ಅಲ್ಲಿನ ವಿಶ್ವವಿದ್ಯಾಲಯದಲ್ಲಿಯೂ, ಹಲವು ಕಾಲೇಜುಗಳಲ್ಲಿ ಭಾಷಣ ಮಾಡಿದರು. ಭರತ ಖಂಡದ ಎಲ್ಲಾ ಮುಖ್ಯ ನಗರಗಳಿಗೆ ಪ್ರವಾಸ ಬೆಳೆಸಿ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಭಾಷಣಮಾಡಬೇಕೆಂದಿದ್ದಾರೆ. ಈ ಕವಿಗಳು ಆಂಗ್ಲೇಯ ಭಾಷಾಪ್ರವೀಣರು, ಅತಿ ಬಡವರಾಗಿದ್ದು ಅನೇಕ ಶ್ರಮ ಗಳನ್ನು ಪಡೆದು ಅಮೇರಿಕಾದಲ್ಲಿ ವಿದ್ಯಾಭ್ಯಾಸಂಗ ಮಾಡಿ, ಈಗ ಜಪಾನಿನ ಒಂದು ವಿಶ್ವವಿದ್ಯಾಲಯದಲ್ಲಿ ಆಂಗ್ಲೇಯ ಭಾಷೆಯ ಮುಖ್ಯ ಪ್ರೊಫೆಸರರಾಗಿರುತ್ತಾರೆ ಕಂಬಾಕ ಪದ್ಯ, ಗದ್ಯ, ಕಾವ್ಯಗಳನ್ನು ರಚಿಸಿದ್ದಾರೆ ಭರತಖಂಡದ ಶ್ರೇಷ್ಠ ಕವಿಗಳಾದ ಶ್ರೀ ರವೀಂದ್ರನಾಥ ಠಾಕೂರರ ಭೇಟಿಮಾಡಲಿರುವರು.

ಇಜಿಪ್ಟಿಗೆ ಪಾರ್ಲಿಮೆಂಟರಿ ರಾಜ ಶಾಸನವು ದೊರಕುವುದೆ?

ಇಜಿಪ್ಟಿನ ರಾಜಶಾಸನವನ್ನು ಅಲ್ಲಿನ ಎಲ್ಲಾ ಪಕ್ಷಗಳಿಗೆ ಸಮಾಧಾನಕರವಾಗುವಂತೆ, ಸುಧಾರಣೆ ಮಾಡುವುದು ಬ್ರಿಟಿಷ ಸರಕಾರದ ಇಚ್ಛೆ. ಈ ಕುರಿತು ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ರಚಿಸಲು ಇಜಿಪ್ಟಿನ ಸರಕಾರಕ್ಕೆ ವಿನಂತಿಸಿದ್ದರು. ಅದುದರಿಂದ ಬ್ರಿಟಿಷ ಸರಕಾರವು ಏಗ ಪ್ರಶ್ನೆ ಮನ್ನಣೆಯನ್ನು ಕೊಟ್ಟಿರುತ್ತದೆ ಅವರ ವಿಷಯ ಸ್ವೇಚ್ಛಾ ಪರವಾಗಿ ವರ್ತಿಸುವುದು ಬ್ರಿಟಿಷ ಸರಕಾರ ಇಚ್ಛೆಯಲ್ಲ ಎಂದು ಸರ್ ಸಾಮು ವೇಲ ಹೋರರು ತಿಳಿಸಿದರು.

ಆಂಗ್ಲೇಯ-ಇಜಿಪ್ಟು ಸಂಬಂಧ

"ಮುಸಲೀನಿಯವರ ದೆಸೆಯಿಂದ ಆಂಗ್ಲೇಯ-ಇಜಿಪ್ಟ ಕಲಹ ನಿವಾರಣಾಕಾರ್ಯವು ಬಹಳ ಸುಲಭ ವಾಗಿ ಪರಿಣಮಿಸಿದೆ. ಹಬಸಿ-ಇಟೆಲಿಯ ಯುದ್ಧದಲ್ಲಿ ದಿಕ್ಕಿಲ್ಲಿ ಇವರೊಳಗೆ ಬಿದ್ದ ಹಟೆಯು (ಇಜಿಪ್ಟಿನ ರಾಜ ಶಾಸನ ವಿಚಾರ) ಯೋಗ್ಯರೀತಿಯಲ್ಲಿ ತೀರ್ಮಾನ ಹೊಂದುತ್ತಿರಲಿಲ್ಲ. ಇನ್ನೊಂದು ಮಹಾ ಯುದ್ಧವು ಇಟೆಲಿಗೂ ಇವರಿಗೂ ಸಂಭವಿಸಿದರೆ ಆಗ್ಗೆ ಈ ರಣ ರಂಗವು ಇಜಿಪ್ಟಿನಲ್ಲಾಗಬಹುದು. ಆಗ್ಗೆ ಇಜಿಪ್ಟಿನವ ರೊಡನೆ ವೈರವನ್ನಿಟ್ಟಲ್ಲಿದ್ದರೆ ಇಜಿಪ್ಟಿನವರು ಇವರೊ ಡನೆ ಸಹಕರಿಸುವರೆ? ಆದರೆ, ಅವರಿಗೆ ಇಟೇಲಿಯಾ ನರು ಬದಿಸೇರಲು ಇಚ್ಛೆಯಿಲ್ಲ. ಬ್ರಿಟಿಷ ಸರಕಾರವು ಈ ವಿಚಾರದಲ್ಲಿ ಯೋಗ್ಯರೀತಿಯಲ್ಲಿ ವರ್ತಿಸತಕ್ಕದ್ದು" ಎಂದು ಮಾಜಿ ಚೀಫ್ ವ್ಯವಹಾರದ ಕಾರ್ಯದರ್ಶಿ ಗಳಾಗಿದ್ದ ಮಿ। ಡಾಲ್ಟನ್‌ರು ಬ್ರಿಟಿಷ ಪಾರ್ಲಿಮೆಂಟಿನ ಹೌಸ್ ಆಫ್ ಕೊಮನ್ಸಿನಲ್ಲಿ ಮಾಡಿದ ಭಾಷಣ.

ಶ್ರೀ ಬಾಬೂರಾಜೇಂದ್ರ ಪ್ರಸಾದರ ತಮಿಳುನಾಡು ಆಂಧ್ರದೇಶ ಮತ್ತು ಮಲಬಾರಿನ ಸಂಚಾರ.

ಏಳು ವಾರಗಳ ತನಕ ನಡೆಯಿಸಿದರು. ಎಲ್ಲೆಲ್ಲೂ ಇವರನ್ನು ಅತಿ ವಿಜೃಂಭಣೆಯಿಂದ ಸ್ವಾಗತಿಸಿ ದರು. ಇವರ ಭಾಷಣಗಳನ್ನು ಕೇಳಲು ಎಲ್ಲಾ ಕಡೆ ಗಳಲ್ಲಿ ಜನಸ್ತೋಮಗಳು ತಿಕ್ಕಿರಿದು ನೆರೆದಿದ್ದವು. ಕೋಂಗ್ರೆಸ್ ಕಾರ್ಯಕ್ಕಾಗಿ ಸಾಧಾರಣ ೫೦,೦೦೦ ರೂಪಾಯಿಗಳಷ್ಟು ಶೇಖರಿಸಿರುವರು. ಕೋಂಗ್ರೆಸ್ಸಿನ ಚಳವಳಿಯು ಈ ಪ್ರಾಂತ್ಯಗಳಲ್ಲಿ ಯಶಸ್ವಿಯಾಗಿ ನಡೆ ಯುತ್ತದೆಂದು ಮಾನ್ಯ ಅಧ್ಯಕ್ಷರ ಅಭಿಪ್ರಾಯ. ಈಗ ಮಹಾತ್ಮಾ ಗಾಂಧಿಯವರಿದ್ದ ವಾರ್ಧಾ ಕಡೆ ಪ್ರಯಾಣ ಬೆಳೆಯಿಸಿದ್ದಾರೆ.

ರಾಜಶಾಹಿ ಕಾಲೇಜಿನ ವಿದ್ಯಾರ್ಥಿ, ಕೋಮುವಾರ ಭೇದ.

ರಾಜ್ಯ ಮಕ್ತೋನಾಲ್ಡರು ಸಲ್ಲಿ ಈ ವಿಷಕರ ಫಲ ಗಳನ್ನು ಕೊಡುವ ಮರವು ಅತಿ ಅಲ್ಪ ಸಮಯದಲ್ಲೇ ಬಂದು ಮರವಾಗಿ ಬೆಳೆದು, ಈಗಲೆ ವಿಷಕರ ಫಲ ಗಳನ್ನು ಕೊಡಲಾರಂಭಿಸಿದೆ. ರಾಜಶಾಹಿ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿಗಳು ಕಾಲೇಜಿನ ಸಂಘಕ್ಕೆ ಮುಸ್ಲಿಂ ಕಾರ್ಯದರ್ಶಿಗಳೇ ಆಗಬೇಕೆಂದು ಬಹಳ ಚಳವಳಿ ನಡೆಸಿದರು. ಮುಖ್ಯೋಪಾಧ್ಯಾಯರ ಸಂಕುಚಿತ ವರ್ತನೆಯೊಂದಲ್ಲದಿದ್ದರೆ ಅವರ ಈ ಚಳವಳಿಯು ಭಯಂ ಕರ ಸ್ಥಿತಿಯನ್ನು ಹೊಂದುತ್ತಿತ್ತು. ಹೀಗೆಯೇ ದೇಶ ದಲ್ಲೆಲ್ಲಾ ಕೋಮುವಾರು ಗಲಭೆಗಳು ಪ್ರಾರಂಭವಾಗ ತೊಡಗಿವೆ. ಕೆಲವು ಪ್ರಾಂತಿಕ ನ್ಯಾಯವಿಧಾಯಕ ಸಭೆ ಗಳಲ್ಲಿ, ಕೆಲವು ದೇಶಹಿತದ ಮುಖ್ಯ ಪ್ರಶ್ನೆಗಳ ವಿಚಾರ ದಲ್ಲಿ ಈ ಭೇದವು ಹಾನಿಯನ್ನೊದಗಿಸುತ್ತದೆ. ಕೋಮು ವಾರು ವಿಭಾಗವನ್ನು ಕೊಟ್ಟುದರಿಂದಲೇ ಜನರಲ್ಲಿ ಈ ತರದ ಬುದ್ಧಿವಕ್ರತೆಯುಂಟಾಗಲು ಕಾರಣವಾಗಿದೆ.

ಮದರಾಸು ಕೋರ್ಪೊರೇಶನಿನ ಈಗಿನ ಮೇಯರರಾದ ಮಿ। ಅಬ್ದುಲ್‌ಹಮೀದ್‌ಖಾನ್ ಇವರು

ಇಂಗ್ಲಾಂಡಿನಲ್ಲಿ ವಿವಿಧ ಜನಾಂಗಗಳ ನೌಕಾ ಪರಿಷತ್ತು.

ತಯಾರಿಸುವವರು:— **ಲಸ್ಸರ್ ಡಿಪೋ, ಚಿಕ್ಕಮಗಳೂರು.**
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಇಟೆಲಿ-ಹಬಸಿ ಸಮರವು ಬೇಗನೆ ಶಾಂತವಾಗುವುದೆ?

ಇನ್ನೊಂದು ಮಹಾಯುದ್ಧದ ರಣರಂಗವು ಆಸ್ಟ್ಯಾಖಿಂಡದಲ್ಲೀ?

ಇಟಲಿ-ಹಬಸಿ ಸಂಧಿ ಪ್ರಸ್ತಾಪಕ್ಕೆ ಫ್ರೆಂಚ್-ಬ್ರಿಟನ್ ಸೂಚನೆಗಳು.

ಡಿಸ್ ಅಬಾಬದಲ್ಲಿ ಜನರು ಕಕ್ಕಾಬಿಕ್ಕಿಯಾದರು

ಲವು ದಿವಸಗಳ ಹಿಂದೆ, ಬೆಳಗಿನಜಾವ ಧಾರಣ ೫॥ ಘಂಟೆಗೆ ಸರಿಯಾಗಿ, ನಗರ ವಾಸಿಗಳು ಇಟಲಿಯಾನ ವಿಮಾನಗಳಿಗೆ ಹೆದರಿ, ಗುಡ್ಡ ಬೆಟ್ಟಗಳಿಗೂ ಇನ್ನಿತರ ಕ್ಷಣಾಸ್ಥಳಗಳಿಗೂ ಪಲಾಯನ ಮಾಡಲಾರಂಭಿಸಿದರು. ಇಟಲಿಯಾನರ ವಿಮಾನಗಳ ಂಡವೊಂದು ಬೇಗನೆ ಅದಿಸ್ ಅಬಾಬದ ಮೇಲೆ ದಾಳಿ ನಡೆಸುವುದು ಎಂಬ ವಾರ್ತೆಯು ಹರಡಿದುದರಿಂದಲೇ ಈ ಗಲಭೆಯುಂಟಾಯಿತು. ಆದರೆ ಪ್ರಕಟಣೆ ಮೇರೆಗೆ ನಿಯಮಿತಸಮಯಕ್ಕೆ ಸರಿಯಾಗಿ ಹಸುರು ವರ್ಣದ ಹಬಸಿ ವಿಮಾನಗಳು ಮಾತ್ರ ಅಲ್ಲಿಗೆ ಬಂದು ಇಳಿದುವು ಡೆಸ್ಸಿಯಿಂದ ಬಂದ ತಂತಿಯ ಅರ್ಥವು ಸರಿಯಾಗಿ ಗದ ಕಾರಣ "ಎರಡು ವಿಮಾನಗಳು ಬೇಗನೆ ಅದಿಸ್ ಅಬಾಬಕ್ಕೆ ಬರುವುವು" ಎಂಬ ವಾರ್ತೆಯನ್ನು ಇಟಲಿಯಾನ ವಿಮಾನಗಳಿಗೆ ಸಂಬಂಧಿಸಿದುದರಿಂದ ಅನಾವಶ್ಯಕ ತಪ್ಪು ತಿಳುವಳಿಕೆಯುಂಟಾಗಲು ಕಾರಣವಾಯಿತು.

ಅಂತರಿಕ್ಷದ ಯುದ್ಧ

ಇಟಲಿಯಾನ ನಿರ್ಬಂಧಗಳಿಂದ ಸರಿಯಾದ ಯುದ್ಧವಾರ್ತೆಗಳು ಬರಲು ಸಾಧ್ಯವಿಲ್ಲದಿದ್ದರೂ, ಉತ್ತರದಿಕ್ಕಿನಲ್ಲಿ ಇಟಲಿಯಾನರು ಅಂತರಿಕ್ಷದ ಯುದ್ಧನಿರತರಾಗಿರುತ್ತಾರೆಂದೂ, ಅಂತರಿಕ್ಷದ ಯುದ್ಧ ಎಲ್ಲೆಲ್ಲೂ ಬಿರುಸಾಗಿ ಸಾಗುತ್ತಿದೆಯೆಂದೂ ವಾರ್ತೆ ಬಂದಿರುತ್ತದೆ. ಹಬಸಿಯ ಚಕ್ರವರ್ತಿಯವರು ಡೆಸ್ಸಿಯಲ್ಲಿ ದೇಶರಕ್ಷಣೆಗಾಗಿ ಹಣಗಾಡುತ್ತಿದ್ದಾರೆ ಕೆಲವರು ಇವರಿಗೆ ಅಪಾಯವು ಒದಗಬಹುದೆಂಬ ಭಯದಿಂದ ಕೂಡಿದವರಾಗಿ, ಅವರು ಪುನಹ ರಾಜಧಾನಿಯನ್ನು ಸೇರುವಂತೆ ವಿನಂತಿ ಮಾಡಿದರು ಆದರೆ ಪ್ರಜಾಪ್ರೇಮಿಗಳಾದ ಚಕ್ರವರ್ತಿಗಳು ಪ್ರಜೆಗಳೊಡನೆ ಕಾದಾಡಲು ನಿಶ್ಚೈಸಿಕೊಂಡಿರುತ್ತಾರೆ

ಇಟಲಿ-ಹಬಸಿ ಸಂಧಿ ಪ್ರಸ್ತಾಪಕ್ಕೆ ಫ್ರೆಂಚ್-ಬ್ರಿಟನ್ ಸೂಚನೆಗಳು

ಇವುಗಳಿಗೆ ಮುಸಲೋನಿಯು ಒಪ್ಪಿದರೆ ಇಟಲಿಗೆ ಲಾಭವೇ ಆಗುವುದು

ಅನೇಕ ದಿವಸ ಮಾತುಕತೆಗಳನ್ನು ನಡೆಸಿ, ಫ್ರೆಂಚರ ಪ್ರಧಾನ ಮಂತ್ರಿಯವರಾದ ಮಿ। ಲಾವಲರೂ, ಬ್ರಿಟಿಷ ಬಹಿರ್ ವ್ಯವಹಾರ ಮಂತ್ರಿಗಳಾದ ಹೋರರು, ಕೆಳಗಿನವುಗಳು ಸಂಧಿಪ್ರಸ್ತಾಪಕ್ಕೆ ಉತ್ತಮ ಶರ್ತಗಳೆಂದು ಒಡಂಬಡಿಕೆ ಪಟ್ಟಿರುವರು.

೧. (ಎ) ಇಟಲಿಯು ಹಿಡಿದ ಟಿಗ್ರೆ ಪ್ರಾಂತ್ಯವು ಇಟಲಿಗೇ ಸೇರತಕ್ಕದು.

(ಬಿ) ಎಡೋವಾವನ್ನು ಇಟಲಿಗೆ ಒಪ್ಪಿಸತಕ್ಕದು.

(ಸಿ) ಓಗಡೆನ್ ಮತ್ತು ಹತ್ತಿರದ ಎರಡು ಪ್ರಾಂತ್ಯಗಳು ಇಟಲಿಯಾನರಿಗೆ ಸೇರತಕ್ಕವು

೨. ಇಟಲಿಯವರು ಹಬಸಿಗಳಿಗೆ,

(ಎ) ಕೆಂಪು ಸಮುದ್ರ ಕರಾವಳಿಯಲ್ಲಿರುವ ಅಸ್ಸಾಬ್ ಪ್ರಾಂತ್ಯವನ್ನೂ

(ಬಿ) ಅಕ್ಸಮನ್ನೂ

(ಸಿ) ಅಸ್ಸಾಬನ್ನು ಸೇರಲು ಇರಿಟ್ರಿಯಾದಲ್ಲಿ ಒಂದು ಹಾದಿಯನ್ನೂ ಬಿಟ್ಟುಕೊಡತಕ್ಕದು.

೩. ಟಾನಾ ಸರೋವರವೂ ಅದರ ಹತ್ತಿರದ ಪ್ರಾಂತ್ಯಗಳೂ ಹಬಸಿಯವರ ಅಧಿಕಾರದಲ್ಲಿರತಕ್ಕದು.

ಜರ್ಮನಿಯರನ್ನು ಈ ಮಧ್ಯೆ ಹೇಗಾದರೂ ಮಾಡಿ ಪುನಃ ಜನಾಂಗಸಭೆಯ ಸದಸ್ಯರನ್ನಾಗಿ ಮಾಡಬೇಕೆಂದು ಇವರು ನಿರ್ಧರಿಸಿರುತ್ತಾರೆ

ಆದರೆ ಮೇಲಿನ ಶರ್ತಗಳು ಜನಾಂಗ ಸಭೆಯವರಿಂದ ರಚಿಸಿದ ಸಮಿತಿಯು ಪ್ರಾರಂಭದಲ್ಲಿ ಕೊಟ್ಟ ಶರ್ತಗಳನ್ನನುಸರಿಸಲಿಲ್ಲ ಹೀಗಾಗಿ ಜನಾಂಗಸಭೆಯ ಸದಸ್ಯ ಜನಾಂಗಗಳು, ಅಪರಾಧಿ ಜನಾಂಗವಾದ ಇಟಲಿಗೆ, ಅಷ್ಟು ಲಾಭ ದೊರಕುವುದು ನ್ಯಾಯಸಮ್ಮತವಲ್ಲವೆಂದೂ, ಸೂಚನೆ ಕೊಟ್ಟಿರುವರು ಆದರೆ ಮೇಲಿನ ಶರ್ತಗಳನ್ನು ಸ್ವಲ್ಪ ಬದಲಾಯಿಸಿ, ಅವುಗಳನ್ನು ಮುಸಲೋನಿಯಿಂದ ಸ್ವೀಕರಿಸಲ್ಪಟ್ಟರೆ ಪ್ರಪಂಚದಲ್ಲಿ ಶಾಂತತೆಯು ನೆಲೆದೋರುವುದಂತೆ ಆದರೆ, ಪಶ್ಚಿಮದಲ್ಲಿ ಮೊಳೆದೋರಿದ ಈ ಯುದ್ಧಮೇಘವು ಪೂರ್ವದಿಕ್ಕಿಗೆ ಸರಿಯುತ್ತಿದೆ ಚೀನಾ ದೇಶದ ಅಭಿಕ್ರಮವನ್ನು ಜಪಾನೀಯರು ಪ್ರಾರಂಭಿಸಿದ್ದಾರೆ ಇದರಿಂದ ಸಂಯುಕ್ತ ಅಮೆರಿಕಾದವರ ಶಾಂತಸಾಗರದ ವ್ಯಾಪಾರ ವ್ಯವಹಾರಗಳಿಗೆ ಭಯಂಕರ ಧಕ್ಕೆಗಳು ಒದಗುತ್ತಿವೆ ಹೀಗಾಗಿ, ಮಹಾಯುದ್ಧದ ರಣರಂಗವು ಈ ಬಾರಿ ಆಸ್ಯಾ ಖಂಡದಲ್ಲೋ ಎಂದು ನೋಡಲಿದೆ

ಇಟಲಿಯು ಅಪರಾಧಿ ಜನಾಂಗವೆಂದು ಜನಾಂಗ ಸಭೆಯ ಸದಸ್ಯರಾದ ೫೦ ಜನಾಂಗಗಳು ಇಡೀ ಪ್ರಪಂಚವೂ ಈ ಮೊದಲು ನಿರ್ಧಾರ ಮಾಡಿದರು ಆದರೆ, ಇತ್ತೀಚಿನ ಬ್ರಿಟಿಷ ಮತ್ತು ಫ್ರೆಂಚರ ವರ್ತನೆಗಳನ್ನು ನೋಡಿದರೆ, ಇವರು ಇಟಲಿಗಿಂತ ಶ್ರೇಷ್ಠ ಅಪರಾಧಿತರೆನ್ನಬಹುದು. ಬ್ರಿಟಿಷರು ಮತ್ತು ಫ್ರೆಂಚರು ಜನಾಂಗಸಭೆಗೆ ದ್ರೋಹಿಗಳಾದುದು ಮಾತ್ರವಲ್ಲದೆ, ಅದನ್ನು ಹಿಂದಿಸುವ ಕಿವಿಯ ಪ್ರಯತ್ನವನ್ನು ಮಾಡುತ್ತಿದ್ದಾರೆ ಜನಾಂಗ ಸಭೆ ಎರಡು ಪ್ರಾಮುಖ್ಯ ಮತ್ತು ಶ್ರೇಷ್ಠ ಸದಸ್ಯರಾದ ಈ ಎರಡು ಜನಾಂಗಗಳ, ಈ ರೀತಿ ವರ್ತಿಸುವುದು ನ್ಯಾಯಸಮ್ಮತವಲ್ಲ ಜಪಾನೀಯರು ಜನಾಂಗ ಸಭೆಯನ್ನು ಅಲ್ಲಗಳೆದು ಅದರಿಂದ ಹೊರಗೆ ನಡೆದು, ಚೀನಾ ದೇಶದ ಮೆಂಚೂರಿಯಾದಲ್ಲಿ ಯುದ್ಧವನ್ನು ಸಾಗಿಸಿ, ತಮ್ಮ ಸ್ವಾರ್ಥಪರ ಉದ್ದೇಶವನ್ನು ಸಾಧಿಸಿದರು ಜರ್ಮನಿಯು ಕನಗಾದ ಅನೇಕ ಕಷ್ಟನಷ್ಟಗಳನ್ನು ನಿವಾರಣೆ ಮಾಡುವುದಕ್ಕಾಗಿ ಜನಾಂಗಸಭೆಯನ್ನು ತ್ಯಜಿಸಿಯೆ ಬಿಟ್ಟಿತು ಆದರೆ, ಜನಾಂಗಸಭೆಯು ಸುರಕ್ಷಿತವಾಗಿ ಬಾಳಿತು ಈಗ, ಜನಾಂಗ ಸಭೆಯು ಗೌರವ ಭಂಗವಾಗುವ ಸಂಭವ ಒದಗಿದೆ ಮಾತ್ರವಲ್ಲದೆ ಜನಾಂಗಸಭೆಯು ನಿರ್ಮೂಲವಾಗುವಂತಿದೆ

ಹೋರರೂ ಮತ್ತು ಲಾವಲರು ಕಲ್ಪಿಸಿದ ಸಂಧಿ ಶರ್ತಗಳು ಹಬಸಿಗಳಿಂದ ತಿರಸ್ಕರಿಸಲ್ಪಟ್ಟವೆ ಹೋರರು, ಎಂತದನ್ನೂ ಮಾಡಲು ಸಿದ್ಧರಿದ್ದಾರೆ, ಎಂದು ಭರತಖಂಡವು ಈ ಮೊದಲೆ ತಿಳಿದಿರುತ್ತದೆ ಹಬಸಿಗಳಲ್ಲಿ ಗುಲಾಮಗಿರಿಯು ರಾಡಿಳಿಯುತ್ತಿದೆ. ಅವರಲ್ಲಿ ಸರಿಯಾದ ರಾಜ್ಯಭಿಷೇಕ ಇಲ್ಲ. ಇಟಲಿಯ ವರ್ತನೆಯು ನ್ಯಾಯಸಮ್ಮತವಾದುದು ಎಂದು ಸಾರಲು ಅನೇಕರು ಈಗ ಸಿದ್ಧರಿದ್ದಾರೆ. ಆದರೆ ಇಷ್ಟರ ತನಕ ನಡೆದ ಯುದ್ಧಘಟನೆಗಳಿಂದ, ಹಬಸಿಯವರ ಯೋಗ್ಯತೆಯು ನಮಗೆ ತಿಳಿದಿರುತ್ತದೆ. ಸಾಹಸಿಗಳು, ದೇಶಪ್ರೇಮಿಗಳು ಸರ್ವರೂ ದೇಶರಕ್ಷಣೆಗಾಗಿ ಮುಂದೆ ಬಂದಿರುವರು; ಮಾತ್ರವಲ್ಲದೆ ಅನೇಕ ಕಡೆಗಳಲ್ಲಿ ಇಟಲಿಯಾನರ ಗರ್ವಭಂಗವನ್ನು ಮಾಡಿರುತ್ತಾರೆ. ಜನಾಂಗಸಭೆಯು ಸದಸ್ಯರಾಗಿದ್ದು, ಆ ಸಭೆಗೆ ಇಟಲಿಯವರಿಗಿಂತ ಹೆಚ್ಚಿನ ಮನ್ನಣೆಯನ್ನು ಕೊಟ್ಟಿರುತ್ತಾರೆ. ಭಾರಿ ಸಂಸ್ಕೃತಿ, ನಾಗರಿಕತೆಯಿಂದ ಕೂಡಿದ ಇಟಲಿಯು ಎಥಿಯೋಪಿಯಾದಲ್ಲಿ ಈಗ ಏನು ಮಾಡುತ್ತಿದೆ? ನಿಷ್ಕರುಣಿಗಳಾಗಿ, ಹಬಸಿ ನಗರಗಳ ಮೇಲೂ, ನಿರ್ದೋಷಿ ಸ್ತ್ರೀಯರ ಮೇಲೂ, ಆಸ್ಪತ್ರೆಗಳ ಮೇಲೂ ಬಾಂಬಿನ ಪ್ರಯೋಗ ಮಾಡುತ್ತದೆ

ಜನಾಂಗಸಭೆಯು ಮಾನವವರ್ಗಕ್ಕೆ ಒಳ್ಳೆದನ್ನು ಮಾಡುವ ಅನೇಕ ಉತ್ತಮ ಕಾರ್ಯಗಳನ್ನು ಮಾಡಿರುತ್ತದೆ ಸಾಮಾಜಿಕ ಉದ್ಧರಣೆ, ವಿದ್ಯಾಭಿವೃದ್ಧಿ ನೀತಿಬೋಧೆ, ಇತ್ಯಾದಿ ಈ ಸಭೆಯ ಮುಖ್ಯ ಧ್ಯೇಯಗಳು ಸಣ್ಣ ಜನಾಂಗಗಳು, ತಮ್ಮ ಸ್ವಾತಂತ್ರ್ಯವನ್ನು ಸಂರಕ್ಷಿಯನ್ನು ರಕ್ಷಿಸಲು, ಇದನ್ನು ಆಧರಿಸಿಕೊಂಡಿವೆ ಆದರೆ ಮಹಾ ಪ್ರಭುತ್ವದ ಜನಾಂಗಗಳಾದ ಬ್ರಿಟನು ಫ್ರಾನ್ಸ-ಜನಾಂಗ ಸಭೆಯನ್ನು ಹೇಗೆ ಉಪಯೋಗ ಮಾಡುತ್ತಿವೆ ಇದರ ಉತ್ತರವು ಹೋರಲಾವಲರ ಸಂಧಿ ಪ್ರಸ್ತಾಪ ಸೂಚನೆಯಲ್ಲಿ ಅಡಕವಾಗಿರುತ್ತದೆ ಜನಾಂಗ ಸಭೆಯನ್ನು ತಮ್ಮ ಸ್ವಾರ್ಥ ಸಾಧಿಸಲು ಉಪಯೋಗ ಮಾಡುತ್ತಿದ್ದಾರೆ ಇಟಲಿಯು ಅಪರಾಧಿಯೆಂದು ಕೆಲವು ದಿವಸಗಳ ಹಿಂದೆ ನಿರ್ಣಯವಾಗಿತ್ತು ಆದರೆ, ಈಗ ಜನಾಂಗ ಸಭೆಯ ಇಬ್ಬರು ಮುಖ್ಯ ಸದಸ್ಯರು ಇಟಲಿಯು ಇಷ್ಟರ ತನಕ ನಡೆಸಿದ ಘಾತುಕಗಳ ಅನಂಗೀಕೃತ್ಯವ ಮಾತ್ರವಲ್ಲದೆ ಅವರಿಗೆ ಇನ್ನು ಕೆಲವು ಪ್ರಾಂತ್ಯಗಳನ್ನು ಕೊಡಬೇಕೆ ಎಂದ ಸೂಚನೆಗಳನ್ನು ಮಾಡಿರುತ್ತಾರೆ

ಇಟಲಿಯ ಅಪರಾಧಿತನಕ್ಕೆ ಇದೊಂದು ಬಹುಮಾನವೇ' ಯುದ್ಧವು ಇನ್ನು ಕೊನೆಯಾಗಲಿಲ್ಲ ಹಬಸಿಗಳ ಪಾಲಿಗೆ ಜಯವು ಸೇರುತ್ತಿದೆ ಇಟಲಿಯವರು ಬೇಗನೆ ಹಿಂದೆ ಸರಿಯಬೇಕಾಗುವುದು. ಇಟಲಿಯವರು ಹತ್ತಿಕೊಂಡ ದಾಂದಲೆ, ವಿಮಾನಗಳಿಂದ ಬಾಂಬುಗಳ ಹಾವಳಿ ನಡೆಸುತ್ತಿದ್ದಾರೆ ಕಷ್ಟ ಪರಂಪರೆಗಳಿಂದ ಬಳಲಿ ಬೆಂಡಾಗಿರುತ್ತಾರೆ ರೋಗಗಳೂ ಶೀತವೂ ಅವರನ್ನು ಮುತ್ತಿ ಪೀಡೆಗಳೂ ಇಟಲಿಯವರನ್ನು ಸಂಪೂರ್ಣ ದಣಿಯುವಂತೆ ಮಾಡಿರುತ್ತದೆ ಹಬಸಿಯರಿಗೆ ಜಯಪ್ರಾಪ್ತವಾಗುವುದರಲ್ಲಿ ಏನೂ ಸಂಶಯವಿಲ್ಲ ಈ ಸಂದಿಗ್ಧ ಸಮಯದಲ್ಲಿ ಇನ್ನು ಕೆಲವು ಸಂಕ್ಷಿಪ್ತ ಪ್ರತಿಕ್ರಿಯೆಗಳನ್ನು ಜ್ಞಾಪಕ ಮಾಡಿ ಇಟಲಿಯನ್ನು ಸದೆಬಡೆದು, ಹಬಸಿಯವರ ಸ್ವಾತಂತ್ರ್ಯ ರಕ್ಷಣೆ ಮಾಡುವ ಒದಗಿಸುವ ಬದಲಾಗಿ ಹೋರ-ಲಾವಲರ, ಇಟಲಿಗೆ ಲಾಭಕರವಾಗುವ ಸಂಧಿಪ್ರಸ್ತಾಪಗಳು ಜನಾಂಗ ಸಭೆಯ ಮುಂದೆ ಬಂದಿವೆ

ಈ ರಾಜಿ ಸೂಚನೆಗಳಲ್ಲಿ ಇಟಲಿಯ ಜಯವು ಕೂಡಿಕೊಂಡಿರುತ್ತದೆ ಇನ್ನು ಕೆ ಸಮಯ ದಾಟಿದ ನಂತರ ಇಟಲಿಯು ಇದೇ ರೀತಿ ವರ್ತಿಸಿ, ಸಂಪೂರ್ಣ ಎಥಿಯೋಪಿಯಾವನ್ನು ತನ್ನ ಬದಿಗೆ ಸೇರಿಸಿಕೊಳ್ಳಲು ಆಸ್ಪದವು ಈ ಸಂಧಿಯಿಂದ ಒದಗುವುದು ಜನಾಂಗ ಸಭೆ ಹೋರ ಲಾವಲರ ಸೂಚನೆಗಳನ್ನನುಸರಿಸಿ ವರ್ತಿಸುವುದಾದರೆ, ಜನಾಂಗಸಭೆಯು ಒಂದು ನಿಷ್ಪ್ರಯೋಜನ ಸಂಸ್ಥೆಯಾಗುವುದು

ಯುದ್ಧದ ಈಗಿನ ಸ್ಥಿತಿ.

ಯುದ್ಧ ಪ್ರಾರಂಭವಾಗಿ ಇವತ್ತಿಗೆ ಎರಡು ತಿಂಗಳುಗಳಾದುವು. ಇಟಲಿಯಾನ ನಾಯಕತ್ವದಲ್ಲಿ ಬದಲಾವಣೆಯು ಆಗಿರುತ್ತದೆ. ಜನರಲ್ ದಿಬೋನೊರವರು ಸ್ವದೇಶಕ್ಕೆ ತೆರಳಿರುತ್ತಾರೆ. ಹೊಸ ನಾಯಕರಾದ ಮಾರ್ಶೆಲ್ ಬೊಡೊಗ್ಲಿಯೋರವರು ಅಧಿಕಾರದಲ್ಲಿರುತ್ತಾರೆ. ಇಟಲಿಯನರು ಈ ಯುದ್ಧ ಸಿದ್ಧತೆಗಳನ್ನು ಅನೇಕ ವರ್ಷಗಳಿಂದ ಮಾಡಿ ಬಂದಿರುತ್ತಾರೆಂದು ಈಗ ವ್ಯಕ್ತವಾಗುತ್ತದೆ. ಪ್ರಯಾಣಿಕರಿಂದಲೂ, ಗುಪ್ತಚಾರರಿಂದಲೂ ಮತ್ತು ತಮ್ಮ ಇತರ ಪ್ರತಿನಿಧಿಗಳಿಂದ ಎಥಿಯೋಪಿಯಾದ ಪರಿಚಯವನ್ನು ಸಂಪೂರ್ಣ ಮಾಡಿಕೊಂಡು, ಅದನ್ನು ಆಧರಿಸಿ ಈ ಯುದ್ಧದ ಪ್ಲೇನುಗಳನ್ನು ಮಾಡಿರುವರು ಎಲ್ಲಾ ಸಿದ್ಧತೆಗಳು ಯುದ್ಧ ಪ್ರಾರಂಭವಾಗುವ ಮೊದಲೆ ನಡೆದಿದ್ದವು

ಉತ್ತರ ದಿಕ್ಕಿನಿಂದ ಹತ್ತು ದಂಡುಗಳು ಆದಿಸ್ ಅಬಾಬದ ಕಡೆಗೆ ಅಭಿಕ್ರಮಿಸಬೇಕೆಂದೂ, ಎರಡು ದಂಡುಗಳು ಓಗಡೆನ್ ಪ್ರಾಂತ್ಯದಿಂದ ಧಾವಿಸಬೇಕೆಂದೂ ನಿರ್ಣಯಗಳಾಗಿದ್ದವು ಆದರೆ, ಸಂಬಂಧಪಟ್ಟ ಅಧಿಕಾರಿಗಳು ಈ ಯುದ್ಧದಲ್ಲುಂಟಾಗಬಹುದಾದ ಕಷ್ಟಗಳನ್ನು ಮುಂಚಿತವಾಗಿ ತಿಳಿದುದರಿಂದ ಈ ಯುದ್ಧ ಸಾಗಿಸುವುದು ಯುಕ್ತವಲ್ಲವೆಂದು ಮುಸಲೋನಿಯ ಕಡೆ ಹೇಳಿಕೊಂಡಿದ್ದರು

ಸಂಪೂರ್ಣ ಜಯಹೊಂದಬೇಕಾದರೆ ಸಾಧಾರಣ ೪ ಯಾ ೬ ವರ್ಷಗಳು ತಗಲಬಹುದೆಂದು ಇವರ ಅಂದಾಜು ಮಾಡಿದ್ದರು.

ಮಹತ್ವಾದ ಸೈನ್ಯ ಮಂಡಲದ ಉಪಯೋಗದ ಕುರಿತ ರೋಮಿನಲ್ಲಿ ಆಲೋಚನೆ ನಡೆದಿರಬಹುದು ಸೈನ್ಯ ಬಲವು ಮಹತ್ವಾದರೆ ಯುದ್ಧ ಸಿದ್ಧತೆ ಬೇಗನೇ ಪೂರೈಸದು ತುಂಬಾ ವೆಚ್ಚವು ತಗಲುವುದು ಯುದ್ಧರಂಗದ ಧೋರಣೆಯಲ್ಲಿ ಆತಂಕಗಳು ಒದಗುವುವು

ಆದರೆ, ಈ ಮೊದಲು ಯೋಗ್ಯವಾದ ಸೈನ್ಯಬಲವಿಲ್ಲದೆ ಯುದ್ಧಕಾರ್ಯವನ್ನು ನಡೆಸಿದ ಫಲ ಇಟಲಿಯಾನರು ತಿಳಿದೇ ಇರುವರು ವೈರಿಯ ಸೈನ್ಯದ ಅಂದಾಜ ಬಲವನ್ನು ಸರಿಯಾಗಿ ತಿಳಿಯದೆ ಪಾಶ್ಚಿಮಾತ್ಯದ ಇತರ ಜನಾಂಗಗಳ, ವಸಾಹತುಗಳಲ್ಲಿ ಯುದ್ಧ ನಡೆಯಿಸದ ಪರಿಣಾಮವು ಇಟಲಿಯಾನರಿಗೆ ತಿಳಿದುದರಿಂದ, ಈ ಬಾರಿ ಅಷ್ಟು ಸಿದ್ಧತೆಗಳನ್ನು ಮಾಡಲು ಕಾರಣ ಸೈನ್ಯ ಬಲದ ದಾಗಿ ಸೋಲು ಉಂಟಾಗುವ ಸಂಭವವೇ ಬರಲಿಕ್ಕಿಲ್ಲ

ಇಂತೆಲ್ಲಾ ನಿಯಮಗಳನ್ನನುಸರಿಸಿ, ಇಟಲಿಯಾನರು ತಮ್ಮ ಅಭಿಕ್ರಮದ ಒಂದು ಕಾರ್ಯಕ್ರಮವನ್ನು ತಯಾರಿಸಿ, ಅದಕ್ಕೆ ಸರಿಯಾಗಿ ತಮ್ಮ ಅಭಿಕ್ರಮವನ್ನು ನಡೆಸಿದರು ವೈರಿಗಳ ತಡೆಯು ಮಹತ್ತರವಾಗಿಲ್ಲ, ಆದರೆ ಅಭಿಕ್ರಮವು ಬಿರುಸಾಗಿ ನಡೆಯಲು ಸಾಧ್ಯವಾಗಲಿಲ್ಲ ಎಡೋವಾ ನಗರವನ್ನು ನಂತರ, ಮಕಾಲೆಯನ್ನು ಹಿಡಿಯಲು ಇಟಲಿಯಾನರಿಗೆ ಹೆಚ್ಚು ಸಮಯ ತಗಲಿತಲ್ಲದೆ, ಬಹು ಶ್ರಮಗಳನ್ನು ಅನುಭವಿಸಬೇಕಾಯಿತು. ಯೋಗ್ಯ ಮಾರ್ಗೋಪಾಯಗಳಿಲ್ಲದೆ ನೀರು ಆಹಾರ ಇತ್ಯಾದಿ ಸಿಕ್ಕದೆ ಇಟಲಿಯಾನರ ಇಷ್ಟು ದೂರ ಸರಿದುದು ಒಂದು ಮಹತ್ಕಾರ್ಯವೇ ಆಗಿರುತ್ತದೆ

ಆದರೆ, ಅದಿಸ್ ಅಬಾಬವನ್ನು ಸೇರಲು ಇನ್ನೂ ೫೦೦ ಮೈಲುಗಳಿವೆ ಈಗಿನ ಯುದ್ಧ ರೀತಿಯನ್ನು ಬದಲಾಯಿಸದಿದ್ದಲ್ಲಿ ಅದಿಸ್ ಅಬಾಬವನ್ನು ಸೇರಲು ಸಾಧಾರಣ ೩ ವರ್ಷಗಳು ತಗಲಬಹುದು.

ಅಲ್ಲಲ್ಲಿನ ಹಬಸಿ ನಾಯಕರನ್ನು ಸಂಪಾದಿಸಿ ತಮ್ಮ ಬದಿಗೆ ಸೆಳೆಯುವ ಪ್ರಯತ್ನ ಕಾರ್ಯವು ಯುದ್ಧದೊಂದಿಗೆ ನಡೆಯುವುದರಿಂದ ಯುದ್ಧವು ಇಷ್ಟು ಮೆಲ್ಲನೆ ಸಾಗಿದೆ ಎಂದು ಕೆಲವರ ಮಾತು. ಈ ವಿಚಾರದಲ್ಲಿ ಇಟಲಿಯಾನರು ಎಲ್ಲೆಲ್ಲೂ ಸಂಪೂರ್ಣ ಜಯ

(೭ನೇ ಪುಟಕ್ಕೆ ಮುಂದುವರಿಯುವುದು)

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗಿಳಿದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರಭೂ ಕಡಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ನಾತಕ್ಕೆ ಸ್ತ್ರೀರಬಲವೂ ಹುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಳಿಸು ಮಕ್ಕಳಾಗುತ್ತವೆ ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ ಬೆಲೆ ರೂ ೨ ಮಾತ್ರ.

೧೬.೧.೩ Bengal Mesmerism House
5-7 Panchpota, Bengal (s. s

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 2	3— 8
ಹೊಸ ಮುಸ್ತಿ	3—12	4— 2
ಗುಡ್ಡ ಸುಗ್ಗಿ	3— 6	3—14
ಊರ ಅವ್ವಲ್ ಬೆಳ್ತಿಗೆ	4—10	5— 0
ರಂಗೂನು ಬೆ. ಗೋ. ಅಕ್ಕಿ	6— 8	7— 0
ಎಲ್ಲೂರು ಬೆ ಮು ಅಕ್ಕಿ	4— 4	4— 8
ಗೋಧಿ ಗೋಣಿ ಅಕ್ಕಿ	10— 0	12— 8
ತೊಗರಿ ಗೋಣಿ ಅಕ್ಕಿ	10 —8	11— 0
ಹುರುಳಿ ಗೋಣಿ ಅಕ್ಕಿ	5— 8	6 — 2
ಕಡಲೆ ಗೋಣಿ ಅಕ್ಕಿ	7 — 8	10— 8
ಕೊಂಗಂಬೇಳೆ ಗೋಣಿ ಅಕ್ಕಿ	10— 0	17— 0
ಉದ್ದು ಗೋಣಿ ಅಕ್ಕಿ	9— 8	10 — 0
ಹೆಸರು ಗೋಣಿ ಅಕ್ಕಿ	9— 4	9—12
ಊರುಬೆಲ್ಲ ಒಂದಿ ಅಕ್ಕಿ	30—	35— 0
ಉಪ್ಪು ಗೋಣಿ ಅಕ್ಕಿ	4— 6	4— 4
ಮೆಣಸು ಒಂದಿ ಅಕ್ಕಿ	70— 0	75— 0
ಮೆಣಸು ಹಿಂಡಿ ಒಂದಿ ಅಕ್ಕಿ	28— 8	29— 0
ಎಳ್ಳೆಂಡಿ ಒಂದಿ ಅಕ್ಕಿ	30—10	36— 4
ಮೆಣಸು ಎಣ್ಣೆ ಮುಡಿ ಅಕ್ಕಿ	4 — 12	4 — 15
ಎಳ್ಳೆಣ್ಣೆ ಮುಡಿ ಅಕ್ಕಿ	5— 2	0 — 0
ಬಿಮಿನೆಣ್ಣೆ ಬಟ್ಟಿಗೆ ಅಕ್ಕಿ	5— 8	5—12
ಮಲೆಯ ಸಕ್ಕರೆ ಮು. ಅಕ್ಕಿ	3—7	3—10
ಮೆಣಸು	2— 8	3— 4
ಸಾಸಿವೆ ಮುಡಿ ಅಕ್ಕಿ	6 — 0	6—14
ಕಾಳುಮೆಣಸು ಖಂ. ಅಕ್ಕಿ	100— 0	105—
ಯೇಲಕ್ಕಿಬೀಜ ಮಣಂಗೆ	38— 0	38— 8
ಗೇರುಬೀಜ ಮು. ಅಕ್ಕಿ	4— 14	5 — 0
ಕಬ್ಬಿಣ ಖಂಡಿ ಅಕ್ಕಿ	40— 0	40— 8
ತಾಮ್ರತಗಡು ಮು. ಅಕ್ಕಿ	9— 12	10— 0
ತಾಮ್ರಪಾತ್ರಗಳು ಮ ಅಕ್ಕಿ	18— 0	14— 8
ಚಿಟ್ಟೆಬೆಳ್ಳಿ ಸೇರು ಅಕ್ಕಿ	16— 4	16— 8
ಹಿತ್ತಾಳೆ ತಗಡು ಮು. ಅಕ್ಕಿ	9— 0	9— 8
ಪಡವು ಅಕ್ಕಿ	22— 6	22— 8
ಹುಣಸೆ ಹುಳಿ ಖಂಡಿ ಅಕ್ಕಿ	20— 0	25— 8
ಪ್ಲೇಟಿವ್ ಕಾಫಿ ಖಂಡಿ ಅಕ್ಕಿ	150— 0	158— 8
ಫಿಬೇರಿ ಕಾಫಿ ಖಂಡಿ ಅಕ್ಕಿ	200— 0	205— 0
ಮಡಿಕೇರಿ ಏಲಕ್ಕಿ	25— 0	28 — 0
ಸಕಲೇಶಪುರ ಏಲಕ್ಕಿ	28— 0	30 — 0
ಹಳತು ಅಡಕೆ	100—0	110—0

ನೋಟೀಸು

ದಕ್ಷಿಣ ದಿಕ್ಕಿನಲ್ಲಿರುವ ಮಾರ್ಗ ನಂಬ್ರ 22ರ 17/1ನೇ ಮೈಲುಕಲ್ಲಿನ ಹತ್ತಿರವಿರುವ ಮಂಗಳೂರಿನಿಂದ ಚರ್ಮತ್ತೂರಿಗೆ ಹೋಗುವ ಸಂಕವು ರಿಪೇರಿಯಾಗುತ್ತಿರುವುದರಿಂದ ತಾರೀಕು 31-1-1936ರ ವರೆಗೆ ಅತ್ತಿಂದ ವಾಹನ ಸಂಚಾರವು ಬಂದು ಮಾಡಲ್ಪಟ್ಟಿದೆ

P S Barboza Esq, B A.
District Board Engineer
South Kanara

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 298, 1930
R E P 608/1930

ವಾದಿ-ವೆಂಕಟಾಚಲ ಭಟ್ಟ, ತಮ್ಮಯ್ಯ ಭಟ್ಟರ ಮಗ ಬೀಜಾಡಿ ಗ್ರಾಮದ ಹುದ್ರಾಳಿಯಲ್ಲಿರುವವ

ಪ್ರತಿವಾದಿರು

1ನೇ ಪ್ರತಿವಾದಿ ಅಬ್ದುಲ್ಲ ರಹಿಮಾನ್ ಸಾಹೇಬ ಯಾನೆ ಉಮ್ಮರ ಸಾಹೇಬ, ಕಾದಿರ ಸಾಹೇಬನ ಮಗ, ಕೆಸರ್ಕೋಟೇಶ್ವರ ಗ್ರಾಮದ ಬಡಾಕೆರೆಯಲ್ಲಿರುವವ

ವಾದಿಯು ಪ್ರತಿವಾದಿರ ಮೂಲಗೇಣಿ ಹಕ್ಕಿನ ಸ್ಥಿರಆಸ್ತಿಗಳನ್ನು ಏಲಂ ಬಗ್ಗೆ ಅಸೇಕ್ಷಿಸಿ ಏಲಂ ಇಸ್ತಿಹಾರು ಹಾಜ್ರುಪಡಿಸಿರುತ್ತಾನೆ ಆ ಏಲಂ ಇಸ್ತಿಹಾರು ಕುರಿತು ಆಕ್ಷೇಪ ಯಿದ್ದರೆ ತಾ 18-12-1935ಕ್ಕೆ ಹಾಜ್ರುಪಡಿಸತಕ್ಕದ್ದು, ಇಲ್ಲದಿದ್ದರೆ ಸದ್ರಿ ಅಮಲ್ದಾರಿಯ ಪ್ರಾರ್ಥನೆ ಮುಂದರಿಸಲಾದೀತು

ಮೊಕ್ಕಾಂ ಕುಂದಾಪುರ 12-12-1935 } K Narayana Shenoi ಅರ್ಜಿದಾರನ ಕಡೆ ವಕೀಲ

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ.

Shiromani Narayanacharya & Co.,
Silk Lace & Cloth Manufacturers
Choukhamba Benares City

WISHES HE HAD
THIS MAN

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಶೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದ ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು—ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು— ಅದರ ಕ್ರಯವೆಷ್ಟು?"

ಆನಂದರಾಯರು ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ ಅಂಚು ಸೆರಗುಳ್ಳ ಶೀರೆಗಳು ಸುಮಾರು 18 ಮೊಳ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪಡಲು ಬುಟ್ಟಿ ಇರುವುದು 1½ ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪಡಲು ಸದ ಶೀರೆ 1ಕ್ಕೆ ರೂ. 10ರಿಂದ 55ರ ವರೆಗೆ, ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಕರವಸ್ತ್ರ 1ಕ್ಕೆ ರೂ 7ರಿಂದ 10ರ ವರೆಗೆ 8 ಮೊಳದ ಜರಿ ಮುಂಡು 1ಕ್ಕೆ ರೂ 10ರಿಂದ 35ರ ವರೆಗೆ 5 ಮೊಳದ ಶಾಲು 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಟಾಂಬರ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯಲ್ಲಾ ಕೆಲವು ಮಾಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ಕ್ಷೇತ್ರ ಪಟ್ಟಿ ಕೆಟಲಾಗಿನೊಂದಿಗೆ ಕಳುಹಿಸುವೆವು ಇಂದೇ ವಿಳಾಸಕ್ಕೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ ಚೌಖಂಬಾ ಬೆನಾರೆಸ್

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men Graduates Under graduates and S S L C and also for those who have not passed any University examination

Coaches students for the Specialised Banking Courses (C A I B, & C A I I B and also for Accountancy, Secretarial, and Insurance Courses (L A A, A C R A, F C R A, F I S A, A C I I etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,
Dip Econ, F R Econ, S (Lond)
Principal
Ganapathy High School Street,
Mangalore

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾರ್ಗಶಿರ ಬ. ೧೧ ಶನಿವಾರದಿಂದ ಪುಷ್ಯ ಶು. ೨ ಶುಕ್ರವಾರದ ವರೆಗಿನ ಪಂಚಾಂಗ (೧೮೫೭ನೇಯ ಧನು ಪೆರಾರ್ದೆ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
21	ಶನಿ	೧೧	೪೧	ಸ್ವಾತೀ	೫೧	೬	ಸ್ವಫಲೈಕಾದಶಿ *
22	ರವಿ	೧೨	೪೩	ವಿಶಾಖಾ	೫೫	೭	
23	ಸೋಮ	೧೩	೪೫	ಅನುರಾಧಾ	೫೭	೮	
24	ಮಂಗಳ	೧೪	೪೫	ಜ್ಯೇಷ್ಠ	೫೯	೯	
25	* ಬುಧ	೩೦	೪೪	ಮೂಲಾ	೫೯	೧೦	
26	ಗುರು	೧	೪೨	ಪೂ. ಷಾಢ	೫೮	೧೧	
27	ಶುಕ್ರ	೨	೩೯	ಉ. ಷಾಢ	೫೬	೧೨	

(ಕಳೆದ ಪುಟದಿಂದ ಮುಂದುವರಿದುದು)

ಶಾಲಿಗಳಾಗಿದ್ದಾರೆ. ಇದರಿಂದ ಅವಘಡಗಳು ಕಡಿಮೆಯಾದವು (ಹೆಚ್ಚಿನ ಅವಘಡಗಳಿಗೆ ಇಟೇಲಿಯಾನ ಅಧಿಕಾರದಲ್ಲಿರುವ ದೇಶೀಯ ಸೈನಿಕರೆ ಕುತ್ತಾಗಿರುವರು) ಹಬಸಿಗಳು, ಬಹಳ ವಿಜೃಂಭಣೆಯಿಂದ ಇವರನ್ನು ಸ್ವಾಗತೀಕರಿಸಿದ್ದಾರೆ.

ಆದರಿಂದ ಸಂಧಿಪ್ರಸ್ತಾಪದ ಸಮಯದಲ್ಲಿ ಇಟೇಲಿಯಾನರು ಮೇಲಿನ ರೀತಿ ಯುದ್ಧವಿಲ್ಲದೆ ಶಾಂತತೆಯಲ್ಲಿ ಪಡೆದ ಪ್ರಾಂತ್ಯಗಳನ್ನು ಬಿಟ್ಟುಕೊಡಲು ಒಪ್ಪಲಾರರು. ಇಲ್ಲಿನ ನಿವಾಸಿಗಳು ಇಟೇಲಿಯಾನ ಪ್ರಜೆಗಳಾಗಬೇಕಾಗಿ ಹಂಬಲಿಸುತ್ತಿದ್ದಾರೆ.

ಇಟೇಲಿಯಾನರು ನವಂಬರ ೮ನೇ ಓರಲ್ಲಿ ಮಕಾಲೆಯನ್ನು ಹಿಡಿದರು ಇಲ್ಲಿಂದ ಕೆಂಬಿಯಮ್ ಪ್ರದೇಶವನ್ನು ಹಿಡಿಯಲು ಅವರ ಭಾರಿ ಪ್ರಯಾಸಪಡಬೇಕಾಗಿದೆ ಕಾರಣ, ವೈರಿಗಳು, ಈ ಕಠಿಣ ಪ್ರದೇಶದಲ್ಲಿ ಇವರನ್ನು ವಾರೆಗಟ್ಟಲೆ ಹಿಂದಿಡುವ ಸಂಭವಗಳಿವೆ

ಓಗಡನ್ ಪ್ರಾಂತ್ಯದಲ್ಲಿ ಜನರಲ್ ಗ್ರೆಜಿಯಾನಿಯವರು, ಬರೀ ಎರಡು ತಂಡಗಳಿಂದ ಏನು ಮಾಡಬಲ್ಲರು. ಸಾಧಾರಣ ೪೦೦ ಮೈಲು ಮರುಳು, ಗುಡ್ಡ, ಅರಣ್ಯ, ನಿರ್ಜನ ಪ್ರದೇಶವನ್ನು ದಾಟಬೇಕಾಗಿದೆ ನೀರಿನ ತೃಷೆ, ಸಾಂಕ್ರಾಮಿಕ ರೋಗಗಳೂ ಇವರನ್ನು ಪೀಡಿಸುತ್ತಿವೆ ಆದುದರಿಂದ ಇವರು ಅಂತರಿಕ್ಷದ ಆಕ್ರಮವನ್ನೆ ಉಪಯೋಗ ಮಾಡಿರುವರು ಇತ್ತ ಕಡೆ, ಇಟೇಲಿಯಾನರು ಸಾಧಾರಣ ೧೨೦ ಮೈಲು ಮುಂದ ವರಿಗಿರುತ್ತಾರೆ

ಮುಂದಕ್ಕಿರುವ ಸಾಸಾಬೆನ್ಸಾ ಮತ್ತು ಜಿಜಿಗಾ ನಗರಗಳನ್ನು ಸೇರಿದೊಡನೆ, ಯುದ್ಧವನ್ನೊಡ್ಡಲು ಸಿದ್ಧರಿರುವ ಹಬಸಿಗಳಿಂದ ಇವರ ಪ್ರಯಾಸವು ಇನ್ನೂ ಅಧಿಕವಾಗುವಂತಿದೆ ಈ ಕಡೆಯಲ್ಲಿ ಇಟಲಿಯಾನರಿಗೆ ಸಂಕಲ್ಪವು ಫಲಿಸುವುದರಲ್ಲಿ ತುಂಬಾ ಸಂದೇಹಗಳಿವೆ

ಹಬಸಿಯವರ ಮಹಾ ದಂಡೊಂದು ಡೆಸ್ಸಿಯಲ್ಲಿ, ಇನ್ನೊಂದು ಮಹಾ ದಂಡು ಹರಾರದಲ್ಲಿ ಶೇಖರಿಸಿದ್ದಾರೆಂಬ ವಾರ್ತೆಯಲ್ಲದೆ, ಅವರ ಇನ್ನಿತರ ಸೈನ್ಯದಳಗಳ ವಾರ್ತೆಯು ಬಂದಿಲ್ಲ ಕೆಲವು ಕಡೆಗಳಲ್ಲಿ ಚಿಕ್ಕ ಪುಟ್ಟ ಪಾಳೆಯಗಳು ಅಲ್ಲಲ್ಲಿ ಅವಿತಿದ್ದು, ಇಟಲಿಯಾನರನ್ನು ಪೀಡಿಸುವ ವಾರ್ತೆಗಳು ಮಾತ್ರ ಬರುತ್ತಿವೆ ಚಕ್ರವರ್ತಿಯವರು ಡೆಸ್ಸಿಯಲ್ಲಿ ಯುದ್ಧಕಾರ್ಯದಲ್ಲಿ ನಿರತರಾಗಿತ್ತಾರೆ ಹಬಸಿಯವರ ಸೈನ್ಯಬಲವು ಅತಿ ಅಘಾದವಾಗಿದ್ದರೂ ಅದು ಫಲಕಾರಿಯಾಗಿ ಯುದ್ಧಮಾಡುವುದು ಎಂದು ಭಾವಿಸಲು ಆಸ್ಪದ ಕೊಡುವುದಿಲ್ಲ ಯಾವತ್ತೂ ನವೀನ ಯುದ್ಧಕಾರ್ಯಗಳು ಇವರು ತಿಳಿಯರು

ಆದುದರಿಂದ ಈ ಯುದ್ಧಕಾರ್ಯಗಳ ಭವಿಷ್ಯ ಹೇಗಿರುವುದು? ಮುಸಲೇನಿಯು ತನ್ನ ಸಂಗ್ರಾಮಾಧಿಕಾರಿಗಳ ಬುದ್ಧಿಮಾತುಗಳನ್ನನುಸರಿಸಿ, ಉದ್ದವಾದ ಯುದ್ಧಕ್ಕೆ ಸಿದ್ಧತೆಗಳನ್ನು ಮಾಡಿದುದು ಸರಿ ಜನಾಂಗಸಭೆಯು ಹಬಸಿಯವರನ್ನು ಆಧರಿಸುವುದೆಂದು ಈತನು ಕ್ಷಣಮಾತ್ರಕ್ಕೂ ಭಾವಿಸಿದ್ದಿಲ್ಲ ಜಪಾನೀಯರು ಮೆಂಚೂರಿಯಾವನ್ನು ನುಂಗುವ ಸಮಯದಲ್ಲಿ ಜನಾಂಗಸಭೆಯು ಮೌನವಾಗಿತ್ತು. ಅಂತೆಯೆ, ಈ ಕಡೆಯಿಂದ ತನಗೆ ಯಾವತ್ತೂ ಅಡ್ಡಿಗಳು ಬರುವುದಿಲ್ಲವೆಂದು ನಿರೀಕ್ಷಿಸಿ, ಮುಸಲೇನಿಯು ಈ ಯುದ್ಧದಲ್ಲಿ ಕೈಮಾಡಿದನು, ಮತ್ತು ಫ್ರಾನ್ಸಿನ ಲಾವಲರು ಆತನಿಗೆ ಕೆಲವು ವಚನಗಳನ್ನು ಕೊಟ್ಟಿದ್ದರು

ಸೆಂಕ್ಷನುಗಳು ಜ್ಯಾರಿಗೆ ಬಂದುದರಿಂದ ಶಾಂತರೀತಿಯಲ್ಲಿ ನಡೆಯುತ್ತಿರುವ ಯುದ್ಧಕಾರ್ಯವನ್ನು ಬಿರುಸಾಗಿ ನಡೆಯಿಸಬೇಕಾಗಿದೆ. ಅಡಿಸ್ ಅಬಾಬದ ಕಡೆಗೆ ಮಾರ್ಗೋಪಾಯಗಳನ್ನು ರಚಿಸುತ್ತಾ ಮೆಲ್ಲನೆ ಸಾಗುವುದು ಈಗ ಸಾಧ್ಯವಲ್ಲ ಆದುದರಿಂದ ಇಟಲಿಯ ಸಂಗ್ರಾಮತೂರರಾದ ಮಾರ್ಶೆಲ್ ಬೊಡೊಗ್ಲಿಯೊರವರಿಗೆ ಯುದ್ಧವನ್ನು ಬಿರುಸಾಗಿ ನಡೆಯಿಸುವ ಒಂದು ಉಪಾಯವನ್ನು ಮಾಡಲು ಅಪ್ಪಣೆಗಳಾಗಿವೆ. ಅವುಗಳು ಯಾವುವೆಂದು ಯಾರಿಗೂ ತಿಳಿಯದು. ಮಾರ್ಶೆಲ್ ಬೊಡೊಗ್ಲಿಯೊರವರು ಈಗ ಕಾರ್ಯ ನಡೆಯಿಸುತಿದ್ದಾರೆ. ಇನ್ನು ನಾಲ್ಕು ತಿಂಗಳ ಸಮಯದೊಳಗೆ, ಇಟಲಿಯಾನರು ತಮ್ಮ ಕಾರ್ಯವನ್ನು ಮುಗಿಸುವವರಾಗಬೇಕು ನಂತರ ನಾಲ್ಕು ತಿಂಗಳ ಸಮಯ ಅತಿರೇಕ ಮಳೆಯು ಸುರಿಯುವುದು ಈ ಸಮಯದಲ್ಲಿ ಸೈನಿಕರಿಗೆ ಧಾರಾಳ ನಿಲ್ದಾಣಗಳಾಗಬೇಕು ಮಳೆಗಾಲದ ಯೋಗ್ಯ ಮಾರ್ಗೋಪಾಯಗಳಾಗಬೇಕು ಸೆಂಕ್ಷನುಗಳಿಂದ ಬರಿದಾಗುತ್ತಿರುವಾಗ ಸುಮ್ಮನೆ ಕೂತುಕೊಳ್ಳುವವರಾಗಬೇಕೇ ಒಂದು ವೇಳೆ, ಎಪ್ರಿಲ್ ತಿಂಗಳಲ್ಲಿ ಜನಾಂಗ ಸಭೆಯ ಜೊತೆಗೆ ತತ್ಕಾಲಕ್ಕೆ ಇವರು ಕೆಲವು ಒಪ್ಪಂದಗಳನ್ನು ಮಾಡಿದರೆ, ಆಗ್ಗೆ ಇವರ ಗತಿಯು ಬದಲಾಗಬಹುದು

ಎಬಿಸೀನಿಯಾದವರ ಕಡೆಯಲ್ಲಿ, ಪ್ರಾಂತಿಕ ನಾಯಕರಲ್ಲಿ ತುಂಬಾ ಅಸಮಾಧಾನವಿರುವುದರಿಂದ ಇವರು ಇಟಲಿಗೆಸೇರುವ ಸಂಭವಗಳಿವೆ ತುಪಾಕಿ ಇತ್ಯಾದಿ ಯುದ್ಧ ಸಾಮಗ್ರಿಗಳು ಇವರಲ್ಲಿ ಕಡಿಮೆಯಾಗಿರುವುದರಿಂದಲೂ ಇವರೂ ಬೇಗನೆ ಇಟಲಿಗೆ ಬಗ್ಗಬೇಕಾಗುವುದೋ ಏನೋ?

ಶಾಂತಸಾಗರದಲ್ಲಿ ಅಮೇರಿಕಾನರಿಗ ಪ್ರಸಿದ್ಧಿಯು ದೊರಕುವುದೆ?

ಅಮೇರಿಕಾನರು ಜಪಾನು-ಚೀನಾ ಕಲಹದಲ್ಲಿ ಭಾಗವಹಿಸುವುದರಲ್ಲಿ ಜಪಾನೀಯರಿಗೆ ಸಮ್ಮತವಿಲ್ಲ

ವಿವಿಧ ಜನಾಂಗಗಳ ನೌಕಾ ಪರಿಷತ್ತು ಅನೇಕ ದಿನಗಳಿಂದ ನಡೆದು, ಕೆಲವು ನಿರ್ಧಾರಗಳಿಗೆ ಬಂದಿರುತ್ತದೆ "ಎಲ್ಲಾ ಜನಾಂಗಗಳ ನೌಕಾಬಲವು-ಒಬ್ಬರನ್ನೊಬ್ಬರು ಹೊಡೆಯದ ಹಾಗೆ ನಿರ್ಧರಿಸಿ, ಜನಾಂಗಗಳ ನೌಕಾವೆಚ್ಚವು ಕಡಿಮೆಯಾಗುವಂತಾಗಬೇಕೆ"ಂದು ಜಪಾನೀನವರ ಮಾತು 'ತಮಗೂ ಬ್ರಿಟಿಷ ಮತ್ತು ಅಮೇರಿಕಾನರಿಗೂ ನೌಕಾಬಲದಲ್ಲಿ ಸರಿಸಮಾನತ್ವವಿರಬೇಕೆಂದು ಇವರು ತಿಳಿಸಿರುವರು ಅಮೇರಿಕಾನರಿಗೆ ಶಾಂತಸಾಗರದಲ್ಲಿ ನೌಕಾಬಲವನ್ನು ಹೆಚ್ಚಿಸಲು ಸಾಧ್ಯವಾಗಬೇಕೆಂದು ಸಾಧಿಸುತ್ತಿದ್ದಾರೆ ಚೀನಾದಲ್ಲಿ ತಾವು ಕೈಕೊಂಡ ಕಾರ್ಯದಲ್ಲಿ (ಚೀನಾವನ್ನು ವಶೀಕರಿಸುವ) ತಮಗೆ ಇದರಿಂದ ಅತಂಕಗಳು ಬರುವುವೆಂದು ಜಪಾನೀಯರು ಇದಕ್ಕೆ ಸಮ್ಮತಿಸುವುದಿಲ್ಲ ಮುಂದಿನಅಧಿವೇಶನವು ಗುಪ್ತವಾಗಿ ನಡೆಯುವುವು

ಎಲ್ಲರೂ ಖಾದಿಯನ್ನು ಧರಿಸಿರಿ

"ನಮ್ಮಲ್ಲಿನ ಹಳ್ಳಿಗಳಲ್ಲಿರುವ ಅಸ್ಥಿಪಂಜರಗಳನ್ನು ನೋಡಿದವರು, ಖಾದಿಯನ್ನು ಪಡೆಕೊಂಡು ಬಡತನದಿಂದ ನರಳುವ ನಮ್ಮ ಅಸಂಖ್ಯಾತ ಹಳ್ಳಿಗರಿಗೆ ದಿನಪಡಿಯು ದೊರಕುವಂತೆ ಮಾಡಬಹುದು ಖಾದಿಯು ದೇಶಪ್ರೇಮದ ಕುರುಹಾಗಿರುತ್ತದೆ ಖಾದಿಯನ್ನು ಧರಿಸಿದರೆ ನಿಮಗೆ ತೇಜಸ್ಸೂ ಕಾಂತಿಯೂ ಬರುವುದು ಕೈಯಿಂದ ತಯಾರಿಸುವ ವಸ್ತ್ರಗಳಿಗೆ ಬಹೀರ್ ದೇಶಗಳಲ್ಲಿ ಬೆಲೆ ಹೆಚ್ಚು ಅದನ್ನು ತುಂಬಾ ಜನರು ಪಡಕೊಳ್ಳುತ್ತಿದ್ದಾರೆ ಅಂತೆಯೆ ಭಾರತೀಯರು ಖಾದಿಗೆ ಪ್ರೋತ್ಸಾಹ ಕೊಡತಕ್ಕದು

"ಖಾದಿ ಚಳವಳವು ಮಹಾತ್ಮಾ ಗಾಂಧಿಯವರಿಂದ ಪ್ರಾರಂಭವಾದುದಾಗಿರುತ್ತದೆ. ಖಾದಿ ವ್ಯವಸಾಯವು ತನ್ನಷ್ಟಕ್ಕೆ ನಡೆಯುವಂತೆಯೂ, ನೂಲುವವರ ಮಜೂರಿಯನ್ನು ದಿನಕ್ಕೆ ೩ ಆಣೆಗಳಿಗೆ ಏರಿಸುವಂತೆಯೂ ಮಹಾತ್ಮಾಜೀಯವರು ಈಗ ಶ್ರಮಪಡುತ್ತಿದ್ದಾರೆ

"ಸ್ವದೇಶಿ ಎಂಬುದು ಪ್ರತಿಯೋರ್ವ ದೇಶಪ್ರೇಮಿಯ ಮತವಾಗಿರತಕ್ಕದು ಪಾಶ್ಚಾತ್ಯ ಮತ್ತು ಜಾಪಾನು ದೇಶಗಳಲ್ಲಿ ಸ್ವದೇಶಿ ವಸ್ತುಗಳನ್ನೆ ಮಾತ್ರ ಉಪಯೋಗಿಸುತ್ತಾರೆ ಮಾತ್ರವಲ್ಲದೆ, ಅವುಗಳನ್ನು ಹೊರಗಣ ದೇಶಗಳಿಗೆ ಕಳುಹಿಸಿಕೊಡುತ್ತಿದ್ದಾರೆ ಸ್ವದೇಶಿಗೂ ಖಾದಿಗೂ ಖಾಲಿ ಪ್ರೋತ್ಸಾಹವು ಸಿಕ್ಕಿದರೆ ಸಾಲದು ಸ್ವದೇಶಿ ಪ್ರಚಾರವು ಕಾರ್ಯದಲ್ಲಿ ಸಾಗತಕ್ಕದು ಭರತಖಂಡದಲ್ಲಿ ಸ್ವದೇಶಿ ಪ್ರಚಾರವು ಯಶಸ್ವಿಯಾಗಿ ನಡೆದರೆ ನಮಗೆ ಸಾಂಪತ್ತಿಕ ಸ್ವರಾಜ್ಯ ಸಿಕ್ಕಿದಂತಾಗುವುದು" ಎಂದು ಶ್ರೀ ಸತ್ಯಮೂರ್ತಿಗಳವರು, ಮದ್ರಾಸಿನಲ್ಲಿ ಜರಗಿದ ಅಖಿಲಭಾರತ ಖಾದಿ ಮತ್ತು ಸ್ವದೇಶಿ ಪ್ರದರ್ಶನ ಪ್ರಾರಂಭೋತ್ಸವದಲ್ಲಿ ಭಾವಪೂರ್ವಕ ಭಾಷಣ ಮಾಡಿದರು

"ಒಂದು ದೇಶದ ರಾಜಕೀಯ ಸುಧಾರಣೆಯಾಗಬೇಕಾದರೆ, ಆದರ ಸಾಂಪತ್ತಿಕ ಅಭ್ಯುದಯವಾಗತಕ್ಕದು"

ನಮ್ಮ ದೇಶವು ಬಡಸ್ತಿಕೆಯಲ್ಲಿ ನರಳುತ್ತಿದೆ ನಮ್ಮಲ್ಲಿ ಹೆಚ್ಚು ಕೈಗಾರಿಕೆಗಳ ನಡೆಯುವುದಿಲ್ಲ ಸಾಗುವಳಿಯೆ ನಮ್ಮ ಮುಖ್ಯ ಉದ್ಯಮವು ಕೆಲವು ಕೈಗಾರಿಕೆಗಳು ನಮ್ಮಲ್ಲಿ ಪ್ರಾರಂಭವಾಗಿವೆ ಆದರೆ ಇಷ್ಟರ ತನಕ ಅಷ್ಟು ಯಶಸ್ವತೆಯನ್ನು ಪಡೆಯಲಿಲ್ಲ ಇನ್ನೂ ಅನೇಕ ಕೈಗಾರಿಕೆಗಳು ನಮ್ಮಲ್ಲಿ ಸ್ಥಾಪನೆಯಾಗತಕ್ಕದು ಸ್ವದೇಶದ ಕಡೆಗೆ ಭಾರತೀಯರು ಹೆಚ್ಚಿನ ಗಮನಕೊಟ್ಟರೆ, ನಮ್ಮ ಹಳ್ಳಿಗಳ ಪ್ರಾಚೀನ ಸಣ್ಣ ಕೈಗಾರಿಕೆಗಳು ಜೀವ ಹೊಂದುವವು. ಅಸಂಖ್ಯಾತ ಜನರಿಗೆ ಅನ್ನ ದೊರಕುವುದು ದೇಶಹಿತಕ್ಕಾಗಿ ಸ್ವದೇಶಿ ಸಾಮಾನುಗಳನ್ನೆ ಉಪಯೋಗಿಸುವುದು ಪಾಶ್ಚಾತ್ಯ ಮತ್ತು ಇತರ ಬಹೀರ್ ದೇಶಗಳ ಕ್ರಮವಾಗಿರುತ್ತದೆ ದೇಶದ ಸಾಂಪತ್ತಿಕ ಅಭ್ಯುದಯವಾಗಬೇಕಾದರೆ ಸ್ವದೇಶಿ ಪ್ರಚಾರವಾಗತಕ್ಕದು

ಹಿಂದೂದೇಶಕ್ಕೆ ಆದರ ಸಾಂಪತ್ತಿಕ ಮತ್ತು ಆರ್ಥಿಕ ವಿಚಾರಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯವು ಸಿಕ್ಕತಕ್ಕದು ನಮ್ಮ ರಾಷ್ಟ್ರೀಯ ಧುರೀಣರು ಸಾಂಪತ್ತಿಕ ಸ್ವರಾಜ್ಯವನ್ನು ಮುಖ್ಯ ಧ್ಯೇಯವಾಗಿಟ್ಟು, ಅವರ ಮುಂದಿನ ಕಾರ್ಯಗಳನ್ನು ಮಾಡತಕ್ಕದು ' ಎಂದು ಶ್ರೀ ಮಹಮ್ಮದ ಜಮಾಲರು, ಪ್ರದರ್ಶನದ ತೆರೆಯೋಣೋತ್ಸವವನ್ನು ಮಾಡುವ ಸಮಯ ಕೊಟ್ಟ ಭಾಷಣದ ಸಾರಾಂಶ

ನವರಾಜಶಾಸನವು ಖಂಡಿಸಲ್ಪಟ್ಟಿತು.

ಲಿಬರಲ್ ಪಕ್ಷದ ನಾಯಕರಾದ ಪಂಡಿತ ಕುಂಜ್ರೂರವರು, ಈಗಿನ ಸಮಯದ ಮೇಲೆ ಭಾಷಣಮಾಡುತ್ತಿರುವಾಗ, ನವರಾಜ ಶಾಸನವನ್ನು ಕುರಿತು ಹೀಗೆಂದರು 'ನವರಾಜ ಶಾಸನದಲ್ಲಿ ವೈಸರಾಯರಿಗೂ, ಗವರ್ನರರಿಗೂ ಸ್ವೇಚ್ಛಾಪರವಾಗಿ ವರ್ತಿಸುವ ಹಕ್ಕುಗಳಿವೆ ಅವುಗಳನ್ನು ಅವರು ಯಾವ ಸಂದರ್ಭದಲ್ಲೂ ಉಪಯೋಗಿಸಬಹುದು ಇದರಿಂದ ಜನಾಂಗದ ಅಭಿವೃದ್ಧಿಯನ್ನು ಸಾಧಿಸುವ ಕೆಲವು ಪ್ರಸಿದ್ಧ ಪುರುಷರು ಭೀತರಾಗಿರುತ್ತಾರೆ

"ಕೋಮುವಾರು ಎವಾರ್ಡಿನಿಂದ, ವಿವಿಧ ಜಾತಿಗಳಲ್ಲಿ ಪರಸ್ಪರ ಐಕ್ಯ ಉಂಟಾಗುವ ಬದಲಾಗಿ ವೈಮನಸ್ಯವೆ ಉಂಟಾಗುವುದೆಂದೂ, ಬಂಗಾಳದ ಸದಸ್ಯ ಸ್ಥಾನಗಳ ಹಂಚುವಿಕೆಯೂ ನೇಶನಲಿಸ್ಟ ಪಕ್ಷದವರಿಗೆ ಯೋಗ್ಯ ಸ್ಥಳ ದೊರಕದ ರೀತಿ ನಿರ್ಣಯವಾಗಿರುತ್ತದೆ ಮುಸ್ಲಿಮರಿಗೂ, ಹಿಂದೂಗಳಿಗೂ ಅಷ್ಟು ಅಧಿಕಾರ ದೊರಕದೆ,ಸರಕಾರದ ಧೋರಣೆಯು ಯುರೋಪಿಯಾನ ಸದಸ್ಯರ ಕೈಯಲ್ಲಿರುವುದು'

'ಬಂಗಾಳಿಗಳು ಐಕ್ಯದಲ್ಲಿ ಕಾರ್ಯವನ್ನು ಸಾಧಿಸತಕ್ಕದು' ಎಂದ ಕುಂಜ್ರೂರವರು ಬೋಧಿಸಿದರು

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಒಳ್ಳೆ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು—ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು! . ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.



ಜಂಜಿಭಾರಿನ ಭಾರತೀಯರ ಸ್ಥಿತಿ.

ಯನ್ನು ಇಂಡಿಯಾ ಸರಕಾರಕ್ಕೆ ತಿಳಿಸುವಂತೆ ಒಂದು ಪ್ರಾತಿನಿಧ್ಯ ಮಂಡಳವು ಹಿಂದೂದೇಶಕ್ಕೆ ಬೇಗನೆ ಬರಲಿದೆ ಮಿ। ರಾಮ್ಸೆ ಮೆಕ್‌ಡೊನಾಲ್ಡರ ಪುತ್ರ ಮಿ। ಮಾಲ್ಕೋಮ ಮೆಕ್‌ಡೊನಾಲ್ಡರು, ವಸಾಹತುಗಳು ಕಾರ್ಯದರ್ಶಿಗಳಾಗಿರುವಾಗ ಭಾರತೀಯ ವಿಚಾರಗಳಿಗೆ ಯೋಗ್ಯ ಮನ್ನಣೆಯು ದೊರಕುತ್ತಿತ್ತು ಈಗಿನ ವಸಾಹತುಗಳ ಕಾರ್ಯದರ್ಶಿಗಳಾದ ಜೆ ಜೆ ತೋಮಸರೂ, ವಸಾಹತುಗಳ ಆಂಗ್ಲೇಯ ನಿವಾಸಿಗಳ ಹಿತವನ್ನು ಮಾತ್ರ ಕೈಕೊಂಡಂತೆ ಕಾರ್ಯ ಸಾಧಿಸುತ್ತಿದ್ದಾರೆ ಆಫ್ರಿಕಾ ಖಂಡದ ಹಲವು ಬ್ರಿಟಿಷ ವಸಾಹತುಗಳಲ್ಲಿರುವ ಭಾರತೀಯರನ್ನು ಹೊರದೂಡುವ ಅನೇಕ ಹೊಸ ಕ್ರಮ ಕಾನೂನುಗಳು ಜಾರಿಗೆ ಬಂದಿವೆ ಭಾರತೀಯರು ಇಷ್ಟರತನಕ ಶ್ರಮಪಟ್ಟು, ಸ್ಥಾಪಿಸಿದ ವ್ಯಾಪಾರ ಇತ್ಯಾದಿ ಸಂಸ್ಥೆಗಳು ಇವತ್ತಿಗೆ ನಿರ್ನಾಮವಾಗಬೇಕಾಗಿದೆ ಜಂಜಿಭಾರಿನಲ್ಲಿ ಹಲವು ಭಾರತೀಯರು ಲವಂಗದ ವ್ಯಾಪಾರವನ್ನು ನಡೆಯಿಸುತ್ತಿದ್ದರು ಆದರೆ ಲವಂಗ ವ್ಯಾಪಾರದ ಕುರಿತು ಜಾರಿಗೆ ಬಂದ ಹೊಸ ಕಾನೂನುಗಳಿಂದಾಗಿ, ಭಾರತೀಯರು ಈ ವ್ಯಾಪಾರವನ್ನು ತ್ಯಜಿಸಬೇಕಾಗಿದೆ ಇಂಡಿಯಾ ಸರಕಾರವು ಅತ್ತಕಡೆಯಿಂದ ಬರುವ ಈ ಪ್ರಾತಿನಿಧ್ಯ ಮಂಡಳವನ್ನು ಅಹ್ವಾನಿಸಿ, ಅವರಿಂದ ನಿಜವಾದ ಸ್ಥಿತಿಗಳನ್ನು ತಿಳಿದು, ಅಲ್ಲಿನ ವಿವಿಧ ಸರಕಾರಗಳೊಡನೆ ಭಾರತೀಯರನ್ನು ರಕ್ಷಿಸುವ ಏರ್ಪಾಡುಗಳನ್ನು ಮಾಡತಕ್ಕದು

ಮಲೆಯಾ ದ್ವೀಪಗಳಿಗೆ ಹೋಗುವ ಮಜೂರರ ಗತಿ.

ಹಿಂದೂದೇಶದಿಂದ ಮಲೆಯಾ ದ್ವೀಪದ ರಬ್ಬರ ಕಾಫಿ ಇತ್ಯಾದಿ ತೋಟಗಳಲ್ಲಿ ಕೆಲಸ ಮಾಡಲು ಧಾರಳ ಮಜೂರರು ಪ್ರತಿ ವರ್ಷವೂ ಹೋಗುತ್ತಿದ್ದಾರೆ. ಇಲ್ಲಿ ಅವರು ಅನೇಕ ವರ್ಷ ಉದ್ಯೋಗವನ್ನು ಮಾಡಿ ದಣಿದಬಳಿಕ, ಅವರನ್ನು ಪುನಃ ಹಿಂದೂದೇಶಕ್ಕೆ ಕಳುಹಿಸಿ ಕೊಡುತ್ತಾರೆ ಅವರ ಹಲವು ವರ್ಷಗಳ ಪರಿಶ್ರಮಗಳಿಗೆ ಇದೂ ತಕ್ಕ ಬಹುಮಾನವೊ? ಅಲ್ಲಿಗೆ ಹೋದ ಭಾರತೀಯ ಮಜೂರರಿಗೆ ಯೋಗ್ಯ ಭೂಮಿಗಳನ್ನು ಕೊಟ್ಟು, ಅವರು ಅವರ ಮುಂದಿನ ಜೀವಮಾನವನ್ನು ಅಲ್ಲಿಯೆ ನಡೆಯಿಸುವಂತಾಗಬೇಕು. ಹಾಗಾದರೆ ಮಲೇಯಾ ದ್ವೀಪದ ಅಭಿವೃದ್ಧಿಯು ಆಗುವುದು. ಭಾರತೀಯ ಅತ್ತಕಡೆ ಬೆಳೆಯಿಸಿದ ಪ್ರಯಾಣದ ಸಾರ್ಥಕತೆಯೂ ಆಗುವುದು.

ಭಾರತೀಯ ಗಿರಣಿಗಳಿಗೆ ಘನವಾದ ನಷ್ಟಗಳು.

"ಬ್ರಿಟಿಷ ವಸ್ತ್ರಗಳ ಮೇಲೆ ಸುಂಕವು ಕಡಿಮೆಮಾಡಬೇಕು ಇದಕ್ಕೆ ಪ್ರತ್ಯುಪಕಾರವಾಗಿ ನಾವು ಹಿಂದೂದೇಶದ ಹತ್ತಿಯನ್ನು ಉಪಯೋಗಿಸುವೆವು' ಎಂದು ಲಂಕೆಶಯರಿನಿಂದ ಬಂದ ವಸ್ತ್ರದ ಗಿರಣಿಗಳ ಪ್ರತಿನಿಧಿಗಳು ಸ್ಪೆಶಲ್ ಟೆರಿಫ್ ಬೋರ್ಡಿನವರಿಗೆ ವಿನಂತಿ ಮಾಡಿದರೆ ಈ ಸಮಿತಿ ಅಧ್ಯಕ್ಷರಾದ ರಹಿಮುತುಲ್ಲಾರ ಅನೇಕ ಪ್ರಶ್ನೆಗಳಿಗೆ ಈ ಪ್ರಾತಿನಿಧ್ಯ ಮಂಡಳದಿಂದ ಸರಿಯಾದ ಉತ್ತರಗಳು ದೊರಕಲಿಲ್ಲ ಹಿಂದೂದೇಶದ ಗಿರಣಿಗಳಿಗೆ ೧೯೩೨ರಲ್ಲಿ ೩೦ ಲಕ್ಷ ರೂಪಾಯಿ ನಷ್ಟವು ಉಂಟಾಗಿದೆ ಹೀಗಿರುವಾಗ ಹಿಂದೂದೇಶದ ವಸ್ತ್ರದ ಗಿರಣಿಗಳನ್ನು ರಕ್ಷಿಸುವುದು ಮೊದಲಿನ ಮಾತಾಗಿರುತ್ತದೆ ಎಂದ ಸ್ಪೆಶಲ್ ಟೆರಿಫ್ ಬೋರ್ಡಿನ ಅಧ್ಯಕ್ಷರು ಲಂಕೆಶಯರಿನ ಪ್ರಾತಿನಿಧ್ಯ ಮಂಡಳಕ್ಕೆ ತಿಳಿಸಿರುತ್ತಾರೆ

"ಕೊಂಗ್ರೆಸ್ಸಿನ ಮೇಲೆ ನಾವು ಸಂಪೂರ್ಣ ಭರವಸೆವುಳ್ಳವರಾಗಬೇಕು"

"ಕೊಂಗ್ರೆಸ್ಸು ನಮ್ಮ ದೇಶದ ಒಂದು ಪವಿತ್ರ ಸಂಸ್ಥೆಯಾಗಿರುತ್ತದೆ ಇದು ಯಾವದೊಂದು ಮತಕ್ಕೆ ಸಂಬಧಿಸಿದಲ್ಲ ಭಾರತೀಯರನ್ನು ವಿಮೋಚನಗೊಳಿಸುವುದೆ ಇದರ ಮುಖ್ಯ ಉದ್ದೇಶವಾಗಿರುತ್ತದೆ ಭರತಖಂಡದ ಅಭ್ಯುದಯಕ್ಕೆ ಬಹೀರ್ ದೇಶದವರು ರಾಜಪರಿಪಾಲನೆ ಮಾತ್ರ ಒಂದು ಆತಂಕವಲ್ಲ ಸ್ವರಾಜ್ಯವನ್ನು ಪಡೆದರೆ ಭರತಖಂಡದ ಅಭ್ಯುದಯವಾಗದು ಸರ್ವ ವಿಚಾರದಲ್ಲೂ ಕೊಂಗ್ರೆಸ್ಸು ದೇಶದ ಅಭ್ಯುದಯವನ್ನು ಸಾಧಿಸುತ್ತದೆ ನಮ್ಮ ನಿಜವಾದ ಸ್ಥಿತಿಯನ್ನು ನಮಗೆ ಗೊತ್ತುಹಚ್ಚಿರುತ್ತದೆ" ಎಂದು ಡಾ। ಟಿ ಎಸ್ ಎಸ್ ರಾಜನ್ ಮಧುರೆಯಲ್ಲಿ ಜುಬ್ಲಿ ಮಂದಿರ ತೆರೆಯೋಣ ಸಮಾರಂಭದಲ್ಲಿ ಮಾಡಿದ ಭಾಷಣದ ಸಾರಂಶ ಈ ಕಟ್ಟಡದ ಪ್ರಾರಂಭ ಮಹೋತ್ಸವ ದೇಶಭಕ್ತ ಮಿ। ಸತ್ಯಮೂರ್ತಿಯವರಿಂದಾಯಿತು

"ಕೊಂಗ್ರೆಸ್ಸು ನವರಾಜ ಶಾಸನದ ಅಡಿಯಲ್ಲಿ ಎಲ್ಲಾ ಚುನಾವಣೆಗಳಲ್ಲಿ ಭಾಗವಹಿಸತಕ್ಕದು ನನ್ನ ಸರ್ವಸ್ವವನ್ನು ಕೊಂಗ್ರೆಸ್ಸು ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಪಡೆಯಲು ಅರ್ಪಿಸಲಿಕ್ಕೆ ಸಿದ್ಧನಿದ್ದೇನೆ" ಎಂದು ಸತ್ಯಮೂರ್ತಿಯವರ ಸಂದೇಶ.



ಪ್ರಪಂಚ ಪರಿಚಯ:

ಇರೇಕ್ ಸರಕಾರದ ಹೊಸ ಕಾನೂನು.

ದೇಶದ ಯಾವತ್ತು ವ್ಯಾಪಾರದಲ್ಲಿ, ಮತ್ತು ಕೆಲವು ನಿಯಮಿತ ಉದ್ಯೋಗಗಳಲ್ಲಿ ಇರೇಕಿಯಾನರಲ್ಲದೆ, ಅನ್ಯರು ಭಾಗವಹಿಸಬಾರದಾಗಿ ನಿರ್ಬಂಧಗಳು ಕೂಡಿದ ಒಂದು ಹೊಸ ಕಾನೂನು ಬೇಗನೆ ಇರೇಕಿನಲ್ಲಿ ರೂಢಿಗೆ ಬರುವುದು. ಬಹೀರ್ ದೇಶದವರು ಈ ಹೊಸ ಕಾನೂನಿನಿಂದಾಗಿ ಮುಂದಕ್ಕೆ ಅಲ್ಲಿ ಜೀವನಸಾಗಿಸುವುದು ಕಷ್ಟಸಾಧ್ಯವಾಗುವುದು. ಆತನು ಆ ದೇಶವನ್ನು ಬಿಡಲೇ ಬೇಕಾಗುವುದು. ಧಾರಾಳ ಭಾರತೀಯ ವಿವಿಧ ಉದ್ಯಮಗಳಲ್ಲಿ ನಿರತರಾಗಿ, ಅಲ್ಲಿ ಅನೇಕ ವರ್ಷಗಳಿಂದ ಜೀವನವನ್ನು ಸಾಗಿಸುತ್ತಿದ್ದಾರೆ. ಇವರ ಧಾರಾಳ ಹಣವು ಹಲವು ಉದ್ಯಮಗಳಲ್ಲೂ, ವ್ಯಾಪಾರಗಳಲ್ಲೂ ಸಂಚಯವಾಗಿರುತ್ತದೆ. ಈ ಹೊಸ ಕಾನೂನಿನಿಂದ ಅಂಥವರು ಬೇಗನೆ, ಆ ದೇಶ ಬಿಡಬೇಕಾಗಿದೆ. ಇದರಂತೆಯೇ ಅನೇಕ ಇರೇಕಿಯಾನರು, ಭರತಖಂಡದ ಅನೇಕ ದಿಕ್ಕುಗಳಲ್ಲಿ ತರತರದ ವ್ಯಾಪಾರಗಳನ್ನೂ, ಉದ್ಯಮಗಳನ್ನು ಸಾಗಿಸುತ್ತಿದ್ದಾರೆ. ಮಾತ್ರವಲ್ಲದೆ ಇರೇಕಿನ ಸರಕಾರಕ್ಕೆ ಭಾರತೀಯ ಯಾತ್ರಿಕರಿಂದಲೂ ಹಿಂದೂ ಭಾರತೀಯ ದೇವಭಕ್ತರಿಂದಲೂ ಧಾರಾಳ ಹಣ ಕಾಣಿಕೆ ಇತ್ಯಾದಿಗಳ ರೂಪದಲ್ಲಿ ಸೇರುತ್ತದೆ. ಇರೇಕಿನ ಸರಕಾರದವರು ಇವನ್ನೆಲ್ಲಾ ಮರೆತು ಹೂಡಿದ ಈ ಹೊಸ ಕಾನೂನು ಭಾರತೀಯರು ಭರತ ಖಂಡದ ಸರಕಾರವು ಪ್ರತಿಭಟಿಸಲೇಬೇಕಾಗುವುದು. ಈ ಹೊಸ ಕಾನೂನು ಮುಖ್ಯತಃ ಭಾರತೀಯರನ್ನು ಅಲ್ಲಿಯ ವ್ಯಾಪಾರ ಲೋಕದಿಂದ ಹೊರತಳ್ಳುವ ಉದ್ದೇಶದಿಂದ ಜನಿಸಿರುತ್ತದೆ.

"ಇರೇಕಿನ ಹಣ ಬೇಕಾದ ಯಾವ ರೂಪದಲ್ಲೂ ಅನ್ಯರ ಕಿಸೆ ಸೇರಬಾರದು. ಇರೇಕಿನವರ ಬಾಯಿಂದ ಅನ್ನದ ತುತ್ತನ್ನು ಕಸಗೊಳ್ಳಲು ಬಳಬಂದ ಅನ್ಯರನ್ನು ಹೊರಗೆಡಹತಕ್ಕದು." ಇದೇ ಸೂತ್ರವನ್ನನುಸರಿಸಿ ಹಿಂದಿಯ ಸರಕಾರವು ಇರೇಕಿಯಾನರನ್ನು ಹೊರದೂಡುವ ಪ್ರತಿಕ್ರಿಯೆಗಳನ್ನು ಯಾಕೆ ಮಾಡಬಾರದು. ಇರೇಕಿನ ಸರಕಾರದ ಹಿಂದೀಯರ ಕಡೆಗೆ ಈ ನವೀನ ವರ್ತನೆಯನ್ನು ಬದಲಾವಣೆ ಮಾಡಬೇಕಾಗಿಯೂ ಅಲ್ಲದಿದ್ದರೆ, ಅವರ ಹೊಸ ಕಾನೂನನ್ನು ಪ್ರತಿಭಟಿಸುವ ಕಾರ್ಯಗಳನ್ನು ಕೈಕೊಳ್ಳುವೆವು ಎಂದು ಹಿಂದೀಯ ಸರಕಾರವು ಅವರಿಗೆ ತಿಳಿಸತಕ್ಕದು.

ಜನಾಂಗ ಸಭೆಯೂ ಮುಸಲೇನಿಯೂ.

ಅಂತೂ ಇಂತೂ ಪೆರಿಸ ನಗರದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಭಾರಿ ಮಾತುಕತೆ ನಡೆದು ಈಗಿನ ಇಟೇಲಿ ಹಬಸಿ ಕಲಹವನ್ನು ನಿಂತಗೊಳಿಸುವ ಒಂದು ಒಪ್ಪಂದದ ಅಡಿಕಟ್ಟು ಹಾಕಲಾಗಿದೆ. ಮುಸಲೇನಿಯನ್ನು ನೋಯಿಸಬಾರದು. ಇಟೇಲಿಯ ಗೌರವಕ್ಕೆ ಕುಂದು ಬರಬಾರದು. ಈ ರೀತಿಯಲ್ಲಿ ಶಾಂತಿಸ್ಥಾಪನೆಯಾಗಬೇಕು. ಬ್ರಿಟಿಷರು ಜನಾಂಗ ಸಭೆ ಗೌರವವನ್ನು ಕಾಯಲು ಯಾವತ್ತು ಕಾರ್ಯಗಳಲ್ಲಿ ಭಾಗವಹಿಸಲು ವಚನ ಕೊಟ್ಟಿರುತ್ತಾರೆ. ಆದರೆ ಫ್ರೆಂಚರು ಜರ್ಮನ ಸಹೋದರಿಂದ ಸ್ವಲ್ಪ ಭೀತರಾಗಿ ಮುಸಲೇನಿಯು ಹೆಚ್ಚು ರೇಗದ ಹಾಗೆ ಪ್ರಯತ್ನಿಸುತ್ತಿದ್ದಾರೆ. ಸೆಂಕ್ಷನು ಪ್ರತಿಕ್ರಿಯೆ ಎಂಬ ಬಲವಾದ ಸಂಗತಿಯನ್ನು ಪ್ರಯೋಗ ನಡೆಸಲು ಮಾಡುವುದರಲ್ಲಿ ಇವರು ತುಂಬಾ ಕಾರ್ಯನಿರತರಾಗುತ್ತಿದ್ದಾರೆ. ಬ್ರಿಟಿಷರೂ ಇನ್ನೂ ನಿರ್ಬಂಧಗಳನ್ನು ಸೃಷ್ಟಿಸಲು ಸಿದ್ಧರಿದ್ದಾರೆ. ಆದರೆ ಕೆಲವು ಕಾರಣಗಳಿಂದ ಫ್ರೆಂಚರನ್ನು ಅನುಸರಿಸಿಯೆ ಇವರಿಗೆ ನಡೆಯಬೇಕಾಗಿದೆ. ಹಬಸಿ ಚಕ್ರವರ್ತಿಯವರು ಮುಸಲೇನಿಗೆ ಬೇಕಾದ ಪ್ರಾಂತ್ಯಗಳನ್ನು ಬಿಟ್ಟುಕೊಡಬೇಕು. ಅದಕ್ಕೆ ಬದಲಾಗಿ ಇವರು ನಮೂದಿಸಿದ ಕೆಲವು ಪ್ರದೇಶಗಳನ್ನು ಸ್ವೀಕರಿಸತಕ್ಕದು. ಒಟ್ಟಿನಲ್ಲಿ ಇಟೇಲಿಯ ಗೌರವ ಭಂಗವಾಗಬಾರದು. ಆದರೆ ಇಷ್ಟೇ ಪ್ರಪಂಚದ ಹಿತಸಾಧನೆಗಾಗಿ ಸ್ಥಾಪಿಸಿದ ಜನಾಂಗ ಸಭೆಯು, ಹಬಸಿಯವರ ಸ್ವತಂತ್ರವನ್ನು ಹೇಗೆ ಕಸಗೊಳ್ಳಬಹುದು. ಇದರಿಂದ ಜನಪದ ಮಂಡಳ ಶ್ರೇಯಸ್ಸು ಸಾಧಿಸಿದಂತಾಗುವುದೆ? ಕೇವಲ ಕೆಲವು ಪಾಶ್ಚಾತ್ಯ ರಾಜ್ಯಗಳು ಸ್ವಾರ್ಥ ಎನ್ನುವರು ಅವರ ಹಿತ ಸಾಧಿಸುವ ಸಂಸ್ಥೆಯು ಈ ಜನಾಂಗ ಸಭೆಯು, ಎಂದು ಅವರು ಈ ರೀತಿಯಲ್ಲಿ ಇಟೇಲಿಯ ಕುರಿತು ವರ್ತಿಸಿದರೆ–ಎಂದಾಗುವುದಿಲ್ಲವೆ? ಅದುದರಿಂದ ಅಹಾದಿಕನಾದ ಮುಸಲೇನಿಗೆ ತಾನು ಇಷ್ಟರ ವರೆಗೆ ನಡೆಸಿದ ಘೋರ ಕೃತ್ಯಗಳಿಗಾಗಿಯೂ, ಅವನ ಈ ಬುದ್ಧಿ ವಕ್ರತೆಗಾಗಿಯೂ, ತಕ್ಕ ಶಿಕ್ಷೆಯನ್ನು ವಿಧಿಸಲೆ ಬೇಕು? ಹಬಸಿಯವರ ಸ್ವಾತಂತ್ರ್ಯ ರಕ್ಷಣೆಯಾಗಲೇ ಬೇಕು.

ಆದರೆ ಹಬಸಿ ಚಕ್ರವರ್ತಿಯವರು ಇವರ ಉಪದೇಶಕ್ಕೆ ಸಿಕ್ಕುವವರಲ್ಲ. ಪಾಶ್ಚಾತ್ಯರಲ್ಲಿ ತನಗೆ ನಂಬುಗೆ ಕಡಿಮೆಯೆಂದು ಈ ಮೊದಲು ತಿಳಿಸಿರುತ್ತಾರೆ. ತನ್ನ ಒಂದೇ ಒಂದು ಅಂಗುಲ ಭೂಮಿಯನ್ನು ಇಟೇಲಿಗೆ ಒಪ್ಪಿಸಲು ತಾನು ಸಿದ್ಧರಿಲ್ಲ ಎಂದು ಅವರಿಗೆ ತಿಳುಹಿಸಿ ಕೊಟ್ಟ ಸಂಧಿ ಪ್ರಸ್ತಾಪದ ಶರ್ತಗಳಿಗೆ ಉತ್ತರ ಕಳುಹಿಸಿ ಕೊಟ್ಟಿರುತ್ತಾರೆ. ಒಂದು ವೇಳೆ ಮುಸಲೇನಿಗೆ ಆ ಪ್ರಾಂತ್ಯಗಳನ್ನು ಪಡೆಯಲು ಬೇಕಾದಲ್ಲಿ ಆತನು ಅದನ್ನು ಯುದ್ಧಮಾಡಿಯೇ ಪಡೆಯಲು. ಹಬಸಿಗಳು ತಮ್ಮ ದೇಶವನ್ನು ರಕ್ಷಿಸಲು ಯುದ್ಧದಲ್ಲಿ ಹೋರಾಡಲು ಸಿದ್ಧರಿದ್ದಾರೆ. ಒಂದು ವೇಳೆ ಅವರ ಸ್ವಾತಂತ್ರ್ಯ ಹೋದರೂ ಅವರು ವೀರ ಸ್ವರ್ಗವನ್ನು ಪಡೆಯುವರು. ಎಂಬುದೆ ಚಕ್ರವರ್ತಿಯವರ ಈಗಿನ ಪ್ರಕಟಣೆ.

ಕೋಮುವಾರು ಭೇದವೂ ಕಲ್ಕತ್ತಾ ನಗರಸಭೆಯೂ

ಮುಸ್ಲಿಮ ಸದಸ್ಯರು ಸಭಾಕಾರ್ಯ ಸಮಯ ಹೊರಗೆ ನಡೆದರು

"ಸಹಜವಾದ ರೀತಿಯಲ್ಲಿ ಕಾರ್ಯ ಸಾಧಿಸಲು ಸಾಧ್ಯವಾಗದ ಈ ಸಂಸ್ಥೆಯಲ್ಲಿ ನಾವು ಕಾಣಿಗಿರುವುದು ತಪ್ಪ ಇಚ್ಛೆಯಲ್ಲ. ಆದುದರಿಂದ ದಿನೇ ದಿನೇ ನನ್ನ ಉದ್ಯೋಗಕ್ಕೆ ರಾಜಿನಾಮೆ ಕೊಡಬೇಕಾಗಿ ನನ್ನಲ್ಲಿ ಆಲೋಚನೆಯು ಹೊಳೆಯುತ್ತದೆ" ಎಂದು ನಗರ ಸಭಾಧ್ಯಕ್ಷರು ನಗರಸಭೆಯ ಉದ್ಯೋಗಸ್ಥಾನಗಳಲ್ಲಿ ಶೇಕಡಾ ೨೫ ಸಲಿ ಸ್ಥಾನಗಳು ಮುಸ್ಲಿಮರಿಗೆ ಮೀಸಲಿಡಬೇಕಾಗಿ ಮುಂದೆ ತಂದ ಠರಾವನ್ನು ಆಲೋಚಿಸಲು ಜರಗಿಸಿದ ವಿಶೇಷ ಸಭೆಯಲ್ಲಿ ನುಡಿದರು. ಮೇಲಿನ ನುಡಿಗಳನ್ನು ನಗರಸಭಾಧ್ಯಕ್ಷರಾದ ಶ್ರೀ ಫಾಜಲ್ ಹಕ್ ಕೆಲವು ಮುಸ್ಲಿಮರು ಅವರ ಮುಂದೆ ತಂದಿರ ಠರಾವಿಗೆ ಆಲೋಚನೆಯು ಧನ್ಯತೆಯಿಂದ ನಡೆಯುವುದಿಲ್ಲ ಎಂಬ ನೆವದಿಂದ ಸಭೆಯನ್ನು ತ್ಯಜಿಸಿ ಹೊರಗೆ ನಡೆದ ಸಂಭವದಲ್ಲಿ ನುಡಿದಿರುವರು.

ಪ್ರಾರಂಭದಲ್ಲಿ ಈ ಸಭೆಯಲ್ಲಿ ಸ್ವಲ್ಪ ರೇಗಿದಂತಾಗಿದ್ದರೂ ಬಿ. ಕೆ. ಬಾಸುರೆಂಬ ಸದಸ್ಯರು ಈ ಮಸೂದೆಯನ್ನು ಜ್ಯಾರಿಮಾಡದ ಮೊದಲು ಉದ್ಯೋಗಗಳನ್ನು ಆರಿಸುವ ಕ್ರಮಗಳನ್ನು ವಿಚಾರಿಸಿ ವರದಿಮಾಡಲು ಒಂದು ಸಮಿತಿಯನ್ನು ರಚಿಸಬೇಕು" ಸೂಚಿಸಲು ಶಾಂತತೆಯು ಕಲೆದೋರಿತು. ಆದರೆ ಆ ಸಮಿತಿಯ ಸದಸ್ಯರ ಚುನಾವಣೆಯಲ್ಲಿ ಕೆಲವು ಪರಸ್ಪರ ಕಲಹಗಳು ಮುಂದೆ ೧೩ ಮಂದಿ ಮುಸ್ಲಿಮ ಸದಸ್ಯರು ಹೊರಗೆ ನಡೆದರು.

"ಈ ಕೋಮುವಾರು ಭೇದದಿಂದ ನಗರಸಭೆಯ ಕಾರ್ಯವು ನಡೆಯಿಸಲು ಅಸಾಧ್ಯವಾಗಿದೆ. ನಾವಿಂದ ಹೊರಗೆಹೋಗುವುದೇ ಲೇಸು" ಎಂದು ನಗರಸಭಾಧ್ಯಕ್ಷರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಹಿಂದೂ-ಮುಸ್ಲಿಮರ ಐಕ್ಯ

ಕೆಲವು ವರ್ಷಗಳ ಹಿಂದೆ ಶಾರದಾ ಮಸೂದೆಯು ಶಾಸನಸಭೆಯ ಮುಂದೆ ಬರಲು ಭರತಖಂಡದ ಎಲ್ಲಾ ದಿಕ್ಕುಗಳಲ್ಲಿ ಹಿಂದೂ ಶಾಸ್ತ್ರಸಮ್ಮತಿಗಳು ನಾನು ವಿಚಾರ ಮುದ್ರ್ಯಾದಾರಣಾಂತಗಿಯೂ ಮುಸ್ಲಿಮ ಶಾಸ್ತ್ರ ಸಮ್ಮತಿಗಳು ಗಡ್ಡ ಬೆಳೆಯಿಸುವ ಮುಲ್ಲಾರು ಒಟ್ಟುಗೂಡಿ ಆ ಮಸೂದೆಯನ್ನು ಪ್ರತಿಕೂಲಿಸುವ ಮೆರವಣಿಗೆಗಳನ್ನೂ ಸಭೆಗಳನ್ನೂ ಜರಗಿಸಿದರು. ಬಾಲ್ಯವಿವಾಹವನ್ನು ತಡೆಯುವುದು ಶಾಸ್ತ್ರವಿರುದ್ಧವು–ಎಂದು ಈ ಎರಡು ಮತದವರು ತಮ್ಮ ಮನವಿಗಳನ್ನು ಮಾಡಿದ್ದರು. ಬಾಲ್ಯವಿವಾಹವು ಹಿಂದುಗಳಿಗಿಂತ ಮುಸ್ಲಿಮರಲ್ಲಿ ಹೆಚ್ಚಾಗಿ ಪ್ರಮಾಣದಲ್ಲಿರುತ್ತದೆ ಎಂದು ಆಗ್ಗೆ ಸರಕಾರದ ವರದಿಯಿಂದ ತಿಳಿದುಬಂದಿರುತ್ತದೆ. ಸರಕಾರವು ಇವರ ಸಲಹೆಗಳಿಗೆ ಮನ್ನಣೆಯನ್ನು ಕೊಟ್ಟೇಬಿಟ್ಟಿದೆ. ಸಮಾಜ ಸುಧಾರಣೆ ಮಾಡುವ ಈ ಶಾರದಾ ಮಸೂದೆಯು ಹಲ ಕೆಲವು ಬದಲಾವಣೆಯಾಗಿ ಕೊನೆಗೆ [illegible] ಉಪಯೋಗವಾಗದ ರೀತಿಯಲ್ಲಿ ಒಂದು ಕಾನೂನಾಗಿ ಅನೇಕ ಸಮಯದ ನಂತರ ಹೊರಗೆ ಬಂತು. ಹಿಂದೂ ಮುಸ್ಲಿಮ ಐಕ್ಯಕ್ಕೆ ಜಯವಾಯಿತು.

ಅಂದು ಸಾಧ್ಯವಾದ ಈ ಹಿಂದೂ-ಮುಸ್ಲಿಮ ಐಕ್ಯವನ್ನು ಎಲ್ಲಾ ರಾಜಕೀಯ, ಸಾಮಾಜಿಕ ವಿಚಾರಗಳಲ್ಲಿ ಯಾಕೆ ಉಪಯೋಗ ಮಾಡಬಾರದು, ಭಾರತೀಯರನ್ನು ಇನ್ನೂ ಒತ್ತಿರುವ ಈ ದಾಸ್ಯವನ್ನು ಮುರಿಯಲ್ಲವೆ? ಕೋಮುವಾರು ವಿಚಾರಗಳನ್ನು ಬದಿಗಿಟ್ಟು, ಹಿಂದೂಗಳೂ ಮುಸ್ಲಿಮರೂ ತಮ್ಮ ಮುಂದಿರುವ ಎಲ್ಲಾ ಕಾರ್ಯಗಳಲ್ಲಿ ಒಟ್ಟಾಗಿ ಟೊಂಕಕಟ್ಟಿ ನಮ್ಮ ಹಿತ ಸಾಧಿಸಬಹುದು. ಈ ಎರಡು ಜಾತಿದ್ವಂದ್ವಗಳಲ್ಲಿ ಪರಸ್ಪರ ಸ್ನೇಹ ಉಂಟಾಗಬೇಕು. ಈ ಪ್ರಸಂಗವನ್ನು ಅಸಾಧ್ಯವೆಂದು ಯಾರೂ ತಿಳಿಯಬಾರದು. ಈ ಕೋಮುವಾರು ಭೇದವಿಟ್ಟೇದನಗಳಿಂದ ನಾವು ನಮ್ಮ ರಾಜಕೀಯ ಕಾರ್ಯಗಳನ್ನು ನಡೆಸಿದರೆ ದೇಶ ಹಿತದ ಪ್ರತಿಯೊಂದು ವಿಚಾರದಲ್ಲಿ ವಿಶೇಷ ಹಾನಿಯು ಬರುವಂತಿದೆ. ಮೊಗಲ್ ಚಕ್ರವರ್ತಿಯವರ ಆಡಳಿತದಲ್ಲಿ ಹಿಂದೂಗಳೂ ಮುಸ್ಲಿಮರು ಐಕ್ಯದಿಂದ ವರ್ತಿಸಲಿಲ್ಲವೆ? ಪ್ರಸಿದ್ಧ ಮೊಗಲ್ ಚಕ್ರವರ್ತಿಯವರಾದ ಅಕ್ಬರ್ ಬಾದಶಹನ ರಾಜ್ಯಪಾಲನೆಯಲ್ಲಿ ಹಿಂದೂ ಮುಸ್ಲಿಮ ಭೇದವಿರಲಿಲ್ಲವೆಂದೂ ಅದರಿಂದ ಇವರ ರಾಜ್ಯಕಾರ್ಯಭಾರವು ಶ್ರೇಯಸ್ಕರವಾಗಿ ನಡೆದಿರುತ್ತದೆ ಮಾತ್ರವಲ್ಲ ಮೊಗಲ್ ಸಾಮ್ರಾಜ್ಯದ ಅಭ್ಯುದಯವಾಗಿರುತ್ತದೆ. ಅಂತೆಯೆ ಅವರಂಗಜೇಬರ ಕಾಲಕ್ಕೆ ಹಿಂದೂಗಳೂ ಮುಸ್ಲಿಮರ ಐಕ್ಯವೆ ಕಾರಣವಾಗಿರುತ್ತದೆ. ಹೀಗೆ ಯುಗಾಂತರಗಳಿಂದ ಹಿಂದೂಗಳಿಗೂ ಮುಸ್ಲಿಮರಿಗೂ ಪರಸ್ಪರ ಮೈತ್ರಿಯು ನಡೆಯುತ್ತದೆ. ಹೀಗಿರುವಾಗ ಈಗ ಬ್ರಿಟಿಷ ಪಾರ್ಲಿಮೆಂಟಿನವರಿಂದ ನಿರ್ಮಿತವಾದ ಈ ಕೋಮುವಾರು ಏರ್ಪಾಟಿನಿಂದ ನಾವು ಪರಸ್ಪರ ಹಾನಿಯನ್ನು ತರುವ ಕಾರ್ಯಗಳನ್ನು ನಡೆಯಿಸುವುದು [illegible]. ಈಗಲೂ ಕೂಡ ನಾವು ಐಕ್ಯದಿಂದ ವರ್ತಿಸಿ ಸ್ವರಾಜ್ಯವನ್ನು ಪಡೆಯಬಹುದು. ಹಿಂದಿಯರಿಗೆ ಸ್ವಯಂ ಪ್ರಭುತ್ವದ ರಾಜಕೀಯ [illegible] ಕೊಡಬಹುದಾ [illegible]. ಆದರೆ ಅವರಲ್ಲಿನ ಹಿಂದೂ ಮುಸ್ಲಿಮ ಭೇದಗಳೂ ಹಿಂದೂಗಳ ವರ್ಣಾಶ್ರಮ ಧರ್ಮಗಳು ಇತ್ಯಾದಿಗಳಿಂದ ಅವರಿಗೆ ಸ್ವರಾಜ್ಯವನ್ನು ಅನುಭವಿಸುವ ಯೋಗ್ಯತೆಗಳಿಲ್ಲ ಎಂದು ಬ್ರಿಟಿಷ ಪಾರ್ಲಿಮೆಂಟಿನ ಮುಖಂಡರು [illegible] ಹಾಗಿರುವಾಗ ನಮ್ಮ ಎಲ್ಲಾ ಭೇದಭಾವಗಳನ್ನು ಮರೆತು ಭಾರತಮಾತೆಯ ಅಡಿಯಲ್ಲಿ [illegible] ಒಂದೇ ಕುಟುಂಬದವರಂತೆ ಐಕ್ಯದಿಂದ ಮುಂದಕ್ಕೆ ವರ್ತಿಸಿ ಭರತಖಂಡದವೇ [illegible] ಕಳೆಯನ್ನು ತೆಗೆದು [illegible] ಸ್ವರಾಜ್ಯ [illegible] ಎಂದು [illegible]

[illegible]

ನಮ್ಮ ಪ್ರಾಂತಗಳ ಫಲಗಳ ವ್ಯವಸಾಯ

ಸಾಗುವಳಿ ವ್ಯವಸಾಯದ ಅಭ್ಯುದಯವೆ ನಮ್ಮ ಪ್ರಾಂತ್ಯದಭ್ಯುದಯ. ಇಡೀ ಭರತಖಂಡದ ಸ್ಥಿತಿಯು ರೈತರ ಮೇಲೆ ಎಂದರೆ ಹಳ್ಳಿಗರ ಮೇಲೆ ಹೊಂದಿಕೊಂಡಿರುತ್ತದೆ. ಸರಕಾರದಿಂದ ಪ್ರಕಟಿಸಿದ ವ್ಯಾಪಾರದ ವರದಿಯಲ್ಲಿ ನಮ್ಮ ಸಾಗುವಳಿಗಳವರಿಯವು ಅರ್ಧಕರ್ಧ ಬಿದ್ದಿರುತ್ತದೆಂದೂ ವ್ಯಕ್ತವಾಗಿರುತ್ತದೆ. ಈಗ ಅಕ್ಕಿ ಮತ್ತು ಇತರ ದವಸಧಾನ್ಯಗಳ ವ್ಯವಸಾಯ ತೆಂಗಿನ ವ್ಯವಸಾಯ ನಮ್ಮ ಪ್ರಾಂತ್ಯದ ಸಾಗುವಳಿಯಲ್ಲಿ ಮುಖ್ಯ ಸ್ಥಾನಗಳನ್ನು ಪಡೆದಿವೆ. ಆದರೆ, ಪರದೇಶಗಳಿಂದ ಬರುವ ಅಕ್ಕಿಯಿಂದ ಒಂದಾನೊಂದು ಕಾಲದಲ್ಲಿ ನಾವು ಉಪಯೋಗಿಸುವ ಹೊರಗೆ ಕಳುಹಿಸಲಾಗುವ ಅಕ್ಕಿಯು ನಮ್ಮಲ್ಲಿಯೆ ಉಳಿಯುವಂತಾಗಿ ಅಕ್ಕಿಯ ಕ್ರಯವು ಸೇಕಡಾ ೫೦ ರಷ್ಟು ಇಳಿದಿರುತ್ತದೆ. ಅಂತೆಯೆ ನಮ್ಮ ತೆಂಗಿನ ವ್ಯವಸಾಯವು ಹೊರಗಣ ದೇಶಗಳಿಂದ ಪೀಡನೆಹೊಂದುತ್ತಿದೆ. ಅದ್ದರಿಂದ ರೈತರ ಆಧಾಯವು ಬಹಳವಾಗಿ ಇಳಿದಿರುತ್ತದೆ. ಅವರ ಸಾಲವು ವರ್ಷ ವರ್ಷ ಹೆಚ್ಚಾಗಿರುತ್ತದೆ. ನೆಲದಿಂದ ಎಂದಿಲ್ಲಿ ದಾಯಿಯಾಗುವ ಬದಲಾಗಿ [illegible] ವೃದ್ಧಿಹೊಂದು ತ್ತಿವೆ. ಹೀಗಿರುವಾಗ ರೈತರಿಗೆ ಸಂಪತ್ತು ದೊರೆಯುವ ಇತರ ಉದ್ಯಮಗಳನ್ನು ನಡೆಯಿಸತಕ್ಕದ್ದು. ಫಲಗಳನ್ನು ಬೆಳೆಯಿಸುವುದು ಇದರಲ್ಲಿ ಒಂದಾಗಿರುತ್ತದೆ. ನಮ್ಮ ಪ್ರಾಂತ್ಯಕ್ಕೆ ಹೊರಗಣ ದೇಶಗಳಿಂದ ಕಾಲಕಾಲ ಫಲಗಳು ಬರುತ್ತಿವೆ ನಮ್ಮ ರೈತರ ಇವುಗಳ ಸಾಗುವಳಿಯನ್ನು ಕೈಗೊಳ್ಳತಕ್ಕದು. ಪ್ರಾಂತ್ಯಕ್ಕೆ ಬೇಕಾದ ಎಲ್ಲಾ ಫಲಗಳು ಪ್ರಾಂತ್ಯದಲ್ಲಿ ದೊರೆಯುವಂತೆ ಗಬೇಕಲ್ಲದೆ ನಮ್ಮ ಉತ್ತಮ ತರಗತಿ ಫಲಗಳನ್ನು ಹೊರಗಣ ದೇಶಗಳಿಗೆ ಕಳುಹಿಸುವಂತಾಗಬೇಕು. ಹೊರಗಣ ದೇಶಗಳಲ್ಲಿ ಹಿಂದೂ ದೇಶದ ಫಲಗಳಿಗೆ ಒಳ್ಳೆ ಮಾರಾಟಗಳು ದೊರೆಯುವ ಸಂಭವಗಳಿವೆ. ನಮ್ಮ ಪ್ರಾಂತ್ಯದ ಸರಕಾರವು ಫಲದ ಬೆಳವಣಿಗೆಯ ಯೋಗ್ಯ ರೀತಿಯಲ್ಲಿ ನಡೆಯುವ ಹಿಂತೆ ಕೆಲವು ಸಂಶೋಧ [illegible] ಯೋಗ್ಯ ಮಾರಾಟಗಳ [illegible] ಉದ್ಯೋಗಸ್ಥರನ್ನು ನೇಮಿಸಿರುತ್ತದೆ. ರೈತ [illegible] ವನ್ನು [illegible] ಫಲ [illegible] [illegible] ಪ್ರದೇಶ ಇವರು [illegible] ಸಹಕರಿಸಿ ನಮ್ಮ ಪ್ರಾಂತ್ಯದ ಫಲದ ವ್ಯಾಪಾರವನ್ನು ಅಭಿವೃದ್ಧಿ [illegible]

ವಿಕಸಿತ ಗುಲಾಬಿ ಹೂವಿನಂತೆ

ಆಕೆಯ ನಿರ್ಮಲ ಮುಖವರ್ಣವು ಬೆಳಗುತ್ತಿತ್ತು

ಪ್ರಖ್ಯಾತ ಜಗನ್ಮೋಹನಾಕಾರದ ಮೊಗಲ ಮಹಾರಾಣಿ ನೂರ್ ಜಹಾನಳ ಹೆಸರು ಯಾರಿಗೆ ಗೊತ್ತಿಲ್ಲ? ಆಕೆಯು ಸೌಂದರ್ಯೋಪಾಸಕಳು. ಸೌಂದರ್ಯದಲ್ಲಿ ಮುಳುಗಿ ಹೋಗಿದವಳು. ಪರಿಮಳಯುಕ್ತವಾದ ಹೂವಿನ ದ್ರವ್ಯಗಳನ್ನು ಮಾಡುವುದಕ್ಕೆ ಉದಾರ ಪ್ರೋತ್ಸಾಹನೆಯಿತ್ತವಳು. ನೂರ್ ಜಹಾನ್ ಬೇಗಮಳ ಸೃಷ್ಟಿಯು ಹಿಂದೆ ಶ್ರೀಮಂತರ ಭೋಗಸಾಮಗ್ರಿಯಾಗಿತ್ತು. [illegible] ಅಫಘಾನ್ ಪರಿಮಳ ದ್ರವ್ಯಗಳಿಗೆ ಬಂದಿದೆ. ಅವುಗಳ ಸೊಗಸು ಸುವಾಸನೆ ಇನ್ನೆಲ್ಲೂ ಇಲ್ಲ.

ಮೊಗಲ ರಾಜಾಂತಃಪುರದ ನೂರಾರು ನಾರೀಮಣಿಯರು ನೂರ್‌ಜಹಾನಳ ಮುಖಸೌಂದರ್ಯ [illegible] ಮುಗ್ಧರಾಗಿದ್ದರು. ಈಗ ನಿಮ್ಮ ಸೌಂದರ್ಯದಲ್ಲಿ [illegible] ಅಫಘಾನ್ ಸ್ನೋ ಉಪಯೋಗಿಸಿ ಚರ್ಮಕ್ಕೆ [illegible] ವೃದ್ಧಿಪಡಿಸುತ್ತದೆ [illegible] ಇದೆಯೋ ಅದನ್ನು ಉಳಿಸುತ್ತದೆ. ಎಲ್ಲಾ ಮಳಿಗೆಗಳಲ್ಲೂ ಸಿಗುತ್ತದೆ.

ಪಟಿನ್‌ವಾಲಾ ಇವರ

AFGHAN SNOW

ಕೆಮಿಸ್ಟ್ಸ್ ಮಳಿಗೆಗಳಲ್ಲಿ ಸಿಗುತ್ತದೆ.

ಆಸಿಯಾ ಖಂಡದಲ್ಲೆಲ್ಲಾ ಮಾರಲ್ಪಡುತ್ತದೆ

ಇ. ಎಸ್. ಪಟಿನ್‌ವಾಲಾ, ೧೮೨–೮೪, ಅಬ್ದುಲ್ ರಹಿಮಾನ್ ಸ್ಟ್ರೀಟ್, ಬಾಂಬೇ ೩

ವಿಷಯಸೂಚಿಕೆ

ಟಿಪ್ಪಣಿಗಳು	೨
ಸಿವಿಲ್ ಸರ್ವಿಸ್ ಕಡಿಮೆಯಾಗುವುದೋ?	೩
ಇಟಲಿ-ಅಬಿಸೀನಿಯ ಯುದ್ಧವು ಬೇಗನೆ ಶಾಂತವಾಗುವುದೆ	೩
ಶಾಸನಾಕ್ಷೇಪಣೆಯು ಮುಂದಿನ ಪಟ್ಟಿಕೆ	೬
ಜಂಜೀಬಾರಿನ ಭಾರತೀಯರ ಸ್ಥಿತಿ	೭
ಪ್ರಪಂಚ ಪ್ರಪಂಚ	೮

ಅಗ್ರಲೇಖ

ಮೂಲವಿದ್ಯಾಪ್ರಚಾರದ ಹೊಸ ಸ್ಕೀಮು, ..	೧೦
ಸ್ಫುಟವಿಚಾರಗಳು .	,,

ವರ್ತಮಾನ ಸಂಗ್ರಹ

ಮುಂಗಳೂರು, ತಾಲೂಕುಗಳಿಂದ .	೧೧
ಪಟ್ಟಣ ವಿಭಾಗ .	೧೬
ವಿವಿಧ ಸಮಾಚಾರಗಳು .	೧೨
ಗ್ರಾಮಗಳ ಪುನರುಜ್ಜೀವನವೆಂತು?	೧೪

ಸ್ವದೇಶಾಭಿಮಾನಿ.

ತಾ. ೨೦ನೇ ಶುಕ್ರವಾರ ದಶಂಬರ '೩೫

ಮೂಲವಿದ್ಯಾಪ್ರಚಾರದ ಹೊಸ ಸ್ಕೀಮು.

ಸೂರ್ಯನು ಅಸ್ತಮಾನವಾಗುವಾಗ, ಸಂಧ್ಯಾರಾಗವು ಏರುವ ಹಾಗೆ ನಮ್ಮ ಮದ್ರಾಸು ಕೌನ್ಸಿಲಿನ ಅವಧಿಯು ಕೊನೆಗಾಣ ಲಿರುವಾಗ, ಅಧಿಕಾರಾರೂಢ ಪಕ್ಷವು ಜನರ ಒಲುಮೆಯನ್ನು ಪಡೆದು ಮುಂದೆಯೂ ಮೇಲ ತಿಸಿ ಚುನಾವಣೆ ಹೊಂದುವ ಹಾಗೆ, ಒಂದು ಪ್ರಾಂತೀಕ ಸಂಪದಭಿವೃದ್ಧಿಯ ಕೌನ್ಸಿಲು ಎಂಬು ದನ್ನು ಏರ್ಪಡಿಸಿಕೊಂಡು, ಜನೋದ್ಧಾರ ಮಾಡುವುದಾಗಿ ಹೇಳಿಕೊಂಡಿತು ಈ ಕೌನ್ಸಿಲು ಈಗ ಕೆಲವು ಸದಸ್ಯರನ್ನು ಒಂದು ಕಮಿಟಿ ಯಾಗಿ ನೇಮಿಸಿ, ಅವರಿಂದ ನಮ್ಮ ಪ್ರತಿ ಯೊಂದು ಹಳ್ಳಿಯಲ್ಲಿ, ಐದು ಸಾವಿರ ಜನರಿ ಇರುವಲ್ಲಿ ಆಗುವಷ್ಟು ಕಡಮೆ ಖರ್ಚು, ಕಡಮೆ ಅವಧಿಗಳೊಳಗೆ, ಎಲ್ಲ ಗಂಡುಮಕ್ಕಳಿಗೆ ಮೂಲ ವಿದ್ಯಾಭ್ಯಾಸವನ್ನು ಒತ್ತಾಯದಿಂದ ಕೊಡಿಸುವ ವಿಧಾನಗಳನ್ನು ಶಿಫಾರಸು ಮಾಡುವಂತೆ ಕೇಳಿ ಕೊಂಡಿದೆ ಸ್ವತಃ

ಆದರೆ, ಮೂಲವಿದ್ಯಾಭ್ಯಾಸವು ಗಂಡು ಮಕ್ಕಳಿಗೆ ಮಾತ್ರವೇ ಅಗತ್ಯವೆ? ಹೆಣ್ಣು ಮಕ್ಕಳು ಹೀಗೆ ವಿದ್ಯಾಭ್ಯಾಸ ಹೊಂದಲು ಅನ ರ್ಹರೆ? ಹಾರ್ಟೋಗ ಕಮಿಟಿಯವರು ಹೆಮ್ಮಕ್ಕಳ ಶಿಕ್ಷಣವೇ ಎಲ್ಲಕ್ಕೂ ಮೊದಲು ಎಂದ ಒರೆದ ಅಮೂಲ್ಯ ವರದಿಯು ಮೂಲ್ಯವಿಲದ ಹೋಯಿತೆ? ಹೊಸ ರಾಜಕೀಯ ಹಕ್ಕುಗಳು ದೊರೆತು, ಸ್ತ್ರೀಯರು ಪುರುಷರ ಸಮಾನತೆಗೆ ಬರಬೇಕೆಂದು ನಿಶ್ಚಿತವಾಗಿರುವಾಗ, ಹೆಮ್ಮಕ್ಕಳನ್ನು ಅಶಿಕ್ಷಿತರನ್ನಾಗಿ ಇರಗೊಳಿಸುವುದು ಉತ್ತಮವೆ?

೫೦೦೦ವಾದರೂ ಜನಸಂಖ್ಯೆಯಿರುವಲ ಕಡ್ಡಾಯ ಶಿಕ್ಷಣವಾದರೆ, ಅದಕ್ಕೂ ಕಡಮೆ ಯಾಗಿರುವ ಸಾವಿರಾರು ಹಳ್ಳಿಗಳಿಗೆ ವಿದ್ಯೆಯ ಗಂಧ ಗಾಳಿಯೂ ಕೂಡ ಸೋಕಲು ಕಡಮೆ ಯಾಗುವುದಲ್ಲ? ಈ ಹಳ್ಳಿಗಳಿಗೇನು ಗತಿ?

ಒಂದೇ ಕ್ಲಾಸಿನಲ್ಲಿ ಬಹು ವರ್ಷ ಕೊಳೆ ಯುತ್ತಿರುವುದು, ಅರ್ಧ ಕಲಿಯುವುದರೊಳಗೇ ಮಕ್ಕಳನ್ನು ಹಿಂತೆಗೆವುದು, ನಿರುಪಯೋಗಿ ಯಾದ ಶಾಲೆಗಳಿರುವುದು ಮುಖ್ಯ ಮೂರು ಅಸ್ವಾಸ್ಥ್ಯಗಳೆಂದು ಸರಕಾರಕ್ಕೆ ತಿಳಿದಿರುವುದು; ಅದಕ್ಕಾಗಿ ಬಹು ಸಂಖ್ಯಾಕವಾಗಿ ವಿದ್ಯಾದಾನ ಮಾಡುವ ಬದಲು, ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾದರೂ ಯೋಗ್ಯ ಶಿಕ್ಷಣ ದೊರೆವ ಹಾಗೂ, ಹಾಗೆ ಶಾಲೆಗೆ ಬಂದವರು ಐದನೆ ತರಗತಿ ತನಕವಾದರೂ ಶಾಲೆ ಮುಗಿಸದ ಹಾಗೂ ನೋಡಿಕೊಳ್ಳಲು ಒತ್ತಾಯವಾಗುವ ಕಾನೂನು ಅಗತ್ಯವೆಂದೂ ಡೈರೆಕ್ಟರರ ಸೂಚನೆ ಯಿದೆ.

ಶಾಲೆಯಲ್ಲಿ ಕಲಿಯುವ ವಯಸ್ಸಿನ ಎಲ್ಲ ಮಕ್ಕಳಿಗೆ, ಐದನೆಯ ದರ್ಜೆಯವರೆಗಾದರೂ ಅಗತ್ಯವಾಗಿಯೂ ಶಿಕ್ಷಣವು ಸಿಗುವಂತಾಗ ಬೇಕೆಂದೂ, ಶಿಕ್ಷಣದ ಗುಣವೂ ಹೆಚ್ಚುತ್ತ ಶಿಕ್ಷಕರ ಸಂಖ್ಯೆಯೂ ಹೆಚ್ಚುವಂತಾಗಬೇಕೆಂದೂ ಎಲ್ಲರು ಆಸೆಪಡುವರು. ಇದಕ್ಕಾಗಿ, ಸರ ಕಾರ, ಲೋಕಲ್ ಬೋರ್ಡುಗಳು, ಮುಖಂ ಡರು, ಶಿಕ್ಷಕರು ಒಮ್ಮನಸಿಂದ ಕೆಲಸ ನಿರ್ವ ಹಿಸುವರಾದರೆ ಬೇಗನೆ ಎಲ್ಲವೂ ಕೈಗೂಡು ವುದು

ದಿವಂಗತ ಗೋಖಲೆಯವರು ೧೯೧೧ರಲ್ಲಿ, (ಕಾಲು ಶತಮಾನದ ಹಿಂದೆ!) ಸೂಚಿಸಿದಂತೆ ಸರಕಾರವು ಒಂದು ವ್ಯವಸ್ಥೆಮಾಡಿಕೊಳ್ಳಲು ಒಪ್ಪಿಕೊಂಡಿದ್ದರೆ, ಇಷ್ಟರೊಳಗೆ ಪ್ರಾಥಮಿಕ ಶಿಕ್ಷಣವು ಎಷ್ಟೋ ಪ್ರಗತಿಹೊಂದುತ್ತಿತ್ತು ಮೊದಲೇ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಎಷ್ಟೋ ಹಿಂದೆಬಿದ್ದ ನಮ್ಮಲ್ಲಿನ ಶಿಕ್ಷಣವು ಈಗ ಇನ್ನೆಷ್ಟೋ ಹಿಂದೆ ಬಿದ್ದುಕೊಳ್ಳುವ ದುರವಸ್ಥೆಗೆ ಬಂದಿದೆ ಪ್ರೈಮರಿ ಎಡ್ಯುಕೇಶನ್ ಆಕ್ಟು ಮಂಜೂರಾಗಿ ೧೫ ವರ್ಷಗಳಾದವು ಆದರೂ ಕಾರ್ಯಕ್ರಮವಾಗಲಿ, ಮುನ್ನಡೆಯಾಗಲಿ ಇನ್ನೂ ಸರಿಯಿಲ್ಲವೆಂದೇ ಹೇಳಬೇಕಾಗಿದೆ

ಇನ್ನೂ ಶಾಲೆಗೆಹೋಗುವ ವಯಸ್ಸಿನ ೪೪ಲಕ್ಷ ಅಶಿಕ್ಷಿತ ಮಕ್ಕಳು ನಮ್ಮ ಸಂಸ್ಥಾನ ದಲ್ಲಿರುವರು, ೫೫ ಲಕ್ಷ ಬಾಲಿಕೆಯರಿಗೆ ಶಿಕ್ಷ ಣವೇ ದೊರೆಯುತ್ತಿಲ್ಲ ದೇಶೀಯ ರಾಜ್ಯ ಗಳಲ್ಲಾದರೂ ಸೇಕಡಾ ೫೦ರಿಂದ ೩೦ರವರೆಗೆ ಮಕ್ಕಳ ಶಿಕ್ಷಣ ಸಾಗುವಾಗ, ನಮ್ಮಲ್ಲಿ ೬—೮ ರಷ್ಟಿದೆ ಈ ಮಕ್ಕಳಷ್ಟೆ ಅಶಿಕ್ಷಿತರಾಗಿರುವ ಲಕ್ಷಗಟ್ಟಲೆ ಪ್ರೌಢ ವಯಸ್ಸಿನ ಸ್ತ್ರೀಪುರುಷರು ನಮ್ಮಲ್ಲಿರುವರು ಈ ಅಶಿಕ್ಷಿತ ಕೋಟಿ ಯಿಂದಾಗಿ, ನಮ್ಮ ಸಂಸ್ಥಾನವು ಯಾವ ವಿಧಾನ ದಿಂದಲೂ ಮುಂದೆ ಬರದಂತಾಗಿದೆ

ಶಾಲೆಗೆ ಹೋಗುವ ವಯಸ್ಸಿನ ಬಾಲಕ ರನ್ನು ಯಾವ ಮುದಿತಕ್ಕೂ ಕಳುಹಬಾರದಂಥ ನಿರ್ಬಂಧಗಳು ಇಂಗ್ಲೆಂಡಿನಲ್ಲಿವೆ ಒಂದಲ್ಲ ಒಂದು ರೂಪವಾಗಿ, ನಿರ್ಬಂಧ ಮೂಲಕವೇ ಅಲ್ಲಿ ಶಿಕ್ಷಣವು ಹಬ್ಬಿರುತ್ತದೆ

ಕಡ್ಡಾಯವಾಗಿ ತೆರಿಗೆ ಹಾಕಿಸುವ ಹಾಗೆ, ಶಿಕ್ಷೆ ವಿಧಿಸಲ್ಪಡುವ ಹಾಗೆ, ಶಿಕ್ಷಣವನ್ನು ವಿಧಿಸಬೇಕಾಗಿ ಹೇಳುವವರೆಷ್ಟೋ ಮಂದಿ ವಿಚಾರಿಗಳು ಇದ್ದಾರೆ ಯಾವುದೊಂದು ತೆರದಲಿ ಇಂತಹ ಒತ್ತಾಯವಿಲ್ಲದೆ ಹೋದರೆ, ಇನ್ನೂ ವಿಳಂಬದಿಂದ ಇನ್ನಷ್ಟು ಹಾನಿಯೇ ಉಂಟಾಗುವುದರಲ್ಲಿ ಸಂದೇಹವಿಲ್ಲ

ಸರಕಾರವು ಕೇಂದ್ರಾಯದಿಂದ ಒಂದು ನಿಧಿಯನ್ನು ಕೂಡಲೆ ವಿದ್ಯಾಪ್ರಚಾರಕ್ಕೆ ಮೂಲ ಧನವಾಗುವಂತೆ ಏರ್ಪಡಿಸಿಕೊಳ್ಳಬೇಕಾಗಿದೆ 'ಹಣವಿಲ್ಲ' ಎಂಬ ಮಾತು ವಿದ್ಯಾಪ್ರಚಾರದ ಪ್ರಸ್ತಾಪಕ್ಕೆ ಹಚ್ಚುವಂತಾಗಬಾರದು ಶಿಕ್ಷ ಕರ ವೇತನ, ಮೊದಲಾದ ವೃತ್ತಿ ಸೌಕರ್ಯ ಗಳು ಒದಗುವಂತಾಗಬೇಕು

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲುಗಳು ತಾವಾಗಿ ಈ ವಿಚಾರಗಳಲ್ಲಿ ಅಷ್ಟು ಶ್ರದ್ಧೆ ಯಿಂದ ಕೆಲಸಮಾಡಿಲ್ಲೆಂದು ಸರಕಾರವುದೂರು ತ್ತಲಿದೆ. ಲೋಕಲ್‌ಬೋರ್ಡುಗಳ ಪ್ರತಿನಿಧಿ ಗಳೇ ಹೆಚ್ಚಾಗಿರುವ ಈ ಕೌನ್ಸಿಲುಗಳಿಂದ ವಿಶೇಷವೇನೂ ಕಾರ್ಯವಾಗಲಿಲ್ಲವೆಂದೂ ದೂರುವವರಿದ್ದಾರೆ ಶಿಕ್ಷಣ ವಿಷಯಗಳಲ್ಲಿ ಅನುಭವವುಳ್ಳವರಷ್ಟೆ ಈ ಕೌನ್ಸಿಲುಗಳಲ್ಲಿ ಸ್ಥಾನಹೊಂದುವಂತೆ ಏರ್ಪಡಿಸಿದರೆ ಉಪ ಯೋಗವಾಗುವುದು

ಗ್ರಾಮಗಳಲ್ಲಿ ಬಡವರು ಮಕ್ಕಳಿಗೆ ಏನಿಷ್ಟು ದುಡಿಯಲು ಕಲಿಸುವಂತೆ, ೯—೧೦ ವರ್ಷ ವಯಸ್ಸಾಗುತ್ತಲೆ ಅವರನ್ನು ಶಾಲೆ ಗಳಿಂದ ಹಿಂದೆ ಕರೆಸುವರು ಇಂಥ ಕಾಲ ದಲ್ಲಿ, ಆ ಮಗುವಿನಿಂದ ಮನೆಗೆ ದೊರೆವ ಸೇವೆಯ ಬದಲು, ಯಾವ ವಿಧಾನಗಳಲ್ಲಿ ರಿಯಾಯಿತಿ ಅಥವಾ ಇತರ ಪ್ರಯೋಜನಗಳು ದೊರೆಯುವ ಹಾಗೆ ಸರಕಾರವು ಏನು ಮಾಡು ವುದು? ಪಾಶ್ಚಾತ್ಯರಲ್ಲಿ ಹೇಗೆ ಸುಧಾರಿಸಿ ಕೊಂಡಿರುವರು?

ಬೆಳಗ್ಗೆ ಅಥವಾ ಸಂಜೆಹೊತ್ತಿಗೆ ಮಾತ್ರ ಇಂಥ ಮಕ್ಕಳು ಶಾಲೆಗೆ ಬಂದು, ಉಳಿದ ಸಮಯವನ್ನು ಹೊಲದ ಅಥವಾ ಇತರ ಕೆಲ ಸಕ್ಕೆ ವಿನಿಯೋಗಿಸುವಂತೆ ಮಾಡಿದರಾಗದೆ? ಆದರೆ, ಹಾಗೆ ಮಾಡಲು, ರಾತ್ರಿ ಶಾಲೆಗಳಿಂದ ವಿಶೇಷ ಪ್ರಯೋಜನವಿಲ್ಲವಾಗಿ ಡೈರೆಕ್ಟರರೇ ಅಭಿಪ್ರಾಯಕೊಟ್ಟಿರುವರಲ್ಲ! ಇಡೀ ಹಗಲು ದುಡಿದು ಬೇಸತ್ತ ಮಗು ರಾತ್ರಿ ವೇಳೆ ಏನನ್ನು ಹೇಗೆ ಕಲಿತುಕೊಳ್ಳಬಹುದು? ದೇಹ ದಣಿದು ಆಹಾರ ಪೂರ್ತಿಹೊಂದದ ಮಗು ಪಾಠ ಕಲಿಯುವುದುಂಟೆ?

ಹೆತ್ತವರಿಗೆ ಸರಿಯಾಗಿ ಬೋಧಿಸಿ ಉತ್ತಮ ರೀತಿಯ ಮತ್ತು ಅತ್ಯಾವಶ್ಯಕವಾಗಿರುವಷ್ಟೆ ಇರುವ ಶಿಕ್ಷಣವನ್ನು ಕೊಡುವಾಗ, ಕಾನೂನು ಪ್ರಕಾರ ಒತ್ತಾಯಗಳನ್ನು ಮಾಡಬೇಕಾಗು ವುದು

ಮಕ್ಕಳ ದುಡಿತ ತಪ್ಪಿದುದಕ್ಕೆ ಪರಿಹಾರ ದ್ರವ್ಯವನ್ನು ಕೊಡುವುದಕ್ಕೂ, ತರ್ಬೇತಾದ ಉಪಾಧ್ಯಾಯರ ಮೂಲಕ ಗ್ರಾಮ ಶಾಲೆ ಗಳನ್ನು ನಡೆಸಿ ಬರುವುದಕ್ಕೂ ಇಡೀ ದೇಶಕ್ಕೆ ೫೦ ಕೋಟಿ ರೂಪಾಯಿ ಬೇಕಾಗುವುದಾಗಿ ಹಾರ್ಟೋಗ ಕಮಿಟಿಯ ವರದಿ ಹೇಳುವುದು ಒಂದೇ ಸಲ ಇಷ್ಟು ಹಣ ಸಿಗಬೇಕಾದರೆ ಬಲು ಪ್ರಯಾಸ ಹಲವು ವರ್ಷಗಳ ತನಕ ಕೆಲವು ಕೋಟಿ ರೂಪಾಯಿಗಳನ್ನು ವಿಂಗಡಿಸಲಾಗಿರಿಸಿ ಇದು ಸಾಧ್ಯವಾಗುವಂತೆ ಮಾಡಬಹುದು ಇದಲ್ಲದೆ, ಸುಮ್ಮನೆ ಈ ಕೋಮುವಾರು ನಸುಗೆಂಪು ಕಿರಣ ಗಳನ್ನು ಹರಡಿಸಿ, ಈಗ ಬೆಳಗುತ್ತಿದ, ನವಯುಗ ಮಾಡುತ್ತಿದೆ ಎಂದು ಭಾಸಗೊಳಿ ಸುವ ಸಂಧ್ಯಾರಾಗವನ್ನು ಹರಡಿಸುವುದರಲ್ಲಿ ಉಪಯೋಗವಿಲ್ಲವೆನ್ನಬಹುದು

ಸ್ಫುಟವಿಚಾರಗಳು

ಸಿವಿಲ್ ಸರ್ವಿಸ್

ಈ ವರ್ಷದ ಸಿವಿಲ್ ಸರ್ವಿಸ್ ಪರೀಕ್ಷೆ ಯಲ್ಲಿ ೧೪ ಬ್ರಿಟಿಷರೂ ೬ ಹಿಂದೀಯರೂ ಉತ್ತೀರ್ಣರಾದರು ಬ್ರಿಟಿಷರೊಳಗೆ ೧೪ರಲ್ಲಿ ಒಬ್ಬರೇ ಮಾತ್ರ ನಮ್ಮ ದೇಶದಲ್ಲಿ ಕೆಲಸ ನೋಡಲು ಒಪ್ಪಿಕೊಂಡರು ಉಳಿದವರ ಇಲ್ಲಿ ಮುಂದೆ ತಮ್ಮ ಸರ್ವಿಸನ್ನು ಕಾಪಾಡಲು ಎಷ್ಟೋ ರಕ್ಷಾ ಕವಚಗಳೇ ಮೊದಲಾದ ವ್ಯ ಬೇಕಾಗುವಂತೆ ಇಂಡಿಯಾ ಆಕ್ಟಿನಲ್ಲಿ ಇದ್ದು ದನ್ನು ನೋಡಿಯೂ, ತಮಗೆ ಭಾರತ ವರ್ಷ ದಲ್ಲಿ ನೌಕರಿಯೇ ಬೇಡವೆಂದರು ಈ ಪರೀಕ್ಷೆಗೆ ಕೂತ ೩೬ರಲ್ಲಿ ೨೬ ಮಂದಿ ತಮಗೆ ಇಂಡಿಯನ್ ಸಿವಿಲ್ ಸರ್ವಿಸ್ ಬೇಡವೆಂದರು ಕೊನೆಗೆ ೫ ಮಂದಿ ಬ್ರಿಟಿಷರನ್ನೂ ೧೫ ಮಂದಿ ಹಿಂದೀಯರನ್ನೂ ಈ ವರ್ಷ ಸರ್ವಿಸಿಗೆ ಸೇರಿಸಿ ಕೊಂಡುದಾಗಿದೆ ೧೯೩೧ರಲ್ಲಿ ೨೫ ಬ್ರಿಟಿ ಷರೂ ೯ ಹಿಂದೀಯರೂ ನೇಮಕ ಹೊಂದಿ ದ್ದರು ಹಿಂದೀಯರಿಗೆ ಈ ಕೆಲವು ಸುಧಾ ರಣೆಗಳನ್ನು ಕೊಟ್ಟ ಕೂಡಲೇ, ಮುಂದೆ ಬ್ರಿಟಿ ಷರು ಇಲ್ಲಿ ಬದುಕುವುದೇ ಕಷ್ಟವಾದೀತೆಂದು ದೊಡಲಾಗಿ, ಇಂಡಿಯಾ ಆಕ್ಟನ್ನು ವಿರೋಧಿ ಸುವ ಅವಸರದಲ್ಲಿ ಸಾರಿದ ವಿರುದ್ಧ ಪಕ್ಷದ ವರ ಡಂಗುರದ ಫಲವಾಗಿ, ಬ್ರಿಟಿಷರು ಇನ್ನು ಕಡಮೆಯಾಗಿಯೆ ಇತ್ತ ಅಧಿಕಾರ ಹೊಂದಲು ಅಪೇಕ್ಷಿಸುವ ಹಾಗಾಯಿತು ಹೊರತು, ಭಾರ ತೀಯರಿಗೂ ಹೆಚ್ಚಿನ ಸೌಕರ್ಯವು ದೊರೆ ವಂತಾಯಿತು ಸಿವಿಲ್ ಸರ್ವಿಸಿನಲ್ಲಿ ಆಗು ವಷ್ಟು ಮಂದಿ ಹಿಂದೀಯರಿಗೆ ಕೆಲಸ ಸಿಗ ಬೇಕೆಂದು ಸಾಧಿಸಿದವರು ಈ ಭಾಗದಲ್ಲಿ ತೃಪ್ತಿಹೊಂದುವರು ಆದರೆ, ಬ್ರಿಟಿಷರಲ್ಲಿ ಉತ್ತಮ ಉಮೇದುವಾರರು ನಮ್ಮಲ್ಲಿಗೆ ಬರ ಬೇಕೆಂದು ಆಶಿಸುವವರು ಮಾತ್ರ ನಿರಾಶರಾ ಗುವರು

ಕೃಷಿಯ ಅಭಿವೃದ್ಧಿ

ಹೇಗೆ ಸಾಧ್ಯವಾಗುವುದೆಂದು ವಿಮರ್ಶಿಸಿ ಸೂಚನೆಗಳನ್ನು ಕೊಡುವುದಕ್ಕಾಗಿ, ಮದ್ರಾಸು ಸರಕಾರವು ನೇಮಿಸಿರುವ ಇಕಾನೊಮಿಕ್ ಕೌನ್ಸಿಲು ತಾ ೧೬ರಲ್ಲಿ ಸೇರಿತು. ನಮ್ಮ ಶ್ರೀ ಎ ಬಿ ಶೆಟ್ಟರೂ ಈ ಕಮಿಟಿಯ ಮೆಂಬ ರರು. ಸಂಸ್ಥಾನದಲ್ಲಿ ರೈತರು 'ಸ್ವಕವಂಥರ' ರಾಗಿರುವುದಕ್ಕಿಂತಲೂ ಹೆಚ್ಚಾಗಿ 'ಸಾಲ ಮಂದಿಗ'ರಾಗಿರುವರೆಂದೂ ಹೇಳಬಹುದಾಗಿ ರುವ ವಿದ್ಯಮಾನಗಳನ್ನು ವರ್ಣಿಸಿರುವ ಶ್ರೀ ಸತ್ಯನಾಥನ್‌ರವರ ರಿಪೋರ್ಟನ್ನು ಮೊದಲು ಈ ಕಮಿಟಿಯು ಚರ್ಚಿಸಿತು ನಂತರ, ಹತ್ತು ವರ್ಷಗಳೊಳಗೆ ಹೇಗೆ ಗ್ರಾಮಾಭ್ಯುದಯವನ್ನು ಸಾಧಿಸಬೇಕೆನ್ನುವುದನ್ನು ಕುರಿತಾಗಿ ಇತ್ಯರ್ಥಿ ಸಲು ಚಿಕ್ಕ ನಾಲ್ಕು ಕಮಿಟಿಗಳನ್ನು ನೇಮಿಸ ಲಾಯಿತು ಕೃಷಿಯ ಉನ್ನತಿ ಜಮೀನುದಾರು ಗಳ ಸಂಗೋಪನ, ಗೊಬ್ಬರಗಳು, ಜಮೀನು ಗಳು ವಿಭಾಗಹೊಂದದಂತೆ ಮಾಡುವ ಉಪಾ ಯಗಳು, ಇವನ್ನು ಕುರಿತು ಒಂದು ಕಮಿ ಟಿಯು, ನೀರಾವರಿ ಕೆಲಸಗಳು, ಹೊಸ ಬಾವಿ ಗಳ ಇತ್ಯಾದಿಗಳನ್ನು ಕುರಿತಾಗಿ ಒಂದು ಕಮಿಟಿಯೂ, ಕಬ್ಬಿನ ಸಾಗುವಳಿ, ಹೈನ, ಹಣ್ಣು ಗಳ ಬೆಳವಣಿಗೆ ಮತ್ತು ಮಾರಾಟ, ಹಾಲನ್ನು ಮಾರುವ ಬಗೆ ಇವನ್ನು ಪರ್ಯಾಲೋಚಿಸುವ ಒಂದು ಕಮಿಟಿಯೂ, ಹಳ್ಳಿಗರ ಸಾಲವನ್ನು ಕಡಮೆಮಾಡಲು ಸಾಧನೆಗಳನ್ನು ಸೂಚಿಸಲು ಇತ್ಯಾದಿ ಕಮಿಟಿಯೂ ಹೀಗೆ ನೇಮಕ ಹೊಂದಿವೆ ಇವಲ್ಲದೆ, ಆಳಕ್ಕೆ ಹೊಕ ಮೊದ ಲಾದುವು ಇದೇ ಆಧಿವೇಶದಲ್ಲಿ ಒಪ್ಪಿತ ಬಗೆ ಯಾಗುವ ಹಾಗೂ ಆಲೋಚಿಸಲಾಗುವುದು

ಖಾದೀ ಪ್ರದರ್ಶನ.

ದೇಶದ ಸಾಂಪತ್ತಿಕ ವಿದ್ಯಮಾನಗಳಿಗೆ ಅನುಸಾರವಾಗಿ ತಾನೆ ನಮ್ಮ ಸ್ವದೇಶೀ ವ್ರತವು ಅನುಷ್ಠಾನದಲ್ಲಿರಬೇಕ ವಿನಾ, ಪರದೇಶೀಯರ ದ್ವೇಷವನ್ನು ಬೆಳಸಿಯಲ್ಲ 'ದೇಶೀ ವಸ್ತು ಗಳನ್ನೆ ಪಡೆಯಿರಿ' ಎನ್ನುವುದಕ್ಕೂ, 'ಪರದೇಶೀ ವಸ್ತುಗಳನ್ನು ಬಹಿಷ್ಕರಿಸಿರಿ' ಎನ್ನುವುದಕ್ಕೂ ಬಹಳ ಅಂತರವಿದೆ ರಾಜಕೀಯ ವಿಚಾರ ಗಳನ್ನು ಬದಿಗಿರಿಸಿ, ಸಾಂಪತ್ತಿಕ ವಿಚಾರಗಳನ್ನು ಮಾತ್ರ ಆಲೋಚಿಸಿ, ನಮ್ಮ ಹಿತವು ದೇಶೀಯ ಕೈಗಾರಿಕೆ ದೇಶೀಯ ವಸ್ತು ಮಾರಾಟಗಳಿಂ ದಲೇ ಸಾಧಿತವಾಗುವುದೆಂದು ನಾವು ನಿಷ್ಕ ರ್ಷಿಸಬೇಕು ಆಗ ತಾನೆ, ಪರದೇಶೀಯರು ನಮಗೆ ಮಾಡಬಹುದಾಗಿರುವ ಸಹಾಯವನ್ನೂ ಕಲಿಸಬಹುದಾದ ಉಪಾಯಗಳನ್ನೂ ನಾವು ಅಗತ್ಯವಾಗಿಯೂ ಪಡೆದುಕೊಳ್ಳಲೇಬೇಕು ಹಿಂದೂದೇಶದಲ್ಲಿಯೆ ಹಿಂದೀ ಕೆಲಸಗಾರರು ಹಿಂದೀ ವಸ್ತುಗಳಿಂದ ತಯಾರಿಸುವ ಕೈಗಾ ರಿಕೆಯು ಹಿಂದೀಯರದಲ್ಲೆಂದು, ಅದರ ಆಡ ಳಿತವು ಪರದೇಶೀಯರ ಕೈಯಲ್ಲಿರುವ ಮಾತ್ರಕ್ಕೆ ನಿಷ್ಕರ್ಷಿಸುವುದು ಉಚಿತವೆ? ಎಂಬ ಪ್ರಶ್ನೆ ಯನ್ನು ಖಾದೀ ಪ್ರದರ್ಶನದ ಕಾಲದಲ್ಲೂ ಎತ್ತುವವರಿದ್ದಾರೆ. ಇದಕ್ಕೆ ಉತ್ತರವಿಷ್ಟೆ: ಹಿಂದೀಯರಿಗೆ ಬೇಕಾಗುವುದೇನಿದೆ ಎಂದು ಮೊದಲು ನಿಷ್ಕರ್ಷಿಸಲಿ, ಅವುಗಳನ್ನು ಹಿಂದೀ ಯರಿಂದಲೇ ಒದಗಿಸಿಕೊಳ್ಳಲಿ, ಹೊರತು, ಇತರ ದೇಶೀಯರ ವ್ಯಕ್ತಿಯನ್ನು ಕಳೆದುಕೊಳ್ಳುವಂತೆ ಮಾತ್ರ ಸಾಧಿಸದಿರಲಿ

ಹಿಂದೀಯರ ಭಾಗ್ಯವೇ ನಮ್ಮ ಭಾಗ್ಯ.

ಹೀಗೆಂದು ನಮ್ಮ ವೈಸರಾಯರು ಬ್ರಿಟಿಷ ವರ್ತಕಮಂಡಲಿಗೆ ಸೂಚಿಸಿ, ಹಿಂದೀಯರ ಆಕಾಂಕ್ಷೆಗಳು ಯಾವುವೋ ಅವನ್ನು ನೀವೂ ತಿಳಿದುಕೊಂಡು, ದೇಶವು ಅಭಿವೃದ್ಧಿಹೊಂದುವುದಕ್ಕೆ ಅಗತ್ಯವಾಗಿರುವ ಸಹಾಯವನ್ನು ಮಾಡಲು ಹಿಂದೆಗೆಯಕೂಡದು ಎಂದು ಬೋಧಿಸಿರುವರು. ರಾಷ್ಟ್ರಸಭೆಯವರಾದರೂ ಪರಕೀಯರು ಕ್ಷುದ್ರರೆಂದು ಎಂದೂ ಹೇಳುತ್ತಿಲ್ಲ. ಹಿಂದೀಯರ ಹಿತಚಿಂತನೆಮಾಡುವವರೆಲ್ಲರೂ ಹಿಂದೀಯರೆ ಎನ್ನುವಷ್ಟು ಬಾಂಧವ್ಯವು ನಮ್ಮಲ್ಲಿದೆ. ಸೇಠ್ ಜಮಾಲ್ ಮಹಮ್ಮದ ಸಾಹೇಬರು ಭಾಷಣಮಾಡುವಾಗಲೂ, ಯಾರು ನಮಗೆ ಯೋಗ್ಯ ಸಹಾಯಮಾಡಿ ನಮ್ಮ ಆಶಯಗಳು ಕೈಗೂಡುವಂತೆ ಮಾಡಬಲ್ಲರೋ ಅವರೆಲ್ಲರನ್ನು ನಾವು ಆದರದಿಂದ ನಮ್ಮವರೆಂದೇ ಕಾಣುತ್ತೇವೆ ಎಂದರು. ವೈಸರಾಯ ಸಾಹೇಬರ ಮಾತು ಕೇವಲ ಉಪಚಾರದ ಮಾತಲ್ಲ, ಅವರು ಬ್ರಿಟಿಷ ರಾಜಕಾರಣದಲ್ಲಿ ನುರಿತವರು, ಇವರು ಕೊನೆಯುಸಲ ಎಂಬಂತೆ ಬ್ರಿಟಿಷ ವರ್ತಕರಿಗೆ ನವಸುಧಾರಣೆಗಳು ಬರಲಿರುವ ಈ ಕಾಲದಲ್ಲಿ, ಯಾವ ರೀತಿ ನಡೆಯಬೇಕೆಂದು ಸೂಚನೆ ಕೊಟ್ಟಿರುವರೋ ಅವನ್ನು ವೈಸರಾಯರ ಮಾತಿನ ಮೇಲೆ ಗೌರವವನ್ನಿಟ್ಟಾದರೂ ಬ್ರಿಟಿಷ ವರ್ತಕರು ಮನ್ನಿಸಿ ನಡೆದರೆ, ಅವರಿಗೂ ನವ ಗಣದೇಶಕ್ಕೂ ಸುಖವುಂಟು, ಕ್ಷೇಮವುಂಟು

ಶಾಂತಿಸಾಧನೆ.

ಶಾಂತಿಯುಂಟಾಗಬೇಕಾದುದು ಅಗತ್ಯ, ಶಾಂತಿಸಾಧಕರನ್ನು ಕೊಂಡಾಡುವುದು ಅಗತ್ಯ ಕರ್ತವ್ಯ ಹಾಗೆಂದು, ಅಬಿಸೀನಿಯದ ಕೆಲ ವಂಶವನ್ನು ಇಟಲಿಗೆ ಕೊಡುವುದರ ಮೂಲಕ ರಾಕ್ಷಸೀ ಆಕಾಂಕ್ಷೆಯನ್ನು ತೃಪ್ತಿಗೊಳಿಸಿಯೇ ಶಾಂತಿಸಾಧಿಸುವ ಕ್ರಮವಾದರೆ, ಇತರರ ಮಕ್ಕಳನ್ನು ಬಲಿಗೊಟ್ಟು ತನ್ನ ಮನೆಯನ್ನು ಉಳಿಸಿಕೊಳ್ಳುವ ಗೃಹಸ್ಥನ ನೀತಿಯಂತೆ, ಈ ಕ್ರಮವನ್ನು ಶೀಘ್ರವಾಗಿ ನಿಷೇಧಿಸಬೇಕಾಗುವುದು ಅಬಿಸೀನಿಯದ ಅರ್ಧಾಂಶ ಇಟಲಿಗೆ, ಉಳಿದ ಅರ್ಧಾಂಶಿಯ ಲೀಗಿನ ಆಡಳಿತ, ಅಬಿಸೀನಿಯದ 'ಮಹಾಸಮ್ರಾಟರು ಹಾಗಾದಲ್ಲಿ ಯಾವ ಸಾಮ್ರಾಜ್ಯವನ್ನು ಆಳುವವರ ? ಸಿಡಿಗುಂಡು ಚೆಲ್ಲುವ ಮೊದಲ ಸಂಧಾನದಿಂದ ದೊರೆಯಬಹುದಾದುದನ್ನು ಪಡೆದು ತೃಪ್ತನಾಗದೆ, ಈಗ ಇಷ್ಟು ದರ್ಪದಿಂದ ಜನನಾಶ ಮಾಡಿದ ಬಳಿಕ ಇಟಲಿಗೆ ಕೊಡುವುದೆಂದರೆ ಅಬಿಸೀನಿಯವು ತಲೆಯೇ ಇಲ್ಲದವರ ದೇಶವೆ? ಇನ್ನೊಂದು ವಿಚಿತ್ರವಿದೆ ಇಟಲಿಯಿಂದ ಒಬ್ಬ ಚಿಲ್ಲರೆ ವ್ಯಾಪಾರಿಯು ಇಷ್ಟು ಹಣವನ್ನು ಗಳಿಸಿಕೊಳ್ಳಬಾರದಂತೆ, ಆದರೆ, ಸಾವಿರಾರು ಟನ್ ಎಣ್ಣೆಯನ್ನು ಇಟಲಿಗೆ ಮಾರಬಹುದಂತೆ ಬ್ರಿಟಿಷ ಸರಕಾರಕ್ಕೇ ಹೆಚ್ಚಿನ ಪಾಲುಗಳಿರುವ ಒಂದು ಕಂಪೆನಿಯವರು ಇಟಲಿಗೆ ಇತ್ತೀಚೆಗೆ ಮಾರುವ ಪೆಟ್ರೋಲು ಧಾರಾಳವಾಗಿದೆ, ಆದರೆ ಇವರು ಕಡಮೆ ಮಾಡುತ್ತ ಬಂದರೂ, ಇತರ ರಾಷ್ಟ್ರಗಳಿಂದ ಎಷ್ಟೋ ಅಧಿಕ ಪ್ರಮಾಣದಲ್ಲಿ ಎಣ್ಣೆಯು ಇಟಲಿಯನ್ನು ಸೇರುತ್ತಿದೆ! ಎಣ್ಣೆ ಮಾರುವುದಿಲ್ಲವಾದಲ್ಲಿ ಅದೊಂದು ಯುದ್ಧಕ್ರಿಯೆ ಎಂದು ಅರ್ಥವೆಂದು ಇಟಲಿ ಎನ್ನುತ್ತಿದೆ ಎಣ್ಣೆ ಮಾರಾಟ ನಿಲ್ಲಿಸುವುದಕ್ಕೆ ಶತಪ್ರಯತ್ನ ಮಾಡುವವರು ಸಭೆ ಪತ್ರವ್ಯವಹಾರಗಳಲ್ಲೇ ಮಗ್ನರಾಗಿರುತ್ತಾರೆ ಎಣ್ಣೆ ಬರುವಾಗ ಗಾಡಿ ಮುರಿಯಬಹುದೇ ವಿನಾ, ಯುದ್ಧ ಮುರಿಯದು

ಹೀಗೂ ಆಗುತ್ತಿದೆಯಲ್ಲ!

ಲಂಡನಿನಲ್ಲೊಂದು ನಾಟಕ ಪ್ರದರ್ಶನ ಆದರಲ್ಲಿ ಒಬ್ಬ ಸೇವಕನ ಹೆಸರನ್ನು ಹಿಟ್ಲರನೆಂದು ಇಟ್ಟಿದ್ದರು. ಜರ್ಮನ ರಾಯಭಾರಿಗಳು ಈ ವಿಷಯಕ್ಕೆ ಆಕ್ಷೇಪವೆತ್ತಿ ದೂರಿದರು ಹೆಸರನ್ನು ಜೋರ್ಜ ಬರ್ನಾರ್ಡ ಗಾಂಧಿ ಎಂದು ಬದಲಾಯಿಸಿದರು. ಅದಕ್ಕೂ ಜರ್ಮನ ರಾಯಭಾರಿ ಒಡಂಬಡಲಿಲ್ಲ, ಜೋರ್ಜ ಬರ್ನಾರ್ಡ ಶೋ ಅಂಥ ಮಹಾಸಾಹಿತಿಯು ಯೆಹೂದ್ಯ ಕುಲದವನೆಂದು, ಆದಾಗದೆಂದರು. ಕೊನೆಗೆ ಆ ಸೇವಕನನ್ನು ನಾಟಕದಲ್ಲಿ ಗಾಂಧಿ ಎಂದು ಕರೆಯಬಹುದಾಗಿ ನಿರ್ಣಯವಾಯಿತು. 'ಇನ್ನು ಗಾಂಧಿಯವರು ಟೆಲಿಫೋನ್ ಮೂಲಕ ದೂರಿದ್ದರೆ ಸಾಕು' ಎಂದು ಬ್ರಿಟಿಷ ಮುಖ್ಯರಿಯು ಮಾತು ಗಾಂಧಿಯವರು ಬರೇ ಅರೆ ತುಂಡು ಬಟ್ಟೆ ಸುತ್ತಿಕೊಂಡು ದರಿದ್ರವಾಗಿರುವ ಹಿಂದೀಯರು. ಅವರು ದೂರುವರೇ? ದೂರಿದರೇನು? ಅವರು ಕೆಂಪಂಗಿ, ಕಪ್ಪಂಗಿ, ತೊಟ್ಟುಕೊಂಡವರಲ್ಲವಷ್ಟೆ, ಎಂದ ಮೇಲೆ ಈ ಮುತ್ಸದ್ದಿಗಳಿಗೇನು ಬೆದರಿಕೆ? ನಾಟಕಕ್ಕೇನು ಆತಂಕ, ಆಕ್ಷೇಪ?

ಮಂಗಳೂರು

ಖಾದಿ ಮತ್ತು ಗ್ರಾಮ ಕೈಗಾರಿಕೆಯ (ಪ್ರಕಟನ ಶಾಖೆಯಿಂದ)

ಈ ಪ್ರದರ್ಶನವು ಒಕ್ಕಲಿಗರ ಸಂಘದಲ್ಲಿ ತಾ ೨೯-೧೨-೧೯೩೫ನೇ ಭಾನುವಾರ ತೆರೆಯಲ್ಪಡುವುದು ಕರ್ನಾಟಕದ ಸುಪ್ರಸಿದ್ಧ ಮುಂದಾಳುಗಳಾದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಆರಂಭೋತ್ಸವವನ್ನು ನೆರವೇರಿಸುವರು,

ಪ್ರದರ್ಶನಕ್ಕೆ ಬರುವ ಸಾಮಾನುಗಳಿಗೆ ಎಂ. ಎಸ್ ಎಂ ರೈಲ್ವೇ ಕಂಪೆನಿಯವರು ರಿಯಾಯತಿ ದರವನ್ನು ಕೊಡಲು ಒಪ್ಪಿದ ದರು ಮೈಸೂರು ರೈಲ್ವೆ ಕಂಪೆನಿಗೂ ಸಹ ರಿಯಾಯತಿ ಬಗ್ಗೆ ಅರ್ಜಿ ಹಾಕಿದೆ ಸಾಮಾನುಗಳನ್ನು ಕಳುಹಿಸುವವರು ಸ್ಟೇಷನ್ ಮಾಸ್ಟರುಗಳನ್ನು ವಿಚಾರಿಸಿ ರಿಯಾಯತಿ ಪಡೆಯಬೇಕೆಂದು ಸೂಚನೆ

ವೈದಿಕ ಸಂಸ್ಕಾರ

ಇದೇ ತಿಂಗಳ ಕಳೆದ ತಾ ೯ನೇ ಸೋಮವಾರ ಸಾಯಂಕಾಲ ಘಂಟೆ ೬ಕ್ಕೆ ದೇರೆಬೈಲಲ್ಲಿರುವ ರಾಮಪೂಜ ರಿಗಳ ನೂತನ ಗೃಹ ಪ್ರವೇಶವು ಮಂಗಳೂರು ಸಿಟಿ ಆರ್ಯಸಮಾಜದವರ ಮುಖಾಂತರ ವೈದಿಕ ರೀತಿಯಲ್ಲಿ ಆಯಿತು ಸುಮಾರು ೯ ಗಂಟೆಯ ವರೆಗೆ ಸಂಪೂರ್ಣ ವಿಧಿಯುಕ್ತ ಬೃಹತ್ ಯಜ್ಞವು ವೇದ ಮಂತ್ರ ಘೋಷಣೆಯೊಂದಿಗೆ ನಡೆಯಿತು ಶ್ರೀಮಾನ್ ಬಿ ಒಕ್ಕುಣದೇವ ವಿದ್ಯಾರ್ಥಿಯವರು ಎಂ ಕೆ ಪಂಡಿತ ಮೊದಲಾದವರ ಪೌರೋಹಿತ್ಯವನ್ನು ವಹಿಸಿದ್ದರು

ಹರಿಕಥೆ

ಇದಾದ ಮೇಲೆ ಶ್ರೀ ವಿದ್ಯಾರ್ಥಿಯವರ ರಾಮರಾಜ್ಯಾಭಿಷೇಕ ಎಂಬುದರ ಕುರಿತು ಸುರಸವಾದ ಗಾನ ಮತ್ತು ವ್ಯಾಖ್ಯಾನದೊಂದಿಗೆ ಹರಿಕಥೆಯನ್ನು ಮಾಡಿದರು ನೆರೆದ ಸಭೆಯವರ ಪೈಕಿ ಶ್ರೀಯುತ ಎನ್ ರಾಮಚಂದ್ರರವರ ವಿದ್ಯಾರ್ಥಿಯವರಿಗೊಂದು ಉತ್ತಮವಾದ ಉಣ್ಣೆಯ ಶಾಲನ್ನು ಪಾರಿತೋಷಕವಾಗಿ ಕೊಟ್ಟರು

ಡಿಸೆಂಬರ ತಾ ೧೪ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೬ ಮರಣಗಳೂ ೫೦ ಜನನಗಳೂ ಆದುವು

ಭಾರತ ರಾಷ್ಟ್ರಸಭೆಯ ಸುವರ್ಣೋತ್ಸವ ಸಮಾರಂಭ.

[illegible] ಭಾರತ ರಾಷ್ಟ್ರಸಭೆಯ ೫೦ನೇ ವರ್ಧಂತಿಯಾದ ಸುವರ್ಣೋತ್ಸವವನ್ನು ದೇಶದಲ್ಲೆಲ್ಲ ಇದೇ ಬರುವ ತಾ ೨೮-೧೨-೧೯೩೫ನೇ ಶನಿವಾರ ದಿವಸ ಜರಗಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ನಿರ್ಧರಿಸಿರುವುದರಿಂದ ರಾಷ್ಟ್ರ ಸಭೆಯು ತನಗೆ ನ್ಯಾಯವಾಗಿರುವ ಗೌರವ ಹಾಗೂ ಆದರಗಳನ್ನು ವ್ಯಕ್ತಪಡಿಸುವುದಕ್ಕಾಗಿಯೂ ಈ ಸಂಸ್ಥೆಯು ಇದುವರೆಗೆ ಮಾಡಿದ ಜನತಾ ಸೇವೆ ಇದರ ಧ್ಯೇಯ ಮತ್ತು ಕಾರ್ಯಕ್ರಮಗಳನ್ನು ಅಸ್ವಸ್ಥ ಪ್ರಚಾರಗೊಳಿಸುವ ಉದ್ದೇಶದಿಂದಲೂ ಈ ಸುವರ್ಣೋತ್ಸವ ಸಮಾರಂಭ [illegible] ಯೋಗ್ಯ ರೀತಿಯಿಂದ ಜರಗಿಸುವುದು ನಮ್ಮೆಲ್ಲರ ಕರ್ತವ್ಯವಾಗುತ್ತದೆ [illegible] ಸುವರ್ಣೋತ್ಸವ ಸಮಾರಂಭವನ್ನು ಈ ಕೆಳಗಿನ ಕಾರ್ಯಕ್ರಮದಂತೆ ಜರಗಿಸಬಹುದು

ಕಾರ್ಯಕ್ರಮ—ಪ್ರಾತಃಕಾಲ ಘಂಟೆ ೫ಕ್ಕೆ ಪ್ರಭಾತ ಫೇರಿ [illegible] ಘಂಟೆ ೮ ಕ್ಕೆ ರಾಷ್ಟ್ರ ಧ್ವಜಾರೋಹಣ, ಸಾಯಂಕಾಲ ಘಂಟೆ ೫ಕ್ಕೆ ಪುರ ಮೆರವಣಿಗೆ ಮತ್ತು ಸಭೆ (ಮೆರವಣಿಗೆಯನ್ನು ಸಭೆಯ ಸಂತರ [illegible] ಮಾಡಬಹುದು) ಮಹಾಸಭೆಯಲ್ಲಿ (೧) ವಂದೇ ಮಾತರಂ ಪ್ರಾರ್ಥನೆ (೨) ಕಾಂಗ್ರೆಸ್ ಅಧ್ಯಕ್ಷರ ಸಂದೇಶ ವಾಚನ (೩) ಕಾಂಗ್ರೆಸ ಇತಿಹಾಸ ಕಾರ್ಯಕ್ರಮ ಮತ್ತು ತತ್ವಗಳ ಕುರಿತು ಭಾಷಣಗಳು

ಮೇಲಿನ ಕಾರ್ಯಕ್ರಮಗಳಲ್ಲದೆ ಈ ಕೆಳಗಿನವುಗಳನ್ನು ನಡೆಸಬಹುದು ೧ ಪ್ರತಿಯೊಬ್ಬರೂ ತಮ್ಮ ಅಂಗಡಿ ಮನೆಗಳಿದ ರು ತಳಿರು ತೋರಣಗಳನ್ನು ಕಟ್ಟಿ ರಾಷ್ಟ್ರ ಧ್ವಜಗಳನ್ನೇರಿಸುವುದು ೨ ಹರಿಜನರಿಗೆ ಅಥವಾ ಬಡವರಿಗೆ ಸಾಧ್ಯವಾದಷ್ಟು ಅನ್ನ ವಸ್ತ್ರಗಳನ್ನು ಕೊಡುವುದು ಹರಿಜನ ಮಕ್ಕಳಿಗಾದರೂ ತಿಂಡಿಗಳನ್ನು ಹಂಚುವುದು, ೩ ಖಾದಿ ಮಾರಾಟ ೪ ಪ್ರತಿಯೊಬ್ಬರೂ ತಮ್ಮ [illegible] ಅಂಗಡಿ ದೀಪಗಳನ್ನು ಇಟ್ಟು ರಾತ್ರಿ ದೀಪೋತ್ಸವ ೫ ರಾತ್ರಿ ಹಿಂದೀ ಅಥವಾ ಕನ್ನಡ ನಾಟಕ ಆಟ ಅಥವಾ ಕಾಲಕ್ಷೇಪ ಇತ್ಯಾದಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿ ಭಾರತ ರಾಷ್ಟ್ರಸಭೆಯ ಈ ಸುವರ್ಣೋತ್ಸವ ಸಮಾರಂಭವನ್ನು ಯಶಸ್ವಿಯಾಗಿ ಜರಗಿಸಿ ರಾಷ್ಟ್ರ ಸಭೆಯ ಮೇಲೆ ಈ ಜಿಲ್ಲೆಗಿರುವ ಅಭಿಮಾನವನ್ನು ತಕ್ಕ ರೀತಿಯಿಂದ ಪ್ರದರ್ಶಿಸಬೇಕಾಗಿ ಜಿಲ್ಲೆಯ ಮಹಾ ಜನರಲ್ಲಿ ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇವೆ

ಎ. ಬಿ. ಶೆಟ್ಟಿ, ಎಂ ಎಲ್ ಸಿ
ಅಧ್ಯಕ್ಷ, ಕಾಂಗ್ರೆಸ್ ಸುವರ್ಣೋತ್ಸವ
ಎಂ ಉಮೇಶ ರಾವ್,
ಅಧ್ಯಕ್ಷ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ

ಇದೇ ತಿಂಗಳ ತಾ ೨೦, ೨೧ ೨೨ ಈ ಮೂರು ದಿನಗಳಲ್ಲಿ ಮಂಗಳೂರು ಸಿಟಿ ಆರ್ಯ ಸಮಾಜದ ಪರವಾಗಿ ಸ್ವಾಮಿ ಶ್ರದ್ಧಾನಂದರ ಬಲಿದಾನದ ದಿನವನ್ನು ಆಚರಿಸಲಾಗುವುದು

ತಾಲೂಕುಗಳಿಂದ

ಕಾಸರಗೋಡು—ಬೋರ್ಡ ಹೈಸ್ಕೂಲಿನ ವರ್ಧಂತಿ ಸಮಾರಂಭವು ಇದೇ ತಿಂಗಳ ತಾ ೨೨ನೇ ಆದಿತ್ಯವಾರ ದಿನ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಶ್ರೀಯುತ ಪಿ ಎ ನಜರತ್ ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಅಂದೇ ಶಾಲೆಯ ಹಳೆಯ ವಿದ್ಯಾರ್ಥಿಗಳ ಕೂಟವು ಜರಗಲಿರುವುದು ಈ ಸಂಬಂಧವಾಗಿ ನಮಗೆ ಹೆಸರು ವಿಳಾಸಗಳು ಗೊತ್ತಿದ್ದ ಹಳೆಯ ವಿದ್ಯಾರ್ಥಿಗಳಿಗೆಲ್ಲಾ ಆಮಂತ್ರಣ ಪತ್ರಗಳನ್ನು ಕಳುಹಿಸಿರುವೆವು ನಮ್ಮ ತಿಳುವಳಿಕೆಗೆ ಬಾರದೆ ಆಮಂತ್ರಣ ಬಿಟ್ಟುಹೋದ ಹಳೆಯ ವಿದ್ಯಾರ್ಥಿಗಳು ಇದನ್ನೇ ನಮ್ಮ ಆಮಂತ್ರಣವೆಂದು ತಿಳಿದು ದಯವಿಟ್ಟು ನಮ್ಮ ಕೂಟಕ್ಕೂ ಶಾಲಾ ವರ್ಧಂತಿಗೂ ಬಂದು ಉಪಕಾರ ಮಾಡಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ ಹಳೆಯ ವಿದ್ಯಾರ್ಥಿಗಳು ಶಾಲಾ ವರ್ಧಂತಿ ಫಂಡಿಗೆ ಕಳುಹಿಸಿ ಕೊಡುವ ಸಹಾಯದ್ರವ್ಯವನ್ನು ಉತ್ಸಾಹದಿಂದ ಸ್ವೀಕರಿಸಲಾಗುವುದು ಎಂದು ಹೆಡ್ಮಾಸ್ತರು [illegible] ಈ ಮೂಲಕ ತಿಳಿಸುತ್ತಾರೆ

ಹೊಸದುರ್ಗ—ಈ ಸರ್ಕಲಿನ ಮತದಾರರಿಗೆ [illegible] ಈ ಸಲದ ಡಿಸ್ಟ್ರಿಕ್ಟ್ ಬೋರ್ಡ ಚುನಾವಣೆಯಲ್ಲಿ ಹೊಸದುರ್ಗ ಸರ್ಕಲಿನಲ್ಲಿ ನನ್ನ ಬಗ್ಗೆ ಉತ್ಸಾಹದಿಂದ ಕೆಲಸಮಾಡಿ ಸಹಾಯಮಾಡಿದವರಿಗೂ ನನಗೆ ಓಟು ಕೊಟ್ಟವರಿಗೂ [illegible] ಈ ಮೂಲಕ ಹೃತ್ಪೂರ್ವಕ ವಂದನೆಯನ್ನು ಅರ್ಪಿಸುತ್ತೇನೆ

ಮೂಲ್ಕಿ—ಈ ಊರಲ್ಲಿ ಪ್ರತಿ ವರ್ಷದಂತೆ ಮಹೋತ್ಸವವು [illegible] ಶ್ರೀ ಸ್ವಾಮಿ [illegible] ಸಂನಿಧಿಯಲ್ಲಿ [illegible] ಅತಿ ವಿಜೃಂಭಣೆಯಿಂದ ನಡೆದಿತು ಜಿಲ್ಲೆಯ ಎಲ್ಲಾ ಕಡೆಗಳಿಂದಲೂ [illegible] ದೇವರ ಸಂಪ್ರ [illegible] ಸಮಾರಂಭಕ್ಕೆ [illegible] ದಿಂದ ಇಷ್ಟು ಜನಸಂದಣಿಯು [illegible] ಬರುತ್ತದೆ ವಾಡಿಕೆ ಪ್ರಕಾರ ಅಭಿಷೇಕ ಪೂಜೆ ದರ್ಶನ ಭೋಜನ ಇತ್ಯಾದಿಗಳಿದ್ದುವು

ಪಡುಬಿದ್ರೆ—ಈ ಊರಲ್ಲಿ ಇದೇ ಕಳೆದ ತಿಂಗಳಲ್ಲಿ ತೆರೆಯಲ್ಪಟ್ಟ [illegible] ವಿದ್ಯಾರ್ಥಿಗಳಿಂದ [illegible] ಸರ್ವ [illegible] ಇನ್ನಸ್ಪೆಕ್ಟರ ಶ್ರೀ [illegible] ಇವರ ಅಧ್ಯಕ್ಷತೆಯಲ್ಲಿ [illegible] ಜರಗಿ, ತನ್ನ ಅಧಿಧಿಯಾದ [illegible] ಗಳನ್ನು [illegible] ಇನ್ಸ್ಪೆಕ್ಟರ [illegible] ವಿದ್ಯಾರ್ಥಿಗಳ [illegible] ಶ್ರೀನಿವಾಸ ರಾವ್ [illegible] ಮತ್ತು [illegible] ರಾವ್ ಇವರ ಉತ್ಸಾಹದಿಂದ [illegible] ಸಭೆಯ [illegible] ಗಾಯನ [illegible] ಗೆಲ್ಲರಿಗೂ [illegible] ಲಾದುವು

ಕೋಟೇಶ್ವರ—ಇಲ್ಲಿಯ [illegible] ಉತ್ಸವದ ಫಲವಾಗಿ ಶ್ರೀ ಶಂಕರನಾರಾಯಣ [illegible] ಮಂಡಲಿ ಎಂಬ ಹೆಸರಿನ ನವೀನ ರೀತಿಯ ಭಜನೆಯ ಕೂಟವೊಂದು ಸ್ಥಾಪಿಸಲ್ಪಟ್ಟಿದೆ ಪರಮಾತ್ಮನ ಬೆಂಬಲ ದೊರೆಯಲೆಂದು ನ ರಲಿಯು ಪ್ರಾರ್ಥಿಸುತ್ತದೆ

ಕಾರ್ಕಳ—ಕಳೆದ ೨೦ ವರ್ಷಗಳ ಲಾಗಾಯ್ತು ಕಾರ್ಕಳ ಶ್ರೀ ಪದ್ಮಾವತಿ ವೈಶ್ಯ ಸಮಾಜದ ಶ್ರೀ [illegible] ಭದ್ರ ನಿಲಯದ ಅರ್ಚಕ [illegible] ಸಮಾಜದ ನಾಯಕ, ನ್ಯಾಯವಾದಿ [illegible] ವಿಶ್ವಾಸ ಪಾತ್ರ [illegible] ಸಮಾಜ [illegible] ರಂಜನ [illegible] ದಿವಸ [illegible] ಗಳ ನಿರಂತರ ಬಾಳೆಸಿದ [illegible] ಕಿರಿಯ [illegible] ಬುಧವಾರ [illegible] ವಯಸ್ಸಿನಲ್ಲಿ ಹೃದಯರೋಗದಿಂದ [illegible] ರಾಗಿ, ತನ್ನನ್ನು [illegible] ಗೌರವಗಳಿಂದ [illegible] ಕಾರ್ಕಳ ಪುರದ ಮತ್ತು ಹೊರಬಗೆಯ [illegible] ಸಮಾಜ ಬಾಂಧವರನ್ನೂ [illegible] ರನ್ನೂ ದುಃಖಾಬ್ಧಿಯಲ್ಲಿ ಮುಳುಗಿಸಿದರು ಶ್ರೀಯುತರ ದುಃಖಿತ ಕುಟುಂಬಕ್ಕೆ ಸಮಾಧಾನವನ್ನೂ, ಆತ್ಮಕ್ಕೆ ಸದ್ಗತಿಯನ್ನೂ [illegible]

ಶ್ರೀ [illegible] ಪ್ರಭುಗಳು ಶ್ರೀ ವೆಂಕಟ್ರಮಣ ದೇವಾಲಯದ ಪ್ರಥಮ [illegible] ದಿಂದ ಶ್ರೀ ದೇವಸ್ಥಾನದ ಅಂತರಂಗ [illegible] ಸುಧಾರಣೆಗಳು ಆರಂಭವಾಗಿರುವುದು ಸಂತೋಷದ ಸಂಗತಿಯಾಗಿದೆ [illegible] ಪೀಠ [illegible] ಮಂದಿಗಳು [illegible] ಅಗುವಂತೆ ಈಗ [illegible] ಶ್ರೀ ದೇವಸ್ಥಾನದ [illegible] ಸಂಬಂಧವಾದ ಆದಾಯವು ಉತ್ತಮ ರೀತಿಯಿಂದ ಆಗುತ್ತಿದೆ

ತಾ ೧೪-೧೨-೧೯೩೫ರ ದಿನ ನಡೆದ ಕಾಂಗ್ರೆಸ್ [illegible] ಸಭೆಯಲ್ಲಿ ಮೊದಲೇ ಪ್ರಕಟವಾದ ಕಾರ್ಯಕ್ರಮದಂತೆ ವರದಿ [illegible] ಲೆಕ್ಕ ಪರಿಶೋಧನೆ, ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ [illegible] ಜಿಲ್ಲಾ ಕಮಿಟಿಗೆ ಸದಸ್ಯರ [illegible] ರಾಷ್ಟ್ರಸಭೆಯ ಸುವರ್ಣ ಮಹೋತ್ಸವವನ್ನು ಜರಗಿಸುವ [illegible] ಆಗಿರುವುದು [illegible] ಮುಂದಿನ ವರ್ಷದ [illegible] ಅಧ್ಯಕ್ಷರಾಗಿ [illegible] ಬಂದಿರುವರು

ಬರುವ ಫೆಬ್ರುವರಿ ತಿಂಗಳಲ್ಲಿ ಕಾರ್ಕಳದಲ್ಲಿ [illegible] ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ [illegible] ಪರೀಕ್ಷೆಯನ್ನು ಕೊಡಲಿಚ್ಛಿಸುವವರು [illegible] ದೊಂದಿಗೆ ಅರ್ಜಿಗಳನ್ನು ತಾ ೧೦ [illegible] ಒಳಗೆ [illegible] ಶ್ರೀಯುತ [illegible] ಕಳುಹಿಸಿ [illegible] ಅವರು [illegible] ತಿಳಿದುಬರುತ್ತದೆ

ಈ ತಾಲೂಕಿನ [illegible] ಶ್ರೀಮಂತರ [illegible] [illegible] ಅವರು [illegible] ಸಂಗತಿಯಾಗಿದೆ [illegible]

ತಾ ೧೪-೧೨-೧೯೩೫ರಲ್ಲಿ [illegible] ಕಾಂಗ್ರೆಸ್ ಕಮಿಟಿಯ ಮಹಾ ಸಭೆಯು [illegible] ಅಧ್ಯಕ್ಷರಿಂದ ಶ್ರೀಯುತ [illegible] ಅಧ್ಯಕ್ಷತೆಯಲ್ಲಿ ಜರಗಿ [illegible] ವರ್ಷಕ್ಕೆ [illegible] ಕಾರ್ಯದರ್ಶಿ [illegible] ಶ್ರೀ [illegible] (ಅಧ್ಯಕ್ಷರು) [illegible] (ಉಪ ಕಾರ್ಯದರ್ಶಿ) [illegible] (ಖಜಾಂಚಿ) [illegible] ಶ್ರೀಯುತರಾದ [illegible] ವೆಂಕಟೇಶ ಭಟ್, [illegible] ಶ್ರೀನಿವಾಸ [illegible] ರಾಮ [illegible] ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಶ್ರೀಯುತರಾದ [illegible] ಮತ್ತು ಎಂ ಎನ್ ಅಧಿಕಾರಿಯವರನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು ತಾ ೩೧-೧೨-೧೯೩೫ರ ವರೆಗಿನ ಜಮಾಖರ್ಚಿನ ಲೆಕ್ಕವನ್ನು ಪರಿಶೋಧಿಸುವರೆ ಶ್ರೀಯುತ [illegible] ಎಸ್ [illegible] ಅವರನ್ನು ನೇಮಿಸಲ್ಪಟ್ಟಿತು ಸಭೆಯಲ್ಲಿ ಭಾರತ ಕಾಂಗ್ರೆಸ್ ಸುವರ್ಣ ಮಹೋತ್ಸವವನ್ನು [illegible] ಜರಗಿಸಬೇಕೆಂದು ನಿರ್ಧರಿಸಲಾಗಿ [illegible] ಒಂದು ಕಮಿಟಿಯು ನೇಮಿಸಲ್ಪಟ್ಟಿತು,

(ಇನ್ನೊಂದು ಪುಟದಲ್ಲಿ ಮುಂದುವರಿಯುವುದು)

ಕಾಂಗ್ರೆಸ್ ಸುವರ್ಣ ಮಹೋತ್ಸವ

ಕಾಂಗ್ರೆಸ್ ಕಮಿಟಿಗಳಿಗೆ ಹಾಗೂ ಸದಸ್ಯರಿಗೆ ಸಲಹೆಗಳು.

(ಪ್ರಾಂತಿಕ ಕಾಂಗ್ರೆಸ್ ಜುಬಿಲಿ ಮಂಡಳ)

ಪ್ರಕಟಣೆ ನಂ ೧೦

ಮಹನೀಯರೇ,

ತಾವು ಹಾಗು ತಮ್ಮ ಕಮಿಟಿಯವರು ಕಾಂಗ್ರೆಸ್ ಸುವರ್ಣ ಮಹೋತ್ಸವದ ಬಗ್ಗೆ ವಿಚಾರ ಮಾಡುವುದರಲ್ಲಿ ಈಗ ತುಂಬಾ ಮಗ್ನರಾಗಿರಲಿಕ್ಕೆ ಸಾಕು, ಹಾಗು ಈ ಉತ್ಸವದ ವಿಷಯವಾಗಿ ಉತ್ತಮವಾದ ಕಾರ್ಯಕ್ರಮಗಳನ್ನು ಗೊತ್ತುಮಾಡಿರಬಹುದು, ಈ ಕಾರ್ಯಕ್ರಮಗಳು ಯಶಸ್ವೀ ರೀತಿಯಿಂದ ಕೊನೆಗಾಣಿಸಲ್ಪಡುವದರಲ್ಲಿ ನಮಗಾದ ಸಂದೇಹವೂ ಇಲ್ಲ.

ಆದರೂ ಈ ಉತ್ಸವದ ಬಗ್ಗೆ ನಾವು ತಮಗೆ ಕೆಲವು ಸಲಹೆಗಳನ್ನು ಮಾಡಬಯಸುವೆವು ತಾವೂ ತಮ್ಮ ಕಮಿಟಿಯವರು ಅವುಗಳನ್ನು ಪರಿಶೀಲಿಸಿ ತಮ್ಮ ಕಾರ್ಯಕ್ರಮದಲ್ಲಿ ಸೇರಿಸಲಡ್ಡಿಯಿಲ್ಲ.

(೧) ಕಾಂಗ್ರೆಸ್ ಸುವರ್ಣ ಮಹೋತ್ಸವವನ್ನು ಮೂರು ದಿನ ಜರುಗಿಸಬೇಕು. ಅನುಕೂಲವಾದಲ್ಲಿ ಏಳು ದಿನಗಳ ವರೆಗೆ ಬೆಳೆಯಿಸಿದರೂ ಅಡ್ಡಿಯಿಲ್ಲ.

(೨) ಪ್ರತಿಯೊಂದು ತಾಲೂಕಿನಲ್ಲಿ ಐನೂರಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ಈ ಉತ್ಸವವು ಆಚರಿಸಲ್ಪಡಬೇಕು.

(೩) ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು "ನಮ್ಮ ಕಾಂಗ್ರೆಸ್" ಎಂಬದೊಂದು ಚಿಕ್ಕ ಪುಸ್ತಕವನ್ನು ಪ್ರಸಿದ್ಧಿಸಿರುವರು. ಅದರ ನೂರು ಪ್ರತಿಗಳ ಬೆಲೆಯು ಕೇವಲ ಒಂದು ರೂಪಾಯಿ. ಇವುಗಳನ್ನು ಕರಿಸಿ ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಲ್ಲಿಯೂ ಮಾರಬೇಕು. ಈ ಚಿಕ್ಕ ಪುಸ್ತಕದ ೫೦ ಸಾವಿರ ಪ್ರತಿಗಳು ಅಚ್ಚಾಗಿರುವವು. ಕಾಂಗ್ರೆಸ್ಸಿನ ದಿವ್ಯ ಸಂದೇಶವನ್ನು ಪ್ರತಿಯೊಂದು ತಾಲೂಕಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಪ್ರತಿಯೊಂದು ಮನೆಗೆ ಈ ಚಿಕ್ಕ ಪುಸ್ತಕದ ಮುಖಾಂತರ ಮುಟ್ಟಿಸಲು ತಾವು ಸರ್ವ ವಿಧದಲ್ಲಿಯೂ ಪ್ರಯತ್ನ ಮಾಡದಿರರೆಂದು ನಮ್ಮ ನಂಬಿಗೆ.

(೪) "ಭಾರತೀಯ ರಾಷ್ಟ್ರಧ್ವಜ"ವೆಂಬ ಪುಸ್ತಕವನ್ನು ನಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪ್ರಕಟಿಸಿ ಕೇವಲ ಎರಡಾಣೆಗೊಂದರಂತೆ ಮಾರುವರು. ಭಾರತೀಯರೆಲ್ಲರ ಅಭಿಮಾನ ಚಿಹ್ನವಾದ ರಾಷ್ಟ್ರೀಯ ಧ್ವಜದ ಕಾಲಕಾಲಕ್ಕಾದರೂ ಚರಿತ್ರವು ಈ ಪುಸ್ತಕದಲ್ಲಿ ವಿವೇಚಿಸಲ್ಪಟ್ಟಿದೆ. ಪ್ರತಿಯೊಬ್ಬ ಭಾರತೀಯನು ತನ್ನ ರಾಷ್ಟ್ರಧ್ವಜದ ಸಂಪೂರ್ಣ ಪರಿಚಯ ಮಾಡಿಕೊಳ್ಳಲು ಇದೊಂದು ಸಾಧನವು. ಇವುಗಳನ್ನು ಸಹ ಕಾ. ಪ್ರಾ. ಕಮಿಟಿ ಧಾರವಾಡ ಇವರಿಂದ ತರಿಸಿಕೊಂಡು ಸಾಧ್ಯವಿದ್ದಷ್ಟು ಹಳ್ಳಿಗರು ಕೊಂಡುಕೊಳ್ಳುವಂತೆ ಪ್ರಯತ್ನಿಸಬೇಕು.

(೫) ಅ. ಭಾ. ಚ. ಸಂಘದವರು ಎಲ್ಲ ಆಕಾರದ ರಾಷ್ಟ್ರೀಯ ಧ್ವಜಗಳನ್ನು ಮಾರಾಟಕ್ಕೆ ಸಿದ್ಧಪಡಿಸಿರುವರು ಸ್ಥಳೀಯ ಖಾದಿ ಭಂಡಾರಗಳಲ್ಲಿ ದೊರೆಯುವವು—ಅವುಗಳ ಬೆಲೆ

೧'x೧½'	— — —	೦–೨–೬
೨'x೩'	— — —	೦–೬–೦
೪'x೬'	— — —	೦–೧೪–೦

ಈ ಧ್ವಜಗಳಲ್ಲದೆ ಅಲ್ಪ ಬೆಲೆಯ ಸಾವಿರಾರು ಚಿಕ್ಕ ಪುಟ್ಟ ಧ್ವಜಗಳನ್ನು ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಸಿದ್ಧಪಡಿಸಿದ್ದು ಬೇಕಾದವರು ಅವರಿಂದ ತರಿಸಿಕೊಳ್ಳಬಹುದು.

(೬) ಸನ್ ೧೮೮೫ರಿಂದ ರಾಷ್ಟ್ರಸೇವೆಯಲ್ಲಿ ಸೇರಿ ಮಡಿ ಸೇರಿದ ವೀರರ ಪಟ್ಟಿಕೆಯೊಂದನ್ನು ಸಿದ್ಧಪಡಿಸಬೇಕು. ಅದರಲ್ಲಿ ಅವರ ಹೆಸರು ಕಾರಾವಾಸದ ಅವಧಿ ಹಾಗು ಕಾರಣ ಇವುಗಳ ಉಲ್ಲೇಖವಿರಬೇಕು. ಡಿಸೆಂಬರ ೨೮ನೇ ತಾರೀಖಿಗೆ ಮುಂಚಾಗಿ ಕ. ಪ್ರಾಂ. ಕಾಂಗ್ರೆಸ್ಸಿನ ಧ್ವಜವಂದನದ ಸಮಾರಂಭಕ್ಕೆ ಯೋಗ್ಯತಾ ಪತ್ರಗಳನ್ನು ಸ್ವೀಕರಿಸಲು ಅವಶ್ಯವಾಗಿ ಬರಬೇಕೆಂದು ಈ ವೀರರಿಗೆ ಬಿನ್ನವಿಸಿಕೊಳ್ಳಬೇಕು.

(೭) ಎಲ್ಲ ಸ್ಥಾನಿಕ ಸಾರ್ವಜನಿಕ ಸಂಸ್ಥೆಗಳ ಸಹಕಾರವನ್ನು ಸಂಪಾದಿಸಿ ಧರ್ಮ, ಜಾತಿಮತ ಭೇದಗಳಿಲ್ಲದೆ ಎಲ್ಲರೂ ಕಾಂಗ್ರೆಸ್ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು.

(೮) ಈ ರಾಷ್ಟ್ರೀಯ ಉತ್ಸವದಲ್ಲಿ ಹರಿಜನರನ್ನು ಮಾತ್ರ ಮರೆಯಬಾರದು ಅವರಿಗೆ ಎಲ್ಲ ವಿಧದ ಸಹಾಯ ಸೌಕರ್ಯಗಳನ್ನೊದಗಿಸಿ ಕೊಡಬೇಕು.

(೯) ಹಲಕೆಲವು ಹಳ್ಳಿಗಳಲ್ಲಿ ಗ್ರಾಮದೇವತೆಯ ಉಡಿತುಂಬುವದೇ ಮೊದಲಾದ ಕಾರ್ಯಗಳು ನೆರವೇರತಕ್ಕವಿರಬಹುದು. ತಾವು ಅಂಥ ಹಳ್ಳಿಗಳ ಮುಂದಾಳುಗಳೊಡನೆ ವಿಚಾರ ವಿನಿಮಯ ಮಾಡಿ ಕಾಂಗ್ರೆಸ್ ಸುವರ್ಣ ಮಹೋತ್ಸವದ ದಿನವೇ ಆ ಕಾರ್ಯಗಳನ್ನು ಜರಗಿಸುವಂತೆ ಪ್ರೋತ್ಸಾಹಿಸಬೇಕು.

(೧೦) ಬಹುತರವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮೂಡಲಪಾಯ, ಯಕ್ಷಗಾನದ ಬಯಲಾಟಗಳನ್ನಾಡುವ ಮೇಳಗಳು ಇರುವುದುಂಟು. ಆ ಮೇಳದವರು ಈ ಉತ್ಸವದಲ್ಲಿ ಒಂದೆರಡು ಆಟಗಳನ್ನಾಡುವಂತೆ ತಾವು ಅವರಿಗೆ ಉತ್ತೇಜನ ಕೊಡಬಹುದು.

ಇವೇ ಮೊದಲಾದ ಕಾರ್ಯಕ್ರಮಗಳನ್ನೇರ್ಪಡಿಸಿ ತಾವೆಲ್ಲರೂ ಅಖಿಲ ಕರ್ನಾಟಕದಲ್ಲಿ ಸಾವಿರಾರು ಸ್ಥಳಗಳಲ್ಲಿ ಈ ರಾಷ್ಟ್ರೀಯ ಮಹೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿಸಬೇಕೆಂದು ಪ್ರಾರ್ಥನೆ.

ಸಂಸ್ಕೃತ ವಾಙ್ಮಯದ ಮಹತ್ವ.

ಹಿಂದೂ ಮತದ ತಿರುಳನ್ನು ಅರಿಯಲೆಳಸುವ ಮಾನವನು ಸಂಸ್ಕೃತ ಭಾಷೆಯಲ್ಲಿ ಪಾರಂಗತನಾಗಿರಬೇಕು. ಹಿಂದೂಮತದಲ್ಲಿರುವ ಆಧ್ಯಾತ್ಮಿಕ ಭಾಗವೇನು? ಆಗೀರ್ವಾಣ ಭಾಷೆಯೆಂದೆನಿಸಿಕೊಂಡ ಸಂಸ್ಕೃತದಲ್ಲಿ ಅಡಕವಾಗಿರುವ ಸಕಲೈಶ್ವರ್ಯವೇನು? ಎಂದು ವಿಚಾರಿಸುವ.

ಅಂದು (ಕ್ರಿ. ಶ.) ೧೮೯೩ರಲ್ಲಿ ಅಮೇರಿಕಾನರು ನವನಾಗರೀಕತೆಯ ಶಿಖರವನ್ನೇರಿ ಅಗಾಧವಾದ ದೇವರ ಅಸ್ತಿತ್ವ, ಆತ್ಮ, ಪರಮಾತ್ಮ ಇವೇ ಮುಂತಾದ ವಿಷಯ ನಿಶ್ಚಯ ಅಭಿಪ್ರಾಯವನ್ನು ಹೊಂದಲಾರದೆ ಜಗತ್ತಿನ ಎಲ್ಲಾ ಮತಗಳ ಪ್ರಮುಖ ಅನುಯಾಯಿಗಳನ್ನು ಬರಹೇಳಿ ಒಂದು ಮಹಾ ಸಭೆಯನ್ನು (The Great Parliment of Religions) ಏರ್ಪಡಿಸಿದರು. ಹಿಂದೂಧರ್ಮದ ಗುಟ್ಟನ್ನು ಹೊರಚೆಲ್ಲುವರೆ ಆರಿ ಬಿತ್ತಲಿಯಾದ ರಾಮಕೃಷ್ಣ ಪರಮಹಂಸರ ಪರಮ ಶಿಷ್ಯರಾದ ಸ್ವಾಮಿ ವಿವೇಕಾನಂದರು ಅಲ್ಲಿಗೆ ಹೋಗಿದ್ದರು.

ಆ ಪರಿಗೆ ಬಹಳ ಹೀನಸ್ಥಿತಿಗೆ ಬಂದುದರಿಂದ ಗೋಪ್ಯವಾಗಿದ್ದ ಹಿಂದೂಸನಾತನ ಧರ್ಮದ ವಿಚಾರವಾಗಿ ವಿವೇಕಾನಂದರು ಮಾತುಗಳ ಮಳೆಯನ್ನು ಸುರಿಸಿ, ಸಭಾಸದರನ್ನು ಮುಗ್ಧಗೊಳಿಸಿ, ಕ್ರೈಸ್ತ ಮತ್ತು ಮಹಮ್ಮದೀಯ ಧರ್ಮಗಳಿಗಿಂತ ಸನಾತನ ಹಿಂದೂ ಧರ್ಮವೇ ಶ್ರೇಷ್ಠತಮವಾದುದೆಂದೂ ಅತ್ಯುಚ್ಚವಾದುದೆಂದೂ ಪರದೇಶೀಯರಿಂದಲೂ ಹೊಗಳಿಸಿದರು. ಇತ್ತೀಚಿನ ವೈಜ್ಞಾನಿಕ ಶೋಧಗಳು ಯಾವುದರ ಬರೀ ಪ್ರತಿಧ್ವನಿಗಳಾಗಿ ತೋರುವವೋ ಅಂಥ ವೇದಾಂತ ತತ್ವಜ್ಞಾನದ ಹಿರಿದು ಪರಲೋಕಗಳ ಅಸ್ತಿತ್ವವನ್ನು ಅಲ್ಲಗಳೆಯುವ ಬೌದ್ಧ ಮತ್ತು ಜೈನಮತ ಸಿದ್ಧಾಂತಗಳನ್ನೂ, ವಿಗ್ರಹಾರಾಧನೆಯ ಕೀಳು ಭಾವನೆಗಳ ಪುರಾಣಗಳವರೆಗಿನ ಪ್ರತಿಯೊಂದು ವಿಷಯವನ್ನೂ ಚರ್ಚಿಸಿ ನಮ್ಮ ಹಿಂದೂ ಧರ್ಮದಲ್ಲಿ ಈ ಎಲ್ಲಾ ವಿಷಯಗಳು ಅಡಕವಾಗಿದೆಯೆಂದು ದೃಢೀಕರಿಸಿದರು. (From the high spiritual flights of Vedanta philosophy, of which the latest discoveries of science seem like echoes, from the agnosticism of Buddhists and the atheism of the Jains to the low ideas of idolatry and the multifarious mythologies, each and all have a place in the Hindu Religion.)

ಹಿಂದೂ ಧರ್ಮದ ಅಖಿಳ ಗ್ರಂಥಗಳು ಮಹಾಮಹಿಮ ಮಹರ್ಷಿಗಳಿಂದ ಉಚ್ಛರಿಸಲ್ಪಟ್ಟ ಋಗ್, ಯಜು, ಸಾಮ, ಅಥರ್ವಣವೆಂಬ ಚತುರ್ವೇದಗಳು ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ ಜ್ಯೋತಿಷ್ಯವೆಂಬ (ಆವುಗಳ) ಷಡಂಗಗಳು, ಪುರಾಣ, ನ್ಯಾಯ, ಮೀಮಾಂಸ, ಧರ್ಮಶಾಸ್ತ್ರಗಳೆಂಬ ಉಪಾಂಗಗಳು ಅಗಿವೆ. ಧರ್ಮಶಾಸ್ತ್ರದಲ್ಲಿ ಸ್ಮೃತಿ, ಇತಿಹಾಸ, ಸಾಂಖ್ಯ, ಯೋಗ್ಯ ದರ್ಶನವೆಂಬವೂ ವೇದಾಮೃತವನ್ನು ಪಾನಮಾಡಲು ಸಹಕಾರಿಗಳಾಗಿವೆ. ಮಹರ್ಷಿಗಳಿಂದ ರಚಿಸಲ್ಪಟ್ಟ ಉಪನಿಷತ್ತುಗಳೂ, ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳುಳ್ಳ ಶ್ರೀಮದ್ರಾಮಾಯಣವೂ, ಲಕ್ಷ ಶ್ಲೋಕ ಪರಿಮಿತಿಯುಳ್ಳ ಮಹಾಭಾರತವೂ ಸಂಸ್ಕೃತ ಭಾಷಾಮಯವಾಗಿವೆ. ಇದಲ್ಲದೆ ಬುದ್ಧಿವಿಕಾಸವನ್ನುಂಟು ಮಾಡುವ ಇಹಪರ ತತ್ವಗಳನ್ನುದ್ಬೋಧಿಸತಕ್ಕ ಅಸಂಖ್ಯಾತ ಗ್ರಂಥಗಳೂ ಸಂಸ್ಕೃತ ಭಾಷೆಯಲ್ಲೇ ಇವೆ ಎಂಬುದು ಎಲ್ಲರಿಗೂ ತಿಳಿದ ವಿಷಯವು.

ಈ ಗ್ರಂಥಗಳಲ್ಲಿ ಅನೇಕವನ್ನು ಬೇರೆ ಬೇರೆ ಭಾಷೆಗಳಲ್ಲಿ (ಅಂದರೆ—ಕನ್ನಡ, ಇಂಗ್ಲಿಷ್, ಹಿಂದೀ, ಬಂಗಾಳಿ ಜರ್ಮನಿ, ಫ್ರೆಂಚ್ ಮುಂತಾದ ಸ್ವದೇಶ ವಿದೇಶ ಭಾಷೆಗಳಲ್ಲಿ ಪರಿವರ್ತಿಸಿದ್ದರೂ, ಆ ಇತರ ಭಾಷೆಗಳಲ್ಲಿರುವ ಶಬ್ದಗಳ ಅಪೂರ್ಣತೆಯಿಂದ ಅವುಗಳನ್ನು ಸಂಸ್ಕೃತ ಭಾಷೆಯಲ್ಲಿ ಹೇಳುವಷ್ಟು ಸೊಬಗಿನಿಂದಲೂ, ಮಾಧುರ್ಯದಿಂದಲೂ, ಇಂಪಿನಿಂದಲೂ, ಚತುರತೆಯಿಂದಲೂ ಮನಸ್ಸಾಕರ್ಷಣೆಗೆ ಯೋಗ್ಯತೆಯೂ ಮನಮುಟ್ಟುವಂತೆಯೂ ಎಂದೆಂದಿಗೂ ಹೇಳಲಾರೆವು. ಸಂಸ್ಕೃತ ಭಾಷಾಂತರ್ಗತವಾದ 'ಧರ್ಮ' ಎಂಬ ಶಬ್ದಕ್ಕೆ ಸಂಪೂರ್ಣತೆಯಿಂದ ಯುಕ್ತವಾದ ಅನುವಾದವನ್ನೀಯುವದಕ್ಕೆ ಆಂಗ್ಲ ಭಾಷೆಯೂ ಸೋತುಹೋಗಿದೆ. ಆದುದರಿಂದಲೇ ದಿವಂಗತ 'ಸ್ವಾಮಿ ವಿವೇಕಾನಂದರವರು ಅಮೇರಿಕ (ಕುಮಾರಿಲ ದ್ವೀಪ)ದಿಂದ ಹಿಂದಿರುಗಿದ ನಂತರ ಮದ್ರಾಸಿನ ಮಹಾಜನಗಳಿಗೆ ಭಾಷಣವನ್ನೀಯುವಾಗ ಆಧ್ಯಾತ್ಮಿಕ ವಿಷಯವನ್ನು ಮನಸ್ಸಿಗೆ ಮುಂದಟ್ಟುಮಾಡುವರೆ ಸಂಸ್ಕೃತ ಭಾಷೆಯಷ್ಟು ಸುಲಭ ಸಾಧ್ಯವಾದದ್ದೂ ಪ್ರಾಶಸ್ತ್ಯವನ್ನು ಹೊಂದಿದ್ದು ಪ್ರಪಂಚದ ಇನ್ನಾವ ಭಾಷೆಯೂ ಇಲ್ಲ' (Sanskrit is the only perfect Vehicle of religious thought) ಎಂಬುದನ್ನು ಒತ್ತಿ ಒತ್ತಿ ಹೇಳಿರುವರು. ವಾಚಕರೇ! ಧರ್ಮರಹಸ್ಯದ ರಸವನ್ನು ಸೀಪಲು ಸಂಸ್ಕೃತವೇ ಅತ್ಯಗತ್ಯ ಸಾಧನವು.

ಸಂಸ್ಕೃತ ಸಾಹಿತ್ಯವನ್ನು ವೃದ್ಧಿಪಡಿಸಿ ನಾಟಕಗಳನ್ನೂ ಕಾವ್ಯಗಳನ್ನೂ ಬರೆದ ಕವಿಗಳ ಸಂಖ್ಯೆಯು ಸಾಮಿರಕ್ಕಿಂತಲೂ ಅಧಿಕವಾಗಿರುವುದು. ಅವರಲ್ಲಿ ಕಾಳಿದಾಸನೇ ಶ್ರೇಷ್ಠನೆಂದು ಕಾಳಿದಾಸ ಕವಿಶ್ರೇಷ್ಠ ಪಾಶ್ಚಾತ್ಯ ಬಿಜ್ಞರೂ ಅವನನ್ನೇ ಭಾರತ ವರ್ಷದ ಶೇಕ್ಸ್‌ಪಿಯರ್ (Indian Shakespeare) ಎಂದು ಖ್ಯಾತಿ ಮಾತ್ರ ವಿದ್ವನ್ಮಣಿಗಳೂ ಪೊಗಳಿದರು. ಕಾಳಿದಾಸನ ರಘುವಂಶ ಕುಮಾರ ಸಂಭವವೇ ಮುಂತಾದ ಕಾವ್ಯಗಳನ್ನೂ ಶಾಕುಂತಲಾದಿ ನಾಟಕಗಳನ್ನೂ ವಿರಚಿಸಿದ್ದರೂ ಶಾಕುಂತಲ ನಾಟಕ ರಚನೆಯೇ ಅತನಿಗೆ ಜಗದ್ವಿಖ್ಯಾತವಾದ ಕೀರ್ತಿಯನ್ನುಂಟುಮಾಡಿರುತ್ತದೆ.

ಕಾವ್ಯೇಷು ನಾಟಕಂ ರಮ್ಯಂ । ತತ್ರರಮ್ಯಾ ಶಕುಂತಲಾ ॥
ತತ್ರಾಪಿ ಚ ಚತುರ್ಥೋಂಕ ಸ್ತತ್ರ ಶ್ಲೋಕ ಚತು.

ಶ್ಲೋಕಂ । ೧ ॥

ಕಾವ್ಯಗಳಲ್ಲಿ ನಾಟಕವು ರಮ್ಯವು. ನಾಟಕಗಳಲ್ಲಿ ಶಾಕುಂತಲವು ರಮ್ಯವು ಅದರಲ್ಲಿ ನಾಲ್ಕನೇ ಅಂಕವೂ ಆ ನಾಲ್ಕನೇ ಅಂಕದಲ್ಲಿ ನಾಲ್ಕು ಶ್ಲೋಕಗಳೂ ಬಹಳ ರಮ್ಯವಾದವುಗಳೆಂಬ ಪಂಡಿತರ ಅಭಿಪ್ರಾಯವು ಪರಂಪರಾಗತವಾಗಿರುವುದು. ಶಾಕುಂತಲದ ರಮ್ಯತೆಯನ್ನು ಕುರಿತು ಹಿಂದೂದೇಶದ ಪಂಡಿತರು ಮಾತ್ರವಲ್ಲದೆ ಯುರೋಪ್ ಮುಂತಾದ ಖಂಡಾಂತರ ಪಂಡಿತರು ಕೂಡಾ ಬಹಳವಾಗಿ ಶ್ಲಾಘಿಸಿರುವರು. ಜರ್ಮನೀ ದೇಶದ ಪಂಡಿತರಾದ ಗೇಟೆ (Goethe) ಎಂಬಾತನು ಶಾಕುಂತಲವನ್ನು ಹೊಗಳುತ್ತಾ ಆನಂದಾತಿಶಯದಿಂದ ನರ್ತನ ಮಾಡಿರುವನು. ನಾಟಕ ಕಲೆಯಲ್ಲಿ ಸಂಸ್ಕೃತವನ್ನು ಮೀರುವ ಭಾಷೆಯು ಇನ್ನಾವುದೂ ಇಲ್ಲವೆಂಬುದು ನಿರ್ವಿವಾದ ಸಂಗತಿಯು. ವಾಚಕರೇ, ಪ್ರಕೃತ ಯಾವ ಭಾಷೆಯು ಜಗತ್ತಿನ ಭಾಷೆಗಳಿಗೆಲ್ಲಾ ಪ್ರಾಚೀನವಾಗಿದ್ದು ಜಗತ್ತಿನ ಇತರ ಭಾಷಾ ಸಾಹಿತ್ಯಗಳಿಗೆಲ್ಲಾ ಜೀವಕಳೆಯನ್ನು ತುಂಬಿಸಿಕೊಂಡ ಯಾವ ಭಾಷೆಯಲ್ಲಿಲ್ಲದ ವಿಚಾರವು ಇನ್ನೆಲ್ಲಿಯೂ ಇರಲಾರದೋ ಅಂತಹ ಸಂಸ್ಕೃತ ಭಾಷಾಭ್ಯುದಯಕ್ಕೆ ಭಾರತೀಯರು ಪ್ರೋತ್ಸಾಹ ಕೊಡಬೇಕೆಂಬುದೇ ಲೇಖನದ ಉದ್ದೇಶ.

BY
U. H. Shesha Bhat,
Shanthineketana

ಸಂಜೀವನ ಔಷಧಿ.

ಔಷಧಿಗಳಲ್ಲಿ ಸಂಶೋಧನಾ ಕಾರ್ಯವನ್ನು ಪ್ರಪಂಚದ ವಿವಿಧ ದೇಶಗಳಲ್ಲಿ ನಡೆಯಿಸುತ್ತಿರುವ ಮಿ॥ ಜೇಮ್ಸ್‌ರ ಎಂಬವರು, ಮಾಮತ್ರದಲ್ಲಿ ಸಂಜೀವನದಂತಿರುವ ಒಂದು ಔಷಧಿಯನ್ನು ಕಂಡುಹಿಡಿದಿರುತ್ತಾರೆ. ಇದು ಒಂದು ಗಿಡದಲ್ಲಿ ಕೋಡಿನ ರೂಪದಲ್ಲಿ ಸಿಕ್ಕುತ್ತದೆ. ಈ ಕೋಡಿನಲ್ಲಿರುವ ಬೀಜಗಳನ್ನು ನೀರು ಕುದಿಸಿ, ಒಂದು ದಟ್ಟವಾದ ಕಷಾಯವನ್ನು ತಯಾರಿಸಿದನು. ಅದಕ್ಕೆ ಉತ್ತಮ ರುಚಿಯೂ ಸುವಾಸನೆಯೂ, ಉಂಟಾಯಿತು. ನಂತರ, ಈ ಬೀಜಗಳಿಂದ ಒಂದು ಪುಡಿಯನ್ನು ತಯಾರಿಸಿದನು. ಈ ಔಷಧಿಯ ಕುರಿತು ಅತೀವ ಶೋಧನೆಗಳನ್ನು ನಡೆಯಿಸಿದನು. ಸ್ವಲ್ಪ ಔಷಧಿಯನ್ನು ತಾನೆ ಸೇವಿಸಿದನು. ದೇಹದಲ್ಲಿ ಪುಷ್ಟಿಯೂ, ಮನಸ್ಸೂ ದೇಹವೂ ಆರೋಗ್ಯಕರವಾದವು ಎಂದು ಈತನ ಪ್ರಕಟಣೆ. ಎಲ್ಲಾ ತರದ ರೋಗಗಳಿಗೆ ಈ ಔಷಧಿಯು ನಿವಾರಣೆಯಾಗುತ್ತದಂತೆ. ಜ್ವರ ಬಂದವರಿಗೆ ಜ್ವರವನ್ನು ಇಳಿಸುತ್ತದೆ. ಚಳಿ ಹಿಡಿದವರಿಗೆ, ಉಷ್ಣವನ್ನು ಕೊಡುತ್ತದೆ. ಶಕ್ತಿ ಕುಂದಿದ ದೇಹಗಳಿಗೆ ತುಂಬಾ ಶಕ್ತಿಯನ್ನು ಕರುಣಿಸುತ್ತದೆ. ಎಲ್ಲಾ ತರದ ಆಯಾಸವನ್ನು ತೆಗೆಯುತ್ತದೆ. ಸೇವಿಸಿದ ಮಾನವನಲ್ಲಿ ತೃಪ್ತಿಯನ್ನೂ, ಸಂತೋಷವನ್ನೂ ಬೀರುತ್ತದೆ.

೬೦ ಸಾವಿರ ಇಲಿಗಳ ಮೆರವಣಿಗೆ

ಚೀನಾದೇಶದ ಪ್ಯೂಕಿಯಾನ್ ಎಂಬಲ್ಲಿ ೩೦ರಿಂದ ೫೦ ಸಾವಿರ ಇಲಿಗಳು ತಮ್ಮ ಇಷ್ಟದ ತನಕ ವಾಸವಾಗಿರುವ ನಿಲಯಗಳನ್ನು ತ್ಯಜಿಸಿ ಬೇರೊಂದು ಪಡೆ ಸೇರಲು ನಗರದ ಮಾರ್ಗದಲ್ಲಿ ಒಂದು ಮಹಾ ಮೆರವಣಿಗೆಯಾಗಿ ನಡೆದವು. ಬೆಕ್ಕು ಮತ್ತು ನಾಯಿಗಳು ಈ ಇಲಿಗಳ ಸಂದಣಿಯನ್ನು ನೋಡಿ ಭೀತರಾಗಿ ಅಲ್ಲಲ್ಲಿ ಅವಿತುಕೊಂಡವು. ಜನರು ಬಾಗಿಲು ಬಾಗಿಲುಗಳನ್ನು ಬಿಗಿಯಾಗಿ ಹಾಕಿ ಭೀತರಾಗಿ ಮನೆಯ ಒಳಗೆ ನಿಂತುಬಿಟ್ಟರು. ಈ ಮೆರವಣಿಗೆಯು ನಗರವನ್ನು ದಾಟಬೇಕಾದರೆ ೧೨ ಗಂಟೆ ಬೇಕಾಯಿತು. ತಗಲಿತ ಪಟ್ಟಣದಲ್ಲಿ ಧಾಂಯ ಆಹಾರಾದಿ ಜನಸಾಮಗ್ರಿ ಹಿಂದುಳಿದಿದೆ.

ಸಮಾಜದ ಅವನತಿ.

ಶ್ರೀ ಎ ವಿ ಠಕ್ಕರ್‌ರವರು ಅಖಿಲ ಭಾರತ ಹರಿಜನ ಸೇವಕ ಸಂಘದ ಮಹಾಕಾರ್ಯದರ್ಶಿಗಳು ಭಾರತವನ್ನೆಲ್ಲ ಸುತ್ತಿ ಹರಿಜನರ ಸ್ಥಿತಿಗಳನ್ನು ಮನನ ಮಾಡಿಕೊಂಡಿದ್ದಾರೆ. ಆಗಾಗ್ಗೆ ತೀರ ದುಃಖಕರವಾದಂಥ ಅಂಶಗಳನ್ನು ಪತ್ರಿಕಾ ಮುಖೇನ ವಿಶಾಲ ಪ್ರಪಂಚಕ್ಕೆ ತಿಳಿಸುತ್ತಾರೆ. ಅಂಥವುಗಳಲ್ಲಿ ಈ ಕೆಳಗೆ ಕಂಡದ್ದೊಂದು.

ಅಸ್ಸಾಮಿನಲ್ಲಿ ಅದು ನಡೆಯಿತು ೧೪ ವರುಷದ ಹರಿಜನ ಹುಡುಗನೊಬ್ಬನು ತನಗೆ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲವೆಂದೂ, ಸಂಘದವರು ಸಹಾಯಮಾಡಬೇಕೆಂದೂ ಒಂದು ಪ್ರಾರ್ಥನಾ ಪತ್ರವನ್ನು ಶ್ರೀ ಠಕ್ಕರರವರಿಗೆ ಬರೆದೊಂದ. ಆ ವಿಷಯವಾಗಿ ಶ್ರೀ ಠಕ್ಕರ್‌ರವರೇ ಹೇಳಿದ ಮಾತುಗಳಿವು. "ಆ ಹುಡುಗನು ನಾನು ಹರಿಜನ ಬಾಲಕ, ಒಬ್ಬ ಸೂಳೆಯ ಮಗ, ಎಂದು ಆ ಪತ್ರವನ್ನು ಪ್ರಾರಂಭಿಸಿದ್ದನು. ಇದನ್ನು ನೋಡಿ ನನ್ನ ಮನಸ್ಸು ಕರಗಿಹೋಯಿತು. ಉಚ್ಚ ವಿಷಯಗಳ ಸತ್ಯ ಕಾಮ ಜಾಬಾಲನ ಕಥೆಯು ನೆನಪಿಗೆ ಬಂತು. ಇದರ ಸತ್ಯಾಂಶವನ್ನು ತಿಳಿಯಲು ಆ ಪ್ರಾಂತ್ಯಕ್ಕೆ ಹೋಗಿ ವಿಚಾರಮಾಡಿದ್ದಲ್ಲಿ, ಅದು ಅಕ್ಷರಶಃ ನಿಜವೆಂದು ಕಂಡು ಬಂತು. ಇಂತಹ ಹರಿಜನ ಸಂಸಾರಗಳು ಅಲ್ಲಿ ೩೩೦ ಇವೆ."

ಸ್ತ್ರೀಪುರುಷರ ಪ್ರಿಯ ರಹಸ್ಯ (ಶರೀರ ಮರ್ಮಶಾಸ್ತ್ರ)

ಮಹನೀಯರುಗಳೇ, ಇದು ವರೆಗೆ ನೀವಂತಹ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ—ಅನೇಕ ಜಾತಿಯ



ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಶುಕ್ಲನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಚಿಹ್ನ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತರಹಸ್ಯಗಳನ್ನೆಲ್ಲಾ ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗ ಕನ್ನಡದಲ್ಲಿ ಪ್ರಕಟವಾಗಿದ್ದಿಲ್ಲ. ಬೆಲೆ ರೂ ೧ ಟ. ಖ ಬೇರೆ.

ವಿಳಾಸ —ಕರ್ನಾಟಕ ಏಜನ್ಸಿ, ಕೃಷ್ಣಪ್ಪ ನಾಯಕನ ಟೆಂಪಲ್ ಬೀದಿ, ಮದರಾಸು.

ಬೇಗನೇ ಪುಸ್ತಕವನ್ನು ತರಿಸುವವರಿಗೆ ೧೯೩೬ನೇ ಇಸವಿ ಕ್ಯಾಲೆಂಡರು ಇನಾಂ.

(೧೪ನೇ ಪುಟದಿಂದ ಮುಂದುವರಿಯುದು)

ಎಲ್ಲರೂ ವಿದ್ಯಾವಂತರಾಗುವುದಾದರೆ, ಈ ವಿದ್ಯಾಯೋಗ್ಯತೆಗೆ ಯಾವ ಮಹತ್ವ ಬಂದೀತು

ಅಂತೆಯೇ ನಮ್ಮಲ್ಲಿ, ಈ ವರದಕ್ಷಿಣೆಯ ಕ್ರಮವು ಬಹಳ ಹಾನಿ ನಡೆಯಿಸುತ್ತದೆ. ಸಿಂಧ ದೇಶದಲ್ಲಿ ನಡೆದಂತೆ, ಕೆಲವು ಯೋಗ್ಯ ವಿದ್ಯಾವಂತ ತರುಣರು ಧಾರಾಳ ಬೆಲೆಯನ್ನು ಕೇಳುತ್ತಿದ್ದಾರೆ. ಇತ್ತೀಚೆಗೆ ಓರ್ವ ಇಂಜಿನಿಯರಿಂಗ್ ಪದವೀಧರನಾದ ಮತ್ತು ತಿಂಗಳಿಗೆ ಸಾಧಾರಣ, ೭೫ರಿಂದ ೧೦೦ರ ವರೆಗೆ ಸಂಬಳವನ್ನು ಪಡೆಯುವ, ತರುಣನಿಗೆ ರೂ ೫೦೦೦ ವರದಕ್ಷಿಣೆ ಮತ್ತು ಸಾಧಾರಣ ೧೫೦೦ ರೂಪಾಯಿ ಕ್ರಯಬಾಳುವ ಉಡುಗೆರೆಗಳನ್ನು ಕೊಡುವುದಾಗಿ ವಿವಾಹವು ನಿಶ್ಚಯವಾಗಿತ್ತು ಆದರೆ ಮತ್ತೊಬ್ಬ ಮಹನೀಯರು ಈ ವರದಕ್ಷಿಣೆಯನ್ನೂ ಉಡುಗೆರೆಯನ್ನೂ ಹೆಚ್ಚಿಸಿ, ವರನನ್ನು ಮೊದಲಿನವರಿಂದ ಹೊಡೆದುಬಿಟ್ಟರು ವಿವಾಹವು ನಡೆಯಿತು. ಮೊದಲಿನವರು ತನಗಾದ ಮಾನನಷ್ಟಕ್ಕಾಗಿ ಕೋರ್ಟಿಗೆ ಹೋಗುವವರಿದ್ದರು. ಹೀಗೆಯೆ ಸಾಧಾರಣ ಯೋಗ್ಯತೆವುಳ್ಳವರು ಧಾರಾಳ ವರದಕ್ಷಿಣೆಯನ್ನು ಕೇಳುತ್ತಿದ್ದಾರೆ. ಆದರೆ, ಈ ವರದಕ್ಷಿಣೆಯನ್ನು ಸಲ್ಲಿಸುವ ಯೋಗ್ಯತೆವುಳ್ಳವರು ತೀರ ಕಡಿಮೆ ...ಗಾಗಿ, ಪ್ರಾಯಭರಿತ ವಿವಾಹ ಯೋಗ್ಯ...ದ ತರುಣಿಯರ ಸಂಖ್ಯೆಯು ದಿನೇ ದಿನೆ ...ಚ್ಚುತ್ತಿದೆ.

ಸಿಂಧದೇಶದ ಈ ಪ್ರಶ್ನೆಯು ಹೇಗೆ ಅವ...ಗೆ ಪೀಡಿಸುತ್ತಿದೆಯೋ, ಅಂತೆಯೇ ನಮ್ಮ ಈಗ ಅವಸ್ಥೆಯು ಸಮಸ್ತ ಭರತಖಂಡವು ಈ ವಿಚಾರದಲ್ಲಿ ಸ್ವಲ್ಪಚೇತರಿಸಿಕೊಂಡು ಸುಧಾರಣೆ ಹೊಂದತಕ್ಕದು

ನಿಮ್ಮ ಪಾದವು ನೋವುಗೊಂಡರೆ ಬಾತುಕೊಂಡರೆ

ಸಸ್ಯಜನ್ಯ ಲೇಪನವಾದ

ಸಾಂಬಕನ್ನುಪಯೋಗಿಸಿರಿ.

ನೆಚ್ಚ, ನೋವುಗೊಂಡ, ಹುಡಿಹುಡಿಗೊಂಡ ಪಾದಗಳಿಗೂ ಬಾತುಕೊಂಡ ಸಂದುಗಳಿಗೂ ಸಾಂಬಕ್‌ಗೆ ಸಮಾನವಾದ ಲೇಪವಿಲ್ಲ ನಿಮ್ಮ ಪಾದಗಳ ಮೇಲೆ ಸರಿಯಾಗಿ ಪ್ರತಿರಾತ್ರಿ ತಿಕ್ಕಿರಿ ಅದು ಬಹು ಗುಣಕಾರಿಯಾದುದು ಅಪ್ರೋಪವಾದುದು ಅದು ಚರ್ಮವನ್ನು ಹೊಕ್ಕು ಉರಿ ಗಾಯಗಳನ್ನು ನಿವಾರಿಸುತ್ತದೆ ಗಾಯಗಳನ್ನೂ ಪಾದದ ಒಡೆತಗಳನ್ನೂ ಗುಣಗೊಳಿಸುತ್ತದೆ ಪಾದಗಳನ್ನು ಮೃದುಗೊಳಿಸುತ್ತದೆ ಬೇರೆ ಚರ್ಮರೋಗ ಮೊದಲಾದುವುಗಳನ್ನೆಲ್ಲ ಹೋಗಲಾಡಿಸುತ್ತದೆ ಒಂದು ಪೆಟ್ಟಿಗೆಯನ್ನು ಪಡೆದು ಪರೀಕ್ಷಿಸಿರಿ ಒಂದು ಪೆಟ್ಟಿಗೆಗೆ ರೂ 1 ಅಥವಾ 2-4-0 ರಂತೆ ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ವಿಕ್ರಯಿಸಲ್ಪಡುತ್ತದೆ

ಝಾಂಬಕ್

Zam-Buk



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರಗಟ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವುದು

Sole Representatives – F Racek & Co,

Bombay	Calcutta	Madras	Columb
P O Box	P O Box	P O Box	P O Box
2006	2121	1248	389

QUALITY IMPORTS

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ–ಪೂನಾ–ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ,

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೆಬೀಡು–ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

Chikmagalur Public Conveyance Motor Service,

CHIKMAGALUR.

ಉಡುಪಿ— ಇದೇ ೩೦ನೇ ಶುಕ್ರವಾರ ಉಡುಪಿಯ ಇತಿಹಾಸದಲ್ಲೊಂದು ವಿಶೇಷ ದಿನವಾಗಿದೆ. ಹಬ್ಬ ಹರಿದಿನ, ಉತ್ಸವಗಳು ಕಾಲಕಾಲಕ್ಕೆ ಜರುಗುತ್ತಿರುವುದಾದರೂ ವ್ಯಾಪಾರ ಕಾರ್ಯಗಳು ಎಂದೋ ಆರಂಭಿತವಾಗಿ ಬರು... ೩೦ನೇ ಈ ಶುಕ್ರವಾರವು ಉಡುಪಿಯಲ್ಲಿ ಮಹೋತ್ಸವದ ದಿನವಾಗಿತ್ತು. ಇದಕ್ಕೆ ಕಾರಣಭೂತರು ನಮ್ಮ ಜಿಲ್ಲೆಯ ... ಗೌಡಸಾರಸ್ವತ ವೃಂದದವರೊಳಗೆ ಒಂದು ಪ್ರಮುಖ ಮನೆತನದವರಾದ ಮೆಸ್ಸರ್ಸ್ ಕೊಟ್ಟಾರ ... ಪ್ರಸಿದ್ಧರಾಗಿರುತ್ತಾರೆ. ವಕೀಲ ವೃತ್ತಿಗಾಗಿ ಲಾ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದು, ಕಾರಣಾಂತರದಿಂದ ಆ ಬಗ್ಗೆ ಸ್ವದೇಶಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯ ಸಬ್ ಏಜನ್ಸಿಯನ್ನು ಕೈಕೊಂಡ ಶ್ರೀಯುತ ಕೊಟ್ಟಾರ ಪದ್ಮನಾಭ ಪೈ ಬಿ. ಎ. ಯವರೇ ಇದರ ಮೂಲಪುರುಷರು. ಇವರ ಕುಶಲತೆ, ಕಾರ್ಯದಕ್ಷತೆ, ಪ್ರೀತ್ಯಾದರಗಳಿಂದಾಗಿ ಇದೂ ... ಚೆನ್ನಾಗಿ ಫಲಕಾರಿಯಾಗುತ್ತ ಇವರ ನಾಲ್ವರು ಸಹೋದರರೂ ಜತೆಗೊಂದಾಗ ಇವರ ಉದ್ಯಮದಲ್ಲಿ ನೆರವಾಗಿ ಇಂದಿಗೆ ಕೊಟ್ಟಾರ ಬಂಧುಗಳೆಂದು ದಕ್ಷಿಣ ಹಿಂದೂಸ್ಥಾನ ... ಸುರಿತ ವಿಮಾ ವ್ಯವಸಾಯಗಳಿಂದ ಖ್ಯಾತಿಗೊಂಡಿರುತ್ತಾರೆ. ೧೯೧೦ರಲ್ಲಿ ಬೊಂಬಾಯಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯೊಡನೆ ಕೂಡಿಗಿದ ಸಂಬಂಧ ಈಗ್ಗೆ ೨೫ ವರ್ಷಗಳ ಎಡೆಬಿಡದೆ ವೃದ್ಧಿಗೊಂಡು, ಇವರ ಮೂಲಕ ಮೇಲಣ ಕಂಪೆನಿಗೆ ಈಗ್ಗೆ ಎರಡು ಕೋಟಿ ರೂಪಾಯಿಗಳ ಪಾಲಿಸಿಗಳು ... ಇವರ ... ಸಮ್ಮುಖದಲ್ಲಿ ... ದಕ್ಷಿಣ ಹಿಂದೂಸ್ಥಾನದಲ್ಲಿ ... ಕೊಟ್ಟಾರ ಬಂಧುಗಳ ... ರೂ ೪೦ ೦೦೦ ... ಗಾಂಧಿನಗರ (ಅಜ್ಜರಕಾಡಿನ ಎಕ್ಸ್‌ಟೆನ್ಶನ್) ದಲ್ಲಿ ಕಟ್ಟಿಸಲು ... ಸದರಿ ಕಟ್ಟಡದ ಶಿಲಾನ್ಯಾಸ ಕಾರ್ಯಕ್ಕಾಗಿ ಕೊಟ್ಟಾರ ಬಂಧುಗಳ ... ಇವರನ್ನು ಅಭಿನಂದಿಸಲೂ ಕಂಪೆನಿಯ ಚೆಯರ್ಮೇನರಾದ ಸರ್ ... ಲಾಲ್ ... ದಾಸ್ ... ಯವರು ... ೨೭ನೇ ಪ್ರಾತಃಕಾಲ ... ಉಡುಪಿಯಲ್ಲಿ ... ಬಿ ಎ ಎಲ್ ಟಿ ಯವರು ... ಸದರಿ ಕಂಪೆನಿಯ ಮೆನೇಜರ್ ಶ್ರೀ ಜಿ ಎಲ್ ... ಶ್ರೀ ... ಎಲ್ ಎಲ್ ಬಿ ಕಂಪೆನಿಯ ಪಾಲಿಸಿದಾರರ ... ಸದರಿ ... ತಾರೀಕು ೨೭ನೇ ಸಾಯಂಕಾಲ ೫ ಗಂಟೆಗೆ ಉಡ್ಪಿಯ ... ಸರ್ವೆಂಟ್ಸ್ ಆಫ್ ಇಂಡಿಯಾದವರ ಪರವಾಗಿ ... ಶಾಲಾ ಮಕ್ಕಳಿಂದ ... ನಡೆದುವು

೩೦ ನೇ ಪ್ರಾತಃಕಾಲ ೬ ಗಂಟೆಗೆ ಕಂಪೆನಿಯ ... ಚೆಯರ್ಮೇನರು ಸ್ವಾಗತ ... ಸಂದರ್ಭೋಚಿತ ಭಾಷಣಗಳಾದ ನಂತರ, ... ಶಂಕುಸ್ಥಾಪನಾ ಕಾರ್ಯವು ಜರಗಿತು. ... ಅನ್ನು ಹೊತ್ತಿಗೆ ಸುಮಾರು ೫೦೦ ಮಂದಿ ನೆರೆದಿದ್ದರು. ... ಉಪಹಾರ ... ೩೦೦ ಹರಿಜನರಿಗೆ ... ಸುಮಾರು ೬೦೦೦ ಜನರಿಗೆ ... ಹಂಚಲಾಯಿತು

ಅದೇ ಅಂದು ಮಧ್ಯಾಹ್ನ ೩ ತಾಸಿಗೆ ... ಸಭೆ ಪ್ರಾರಂಭವಾಗಿ ಪ್ರತ್ಯೇಕವಾಗಿ ನಿರ್ಮಿಸಿದ್ದ ವಿಶಾಲವಾದ ... ಮಂಟಪದಲ್ಲಿ ಜನರು ... ಸುಮಾರು ೬೦೦೦ ಮಂದಿಯು ನೆರೆದಿದ್ದರು. ... ಜನಸಮೂಹವು ಸುಮಾರು ... ಈ ಕೌತುಕವನ್ನು ನೋಡುತ್ತಿದ್ದಿತು. ಶ್ರೀ ಕೊಟ್ಟಾರ ಪದ್ಮನಾಭ ಪೈಯವರು ಚೆಯರ್ಮೇನರು, ಮೆನೇಜರು, ಪಾಲಿಸಿದಾರರ ... ಕಂಪೆನಿಯ ಆಡಿಟರ್ ಮತ್ತು ... ಸಭಿಕರಲ್ಲಿ ಪ್ರಮುಖ ಗೃಹಸ್ಥ ಮತ್ತು ... ಪರಿಚಯವನ್ನು ಬಹು ಹೊತ್ತು ಮಾಡಿದರು. ... ಕೊಟ್ಟಾರ ಬಂಧುಗಳಿಗೂ ಸದ್ರಿ ಮಹೋತ್ಸವಕ್ಕೂ ಬೊಂಬಾಯಿ ಲ್ಯಾಫಿಗೂ ... ಅಭಿನಂದನಾ ಪತ್ರ ಓದಲಾಯಿತು. ಅನಂತರ ... ಮಾನಪತ್ರ ಅರ್ಪಣ, ಭಾಷಣಗಳೂ ನಡೆದುವು. ಮಾನಪತ್ರಗಳಲ್ಲಿ ಕೊಟ್ಟಾರ್ ಬಂಧುಗಳು ಕಂಪೆನಿಯ ಡ್ಯೆರೆಕ್ಟರರಿಗೆ ಬೆಳ್ಳಿಯ ಪೆಟ್ಟಿಗೆಯಲ್ಲಿ ಕೊಟ್ಟಿದ್ದೊಂದು ಸದ್ರಿ ಕಂಪೆನಿಯು ದಕ್ಷಿಣ ಹಿಂದೂಸ್ಥಾನ ಮತ್ತು ಬೊಂಬಾಯಿ ಶಹರದ ಯೋಜಂಟರುಗಳಿಂದ ಒಂದು ಮತ್ತು ಅವರಿಗೆ ಅವರ ಸಿಬಂದಿಯಿಂದ ಒಂದು ಅಂತೂ ಬೆಳ್ಳಿ ಕಡಿದ ಚಿನ್ನದಕ್ಷೆಗಳೆರಡು, ಬೊಂಬಾಯಿ ಲ್ಯಾಫ್ ಕಂಪೆನಿಯ ಪರವಾಗಿ ಚೆಯರ್ಮೇನರು ಬೆಳ್ಳಿಯ ಪೆಟ್ಟಿಗೆಯಲ್ಲಿ ಕೊಟ್ಟಾರ ಬಂಧುಗಳಿಗೆ ಅರ್ಪಿಸಿದ ಮಾನಪತ್ರ ಇನ್ನೊಂದು, ಪಾಲಿಸಿದಾರರ ಪರವಾಗಿ ಅವರಿಗೆ ಸಮರ್ಪಿಸಲ್ಪಟ್ಟ ಮಾನಪತ್ರ ಬೇರೊಂದು ಈ ಸಂಸ್ಥೆಯವರ ಸೇವೆಯನ್ನು ಮನಃಪೂರ್ವಕವಾಗಿಯೂ ಉತ್ಸಾಹದಿಂದಲೂ ಮಾಡಿ ಮನ್ನಣೆಗೊಂಡ ಹಲವು ಯೋಜಂಟರುಗಳಿಗೆ ಬಹುಮಾನ ಪಾರಿತೋಷಕಗಳೂ ಕೊಡಲಾದುವು. ಸಭೆಯಲ್ಲಿ ಕೊಟ್ಟಾರ್ ಬಂಧುಗಳ ಮತ್ತು ಬೊಂಬಾಯಿ ಲ್ಯಾಫಿನ ಕುರಿತು ಹಲವರು ಮಾಡಿದ ಭಾಷಣಗಳು ಸಾರಸ್ಯಪೂರಿತವಾಗಿದ್ದುವು

ಮೇಲಾಗಿ ಶ್ರೀ ನಾರಾಯಣ ಕಿಲ್ಲೆಯವರು ಕನ್ನಡದಲ್ಲಿ ಮಾಡಿದ ಭಾಷಣವು ಅಷ್ಟು ದೊಡ್ಡ ಸಭಾಂಗಣದಲ್ಲಿ ಚೆನ್ನಾಗಿ ಪರಿಣಾಮಕಾರಿಯಾಯಿತು. ಇಲ್ಲದಿದ್ದರೆ ನೇಕಡಾ ೧೦ ಮಂದಿ ಕೇಳಸಿಗುತ್ತಿರಲಿಲ್ಲ ... ನೋಡಿ ನೋಡಿ ... ಹಿಂತಿರುಗಬೇಕಾಗಿತ್ತು. ಮುಖ್ಯತಃ ಚೆಯರ್ಮೇನರು ಕೊಟ್ಟಾರ ಬಂಧುಗಳೆಂದರೆ ಬೊಂಬಾಯಿ ಲ್ಯಾಫಿನ ಆಧಾರ ಸ್ತಂಭದೆಂದೂ ಅವರನ್ನೇ ಸದ್ರಿ ಕಂಪೆನಿಯು ಬಹು ವರ್ಷಗಳ ವರೆಗೆ ಅವಲಂಬಿಸಿಕೊಂಡಿದ್ದ ... ಮುಂದಾಗಿ ... ಈ ಕೊಟ್ಟಾರ ಬಂಧುಗಳು ಇಂದಿನ ೨೫ ವರ್ಷ ... ಹಿಂದೂಸ್ಥಾನದಲ್ಲೇ ವಿಶೇಷ ಕೀರ್ತಿಯನ್ನು ... ಅವರ ಪ್ರಸಿದ್ಧ ಪಡೆದ ... ಕಾರ್ಯಕ್ಷೇತ್ರದಲ್ಲಿ ಉಜ್ವಲವಾಗಿ ಪ್ರಕಾಶಿಸುವ ... ನಮ್ಮ ... ಗಳು ಜನಸಮೂಹದ ಬಾಹುಳ್ಯ, ಗದ್ದಲ ಕೋಲಾಹಲ ಉತ್ಸಾಹ ಮತ್ತು ವಿಜಾರ್ಡುಗಳನ್ನು ನೋಡಿದವರು ಏನು? ಇದೊಂದು ಕೊಂಗ್ರೆಸು ವಿಜೃಂಭಣೆಯೊ ಎಂತಹ ವೈಭವ? ಏನು ಗೌಜು ಎನ್ನುತ್ತಿದ್ದವರೆಷ್ಟು ಮಂದಿ!

ಪುತ್ತೂರು— ಬಳ್ಳಂಗಡ ಸಹಕಾರ ಸಮಿತಿಯ ಪರವಾಗಿ ಪಾಲಡ್ಕ, ಪುತ್ತೂರು ಬೆಳುವಾಯಿ ಮತ್ತು ಆಸುಪಾಸಿನ ಗ್ರಾಮಸ್ಥರ ವಿಶೇಷ ಸಭೆಯೊಂದು ತಾ. ೧೫-೧೨ ೩೫ನೇ ಆದಿತ್ಯವಾರ ಕೋಡ್ಯದ್ಕದಲ್ಲಿ ರಚಿಸಲ್ಪಟ್ಟ ಸಭಾ ಚಪ್ಪರದಲ್ಲಿ ನೆರೆಯಿತು. ಸಮಿತಿಯ ಮೆಂಬರರ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಗ್ರೈನ್ ಬೇಂಕೊಂದನ್ನು ಸ್ಥಾಪಿಸುವುದೇ ಸಭೆಯ ಮುಖ್ಯೋದ್ದೇಶವಾಗಿದ್ದಿತು. ಸಾಯಂಕಾಲ ಘಂಟೆ ೩ಕ್ಕೆ ಸರಿಯಾಗಿ ಸಭಾರಂಭವಾಯಿತು. ನಿಯೋಜಿತ ಅಧ್ಯಕ್ಷ ಶ್ರೀ ಉಳ್ಳಾಲ ಮಂಗೇಶರಾಯರ ಅನಿವಾರ್ಯ ಗೈರುಹಾಜರಿಯ ನಿಮಿತ್ತ ಸಮಿತಿಯ ಕಾರ್ಯದರ್ಶಿಯಿಂದ ಸೂಚನೆ ವ್ಯವಸ್ಥಾಪಕರ ಅನುಮೋದನೆಯಿಂತ ಸಹಕಾರ ಸಂಘಗಳ ಡಿಪ್ಯುಟಿ ರಜಿಸ್ಟ್ರಾರರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರು ಸಮಿತಿಯ ಕಾರ್ಯಗಳನ್ನು ಶ್ಲಾಘಿಸಿ ಮುನ್ನುಡಿಗಳನ್ನಾಡಿ ... ನಂತರ ವ್ಯವಸ್ಥಾಪಕ ಶ್ರೀ ಬಿ ಟಿ ... ರವರು ತನ್ನ ಹಳ್ಳಿ ಕೆಲಸಗಳ ಅನುಭವಗಳನ್ನು ತಿಳಿಸಿ ಈಗ ಸ್ಥಾಪನೆಯಾಗುವ ಗ್ರೈನ್ ಬೇಂಕ್ ಮತ್ತು ಸಂಘದಿಂದ ... ಬಳ್ಳಂಗಡ ಸಮಿತಿಯ ಮೆಂಬರರಿಗಾಗುವ ಹಿತದ ಕುರಿತು ವಿವರಿಸಿ ಎಲ್ಲರ ಸಹಕಾರವನ್ನು ಕೋರಿ ಅರ್ಥಗರ್ಭಿತ ಭಾಷಣವಿತ್ತರು. ಶ್ರೀ ನಾರಾಯಣ ಕಿಲ್ಲೆಯವರು ಸಮಿತಿಯ ಕೆಲಸಗಳನ್ನು ಕೊಂಡಾಡಿ ವಿಮರ್ಶಕರಿಗೆ ಯೋಗ್ಯ ಉತ್ತರವನ್ನಿತ್ತು, ಹಳ್ಳಿಗರ ... ಹೃದಯಂಗಮವಾಗಿ ವಿವರಿಸಿದರು. ಶ್ರೀ ಕೋಟಿಕಾರ ಸುಬ್ಬಣ್ಣಯ್ಯನವರು ಗ್ರೈನ್ ಬೇಂಕಿನ ಕೆಲಸಗಳಲ್ಲಿ ತನ್ನ ಅನುಭವವನ್ನು ಹೇಳಿ ಮೆಂಬರರಿಗೂ ಬೇಂಕಿಗೂ ಇರಬೇಕಾದ ಸಂಬಂಧದ ಕುರಿತು ಸವಿವರವಾಗಿ ಮಾತನಾಡಿದರು. ಅಧ್ಯಕ್ಷರು ಭಾಷಣವಿತ್ತು ಗ್ರೈನ್ ಬೇಂಕ್ ಸ್ಥಾಪಿಸುವುದರಿಂದಾಗುವ ಪ್ರಯೋಜನ ಸಹಕಾರ ಸಂಘಗಳ ಕಾರ್ಯಕಲಾಪಗಳನ್ನೂ ವಿವರಿಸಿದರು. ... ಪರಸ್ಪರ ಸಹಕಾರವೇ ಮುಖ್ಯವೆಂಬುದನ್ನು ಸಾರಿದರಲ್ಲದೆ ... ಸಮಿತಿಯ ಮೆಂಬರರು ನಡೆಸಿಕೊಳ್ಳಬೇಕಾದ ರೀತಿಯನ್ನು ಬೋಧಿಸಿದರು. ಕೊನೆಗೆ ಕಾರ್ಯದರ್ಶಿಯವರು ಧನ್ಯವಾದಗಳನ್ನಿತ್ತ ಮೇಲೆ ಹಲವು ಮಹನೀಯರನ್ನು ಬೇಂಕಿನ ಮೆಂಬರರಾಗಿ ಸೇರಿಸಿಕೊಳ್ಳಲಾಯಿತು. ಊರ ಮಹನೀಯರೆಲ್ಲಾ ಉತ್ಸಾಹದಿಂದ ಅಂದಿನ ಕಾರ್ಯಕ್ರಮಗಳಲ್ಲಿ ಸಹಕರಿಸಿದುದಲ್ಲದೆ ಸಭೆಯಲ್ಲಿ ಸ್ಪೃಶ್ಯಾಸ್ಪೃಶ್ಯರೆಂಬ ಭೇದವಿಲ್ಲದೆ ಎಲ್ಲರೂ ಸಮ್ಮಿಳಿತರಾಗಿದ್ದರು. ಹಳ್ಳೀ ಸಭೆಗಳಿಗಿದು ಹೊಸತೆಂಬಂತೆ ೩ ಪ ಪಿ ಪೋಲೀಸರೂ ಬಂದಿದ್ದರು

ರಾತ್ರಿ ಸಭಾಸ್ಥಳದಲ್ಲಿ ರಾಮಾಯಣದ ವಾಚಿಪದೆಯ ವಾಚನವಾಯಿತು. ಶ್ರೀ ಕಿಂಞಣ್ಣ ರೈಗಳು ಓದುತ್ತ ಶ್ರೀ ಕಿಲ್ಲೆಯವರ ಸುಶ್ರಾವ್ಯ ಅರ್ಥ ವಿವರಣೆ ... ತನ್ನ ಉಪಸಂಹಾರ ಭಾಷಣದಲ್ಲಿ ಶ್ರೀ ಕಿಲ್ಲೆಯವರು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕೊಂಗ್ರೆಸಿಗರಾದ ಜಯಶಾಲಿಯವರ ತುಲನೆಯನ್ನು ಮಾಡಿ ಕೊಂಗ್ರೆಸಿನ ಕಟ್ಟಳ್ಳಾದ ವಿಜಯವನ್ನು ಸ್ವೀಕರಿಸಿದ್ದರು ಗ್ರಾಮಸ್ಥರ ಸೌಕರ್ಯಕ್ಕಾಗಿ ಪ್ರತಿ ಮಂಗಳವಾರ ಸಂತೆಯನ್ನು ಸಮಿತಿಯ ಕಾರ್ಯಕ್ಷೇತ್ರದ ಮಧ್ಯವಾದ ಕೋಡ್ಯದ್ಕದಲ್ಲಿ ನೆರಯಿಸುವ ನಿರ್ಧಾರವಾಗಿರುವುದು

ಪ್ರಯಾಣಿಕರ ಮೇಲೆ ಕಳ್ಳರ ಮುಸಲತ್ತು.

ಕಡಪ್ಪ ದಶಂಬರ್ ೧೦

ಸೆಶ್ಯನ್ ಜಡ್ಜಿಯವರಾದ ಮಿ। ಎಸ್. ವಿ ಚಾರಿಯರು ಇಂದು ಮಾನಸಿಂಗನಿಗೂ ಅವನ ಆರು ಮಂದಿ ಅನುಯಾಯಿಗಳಿಗೂ ಕಳ್ಳರೆಂಬ ಕಪಸೀಲಿನ ಮೇಲೆ ಕಾರಾವಾಸವನ್ನು ನೇಮಿಸಿದರು.

ಕಳೆದ ಜೂನ್ ೫ ತಾರೀಕಿನಲ್ಲಿ ರಾತ್ರೆ ಮೂವರು ಪ್ರಯಾಣಿಕರು ಮೂರು ಗಾಡಿಗಳಲ್ಲಿ ಕುಳಿತು ಮಿಡುಕೂರಿನಿಂದ ಬಡ್ವೇಲಿಗೆ ಹೋಗುತ್ತಿದ್ದರು. ಅವರು ರಾಣೆಭಾವಿಯನ್ನು ಮುಟ್ಟುವಷ್ಟರಲ್ಲಿ ಕಳ್ಳರ ತಂಡವೊಂದು ಅವರನ್ನು ತಡೆಗಟ್ಟಿ ಅವರೊಡನಿದ್ದ ಬೆಳ್ಳಿ ಬಂಗಾರ ಹಣವನ್ನು ಬಲಾತ್ಕಾರಪೂರ್ವಕವಾಗಿ ಸೆಳೆದು ಹೋಯಿತು. ಸಾಧಾರಣ ರೂ. ೬೦ ಕಳವಾಗಿರಬಹುದು. ಪೋಲೀಸರಿಗೆ ಇದು ತಿಳಿಯಲು, ಕಳ್ಳರ ಶೋಧವಾಗಿ ಮಾನಸಿಂಗನನ್ನೂ ಅವನ ಅನುಯಾಯಿಗಳನ್ನೂ ಸೆರೆಹಿಡಿದರು. ಕಳವಿನ ಬಗ್ಗೆ ಹದಿನಾಲ್ಕು ಮಂದಿಯ ಸಾಕ್ಷಿಗಳು ಇದ್ದವು. ... ಇಬ್ಬರು ಮುಕ್ತ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಉಳಿದವರಿಗೆ ೫ ವರ್ಷಗಳ ಕಠಿಣ ಸಜೆಯು ವಿಧಿಸಲಾಯಿತು.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಭುಲಾಭಾಯಿ ದೇಸಾಯಿಯವರು ಪಾರ್ಲಿಮೆಂಟರಿ ಪ್ರೊವಿನ್ಸಿಯಲ್ ಕಮಿಟಿಯ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟವರಾಗಿ ತಿಳಿದುಬಂದಿದೆ

ಅಖಿಲಭಾರತ ಸ್ವದೇಶಿ ವಸ್ತುಪ್ರದರ್ಶನದ ತೆರೆಯೋಣದ ಉತ್ಸವವನ್ನು ತಾನೂ ಮಾಡುವುದಾಗಿ ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬೂ ರಾಜೇಂದ್ರ ಪ್ರಸಾದರು ಒಪ್ಪಿಕೊಂಡಿರುವರು. ಈ ಪ್ರದರ್ಶನವು ದಶಂಬರ ತಾರೀಕು ೨೫ರಲ್ಲಿ ... ನಗರದಲ್ಲಿ ತೆರೆಯಲ್ಪಡುವುದು



ಉಡುಪಿಯ ಕೊಟ್ಟಾರ್ ಬ್ರದರ್ಸ್‌ರ ರಜತೋತ್ಸವ ಸಮಾರಂಭದಲ್ಲಿ ಅಡಿಗಲ್ಲು ಹಾಕಲ್ಪಟ್ಟ ಭವ್ಯವಾದ ದಿ ಬೊಂಬೈ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇವರ ಭಾವಿ ಆಫೀಸು

ಉಡುಪಿಗೆ ಎಷ್ಟೋ ಗೌರವಾಸ್ಪದ ... ಶ್ರೀಕೃಷ್ಣ ಶ್ರೀಮಾನ್ ಮಧ್ವಾಚಾರ್ಯರಿಂದ ... ರಜತೋತ್ಸವವು ಸ್ವರಾಜ್ಯ ಚಳವಳಿಯಲ್ಲಿಯೂ ಜಿಲ್ಲೆಯು ಮುಖ್ಯ ಪಟ್ಟವನ್ನು ... ಉಡುಪಿಯು ವಿಮಾ ಪ್ರಪಂಚದಲ್ಲಿ ಹಿಂದೂಸ್ಥಾನದಲ್ಲಿಲ್ಲಾ ಒಂದು ಆದರ್ಶ ಸಂಸ್ಥೆಯ ಸ್ಥಾನವೆಂದಾದುದು ... ಮುಂದಕ್ಕೂ ಅದೇ ಶ್ರೀಕೃಷ್ಣ ಪರಮಾತ್ಮನು ಸದ್ರಿ ಕಂಪೆನಿಯನ್ನೂ ಕೊಟ್ಟಾರ್ ಬಂಧುಗಳನ್ನೂ ಇನ್ನಷ್ಟು ವೃದ್ಧಿಗೊಳ್ಳುವಂತೆ ... ಮಾಡಲೆಂದು ಸಂಪ್ರಾರ್ಥನೆ

ಮೇಲಣ ಸಮಾರಂಭಗಳ ತರುವಾಯ ನೆರೆದಿದ್ದ ಸಭಿಕರಿಗೆ ಉಪಹಾರ ... ಬಹು ಸಾಂಗವಾಗಿ ನೆರವೇರಿತು. ಸುಮಾರು ೪೦೦೦ ಜನರಿಗೆ ಸಂದಿದ್ದ ಉಪಹಾರ ... ಉಪಹಾರದ ... ಶ್ರೀ ... ದಾಸ ಭಂಡಾರಕರರೇ ನಡೆದಿದ್ದು ಈ ... ಪ್ರಾತಃಕಾಲದಿಂದ ... ಅಂದರೆ ಇಷ್ಟು ಯೋಗ್ಯ ಮತ್ತು ... ದೊಡ್ಡ ಉಪಹಾರ ... ವರೆಗೆ ನಮ್ಮ ಜಿಲ್ಲೆಯಲ್ಲಿ ನಡೆದದ್ದೇ ಇಲ್ಲ. ... ರಾತ್ರಿ ... ಮೋಡರ್ನ್ ಹೈ ... ಶಾಲೆಯಲ್ಲಿ ಕೊಟ್ಟಾರ ಬಂಧುಗಳ ಸಬ್ ಯೋಜಂಟರುಗಳ ಪರವಾಗಿ ಚೆಯರ್ಮೇನರ ಮುಂತಾದ ಅತಿಥಿಗಳೂ ... ಗೃಹಸ್ಥರಿಗೆ ಉಪಹಾರ ... ಸಂಬಂಧವಾಗಿ ಈ ದಿನ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಮತ್ತು ಶ್ರೀ ಎ ... ದೇವಳದಲ್ಲಿ ಸಂತರ್ಪಣೆ ರಥೋತ್ಸವ ಜರಗಿತು. ಶ್ರೀ ಅನಂತೇಶ್ವರ ಚಂದ್ರ ಮೌಳೀಶ್ವರ ಶಂಕರ ನಾರಾಯಣ ದೇವಳಗಳಲ್ಲಿ ರುದ್ರಾಭಿಷೇಕ ಪೂಜೆಗಳೂ ಇದ್ದುವು. ... ವಿದ್ಯಾರ್ಥಿಗಳಿಗೆ ವಸ್ತ್ರ ... ಮೇಲೆ ಮೆಸ್ಸರ್ಸ್ ಕೊಟ್ಟಾರು ಬಂಧುಗಳ ಈ ರಜತೋತ್ಸವ ಸಂಬಂಧವಾದ ಸಂಭ್ರಮಾದಿ

ಕೊಂಗ್ರೆಸ್ ಸ್ವರ್ಣ ಮಹೋತ್ಸವ ಸಂಚಿಕೆ ಸಚಿತ್ರವಾಗಿ ಹೊರಡುವುದು.

ಕೊಂಗ್ರೆಸ್ ಸುವರ್ಣ ಮಹೋತ್ಸವದ ಸ್ಮಾರಕಾರ್ಥವಾಗಿ ಸ್ವದೇಶಾಭಿಮಾನಿಯು ತಾರೀಕು ೨೭—೧೨—೧೯೩೫ರಲ್ಲಿ ಸಚಿತ್ರ ಕೊಂಗ್ರೆಸ್ ಸುವರ್ಣ ಮಹೋತ್ಸವದ ಸಂಚಿಕೆಯಾಗಿ ಹೊರಡುವುದು. ಪ್ರಸಿದ್ಧ ಬರಹಗಾರರ ಲೆಖ್ಖಣಿಕೆಯಿಂದ ಹೊರಟ ಉದ್ಗಾರಗಳನ್ನು ಓದಬೇಕೇ ಅಖಿಲ ಭಾರತ ಕೊಂಗ್ರೆಸ್ಸಿನ ಕಾರ್ಯಕಲಾಪಗಳ ವಂಚಯವು ನಿಮಗಾಗಬೇಕೇ ಹಾಗಾದರೆ ಮುಂದಾಗಿ ಈ ಸಂಚಿಕೆಯನ್ನು ಪಡಕೊಳ್ಳಿ. ಮತ್ತೆ ನಿರಾಶರಾಗದಿರಿ

ಬೆಲೆ ಆಣೆ ೧.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

ಡಾಕ್ಟರ ವಾಮನ ಗೋಪಾಳರವರ

ಔಷಧಾಯಿಲ್ಲ [illegible]
ಕಟ್ಟಿ ರಕ್ತಕ್ಕೆ ಪರಮೌಷಧ
ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೊಸ್ಪರಸ್ ಗುಳಿಗೆಗಳು
[illegible]

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, [illegible]
[illegible] ಕಂಪೆನಿ, ಮಂಗಳೂರು
[illegible]

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA—AND—MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds Headache It is a complete substitute for the domestic medicine chest Try once this unequalled remedy In ¼oz tin As 3/ In oz jar As 12/-

Superior Red Balm For relieving pains in muscles and on skin. Directions for use with the bottle Price As 12/- only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults try this unique remedy and be freed from your ailment Price As 10 per packet

Pocket Inhaler For cough and hoarseness, headache catarrhal colds, use this inhaler and you will be relieved immediately Price per inhaler As 6 & As 8/

Po-Ho Fluid For Asthma, colds indigestion, toothache lumbago, a sure remedy in all cases Price As 6/- and Re 1/ per phial

Cough Cure An infallible remedy for coughs of all kinds bronchitis, hoarseness Particulars in bottle Price As 12 - for 8 oz bottle

The New Curative Earth A R[illegible] cure for incurable diseases

Mithra Toilet Soaps—Scientifically prepared German soaps excellent for health Price As 1 5 2 6 3/ , 4,

Basel Mission Book Depot
Mangalore, Branches in Codialbail, Hubli Calicut

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ ೫ ವರ್ಷಗಳ ಮೌಲ್ಯದೇಶನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವನಿತಾ ವಿಭಾಗ.

ಸ್ತ್ರೀ ವಿದ್ಯಾಭ್ಯಾಸ.

ದೇವರ ಸೃಷ್ಟಿಯಲ್ಲಿ ಮನುಷ್ಯರೊಳಗೆ ಹೆಣ್ಣು, ಗಂಡು, ಭೇದವೆ (ಎಲ್ಲಾ ಬುದ್ಧಿಹೀನ ಜೀವಿಗಳಲ್ಲಿರುವಂತೆ) ಸರ್ವಜನ ವಿದಿತವಾಹುದು. ಸಾಮಾನ್ಯವಾಗಿ ಪ್ರಜಾಸಂಖ್ಯೆಯಲ್ಲಿ ಅರ್ಧಾಂಶಕ್ಕೆ ಮಿಕ್ಕಿ ಹೆಂಗಸರೇ ಹೆಚ್ಚು. ಮಾನವ ಸಂಸಾರದ ಎರಡು ಅಂಗಗಳೇ ಸ್ತ್ರೀ ಪುರುಷರು. ಈ ಸಂಸಾರದ ಒಂದು ಚಕ್ರವು ತಿರುಗಿ, ಇನ್ನೊಂದು ತಿರುಗದೆ ಇದ್ದರೆ, ಆ ರಥವು ಮುನ್ನಡೆಯದೆ ಬೀಳುವುದೇ ಸರಿ. ಈ ಚಕ್ರಗಳಲ್ಲಿ ಒಂದು ಮೇಲು, ಒಂದು ಕೀಳು ಎನ್ನಿಸಬಾರದು. ಸಂಸಾರ ರಥದ ಗಾಲಿಗಳೋಪಾದಿಯಲ್ಲಿರುವ ಸ್ತ್ರೀಯಾಗಲೀ ಪುರುಷನಾಗಲೀ ಪ್ರತ್ಯೇಕ ಪ್ರತ್ಯೇಕವಾಗಿದ್ದು ಸುಖದಿಂದವಾಗಿ ಸಂಸಾರವನ್ನು ಸಾಗಿಸಲಾರರು. ಸಂಸಾರಯಾತ್ರೆಯ ಪರಿಪೂರ್ಣಾರ್ಥವಾಗಿ ಒಬ್ಬರ ಸಹಾಯವು ಇನ್ನೊಬ್ಬರಿಗೆ ಬೇಕೇ ಬೇಕು ಎಂದಮೇಲೆ ಪುರುಷರಂತೆಯೇ ಸ್ತ್ರೀಯರು ವಿದ್ಯಾವಿನಯ ಸಂಪನ್ನರೂ ಜ್ಞಾನವಂತರೂ ಆಗ ಸಶಕ್ತರಾಗಿದ್ದಾರೆ, ಗೃಹದಕ್ಷವಾದ ಸ್ತ್ರೀಯಿಂದ ಮನೆಯೂ, ಸಂಸಾರವೂ, ಜನಾಂಗವೂ, ದೇಶವೂ ಏಳಿಗೆಗೆ ಬರುವುದು

ಇಂದಿನ ತರುಣೀ ಮುಂದಿನ ಮಾತೆಯರುಗಳು, ಇಂದಿನ ಶಿಶುಗಳೇ ಮುಂದಿನ ತರುಣರಾಗಿ ಉಚ್ಚ ಶಿಕ್ಷಣ ಪಡೆದು, ಜನಾಂಗದ ಏಳಿಗೆ, ದೇಶಸೇವೆ ಇತ್ಯಾದಿ ಘನತರವಾದ ಕಾರ್ಯವನ್ನು ಮಾಡಲಿರುವರು. ಅಂಥ ಶಿಶುಗಳ ಪೋಷಣೆಯೂ ಪ್ರಾರಂಭದ ವಿದ್ಯಾಭ್ಯಾಸವೂ ಮಾತೆಯರಾದ ಸ್ತ್ರೀಯರಿಂದಲೇ ಆರಂಭಿಸುವುದು ಮಾತೆಯರು ವಿದ್ಯಾವಿಹೀನರೂ ಗುಣಹೀನರೂ ಆಗಿದ್ದಲ್ಲಿ ಅವರಲ್ಲಿ ಹುಟ್ಟಿದ ಮಕ್ಕಳು ಯಾವ ಸ್ಥಿತಿಯಲ್ಲಿರಬಹುದು 'ಕುಲಾನುರೂಪಾ ಪ್ರಜಾ ಸಂಭವಂತಿ 'ಮಾತೃವತ್ ಭವತೀರೂಪಂ ಪಿತೃರ್ವೈ ಭವತೀ ಗುಣ' ಎಂಬ ಹಾರೀತ ಮುನಿವಚನಗಳಂತೆ ಮಕ್ಕಳು ಸ್ವಭಾವಗಳ ಪ್ರಕಾರವಾಗಿಯೇ ಜನಿಸುವರೇ ವಿನಾ ಬುದ್ಧಿಶಾಲಿಗಳಾಗಲಾರರು "ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ" ಎಂಬ ನಾಣ್ಣುಡಿಯಂತೆ ಮಕ್ಕಳ ಮುಂದಿನ ಬೆಳವಣಿಗೆಯೂ ಗುಣಗಳೂ ತಾಯಿಯನ್ನೇ ಅನುಸರಿಸಿ ಬರುತ್ತವೆ. ಮನುಷ್ಯನ ಬುದ್ಧಿಯೂ ಗುಣವೂ ತಾಯಿಯ ಗರ್ಭದಲ್ಲಿರುವಾಗಲೇ ಅಂಕುರಿಸುತ್ತದೆಂದು ಪ್ರಾಜ್ಞರ ಮತ. ಆದುದರಿಂದ ಹೆಂಗಸರಿಗೆ ವಿದ್ಯೆ ಕಲಿಸಿ ಜ್ಞಾನವಂತೆಯರನ್ನಾಗಿ ಮಾಡಿದರೆ ಅವರ ಬಳಿಯಲ್ಲಿಯೇ ಬೆಳೆಯುವ ಮಕ್ಕಳೂ ಬುದ್ಧಿವಂತರೂ ಬಲವಂತರೂ ಆಗುವರು ಎಂಬುದರಲ್ಲಿ ಸಂದೇಹವಿಲ್ಲ.

ನಮ್ಮಲ್ಲಿ ಹಲವರು ಹೆಂಗಸರಿಗೆ ವಿದ್ಯೆ ಬೇಡವೆಂದು ಇನ್ನೂ ಅನ್ನುತ್ತಿರುವರು ಅವಳು ಅಡಿಗೆಮನೆಯವಳಂತೆ, ಒಲೆಯ ಬೂದಿಯನ್ನು ತೆಗೆಯುವುದು, ಮುಸುರೆ ತಿಕ್ಕುವುದು, ಕಸಬಳಿಯುವುದು ಆಕೆಯ ಕೆಲಸವಂತೆ! ಮತ್ತೆ ಇನ್ನು ಗೃಹಲಕ್ಷ್ಮಿಯರಂತೆ, ಧರ್ಮಪತ್ನಿಯರಂತೆ! ಇಂಥವರು ಪಶು ಜೀವನದಿಂದ ಜೀವಿಸಬೇಕೆ? ಎಂದು ಸ್ವಲ್ಪವೂ ಯೋಚಿಸುವುದಿಲ್ಲ. ಅನಾದಿಯಿಂದಲೂ ಸ್ತ್ರೀವರ್ಗವು ಹೀಗೆ ಅಜ್ಞಾನಿಗಳಾಗಿಯೇ ಇರಬೇಕಿತ್ತೇ? ಇಲ್ಲ. ಪ್ರತಿಯೊಬ್ಬ ಹಿಂದುವೂ, ಪ್ರತಿದಿನವೂ ವಿದ್ಯಾರಂಭ ಮಾಡುವಾಗ 'ಸರಸ್ವತೀ ನಮಸ್ತುಭ್ಯಂ । ವರದೇ ಕಾಮರೂಪಿಣೀ । ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ' । ನಮಸ್ತೆ ಶಾರದಾ ದೇವೀ ಕಾಶ್ಮೀರ ಪುರವಾಸಿನೀ । ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂಚ ದೇಹಿಮೆ" ಎಂದು ಪ್ರಾರ್ಥಿಸಿದ ಬಳಿಕ ವಿದ್ಯೆಯನ್ನು ಅಧ್ಯಯನ ಮಾಡತೊಡಗುವನೆಂಬುದು ಜನಜನಿತವಾದ ವಿಷಯವಾಗಿದೆ ಹೀಗೆ ಸಕಲರಿಗೂ ವಿದ್ಯೆಯನ್ನು ದಯಪಾಲಿಸುವ ಅಧಿಕಾರವೇ ಸ್ತ್ರೀಯರಲ್ಲಿ ಅಗ್ರಗಣ್ಯಳಾದ ಶಾರದೆಯಲ್ಲಿ ನೆಲಸಿರುವಾಗ ಸ್ತ್ರೀಯರು ವಿದ್ಯಾಭ್ಯಾಸದಲ್ಲಿ ಹಕ್ಕುಳ್ಳವರೆಂಬುದಕ್ಕೆ ಪ್ರತ್ಯೇಕ ಆಧಾರಗಳು ಅನಾವಶ್ಯಕವಾಗಿವೆ. ಆದರೆ ಈ ವಿಷಯದಲ್ಲಿ ಚುರುಕುಬುದ್ಧಿಯ ಗಂಡಸು ಆತ್ಮೀಯತೆಯ ದೋಷದ ಕೆಡಿತೆಯನ್ನು ಮುಚ್ಚಿದ ಹೊರತು, ಮತ್ತೇನೂ ಅಲ್ಲ. ಹಿಂದಿನ ಕಾಲದ ಸ್ತ್ರೀಯರಾದ ಯಮಿ, ಶಚಿ, ದೇವಯಾನಿ ಮೊದಲಾದವರು ವೇದಮಂತ್ರಗಳನ್ನೂ ರಚಿಸಿರುವರು. ಇದಲ್ಲದೆ ಶ್ರೀರಾಮನ ಪಂಡಿತೆಯಾದ ಸೀತೆಯು ಅಶೋಕವನದಲ್ಲಿ ದುಃಖಿಸುತ್ತಿರುವಾಗ, ರಾಮನ ಮುದ್ರೆ ಉಂಗುರವನ್ನು ಹನುಮಂತನು ಆಕೆಗೆ ಇತ್ತೊಡನೆಯೇ, ಅದರಲ್ಲಿ ಕೆತ್ತಿರುವ ಅಕ್ಷರಗಳನ್ನು ಓದಿ, ಆಕೆಯು ಆದು ತನ್ನ ಪತಿಯಿಂದ ಕಳುಹಿಸಲ್ಪಟ್ಟ ಉಂಗುರವೆಂದು ತಿಳಿದುಕೊಂಡಳೆಂದಮೇಲೆ, ಆ ಕಾಲದಲ್ಲೂ ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಡುತ್ತಿದ್ದರೆಂದೂ, ಸ್ತ್ರೀಯರು ಕೂಡಾ ಗಂಡಸರಷ್ಟೇ ವಿದ್ಯಾವಂತರೂ, ಜ್ಞಾನವಂತರೂ ಆಗಿದ್ದರೆಂದು ಭಾಸವಾಗುತ್ತದೆ

ಪ್ರಪಂಚದ ಇತರ ದೇಶಗಳಲ್ಲಿ ಹೆಂಗಸರು ಗಂಡಸರಂತೆಯೇ ಉಚ್ಚ ಶಿಕ್ಷಣವನ್ನು ಹೊಂದಿ, ಎಲ್ಲಾ ಕಾರ್ಯದಲ್ಲೂ ಪುರುಷರಿಗೆ ಸಹಾಯಕರಾಗಿರುವರು ಇತರ ದೇಶಗಳಲ್ಲಿ ನೇಕಡಾ ೬೦ರಷ್ಟು ಹೆಂಗಸರು ವಿದ್ಯಾವಂತರಾಗಿದ್ದರೂ, ಆದರೆ ಭರತಖಂಡದಲ್ಲಿ ಮಾತ್ರ ನೇಕಡಾ ೧ರಷ್ಟು ಮಹಿಳೆಯರು ಈ ವರೆಗೆ ಶಿಕ್ಷಣ ಹೊಂದಿದ್ದರೆಂದರೆ, ನಮ್ಮಗಳ ಯೋಗ್ಯತೆಯನ್ನು ಏನೆಂದು ಹೇಳಲಿ! ಅಳಲೇ! ನಗಲೇ! ನಮ್ಮಲ್ಲಿ ಹಬ್ಬಿರುವ ಸಾಮಾಜಿಕ ರೂಢಿ, ಅಂಧಶ್ರದ್ಧೆ, ದುಷ್ಟ ಆಚಾರವಿಚಾರಗಳೇ ನಮ್ಮನ್ನು ಇಷ್ಟು ಅಧೋಗತಿಗಿಳಿಸಿ ತಿರುಗಿ ತಲೆಯೆತ್ತಲಾರದು! ಹಿಂದೂಸ್ಥಾನದ ಹಿಂದೂಗಳು ಇನ್ನೂ ಹಿಂದುಳಿದುಕೊಂಡೇ ಇದ್ದಾರೆ! ಭಾರತಮಾತೆಯ ಬಂಧನವನ್ನು ಬಿಡಿಸಲು, ಪುರುಷರಂತೆಯೇ ಸ್ತ್ರೀಯರೂ ಕಾರಣಭೂತರಾಗಿರುತ್ತಾರೆ. ಆದಕಾರಣ ಪ್ರತಿಯೊಬ್ಬ ಭಾರತೀಯನೂ ತಮ್ಮ ಕುವರಿಯರಿಗೆ ಶಿಕ್ಷಣಕೊಟ್ಟು ಮುಂದಿನ ಜನಾಂಗದ ಏಳಿಗೆಯನ್ನೇ ಸಾಧಿಸಬೇಕೆಂಬುದೇ ಲೇಖನದ ಉದ್ದೇಶ.

By
U H Shesha Bhat,
Shanthineketana

ಬರೋಡಾ ಮಹಿಳೆಯರ ವಿದ್ಯಾಲಯದ ಬಾಲಿಕೆಯರ ಶಕ್ತಿ ಸಾಧಕ ಪ್ರದರ್ಶನ

ಅಖಿಲ ಭಾರತ ಮಹಿಳಾ ಸಮ್ಮೇಲನ.

ಅಖಿಲ ಭಾರತ ಮಹಿಳಾ ಸಮ್ಮೇಲನವು ಈ ವರುಷ ತಿರುವನಂತಪುರದಲ್ಲಿ ಈ ತಿಂಗಳ ಕಡೆಯ ದಿನದಲ್ಲಿ ನಡೆಯುತ್ತಿದೆ ಮೈಸೂರಿನ ಯುವರಾಣಿಯವರೇ ಈ ಸಮ್ಮೇಲನದಲ್ಲಿ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಇತರೆ ಪ್ರಾಂತ ಕೈಕಸುಬು ತಿರುವಾಂಕೂರು ಮತ್ತು ಮದ್ರಾಸು ಪ್ರಾಂತ್ಯಗಳ ಗ್ರಾಮ ಕೈಗಾರಿಕೆ ವಸ್ತುಗಳ ಪ್ರದರ್ಶನವೂ ನಡೆಯುತ್ತದೆ

ಸಮ್ಮೇಲನದ ದಿನಗಳು ಸಮೀಪಿಸಿರುವುದರಿಂದ ತಿರುವನಂತಪುರದಲ್ಲಿ ಈಗ ಅನೇಕ ಸಡಗರ ಸ್ವಾಗತ ಸಮಿತಿ ಇತ್ಯಾದಿ ಸಮಿತಿಗಳೂ, ಉಪಸಮಿತಿಗಳೂ ರಚಿಸಲ್ಪಟ್ಟು ಕಾರ್ಯವು ಅತಿ ಚುರುಕಿನಿಂದ ಸಾಗುತ್ತಿದೆ. ಚಂದಾ ಹಣವಾಗಲೇ ೯೦೦೦ ರೂಪಾಯಿಗಳಿಗೇರಿದೆ ಈ ಸಮ್ಮೇಲನವನ್ನು ಅತಿ ಮಹತ್ವಪೂರ್ಣವನ್ನಾಗಿ ಮಾಡಲು ಎಲ್ಲಾ ಕಾರ್ಯ ವಿಶೇಷಗಳನ್ನು ಅವರ ಚಾಲಕರು ನಡಿಸುತಿದ್ದಾರೆ

ಕುಮಾರಿ ನಿಲೀಮಾ.

ಕುಮಾರಿ ನಿಲೀಮಾ ಮುಖರ್ಜಿಗೆ ದೇವರು ಬೇಕಾದಷ್ಟು ಬುದ್ಧಿ ಕೊಟ್ಟಿದ್ದಾನೆ ಆಕೆಯು ಹುಟ್ಟಿದ್ದು ಪ್ರೆಸಿಡೆನ್ಸಿ ವಿಜ್ಞಾನ ಕಾಲೇಜಿನ ಶ್ರೀ ಎ ಟಿ ಮುಖರ್ಜಿಯವರ ಹೊಟ್ಟೆಯಲ್ಲಿ. ಈ ವರ್ಷ ಪಾಟ್ನಾ ವಿಶ್ವ ವಿದ್ಯಾಲಯದ ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾಳೆ ಅಷ್ಟೇ ಅಲ್ಲ ಆಕೆಯ ಯೋಗ್ಯತಾ ಸಿದ್ಧಿಗಳು ಜರ್ಮನಿ, ಫ್ರಾನ್ಸ್, ಸ್ವಿಜರ್‌ಲೆಂಡ್ ಈ ದೇಶಗಳಲ್ಲಿ ಎರಡು ವರ್ಷ ಕಾಲ ಅಖಂಡವಾಗಿ ಸಂಚಾರಮಾಡಿ ಜ್ಞಾನಾರ್ಜನೆಯನ್ನು ಮಾಡಿದ್ದಾಳೆ. ಫ್ರೆಂಚ್ ಭಾಷೆಯನ್ನೂ ಜರ್ಮನಿ ಭಾಷೆಯನ್ನೂ ಮಾತಾಡಬೇಕೆಂದಾಪರೆ ಆಕೆಗೆ ನೀರು ಕುಡಿದಂತೆ. ವಿಲಾಯತಿಯ ಲಂಡನ್ ಟ್ರಿನಿಟಿ ಕಾಲೇಜಿನಲ್ಲಿ ಸಂಗೀತ ಕಲೋಪಾಸನೆ ಮಾಡಿ, ಅದರಲ್ಲಿ ಉತ್ತೀರ್ಣಳಾಗಿ ಬಂದಿದ್ದಾಳೆ, ಈಗ ಆಕೆಯ ಹದಿನೇಳು ವಯಸ್ಸಿನ ಪ್ರೌಢ ದಿನಗಳು ಭಾಗ್ಯದ ಭೌತಾಭ್ಯಾಸದ...

ಎಲ್ಲಿ ಹೋದರೂ ಹೆಂಗಸರು ಹೆಂಗಸರೇ.

ಎಬಿಸೀನಿಯಾ ಮುಸೊಲಿನಿಯ ದುರಹಂಕಾರವನ್ನು ಕಂಡು ಇಡೀ ಪ್ರಪಂಚವು ಕಣ್ಣೀರು ಸುರಿಸುವುದು ಪತ್ರಿಕೆಗಳು ದಿನವಹಿ ಅಲ್ಲಿಯ ಹೆಂಗಸರು ಮಕ್ಕಳು ಇಟಲಿಯ ದುರ್ಭರದಿಂದ ಪಡುವ ಕಷ್ಟಗಳನ್ನು ಅಕ್ಷರಶಃ ಪ್ರಚುರಪಡಿಸುತ್ತಿವೆ ಗಂಡಂದಿರು ಕದನಕ್ಕೆ ತೆರಳಿದಾಗ ಹೆಂಡಂದಿರು ಬಿಕ್ಕಿ ಬಿಕ್ಕಿ ಅತ್ತು ಅವರನ್ನು ಮುದ್ದಿಸಿ ನಿರ್ವಾಹವಿಲ್ಲದೆ ಹೋಗಬಿಟ್ಟರು ಇದು ಹೆಂಗಸರ ಮರ್ಜಿ ಆದರೆ ಇಟಲಿಯ ಕಡೆಗೆ ಗಮನವಿತ್ತರೆ ಅಲ್ಲಿಯ ರಮಣಿಯರು ತಮ್ಮ ತಮ್ಮ ಗಂಡಂದಿರು ಯುದ್ಧಕ್ಕೆ ತೆರಳುವಾಗ ಒಂದಿಷ್ಟು ಕಣ್ಣೀರನ್ನು ಸಹ ಮಿಡುಕಲಿಲ್ಲ. ಇಷ್ಟಾಗಿ ಪರದೇಶಕ್ಕೆ ಗುಡ್ಡ, ಬೆಟ್ಟ, ಕಾಡುಗಳ ಏವ ಪ್ರದೇಶಕ್ಕೆ ಹೋಗಬೇಕಾಗಿದೆ ಅವರ ಪತಿಗಳಿಗೆ, ಅನ್ನಪಾನವಿಲ್ಲದೆ ಸಾಯುವ ದುರ್ಗತಿಯು ಕೇವಲ ಸಂಭವನೀಯ ಆದರೂ ಇಟಲಿಯ ಹೆಂಗಸರು ತಮ್ಮ ಗಂಡಂದಿರನ್ನು ಏನೊಂದೂ ಆತಂಕ ಮಾಡದೆ, ಹಂಬಲಿಸದೆ ಕಳುಹಿಸಿಕೊಟ್ಟರು ಅಂದರೆ ಅವರು ಅಷ್ಟು ಕಠಿಣ ಹೃದಯದವರೇ ಎಂಬ ಪ್ರಶ್ನೆಯು ಇದರಿಂದ ಹುಟ್ಟಬಹುದು ಹಾಗಲ್ಲ ಸ್ತ್ರೀಬುದ್ಧಿಯು ಎಲ್ಲಿ ಹೋದರೂ ಏಕಪ್ರಕಾರವಾಗಿರುವುದು ಎಬಿಸೀನಿಯದವರು ಅದನ್ನು ಬಹಿರಂಗವಾಗಿ ಪ್ರಕಟಪಡಿಸಿದರು ಅವರು ಅಂತರಂಗದಲ್ಲಿ ತಮ್ಮ ವಿಯೋಗ ದುಃಖವನ್ನು ಸಹಿಸಿದರು ಇಷ್ಟೇ ವ್ಯತ್ಯಾಸ

ಪಾಶ್ಚಾತ್ಯ ಶಾಲೆಗಳು

ಮಿಸ್ ಭೂಪಾಲು ಬರೋಡಾದ ಮಹಿಳೆ ವಿದ್ಯಾಪ್ರಪಂಚದಲ್ಲಿ ಒಳ್ಳೇ ಖ್ಯಾತಿಯನ್ನು ಪಡೆದವಳು ಹಿಂದೂದೇಶಕ್ಕೆ ಧರ್ಮವನ್ನು ಕಲಿಯಲು ಬಂದಿರುವಳು ಶಾಂತಿನಿಕೇತನದಲ್ಲಿ ಮಾತಾಡುತ್ತ "ಆಂಗ್ಲದೇಶದಲ್ಲಿ ಶಾಲೆಗಳ ಮುಖ್ಯ ಧ್ಯೇಯವು ಬಾಲಕನನ್ನು ಸಮಾಜದ ಸದಸ್ಯತನಕ್ಕೆ ತಕ್ಕವನನ್ನಾಗಿ ಮಾಡುವುದು ದೇಶವನ್ನು ಚೊಕ್ಕವಾಗಿಡುವ ರೀತಿ, ಸೊಗಸಾಗಿ ಜೀವನ ನಡೆಸುವ ಕ್ರಮ ಇವನ್ನೆಲ್ಲಾ ಚೆನ್ನಾಗಿ ಮನಗಂಡು ಮಾಡುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಬಾಲಕರಿಗೆ ಇದರ ಮಾಹಿತಿ ದೊರೆತರೆ ದೊಡ್ಡವರಾದ ಮೇಲೆ ಅವರು ದೇಶಪ್ರೇಮಿಗಳಾಗಿ ಬೆಳೆಯುತ್ತಾರೆ" ಎಂದಳು

ಪರದೇಶ ಮಹಿಳೆಯ ಸ್ಥಿತಿಗತಿಗಳ ಪರಿಚಯ

ಅಖಿಲ ಭಾರತ ಮಹಿಳಾ ಪರಿಷತ್ತಿನ ಸಂಘದವರು ಹೆಂಗಳೆಯರು ಪರದೇಶದಲ್ಲಿ ದೂರಿದ ಸ್ಥಿತಿಗಳ ಕುರಿತು ಕೆಲವು ಭಾಷಣಗಳನ್ನು ಕೊಡಲು ಏರ್ಪಾಟು ಮಾಡಿರುವರು. ಮೊದಲಾಗಿ ಶ್ರೀಮತೀ ಎ. ಎಸ್. ಚೌಧುರಿಯವರು 'ರಷ್ಯಾ ದೇಶದ ಮಹಿಳೆಯರು' ಎಂಬುದರ ಕುರಿತು ಡಿಸೆಂಬರ ತಾ. ೯ರಲ್ಲಿ Y. W. C. A. 134 ಎಂಬಲ್ಲಿ ಒಂದು ಭಾಷಣವನ್ನು ಕೊಟ್ಟರು ಪರದೇಶದ ರಮಣಿಯರ ಆಚಾರ ವಿಚಾರಗಳು ಗಮನೀಯವೂ ಅನುಕರಣೀಯವೂ ಆಗಿವೆ. ಅವುಗಳನ್ನು ನಮ್ಮ ದೃಷ್ಟಿಪಥದಲ್ಲಿಟ್ಟು ನಾವೂ ಅದಷ್ಟು ಮಟ್ಟಿಗೆ ಸುಧಾರಿತರಾಗಬೇಕೆಂಬುದೇ ಇದರ ಉದ್ದೇಶವಾಗಿರುವುದು ಶ್ರೀಮತೀ ಚೌಧುರಿಯವರು ಪರದೇಶದ ಸಂಚಾರಿಗಳು ಒಳ್ಳೇ ಅನುಭವಶಾಲಿಗಳೂ ಆಗಿರುವರು. ಮಹಿಳೆಯರು ಇದರಿಂದ ಹೆಚ್ಚಿನ ಲಾಭವನ್ನು ಪಡೆಯುವರೆಂಬುದಾಗಿ ಭಾವಿಸಲಾಗಿದೆ.

ಮುಸಲೋನಿಯ ಧರ್ಮಪತ್ನಿ.

ಮುಸಲೋನಿಯ ಹೆಸರು ಎರಡು ಜಗತ್ತಿನಲ್ಲಿಯೂ ಗೊತ್ತು ಅಂಥ ಪ್ರಖ್ಯಾತ ಪುರುಷನಾತ ಆದರೆ ಅವನ ಹೆಂಡತಿಯ ವಿಷಯ ಇಟಲಿಯವರಿಗೆ ತಿಳಿಯದಿರುತ್ತದೆಂದು ಕಾಣುತ್ತದೆ ಅಷ್ಟು ಗಂಭೀರವಂತೆಯಾಕೆ ಮಹಾಸಾಧ್ವಿಯಾಕೆ ಆಕೆಯ ಹೆಸರು ರಾಚೆಲ ಎಂದು ಆಕೆಯ ಗಂಡನು ಇಟಲಿಗೆ ನಾಯಕನಾಗಿರುವ ಸಂಬಂಧ ಆಕೆಯ ಹೆಸರಿಗೂ ದೊಡ್ಡತನವನ್ನು ಹಚ್ಚಿದ್ದಾರೆ ಸಾಧಾರಣ ಹೆಂಗಸಂತೆ ಇರಬೇಕೆಂದು ಆಕೆಯನ್ನು ರಾಜಕುಮಾರಿ ಎನ್ನುತ್ತಾರೆ ಅದು ಆಕೆಗೆ ಸರಿ ಬೀಳುವುದಿಲ್ಲ.

ಹೆತ್ತೇನು, ಆಕೆಯ ಗುಣಾವಗುಣಗಳನ್ನು ಆಕೆಯ ಗಂಡನ ಗುಣಾವಗುಣಗಳನ್ನು ಹೋಲಿಸಿದರೆ ಒಂದಕ್ಕೊಂದು ಪ್ರತಿಯಾಗಿ ಕಾಣುತ್ತದೆ ನೋಡಿ ಮುಸಲೋನಿಯು ವಾಚಾಳಿಗಳಲ್ಲಿ ಅಗ್ರೇಸರ, ಆದರೆ ಆಕೆಯು ಮೌನದ ಗೌರವನ್ನು ಅರಿತ ಒಂದೆರಡು ಅರ್ಧವಾಕ್ಯಗಳಲ್ಲೇ ತನ್ನ ಇಂಗಿತವನ್ನೆಲ್ಲಾ ತಿಳಿಸುವ ಸಾಮರ್ಥ್ಯ ಆಕೆಗಿದೆ ಮುಸಲೋನಿಯು ದೊಂಬಿ ಎಳಸುವುದರಲ್ಲಿ ರಂಪ ಮಾಡುವುದರಲ್ಲಿ ನಿಸ್ಸೀಮ ರಾಚೆಲಳು ಶಾಂತಜೀವಿ ಮುಸಲೋನಿಯು ತನ್ನ ಮಕ್ಕಳಿಬ್ಬರನ್ನೂ ಅಳಿಯನನ್ನೂ ಈಗ ಆಫ್ರಿಕ ರಣರಂಗಕ್ಕೆ ಅಟ್ಟಿರುವುದು, ಆಕೆಗೆ ಸರ್ವಥಾ ಇಷ್ಟವಿಲ್ಲ ಆದರೆ ಬೇರೆ ಯತ್ನವಿಲ್ಲ ಗಂಡನ ಮನೆಗೆ ಪ್ರಂಚುವಾಗಲಾರಳು, ದಿನ ಬೆಳಗಾದರೆ, ಆದರ ಪ್ರಾರಂಭೋತ್ಸವ, ಇದರ ವಾರ್ಷಿಕೋತ್ಸವ, ಅಲ್ಲಿ ಊಟ, ಇಲ್ಲಿ ತಿಂಡಿ ಎಂದು ಗಂಡನ ಇಟಲಿಯಲ್ಲೆಲ್ಲಾ ಅಲೆಯುತ್ತಿರುತ್ತಾನೆ. ತನ್ನನ್ನು ಕಾಣದ ಇಟಲಿಯವನೇ ಅಪರೂಪ ರಾಚೆಲಳು ಬಾಯಿಮಾತಿನ ತದ್ವಿರುದ್ಧ ತನ್ನ ಗಂಡನ ರೋಮ್ ರಾಜ್ಯಕ್ಕೆ ಆಕೆಯು ಹೋಗುವುದಿಲ್ಲ ತಮ್ಮ ಪೂರ್ವಗೃಹವಿರುವ ಹಳ್ಳಿಯೊಂದರಲ್ಲಿಯೇ ಆಕೆಯು ಇದ್ದುಬಿಡುತ್ತಾಳೆ ಮುಸಲೋನಿಗೆ ರಾಜ್ಯದ, ರಾಜ್ಯಭಾರದ ತಕ್ಕುಗಳ, ಯುದ್ಧಗಳ ಚಿಂತೆಯಾದರೆ ಆಕೆಗೆ ಸಂಸಾರವನ್ನು ನಡಿಸುವ, ಮಕ್ಕಳನ್ನು ಸಾಕುವ ಚಿಂತೆ, ಕಡೆಗೆ ಸಂತೆಗೆ ಹೋಗಿ ಸಾಮಾನನ್ನು ಆಕೆಯೇ ಚೌಕಾಶಿ ಮಾಡಿ ತರುತ್ತಾಳೆ ಕಾಲುಚೀಲವನ್ನು ಕಾಡು ಹರಟೆ ಒಲ್ಲಿ ಮಾಡಲು ಆಕೆಗೆ ಒಗ್ಗದು ಅಂತಹ ಹರಟೆ ಪ್ರಿಯರಾರಾದರೂ ಪ್ರಮಾಣಿಸುತ್ತ ಹೋದರೆ, ಒಂದೇ ಮಾತಿನಲ್ಲಿ ಅವರನ್ನು ಹತಾಶರನ್ನಾಗಿ ಮಾಡಿ ಕಳುಹಿಸಿ ಬಿಡುತ್ತಾಳೆ

ಮುಸಲೋನಿಯು ಶತ್ರು ಭಯಂಕರ, ಪ್ರಪಂಚದ ದಕ್ಷ್ಯತೆಯನ್ನೇ ಕಟ್ಟಿಕೊಂಡಿರುತ್ತಾನೆ, ಎಲ್ಲರ ಬಾಯಿಗೂ ಬಿದ್ದಿರುತ್ತಾನೆ ಆತನಿಗಾರಾದರೂ ಮಿತ್ರರುಂಟೆ ಈ ಪ್ರಪಂಚದಲ್ಲಿ? ಆತನ ಮನೋದ್ವೇಗಗಳನ್ನು ಅರಿಸಲು ಯಾರಾದರೂ ಸರಳ ಹೃದಯರಿದ್ದಾರೆಯೆ? ಇದ್ದಾರೆ, ರಾಚೆಲಳು ಆತನಿಗೆ ಶಕ್ತಿಮೂಲ, ಸುಖಮೂಲ, ಆತನ ಮನೋವಿಕಾರದ ನಾನಾ ಅವಸ್ಥೆಗಳನ್ನು ಕಂಡುಕೊಂಡು ತಕ್ಕಂತೆ, ಆತನಿಗೆ ಹಿತವಾಗುವಂತೆ ನಡೆದುಕೊಂಡು ಸಂತೈಸುವವಳೇ ರಾಚೆಲಳು ಅಂದರೆ ವಿಶ್ವದ್ವೇಷಿಯಾದ ಮುಸಲೋನಿಗೂ ಒಬ್ಬರನ್ನು ದೇವರು ಒಂದಿಕೆ ಹೊಂದಿಕೆಗಾಗಿ ಕೊಟ್ಟಿದ್ದಾನೆ. ಆದರೆ ಆಕೆಯ ಕಡೆ ನೋಡಿ ಆಕೆಯ ಮನಸ್ಸಿನ ಕೋಲಾಹಲಗಳನ್ನು ಕೇಳುವವರಾರು ಅಷ್ಟು ಜನ ಮಧ್ಯದಲ್ಲಿಯಾಗ್ಯೂ ಅಂತಹ ಗಂಡನ ಕೈ ಹಿಡಿದೂ ಆಕೆಯು ಒಂಟಿಯೇ ಆಕೆಯು ವಿಧಿನಿಯಮಿತ ಪಂಥವನ್ನು ಆಕೆಯೊಬ್ಬಳೇ ಹಿಡಿಯಬೇಕು ಆಕೆಗೊಬ್ಬನೆ ಗತಿ ಆ ದೇವ!!! ಸರ್ವಾಧಿಕಾರಿಯ ಹೆಂಡತಿಯ ಗತಿ ಇದು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ- (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ-(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara.—

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ,
ಅಥವಾ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ.	ಪೈ	ಸಾಮಾನ್ಯ ವಿಜ್ಞಾನ.	ರೂ	ಆ.	ಪೈ
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಲನ ಕಾಳಪ್ಪ
ಅರಗಿನ ಮುದ್ದೆ
ಇಲಿಗಳ ಧಕ್ಕ ಧೈ.
ಕ್ಕೋಂಗಳ ದುಃಗ್ಗ
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ—

ಶಾರದಾ ಛಾಪಖಾನೆ, ಮಂಗಳೂರು.

ತಯಾರಾಗಿದೆ!

ಗಾ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ ಇದನ್ನು ಗವರ್ನ್‌ಮೆಂಟ್ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲುಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲುಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12-45	ಮ 9 40
ಶಟಲ್	ಸಂಜೆ 5 25	ಬೆಳಗ್ಗೆ 0-25
ಕಾಂಞಂಗಾಡ್ ಪೆಸೆಂಜರು	ಬೆ. 8 25	ಮ 1-20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6-15

ಗ್ರಾಮಗಳ ಪುನರುಜ್ಜೀವನವೆಂತು?

(ಲೇಖಕ:—ಕೆ. ಕೇಶವ ಕುಡುವ, ಅಧ್ಯಾಪಕ ಉಡುಪಿ)

ಯಾವ ಕಾಲದಲ್ಲಿ ಭರತಮಾತೆಯು ಪವಿತ್ರವಾದ ಉದರದಲ್ಲಿ ಅನೇಕಾನೇಕ ರಾಷ್ಟ್ರವೀರರು ಜನ್ಮವೆತ್ತಿ ಭರತಭೂಮಿಯ ಸ್ವಾತಂತ್ರ್ಯವನ್ನು ಕಾಪಾಡಲು ಹಗಲಿರುಳು ಶ್ರಮಪಟ್ಟು ವೀರಜನನಿಯನ್ನು ಧನ್ಯಳನ್ನಾಗಿ ಮಾಡಿದರೋ, ಅಂತಹ ವೀರ ಶ್ರೇಷ್ಠರನ್ನು ಪಡೆದ ತಾನು ಕೃತಾರ್ಥಳಾದ ಭರತಮಾತೆಯ ಇಂದಿನ ಸ್ಥಿತಿಯೇನು? ಎಂಬುದನ್ನು ಪರಿಶೀಲಿಸಿ ನೋಡಿದರೆ ಅಂದು ಸಕಲ ಧನಕನಕ ವಸ್ತುವಡವೆಗಳಿಗೆ ತವರುಮನೆಯಾಗಿ, ಸುವರ್ಣಭೂಮಿಯೆಂದು ಮೆರೆದಾಡಿಕೊಂಡಿದ್ದ ಮಾತೃಭೂಮಿಯ ಇಂದಿನ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವುದು. ಎತ್ತ ನೋಡಿದರೂ ದುರ್ಭಿಕ್ಷೆಯ ಪರಂಪರೆ, ವ್ಯಸನಗಳ ಮೇಲಾಟ, ಬಡ ಒಕ್ಕಲಿಗರ ಸಹಿಸಲಾರದ ಸಂಕಷ್ಟ ಮತ್ತು ಹೆಚ್ಚಾಗಿ ಶಿಕ್ಷಿತ ತರುಣರ ನಿರುದ್ಯೋಗದ ಅದ್ಭುತವಾದ ಸಮಸ್ಯೆ, ಮುಂತಾದ ನಿದರ್ಶನಗಳಿಂದ ವ್ಯಕ್ತವಾಗುವುದು.

ಭರತಮಾತೆಯನ್ನು ಈ ತೆರನಾದ ಸಂಕಷ್ಟಗಳಿಗೆ ಗುರಿಪಡಿಸಿದವರಾರು? ದೇಶದಲ್ಲಿ ತಾಂಡವ ನೃತ್ಯವನ್ನಾಡುವ ಆ ಬಡತನವು ಯಾವ ಕಡೆಯಿಂದ ಮೊಳೆಯಿತು? ದಾರಿದ್ರ್ಯ ಪಿಶಾಚಿಯು ಭರತಭೂಮಿಯನ್ನು ತನ್ನ ಬೀಡಾಗಿ ಮಾಡಿಕೊಳ್ಳಲು ಹೇಗೆ ಸಮರ್ಥವಾಯಿತು? ವಿಚಾರ ಮಾಡುವುದಾದರೆ, ನಮ್ಮ ದೇಶದ ಸುಪುತ್ರ ಸುಪುತ್ರಿಯರು ಸ್ವಾತಂತ್ರ್ಯ ದೇವಿಯ ಕಡೆಗೆ ಅಲಕ್ಷ್ಯ ಭಾವವನ್ನು ತೋರಿಸಿ ಕಾಲ್ಪನಿಕ ಸುಧಾರಣೆಗಳ ಕಡೆಗೆ ತಮ್ಮ ದೃಷ್ಟಿಯನ್ನು ಬೀರಿ, ಭಾರತದ ನಿಜವಾದ ಸುಖ ಸಂಪತ್ತುಗಳ ಕಾರಣಗಳನ್ನು ಮರೆತು, ಒರೇ ಆಂಗ್ಲ ವಿದ್ಯಾಭ್ಯಾಸ, ಸಾಹಿತ್ಯ ಪ್ರಚಾರ, ರಾಜಕೀಯ ಸುಧಾರಣೆಗಳ ವಿಚಾರ, ವೇದಾಂತ ವಾದುಗಳಲ್ಲೇ ಮಗ್ನರಾಗಿ, ತಮ್ಮ ಯಾವತ್ತು ದೇಶಭಕ್ತಿಯನ್ನು ತೋರಿಸಿಕೊಂಡು, ತಮ್ಮನ್ನು ತಾವು ಮರೆತು ಪರಸೇವಾ ವೃತ್ತಿಯನ್ನೇ ಅಪೇಕ್ಷಿಸುತ್ತಲ್ಲದೆ, ಸ್ವತಂತ್ರವಾಗಿ ತಮ್ಮ ಜೀವನೋಪಾಯವನ್ನು ಸಾಧಿಸಿ ಸ್ವಾತಂತ್ರ್ಯ ಸೌಖ್ಯವನ್ನು ಪಡೆಯಲು ಪೂರ್ವದಿಂದಲೂ ನಮಗೆ ಮಾರ್ಗದರ್ಶಕವಾಗಿರುವ ಕೃಷಿ ಕೈಗಾರಿಕೆ ಗೋಪಾಲನೆ ಮೊದಲಾದ ವಿಷಯಗಳ ಕಡೆಗೆ ಅಲಕ್ಷ್ಯಭಾವವನ್ನು ತೋರಿಸಿದುದೇ, ಭಾರತೀಯರ ಇಂದಿನ ದೌರ್ಭಾಗ್ಯಕ್ಕೆ ಕಾರಣವಾಗಿದೆ. ತಾವು ಜನ್ಮವೆತ್ತಿದಂದಿನಿಂದ ಯಾರು ತಮ್ಮನ್ನು ಅಕ್ಕರೆಯಿಂದ ಸಾಕಿ ಸಲಹಿದರೋ ಅಂತಹ ಮಾತಾಪಿತೃಗಳನ್ನು ನಾನಾ ಸಂಕಷ್ಟಗಳಿಗೆ ಗುರಿಪಡಿಸಿ, ತನ್ನ ಮನೆಯ ಮೇಲಿನ ಮಮತೆಯನ್ನು ತೊರೆದು, ವಿದೇಶೀಯ ಮೋಹಕ್ಕೆ ಮನಸೋತು, ನಾನಾ ದುರ್ವ್ಯಸನಗಳಿಗೆ ಬಲಿಬಿದ್ದು ಹೆತ್ತ ತಂದೆತಾಯಿಗಳು ಹಗಲಿರುಳು ಶ್ರಮಪಟ್ಟು ದುಡಿದ ಹಣವನ್ನು ಮನಬಂದ ತೆರದಲ್ಲಿ ಅಪವ್ಯಯ ಪಡಿಸಿ ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದ ಇಂದಿನ ನವತರುಣರ ಸ್ಥಿತಿಗತಿಗಳನ್ನು ಏನೆಂದು ವರ್ಣಿಸಲಿ! ಅನೇಕಾನೇಕ ದುರ್ವ್ಯಸನಗಳು ಒಡಮೂಡಿ ಬರುವಿಕೆ, ದೇಶಭಕ್ತಿಹೀನತೆ, ಇವೇ ಮೊದಲಾದ ದುರ್ಗುಣಗಳ ವ್ಯಾಪನಕ್ಕೆ ಇಂದಿನ ಶಿಕ್ಷಣವು ಹೆಚ್ಚಿನ ಸಹಕಾರಿಯಾಗಿರುವುದೆಂದು ಅನೇಕಾನೇಕ ವಿದ್ವಾಂಸರು ಉದ್ಗರಿಸುತ್ತಿರುವರು. ಯಾವ ವಿದ್ಯಾರ್ಥಿಯು ತನ್ನ ಪ್ರೌಢ ಶಿಕ್ಷಣಕ್ಕಾಗಿ ಸಾವಿರಾರು ರೂಪಾಯಿಗಳನ್ನು ವ್ಯಯಪಡಿಸಿ, ತಾನು ತನುಮನಧನಗಳ ಪೂರ್ವಕ ವಿದ್ಯಾಭ್ಯಾಸವನ್ನು ಗಳಿಸಿದರೂ ಕೂಡ, ಆತನು ತನ್ನ ಮುಂದಿನ ಜೀವನವನ್ನು ಯಾವ ರೀತಿಯಲ್ಲಿ ನಿರ್ವಹಿಸಲೆಂಬ ಆಲೋಚನೆಯಲ್ಲಿ ಮಗ್ನನಾಗಿ, ದೈವವಶಾತ್ ಆತನಿಗೆ ಮೂವತ್ತರದೊಂದು ನೌಕರಿಯು ದೊರೆತರೆ ಆತನ ವಿದ್ಯಾಭ್ಯಾಸದ ಉದ್ದೇಶವು ಸಫಲವಾದಂತಾಯಿತು. ಇಲ್ಲದಿದ್ದಲ್ಲಿ ಆತನಿಗೆ ಯಾವ ದುರವಸ್ಥೆಯು ಪ್ರಾಪ್ತವಾಗುವುದೆಂದು, ಆ ಘೋರವಾದ ನಿರುದ್ಯೋಗದ ಬಲೆಯಲ್ಲಿ ಸಿಲುಕಿಕೊಂಡು ಪೇಚಾಡುವ ಇಂದಿನ ಶಿಕ್ಷಿತ ತರುಣರೇ ಅರಿತವರಾಗಿರುವರು. ಆದಪ್ರಯುಕ್ತ ಇಂದಿನ ವಿದ್ಯಾರ್ಥಿಗಳು ತಾವು ಸ್ವತಃ ಸಂಕಷ್ಟಗಳಿಗೀಡಾಗುವರಲ್ಲದೆ, ತಮ್ಮ ಹೆತ್ತವರ ಸುಖಸೌಕರ್ಯಗಳಿಗಾಗಿ ಸಹಕಾರಿಗಳಾಗುವ ಬದಲು, ಅವರನ್ನು ನಾನಾ ಕಷ್ಟಗಳಿಗೆ ಗುರಿಪಡಿಸಿ, ದೇಶದ ದಾರಿದ್ರ್ಯವನ್ನು ಮತ್ತಷ್ಟು ವೃದ್ಧಿಗೊಳಿಸುವ ಇಂದಿನ ಶಿಕ್ಷಣವು ಮಾತೃಭೂಮಿಗೆ ಹಿತಕರವಾದುದು ಎಂದು ಹೇಳಬಹುದೇ? ನಾವು ಆಂಗ್ಲ ವಿದ್ಯಾಭ್ಯಾಸದಲ್ಲಿ ಪ್ರಾವೀಣ್ಯತೆಯನ್ನು ಪಡೆದ, ಪಾಶ್ಚಾತ್ಯರಂತೆ ನಾವೂ ಮೆರೆಯಬೇಕೆಂಬ ನವನ ಧಾರಣೆಯು [illegible]ಕಾಂಕ್ಷೆಯೇ ನಮ್ಮ ಜನರನ್ನು ದುಃಖಭಾಗಿಗಳನ್ನಾಗಿ ಮಾಡಿತು! ದೇಶದ ಸರ್ವಸ್ವವನ್ನೇ ನಾಶಗೊಳಿಸಿತು. ದರಿದ್ರತೆಗೆ ಭಾರತವನ್ನು ತನ್ನ ಬೀಡಾಗಿ ಮಾಡಿಕೊಳ್ಳಲು ಆಸ್ಪದ ಕೊಟ್ಟಿತು.

ಸುಶಿಕ್ಷಿತರಾದರೋ ಒರೇ ಜ್ಞಾನಾಭಿವೃದ್ಧಿಯ ಸಲುವಾಗಿ ಶಿಕ್ಷಣವನ್ನು ಗಳಿಸಿ, ತಮ್ಮ ಮುಂದಿನ ಜೀವನವನ್ನು ಸ್ವತಂತ್ರವಾಗಿ ನಿರ್ವಹಿಸುವದಕ್ಕೋಸ್ಕರ ತಮ್ಮ ರಾಷ್ಟ್ರದ ಸಂಪದಭಿವೃದ್ಧಿ! ಕಾರಣವಾದ ಕೃಷಿ ಕೈಗಾರಿಕಾದಿಗಳ ಕಡೆಗೆ ಹೆಚ್ಚಿನ ಗಮನವನ್ನಿತ್ತು, ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸಿ ಕೀರ್ತಿವಂತರಾಗಿ ಮೆರೆಯುತ್ತಿರುವರು. ಆದರೆ ಭಾರತೀಯರ ಭಾಗ್ಯವೇನ! "ಇಂಗ್ಲೀಷ ಫ್ಯಾಶನ್", "ಇಂಗ್ಲೀಷ್ ನಡೆನುಡಿ", ಜನ್ಮಭೂಮಿಯ ಕಡೆಗೆ ಅಲಕ್ಷ್ಯಭಾವ ಹೆಚ್ಚೇಕೆ? ತಮ್ಮ ಮನೆಯು ಯಾವ ಸ್ಥಿತಿಯಲ್ಲಿರುವುದು? ತಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿದ ಜನನೀ ಜನಕರ ಅವಸ್ಥೆಯೇನು ಎಂಬ ವಿಚಾರ ಒಂದೂ ಅವರಿಗೆ ತೋಚದು. ಭಾರತೀಯರ ಈ ತೆರನಾದ ದುರ್ನೀತಿಗಳಿಂದ [illegible], ಭರತಮಾತೆಯನ್ನು ಉದ್ಧರಿಸುವ ಬಗೆಯಾದರೂ ಯಾವುದಿದೆ?

ವಾಸ್ತವವಾಗಿ ಭಾರತೀಯೋದ್ಧಾರಕ್ಕಾಗಿ ನಾವು ಸಾಧಿಸತಕ್ಕ ಕಾರ್ಯಗಳೇನು? ಎಂಬ [illegible] ಮೊದಲಿನಿಂದ ಹಳ್ಳಿಗಳ ಪುನರುಜ್ಜೀವನವಾಗಬೇಕೆಂದು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳಬೇಕಾದ ಸಂಗತಿಯಾಗಿರುತ್ತದೆ. ಹಳ್ಳಿಗಳ ಸ್ವರಾಜ್ಯವು ಹಿಂದೂದೇಶದ ಜೀವನಾಂತಃಸತ್ವ, ದೇಶಕ್ಕೆ ಬೇಕಾದ ಎಲ್ಲಾ ವಸ್ತುಪಡವೆಗಳನ್ನು ಪೂರೈಸಿ ಜಗತ್ತನ್ನು ಪೋಷಿಸುತ್ತದೆ. ಅಂತಹ ಹಳ್ಳಿಗಳ ಇಂದಿನ ಸ್ಥಿತಿಯೇನ? ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ. ಅನುದಿನವೂ ಅರೆಹೊಟ್ಟೆಯಿಂದಲೂ, ಹರಕುಬಟ್ಟೆಯಿಂದಲೂ ಜೀವನವನ್ನು ನಿರ್ವಹಿಸಬೇಕಾದ ಕಠಿಣ ಪ್ರಸಂಗವು ಹಳ್ಳಿಗಳ ಬಡ ಒಕ್ಕಲಿಗರಿಗೆ ಬಂದಿರುತ್ತದೆ. ಅಂದು ಸ್ವರ್ಗಲೋಕವೋ ಎಂಬಂತೆ ವೈಭವಶಾಲಿಯಾಗಿದ್ದ ಹಳ್ಳಿಗಳಿಂದು ನರಕ ಸಮಾನವಾಗಿ, ಎಲ್ಲೆಲ್ಲಿಯೂ ಜೀವನ್ಮೃತರಾದ, ಚೈತನ್ಯಶೂನ್ಯರಾದ, ನಷ್ಟಾನಂದರಾದ, ರೋಗಪೀಡಿತರಾದ ಬಡ ಒಕ್ಕಲಿಗರೇ ಕಂಡುಬರುತ್ತಿರುವರು. ಇಂದ ಮೇಲೆ ನಮ್ಮ ಹಿಂದೀ ರಾಷ್ಟ್ರವು ಯಾವ ಹಳ್ಳಿಗಳನ್ನು ಅವಲಂಬಿಸಿಕೊಂಡಿರುವುದೋ ಅಂತಹ ಹಳ್ಳಿಗಳ ಬಡ ಒಕ್ಕಲಿಗರ ಸಂಕಷ್ಟ ನಿವಾರಣೆಯಾಗದಿದ್ದರೆ ದೇಶೋದ್ಧಾರವೆಂತು?

ಮುಖ್ಯವಾಗಿ ಭಾರತ ಸುಪುತ್ರ ಸುಪುತ್ರಿಯರು ದೇಶದ ಸಂಪತ್ತಿಗೆ ಮೂಲಾಧಾರರಾದ ಬಡರೈತರ ಸಂಕಷ್ಟ ನಿವಾರಣೆಗಾಗಿ, ಭಾರತಮಾತೆಯ ಉದ್ಧಾರಕ್ಕಾಗಿ, ಶುದ್ಧವಿಚಾರದಿಂದ ಗ್ರಾಮಸೇವೆಯನ್ನು ಕೈಕೊಂಡರೆ, ಹಿಂದೂ ದೇಶದ ೭ ಲಕ್ಷ ಗ್ರಾಮಗಳು ಪುನರುಜ್ಜೀವನಗೊಂಡು 'ಮಾತೃಭೂಮಿಗೆ' ಬಹು ಬೇಗನೇ ಯಶವು ದೊರೆಯುವುದೆಂಬುದರಲ್ಲಿ ಅತಿಶಯೋಕ್ತಿಯೇನು? ವೀರ ಭಾರತ ಸುಪುತ್ರ ಸುಪುತ್ರಿಯರೇ! ಪರದೇಶೀಯರ ಸೂರೆಯಿಂದ ನರಳುತ್ತಿರುವ ಭಾರತಾಂಬೆಯನ್ನು ಉದ್ಧರಿಸಿರಿ! ಬಡ ಒಕ್ಕಲಿಗರ ಸಂಕಷ್ಟಗಳನ್ನು ನಿವಾರಿಸುವುದೇ ಭಾರತದ ಭಾವೀ ಉನ್ನತಿಗೆ ಕಾರಣವೆಂದು ತಿಳಿದು, ಗ್ರಾಮಸೇವೆಗಾಗಿ ಸೊಂಟಕಟ್ಟಿ ಕಾರ್ಯರಂಗಕ್ಕೆ ಧುಮುಕಿದರೆ, ಹಳ್ಳಿಗಳ ಪುನರುಜ್ಜೀವನವಾಗಿ, ಮಾತೃಭೂಮಿಯು ಆನಂದ ಸಾಗರದಲ್ಲಿ ಮುಳುಗಿ, ಭಾರತದ ಎಲ್ಲೆಡೆಯಲ್ಲಿಯೂ ಶಾಂತಿಯು ನೆಲೆಗೊಂಡು, ಭಾರತದ ಭಾವೀ ಕಲ್ಯಾಣವಾಗಬಹುದಲ್ಲವೇ?

ಸಿಂಧ ದೇಶದ ವರದಕ್ಷಿಣೆಯ ಕ್ರಮ.

ತಿಂಗಳು ಒಂದರ ರೂ ೧೦೦ ದುಡಿಯುವ ತರುಣನಿಗೆ ರೂ. ೧೦,೦೦೦ ವರದಕ್ಷಿಣೆ ಕೊಡಬೇಕಾಗಿದೆ.

ಸಿಂಧದೇಶದ ತರುಣರು, ಅವರ ಕೆಲವು ಸಾಮಾಜಿಕ ಕ್ರಮಗಳಿಂದ ಯಾವಾಗಲೂ ಸುಖವಿಲಾಸದಲ್ಲಿ ಮಗ್ನರಾಗಿದ್ದು, ವಿದ್ಯಾಭ್ಯಾಸಂಗದಲ್ಲಿ ಬಹಳ ಹಿಂದುಳಿದವರಾಗಿದ್ದಾರೆ. ಯುವಕರು, ತಮ್ಮ ಜೀವನದ ಅಧಿಕಾಂಶವನ್ನು ಕಾಲೇಜಿನಲ್ಲಿ ಕಳೆಯುತ್ತಿದ್ದಾರೆ. ಸಾಧಾರಣ ೨೫ ವರ್ಷ ಪ್ರಾಯಭರಿತರಾದ ವಿನಹ ಇವರಿಗೆ ಕಾಲೇಜುಗಳನ್ನು ಬಿಡಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಬಾಲಕ ಬಾಲಿಕೆಯರ ವಿದ್ಯಾಭ್ಯಾಸವು ಒಟ್ಟಾಗಿ ಒಂದೇ ಸಂಸ್ಥೆಗಳಲ್ಲಿ ನಡೆಯುತ್ತಿದೆ. ಅಲ್ಲಿನ ಒಂದು ಕಾಲೇಜಿನ ಕ್ಲಾಸಿನಲ್ಲಿ ೨೦ ತರುಣರು—೧೫ ಯುವತಿಯರಿದ್ದಾರೆ. ಇದರಿಂದ ಪ್ರತಿಯೊರ್ವ ತರುಣನು ಪ್ರಣಯಮಗ್ನನಾಗಿರುತ್ತಾನೆ. ವಿದ್ಯಾಭ್ಯಾಸವನ್ನು ಮುಗಿಸಿ, ಉದ್ಯೋಗ ಪಡೆಯುವವರೆಗೆ ಇವರು ವಿವಾಹ ಮಾಡಿಕೊಳ್ಳಲಾರರು. ಧಾರಾಳ ಸಂಬಳ ಒದಗಿಸುವ ಉದ್ಯೋಗ ದೊರೆತರೆ ಮಾತ್ರ ಇವರು ವಿವಾಹಮಾಡಿಕೊಳ್ಳಲು ಯೋಗ್ಯರೆಂದು [illegible], ಸಿಂಧ ತರುಣಿಯರ ಹೆತ್ತವರು ವಿದ್ಯಾವಂತರಾಗಿರುವ [illegible] ಕಾಲೇಜುಗಳನ್ನು [illegible] ಗಂಡಸಿಗೆ ಒಂದು [illegible] ಯಾಗಿದ್ದಾರೆ. ಇವರ ಪಕ್ಷ ಮತ್ತು ಇತರ ಸಮುದಾಯಗಳಿಗೆ ಸಾಧಾರಣ ತಿಳಿಯ ಸಾಕಾಗದು. ಇದರಿಂದಲೇ ಯುವಕರು ವಿವಾಹವನ್ನು ದೂರ ಮಾಡುತ್ತಿದ್ದಾರೆ. [illegible] ಉದ್ಯೋಗವು ಹೆಚ್ಚುತ್ತಿರಲು ಈ ಸಮಯದಲ್ಲಿ, ಇಂತಹ ಪಕ್ಷಗಳನ್ನು [illegible] ಸಾಧ್ಯವೇ [illegible] ಬಾಕಿ ವರ್ಗದ ಸ್ಥಿತಿಯಾಗುತ್ತದೆ. ಇದು ವಿದ್ಯಾವಂತ ವರ್ಗವು.

ಈ ಅವಿವಾಹಿತ ವರ್ಗದ [illegible] ವ ಹಣವಿರುವವರು ಧಾರಾಳ ವರದಕ್ಷಿಣೆ ಕೊಟ್ಟು ತರುಣರನ್ನು [illegible]. ಇವರ ಕೋರಿಕೆ ಅವರ ವಿವಾಹ ಯೋಗ್ಯತೆ [illegible] ವುದು ಕಷ್ಟಸಾಧ್ಯವು. [illegible] ವಿದ್ಯಾಭ್ಯಾಸದಿಂದ ಓರ್ವ [illegible] ತನ್ನ ಯೋಗ್ಯತೆಯನ್ನು ಹೆಚ್ಚಿಸಲು, ವಿಶ್ವವಿದ್ಯಾಲಯದ ಪದವಿಗಳನ್ನು ಪಡೆದರೆ ಅವರಿಗೆ ಯೋಗ್ಯತೆಯು [illegible]. ಇದಕ್ಕಾಗಿ ತಮ್ಮ ವಿವಾಹವನ್ನು ಮುಂದಿಡುತ್ತಿದ್ದಾರೆ. ಆದರೆ ವಿದ್ಯಾವಂತಳಾದರೆ, ಅವಳಿಗೆ ಅನೇಕ ಧಾರಿ ಯೋಗ್ಯ ವರನು ದೊರೆಯುವುದಿಲ್ಲ. ವರದಕ್ಷಿಣೆಯ ಕಾರಣದಿಂದ ಅವಳ ವಿವಾಹವು ಸಾಧ್ಯವಾಗುವುದಿಲ್ಲ.

ಯುವತಿಯರ ಕ್ರಯವು ಅವರ ಕುಟುಂಬ ವಿದ್ಯೆ ಅಥವಾ ಯೋಗ್ಯತೆಗಳನ್ನನುಸರಿಸಿ ವಿಧಿಸಲಾಗುವುದು. ಸಾಧಾರಣ ನಾಗರೀಕನಿಗೆ ೩೦,೦೦೦ ರೂ ವರದಕ್ಷಿಣೆಯೂ ೫೦೦೦ ರೂ ಆಭರಣ ಇತ್ಯಾದಿ ಉಡುಗೊರೆಗಳು ಸಿಕ್ಕುವವು. ತಿಂಗಳು ಒಂದಕ್ಕೆ ರೂ. ೧೦೦ ಸಂಬಳವನ್ನು ಪಡೆಯುವ ಯುವಕನಿಗೆ ರೂ ೧೦,೦೦೦ ವರದಕ್ಷಿಣೆ ಕೊಡಬೇಕಾಗುವುದು. ವರದಕ್ಷಿಣೆಯು ಹುಡುಗಿಯ ವರ್ಣದ ಮೇಲೂ ಹೊಂದಿಕೊಂಡಿದೆ. ವರ್ಣವು ಸ್ವಲ್ಪ ಕಪ್ಪಾಗಿದ್ದರೆ ಅವಳ ವರದಕ್ಷಿಣೆಯು ಹೆಚ್ಚುವುದು, ಅಗಾಧ ಪ್ರಮಾಣದ ತರುಣಿಯರಿಗೆ ಧಾರಾಳ ವರದಕ್ಷಿಣೆ ಕೊಡಬೇಕಾಗುವುದು. ದೇಶದ ಸಾಂಪತ್ತಿಕ ದುಃಸ್ಥಿತಿಯಿಂದ ತರುಣಿಯರ ತಂದೆತಾಯಿಗಳಿಗೆ, ಇಷ್ಟು ವರದಕ್ಷಿಣೆಯನ್ನು ಸಲ್ಲಿಸಲು ಕಷ್ಟಸಾಧ್ಯವಾಗಿದೆ. ಆದುದರಿಂದ ಅವಿವಾಹಿತ ತರುಣಿಯರ ಸಂಖ್ಯೆಯು ದಿನೇ ದಿನೇ ಪ್ರಬಲವಾಗುತ್ತಿದೆ. ಸೌಂದರ್ಯ ವಿಚಾರದಲ್ಲಿಯೂ, ಸಿಂಧ ತರುಣಿಯರ ನವೀನ ಕಾಲದ ಪೌಡರು ಉಪಯೋಗದ ಕ್ರಮಗಳನ್ನು ಸಂಪೂರ್ಣ ತಿಳಿದವರಾಗಿದ್ದಾರೆ. ಆದರೂ ಇವರ ವಿವಾಹವು ಒಂದು ಭಯಂಕರ ಸಮಸ್ಯೆಯಾಗಿ ಪರಿಣಮಿಸಿರುತ್ತದೆ.

ಯೋಗ್ಯ ತರುಣರ ಸಂಖ್ಯೆಯು ಕಡಿಮೆ. ವಿವಾಹವಾಗದ ತರುಣಿಯರ ಸಂಖ್ಯೆಯು ಬಹಳ. ಆದುದರಿಂದ ಹುಡುಗರ ಮೌಲ್ಯವು ಹೆಚ್ಚುತ್ತಿದೆ. ಇದರಿಂದ ಕೆಲವು ಯೋಗ್ಯ ತರುಣರು ತಮ್ಮ ಕ್ರಯವನ್ನು ಸಂದರ್ಭಾನುಸಾರ ವಿಧಿಸುತ್ತಿದ್ದಾರೆ. ಆದುದರಿಂದ ವಿವಾಹವು ಈ ತರುಣನಿಗೆ ಧಾರಾಳ ಲಾಭ ಒದಗಿಸುವ ವ್ಯಾಪಾರವಾಗಿದೆ. ಯಾರು ಹೆಚ್ಚು ವರದಕ್ಷಿಣೆಯನ್ನು ತೆರಬಲ್ಲರೋ, ಅಂತಹವರನ್ನು ಇವರು ವರಿಸುವರು. ಓರ್ವ ತರುಣನಿಗೆ ೧೫,೦೦೦ ರೂ ವರದಕ್ಷಿಣೆ ಎಂದು ವಿವಾಹ ನಿಶ್ಚಯ [illegible]. ಆದರೆ ಬೇರೆ ಯಾವನೋ ತರುಣಿಯ ತಂದೆಯು [illegible] ೨೦,೦೦೦ ರೂ. ಕೊಡುವೆನೆಂದ, ಮೊದಲಿನ ಸಂಬಂಧವನ್ನು ರದ್ದುಮಾಡಿ, ಈ ಹೊಸ ಸಂಬಂಧ ಮಾಡಲಾಯಿತು. ಇನ್ನೊಬ್ಬ ತರುಣನಿಗೆ ಧಾರಾಳ ವರದಕ್ಷಿಣೆ ಕೊಡುವುದಾಗಿ ವಿವಾಹ ನಿಶ್ಚಯವಾಗಿತ್ತು. ಆದರೆ ಹುಡುಗಿಯ ಗುಣದಲ್ಲಿ ಸ್ವಲ್ಪ ಕಳಂಕ ಉಂಟೆಂದು ಈತನು ತಿಳಿದುದರಿಂದ, ಇನ್ನೂ ೫೦೦೦ ರೂ. ಹೆಚ್ಚಿನ ವರದಕ್ಷಿಣೆಯನ್ನು ಕೊಡಬೇಕು, ಅಲ್ಲದಿದ್ದರೆ ತಾನು ವಿವಾಹವಾಗಲೊಲ್ಲೆನು ಎಂದು ಬಿಟ್ಟನು. [illegible] ಹುಡುಗಿಯ ತಂದೆಯು ಈ ಹಣವನ್ನು ಕೊಡಲೊಪ್ಪಿದನು.

ಈ ಸಂಕಷ್ಟಗಳನ್ನು ನಿವಾರಿಸಲು, ಪ್ರಣಯ ವಿವಾಹಗಳಿಗೆ ಉತ್ತೇಜನ ಕೊಡಲಾಯಿತು. ಒಬ್ಬ ತರುಣನು ಓರ್ವ ತರುಣಿಯ ಪರಿಚಯವನ್ನು ಮಾಡಿ ಅವಳೊಡನೆ ಸುಖವಿಲಾಸಗಳನ್ನು ಅನುಭವಿಸಲು ಆಕೆಯ ತಂದೆಯು ಸಮ್ಮತಿಸಿದನು. ತನ್ನ ಮಗಳಿಗೆ ಯೋಗ್ಯ ವರನು ಹೆಚ್ಚಿನ ವೆಚ್ಚವಿಲ್ಲದೆ ದೊರಕಿದನೆಂದೂ, ಈತನ ಅಭಿಪ್ರಾಯ. ಆದರೆ, ಕೆಲವು ಸಮಯದ ನಂತರ, ಇವರಿಬ್ಬರ ವಿವಾಹವಾಗಬೇಕೆನ್ನುವಾಗ, ರೂ ೧೦,೦೦೦ ವರದಕ್ಷಿಣೆಯು ಕೇಳಲಾಯಿತು. "ನಿನ್ನ ಮಗಳನ್ನು ಮದುವೆಯಾಗಬೇಕಾದರೆ ನನಗೆ ಅಷ್ಟು ವರದಕ್ಷಿಣೆ ಸಿಕ್ಕಲೇ ಬೇಕು. ೧೦,೦೦೦ ರೂ. ಪಡೆದ ವಿನಹ ನನ್ನ ತಂದೆತಾಯಿಗಳು ವಿವಾಹಕ್ಕೆ ಒಪ್ಪಲಾರರು" ಮಗಳ ಹಿತದಲ್ಲಿ ತಂದೆಯು ಅಷ್ಟು ಹಣವನು ಕೊಡಬೇಕಾಯಿತು. ವಿದ್ಯಾಭ್ಯಾಸದಿಂದ ವರದಕ್ಷಿಣೆಯು ಕಡಿಮೆಯಾಗುವುದೆಂಬ ಭಾವನೆಯಿಂದ ತರುಣಿಯರಿಗೆ ವಿದ್ಯಾಭ್ಯಾಸ ಕೊಡಲಾಯಿತು. ಆದರೆ

(೧೯ನೇ ಪುಟಕ್ಕೆ ಮುಂದುವರಿಯುವುದು)



ನವರತ್ನ ದ್ರಾಕ್ಷಾಸವ, ನರಗಳಿಗೆ ಎಂತಹ ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಮುರಿಸಿ ಮಲಬದ್ಧವನ್ನು ಅಜೀರ್ಣವನ್ನು ಪರಿಹಾರವಾದುದ ಔಷಧಿ

24 ಔನ್ಸ ರೂ 2   16 ಔನ್ಸ ರೂ 1-8-0   8 ಔನ್ಸ ರೂ 0-14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ... ವ್ಯಾಧಿಗಳನ್ನು ನಿವಾರಿಸುತ್ತದೆ

ಅಯೊಡ್ಯಾಸ್ಟ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ... ತೀವ್ರ ಗುಣಕಾರಿ

1 ಔನ್ಸ ರೂ 1-0-0   8 ಔನ್ಸ ರೂ 0-8-0

ದಕ್ಷಿಣ ಕನ್ನಡದ ಏಜಂಟರ   ಪ್ರೊವಿನ್ಶಿಯಲ ಸ್ಟೋರ್ಸ್, ಮಂಗಳೂರು.

Canara Bank Ltd, City-Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಸಿಟಿ— ಮಂಗಳೂರು.

ನೋಟೀಸು.

ಸುರತ್ಕಲ್ ಪೋಸ್ಟು ಹೊಸ್ಮಕಟ್ಟೆಯಲ್ಲಿರುವ ಕಾದಿ ಬ್ಯಾರಿಯವರ ಮಗ ಕೆ. ಉಮ್ಮರ ಬ್ಯಾರಿಯವರಿಗೆ ಈ ಮೂಲಕ ತಿಳಿಸುವುದೇನೆಂದರೆ.— ನಿಮಗೆ ಕಳೆದ ತಾ 6-12-35ನೇ ಸ್ವದೇಶಾಭಿಮಾನಿ ಸಂಚಿಕೆಯಲ್ಲಿ ಕೊಟ್ಟ ಪ್ರಕಟಣೆಯಲ್ಲಿ ತಿಳಿಸಿದಂತೆ ನೀವು ನಮ್ಮ ಕೂಡೆ ಲೋನು-ನಂಬ್ರ 1,47 35ರಲ್ಲಿ ಅಡವಿಟ್ಟ ನಗಗಳನ್ನು ಇದೇ 1935ನೇ ಇಸವಿ ದಸಂಬರ ತಾ 18—12-1935ರ ಬುಧವಾರ ದಿನ ಮಧ್ಯಾಹ್ನ ಗಂಟೆ 2ಕ್ಕೆ ಬ್ಯಾಂಕಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿ ಬಂದ ಮೊಬಲಗು ರೂ 305-8-0ರಲ್ಲಿ ಬ್ಯಾಂಕಿಗೆ ಬರಬೇಕಾದ ರೂ 270-6-2ನ್ನು ಲೋನಿಗೆ ಜಮಾ ಮಾಡಿ ಉಳಿದ ರೂ 35-1-10ನ್ನು ಅಮಾನತ್ತು ಇಟ್ಟಿರುತ್ತದೆ ಈ ಏಲಂಗೆ ಬಡ್ಡಿ ಸಲಿಯುವುದಿಲ್ಲವಾದ್ದರಿಂದ ಆ ಹಣವನ್ನು ಪೂರ್ಣದಲ್ಲಿ ಈ ಮೊಬಲಗನ್ನು ನೀವು ತಗೆದುಕೊಂಡು ಹೋಗಬಹುದು ಈ ನೋಟೀಸಿನ ಖರ್ಚು ಮಾತ್ರ ವಜಾ ಕೊಡಬೇಕಾಗುವುದು

Office of the Bank City Mangalore 13-12-1935 | M Mukund Kini Agent

New Era Technical School.

New Market Square, Udipi

Commercial classes approved by the Madras Government New session opens in June

ನ್ಯೂ ಈರಾ ಟಕ್ನಿಕಲ್ ಸ್ಕೂಲ್

ನ್ಯೂಮಾರ್ಕೆಟ್, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟದ್ದು)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.

-HAIL & CO-
HALFTONE & LINE BLOCK MAKERS

Cinema Colour Slides & Designs A Speciality

CHIKPET BANGALORE CITY

BLOCKS FOR BOOK Illustrations, Magazines & Newspapers. Art Lables, Etc, Etc.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ದೇಹ ಬದ್ಧತೆ, ಪಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ 1ಕ್ಕೆ ರೂ. 2-8-0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ.   3 ಬಾಟ್ಲಿಗಳಿಗೆ ರೂ. 1-12-0.



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ   ಕ್ರಯ. ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ.

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ. 1—0—0

ಮಲೇರಿಯಾ ನಿವಾರಿಣೀ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಪ್ಲೀಹ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಅಧಿಕವಿರುವ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ.

ಬಾಟ್ಲಿ 1ಕ್ಕೆ ರೂ 1-8-0   ಸಣ್ಣ ಬಾಟ್ಲಿ 1ಕ್ಕೆ ಆಣೆ 12.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು.   ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:— ಶ್ರೀ ರಾಮಾ ಸ್ಟೋರ್ಸ ಹೌಸ್—ಶಿರಾಲಿ ಪೇಟೆ, ಕಾಸರಗೋಡು. ... ಪುತ್ತೂರು, ಮೆಸರ್ಸ ... 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ ಕಾಮತ್ ಎಂಡ್ ಕೊ ...

ಗ್ರಾಮಗಳ ಪುನರುಜ್ಜೀವನವೆಂತು?

(ಲೇಖಕ—ಕೆ. ಕೇಶವ ಉಡುಪ, ಅಧ್ಯಾಪಕ ಉಡುಪಿ)

ಯಾವ ಕಾಲದಲ್ಲಿ ಭರತಮಾತೆಯು ಪವಿತ್ರವಾದ ಉದರದಲ್ಲಿ ಅನೇಕಾನೇಕ ರಾಷ್ಟ್ರವೀರರು ಜನ್ಮವೆತ್ತಿ ಭರತಭೂಮಿಯ ಸ್ವಾತಂತ್ರ್ಯವನ್ನು ಕಾಪಾಡಲು ಹಗಲಿರುಳು ಶ್ರಮಪಟ್ಟು ವೀರಜನನಿಯನ್ನು ಧನ್ಯಳನ್ನಾಗಿ ಮಾಡಿದರೋ, ಅಂತಹ ವೀರ ಶ್ರೇಷ್ಠರನ್ನು ಪಡೆದು ತಾನು ಕೃತಾರ್ಥಳಾದ ಭರತಮಾತೆಯ ಇಂದಿನ ಸ್ಥಿತಿಯೇನು? ಎಂಬುದನ್ನು ಪರಿಶೀಲಿಸಿ ನೋಡಿದರೆ ಅಂದು ಸಕಲ ಧನಕನಕ ವಸ್ತುವಡವೆಗಳಿಗೆ ತವರುಮನೆಯಾಗಿ, ಸುವರ್ಣಭೂಮಿಯೆಂದು ಮೆರೆದಾಡಿಕೊಂಡಿದ್ದ ಮಾತೃಭೂಮಿಯ ಇಂದಿನ ಸ್ಥಿತಿಯು ಅತ್ಯಂತ ಶೋಚನೀಯವಾಗಿರುವುದು. ಎತ್ತ ನೋಡಿದರೂ ದುರ್ಭಿಕ್ಷೆಯ ಪರಂಪರೆ, ವ್ಯಸನಗಳ ಮೇಲಾಟ, ಬಡ ಒಕ್ಕಲಿಗರ ಸಹಿಸಲಾರದ ಸಂಕಷ್ಟ ಮತ್ತೂ ಹೆಚ್ಚಾಗಿ ಶಿಕ್ಷಿತ ತರುಣರ ನಿರುದ್ಯೋಗದ ಅದ್ಭುತವಾದ ಸಮಸ್ಯೆ, ಮುಂತಾದ ನಿದರ್ಶನಗಳಿಂದ ವ್ಯಕ್ತವಾಗುವುದು.

ಭರತಮಾತೆಯನ್ನು ಈ ತೆರನಾದ ಸಂಕಷ್ಟಗಳಿಗೆ ಗುರಿಪಡಿಸಿದವರಾರು? ದೇಶದಲ್ಲಿ ತಾಂಡವ ನೃತ್ಯವನ್ನಾಡುವ ಆ ಬಡತನವು ಯಾವ ಕಡೆಯಿಂದ ಮೊಳೆಯಿತು? ದಾರಿದ್ರ್ಯ ಪಿಶಾಚಿಯು ಭರತಭೂಮಿಯನ್ನು ತನ್ನ ಬೀಡಾಗಿ ಮಾಡಿಕೊಳ್ಳಲು ಹೇಗೆ ಸಮರ್ಥವಾಯಿತು? ವಿಚಾರ ಮಾಡುವುದಾದರೆ, ನಮ್ಮ ದೇಶದ ಸುಪುತ್ರ ಸುಪುತ್ರಿಯರು ಸ್ವಾತಂತ್ರ್ಯ ದೇವಿಯ ಕಡೆಗೆ ಅಲಕ್ಷ್ಯ ಭಾವವನ್ನು ತೋರಿಸಿ, ಕಾಲ್ಪನಿಕ ಸುಧಾರಣೆಗಳ ಕಡೆಗೆ ತಮ್ಮ ದೃಷ್ಟಿಯನ್ನು ಬೀರಿ, ಭಾರತದ ನಿಜವಾದ ಸುಖಸಂಪತ್ತುಗಳ ಕಾರಣಗಳನ್ನು ಮರೆತು, ಒರೇ ಆಂಗ್ಲ ವಿದ್ಯಾಭ್ಯಾಸ, ಸಾಹಿತ್ಯ ವಿಚಾರ, ರಾಜಕೀಯ ಸುಧಾರಣೆಗಳ ವಿಚಾರ, ಮೊದಲಾದುವುಗಳಲ್ಲೇ ಮಗ್ನರಾಗಿ, ತಮ್ಮ ಯಾವತ್ತು ದೇಹಶಕ್ತಿಯನ್ನು ವಿನಿಯೋಗಿಸಿಕೊಂಡು ತಮ್ಮನ್ನು ತಾವು ಮರೆತು ಪರಸೇವಾ ವೃತ್ತಿಯನ್ನೇ ಅಪೇಕ್ಷಿಸುವರಲ್ಲದೆ, ಸ್ವತಂತ್ರವಾಗಿ ತಮ್ಮ ಜೀವನೋಪಾಯವನ್ನು ಸಾಧಿಸಿ ಸ್ವಾತಂತ್ರ್ಯ ಸೌಖ್ಯವನ್ನು ಪಡೆಯಲು ಪೂರ್ವದಿಂದಲೂ ನಮಗೆ ಮಾರ್ಗದರ್ಶಕವಾಗಿರುವ ಕೃಷಿ ಕೈಗಾರಿಕೆ ಗೋಪಾಲನೆ ಮೊದಲಾದ ವಿಷಯಗಳ ಕಡೆಗೆ ಅಲಕ್ಷ್ಯಭಾವವನ್ನು ತೋರಿಸಿದುದೇ, ಭಾರತೀಯರ ಇಂದಿನ ದೌರ್ಭಾಗ್ಯಕ್ಕೆ ಕಾರಣವಾಗಿದೆ. ತಾವು ಜನ್ಮವೆತ್ತಂದಿನಿಂದ ಯಾರು ತಮ್ಮನ್ನು ಅಕ್ಕರೆಯಿಂದ ಸಾಕಿ ಸಲಹಿದರೋ ಅಂತಹ ಮಾತಾಪಿತೃಗಳನ್ನು ನಾನಾ ಸಂಕಷ್ಟಗಳಿಗೆ ಗುರಿಪಡಿಸಿ, ತನ್ನ ಮನೆಯ ಮೇಲಿನ ಮಮತೆಯನ್ನು ತೊರೆದು, ವಿದೇಶೀಯ ಮೋಹಕ್ಕೆ ಮನಸೋತು, ನಾನಾ ದುರ್ವ್ಯಸನಗಳಿಗೆ ಬಲಿಬಿದ್ದು ಹೆತ್ತ ತಂದೆತಾಯಿಗಳು ಹಗಲಿರುಳು ಶ್ರಮಪಟ್ಟು ದುಡಿದ ಹಣವನ್ನು ಮನಬಂದ ತೆರದಲ್ಲಿ ಅಪವ್ಯಯ ಪಡಿಸಿ ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದ ಇಂದಿನ ನವತರುಣರ ಸ್ಥಿತಿಗತಿಗಳನ್ನು ಏನೆಂದು ವರ್ಣಿಸಲಿ? ಅನೇಕಾನೇಕ ದುರ್ವ್ಯಸನಗಳು ಬಡನುಡಿ ಬರುವಿಕೆ, ದೇಹಕ್ಷೀಣತೆ ಇವೇ ಮೊದಲಾದ ದುರ್ಗುಣಗಳ ವ್ಯಾಪನಕ್ಕೆ ಇಂದಿನ ಶಿಕ್ಷಣವು ಹೆಚ್ಚಿನ ಸಹಕಾರಿಯಾಗಿರುವುದೆಂದು ಅನೇಕಾನೇಕ ವಿದ್ವಾಂಸರು ಉದ್ಘೋಷಿಸುತ್ತಿರುವರು! ಯಾವ ವಿದ್ಯಾರ್ಥಿಯು ತನ್ನ ಪ್ರೌಢ ಶಿಕ್ಷಣಕ್ಕಾಗಿ ಸಾವಿರಾರು ರೂಪಾಯಿಗಳನ್ನು ವ್ಯಯಪಡಿಸಿ, ತಾನು ತನ್ನ ಮನೆಯ ಜನರ ಸಂಪೂರ್ಣ ವಿದ್ಯಾಭ್ಯಾಸವನ್ನು ಗಳಿಸಿದರೂ ಕೂಡ, ಆತನು ತನ್ನ ಮುಂದಿನ ಜೀವನವನ್ನು ಯಾವ ರೀತಿಯಲ್ಲಿ ನಿರ್ವಹಿಸಲೆಂಬ ಆಲೋಚನೆಯಲ್ಲಿ ಮಗ್ನನಾಗಿ, ದೈವವಶಾತ್ ಆತನಿಗೆ ಮಾಸ್ತರಿಕೆ ಕೆಲಸವೋ, ಗುಮಾಸ್ತಿಕೆಯೋ ದೊರಕಿದರೆ ಆತನ ವಿದ್ಯಾಭ್ಯಾಸದ ಉದ್ದೇಶವು ಸಫಲವಾದಂತಾಯಿತು. ಇಲ್ಲದಿದ್ದಲ್ಲಿ ಆತನಿಗೆ ಯಾವ ದುರವಸ್ಥೆಯು ಪ್ರಾಪ್ತವಾಗುವುದೆಂದು, ಆ ಘೋರವಾದ ನಿರುದ್ಯೋಗದ ಬಲೆಯಲ್ಲಿ ಸಿಲುಕಿಕೊಂಡು ಹೋರಾಡುವ ಇಂದಿನ ಶಿಕ್ಷಿತ ತರುಣರೇ ಅರಿತವರಾಗಿರುವರು. ಆದಪ್ರಯುಕ್ತ, ಇಂದಿನ ವಿದ್ಯಾರ್ಥಿಗಳು ಕೇವಲ ಸ್ವಂತಹ ಸಂಕಷ್ಟಗಳಿಗೀಡಾಗುವರಲ್ಲದೆ, ತಮ್ಮ ಹೆತ್ತವರ ಸುಖಸೌಕರ್ಯಗಳಿಗಾಗಿ ಸಹಕಾರಿಗಳಾಗುವ ಬದಲು, ಅವರನ್ನು ನಾನಾ ಕಷ್ಟಗಳಿಗೆ ಗುರಿಪಡಿಸಿ, ದೇಶದ ದಾರಿದ್ರ್ಯವನ್ನು ಮತ್ತಷ್ಟು ವೃದ್ಧಿಗೊಳಿಸುವ ಇಂದಿನ ಶಿಕ್ಷಣವು ಮಾತೃಭೂಮಿಗೆ ಹಿತಕರವಾದುದು ಎಂದು ಹೇಳಬಹುದೇ? ನಾವು ಆಂಗ್ಲ ವಿದ್ಯಾಭ್ಯಾಸದಲ್ಲಿ ಪ್ರಾವೀಣ್ಯತೆಯನ್ನು ಪಡೆದ, ಪಾಶ್ಚಾತ್ಯರಂತೆ ನಾವೂ ಮೆರೆಯಬೇಕೆಂಬ ನವಸುಧಾರಣೆಯ ಮಹತ್ವಾಕಾಂಕ್ಷೆಯೇ ನಮ್ಮ ಜನರೆಲ್ಲರನ್ನು ಪರಭಾಗಿಗಳನ್ನಾಗಿ ಮಾಡಿತು! ದೇಶದ ಸರ್ವಸ್ವವನ್ನೇ ನಾಶಗೊಳಿಸಿತು! ದರಿದ್ರ ಪಿಶಾಚಿಗೆ ಭಾರತವನ್ನು ತನ್ನ ಬೀಡಾಗಿ ಮಾಡಿಕೊಳ್ಳಲು ಆಸ್ಪದ ಕೊಟ್ಟಿತು!

ಪಾಶ್ಚಾತ್ಯರಾದರೋ ಒರೇ ಜ್ಞಾನಾಭಿವೃದ್ಧಿಯ ಸಲುವಾಗಿ ಶಿಕ್ಷಣವನ್ನು ಗಳಿಸಿ, ತಮ್ಮ ಮುಂದಿನ ಜೀವನವನ್ನು ಸ್ವತಂತ್ರವಾಗಿ ನಿರ್ವಹಿಸುವರಲ್ಲದೆ ತಮ್ಮ ರಾಷ್ಟ್ರದ ಸಂಪದಭಿವೃದ್ಧಿಗೆ ಕಾರಣವಾಗಿರುವ ಕೃಷಿ–ಕೈಗಾರಿಕಾದಿಗಳ ಕಡೆಗೆ ಹೆಚ್ಚಿನ ಗಮನವನ್ನಿತ್ತು, ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸಿ ಕೀರ್ತಿವಂತರಾಗಿ ಮೆರೆಯುತ್ತಿರುವರು. ಆದರೆ ಭಾರತೀಯರ ಭಾಗ್ಯವೇನ? ಇಂಗ್ಲೀಷು ಫ್ಯಾಶನ್, ಇಂಗ್ಲೀಷ್ ನಡೆನುಡಿ, ಜನ್ಮಭೂಮಿಯ ಕಡೆಗೆ ಅಲಕ್ಷ್ಯಭಾವ, ಹೆಚ್ಚೇಕೆ? ತಮ್ಮ ಮನೆಯು ಯಾವ ಕಡೆಯಲ್ಲಿರುವುದು? ತಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿದ ಜನನೀ ಜನಕರ ಅವಸ್ಥೆಯೇನು? ಎಂಬ ವಿಚಾರ ಒಂದೂ ಅವರಿಗೆ ತೋರದ ಭಾರತೀಯರ ಈ ತೆರನಾದ ದರ್ಶಿಗಳಿಂದ ಪಾರಾಗಿ, ಭರತಮಾತೆಯನ್ನು ಉದ್ಧರಿಸುವ ಬಗೆಯಾದರೂ ಯಾವುದಿದೆ?

ಮುಖ್ಯವಾಗಿ ಭಾರತೋದ್ಧಾರಕ್ಕಾಗಿ ನಾವು ಸಾಧಿಸತಕ್ಕ ಕಾರ್ಯಗಳೇನು? ಎಂಬ ವಿಷಯವನ್ನು ಯೋಚಿಸುವುದಾದರೆ, ಹಳ್ಳಿಗಳ ಪುನರುಜ್ಜೀವನವಾಗಬೇಕೆಂದು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳಬೇಕಾದ ಸಂಗತಿಯಾಗಿರುತ್ತದೆ. ಹಳ್ಳಿಗಳ ವ್ಯವಸಾಯವು ಹಿಂದೂದೇಶದ ಬೆನ್ನೆಲುಬಿನಂತಿದ್ದು, ದೇಶಕ್ಕೆ ಬೇಕಾದ ಎಲ್ಲಾ ವಸ್ತುಒಡವೆಗಳನ್ನೂ ಪೂರೈಸಿ ಜಗತ್ತನ್ನು ಪೋಷಿಸುತ್ತದೆ. ಅಂತಹ ಹಳ್ಳಿಗಳ ಇಂದಿನ ಸ್ಥಿತಿಯೇನ? ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ. ಅನುದಿನವೂ ಅರೆಹೊಟ್ಟೆಯಿಂದಲೂ, ಹರಕುಬಟ್ಟೆಯಿಂದಲೂ ಜೀವನವನ್ನು ನಿರ್ವಹಿಸಬೇಕಾದ ಕಠಿಣ ಪ್ರಸಂಗವು ಹಳ್ಳಿಗಳ ಬಡ ಒಕ್ಕಲಿಗರಿಗೆ ಬಂದಿರುತ್ತದೆ. ಅಂದು ಸ್ವರ್ಗಲೋಕವೋ ಎಂಬಂತೆ ವೈಭವ ಶಿಖರವನ್ನೇರಿದ್ದ ಹಳ್ಳಿಗಳಿಂದು ನರಕಸಮಾನವಾಗಿ, ಎಲ್ಲಲ್ಲಿಯೂ ಜೀವನ್ಮೃತರಾದ, ಚೈತನ್ಯಶೂನ್ಯರಾದ, ನಷ್ಟಾನಂದರಾದ, ರೋಗಪೀಡಿತರಾದ ಬಡ ಒಕ್ಕಲಿಗರೇ ಕಂಡುಬರುತ್ತಿರುವರು! ಇಂದ ಮೇಲೆ ನಮ್ಮ ಹಿಂದೀ ರಾಷ್ಟ್ರವು ಯಾವ ಹಳ್ಳಿಗಳನ್ನು ಅವಲಂಬಿಸಿಕೊಂಡಿರುವುದೋ ಅಂತಹ ಹಳ್ಳಿಗಳ ಬಡ ಒಕ್ಕಲಿಗರ ಸಂಕಷ್ಟ ನಿವಾರಣೆಯಾಗದಿದ್ದರೆ ದೇಶೋದ್ಧಾರವೆಂತು?

ಮುಖ್ಯವಾಗಿ ಭಾರತ ಸುಪುತ್ರ, ಸುಪುತ್ರಿಯರು ದೇಶದ ಸಂಪತ್ತಿಗೆ ಮೂಲಾಧಾರರಾದ ಬಡರೈತರ ಸಂಕಷ್ಟ ನಿವಾರಣೆಗಾಗಿ, ಭಾರತಮಾತೆಯ ಉದ್ಧಾರಕ್ಕಾಗಿ, ಶುದ್ಧವಿಚಾರದಿಂದ ಗ್ರಾಮಸೇವೆಯನ್ನು ಕೈಕೊಂಡರೆ, ಹಿಂದೂದೇಶದ ೭ ಲಕ್ಷ ಗ್ರಾಮಗಳು ಪುನರುಜ್ಜೀವನಗೊಂಡು ಮಾತೃಭೂಮಿಗೆ ಬಹು ಬೇಗನೇ ಯಶವು ದೊರೆಯುವುದೆಂಬುದರಲ್ಲಿ ಅನುಮಾನವೇನು? ವೀರ ಭಾರತ ಸುಪುತ್ರ ಸುಪುತ್ರಿಯರೇ! ಪರದೇಶಿಯರ ಸೂರೆಯಿಂದ ನರಳುತ್ತಿರುವ ಭಾರತಾಂಬೆಯನ್ನು ಉದ್ಧರಿಸಿರಿ. ಬಡ ಒಕ್ಕಲಿಗರ ಸಂಕಷ್ಟಗಳನ್ನು ನಿವಾರಿಸುವುದೇ ಭಾರತದ ಭಾವೀ ಉನ್ನತಿಗೆ ಕಾರಣವೆಂದು ತಿಳಿದು, ಗ್ರಾಮಸೇವೆಗಾಗಿ ಸೊಂಟಕಟ್ಟಿ ಕಾರ್ಯರಂಗಕ್ಕೆ ದುಮುಕಿದರೆ, ಹಳ್ಳಿಗಳ ಪುನರುಜ್ಜೀವನವಾಗಿ, ಮಾತೃಭೂಮಿಯು ಆನಂದ ಸಾಗರದಲ್ಲಿ ಮುಳುಗಿ, ಭಾರತದ ಎಲ್ಲೆಡೆಯಲ್ಲಿಯೂ ಶಾಂತಿಯು ನೆಲೆಗೊಂಡು, ಭಾರತದ ಭಾವೀ ಕಲ್ಯಾಣವಾಗಬಹುದಲ್ಲವೇ?

ಸಿಂಧ ದೇಶದ ವರದಕ್ಷಿಣೆಯ ಕ್ರಮ.

ತಿಂಗಳು ಒಂದರ ರೂ. ೧೦೦ ದುಡಿಯುವ ತರುಣನಿಗೆ 'ರೂ. ೧೦,೦೦೦ ವರದಕ್ಷಿಣೆ' ಕೊಡಬೇಕಾಗಿದೆ.

ಸಿಂಧದೇಶದ ತರುಣರು, ಅವರ ಕೆಲವು ಸಾಮಾಜಿಕ ಕ್ರಮಗಳಿಂದ ಯಾವಾಗಲೂ ಸುಖ ವಿಲಾಸದಲ್ಲಿ ಮಗ್ನರಾಗಿದ್ದು, ವಿದ್ಯಾವ್ಯಾಸಂಗದಲ್ಲಿ ಬಹಳ ಆಸಕ್ತಿಯುಳ್ಳವರಾಗಿದ್ದಾರೆ. ಯುವಕರು, ತಮ್ಮ ಜೀವಮಾನದ ಅಧಿಕಾಂಶವನ್ನು ಕಾಲೇಜಿನಲ್ಲಿ ಕಳೆಯುತ್ತಿದ್ದಾರೆ. ಸಾಧಾರಣ ೨೫ ವರ್ಷ ಪ್ರಾಯಭರಿತರಾದ ವಿನಹ ಇವರಿಗೆ ಕಾಲೇಜುಗಳನ್ನು ಬಿಡಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಬಾಲಕ ಬಾಲಕಿಯರ ವಿದ್ಯಾಭ್ಯಾಸವು ಒಟ್ಟಾಗಿ ಒಂದೇ ಸಂಸ್ಥೆಗಳಲ್ಲಿ ನಡೆಯುತ್ತಿವೆ. ಅಲ್ಲಿನ ಒಂದು ಕಾಲೇಜಿನ ಕ್ಲಾಸಿನಲ್ಲಿ ೨೦೦ ತರುಣರು–೧೫೦ ಯುವತಿಯರಿದ್ದಾರಂತೆ. ಇದರಿಂದ ಪ್ರತಿಯೊರ್ವ ತರುಣನು ಪ್ರಣಯಿಯಾಗಿರುತ್ತಾನೆ. ವಿದ್ಯಾಭ್ಯಾಸವನ್ನು ಮುಗಿಸಿ, ಉದ್ಯೋಗ ಪಡೆಯುವ ವರೆಗೆ ಇವರು ವಿವಾಹ ಮಾಡಿಕೊಳ್ಳಲಾರರು. ಧಾರಾಳ ಸಂಬಳ ಒದಗಿಸುವ ಉದ್ಯೋಗ ದೊರೆತರೆ ಮಾತ್ರ ಇವರು ವಿವಾಹಮಾಡಿಕೊಳ್ಳಲು ಯೋಗ್ಯರೆಂದು ತಿಳಿಯುತ್ತಾರೆ. ಯಾಕೆಂದರೆ, ಸಿಂಧ ತರುಣಿಯರ ಹೆಚ್ಚಾಗಿ ವಿದ್ಯಾವಂತರಾಗಿರುವುದರಿಂದ ಪಾಶ್ಚಾತ್ಯ ಕ್ರಮಗಳನ್ನು ಅನುಸರಿಸಿದವರಾಗಿ ಗಂಡನಿಗೆ ಒಂದು ಹೊರೆಯಾಗಿದ್ದಾರೆ. ಇವರ ವೇಷವು ಮತ್ತು ಇತರ ವಯ್ಯಾರಗಳಿಗೆ ಸಾಧಾರಣ ಸಂಬಳ ಸಾಕಾಗದು. ಇದರಿಂದಲೆ ಯುವಕರು ವಿವಾಹವನ್ನು ದೂರ ಮಾಡುತ್ತಿದ್ದಾರೆ. ಅಧಿಕಾರ ದಿನೇ ದಿನೇ ಕಡಿಮೆಯಾಗುವ ಮತ್ತು ಉದ್ಯೋಗವು ವೆಚ್ಚವಾಗುತ್ತಿರುವ ಈ ಸಮಯದಲ್ಲಿ, ಇಂತಹ ಸ್ತ್ರೀಗಳನ್ನು ಸಾಕುವುದು ಯಾರಿಗೆ ಸಾಧ್ಯವಾಗುವುದು, ಅಲ್ಲಿನ "ಅಮಿಲ" ಜಾತಿ ವರ್ಗದ ಸ್ಥಿತಿಯಾಗಿರುತ್ತದೆ. ಇದು ವಿದ್ಯಾವಂತ ವರ್ಗವು.

ಈ ಅಮಿಲ್ ವರ್ಗದ ತರುಣರು ಮಹದಾಶೆಯುಳ್ಳವರು. ಧಾರಾಳ ಆದಾಯವಿರುವ ತರುಣರನ್ನೆ ಹುಡುಗಿಯ ತಂದೆ ತಾಯಿಗಳು ಅಪೇಕ್ಷಿಸುವರು. ಅವರ ವಿವಾಹ ಯೋಗ್ಯತೆಯು ಸಂಬಳದ ಮೇಲೆ ನಿಂತಿದೆ, ವರದಕ್ಷಿಣೆ ಸೌಂದರ್ಯಗಳ ಮೇಲೆ ಹೊಂದಿಕೊಂಡಿದೆ. ಕುಟುಂಬದ ಸ್ಥಿತಿಯನ್ನು ಒದಗಿಸುವುದು ಕಷ್ಟಸಾಧ್ಯವಾಗಿದೆ. ಆದರೆ ನವೀನ ವಿದ್ಯಾಭ್ಯಾಸದಿಂದ ಓರ್ವ ತರುಣನು ತನ್ನ ಯೋಗ್ಯತೆಯನ್ನು ಹೆಚ್ಚಿಸಬಹುದು. ವಿಶ್ವವಿದ್ಯಾಲಯದ ಪದವಿಗಳನ್ನು ಪಡೆದ ಬಳಿಕ ಅವನಿಗೆ ಯೋಗ್ಯತೆಯು ಬರುವುದು. ತರುಣನು ಇದಕ್ಕಾಗಿ ತನ್ನ ವಿವಾಹ ಮುಹೂರ್ತವನ್ನು ಮುಂದಿಡುತ್ತಿದ್ದಾರೆ. ಆದರೆ ವಿದ್ಯಾವಂತರಾದರೂ, ಅವರಿಗೆ ಅನೇಕ ಭಾವಿ ಯೋಗ್ಯ ವರನು ದೊರಕದಿದ್ದು. ವರದಕ್ಷಿಣೆಯ ಕಾರಣದಿಂದ ಅವಳ ವಿವಾಹವು ಸಾಧ್ಯವಾಗದು.

ಈ ಪ್ರಕಾರ ಕ್ರಮವು ಅವರ ಕುಟುಂಬ, ವಿದ್ಯೆ, ಆದಾಯ, ಯೋಗ್ಯತೆಗಳನ್ನನುಸರಿಸಿ ವಿಧಿಸಲಾಗುವುದು. ಸಾಧಾರಣ ನಾಗರೀಕನಿಗೆ ೩೦,೦೦೦ ರೂ ವರದಕ್ಷಿಣೆಯೂ ೫೦೦೦ ರೂ ಆಭರಣ ಇತ್ಯಾದಿ ಉಡುಗೆರೆಗಳು ಸಿಕ್ಕುವವು. ತಿಂಗಳು ಒಂದಕ್ಕೆ ರೂ ೧೦೦ ಸಂಬಳವನ್ನು ಪಡೆಯುವ ಯುವಕನಿಗೆ ರೂ ೧೦,೦೦೦ ವರದಕ್ಷಿಣೆ ಕೊಡಬೇಕಾಗುವುದು. ವರದಕ್ಷಿಣೆಯು ಹುಡುಗಿಯ ವರ್ಣದ ಮೇಲೂ ಹೊಂದಿಕೊಂಡಿದೆ. ವರ್ಣವು ಸ್ವಲ್ಪ ಕಪ್ಪಾಗಿದ್ದರೆ ಅವಳ ವರದಕ್ಷಿಣೆಯು ಹೆಚ್ಚುವುದು, ಅಗಾಧ ಪ್ರಮಾಣದ ತರುಣಿಯರಿಗೆ ಧಾರಾಳ ವರದಕ್ಷಿಣೆ ಕೊಡಬೇಕಾಗುವುದು. ದೇಶದ ಸಾಂಪತ್ತಿಕ ದುಃಸ್ಥಿತಿಯಿಂದ ತರುಣಿಯರ ತಂದೆ ತಾಯಿಗಳಿಗೆ, ಇಷ್ಟು ವರದಕ್ಷಿಣೆಯನ್ನು ಸಲ್ಲಿಸಲು ಕಷ್ಟಸಾಧ್ಯವಾಗಿದೆ. ಆದುದರಿಂದ ಅವಿವಾಹಿತ ತರುಣಿಯರ ಸಂಖ್ಯೆಯು ದಿನೇ ದಿನೇ ಪ್ರಬಲವಾಗುತ್ತಿದೆ. ಸೌಂದರ್ಯ ವಿಚಾರದಲ್ಲಂತೂ, ಸಿಂಧ ತರುಣಿಯರ ನವೀನ ಕಾಲದ ಪೌಡರಿನ ಉಪಯೋಗದ ಕ್ರಮಗಳನ್ನು ಸಂಪೂರ್ಣ ತಿಳಿದವರಾಗಿದ್ದಾರೆ. ಆದರೂ ಇವರ ವಿವಾಹವು ಒಂದು ಭಯಂಕರ ಸಮಸ್ಯೆಯಾಗಿ ಅಭಿಸಿರುತ್ತದೆ.

ಯೋಗ್ಯ ತರುಣರ ಸಂಖ್ಯೆಯು ಕಡಿಮೆ. ವಿವಾಹವಾಗುವ ತರುಣಿಯರ ಸಂಖ್ಯೆಯು ಬಹಳ. ಆದುದರಿಂದ ಹುಡುಗರ ಮೌಲ್ಯವು ಏರಲೇಬೇಕು. ಇದರಿಂದ ಕೆಲವು ಯೋಗ್ಯ ತರುಣರು ತಮ್ಮ ಕ್ರಯವನ್ನು ಸಂದರ್ಭಾನುಸಾರ ವಿಧಿಸುತ್ತಿದ್ದಾರೆ. ಆದುದರಿಂದ ವಿವಾಹವು ಈ ತರುಣರಿಗೆ ಧಾರಾಳ ಲಾಭ ಒದಗಿಸುವ ವ್ಯಾಪಾರದಂತಾಗಿದೆ. ಯಾರು ಹೆಚ್ಚು ವರದಕ್ಷಿಣೆಯನ್ನು ಕೆರಬಲ್ಲರೋ, ಅಂತಹವರನ್ನು ಇವರು ವರಿಸುವರು. ಓರ್ವ ತರುಣನಿಗೆ ೧೫೦೦೦ ರೂ ವರದಕ್ಷಿಣೆ ಎಂದು ವಿವಾಹ ನಿಶ್ಚಯವಾಗಿತ್ತು. ಆದರೆ ಬೇರೆ ಯಾವನೋ ತರುಣಿಯ ತಂದೆಯು ರೂಪಾಯಿ ೧೮,೦೦೦ ಕೊಡಲು ಮುಂದೆ ಬಂದುದರಿಂದ, ಮುಂಚಿನ ಸಂಬಂಧವನ್ನು ರದ್ದುಮಾಡಿ, ಈ ಹೊಸ ಸಂಬಂಧ ಗೊತ್ತಾಯಿತು. ಇನ್ನೊಬ್ಬ ತರುಣನಿಗೆ, ಧಾರಾಳ ವರದಕ್ಷಿಣೆ ಸಿಗುವುದಾಗಿ ವಿವಾಹ ನಿಶ್ಚಯವಾಗಿತ್ತು. ಆದರೆ ಹುಡುಗಿಯ ಗುಣದಲ್ಲಿ ಸ್ವಲ್ಪ ಕಳಂಕು ಉಂಟೆಂದು ಆತನು ತಿಳಿದುದರಿಂದ, ಇನ್ನೂ ೫೦೦೦ ರೂ. ಹೆಚ್ಚಿನ ವರದಕ್ಷಿಣೆಯನ್ನು ಕೊಡಬೇಕು, ಅಲ್ಲದಿದ್ದರೆ ತಾನು ವಿವಾಹವಾಗಲೊಲ್ಲೆನು ಎಂದುಬಿಟ್ಟನು. ಮರ್ಯಾದೆ ರಕ್ಷಣೆಗಾಗಿ ಹುಡುಗಿಯ ತಂದೆಯು ಈ ಹಣವನ್ನು ಕೊಡಲೊಪ್ಪಿದನು.

ಈ ಸಂಕಷ್ಟಗಳನ್ನು ನಿವಾರಿಸಲು, ಪ್ರಣಯ ವಿವಾಹಗಳಿಗೆ ಉತ್ತೇಜನ ಕೊಡಲಾಯಿತು. ಒಬ್ಬ ತರುಣನು ಓರ್ವ ತರುಣಿಯ ಪರಿಚಯವನ್ನು ಮಾಡಿ ಅವಳೊಡನೆ ಸುಖವಿಲಾಸಗಳನ್ನು ಅನುಭವಿಸಲು ಆಕೆಯ ತಂದೆಯು ಸಮ್ಮತಿಸಿದನು. ತನ್ನ ಮಗಳಿಗೆ ಯೋಗ್ಯ ವರನು ಹೆಚ್ಚಿನ ವೆಚ್ಚವಿಲ್ಲದೆ ದೊರಕಿದನೆಂದೂ, ಆತನ ಅಭಿಪ್ರಾಯ. ಆದರೆ, ಕೆಲವು ಸಮಯದ ನಂತರ, ಇವರಿಬ್ಬರ ವಿವಾಹವಾಗಬೇಕೆನ್ನುವಾಗ, ರೂ ೧೦,೦೦೦ ವರದಕ್ಷಿಣೆಯು ಕೇಳಲಾಯಿತು. "ನಿನ್ನ ಮಗಳನ್ನು ಮದುವೆಯಾಗಬೇಕಾದರೆ ನನಗೆ ಅಷ್ಟು ವರದಕ್ಷಿಣೆ ಸಿಕ್ಕಲೇ ಬೇಕು. ೧೦,೦೦೦ ರೂ ಪಡೆದ ವಿನಹ ನನ್ನ ತಂದೆತಾಯಿಗಳು ವಿವಾಹಕ್ಕೆ ಒಪ್ಪಲಾರರು." ಮಗಳ ಹಿತದಲ್ಲಿ ತಂದೆಯು ಅಷ್ಟು ಹಣವನು ಕೊಡಬೇಕಾಯಿತು. ವಿದ್ಯಾಭ್ಯಾಸದಿಂದ ವರದಕ್ಷಿಣೆಯು ಕಡಿಮೆಯಾಗುವುದೆಂಬ ಭಾವನೆಯಿಂದ ತರುಣಿಯರಿಗೆ ವಿದ್ಯಾವ್ಯಾಸ ಕೊಡಲಾಯಿತು. ಆದರೆ

(೧೬ನೇ ಪುಟಕ್ಕೆ ಮುಂದುವರಿಯುವುದು)



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಬಿಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

21 ಡಿಸ್ರ್ರ ರೂ 2 16 ಡಿಸ್ರ್ರ ರೂ 1 8 0 8 ಡಿಸ್ರ್ರ ರೂ 0 11 0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಋತುಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿವಾರಿಸುತ್ತದೆ

ಆಯೋಡಿನ್ಯಾಸ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ವೆಹ ವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಡಿಸ್ರ್ರ ರೂ 1 0-0 8 ಡಿಸ್ರ್ರ ರೂ 1-8-0

ದಕ್ಷಿಣ ಕನ್ನಡದ ಏಜಂಟರು ಪ್ರೋಪ್ರೈಟರ್ ಸ್ಟೋರ್ಸ್, ಮಂಗಳೂರು.

Canara Bank Ltd,
City-Mangalore.
ಕೆನರಾ ಬ್ಯಾಂಕ್ ಲಿಮಿಟೆಡ್,
ಸಿಟಿ—ಮಂಗಳೂರು.

ನೋಟೀಸು.

ಸುರತ್ಕಲ್ ಪೋಸ್ಟು ಹೊಸ್ಸೆಕಟ್ಟೆಯಲ್ಲಿ ... ಬ್ಯಾರಿಯವರ ಮಗ ಕೆ. ... ಬ್ಯಾರಿಯವರಿಗೆ ಈ ಮೂಲಕ ತಿಳಿಸುವುದೇನೆಂದರೆ — ನಿಮಗೆ ಕಳೆದ ತಾ. 6-12-35ನೇ ಸ್ವದೇಶಾಭಿಮಾನಿ ಸಂಚಿಕೆಯಲ್ಲಿ ಕೊಟ್ಟ ಪ್ರಕಟನೆಯಲ್ಲಿ ತಿಳಿಸಿದಂತೆ ... ನಂಬ್ರ 1,47 35ರಲ್ಲಿ ... ಗಳನ್ನು ಇದೇ 1935ನೇ ಇಸವಿ ದಶಂಬರ ತಾ 13-12 1935ರ ... ಮಧ್ಯಾಹ್ನ ... 2ಕ್ಕೆ ಬ್ಯಾಂಕಿನಲ್ಲಿ ... ರೂ 305-8-0ರಲ್ಲಿ ... ರೂ 270-6-2ನ್ನು ... ಉಳಿದ ರೂ 35-1-10ನ್ನು ... ಇಟ್ಟಿರುತ್ತದೆ ...

Office of the Bank, City Mangalore, 13-12-1935 | **M Mukund Kini**, *Agent*

New Era Technical School

New Market Square, Udipi

Commercial classes approved by the Madras Government New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ

Join our Special commercial class and insure against unemployment. Details may be had on application to the Manager.

-HAIL & Co-

HALFTONE & LINE BLOCK MAKERS

Cinema Colour Slides & Designs A Speciality

CHIKPET
.BANGALORE CITY

BLOCKS FOR BOOK Illustrations, Magazines & Newspapers. Art Tables, Etc., Etc.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸ್ವಾಲಾಮುಕ್ತಿ, ಕಲ್ಪದ ಪಿಂಡಿ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 8 ಬಾಟ್ಲಿಗಳಿಗೆ ರೂ 1-12-0



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ... ಯುಕ್ತವೆ ... ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ.

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ... ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ... ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ.

ಬಾಟ್ಲಿ 1ಕ್ಕೆ ರೂ. 1-8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧ ಸಿಕ್ಕುವ ಸ್ಥಳ:- ಶ್ರೀ ರಾಮಾಕೃಷ್ಣ ಹೌಸ್, ... ಮೆಸರ್ಸ ಕಾಮತ್ ಎಂಡ್ ಕೊ, ತಾರಾಹೌಸ್, ಗಿರಿಗಾಂವ್ ಬೇಕ್‌ರೋಡ್ ಮುಂಬಾಯಿ, ನಂ. 4. ದಿ ಡೆಕ್ಕನ್ ಹೋಟೆಲ್ ... ಫಾರ್ಮಸಿ ...

The Canar ... Corporation Udipi, Ltd.

Head office:—UDIPI, S... India) TEL: BANKING ESTD 1906

Branches:—1. Udipi, ... Street, Mangalore, 4. Shimoga, 5. Madras (George Town), 6. Bund... a (North Coorg), & 8. Virarajendrapet (South Coorg).

SITS:

0	1934	30 11 '35
ರೂ. 837/	24,95,329/	27,40,312/-

Fa...

K ACCOUNTS

allowed at 3½ %

CHEQUES. 2. Production of pass ... y at the time of withdrawal. 3 ... of charge from one office to another.

Regd)

ಅ... ಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ರೀನ್" ಎಂಬ ವ್ಯಾಪಾರದ ... ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

...ವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಗೀಕರಿಸಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ನಿಮ್ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

MESSRS KOCHIKAR BROTHERS, UDIPI.

SILVER JUBILEE CELEBRATIONS' ACKNOWLEDGMENT.

We beg to acknowledge with grateful thanks the hundreds of congratulatory telegrams and letters received from Policyholders, Share-holders, Medical Examiners, friends and well-wishers from all parts of India on the occasion of our Silver Jubilee Celebrations. We extremely regret it is not possible to acknowledge them individually just at present but we hope to do so shortly.

Udipi, 16th Dec. '35.

KOCHIKAR BROS.

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್ ಉಡುಪಿ

ರಜತ ಮಹೋತ್ಸವ ಸಮಾರಂಭದಲ್ಲಿ ಬಂದ

ಅಭಿನಂದನೀಯ ಪತ್ರಗಳ

ಸಾದರ ಸ್ವೀಕಾರ

ರಜತ ಮಹೋತ್ಸವ ಸಮಾರಂಭದ ವೇಳೆಯಲ್ಲಿ ನಮ್ಮ ಉದ್ಯಮವನ್ನು ಅಭಿನಂದಿಸಿ, ಅದು ಯಶಸ್ವಿಯಾಗಿ ಬಾಳಲೆಂದು ಹಾರೈಸಿ ಕಾಗದ ಪತ್ರಗಳನ್ನೂ ತಂತಿಗಳನ್ನೂ ಕಳುಹಿಸಿದ ಷೇರುದಾರರಿಗೂ ಪರೀಕ್ಷಕ ವೈದ್ಯರಿಗೂ ಕಂಪೆನಿಯ ಪಾಲುದಾರರೂ ವ ಪೊಲಿಸೀದಾರರಿಗೂ ಅಲ್ಲದೆ ಇತರ ಸ್ನೇಹಿತರು ಮತ್ತು ಹಿತಚಿಂತಕರಿಗೂ ನಾವು ಕೃತಜ್ಞತಾ ವಂದನೆಗಳನ್ನು ಅರ್ಪಿಸುತ್ತೇವೆ. ಸಮಯ ಸಂಕೋಚದ ದೆಸೆಯಿಂದ ಪ್ರತಿಯೊಬ್ಬರಿಗೂ ಪ್ರತ್ಯೇಕ ಪತ್ರಿಕೆಯಾಗಿ ಕಳುಹಲಾಗಲಿಲ್ಲದ ಕಾರಣ ಪತ್ರಿಕಾ ದ್ವಾರ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್.

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK LIMITED.

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd.
Head Office:—43, Byragimatam Street,
Post Box No. 203, Madras.

ವಾರ್ಷಿಕ ಚಂದಾ ೩ ರೂಪಾಯಿ. ಬಿಡಿ ಸಂಚಿಕೆ 1 ಆಣೆ.

Registered No. M. 498

ಟಪ್ಪಾಲು ಹಾಸಲು ಸೇರಿ ರೂ. 2-18-0.

For Quality Snuff
H. Rama Rao and Sons
High Class Manufacturers
RAMA SNUFF
The charm of Snuff

ಸ್ವದೇಶಾಭಿಮಾನಿ

SWADESHABHIMANI

LIFE ASSURANCE
IS
NO EXPENSE
BUT
AN INVESTMENT

ಸ್ವದೇಶಾಭಿಮಾನಿ ಗರ್ವೈರ್ಮಹಾರ್ಘೈಃ ... ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆ...ಅನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥

...ರಂಜಿಸರೆ ಸುಧೆಯನು । ಮರೆತು ಕ್ಷುದ್ರದ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೯. ಮಂಗಳೂರು ತಾ. ೨೭ನೇ ಶುಕ್ರವಾರ ದಶಂಬರ ೧೯೩೫. (27–12–'35) ಸಂಚಿಕೆ ೫೧

ಸಿ. ಆರ್ ದಾಸರು.

ಕೊಂಗ್ರೆಸ್ ಚರಿತ್ರಸಾರ.

ಕೊಂಗ್ರೆಸ್ ಸ್ವರ್ಣ ಮಹೋತ್ಸವ ಸ್ಮಾರಕ.

ಅಖಿಲಭಾರತ ರಾಷ್ಟ್ರೀಯ ಮಹಾಸಂಸ್ಥೆಯ ಮುಖಾಂತರ ಭಾರತೀಯ ರಾಷ್ಟ್ರ ಹಿತಸಾಧಕರು ಕಳೆದ ಐವತ್ತು ವರ್ಷಗಳಲ್ಲಿ ಮಾಡಿದ ಕಾರ್ಯಕಲಾಪಗಳ ಸಂಕ್ಷಿಪ್ತ ಇತಿಹಾಸ.

ಲೋಕಮಾನ್ಯ ತಿಲಕರು

ಕೊಂಗ್ರೆಸ್ಸಿನ ಸ್ಥಾಪನೆಯೂ ಮೂಲಪುರುಷರೂ.

ಸದ್ಯದಲ್ಲೇ ಸ್ವರ್ಣಮಹೋತ್ಸವವನ್ನು ಆಚರಿಸುವುದರಲ್ಲಿ ರುವ ನಮ್ಮ ರಾಷ್ಟ್ರೀಯ ಮಹಾಸಂಸ್ಥೆಯಾದ ಕೊಂಗ್ರೆಸ್ಸಿನ ವೇದನೆಯನ್ನು ನಮ್ಮ ... ಅನುಭವಿ ಸಿದು ಮದ್ರಾಸಿಗಳಾದ ನಮಗೆಲ್ಲಾ ... ಮಹಾ ... ವುದು.

... ಧರ್ಮಸಂಸ್ಥೆಗಳ ... ವೇಶ ... ಯು ವಾರ್ಷಿಕ ಅಧಿವೇಶನಕ್ಕಾಗಿ ನೆರೆದ ...ಸೀಯರೇ ಈ ಸಂಸ್ಥೆಯ ಸ...ಜನಕರಾಗಿ

ರುವರು. ಇವರೆಲ್ಲಾ ಈಗ ಕೀರ್ತಿಶೇಷರಾಗಿರುವರು. ಈ ಮೂಲಪುರುಷರೊಳಗೆ ಒಬ್ಬರಾದ ಮಿ. ಹ್ಯೂಮ್ ರವರು ಕಡೆಗೆ ಐಸ್ಬರಾಗಿ ನೇಮಕವಾಗಿದ್ದರಲ್ಲದೆ "ಸರ್" ಬಿರುದನ್ನು ಸರಕಾರದಿಂದ ಹೊಂದಿ ಸ್ವೀಕರಿಸಿದ್ದರು. ಇವರು ಪ್ರೆಸಿಡೆಂಟ್ ವಿಲ್ಸನ್ ರವರಿಗೆ ಒಂದು ಇತಿಹಾಸ

ಮೋಹನದಾಸ್ ಕರಮಚಂದ್ ಗಾಂಧಿಯವರು.

ಪ್ರಸಿದ್ಧ ಪತ್ರವನ್ನು ಬರೆದಿದ್ದರು. ಸಾಮುವೇಲ್ ಹೋಂಟೆಗ್ಯೂರವರು ಇದನ್ನು "ಅವಮಾನಕರ ಪತ್ರ"ವೆಂದು ಕರೆದಿದ್ದರು. ಈ ಪತ್ರವು ಪಂಡಿತ ಜವಾಹರಲಾಲರ "ಹಿಂದುಸ್ಥಾನ ಉದ್ಯೋಗವು ಹಿಂದೀಯರಿಗೆ" ಎಂಬ ಪ್ರಸಿದ್ಧ

ಮತದ ವಿರುದ್ಧವಾಗಿದ್ದು, ಪಂಡಿತರ ಅನುಮೋದನೆಯಿಲ್ಲದೆಯೇ ಬರೆಯಲ್ಪಟ್ಟಿದ್ದಿತು. ಉಳಿದವರಲ್ಲಿ ರಂಗಯ್ಯನಾಯ್ಡು ಮತ್ತು ಆನಂದಾಚಾರ್ಲು ಎಂಬವರು ಜಾತಿ, ಪ್ರಾಂತ್ಯ ಮತ್ತು ಭಾಷಾಪರವಾಗಿ ಮದ್ರಾಸಿನ ಪ್ರತಿನಿಧಿಗಳಾಗಿದ್ದರು. ... ತರೂ, ಐಸ್ಬರೂ ಆಗಿದ್ದ ದೇಶಾಂಗರಿಂದಲೂ, ಆಗ ತರುಣರಾಗಿದ್ದು ('Grand Old Man of India') "ಹಿಂದುಸ್ಥಾನದ ವೃದ್ಧಪುರುಷರೆಂದು ಆಗಿನಿಂದಲೂ ಕರೆಯಲ್ಪಡುತ್ತಿದ್ದ ದಾದಾಭಾಯಿ ನೌರೋಜಿಯವರಿಂದಲೂ ನಿರ್ಮಿತವಾಗಿದ್ದಿತು. ಕಲ್ಕತ್ತದಿಂದ ಬಂಗಾಳದ ಕಿರೀಟರಹಿತ ರಾಜರೆಂದು

ಎಡಿಲರ್ಬೊಂಡರು.

ಮದನಮೋಹನ ಮಾಲವೀಯರು.

೪ನೇ ಪುಟಕ್ಕೆ ಮುಂದುವರಿಯುವುದು.

ನೋಟಗಳು
NOTES

ನಮ್ಮ ರಾಜ್ಯಶ್ರೀ ಸಾಮ್ರಾಜ್ಯಲ ಹೋರರು ಕಾಲು ಜಾರಿ ಬಿದ್ದು ಬಿಟ್ಟರು. ಅವಮಾನಯಾದಕ್ಕೆ ಹುದ್ದೆಗೆ ರಾಜಕೊಟ್ಟು ಬಿಟ್ಟರು.

× × × × ×

ರಾಜ ದೈವಕ್ಕೆ ನಂಬಿದ್ದೆ, ಹೆಚ್ಚಿಗೆಯಾಯಿತು. ಹ ಣ್ಣು ಕಾ ಯಿ ಕೊ ಟ್ಟ ದ್ದು ಕಡಿಮೆಯಾಗಿ ಇವರೇ ಕೊಡಬೇಕಾಯಿತು, ರಾಜಿ.

× × × × ×

ಇಟೇಲಿಯ ಮೇಲೆ, ಜಾರಿಗೆ ತರುವ ಎಣ್ಣೆ ಇತ್ಯಾದಿಯ. ಸೆಂಕ್ಷನ್ ಜಾರಿಗೆ ತರುವ ಕೆಲ ಸಕ್ಕೆ ನಿದ್ರೆ ಕೊಟ್ಟು ಹೊಸ ವರಧ ಇಳಿಸಿದ ಹೋರರು ಸೋತು, ತಾವೇ ಮನೆಗೆ ಹೋಗ ಬೇಕಾಯಿತು.

\+ + + +

ಈ ಇಟೇಲಿ ಎಥಿಯೋಪಿಯಾ ರಾಜ ನಾಟಕ ಸಂಭ್ರಮದಲ್ಲಿ ಹೋರರಿಗೆ ರಾಜಿ ಲಾಭ, ಇಟೇಲಿ ಎಥಿಯೋಪಿಯಕ್ಕೆ ಯುದ್ಧ ಲಾಭ. ಇನ್ನು ಹೋರರ ಬದಲು ಬಂದವರ ಕಾರ ಬಾರು.

\+ + + +

ಚೀನಾ ಜಪಾನಿಯುವರಿಂದ ನುಂಗಲ್ಪಟ್ಟಿತು. ಜಪಾನಿಯರು ಚಹಾರ್ ಪ್ರಾಂತ್ಯವನ್ನು ನುಗ್ಗಿ ಬಲಾತ್ಕಾರವನ್ನು ನಡೆಸಿದಕ್ಕೆ ಕೊನೆಗೆ ಚೀನಾದವರು ಸಂಧಿಗೆ ಒಪ್ಪಿಗೆ ಕೊಟ್ಟ ದವರು. ಅಟ್ಟುಪ್ಪಿಗೆಯಿಂದ ಮತ್ತಷ್ಟು ಕಾಲಾ ಹಾಕುತ್ತಿದೆ—ಜಪಾನು.

\+ + + +

ಕೆಲ ದಿವಸಗಳ ಹಿಂದೆ ಬೆಂಗಳೂರಿನಲ್ಲಿ ಒಂದು ದೊಡ್ಡ ಕನ್ಯಾಪಹಾರದ ಗಲಭೆ ನಡೆದಿತ್ತು. ವಿಚಾರಣೆ ಮುನ್ಸೀಫ್ ಸ್ಪೆಶಲ್ ಕೋರ್ಟಿನಲ್ಲಿ.

\+ + + +

ಅಪರಾಧಗಳು ಮಾಡಿದ್ದನ್ನು ಹೇಳಲು ಮರೆತಿಲ್ಲ. ಮಾಡಿದ ಕೃತ್ಯಗಳನ್ನು ಸರಿಯಾಗಿ ವಿವರಿಸಿದ್ದಾರೆ. ಗೃಹಚಾರ ಹುಡುಗಿದ್ದು. ಮುಂದಿನ ವಿಚಾರಣೆ ದೊಡ್ಡಪ್ಪನ ಕೋರ್ಟಿನಲ್ಲಿ ಕನ್ಯಾಪಹಾರ ನಂಬ್ರಗಳು ಬೇಕೆಂತಾದರೆ, ನಮ್ಮ ಬೆಂಗಳೂರು ಪಸ್ಟ್ ಕನ್ಯಾಪಹಾರ ಪರೀಕ್ಷೆಯಲ್ಲಿ ಮಾರ್ಕು ಕೊಡುವುದಾದರೆ ಬೆಂಗಳೂರಿಗೆ ಸೆಂಟ್ ಪರ್ಸೆಂಟ್.

\+ + + +

ರೈಲ್ವೆ ಕಂಪೆನಿಯವರು ದಶಂಬರ ತಿಂಗಳಲ್ಲಿ ಪ್ರಯಾಣಿಕರಿಗೆ ತುಂಬಾ ಪ್ರಯಾಣ ಮಾಡಲು ಏಕದಂ ರಿಯಾಯತಿ ಮಾಡಿದ್ದಾರೆ. ಈ ರಿಯಾಯತಿಯ ಫಲ ಪತ್ರಿಕೆಯಲ್ಲಿ ಬಂದಿದೆ. ಮದ್ರಾಸಿನಲ್ಲಿ ವಿಜಿಟರ್ಸ್ಸರ ಸುರಿಮಳೆ ರೈಲ್ವೆ ಕಂಪೆನಿಯವರಿಗೆ ಚೀಲ ಭರ್ತಿ.

× × × × × ×

ಲೆಕ್ಕವಿಲ್ಲದಷ್ಟು ಸ್ಪೆಶಲ್ ರೈಲುಗಳು ಓಡಾಡುತ್ತಿವೆಯಂತೆ, ಈ ದಶಂಬರದಲ್ಲಿ, ರೈಲ್ವೆಯವರಿಗೆ ಕೋದಂಡರಾವ್ ದಸೆ. ಪ್ರಯಾಣಿಕರಿಗೆ ಗುರುವಿನ ಮೇಲೆ ನ್ಯಾಯ.

\+ + + +

ರೈಲ್ವೆ ಕಂಪೆನಿಯವರಿಗೆ ಅನುಸರಿಸಿ ನಮ್ಮ ಜಿಲ್ಲೆಯ ಬಸ್ಸು ಸರ್ವಿಸುಗಳು ಅವರ ಕ್ರಮಗಳನ್ನನುಸರಿಸಿ, ಮುಂಬಾಯಿಗೆ ಹುಬ್ಬಳ್ಳಿಗೆ, ಕಡುಂಗೆ ಒಂದು ಕರಪತ್ರಗಳನ್ನು ಹೊರಡಿಸಿದ್ದರು. ಬಸ್ಸುಗಳು ಹಾಲಿ ಇರುವ ಸರ್ವಿಸುಗಳನ್ನು ಮಾಡಿದ್ದೇ ವಿನಹ ರೈಲ್ವೆ ಕಂಪೆನಿಯ ಹಾಗೆ ಬಸ್ಸಿನವರ ಚೀಲ ತುಂಬಲಿಲ್ಲ. ಸ್ಪೆಶಲ್ ಮಾಡಲು ಲೈಸನ್ಸ್ ಅಧಿಕಾರಿಗಳು ಲೈಸನ್ಸ್ ಕೊಡಲಿಲ್ಲವೋ, ಅಥವಾ ಪ್ರಯಾಣಿಕರು ರೈಲಿನವರೆ? ಅಂತೂ ಇದು ಪಸ್ಟ್ ಚಾನ್ಸ್ ಮುಂದಿನ ದಶಂಬರಕ್ಕೆ ಬಸ್ಸಿನವರ ಚಾನ್ಸ್.

\+ + +

ಮುನಿಸಿಪಾಲ್ ಚುನಾವಣೆ ರಾಜಿಕೊಟ್ಟವರ ಸ್ಥಾನ ಖಾಲಿ ಇದೆ. ನಿಲ್ಲುವವರು ಸೊಂಟ ಕಟ್ಟಿದ್ದಾರೆ. ಕಮಿಶನ್ ಸಾಹೇಬರ ಕರ್ತಗಳು ಕಟಣೆಗೆ ಬಂದಿವೆ. ಒದಿ ಪ್ರಾರಂಭವಾಗ...

ಸ್ವೀಕಾರ.

ಪಾಂತೋಪನ್ಯಾಸಗಳು. ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಿಂದ ಬೆಲೆ ೦—೮—೦.

೧ನೇ ಇಸವಿಯ ಸ್ವರಾಜ್ಯ ಡೈರಿ. ಬೆಲೆ ೦—೪—೦ ಪ್ರಕಾಶಕರು ಪಿ. ಎ. ಪೈ ಬ್ರದರ್ಸ್ ಉಡುಪಿ.

ಭಾರತ ರಾಜಕೀಯ ದೃಶ್ಯ—ಲೇಖಕ ಕಯ್ಯಾರ ಗುರುದಪ್ಪ.

ಕೃಷ್ಣ ಕರ್ಣಾಟಕ—ದೀಪಾವಳಿ ಸಂಚಿಕೆ.

ಜೀವ—ಮಾಸಪತ್ರಿಕೆ, ಸಂಪಾದಕ ಮತ್ತು ಪ್ರಕಾಶಕ, ಪಂಡಿತ ಸಿ. ಸಂಗಯ್ಯ.

ಈ ಪುಸ್ತಕಗಳನ್ನು ನಾವು ಸಾದರದಿಂದ ಸ್ವೀಕರಿಸಿದ್ದೇವೆ.

ಹುರಿಗಜ್ಜಿ, ಬೆವರಸಾಲೆ ಮತ್ತು ಹುಣ್ಣುಗಳನ್ನು ವಾಸಮಾಡಿರಿ.

ವನಸ್ಪತಿಗಳಿಂದ ಕೂಡಿದ ಸಾಂಬಕ್ ಮುಲಾಮನ್ನು ಉಪಯೋಗಿಸಿರಿ.

ನಿಮಗೆ ಹುರಿಗಜ್ಜಿ, ಬೆವರಸಾಲೆ, ಅಥವಾ ಇನ್ನು ಇತರ ಪೀಡಿಸುವ ಚರ್ಮ ವ್ಯಾಧಿಗಳೇ ಇದ್ದಲ್ಲಿ, ವನಸ್ಪತಿಗಳಿಂದ ಕೂಡಿದ ಸಾಂಬಕ್ ಮುಲಾಮನ್ನು ಪ್ರತಿ ದಿವಸ ತಿಕ್ಕಿ, ನಿಮ್ಮ ಚರ್ಮವನ್ನು ನಿರ್ಮಲ ಮತ್ತು ಆರೋಗ್ಯಕರವನ್ನಾಗಿ ಮಾಡಿರಿ. ಸಾಂಬಕ್ ಚರ್ಮದ ಒಳಗೆ ಕ್ರಮಶಃ ಸೇರಿ, ವ್ಯಾಧಿಗಳನ್ನು ಬುಡದಲ್ಲಿಯೇ ನಿರ್ಮೂಲ ಮಾಡುವುದು, ಅದು ನೋವನ್ನು ಶಮನಿಸುವುದು, ಹಾನಿಕರ ಕ್ರಿಮಿಗಳನ್ನು ನಾಶಮಾಡುವುದು ಮತ್ತು ಚರ್ಮವನ್ನು ಕೊರತೆಗಳಿಂದ ರಕ್ಷಿಸುವುದು. ಸಾಂಬಕ್ ನಂತಹ ಬೇರೆ ಇನ್ನೊಂದು ಔಷಧಿಯು ಇಲ್ಲ.

ಕ್ರಯ ರೂ. 1—0—0.

ಎಲ್ಲಾ ದವಾಖಾನೆಗಳಲ್ಲಿ ದೊರಕುವುದು.

ಇದರಲ್ಲಿ ಕೊಬ್ಬಿನ ಮಿಶ್ರವಿಲ್ಲ.

ಸಾಂಬಕ್

Zam-Buk

ಅನ್ಯರಲ್ಲಿನ ಶಕ್ತಿಬಲಗಳನ್ನು ಕಂಡು ಬೆರಗಾಗುವಿರೇಕೆ? ಅದನ್ನು ನೀವೂ ಹೊಂದಲಾಗುವುದಿಲ್ಲವೇ? ಶಕ್ತಿಯುತ ಸ್ನಾಯು, ಗಟ್ಟಿಯಾದ ಮೆದುಳು, ಚೇತನಯುತ ದೇಹಗಳು ಪೂರ್ಣವೂ ಯುಕ್ತವೂ ಆದ ರಕ್ಷಣೆಯಲ್ಲಿದೆ.

'ಓವಲ್ಟಿನ್'ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಆಹಾರಸಾರವಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲುಗಳು ಅತ್ಯಮೂಲ್ಯ ಪಾನೀಯಗಳು; ದೇಹವೃದ್ಧಿಗೆ ಸಾಧಕವಾದವುಗಳು. ಬಲವನ್ನೂ ಶಕ್ತಿಯನ್ನೂ ಆರೋಗ್ಯವನ್ನೂ ಕೊಟ್ಟು ಕಾಪಾಡುತ್ತದೆ. ಅದ ಚೇತನದಾಯಕ ಗುಣವನ್ನು ನೀವು ಕೂಡಲೇ ಕಂಡುಹಿಡಿಯುವಿರಿ. ಆರೋಗ್ಯವನ್ನು ಹೊಂದುವಿ.

ನಿಮ್ಮ ಚಹಾಕ್ಕೆ 'ಓವಲ್ಟಿನ್' ಸೇರಿಸಿರಿ,—ಅದು ಆರೋಗ್ಯಕರ, ಬಲವರ್ಧಕ ಮತ್ತು ಶಕ್ತಿದಾಯಕ.

ಓವಲ್‌ಟಿನ್

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಾರುಗಳಲ್ಲಿಯೂ ಸಿಗುತ್ತದೆ.

ಏಜಂಟ್:—ಜೇಮ್ಸ್ ರೈಟ್, 8ಕ ಎ. ಮಿಶನ್ ಸ್ಟ್ರೀಟ್, ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ.

OV/241

ಸುಭಾಶ್ಚಂದ್ರ ಭೋಸರು

ಸಂಬೋಧಿಸಲ್ಪಡುತಿದ್ದ ಸುರೇಂದ್ರನಾಥ ಬೆನರ್ಜಿಯವರು ಪ್ರತಿನಿಧಿಗಳಾಗಿ ಬಂದಿದ್ದರು. ಈ ಮಹಾಸಂಸ್ಥೆಯ ಸ್ಥಾಪನಾಕಾರ್ಯದ ಮೊದಲಸಭೆಯಲ್ಲಿ ಪ್ರತಿಯೊಂದು ಪ್ರಾಂತ್ಯದಿಂದಲೂ ಪ್ರತಿನಿಧಿಗಳು ಬಂದಿದ್ದರು.

ಪ್ರಾರಂಭದಲ್ಲಿ ಈ ಸಂಸ್ಥೆಯ ಉದ್ದೇಶಗಳು ಬಹು ಸೌಮ್ಯವಾಗಿದ್ದುವು. ಆವಾಗ ಇಂಗ್ಲಿಷ್ ತಿಳಿದಿರುವ ವಿದ್ಯಾವಂತ ದೇಶೀಯರು ಒಬ್ಬರನ್ನೊಬ್ಬರು ತಿಳಿದುಕೊಂಡು ದೇಶದ ಸಾರ್ವಜನಿಕ ಹಿತಸಾಧನೆಯ ಕಾರ್ಯಕ್ರಮವೊಂದನ್ನು ನಿರ್ಧರಿಸಲು ಸಮರ್ಥರಾಗುವಂತೆ ಅವರೊಳಗೆ ಸಾಮಾಜಿಕ ಸಂಪರ್ಕವನ್ನು ಉಂಟುಮಾಡಲು ಕಾತರರಾಗಿದ್ದರು. ಆದಕಾರಣ ಅವರು ೧೮೮೫ನೇ ಕ್ರಿಸ್‌ಮಸ್ ಕಾಲದಲ್ಲಿ ಮುಂಬಾಯಿಯಲ್ಲಿ ಅಂತಹ ವಿದ್ಯಾವಂತರ ಸಭೆಯೊಂದನ್ನು ನೆರೆಯಿಸಲು ನಿರ್ಧರಿಸಿದರು.

ಈ ಸಂಧಿಯಲ್ಲಿ ವಾಚಕರ ಮನಸ್ಸಿನಲ್ಲಿ ಒಂದು ಸಹಜವಾದ ಪ್ರಶ್ನೆಯೇಳಬಹುದು — ಸರಕಾರವು ಈ ಸಭೆಯನ್ನು ಏಕೆ ತಡೆಗಟ್ಟಲಿಲ್ಲ? ಇದರಿಂದ ಕಳೆದ ಐವತ್ತು ವರ್ಷಗಳ ಎಲ್ಲಾ ರಗಳೆಗಳನ್ನೂ ಸುಲಭವಾಗಿ ನಿವಾರಿಸಬಹುದಾಗಿತ್ತು. ಬಹು ದೀರ್ಘವೂ ಶ್ರಮಪೂರ್ಣವೂ ಆದ ಸಂಶೋಧನೆಯಿಂದ ಸರಕಾರದ ಕೃತಕ ಉದಾಸೀನತೆಯ ನಿಜವಾದ ಉದ್ದೇಶವು ಈ ಪ್ರಕಾರ ಪ್ರಕಟವಾಗುವುದು. ಆ ಕಾಲದಲ್ಲಿ ರೈಲ್ವೇಗಳು ಆಗ ತಾನೇ ಸ್ಥಾಪಿತವಾಗಿದ್ದುವು. ಅವುಗಳಿಗೆ ಯೋಗ್ಯ ಆದಾಯವು ದೊರೆಯಬೇಕಾಗಿದ್ದುದರಿಂದ, ದೇಶೀಯರನ್ನು, ಅವರ ಉದ್ದೇಶವು ಪೂರ್ಣ ಪ್ರಕಟವಾಗದ ಕಾಲದಲ್ಲಿಯೂ, ಮುಂಚಿಗಿಂತಲೂ ವಿಶೇಷವಾಗಿ ಪ್ರಯಾಣಮಾಡಲು ಪ್ರೋತ್ಸಾಹಿಸುವುದು ರಾಜಕೀಯ ದೃಷ್ಟಿಯಿಂದ ವಿಹಿತವೆಂದು ಎಣಿಸಲ್ಪಟ್ಟಿತು. ಈ ರೀತಿಯಲ್ಲಿ ನಮ್ಮ ರಾಷ್ಟ್ರೀಯ ಆಂದೋಲನಕ್ಕೆ ಅದರ ಜನ್ಮಮುಹೂರ್ತದಿಂದಲೇ ಸಹಾಯ ಮಾಡಿದುದಕ್ಕಾಗಿ ರೈಲ್ವೇಗಳನ್ನು ನಾವು ಅಭಿವಂದಿಸಬೇಕಾಗಿದೆ. ಈಗಲೂ ರೈಲ್ವೇ ಅಧಿಕಾರಿಗಳು ರಾಷ್ಟ್ರೀಯ ಮುಖಂಡರ ದೇಶೀಯ ಪ್ರಯಾಣಗಳ ಕಾಲದಲ್ಲಿ ಏರ್ಪಾಡುಗಳನ್ನು ಮಾಡಲು ಸಿದ್ಧವಿರುವ "ಸ್ಪೆಶ್ಯಲ್ ಬಂದೋಬಸ್ತಿ"ನಿಂದ ಅವರ ಸಹಕಾರ ಸಂಬಂಧವು ಇನ್ನೂ ಇರುವುದೆಂಬುದು ಸ್ಪಷ್ಟವಾಗುವುದೆಂದು ಹೇಳಲು ಸಂತೋಷವಾಗುವುದು.

ಮೊದಲನೆಯ ಕೊಂಗ್ರೆಸ್, ಮುಂಬಯಿ—೧೮೮೫

ಅಧ್ಯಕ್ಷ: ಉಮೇಶಚಂದ್ರ ಬೆನರ್ಜಿ.

ಮೊದಲು "ಕನ್‌ವೆನ್‌ಶನ್" ಎಂದೂ, ಮತ್ತೆ "ಕೊಂಗ್ರೆಸ್" ಎಂದೂ ಕರೆಯಲ್ಪಟ್ಟ ಈ ಮೊದಲನೆಯ

ಶ್ರೀ ಭುಲಾಭಾಯಿ ದೇಸಾಯಿ.

ಸಭೆಯು ಮುಂಬಾಯಿಯಲ್ಲಿ ನಡೆಯಿತು. ಈ ಸಭೆಯಲ್ಲಿ ನೆರೆದು ಬಂದವರಲ್ಲಿ ಎ. ಓ. ಹ್ಯೂಮ್ ಎಂಬ ಒಬ್ಬ ಆಂಗ್ಲ ಮಹನೀಯರೂ, ಮತ್ತು ಈಗಲೂ ನಮ್ಮೊಡನೆ ಇರುವ ಕುಂಭಕೋಣದ ಪ್ರೊಫೆಸರ್ ಸುಂದರ ರಾಮನ್‌ರವರೂ ಸೇಲಮಿನ ವಿಜಯ ರಾಘವಾಚಾರ್ಯರೂ ಇದ್ದರು. ಈ ಮೊದಲಿನ ಕೊಂಗ್ರೆಸ್ಸಿನ ವಿಷಯಕವಾಗಿ ಇನ್ನೊಂದು ವೈಶಿಷ್ಟ್ಯವೇನೆಂದರೆ, ಸರಕಾರಿ ಅಧಿಕಾರಿಗಳೂ ಅದರಲ್ಲಿ ಭಾಗವಹಿಸಿ ಅಧಿವೇಶನಕ್ಕೆ ಬಂದಿದ್ದರು. ಅದರ ಮೊದಲನೆಯ ಕೆಲವು ವರ್ಷಗಳಲ್ಲಿ ಈ ಚಳವಳಿಯ ಮೂಲ ಸೂತ್ರದಾರರು ಮಹಾರಾಷ್ಟ್ರ ಧೀರರಾದ ಜಸ್ಟಿಸ್ ರಾನಡೆಯವರಾಗಿದ್ದರೆಂದು ಹೇಳುವರು. ಪ್ರಥಮ ಅಧ್ಯಕ್ಷರು ಬಂಗಾಳದ ಉಮೇಶಚಂದ್ರ ಬೆನರ್ಜಿಯವರಾಗಿದ್ದರು. ಆ ದಿವಸಗಳಲ್ಲಿ ವಿಶ್ವಭಾರತದ ಮುಂದಾಳುತನವು ಸಹಜವಾಗಿಯೇ ಬಂಗಾಳಿಗಳಿಗೆ ಸಲ್ಲುತಿತ್ತು. ಅವರು ಇತರ ಪ್ರಾಂತ್ಯದವರಿಗಿಂತ ಉತ್ತಮ ವಿದ್ಯಾವಂತರಾಗಿದ್ದು, ಹಿಂದುಸ್ಥಾನದ ಮುಖ್ಯಪಟ್ಟಣವು ಅವರ ಪ್ರಾಂತ್ಯದಲ್ಲೇ ಇತ್ತು. ಈ ಅಧಿವೇಶನದಲ್ಲಿ ಸತ್ಕೃತವಾದ ಭಾಷಣಗಳಾಗಿ, ಹಲವು ಠರಾವುಗಳೂ ಮಂಜೂರಾದುವು. ಬರ್ಮವು ಆಗ ತಾನೇ ಹಿಂದೂ ರಾಜ್ಯಾಧಿಪತ್ಯಕ್ಕೆ ಸೇರಿಸಲ್ಪಟ್ಟಿತ್ತು. ಕೊಂಗ್ರೆಸ್ ಬರ್ಮಾದೇಶದೊಳಗಿನ ಯುದ್ಧವನ್ನು ನಿಷೇಧಿಸಿ ಬರ್ಮವನ್ನು ಹಿಂದುಸ್ಥಾನಕ್ಕೆ ಸೇರಿಸದೆ ಅದನ್ನು "ಕ್ರೌನ್ ಕೊಲೊನಿ"ಯಾಗಿ ಬೇರೆಯಾಗಿ ಆಳಬೇಕೆಂದು ಠರಾವನ್ನು ಮಂಜೂರು ಮಾಡಿತ್ತು. ನಮ್ಮ ದೌರ್ಬಲ್ಯದಿಂದ ಅಂದಿನ ನಮ್ಮ ತಪ್ಪಿನ ಈ ಠರಾವಿನ ಫಲಿತವು ಇಂದಿನ ನಮ್ಮ ಹೊಸ ರಿಫೋರ್ಮುಗಳಲ್ಲಿ ಸಾಗಿ ದೊರೆತ ಮಂತಾಗಿರುವ ಸಂಭವವಿದೆ.

ಎರಡನೆಯ ಕೊಂಗ್ರೆಸ್, ಕಲ್ಕತ್ತಾ

ಅಧ್ಯಕ್ಷರು. ದಾಧಾಭಾಯಿ ನೌರೋಜಿಯವರು.

ಎರಡನೆಯ ಕೊಂಗ್ರೆಸ್ಸು ದಾಧಾಭಾಯಿ ನೌರೋಜಿಯವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾ ನಗರದಲ್ಲಿ ನೆರವೇರಿತ

ಪಂಡಿತ ಜವಾಹರಲಾಲ್ ನೆಹರುರವರು

ಅದು ವಿಕ್ಟೋರಿಯಾ ಮಹಾರಾಣಿಯವರ ಆಳ್ವಿಕೆಯ ವಜ್ರಮಹೋತ್ಸವದ ವರ್ಷವಾಗಿತ್ತು. ಮಹಾರಾಣಿಯವರಲ್ಲಿ ಅಗಾಧ ವಿಶ್ವಾಸ, ಭಕ್ತಿ, ಬ್ರಿಟಿಷ್ ರಾಜ್ಯಭಾರದಿಂದ ಪ್ರಯೋಜನಗಳು ಕೃತಜ್ಞತೆಗಳು ಕುರಿತಾಗಿ ಒಂದು ಠರಾವನ್ನು ಮಂಜೂರುಮಾಡಿ ಸನ್ಮಾನ ಸಾರವಾಗಿ ಮಹಾರಾಣಿಯವರಿಗೆ ಕಳುಹಿ ಕೊಡಲಾಯಿತು.

ಈ ಎರಡನೆಯ ಕೊಂಗ್ರೆಸ್ಸಿನಲ್ಲಿ ಒಂದು ವೈಶಿಷ್ಟ್ಯ ನಡೆಯಿತು. ಆಗಿನ ವೈಸರಾಯರಾದ ಲೋರ್ಡ್ ಡಫರಿನ್‌ರವರು, ದೇಶದ ಸಕಲ ಪ್ರಖ್ಯಾತ ದೇಶೀಯರು ಒಟ್ಟುಗೂಡುವಿಕೆಯಿಂದ ವಿಶೇಷ ಸಂತುಷ್ಟರಾಗಿ ಅವರನ್ನೆಲ್ಲಾ ತನ್ನ ನಿವಾಸಗೃಹದಲ್ಲಿ ಟೀಪಾರ್ಟಿಯಿಂದ ಸತ್ಕರಿಸಿದರು.

ಕೊನೆಯದಾಗಿ ಈ ಕೊಂಗ್ರೆಸ್ಸು ಲಂಡನಿನ ಟೈಮ್ಸ್ ಪತ್ರಿಕೆಯ ಕೋಪವನ್ನು ಸಂಪಾದಿಸಿತು. ಅದು ಕೊಂಗ್ರೆಸ್ಸಿನ ಪ್ರತಿನಿಧಿಗಳನ್ನು ಅತೃಪ್ತರಾದ ಸ್ಥಾನ ಸಂಶೋಧಕರುಗಳೆಂದು ಕರೆದು, ಅವರನ್ನು ಸ್ಥಿರಹಸ್ತದಿಂದ ಸ್ಥಾನಭ್ರಷ್ಟರನ್ನಾಗಿ ಮಾಡಿ ಮುಂದಿನ ಅಪಾಯವನ್ನು ಮೊಳಕೆಯಲ್ಲೇ ಮುರಿಯಬೇಕೆಂದು ಸರಕಾರವನ್ನು ಎಚ್ಚರಗೊಳಿಸಿತು. ಅದೃಷ್ಟವಶದಿಂದಲೋ, ದುರಾದೃಷ್ಟವಶದಿಂದಲೋ ಈ ರೀತಿಯಲ್ಲಿ ಕರೆಯಲ್ಪಟ್ಟವರಲ್ಲಿ ಹೆಚ್ಚಿನವರು ಸರಕಾರದಿಂದ ಬೇಟೆಯಾಡಲ್ಪಟ್ಟು, ಯೋಗ್ಯ ಉದ್ಯೋಗಗಳಿಂದ ಬಾಯಿ ಮುಚ್ಚಲ್ಪಟ್ಟರು!

ಮೂರನೆಯ ಕೊಂಗ್ರೆಸ್, ಮದ್ರಾಸು.

ಅಧ್ಯಕ್ಷರು—ತಯಾಬ್ಜಿಯವರು.

ಮೂರನೆಯ ಕೊಂಗ್ರೆಸು ಮದ್ರಾಸಿನಲ್ಲಿ, ಕಡೆಗೆ ಜಡ್ಜರಾದ ತಯಾಬ್ಜಿ ಎಂಬ ಮುಸ್ಲಿಮರ ಅಧ್ಯಕ್ಷತೆಯಲ್ಲಿ ನಡೆ



ವಲ್ಲಭಭಾಯಿ ಪಟೇಲರು.

ಯಿತು. ಸ್ವಾಗತಮಂಡಳಿಗೆ ರಾಜಾ ಸರ್ ಟಿ. ಮಾಧವರಾಯರು ಅಧ್ಯಕ್ಷರಾಗಿದ್ದರು. ಇಲ್ಲಿ ಇನ್ನಿಬ್ಬರು ಆಂಗ್ಲೇಯರು ಕೊಂಗ್ರೆಸಿಗೆ ಸೇರಿದರು. ಅವರೇ ಮಹಾವ್ಯಕ್ತಿಗಳಾದ ಐಯರ್ಡ್ಲಿ ನೋರ್ಟನ್ ಮತ್ತು ಪಚ್ಚಪ್ಪರ ಕೊಲಿಜಿನ ಪ್ರಿನ್ಸಿಪಾಲರಾದ ಜೋನ್ ಎಡವರ್ಡರವರು. ಪಂಡಿತ ಮಾಲವೀಯರು ಪ್ರಥಮ ಕೊಂಗ್ರೆಸ್ ರಂಗವನ್ನು ಪ್ರವೇಶಿಸಿದುದು ಇಲ್ಲಿಯೇ. ಆಗಿನ ನಮ್ಮ ಗವರ್ನರರಾದ ಲೋರ್ಡ್ ಕೊನೆಮಾರಾರವರೂ ಕೊಂಗ್ರೆಸ್ ಪ್ರತಿನಿಧಿಗಳನ್ನು ಉಪಹಾರದಿಂದ ಸತ್ಕರಿಸಿ ಕೊಂಗ್ರೆಸಿನಲ್ಲಿ ಸರಕಾರಕ್ಕಿದ್ದ ಉದಾರ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ನಾಲ್ಕನೆಯ ಕೊಂಗ್ರೆಸ್ ಅಲ್ಲಹಾಬಾದ್

ಅಧ್ಯಕ್ಷರು: ಜೋರ್ಜ್ ಯೂಲಿಯರ್.

ಅಲ್ಲಹಾಬಾದ್ ನಾಲ್ಕನೆಯ ಕೊಂಗ್ರೆಸ್ಸನ್ನು ಜರಗಿಸುವ ಗೌರವವನ್ನು ಪಡೆಯಿತು. ಆದರೆ ಅದು ನೆರೆಯುವ ಮೊದಲೇ ಸರಕಾರಿ ಅಧಿಕಾರವು ಅದರ ಮೇಲೆ ತನ್ನ ಪ್ರಭಾವವನ್ನು ತೋರಲು ಬಯಸಿತು. ಈ ಅಧಿವೇಶನಕ್ಕೆ ಬೇಕಾಗಿದ್ದ ಸೌಕರ್ಯಗಳನ್ನು ಸರಕಾರವು ನಿರಾಕರಿಸಿತು. ಆದರೆ ಕಾರ್ಯನಿರ್ವಾಹಕರು ಬಹು ಚತುರರಾಗಿದ್ದರು. ಒಬ್ಬ ಜಮೀನ್ದಾರರ ಭವನವನ್ನು ಗುಪ್ತವಾಗಿಯೇ ಬಾಡಿಗೆಗೆ ಪಡೆದ, ಸರಕಾರದ ಗೂಢತೃಪ್ತಿಯಿಂದ ಉಬ್ಬಿತ್ತರವತೆಯೇ ಅಧಿವೇಶನವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಸರಕಾರದ ಪ್ರಯೋಜಕವಾಗಿ ಅತಂಕಪಡಿಸಿದುದೇ ಅಧಿವೇಶನದ ವಿಜಯಕ್ಕೆ ಕಾರಣವಾಯಿತೆಂದು ಆಗಿನ ವೃತ್ತಾಂತಗಳಿಂದ ವ್ಯಕ್ತಪಡುವುದು. ಈ ವರ್ಷದ ಅಧ್ಯಕ್ಷರು ಯೂಲ್ ಎಂಬ ಒಬ್ಬ ಆಂಗ್ಲೀಯ ಮಹನೀಯರಾಗಿದ್ದರು. 'ಪಂಜಾಬ ಕೇಸರಿ'ಯೆನಿಸಿದ ಲಾಲಾ ಲಜಪತರಾಯರು ಕೊಂಗ್ರೆಸನ್ನು ಈ ವರ್ಷವೇ ಮೊದಲು ಪ್ರವೇಶಿಸಿದರು. ಗ್ಲೆಡ್‌ಸ್ಟನ್‌ರವರ ಸಹ ಕೊಂಗ್ರೆಸಿನ ವಿಜಯವನ್ನು ಕೋರಿ ಅಭಿನಂದನ ಪತ್ರವನ್ನು ಬರೆದಿದ್ದರೆಂದು ಪ್ರತೀತಿ ಇದೆ.

ಪ್ರತಿನಿಧಿಗಳೊಳಗೆ [illegible] ಮುದಲಿಯಾರರೆಂಬವರೊಬ್ಬರ (ಈಗ ಪ್ರಸಿದ್ಧರಾಗಿರುವ ರಾಮಸ್ವಾಮಿ ಮುದಲಿಯಾರರ ಪ್ರತೀಕ) ರಾಜಾ ಶಿವಪ್ರಸಾದರೆಂಬವರೊಬ್ಬರು ಕೊಂಗ್ರೆಸನ್ನು ಬಹಿರಂಗ ಅಧಿವೇಶನದಲ್ಲಿ ಅಭಿಕ್ರಮಿಸಿ ಒಂದು ಭಯಂಕರ ಪ್ರಸಂಗವನ್ನು ತಂದೊಡ್ಡಿದರು. ಇವರ ಈ ವರ್ತನವು ಸರಕಾರದ ಒತ್ತಾಯದಿಂದಲೇ ಆಗಿತ್ತೆಂದು ಹೇಳುವರು. ಪ್ರಸ್ತುತವಾಗಿಯೂ ಈ ರಾಷ್ಟ್ರೀಯ ಸಂಸ್ಥೆಯ ವಿರುದ್ಧವಾಗಿ ಪ್ರತಿಕಾರ್ಯವನ್ನು

ಮೌಲಾನಾ ಶೌಕತಾಲಿಯವರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದ ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದ ರೆಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭ ಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗ ಗಳ ಇನ್ನಿತರ ಅನೇಕ ನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು:

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರು ಗಳಿಂದ ರಚಿಸಲ್ಪಟ್ಟ ನಿಘಂಟುಗಳ ಉದಾರದಿಂದ ಸಾಧು ಶಿಕ್ಷೆಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧಿ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯು ಈ ಉದ್ದಿಶ್ಯಕ್ಕೆ ಎಲ್ಲಾ ಆಯು ರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ) ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ, ಎಂ. ಎಲ್.

ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿದೆ

ತಯಾರಿಸುವವರು — ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರು — ಸಿಟಿ ಮೆಡಿಕಲ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ರೇವಣಾತಿಗಳ ದರ

ನಿರಖು ಠೇವಣಾತಿಗಳು —3 ತಿಂಗಳಿಗೆ ಶೇಕಡಾ 5ರಂತೆ 6 ತಿಂಗಳಿಗೆ ಶೇಕಡಾ 6ರಂತೆ 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸ ಎಪಿ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur
Dated 10—4—1935

G N Lakshman Pai,
Secretary

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲೂ ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು

ಮೇಹಧ್ವಂಸಿನಿ.

(ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದು ಸ್ತ್ರೀಸಂಗವುದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯು ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ

ಕ್ರಯ:—ದೊಡ್ಡ ಬಾಟ್ಲಿಗೆ ರೂ 4 ಮಿಡಿಯಂ 2-4-0 ಚಿಕ್ಕದು 1-2-0

ತಯಾರಿಸುವವರು — ಲಸ್ಕರ್ ಡಿಪ್ಪೋ, ಚಿಕ್ಕಮಗಳೂರು.

ಬ್ರೇಂಚ್—ಚಿಕ್ಕಪೇಟೆ, ಬೆಂಗಳೂರು

ಮುಖ್ಯ ಏಜಂಟರು —ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಸ್ವದೇಶಾಭಿಮಾನಿ

ಉತ್ತಮವರ್ಗದ ವಾರಪತ್ರಿಕೆ.

ಇಂದೇ ಪಡಕೊಳ್ಳಿರಿ—ಓದಿರಿ!

ಯಿಸಲು ಸರಕಾರವು ಮಾಡಿದ ಯತ್ನಗಳಲ್ಲಿ ಮೊದಲನೆದನ್ನು ಅಲ್ಲಹಾಬಾದಿನ ಅಧಿವೇಶನವು ಕಂಡಿತು.

ಐದನೆಯ ಕೊಂಗ್ರೆಸ್, ಮುಂಬಾಯಿ.

ಅಧ್ಯಕ್ಷರು: ಸರ್. ವಿಲ್ಲಿಯಮ್ ವೆಡ್ಡರ್‌ಬರ್ನ್, ಎಮ್. ಪಿ.,

ಐದನೆಯ ಕೊಂಗ್ರೆಸ್ಸು ಸರ್ ವಿಲಿಯಮ್ ವೆಡ್ಡರ್‌ಬರ್ನ್ ಎಮ್. ಪಿ., ಇವರ ಅಧ್ಯಕ್ಷತೆಯಲ್ಲಿ ಮುಂಬಾಯಿಯಲ್ಲಿ ಜರಗಿತು. ತಿಲಕರು ಇಲ್ಲಿ ರಂಗಕ್ಕೆ ಇಳಿದರು. ಹಾಗೆಯೇ ಜಾತಿವಾರು ಭೂತವೂ ಇಲ್ಲೇ ತಲೆದೋರಿತು. ಮುಸ್ಲಿಮರಿಗೂ ಹಿಂದೂಗಳಿಗೂ ಸರಿಸಮಾನ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಕೇಳಿಕೆಯೇ "ರಿಫೋರ್ಮ್‌ಡ್ ಕೌನ್ಸಿಲು"ಗಳ ಮೇಲಿನ ಠರಾವುಗಳಲ್ಲಿ ಒಂದಾಗಿತ್ತು. ಗೋಖಲೆಯವರೂ ಇಲ್ಲೇ ಮೊದಲು ತೋರಿಸಿಕೊಂಡರು. ಅವರು ಸರಕಾರವು ಮಹಾರಾಣಿಯವರ ಪ್ರಖ್ಯಾತ ಪ್ರಸಿದ್ಧ ಪತ್ರದಲ್ಲಿನ ಪ್ರತಿಜ್ಞೆಗಳನ್ನು ಪೂರೈಸಲು ಹಿಂದೆಗೆದುದನ್ನು ಪ್ರತಿಭಟಿಸಿ ಈ ಸಂದರ್ಭದಲ್ಲಿ ಮಾಡಿದ ಭಾಷಣ ಅವರ ಪ್ರಸಿದ್ಧ ಭಾಷಣಗಳಲ್ಲಿ ಒಂದಾಗಿದೆ. ಹಾಗೆಯೇ ಆಗಲೂ, ಹಲವು ಪ್ರಸಿದ್ಧ ಪುರುಷರು ಮಹಾರಾಣಿಯವರ ಪ್ರಸಿದ್ಧ ಪತ್ರವನ್ನೂ, ಪ್ರತಿಜ್ಞೆಗಳನ್ನೂ ವಿವರಿಸಲು ಪ್ರಯತ್ನಪಟ್ಟರು.

ಈ ಸಲದ ಕೊಂಗ್ರೆಸ್ಸಿನ ವೈಶಿಷ್ಟ್ಯಗಳಲ್ಲಿ, ಹಿಂದುಸ್ಥಾನದ ವಾದವನ್ನು ಪುಷ್ಟೀಕರಿಸಿ, ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಮೆಂಬರ್‌ರೆಂದೆನಿಸಿಕೊಂಡ ಚಾರ್ಲ್ಸ್ ಬ್ರಾಡ್‌ಲಾಫ್, ಎಮ್. ಪಿ., ಇವರಿಗೆ ಒಂದು ಸ್ವಾಗತ ಪತ್ರವನ್ನು ಅರ್ಪಿಸಿದ್ದು ಒಂದಾಗಿದೆ.

ದಿವಂಗತ ಮೋತಿಲಾಲ ಘೋಷರವರು,
ಅಮೃತಬಜಾರ, ಕಲ್ಕತ್ತಾ.

ಆರನೆಯ ಕೊಂಗ್ರೆಸ್, ಕಲ್ಕತ್ತಾ.

ಅಧ್ಯಕ್ಷರು: ಫಿರೋಜ ಶಹಾ ಮೇಥಾರವರು.

ಈ ಕೊಂಗ್ರೆಸ್ಸಿನ ಅಧ್ಯಕ್ಷರು ಫಿರೋಜ ಶಹಾ ಮೇಥಾರವರಾಗಿದ್ದರು. ಇದರ ವೈಶಿಷ್ಟ್ಯವೆಂದರೆ, ಸರಕಾರವು ದೇಶೀಯ ಸರಕಾರಿ ಅಧಿಕಾರಿ"ಗಳು ಕೊಂಗ್ರೆಸ್ಸಿನಲ್ಲಿ, ಯಾವುದೇ ತರಹ ಭಾಗವನ್ನೂ ವಹಿಸಬಾರದೆಂದೂ, ಅಧಿವೇಶನವನ್ನು ಅವರು ಸಂದರ್ಶಿಸಲೂ ಕೂಡ ಬಾರದೆಂದೂ ಜಾಹೀರನಾಮೆಯನ್ನು ಪ್ರಕಟಿಸಿದುದು.

ಏಳನೆಯ ಕೊಂಗ್ರೆಸ್, ನಾಗಪುರ.

ಅಧ್ಯಕ್ಷರು: ಆನಂದಾಚಾರ್ಲು.

ಇದರ ಅಧ್ಯಕ್ಷತೆಯನ್ನು ಮದ್ರಾಸಿನ ಆನಂದಾಚಾರ್ಲುರವರು ವಹಿಸಿದ್ದರು. ಲಂಡನಿನಲ್ಲಿ ನೆರೆಯಲಿದ್ದ ಕೊಂಗ್ರೆಸ್ಸಿನ

ವಿ. ಜೆ. ಪಟೇಲರು.

ಶರ್ವಾಣಿಯವರು.

ವಿಶಿಷ್ಟ ಅಧಿವೇಶನದ ಸಾಧ್ಯಾಸಾಧ್ಯತೆಯ ಕುರಿತು ಚರ್ಚೆ ನಡೆದ ಪ್ರಥಮ ಕೊಂಗ್ರೆಸ್ ಇದಾಗಿತ್ತು. ಈ ಕೊಂಗ್ರೆಸ್ಸಿನಲ್ಲಿ ಇನ್ನೊಂದು ಮಹತ್ವದ ಪ್ರಸಂಗವು ನಡೆಯಿತು. "ಸಾಲ್ವೇಶನ್ ಆರ್ಮಿ"ಯ ಜನರಲ್ ಬೂತ್‌ರವರು ಈ ಕೊಂಗ್ರೆಸ್ಸಿಗೆ, ಹಿಂದುಸ್ಥಾನದ ಗ್ರಾಮವಾಸಿಗಳ ಪಾಡನ್ನು ಉನ್ನತಗೊಳಿಸುವುದಕ್ಕಾಗಿ, ಈ ರಾಷ್ಟ್ರೀಯ ಸಂಸ್ಥೆಯು ಗ್ರಾಮಗಳ ಪುನರ್ಘಟನೆಯ ಪ್ರಶ್ನೆಯನ್ನು ಕೈಕೊಳ್ಳುವುದು

ಕೃಷ್ಣರಾವ್, ಮುದವೇಡಕರ್,
ಕರ್ನಾಟಕ ವೃತ್ತ, ಧಾರವಾಡ.

ಹಿತಕರವೆಂದು ಬರೆದಿದ್ದರು. ಆದರೆ ಕೊಂಗ್ರೆಸ್ಸು ಬೇರೆ ವಿಷಯಗಳಲ್ಲೇ ಲೀನವಾಗಿದ್ದು, ಸರಕಾರದ ದೃಷ್ಟಿಯನ್ನು ವಿನಾಶಕಾರಿಯಾದ ಮಿಲಿಟರಿ ಖರ್ಚಿನ ಹೊರೆಯ ಕಡೆಗೂ ಹಿಂದೂಗಳಿಗೆ ಮಿಲಿಟರಿ ತರಬೇತನ್ನು ಕೊಡದಿರುವುದರ ಕಡೆಗೂ, ಮತ್ತು ಸುಧಾರಣೆಗಳ ಸತ್ವರ ಕೇಳಿಕೆಯ ಕಡೆಗೂ ಸೆಳೆಯಿತು.

ಎಂಟನೆಯ ಕೊಂಗ್ರೆಸ್, ಅಲ್ಲಾಹಾಬಾದ್.

ಅಧ್ಯಕ್ಷರು: ಉಮೇಶಚಂದ್ರ ಬೆನರ್ಜಿಯವರು.

ಪ್ರಥಮ ಕೊಂಗ್ರೆಸ್ಸಿನ ಅಧ್ಯಕ್ಷರಾದ ಬೆನರ್ಜಿಯವರೇ ಅಲ್ಲಹಾಬಾದಿನಲ್ಲಿ ನೆರೆದ ಈ ಸಲದ ಅಧ್ಯಕ್ಷ ಪೀಠವನ್ನು ಏರಿದ್ದರು.

ಒಂಭತ್ತನೆಯ ಕೊಂಗ್ರೆಸ್ ಲಾಹೋರ್.

ಅಧ್ಯಕ್ಷರು: ದಾಧಾಬಾಯಿ.

ದಾಧಾಭಾಯಿ ನೌರೋಜಿಯವರೇ ಈ ಕೊಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಈ ಅಧಿವೇಶನವು ಹಿಂದುಸ್ಥಾನದಲ್ಲಿ

ನಾರಾಯಣ ಜಿ. ಚಂದಾವರ್‌ಕಾರ್
ಲಾಹೋರ್ — ೧೯೦೦.

ಚಳವಳವನ್ನು ಎಬ್ಬಿಸುವ ಉದ್ದೇಶದಿಂದ ಲಂಡನಿನಿಂದ ಒಂದು ವಾರಪತ್ರಿಕೆಯನ್ನು ಹೊರಡಿಸುವುದಕ್ಕೆ ಠರಾಯಿಸಿತು. ಇದಕ್ಕನುಸಾರವಾಗಿ ಕೊಂಗ್ರೆಸ್ಸಿನ ಧನಸಹಾಯದಿಂದ "India" ("ಹಿಂದುಸ್ಥಾನದಿಂದ") ಎಂಬ ಪತ್ರಿಕೆಯು ಪ್ರಾರಂಭಿಸಲ್ಪಟ್ಟಿತು.

ಹತ್ತನೆಯ ಕೊಂಗ್ರೆಸ್, ಮದ್ರಾಸು.

ಅಧ್ಯಕ್ಷರು: ಅಲ್ಫ್ರೆಡ್ ವೆಬ್‌ರವರು.

ಮದ್ರಾಸಿನಲ್ಲಿ ನೆರೆದ ಈ ಕೊಂಗ್ರೆಸ್ಸಿಗೆ ಎ. ವೆಬ್ ಎಂಬ ಐರಿಶ್‌ಮೇನರು ಅಧ್ಯಕ್ಷರು. ಸ್ವಾಗತಾಧ್ಯಕ್ಷರು ಸ್ವಾಗತಾಧ್ಯಕ್ಷರು ರಂಗಯ್ಯ ನ್ಯಾಯುಡುರವರು. ದೇಶದೊಳಗೆ ಸಿದ್ಧವಾದ ಹತ್ತಿಯ ನೇಯಿಗೆ ಸುಂಕವನ್ನು ಹೇರಿಸುವುದರ ಸಂಬಂಧವಾದ ಠರಾವು ಈ ಭಾರಿಯ ಠರಾವುಗಳಲ್ಲಿ ಒಂದಾಗಿತ್ತು. ಈ ಸಲ ಸಂದರ್ಶಿಸಿದ ಪಾರ್ಲಿಮೆಂಟಿನ ಮೆಂಬರರಾದ ಮಿ। ಕೇಯಿನರು, ಹಿಂದೂಸ್ಥಾನದ ಸರಕಾರದ ಕಷ್ಟವೆಲ್ಲಾ ಆಡಳಿತದ ವಿಪರೀತ ಖರ್ಚಿನ ಮೂಲಕವೇ ಆಗಿರುವುದೆಂದೂ, ಅದನ್ನು ಹಿಂದೂ ಅಧಿಕಾರಿಗಳನ್ನು ನೇಮಿಸುವುದರಿಂದಲೂ ಇಳಿಸಬೇಕೆಂದೂ ಕ್ರಾಂತಿಕರ ಸೂಚನೆಗಳಿಂದ ಕೂಡಿದ ಭಾಷಣವನ್ನು ಕೊಟ್ಟರು. ಅವರು ವಿದೇಶೀಯ ರಾಜ್ಯಭಾರವು ಹೋಗಬೇಕೆಂದೂ ಹೇಳಿ, ಆಂಗ್ಲೇಯರು ಹಿಂದುದೇಶದ ಆ ಉದ್ದೇಶ ಸಾಧನೆಗಾಗಿ ಸಹಾಯ ಮಾಡಬೇಕೆಂದು ಕೋರಿದರು.

ಈ ಕೊಂಗ್ರೆಸ್ಸಿನ ವೈಶಿಷ್ಟ್ಯವೆಂದರೆ, ರಾಮನಾಡಿನ ರಾಜರು ಕೊಂಗ್ರೆಸ್ ಫಂಡಿಗೆ ಹತ್ತು ಸಾವಿರ ರೂಪಾಯಿಯ ಸಹಾಯ ಧನವನ್ನು ಅರ್ಪಿಸಿದ್ದು.

ಹಕೀಮ್ ಅಜಿದ್‌ರವರು,
ಅಹಮ್ಮದಾಬಾದ್.

ಹನ್ನೊಂದನೇ ಕೊಂಗ್ರೆಸ್; ೧೮೯೫- ಪೂನಾ;

ಅಧ್ಯಕ್ಷರು: ಸುರೇಂದ್ರನಾಥ ಬೆನರ್ಜಿಯವರು.

ಈ ವರ್ಷದ ಕೊಂಗ್ರೆಸ್ಸು ಒಂದು ಸಣ್ಣ ಸಮಸ್ಯೆಯನ್ನು ಎದುರಿಸಿ ಕಡೆಹಾಯಿಸಿತು. ರಾಷ್ಟ್ರೀಯ ಚಳವಳದ ಆರಂಭದಿಂದಲೂ ರಾಷ್ಟ್ರೀಯ ಸುಧಾರಣೆಗಳೊಂದಿಗೇ ಸಾಮಾಜಿಕ ಸುಧಾರಣೆಗಳ ಪ್ರಶ್ನೆಯನ್ನೂ ಕೊಂಗ್ರೆಸ್ಸು ಕೈಕೊಳ್ಳಬೇಕೆಂದು ಬಯಸುವ ಹಲವು ಸದ್ಭಾವನೆಯ ಮನುಷ್ಯರಿದ್ದರು. ಈ ವರ್ಷ ಈ ವಿಷಯದ ವಿವಾದವು ರಂಗಕ್ಕಿಳಿಯಿತು. ಮತ್ತು ಈ ಎರಡೂ ವಿಧದ ಸುಧಾರಣೆಗಳ ಪರವಾಗಿದ್ದ ಜಸ್ಟಿಸ್ ರಾನಡೆಯವರ ಸತ್ಪ್ರಯತ್ನವಿಲ್ಲದ ಪಕ್ಷದಲ್ಲಿ ಕೊಂಗ್ರೆಸ್ಸು ಎರಡು ಪಕ್ಷಗಳಾಗಿ ಒಡೆಯುತ್ತಿತ್ತು.

ಈ ಅಧಿವೇಶನದಲ್ಲೇ ಕೊಂಗ್ರೆಸ್ಸಿನ ರಾಜ್ಯಾಂಗವನ್ನು ರಚಿಸುವ ವಿಷಯವು ಚರ್ಚಿಸಲ್ಪಟ್ಟಿತು. ಹಿಂದೂಸ್ಥಾನದ

ಜಿ. ಕೆ. ದೇವಧರ್‌ರವರು.

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SANHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಎಳುವಾದ, ಗುಂಡಿಗೆಳೆದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಲಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಮೆಯಾಗುವುದು.

ಅನುಮಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ,- ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವು, ಮುಟ್ಟಾಗುವ ಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು; ಅಲ್ಲದೆ ಆಶ್ಚರ್ಯಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶಂವದರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಶ್ರಮವಿಲ್ಲ ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ, ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ ೨ ಮಾತ್ರ.

01.1.8 Bengal Mesmarism House
5-7 Panchpota, Bengal (S. B

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 6	3— 1[illegible]
ಹೊಸ ಮುಸ್ಕಿ	3—10	4—10
ಗುಡ್ಡ ಮುಗ್ಗಿ	3—12	4— 0
ಊರ ಅವ್ವಲ್ ಬೆಳ್ತಿಗೆ	4— 4	4—10
ರಂಗೂನು ಬೆ. ಗೋ. ಗಳ್ಸೆ	6— 4	7— 0
ಎಲ್ಲೂರು ಬೆ ಮೂ ಗಳ್ಸೆ	4— 4	4— 8
ಗೋಧಿ ಗೋಣಿ ಗಳ್ಸೆ	8 — 8	10— 4
ತೊಗರಿ ಗೋಣಿ ಗಳ್ಸೆ	[illegible] 0	9 — 6
ಹುರುಳಿ ಗೋಣಿ ಗಳ್ಸೆ	5— 8	—
ಕಡಲೆ ಗೋಣಿ ಗಳ್ಸೆ	7 — 1	9 — 8
ಕೊಂಗಡೇಕಿ ಗೋಣಿ ಗಳ್ಸೆ	11— 0	15— [illegible]
ಉದ್ದು ಗೋಣಿ ಗಳ್ಸೆ	9— 8	10 — 0
ಹೆಸರು ಗೋಣಿ ಗಳ್ಸೆ	9— 4	9—12
ಉಂಡೆಬೆಲ್ಲ ಖಂಡಿ ಗಳ್ಸೆ	35—	40— 8
ಉಪ್ಪು ಗೋಣಿ ಗಳ್ಸೆ	4— 8	4— 8
ಕೊಬ್ರಿ ಖಂಡಿ ಗಳ್ಸೆ	47— 8	55— 0
ಕೊಪ್ರ ಹಿಂಡಿ ಖಂಡಿ ಗಳ್ಸೆ	28— 0	28— 0
ಎಳ್ಳೆಂಡಿ ಖಂಡಿ ಗಳ್ಸೆ	35 — 0	35— 0
ಕೊಬ್ಬರಿ ಎಣ್ಣೆ ಮೂ ಗಳ್ಸೆ	4—10	5— 10
ಎಳ್ಳೆಣ್ಣೆ ಮ. ಗಳ್ಸೆ	7— 0	7— 0
ಹಿಮಾಲೆಣ್ಣೆ ಪೆಟ್ಟಿಗೆ ಗಳ್ಸೆ	6— 5	6— 5
ದೊಡ್ಡ ಸಕ್ಕರೆ ಮೂ ಗಳ್ಸೆ	5—10	5—10
ಮೆಣಸು	2— 8	4— 2
ಸಾಸಿವೆ ಮುಡಿ ಗಳ್ಸೆ	5 — 8	6— 0
ಕಾಳುಮೆಣಸು ಖ. ಗಳ್ಸೆ	102— 8	105—
ಯೇಲಕ್ಕಿ ಬೀಜ ಮಣಗಳ್ಸೆ	36— 0	39— 0
ಗೇರುಬೀಜ ಮೂ. ಗಳ್ಸೆ	4— 6	4 — 8
ಕಚ್ಚೂರ ಖಂಡಿ ಗಳ್ಸೆ	35— 0	37— 8
ತಾಂಬ್ರತಗಡು ಮ. ಗಳ್ಸೆ	9— 12	9— 14
ತಾಂಬ್ರಪಾತ್ರೆಗಳು ಮ. ಗಳ್ಸೆ	12— 8	14— 0
ಹಿತ್ತಾಳೆ ಸೇರು ಗಳ್ಸೆ	17— 8	18— 0
ಹಿತ್ತಾಳೆ ತಗಡು ಮ. ಗಳ್ಸೆ	10— 0	10— 8
ಹಪ್ಪಳ ಗಳ್ಸೆ	22— 8	22— 8
ಹುಣಸೆ ಹುಳಿ ಖಂಡಿ ಗಳ್ಸೆ	20— 0	25— 8
ನೇಟಿವ್ ಕಾಫಿ ಖಂಡಿ ಗಳ್ಸೆ	150— 0	155— 0
ಫಿಟೇರಿ ಕಾಫಿ ಖಂಡಿ ಗಳ್ಸೆ	180— 0	152— 8
ಮುಡಿಕೇರಿ ಏಲಕ್ಕಿ	25— 0	20 — 0
ಸಕಲೇಶಪುರ ಏಲಕ್ಕಿ	28— 0	80 — 0
ಹೊಸ ಅಡಿಕೆ	100—0	110—0

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಕ್ರಿಮ ಸಂಖ್ಯೆ 156/1915

ಕ್ರಿಮ ಅಮಲ್ದಾರಿ ಅರ್ಜಿ ನಂಬ್ರ 854/1935

ಮಾಳಮ್ಮ, ನಾರಾಯಣ ಪೈಗಳ ವಿಧವೆ ಪುತ್ತೂರು ತಾಲೂಕು ಕರಾಯ ಗ್ರಾಮ— ಅರ್ಜಿದಾರಳು

ಮತ್ತು

ಮುಕುಂದ ಪೈ ಕೂಡಾ—ಎದ್ರಿರು

8ನೇ ಎದ್ರಿ, ಗೋಪಾಲ ಪೈ, ದಾಮೋದರ ಪೈ ಮಗ, ಬೊಂಬಾಯಿ ಶಹರಾ ಮಹಿ ನಂಬ್ರ 16 ಇವರಿಗೆ—

ಮೇಲ್ಕಂಡ ಅಮ್ಲುಜಾರಿಯಲ್ಲಿ ಅರ್ಜಿದಾರಳಿಗೆ ಆದ ಡಿಕ್ರಿ ಪರಾಭಾರೆ ಮಂಜೂರು ಮಾಡಬೇಕಾಗಿ ವಗೈರೆ ಅರ್ಜಿದಾರಳು ಮಾಡಿದ ಮೇಲಿನ ಅಮ್ಲುಜಾರಿಯು ತಾ 9-1-'36ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಸದ್ರಿ ಮ್ಯಾದಿಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ

Puttur, 20-12-'35. } B Mangesha Rao, *Pleader for Petitioner*

The Kanara Enterprise Ltd, Puttur

ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್, ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ನಗದು ಋಣದಲ್ಲಿ ಪಡಕೊಂಡ ಅಸ್ಲು ಬಡ್ಡಿ ವಿವೇಜನ್ನು ಬಾಕಿಕೊಳ್ಳಲಾಗಿ ಅವರಿಗೆ ರಿಜಿಸ್ಟ್ರಿ ನೋಟೀಸು ಮೃತಪಟ್ಟ ಕಾರಣ ವಾಪಸು ಬಂದಿರುತ್ತದೆ ಸಂಬಂಧಪಟ್ಟವರ ವಾರೀಸುದಾರರು ತಮ್ಮ ವಾರೀಸು ಹಕ್ಕನ್ನು ಬ್ಯಾಂಕಿಗೆ ರುಜುವಾತುಪಡಿಸಿ ತಾ 4-1-1936ರೊಳಗೆ ನಗಗಳನ್ನು ಬಿಡಿಸಿ ಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ತಾರೀಕು 11-1-1936ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಸದರಿ ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ, ಬ್ಯಾಂಕಿಗೆ ಬರತಕ್ಕ ಅಸ್ಲುಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ವ ಈ ನೋಟೀಸು ಖರ್ಚು ಕೂಡಾ ವಸೂಲುಮಾಡಿಕೊಳ್ಳಲಾಗುವುದು.

ಸಾಲದ ನಂಬ್ರ 188/812 ತಾರೀಕು 12-4-1934 ಸಾಲಗಾರನ ಹೆಸರು ಮತ್ತು ವಿಳಾಸ. ಕೇಸು ಶೆಟ್ಟಿ, ತ್ಯಾಂಪು ಶೆಟ್ಟಿ ಮಗ, ಬೊಳ್ತಿಲ ಗ್ರಾಮ ಸುರಿಕುಮೇರಿ ಪೋಸ್ಟು. ಅಸ್ಲು ರೂ. 80—0—0.

ಪುತ್ತೂರು, 21-11-35. } G. N Lakshman Pai, *Secretary*.

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು:—ಸ್ವಾಮಿ ಆನಂದರಾಯರೆ ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ಸೂಚಿಸಿರುವೆನು

ಆನಂದರಾಯರು:—ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಸಿದೆ

ಕೃಷ್ಣರಾಯರು:— 'ಅದರ ಕ್ರಯವೆಷ್ಟು?'

ಆನಂದರಾಯರು:—ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ಮೊದಲಾದ ಸೀರೆಗಳು ಸಿಗುತ್ತವೆ, 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ ಪಡಲು ಬುಟ್ಟಾ ಇರುವುದು 18 ಮೊಳ ಸೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪಡಲು ಸದ ಸೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಿಕೆ ಕಣಕ್ಕೆ ರೂ 1-6-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಪಂಚೆ ಮುಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ 5 ಮೊಳದ ಪಂಚೆ 1ಕ್ಕೆ ರೂ 1ರಿಂದ 16ರ ವರೆಗೆ, 6 ಮೊಳದ ಪಂಚೆ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯೆಲ್ಲಾ ತರದ ವಸ್ತ್ರಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕಲೆಯಾಗಿಸೊಡನೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under graduates and S S L C's and also for those who have not passed any University examination

Coaches students for the Specialised Banking Courses (C A I B & C A I I B) and also for Accountancy, Secretarial, and Insurance Courses (L A A, A C R A, F C R. A, F I. S A, A C I I, etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW Classes are in full swing Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D R Murdeshwar,
Dip Econ; B R Econ; S. (Lond.)
Principal
Ganapathy High School Street,
Mangalore.

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾರ್ಗಶಿರ ಬ। ೧೧ ಶನಿವಾರದಿಂದ ಪುಷ್ಯ ಶು। ೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯ ಧನು ಪೆರಾರ್ದ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
28	ಶನಿ	೩	೪೫	ಶ್ರವಣ	೫೪	೧೪	[illegible]
29	ರವಿ	೪	೪೦	ಧನಿಷ್ಠಾ	೫೦	೧೪	
30	ಸೋಮ	೫	೨೫	ಶತಭಿಷಾ	೪೪	೧೫	
31	*ಕುಜ	೬	೧೯	ಪೂ. ಭಾದ್ರ	೪೩	೧೬	
1	ಬುಧ	೭	೧೪	ಉ. ಭಾದ್ರ	೪೮	೧೭	
2	ಗುರು	೮	೮	ರೇವತೀ	೪೫	೧೮	
3	ಶುಕ್ರ	೯	೫೪	ಅಶ್ವಿನೀ	೪೦	೧೯	

ರಾಜ್ಯಾಂಗವು ಕ್ರಮೇಣ ಬೆಳೆಯುತ್ತ ಬಂದಂತೆಯೇ ಕಾಂಗ್ರೆಸ್ ಕೂಡ ಮೆಲ್ಲಮೆಲ್ಲನೆ ತನ್ನ ಗುಣವನ್ನು ಬದಲಾಯಿಸುತ್ತ ಬಂದಿರುವುದು. ಈ ಬದಲಾವಣೆಗಳಲ್ಲಿ ಮೊದಲನೆಯದು ಪೂನಾ ಅಧಿವೇಶನದಲ್ಲಿ ಉಂಟಾಯಿತು

ಹಿಂದೂ ಸೈನ್ಯಗಳನ್ನು ಇಂಗ್ಲೀಯರ ಪರದೇಶಗಳಲ್ಲಿನ ಯುದ್ಧಗಳಿಗಾಗಿ ಉಪಯೋಗಿಸುವುದನ್ನು ನಿಷೇಧಿಸಿಯೂ, ಹಾಗೆ ಉಪಯೋಗಿಸುವ ಸಂದರ್ಭಗಳ ವೆಚ್ಚವನ್ನು ಸಾರ್ವಭೌಮ ಸರಕಾರವೇ ವಹಿಸಬೇಕೆಂದು ವಾದಿಸಿಯೂ ಒಂದು ಠರಾವು ಮಂಜೂರಾಯಿತು - ಇಂತಹ ವೆಚ್ಚವೇ ಹಿಂದೂಸ್ಥಾನದ ರಾಷ್ಟ್ರೀಯ ಸಾಲವನ್ನು ಹೆಚ್ಚಿಸುತ್ತಿರುವುದೆಂಬುದೇ ಇದರ ವಾದ

ಕಸ್ತೂರಿ ರಂಗ ಅಯ್ಯಂಗಾರ್

ಕೊಂಡ ವೆಂಕಟಪ್ಪಯ್ಯ

ಈ ಕಾಂಗ್ರೆಸ್ಸಿನ ರಂಗದಲ್ಲೇ ದಕ್ಷಿಣ ಆಫ್ರಿಕದ ಪ್ರಶ್ನೆಯು ಮೊದಲು ಪ್ರವೇಶಿಸಿತು. ಮದ್ರಾಸಿನ ಪರಮೇಶ್ವರನ್ ಪಿಳ್ಳೆಯವರು ದಕ್ಷಿಣ ಆಫ್ರಿಕದೊಳಗಿನ ಹಿಂದೀಯರ ಸಂಕಷ್ಟಗಳನ್ನು ನಿವೇದಿಸಿ ತಂದ ಠರಾವನ್ನು ಮಂಜೂರು ಮಾಡಲಾಯಿತು

ಈಗ 'ಸರ್' ಬಿರುದನ್ನು ಪಡೆದಿರುವ ಡಿ. ಇ. ವಾಚಾ ಎಂಬವರು ಪರದೇಶಗಳಿಂದ ಇಲ್ಲಿಗೆ ಆಮದಾಗುವ ಹತ್ತಿಯ ಸರಕುಗಳ ಮೇಲೆ ಸುಂಕವನ್ನು ಹೇರಬೇಕೆಂದು ಸೂಚಿಸಿದ ಠರಾವು ಕೂಡ ಮಹುರಿಯ ತುಟಿಸೀರಾ... ಮಾತಾದವರ ಪುಷ್ಟೀಕರಣದಿಂದ ತೀರ್ಮಾನವಾಯಿತು

ಹನ್ನೆರಡನೇ ಕಾಂಗ್ರೆಸ್, ೧೮೯೬ ಕಲ್ಕತ್ತಾ

ಅಧ್ಯಕ್ಷರು ಒನರೆಬಲ್ ಮಹಮದ್ ರಹಿಮತುಲ್ಲಾ ಸಯಾನಿಯವರು

ವಿಕ್ಟೋರಿಯಾ ಮಹಾರಾಣಿಯವರ ರಾಜ್ಯಭಾರದ ರಜತೋತ್ಸವದ ಸಂಪೂರ್ತಿಯ ಸಂತೋಷವನ್ನು ಸೂಚಿಸುವ ಠರಾವು ಈ ವರ್ಷದ ಮೊದಲನೆಯ ಠರಾವುಗಳಲ್ಲಿ ಒಂದಾಗಿತ್ತು ಕಾಂಗ್ರೆಸ್ಸಿನ ಬ್ರಿಟಿಷ್ ಕಮಿಟಿಯು ಕೇಯಿನ್ಸ್ ಎಂಬವರನ್ನು ಈ ವರ್ಷದ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಕಳುಹಿಸಿತ್ತು

ತಿಲಕರು ಒಂದು ಹೊಸ ವಿಷಯದ ಠರಾವನ್ನು ಸೂಚಿಸಿದರು ಆ ಕಾಲದಲ್ಲಿ ಪ್ರಾಂತಿಕ ಸರಕಾರಗಳ ಉಳಿತಾಯಗಳನ್ನು ಕೇಂದ್ರ ಸರಕಾರವು ತನ್ನ ಉಪಯೋಗಕ್ಕಾಗಿ ಅಧಿಕಾರಯುಕ್ತವಾಗಿಯೇ ಕೊಂಡೊಯ್ಯುತ್ತಿತ್ತು ಕೇಂದ್ರ ಸರಕಾರಕ್ಕೆ ಕೊಡುವ ಧನವನ್ನು ನಿರ್ದಿಷ್ಟಗೊಳಿಸಿ, ಪ್ರಾಂತ ಸರಕಾರಗಳಿಗೆ ತಮ್ಮ ಸ್ಥಿತಿಯನ್ನು ಅಭಿವೃದ್ಧಿಪಡಿಸುವ ಸ್ವಾತಂತ್ರ್ಯವನ್ನು ಕೊಡಬೇಕೆಂದು ಕೇಳಿಕೊಳ್ಳಲಾಯಿತು ವಿದ್ಯಾ ಉನ್ನತ ಅಧಿಕಾರಗಳನ್ನು ಯುರೋಪಿಯನರಿಗಾಗಿ ಕಾದಿರಿಸಿ ಪ್ರಾಂತಿಕ ನೌಕರಿಯನ್ನು ಮಾತ್ರ ಹಿಂದೂಗಳಿಗೆ ಕೊಡುವ "ವಿದ್ಯಾವಿಷಯಕ ಸುಧಾರಣೆ"ಯನ್ನು ನಿಷೇಧಿಸಲಾಯಿತು ಹೊಸ ಯೋಜನೆಯ ಅನುಸಾರ ಕೆಲವು ಸರಕಾರಿ ಕಾಲೇಜುಗಳು ಸಂಪೂರ್ಣವಾಗಿ ಯುರೋಪಿಯನ್ನರಿಗಾಗಿಯೇ ಮೀಸಲಿರಿಸಲ್ಪಟ್ಟಿದ್ದವು ಆದರೆ ಈಗ ವಿದ್ಯಾಧಿಕಾರಿಗಳಲ್ಲಿ ಬಹು ಅಲ್ಪಸಂಖ್ಯಾಕರು ಮಾತ್ರ ಯುರೋಪಿಯನರಾಗಿರುವರು. ಈ ಪ್ರಗತಿಯು ಈ ಕಾಂಗ್ರೆಸ್ಸು ಪ್ರಥಮತಃ ಮಾಡಿದ ವಿಶ್ವಪ್ರಯತ್ನಗಳ ಪ್ರತಿಫಲವಾಗಿರುವುದು.

ಆಗಿನ ಎಕ್ಸಿಕ್ಯೂಟಿವ್ ಕೌನ್ಸಿಲುಗಳಲ್ಲಿ ಸ್ಥಾಯಿ ನೌಕರರೊಳಗಿಂದ ಚುನಾಯಿಸಲ್ಪಟ್ಟ ಇಬ್ಬರೇ ಸದಸ್ಯರಿರುತ್ತಿದ್ದರು ಆದರೆ ಈ ಕಾಂಗ್ರೆಸ್ಸು, ಸರಕಾರವು ಸಮಸ್ಯೆಗಳ ದ್ವಿಪಕ್ಷವಾದಗಳನ್ನೂ ಕೇಳಿ ತನ್ನ ವಿಶಿಷ್ಟ ಮತವನ್ನು ಕೊಡಲು ಅನುಕೂಲವಾಗುವಂತೆ ಸರಕಾರಿ ನೌಕರನಲ್ಲದೆ ಒಬ್ಬ ಹಿಂದೀಯ ಸದಸ್ಯನನ್ನು ಆರಿಸಬೇಕೆಂದು ಠರಾಯಿಸಿತು

ಭೂಕಂದಾಯವನ್ನು ಆಗಿಂದಾಗ ಹೆಚ್ಚಿಸುವ ಉದ್ದೇಶದಿಂದ ಸರಕಾರವು ಆಗಿಂದಾಗ ಮಾಡುತ್ತಿರುವ ಸೆಟ್ಲ್‌ಮೆಂಟಿನ ಕ್ರಮವು ಇಲ್ಲಿ ಬಹು ತೀಕ್ಷ್ಣ ವಿಮರ್ಶೆಗೆ ಗುರಿಯಾಯಿತು ಈ ಸಮಸ್ಯೆ ಇಂದಿಗೂ ಅಂದಿನಷ್ಟೇ ಕಠಿಣವೂ ಆವಶ್ಯಕವೂ ಆಗಿರುವುದು

ಮೊದಲು 'ಸರ್' ಬಿರುದನ್ನು ಪಡೆದ ನಂತರ ಲೋರ್ಡ್ ಪದವಿಗೇರಿದ ಸತ್ಯೇಂದ್ರ ಪ್ರಸನ್ನ ಸಿಂಹರು ಕಾಂಗ್ರೆಸ್ ರಂಗಭೂಮಿಗಿಳಿದುದು ಈ ವರ್ಷವೇ ಇವರು, ಸರಕಾರದ ಯಾವ ದೇಶೀಯ ರಾಜರನ್ನೂ ಬಹಿರಂಗ ವಿಚಾರವಿಲ್ಲದೆ ಸಿಂಹಾಸನ ಭ್ರಷ್ಟರಾಗಿ ಮಾಡಬಾರದೆಂಬ ಠರಾವನ್ನು ತಂದರು

ಹದಿಮೂರನೇ ಕಾಂಗ್ರೆಸ್, ೧೮೯೭ — ಅಮರಾವತಿ

ಅಧ್ಯಕ್ಷರು: ಶಂಕರನ್ ನಾಯರ್‌ರವರು.

ಈ ವರ್ಷ ದೇಶದಲ್ಲಿ ಕ್ಷಾಮದಿಂದಲೂ ಪ್ಲೇಗಿನಿಂದಲೂ ಬಹು ಕ್ಷೋಭೆಯುಂಟಾಗಿತ್ತು ಈ ಸಂಬಂಧದ ಸರಕಾರದ ವರ್ತನದಿಂದ ಪ್ರಜೆಗಳು ಹತಾಶರಾಗಿದ್ದರು

ಎನ್. ಜಿ. ಚಂದಾವರ್ಕರ್

ಟಿ. ಪ್ರಕಾಶಮ್

ನಡುವೆ ರೇಂಡ್ ಮತ್ತು ಎಯರ್ಸ್ಟ್ ಎಂಬಿಬ್ಬರು ಯುರೋಪಿಯನರ ಕೊಲೆಯಾಗಿ ದೇಶವೆಲ್ಲಾ ಭಯವಿಹ್ವಲವಾಗಿತ್ತು ಆಂಗ್ಲೋ ಇಂಡಿಯನ್ ಪತ್ರಿಕೆಗಳು ಇದರ ದೋಷವನ್ನು ಕಾಂಗ್ರೆಸ್ಸಿನ ಮೇಲೆ ಹೊರಿಸಿದ್ದುವು ಇದರಿಂದ ಕಾಂಗ್ರೆಸ್ ಅಧಿವೇಶನವು ಸರಕಾರದಿಂದ ನಿಷಿದ್ಧವಾಗುವುದೋ ಎಂಬ ಸಂಶಯವಿತ್ತು ಆದರೆ ಹಾಗಾಗದೆ ಎಂದಿನಂತೆ ಕಾಂಗ್ರೆಸ್ಸು ಕ್ರಮಪ್ರಕಾರ ನೆರೆಯಿತು ತಿಲಕರು ರಾಜದ್ರೋಹದ ಅಪಾದನೆಯ ಮೇಲೆ ಕಾರಾಗೃಹಕ್ಕೆ ಕಳುಹಲ್ಪಟ್ಟರು ಸರಕಾರದ ಪ್ಲೇಗ್ ನಿವಾರಣೋಪಾಯಗಳನ್ನು ವಿರೋಧಿಸಿದ ಪೂನೆಯ ನಾಥು ಎಂಬವರಿಗೆ ಗಡೀಪಾರು ಶಾಸನದ ಅನುಭವವಾಯಿತು

ಠರಾವುಗಳಲ್ಲಿ ಒಂದು ಪತ್ರಿಕಾ ಮುದ್ರಾಲಯದ ಸ್ವಾತಂತ್ರ್ಯವನ್ನು ಕಿರಿದು ಮಾಡಿದುದನ್ನು ನಿಷೇಧಿಸಿತು ಆಂಗ್ಲೋ ಇಂಡಿಯನ್ ಪತ್ರಿಕಾ ಮುದ್ರಾಲಯಗಳು ಮಾತ್ರ ಈ ಕಾನೂನುಗಳ ಆಚರಣೆಯಿಂದ ಬಾಹಿರವಾಗಿದ್ದುವು.

ಹದಿನಾಲ್ಕನೇ ಕಾಂಗ್ರೆಸ್, ೧೮೯೮ — ಮದ್ರಾಸು

ಅಧ್ಯಕ್ಷರು: ಆನಂದಮೋಹನ ಬೋಸರು

ಈ ವರ್ಷದ ಅಧ್ಯಕ್ಷ ಭಾಷಣದಲ್ಲಿ ಒಂದು ವೈಚಿತ್ರ್ಯ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನಕ್ಕೆ ಪ್ರತ್ಯಕ್ಷವಾದ ಪ್ರಾತಿನಿಧ್ಯವಿರಬೇಕೆಂದು ಸೂಚಿತವಾಗಿತ್ತು ಕಾಂಗ್ರೆಸ್ಸು ಇಡೀ ವರ್ಷವೆಲ್ಲ ಕಾರ್ಯದಲ್ಲಿರಬೇಕೆಂಬ ಇನ್ನೊಂದು ಕ್ರಾಂತಿಕಾರಕ ಸೂಚನೆಯೂ ಇತ್ತು.

ಸರಕಾರವು 'ತೀವ್ರವಾದಿ ದೇಶೀಯ' ಮುದ್ರಾಲಯಗಳನ್ನು ಮಿತಿಯಲ್ಲಿರಿಸಲು, ಅಂದರೆ ಶಿಕ್ಷಿಸಲು, ಸ್ಥಾಪಿಸಿದ ಗೂಢ ಮುದ್ರಾಲಯ ಸಮಿತಿಗಳನ್ನು ನಿಷೇಧಿಸಿ ಮಂಜೂರಾದ ಠರಾವು ಈ ವರ್ಷದ ಹೊಸ ಠರಾವುಗಳಲ್ಲಿ ಒಂದು, ಈ ಠರಾವಿನ ಮೇಲೆ ಒಬ್ಬ ಆಂಗ್ಲೇಯರು ಭಾಷಣಕೊಟ್ಟರು

ಸ್ವಾಮಿ ಶಂಕರಾಚಾರ್ಯ,

ಹದಿನೈದನೇ ಕಾಂಗ್ರೆಸ್, ೧೮೯೯ ಲಕ್ನೋ

ಅಧ್ಯಕ್ಷರು: ರಮೇಶಚಂದ್ರ ದತ್ತರು

ಬಂಗಾಳದ ಡಾ| ಸರ್ ನೀಲರತ್ನ ಸರ್ಕಾರರ ವೈದ್ಯವೃತ್ತಿಯ ಸಿವಿಲ್ ಮತ್ತು ಮಿಲಿಟರಿ ಶಾಖೆಗಳ ವಿಂಗಡಿಸುವಿಕೆಯ ಪರವಾಗಿ ಮಾತಾಡಿದರು

ಉಪಾಧ್ಯಾಯರೂ, ಶಾಲಾ ವ್ಯವಸ್ಥಾಪಕರೂ ರಾಜಕೀಯದಲ್ಲಿ ಭಾಗವಹಿಸಬಾರದೆಂಬ ಕಾನೂನನ್ನು ನಿಷೇಧಿಸಿ ಠರಾವಾಯಿತು.

ಹದಿನಾರನೇ ಕಾಂಗ್ರೆಸ್, ೧೯೦೦ — ಲಾಹೋರ್.

ಅಧ್ಯಕ್ಷರು: ಜಸ್ಟಿಸ್ ಚಂದಾ ವರ್ಕಾರರು

ಈ ಕಾಂಗ್ರೆಸ್ಸಿನಲ್ಲಿ ಪಂಜಾಬಿನ ಸಮಸ್ಯೆಗಳನ್ನು ಚರ್ಚಿಸಿ ಠರಾವುಗಳಾದುವು

ಹದಿನೇಳನೇ ಕಾಂಗ್ರೆಸ್, ೧೯೦೧ — ಕಲ್ಕತ್ತಾ

ಅಧ್ಯಕ್ಷರು: ಸರ್ ಡಿ. ಇ. ವಾಚಾರವರು

ಈ ವರ್ಷ ವಿಕ್ಟೋರಿಯಾ ಮಹಾರಾಣಿಯವರ ರಾಜ್ಯಭಾರ ಕೊನೆಗಂಡಿತಲ್ಲದೆ ಜಸ್ಟಿಸ್ ರಾನಡೆಯವರು ದಿವಂಗತರಾದರು

ಗಾಂಧಿಯವರು ಈ ಕಾಂಗ್ರೆಸ್ಸಿನಲ್ಲಿ ಪಕ್ಕನೆ ಕಾಣಿಸಿಕೊಂಡು ದಕ್ಷಿಣ ಆಫ್ರಿಕದಲ್ಲಿನ ಒಂದು ಲಕ್ಷ ಬ್ರಿಟಿಷ್ ಹಿಂದೀಯರ ಪರವಾಗಿ ಒಂದು ಠರಾವನ್ನು ತಂದರು ಈ ಅಧಿವೇಶನದಲ್ಲಿ ಹಾಜರಿದ್ದ ಸ್ಮಿತ್ ಎಂಬ ಒಬ್ಬ ಐರಿಷ್‌ನವನು ತನ್ನ ಅಭಿಪ್ರಾಯವನ್ನು ಕೊಡುವ ಸಂದರ್ಭದಲ್ಲಿ, ಹಿಂದೂ ಕಾಂಗ್ರೆಸ್ಸಿನ ಸೌಮ್ಯ ಬೇಡಿಕೆಗಳನ್ನು ಕಂಡು ತಾನು ಚಕಿತನಾಗಿರುವೆನೆಂದೂ ಐರ್ಲೆಂಡ 'ಹೋಂ ರೂಲ್' ದೊರೆಯುವ ವರೆಗೆ ವಿಶ್ರಾಂತವಾಗದೆಂದೂ, ನಾವು 'ಹೋಮ್ ರೂಲ್' ಗಿಂತ ಕಡಿಮೆ ಯಾವುದನ್ನೂ ಬೇಡೆವೆಂದೂ ಸೂಚಿಸಿದನು. ಕಾಂಗ್ರೆಸ್ಸಿನವರೆಲ್ಲ ಇದನ್ನು ಕೇಳಿ ತಟಸ್ಥರಾದರು... ಒಂದೇ ವಿಷಯಕ್ಕಾಗಿ ಹೋರಾಡಬೇಕೆಂದು ಸೂಚಿಸಿದರು ... ಹಿತಸೂಚನೆಯನ್ನು ... ಸರಿಸಲ್ಪಡಲಿಲ್ಲ

ಸಿ. ರಾಜಗೋಪಾಲಾಚಾರ್ಯ

ಶ್ರೀನಿವಾಸ ಅಯ್ಯಂಗಾರ್

ಹದಿನೆಂಟನೇ ಕಾಂಗ್ರೆಸ್, ೧೯೦೨ — ಅಹ್ಮದಾಬಾದ್.

ಅಧ್ಯಕ್ಷರು: ಸುರೇಂದ್ರನಾಥ ಬೆನರ್ಜಿಯವರು

ಈ ಅಧಿವೇಶನಕ್ಕೆ ಬಂದವರಲ್ಲಿ ಜನರಲ್ ಕ್ರಿ... ನಾಯರರೆಂಬವರೊಬ್ಬರಿದ್ದರು ... ನಮ್ಮ ಗತ ... ರರೇ ಇವರಾಗಿರಬಹುದೋ ಎಂದು ಸಂಶಯವಾಗುತ್ತಿ... ಹೌದಾದರೆ ಇವರು ನಿಜವಾಗಿಯೂ ಭೀಷಣಪ್ರಾಯರೆ ಸ...

ಹತ್ತೊಂಭತ್ತನೇ ಕಾಂಗ್ರೆಸ್, ೧೯೦೩ — ಮದ್ರಾಸ್.

ಅಧ್ಯಕ್ಷರು: ಲಾಲ ಮೋಹನರು

ಈ ವರ್ಷ ಜರಗಿದ ದರ್ಬಾರಿನ ಕಾಲದಲ್ಲಿ ಯುರೋಪಿಯನ್ನರ ಮತ್ತು 'ದೇಶೀಯ'ರೊಳಗೆ ತೋರಿಸಿದ ವ್ಯಂ...

ಸತ್ಯಮೂರ್ತಿಯವರು.

ತ್ತಿಕ ಭೇದವನ್ನು ಈ ವರ್ಷದ ಅಧ್ಯಕ್ಷರು ಎತ್ತಿ ಮಾತನಾಡಿದರು. ಬರ್ಮವು ಈ ವರ್ಷ ಕಾಂಗ್ರೆಸ್ಸಿಗೆ ತನ್ನ ಮೊದಲನೆಯ ಪ್ರತಿನಿಧಿಯನ್ನು ಕಳುಹಿಸಿಕೊಟ್ಟಿತು.

೨೦ನೇ ಕಾಂಗ್ರೆಸ್: ೧೯೦೪ – ಮುಂಬಾಯಿ;

ಅಧ್ಯಕ್ಷರು: ಸರ್ ಹೆನ್ರಿ ಕೊಟನ್‌ರವರು

ಅಧ್ಯಕ್ಷ ಭಾಷಣದಲ್ಲಿ ಒಂದು ಭವಿಷ್ಯಸೂಚಕ ವಾಕ್ಯವಿತ್ತು. ಅಧ್ಯಕ್ಷರು, ತನ್ನ ದೃಷ್ಟಿಯಲ್ಲಿ ಹಿಂದೂಸ್ಥಾನದ ಭವಿಷ್ಯವು 'ಸ್ವತಂತ್ರ ಮತ್ತು ಪ್ರತ್ಯೇಕ ಸಂಸ್ಥಾನ, ಹಿಂದೂಸ್ಥಾನದ ಸಂಯುಕ್ತ ಸಂಸ್ಥಾನಗಳು' ಆಗಿರುವುದೆಂದು ನುಡಿದಿದ್ದರು.

ಡಾಕ್ಟರ್ ಮೂಂಜಿಯವರು ಈ ವರ್ಷ ಕಾಂಗ್ರೆಸ್ಸನ್ನು ಪ್ರವೇಶಿಸಿದ್ದರು.

೨೧ನೇ ಕಾಂಗ್ರೆಸ್ ೧೯೦೫ – ಬನಾರಿಸ್;

ಅಧ್ಯಕ್ಷರು: ಗೋಪಾಲಕೃಷ್ಣ ಗೋಖಲೆಯವರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಆಗ ದೇಶದಲ್ಲೆಲ್ಲಾ ಚಳವಳವನ್ನೆಬ್ಬಿಸಿದ ವ್ಯಾಸರಾಯರಾದ ಲೋರ್ಡ್ ಕರ್ಜನರ ಕ್ರಮವನ್ನು ಯೋಗ್ಯ ರೀತಿಯಿಂದ ವಿಮರ್ಶಿಸಿ, ಬ್ಯುರೋಕ್ರಸಿಯೊಡನೆ ಜನಾಂಗದ ಹಿತದ ದೃಷ್ಟಿಯಿಂದ ಸಹಕರಿಸುವ ಆಶೆಗೆ ತಿಲಾಂಜಲಿ ಕೊಟ್ಟರು.

ಈ ಅಧಿವೇಶನದ ಇನ್ನೊಂದು ವೈಶಿಷ್ಟ್ಯವೆಂದರೆ 'ಬೊಯ್‌ಕೊಟ್' ಮಾಡುವಿಕೆಯು ರಾಜಕೀಯ ಅಸ್ತ್ರವಾಗಿ ಪರಿಣಮಿಸಿದುದು. ಬಂಗಾಳದ ವಿಭಾಗೀಕರಣದ ಸಂಬಂಧವಾಗಿ ಈ ವಿಷಯವು ಚರ್ಚಿತವಾಗಿ ಕಾಂಗ್ರೆಸ್ ಈ ಯೋಚನೆಗೆ ತನ್ನ ಆಶೀರ್ವಾದವನ್ನು ಕೊಟ್ಟಿತು.

ಪ್ರತಿ ಪ್ರಾಂತ್ಯಕ್ಕೂ ಇಬ್ಬರು ಸದಸ್ಯರನ್ನು ಪಾರ್ಲಿಮೆಂಟಿಗೆ ಕಳುಹಲು ಬಿಡಬೇಕೆಂಬ ಕೇಳಿಕೆಯ ಠರಾವೊಂದು ಮಂಜೂರಾಯಿತಲ್ಲದೆ ಇತರ ನ್ಯಾಯ ವಿಷಯಕ ಸುಧಾರಣೆಗಳನ್ನೂ ಬೇಗನೆ ಕಾರ್ಯಕ್ಕೆ ತರಬೇಕೆಂದು ಠರಾಯಿಸಿದರು.

೨೨ನೇ ಕಾಂಗ್ರೆಸ್. ೧೯೦೬ – ಕಲ್ಕತ್ತಾ,

ಅಧ್ಯಕ್ಷರು: ದಾಧಾಭಾಯಿ ನೌರೋಜಿಯವರು

ಈಗ ಇವರು ೮೨ ವರ್ಷದವರಾಗಿ ನಿಜವಾಗಿಯೂ "ಹಿಂದೂಸ್ಥಾನದ ವೃದ್ಧಪಿತಾಮಹ"ರೇ ಆಗಿದ್ದರು. ಇವರ ಭಾಷಣವು ಗೋಖಲೆಯವರಿಂದ ಓದಲ್ಪಟ್ಟಿತು. ಈ ಸಲದ ಕಾಂಗ್ರೆಸ್ ಸಭಾ ಸಂದರ್ಶಕರಲ್ಲಿ ಬರೋಡದ ಗಾಯಕವಾಡರೂ ಒಬ್ಬರಾಗಿದ್ದರು.

ಈ ವರ್ಷದ ಮುಖ್ಯ ಠರಾವು ಬಂಗಾಳ ವಿಭಜನೆಯ ಕುರಿತಾಗಿತ್ತು. ಈ ಸಂಬಂಧವಾಗಿ ಅನೇಕ ಅತ್ಯುತ್ಕೃಷ್ಟ ಭಾಷಣಗಳಾದುವು. ಬಿಪಿನ ಚಂದ್ರಪಾಲರು ತಮ್ಮ ಭಾಷಣದಲ್ಲಿ, ಬೊಯ್‌ಕೊಟ್ ಅಸಹಕಾರ, ಅಧಿಕಾರ ಮತ್ತು ಬಿರುದುಗಳ ನಿರಾಕಾರವೇ ಮುಂತಾದುದದ್ದು ಬೋಧಿಸಿ ನುಡಿದರು. ಕಾಂಗ್ರೆಸ್ಸು ಸ್ವದೇಶೀ ಪ್ರೋತ್ಸಾಹವನ್ನು ನಿರ್ಧರಿಸಿ ಠರಾಯಿಸಿತು. ತಿಲಕರು ನಾವು ನಮ್ಮದೇ ದೇಶದಲ್ಲಿ ಸ್ವತಂತ್ರರಾಗಿರಬೇಕಾದರೆ ಸ್ವಸಹಾಯ, ನಿರ್ಧಾರ ಮತ್ತು ಆತ್ಮತ್ಯಾಗಗಳೆ ಅತ್ಯಾವಶ್ಯಕವೆಂದು ವ್ಯಕ್ತಪಡಿಸಿದರು.

೨೩ನೇ ಕಾಂಗ್ರೆಸ್ ೧೯೦೭ – ಸೂರತ್,

ಅಧ್ಯಕ್ಷರು: ಡಾ ರಾಸಬಿಹಾರಿ ಘೋಷರು.

ಈ ವರ್ಷದ ಕಾಂಗ್ರೆಸ್ಸಿನಲ್ಲಿ ಪ್ರಾರಂಭದಿಂದಲೂ ಸದಸ್ಯರೊಳಗೆ ಭೇದಾಭೇದಗಳುಂಟಾದುವು. ಕಳೆದ ಸಲ ಮಂಜೂರಾದ ಬೊಯ್‌ಕೊಟ್ ಠರಾವು ಮುಂತರಲಾಗುವುದಿಲ್ಲವೆಂಬ ಕಿಂವದಂತಿಯನ್ನು ಕೇಳಿ ಎಲ್ಲರೂ ಎರಡನೆಯ ದಿನ ರಂಗಸ್ಥಳವನ್ನು ದಾಳಿಯಿಡುವುದಕ್ಕೆ ಸಿದ್ಧರಾದರು. ಅಂದು ತಿಲಕರು ಭಾಷಣಕ್ಕೆಂದು ಮುಂದೆ ಬರುತ್ತಲೇ ಅಧ್ಯಕ್ಷರು ಅವರನ್ನು ಆಕ್ಷೇಪಿಸಿದರು. ಒಡನೆ ಪ್ರೇಕ್ಷಕರಲ್ಲಿ ಗಲಾಟೆಯೆದ್ದು ಸಭಿಕರು ನಾನಾ ಸಾಮಾನುಗಳನ್ನು ಅಧ್ಯಕ್ಷರ ಕಡೆಗೆ ಹಾರಿಸ ತೊಡಗಿ ಕೊನೆಯಲ್ಲಿ ಸಭೆಯು ಚೆದರಿತು.

ಮರುದಿನ ನೆರೆದ ಸಭೆಯಲ್ಲಿ ಕಾಂಗ್ರೆಸ್ಸಿನ ಧ್ಯೇಯ ಮತ್ತು ಧೋರಣೆಯನ್ನು ನಿಶ್ಚಿತ ವಾಕ್ಯಗಳಲ್ಲಿ ಬರೆದು ಒಂದು 'ಮೆನಿಫೆಸ್ಟೋ'ವನ್ನು ಸಿದ್ಧಪಡಿಸಿ ಪ್ರತಿನಿಧಿಗಳೆಲ್ಲಾ ಸಹಿಮಾಡಬೇಕೆಂದಾಯಿತು. ಇದರಲ್ಲಿ ಸಂಪೂರ್ಣ ರಾಜ್ಯಾಂಗ ಸಮ್ಮತ ಮಾರ್ಗಗಳಿಂದಲೇ ಸ್ವರಾಜ್ಯ ಪಡೆಯುವುದೇ ಧ್ಯೇಯವೆಂದಿತ್ತು. ಇದರಿಂದ 'ಅತಿರೇಕ ವಾದಿ' (Extremist) ಗಳು ಕಾಂಗ್ರೆಸ್ಸನ್ನು ಬಿಟ್ಟುಹೋಗುವಂತಾಯಿತು. ಹೀಗೆ ಕಾಂಗ್ರೆಸ್ಸಿನಲ್ಲಿ ಮೊದಲನೆಯ ಸಲ 'ಸೌಮ್ಯವಾದಿ' (Moderate) ಗಳು ಮತ್ತು 'ಅತಿರೇಕವಾದಿ'ಗಳೆಂಬ ಎರಡು ಪಕ್ಷಗಳಾದುವು.

ಸೌಮ್ಯ ಕಾಂಗ್ರೆಸ್ಸು ೧೯೦೮ರಲ್ಲಿ ಮದ್ರಾಸಿನಲ್ಲಿ ಪುನಃ ೨೩ನೇ ಕಾಂಗ್ರೆಸ್ಸೆಂದು ಕರೆದುಕೊಂಡು ಅದೇ ಅಧ್ಯಕ್ಷರ ನೇತೃತ್ವದಲ್ಲಿ ನೆರೆಯಿತು, ಹೊಸ ರಾಜ್ಯಾಂಗರಚನೆಯೂ, ನಿತ್ಯದ ಠರಾವುಗಳ ಮಂಜೂರಾತಿಯೂ ನಡೆಯಿತು. ಈ ಸಂದರ್ಭದಲ್ಲಿ ಕೊಲ್ಲಿಂಗೋಡಿನ ರಾಜರು ಅಧ್ಯಕ್ಷರಿಗೂ, ಪ್ರತಿನಿಧಿಗಳಿಗೂ ಟೀಪಾರ್ಟಿಯಿತ್ತು ಸತ್ಕರಿಸಿದರು.

ಡಾ। ತೇಜಬಹದ್ದೂರ್ ಸಪ್ರೂರವರು ೧೮೧೮ನೇ ಕಾನೂನನ್ನು ಬ್ರಿಟಿಷರಿಗೆ ಅಯೋಗ್ಯವಾದುದೆಂದು ಧಿಕ್ಕರಿಸಿದರು.

೨೪ನೇ ಕಾಂಗ್ರೆಸ್ ೧೯೦೯ – ಲಾಹೋರ್,

ಅಧ್ಯಕ್ಷರು– ಪಂಡಿತ ಮದನಮೋಹನ ಮಾಲವೀಯರು.

ಈ ಕಾಂಗ್ರೆಸ್ಸಿಗೆ ಮೊದಲು ಸರ್ ಫಿರೋಜ ಶಹಾ ಮೇಥಾರವರನ್ನು ಅಧ್ಯಕ್ಷರಾಗಿ ಚುನಾಯಿಸಿದ್ದರೂ ಅವರು ಕೊನೆಯ ಗಳಿಗೆಯಲ್ಲಿ ನಿರಾಕರಿಸಿದರು. ಆಗ ತಾನೇ ಮಿಂಟೋ–ಮೋರ್ಲೇ ಸುಧಾರಣೆಗಳು ಪ್ರಕಟವಾಗಿದ್ದುವು. ಇವುಗಳು ಕೊಟ್ಟುದಕ್ಕಿಂತ ಹೆಚ್ಚಾಗಿ ಮುಂಚಿನವುಗಳನ್ನು ಹಿಂದೆಗೆದಿದ್ದುದರಿಂದ ಎಲ್ಲೆಲ್ಲಿಯೂ ಅಸಮಾಧಾನವುಂಟು ಮಾಡಿದ್ದುವು. ಕ್ರಾಂತಿಕಾರಕ ಪಕ್ಷದವರು ಕೆಲವರು ಆಗ ತಲೆಯೆತ್ತಿ ಕರ್ಜನ್–ವಿಲಿ ಎಂಬುವರನ್ನು ಕೊಲೆಮಾಡಿ ವೈಸರಾಯರಾದ ಲೋರ್ಡ್ ಮಿಂಟೋರವರ ಪ್ರಾಣದ ಮೇಲೂ ಯತ್ನಮಾಡಿದ್ದರು. ಕೆಲವು ದೇಶೀಯ ಮುಖಂಡರನ್ನು ದೇಶಭ್ರಷ್ಟರಾಗಿ ಮಾಡಿದ್ದರು. ಹೀಗಾಗಿ ಕಾಂಗ್ರೆಸ್ಸಿಗೆ ನಿಷೇಧವನ್ನು ಸೂಚಿಸಲು ಅನೇಕ ವಿಷಯಗಳಿದ್ದುವು.

ಗಾಂಧಿಯವರು ಆಗತಾನೇ ದಕ್ಷಿಣ ಆಫ್ರಿಕದಲ್ಲಿ ಪ್ರಾರಂಭಿಸಿದ 'ಪೆಸ್ಸಿವ್ ರೆಸಿಸ್ಟೆನ್ಸ್' ಎಂಬ ಸತ್ಯಾಗ್ರಹ ಚಳವಳವನ್ನು ಪುಷ್ಟೀಕರಿಸಿ ಈ ಅಧಿವೇಶನದಲ್ಲಿ ಗೋಖಲೆಯವರ ಭಾಷಣವಾಗಿ ಠರಾವು ಮಂಜೂರಾಯಿತು.

ಲಾಲಾ ಲಜಪತ ರೈ

೨೫ನೇ ಕಾಂಗ್ರೆಸ್ ೧೯೧೦ ಅಲ್ಲಹಾಬಾದ್,

ಅಧ್ಯಕ್ಷರು– ಸರ್ ವಿಲ್ಲಿಯಮ್ ವೆಡ್ಡರ್ ಬರ್ನ್‌ರವರು.

ಈ ವರ್ಷ ಕಾಂಗ್ರೆಸ್ಸಿನ ರಜತೋತ್ಸವವು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಕಾಂಗ್ರೆಸ್ ಮಂಟಪವು ೨೫ ಬಾಗಿಲುಗಳಿಂದ ಕೂಡಿದ್ದು ಪ್ರತಿಯೊಂದು ಬಾಗಿಲಿನ ಮೇಲೆ ಹಿಂದಿನ ಒಂದೊಂದು ವರ್ಷದ ಅಧ್ಯಕ್ಷರ ಭಾವಚಿತ್ರಹ ಶೋಭಿಸುತ್ತಿತ್ತು. ಆಗತಾನೇ ವ್ಯಾಸ್‌ರಾಯ್ ಸ್ಥಾನಕ್ಕೆ ಬಂದ ಲೋರ್ಡ್ ಹಾರ್ಡಿಂಜರನ್ನು ಸುಸ್ವಾಗತಿಸಿ, ಕಾಂಗ್ರೆಸ್ಸಿನ ಒಂದು ಡೆಪ್ಯುಟೇಶನನ್ನು ಅವರ ಸನ್ನಿಧಿಗೆ ಕಳುಹಬೇಕೆಂದು ಠರಾವಾಯಿತು. ಸಿ ಪಿ ರಾಮಸ್ವಾಮಿಯವರು ಈ ವರ್ಷವೇ ಕಾಂಗ್ರೆಸ್ಸನ್ನು ಸೇರಿದರು. ಸಪ್ತಮ ಎಡ್ವರ್ಡ್ ಸಾರ್ವಭೌಮರ ನಿಧನವೂ, ಪಂಚಮ ಜೋರ್ಜರ ಸಿಂಹಾಸನ ರೋಹಣವೂ ಈ ವರ್ಷ ನಡೆದಿರಲು ಕಾಂಗ್ರೆಸ್ಸು ಸಂದರ್ಭೋಚಿತವಾದ ತನ್ನ ರಾಜಭಕ್ತಿಯ ತವಾದ ಠರಾವುಗಳನ್ನೂ ಮಂಜೂರುಮಾಡಿತು.

೨೬ನೇ ಕಾಂಗ್ರೆಸ್. ೧೯೧೧ – ಕಲ್ಕತ್ತಾ,

ಅಧ್ಯಕ್ಷರು – ಪಂಡಿತ ವಿಷ್ಣು ನಾರಾಯಣ ಧಾರರು.

ಈ ವರ್ಷ ಸಾರ್ವಭೌಮ–ಮಹಾರಾಣಿಯವರು ಹಿಂದೂದೇಶಕ್ಕೆ ಚಿತ್ತೈಸಿದ್ದು, ಧಿಲ್ಲಿಯಲ್ಲಿ ದರ್ಬಾರು ನಡೆದು, ಬಂಗಾಳ ವಿಭಜನೆಯನ್ನು ರದ್ದುಗೊಳಿಸಿದುದಲ್ಲದೆ, ಮುಖ್ಯ ಪಟ್ಟಣವನ್ನು ಕಲ್ಕತ್ತಾದಿಂದ ಧಿಲ್ಲಿಗೆ ವರ್ಗಾಯಿಸಿತು. ಬಂಗಾಳ ವಿಭಜನೆಯ ರದ್ದತಿಯ ಗೌರವವೆಲ್ಲಾ ಕಾಂಗ್ರೆಸ್ಸಿನ ಪಾಲಿಗೇ ಸೇರಿದ್ದು, ಕಾಂಗ್ರೆಸ್ಸು ಇದಕ್ಕಾಗಿ ಉತ್ಸವವನ್ನು ನೆರವೇರಿಸಿತು.

ಈ ಕಾಂಗ್ರೆಸ್ಸಿಗೆ ರಾಮ್ಸೇ ಮೆಕ್ಡೊನಾಲ್ಡರನ್ನು ಮೊದಲು ಅಧ್ಯಕ್ಷರಾಗಿ ಚುನಾಯಿಸಿದ್ದರೂ, ಅವರ ಪತ್ನಿಯ ನಿಧನದಿಂದಾಗಿ ಅವರಿಗೆ ಅನಾನುಕೂಲವಾಯಿತು.

ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿ ನಡೆಯಿಸುತ್ತಿದ್ದ ಸತ್ಯಾಗ್ರಹ ಚಳವಳವನ್ನು ಈ ಅಧಿವೇಶನದ ಒಂದು ಠರಾವು ಆಶೀರ್ವದಿಸಿತು. ಅಲ್ಲಿ ಕಷ್ಟಕ್ಕೊಳಗಾಗಿದ್ದ ಎಚ್. ಎಸ್. ಪೋಲಕ್‌ರೆಂಬವರು ಅಲ್ಲಿಯ ಹಿಂದೂಗಳ ಸಂಕಷ್ಟಗಳನ್ನು ಕುರಿತು ಭಾಷಣಮಾಡಿದರು.

೨೭ನೇ ಕಾಂಗ್ರೆಸ್: ೧೯೧೨ – ಬಂಕಿಪುರ,

ಅಧ್ಯಕ್ಷರು– ಆರ್. ಎನ್. ಮುಧೋಳ್ಕರರು.

ಈ ವರ್ಷದ ಕಾಂಗ್ರೆಸ್ ಮಂಟಪವು ೨೮ ಪ್ರವೇಶ ದ್ವಾರಗಳಿಂದ ಕೂಡಿತ್ತು. ಪ್ರತಿಯೊಂದು ದ್ವಾರಕ್ಕೂ ಪ್ರಾಚೀನ ಮಗಧದ ಒಬ್ಬೊಬ್ಬ ಅರಸರ ಹೆಸರು ಕೊಡಲ್ಪಟ್ಟಿತ್ತು. ಈ ವರ್ಷ ವ್ಯಾಸ್‌ರಾಯರ ಪ್ರಾಣಹರಣಕ್ಕೆ ಯಾರೋ ಘಾತುಕರು ಮಾಡಿದ ಯತ್ನವನ್ನು ಖಂಡಿಸಿ ಠರಾವಾಯಿತು. ಕಾಂಗ್ರೆಸ್ಸಿನ ಬಹು ವರ್ಷಗಳ ಕೇಳಿಕೆಯಾದ ಪಬ್ಲಿಕ್ ಸರ್ವಿಸಿನ್ ಕಮಿಶನಿನ ಸ್ಥಾಪನೆಯನ್ನು ಸರಕಾರವು ದಯಪಾಲಿಸಿದುದರ ಪ್ರಕಟನೆಯನ್ನು ಕುರಿತು ಧನ್ಯವಾದಗಳಾದುವು.

ಇಪ್ಪತ್ತೆಂಟನೇ ಕಾಂಗ್ರೆಸ್, ೧೯೧೩ – ಕರಾಚಿ

ಅಧ್ಯಕ್ಷರು: ನವಾಬ್ ಸೈಯದ್ ಮಹಮ್ಮದ್‌ರವರು

ಈ ಸಲದ ಮುಸ್ಲಿಮ್ ಲೀಗಿನ ವಾರ್ಷಿಕ ಸಭೆಯಲ್ಲಿ ಹಿಂದುಸ್ಥಾನದ ಸ್ವರಾಜ್ಯವನ್ನು ಧ್ಯೇಯವಾಗಿ ಅಂಗೀಕರಿಸಿದುದು ಈ ವರ್ಷದ ವೈಶಿಷ್ಟ್ಯಗಳಲ್ಲಿ ಒಂದು.

ಹಿಂದೂಗಳು ಕೆನಡಾ ದೇಶದಲ್ಲಿ ವಸಾಹತು ಮಾಡಲಾಗದಂತೆ ಕೆನಡಾ ಸರಕಾರವು ಮಾಡಿದ ಕಾನೂನನ್ನು ಕುರಿತು ಚರ್ಚೆ ನಡೆಯಿತು.

ಇಪ್ಪತ್ತೊಂಭತ್ತನೇ ಕಾಂಗ್ರೆಸ್, ೧೯೧೪— ಮದ್ರಾಸು

ಅಧ್ಯಕ್ಷರು ಭೂಪೇಂದ್ರನಾಥ ಬಸುರವರು.

ಈ ಅಧಿವೇಶನವು ಮಹಾಯುದ್ಧದ ಛಾಯೆಯ ಅಡಿಯಲ್ಲಿ ನಡೆಯಿತು. ಸುರೇಂದ್ರನಾಥ ಬೆನರ್ಜಿಯವರು ರಾಜಭಕ್ತಿ ಠರಾವನ್ನು ಮಂಡಿಸಿದರು. ಆಗಿನ ಮದ್ರಾಸು ಗವರ್ನರರಾದ ಲೋರ್ಡ್ ಪೆಂಟಲೆಂಡರು ಸಭೆಗೆ ಚಿತ್ತೈಸಿ ಆ ವಿಷಯದ ಭಾಷಣಗಳನ್ನು ಕೇಳಿ, ಠರಾವಿನ ಅಂತ್ಯದಲ್ಲಿ ಅಂಗೀಕಾರ ಪರವಾಗಿ ಎರಡು ಮಾತು ನುಡಿದು ಬೀಳ್ಕೊಂಡರು. ಹಿಂದೂ ಸೈನ್ಯವನ್ನು ಫ್ರಾನ್ಸಿಗೆ ಕಳುಹಿಸಿದುದರಿಂದ ತಮ್ಮ ಸಾರ್ವಭೌಮರ ಸೇವೆಮಾಡಲು ಹಿಂದೀಯರಿಗೆ ದೊರೆತ ಸದವಕಾಶಕ್ಕೆ ಅಭಿನಂದಿಸಿ ಎಸ್. ಪಿ. ಸಿನ್ಹಾ (ಈಗ ಸರ್)ರವರು ಭಾಷಣಮಾಡಿದರು. ಈ ವರ್ಷ ಕಾಂಗ್ರೆಸ್ಸು ಇಂಗ್ಲೆಂಡಿಗೆ ಒಂದು ಪ್ರತಿನಿಧಿಯ ಕೂಟ (delegation)ವನ್ನು ಕಳುಹಿಸಿತು. ಎಮ್. ಕೆ. ಗಾಂಧಿಯವರು ತಮ್ಮ ದಕ್ಷಿಣ ಆಫ್ರಿಕದ ಚಳವಳದ ವಿಜಯದೊಂದಿಗೆ ಹಿಂದುಸ್ಥಾನಕ್ಕೆ ಮರಳಿದರು.

ಮೂವತ್ತನೇ ಕಾಂಗ್ರೆಸ್, ೧೯೧೫ – ಮುಂಬಾಯಿ

ಅಧ್ಯಕ್ಷರು ಸರ್ ಎಸ್. ಪಿ. ಸಿಂಹರು.

ಈ ಸಲ ಮಹಾಯುದ್ಧದ ವಿಷಯಕ ಠರಾವುಗಳೂ ಭಾರತೀಯರ ಮನುಷ್ಯತ್ವವನ್ನು ನಾಶಮಾಡುತ್ತಿರುವ ಆರ್ಮ್ಸ್ ಏಕ್ಟನ್ನು ಹಿಂದೆಗೆಯುವ ಕೇಳಿಕೆಯ ಠರಾವೂ ವಸಾಹತುಗಳ ರೀತಿಯನ್ನನುಸರಿಸುವ ಸ್ವರಾಜ್ಯದ ಬೇಡಿಕೆಯ ಠರಾವೂ ಇತರ ಠರಾವುಗಳೊಂದಿಗೆ ಮಂಜೂರಾದುವು.

ಮೂವತ್ತೊಂದನೇ ಕಾಂಗ್ರೆಸ್, ೧೯೧೬ – ಲಕ್ನೌ

ಅಧ್ಯಕ್ಷರು ಎ ಸಿ ಮುಜುಮುದಾರರು

ಈ ಅಧಿವೇಶನವು ೧೯೦೭ನೇ ಸೂರತ್ ಅಧಿವೇಶನದಲ್ಲಾದ ಕಾಂಗ್ರೆಸ್ ವಿಭಜನೆಯ ವ್ರಣವನ್ನು ಮಾಯಿಸುವಂತಹುದಾಯಿತು. ಅಂದಾದ ಎರಡು ಪಕ್ಷಗಳು ಇಂದು ಪುನಃ ಒಟ್ಟು ಸೇರಿದುವು. ಅಂದಲೆಯುತ್ತಿದ್ದ ಅತಿರೇಕವಾಗಿ ಪಕ್ಷವು ತನ್ನ ಜನಕ ಸಂಸ್ಥೆಯೊಳಕ್ಕೆ ಮರಳಿ ಒಂದು ಎಲ್ಲರೂ ವಸಾಹತುಗಳ ಕ್ರಮಾವಲಂಬಿತ ಸ್ವರಾಜ್ಯದ ಕೇಳಿಕೆಯನ್ನು ಸಮರ್ಥಿಸಿದರು. ಇದಕ್ಕೆ ಎನಿಬೆಸೆಂಟರು ಬಹುಮುಖವಾಗಿ ಕಾರಣರು. ಇವರು ಆಗ ತಾನೇ ರಾಜದ್ರೋಹದ ಅಪಾದನೆಯಿಂದ ಕಾರಾಗೃಹವಾಸವನ್ನು ಮುಗಿಸಿ ಬಂದಿದ್ದರು. ಕಾರಾವಾಸ ಕಂಡು ಬಂದ ತಿಲಕರಂತಹವರು ರಾವ್ ಬಹದ್ದೂರರು ಮತ್ತು ಸರ್ ಪದವೀಧರರಂತಹ 'ಪ್ರಭೃತಿ'ಗಳೊಂದಿಗೆ ಸಮಾನಸ್ಕಂಧತೆಯಿಂದ ಕೂಡುವ ನೋಟವು ದರ್ಶನೀಯವಾಗಿತ್ತು.

ನನ್ನ ಪರಿಚಯದ ಕರ್ಣಾಟಕ ಧುರೀಣರು

ಶ್ರೀಮತಿ ಕಮಲಾದೇವಿಯವರು

ಲೇಖಕರು:- ವೈದ್ಯಭಾನು ಶ್ರೀ ಡಿ ಕೆ. ಭಾರಧ್ವಾಜ ಎಂ ಡಿ (ಆಯುರ್ವೇದ).



ಡಾ|| ಎನ್ ಎಸ್ ಹರ್ಡೀಕರ್

ಗಂಗಾಧರರಾವ್ ದೇಶಪಾಂಡೆ

ಕರ್ನಾಟಕದಲ್ಲಿ ಇವರ ಹೆಸರನ್ನರಿಯದ ಸುಶಿಕ್ಷಿತರಿಲ್ಲ. ಹುಟ್ಟಿನಿಂದಲೇ ಶ್ರೀಮಂತರು. ಲೋಕಮಾನ್ಯ ತಿಳಕರು ದಿವಂಗತರಾಗುವ ವರೆಗೆ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದರು. ಅನಂತರ ಗಾಂಧೀ ಭಕ್ತರಾದರು. ವಕೀಲ ವೃತ್ತಿಯನ್ನು ಬಿಟ್ಟು ರಾಜಕಾರಣದಲ್ಲಿ ಮುಳುಗಿದವರಿವರು. ಈ ಮುಪ್ಪಿನ ವಯಸ್ಸಿನಲ್ಲಿಯೂ ಕ್ಷಾತ್ರತೇಜವು ಇವರಲ್ಲಿ ಉಕ್ಕುತ್ತಿರುವುದು. ಆದ್ದರಿಂದ ಎಂಥಾ ತರುಣನನ್ನಾದರೂ ಇವರು ಮುಂದಕ್ಕೆ ಬಿಡದೆ, ತಾವೇ ಮುಂದಾಳಾಗಿ ನಿಲ್ಲುವುದು ಇವರ ಸ್ವಭಾವವೆಂದು ಅನೇಕರಿಗೆ ಅನಿಸುವುದು. ವಕ್ತೃತ್ವದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಇವರನ್ನು ಮೀರಿಸಿದವರಿಲ್ಲ. ಅಸಹಕಾರ ಚಳವಳದಲ್ಲಿ, ಮುಂಬೈಯಲ್ಲಿ ಮಹಾತ್ಮಾ ಗಾಂಧೀಜಿಯವರ ಕೂಡ ವಿದ್ಯಾರ್ಥಿಗಳ ಮನಸ್ಸನ್ನಾಕರ್ಷಿಸಲಾಗದಿದ್ದಾಗ, ಅವರ ಅಪ್ಪಣೆಯ ಪ್ರಕಾರ ಇವರೇ ಮುಂದೆ ಬಂದು ಒಂದು ಘಂಟೆ ಹೊತ್ತು ಮಾತನಾಡಿ, ಅನೇಕ ವಿದ್ಯಾರ್ಥಿಗಳನ್ನು ಅಸಹಕಾರಕ್ಕೆ ಆಕರ್ಷಿಸಿದವರಿವರು. ಸ್ವಧರ್ಮಾಭಿಮಾನಿಗಳು. ಪರಮತದ ಗಾಳಿಯು ಕೂಡ ತನ್ನ ಬಳಿಗೆ ಸೋಕದಂತೆ ನೋಡಿಕೊಳ್ಳುತ್ತಿರುವವರು. ಶ್ರೀಮಂತಿಕೆ, ವಾಚಾಳತ್ವ, ಕಾರ್ಯದಕ್ಷತಾದಿ ಗುಣಗಳಿಂದ ಸೇಟ್ ಜಮುನಾಲಾಲ ಬಜಾಜ, ಮಹಾತ್ಮಾ ಗಾಂಧೀಜಿಯವರ ವಿಶ್ವಾಸಕ್ಕೆ ಪಾತ್ರರಾಗಿರುವರು. ಕರ್ನಾಟಕದ ನವೋತ್ಸಾಹಿ ತರುಣರನೇಕರಿಗೆ ಇವರಲ್ಲಿ ವಿಶ್ವಾಸವು ಕಡಿಮೆಯಾಗಿದ್ದರೂ, ಇವರ ವ್ಯಕ್ತಿತ್ವ ಪ್ರಭಾವವು ಅವರನ್ನು ಸದ್ದಿಲ್ಲದಂತೆ ಮಾಡಿರುವುದು. ವಯೋಧರ್ಮದಿಂದಲೋ ಏನೊ ಕನ್ನಡ-ಮರಾಠಿ ವಾದದಲ್ಲಿ ಇವರು ಚಂಚಲಚಿತ್ತರಾಗಿ ಹಲವು ಜನ ಉತ್ತರ ಕನ್ನಡಿಗರ ಅವಿಶ್ವಾಸಕ್ಕೆ ಗುರಿಯಾಗಿರುವರು. ಇವರು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸುವುದೊಳ್ಳೆಯದೆಂದು ಹಲವರಾಡಿಕೊಳ್ಳುವರು. ಆದರೆ ಇವರ ನಾಯಕತ್ವವಿಲ್ಲದೆ ಕರ್ನಾಟಕದ ರಾಜಕಾರಣವು ಹಾದಿ ತಪ್ಪುವುದೆಂದು ಶಂಕಿಸಿ, ಇವರು ಅದರ ಸೂತ್ರವನ್ನು ತರುಣರನ್ನು ನಾಚಿಸುವಂತಹ ತಮ್ಮ ಬಲದಲ್ಲಿಯೆ ಇಟ್ಟುಕೊಂಡಿರುವರು. ಕರ್ನಾಟಕದ ರಾಜನೀತಿ ನಿಪುಣರೆಂದೂ ಮುಂದಾಳುಗಳೆಂದು ಇವರು ಅಖಿಲ ಭಾರತೀಯರಿಗೆ ಪರಿಚಿತರಾಗಿರುವರು.

ಶ್ರೀನಿವಾಸರಾವ್ ಕೌಜಲಗಿಯವರು

ಶ್ರೀ|| ಗಂಗಾಧರರಾಯರಂತೆ ಇವರಾದರೂ ಲೋಕಮಾನ್ಯ ತಿಳಕರ ಸಹೋದ್ಯೋಗಿಗಳಾಗಿ ಕೆಲಸಮಾಡಿದವರಲ್ಲಿ ಅಗ್ರಗಣ್ಯರಾಗಿರುವರು. ಮಹಾತ್ಮಾ ಗಾಂಧಿಯವರ ಅಸಹಕಾರ ಕಾಲದಲ್ಲಿ ವಕೀಲಿಯಿಂದ ಬರುತ್ತಿದ್ದ ವರಮಾನಕ್ಕೆ ಕರಣಹೊಡೆದು, ತ್ಯಾಗಬುದ್ಧಿಯಿಂದ ದೇಶಸೇವೆಯಲ್ಲಿ ಮುಳುಗಿದವರಿವರು. ಇವರು ರಾಜಕಾರಣದಲ್ಲಿ ಮಾತ್ರವಲ್ಲದೆ, ಸಾಹಿತ್ಯದಲ್ಲಿಯೂ ನುರಿತವರಿರುವರು. ಕನ್ನಡದಂತೆಯೆ ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಸರಳವಾಗಿ ಲೇಖನಗಳನ್ನು ಬರೆಯಬಲ್ಲವರಾದರೂ ಕನ್ನಡದಲ್ಲಿ ಅಚ್ಚಳಿಯದ ಅಭಿಮಾನದಾಯರಿಗೆ, ತನ್ನ ಕಾರ್ಯಕ್ರಮದಲ್ಲಿ ಎಷ್ಟು ಶಿಸ್ತು, ಕಠಾರು ಬೇಕಾಗಿರುವದೊ ಅಷ್ಟೇ ಸಲಿಗೆಯಿಂದ, ಸ್ನೇಹದಿಂದ ತಮ್ಮ ಸಹೋದ್ಯೋಗಿಗಳೊಂದಿಗೆ ವರ್ತಿಸುವವರಿವರು. ದೇಹದಾರ್ಢ್ಯದಲ್ಲಿ, ಊಟ ತಿಂಡಿಗಳಲ್ಲಿ, ಇವರು ಎಂಥಾ ತರುಣರನ್ನಾದರೂ ನಾಚಿಸಬಲ್ಲವರು. ಅಂತೆಯೇ ರಸಿಕರೂ ಕಾವ್ಯಪ್ರಿಯರೂ, ಸಾಂಸ್ಕೃತಿಕಾಭಿಮಾನಿಗಳೂ ಆಗಿರುವರು. ತಮ್ಮ ಮತಸಾಧನೆಯಲ್ಲಿ ಹಠವಿದ್ದಂತೆಯೇ ಪರಮ ಸಹಿಷ್ಣುತೆಯೂ ಇವರಲ್ಲಿ ವಿಶೇಷವಾಗಿದೆ. ದೇಶಸೇವೆಗಾಗಿ ತಮ್ಮ ಸರ್ವಸ್ವವನ್ನು ಸೂರೆಗೊಪ್ಪಿದ್ದರೂ, ಈಗಲೊ ಅಲ್ಲಲ್ಲಿ ಕರ್ನಾಟಕಾಧಿವೇಶನಲ್ಲಿ ತರುಣರಂತೆ ಭಾಗವಹಿಸುವುದನ್ನು ಕಾಣಬಹುದು. ಪ್ರಕೃತ ವಾನಪ್ರಸ್ಥಾಶ್ರಮಿಗಳಂತಿದ್ದರೂ ರಾಯರು ಆಗಾಗ್ಗೆ ರಾಜಕಾರಣ ವಿಚಾರಯುಕ್ತ ಲೇಖನಗಳನ್ನು ಸಹ್ಯಾದ್ರಿ (ಪೂನಾ), ಬಾಂಬೆ ಕ್ರಾನಿಕಲ್ ಮೊದಲಾದ ಪತ್ರಿಕೆಗಳಲ್ಲಿ ಆಗಾಗ್ಗೆ ಬರೆಯುತ್ತಿರುವರು. ಕಾವ್ಯವಾಚನ ಪಠನಗಳಲ್ಲಿ ರಾಯರಿಗೆ ಆಸಕ್ತಿ ಹೆಚ್ಚು. ತಮ್ಮ ನಾಡಿನ ತರುಣರು ಮುಂದೆ ಬರಬೇಕೆಂಬ ಆಸೆ ಹೆಚ್ಚು. ಅದರಂತೆ ಅವರಲ್ಲಿ ಭರವಸೆಯೂ ಉಳ್ಳವರಿವರು. ನಾಡಿನ ಮೇಲ್ಮೆಯು ಪೃಥ್ವಿಯನ್ನು ಮೀರಿಯಿಸಬೇಕೆಂಬ ಆಶಾವಾದಿಗಳಲ್ಲಿ ರಾಯರೂ ಒಬ್ಬರು.

ಡಾ|| ನಾರಾಯಣರಾವ್ ಹರ್ಡೀಕರ್

ಸಮಗ್ರ ಹಿಂದೂಸ್ಥಾನದಲ್ಲಿ ಈ ತ್ಯಾಗವೀರರ ಹೆಸರನ್ನರಿಯದವರು ಕಡಿಮೆ. ಬಡತನದಲ್ಲಿಯೆ ಹುಟ್ಟಿ ಬೆಳೆದು, ವಂಗವಿಭಜನೆಯ ಕಾಲದಲ್ಲಿಯೆ ಸ್ವದೇಶ ಹಿತದ ಕಡೆ ದೃಷ್ಟಿ ಇಟ್ಟು ಕಲಕತ್ತೆಯ ನ್ಯಾಶನಲ್ ಮೆಡಿಕಲ್ ಕಾಲೇಜಿನ ಶಿಕ್ಷಣವನ್ನು ಮುಗಿಸಿಕೊಂಡು, ಹೆಚ್ಚಿನ ಶಿಕ್ಷಣಕ್ಕಾಗಿ ಅಮೆರಿಕಾಕ್ಕೆ ತೆರಳಿದರು. ಅಲ್ಲಿಯು ಹಣಸಂಪಾದನೆಗಾಗಿ ಒಂದು ವರ್ಷ ಕೆಲಸಕ್ಕೆ ಸೇರುವುದು, ಒಂದು ವರ್ಷ ವಿಶ್ವವಿದ್ಯಾಲಯ ಶಿಕ್ಷಣ ಹೀಗೆ ಮಾಡಿ ಅಲ್ಲಿ ಎಂ ಎಸ್ ಸಿ (ಸರ್ಜರಿ) ಪದವಿಯನ್ನು ಪಡೆದರು. ಇವರು ಏಳೆಂಟು ವರುಷ ಕಾಲ ಅಮೆರಿಕಾದಲ್ಲಿದ್ದರೂ, ತನ್ನ ದೇಶವನ್ನು ಮರೆಯದೆ ಅಲ್ಲಿ 'ಹಿಂದೂಸ್ಥಾನ ಅಸೋಸಿಯೇಶನ್' ಸಂಘದ ಚಾಲಕರೂ, ದಿವಂಗತ ದೇಶಭಕ್ತ ಲಾಲಾಜಿಯವರ ಕಾರ್ಯದರ್ಶಿಗಳೂ ಆಗಿ ಭಾರತೀಯರ ಸ್ಥಿತಿಗತಿಗಳನ್ನು ಅಲ್ಲಿನವರಿಗೆ ಅರುಹಿದರು. ಅಸಹಕಾರ ಕಾಲದ ಆರಂಭದಲ್ಲಿ ಇವರು ಹಿಂದೂಸ್ಥಾನಕ್ಕೆ ಬಂದ ಕೂಡಲೆ ಆಗ ದೇಶಸ್ಥಿತಿಯನ್ನು ಕಂಡು ತಿಂಗಳಿಗೆ ಸಾವಿರಾರು ರೂಪಾಯಿ ಸಂಪಾದಿಸಬಹುದಾಗಿದ್ದ ತಮ್ಮ ವೃತ್ತಿಯನ್ನು ಕೈಕೊಳ್ಳದೆ ರಾಜಕಾರಣವನ್ನು ಕೈಕೊಂಡರು. ಇವರ ರಕ್ತದ ಪ್ರತಿಯೊಂದು ಕಣಕಣದಲ್ಲಿಯೂ ಸ್ವದೇಶಾಭಿಮಾನವು ತುಂಬಿ ತುಳುಕುತ್ತಿರುವುದು. ಆದ್ದರಿಂದ ಮಹಾತ್ಮಾ ಗಾಂಧಿಯವರ ಅಸಹಕಾರ ಮತ್ತು ಕಾನೂನು ಭಂಗದ ಚಳವಳಿ ಕಾಲದಲ್ಲಿ ದೇಶೀಯ ತರುಣ ತರುಣಿಯರ ಸ್ವಯಂಸೇವಕ ಸೇವಕಿಯರ ಪಡೆಗಳನ್ನು ಸ್ವರಾಜ್ಯಸಾಧನೆಗಾಗಿ ನಿರ್ಮಿಸಲಾರಂಭಿಸಿದರು. ಸ್ವರಾಜ್ಯ ಸಾಧ್ಯವಾಗುವ ವರೆಗೆ ತಾವು ವಿವಾಹವಾಗುವುದಿಲ್ಲವೆಂದು ವ್ರತ ಧರಿಸಿದವರಿವರು. ಈ ತ್ಯಾಗಮೂರ್ತಿಯ ಭಾಷಣಗಳಿಂದ ಉತ್ಸಾಹಿತರಾಗಿ ಅನೇಕ ಸುಶಿಕ್ಷಿತ ತರುಣರು ಇವರ ಪಡೆಗಳನ್ನು ಸೇರಿ, ಸ್ವರಾಜ್ಯ ಸಂಗ್ರಾಮದಲ್ಲಿ ಸಾವಿರಗಟ್ಟಲೆಯಾಗಿ ಕಾರಾಗೃಹವಾಸವನ್ನನುಭವಿಸಲು ಸಿದ್ಧರಾದರು. ಇತರ ಸ್ವಯಂಸೇವಕ ಪಡೆಗಳ ರಚನೆಯ ಕಾಲದಲ್ಲಿ ಕರ್ನಾಟಕದ ಕೆಲಜನ ಹಿರಿಯರು ಇವರಿಗೆ ವಿರೋಧ ಹೆಸರಿಟ್ಟರು. ಸತ್ಯವ್ರತರಾದ ಇವರು ಮುಂದುವರಿದು ತಮ್ಮ ಕಾರ್ಯದಲ್ಲಿ ಜಯಶೀಲರಾಗಿ ಸೇನಾಪತಿ ಹರ್ಡೀಕರ್ ಎಂಬ ಹೆಸರಿನಿಂದ ಸಮಗ್ರ ಭಾರತದಲ್ಲಿ ಪ್ರಸಿದ್ಧರಾದರು. ಇವರು ಕರ್ಣಾಟಕದಲ್ಲಿಲ್ಲದೆ ಬೇರೆ ಕಡೆಗಳಲ್ಲಿ ಹುಟ್ಟಿದ್ದರೆ ಆ ನಾಡಿನ ಅದ್ವಿತೀಯ ಮುಖಂಡರಾಗಿ ಮನ್ನಣೆಗೊಳ್ಳುತ್ತಿದ್ದವರು. ಇವರು ಆದರೆ ಕರ್ನಾಟಕದ ಕೆಲವು ಜನ ಹಿರಿಯರು ಇವರಿಗೆ ಸಾಕಷ್ಟು ಪ್ರೋತ್ಸಾಹ ಕೊಡಲಿಲ್ಲ. ವಿಷಾದಿಸುವರು. ಪರಮತ ಸಹಿಷ್ಣುಗಳಾಗಿದ್ದರೂ ಸ್ವಧರ್ಮದಲ್ಲಿಯೂ ವಿಶೇಷ ಅಭಿಮಾನವುಳ್ಳವರಾಗಿದ್ದಾರೆ. ರಾಜಕಾರಣದಲ್ಲಿ ನಿಸ್ಪೃಹರಾಗಿ ನಿಷ್ಕಲಂಕವಾಗಿ ನಡೆದು ದೇಶಪರಿಸ್ಥಿತಿಯಲ್ಲಿಯೂ ಇವರ ತ್ಯಾಗ ಅನುಕರಣೀಯವಾಗಿದೆ.

ದಿವಾಕರ ರಂಗರಾಯರು

ವಕೀಲ ವೃತ್ತಿಗಾಗಿ ಶಿಕ್ಷಣ ಪಡೆದ ಮನಸ್ಸು ಅದರ ಕಡೆ ತಿರುಗದ ಸಾತ್ವಿಕ ಆಧ್ಯಾತ್ಮಿಕ ತತ್ವಗಳಿಂದ ತುಂಬಿಕೊಳ್ಳಲು, ಆಧ್ಯಾತ್ಮಪ್ರಿಯರಾದ ಇವರು ಜಗದ್ಗುರು ಶ್ರೀ ಶಂಕರರ ತತ್ವಗಳನ್ನೇ ಅರಿತು, ತಮ್ಮ ಅನಸೂನವ ಪಲೆ ಗಾಂಧಿಯವರ ಆಧ್ಯಾತ್ಮಿಕ ರಾಜನೀತಿಯನ್ನು ಪ್ರತಿಪಾದಿಸಲಾರಂಭಿಸಿದರು. ರಾಯರು ನನ್ನ ನೇತೃವ

ಪತ್ನೀ ಸಹಿತರಾದ ಬಾಬೂ ರಾಜೇಂದ್ರ ಪ್ರಸಾದರವರು

ಕೆ. ಎಚ್ ನಂಮುನರು

ರಂಗನಾಥ ರಾಮಚಂದ್ರ ದಿವಾಕರ್, ಕರ್ಮವೀರ, ಧಾರವಾಡ

...ದ್ದು ಸಲ ಇವರನ್ನು ನೋಡಿಬಿಟ್ಟರೆ, ಕರ್ನಾಟಕದಲ್ಲಿ ರಕ್ತಪಾತವನ್ನು ಮಾಡುವ ಶಸ್ತ್ರಭೇದವನ್ನು ಕಾಣದೆ, ಶತ್ರುಹಿತವನ್ನೂ ಸಾಧಿಸಬಯಸುತ್ತಿರುವ ಸಾತ್ವಿಕ ತೇಜಸ್ಸೆ ಇವರದೆಂದು ಕಾಣುವರು. ರಾಯರಿಗೆ ಇಂಗ್ಲಿಷ್ ಶಿಕ್ಷಣ ದೊರೆದಿದ್ದರೆ ಇವರೊಬ್ಬ 'ಮೌನಿಬುವಾ' ಆಗಿ ಆಧ್ಯಾತ್ಮ ಚಿಂತನೆಯಲ್ಲಿ ಕೂತುಬಿಡುತ್ತಿದ್ದರು ಈಗಾಗಲೆ ಕನ್ನಡಿಗರಿಗೆ ಇವರ "ಉಪನಿಷತ್ಗ್ರಂಥಗಳು" 'ಕರ್ಮಯೋಗ' 'ಅಂತರಾತ್ಮನಿಗೆ' ಮೊದಲಾದ ಗ್ರಂಥಗಳಿಂದ ಪರಿಚಿತರಾಗಿರುವರು. ರಾಜಕಾರಣದಿಂದ ನಿವೃತ್ತರಾಗಲು ಮನಸ್ಸು ಆತುರಗೊಂಡಿದ್ದರೂ; ಇಂಗ್ಲಿಷ್ ಶಿಕ್ಷಣದಿಂದ ದೊರೆತ ಕ್ಷಾತ್ರಾಂಶವು ಅದನ್ನು ರಾಜಕಾರಣದಲ್ಲಿಯೆ ಸೆಳೆದಿಟ್ಟಿದೆ. ರಾಯರ ಸರಳ ಸ್ವಭಾವವೂ, ನಡತೆಯೂ ಇವರೊಂದಿಗೆ ಇರುವವರಿಗೆಲ್ಲರಿಗೂ ಇವರು ಪ್ರಿಯರಾಗುವಂತೆ ಮಾಡುವವು ಎಂಥಾ ಕೋಪಿಯ ಕೋಪವನ್ನಾದರೂ ರಾಯರು ಶಾಂತವಾಗಿ ಎದುರಿಸಬಲ್ಲವರು

ಕಾರ್ನಾಡ ಸದಾಶಿವರಾಯರು

ಕನ್ನಡ ನಾಡಿನಲ್ಲಿ ತನ್ನ ಸರ್ವಸ್ವವನ್ನೂ ದೇಶಕ್ಕಾಗಿ, ಪರೋಪಕಾರಕ್ಕಾಗಿ ಸೂರೆಗೊಟ್ಟ ತ್ಯಾಗಿಗಳಲ್ಲಿ ಇವರು ಅಗ್ರಗಣ್ಯರು. ಬಾಹ್ಯ ಡಾಂಭಿಕ ಆಚಾರಗಳಲ್ಲಿ ವಿಶ್ವಾಸವಿಲ್ಲದ ಇವರು ಮಹಾತ್ಮಾ ಗಾಂಧಿಯವರ ಬೋಧನೆಗಳನ್ನು ಕೇಳಿದಂದಿನಿಂದಲೂ, ರಾಜಕಾರಣದಲ್ಲಿಯೂ ಆಧ್ಯಾತ್ಮಿಕ ಜ್ಯೋತಿಯನ್ನು ಅರಿತುಕೊಳ್ಳಲಾರಂಭಿಸಿದವರಿವರು. ಇವರ ತ್ಯಾಗಕ್ಕೆ ಮಹಾತ್ಮಾ ಗಾಂಧಿಯವರೆ ಮೆಚ್ಚಿರುವರೆಂದ ಮೇಲೆ, ಹೆಚ್ಚು ಹೇಳುವುದೇನಿದೆ ರಾಯರಿಗೆ ರಾಜಕಾರಣದಲ್ಲಿಯ ಕೀರ್ತಿಗಿಂತಲೂ, ಆತ್ಮಶಾಂತಿಯ ಕಡೆ ಗಮನ ಹೆಚ್ಚು ಆದ್ದರಿಂದ ಈ ಮೂರ್ತಿಯು ಕರ್ನಾಟಕದಲ್ಲಿ ಇನ್ನೂ ಹಲವರ ಕಣ್ಣಿಗೆ ಬೀಳದಿರಬಹುದು ಸರಳ, ಶಾಂತ ಸ್ವಭಾವದ ಸುಂದರ ಮೂರ್ತಿಯ ಕಲ್ಪನೆಯ ಹೆಚ್ಚುಕಡಿಮೆ ಕಾರ್ನಾಡ ಸದಾಶಿವರಾಯರ ಭಾವಚಿತ್ರದಂತೆ ಕಾಣಬಹುದು

ಶ್ರೀಮತಿ ಕಮಲಾದೇವಿ

ಬೆಳಗಾವಿಯ ಕಾಂಗ್ರೆಸಾದ ಬಳಿಕ,ದೇಶ ವಿದೇಶಗಳಲ್ಲಿ ಸಂಚರಿಸಿದ ಇವರು ಸ್ತ್ರೀಯರ ಚಳವಳಗಳಲ್ಲಿ ಭಾಗವಹಿಸುತ್ತಿದ್ದರು ಬಳಿಕ ಕಾರಣಾಂತರಗಳಿಂದ ರಾಜಕೀಯ ರಂಗಕ್ಕಿಳಿದ ಇವರು ಕಾನೂನುಭಂಗ ಚಳವಳ ಕಾಲದಲ್ಲಿ ಕರ್ನಾಟಕಕ್ಕೆ ಕೀರ್ತಿ ಬರುವಂತೆ ಕೆಲಸಮಾಡಿದರು ಪುರುಷ ಧುರೀಣರಂತೆ ಇವರೂ ಕೆಲವು ಭಾರಿ ಕಾರಾಗೃಹ ವಾಸ ಮಾಡಿ ಬಂದರು ದಿವಂಗತ ಡಾ। ಅನಿಬೆಸೆಂಟ್, ಶ್ರೀ। ಸರೋಜಿನಿ ದೇವಿಯರ ನಂತರ ಅ. ಭಾ. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲಿಯಲ್ಲಿ ಸ್ತ್ರೀ ಸದಸ್ಯರಾಗಿದ್ದವರಲ್ಲಿ ಇವರೇ ದಕ್ಷಿಣ ಭಾರತದಲ್ಲಿ ಮೊದಲನೆಯವರು ರಾಜಸಗುಣ ಪ್ರಧಾನರಾದ ಇವರು ಅಲ್ಲಿಯೂ ಕೌನ್ಸಿಲು ಚಳವಳವನ್ನು ಕ್ಷಾತ್ರರಂತೆ ಎದುರಿಸಿದವರಿವರು ಈಚೆಗೆ ಸೋಶಿಯಲಿಸ್ಟಿಕ್ ಚಳವಳಕ್ಕೆ ಒಲಿದು ಕರ್ನಾಟಕದಲ್ಲಿ ಅದರ ವಿಚಾರವನ್ನು ಹರಡಿ ಬಂದಿರುವರು ಆದರೆ ಗಾಂಧಿ ಸ್ತ್ರೀಯರಾದ ಇವರು, ಮಹಾತ್ಮಾಜೀಯವರಂತೆ ದೇಶೀಯ ಸಾಂಸ್ಕೃತಿಕ ದೃಷ್ಟಿಯಿಂದಲೆ ಇವರ ಸಾಮ್ಯವಾದವನ್ನು ಹೂಡಿದರೆ ಯಶಸ್ಸನ್ನು ಹೊಂದುವುದರಲ್ಲಿ ಹೆಚ್ಚು ಭರವಸೆಯಿದೆ ಈಗ ಯಾವ ಚಳವಳವನ್ನೂ ಜನರು ಗಾಂಧಿಯವರ ಸ್ವಾನುಭವದ ಒರೆಗಲ್ಲಿಗೆ ತಿಕ್ಕಿ ನೋಡುವುದರಿಂದ ಇವರು ಆ ನಿಷ್ಠೆಯನ್ನು ತೋರಬಹುದೆಂಬ ಭರವಸೆಯು ಅನೇಕರಿಗಿದೆ

ಕೌಜಲಗಿ ಹನುಮಂತರಾಯರು

ಅಸಹಕಾರ ಕಾಲದಲ್ಲಿ ರಾಜಕೀಯ ಕ್ಷೇತ್ರಕ್ಕೆ ಹಾರಿದ ಇವರು ಒಂದಿಲ್ಲವಾದರೊಂದು ರೀತಿಯಿಂದ ರಾಷ್ಟ್ರೀಯ ಕಾರ್ಯವನ್ನೆ ಮಾಡುತ್ತಲಿರುವರು. ಬರಿ ಚರ್ಚೆ, ವಾದಗಳು ಇವರಿಗೆ ರುಚಿಸವು ಆದ್ದರಿಂದ ಇವರು ಕರ್ನಾಟಕ ಖಾದಿ ಬೋರ್ಡಿನ ಕಾರ್ಯದರ್ಶಿಗಳಾಗಿ ಕೆಲಸ ಮಾಡಲಾರಂಭಿಸಿ, ಅದರಲ್ಲಿ ಚೆನ್ನಾಗಿ ಮುಂದೆ—ಈಗ ಎಲ್ಲಿ ನೋಡಿದರೂ ಖಾದಿ ಕೌಜಲಗಿ—ಖಾದೀ ಹನುಮಂತರಾಯರು—ಎಂತಲೆ ಹೆಸರಾಗಿದ್ದಾರೆ ಹಾಗಿದ್ದರೂ ಚರ್ಚೆಗಾಗಿಯೆ ಕುಳಿತರೆ ರಾಜನೀತಿಯನ್ನೂ ಚೆನ್ನಾಗಿ ಚರ್ಚಿಸಬಲ್ಲವರು ರಸಿಕರು, ಕಾವ್ಯಪ್ರಿಯರು, ವಿನೋದಪ್ರಿಯರು, ತಮ್ಮ ವಿರೋಧ ಪಕ್ಷದವರನ್ನು ವಿನೋದಾತ್ಮಕ ಮಾರ್ಮಿಕ ವಚನಗಳಿಂದೆದುರಿಸುವರಿವರು ನಿತ್ಯಜೀವನಕ್ರಮದಲ್ಲಿ ಬೇಕಾಗುವ ಸಲಕರಣೆಗಳಿಗೆ, ಇವರು ತಮ್ಮ ಕಲ್ಪನೆಯಿಂದಲೆ ನಿರ್ಮಿಸಿಕೊಳ್ಳುವ ವಸ್ತುಗಳ ರೀತಿ, ಅವುಗಳಿಗಾಗುವ ಬೆಲೆ ಅನುಕರಣೀಯವಾಗಿವೆ ಇವರ ಸರಳ ಜೀವನ ಕ್ರಮವೂ ಅಂತೆಯೆ.

ರಾಷ್ಟ್ರಸಭೆಯ ಸುವರ್ಣೋತ್ಸವ ಸ್ಮಾರಕ.

(ಲೇಖಕ – ಕಟ್ಟಿಷಾಡಿ ಶ್ರೀನಿವಾಸ ಶೆಟ್ಟಿ, ಕಾರ್ಕಳ)

ಅಖಿಲಭಾರತ ರಾಷ್ಟ್ರಸಭೆಯ ಸ್ಥಾಪನೆಯಾಗಿ ಇಂದಿಗೆ ೫೦ ವರ್ಷಗಳಾದುವು. ಒಂದು ರಾಷ್ಟ್ರದ ಜೀವಮಾನದಲ್ಲಿ ೫೦ ವರ್ಷಗಳ ಅವಧಿಯು ಅಲ್ಪವೆಂದು ತೋರಬಹುದಾದರೂ, ಈ ಅಲ್ಪಾವಧಿಯಲ್ಲಿಯೇ ನಮ್ಮ ರಾಷ್ಟ್ರಜೀವನವನ್ನು ಅಮರವನ್ನಾಗಿ ಮಾಡುವ ಅನೇಕಾನೇಕ ಮಹತ್ವಪೂರ್ಣ ಘಟನೆಗಳು ಇಲ್ಲಿ ನಡೆದುಹೋದುವು ನಮ್ಮಾ ರಾಷ್ಟ್ರವು ಅಹಿಂಸಾತ್ಮಕ ಯುದ್ಧಗಳನ್ನು ಹೂಡುವುದರ ಮೂಲಕ ಸಂಪೂರ್ಣ ಜಗತ್ತಿನ ಲಕ್ಷ್ಯವನ್ನು ತನ್ನ ಕಡೆಗೆ ಆಕರ್ಷಿಸಿದುದೂ, ಅದರ ನ್ಯಾಯವಾದ ಬೇಡಿಕೆಗಳನ್ನು ವಿದೇಶಿ ಸರಕಾರವು ಮಾತಿನ ಮಟ್ಟಿಗಾದರೂ ಒಪ್ಪುವಂತೆ ಮಾಡಿದುದೂ ಈ ಅವಧಿಯಲ್ಲಿಯೇ. ಜನರಲ್ಲಿ ವಿಚಾರಕ್ರಾಂತಿಯುಂಟಾದುದೂ, ವಿರೋಧಿಗಳನ್ನು ವಿರೋಧಿಸಿ ಹೋರಾಡುವ ಕ್ಷಮತೆ, ಧೈರ್ಯ ಸಾಹಸಾದಿ ಗುಣಗಳು ಬೆಳೆದುಬಂದುದೂ, ಇದೇ ಕಾಲದಲ್ಲಿ ಸರಕಾರದ ಪ್ರೋತ್ಸಾಹ ಸಹಾನುಭೂತಿಗಳಿಂದ ಹುಟ್ಟಿ ಅದರ ಕೃಪಾಪೋಷಣೆಯಿಂದ ಬೆಳೆದು ಬರುತ್ತಲಿದ್ದ ರಾಷ್ಟ್ರಸಭೆಯು ಜನರಲ್ಲಿ ಸ್ವಾತಂತ್ರ್ಯಾಭಿಲಾಷೆಯನ್ನು ಹುಟ್ಟಿಸಿದುದು ಇದೇ ೫೦ ವರ್ಷಗಳ ಅವಧಿಯಲ್ಲಾಗಿರುತ್ತದೆ ಈ ೫೦ ವರ್ಷಗಳ ಅವಧಿಯಲ್ಲಿಯೇ ಸಾವಿರಾರು ಜನರು ದೇಶಪ್ರೇಮದ ಬಲಿವೇದಿಕೆಯ ಮೇಲೆ ಸರಿಸರಿಯ ಕಷ್ಟಗಳನ್ನು ಅನುಭವಿಸುತ್ತ ಸಮ್ಮಾನಪೂರ್ವಕ ಆತ್ಮಾರ್ಪಣಮಾಡಿದರು ಆರಂಭಕಾಲದಲ್ಲಿ ರಾಷ್ಟ್ರಸಭೆಯು ರಾಜಕೀಯ ಧುರೀಣರೆನ್ನಿಸಿಕೊಳ್ಳುವ ಕೆಲವು ಮಂದಿ ವಾಗ್ಮಿಗಳ ಹಾಗೂ ವಿದ್ಯಾವಂತರ ವಾಕ್ಪಟುತ್ವ ಮತ್ತು ವಿದ್ವತ್ತೆಯ ವರ್ಷಾವಧಿ ಪ್ರದರ್ಶನದ ರಂಗಸ್ಥಳವಾಗಿತ್ತೆಂಬ ಆರೋಪಕ್ಕೆ ಗುರಿಯಾಗಿದ್ದಿತ್ತಾದರೂ ಈ ೫೦ ವರ್ಷಗಳ ಅಲ್ಪಾವಧಿಯೊಳಗಾಗಿ ಮೆಲ್ಲಮೆಲ್ಲನೆ ಕ್ರಮೋನ್ನತಿಯನ್ನು ಸಾಧಿಸಿಕೊಂಡು ಈಗ ದೇಶದ ಭವಿಷ್ಯವನ್ನೇ ತನ್ನ ಕೈಯಲ್ಲಿಟ್ಟುಕೊಂಡಿರುವ ಏಕಮಾತ್ರ ಪ್ರಬಲ ರಾಷ್ಟ್ರೀಯ ಸಂಸ್ಥೆಯೆನ್ನಿಸಿಕೊಂಡು ಸರ್ವ ಜನಾದರಣೀಯವಾಗಿ ರಾರಾಜಿಸುತ್ತಲಿರುವದು. ಅದರ ಸೇವೆ ಮತ್ತು ತ್ಯಾಗದ ಮೂಲಕ ಅದಕ್ಕೆ ಪ್ರಾಪ್ತವಾದ ಖ್ಯಾತಿಯೂ ಪ್ರತಿಷ್ಠೆಯೂ ಅಪರಿಮಿತವಾಗಿರುವುವು ದೇಶ ವಿದೇಶಗಳ ಸಂದುಗೊಂದುಗಳಲ್ಲಿಯೂ ನಡೆಯುತ್ತಿರುವ ರಾಷ್ಟ್ರಸಭೆಯ ಸುವರ್ಣೋತ್ಸವಗಳ ವರದಿಗಳೇ ನಮ್ಮ ಮಾತಿಗೆ ದೊಡ್ಡ ಸಾಕ್ಷಿಯಾಗಿರುವುವು ಇಷ್ಟು ಅಲ್ಪಾವಧಿಯಲ್ಲಿ ಇನ್ನು ಉನ್ನತಿಯನ್ನು ಸಾಧಿಸಿದ ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಸುವರ್ಣೋತ್ಸವವನ್ನು ನಾವೆಲ್ಲರೂ ಕೂಡಿ ಅತ್ಯಂತ ಉತ್ಸಾಹದಿಂದಲೂ, ವಿಜೃಂಭಣೆಯಿಂದಲೂ ಜರಗಿಸುವುದರಿಂದ ನಾವು ನಮಗೆ ಸಹಜವಾಗಿ ಪ್ರಾಪ್ತವಾದ ಕರ್ತವ್ಯದ ಪರಿಪಾಲನೆಯನ್ನು ಮಾಡಿದಂತಾಯಿತೇ ಹೊರತು ಹೆಚ್ಚಿಗೇನೂ ಇಲ್ಲ ಆದರೆ ಅದನ್ನು ಮಾಡದಿದ್ದರೆ ಮಾತ್ರ ಕರ್ತವ್ಯಪರಾಙ್ಮುಖರಾದ ದೋಷವು ನಮಗೆ ತಟ್ಟುತಿತ್ತು

ಇರಲಿ, ರಾಷ್ಟ್ರಸಭೆಯ ಇತಿಹಾಸದಲ್ಲಿ ನಡೆದ ಮಹತ್ವಪೂರ್ಣ ಘಟನೆಗಳ ಉಲ್ಲೇಖ ಮಾಡಿ ರಾಷ್ಟ್ರಜೀವನವನ್ನು ಈಗಿನಂತೆ ರೂಪಿಸಲಿಕ್ಕೆ ಆ ಘಟನೆಗಳು ಹೇಗೆ ಸಹಕಾರಿಯಾದುವು ಎಂಬಂಶವನ್ನು ಈ ಸಂದರ್ಭದಲ್ಲಿ ತೋರಿಸಿಕೊಡುವುದು ನ್ಯಾಯೋಚಿತವಾಗಿತ್ತಾದರೂ, ಚಿಕ್ಕ ಲೇಖನದಲ್ಲಿ ಅದಷ್ಟನ್ನು ಮಾಡಿಯೂ, ಲೇಖನದ ಉದ್ದೇಶವನ್ನು ಕೊನೆಗಾಣಿಸುವುದು ಸಾಧ್ಯವೆಂದು ನಮಗೆ ತೋರಲಿಲ್ಲ. ಆದ್ದರಿಂದ ನಾವು ಅದನ್ನು ಮಾಡುವುದನ್ನು ಬಿಟ್ಟು ಪ್ರಸಂಗೋಚಿತವಾಗಿ ಕೆಲವು ಮಾತುಗಳನ್ನು ಒಡೆದು ಲೇಖನದ ಉದ್ದೇಶವಾಗಿರುವುದೆಂಬುದನ್ನು ಮಾತ್ರ ಇಲ್ಲಿ ವಾಚಕರ ಮುಂದಿಡ ಲೆಳಸುತ್ತೇನೆ

ಸರಕಾರದ ಆಡಳಿತದಲ್ಲಿ ಅಧಿಕಾಧಿಕ ಭಾಗವಹಿಸಿ ಹೆಚ್ಚೆಚ್ಚು ಅಧಿಕಾರಗಳನ್ನು ಪಡೆಯಬೇಕೆಂಬ ಅಖಿಲಭಾರತ ರಾಷ್ಟ್ರಸಭೆಯ ಕಾರ್ಯಸಾಧನೆಯ ಮೂಲೋದ್ದೇಶವು ಪರಿಸ್ಥಿತಿಯ ಬದಲಾವಣೆಯಿಂದ ಬದಲಾಗುತ್ತ ಬಂದು, ಅದು ಕೆಲವು ಸಮಯದ ವರೆಗೆ 'ಸ್ವರಾಜ್ಯ' ಅಂದರೆ ಬ್ರಿಟಿಷ ಸಾಮ್ರಾಜ್ಯಾಂತರ್ಗತ ಸಾಮಂತ ರಾಜ್ಯವೆಂಬುದಾಗಿಯೂ ಸಂಪೂರ್ಣ ಸ್ವಾತಂತ್ರ್ಯವೆಂಬುದಾಗಿಯೂ ಅದು ರಾಷ್ಟ್ರಸಭೆಯ ಇತಿಹಾಸವನ್ನು ಓದಿದವರಿಗೆ ತಿಳಿದಿರುವ ಸಂಗತಿಯಾಗಿರುತ್ತದೆ ಈಗ ರಾಷ್ಟ್ರಸಭೆಯೂ ಸಂಪೂರ್ಣ ಸ್ವಾತಂತ್ರ್ಯ ಪ್ರಾಪ್ತಿಗಾಗಿಯೇ ಪ್ರಯತ್ನಿಸುತ್ತಿದೆ ಸಾಮಾಜಿಕ ಸುಧಾರಣೆ, ಆರ್ಥಿಕೋನ್ನತಿ, ಶಿಕ್ಷಣ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸಲ್ಮಾನರ ಐಕ್ಯ ಖದ್ದರ್ ಪ್ರಚಾರ ಗ್ರಾಮೋದ್ಯೋಗಗಳ ಪುನರುದ್ಧಾರ ಇವೇ ಮೊದಲಾದ ಸಾಧನೆಗಳು ರಾಷ್ಟ್ರಸಭೆಯ ಛತ್ರಛಾಯೆಯಲ್ಲಿ ಬೆಳೆದು ಬಂದಿದೆ ಎಂಬುದು ಸರ್ವವಿದಿತವು

ಆದಕಾರಣ ರಾಷ್ಟ್ರಸಭೆಯ ಸುವರ್ಣೋತ್ಸವವನ್ನು ಬಹಳ ಉತ್ಸಾಹದಿಂದ ಆಚರಿಸಿ ಅದರ ಉಜ್ವಲ ಪೂರ್ವೇತಿಹಾಸದ ಸಂಸ್ಮರಣೆ ಮಾಡಿ ಗೌರವದಿಂದ ತಲೆಯೆತ್ತಿ ನಲಿದಾಡುವ ಈ ಸಂದರ್ಭದಲ್ಲಿಯೂ ಮುಂದಿನ ಕರ್ತವ್ಯಪಥವು ಯಾವುದಿರುವುದೆಂದ ಪರ್ಯಾಲೋಚಿಸುವುದು. ಅನ್ಯಥಾ ಅಥವಾ ಅನುಚಿತವಾಗಲಾರದು ದೇಶದ ಭವಿಷ್ಯವು ರಾಷ್ಟ್ರಸಭೆಯ ಕೈಯಲ್ಲಿದೆ, ದೇಶದ ಉನ್ನತಿ ಅವನತಿಗಳೂ ರಾಷ್ಟ್ರಸಭೆಯ ಕಾರ್ಯಕಲಾಪಗಳನ್ನವಲಂಬಿಸಿರುವವು, ದೇಶದ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವ ಕಾರ್ಯಶಕ್ತಿಯೂ ಜಾಣ್ಮೆಯೂ ಕೂಡ ರಾಷ್ಟ್ರಸಭೆಗಿರುವುದು.

ದೇಶದ ವಾಸ್ತವಿಕ ಸುಧಾರಣೆ ಉದ್ಧಾರಗಳು ಶಿಕ್ಷಣಪ್ರಚಾರವನ್ನವಲಂಬಿಸಿವೆ ವಿದ್ವತ್ತೆಯೇ ಉಚ್ಚ ನಾಗರಿಕತೆ ಸಂಸ್ಕೃತಿಗಳ ಹೆಗ್ಗುರುತಾಗಿರುತ್ತದೆ ದೇಶದಲ್ಲಿ ವಿದ್ಯಾಹೀನತೆಯು ಹೆಚ್ಚಿದಷ್ಟು ಅದರ ಅವನತಿಯಾಗುವುದು ಖಚಿತ ಶಿಕ್ಷಣಪ್ರಚಾರವು ಎಷ್ಟು ಹೆಚ್ಚೆಚ್ಚು ಆಗುವುದೋ ಅಷ್ಟು ಹೆಚ್ಚೆಚ್ಚಾಗಿ ದೇಶವು ಉನ್ನತಿಯ ಶಿಖರವನ್ನೇರುತ್ತ ಹೋಗುವುದು. ದೇಶದ ರಾಜಕೀಯ ಮಾತ್ರವಲ್ಲ ಆರ್ಥಿಕ ಸಾಮಾಜಿಕ ನೈತಿಕ ಆಧ್ಯಾತ್ಮಿಕ ಮೊದಲಾದ ಯಾವ ಉನ್ನತಿಯಾಗಬೇಕಾದರೂ ಶಿಕ್ಷಣಪ್ರಚಾರವಾಗಬೇಕು. ಬರೇ ರಾಜಕೀಯವನ್ನು ತೆಗೆದುಕೊಂಡರೂ ಕೂಡ ಪ್ರಜಾಸತ್ತಾತ್ಮಕ ರಾಜ್ಯಕ್ರಮವು ಸಫಲವಾಗಬೇಕಾದರೆ ಮತದಾರ ವರ್ಗವು ಸಂಪೂರ್ಣ ಶಿಕ್ಷಿತವಾಗಿರಬೇಕೆಂದು ರಾಜನೀತಿ ವಿಶಾರದರು ಹೇಳುತ್ತಾರೆ.

ಮಹಾತ್ಮಾಜಿಯವರು ಗ್ರಾಮೋದ್ಯೋಗ ಸಂಘವನ್ನು ಸ್ಥಾಪಿಸಿದ ಮೇಲೆ ಸರಕಾರದ ಲಕ್ಷ್ಯವೂ ಆ ಕಡೆಗೆ ಸೆಳೆಯಲ್ಪಟ್ಟು ಅದು ಗ್ರಾಮೋದ್ಧಾರಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಒಂದು ವರ್ಷದ ಮಟ್ಟಿಗೆ ಪ್ರತ್ಯೇಕಿಸಿಟ್ಟಿತು ಇತರ ಸಂಗತಿಗಳು ಹಾಗಿರಲಿ, ಮುಂದೆ ಪ್ರಯೋಜನಕ್ಕೆ ಬರಲಾರೆಂದು ಸರಕಾರವು ತನ್ನ ಸೈನಿಕರಿಗೂ ಗ್ರಾಮಸಂಘಟನೆಯ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಬೇಕೆಂದಿದೆ ಹರಿಜನೋದ್ಧಾರ ಸಮಸ್ಯೆಯ ಕಡೆಗೂ ಈಗೀಗ ಸರಕಾರದ ಅಧಿಕಾಧಿಕ ಲಕ್ಷ್ಯವು ಸೆಳೆಯಲ್ಪಡುತ್ತಿದೆ ಆದರೆ ಮಹಾತ್ಮಾಜಿಯವರಾಗಲೀ ಅವರ ಗ್ರಾಮೋದ್ಯೋಗ ಹರಿಜನಸೇವಾ ಸಂಘಗಳಾಗಲೀ ಸರಕಾರದೊಡನೆ ಸಂಬಂಧವನ್ನು ಕಟ್ಟಿಕೊಂಡಿಲ್ಲ ಈ ಭಾಗದಲ್ಲಿ ಎಲ್ಲಿ ಸರಕಾರವು ಯಾವ ಕೆಲಸವನ್ನು ಮಾಡದೆ ಬಿಡುತ್ತದೋ ಅಲ್ಲಿ ಅದನ್ನು ಪೂರ್ತಿಮಾಡುವ ಉದ್ದೇಶವೇ ಈ ಸಂಘಗಳಿಗಿರುವುದು ಅದರ ಹಾಗೆಯೇ ಸರಕಾರವು ಈಗ ಮಾಡುತ್ತಿರುವ ಶಿಕ್ಷಣಪ್ರಚಾರ ಕಾರ್ಯವನ್ನು ವಿರೋಧಿಸಿ ಅಲ್ಲ, ಪರಂತು ಅದಕ್ಕೆ ಹೆಚ್ಚಿಗೆಯಾಗಿ ಸಹಾಯವಾಗಿ ನಮ್ಮ ಮುಂದಾಳುಗಳಿಂದ ಒಂದು ಅಖಿಲಭಾರತ ಶಿಕ್ಷಣಪ್ರಚಾರ ಸಂಘದ ಏರ್ಪಾಡಾಗಬೇಕು ಇದರಿಂದ ದೇಶವ್ಯಾಪೀ ಶಿಕ್ಷಣ ಪ್ರಚಾರ ಕಾರ್ಯವು ಸುಲಭಸಾಧ್ಯವಾಗುವದಷ್ಟೇ ಮಾತ್ರವಲ್ಲದೆ ಹಿಂದೆ ನಡೆದ ಕೆಲವು ಘಟನೆಗಳ ಪರ್ಯಾಲೋಚನೆ ಮಾಡಿದಾಗ, ಮುಂದೆ ಆಗಬಹುದಾದ ಇನ್ನೊಂದು ಲಾಭವನ್ನು ನಾವು ಕಲ್ಪಿಸಿಕೊಳ್ಳಬಹುದು. ನಮ್ಮ ಮುಂದಾಳುಗಳು ಶಿಕ್ಷಣಪ್ರಚಾರ ಮಾಡಲಿಕ್ಕೂ ಮುಂದಾದರೆ ಸರಕಾರವೂ ತನ್ನ ಪ್ರಯತ್ನಗಳಲ್ಲಿ ಮುಂದಾಳುಗಳಿಗಿಂತ ಹಿಂದಾಗಲಾರದು ಅದು ಎಲ್ಲರಿಗಿಂತ ಮುಂದಾಗಿಯೇ ಇರಲಿಕ್ಕೆ ಸಕಲ ಅನುಕೂಲತೆಗಳನ್ನು ಒದಗಿಸಿಕೊಂಡೀತೆಂದು ನಮಗನ್ನಿಸುತ್ತದೆ ಸರಕಾರವು ಯಾವ ಉದ್ದೇಶದಿಂದಲಾದರೂ ಹಾಗೆ ಮಾಡಲಿ,ದೇಶದ ಲಾಭವಾಗುವುದಂತೂ ಖಂಡಿತ.

ಇಷ್ಟು ಮಾತ್ರವಲ್ಲ, ಅಖಿಲ ಭಾರತ ಶಿಕ್ಷಣ ಪ್ರಚಾರ ಸಂಘದ ಸ್ಥಾಪನೆಯು ರಾಷ್ಟ್ರಸಭೆಯ ಸುವರ್ಣೋತ್ಸವದ ಸ್ಮಾರಕವೆಂದು ಅದರ ಛತ್ರಛಾಯೆಯಲ್ಲಿಯೇ ಆಗುವುದು ಉತ್ತಮ. ವಕ್ಷವಾಗಿರುತ್ತದಾಗಿ ನಮಗೆ ತೋರುವುದು ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಕೂಡ ಇರಲಾರವು ನಮ್ಮ ಮುಂದಾಳುಗಳ ಲಕ್ಷ್ಯವು ಈ ಕಡೆಗೆ ಬೀಳಲೆಂದು ನಾವು ನಂಬಿದ್ದೇವೆ

ಕಾಂಗ್ರೆಸ್ ಸುವರ್ಣ ಮಹೋತ್ಸವ

ನಮ್ಮ ಸಲುವಾಗಿ ಕಾಂಗ್ರೆಸ್ಸು ಏನು ಮಾಡಿದೆ?

೧ ನಮ್ಮಲ್ಲಿಯ ಘೋರ ನಿದ್ರೆಯನ್ನು ತೆಗೆದುಹಾಕಿ ನಮ್ಮನ್ನು ಎಚ್ಚರಿಸಿದ್ದು — ಕಾಂಗ್ರೆಸ್ಸು

೨ ನಮ್ಮಲ್ಲಿಯ ಪರಾಧೀನತೆ ನಷ್ಟಪಡಿಸಿ ಸ್ವಾವಲಂಬನೆಯ ಬೀಜವನ್ನು ಬಿತ್ತಿದ್ದು — ಕಾಂಗ್ರೆಸ್ಸು

೩ ನಮ್ಮಲ್ಲಿಯ ಸ್ವಾರ್ಥದ ಆಕುಂಚಿತ ವಿಚಾರಗಳನ್ನು ಬದಲಿ ರಾಷ್ಟ್ರಸೇವೆಗಾಗಿ ತ್ಯಾಗದ ಮಾರ್ಗಕ್ಕೆ ಹಚ್ಚಿದ್ದು — ಕಾಂಗ್ರೆಸ್ಸು

೪ ನಮ್ಮಲ್ಲಿಯ ಸ್ವಸುಖದ ಕಲ್ಪನೆಯನ್ನು ಅಳಿಸಿ ರಾಷ್ಟ್ರ ಸಹಿಷ್ಣುತೆಯನ್ನು ಆತ್ಮಾರ್ಪಣೆಯನ್ನೂ ಕಲಿಸಿದ್ದು — ಕಾಂಗ್ರೆಸ್ಸು

೫ ನಮ್ಮಲ್ಲಿಯ ಆಲಸ್ಯ ಅಜ್ಞಾನಕ್ಕೆ ಅಜಾಗರೂಕತೆ ಒಡಕುಗಳನ್ನು ನಾಶಮಾಡಿ ಸುಜ್ಞಾನಕ್ಕೆ ಸ್ವಾಭಿಮಾನ ಶಿಸ್ತುಗಳನ್ನು ನೆಲೆಗೊಳಿಸಿದ್ದು — ಕಾಂಗ್ರೆಸ್ಸು

೬ ನಮ್ಮಲ್ಲಿಯ ಪುಕ್ಕತನವನ್ನು ನಿರ್ಮೂಲಮಾಡಿ ಧೈರ್ಯದ ಬೇರನ್ನೂರಿದ ಸಂಸ್ಥೆಯು — ಕಾಂಗ್ರೆಸ್ಸು

೭ ನಮ್ಮಲ್ಲಿಯ ಪಾಶ್ಚಾತ್ಯ ಸಂಸ್ಕಾರದಿಂದ ಸೇರಿದ ಬಣ್ಣವನ್ನು ದೆಸೆಗೆಟ್ಟು ಓಡಿಸಿ ಹಿಂದೀಯರ ಸಾಧಾವೃತ್ತಿಯನ್ನು ಕೈಕೊಳ್ಳಹಚ್ಚಿದ್ದು — ಕಾಂಗ್ರೆಸ್ಸು

೮ ನಮ್ಮಲ್ಲಿಯ ಉಚ್ಚನೀಚ ಭಾವನೆಯನ್ನು ತೆಗೆದುಹಾಕಿ ನಮ್ಮಲ್ಲಿ ಸಮಾನತೆಯನ್ನುಂಟುಮಾಡಿದ್ದು — ಕಾಂಗ್ರೆಸ್ಸು

೯ ನಮ್ಮಲ್ಲಿಯ ಜಾತಿ ಪಕ್ಷಪಂಗಡಗಳ ವಿವಿಧತೆಯನ್ನು ಕಿತ್ತುಹಾಕಿ ಏಕ ರಾಷ್ಟ್ರೀಯತ್ವದ ಭಾವನೆಯನ್ನುಂಟುಮಾಡಿದ್ದು — ಕಾಂಗ್ರೆಸ್ಸು

೧೦ ನಮ್ಮಲ್ಲಿಯ ಪಾರತಂತ್ರ್ಯ ಕತ್ತಲೆಯನ್ನು ಹೊಡೆದೋಡಿಸಿ ರಾಷ್ಟ್ರೀಯ ಸ್ವಾತಂತ್ರ್ಯದ ಕಿರಣಗಳನ್ನು ತೋರಿಸಿದ್ದು — ಕಾಂಗ್ರೆಸ್ಸು

ಆದುದರಿಂದ ಇದೇ ೨೮ನೇ ತಾರೀಕಿನಿಂದ ಕಾಂಗ್ರೆಸ್ ಸುವರ್ಣ ಮಹೋತ್ಸವವನ್ನಾಚರಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವು

ಪ್ರಾಂತಿಕ ಕಾಂಗ್ರೆಸ್ ಜುಬಿಲಿ ಮಂಡಳ

ಪ್ರಪಂಚ ಪರಿಚಯಃ

ಓಟೊವಾ ಶೆಕ್ಟು ಮುಂದುವರಿಯತಕ್ಕುದೆ?

ಓಟೋವಾ ಶೆಕ್ಟಿನಿಂದಾಗಿ ಹಿಂದೂದೇಶದ ಛಹೀರ್ ವ್ಯಾಪಾರಕ್ಕೆ ಯಾವ ಗತಿ ಒದಗಿರುವುದೆಂದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ. ಹಿಂದೂದೇಶವು ಅನೇಕ ಛಹೀರ್ ಜನಾಂಗಗಳಿಗೆ ಕಾರಣ ಸಾಮಗ್ರಿಗಳನ್ನು ಒದಗಿಸುವ ಒಂದು ಮುಖ್ಯ ಕೇಂದ್ರವಾಗಿರುತ್ತದೆ. ಬ್ರಿಟಿಷರು ಮತ್ತು ಬ್ರಿಟಿಷ ಸಾಮ್ರಾಜ್ಯವು, ನಮ್ಮಿಂದ ಪಡೆಯುವ ಕಾರಣ ಸಾಮಗ್ರಿಗಳು, ಜರ್ಮನಿ, ಜಪಾನು, ಇತ್ಯಾದಿ ಬೇರೆ ಜನಾಂಗಗಳು ಪಡೆಯುವ ಪರಿಸರಕ್ಕಿಂತ ಹಿಂದಂಶವಾಗಿರುತ್ತದೆ. ಆದುದರಿಂದ ನಮ್ಮ ಛಹೀರ ವ್ಯಾಪಾರವು ಸಾಂಗವಾಗಿ ನಡೆಯುವಂತೆ ನಮಗೆ ಬೇಕಾದ ಯಂತ್ರ ಇತ್ಯಾದಿ ಒಡವೆಗಳನ್ನು ನಮ್ಮಿಂದ, ಹೆಚ್ಚಾಗಿ ಕಾರಣ ಸಾಮಗ್ರಿಗಳನ್ನು ಪಡೆಯುವ ಜನಾಂಗಗಳಿಂದ ಪಡೆಯಬೇಕಾಗಿದೆ. ಇದು ನ್ಯಾಯಸಮ್ಮತವು. ಹಿಂದೂದೇಶಕ್ಕೆ ಹಿತಕರವು, ಆದರೆ ಈ ಓಟೋವಾ ಶೆಕ್ಟಿನಿಂದ, ಆವರ ವ್ಯಾಪಾರವು ನಮ್ಮಲ್ಲಿ ದಿನೇ ದಿನೇ ಕ್ಷೀಣವಾಗುತ್ತಿದೆ. ಇದರ ಪರಿಣಾಮ ಏನಾಗಿದೆ? ಜರ್ಮನಿ ಜಪಾನು ಮತ್ತು ಇತರ, ಬ್ರಿಟಿಷ ಸಾಮ್ರಾಜ್ಯದ ಹೊರಗಿರುವ ದೇಶಗಳು ನಮ್ಮ ಮೇಲೆ ರೇಗಿ, ನಮ್ಮಿಂದ ಪಡೆಯುವ ಕಾರಣ ಸಾಮಗ್ರಿಗಳನ್ನು ದಿನೇ ದಿನೇ ಕಡಿಮೆ ಮಾಡುತ್ತಿದ್ದಾರೆ. ನಮ್ಮ ಛಹೀರ ವ್ಯಾಪಾರವು ಕುಂದುತ್ತಿದೆ. ಓಟೋವಾ ಶೆಕ್ಟಿನಿಂದ ಬ್ರಿಟಿಷರ ವ್ಯಾಪಾರ ಅಭಿವೃದ್ಧಿಯಾದದ್ದೆಂದು ಮಾತ್ರ ವ್ಯಕ್ತವಾಗುತ್ತದೆ. ಈ ಭಾರಿ ಎಸೆಂಬ್ಲಿಯಲ್ಲಿ ಇದು ಪುನಃ ಮಂಡಿತವಾಗದಿದ್ದರೆ, ಬರುವ ವರ್ಷ ಇದು ರದ್ದಾಗುವುದು. ಸರಕಾರದವರು ಈ ಶೆಕ್ಟಿಗೆ ಹಟ್ಟಿನ ಮತ ದೊರಕಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆದರೆ ವಿರೋಧ ಪಕ್ಷವು ಇದನ್ನು ತಡೆಯುವ ಎಲ್ಲಾ ಸಿದ್ಧತೆಗಳನ್ನು ಮಾಡಿರುತ್ತದೆ. ಅನೇಕ ಕ್ರೇಷ್ಠ ದುಂದಾಳುಗಳ ಬೆಂಬಲವು ಇವರಿಗೆ ಸಿಕ್ಕುವಂತಿದೆ.

ಬೌದ್ಧಮತ ಪ್ರಸಾರಣೆ

ಈ ಭೂಲೋಕದ ಜನಸಂಖ್ಯೆಯ ಮೂರನೆ ಒಂದಂಶವು ಬೌದ್ಧಮತಾವಲಂಬಿಗಳು. ಬೌದ್ಧಮತವು ಕ್ರೈಸ್ತಮತಗಿಂತ ಹಿಂದಾಗಿ ಜನಿಸಿರುತ್ತದೆ. ಬೌದ್ಧಮತದ ಅವಲಂಬಿಗಳು ಹೆಚ್ಚಾಗಿ ಸಿಲೋನ, ಹಿಂದೂದೇಶ ಬರ್ಮಾ ಮಲಯಾ, ಚೀನಾ, ಜಪಾನು ದೇಶಗಳಲ್ಲಿ ಕಂಡುಬರುತ್ತಿದ್ದಾರೆ. ಗ್ರೇಟ್ ಬ್ರಿಟನನಲ್ಲಿ ೫೦೦ ಬೌದ್ಧ ಮತಸ್ಥರಿದ್ದಾರೆ. ಈ ಸಂಖ್ಯೆಯು ದಿನೇ ದಿನೇ ವೃದ್ಧಿ ಹೊಂದುತ್ತಿದೆ. ಈ ದೇಶದಲ್ಲಿ ಯೋಗ್ಯ ಪ್ರಸಾರಣಾ ಕಾರ್ಯವು ನಡೆಯುವಂತೆ ಸದ್ಯದಲ್ಲೆ ಲಂಡನ ನಗರದಲ್ಲಿ ಒಂದು ಬೌದ್ಧ ದೇವಾಲಯವನ್ನು ಸ್ಥಾಪಿಸುವರು. ಈ ಬೌದ್ಧ ದೇವಾಲಯ ಇಲ್ಲಿ ನಿರ್ಮಾಣ ಹೊಂದಿದರೆ ಬ್ರಿಟನನಲ್ಲಿ ಪೂರ್ವ ದಿಕ್ಕಿನ ಮೂರು ಪ್ರಸಿದ್ಧ ಮತಗಳು ಬೇರೂರಿದಂತಾಗುವುವು. ವೋಕಿಂಗ್ ಎಂಬಲ್ಲಿ ಮುಸ್ಲಿಮರ ಮಸೀದಿಯೂ ಇದೆ ಒಂದು ಮಹಾವಿಷ್ಣು ಹಿಂದೂ ದೇವಾಲಯ ಓರ್ವ ಮಹಾರಾಜರ ಕೃಪೆಯಿಂದ ಬೇಗನೆ ರಚನೆಯಾಗುವುದು. ಲಂಡನ್ ನಗರದಲ್ಲಿ ಬೌದ್ಧ ದೇವಾಲಯ ಸ್ಥಾಪನೆಯಾದ ನಂತರ ಬೌದ್ಧಮತ ಪ್ರಸಾರಣಾ ಯುಕ್ತವಾದ, ಗ್ರಂಥ ಇತ್ಯಾದಿಗಳು ಇಲ್ಲಿಂದ ವಾರಾವಾರ ಪ್ರಕಟ ಮಾಡುವರು. ಅದಲ್ಲದೆ, ಬೌದ್ಧಮತವನ್ನು ಯೂರೋಪ ಖಂಡದಲ್ಲೂ, ವ್ಯಾಪಿಸುವಂತೆ, ಅಲ್ಲಿನ ಕೆಲವು ಪ್ರಮುಖ ದೇಶಗಳಲ್ಲಿ ಮಹಾ ಬೋಧಿ ಸಂಸ್ಥೆಗಳು ಕಾರ್ಯಗೈಯುತ್ತಿವೆ.

ಹಿಂದೂದೇಶದ ನಿರುದ್ಯೋಗ ನಿವಾರಣೆಯಾಗುವುದೆಂತು?

ನಿರುದ್ಯೋಗದಿಂದಾಗಿ ಪ್ರಾಣ ಹತ್ಯದ ಮತ್ತು ದಂಗೆಗಳ ಸಂಖ್ಯೆಗಳು ದಿನೇ ದಿನೇ ವೃದ್ಧಿ ಹೊಂದುವುದು, ಸರಕಾರದ ಗೋಚರಕ್ಕೆ ಬರಲಿಲ್ಲವೆ? ಇದೊಂದು, ಎಸೆಂಬ್ಲಿ ಮುಂದೆ ಬರಲಿರುವ ಅನೇಕ ಪ್ರಶ್ನೆಗಳಲ್ಲಿ ಮಹಾಪ್ರಶ್ನೆಯಾಗಿರುತ್ತದೆ. ಅಸಂಖ್ಯಾತ ಪ್ರಶ್ನೆಗಳು ಎಸೆಂಬ್ಲಿ ಅಧಿವೇಶನ ಸೇರಿವೆ. ಅವುಗಳಲ್ಲಿ ಕೆಲವು ಭಾರಿ ಉದ್ದವಾಗಿವೆ, ಅನೇಕ ವಿಚಾರಗಳನ್ನು ಹೊಂದಿಕೊಂಡಿವೆ. ಆದರೆ, ನಿರುದ್ಯೋಗ ಪ್ರಶ್ನೆಯು ಎಲ್ಲಾ ಸದಸ್ಯರ ಪ್ರೀತಿಯ ವಿಚಾರವಾಗಿರುತ್ತದೆಂದು ಭಾಸವಾಗುತ್ತದೆ. ಸರಕಾರದಿಂದ ನಿರುದ್ಯೋಗದ ಕುರಿತು ಪ್ರಶ್ನೆಗಳಿಗೆ ಯಾವ ಉತ್ತರವು ದೊರಕುವುದೆಂದು ಊಹಿಸಲು ಸಾಧ್ಯ. ಅವರ ಉತ್ತರ ಯಾವದೇ ಆಗಿರಲಿ, ನಿರುದ್ಯೋಗ ನಿವಾರಣೆಯ ಕುರಿತು, ಯೋಗ್ಯ ಸೂಚನೆಗಳಾಗುವವೆಂದು ನಮ್ಮ ಭರವಸೆ. ಶ್ರೀ ಭಗವಾನ ದಾಸರು ಈ ಕುರಿತು ಅತಿಶ್ರಾಂತ ಶ್ರಮಪಡಬೇಕಾಗಿ ನಿರ್ಧಾರ ಮಾಡಿರುತ್ತಾರೆ. ಡಾ॥ ಭಗವಾನ ದಾಸರ ಬುದ್ಧಿಚತುರತೆ ಪ್ರಶ್ನಿಸತಕ್ಕದಲ್ಲ. ಅವರ ಯೋಗ್ಯತೆಯು ಬಹಳ ವಾಗಿದ್ದರೂ, ಎಸೆಂಬ್ಲಿಯು ಕಳೆದ ಅಧಿವೇಶನದಲ್ಲಿ ಇವರು ಮೌನವನ್ನು ತಾಳಿದ್ದರು. ಆದರೆ ಈ ಭಾರಿ ವಿದ್ಯಾಭ್ಯಾಸ ಮತ್ತು ನಿರುದ್ಯೋಗ ಕುರಿತು ಬಹಳ ಪ್ರಯಾಸಪಡಬೇಕೆಂದಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಲನ

(೨೧ನೆಯ ಅಧಿವೇಶನ ಮುಂಬಯಿ)

ಸ್ವಾಗತ ಸಮಿತಿ

ಕೊನೆಯ ಸಮಾಚಾರ ಪತ್ರಿಕೆ.

ಸಮ್ಮೇಲನದ ಬಗ್ಗೆ ಯಾವತ್ತೂ ಸಿದ್ಧತೆಗಳು ಸಂಪೂರ್ಣವಾಗಿರುತ್ತವೆಯೆಂದು ಅರುಹಲಿಕ್ಕೆ ಸಂತೋಷವಾಗುತ್ತದೆ. ಸಮ್ಮೇಲನದ ಮೂರು ದಿವಸಗಳ ಕಾರ್ಯಕ್ರಮದ ವಿವರಗಳು ಕನ್ನಡಿಗರೆಲ್ಲ ಇಲ್ಲಿಗೆ ಬಂದ ನಂತರ ತಿಳಿಸಲ್ಪಡುವವು. ಪ್ರತಿನಿಧಿಗಳಿಗೆ ಉಳಿದುಕೊಳ್ಳಲಿಕ್ಕೆ ಎಂಬಾಯಿದ ಇಮಾರತಿನಲ್ಲಿ ವ್ಯವಸ್ಥೆ ಮಾಡಿದೆ ಎಂದು ಈ ಮೊದಲೇ ತಿಳಿಸಿದೆ. ಇದು ವಿಶೇಷ ಹಣ ಕೊಟ್ಟು ಉಳಿದುಕೊಳ್ಳುವ ಪ್ರತಿನಿಧಿಗಳ ಬಗ್ಗೆ ಅದೇ. ಆದರೆ ಅನೇಕ ಬಡ ಜನರು ಸಮ್ಮೇಲನಕ್ಕೆ ಬರುವ ಅಭ್ಯಾಸ ದನ್ಯತ್ವದಿಂದ ಅವರಿಗೆ ಕಡಿಮೆ ವೆಚ್ಚದಲ್ಲಿ ಉಳಿದುಕೊಳ್ಳುವ ಹಾಗೂ ಊಟ ಮಾಡುವ ಬಗ್ಗೆ ಪ್ರತಿನಿಧಿಗಳ ಎರಡನೇ ವಿಭಾಗವೆಂದು ಇಲ್ಲಿ ಗಿರಗಾಂವದಲ್ಲಿ ಮಾಧವಾಶ್ರಮದ ಒಬ್ಬ ಇಮಾರತಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಒಂದು ವಾರದ ವರೆಗೆ ಎಷ್ಟೇ ದಿವಸವಿದ್ದರೂ ಆ ಅವಧಿಗೆ ಪ್ರತಿ ಒಬ್ಬರಿಗೆ ೧-೮-೦ ಹಾಗೂ ಊಟ ಉಪಹಾರಗಳ ಬಗ್ಗೆ ಪ್ರತಿ ದಿವಸಕ್ಕೆ ಪ್ರತಿ ಒಬ್ಬರಿಗೆ ೦-೧೦-೦ಯಂತೆ ಆಕಾರಿಸುವದನ್ನು ನಿಶ್ಚಯಿಸಲಾಗಿದೆ. ಈ ಸ್ಥಳದಲ್ಲಿ ವಿಶೇಷ ಅನುಕೂಲತೆಗಳು, ಅಂದರೆ ಪಲ್ಲಂಗ, ಮೇಜು ಕುರ್ಚಿ ಮುಂತಾದವುಗಳು ಸಿಗಲಾರವು ... ವಿದ್ಯಾರ್ಥಿಗಳ ಬಡ ಮಾಸ್ತರ ಜನರ ಹಾಗೂ ಬಡ ಜನರ ಬಗ್ಗೆ ಈ ವ್ಯವಸ್ಥೆಯು ಇರುತ್ತದೆ. ಶಾಲಾ ಮಾಸ್ತರ ಜನರಿಗೆ ಸಾಲಿ ರಜೆಯಿರುವ ಬಗ್ಗೆ ಎಲ್ಲ ಮುನಿಸಿಪಾಲಿಟಿ ಮತ್ತು ಜಿಲ್ಲಾ ಸ್ಕೂಲು ಬೋರ್ಡುಗಳಿಗೆ ವಿನಂತಿ ಮಾಡಿಕೊಂಡಿದ್ದು ಅನೇಕ ಸ್ಕೂಲ್ ಬೋರ್ಡುಗಳಿಂದ ಈ ಸವಲತ್ತು ಕೊಡಲ್ಪಡುವ ಬಗ್ಗೆ ಉತ್ತರ ಬಂದಿದೆ. ಇತರ ಜನರು ಒಂದಾಯಿ ಇಮಾರತಿನಲ್ಲಿ ಇರಬೇಕಾಗುವದು.

ಡಿಸೆಂಬರ ೩೦ರಲ್ಲಿ ಮುಂಬಯಿಗೆ ... ವಾಗಿ ಬಳ ಇರುವದರಿಂದ ಎಲ್ಲ ಜನರು ಟಿಕೀಟಿನ ಅಂತರಗಳನ್ನು ಮತ್ತು ಹೋಗಿ ಬರು ಹೊತ್ತಿನ ... ಬೇಕೆಂದು ಸೂಚನೆ ಕೊಡಲ್ಪಡುತ್ತದೆ.

ಪ್ರತಿನಿಧಿಗಳ ಎರಡೂ ವಿಭಾಗಗಳಲ್ಲಿ ಪ್ರತಿನಿಧಿಗಳ ಪ್ರತ್ಯೇಕ ಕಾಣಿಕೆ ಹಾಗೂ ಅವರ ಅಭ್ಯಾಸ ಇವುಗಳ ಬಗ್ಗೆ ದಾಕ್ಷರರು ದಿನಾಲು ಬರು ಹೋಗುವರು.

ಬೋರಿ ಬಂದರ ಸ್ಟೇಶನಕ್ಕೆ ಬರುವ ಯಾವತ್ತು ಮತ್ತು ಗಾಡಿಗಳ ಕಾಲಕ್ಕೆ ವ್ಯಾರದ ಸಮಿತಿಯ ಸ್ವಯಂಸೇವಕರು ಹಾಜರಿರುವರು. ಮುಂಚಿತವಾಗಿ ಸಕಾಲದಲ್ಲಿ ತಿಳಿಸಿದಲ್ಲಿ ಬೇರೆ ಗಾಡಿಗಳ ವೇಳೆಗೆ ಹಾಗೂ ಬೇರೆ ಸ್ಥಳಗಳಲ್ಲಿ ಸ್ವಯಂಸೇವಕರು ಬರುವರು. ಈ ಸ್ವಯಂಸೇವಕರನ್ನು ಅವರ ದಾಸಿರುವ ಬಿಲ್ಲೆಗಳ ಮೇಲಿಂದ ಗುರ್ತಿಸಬಹುದು.

ಕೊನೆಯ ಪ್ರಾರ್ಥನೆ ಏನಂದರೆ ನಮ್ಮ ಕನ್ನಡ ಬಂಧು ಭಗಿನಿಯರೆಲ್ಲ ಈ ನಮ್ಮ ಮುಂಬಯಿ ಸಮ್ಮೇಲನಕ್ಕೆ ಆ ಸಮಿತಿ ಭಕ್ತಿ ಭಾವನೆಯಿಂದ ನವೊಳ್ಳಗೆಲ್ಲ ಬರಿಸ. ಕನ್ನಡ ಭಾಷೆಯ ಹಾಗೂ ಕರ್ನಾಟಕ ವಾಙ್ಮಯ ಸಂಸ್ಕೃತಿಗಳ ಸೇವೆಯನ್ನು ಯಥಾ ಶಕ್ತಿ ಮಾಡಬೇಕು.

ನಡೆಯಿರಿ ಕನ್ನಡಿಗರೇ ಮುಂಬಯಿಗೆ

ಕಳೆದ ದಶಂಬರ ತಿಂಗಳಿನಿಂದ ಇವತ್ತಿನ ವರೆಗೆ ಸತತವಾಗಿ ಒಂದು ವರ್ಷ ಅತಿಶ್ರಾಂತ ಶ್ರಮ ವಹಿಸಿ ಮುಂಬಯಿಯ ಕನ್ನಡಿಗರು ಕನ್ನಡ ಸಾಹಿತ್ಯ ಸಮ್ಮೇಲನದ ೨೧ನೆಯ ಅಧಿವೇಶನವನ್ನು ಮುಂಬಯಿ ಪಟ್ಟಣದಲ್ಲಿ ನೆರೆಯಿಸುವ ಬಗ್ಗೆ ಸಕಲ ಸಿದ್ಧತೆಗಳನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಈ ಮೊದಲೇ ಅನೇಕ ಸಮಾಚಾರ ಪತ್ರಿಕೆಗಳು ಪ್ರಕಟಿಸಲ್ಪಟ್ಟಿದ್ದು ಸಮ್ಮೇಲನದ ಬಗ್ಗೆ ಯಾವತ್ತು ಮಾಹಿತಿಯು ಎಲ್ಲ ಕನ್ನಡಿಗರಿಗೆ ವಿದಿತವಾಗಿರಲಿಕ್ಕೆ ಸಾಕು. ಕೊನೆಯ ಸಮಾಚಾರ ಪತ್ರಿಕೆಯು ಸಹ ಇದೇ ಸಂಚಿಕೆಯಲ್ಲಿ ಬೇರೆ ಕೊಡಲ್ಪಟ್ಟಿದೆ.

ಯಾವತ್ತು ವಿಷಯಗಳನ್ನು ಚೆನ್ನಾಗಿ ಹಾಗೂ ಆಳವಾಗಿ ವಿಚಾರಿಸಿದಲ್ಲಿ ಈ ಸಾರೆಯ ಸಾಹಿತ್ಯ ಸಮ್ಮೇಲನವು ಕನ್ನಡ ಸಾಹಿತ್ಯದ ಹಾಗೂ ಕರ್ನಾಟಕ ವಾಙ್ಮಯದ ಇತಿಹಾಸದಲ್ಲಿ ಅಪೂರ್ವವಾದದ್ದೆಂದು ನಿಸ್ಸಂದೇಹವಾಗಿ ಹೇಳಬಹುದು. ಯಾಕಂದರೆ ಈ ಸಮ್ಮೇಲನವು ಒಂದು ಸ್ಥಾನದ ಹೆಚ್ಚಾಗಿ ಕೇಂದ್ರೀಕರಿಸಿದ ಹಾಗೂ ಅನೇಕ ಉತ್ಕೃಷ್ಟ ವಾಙ್ಮಯ ಹಾಗೂ ಸಂಸ್ಕೃತಿಗಳ ಬಿಡಾರವಾದ ಮುಂಬೈ ಪಟ್ಟಣದಂಥ ಸ್ಥಳದಲ್ಲಿ ನೆರವೇರುವುದು. ಇದರಿಂದ ನಮ್ಮ ಕನ್ನಡ ಸಾಹಿತ್ಯದ ಬಗ್ಗೆ ಇತರ ಜನರಿಗೆ ತಿಳುವಳಿಕೆಯನ್ನು ಮಾಡಿಕೊಡುವ ಎರಡನೇ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಭಾವದಿಂದ ನಮ್ಮ ಸಾಹಿತ್ಯ ಸಂಸ್ಕೃತಿಗಳ ಪ್ರಗತಿಮಾಡಿಕೊಳ್ಳುವ ಅನುಕೂಲ ಸಂಧಿಯೂ ಒದಗುವುದು. ಮುಂಬಯಿ ಜನತೆಗೆ ಕರ್ನಾಟಕದ ಬಗ್ಗೆ ಜ್ಞಾನವುಂಟಾಗಿ ಅವರಲ್ಲಿ ಈಗ ನೆಲಸಿದ ಅಜ್ಞಾನ, ಅನಾದರ ಬುದ್ಧಿ ಮುಂತಾದವುಗಳು ಅಳಿದುಹೋಗುವುವು. ಕನ್ನಡಿಗರೆಲ್ಲರೂ ಒಂದೇ ಕಡೆಯಲ್ಲಿ ನೆರೆಯುವುದರಿಂದ ಪರಸ್ಪರ ಪ್ರೇಮಭಾವ, ಬಂಧುಭಾವ ಮುಂತಾದ ಉಚ್ಚ ಭಾವನೆಗಳು ಪ್ರಜ್ವಲಿತವಾಗುವವು. ಮುಂಬಯಿ ಪಟ್ಟಣದ ಕನ್ನಡಿಗರಲ್ಲಿ ಒಕ್ಕಟ್ಟುಂಟಾಗಿ ಭಾಷೆ ಹಾಗೂ ದೇಶ ಇವುಗಳ ಸೇವೆಗೆ ಅವರು ಹೆಚ್ಚು ಉತ್ಸುಕರಾಗುವರು. ಎಲ್ಲ ಕನ್ನಡಿಗರು ಒಂದೇ ಸ್ಥಳದಲ್ಲಿ ನೆರೆಯುವುದರಿಂದ ಕರ್ನಾಟಕದ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯವಾಗಿ ಕರ್ನಾಟಕದ ಏಳಿಗೆಗೆ ಬಹಳ ಸಹಾಯವಾಗುವುದು. ಇದೇ ಕಾಲಕ್ಕೆ ವಿಜಯನಗರ ಚರಿತ್ರೆ ಹಾಗೂ ಕರ್ನಾಟಕದ ಕಲಾಕೌಶಲ್ಯ ಪ್ರದರ್ಶನಗಳು ನೆರವೇರುತ್ತಿರುವುದು, ಅತ್ಯಂತ ಅಭಿಮಾನಾಸ್ಪದವಾದ ಹಾಗೂ ಸಂತೋಷಕರವಾದ ಸಂಗತಿಯಾಗಿದೆ. ಈ ಕಾರ್ಯಗಳು ಯಶಸ್ವಿಯಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ಸಿದ್ಧತೆಯು ಸಂಪೂರ್ಣವಾಗಿದ್ದು ... ನೀರಿನ ... ಬಂದಿದೆ.

ಪ್ರತಿನಿಧಿಗಳಿಗೆ ಉಳಿದುಕೊಳ್ಳಲಿಕ್ಕೆ ಉತ್ತಮ ವ್ಯವಸ್ಥೆ ಮಾಡಲ್ಪಟ್ಟಿದೆ ಎಂಬುದರಲ್ಲಿ ಸಂದೇಹವಿಲ್ಲ. ಹೆಚ್ಚು ಹಣ ಕೊಡುವವರ ಬಗ್ಗೆ ಎಂಪಾಯರ್ ಇಮಾರತಿನಲ್ಲಿ ಸಕಲ ಅನುಕೂಲತೆಗಳಿಂದ ಪೂರ್ಣವಾದ ವ್ಯವಸ್ಥೆ ಮಾಡಲ್ಪಟ್ಟಿದೆ. ಬಡಜನರ ಸಲುವಾಗಿ ಗಿರಗಾಂವದಲ್ಲಿ ಸ್ಥಳದ ಅನುಕೂಲತೆ ಮಾಡಿರುತ್ತದೆ. ಎಲ್ಲ ಸ್ಥಳಗಳಲ್ಲಿ ಸ್ವಯಂಸೇವಕ ಯೋಜನೆಯಿದೆ. ಈ ಪ್ರಕಾರ ಎಲ್ಲ ಸಿದ್ಧತೆಗಳು ಪೂರ್ಣವಾಗಿ ಯಿಂದು ಎದುರು ನೋಡುತ್ತಿದೆ.

ಅದ್ದರಿಂದ ಕನ್ನಡಿಗರೇ ಏಳಿರಿ ಮುಂಬಯಿಗೆ ಹೋಗಲಿಕ್ಕೆ ಸಿದ್ಧರಾಗಿರಿ. ಮುಂಬಯಿಯಲ್ಲಿ ನಮ್ಮ ಕನ್ನಡ ಬಂಧುಗಳಿಗೆ ಭ್ರಾತೃಭಾವನೆಯಿಂದ ಪ್ರೇಮದಾ ಬೆಟ್ಟಿಕೊಟ್ಟು ಅವರೊಡನೆ ಈ ಮಹತ್ಕಾರ್ಯದಲ್ಲಿ ಸಹಕಾರ ಸಹಾಯ ಮುಂತಾದವುಗಳನ್ನು ಒದಗಿಸಿಕೊಟ್ಟು ಮುಂಬಯಿ ಸಾಹಿತ್ಯ ಸಮ್ಮೇಲನವನ್ನು ಅಪೂರ್ವ ರೀತಿಯಲ್ಲಿ ಯಶಸ್ವಿಯಾಗಿ ನೆರವೇರಿಸಿ ಕನ್ನಡ ಭಾಷೆಯ ಕರ್ನಾಟಕ ಮಾತೆಯ ಸೇವೆಯನ್ನು ಮಾಡಲಿಕ್ಕೆ ಬೇಗನೆ ಹೊರಡಿರಿ ಮುಂಬಯಿಗೆ.

(ಬರೆದು ಬಂದುದು)

ಸ್ವತಂತ್ರ್ಯ ಸಾಧನ.

ಇಡೀ ಜಗತ್ತಿನಲ್ಲಿ ಸ್ವಾತಂತ್ರ್ಯವೆಂಬುದೊಂದು ಅಮೂಲ್ಯ ಪದಾರ್ಥ. ಅದನ್ನು ಸಂಪಾದಿಸುವುದೇ ಜಗತ್ತಿನ ಜೀವಕೋಟಿಯ ಧ್ಯೇಯವು. ಪಂಜರದಲ್ಲಿ ಬಂಧಿಸಿದ ಪಕ್ಷಿಯು ತನ್ನ ಬಂಧವಿಮೋಚನೆಗಾಗಿ ಪ್ರಯತ್ನಿಸುತ್ತದೆ ಎಂಬುದು ಎಲ್ಲರೂ ತಿಳಿದ ವಿಷಯ. ಸೆರೆಯಲ್ಲಿರುವ ವರೆಗೆ ಅದು ಸರಿಯಾಗಿ ಆಹಾರವನ್ನು ತಿನ್ನದು, ನಿದ್ರೆಗೈಯದು, ಸ್ವಸ್ಥಚಿತ್ತದಿಂದ ಇರಲಾರದು. ಸ್ವಲ್ಪ ಮಾತ್ರ ಅವಕಾಶ ಸಿಕ್ಕಿದರೆ ಅದು ಅಲ್ಲಿಂದ ಹಾರಿಹೋಗುವುದಿಲ್ಲವೆ? ಪಕ್ಷಿ ಮಾತ್ರವಲ್ಲ ಪ್ರಪಂಚದ ಕ್ಷುಲ್ಲಕ ಜೀವಿಗಳೂ ಸ್ವತಂತ್ರ ದೊರಕುವ ವರೆಗೂ ಚಡಪಡಿಸುತ್ತವೆ. ಎಂದರೆ ಸ್ವಾತಂತ್ರ್ಯವೇ ಸ್ವರ್ಗ, ಅಸ್ವಾತಂತ್ರ್ಯವೇ ನರಕ.

ಪಶುಪಕ್ಷಿ, ಕ್ರಿಮಿಕೀಟಗಳಲ್ಲಿ ಮಾತ್ರವಲ್ಲ, ವನಸ್ಪತಿಗಳು ಕೂಡಾ ಸ್ವತಂತ್ರ್ಯಕ್ಕಾಗಿ ಸದಾ ಹೋರಾಡುತ್ತವೆ. ಒಂದು ಗಿಡವನ್ನು ಸ್ವಾಭಾವಿಕವಾಗಿ ಬೆಳೆಯಬಿಟ್ಟರೆ ಮಾತ್ರ ಅದು ಹುಲುಸಾಗಿ ಬೆಳೆಯುವುದು. ಸಾಧ್ಯ ಅದರ ಬೆಳವಣಿಗೆಗೆ ಪ್ರತಿಬಂಧಕವನ್ನುಂಟುಮಾಡಿದರೆ ಅದರ ಬೆಳವಣಿಗೆಯು ಕುಂಠಿತವಾಗಿ ಅದೂ ಕೆಟ್ಟು ಹೋಗುವುದು. ಕ್ರಮೇಣ ನಶಿಸಿಹೋಗುವುದು. ಆ ಕಾರಣ ಸ್ವಾತಂತ್ರ್ಯವೆಂಬುದು ಪ್ರಕೃತಿಸಿದ್ಧ ಸ್ಥಿತಿಯೆಂದು ತೋರುತ್ತದೆ.

ಹೀಗೆ ವೃಕ್ಷಲತೆಗಳೂ, ಪಶುಪಕ್ಷಿ ಕ್ರಿಮಿಕೀಟಗಳೂ, ಮುಂತಾದ ಸಮಸ್ತ ಜೀವಸೃಷ್ಟಿಯೂ ಸ್ವಾತಂತ್ರ್ಯ ಗಳಿಕೆಗಾಗಿ ಕಾತರದಿಂದ ಕಷ್ಟವನ್ನು ಪಡೆಯುತ್ತದೆ ಎಂಬುದು ನಿರ್ವಿವಾದ ಸಂಗತಿಯಷ್ಟೆ! ಎಂದ ಮೇಲೆ ಪ್ರಾಣಿಕೋಟಿಯಲ್ಲಿ ಉತ್ತಮವಾಗಿ ಯುಕ್ತಾಯುಕ್ತ ವಿಚಾರಮಾಡುವ ಶಕ್ತಿಯುಳ್ಳವನಾಗಿರುವ ಮನುಷ್ಯನು ಮಾತ್ರ ಪರತಂತ್ರ ಜೀವಿಯಾಗಿರುವುದು ವಿಷಾದಕರವಲ್ಲವೇ? ಯಾವ ದೇಶವಾಗಲಿ, ಯಾವ ಜನಾಂಗವಾಗಲಿ ಎಷ್ಟರ ವರೆಗೆ ಅದು ಅಸ್ವಾತಂತ್ರ್ಯದಲ್ಲಿ ಬಿದ್ದು ನರಳುವುದೋ, ಅಷ್ಟರ ವರೆಗೆ ಅದು ಹೀನಸ್ಥಿತಿಯಲ್ಲಿದ್ದು ದುಃಖಿಯಾಗಿ, ನಾನಾ ಕಷ್ಟಗಳಿಗೊಳಪಟ್ಟು ಪರಿತಪಿಸಬೇಕಾಗುತ್ತದೆ. ಅಂಥ ಅಮೂಲ್ಯವಾದ ಸ್ವತಂತ್ರಸಂಪಾದನೆ ಮತ್ತು ಅದರ ರಕ್ಷಣೆಯೇ ಪ್ರತಿಯೊಬ್ಬ ಸ್ವದೇಶಿಕನ ಪರಮ ಧ್ಯೇಯವು. ಇಂತಹ ಸ್ವತಂತ್ರವೇ ಸ್ವರಾಜ್ಯದ ಅಡಿಗಟ್ಟು.

ಈ ವಿಧವಾದ ಸ್ವಾತಂತ್ರ್ಯವನ್ನದರೂ ಹೇಗೆ ಸಂಪಾದಿಸಬೇಕು? ಇದು ಅತ್ಯಂತ ಸಂಬಂಧದಲ್ಲಿ ಏಕೆಂದರೆ ಪ್ರಪಂಚದಲ್ಲಿ ಅನೇಕರು ಈ ಮೊದಲು ಈ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಸಾಧ್ಯವಾಯಿತೆ? ಹೌದು. ಕೆಲವರಿಗೆ ಮಾತ್ರ ಹಾಗೆಯೇ ಉಳಿದವರಾಗಿ ಅದ್ಭುತ ಹೋರಾಡುತ್ತಾ ಇದ್ದಾರೆ. ಆದರೆ ಬರೀ ಹೋರಾಟದಿಂದ ಫಲವಿಲ್ಲ. ತಮ್ಮ ಸ್ವಾರ್ಥವನ್ನು ಬಿಡಬೇಕು. ಐಕ್ಯಮತ್ಯವನ್ನು ಸಾಧಿಸಿಕೊಳ್ಳಬೇಕು. ಸ್ಪೃಶ್ಯ ಅಸ್ಪೃಶ್ಯ ಎಂಬ ಭೇದಬುದ್ಧಿಯನ್ನು ತೊರೆಯಬೇಕು. ದೇಶದ ಪ್ರತಿಯೊಬ್ಬ ವ್ಯಕ್ತಿಯೂ ವಿದ್ಯಾವಂತನಾಗಿ ಸ್ವತಂತ್ರ ಜೀವನೋಪಾಯ ಮಾಡಲು ಸಮರ್ಥನಾಗಬೇಕು. ಮಾತ್ರವಲ್ಲ ತನ್ನ ಸ್ವದೇಶಕ್ಕೋಸ್ಕರ ತನು ಮನ ಧನವನ್ನಾದರೂ ಅರ್ಪಿಸಲು ಸಿದ್ಧನಿರಬೇಕು. ಇದೇ ದೇಶಸೇವೆ ಇದೇ ಮಾತೃಸೇವೆ ಇದಕ್ಕಿಂತಲೂ ಶ್ರೇಷ್ಠ ಪುಣ್ಯಕಾರ್ಯವು ಬೇರೊಂದಿಲ್ಲ. ಇದೇ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮಾತೃಭೂಮಿಯ ಮೇಲಣ ನಿಶ್ಚಲಭಕ್ತಿಯಿಂದ ಇತರರೊಡನೆ ಸಹಕರಿಸಿ ದೇಶಮೂಲಕವಾದ ಸ್ವಾತಿಗೆ ಪಾತ್ರರಾಗಿ ಅವರ ಆಜ್ಞೆಯಂತೆ ವರ್ತಿಸುತ್ತಾ ಬಂದಲ್ಲಿ ಯಾವದೇಶವು ತಾನೆ ತನ್ನ ಸ್ವತಂತ್ರವನ್ನು ಕಾಪಾಡಿಕೊಳ್ಳಲಾರದು! ಇವನ್ನು ಮಾತ್ರವೇ ... ಸ್ವರಾಜ್ಯವು ಸಹ ತಾನಾಗಿಯೇ ಲಭಿಸುವುದು.

ಸ್ತ್ರೀಪುರುಷರ ಪ್ರಿಯ ರಹಸ್ಯ. (ಶರೀರ ಮರ್ಮಶಾಸ್ತ್ರ)

ಆ ಪತೀಯುವತಿಗಳೇ, ಇದು ವರೆಗೆ ಸೀತಿಂತಹ ಪುಸ್ತಕವನ್ನು ಓದಿರಬಹುದೆ? ಇದರಲ್ಲಿ ಅನೇಕ ಜಾತಿಯ

ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಬಹಳ ನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ರೋಗಗಳು, ಗರ್ಭಬದ್ಧ, ಗರ್ಭಾಭಿವೃದ್ಧಿ ರೀತಿ, ಶಿಶು ಉತ್ಪತ್ತಿ ವಿಧ, ಗರ್ಭಾದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ಚಿಕಿತ್ಸೆಗಳು, ಇನ್ನು ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತರಹಸ್ಯಗಳೆಲ್ಲ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಅಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿಲ್ಲ. ಬೆಲೆ ರೂ. ೧. ೮. ೩. ಬೇರೆ.

ವಿಳಾಸ:—ಕರ್ನಾಟಕ ಏಜನ್ಸಿ, ತ್ರಿಪ್ಲಿಕೇನ್ ನಾಯಕನ ಕೋಯಿಲ್ ಬೀದಿ, ಮದರಾಸು.

ಬೇಗನೇ ಪುಸ್ತಕವನ್ನು ತರಿಸುವವರಿಗೆ ರಿಯಾಯತಿ ಇರುವುದರಿಂದ ಇನ್ನೂ.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd.

Head Office.—48, Byragimatam Street,

Post Box No. 208, Madras.

ಅನುಕ್ರಮಣಿಕೆ.

ಕಾಂಗ್ರೆಸ್ ಚರಿತ್ರಸಾರ	೧
ನೋಟೀಸುಗಳು	೨
ನನ್ನ ಪರಿಚಯದ ಕರ್ನಾಟಕ ಧುರೀಣರು	೯
ರಾಷ್ಟ್ರಸಭೆಯ ಸುವರ್ಣೋತ್ಸವ ಸ್ಮಾರಕ	೧೦
ಪ್ರಪಂಚ ಪರಿಚಯ	೧೧
ಅಗ್ರಲೇಖ	
ರಾಷ್ಟ್ರ ಸಭೆಯ ಸುವರ್ಣೋತ್ಸವ	೧೨
ಸ್ಫುಟವಿಚಾರಗಳು	,,
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೫
ಹೋರ ಲಾವಲ ಸಂಧಿ ಸೂಚನೆಗಳು ಕಳಚಿ ಬಿದ್ದುವು	೧೮
ಭಾರತದ ತ್ರಿಮೂರ್ತಿಗಳು	೧೬
ಪಂಡಿತ ಜವಾಹರಲಾಲರ ಮತ್ತು ಸುಭಾಸ್ ಚಂದ್ರ ಬೋಸರ ಸಂದೇಶಗಳು	೨೦
ಜಗತ್ತಿನ ಗಲಭೆಯ ಮರ್ಮ	೨೨

ಸ್ವದೇಶಾಭಿಮಾನಿ.

ಕಾ. ೨೭ನೇ ಶುಕ್ರವಾರ ದಶಂಬರ '೩೫

ರಾಷ್ಟ್ರಸಭೆಯ ಸ್ವರ್ಣೋತ್ಸವ

ಜನಾಂಗ ಜೀವನದಲ್ಲಿ ಐವತ್ತು ವರ್ಷಗಳೆಂದರೆ, ಸಮುದ್ರದ ನೀರಿನಲ್ಲಿ ಒಂದು ಹನಿಯಂತೆ ಆದರೂ ಮನುಷ್ಯನ ಜೀವಮಾನದ ಸರಾಸರಿಯಲ್ಲಿ, ಅರ್ಧ ಶತಮಾನವು ಅತಿ ಚಮತ್ಕಾರವುಳ್ಳ ವಿಶೇಷ ಮಹತ್ವಸೂಚಕವಾದ ಒಂದು ಪರ್ಯಾಯ ಸಾಮಾನ್ಯವಾಗಿ ಅರೆವಾಸಿ ಜೀವಮಾನವು ನಿದ್ದೆಗಾಗಿಯೆ ವ್ಯಯವಾಗುವ ಈ ಐವತ್ತು ವರ್ಷಗಳಲ್ಲಿ, ಯಾವುದೊಂದು ಸಂಸ್ಥೆ ಸಮಿತಿ ಸಂಘ ಮೊದಲಾದುವು ನಡೆಸಿದ ಪರಿಣಾಮಕಾರಕ ಕಾರ್ಯಕ್ರಮಕ್ಕೆ ಹೆಚ್ಚಿನ ಗೌರವವುಂಟು ಅಂತಹ ಸಮಿತಿಗಳಲ್ಲಿ ಇಡೀ ರಾಷ್ಟ್ರದ ಉನ್ನತಿಗಾಗಿ ಐವತ್ತು ವರ್ಷಗಳ ಹಿಂದೆ ಸ್ಥಾಪಿತವಾದ ರಾಷ್ಟ್ರಸಭೆಯು ಒಂದು, ಅದರ ವಿಶೇಷ ಪರಿಣಾಮಗಳಿಂದ ಲೀಗ ಜನಜಾಗೃತಿಯು ಉಂಟಾಗಿ, ಜನಾಂಗ ಜೀವನದ ಧ್ಯೇಯಗಳೂ ಕ್ರಮಗಳೂ ಸುಧಾರಣೆಹೊಂದಿ ಮಾರ್ಪಟ್ಟು ಭವಿಷ್ಯತ್ತಿನಲ್ಲಿ ಭಾರತವಾಸಿಗಳ ಗೌರವವು ಪ್ರಾಚೀನ ಕಾಲದಲ್ಲಿ ಇದ್ದುದಕ್ಕಿಂತ ಹೆಚ್ಚಾಗಿಯೇ ಬೆಳೆದು ಬರುವಂತಾಗುವುದೆಂದು ಇತಿಹಾಸ ವಿಮರ್ಶೆ ಬಲ್ಲವರ ಅಭಿಪ್ರಾಯವಾಗಿದೆ

ಈ ವಾರದಲ್ಲಿ ಅದುಕಾರಣವೇ ರಾಷ್ಟ್ರಸಭೆಯು ಸ್ವರ್ಣೋತ್ಸವವನ್ನು ಆಚರಿಸುತ್ತಾರೆ ರಾಷ್ಟ್ರಸಭಾ ಕಾರ್ಯಕಲಾಪಗಳ ಇತಿಹಾಸವು ಆಗುವಷ್ಟು ಸಮಗ್ರವಾಗಿ ಈ ಸಂಚಿಕೆಯ ಇತರ ಕಡೆಗಳಲ್ಲಿ ಕೊಡಲಾಗಿದೆ ಅದರಿಂದ ಕೇವಲ ಕೆಲವೇ ಮಂದಿ ಒಂದು ಧ್ಯೇಯವನ್ನು ಕಟ್ಟಿಕೊಂಡು ಮೊದಮೊದಲು ಬರೀ ಅರ್ಜಿದಾರರಂತೆ ಈ ಸಭೆಯಲ್ಲಿ ಕೆಲವು ವರ್ಷ ಪ್ರಾರ್ಥನೆಗಳನ್ನ ಸಲಿಸುತ್ತ, ಡಫರಿನ್ ಪ್ರಭುಗಳ ಪ್ರಕಟ ಅಥವಾ ಅವ್ಯಕ್ತ ಬೆಂಬಲದಿಂದ ಮುಂದರಿಯಲು ಅಂದು ನಿಶ್ಚಯಿಸಿದಂತೆ ಸಾಧಿಸಿದರೂ, ಸರಕಾರದ ರೀತಿ ನೀತಿಗಳೂ ಈ ರಾಷ್ಟ್ರಸಭೆಯ ರೀತಿನೀತಿಗಳೂ ಆಕಾಂಕ್ಷೆಗಳೂ ಪ್ರತ್ಯೇಕವಾಗುತ್ತ ಬಂದುದರಿಂದ, ರಾಷ್ಟ್ರಸಭೆಯು ಕೊನೆಗೆ ಪ್ರಾರ್ಥನೆಗಳನ್ನು ತ್ಯಜಿಸಿ, ಸೂಚನೆಗಳಿಗೂ, ಅವೂ ವ್ಯರ್ಥವಾದಲ್ಲಿ ನಿರ್ಧಾರಗಳಿಗೂ ಕೈಯಿಕ್ಕಿ ಬ್ರಿಟಿಷರಲ್ಲಿ ಸರಕಾರಕ್ಕೆ ವಿರುದ್ಧ ಪಕ್ಷವೆನಿಸಿ ಯಾವುದಿದೆಯೋ ಅದರಂತೆ ವಿಮರ್ಶಕ ಪಕ್ಷವಾಗಿ ಬೆಳೆದು ಬಂತು ಇತರ ಬ್ರಿಟಿಷ್ ನಾಡುಗಳೊಡನೆ ಭಾರತವರ್ಷವೂ ಸಮಾನಸ್ಕಂಧತೆಯನ್ನು ಹೊಂದಬೇಕೆಂಬ ಆಶಯದಿಂದ ಸ್ವಾತಂತ್ರ್ಯವೇ ಸಾಧ್ಯವಾಗುವ ಹಾಗೆ ಪೇಚಾಡಲು ತವಕಿಸಿತು. ಹ್ಯೂಮ, ವೆಡ್ಡರಬರ್ನ, ಕಾಟನ್ ಪ್ರಭೃತಿಗಳೂ, ದಾದಾಭಾಯಿ, ಗೋಖಲೆ, ಮೆಹತಾ, ಬೆನರ್ಜಿ, ತಿಲಕ, ಗಾಂಧಿಯವರಂತಹ ಮಹಾಪುರುಷರೂ ಎನ್ನಿಬಿಸೆಂಟ ಸರೋಜಿನಿ ದೇವಿಯರಂತಹ ಮಹಾಮಹಿಳೆಯರೂ ಆಗಿಂದಾಗ ಸೂತ್ರಗಳನ್ನು ಹಿಡಿದು ಸಭೆಯ ಕಾರ್ಯಕ್ರಮಗಳನ್ನು ಮುಂದರಿಸಿ, ಈಗ ಕಾಂಗ್ರೆಸ್ ಪಕ್ಷವೆಂಬುದು ಜನತೆಯ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಲು ಶಕ್ತವಾದೊಂದು ವಿರಾಟ್ ಪಕ್ಷವಾಗಿ ನಿಂತಿದೆ ಇವೇ ಹದಿನೈದು ವರ್ಷಗಳಿಂದಂತೂ ಈ ಪಕ್ಷದ ಪ್ರಭಾವವು ಎಲ್ಲೆಡೆಗಳಲ್ಲೂ ಏರುತ್ತ ಬಂದದೆ ಜನಾಂಗದ ಹೆಸರಲ್ಲಿ ಪ್ರಾತಿನಿಧ್ಯವನ್ನು ವಹಿಸಿಕೊಳ್ಳುವುದಕ್ಕೆ ಇದರಷ್ಟು ವ್ಯವಸ್ಥಿತವಾಗಿರುವ ಮತ್ತೊಂದು ಪಕ್ಷವೂ ಇಲ್ಲ, ಮತ್ತೊಂದು ಸಭೆಯೂ ಇಲ್ಲ

ರಾಷ್ಟ್ರಸಭೆಯ ಕಾರ್ಯಕ್ರಮವು ಆಗಾಗ ಬದಲಾಗುತ್ತಲೇ ಬಂದಿರುವುದು ಅದರಲ್ಲಿ ಜೀವವಿರಬೇಕೆಂಬುವ ಲಕ್ಷಣವನ್ನೆ ಸೂಚಿಸುತ್ತದಲ್ಲದೆ, ಅಚಲವಾದ ಧ್ಯೇಯವಿದ್ದರೂ ಹಿಮಾಚಲದಂತೆ ಜಡವಾಗಿದ್ದುಕೊಳ್ಳಬೇಕೆಂದೇನೂ ಅದರ ಇಚ್ಛೆಯು ಸೂಚಿಸುತ್ತಿಲ್ಲ ಸರಾತಿ ನಲ್ಲೊಮ್ಮೆ, ಬೆಸೆಂಟರ ಕಾರಾವಾಸ, ಮಹಾತ್ಮರ ಬಂಧನ ಇತ್ಯಾದಿ ಸಂದರ್ಭಗಳಲ್ಲಿ ಆಗಾಗ ಸಭಾಕಾರ್ಯದಲ್ಲಿ ಉತ್ಸಾಹವು ಕುಂದಿ ಮಬ್ಬು ಕಟ್ಟಿದ್ದಿತು ಆ ಮಬ್ಬು ಅತ್ತ ಸರಿದು ಪುನಃ ಸಬಾಸೂರ್ಯನು ಬೆಳಗುವಾಗ, ಹಿಂದಣ ಮಾಲಿನ್ಯತೆ ಮ್ಲಾನತೆಗಳು ಅಳಿದು ಹೋಗುವಂತಾಗಿ, ಹೊಸ ತೇಜವೇ ಜನಾಂಗದ ಮೇಲೆ ಬೀರಿದ್ದಿತು. ದೇಶದಲ್ಲಿನ ವಿದ್ಯಮಾನಗಳು ಹೇಗಾಗುತ್ತ ಒಂದುವೊ, ಅದರಂತೆ ಕಾರ್ಯಕ್ರಮವು ಪಲ್ಲಟಗೊಂಡಿತು. ಸರಕಾರವೂ ಇತರ ಪಕ್ಷಗಳೂ ಮುಂದೆ ಕಾಂಗ್ರೆಸ್ ಪಕ್ಷವು ಏನು ಮಾಡಲಿರುವುದೆಂದೇ ಕುತೂಹಲದಿಂದ ಕಾಯುತ್ತಿರುವ ಹಾಗೇ ಈ ಪಕ್ಷವು ತ್ವರಿತವಾಗಿ ಕ್ರಮಸುಧಾರಣೆಗಳನ್ನು ಮಾಡುವ ಶಕ್ತಿಯುಳ್ಳದಾಗಿದೆ

ಅಸಹಕಾರದ ದಿನಗಳ ಮಾತಿರಲಿ, ಎಸೆಂಬ್ಲಿ ಅಥವಾ ಕೌನ್ಸಿಲು ಚುನಾವಣೆಗಳ ಮಾತೆತ್ತಿದರೂ, ಜನತೆಯು ಕಾಂಗ್ರೆಸ್ ಪಕ್ಷದ ಬೆಂಬಲಕ್ಕಿದೆ ಎಂಬುದು ಧಾರಾಳವಾಗಿ ಪ್ರಮಾಣ ಹೊಂದುವುದು ಈಗ ತೂ, ಗ್ರಾಮೋದ್ಧಾರ ಕಾರ್ಯದ ಮಾತೇ ಕಾಂಗ್ರೆಸ್ ಮುಖಂಡರ ಬಾಯಿಂದ ಹೊರಡುತ್ತಿದೆ ಅಸ್ಪೃಶ್ಯತಾ ನಿವಾರಣೆ, ಶಿಕ್ಷಣ ಮತ್ತು ಕೈಕಸಬುಗಳ ಪ್ರಚಾರ ಸಮಾಜಗಳೊಳಗೆ ಐಕ್ಯಸಾಧನೆ, ಖಾದೀ ಮತ್ತು ಸ್ವದೇಶೀ ಪ್ರಚಾರ ಮೊದಲಾದ ನವೀನ ರೀತಿಗಳಿಂದ ವಿದ್ಯಮಾನಗಳು ಎಷ್ಟೋ ವಿರುದ್ಧವಾಗಿ ಇರುವಾಗಲೂ, ರಾಷ್ಟ್ರಸಭಾ ಮುಖಂಡರು ತೀರ ಸಾಮಾನ್ಯರ ಗುಡಿಸಲಿನವರೆಗೂ ರಾಷ್ಟ್ರೀಯ ಜೀವನದ ಸವಿಯನ್ನು ಹಂಚಲು ತೊಡಗಿದ್ದಾರೆ ಅಧಿಕಾರ ಸ್ವೀಕರಣದ ಅದೊಂದು ಹಚ್ಚೆಯನ್ನಿಡ ಪರಿ ಮುಖಂಡರಲ್ಲಿ ಹಲವರು ಕಾಲನ್ನೆತ್ತಿರುವರು, ಅದು ಕೈಗೂಡಿದರೆ, ರಾಷ್ಟ್ರದ ಪುನರ್ಘಟನೆಗೇ ಅಣ್ಣಿಯೊಡನೆ ಸೇರಿ ಸಾಧಿಸಲು ಸರ್ವತ್ರವೂ ಸುಲಭವಾದೀತೆಂದು ಅವರ ನಂಬುಗೆಯಿದೆ

ರಾಷ್ಟ್ರಸಭೆಗೆ ಇದಿರಾಡಿದವರಲ್ಲಿ,— ಅವರೂ ಸತ್ಕಾರ್ಯಗಳೇ—ಹಲವರು ಮೊದ ಮೊದಲು ಈ ಪಕ್ಷವು ಬರೀ ಕೆಲವರ ಕೂಟನೆಂದೂ, ಇವರಲ್ಲಿ ಮಹತ್ವಾಕಾಂಕ್ಷೆಯೇ ಮಿತಿಮೀರಿ ಹೀಗೆ ವರ್ತನೆಯಾಗಿದೆ ಎಂದೂ ಎಂದವರು ಇದ್ದರು ಅರೆಬಟ್ಟೆಗಳನ್ನುಟ್ಟು ಮಹಾತ್ಮಾಜಿಯವರು ದಿನಕ್ಕೆ ನಾಲ್ಕಾಣೆಯೊಳಗೆ ಜೀವನಮಾಡುತ್ತ, ನಾಯಕತ್ವವನ್ನು ವಹಿಸಿದಂದಿನಿಂದ ಈ ಮಾತಿಗೆ ಬೆಲೆಯಿಲ್ಲದೆ ಹೋಗಿದೆ

ಜಾತಿಗಳ ಭಿನ್ನಮನೋಧರ್ಮದ ಮೇಲೆ ವಿಶ್ವಾಸವನ್ನಿಟ್ಟೇ ಕೆಲವರು ರಾಷ್ಟ್ರಸಭೆಗೆ ಇದಿರಾಳಿಗಳಾಗಿರುವರು ಮೆಲ್ಲನೆ, ಸಮಸ್ತ ಸಮಾಜಗಳಲ್ಲಿನ ಮುಖಂಡರು ಇದರೊಳಗೆ ಸೇರಿ, ರಾಷ್ಟ್ರೀಯರಲ್ಲಿ ಜಾತಿಭೇದವೇ ಮೊದಲಾದ ಭೇದಗಳಿಗೆ ಅವಕಾಶವೇ ಇರಲಾರದೆಂದು ತೋರಿಸಿಕೊಟ್ಟಿರುವ ಕಾರಣ, ಈ ಇದಿರಾಳಿಗಳೂ ನಿರಸ್ತ್ರರಾಗಿರುವರು.

ರಾಷ್ಟ್ರಸಭೆಯ ತತ್ವಗಳು ದೇಶೀಯ ರಾಜ್ಯಗಳಲ್ಲಿಯೂ ಹರಡುತ್ತಲಿದ್ದು, ಅಲ್ಲಿನ ಜನತೆಯನ್ನೂ ಭಾರತವರ್ಷವೇ ಮೊದಲೆನ್ನುವ ಅಭಿಪ್ರಾಯ ಹೊಂದುವಂತೆ ಪ್ರೇರಿಸುತ್ತಿವೆ

ಹೀಗೆ ರಾಷ್ಟ್ರದೇವತೆಯ ಆರಾಧಕನಾಗಿ ರಾಷ್ಟ್ರಪುರುಷನು ಎದ್ದು ನಿಂತಿರುವನು ಅವನ ಐವತ್ತು ವರ್ಷಗಳ ಆರಾಧನೆಯ ಒಂದು ಆವರ್ತನೆಯು ಇಲ್ಲಿಗೆ ಮುಗಿದಿದೆ. ಪೂಜಾರ್ಪಣವಾದೊಡನೆ, ಮುಂದಣ ಆಶೀರ್ವಾದವು ಈ ಬಗೆಯಾಗಿ ದೊರೆಯಲೆಂದೇ ಇಂದಿನ ಪ್ರಾರ್ಥನೆ.

ಭಾರತವರ್ಷವು ಒಂದಾಗಲಿ, ಭಾರತವಾಸಿಗಳು ಒಂದಾಗಲಿ,

ಒಂದೇ ಧ್ಯೇಯದ ಒಂದೇ ಸೇವೆಯ ಪರಿಣಾಮವು ಪ್ರಪಂಚದ ಶಾಂತಿಗೂ, ಸಂಪನ್ನತೆಗೂ ಉದ್ಧಾರಕ್ಕೂ ಕಾರಣವಾಗಲಿ

ಸ್ಫುಟವಿಚಾರಗಳು

ನೋಟಿಸು.

ಮದ್ರಾಸು ಅಧಿಪತ್ಯದೊಳಗಣ ಎಲ್ಲಾ ಲೋಕಲ್ ಬೋರ್ಡುಗಳಿಗೂ ಪಂಚಾಯತಗಳಿಗೂ ಒಂದು ಸರ್ಕ್ಯುಲರ್ ಹೊರಟಿ[illegible] ಸಿರುವುದು ಸ್ಥಳದಲ್ಲೇ ತಯಾರಿಸುವುದ[illegible] ಸಂತೃಪ್ತಿಕರವಾಗಿದೆ ಯಾವುದೊಂದು [illegible] ಕೀಯ ಪಕ್ಷವನ್ನ ಪೋಷಿಸುವುದಕ್ಕಾಗಿ ತೆರಿಗೆದಾರರ ಹಣವನ್ನ ಈ ಸಂಸ್ಥೆಗಳು ವ್ಯಯಿಸುವುದನ್ನ ಸರಕಾರವು ಅಂಗೀಕರಿಸಲಾರದೆಂದು ದರಿಂದ ರಾಷ್ಟ್ರಸಭೆಯ ಸ್ವರ್ಣೋತ್ಸವಕ್ಕೆ ಈ ಸಂಸ್ಥೆಗಳ [illegible] ಕೊಡುವುದನ್ನು ತಾವೇ ವ್ಯಯಿಸುವುದನ್ನು ಸರಕಾರವು ಸೆಳ್ಳನ ಮಾಡಲಾರದ ಒಡ ತೆರಿಗೆದಾರರ ಹಣವನ್ನ ಹೀಗೆಲ್ಲ ವ್ಯಯಿಸುವುದಕ್ಕೆ ನಿಜವಾಗಿಯೂ ತಡೆಯಿರಬೇಕ [illegible] ವ್ಯಯಿಸುವುದಕ್ಕೆ ಅಥವಾ ಬಡ ತೆರಿಗೆದಾರರಿಂದ ಇನ್ನಷ್ಟು ಅಧಿಕ ತೆರಿಗೆ ಪಡೆಯುವುದಕ್ಕೆ ಮೀರಿ ಅಗತ್ಯ ಸಂದರ್ಭಗಳು ಎಷ್ಟೋ ಇವೆ ಅದೆಲ್ಲವನ್ನ ಬಿಟ್ಟು ರಾಷ್ಟ್ರಸಭೆಯ ಸ್ವರ್ಣೋತ್ಸವಕ್ಕಾಗಿ ದಾಪ್ರದ ಸ್ವರ್ಣಕ್ಕೇಕೆ ಕೈಹಚ್ಚಬೇಕ ?

ಹಿಂದೀ ವೈದ್ಯರು

I I M ಬಿರುದು [illegible] ಎಷ್ಟೋ ಅಭ್ಯಾಸ ಗೈದ ವೈದ್ಯರನ್ನು (ಡಾಕ್ಟರರನ್ನು) ಕರೆತು ಇಂಡಿಯನ್ ಮೆಡಿಕಲ್ ಎಸೋಸಿಯೇಶನ ಪ್ರೆಸಿಡೆಂಟರಾಗಿರುವ ಕರ್ನಲ್ ಬೋಲಾನಾಥರು ಹೀಗೆನ್ನುತ್ತಾರೆ—ಇವರ ಪಾಶ್ಚಾತ್ಯ ವೈದ್ಯಬಲ್ಲವರೂ ಅಲ್ಲ, ಆಯುರ್ವೇದ ಜ್ಞಾನವುಳ್ಳವರೂ ಅಲ್ಲ ಅದನ್ನು ಕಲಿಯಲು ಬೇಕಾಗುವಷ್ಟು ಸಮಯವೂ ಇವರಿಗೆ ಶಿಕ್ಷಣಕ್ಕೆ ದೊರೆವುದಿಲ್ಲ ಇದರ ವ್ಯವಹಾರ ಜ್ಞಾನಕ್ಕೆ ಬೇಕಾದಷ್ಟು ಅವಕಾಶವೂ ದೊರೆವುದಿಲ್ಲ ಇವರಲ್ಲಿ ಹೆಚ್ಚಿನವರು ಎಲ್ಲೋಪಥಿಯ ಔಷಧಗಳನ್ನೇ ಬಳಸುವರ, ಸುಮ್ಮನೆ I I M ಬಿರುದನ್ನು ಪಡೆವರು ಆಯುರ್ವೇದವನ್ನೆ ಕಲಿತು, ಆ ಚಿಕಿತ್ಸಾಕ್ರಮವನ್ನೆ ಇವರು ಕೈಕೊಂಡರೆ ಸುಖವುಂಟಲ್ಲದೆ, ಅರಿಯದ ಚಿಕಿತ್ಸೆಯಾದ ಎಲ್ಲೋಪಥಿಗೆ ಇವರೇಕೆ ಕೈಹಚ್ಚಬೇಕು? ೫೦೦೦ ವರ್ಷ ಹಿಂದೆ ಚರಕನ ಕಾಲದಲ್ಲಿ ರೂಢಿಯಲ್ಲಿದ್ದು, ಇಂದಿನತನಕವೂ ಯಾವ ತೆರದ ಸಂಸ್ಕಾರವನ್ನು ಹೊಂದದೆ ಅಂದಿನಂತೆ ಹಳಸಿಹೋಗಿರುವ ಆ ಕ್ರಮವು ಈ ಯುಗಕ್ಕೆ ಒಪ್ಪುವುದಿಲ್ಲ ದೇಹರಚನಾಶಾಸ್ತ್ರ ಮೊದಲಾದುವು ಆಗ ಅಲ್ಪ ಸ್ವಲ್ಪ ತಿಳಿದಿದ್ದುವು ವಿಜ್ಞಾನವು ಬೆಳೆಯುತ್ತಲೇ ಇದೆ, ಇದು ಬೆಳೆದೇ ಇಲ್ಲ ಗ್ರಹಬಲ, ಶಕುನಗಳು ಮೊದಲಾದುವುಗಳನ್ನು ಆಧರಿಸಿ ಚಿಕಿತ್ಸೆಮಾಡುವುದರಲ್ಲಿ ಅರ್ಥವಿಲ್ಲ ಇದಕ್ಕೆಲ್ಲ ಹಣವನ್ನು ವ್ಯಯಿಸಲೇಬಾರದೆಂದು ಎಷ್ಟೋ ಸಲ ತಿಳಿಸಿದ್ದರೂ, ಮದ್ರಾಸು ಸರಕಾರವು ಅದೇಕೆ ಹಣವನ್ನು ವ್ಯಯಿಸುತ್ತಿದೆಯೋ ತಿಳಿದುದು ೧—ಬಡ ತೆರಿಗೆದಾರರ ಹಣವನ್ನು ಇಂತಹಕ್ಕಾಗಿ ವ್ಯಯಿಸುವುದೂ, ಅದನ್ನು ದೇಶೀಯ ವೈದ್ಯದ ಉದ್ಧಾರಕ್ಕಾಗಿ ಎನ್ನುವುದೂ ಅನ್ಯಾಯವಲ್ಲವೆ? ದೇಶೀಯ ವೈದ್ಯದ ಪ್ರಚಾರಕ್ಕಾಗಿ, ಮತ್ತು ರಾಷ್ಟ್ರಸಭೆಯ ಸ್ವರ್ಣೋತ್ಸವಕ್ಕಾಗಿ ಹೇಗೆ ಬಡ ತೆರಿಗೆದಾರರ ಹಣವನ್ನು ವ್ಯಯಿಸುತ್ತಿರುವರು!

ಹೋರರ ರಾಜಿನಾಮೆ.

ಹೋರರು ಅಬಿಸೀನಿಯ ಇಟೆಲಿಗಳೊಡನೆ ಸಂಧಾನವಾಗುವ ಹಾಗೆ, ಫ್ರೆಂಚ ಪ್ರಧಾನರಾದ ಲಾವಲ್‌ರೊಡನೆ ಸೇರಿ ಯಾವ ಶರ್ತಗಳನ್ನು ಇತ್ತಂಡಗಳೂ ಕಳುಹಿದರೋ, ಅವು ಅಬಿಸೀನಿಯಕ್ಕೆ ಅನ್ಯಾಯವೆಂದೂ, ಇಟೆಲಿಗೆ ಕಡಿಮೆಯೆಂದೂ ತೋರಿದುವು ಪಾರ್ಲಿಮೆಂಟಿನಲ್ಲಿ ಇವುಗಳ ವಿಚಾರವಾಗುತ್ತಲೆ ಹೋರರು ತಮ್ಮ ಹುದ್ದೆಗೆ ರಾಜಿನಾಮೆಕೊಟ್ಟರು ಫ್ರೆಂಚರು ಇಟೆಲಿಯ ವ್ಯಕ್ತಿಯನ್ನು ಹೇಗೂ ಮಾಡಿ ಪಡೆಯಬೇಕೆಂಬ ಆತುರವುಳ್ಳವರೆಂದೂ, ಬ್ರಿಟಿಷರು ಒಪ್ಪಲೇಬೇಕಾದಂಥ ಶರ್ತಗಳನ್ನು ಅವರು ಅದಕ್ಕಾಗಿ ಕೂಡಿದರೆಂದೂ, ಹಾಗಾಗಿ ಹೋರರು 'ಹೂಂ' ಎಂದೊಪ್ಪಿದರೆಂದೂ ಟೈಮ್ಸು ಪತ್ರವೇ ಎಂದಿದೆ ಆದರೆ, ಇಂಗ್ಲೆಂಡಿನಲ್ಲಿ ಯಾರಿಗೂ ಈ ಬಗೆಯ ಅಭಿಯೋಗಮಾಡಿದವನಿಗೆ ಸಂತಸ್ತಿ ಕೊಟ್ಟು, ರಾಜಿಮಾಡಿಕೊಳ್ಳುವ ಶರ್ತಮತ್ತು ಒಪ್ಪಂದಗಳನ್ನು ಸಮ್ಮತಿಸುವರೇ ಇಲ್ಲ. ಹಾಗಾಗಿ ಹೋರರು ಹೊರಬಿದ್ದರು, ಅವರ ಕೀರ್ತಿಧ್ವಜವಾಗಿ ಇಂಡಿಯಾ ಆಕ್ಟು, ಈ ಸಂಧಾನದ ಮಸೂದೆಯೂ ಉಳಿದುವು ಇವೆರಡರ ಪರಿಣಾಮಗಳಲ್ಲಿ ತಂಟೆಗಳೇಳಿವೆ? ಹೋರಾಟ ಕಡೆಯವರು ಹೋರರಿಂದಾಗಲಿಲ್ಲ

ನಿರುದ್ಯೋಗಿ ಶಿಕ್ಷಿತರು

ಸೆಂಟ್ರಲ್ ಎಡ್ವೈಸರಿ ಬೋರ್ಡಿನ ಸಭೆಯಲ್ಲಿ ಒಂದು ಸೂಚನೆಯು ಬಂದಿದೆ [illegible] ಗವರ್ನಮೆಂಟು ಕೆಲಸಕ್ಕೆ ಉಮೇದುವಾರರಾಗುವವರು ಇನ್ನು ೧೯ ವರ್ಷ ವಯಸ್ಸಿನೊಳಗಾದವರೇ ಆಗಬೇಕು. ಇದರಿಂದ ಗ್ರಾಜ್ಯುವೇಟರು ಈ ಕೆಲ ನೌಕರಿಗಳಿಗೆ ಸ್ಕೂಲ್ ಫೈನಲ್ ಪಾಸಾದವರೊಡನೆ ಸ್ಪರ್ಧಿಸದಂತಾಗುವುದು [illegible] ನಿರುದ್ಯೋಗಿಗಳಲ್ಲಿ ಹೆಚ್ಚಿನವರಾಗಿರುವ ಈ ತರಗತಿಯ [illegible] ಕೆಳನೌಕರಿಗಳು ಹೆಚ್ಚಾಗಿ [illegible] ಸಿಕ್ಕಬಹುದು ಸೆಕೆಂಡರಿ ಶಿಕ್ಷಣವು ಯಾವುದೊಂದು ವೃತ್ತಿಯ ಕಡೆಗೆ ನಡೆಸುವಂತಾಗಬೇಕೆಂದೂ ಮುಂದಿನ ಸೂಚನೆಯಾಗಿದೆ ಇದನ್ನು ಹಲವು ವರ್ಷಗಳಿಂದಲೂ ಕೇಳುತ್ತಿದ್ದೇವೆ, ಕೆಲಸವೇನೂ ಆದುದಿಲ್ಲ ಇಂಗ್ಲೆಂಡಿನಿಂದ ವಿಚಕ್ಷಣರು ಬಂದು ಈ ವಿಚಾರ ಹೇಳುವಂತೆಯೂ ಇಲ್ಲ, ಏಕೆಂದರೆ ಅಲ್ಲಿಯೂ ಮೆಟ್ರಿಕ್ಯುಲೇಶನ್ ಪರೀಕ್ಷೆಯು ನಮ್ಮಂತೆಯೆ ಇದೆ ಅಥವಾ ಯಾವುದೊಂದು ಕೈಗಾರಿಕೆಗೆ ತರಬೇತು ಹೊಂದಿದರೂ, ಕೆಲಸ ಮಾಡಲು ಕಾರ್ಖಾನೆಗಳೇ ಇಲ್ಲದಿರುವಲ್ಲಿ ಮಾಡುವುದೇನು? ವೃತ್ತಿ ಶಿಕ್ಷಣ ಹೊಂದಿ ನಿರುದ್ಯೋಗಿಗಳ ಸಂಖ್ಯೆ ಬೆಳೆಯುವ ಇನ್ನೊಂದು ಸಮಸ್ಯೆಯು ಆಗ ಉಂಟಾಗುವುದು

ಬಂಗಾಳ ಸರಕಾರದ ಆಡಳಿತ.

೧೯೩೪—೩೫ರ ವರದಿಯಲ್ಲಿ ಜವಾಹರಲಾಲ ನೆಹರೂರವರನ್ನ ಕುರಿತಾಗಿ ಬರೆದ ಮಾತುಗಳಿಗೆ ಆಕ್ಷೇಪವನ್ನೆತ್ತಿ ಇಂಗ್ಲೆಂಡಿನಲ್ಲಿ [illegible] ಸ್ವಲ್ಪ ಚಳವಳಿಯಿದೆ ಸತ್ಯಶೋಧನೆಗಾಗಿ ಈ ಚಳವಳಿ ಸರಕಾರದ ಮಾತುಗಳಲ್ಲಿ ಜವಾಬದಾರಿಯಿರಬೇಡವೆ? ಅಸ್ಪೃಶ್ಯತಾನಿವಾರಣೆಗಾಗಿ ಫಂಡನ್ನು ಕೂಡಿಸಿ ಅದರಿಂದ ನೆಹರರವರು ಸರಕಾರ ವಿರುದ್ಧ ಚಳವಳಿಸುವಂತೆ ಎಣಿಸಿದ್ದರೆಂದೊಂದು ವಾಕ್ಯವು ಹೀಗೆ ಈ ವರದಿಯಲ್ಲಿ ಬಂದಿತೋ ತಿಳಿಯಲ್ಲಿ ಇದು ನಿಜವಾದಲ್ಲಿ ರುಜುವಾತನ್ನು ಹೊರಗೆಡವಬೇಕಾಗಿದೆ ಅಥವಾ ಇಲ್ಲದಿದ್ದಲ್ಲಿ ಕ್ಷಮೆಬೇಡಬೇಕಾಗಿದೆ ಎಂದು ಮೆಂಚೆಸ್ಟರ ಗಾರ್ಡಿಯನ್ ಪತ್ರವೆನ್ನುವುದು ಧರ್ಮಯುದ್ಧವಾಗಲಿ ಹೊರತು ಅಧರ್ಮಕ್ಕೆ ಕೈಹಚ್ಚಬೇಡಿರಿ ಎಂದು ನ್ಯೂ ಸ್ಟೇಟ್ಸ್‌ಮೇನ್ ಪತ್ರವೆಂದಿದೆ ಪಾರ್ಲಿಮೆಂಟಿನಲ್ಲೂ ಈ ವಿಷಯ ಒಂದೆರಡು ಪ್ರಶ್ನೋತ್ತರಗಳು ನಡೆಯಬಹುದು.

ದಕ್ಷಿಣ ಕನ್ನಡ ಜಿಲ್ಲೆಗೊಂದು ಸಕ್ಕರೆ ಕಾರ್ಖಾನೆ

ಮಂಗಳೂರು.

ಬಳ್ಳೀರು ಶಾಲೆಯ ಚುನಾವಣೆ

ಬಳ್ಳೀರು ಶಾಲೆಯ ಮುನಿಸಿಪಾಲಿಟಿಯ ಕೌನ್ಸಿಲರಾದ ವಿ. ಡಾಕ್ಟರ್ ಎಫ್. ಕ್ರೂಲೂರವರು ತಮ್ಮ ಸದಸ್ಯತನಕ್ಕೆ ರಾಜಿನಾಮೆ ಇತ್ತಕಾರಣ ಸದರಿ ಸೀಟಿಗೆ ಮ.ಕ್ರೈಸ್ತನನ್ನು ಚುನಾಯಿಸಲಾಗುವುದು. ಅದರ ಕಾರ್ಯಕ್ರಮವು ಹೀಗಿರುವುದು

೧, ಜನವರಿ ತಾ. ೬ರಲ್ಲಿ ಬೆಳಗ್ಗೆ ೧೦ ಗಂಟೆಯಿಂದ ಸಾಯಂಕಾಲ ೪ ಗಂಟೆಯ ವರೆಗೆ ನೋಮಿನೇಶನ್ ಪತ್ರಗಳನ್ನು ಮುನಿಸಿಪಾಲಿಟಿ ಆಫೀಸಿಗೆ ಕೊಡುವುದು. ೨, ಜನವರಿ ತಾ. ೧೦ನೇ ಬುಧವಾರ ಈ ನೋಮಿನೇಶನ ಪತ್ರಗಳ ಪರಿಶೋಧನೆ ೩ ಜನವರಿ ತಾ. ೧೧ನೇ ಗುರುವಾರ ಬೇಕಾದ ಉಮೇದ್ವಾರರನ್ನು ಗೊತ್ತುಪಡಿಸುವುದು. ೪, ಜನವರಿ ತಾ ೧೨ನೇ ಶುಕ್ರವಾರ ಉತ್ತಿರ್ಣರಾದ ಉಮೇದ್ವಾರರ ಪಟ್ಟಿಯನ್ನು ಸೂಚಿಸೋಣ. ೫ ಜನವರಿ ತಾ ೨೪ನೇ ಬುಧವಾರ ಓಟುಗಳ ದ್ವಾರಾ ಸ್ಪರ್ಧೆ ೬ ಜನವರಿ ತಾ ೨೫ನೇ ಗುರುವಾರ ಓಟುಗಳನ್ನು ಲೆಕ್ಕಮಾಡುವುದು, ಉಮೇದ್ವಾರರು ರೂ. ೫೦ನ್ನು ಡಿಪೋಜಿಟಾಗಿ ಅರ್ಜಿಗಳನ್ನು ಕೊಡುವ ಮೊದಲು ಯಾ ಕೊಡುವಾಗ ಮುನಿಸಿಪಾಲಿಟಿ ಆಫೀಸಿಗೆ ತರಬೇಕು ಎಂದು ಮುನಿಸಿಪಾಲಿಟಿಯ ಕಮಿಶನರು ತಿಳಿಸುತ್ತಾರೆ.

ಕಾಂಗ್ರೆಸ್ ಜುಬ್ಬಿಲಿ ಕಮಿಟಿ

ಇಲ್ಲಿ ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಒಂದು ಜುಬಿಲಿ ಕಮಿಟಿಯು ಏರ್ಪಟ್ಟಿದೆ. ಅದಕ್ಕೆ ಪ್ರೆಸಿಡೆಂಟರು ಶ್ರೀಮತಿ ಕಮಲಾದೇವಿಯವರನ್ನು ಆರಿಸಲ್ಪಟ್ಟಿದ್ದಾರೆ. ವೈಸ್ ಪ್ರೆಸಿಡೆಂಟರುಗಳು ಶ್ರೀಗಳಾದ ಎ. ಬಿ. ಶೆಟ್ಟಿಯವರು, ಉಮೇಶರಾಯರು, ಬಿ. ವೈಕುಂಠ ಬಾಳಿಗರು, ಶ್ರೀ ವೆಂಕಟೇಶ ಪೈಗಳು ಮೊದಲಾದವರು. ಶ್ರೀ ವಿ. ಎಸ್ ಶೆಟ್ಟಿಯವರು ಜೊತೆ ಕಾರ್ಯದರ್ಶಿಗಳು. ಈ ಕಮಿಟಿಯು ಸುವರ್ಣೋತ್ಸವದ ಸ್ಮಾರಕಾರ್ಥವಾಗಿ ಮಂಗಳೂರಿನಲ್ಲಿ ಕೆಲಸ ನಡೆಸುವುದು ... ಈ ಸಂಸ್ಥೆಯಲ್ಲಿ ಇದರ ಲೆಕ್ಕಾಚಾರ ನಡೆಯುವರೆಗೆ ವ್ಯವಸ್ಥೆಯಾಗಿದೆ.

ಕೊರನೇಶನ್ ಕ್ರಿಕೆಟ್ ಪಂದ್ಯಾಟ

ಕೊರನೇಶನ್ ಕಪ್ಪಿನ ಕ್ರಿಕೆಟ್ ಪಂದ್ಯಾಟದಲ್ಲಿ ಎಚ್. ಸಿ. ಸಿ. ಮತ್ತು ಎಂ. ಸಿ. ಸಿ. ಗಳೊಳಗೆ ಕೊನೆಯ ಆಟವು ನಡೆದು ಎಚ್. ಸಿ. ಸಿ. ಯವರು ಜಯಶೀಲರಾದರು.

ಅಬ್ಬುಕರ್ಕ್ ಕ್ರಿಕೆಟ್ ಪಂದ್ಯಾಟ

ಈ ವರ್ಷ ಅಬ್ಬುಕರ್ಕ್ ಕಪ್ಪಿನ ಪಂದ್ಯಾಟದಲ್ಲಿ ಎಂ. ಸಿ. ಸಿ. ಯವರು ೧೧೦ ರನ್ನುಗಳನ್ನು, ಎಚ್. ಸಿ. ಸಿ. ಯವರು ೬೪ ರನ್ನುಗಳನ್ನು ಪಡೆದು ಮೊದಲಿನವರು ಗೆದ್ದರು.

ಅಕಾಲ ಮೃತ್ಯು

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಕೆಲವು ಮಂದಿ ವಿದ್ಯಾರ್ಥಿಗಳು ತಾ. ೨೪ರಲ್ಲಿ ಉಳ್ಳಾಲ ಸಮುದ್ರ ತೀರಕ್ಕೆ ಹೋದವರು ಸಾಯಂಕಾಲ ಹಿಂತಿರುಗುವಾಗ ಇಳಿತದ ಸಮಯವಾದ್ದರಿಂದ ಅವಿವೇಕದಿಂದ ಸ್ನಾನ ಕ್ಕಾಗಿ ನದಿಗೆ ಇಳಿದರು. ಸ್ನಾನಮಾಡುತ್ತಿರುವಾಗ ಅಕಸ್ಮಾತ್ ಒಬ್ಬನು ನೀರಿನ ಸೆಳೆತಕ್ಕೆ ಸಿಕ್ಕಿ ಮೃತನಾದನು. ಮೃತನು ಗವರ್ನಮೆಂಟ್ ಕಾಲೇಜಿನ ಮೆಟ್ರಿಕ್ಯುಲೇಶನ್ ಕ್ಲಾಸಿನಲ್ಲಿ ಕಲಿಯುತ್ತಿದ್ದ ...ಗೆ ಬಾಡಿಗೆ ... ದವನಾಗಿದ್ದನು.

ಪ್ರೋರ್ಡ್ ಕಪ್ಪ ಪಂದ್ಯಾಟ

ದಶಂಬರ ತಾ. ೨೮ನೇ ಮಂಗಳವಾರ ಎಚ್. ಸಿ. ಸಿ. ಮತ್ತು ಎಮ್. ಸಿ. ಸಿ. ಯವರೊಳಗೆ ಪ್ರೋರ್ಡ್ ಕಪ್ಪಿನ ಕ್ರಿಕೆಟ್ ಪಂದ್ಯಾಟವು ನಡೆದು ಎಮ್. ಸಿ. ಸಿ. ಯವರೇ ಜಯಶೀಲರಾದರು.

ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವ

ಕೆನರಾ ಹೈಸ್ಕೂಲ್ ಹಿಂದಣ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸಮ್ಮೇಳನವು ತಾ ೨೩ರಲ್ಲಿ ಜರುಗಿತು. ಸ್ಪರ್ಧೆಯಾಟಗಳೂ, ಅವುಗಳಲ್ಲಿ ಗೆದ್ದವರಿಗೆ ಬಹುಮಾನಗಳೂ ಇದ್ದುವಲ್ಲದೆ, ವಿಶೇಷ ವಿನೋದಗಳ ಸ್ಪರ್ಧೆಗಳೂ ಇದ್ದುವು. ಫಲಾಹಾರ, ವಾರ್ಷಿಕ ವರದಿ ಶಾಲಾ ಆಡಳಿತ ಸಭಾಸದಸ್ಯರೊಳಗೆ ಈ ಸಂಘದವರು ಚುನಾಯಿತರಾದವರ ಸದಸ್ಯತನದ ಅವಧಿಯನ್ನು ಕುರಿತಾದ ಮತ್ತು ಇತರ ಸೂಚನೆಗಳು, ಶ್ರೀ ಕೆ. ಸದಾಶಿವರಾವ್ ಬಿ. ಎ. ಎಲ್. ಎಲ್ ರವರ ಹಸ್ತದಿಂದ ಬಹುಮಾನಗಳ ಹಂಚೋಣ ಮನೋರಂಜಕವಾಗಿದ್ದಿತೆಂದು ಇಂಗ್ಲಿಷ ಪ್ರಹಸನದ ಪ್ರದರ್ಶನದನಂತರ ಅಧಿನಾಯ, ಮಿತ್ರಭೋಜನ ಮೊದಲಾದುವಲ್ಲದೆ ಕಾರ್ಯಕ್ರಮದಲ್ಲಿದ್ದುವು. ಆತಿಥಿಗಳ ಪರವಾಗಿ ಮಟ್ ಜಗ್ಗರು ಶ್ರೀ ಬಾಲಸುಬ್ರಹ್ಮಣ್ಯರವರ ಭಾಷಣದೊಂದಿಗೆ ಆಟಾಗಿನ್ನೂ ರವನ್ನು ವಿನೋದಿಸಿ ಭೋಜನದ ರುಚಿ ಹೆಚ್ಚಿಸಿತು.

ಇಲ್ಲಿಯ ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವವು ಶಾಲೆಯಲ್ಲಿ ಅತ್ಯಂತ ಉತ್ಸಾಹಪೂರ್ವಕವಾಗಿ ಕಳೆದ ತಾ ೨೩ನೇ ಆದಿತ್ಯವಾರ ಸಂಜೆ ಆ ಶಾಲೆಯ ಪಾಠಶಾಲೆಯಲ್ಲಿ ಬಹು ಸೊಗಸಾಗಿ ನಡೆಯಿತು. ಜನಸ್ತೋಮ ಜಸ್ಟಿಸ್ ಶ್ರೀಯುತರಾದ ಸುಬ್ಬಾರಾವ್ ಪಂತ ಅವರು ಪ್ರೆಸಿಡೆಂಟರಾಗಿ ಇಂದಿನ ಅಧ್ಯಕ್ಷಪದವಿಯನ್ನು ಅಲಂಕರಿಸಿ ತಮ್ಮ ಅನುಭವಪೂರ್ಣವಾದ ದಿವ್ಯವಾಣಿಯ ಭಾಷಣದಿಂದ ... ಸಭಿಕರನ್ನು ... ಆನಂದಗೊಳಿಸಿದರು. ... ಪಿನ

ಉಪನ್ಯಾಸವನ್ನು ಕೊಟ್ಟರು. ಹಲವು ಬಗೆಯ ವಿನೋದಕರ ಕಾರ್ಯಕ್ರಮಗಳಿಂದ ಈ ಉತ್ಸವವು ಜರಗುವುದರೊಡನೆ ಶಾಲೆಯ ಹಿಂದಿನ ಮ್ಯಾನೇಜರುಗಳಾದ ಶ್ರೀಮಾನ್ ಎ. ಶ್ರೀನಿವಾಸ ಪೈಗಳವರ ಮತ್ತು ದಿವಂಗತ ಬಾಬು ಪೈಗಳವರ ತೈಲಚಿತ್ರಗಳನ್ನು ಸುಬ್ರಹ್ಮಣ್ಯ ಪೈ ಸ್ಮಾರಕ ಭವನದಲ್ಲಿ ಸುಲ್ತಾನಾಬೇಗಂ ಅವರು ಮುದ್ದಿನ ರವರ ಹಸ್ತದಿಂದ ಇರಿಸುವ ಒಂದು ವಿಶಾಲ ... ನಡೆದಿದ್ದಿತು.

ಕೃಷಿ ಮತ್ತು ಕೈಗಾರಿಕೆ ಪ್ರದರ್ಶನ

ಇದೇ ತಿಂಗಳ ತಾ. ೨೯ರಿಂದ ೩೦ರ ವರೆಗೆ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಪ್ರದರ್ಶನವು ನಡೆಯಲಿರುವುದು. ಈ ಸಂದರ್ಭದಲ್ಲಿ ಜೇನುನೊಣ ಸಾಕುವಿಕೆಯಲ್ಲಿ ಚೆನ್ನಾಗಿ ಅನುಭವವುಳ್ಳ ಶ್ರೀ ಬೈಲೂರು ಲಕ್ಷ್ಮೀನಾರಾಯಣ ರಾಯರು ಆ ವಿಷಯದಲ್ಲಿ ಸಾಕಷ್ಟು ಆನ ಭವನನ್ನು ಜನರಿಗೆ ಕೊಡಲಿರುವರು.

ಸ್ವದೇಶಿ ವಸ್ತು ಪ್ರದರ್ಶನ

ಕಾಂಗ್ರೆಸ್ ಸುವರ್ಣ ಮಹೋತ್ಸವದ ಸಂಬಂಧ ಇಲ್ಲಿಯ ಸ್ವದೇಶಿ ಸ್ಟೋರಿನವರು ಖಾದಿ ಮತ್ತು ಸ್ವದೇಶೀ ಪದಾರ್ಥಗಳದ್ದೊಂದು ಪ್ರದರ್ಶನವನ್ನು ಏರ್ಪಡಿಸಲಿರುವರು. ಇದು ತಾ ೨೮ರಿಂದ ಆರಂಭವಾಗಿ ಜನವರಿ ತಾ ೩ರ ವರೆಗೆ ನಡೆಯುವುದು.

ಮಿಶನ್ ಹೈಸ್ಕೂಲಿನ ವರ್ಧಂತ್ಯುತ್ಸವ

ಇದೇ ಕಳೆದ ಶನಿವಾರ ತಾ ೨೩ನೇ ಸಂಜೆ ೫ ಗಂಟೆಗೆ ಇಲ್ಲಿಯ ಹಳೆಯ ವಿದ್ಯಾಸಂಸ್ಥೆಯಾದ ಬಿ. ಇ. ಎಂ. ಹೈಸ್ಕೂಲಿನ ವಾರ್ಷಿಕ ವರ್ಧಂತ್ಯುತ್ಸವವು ಕಿಕ್ಕಿರಿದು ತುಂಬಿದ ವಿಶಾಲಸಭೆಯಲ್ಲಿ ಶ್ರೀಮಾನ್ ಬೈ. ಮಾಧವರಾವ್ ಬಿ. ಎ. ಎಂ. ಎಲ್. ಸಿ. ಡೆಪ್ಯುಟಿ ಕಲೆಕ್ಟರ್ ಮಂಗಳೂರು ಇವರ ಸಮರ್ಥ ಅಧ್ಯಕ್ಷತೆಯಲ್ಲಿ ಸಂಭ್ರಮ ಪೂರ್ವಕವಾಗಿ ಜರಗಿತು. ಪ್ರೆಸಿಡೆಂಟರ ಆರಂಭ ಭಾಷಣ, ಶ್ರೀ ಪಿ. ರಾಮಚಂದ್ರರಾವ್ ಬಿ. ಎ. ಬಿ. ಎಲ್. ಎಡ್ವೊಕೇಟ್ ಇವರ ಶಾಲಾ ಶ್ರೇಯ ... ಪ್ರಾರ್ಥನೆ ಹೆಡ್ಮಾಸ್ಟರಿಂದ ಶಾಲಾ ವರದಿಯ ವಾಚನ, ಬಹುಮಾನ ... ಮೊದಲಾದುವುಗಳೊಡನೆ, ಲೇಜಿಮ್ ಡ್ರಿಲ್ ಇಂಗ್ಲಿಷ್ ನಾಟಕ ... ದಿಂದೊಡಗೂಡಿ ಕನ್ನಡ ನಾಟಕ ಪ್ರಹಸನ ಪ್ರದರ್ಶನ ಸಂಗೀತಾದಿಗಳೂ ನಡೆದು ರಾಜಗೀತದೊಡನೆ ಸಭೆಯು ಮುಕ್ತಾಯವಾಯಿತು.

ಇನ್‌ಕಮ್ ಟೇಕ್ಸ್ ಆಫೀಸು

ಪ್ರೊಟಿರಿನ ಇನ್‌ಕಮ್ ಟೇಕ್ಸ್ ಆಫೀಸರರಾದ ಶ್ರೀ ವಿ. ಸಿ. ಗೌಡರವರು ನಮ್ಮ ಮಂಗಳೂರಿನ ಇನ್‌ಕಂ ಟೇಕ್ಸ್ ಆಫೀಸಿನಲ್ಲಿ ... ಪರೀಕ್ಷೆ ... ತೊಡಗಿದ್ದಾರೆ.

ಯಕ್ಷಗಾನ

ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಬಯಲಾಟದ ಸಂಘದ ಆಶ್ರಯದಲ್ಲಿ ಕಾಂಗ್ರೆಸ್ಸಿನ ಸುವರ್ಣಮಹೋತ್ಸವದ ಸಲುವಾಗಿ ಇದೇ ತಿಂಗಳ ತಾ ೨೮ನೇ ಶನಿವಾರ ರಾತ್ರಿ ಗಂಟೆ ೯ರಿಂದ ಕದ್ರಿ ದೇವಸ್ಥಾನದ ಪರಿಸರದಲ್ಲಿ ಯಕ್ಷಗಾನ ಕಾಲಕ್ಷೇಪವು ಜರುಗಲಿರುವುದರಿಂದ ದೇಶಾಭಿಮಾನಿಗಳೂ ಈ ಸತ್ಕಾರ್ಯದಲ್ಲಿ ಭಾಗವಹಿಸಿ ಬಂದಾಗಬೇಕೆಂದು ಸಂಘದ ಉಪಾಧ್ಯಕ್ಷರಿಂದ ಎಂ ಅರ್ ಶಾಸ್ತ್ರಿಗಳು ತಿಳಿಸುತ್ತಾರೆ.

ತಾಲೂಕುಗಳಿಂದ.

ಪುತ್ತೂರು—ಇದೇ ಜನವರಿ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ರಾಷ್ಟ್ರ ಸಭಾಪತಿಗಳಾದ ದೇಶಭಕ್ತ ಬಾಬು ರಾಜೇಂದ್ರ ಪ್ರಸಾದರಿಂದ ತೆರೆಯಲ್ಪಟ್ಟ ಸಾರ್ವಜನಿಕ ಅಖಿಲ ಭಾರತ ಖಾದಿ ಮತ್ತು ಸ್ವದೇಶಿ ವಸ್ತುಪ್ರದರ್ಶನದಲ್ಲಿ ನಮ್ಮ ಜಿಲ್ಲೆಯವರಾದ ಶ್ರೀಯುತ ಪೈಲೂರು ಲಕ್ಷ್ಮೀನಾರಾಯಣರಾವ್ ಬಿ. ಎ. (ಬೊಕ್ಕಾಡಿ) ಇವರು ಜೇನುನೊಣ ಸಾಕುವಿಕೆಗೆ ಸುವರ್ಣ ಪದಕವನ್ನು ಬಹುಮಾನವಾಗಿ ಪಡೆದಿರುತ್ತಾರೆ. ಇದು ನಮ್ಮ ಜಿಲ್ಲೆಯವರಿಗೇ ಒಂದು ಭೂಷಣಪ್ರದವಾಗಿರುವದು. ಸಂತೋಷಕರ.

ಇವರು ಇದೇ ತಿಂಗಳ ಕೊನೆಯ ವಾರದಲ್ಲಿ ಮಂಗಳೂರಿನಲ್ಲಿ ಜರಗಲಿರುವ "ಕೃಷಿ ಮತ್ತು ಕೈಗಾರಿಕೆ"ಗಳ ಪ್ರದರ್ಶನದಲ್ಲಿಯೂ ಭಾಗವಹಿಸಿ ಜೇನುನೊಣ ಸಾಕುವ ವಿಷಯದಲ್ಲಿ ಜನರಿಗೆ ಸಾಕಷ್ಟು ಅನುಭವ ಕೊಡಲಿರುವರಾಗಿ ತಿಳಿಯುತ್ತೇವೆ.

ಪುತ್ತೂರಲ್ಲಿ ಹೊಸದಾಗಿ "ಸ್ಥಾಪಿಸಲ್ಪಡಲಿರುವ" ... "ಲನ"ದ ಕಾರ್ಯಕ್ರಮ ಇದೇ ಜನವರಿ ತಾರೀಕು ೧ರಿಂದ ತೊಡಗುವುದು. ಪ್ರಸ್ತುತ ಶಾಲೆಯಲ್ಲಿ ಸಾಧಾರಣ ೫೦ ಬಾಲಕರ ವರೆಗೆ ಅನುಕೂಲವಿದೆ. ಹತ್ತು ಹುಡುಗರ ಪಟ್ಟಿಗೆ ಏಕಸಿಕ್ಷ ಏರ್ಪಾಟು ಆಗಿದೆ.

ಶಾಲೆಯು ಅನುಕೂಲವಾದ ಕಟ್ಟಡ, ಆಟಸಾಮಗ್ರಿ ಪುಸ್ತಕಾಲಯ, ಶಿಕ್ಷಣ ವ್ಯವಸ್ಥೆಯಿಂದ ಕೂಡಿದೆ. ೫ರಿಂದ ೧೧ ವರ್ಷದವರೊಳಗಿನ ಹುಡುಗರನ್ನು ತೆಗೆದುಕೊಳ್ಳಲಾಗುವುದು. ಕರಗತವು ನಿರ್ಧಾರವು ಹುಡುಗರ ಚಟುವಟಿಕೆಯನ್ನು ಕಂಡು ನಿರ್ಧರಿಸಲ್ಪಡುವುದು. ಯಾವ ಕ್ಲಾಸಿನಲ್ಲಿ ಹತ್ತು ಹುಡುಗರಿಗೆ ಒಬ್ಬ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಪ್ರತಿ ವ್ಯಕ್ತಿಯ ಕಡೆಗೆ ವಿಶೇಷ ಗಮನವನ್ನು ಕೊಡಲು ಅನುಕೂಲ ಕಾಣುವುದು. ಶಾಲಾವೇತನ ಇತ್ಯಾದಿಗಳ ಬಗ್ಗೆ ವಿವರ ... ಮಾಡಿಕೊಳ್ಳಬಹುದು ...

ಬೊಕ್ಕಾಡಿ—ಇಲ್ಲಿಯ ಪಂಚಾಯತ್ ಬೋರ್ಡಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳು ಇದೇ ತಾ ೧೮ರಲ್ಲಿ ನಡೆದು ಮ. ರಾ. ರಾ. ಪಟೇಲ್ ಅಚ್ಚಗದ್ದೆ ಗೋಪಾಲ ಕೃಷ್ಣಯ್ಯನವರು ಅಧ್ಯಕ್ಷರಾಗಿಯೂ ಮ. ರಾ. ಉದಯಕೋಡಿ ಸುಬ್ರಾಯರು ಉಪಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟಿರುತ್ತಾರೆ.

ಶ್ರೀಯುತ ಗೋಪಾಲ ಕೃಷ್ಣಯ್ಯನವರು ಕೆಲವು ವರ್ಷಗಳಿಂದಲೂ ಪಂಚಾಯತ್ ಬೋರ್ಡಿನ ಪ್ರೆಸಿಡೆಂಟರಾಗಿದ್ದು ಜನಪ್ರೀತಿಗೆ ಪಾತ್ರರಾಗಿರುತ್ತಾರೆ.

ಇಲ್ಲಿಯ ಉತ್ಸಾಹೀ ತರುಣರೊಬ್ಬರಾದ ಶ್ರೀಯುತ ಪೈಲೂರು ಶಿವರಾಮಯ್ಯನವರು ನೀರಿನ ಶಕ್ತಿಯಿಂದ ಅಕ್ಕಿ ಮಾಡುವ ಯಂತ್ರವನ್ನು ಸಣ್ಣ ... ಪ್ರಾರಂಭಿಸಿರುವರು. ಇವರ ಈ ರೀತಿಯ ಹೊಸ ಯೋಜನಾ ಕ್ರಮವು ತುಂಬಾ ಶ್ಲಾಘನೀಯವಾಗಿದೆ.

ಶಿರಾಡಿ—ಈ ಪಂಚಾಯತ ಬೋರ್ಡ ಪ್ರೆಸಿಡೆಂಟರ ಚುನಾವಣೆಯು ತಾರೀಕು ೧೯-೧೨-೩೯ನೇ ಸೋಮವಾರ ಅಪರಾಹ್ನ ೧ ಗಂಟೆ ಆಕ್ಕೆ ಮಾಡಲಾಯಿತು.

ಸದರಿ ಸಭೆಯಲ್ಲಿ ನೆರೆದಿದ್ದ ೮ ಜನ ಪಂಚಾಯತರುಗಳ ಪೈಕಿ ಮ. ರಾ. ಪಿ. ಫ್ರಾನ್ಸಿಸ್ ಲೋಬೊ ಎಂಬವರನ್ನು ಶಿರಾಡಿ ಪಂಚಾಯತಬೋರ್ಡು ಪ್ರೆಸಿಡೆಂಟರನ್ನಾಗಿಯೂ, ಕೆ. ಕಾಂತಪ್ಪಗೌಡರೆಂಬವರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ ಚುನಾಯಿಸಲಾಯಿತು.

ನಂತರ ನೆರೆದ ಮೆಂಬರುಗಳಲ್ಲಿ ಇತರ ಸಭಾಸದರೂ ಕೂಡಾ ಅತಿ ಫಲಕಾರಿಯಾದ ಸಕ್ಕರೆ ... ನಂತರ ಈ ಮೊದಲು ಪ್ರೆಸಿಡೆಂಟರಾಗಿದ್ದ ಮ. ರಾ. ಪಟೇಲ್ ತಿಮ್ಮಪ್ಪಗೌಡರೂ ಬರಲಿಕ್ಕೆ ಮುಂಚೆ ಪ್ರೆಸಿಡೆಂಟರಾಗಿದ್ದ ಮ. ರಾ. ಕೆ. ಮಹಾಬಲ ಗೌಡರೂ ತಮ್ಮ ಭಾಷಣವನ್ನು ಮಾಡಿದರು.

ಈ ಪ್ರಾಂತ್ಯದಲ್ಲಿ ಗೌರವಾನ್ವಿತರಾದ ಹಿಂದುಗಳೇ ಇದ್ದು ಜಾತಿಮತ್ಸರವನ್ನು ಬಿಟ್ಟು ... ಈ ಪೊದಲು ಕೆಲವು ಕಾರ್ಯಗಳಿಗೆ ಮುಂದುವರಿಯುತ್ತಿದ್ದರು ಈ ಸಲ ಆ ಜಾತಿಮತ್ಸರವನ್ನು ಬಿಟ್ಟು ಸರಿಯಾದ ಸೇವೆ ಉಳ್ಳವರನ್ನು ... ಪ್ರೆಸಿಡೆಂಟರನ್ನಾಗಿ ಮಾಡಿದುದು ಒಂದು ಸಂತೋಷಕರ ಸಂಗತಿ ಎಂದು ಭಾವಿಸಬೇಕು.

ಕಿನ್ನಿಗೋಳಿ— ೨೩-೧೨-೩೯ನೇ ಆದಿತ್ಯವಾರ ಇಲ್ಲಿಯ ಪಂಚಾಯತ ಕೋರ್ಟ ಕಟ್ಟೋಣದಲ್ಲಿ ಮಂಗಳೂರು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ರಾವ್ ಎಂ. ಗೋವಿಂದ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ೨೦ ಗ್ರಾಮಗಳ ಪಟೇಲರ ಸಭೆಯು ಸೇರಿತು. ಸಭೆಯಿಂದ ಉದ್ದೇಶ ಪಡಿಸುವ ಕಾರ್ಯಗಳನ್ನು ಅಧ್ಯಕ್ಷರೂ ಮತ್ತು ಮೂಲ್ಕಿ ಪೋಲೀಸ್ ಇನ್ಸ್‌ಪೆಕ್ಟರ್ ರೂ ತಿಳಿಸಿದ್ದರು. ವಿವರಗಳು ಚರ್ಚಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಗ್ರಾಮದ ಪಟೇಲರು ತಮ್ಮ ಗ್ರಾಮಗಳಲ್ಲಿ ನಡೆಯುವ ಖೂನಿ ಕಳವು ಪರೀದಿ ಮೊದಲಾದುವುಗಳ ವಿಷಯ ಹೆಚ್ಚಿನ ಮಟ್ಟಿಗೆ ಪತ್ತೆಹಚ್ಚಿಕೊಳ್ಳಬೇಕಾದ ... ದಿಂದ ಅವುಗಳ ನಡವಳಿಕೆಯ ಕುರಿತು ಒಂದು ಸಂಘವು ಅಗತ್ಯವೆಂದು ಇದಕ್ಕೆ "ಗ್ರಾಮ ಜಾಗ್ರತಾ ಸಂಘ"ವೆಂದು ಹೆಸರು ಕೊಡಲ್ಪಟ್ಟಿದೆ. ಇಂತಹ ಸಂಘಗಳಿಂದ ಗ್ರಾಮಗಳಲ್ಲಿ ಹೆಚ್ಚಿನ ಉಪಕಾರ ಉಂಟಾಗಬಹುದೆಂದು ನಿರೀಕ್ಷಿಸುವೆ.

ಮೊಂಡನ್ನೂರು—ತಾ ೧೯-೧೨-೧೯೩೯ರಲ್ಲಿ ಇಲ್ಲಿಯ ಪಂಚಾಯತ ಕೋರ್ಟಿನ ಮೆಂಬರರ ಇಲೆಕ್ಷನ್ ಮಂಗಳೂರು ತಾಲೂಕು ತಹಸೀಲ್ದಾರರವರಿಂದ ನಡೆಯಿತು. ಈ ಸಾರಿ ಉಮೇದ್ವಾರರು ಹೆಚ್ಚು ಜನರು ಇದ್ದುದರಿಂದ ಬಿರುಸಿನ ಸ್ಪರ್ಧೆ ... ಹಲವು ವರ್ಷಗಳಿಂದ ಪ್ರೆಸಿಡೆಂಟರಾಗಿ ಕೆಲಸನಡೆಸುತ್ತಿದ್ದ ಇವರನ್ನು ಸ್ನಾತಕೋತ್ತರಿಗೆ ಈ ಸಾರಿ ಬ್ರಾನ್ಸ್ ಸಿಕ್ಕಲಿಲ್ಲವೆಂಬುದು ವಿಷಾದಕರ.

ಮೂಲ್ಕಿ—ಸ್ಥಳೀಯ ಸೆಂಟಿನರಿ ಉಪಾಧ್ಯಾಯರ ಸಂಘದ ಸಾಮಾನ್ಯ ವಾರ್ಷಿಕಸಭೆಯು ಇದೇ ಕಳೆದ ತಾ. ೧೮-೧೨-೩೯ನೇ ಶನಿವಾರ ಅಪರಾಹ್ನ ೩ ಗಂಟೆಯಿಂದ ಇಲ್ಲಿಯ ಬಿ. ಇ. ಎಂ. ಹಯರ ಎಲಿಮೆಂಟ್ರಿ ಶಾಲೆಯಲ್ಲಿ ನೆರೆದುಬಂತು. ಆದು ಸ್ಥಳೀಯ ಬೋರ್ಡು ಹುಡುಗರಿಯ ಶಾಲೆಯ ಅಧ್ಯಾಪಕ ಶ್ರೀಯುತ ಎಂ. ಭವಾನೀಶಂಕರ ರಾಯರು ಅಗ್ರಾಸನರಾಗಿದ್ದರು. ಶ್ರೀ ದೇವಸ್ತು ಪ್ರಾರ್ಥನೆ, ಅತಿಥಿಯ ಗೀತೆ, ಮಿಸ್ ಇ ಅಮ್ಮಣ್ಣಿಯವರಿಂದ ಪ್ರಥಮ ವರ್ಷದ ವೃತ್ತಾಂತ ಪಾಠ, ಮಿಸ್ ಕುಮಾರ ಬಂಗೇರರಿಂದ ಸ್ತ್ರೀವಿದ್ಯಾಭ್ಯಾಸದ ಕುರಿತು ಉಪನ್ಯಾಸ, ಸಭಾಧ್ಯಕ್ಷರಿಂದ ಭಾಷಣ ಇದೇ ಮೊದಲಾದ ಕಾರ್ಯಭಾಗಗಳು ನಡೆದುವು. ಮುಂದಿನ ಸಭೆಯು ಇದೇ ಬರುವ ತಾ. ೨೮-೧-೪೦ನೇ ಶನಿವಾರ ಕಾರ್ನಾಡು ಬಿ. ಇ. ಎಂ. ಶಾಲೆಯಲ್ಲಿ ಕೂಡಲಿರುವುದು.

ಕಲ್ಯಾಣಪುರದ ಶ್ರೀ ... ಕಟ್ಟಿನ ... ಸರ್ಕಸ್ ಕಂಪೆನಿಯು ಇಲ್ಲಿ ಬಂದಿದ್ದು ತಾ ೧೯-೧೨-೩೯ರಿಂದ ದೇಖಾವೆಗಳನ್ನು ತೋರಿಸುತ್ತಿರುವರು.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಶತಾಶ್ಚಂಡಿ ಸೇವೆಗೆ ಆಕೆ ೦-೫-೧೯೪೦ರ ದಿನ ... ದಾಗಿ ತಿಳಿದು ಬರುತ್ತದೆ.

ಸ್ಥಳೀಯ ಕೋ-ಒಪರೇಟಿವ್ ಟೌನ್ ಬೇಂಕ್, ಲಿಮಿಟೆಡ್, ಇದರ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ. ೧೧-೧-೪೦ರಲ್ಲಿ ಜರಗಲಿರುವುದಾಗಿ ತಿಳಿದು ಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಗೊಂದು ಸಕ್ಕರೆ ಕಾರ್ಖಾನೆ.

ಕಲ್ಯಾಣಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವರೆ 'ದಿ ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಒಂದು ಕಂಪೆನಿಯು ಇದು ಲಕ್ಷ ಮೂಲಧನವನ್ನೀರಿಸುವ ಅಧಿಕಾರ ಹೊಂದಿ ರಿಜಿಸ್ಟರ್ ಆಗಿರುತ್ತದೆ. ಈ ಮೂಲಧನದ ಪೈಕಿ ಎರಡು ಲಕ್ಷ ರೂಪಾಯಿ ಮೂಲಧನವನ್ನು ವಂತಿಗೆ ಕೊಡುವರಾಗಿ ತಿಳಿಯುತ್ತದೆ. ಜಿಲ್ಲೆಯ ಸುಪ್ರಸಿದ್ಧ ಗೃಹಸ್ಥರು ಇದರ ಡೈರೆಕ್ಟರರಾಗಿರುತ್ತಾರೆ. ಮ. ರಾ. ರಾ. ಮಣ್ಣಿಂ ಬಳ ಶ್ರೀನಿವಾಸ ಪೈಗಳು ಪ್ರೆಸಿಡೆಂಟರೂ ಬಂಟ್ವಾಳ ವೈಕುಂಠ ಬಾಳಿಗರು ವೈಸ್ ಪ್ರೆಸಿಡೆಂಟರೂ ಆಗಿ ಆರಿಸಲ್ಪಟ್ಟಿದ್ದಾರೆ. ಇತರ ಡೈರೆಕ್ಟರರು ಮ. ರಾ. ರಾ. ಎಚ್. ಲಕ್ಷ್ಮೀನಾರಾಯಣ ಕಾಮತರು, ವಿ. ಎಸ್. ಕುಡ್ವರು, ಕನ್ನಡೀಗರು ರಾಯರು ಉಳ್ಳಾಲ ಶ್ರೀನಿವಾಸ ಮಲ್ಯರು ಮತ್ತು ಅಬ್ದುಲ್ಲ ಸಾಹೇಬರು, ಕುಚೇರ ಪುಂಡಲೀಕ ನಾಯ್ಕರು ಮತ್ತು ಸಾಹುಕಾರ ವೆಂಕಟೇಶ ಪೈಗಳು ರೂಪಾಯಿ ಎರಡು ಲಕ್ಷ ಮೂಲಧನದ ಪೈಕಿ ಮುಪ್ಪತ್ತು ಸಾವಿರ ಮೂಲಧನಕ್ಕೆ ಷೇರುಗಳು ಈಗಾಗಲೇ ಕೊಡಲ್ಪಟ್ಟಾಗಿ ತಿಳಿದುಬರುತ್ತದೆ. ಕಬ್ಬನ್ನು ಒದಗಿಸುವ ವ್ಯವಸ್ಥೆಯನ್ನು ಬಹುಮಟ್ಟಿಗೆ ಮಾಡಲಾಗಿದೆ. ಕಿನ್ನಿ ಕೇರಿ ... ಮತ್ತು ಗಂಗೊಳ್ಳಿ ಲಕ್ಷ್ಮೀನಾರಾಯಣ ಕಾಮತರು ಮೂಲ್ಕಿ ... ಕಾರ್ಖಾನೆಯ ಯಂತ್ರದ ವ್ಯವಸ್ಥೆಯನ್ನು ಸಿ. ಸಿ. ಸಿ. ಕಂಪೆನಿಯ ಜನರಲ್ ಮೇನೇಜರವರಾದ ವಿ. ಎಸ್. ಕುಡ್ವರ ಮೂಲಕ ... ಮಾಡುವರು. ಕೂಡಲೆ ಕಾರ್ಖಾನೆಯು ವ್ಯವಸ್ಥೆಯಾಗಿ ನಡೆದೀತೆಂದು ಆಶಿಸಲು ತುಂಬಾ ಆಧಾರಗಳಿರುತ್ತವೆ. ಇದರ ಸಂಪೂರ್ಣ ವಿವರ ಉಳ್ಳ Prospectus ಜನವರಿ ಮೊದಲನೆ ವಾರದಲ್ಲಿ ಪ್ರಕಟವಾಗುವುದು.

ಉಡುಪಿ—ತಾಲೂಕು ವರ್ಷಕ್ಕೆ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಗೆ ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಕೋಟ ಶಂಕರನಾರಾಯಣ ಕಾರಂತ ಬಿ. ಎ. ಬಿ. ಎಲ್. ಎಡ್ವೋಕೇಟರನ್ನು ಕಾರ್ಯದರ್ಶಿಯವರನ್ನಾಗಿಯೂ ಶ್ರೀ ಬಿ. ವಾಸುದೇವರಾವ್ ಬಿ. ಎ. ಬಿ. ಎಲ್. ಎಡ್ವೋಕೇಟರನ್ನು ಖಜಾನ್ಚಿಯನ್ನಾಗಿಯೂ ಮತ್ತು ಇತರ ಕೆಲವು ಮಂದಿಯನ್ನು ಸಾಮಾನ್ಯ ಸದಸ್ಯರನ್ನಾಗಿಯೂ ಆರಿಸಲಾಗಿದೆ. ದೇಶಪರಿಸ್ಥಿತಿಯ ವಿಷಯವನ್ನು ಆಲೋಚಿಸುವದರಿಂದಾಗಿ ಬಹಳಷ್ಟು ತಿಂದ್ದಿಲ್ಲ. ಈ ಸಂಗತಿಯನ್ನು ಜಿಲ್ಲಾ ಕಮಿಟಿಗೆ ತಿಳಿಸಲಾಗಿದೆ.

ತಾ. ೦೯-೧೨-೩೯ನೇ ಪೂರ್ವಾಹ್ನ ೧೧ ಗಂಟೆಗೆ ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ ಉಡುಪಿ ತಾಲೂಕು ರೈತರ ಯಾ ಕೃಷಿಕರ ಸಂಘದ ವಾರ್ಷಿಕ ಮಹಾಸಭೆಯು ನೆರವೇರಲಿದ್ದು ವೃತ್ತಿ ಗಳಿಕೆಯ ಚರ್ಚೆ, ವರದಿ ಮತ್ತು ಲೆಕ್ಕ ಕಾರ್ಯದರ್ಶಿ ಮಂಡಿಸಿದ ಅನಂತರ ಚರ್ಚೆ, ಇವೇ ಅಂದಿನ ಕಾರ್ಯಕ್ರಮಗಳಾಗಿರುತ್ತವೆ.

ಜಿಲ್ಲಾ ಸೆಕೆಂಡರಿ ಎಜ್ಯುಕೇಶನಲ್ ಕೌನ್ಸಿಲಿನಿಂದ ಓವರ ಸದಸ್ಯರನ್ನು ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಗೆ ನಮ್ಮ ಚುನಾಯಿಸಬೇಕೆಂದೂ ... ಈ ನೋಡಲು ಶಾಲೆ ಮೇನೇಜರ ವ ಇತರ ಉಪಾಧ್ಯಾಯ ಪ್ರತಿಶ್ರೀಯಲ್ಲಿದ್ದ ಮೆಂಬರರೇ ಚುನಾವಣೆಯಾಗಿತ್ತು ... ಪ್ರಶ್ನೆ ಗಳನ್ನು ಶಾಲೆಗಳಲ್ಲಿ ... ವಿಷಯದಲ್ಲಿ ಸಮ್ಮಂಧ ಪಟ್ಟ ಶಾಲಾ ಉಪಾಧ್ಯಾಯರನ್ನು ಇಷ್ಟಾ ವ್ಯಕ್ತಿಗೆ ಸಮರ್ಥನನ್ನ ಪನ್ನೆಯ ದಸ್ತ! ಅದುದರಿಂದ ನನ್ನ ಕಾರ್ಯದರ್ಶಿಯವರು ಸದಾ ಕೌನ್ಸಿಲ ಸದಸ್ಯರು ಓವರ ಉಪಾಧ್ಯಾಯರನ್ನೇ ಮೆಂಬರಾಗಿ ಚುನಾಯಿಸದೆ ಶಾಲೆಗಳ ... ಕ

... ಆಸ್ಪತ್ರೆಯಾದ ಶ್ರೀ ಎಚ್. ದೇವರಾವ್ ಬಿ. ಎ. ಎಲ್. ಟಿ. ಜೆ. ಸಿ. ಎ. ಕೌನ್ಸಿಲ ಮೆಂಬರ ... ಸ್ಥಾನಕ್ಕೆ ಉಮೇದ್ವಾರರಾಗಿ ... ನಿಂತಿದ್ದಾರೆ ... ತಿಳಿದುಬರುತ್ತದೆ.

ಉಡುಪಿ ಮ್ಯುನಿಸಿಪಾಲಿಟಿಯೊಳಗೆ ಜ್ಯಾರಿಗೆ ಒದಗಿರುವ ತೆರಿಗೆಯ ಹಂಗಾಮಿ ಪಟ್ಟಿಯೊಂದು ಜಿಲ್ಲಾ ಗಜೆಟಿನಲ್ಲಿ ಪ್ರಕಟವಾಗಿದೆ. ಇದನ್ನು ಮುನಿಸಿಪಲ್ ಗೋಳಸಿವರ ಅಕ್ಷೇಪಣೆಗಳನ್ನು ಪ್ರಕಟಿಸಿದ (ತಾ. ೧೯ ೦೧-೪೦) ಒಂದು ತಿಂಗಳೊಳಗೆ ಮುನಿಸಿಪಾಲಿಟಿಯ ಸ್ಪೆಶಲ್ ಆಫೀಸರರಿಗೆ ಕಳುಹಿಸಬೇಕಾಗಿದೆ. ಆದುದರಿಂದ ಉಡುಪಿ ನಿವಾಸಿಗಳೆಲ್ಲ ಈ ಪ್ರಕಟನೆಯನ್ನು ನೋಡಿ ತಮ್ಮ ಆಕ್ಷೇಪಣೆ ವಿಚಾರವಾದಿ, ಅದರೊಳಗಿನ ... ಹೆಚ್ಚಿನ ಮುಂದಿನ ಪ್ರಯತ್ನ ಮಾಡಬೇಕೆಂದು ವಿವೇಚಿಸಿ ಕಾರ್ಯ ನಿರ್ವಹಿಸ ಬಾರದೇಕಾಗಿದೆ.

ಮಂಜೇಶ್ವರ—ಶ್ರೀ ಅನಂತೇಶ್ವರ ಹಾಯರ್ ಎಲಿಮೆಂಟ್ರಿ ಶಾಲೆಯ ೫ನೇ ಮತ್ತು ೬ನೇ ವರ್ಗಗಳಿಗೆ ಟ್ರೇನಿಂಗ್ ಹೊಂದಿದ ಏಸ್. ಎಸ್. ಎಲ್. ಸಿ. ಉಪಾಧ್ಯಾಯರ ... ಕಲಿಸಬೇಕೆಂದು ... ಎಜ್ಯುಕೇಶನಲ್ ಕೌನ್ಸಿಲಿನಲ್ಲಿ ಕೇಳಿಕೊಂಡರು ಆದರೆ ... ಶಾಲೆಯಲ್ಲಿ ... ಉಪಾಧ್ಯಾಯರನ್ನು ನೇಮಿಸಬೇಕೆಂಬ ಕರ್ತಗಳನ್ನು ಕೊಡಲ್ಪಟ್ಟಿವೆ.

ಬಂಟವಾಳ—ಕಳೆದ ತಾ. ೧೯ರಲ್ಲಿ ಜರಗಿದ ಎಜ್ಯುಕೇಶನಲ್ ಕೌನ್ಸಿಲಿನಲ್ಲಿ ಜಕ್ರಿಬೆಟ್ಟು ಹೈಯರ್ ಎಲಿಮೆಂಟ್ರಿ ಶಾಲೆಯ ೧ನೇ ೭ನೇ ಕ್ಲಾಸುಗಳಿಗೆ ರಿಕಗ್ನಿಶನ್ ಸಿಕ್ಕಿತು. ಅದರ ಗ್ರಾಂಟು, ಕೊಡಲು ... ಯಾದಿ ... ಇಡೀ ... ಫರ್ಸಿಸಿಂಟ್ ದೊರಕಿಸೆ ಎಲಿಮೆಂಟ್ರಿ ಶಾಲೆಯ ೧ನೇ ತರಗತಿ ... ಕ್ಲಾಸುಗಳ ವರೆಗೆ ಪರ್ಮನೆಂಟ್ ರಿಕಗ್ನಿಶನ್ ಕೊಡಲಾಯಿತು ... ಹೈಯರ್ ಎಲಿಮೆಂಟ್ರಿ ಶಾಲೆಯ ... ಕ್ಲಾಸುಗಳ ರಿಕಗ್ನಿಶನ್ ... ತಗೆದುಹಾಕಲಾಯಿತು.

ಹೋರ-ಲಾವಲ ಸಂಧಿಸೂಚನೆಗಳು ಕಳಚಿಬಿದ್ದವು.

ಹೋರರು ತಮ್ಮ ಹುದ್ದೆಗೆ ರಾಜಿ ಇತ್ತರು

ಹಿಂದೂದೇಶ ನಿರುದ್ಯೋಗ ನಿವಾರಣೆಯು ಬೇಗನೆ ಆಗುವುದೇ?

ಹಿಂದೂದೇಶದೊಡನೆ ಜರ್ಮನಿಯ ವ್ಯಾಪಾರವು ಕಡಿಮೆಯಾಗುತ್ತಾ ಬರುತ್ತದೆ.

ನಿರುದ್ಯೋಗ ನಿವಾರಣೆ.

ಇಂಡಿಯಾ ಸರಕಾರದಿಂದ ನೇಮಕವಾದ ವಿದ್ಯಾಭ್ಯಾಸ ಉದ್ಧರಣ ಸೂಚನಾಸಭೆಯು ಮುಂದಕ್ಕೆ ನಿರುದ್ಯೋಗ ನಿವಾರಣೆಯಾಗುವ ರೀತಿ ವಿದ್ಯಾಭ್ಯಾಸವು ನಡೆಯುವಂತೆ ಸೂಚನೆಗಳನ್ನು ಮಾಡಿರುತ್ತಾರೆಂದು ಕೇಳಬರುತ್ತದೆ. ಜೀವನ ಸಾಗಿಸಲು ಸಾಧ್ಯವಾಗುವ ಉಪಾಯಗಳನ್ನು ಸಾಧಿಸುವ ವಿದ್ಯಾಭ್ಯಾಸವು ನಡೆಯತಕ್ಕದು. ಸರಕಾರಿ ಉದ್ಯೋಗಗಳಿಗೆ ಇನ್ನು ಮುಂದಕ್ಕೆ ೧೯ ವರ್ಷ ಹೆಚ್ಚಿನ ಪ್ರಾಯಭರಿತರಾದ ಉಮೇದುವಾರರನ್ನು ಚುನಾಯಿಸಬಾರದಾಗಿ, ಇವೆ ಮೊದಲಾದ ಹಲವು ಸೂಚನೆಗಳಿಂದ ಕೂಡಿದ ಸಭೆಯ ಸಂಸ್ಥೆಯ ವರದಿಯು ಬೇಗನೆ ಹೊರಬೀಳುವುದು.

ಇರೇಕಿನಲ್ಲಿ ಭಾರತೀಯರು.

